JJ-51

(B) 25230 (1)

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೩ನೇ ಅಧಿವೇಶನ

13TH SESSION

ಸಂಪುಟ – ೫ (ಕ್ರಮಾಂಕ – ೧ ಮತ್ತು ೨)

Volume - 5 (No. 1 & 2)

(೨೫, ಮತ್ತು ೨೬ನೇ ಫೆಬ್ರವರಿ ೨೦೦೯,)

(25th and 26th February 2009)

ಭಾಗ–೧

Part-I

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

(B) 25230

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೩ನೇ ಅಧಿವೇಶನ

13TH SESSION

ಸಂಪುಟ – ೫ (ಕ್ರಮಾಂಕ – ೧ ಮತ್ತು ೨)

Volume - 5 (No. 1 & 2)

(೨೫, ಮತ್ತು ೨೬ನೇ ಫೆಬ್ರವರಿ ೨೦೦೯.)

(25th and 26th February 2009)

ಭಾಗ–೧

Part-I

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ವಿಷಯಾನುಕ್ರಮಣಿಕೆ
ಬುಧವಾರ,25.02.2009

1. ಪ್ರಶ್ನೋತ್ತರ:_ ಸರದಿ ಸಂಖ್ಯೆ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು. **01–133**

ಶ್ರೀ ನಾಡಗೌಡ ವೆಂಕಟರಾವ್
ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್
ಶ್ರೀ ಬಗಲಿ ಸರ್ವಭೌಮ ಸರಗೌಡ
ಶ್ರೀ ಹೆಚ್.ಸಿ.ಬಾಲಕೃಷ್ಣ
ಶ್ರೀ ಅಪ್ಪ ಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ
ಶ್ರೀ ಗೋಪಾಲಕೃಷ್ಣ ಬೇಳೂರು
ಶ್ರೀ ಅಪ್ಪಾಜಿ @ ಚೆನ್ನಬಸವರಾಜ್ ಶಂಕರ್ ರಾವ್ ನಾಡಗೌಡ
ಶ್ರೀ ಎ.ಮಂಜು
ಶ್ರೀ ಲಾಲಾಜಿ ಆರ್.ಮೆಂಡನ್
ಶ್ರೀ ಪ್ರತಾಪಗೌಡ ಪಾಟೀಲ್
ಶ್ರೀ ಎಂ.ಟಿ.ಕೃಷ್ಣಪ್ಪ
ಶ್ರೀ ವೈ.ಎನ್.ರುದ್ರೇಶ್ ಗೌಡ
ಶ್ರೀ ಎಂ.ಸತ್ಯನಾರಾಯಣ
ಶ್ರೀ ಎಸ್.ಆರ್.ವಿಶ್ವನಾಥ್

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. **133–134**
(ಅನುಬಂಧ–1)

2. **ಸಭೆಯ ಮುಂದಿಡಲಾದ ಕಾಗದ ಪತ್ರಗಳು:_** **134–141**

3. **ವಿತ್ತೀಯ ಕಾರ್ಯಕಲಾಪಗಳು:** **141–259**

2009–10ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ
ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)
ಶ್ರೀ ಹೆಚ್.ಕೆ.ಕುಮಾರ ಸ್ವಾಮಿ
ಶ್ರೀ ವಿ.ಶ್ರೀನಿವಾಸ ಪ್ರಸಾದ್
ಶ್ರೀ ಕೆ.ಎಂ.ಶಿವಲಿಂಗೇಗೌಡ

259–529

4. ಗಮನ ಸೆಳೆಯುವ ಸೂಚನೆಗಳು:

(ಅ) ವಿಷಯ: ಸಾಗರ ಕ್ಷೇತ್ರ ಮತ್ತು ಮಲೆನಾಡಿನ ಬಹು ಭಾಗಗಳಲ್ಲಿ ಒಣಗಿದ ಬಿದಿರುಗಳು ಉಪಯುಕ್ತವಾದುದನ್ನು ಬಳಸಿಕೊಂಡು ನಂತರ ಉಳಿದವುಗಳನ್ನು ನಾಶ ಮಾಡಲು ಮುಂಜಾಗ್ರತ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಗೋಪಾಲಕೃಷ್ಣ ಬೇಳೂರು

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ)

ಆ) ವಿಷಯ: ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಪ್ರದೇಶಕ್ಕೆ ಸೇರಿದ ಕಬಿನಿ ಎರಡನೇ ಹಂತದ ಏತ ನೀರಾವರಿ ಯೋಜನೆಗೆ 2004 ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಈವರೆಗೂ ಕ್ರಮ ಕೈಗೊಳ್ಳದಿರುವ ಬಗ್ಗೆ.

ಶ್ರೀ ಆರ್.ಧ್ರುವನಾರಾಯಣ್

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಇ) ವಿಷಯ: ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಗುಲ್ಬರ್ಗಾ– ಅಫಜಲಪುರ ರಸ್ತೆಯಿಂದ ದೇವಲಗಾಣಪುರವರೆಗಿನ ರಸ್ತೆ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್

ಶ್ರೀ ಜಿ.ಜನಾರ್ಧನರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲ ಸೌಲಭ್ಯ ಸಚಿವರು)

ವಿಷಯಾನುಕ್ರಮಣಿಕೆ: ದಿನಾಂಕ 26.02.2009

1. ಪ್ರಶ್ನೋತ್ತರಗಳು: 530–577

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಎನ್.ಸಂಪಂಗಿ – 42(77)
ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ – 43 (378)
ಶ್ರೀ ಹೆಚ್.ಗೋಪಾಲ ಭಂಡಾರಿ – 44 (269)
ಶ್ರೀ ಪ್ರತಾಪಗೌಡ ಪಾಟೀಲ್ – 45 (120)
ಶ್ರೀ ಹೆಚ್.ಡಿ.ರೇವಣ್ಣ – 46 (369)
ಶ್ರೀ ಜಿ.ಕೆ.ವೆಂಕಟಶಿವಾ ರೆಡ್ಡಿ – 48 (275)
ಶ್ರೀ ಸುರೇಶ್‌ಗೌಡ – 49 (83)
ಶ್ರೀ ಹೆಚ್.ಕೆ.ಕುಮಾರಸ್ವಾಮಿ – 50 (276)
ಶ್ರೀ ಎ.ಎನ್.ಪಾಟೀಲ್ ನಡಹಳ್ಳಿ – 51 (155)
ಶ್ರೀ ಗೋಪಾಲ ಕೃಷ್ಣ ಬೇಳೂರು – 52 (274)
ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ – 53 (381)
ಶ್ರೀ ಅಮರೇಶ್ – 54 (128)
ಶ್ರೀ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – 56 (133)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮುಲಕ ನೀಡಲಾದ ಉತ್ತರಗಳು (ಅನುಬಂಧ–I)

2. ವರದಿಯನ್ನೊಪ್ಪಿಸುವುದು: 577–577

ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮೊದಲನೆಯ ಹಾಗೂ ಎರಡನೇ ವರದಿ

3. ವಿತ್ತೀಯ ಕಾರ್ಯಕಲಾಪಗಳು 577–716

2009–10ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ,

ಶ್ರೀ ಸಿದ್ದರಾಮಯ್ಯ
ಶ್ರೀ ವಿ.ಮುನಿಯಪ್ಪ
ಶ್ರೀ ಬಸವರಾಜ ಬೊಮ್ಮಾಯಿ
ಶ್ರೀ ಸಿ.ಟಿ.ರವಿ
ಶ್ರೀ ಹೆಚ್.ಸಿ.ಬಾಲಕೃಷ್ಣ
ಶ್ರೀ ಆರ್.ಧ್ರುವನಾರಾಯಣ್
ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್

ಶ್ರೀ ಮಲ್ಲಿಕಾರ್ಜುನ ಖರ್ಗೆ
ಶ್ರೀ ಸೈಯದ್ ಯಾಸೀನ್

4. ಗಮನ ಸೆಳೆಯುವ ಸೂಚನೆಗಳು 716-853

ಅ) ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ 5 ಲಕ್ಷ ಕುಟುಂಬಗಳ ಪುನರ್ವಸತಿ ಕುರಿತು

ಶ್ರೀ ಎ.ಎಸ್.ಪಾಟೀಲ್
ಶ್ರೀ ದೊಡ್ಡನಗೌಡಪಾಟೀಲ್
ಶ್ರೀ ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ ಸಚಿವರು)

ಆ) ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವಾಗ ಜನಸಂಖ್ಯೆಯ ಆಧಾರವನ್ನು ಸಡಿಲಗೊಳಿಸಿ ಜೋಯಿಡಾ ತಾಲ್ಲೂಕಿಗೆ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಸುನಿಲ್ ವಿ ಹೆಗಡೆ
ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಇ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಸರ್ಕಾರವು ಸರಬರಾಜು ಮಾಡುತ್ತಿರುವ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಬೆಳೆಗಳು ಹಾಳಾಗುತ್ತಿದ್ದು ದಿನಕ್ಕೆ 12 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

ಶ್ರೀ ಸುನಿಲ್ ವಿ ಹೆಗಡೆ (ಶ್ರೀ ಕೆ.ಪಿ.ಬಚ್ಚೇಗೌಡರ ಪರವಾಗಿ)
ಶ್ರೀ ಕೆ.ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಇಂಧನ ಸಚಿವರ ಪರವಾಗಿ)

ಈ) ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ 3ರಲ್ಲಿ ಹಾಗೂ 94 ರಲ್ಲಿ ರಸ್ತೆಗಳು ಹಾಳಾಗಿದ್ದು ಈ ರಸ್ತೆಗಳ ದುರಸ್ಥಿ ಕಾರ್ಯ ಕೈಗೊಳ್ಳುವ ಬಗ್ಗೆ.

ಶ್ರೀ ಹೆಚ್.ಸಿ.ಬಾಲಕೃಷ್ಣ
ಶ್ರೀ ಸಿ.ಎಂ.ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು)

ಉ) ಚಿತ್ರದುರ್ಗ ಜಿಲ್ಲೆ ಹಿರಿಯೂರು ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಡಿಸ್ಟಿಲರಿ ಘಟಕವನ್ನು ಮೆ: ಬಿ.ಟಿ. ಅಂಡ್ ಎಫ್.ಸಿ ಕಂಪನಿಯವರಿಗೆ ಗುತ್ತಿಗೆ ನೀಡಿರುವ ಬಗ್ಗೆ.

ಶ್ರೀ ಟಿ.ಬಿ.ಜಯಚಂದ್ರ
ಶ್ರೀ ಶಿವರಾಜ್ ಎಸ್.ತಂಗಡಗಿ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಊ) ಜ್ಞಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ (ಲಿ) ಹಿರೇಬೆವನೂರು ಕಾರ್ಖಾನೆ 2007-08ನೇ ಸಾಲಿನಲ್ಲಿ ರೈತರು ಪೂರೈಸಿದ ಕಬ್ಬಿಗೆ ಹಣ ಪಾವತಿ ಮಾಡದಿರುವ ಬಗ್ಗೆ.

ಶ್ರೀ ಡಾ.ಬಗಲಿ ಸಾರ್ವಭೌಮ ಸಠಗೌಡ
ಶ್ರೀ ಶಿವರಾಜ್ ಎಸ್.ತಂಗಡಗಿ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಶ್ರೀ ವಿಠಲ ಕಟಕದೋಂದ

ಶ್ರೀ ಸಿ.ಎಸ್.ನಾಡಗೌಡ

ಶ್ರೀ ಟಿ.ಬಿ.ಜಯಚಂದ್ರ

೨೫. ಕೊಬ್ಬರಿ ಬೆಲೆ ಕುಸಿತದಿಂದ ರೈತರು ಸಂಕಷ್ಟದಲ್ಲಿರುವುದರಿಂದ ನ್ಯಾಫೆಡ್ ನವರು ಬೆಂಬಲ ಬೆಲೆ ನಿಗದಿಪಡಿಸುವ ಬಗ್ಗೆ

ಶ್ರೀ ಎಂ.ಟಿ.ಕೃಷ್ಣಪ್ಪ

ಶ್ರೀ ಶಿವರಾಜ್ ಎಸ್.ತಂಗಡಗಿ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಶ್ರೀ ಬಿ.ಸಿ.ನಾಗೇಶ್

ಶ್ರೀ ಟಿ.ಬಿ.ಜಯಚಂದ್ರ

ಕರ್ನಾಟಕ ವಿಧಾನಸಭೆ

ಬುಧವಾರ 25 ನೇ ಫೆಬ್ರವರಿ 2009ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಗ್ಗೆ/ 11.18 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು/ ಶ್ರೀ ಜಗದೀಶ್ ಶೆಟ್ಟರ್ ರವರು

ಪೀಠವನ್ನು ಅಲಂಕರಿಸಿದ್ದರು

11-00 AM

ಅಧ್ಯಕ್ಷರು: ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಒಂದು ನಿಲುವಳಿ ಸೂಚನೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬರುತ್ತಿದ್ದಾರೆ.

ಅಧ್ಯಕ್ಷರು: ಪ್ರಶ್ನೋತ್ತರ ಮುಗಿಯಲಿ. ಪ್ರಶ್ನೋತ್ತರ ಮುಗಿದ ಮೇಲೆ ಅದರ ಬಗ್ಗೆ ವಿಚಾರ ಮಾಡೋಣ. ಇವತ್ತು 15 ಜನ ಮಾನ್ಯ ಸದಸ್ಯರುಗಳು ಪ್ರಶ್ನೆ ಕೇಳಿದ್ದಾರೆ. ನೀವೇ ಒಂದೊಂದು ಸಾರಿ ಪ್ರಶ್ನೋತ್ತರ ಹೋಗಿದೆ ಎಂದು ಹೇಳುತ್ತೀರಿ. ಪ್ರಶ್ನೋತ್ತರಕ್ಕೆ ಮೊದಲು ಆದ್ಯತೆ ಕೊಡಲೇ ಬೇಕು. ನಂತರ ನಿಲುವಳಿ ಸೂಚನೆ ಬಗ್ಗೆ ನೀವು ಏನು ಪ್ರಸ್ತಾಪ ಮಾಡಬೇಕು ಮಾಡಿ.

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿಯ ಸಮಸ್ಯೆ ಬಹಳ ಇದೆ. ನಿಲುವಳಿ ಸುಚನೆ ತೆಗೆದುಕೊಂಡರೆ ಒಳ್ಳೆಯದು.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಆದ ಮೇಲೆ ಅವಕಾಶ ಕೊಡಬೇಕು. ಬಹಳ ಸೀರಿಯಸ್ ಆದ ವಿಚಾರ ಇದೆ.

ಅಧ್ಯಕ್ಷರು: ನಿಮ್ಮ ನಿಮ್ಮ ನಾಯಕರುಗಳು ಬರಲಿ. ಆಮೇಲೆ ಅದರ ಬಗ್ಗೆ ಪ್ರಸ್ತಾಪ ಮಾಡಿ. ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ನಾಡಗೌಡ ವೆಂಕಟರಾವ್‌ರವರು.

1. ಪ್ರಶ್ನೋತ್ತರ

ಆ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ತುಂಬುವುದು.

27 (127) **ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)**

ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು)

ಅ) ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸುದ್ದೆಗಳು-29

ತಾಲ್ಲೂಕುವಾರು ವಿವರ

ಕ್ರ ಸಂ.	ತಾಲ್ಲೂಕು	ಗ್ರೇಡ್-1	ಗ್ರೇಡ್-2	ಒಟ್ಟು
1	ರಾಯಚೂರು	7	0	7

2	ಮಾನ್ವಿ	6	0	6
3	ದೇವದುರ್ಗ	4	1	5
4	ಲಿಂಗಸೂಗೂರು	2	0	2
5	ಸಿಂಧನೂರು	9	0	9
	ಒಟ್ಟು	28	1	29

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗ ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಇ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಇರುವ ಮಾನದಂಡಗಳೇನು; (ವಿವರಗಳನ್ನು ನೀಡುವುದು);

ಚಾಲ್ತಿಯಲ್ಲಿರುವ ನಿಯಮಾಗಳನುಸಾರ ಗ್ರೇಡ್-1 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದಲ್ಲಿ ಶೇಕಡಾ 20 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ, ಶೇಕಡಾ 20 ರಷ್ಟು ಹುದ್ದೆಗಳನ್ನು ಕಂದಾಯ ಇಲಾಖೆಯಿಂದ ನಿಯೋಜನೆ ಮೂಲಕ ಮತ್ತು ಶೇಕಡಾ 60 ರಷ್ಟು ಹುದ್ದೆಗಳನ್ನು ಗ್ರೇಡ್-2 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದ ನೌಕರರಿಗೆ ಬಡ್ತಿ ನೀಡುವ ಮುಖಾಂತರ ತುಂಬಲಾಗುವುದು.

ಚಾಲ್ತಿಯಲ್ಲಿರುವ ನಿಯಮಗಳನುಸಾರ ಗ್ರೇಡ್-2 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದ ಶೇಕಡಾ 60 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಮತ್ತು ಶೇಕಡಾ 40 ರಷ್ಟು ಹುದ್ದೆಗಳನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗದ ಬಿಲ್ ಕಲೆಕ್ಟರ್ ಇತ್ಯಾದಿ ವೃಂದದ ನೌಕರರಿಂದ ನೇಮಕಾತಿ ಮಾಡುವುದರ ಮೂಲಕ ತುಂಬಲಾಗುವುದು.

ಈ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆ ಎಷ್ಟು;

ಸಿಂಧನೂರು ತಾಲ್ಲೂಕಿನಲ್ಲಿ ಮಂಜೂರಾದ ಗ್ರಾ.ಪಂ. ಕಾರ್ಯದರ್ಶಿಗಳ ಒಟ್ಟು ಹುದ್ದೆ 34.

ಉ) ಅವುಗಳಲ್ಲಿ ಖಾಲಿ ಇರುವ ಹುದ್ದೆ ಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗ ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಊ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ? (ವಿವರಗಳನ್ನು ನೀಡುವುದು)

– ಇಲ್ಲಾ –

ಶ್ರೀ ನಾಡಗೌಡ ವೆಂಕಟರಾವ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ನಮ್ಮ ಜಿಲ್ಲೆಯಲ್ಲಿ ಒಟ್ಟು 29 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇವೆ. ನನ್ನ ಕ್ಷೇತ್ರವಾದ ಸಿಂಧನೂರಿನಲ್ಲಿ 9 ಹುದ್ದೆಗಳು ಖಾಲಿ ಇವೆ. ಎರಡು ಮೂರು ಪಂಚಾಯಿತಿಗಳಿಗೆ ಒಬ್ಬೊಬ್ಬರು ಕಾರ್ಯದರ್ಶಿಗಳನ್ನು ನೇಮಕ ಮಾಡಿ ಕೆಲಸ ನಿರ್ವಹಿಸಬೇಕಾದ ಪರಿಸ್ಥಿತಿ ಇದೆ. ಇವತ್ತಿಗೂ ಕೂಡ ನನ್ನ ಸ್ವಂತ ಕ್ಷೇತ್ರದ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಗಳನ್ನು ನೇಮಕ ಮಾಡುವುದಕ್ಕಾಗಲಿಲ್ಲ. ಯರನ್ನಾದರೂ ಒಬ್ಬರನ್ನು ಡೆಪ್ಯುಟೇಷನ್ ಮೇಲೆ ಹಾಕುವುದಕ್ಕೆ ಕೂಡ ಅಲ್ಲಿಯ ಸ್ಥಳೀಯ EO ಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ನೀವು ಇಷ್ಟು ಕಾರ್ಯದರ್ಶಿಗಳ ಹುದ್ದೆಗಳನ್ನು ಖಾಲಿ ಇಟ್ಟರೆ ಕಷ್ಟವಾಗುತ್ತದೆ. ಒಂದೊಂದು ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ನೀವು ಪಂಚಾಯಿತಿಗಳಿಗೆ ಕೊಡುತ್ತೀರಿ. ಅಲ್ಲಿ ಏನು ಕೆಲಸ ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತಿಲ್ಲ. ಅದರ ಜೊತೆಯಲ್ಲಿ ಚೆಕ್ ನೀಡುವ ಅಧಿಕಾರವನ್ನು ಕೂಡ ಅಧ್ಯಕ್ಷರುಗಳಿಗೆ ಕೊಟ್ಟು ಬಿಟ್ಟಿದ್ದೀರಿ. ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಏನು ಮಾಡುತ್ತಾರೆಂದು ಯಾರಿಗೂ ಕೂಡ ಗೊತ್ತಾಗುತ್ತಿಲ್ಲ. ಕಾರ್ಯದರ್ಶಿಗಳನ್ನು ಕರೆದು ಕೇಳಬೇಕೆಂದರೂ ಕೂಡ ಎರಡು ಮೂರು ಪಂಚಾಯಿತಿಗಳಿಗೆ ಸೇರಿಸಿ ಒಬ್ಬೊಬ್ಬರು ಕಾರ್ಯದರ್ಶಿಗಳನ್ನು ನೇಮಕ ಮಾಡಿದ್ದಾರೆ. ಹಾಗಾಗಿ ನಮಗೆ ತೊಂದರೆಯಾಗುತ್ತಿದೆ. ಯಾವಾಗ ತುಂಬುತ್ತೀರಿ ಎಂದರೆ, ಉತ್ತರದಲ್ಲಿ ಲೋಕಸೇವಾ ಆಯೋಗದಿಂದ ಅಧಿಸೂಚನೆ ಹೊರಡಿಸಿದ್ದೇವೆಂದು ಹೇಳುತ್ತಾರೆ. ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಮುಗಿದು ಬರುವುದರೊಳಗೆ ಈ ಪಂಚಾಯಿತಿಗಳು ಪೂರ್ಣ ಹದಗೆಟ್ಟು ಹೋಗುತ್ತವೆ. ಕೂಡಲೇ ಏನಾದರೂ ವ್ಯವಸ್ಥೆ ಮಾಡದೇ ಇದ್ದರೆ ತೊಂದರೆಯಾಗುತ್ತದೆ. ಹೊಸದಾಗಿ ಸುವರ್ಣ ಗ್ರಾಮಗಳನ್ನು ಬೇರೆ ಕೊಟ್ಟಿದ್ದೀರಿ....

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ಪೂರಕವಾಗಿ ಪ್ರಶ್ನೆ ಕೇಳಿ. ಉಳಿದದ್ದು ಎಲ್ಲವನ್ನೂ general ಆಗಿ ಕೇಳುವುದಕ್ಕೆ ಹೋದರೆ ಆಗುವುದಿಲ್ಲ. ಏನು ಮಾಡಬೇಕೆಂದು specific ಸಜೆಷನ್ ಕೊಡಿ. ಏನು ಆಗಬೇಕೆಂದು ಕೇಳಿ, ಅವರ ಕಡೆಯಿಂದ ಏನು ಉತ್ತರ ಬಯಸುತ್ತೀರಿ ಎಂದು ಕೇಳಿ.

ಶ್ರೀ ನಾಡಗೌಡ ವೆಂಕಟರಾವ್: ಅದಕ್ಕೇ ಕೇಳುತ್ತಿರುವುದು. ಜನರಿಗೆ ತೊಂದರೆಯಾಗುತ್ತಿದೆ. ತಾವು ಸ್ವಲ್ಪ ನಮಗೆ ರಕ್ಷಣೆ ಕೊಡಿ.

ಅಧ್ಯಕ್ಷರು: ಇದು ಪ್ರಶ್ನೋತ್ತರ. ಬಜೆಟ್ ಮೇಲೆ ಮತ್ತು ರಾಜ್ಯಪಾಲರ ಭಾಷಣೆ ಮೇಲೆ ಚರ್ಚೆ ಮಾಡುವಾಗ ಮಾತನಾಡಿ.

ಶ್ರೀ ನಾಡಗೌಡ ವೆಂಕಟರಾವ್: ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಅಲ್ಲಿ ಹುದ್ದೆಗಳು ಖಾಲಿ ಇದೆ. ಇದರಿಂದ ಕೆಲಸಗಳು ಆಗುವುದಿಲ್ಲವೆಂದು ಅವರ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ.

ಅಧ್ಯಕ್ಷರು: ಖಾಲಿ ಹುದ್ದೆ ಭರ್ತಿ ಮಾಡಲು ಮಾನದಂಡವೇನೆಂದು ಕೇಳಿದಿರಿ. ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಎಂದು ಕೇಳಿರಿ. ನೀವು ಕೇಳಿ. ಆದರೆ, ಅದಕ್ಕೆ time bound fix ಮಾಡಿಕೊಂಡು ಕೇಳಿ. Specific ಆಗಿ ಏನಾದರು ಕೇಳಿ.

ಶ್ರೀ ನಾಡಗೌಡ ವೆಂಕಟರಾವ್: ಅಧಿಸೂಚನೆ ಹೊರಡಿಸಿದ್ದೇವೆಂದು ಹೇಳಿದ್ದಾರೆ. ಅದರ ಮೂಲಕ ತುಂಬುವುದಕ್ಕೆ ಇನ್ನು ಬಹಳ ಸಮಯ ಹಿಡಿಯುತ್ತದೆ. ಆದ್ದರಿಂದ ನಮ್ಮ ಕೆಲಸಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಇದಕ್ಕೆ ಏನಾದರು ಬೇರೆ ವ್ಯವಸ್ಥೆಯನ್ನು ಮಾಡಿ ತುಂಬಿ ಕೊಟ್ಟರೆ ಕೆಲಸ ಮಾಡಲು ಅನುಕೂಲವಾಗುತ್ತದೆ ಎಂಬುದನ್ನು ತಮ್ಮ ಮೂಲಕ ಸಚಿವರನ್ನು ಕೇಳಬಯಸುತ್ತೇನೆ.

ಕು:ಶೋಭಾ ಕರಂದ್ಲಾಜೆ: ನಮ್ಮ ಇಲಾಖೆಯು 5.10.2007 ರಲ್ಲಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ 488 ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರನ್ನು ತುಂಬಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿತ್ತು. ಆದರೆ, ಆಯ್ಕೆ ಪ್ರಕ್ರಿಯ ಆರಂಭವಾಗಿರಲಿಲ್ಲ. ಈ ಬಾರಿ ನಮ್ಮ ಸರ್ಕಾರ ಬಂದ ಮೇಲೆ ಮತ್ತೆ ಪತ್ರವನ್ನು ಬರೆಯಲಾಗಿ, ಜನವರಿ 15 ರಂದು ಅವರು ನೋಟಿಫಿಕೇಷನ್‌ನ್ನು ಮಾಡಿದ್ದಾರೆ. 16.2.2009ರಂದು ಅರ್ಜಿ ತುಂಬಲು ಕೊನೆಯ ದಿನಾಂಕವಾಗಿದೆ. ಜೂನ್, 2009 ರಲ್ಲಿ ಈ ಪಂಚಾಯಿತಿ ಕಾರ್ಯದರ್ಶಿಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ ಎಂಬುದಾಗಿ ನಮಗೆ ಲೋಕಸೇವಾ ಆಯೋಗದವರು ತಿಳಿಸಿರುತ್ತಾರೆ. ಅಷ್ಟರವರೆಗೆ ಉಳಿದಂಥ ಗ್ರಾಮಪಂಚಾಯಿತಿಯ ಕಾರ್ಯದರ್ಶಿಗಳು ಯಾರಿದ್ದಾರೆ ಅವರಿಗೆ ಕಾರ್ಯನಿರ್ವಹಣೆ ಮಾಡುವುದಕ್ಕೆ ಹೇಳಿದ್ದೇವೆ. ಉತ್ತರದಲ್ಲಿ ತಿಳಿಸಿರುವಂತೆ, ಗ್ರೇಡ್-1 Officers ರಾಯಚೂರು ಜಿಲ್ಲೆಯಲ್ಲಿ 78 ಬೇಕಾಗಿದ್ದು ಅಲ್ಲಿ 28 ಹುದ್ದೆಗಳು ಖಾಲಿ ಇದೆ. ಗ್ರೇಡ್-2 Officers 86 ಬೇಕಾಗಿತ್ತು. ಆದರೆ ಅಲ್ಲಿ ಒಂದು ಹುದ್ದೆ ಮಾತ್ರ ಖಾಲಿ ಇದೆ. ಅಂದರೆ ಒಟ್ಟು 29 ಹುದ್ದೆಗಳು ಖಾಲಿ ಇದೆ. ಈಗಾಗಲೇ ಉತ್ತರದಲ್ಲಿ ತಿಳಿಸಿರುವಂತೆ ಲೋಕಸೇವಾ ಆಯೋಗ ನೇಮಕಾತಿ ಪ್ರಕ್ರಿಯೆಯನ್ನು ಆರಂಭ ಮಾಡಿದೆ. ನೇರ ನೇಮಕಾತಿ ಮಾಡಿಕೊಳ್ಳಲು ನಮಗೆ ಅವಕಾಶ ಕೊಡಿ, ನೀವು ನೇಮಕಾತಿ ಮಾಡುತ್ತಿಲ್ಲವೆಂದು ನಾವು ಅವರನ್ನು ಕೇಳಿದ್ದೆವು. ಆದರೆ, ಅವರು

ತಕ್ಷಣದಲ್ಲಿಯೇ ಆ ನೇಮಕಾತಿ ಪ್ರಕ್ರಿಯೆಯನ್ನು ಮಾಡುತ್ತೇವೆಂದು ಆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಜೂನ್ ಕೊನೆಯೊಳಗೆ ಈ ನೇಮಕಾತಿ ಪ್ರಕ್ರಿಯ ಪೂರ್ಣವಾಗುತ್ತದೆ.

ಶ್ರೀ ನಾಡಗೌಡ ವೆಂಕಟರಾವ್: ಜೂನ್‌ನಲ್ಲಿ ತುಂಬುವುದಾದರೆ ಇನ್ನೂ 4–5 ತಿಂಗಳುಗಳು ಹೋಗುತ್ತದೆ. ಆದ್ದರಿಂದ ಇನ್ನೂ ತೊಂದರೆಯಾಗುತ್ತದೆ. ದಯವಿಟ್ಟು ಏನಾದರು alternative ವ್ಯವಸ್ಥೆ ಮಾಡಿ. ನೀವು ಜನವರಿಯಲ್ಲಿ ಕರೆದಿರುವುದಕ್ಕೇ ಈಗಾಗಲೆ ಇಷ್ಟು ಡಿಲೇ ಆಗಿದೆ. ಇನ್ನು ಜೂನ್ ಎಂದರೆ ಇನ್ನೂ ಡಿಲೇ ಆಗುತ್ತದೆ. ಕೆಲಸಗಳು ಪೂರ್ತಿ ಹ್ಯಾಂಪರ್ ಆಗುತ್ತಿವೆ. ಅಲ್ಲಿ ಏನು ನಡೆಯುತ್ತಿದೆಯೆಂದು ಯಾರಿಗೂ ಗೊತ್ತಾಗಲಾರದ ಪರಿಸ್ಥಿತಿ ಇದೆ. ತಾವು ಏನಾದರೂ ಬೇರೆ ವ್ಯವಸ್ಥೆ ಮಾಡಿ, ವರ್ಗಾವಣೆ ಮಾಡುತ್ತೀರೋ, ಕಳುಹಿಸುತ್ತೀರೋ ಮಾಡಿ ಇದರಲ್ಲಿ 50–60 ಪರ್ಸೆಂಟ್ ತುಂಬದಿದ್ದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ದಯಮಾಡಿ ಏನಾದರು alternative ವ್ಯವಸ್ಥೆ ಮಾಡಿ. ಜೂನ್ ಆಗುತ್ತದೆಂದು ಹೇಳಿದ್ದಾರೆ. ಅದು ಜೂನ್ ಆಗಬಹುದು ಅಥವಾ ಇನ್ನೂ 2–3 ತಿಂಗಳು ಮುಂದೆ ಹೋಗಬಹುದು.

ಕು:ಶೋಭಾ ಕರಂದ್ಲಾಜೆ: ಈಗಾಗಲೆ ನೇಮಕಾತಿ ಪ್ರಕ್ರಿಯೆ ಆರಂಭವಾದ ಕಾರಣ ಮತ್ತೊಂದು alternative ವ್ಯವಸ್ಥೆಗೆ, ನಾಳೆ ನಾಡಿದ್ದು ಲೋಕಸಭೆಯ ಚುನಾವಣೆ ಘೋಷಣೆಯಾಗುತ್ತಿರುವ ಕಾರಣ, ನಾವು ಕಂದಾಯ ಇಲಾಖೆಯಲ್ಲಿ ಕೇಳಿದೆವು, ಆದರೆ ಎಲ್ಲಾ ಇಲಾಖೆಯಲ್ಲೂ ಸಿಬ್ಬಂದಿ ಕಡಿಮೆ ಇದ್ದಾರೆ. ಆ ಕಾರಣದಿಂದ ಬೇರೆ ಇಲಾಖೆಯಿಂದ deputation ತೆಗೆದುಕೊಳ್ಳುವುದು ಕಷ್ಟವಾಗಿದೆ. ಆದರೂ ಸಹ ಇದರ ಬಗ್ಗೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೆ ಮತ್ತು ಅಪ್ಪಾಸಾಹೇಬ್ ಪಟ್ಟಣಶೆಟ್ಟಿಯವರೆ ತಮ್ಮ ಪ್ರಶ್ನೆಗಳನ್ನು ಮಾನ್ಯಯ ಸಚಿವರು ಬಂದಮೇಲೆ ತೆಗೆದುಕೊಳ್ಳುತ್ತೇನೆ. ಅವರು request ಮಾಡಿಕೊಂಡಿದ್ದಾರೆ.

ಪ್ರಶ್ನೆ ಸಂಖ್ಯೆ : 30 (317)

(ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು)

ಸೇಡಂ ಕ್ಷೇತ್ರ ವ್ಯಾಪ್ತಿಯಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ.

32 (105)ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸೇಡಂ ತಾಲ್ಲೂಕಿನಲ್ಲಿ ಬರುವ ಗ್ರಾಮಗಳಾದ ಕುರಕುಂಟಾ, ಕೋಡ್ಲಾ ಹಾಗೂ ಕೊಲಕುಂದಾ ಮತ್ತು ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಂಚೋಳಿ ತಾಲ್ಲೂಕಿನ ನೀಡಗುಂದಾ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು;

ರಾಜ್ಯದ ವಿವಿಧ ಕ್ಷೇತ್ರಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೊಸ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಇ) ಸೇಡಂ ತಾಲ್ಲೂಕಿನಲ್ಲಿ ಬರುವ ಗ್ರಾಮಗಳಾದ ನೀಲಹಳ್ಳಿ ಮತ್ತು ಮದಕಲ್‌ನಲ್ಲಿ ಕನ್ನಡ ಪ್ರೌಢ ಶಾಲೆ ಮತ್ತು ಮಳಖೇಡ ಗ್ರಾಮದಲ್ಲಿ ಉರ್ದು ಪ್ರೌಢಶಾಲೆ ಹಾಗೂ ಸೇಡಂ ಪಟ್ಟಣದಲ್ಲಿ ಉರ್ದು (ಬಾಲಕಿಯರ) ಪ್ರೌಢ ಶಾಲೆ ಮತ್ತು ಸೇಡಂ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚಿಂಚೋಳಿ ತಾಲ್ಲೂಕಿನ ಗಣಾಪೂರದಲ್ಲಿ ಕನ್ನಡ ಪ್ರೌಢ ಶಾಲೆ ಹಾಗೂ ನಿಡಗುಂದಾದಲ್ಲಿ ಉರ್ದು ಪ್ರೌಢ ಶಾಲೆ ಪ್ರಾರಂಭಿಸುವುದು ಅವಶ್ಯಕತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು?

ಸೇಡಂ ಮತ್ತು ಚಿಂಚೋಳಿ ತಾಲ್ಲೂಕುಗಳನ್ನೂ ಒಳಗೊಂಡಂತೆ ರಾಜ್ಯದ ವಿವಿಧ ಕ್ಷೇತ್ರಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೊಸ ಸರ್ಕಾರಿ ಪ್ರೌಢಶಾಲೆ ಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ ಸಮರ್ಪಕವಾಗಿ ಉತ್ತರವನ್ನು ನೀಡಿದ್ದಾರೆಂದು ನನಗಂತೂ ಅನ್ನಿಸುತ್ತಿಲ್ಲ. ನಾನು ಸೇಡಂ ಮತಕ್ಷೇತ್ರದಲ್ಲಿ ಬರತಕ್ಕ ಕುರಕುಂಟಾ, ಕೋಡ್ಲಾ ಹಾಗೂ ಕೊಲಕುಂದಾ ಮತ್ತು ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಂಚೋಳಿ ತಾಲ್ಲೂಕಿನ ನಿಡಗುಂದಾ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ

ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಹೌದು, ಸರ್ಕಾರದ ಗಮನಕ್ಕೆ ಬಂದಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡುತ್ತೀರಾ ಎಂದು ಕೇಳಿದರೆ, ರಾಜ್ಯದ ವಿವಿಧ ಕ್ಷೇತ್ರಗಳ ಅಗತ್ಯತೆಗೆ ಅನುಗುಣವಾಗಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೆಂದು ಹೇಳಿದ್ದಾರೆ. ಆದ್ದರಿಂದ ಇದು ಯಾವುದೇ ನಿರ್ದಿಷ್ಟವಾದ ಉತ್ತರವಾಗುವುದಿಲ್ಲ. ಮಾನ್ಯ ಸಚಿವರು ಹೇಳಬೇಕಾಗಿತ್ತು. ಏಕೆಂದರೆ ಬಜೆಟ್‌ನ್ನು ಈಗಾಗಲೆ ಮಂಡನೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹೊಸದಾಗಿ ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಮತ್ತು ಹೊಸ ಪಿ.ಯು.ಕಾಲೇಜುಗಳನ್ನು ಮಾಡುವುದಕ್ಕೆ ಎಷ್ಟು ಹಣವನ್ನು ಈ ಬಜೆಟ್‌ನಲ್ಲಿ ತೆಗೆದು ಇಟ್ಟಿದ್ದಾರೆ? ಅಥವಾ ನೀವು ಇಲಾಖೆಯ ವತಿಯಿಂದ ಇಡೀ ರಾಜ್ಯದಲ್ಲಿ ಅಗತ್ಯಕ್ಕೆ ಅನುಗುಣವಾಗಿ ಎಲ್ಲವನ್ನೂ ಮಾಡಲು ಆಗುತ್ತದೆಯೇ? ನಮ್ಮ ರಾಜ್ಯದಲ್ಲಿ ಪ್ರೌಢ ಶಾಲೆ ಮತ್ತು ಪಿ.ಯು. ಕಾಲೇಜು ಬಹಳಷ್ಟು ಬೇಕಾಗಿದೆ. ಇವತ್ತು ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕು ಆಗಿರುವುದು ಸೇಡಂ ಮತ್ತು ಚಿಂಚೋಳಿ. ಈ ಎರಡು ತಾಲ್ಲೂಕಿನ ಕೆಲವು ಗ್ರಾಮಗಳಿವೆ. ಅವು ಡಾ: ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಾಗಿವೆ. ಇವತ್ತು ಸರ್ಕಾರದ ಮಾನದಂಡವೇನಿದೆ, ಸರ್ಕಾರದ ಪಾಲಿಸಿ ಏನಿದೆ ಎಷ್ಟು ಹೊಸ ಪ್ರೌಢ ಶಾಲೆಗಳನ್ನು ಮಂಜೂರು ಮಾಡುತ್ತೇವೆಂದು ನಿರ್ಧಾರ ಮಾಡಿದ್ದೇವೆ, ಈ ಒಂದು policy matter ಮಾಡುತ್ತೇವೆಂದು ನಿರ್ಧಿಷ್ಟವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕರಾದ ಶ್ರೀಯುತರಾದ ಶರಣ ಪ್ರಕಾಶ್‌ರವರು ನಮಗೆ ನಿಡಗುಂದಾ ಗ್ರಾಮದಲ್ಲಿ ಮತ್ತು ಚಿಂಚೋಳಿ ಮತ್ತು ಬೇರೆ ಬೇರೆ ಭಾಗದಲ್ಲಿ ಎಲ್ಲಿಲ್ಲಿ ಜೂನಿಯರ್ ಕಾಲೇಜನ್ನು ಪ್ರಾರಂಭಿಸಲು ಅವಕಾಶ ಇದೆಯೆಂದು ಪ್ರಶ್ನೆ ಕೇಳಿದ್ದಾರೆ. ಕುರಕುಂಟಾ, ಕೋಡ್ಲಾ ಹಾಗೂ ಕೊಲಕುಂದಾ ಮತ್ತು ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಿಡಗುಂದಾ ಗ್ರಾಮದಲ್ಲಿ ಪ್ರೌಢ ಮತ್ತು ಜೂನಿಯರ್ ಕಾಲೇಜುಗಳು ಬೇಕು ಎಂಬುದು ನಿಮ್ಮ ಬೇಡಿಕೆಯಾಗಿದೆ. ನಮ್ಮ ಸರ್ಕಾರದಲ್ಲೂ ಇಲ್ಲಿ ಅದು ಬೇಕು ಎಂಬುದು ಗಮನಕ್ಕೆ ಬಂದಿದೆ. ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜುಗಳು ಬಗ್ಗೆ ಈ ಸದನದಲ್ಲಿ ಸಂತೋಷದಿಂದ ಹೇಳಬೇಕು. ನಮ್ಮ ಸರ್ಕಾರಿ ಶಾಲೆಗಳಲ್ಲಿ ನಾವು ಕೊಡುತ್ತಿರುವ ಸೌಲಭ್ಯಗಳ ಕಾರಣದಿಂದ, ಉತ್ತಮವಾದ ಶೈಕ್ಷಣಿಕ ಚಟುವಟಿಕೆಯ ಕಾರಣದಿಂದ ದಿನದಿಂದ ದಿನಕ್ಕೆ ಸರ್ಕಾರಿ ಪ್ರೌಢ ಶಾಲೆಗಳ,

ಕಾಲೇಜುಗಳ ಬೇಡಿಕೆ ಗ್ರಾಮೀಣ ಭಾಗದಲ್ಲಿ ಹೆಚ್ಚಾಗುತ್ತಿದೆ. ನಗರ ಭಾಗದಲ್ಲೂ ಹೆಚ್ಚಾಗುತ್ತಿದೆ. ಅಂದರೆ ವಿದ್ಯಾರ್ಥಿಗಳು ಹೆಚ್ಚುಹೆಚ್ಚು ಸಂಖ್ಯೆಯಲ್ಲಿ ಸರ್ಕಾರಿ ಶಾಲೆಗಳಿಗೆ ದಾಖಲಾಗುತ್ತಿದ್ದಾರೆ. Drop out ಪ್ರಮಾಣ ಕಡಿಮೆಯಾಗುತ್ತಿದೆ. ಇವತ್ತು ನಿಜವಾಗಿ ಗ್ರಾಮೀಣ ಭಾಗದಲ್ಲಿ ನಮ್ಮ ಹೈಸ್ಕೂಲ್ ಮತ್ತು ಕಾಲೇಜುಗಳು ಬೇಕು ಎಂಬ ಬೇಡಿಕೆ ಜಾಸ್ತಿಯಾಗುತ್ತಿದೆ. ಬರುವಂಥ ದಿನಗಳಲ್ಲಿ ಸರ್ಕಾರದ ಅನೇಕ ಯೋಜನೆಗಳ ಮೂಲಕ ಈ ಎಲ್ಲಾ ಬೇಡಿಕೆಯನ್ನು ಈಡೇರಿಸಬೇಕೆಂದು ಇದೆ. ಒಂದು ಮುಖ್ಯವಾದ ಸಂಗತಿಯನ್ನು ನಾನು ಇಲ್ಲಿ ಹೇಳುವುದೇನೆಂದರೆ, ನಮ್ಮ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ (ಆರ್.ಎಂ.ಎಸ್.ಎ) ಮತ್ತು ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು ಕೇಂದ್ರ ಸರ್ಕಾರ ಮುಂದುವರೆಸುತ್ತಿದೆ. ಆದರೆ, 9 ಮತ್ತು 10ನೇ ತರಗತಿಗೋಸ್ಕರವಾಗಿಯೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಅನ್ವಯವಾಗುತ್ತಿದೆ. ಈ ಶೈಕ್ಷಣಿಕ ವರ್ಷದಿಂದ ಅದು ಜಾರಿಗೆ ಬರುವುದಿದೆ. ಅದರಲ್ಲೂ ನಮಗೆ ಹೆಚ್ಚು ಪ್ರೌಢ ಶಾಲೆಗಳನ್ನು ತೆಗೆದುಕೊಳ್ಳಲು ಅವಕಾಶವಿದೆ. ಹೈಸ್ಕೂಲ್‌ಗಳ ಮೂಲಭೂತ ಸೌಲಭ್ಯಗಳನ್ನು ಸಹ ಪೂರೈಸಲು ಅವಕಾಶವಾಗುತ್ತದೆ. ಆದ್ದರಿಂದ ವೈಜ್ಞಾನಿಕವಾಗಿ ನಾವು ಯಾವ್ಯಾವ ಸ್ಥಳಗಳಲ್ಲಿ ಈ ರೀತಿ ಹೈಸ್ಕೂಲ್‌ಗಳು, ಜೂನಿಯರ್ ಕಾಲೇಜುಗಳು ಬೇಕು ಎಂಬ ಪಟ್ಟಿಯನ್ನು ಶಾಸಕರು ಕೊಟ್ಟಿರುವ ಶಿಫಾರಸ್ಸಿನ ಆಧಾರದ ಮೇಲೆ ಮತ್ತು ನಮ್ಮ ಇಲಾಖೆಯ ಆಧಾರದ ಮೇಲೆ ಈಗಾಗಲೆ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದ್ದೇವೆ. ಬರುವಂಥ ದಿವಸಗಳಲ್ಲಿ ಹಣಕಾಸಿನ ಲಭ್ಯತೆ ಮತ್ತು ಕೇಂದ್ರ ಸರ್ಕಾರದ ಈ ಯೋಜನೆಯ ಸಂಪೂರ್ಣವಾದ ಮಾಹಿತಿಯ ಆಧಾರದ ಮೇಲೆ ಇಲ್ಲಿ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಇವತ್ತು ಹಳ್ಳಿಗಳಲ್ಲಿ ಪ್ರೌಢ ಶಾಲೆಗಳಲ್ಲಿ school drop out ಆಗುತ್ತಿದೆ. ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು drop out ಆಗುತ್ತಿದ್ದಾರೆ. ಅವರು ಬೇರೆ ಊರಿನಲ್ಲಿ ಹೈಸ್ಕೂಲ್‌ಗೆ ಹೋಗಬೇಕೆಂದರೆ ತಾಯಿ ತಂದೆಯರು ಕಳುಹಿಸುತ್ತಿಲ್ಲ. ಕಾಲೇಜಿಗೆ ಹೋಗಬೇಕೆಂದರೆ ಕಳುಹಿಸುತ್ತಿಲ್ಲ. ಆದ್ದರಿಂದ ತೊಂದರೆ ಇದೆ. ಆದರೆ, ನನಗೆ ಏಕೋ ಗೊತ್ತಿಲ್ಲ, ಮಾನ್ಯ ಸಚಿವರು ಇದರ ಬಗ್ಗೆ ನಿರ್ಧಿಷ್ಟವಾಗಿ ಹೇಳುತ್ತಿಲ್ಲ. ನಿಮ್ಮ ಬಜೆಟ್ ಈಗಾಗಲೆ announce ಆಗಿದೆ. ಆದ್ದರಿಂದ ಹೊಸ ಹೈಸ್ಕೂಲ್, P.U.C ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಎಷ್ಟು ಹಣದ ಲಭ್ಯತೆ ಇದೆಯೆಂಬ ಬಗ್ಗೆ ನೀವು ಹೇಳಬಹುದಿತ್ತಲ್ಲಾ?

ಅಧ್ಯಕ್ಷರು: ಶರಣ ಪ್ರಕಾಶ್‌ರವರೆ, ನೀವು ನಿಮ್ಮ ಸೇಡಂ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮಾತ್ರ ಕೇಳಿ. ನೀವು ಪ್ರಶ್ನೆ ಕೇಳಿರುವುದು specific ಆಗಿ ಸೇಡಂ

ತಾಲ್ಲೂಕಿಗೆ. ಹಾಗಿರುವಾಗಿ ನೀವು ಏಕೆ ಇಡೀ ರಾಜ್ಯಕ್ಕೆ ಹೋಗುತ್ತೀರಿ? ನಿಮ್ಮದನ್ನು ನೀವು ತೆಗೆದುಕೊಳ್ಳಿ.

ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನೀವು ಎಲ್ಲವನ್ನೂ ಮಂಜೂರು ಮಾಡುತ್ತೇವೆಂದರೆ ನಾನು ಕುಳಿತುಬಿಡುತ್ತೇನೆ.

ಅಧ್ಯಕ್ಷರು: ಅದು ಅವರಿಗೆ ಬಿಟ್ಟಿದ್ದು. ಸರ್ಕಾರಕ್ಕೆ ಬಿಟ್ಟಿದ್ದು. ನೀವು ಪ್ರಶ್ನೆ ಕೇಳುವುದಿದ್ದರೆ ಸೇಡಂಗೆ ಸಂಬಂಧ ಪಟ್ಟಂತೆ ಮಾತ್ರ ಕೇಳಿ. ಅದು ಬಿಟ್ಟು ಇಡೀ ರಾಜ್ಯದ ಮಾಹಿತಿ ಕೇಳಿಕೊಂಡು ಕುಳಿತರೆ ಅವರು ಹೇಗೆ ಮಾಹಿತಿ ಕೊಡಲು ಸಾಧ್ಯವಾಗುತ್ತದೆ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನೀವು ನಮ್ಮನ್ನು ರಕ್ಷಣೆ ಮಾಡಬೇಕು.

ಅಧ್ಯಕ್ಷರು: ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ನಿಮ್ಮ ಪ್ರಶ್ನೆ ಏನಿದೆ ಅದಕ್ಕೆ ಸೀಮಿತವಾಗಿ ಪ್ರಶ್ನೆಯನ್ನು ಕೇಳಿ. ಇಡೀ ರಾಜ್ಯದ ಮಾಹಿತಿ ಕೊಡಿ ಎಂದರೆ ಹೇಗೆ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರು ಇವೆಲ್ಲದಕ್ಕೂ ಮಂಜೂರು ಮಾಡುತ್ತೇನೆಂದರೆ ನಾನು ಕುಳಿತುಕೊಂಡುಬಿಡುತ್ತೇನೆ.

ಅಧ್ಯಕ್ಷರು: ಅದನ್ನು ಅವರಿಗೆ ಕೇಳಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಆದರೆ, ಅವರು ಆದ್ಯತೆಗೆ ಅನುಗುಣವಾಗಿ ಕೊಡುತ್ತೇವೆಂದು vague ಆಗಿ ಉತ್ತರ ಕೊಟ್ಟರೆ ನಾವು detail ಆಗಿ ಕೇಳಬೇಕಾಗುತ್ತದೆ. ನೀವು ಎಲ್ಲವನ್ನೂ ಮಂಜೂರು ಮಾಡುತ್ತೇವೆಂದರೆ ನಾನು ಈಗಲೇ surrender ಆಗಿಬಿಡುತ್ತೇನೆ.

11-30 AM

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಈ ಹೈಸ್ಕೂಲ್ ಮತ್ತು ಪದವಿ ಪೂರ್ವ ಕಾಲೇಜುಗಳ ಬೇಡಿಕೆ ಸೇಡಂ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿರುವಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ನಾವು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯ ಪೂರ್ಣ ವಿವರಗಳನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸುತ್ತಿದ್ದೇವೆ. ಅದರ ಪೂರ್ಣ ನೀತಿ ನಿಯಮಗಳು ಬಂದ ನಂತರ ಈ ರೀತಿ ಅಗತ್ಯವಿರುವಂಥ ಸ್ಥಳಗಳನ್ನು ಗುರುತಿಸಿ, ಅದಕ್ಕೆ ಆದ್ಯತೆಯ ಮೇಲೆ ಕೊಡುವುದಕ್ಕೆ ನಾವು ಪರಿಶೀಲಿಸುತ್ತೇವೆ.

ಅಧ್ಯಕ್ಷರು: ಅವರ ತಾಲ್ಲೂಕ್ಕಿಗೆ ಆದ್ಯತೆ ಕೊಡುತ್ತೇವೆ ಎಂದು ಹೇಳಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದು ಉತ್ತರವಾಗುವುದಿಲ್ಲ, ನಾನು ಪ್ರಶ್ನೆ ಕೇಳಿರುವುದಕ್ಕೆ ಉತ್ತರವೇ ಸಿಕ್ಕಿಲ್ಲ. ಇದಕ್ಕೆ ಎಷ್ಟು ಹಣವನ್ನು ಒದಗಿಸಿದ್ದಾರೆ? ಇದು ಪದವಿ ಪೂರ್ವ ಕಾಲೇಜಿಗೆ ಮತ್ತು ಹೈಸ್ಕೂಲ್‌ಗೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕಲ್ಲಾ? ಅವರು ಹೈಸ್ಕೂಲ್‌ಗೆ ಮತ್ತು ಪಿ.ಯು.ಸಿ. ಕಾಲೇಜುಗಳಿಗೆ ದುಡ್ಡನ್ನು ಇಟ್ಟಿಲ್ಲವೆಂದು ಹೇಳಿಬಿಡಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾನು ಪ್ರಶ್ನೆ ಕೇಳುವ ಉದ್ದೇಶವೇನೆಂದರೆ ಇದಕ್ಕೆ ದುಡ್ಡು ಇಟ್ಟಿಲ್ಲ. ನೀವು ಪಿ.ಯು.ಸಿ. ಕಾಲೇಜಿಗೆ ಆದ್ಯತೆಯನ್ನು ಕೊಡದೇ ಹೋದರೆ, ಈ ಸರ್ಕಾರ ಆದ್ಯತೆ ಇಟ್ಟಿಲ್ಲವೆಂದು ಹೇಳಿ. ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಬಹಳ ಮುಜುಗರ ಪಡುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಹಣಕಾಸಿನ ನೆರವಿನ ವಿವರಗಳು ಬೇಕೆಂದರೆ, ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಲಿ. ಅದಕ್ಕೆ ನಾನು ಉತ್ತರವನ್ನು ದೊರಕಿಸಿಕೊಡುತ್ತೇನೆ.

ವಿಜಾಪುರ ಜಿಲ್ಲೆಯ ಶಿಕ್ಷಣ ಅಭಿವೃದ್ಧಿ ಸೂಚ್ಯಾಂಕಗಳ ಬಗ್ಗೆ

31 (318) ಶ್ರೀ ಬಗಲಿ ಸಾರ್ವಭೌಮ ಸತಗೌಡ [ಇಂಡಿ]

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ವಿಜಾಪುರ ಜಿಲ್ಲೆಯ ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳು ರಾಜ್ಯದಲ್ಲಿಯೇ ಕೊನೆಯ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ;

ಶಿಕ್ಷಣ ಅಭಿವೃದ್ಧಿ ಸೂಚ್ಯಂಕದಲ್ಲಿ ವಿಜಾಪುರ ಜಿಲ್ಲೆಯು 26ನೇ ಸ್ಥಾನದಲ್ಲಿದೆ

ಆ) ಇಂಡಿ ಮತಕ್ಷೇತ್ರದ ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳ ಪ್ರಮಾಣಗಳು ಎಷ್ಟೆಷ್ಟಿವೆ ಎಂಬುದನ್ನು ತಿಳಿಸುವುದು;

202 ಬ್ಲಾಕ್‌ಗಳಲ್ಲಿ ಇಂಡಿ ಮತಕ್ಷೇತ್ರದ ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳ ಪ್ರಮಾಣಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಸೂಚ್ಯಂಕ	ಸ್ಥಾನ
1	ಮಕ್ಕಳ ಕಲಿಕಾ ಸೂಚ್ಯಂಕ	169
2	ಶಿಕ್ಷಕರ ಸೂಚ್ಯಂಕ	173
3	ಶಾಲಾ ಲಭ್ಯತೆಯ ಸೂಚ್ಯಂಕ	193
4	ಭೌತಿಕ ಸೌಲಭ್ಯ ಸೂಚ್ಯಂಕ	185

ಒಟ್ಟಾರೆ ಇಂಡಿ ಬ್ಲಾಕ್‌ನ ಸೂಚ್ಯಂಕವು ರಾಜ್ಯದಲ್ಲಿ 181ನೇ ಸ್ಥಾನವನ್ನು ಪಡೆದಿರುತ್ತದೆ.

ಇ) ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳ ಪ್ರಕಾರ ಅತ್ಯಂತ ಹಿಂದುಳಿದ ಮತ ಕ್ಷೇತ್ರದ ಅಭಿವೃದ್ಧಿ ಸೂಚ್ಯಂಕಗಳನ್ನು ಉತ್ತಮಗೊಳಿಸಲು ವಿಶೇಷ ಯೋಜನೆ ಏನಾದರೂ ರೂಪಿಸಿದೆಯೇ(ವಿವರಗಳನ್ನು ನೀಡುವುದು)?

ಸದರಿ ಸೂಚ್ಯಂಕವನ್ನು ಉತ್ತಮಗೊಳಿಸಲು 2008-09ನೇ ಸಾಲಿಗೆ ಸರ್ವ ಶಿಕ್ಷಣ ಅಭಿಯಾನದಡಿ ಇಂಡಿ ತಾಲ್ಲೂಕಿಗೆ 7 ಹೊಸ ಪ್ರಾಥಮಿಕ ಶಾಲೆಗಳು, 348 ಶಿಕ್ಷಕರನ್ನು ಮಂಜೂರು ಮಾಡಿದೆ. ಮಕ್ಕಳ ಕಲಿಕೆಯನ್ನು ಉತ್ತಮ ಗೊಳಿಸಲು ಎಲ್ಲಾ ಶಿಕ್ಷಕರಿಗೆ 17 ದಿನಗಳ ತರಬೇತಿ, ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಪರಿಹಾರ ಬೋಧನೆ, ಅನುದಾನಿತ ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಹಾಗೂ ಮಕ್ಕಳಲ್ಲಿ ಓದುವ ಕೌಶಲ್ಯ ಅಭಿವೃದ್ಧಿ ಪಡಿಸಲು "ಓದುವೆ ನಾನು ಕಾರ್ಯಕ್ರಮ" ಅನುಷ್ಠಾನ, ಸಂಚಾರಿ ವಿಜ್ಞಾನ ಪ್ರಯೋಗಾಲಯ, ಮಕ್ಕಳ ಸಂಖ್ಯೆ 30 ಕ್ಕಿಂತ ಕಡಿಮೆ ಇರುವ ತಾಲ್ಲೂಕಿನ ಶಾಲೆಗಳಲ್ಲಿ ನಲಿ-ಕಲಿ ಕಾರ್ಯಕ್ರಮ ಅನುಷ್ಠಾನ, 1ನೇ ತರಗತಿಯಿಂದ ಇಂಗ್ಲೀಷ್ ಭಾಷಾ ಬೋಧನೆ, ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಕಲಿಕಾ ಕೇಂದ್ರಗಳ ಸ್ಥಾಪನೆ, ಇತ್ಯಾದಿ, ಭೌತಿಕ ಸೌಲಭ್ಯದಡಿ 7 ಶಾಲಾ ಕಟ್ಟಡ, 43 ಹೆಚ್ಚುವರಿ ಶಾಲಾ ಕೊಠಡಿ ನಿರ್ಮಾಣ, 59 ಶಾಲೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ, 5 ಶಾಲೆಗಳಿಗೆ ವಿಶೇಷ ಅಗತ್ಯತೆ ಯುಳ್ಳ ಮಕ್ಕಳಿಗಾಗಿ ವಿಶೇಷ ಶೌಚಾಲಯ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

ಡಾ:ಬಗಲಿ ಸಾರ್ವಭೌಮ ಸತಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಆದರೆ ಶಿಕ್ಷಕರ ಬೋಧನಾ ಸಾಮರ್ಥ್ಯ, ಕಲಿಕಾ ಕೌಶಲ್ಯ ಹಾಗೂ ಗುಣಮಟ್ಟದ ಶಿಕ್ಷಣವನ್ನು ನೀಡಲು ಶಿಕ್ಷಕರಿಗೆ motivation ಮಾಡಲು ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದಾರೆ? ಎರಡನೆಯದಾಗಿ ಈ ಸೂಚ್ಯಂಕಗಳಲ್ಲಿ ನಾಲ್ಕು ಸೂಚ್ಯಂಕಗಳ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ drop out rate ಹಾಗೂ retention rate ಬಗ್ಗೆ ಮಾಹಿತಿಗಳನ್ನು ನೀಡಿರುವುದಿಲ್ಲ. ಮೂರನೆಯದಾಗಿ ಪ್ರೌಢಶಾಲೆಗಳಲ್ಲಿ ಶಿಕ್ಷಣ ಮಟ್ಟವನ್ನು ಎತ್ತರಿಸಲು digital classroomನ ವ್ಯವಸ್ಥೆಯನ್ನು ತರುವ ಕಾರ್ಯಕ್ರಮವೇನಾದರೂ ಸರ್ಕಾರದ ಬಳಿ ಇದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಶಾಸಕರಾದ ಡಾ:ಬಗಲಿ ಸಾರ್ವಭೌಮ ಸತಗೌಡರವರು ವಿಜಾಪುರ ಜಿಲ್ಲೆಯು ಶಿಕ್ಷಣ ಅಭಿವೃದ್ಧಿ ಸೂಚ್ಯಂಕದಲ್ಲಿ ಎಷ್ಟನೇ ಸ್ಥಾನದಲ್ಲಿದೆಯೆಂದು ಕೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ನಮ್ಮ ವಿಜಾಪುರ ಜಿಲ್ಲೆ 26ನೇ ಸ್ಥಾನದಲ್ಲಿದೆ. ನಾವು ಅಲ್ಲಿಯ ಮಕ್ಕಳ ಕಲಿಕಾ ಸೂಚ್ಯಂಕ, ಶಿಕ್ಷಕರ ಸೂಚ್ಯಂಕ ಮತ್ತು ಶಾಲಾ ಲಭ್ಯತೆಯ ಸೂಚ್ಯಂಕ ಹಾಗೂ ಭೌತಿಕ

ಸೌಲಭ್ಯ ಸೂಚ್ಯಂಕ ಈ ನಾಲ್ಕು ಬೇರೆ ಬೇರೆ ವಿಭಾಗಗಳನ್ನು ನಾವು ಸರ್ವ ಶಿಕ್ಷಣ ಅಭಿಯಾನ ನೀತಿಗಳ ಪ್ರಕಾರವಾಗಿ ವಿಂಗಡಿಸಿ, ಇದನ್ನು ಅಳತೆ ಮಾಡಿದಾಗ, ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಮಕ್ಕಳ ಕಲಿಕಾ ಸೂಚ್ಯಂಕದಲ್ಲಿ 169ನೇ ಸ್ಥಾನದಲ್ಲಿದೆ. ಶಿಕ್ಷಕರ ಸೂಚ್ಯಂಕದಲ್ಲಿ 173ನೇ ಸ್ಥಾನದಲ್ಲಿದೆ. ಶಾಲಾ ಲಭ್ಯತೆ ಸೂಚ್ಯಂಕದಲ್ಲಿ 193ನೇ ಸ್ಥಾನದಲ್ಲಿದೆ ಮತ್ತು ಭೌತಿಕ ಸೌಲಭ್ಯ ಸೂಚ್ಯಂದಲ್ಲಿ 185ನೇ ಸ್ಥಾನದಲ್ಲಿದೆ. ಆ ರೀತಿ ನೋಡಿದರೆ ರಾಜ್ಯದ ಶೈಕ್ಷಣಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ ಈ ವಿವರಗಳು 2006-07ನೇ ಸಾಲಿನ ವಿವರಗಳು 202 ಶೈಕ್ಷಣಿಕ ಬ್ಲಾಕ್‌ಗಳಲ್ಲಿ ನಮ್ಮ ವಿಜಾಪುರದ ಮತ್ತು ಇಂಡಿ ಸ್ಥಾನ ವಿಚಾರ 2006-07ರಲ್ಲಿ ಸರ್ಕಾರದ ಗಮನಕ್ಕೆ ಬಂದ ನಂತರ ಇನ್ನೂ ಸಾಕಷ್ಟು ಸುಧಾರಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ಕಂಡು ಬಂದಿದೆ. ನಾವು ಇದನ್ನು ಸುಧಾರಿಸಿಕೊಳ್ಳುವುದಕ್ಕೋಸ್ಕರವಾಗಿ 7 ಹೊಸ ಪ್ರಾಥಮಿಕ ಶಾಲೆಗಳನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ 2007-08ನೇ ಸಾಲಿನಲ್ಲಿ 284 ಶಾಲಾ ಶಿಕ್ಷಕರನ್ನು ಕೊಟ್ಟಿದ್ದೇವೆ, 2008-09ರಲ್ಲಿ 348 ಶಿಕ್ಷಕರನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಶಿಕ್ಷಕರ ತರಬೇತಿಯನ್ನು ಕಡ್ಡಾಯವಾಗಿ 17 ದಿವಸಗಳ ಕಾಲ DIET ಮೂಲಕ ಕೊಟ್ಟಿದ್ದೇವೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಕೆಲವು clarification ಏನು ಕೇಳಿದರು. ತಾವು ಅದಕ್ಕೆ ಮಾತ್ರ ಉತ್ತರವನ್ನು ಕೊಟ್ಟರೆ ಒಳ್ಳೆಯದು. ಅದರಿಂದ ನಮಗೆ ಸಮಯ ಉಳಿಯುತ್ತದೆ. ನೀವು ಉತ್ತರದಲ್ಲಿ ಎಲ್ಲವನ್ನೂ ಹೇಳಿದ್ದೀರಿ. ಈಗ ಅವರು ಕೆಲವು ಸ್ಪಷ್ಟೀಕರಣವನ್ನು ಕೇಳಿದ್ದಾರೆ. ತಾವು ಅದಕ್ಕೆ ಮಾತ್ರ ಉತ್ತರ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸದಸ್ಯರು ಕೇಳಿರುವಂಥ ಉಪ ಪ್ರಶ್ನೆಗಳಿಗೂ ಸಹ ನಾವು ಈಗಾಗಲೆ ಓದುವೆ ನಾನು ಕಾರ್ಯಕ್ರಮ ಮತ್ತು ಸಂಚಾರಿ ವಿಜ್ಞಾನ ಪ್ರಯೋಗಾಲಯ ಮತ್ತು ನಲಿ-ಕಲಿ ಕಾರ್ಯಕ್ರಮ, ಕಂಪ್ಯೂಟರ್ ಕೊಡುವುದು, ಶಾಲಾ ಕೊಠಡಿಗಳನ್ನು ಕೊಡುವುದು, ಬೇರೆ ಬೇರೆ ಸೌಲಭ್ಯಗಳನ್ನು ಕೊಡುವುದರ ಮೂಲಕ ನಮ್ಮ ಸೂಚ್ಯಾಂಕದಲ್ಲಿ ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಅನ್ನು ಸಹ ಸುಧಾರಣಾ ಕ್ರಮವಾಗಿ ನಾವು ಸಾಕಷ್ಟು ಮಾಡಿದ್ದೇವೆಂಬ ವಿಚಾರವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತಿದ್ದೇನೆ.

ಅಧ್ಯಕ್ಷರು: ಆಯಿತು, ಉನ್ನತ ಶಿಕ್ಷಣ ಸಚಿವರು ಬಂದಿದ್ದಾರೆ. ಮಾನ್ಯ ಬಾಲಕೃಷ್ಣರವರೆ ತಾವು ಪ್ರಶ್ನೆ ಕೇಳಿ.

ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪದವಿ ಕಾಲೇಜುಗಳ ಕೊಠಡಿ ಸಮಸ್ಯೆ ಕುರಿತು.

26 (304) ಶ್ರೀ ಬಾಲಕೃಷ್ಣ ಹೆಚ್.ಸಿ. [ಮಾಗಡಿ]

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿ ಯಲ್ಲಿರುವ ಪದವಿ ಕಾಲೇಜುಗಳು ಯಾವುವು; ಅವುಗಳಲ್ಲಿರುವ ವಿಭಾಗಗಳು ಹಾಗೂ ಪ್ರತಿ ವಿಭಾಗದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ವಿವರ ನೀಡುವುದು;

ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾಗಡಿ ಮತ್ತು ಕುದೂರು ಪ್ರಥಮ ದರ್ಜೆ ಕಾಲೇಜುಗಳು ಬರುತ್ತವೆ. ಆ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ ಸಂ.	ಕಾಲೇಜಿನ ಹೆಸರು	ವಿದ್ಯಾರ್ಥಿಗಳ ಸಂಖ್ಯೆ
1	ಮಾಗಡಿ ಸ.ಪ್ರ.ದ	526
2	ಕುದೂರು ಸ.ಪ್ರ.ದ	230

ಆ) ಪದವಿ ಕಾಲೇಜುಗಳಲ್ಲಿ ಎಷ್ಟೆಷ್ಟು ಕೊಠಡಿಗಳ ಕೊರತೆಯಿದೆ ಎಂಬುದನ್ನು ತಿಳಿಸುವುದು;

1. ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 10 ಕೊಠಡಿಗಳ ಕೊರತೆ ಬಗ್ಗೆ ಬೇಡಿಕೆ ಇದೆ.

2) ಕುದೂರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆ ಬಗ್ಗೆ ಬೇಡಿಕೆ ಬಂದಿರುವುದಿಲ್ಲ.

ಇ) ಈಗಾಗಲೇ ಈ ಕೊಠಡಿಗಳ ತೀವ್ರವಾದ ಕೊರತೆ ಹಾಗೂ ಈ ಕಾಲೇಜುಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸಲ್ಲಿಸಿರುವ ಬೇಡಿಕೆಗಳಿಗೆ ಯಾವ ಯಾವ ಕ್ರಮ ಗಳನ್ನು ಕೈಗೊಳ್ಳಲಾಗಿದೆ;

1) ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 2006–07ನೇ ಸಾಲಿನಲ್ಲಿ 21.00ಲಕ್ಷರೂಗಳ ಅಂದಾಜಿನ ಕಾಮಗಾರಿಗೆ ಅನುದಾನ ಒದಗಿಸಲಾಗಿದ್ದು, ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸದರಿ ಕಾಲೇಜಿನಲ್ಲಿ 10 ಕೊಠಡಿಗಳ ಬೇಡಿಕೆಗಾಗಿ 1.29ಕೋಟಿರೂಗಳ ರೇಖಾ ಅಂದಾಜು ಪಟ್ಟಿ ದಿನಾಂಕ:05–02–2009ರಂದು ಸ್ವೀಕೃತವಾಗಿರುತ್ತದೆ. 2008–09ನೇ ಸಾಲಿನ ಅನುದಾನವನ್ನು ಈಗಾಗಲೇ ಹಂಚಿಕೆ ಮಾಡಿ ವೆಚ್ಚ ಮಾಡಿರುವುದರಿಂದ ಈ ಮೊತ್ತವನ್ನು 2009–

10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ಕಾಲೇಜಿಗೆ ಮೂಲಭೂತ ಸೌಕರ್ಯಗಳಾದ ಗ್ರಂಥಾಲಯ, ಪೀಠೋಪಕರಣ, ಕಛೇರಿ ವೆಚ್ಚ, ವಿದ್ಯುತ್ ಮತ್ತು ನೀರು ಮುಂತಾದ ವೆಚ್ಚಗಳಿಗಾಗಿ 2008-09ನೇ ಸಾಲಿನಲ್ಲಿ ರೂ.2,66,600/- ಗಳನ್ನು ಒದಗಿಸಲಾಗಿದೆ.

2) ಕುದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿಗೆ 2006-07ನೇ ಸಾಲಿನಲ್ಲಿ 15.00ಲಕ್ಷ ಮತ್ತು 25.00ಲಕ್ಷರೂಗಳಂತೆ ಒಟ್ಟು 40.00ಲಕ್ಷರೂಗಳ ಅನುದಾನ ಒದಗಿಸಲಾಗಿದೆ. ಈ ಪೈಕಿ ಒಂದು ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಎರಡನೇ ಕಾಮಗಾರಿಗೆ 2008-09ನೇ ಸಾಲಿನಲ್ಲಿ 18.00ಲಕ್ಷರೂಗಳನ್ನು ಒದಗಿಸಲಾಗಿರುತ್ತದೆ. ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಕಾಲೇಜಿಗೆ ಮೂಲಭೂತ ಸೌಕರ್ಯಗಳಾದ ಗ್ರಂಥಾಲಯ, ಪೀಠೋಪಕರಣ, ಕಛೇರಿ ವೆಚ್ಚ, ವಿದ್ಯುತ್ ಮತ್ತು ನೀರು ಮುಂತಾದ ವೆಚ್ಚಗಳಿಗಾಗಿ 2008-09ನೇ ಸಾಲಿನಲ್ಲಿ ರೂ.2,29,600/-ಗಳನ್ನು ಒದಗಿಸಲಾಗಿದೆ.

ಈ) ಇನ್ನೆಷ್ಟು ದಿನದಲ್ಲಿ ಈ ಕೊಠಡಿಗಳ ಕೊರತೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ನಿವಾರಿಸಲಾಗುವುದು?

ಮುಂದಿನ ಸಾಲಿನಲ್ಲಿ ಅನುದಾನ ಲಭ್ಯತೆ ಹಾಗೂ ಬೇಡಿಕೆಯನ್ನಾಧರಿಸಿ, ಕೊಠಡಿಗಳ ಕೊರತೆ ಹಾಗೂ ಮೂಲಭೂತ ಸೌಕರ್ಯಗಳನ್ನು ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರ ಬಂದಿದೆ. ಇದರಲ್ಲಿ ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 10 ಕೊಠಡಿಗಳ ಕೊರತೆ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ನಾವು ಕಳೆದ ಸಾಲಿನಲ್ಲೂ ಬೇಡಿಕೆಯನ್ನು ಇಟ್ಟಿದ್ದೆವು. ಅದಕ್ಕೂ ಕೂಡ ಸರ್ಕಾರ ಸ್ಪಂದಿಸಿಲ್ಲ. ಈಗ ಖಾಸಗಿಯವರ ಬಾಡಿಗೆ ಶೆಡ್‌ನಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವರು ಶೆಡ್‌ಗಳನ್ನು ಖಾಲಿ ಮಾಡಿಯೆಂದು ಒತ್ತಡವನ್ನು ತಂದಿದ್ದಾರೆ. ಈಗ ಅಲ್ಲಿ ಕೊಠಡಿಗಳಿಲ್ಲವೆಂದರೆ ಮಕ್ಕಳನ್ನು ಬೀದಿಯಲ್ಲಿ ಕೂಡಿಸಿಕೊಂಡು ಪಾಠವನ್ನು ಹೇಳುವಂಥ ಪರಿಸ್ಥಿತಿ ಇದೆ. ಆದುದರಿಂದ ದಯಮಾಡಿ 10 ಕೊಠಡಿಗಳನ್ನು ಈ ಸಾರಿ ಅನುದಾನದಲ್ಲಿ ಕೊಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಬೇಕು. ಇದರ ಜೊತೆಗೆ ಅಲ್ಲಿ science college ಮಂಜೂರಾಗಿದೆ. ಅಲ್ಲಿ ಪ್ರಯೋಗಶಾಲೆ ಇಲ್ಲದೇ ಇರುವುದರಿಂದ ಈ science college ಅನ್ನು ಬೆಂಗಳೂರಿನ ವಿಜಯನಗರಕ್ಕೆ shift ಮಾಡಿದ್ದಾರೆ. ಅಲ್ಲಿಂದ ಮಕ್ಕಳು ಇಲ್ಲಿಗೆ ಬಂದು ಪ್ರಯೋಗ ಶಾಲೆಯನ್ನು ಉಪಯೋಗ ಮಾಡುತ್ತಿರುವಂಥಾದ್ದು ಆಗುತ್ತಿದೆ, ಮತ್ತೆ ಇಲ್ಲಿ ಟೀಚರ್ಸ್ ಕೊರತೆ ಇದೆ. ನಮ್ಮ

ತಾಲ್ಲೂಕು ಡಾ:ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕೆಂದು ಆಗಿದೆ. ಇಲ್ಲಿ ಮಕ್ಕಳಿಗೆ ವಿದ್ಯೆಯನ್ನು ಸರಿಯಾಗಿ ಕೊಡಲಿಲ್ಲವೆಂದರೆ ಸಮಸ್ಯೆಯಾಗುತ್ತದೆ. ಈಗ ಸರ್ಕಾರ ಬೇರೆ ಬೇರೆ ಕಾರ್ಯಕ್ರಮಗಳಿಗೆ ಹಣವನ್ನು ವೆಚ್ಚ ಮಾಡುತ್ತಿದೆ. ಅದರ ಬದಲು ಈ ಹಣವನ್ನು ಇದಕ್ಕೆ ಕೊಟ್ಟರೆ ಬಹಳಷ್ಟು ಅನುಕೂಲವಾಗುತ್ತದೆ. ಭಯೋತ್ಪಾದನೆ ವಿರೋಧಿ ಅಭಿಯಾನಕ್ಕೆ ಖರ್ಚು ಮಾಡುತ್ತಿರುವಂಥ ಹಣದ ಬಗ್ಗೆ ನಾನು ಇವತ್ತು ನೋಡಿದೆ. ಇಲ್ಲಿ ಕರೆದುಕೊಂಡು ಬರುವ ಹುಡುಗರಿಗೆ ಊಟಕ್ಕೂ ಹಣ, ಬಸ್ಸುಗಳಿಗೆ, ಟೆಂಪೋಗಳಿಗೆ ಹಣ, ಇವೆಲ್ಲಕ್ಕೂ ಕೊಡುವ ಬದಲು, ದಯಮಾಡಿ ಈ ಸಾರಿ ಅನುದಾನವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಮಾಗಡಿ ಮತ್ತು ಕುದೂರುನಲ್ಲಿರತಕ್ಕಂಥ ಕೊರತೆಗಳ ಬಗ್ಗೆ ಮಾನ್ಯ ಬಾಲಕೃಷ್ಣರವರು ನಮ್ಮ ಗಮನಕ್ಕೆ ತಂದಿದ್ದಾರೆ. ಇದು ಸರ್ಕಾರದ ಗಮನದಲ್ಲೂ ಇದೆ. ಈಗಾಗಲೆ ಈ ವರ್ಷದ ಬಜೆಟ್‌ನಲ್ಲಿ ಇದಕ್ಕೆ ಹಣವನ್ನು ಒದಗಿಸಲಾಗಿದೆ. ಇಲ್ಲಿ ನಿಶ್ಚಿತವಾಗಿ laboratoryಗಳು ಮತ್ತು ಗ್ರಂಥಾಲಯ ಇದೆಲ್ಲಾ ವ್ಯವಸ್ಥೆಯನ್ನು ಆದಷ್ಟು ಈ ವರ್ಷದಲ್ಲಿ ಮಾಡಬೇಕು. ತಮಗೆ ಗೊತ್ತಿದೆ, ಕಳೆದ ಸಲ ಹಣವನ್ನು ಕೊಟ್ಟಂಥ ಸಂದರ್ಭದಲ್ಲಿ P.W.D.ಯಿಂದ ಸ್ವಲ್ಪ ನಿಧಾನವಾದ ಕಾರಣಕ್ಕಾಗಿ ಕೊಠಡಿಗಳಾಗಲಿ ಅಥವಾ ಉಳಿದಂಥ ವ್ಯವಸ್ಥೆಗಳು ಸಿದ್ಧವಾಗಿರಲಿಲ್ಲ. ಈ ಸಾರಿ ಅದನ್ನು ಮೂರು agencyಗಳನ್ನಾಗಿ divide ಮಾಡಿ, ಆದಷ್ಟು ಈ ಕೆಲಸವನ್ನು ಬೇಗ ಮಾಡಬೇಕೆನ್ನುವ ಬಗ್ಗೆ ಕ್ರಮವನ್ನು ಇಲಾಖೆಯಿಂದ ಕೈಗೊಳ್ಳುತ್ತೇವೆ. ಇದು ನಿಶ್ಚಿತವಾಗಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಆಗುವ ರೀತಿಯಲ್ಲಿ ಕ್ರಮವನ್ನು ಜರುಗಿಸುತ್ತೇವೆ. ಇನ್ನು ತಾವು ಏನು ಹೇಳಿದ್ದೀರಿ, ಅದು ವಿಜಯನಗರದಲ್ಲಿ ಆಗಿರುವ ಕಾಲೇಜನ್ನು ಮಾಗಡಿಯಲ್ಲೇ ವಾಪಸ್ಸು ಸಿಗುವ ಹಾಗೆ ನಿಶ್ಚಿತವಾಗಿ ನಾನು ಪ್ರಯತ್ನವನ್ನು ಮಾಡುತ್ತೇನೆ.

ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವ ಬಗ್ಗೆ.

29 (322) ಶ್ರೀ ಅಪ್ಪಸಾಹೇಬ(ಅಪ್ಪು)ಮಲ್ಲಪ್ಪ ಪಟ್ಟಣಶೆಟ್ಟಿ

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣಸಚಿವರು)

ಅ) ಬಿಜಾಪುರದಲ್ಲಿರುವ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಇದುವರೆಗೂ ಯಾವುದೇ ಹೆಸರಿನ ನಾಮಕರಣ ಮಾಡದೇ ಇರಲು ಕಾರಣವೇನು;

ಪರಿಶೀಲನೆಯಲ್ಲಿದೆ.

ಆ) ಈ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಲು ಸರ್ಕಾರಕ್ಕೆ ಯಾವ ಯಾವ ಪ್ರಸ್ತಾವನೆಗಳು ಬಂದಿವೆ;

1. ಶಿವಶರಣೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ
2. ಚಾಂದ್ ಬೀಬೀ ಮಹಿಳಾ ವಿಶ್ವವಿದ್ಯಾಲಯ
3. ರಮಾಬಾಯಿ ಅಂಬೇಡ್ಕರ್ ಮಹಿಳಾ ವಿಶ್ವವಿದ್ಯಾಲಯ

ಇ) ಸರ್ಕಾರವು ಯಾವ ಹೆಸರನ್ನಿಡಲು ಚಿಂತನೆ ನಡೆಸಿದೆ; ಯಾವಾಗ ನಾಮಕರಣ ಮಾಡಲಾಗುವುದು;

ಪರಿಶೀಲನೆಯಲ್ಲಿದೆ.

ಈ) ವಿಶ್ವವಿದ್ಯಾಲಯವು ಅವಶ್ಯಕವಾದ ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ಕಾರದ ಗಮನಕ್ಕೆ ಬಂದಿದೆ.

ಉ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೈಗೊಂಡಿರುವ ಕಾರ್ಯ ಕ್ರಮಗಳೇನು?

2008–09ನೇ ಸಾಲಿನ ಆಯವ್ಯಯದಲ್ಲಿ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯ ಗಳಿಗಾಗಿ ರೂ.445.00ಲಕ್ಷಗಳನ್ನು ಒದಗಿಸ ಲಾಗಿದೆ. 2008–09ನೇ ಪರಿಷ್ಕೃತ ಆಯವ್ಯಯದಲ್ಲಿ ಈ ಮೊತ್ತದ ಜೊತೆಗೆ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ರೂ.500.00 ಲಕ್ಷ ಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಿದೆ.

ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ: ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಒದಗಿಸಿದೆ. ನಾನು ಬಿಜಾಪುರದಲ್ಲಿರುವಂಥ ಮಹಿಳಾ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಹೆಚ್ಚಿಗೆ ಹಣವನ್ನು ಕೊಡಬೇಕೆಂಬ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮೊನ್ನೆ ಸನ್ಮಾನ್ಯ ಮುಖ್ಯಮಂತ್ರಿಯವರು 5 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಹಾಗೂ ನಿಗದಿತ ಹಣ 4 ಕೋಟಿ 45 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಉನ್ನತ ಶಿಕ್ಷಣ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಶ್ವವಿದ್ಯಾಲಯಕ್ಕೆ ನಾಮಕರಣ ವಿಚಾರವಾಗಿಯೂ ಆದಷ್ಟು ಆದ್ಯತೆಯನ್ನು ಕೊಟ್ಟು ಆದಷ್ಟು ಬೇಗನೆ ಆ ಹೆಸರನ್ನು ಘೋಷಣೆ ಮಾಡಬೇಕೆಂಬ ವಿನಂತಿ ಮಾಡುತ್ತೇನೆ. ಈ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಗಳ ಮುಖಾಂತರ ಬಂದಿರುವಂಥ ಹೆಸರುಗಳನ್ನು ಆದ್ಯತೆಯ ಮೇರೆಗೆ ಮತ್ತು ಅಲ್ಲಿರುವಂಥ ನಾಡಿನ

ಶರಣರು ಮತ್ತು ಹೋರಾಟಗಾರರ ಮನವಿಗಳು ಏನು ಇವೆ, ಆ ವಿಷಯಕ್ಕೆ ಸಂಬಂಧಪಟ್ಟಂಥ ಹೆಸರನ್ನು ಸರ್ಕಾರ ಘೋಷಣೆ ಮಾಡಬೇಕೆಂಬ ವಿನಂತಿಯನ್ನು ಮಾಡಬಯಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಸದಸ್ಯರಾದ ಮಾನ್ಯ ಆಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿಯವರು ಮತ್ತು ನಾನು ಬಿಜಾಪುರದ ವಿಶ್ವವಿದ್ಯಾಲಯದ ಪರಿಶೀಲನೆಗೆ ಹೋಗಿದ್ದೆವು. ಅಲ್ಲಿ ಸಾಕಷ್ಟು ಬೆಳವಣಿಗೆಗಳು, ಅಭಿವೃದ್ಧಿಗಳಾಗುವ ಅವಶ್ಯಕತೆ ಇದೆ. ಈಗ ತಾನೇ ಅಲ್ಲಿ ನಮಗೆ ಲ್ಯಾಂಡ್ ಸಿಕ್ಕಿರುವುದರಿಂದ ಅಭಿವೃದ್ಧಿಗೆ ಬೇಕಾಗಿರುವಂಥ ಹಣವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಡುವುದಕ್ಕೆ ಪರಿಶೀಲಿಸುತ್ತಿದ್ದಾರೆ. ಅದನ್ನು ನಿಶ್ಚಿತವಾಗಿ ಆದರ್ಶ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರ ಆಸೆ ಹಾಗೂ ನನ್ನ ಆಸೆ ಕೂಡ ಇರುವುದರಿಂದ, ಇದಕ್ಕೆ ನಿಶ್ಚಿತವಾಗಿ ಬೇಕಾಗಿರುವಂಥ ಹಣವನ್ನು ಒದಗಿಸಲಾಗುತ್ತದೆ. ಮಾನ್ಯ ಸದಸ್ಯರು ಕೊಟ್ಟ ಸಲಹೆಯಂತೆ ಹೆಸರನ್ನು ಇಡುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳುತ್ತೇವೆ. ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ತುಮಕೂರು ವಿಶ್ವವಿದ್ಯಾಲಯಕ್ಕೆ ಡಾ:ಶಿವಕುಮಾರಸ್ವಾಮಿಯವರ ಹೆಸರನ್ನು ಘೋಷಿಸಿದ್ದಾರೆ. ಉಳಿದ ವಿಶ್ವವಿದ್ಯಾಲಯಗಳ ಬಗ್ಗೆಯೂ ಕೂಡ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಇದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳುತ್ತೇವೆ.

ರಾಜೀವ್‌ಗಾಂಧಿ ವಿದ್ಯುದೀಕರಣ ಯೋಜನೆ ಬಗ್ಗೆ

33 (173) ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)

ಶ್ರೀ ಕೆ.ಎಸ್.ಈಶ್ವರಪ್ಪ (ಇಂಧನ ಸಚಿವರು)

ಅ) ಸಾಗರ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ರಾಜೀವ್ ಗಾಂಧಿವಿದ್ಯುದೀಕರಣ ಯೋಜನೆ ಯಡಿಯಲ್ಲಿ ಸಲ್ಲಿಸಿರುವ ಅರ್ಜಿಗಳೆಷ್ಟು;

ರಾಜೀವಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 4,807 ಹಾಗೂ 3,798

ಸಂಖ್ಯೆಯ ಗ್ರಾಮೀಣ ಮನೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಕಲ್ಪಿಸಲು ಪ್ರಸ್ತಾವಿಸಲಾಗಿದೆ. ಈ ಪ್ರಸ್ತಾವನೆಗೆ ಈಗ ಆರ್.ಇ.ಸಿ. ಮಂಜೂರಾತಿ ದೊರಕಿದೆ. ಇದರಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸಂಬಂಧಪಟ್ಟ ಎಕ್ಸಿಕ್ಯುಟಿವ್ ಆಫೀಸರ್‌ಗಳು ಗುರುತಿಸಲ್ಪಟ್ಟ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.

ಆ) ಈ ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಎಷ್ಟು ವಿದ್ಯುಚ್ಛಕ್ತಿ ಸೌಲಭ್ಯ ಕಲ್ಪಿಸಲಾಗಿದೆ; ಎಷ್ಟು ಫಲಾನುಭವಿಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಕಲ್ಪಿಸಬೇಕಾಗಿದೆ;

ರಾಜೀವಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಅನುಷ್ಠಾನಕ್ಕಾಗಿ ಈಗಾಗಲೇ ಟೆಂಡರ್ ಕರೆದಿದ್ದು, ದರಬಿಡ್ಡುಗಳನ್ನು ತೆರೆದಿದ್ದು, ಮೌಲ್ಯಮಾಪನವು ಸಂಪೂರ್ಣಗೊಂಡಿರುತ್ತದೆ. ಈ ಬಗ್ಗೆ ಆರ್.ಇ.ಸಿ/ಎಂ.ಓ.ಪಿ. ರವರಿಂದ ದಿನಾಂಕ: 19-02-2009 ರಂದು ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯ ಅನುಷ್ಠಾನದೊಂದಿಗೆ ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 4807 ಹಾಗೂ 3798 ಸಂಖ್ಯೆಯ ಗ್ರಾಮೀಣ ಮನೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಕಲ್ಪಿಸಲಾಗುವುದು.

ಇ) ಉಳಿದಿರುವ ಅರ್ಜಿದಾರರಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಲ್ಪಿಸಲು ಕಾಲಮಿತಿ ನಿಗದಿಪಡಿಸಲಾಗಿದೆಯೇ?

ಈ ಯೋಜನೆಯಂತೆ ಕಾಮಗಾರಿಯನ್ನು ಸಂಪೂರ್ಣಗೊಳಿಸಲು ಕಾಮಗಾರಿ ವಹಿಸಿದ ದಿನದಿಂದ ಒಟ್ಟು 18 ತಿಂಗಳುಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. ಅದಾಗ್ಯೂ, ಹೆಚ್ಚುವರಿ ಫಲಾನುಭವಿಗಳಿದ್ದಲ್ಲಿ ಅವರನ್ನೂ ಸಹ ಸೇರ್ಪಡೆಗೊಳಿಸಲಾಗುವುದು.

ಶ್ರೀ ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಲ್ಲಿ ಸುಮಾರು ಎರಡು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಯಾವುದೇ ವಿದ್ಯುದೀಕರಣ ಆಗಿಲ್ಲ. ಈ ಸರಿ ಆರ್ಡರ್ ಆಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. R.E.C.Schemeನಲ್ಲಿ ತಾವು ವಿದ್ಯುದೀಕರಣವನ್ನು ಕೊಟ್ಟಿದ್ದೀರಿ. ಬಹಳ ಸಂತೋಷ. ಆದರೆ, ನಮ್ಮ ತಾಲ್ಲೂಕಿನಲ್ಲಿ ಇನ್ನೂ ಸುಮಾರು 180-190 ಹಳ್ಳಿಗಳು ವಿದ್ಯುದೀಕರಣವಾಗಿಲ್ಲ ಎಂದು ಹೇಳಲು ಬಹಳ ಬೇಸರವಾಗುತ್ತದೆ. ಶರಾವತಿ ಡ್ಯಾಂ ಮತ್ತು ಲಿಂಗನಮಕ್ಕಿ ಡ್ಯಾಂಗಳನ್ನು ಕಟ್ಟುವಾಗ ಮುಳುಗಡೆಯಾದಂಥ ಪ್ರದೇಶಗಳ ಬಹಳಷ್ಟು ಜನರು ಅಲ್ಲಿದ್ದಾರೆ. ಹಿಂದೆ, ಬಹಳ ವರ್ಷ ಆಡಳಿತವನ್ನು ಮಾಡಿದಂಥ

ಸರ್ಕಾರದವರು ಅಲ್ಲಿಗೆ ವಿದ್ಯುತ್ ಕೊಡಲಿಕ್ಕೆ ಆಗಲಿಲ್ಲ. ಹಾಗಾಗಿ, ಇವತ್ತು ಇಂಧನ ಸಚಿವರು ನಮ್ಮ ಜಿಲ್ಲೆಯವರು ಆಗಿರುವುದರಿಂದ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಮಲೆನಾಡಿನಲ್ಲಿ ವಿದ್ಯುದೀಕರಣಕ್ಕೆ ಹೆಚ್ಚಿನ ಬೇಡಿಕೆ ಇರುವುದರಿಂದ ದಯವಿಟ್ಟು ವಿದ್ಯುದೀಕರಣಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಮತ್ತು ವಿದ್ಯುದೀಕರಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ನಿನ್ನೆ ತಾನೆ ಕೇಂದ್ರ ಸರ್ಕಾರದಿಂದ ಆರ್ಡರ್ ಬಂದಿದೆ. ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣದ ಯೋಜನೆಯಡಿಯಲ್ಲಿ ಶಿವಮೊಗ್ಗ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಒಟ್ಟು 85 ಕೋಟಿ ರೂಪಾಯಿಗಳಷ್ಟು ಮಂಜೂರಾತಿಯಾಗಿ ಬಂದಿದೆ. ಇದರಲ್ಲಿ ಶಿವಮೊಗ್ಗ ಜಿಲ್ಲೆಯ 1,440 ಹಳ್ಳಿಗಳು, ಚಿಕ್ಕಮಗಳೂರು ಜಿಲ್ಲೆಯ 1,033 ಹಳ್ಳಿಗಳು ಸೇರಿವೆ. ಮಂಜೂರಾಗಿರುವ ಹಣದಲ್ಲಿ ಶಿವಮೊಗ್ಗ ಜಿಲ್ಲೆಗೆ 42.73 ಕೋಟಿ ರೂಪಾಯಿಗಳು ಮತ್ತು ಚಿಕ್ಕಮಗಳೂರು ಜಿಲ್ಲೆಗೆ 42.30 ಕೋಟಿ ರೂಪಾಯಿಗಳಷ್ಟಿದೆ. ಸಾಗರದ ಬಗ್ಗೆ ಮಾನ್ಯ ಶಾಸಕರು ಕೇಳುತ್ತಿದ್ದಾರೆ, ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 4,807 ಹಾಗೂ 3,798 ಸಂಖ್ಯೆಯ ಗ್ರಾಮೀಣ ಮನೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ಈಗಾಗಲೆ ಇದಕ್ಕೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಬಂದಿರುವುದರಿಂದ 18 ತಿಂಗಳುಗಳಲ್ಲಿ ಈ ಯೋಜನೆಯನ್ನು ಮುಗಿಸಿಕೊಡುತ್ತೇವೆ.

ಶ್ರೀ ಯು.ಟಿ.ಖಾದರ್: ಮಾನ್ಯ ಅಧ್ಯಕ್ಷರೆ, ಮಂಗಳೂರು ಜಿಲ್ಲೆಯಲ್ಲಿ ಕೂಡ ಈ proprosal ಇತ್ತು.

ಅಧ್ಯಕ್ಷರು: ಸಾಗರ ಮತ್ತು ಹೊಸನಗರಗಳಿಗೆ ಸೀಮಿತವಾದಂತೆ ಅವರು ಪ್ರಶ್ನೆಯನ್ನು ಕೇಳಿದ್ದಾರೆ. I will not allow you.

ಶ್ರೀ ಬಿ.ರಮಾನಾಥ ರೈ: ದಕ್ಷಿಣ ಕನ್ನಡ ಜಿಲ್ಲೆಯನ್ನು ರದ್ದು ಮಾಡಿ ಶಿವಮೊಗ್ಗ ಜಿಲ್ಲೆಯನ್ನು ಸೇರಿಸಿದ್ದಾರೆ. ಇದು ಸರಿಯಲ್ಲ. ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಸೇರ್ಪಡೆಯಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯನ್ನು ರದ್ದು ಮಾಡಿ ಶಿವಮೊಗ್ಗವನ್ನು ಹಾಕಿದ್ದಾರೆ. ಇದರ ಬಗ್ಗೆ ತಿಳುವಳಿಕೆ ಕೊಡಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನೂ ಸೇರಿಸಿ ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೆವು. ಕೇಂದ್ರ ಸರ್ಕಾರದಿಂದ ಅದು ಅನುಮೋದನೆಯಾಗಿ ಬಂದಿಲ್ಲ. ಈಗ ಕೇಂದ್ರ ಸರ್ಕಾರದಿಂದ ಮಂಜೂರಾಗಿ ಬಂದಿರುವುದು ಶಿವಮೊಗ್ಗ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಮಾತ್ರ.

ಉಡುಪಿ, ಮಂಗಳೂರು ಮತ್ತು ಉಳಿದ ಜಿಲ್ಲೆಗಳದ್ದನ್ನೂ ಕೂಡ ನಾವು ಮತ್ತೆ ಮುಂದುವರೆಸುತ್ತೇವೆ, ಅದನ್ನು ಬಿಡುವುದಿಲ್ಲ. ನಾವು ಕೇಂದ್ರ ಸರ್ಕಾರಕ್ಕೆ ಬೆನ್ನು ಹತ್ತುತ್ತೇವೆ. ಆ ಜಿಲ್ಲೆಗಳಿಗೂ ಕೊಡುವ ದಿಕ್ಕಿನಲ್ಲಿ ನಾವು ಪ್ರಯತ್ನವನ್ನು ನಡೆಸುತ್ತೇವೆ.

ರಾಜ್ಯದಲ್ಲಿ ಖಾಲಿ ಇರುವ ಶಿಕ್ಷಕರ ನೇಮಕಾತಿ ಕುರಿತು.

34 (76) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರ್ ರಾವ್ ನಾಡಗೌಡ (ಮುದ್ದೇಬಿಹಾಳ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಪ್ರಾಥಮಿಕ ಶಿಕ್ಷಣ:-

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ರಾಜ್ಯ ವಲಯದ 3763 ಮತ್ತು ಸರ್ವ ಶಿಕ್ಷಣ ಅಭಿಯಾನದಿಂದ 2008-09ನೇ ಸಾಲಿಗೆ ಮಂಜೂರಾದ 1165 ಹುದ್ದೆಗಳು ಸೇರಿದಂತೆ ಒಟ್ಟು 4928 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಪ್ರೌಢ ಶಿಕ್ಷಣ:- ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರು 1678 ಹಾಗೂ ಸಂಗೀತ ಶಿಕ್ಷಕರು 240 ಸೇರಿದಂತೆ ಒಟ್ಟು 1918 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಆ) ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಖಾಲಿ ಇರುವ ಸದರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ. ಅನುಮತಿ ದೊರೆತ ಕೂಡಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು. ಹಾಗಿದ್ದಾಗ್ಯೂ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಅನುಬಂಧ–1

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ವಿವರ

ಕ್ರ ಸಂ.	ಜಿಲ್ಲೆಯ ಹೆಸರು	ದಿ:31.07.2008ರಂದು ಖಾಲಿ ಇರುವ ಹುದ್ದೆ	ಒಟ್ಟು ಎಸ್.ಎಸ್.ಎ ಹುದ್ದೆಗಳು	ಒಟ್ಟು
1	ಬೆಂಗಳೂರು ಉತ್ತರ	80	28	
2	ಬೆಂಗಳೂರು ದಕ್ಷಿಣ	37		145
3	ಬೆಂಗಳೂರು ಗ್ರಾಮಾಂತರ	63	10	73
4	ಕೋಲಾರ	124	29	153
5	ಚಿಕ್ಕಬಳ್ಳಾಪುರ	105	0	105
6	ತುಮಕೂರು (ಹೆಚ್ಚುವರಿ)	28	34	62
7	ಮಧುಗಿರಿ	41	–	41
8	ಶಿವಮೊಗ್ಗ	216	16	232
9	ಚಿತ್ರದುರ್ಗ	77	58	135
10	ದಾವಣಗೆರೆ	75	17	92
11	ಮೈಸೂರು (ಹೆಚ್ಚುವರಿ	184	–	184
12	ಚಾಮರಾಜನಗರ	31	–	31
13	ಮಂಡ್ಯ	189	–	189
14	ಹಾಸನ	32	44	76
15	ಚಿಕ್ಕಮಗಳೂರು (ಹೆಚ್ಚುವರಿ)	276	6	282
16	ಕೊಡಗು	46	6	52
17	ದಕ್ಷಿಣ ಕನ್ನಡ	174	10	184
18	ಉಡುಪಿ	23	6	29
19	ಬೆಳಗಾವಿ	209	180	389
20	ಚಿಕ್ಕೋಡಿ	116	–	116
21	ಬಿಜಾಪುರ	–	84	84
22	ಬಾಗಲಕೋಟೆ	194	61	255
23	ಧಾರವಾಡ	107	4	111

24	ಗದಗ್	68	–	68
25	ಹಾವೇರಿ	375	40	415
26	ಉತ್ತರ ಕನ್ನಡ	198	12	210
27	ಗುಲ್ಬರ್ಗಾ	127	175	302
28	ಯಾದಗಿರಿ	115	–	115
29	ಬಳ್ಳಾರಿ	258	16	274
30	ರಾಯಚೂರು	–	135	135
31	ಕೊಪ್ಪಳ	47	56	103
32	ಬೀದರ್	89	114	203
33	ರಾಮನಗರ (ಹೆಚ್ಚುವರಿ)	59	24	83
	ಒಟ್ಟು	**3763**	**1165**	**4928**

ಅನುಬಂಧ-2

ಪ್ರೌಢಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ವಿವರ

ಕ್ರ ಸಂ.	ಜಿಲ್ಲೆಯ ಹೆಸರು	ಸಹ ಶಿಕ್ಷಕರ ಹುದ್ದೆಗಳು	ಸಂಗೀತ ಶಿಕ್ಷಕರ ಹುದ್ದೆಗಳು	ಒಟ್ಟು
34	ಬೆಂಗಳೂರು ಉತ್ತರ	04	02	6
35	ಬೆಂಗಳೂರು ದಕ್ಷಿಣ	34	05	39
36	ಬೆಂಗಳೂರು ಗ್ರಾಮಾಂತರ	26	06	32
37	ಕೋಲಾರ	61	07	68
38	ಚಿಕ್ಕಬಳ್ಳಾಪುರ	97	03	100
39	ತುಮಕೂರು	71	15	86
40	ಮಧುಗಿರಿ	44	09	53
41	ಶಿವಮೊಗ್ಗ	92	13	105
42	ಚಿತ್ರದುರ್ಗ	104	03	107
43	ದಾವಣಗೆರೆ	69	09	78
44	ಮೈಸೂರು	60	11	71
45	ಚಾಮರಾಜನಗರ	12	09	21
46	ಮಂಡ್ಯ	119	15	134
47	ಹಾಸನ	72	09	81

48	ಚಿಕ್ಕಮಂಗಳೂರು	50	10	60
49	ಕೊಡಗು	14	04	18
50	ದಕ್ಷಿಣ ಕನ್ನಡ	23	16	39
51	ಉಡುಪಿ	51	12	63
52	ಬೆಳಗಾವಿ	14	01	15
53	ಚಿಕ್ಕೋಡಿ	29	09	38
54	ಬಿಜಾಪುರ	12	01	13
55	ಬಾಗಲಕೋಟೆ	35	01	36
56	ಧಾರವಾಡ	21	05	26
57	ಗದಗ್	23	02	25
58	ಹಾವೇರಿ	77	07	84
59	ಉತ್ತರ ಕನ್ನಡ	03	02	05
60	ಗುಲ್ಬರ್ಗಾ	89	13	102
61	ಯಾದಗಿರಿ	57	04	61
62	ಬಳ್ಳಾರಿ	46	14	60
63	ರಾಯಚೂರು	67	10	77
64	ಕೊಪ್ಪಳ	58	01	59
65	ಬೀದರ್	54	08	62
66	ರಾಮನಗರ	90	04	94
	ಒಟ್ಟು	**1678**	**240**	**1918**

ಶ್ರೀ ಅಪ್ಪಾಜಿ ಎಸ್. ನಾಡಗೌಡ: ಮಂತ್ರಿಗಳು ಈಗಾಗಲೆ ಉತ್ತರವನ್ನು ನೀಡಿದ್ದಾರೆ ಅದರಲ್ಲಿ ಪ್ರೌಢಶಾಲೆ ಖಾಲಿ ಹುದ್ದೆಗಳ ವಿವರಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಒಟ್ಟು 1,918 ಹುದ್ದೆಗಳು ಖಾಲಿ ಇವೆ. ಅದೇ ಪ್ರಕಾರವಾಗಿ, ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 4,928 ಹುದ್ದೆಗಳು ಖಾಲಿ ಇವೆ. ಎರಡೂ ಸೇರಿಸಿದರೆ ಒಟ್ಟಾರೆ ಸುಮಾರು 7,000 ಹುದ್ದೆಗಳು ಖಾಲಿ ಇವೆ. ಇದರ ಜೊತೆಗೆ, ಈಗ ಕೆಲವು ಕಡೆಗಳಲ್ಲಿ ಏನಾಗಿದೆ ಎಂದರೆ, ಶಾಲೆಗಳಿಗೆ ಹೊಸದಾಗಿ ಕಟ್ಟಡ ಮಾಡತಕ್ಕಂಥ ಕೆಲಸಗಳಿಗೋಸ್ಕರ ಶಿಕ್ಷಕರನ್ನು ಅಲ್ಲಿ ಮೇಲುಸ್ತುವಾರಿ ನೋಡಿಕೊಳ್ಳಲಿಕ್ಕೆ ಅಲ್ಲಿನ ಸುಧಾರಣಾ ಸಮಿತಿಯವರು ಜಂಟಿಯಾಗಿ ನೇಮಕ ಮಾಡಿದ್ದಾರೆ. ಹೀಗಾಗಿ, ಆ ಶಿಕ್ಷಕರ್ಯಾರೂ ಶಾಲೆಯಲ್ಲಿ ಮಕ್ಕಳಿಗೆ ಕಲಿಸುವುದಿಲ್ಲ. ಅವರ್ಯಾರೂ ಕೂಡ ಶಾಲೆಗಳಲ್ಲಿ ಇರುವುದೇ ಇಲ್ಲ. ಅವರು 24 ತಾಸುಗಳೂ Z.P.Engineering

Officeನಲ್ಲಿ ಅಥವಾ ಜಿಲ್ಲೆಗಳಲ್ಲಿ ಬೇರೆ ಕಡೆಗೆ ಹೋಗಿ ಓಡಾಡುವುದರಲ್ಲೇ ತಮ್ಮ ಸಮಯವನ್ನು ಕಳೆಯುತ್ತಿದ್ದಾರೆ. ಈ ಪರಿಸ್ಥಿತಿಯಿರುವಾಗ ನಿಜವಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಇದರ ಎರಡು ಪಟ್ಟು ಆಗತಕ್ಕಂಥ ಸಾಧ್ಯತೆ ಇದೆ. ಇದು ನಿಜ. ಇದು ನಿಮ್ಮ ಅನುಭವಕ್ಕೆ ಬಂದಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ನಮಗೆ ಇದರ ಅನುಭವವಿದೆ. ಏಕೆಂದರೆ, ನಾವು ಶಾಸಕರಿದ್ದೇವೆ, ನಾವು review ಮಾಡುತ್ತಿರುತ್ತೇವೆ, ಸ್ಕೂಲುಗಳಿಗೆ visit ಮಾಡುತ್ತಿರುತ್ತೇವೆ, ಹಾಗಾಗಿ ಇದು ಪ್ರತಿನಿತ್ಯ ನಮಗೆ ಬರತಕ್ಕಂಥ ಮಾಹಿತಿ. ಅದಕ್ಕೋಸ್ಕರ ಕೇಳುತ್ತಿದ್ದೇನೆ, ಮಕ್ಕಳ ಹಿತದೃಷ್ಟಿಯಿಂದ ಈ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳಲು ಏನು ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂದು ಕೇಳಿದರೆ, ಈ ಹುದ್ದೆಗಳನ್ನು ಭರ್ತಿ ಮಾಡುವವರೆಗೂ ನಾವು ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದು ಎಲ್ಲಿ ಪ್ರಾರಂಭವಾಗಿದೆ? ಹೀಗಾಗಿ, ತಾವು ಒಂದು ನಿರ್ದಿಷ್ಟ ಸಮಯದಲ್ಲಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರ ಯೋಚಿಸಿದೆಯೇ ಎನ್ನುವುದು ನನ್ನ ಮೂಲಭೂತ ಪ್ರಶ್ನೆಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಶ್ರೀಯುತ ನಾಡಗೌಡರವರು ಕೇಳಿರುವಂಥ ಪ್ರಶ್ನೆಗೆ ಉತ್ತರವು ಬಹಳ ಸ್ಪಷ್ಟವಾಗಿದೆ. ಆದರೆ ಅವರು ಕೇಳಿರುವುದೇನೆಂದರೆ, ಶಿಕ್ಷಕರು ಕಟ್ಟಡ ಕಟ್ಟುವ ಕೆಲಸದ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿರುವುದರಿಂದ ಅದರಿಂದ ಕಲಿಸುವಿಕೆಗೆ ತೊಂದರೆ ಯಾಗಿದೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಮಾನ್ಯ ಶಾಸಕರಿಗೆ ಬಹಳ ಸ್ಪಷ್ಟವಾಗಿ ಇಲಾಖೆಯ ಮಾತನ್ನು ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ನಾವು ಯಾವುದೇ ಶಿಕ್ಷಕರಿಗೆ ಕಟ್ಟಡ ಕಟ್ಟುವಂಥ ಮೇಲುಸ್ತುವಾರಿ ಜವಾಬ್ದಾರಿಯನ್ನು ಕೊಟ್ಟಿಲ್ಲ. ಸರ್ವಶಿಕ್ಷಣ ಅಭಿಯಾನದ ಮೂಲಕವೇ ನಾವು ಕೊಡಡಿಗಳನ್ನು S.D.M.C. ಯವರ ಮೂಲಕ ನಾವು ಅನುಷ್ಠಾನ ಗೊಳಿಸುತ್ತಿದ್ದೇವೆ. Head Masterಮತ್ತು S.D.M.C.ಯವರೇ Cheque Drawing Authority. ಕಟ್ಟಡವನ್ನು ಕಟ್ಟಲೂ ಸಹ ನಮ್ಮವರೇ ಇಂಜಿನಿಯರ್ ಇದ್ದಾರೆ. ಅವರು Z.P. ಅಥವಾ P.W.D. Officeಗೆ ಅಡ್ಡಾಡಬೇಕಾಗಿಲ್ಲ. ಸರ್ವಶಿಕ್ಷಣ ಅಭಿಯಾನದ ಇಂಜಿನಿಯರುಗಳೇ ಬಂದು ಅದನ್ನು measurement ಮಾಡಿ M.B. ಬರೆದುಕೊಡುತ್ತಾರೆ. ಹಾಗಾಗಿ, ಶಿಕ್ಷಕರಿಗೆ ಕಟ್ಟಡ ಕಟ್ಟುವಂಥ ಮೇಲುಸ್ತುವಾರಿ ಜವಾಬ್ದಾರಿ ಇಲ್ಲ. ಆ ರೀತಿಯ ಘಟನೆಗಳು ಎಲ್ಲಾದರೂ ಆಗುತ್ತಿದ್ದರೆ, ಅದನ್ನು ತಾವು ನನ್ನ ಗಮನಕ್ಕೆ ತಂದರೆ ನಿಶ್ಚಿತವಾಗಿ ಅಂಥ ಶಾಲೆಗಳ ಬಗ್ಗೆ, ಯಾವ ಶಿಕ್ಷಕರು ಈ ರೀತಿಯ ನೆಪಗಳನ್ನು ಹೇಳಿಕೊಂಡು ತಮ್ಮ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳುತ್ತಿದ್ದಾರೆ, ಅಂಥ ಶಿಕ್ಷಕರ ಮೇಲೆ ನಾವು ನಿಶ್ಚಿತವಾಗಿ ಕ್ರಮವನ್ನು ತೆಗೆದು ಕೊಳ್ಳುತ್ತೇವೆ. ಹಾಗಾಗಿ, ನಿಮ್ಮ ಅನುಭವಕ್ಕೆ ಬಂದಿರುವ ಅಂಥ ಪ್ರಸಂಗಗಳ್ಯಾವುದಾದರೂ ಇದ್ದರೆ ದಯವಿಟ್ಟು ನನಗೆ ತಿಳಿಸಿ, ನಾವು ನಿಶ್ಚಿತವಾಗಿ ಕ್ರಮ

ತೆಗೆದುಕೊಳ್ಳುತ್ತೇವೆ. ಶಿಕ್ಷಕರಿಗೆ ಆ ರೀತಿ ಭಾರ ಆಗದೇ ಇರುವಂತೆ ಎಚ್ಚರಿಕೆಯನ್ನು ವಹಿಸಿಕೊಂಡಿದ್ದೇವೆ.

ಎರಡನೆಯದಾಗಿ, ತಾವು ಕೇಳಿರುವಂತೆ ಪ್ರೌಢಶಾಲೆಗಳು ಮತ್ತು ಪ್ರಾಥಮಿಕ ಶಾಲೆಗಳಲ್ಲಿ ನಿವೃತ್ತಿಯಿಂದ ಮತ್ತು ಪದೋನ್ನತಿಯಿಂದ ಹುದ್ದೆಗಳು ಸೃಷ್ಟಿಯಾಗಿವೆ. ಏಕೆಂದರೆ ರಿಟೈರ್‌ಮೆಂಟ್ ವಯಸ್ಸನ್ನು 58 ರಿಂದ 60 ವರ್ಷಕ್ಕೆ ಅಂದರೆ ಎರಡು ವರ್ಷಗಳು ಹೆಚ್ಚು ಮಾಡಿರುವುದರಿಂದ ಕಳೆದ ಒಂದು ವರ್ಷದಿಂದ ರಿಟೈರ್‌ಮೆಂಟ್‌ಗಳು ಆಗುತ್ತಿಲ್ಲ. ಇದು ತಮಗೂ ಗೊತ್ತಿದೆ. ಖಾಲಿ ಇರುವ ಹುದ್ದೆಗಳ ಬಗ್ಗೆ ಹಣಕಾಸು ಇಲಾಖೆಯಲ್ಲಿ ಆದ್ಯತೆಯ ಮೇಲೆ ಪರಿಶೀಲನೆಯಲ್ಲಿದೆ. ಹಾಗಾಗಿ, ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದರೊಳಗೆ ಈ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸಬೇಕು ಎನ್ನುವಂಥಾದ್ದು ಇಲಾಖೆಯ ಇಚ್ಛೆಯಾಗಿದೆ. ನಮ್ಮ ಇಲಾಖೆಯ ಈ ಇಚ್ಛೆಯನ್ನು, ಹಣಕಾಸು ಇಲಾಖೆಯ ಅಧಿಕಾರಿಗಳ ಜೊತೆಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದು, ಈ ಒಂದು ಮಾತನ್ನು ಅವರಿಗೆ ತಿಳಿಸಿದ್ದೇವೆ. ಆದಷ್ಟು ಶೀಘ್ರದಲ್ಲಿ ಹಣಕಾಸು ಇಲಾಖೆಯಿಂದ ಅನುಮೋದನೆಯನ್ನು ಪಡೆದು ನೇಮಕಾತಿ ಪ್ರಕ್ರಿಯೆಯನ್ನು ಮಾಡುತ್ತೇವೆ. ಕೊನೆಯದಾಗಿ ತಾವು ಅತಿಥಿ ಉಪನ್ಯಾಸಕರ ಬಗ್ಗೆ ಕೇಳಿದಿರಿ.

ಶ್ರೀ ಅಪ್ಪಾಜಿ ಎಸ್.ನಾಡಗೌಡ: ಅವರ ನೆರವಿಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಹಣಕಾಸಿನ ಇಲಾಖೆ ಎನ್ನುವಂಥ ಒಂದು ಮಾತನ್ನು ಅವರು ಹೇಳಿದರು. ದಯವಿಟ್ಟು ಮಂತ್ರಿಗಳು ಉತ್ತರ ಕೊಡುವಾಗ ಇದನ್ನು ಬಳಸಬಾರದು. ಹಣಕಾಸಿನ ಇಲಾಖೆ ಎನ್ನುವುದು ಸರ್ಕಾರ, ಕ್ಯಾಬಿನೆಟ್ ಮತ್ತು ಮುಖ್ಯಮಂತ್ರಿಯವರನ್ನು ಹೊರತುಪಡಿಸಿದಂಥ ಇಲಾಖೆಯಲ್ಲ. ಅದಕ್ಕಾಗಿ, ನೀವು ಸರ್ಕಾರವಾಗಿ, ಜವಾಬ್ದಾರಿಯುತವಾಗಿ ಉತ್ತರವನ್ನು ಕೊಡಬೇಕು. ಹಣಕಾಸು ಇಲಾಖೆಯಿಂದ ಅನುಮೋದನೆಯಾಗಬೇಕಾಗಿದೆ ಎಂದು ಹೇಳಿದಿರಿ. ಒಂದು ವೇಳೆ ಹಣಕಾಸು ಇಲಾಖೆ ಕೊಡದಿದ್ದರೂ ಕೂಡ, ಆರ್ಥಿಕ ಮಂತ್ರಿಗಳು ಅದನ್ನು ಕ್ಲಿಯರ್ ಮಾಡಬೇಕು. ನೀವು ಹಣಕಾಸು ಇಲಾಖೆಯ ಮೇಲೆ, ಅಧಿಕಾರಿಗಳ ಮೇಲೆ ಹೇಳತಕ್ಕಂಥಾದ್ದಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಟೀಚರ್ಸ್ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಹಣಕಾಸು ಇಲಾಖೆಯ ನಿರ್ಬಂಧವಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಶಿಕ್ಷಕರ ನೇಮಕಾತಿಗೆ ನಮ್ಮ ಸರ್ಕಾರದ ಆದ್ಯತೆ ಇದೆ. ಖಾಲಿ ಇರುವ ಎಲ್ಲಾಹುದ್ದೆಗಳನ್ನು ನಾವು ಬರುವ ಶೈಕ್ಷಣಿಕ ವರ್ಷದಲ್ಲಿ ತುಂಬಬೇಕು ಎನ್ನುವುದು ನಮ್ಮ ಇಚ್ಛೆಯಾಗಿದೆ. ಅದಕ್ಕೆ ಬೇಕಾಗಿರುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಕೊನೆಯಲ್ಲಿ, ತಾವು ಅತಿಥಿ ಉಪನ್ಯಾಸಕರ ಬಗ್ಗೆ ಕೇಳಿದ್ದೀರಿ. ಎಲ್ಲಾ ಕಡೆಗಳಲ್ಲಿಯೂ ಜೂನಿಯರ್ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಕೆ.ಪಿ.ಎಸ್.ಸಿ.ಯಿಂದ

ನೇಮಕಾತಿ ಪ್ರಕ್ರಿಯೆ ಆಗುವವರೆಗೆ ಇದರಿಂದ ಬಹಳ ಅನುಕೂಲವಾಗಿದೆ. ಇದು ಈ ಸದನದ ಎಲ್ಲ ಸದಸ್ಯರಿಗೆ ಗೊತ್ತಿದೆ. ಹೈಸ್ಕೂಲುಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಈ ವರ್ಷದ ಶೈಕ್ಷಣಿಕ ವರ್ಷ ಇನ್ನೇನು ಮುಗಿದು ಹೋಯಿತು. ಇನ್ನೇನು ಮುಂದಿನ ತಿಂಗಳು ಪರೀಕ್ಷೆ ಶುರುವಾಗಿಬಿಡುತ್ತದೆ. ಹಾಗಾಗಿ, ಅದರ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಿರಬಹುದು. ಆದರೆ, ಮುಂದಿನ ವರ್ಷದೊಳಗೆ ಹುದ್ದೆ ಖಾಲಿ ಇಲ್ಲದಿರುವಂತೆ ನೋಡಿಕೊಳ್ಳುತ್ತೇವೆ. ಒಮ್ಮೆ ಆಕಸ್ಮಿಕವಾಗಿ ಯಾವುದಾದರೂ ಕಾರಣದಿಂದ ಖಾಲಿ ಉಳಿದರೆ, ನಾವು ಈ ಅತಿಥಿ ಉಪನ್ಯಾಸಕರನ್ನು ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಅವರು ಈ ರೀತಿಯ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಕೊನೆಗೆ ನನ್ನ ಒಂದು ವಿನಂತಿ ಏನೆಂದರೆ, ಇವತ್ತು ಸಂಜೆ banquet hall ನಲ್ಲಿ 'ಶಾಲೆಗಾಗಿ ನಾವು ನೀವು' ಎನ್ನುವ ಕಾರ್ಯಕ್ರಮ ನಡೆಯಲಿದ್ದು, ನಮ್ಮ ಶಾಲೆಗಳನ್ನು ದತ್ತು ತೆಗೆದುಕೊಳ್ಳುವಂಥ, ಪಾಲನೆ, ಪೋಷಣೆ ಮಾಡುವಂಥ ಕಾರ್ಯಕ್ರಮವಿದೆ. ಮಾನ್ಯ ಅಧ್ಯಕ್ಷರೂ ಸೇರಿದಂತೆ ಈ ಸದನದ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಶಾಲೆಗಳನ್ನು ಇನ್ನಷ್ಟು ಹೆಚ್ಚು ಗುಣಾತ್ಮಕವಾಗಿ ಅಭಿವೃದ್ಧಿಪಡಿಸುವುದಕ್ಕೆ ಬೇಕಾಗಿರುವ ಚಿಂತನೆ ಸರ್ಕಾರದಿಂದ ಆಗಿದೆ. ತಾವೆಲ್ಲರೂ ಅದರಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ವಿನಂತಿ ಮಾಡುತ್ತೇನೆ.

ವಿದ್ಯುತ್ ಸ್ಥಾವರ ಸ್ಥಾಪನೆ ಬಗ್ಗೆ

35 : (74) ಶ್ರೀ ಮಂಜು ಎ. (ಅರಕಲಗೂಡು)

ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಇಂಧನ ಸಚಿವರು)

ಅ) ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕಿನ ರುದ್ರ ಪಟ್ಟಣದಲ್ಲಿ ವಿದ್ಯುತ್ ಸ್ಥಾವರ ಸ್ಥಾಪನೆಗೆ ಸರ್ಕಾರದ ಅನುಮತಿ ನೀಡಿದೆಯೇ;

ಕೆ.ಪಿ.ಟಿ.ಸಿ.ಎಸ್.ನ ತಾಂತ್ರಿಕ ಸಲಹಾ ಸಮಿತಿ ಅನುಮೋದನೆ ದಿನಾಂಕ:11.6.2007 ರಂದು ನೀಡಿದೆ.

ಆ) ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಪೂರ್ತಿಗೊಳಿಸುವುದು;

ಈ ಕಾಮಗಾರಿಯನ್ನು ಮುಂಬರುವ ವರ್ಷವಾದ 2009-10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಉದ್ದೇಶಿಸಿದೆ.

ಇ) ಈ ವಿದ್ಯುತ್ ಸ್ಥಾವರದ ಸ್ಥಾಪನೆಗೆ ಈ ಸಾಲಿನ ಬಜೆಟ್‌ನಲ್ಲಿ ಬಿಡುಗಡೆ ಮಾಡಲಾಗುವ ಅನುದಾನವೆಷ್ಟು?

ಉದ್ಭವಿಸುವುದಿಲ್ಲ.

ಶ್ರೀ ಎ.ಮಂಜು: ಮಾನ್ಯ ಸಚಿವರು ದಿ:11.06.2007ರಲ್ಲಿ ಅನುಮೋದನೆ ನೀಡಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, 2007-2008ರಲ್ಲಿ ಇವರು ಏಕೆ ಕೆಲಸ ಮಾಡಲಿಲ್ಲ? ಈಗ ಅವರು ಮತ್ತೊಮ್ಮೆ 2009-10ರ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಬಜೆಟ್‌ನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದರೆ, ಉದ್ಭವಿಸುವುದಿಲ್ಲವೆನ್ನುವ ಉತ್ತರ ಕೊಟ್ಟಿದ್ದಾರೆ. 2010ರಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟರೆ ಹೇಗೆ? ಈ ಬಗ್ಗೆ ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕಾಗುತ್ತದೆ. ನಮ್ಮಲ್ಲಿ ರುದ್ರಪಟ್ಟಣ ಎನ್ನುವ ಗ್ರಾಮವಿದೆ. ಆ ಗ್ರಾಮ ಇಡೀ ಪ್ರಪಂಚದಲ್ಲಿಯೇ ಸಂಗೀತಕ್ಕೆ ಹೆಸರುವಾಸಿಯಾಗಿದೆ. ಇದರಲ್ಲಿ ತಾವು ತಾರತಮ್ಯ ಮಾಡಬಾರದು. ಇದರಲ್ಲೇನಾಗಿದೆ ಎಂದರೆ, ಹಾಸನ ಎನ್ನುವುದು ನಿಮ್ಮ ಕಣ್ಣಿಗೆ ಬಿದ್ದಿದೆ. ಅದನ್ನು ಬಿಟ್ಟು ಈಚೆಗೆ ಬನ್ನಿ. ನಾವೆಲ್ಲ ನಂಜುಂಡಪ್ಪ ವರದಿಯನ್ನು ಜಾರಿಗೆ ತರಬೇಕೆಂದು ಹೇಳುತ್ತಲೇ ಇದ್ದೇವೆ. ನಂಜುಂಡಪ್ಪನವರ ವರದಿಯನ್ನು ಹೀಗೆ ಮಾಡಿದ್ದಾರೆ ಎಂದರೆ ಪಾಪ ನಂಜುಂಡಪ್ಪನವರಿಗೆ ತೊಂದರೆಯಾಗಿ ಬಿಡುತ್ತದೆಯೋ ಏನೋ? ಅವರ ಹೆಸರು ಹೇಳಿ ಈ ರೀತಿ ಮಾಡುವುದು ಬೇಡ. ಹಾಸನ ಎನ್ನುವುದರ ಬಗ್ಗೆ ನಿಮ್ಮ ಮನಸ್ಸಿನಲ್ಲಿರುವುದನ್ನು ತೆಗೆದು ಹಾಕಿ ನೀವೇನು 2009-10ರಲ್ಲಿ ಕಾಮಗಾರಿಯನ್ನು ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ, ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣ ಗ್ರಾಮ ಆರ್.ಕೆ. ಶ್ರೀಕಂಠನ್, ಸಂಗೀತಗಾರರ ವಿಶೇಷವಾದ ಒಂದು ಊರಾಗಿದೆ. ನಿಜ, ದಿ:11.06.2007ರಲ್ಲಿ ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಲು ತಾಂತ್ರಿಕ ಸಲಹಾ ಸಮಿತಿಯಿಂದ ಅನುಮೋದನೆ ದೊರಕಿತ್ತು. ಆದರೆ, ಬಜೆಟ್ ಇಟ್ಟಿರಲಿಲ್ಲ. ಈಗ ನಾವು ಬಜೆಟ್ ಇಡುತ್ತಿದ್ದೇವೆ. 18 ತಿಂಗಳುಗಳಲ್ಲಿ ನಾವು ಈ ಕಾಮಗಾರಿಯನ್ನು ಮುಗಿಸಿಕೊಡುತ್ತೇವೆ.

ಕಾಪು ಕ್ಷೇತ್ರ ವ್ಯಾಪ್ತಿಯಲ್ಲಿ ತರಬೇತಿ ಕೇಂದ್ರ ತೆರೆಯುವ ಬಗ್ಗೆ.

36 (314) ಶ್ರೀ ಲಾಲಾಜಿ ಆರ್. ಮೆಂಡನ್ [ಕಾಪು]

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಕಾಪು ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರ ಹಾಗೂ ಖಾಸಗಿ ಡಿಪ್ಲೋಮಾ[ತಾಂತ್ರಿಕ] ತರಬೇತಿ ಕೇಂದ್ರ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹೌದಾದಲ್ಲಿ, ಸರ್ಕಾರಿ ಡಿಪ್ಲೋಮಾ (ತಾಂತ್ರಿಕ) ತರಬೇತಿ (ಮೆಕ್ಯಾನಿಕಲ್, ಎಲೆಕ್ಟ್ರಿಕಲ್ಸ್, ಎಲೆಕ್ಟ್ರಾನಿಕ್ಸ್ ವಿಷಯಗಳ ತರಬೇತಿ) ಕೇಂದ್ರದ ಮಂಜೂರಾತಿ ನೀಡುವುದೇ?

2008-09ನೇ ಸಾಲಿನಿಂದ ಕಾಪು ಸಮೀಪದ ಸ್ಥಳಗಳಾದ ಕಾರ್ಕಳದಲ್ಲಿ ಮಹಿಳಾ ಪಾಲಿಟೆಕ್ನಿಕ್, ಉಡುಪಿ ಮತ್ತು ಬಂಟ್ವಾಳದಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಲಾಗಿದೆ.

ಶ್ರೀ ಲಾಲಾಜಿ ಆರ್.ಮೆಂಡನ್: ಕಾಪು ಕ್ಷೇತ್ರದ ವ್ಯಾಪ್ತಿಯಲ್ಲಿ ಎರಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಎರಡು ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿವೆ. ಆದರೆ, ತಾಂತ್ರಿಕ ಶಿಕ್ಷಣಕ್ಕೆ ನಮ್ಮಲ್ಲಿ ಸರಿಯಾದ ಕಾಲೇಜು ಇಲ್ಲ. ಈಗಾಗಲೇ ITI ಇದ್ದರೂ ಕೂಡ ಅಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಅದಕ್ಕಾಗಿ ಈಗಾಗಲೆ ಕಾಪು ಕ್ಷೇತ್ರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಳಾಂತರಗೊಳ್ಳುವುದಕ್ಕೆ ತಯಾರಾಗಿದೆ. ಹಾಗಾಗಿ, ಆ ಕಟ್ಟಡಕ್ಕೆ Polytechnic college ಅನ್ನು ಸನ್ಮಾನ್ಯ ಸಚಿವರು ಮಂಜೂರಾತಿ ಮಾಡಬೇಕು ಹಾಗೂ ಆ ಭಾಗದಲ್ಲಿ ಸುಜಲಾನ್ ಎಂಬ ಗಾಳಿಯಂತ್ರ ಘಟಕದ ಕೈಗಾರಿಕೆ ಬರುತ್ತಿದೆ. ಅದಕ್ಕಾಗಿ ITI ಮತ್ತು ಇತರ ತಾಂತ್ರಿಕ ಶಿಕ್ಷಣಕ್ಕೆ ಸಾಕಷ್ಟು ಪ್ರೋತ್ಸಾಹವಿದೆ. ಅದಕ್ಕಾಗಿ ಆ ಕಾಲೇಜಿಗೆ ಮಂಜೂರಾತಿ ನೀಡಬೇಕಾಗಿ ಸನ್ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಅರವಿಂದ ಲಿಂಬಾವಳಿ: ಈಗಾಗಲೆ ಉಡುಪಿಯಲ್ಲಿ, ಬಂಟ್ವಾಳದಲ್ಲಿ ಮತ್ತು ಕಾರ್ಕಳದಲ್ಲಿ, ಮಂಗಳೂರಿನ K.P.T. and Women's Polytechnic ಇಷ್ಟೆ ಕಡೆಗೆ ಇದೆ. ಅಲ್ಲಿ ಸಾಕಷ್ಟು ವಿದ್ಯಾರ್ಥಿಗಳ need ಏನಿದೆ ಅದನ್ನು ಪೂರೈಸುವ ಮಟ್ಟಕ್ಕೆ polytechnic colleges ಅನ್ನು ಅಲ್ಲಿ ತೆರೆದಿದ್ದೇವೆ. ಅದೂ ಮೀರಿ, ಆಕಸ್ಮಾತ್ ಅಲ್ಲೇನಾದರೂ ಅವಶ್ಯಕತೆ ಇದೆ ಎಂಬ demand ಬಂದರೆ, ನಿಶ್ಚಿತವಾಗಿ ಅವರು ಹೇಳುವ ಸಲಹೆಯನ್ನು consider ಮಾಡಲಾಗುತ್ತದೆ. ಆದರೆ, ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಇದನ್ನು ಮಾಡುವಂಥ ಯಾವುದೇ ಯೋಜನೆ ಸರ್ಕಾರದ ಮುಂದಿಲ್ಲ.

ಕುಡಿಯುವ ನೀರಿನ ಯೋಜನೆ ಬಗ್ಗೆ

307 (109) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) ,

ಶ್ರೀಮತಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಬಹಳಷ್ಟು ಹಳ್ಳಿಗಳು ಫ್ಲೋರೈಡ್ ಹಾಗೂ ಅರ್ಸೆನಿಕ್ಸ್ ಅಂಶದಿಂದ ಕೂಡಿರುವುದರಿಂದ ಆ ಹಳ್ಳಿಗಳಿಗೆ ಶುದ್ಧವಾದ ನೀರು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ 44 ಫ್ಲೋರೈಡ್ ಹಾಗೂ 24 ಆರ್ಸೆನಿಕ್ ಅಂಶದ ಜಲಮೂಲ ಹೊಂದಿರುವ ಗ್ರಾಮಗಳನ್ನು ಗುರುತಿಸಲಾಗಿದೆ. ಈ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಅಗತ್ಯವಿರುವ 17-ಯೋಜನೆ ಗಳನ್ನು ಒಟ್ಟು ರೂ.72.22ಕೋಟಿ ಅಂದಾಜು ವೆಚ್ಚದಲ್ಲಿ ಮಂಜೂರು ಮಾಡಲಾಗಿದೆ. ಸದರಿ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ), MLAರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 109ರ ಲಗತ್ತು Annexure–1/ಅನುಬಂಧ–1

APPROVED UNDER SUB-MISSION SCHEMES

Sl. No.	Name of the Scheme	No. of Habitations proposed for coverage	WQA Habitations proposed to be covered	Estimate Cost	Work Order Issued	Date of commencement	Proposed Date of completion	Released		Remarks
				Amount Rs.in lakhs	Date	Date	Date	Central	State	
1	2	3	4	5	7	8	9	10	11	12
1	W/S/S to Turvihal & other 33 villages in Sindhanur taluk	34	20	2114.00	Feb.09	-	Aug-10	566.00	141.50	ಈ ಎರಡು ಯೋಜನೆಗಳ ಟೆಂಡರ್‌ಗಳನ್ನು ಅನುಮೋದನೆ ಮಾಡಲಾಗಿದ್ದು, ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಿ, ನಿಗದಿತ

2	W/S/S to Bhogapura & other 13 villages in Sindhanur taluk	14	8	373.00	Feb.09	-	Mar-10	100.00	25.00	ಕಾಲಾವಧಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

SCHEMES CLEARED BY S.L.E.C.(ದಿ:27.11.08ರ ಸಭೆ) UNDER SUB-MISSION PROJECT

Sl. No.	District	Name of Scheme	No.of Habitations	No. of Quality affected habitations	Population 2008	Source	Est Cost (Rs. In lakhs)	Remarks
1	2	3	4	5	6	7	8	16
1	Raichur	W/S/S to Maski village in Lingasuguru taluk	1	1	23236	TBLBC	710.00	ಈ ಯೋಜನೆಗಳನ್ನು ದಿನಾಂಕ 27.11.08ರಂದು ನಡೆದ SLEC ಸಭೆಯಲ್ಲಿ ಅನುಮೋದಿಸಲಾಗಿದೆ. ಅನುದಾನ ಲಭ್ಯತೆ
2	Raichur	W/S/S to Amingad & other 9 villages in Manvi taluk	10	7	29161	TB Canal	884.00	
3	Raichur	W/S/S to Gudihal	16	13	20522	TB	974.00	

		& other 15 villages in Manvi taluk				Canal		ಆದ್ಯತೆಯ ಅನ್ವಯ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಿದೆ.
4	Raichur	W/S/S to Kurkunda & other 26 villages in Sindhanur taluk	27	14	43966	TB LBC	1445.00	
5	Raichur	W/S/S to Hullur & other 5 villages in Sindhanur taluk	6	4	9780	T B L C	452.00	
		TOTAL	60	39	126665		4465.00	

SCHEMES TAKEN UP UNDER EAP-JALNIRMAL PROJECT

Sl. No.	Gram Panchayat	Name of Scheme	Estimated Cost (Rs. In lakhs)		
1	Santhekollur	W/S/S to Santhekollur, Bedarakarlekunte and Muslikarlakunte villages	97.23	ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ.	ಒಟ್ಟು ರೂ.72.22 ಕೋಟಿ ಅಂದಾಜು
2		W/S/S to Hollur Village	14.02		
3		W/S/S to Sankanur village	10.88		

4	Udbal	W/S/S to Chikkadabur	20.2		ಮೊತ್ತದ 17 ಕಾಮಗಾರಿಗಳು Totally 17 schemes / works amounting Rs.72.22 Crores.
5		W/S/S to Durga Camp	24.19		
6		W/S/S to Udbal	24.86		
7	Virupapura	W/S/S to Aralihalli village	41.75		
8	Gunjalli	W/S/S to Gunjalli village	21.91		
9	Balaganur	W/S/S to Narayananagar Camp	7.32		
10		W/S/S to Lakshmi Camp	7.86		
		Total	**270.22**		

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2006-07ನೇ ಸಾಲಿನ ವಾರ್ಷಿಕ ವರದಿ.

7. <u>ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು) :</u> ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

<u>1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮದ (15)ರ ಪ್ರಕರಣದ ಮೇರೆಗೆ:</u>

1. ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು 2007-08ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

8. <u>ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ನಗರಾಭಿವೃದ್ಧಿ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ):</u> ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>1956ರ ಕಂಪನಿಗಳ ಅಧಿನಿಯಮದ 619 (ಎ) ಪ್ರಕರಣದ ಮೇರೆಗೆ:</u>

1. ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2006-07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

9. <u>ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು):</u> ನನ್ನ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>1956ರ ಕಂಪನಿಗಳ ಅಧಿನಿಯಮದ 619(ಎ) ಪ್ರಕರಣದ ಮೇರೆಗೆ:</u>

1. ದಿ ಮೈಸೂರು ಟೊಬ್ಯಾಕೊ ಕಂಪನಿ ನಿಯಮಿತದ 2007-08ನೇ ಸಾಲಿನ 71ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತದ 2007-08ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

3. ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ, ಗುಲ್ಬರ್ಗಾದ 2007–08ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
4. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಿಯಮಿತದ 2006–07ನೇ ಸಾಲಿನ 40ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 2007–08ನೇ ಸಾಲಿನ 35ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

10. ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು) (ಜಲಸಂಪನ್ಮೂಲ ಸಚಿವರ ಪರವಾಗಿ): ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 24 ಹಾಗೂ 25ರನ್ವಯ:

1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ 2007–08ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾದ 2007–08ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿಗಳ ಅಧಿನಿಯಮದ 619 (ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2006–07ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಗಳು.

11. ಕುಮಾರಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ನನ್ನ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262 (3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ:

1. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.

3. ಬಿಜಾಪುರ ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ವಾರ್ಷಿಕ ಆಡಳಿತ ವರದಿ.
4. ಮಂಡ್ಯ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ
5. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ವಾರ್ಷಿಕ ಆಡಳಿತ ವರದಿ,
6. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಹಾವೇರಿ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2007–08ನೇ ಸಾಲಿನ ವಾರ್ಷಿಕ ಆಡಳಿತ ವರದಿ.
9. ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
10. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ವಾರ್ಷಿಕ ಆಡಳಿತ ವರದಿ.
11. ಉಡುಪಿ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

12. ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು):(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮದ 619 (ಎ) (2) ಪ್ರಕರಣದ ಮೇರೆಗೆ:

1. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 2007–08ನೇ ಸಾಲಿನ 62ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
2. ಮೈಸೂರು ಪೇಪರ್ ಮಿಲ್ಸ್ ನಿಯಮಿತದ 2007–08ನೇ ಸಾಲಿನ 73ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2007–08ನೇ ಸಾಲಿನ 14ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

4. ದಿ ಮೈಸೂರು ಲ್ಯಾಂಪ್ಸ್ ವರ್ಕ್ಸ್ ನಿಯಮಿತದ 2007–08ನೇ ಸಾಲಿನ 72ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ಸಾಬೂನು ಮಾರ್ಜಕ ನಿಯಮಿತದ 2007–08ನೇ ಸಾಲಿನ 28ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
6. ದಿ ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ 2007–08ನೇ ಸಾಲಿನ 74ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

13. <u>ಶ್ರೀ ಅರವಿಂದ ಎಸ್.ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು):</u> ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>2000ದ ಕರ್ನಾಟಕ ರಾಜ್ಯ ವಿಶ್ವ ವಿದ್ಯಾಲಯಗಳ ಅಧಿನಿಯಮದ ಕಲಂ 47(4)ರ ಹಾಗೂ 50(2)ರ ಮೇರೆಗೆ:</u>

1. ಕುವೆಂಪು ವಿಶ್ವವಿದ್ಯಾಲಯದ 2007–08ನೇ ಸಾಲಿನ 20ನೇ ವಾರ್ಷಿಕ ವರದಿ.
2. ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾಲಯದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

14. <u>ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು) (ಪಶು ಸಂಗೋಪನೆ ಸಚಿವರ ಪರವಾಗಿ):</u> ಮಾನ್ಯ ಪಶುಸಂಗೋಪನೆ ಸಚಿವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>1956ರ ಕಂಪನಿಗಳ ಅಧಿನಿಯಮದ 619 (ಎ) (2) ಪ್ರಕರಣದ ಮೇರೆಗೆ:</u>

1. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2007–08ನೇ ಸಾಲಿನ 38ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

15. <u>ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಅಬಕಾರಿ, ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):</u> ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>1956ರ ಕಂಪನಿಗಳ ಅಧಿನಿಯಮದ 619 (ಎ) ಪ್ರಕರಣದ ಮೇರೆಗೆ:</u>

1. ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು (ಕಿಯೋನಿಕ್ಸ್) 2007-08ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರು: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ ತಾವು, ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಷಯ ಇದೆ. ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಮಾನ್ಯ ಸಿದ್ದು ಸವದಿಯವರೆ, ತಾವು ಹೇಳಿರುವ ವಿಷಯ ಶೂನ್ಯವೇಳೆಯಲ್ಲಿ ಬರುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅಸಮರ್ಪಕವಾಗಿರುವ ವಿದ್ಯುಚ್ಛಕ್ತಿ ಸರಬರಾಜು ಮತ್ತು ಲೋಡ್‌ಶೆಡ್ಡಿಂಗ್ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿದ್ದೆ. ಆದರೆ, ಇವತ್ತಿನ ಅಜೆಂಡಾದಲ್ಲಿ ಈ ವಿಷಯ ಬರಬೇಕಾಗಿತ್ತು. ಆದರೆ, ಬಂದಿಲ್ಲ.

ಅಧ್ಯಕ್ಷರು: ಈ ವಿಷಯವನ್ನು ನಾಳೆ ಇಟ್ಟುಕೊಳ್ಳೋಣ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ವಿದ್ಯುತ್ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆಯಲ್ಲಿ ನಾವೂ ಕೂಡ ಮಾತನಾಡಬೇಕಾಗಿದೆ.

ಅಧ್ಯಕ್ಷರು: ನಾಳೆ ರೂಲ್ 69ರಲ್ಲಿ ಈ ವಿಷಯ ಹಾಕುತ್ತೇನೆ. ಇದರ ಬಗ್ಗೆ ಎಲ್ಲರೂ ಚರ್ಚೆ ಮಾಡಿ.

3. ವಿತ್ತೀಯ ಕಾರ್ಯಕಲಾಪಗಳು

2009-10ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದಂಥ ಮುಂಗಡ ಪತ್ರವನ್ನು ವಿರೋಧಿಸುತ್ತಾ ಮತ್ತು ಅದರಲ್ಲಿರತಕ್ಕಂಥ ವಿಚಾರಗಳ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಿಂತಿದ್ದೇನೆ. ಶ್ರೀಮಾನ್ ಯಡಿಯೂರಪ್ಪನವರು ಈ ವರ್ಷವಾದರೂ ಕೂಡ ಒಂದು ಒಳ್ಳೆಯ ಬಜೆಟ್‌ನ್ನು ಮಂಡಿಸುತ್ತಾರೆಂದು ನಮ್ಮೆಲ್ಲರ ಭಾವನೆ ಇತ್ತು. ಕಾರಣ ಏನೆಂದರೆ, ಅವರ 29 ತಿಂಗಳ ಅವಧಿಯ ಅನುಭವದಲ್ಲಿ ವಿಶೇಷವಾಗಿ ಅರ್ಥ ಸಚಿವರಾಗಿ ರೈತರ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡು ರೈತರ ಬಗ್ಗೆ ಮತ್ತು ರಾಜ್ಯದ ಅಭಿವೃದ್ಧಿ ಪರ ಬಜೆಟ್ ಅನ್ನು ಮಂಡಿಸುತ್ತಾರೆಂದು ನಮ್ಮೆಲ್ಲರ ಭಾವನೆ

ಮತ್ತು ಅಪೇಕ್ಷೆ ಇತ್ತು. ಅನೇಕ ಕಡೆ ಕೆಲವು ಹೊಗಳಿಕೆಯ ಮಾತುಗಳನ್ನೂ ಕೂಡ ಅವರು ಹೇಳಿಕೊಂಡರು.

ಅಧ್ಯಕ್ಷರು: ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿಮಾಡುವುದೇನೆಂದರೆ, ಮಾನ್ಯ ವಿರೋಧಪಕ್ಷದ ನಾಯಕರು ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ. ಆದ್ದರಿಂದ, ಮಾನ್ಯ ಸದಸ್ಯರು ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ. ಒಂದು ಕಡೆ ನಿಂತು ಎಲ್ಲರೂ ಪರಸ್ಪರ ಮಾತನಾಡತಕ್ಕಂಥದ್ದು ಸರಿಯಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ನಾನು ಅವರ ಗಮನಕ್ಕೆ ತರುತ್ತೇನೆ. ಹಾಗೆಯೇ, ತಮ್ಮ ಮುಖಾಂತರ ಸದನ ಮತ್ತು ಇಡೀ ರಾಜ್ಯದ ಜನತೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಬಜೆಟ್ ಮಂಡನೆ ಆದ ನಂತರ ಬಹುತೇಕ ಟಿ.ವಿ. ಮತ್ತು ಪತ್ರಿಕೆ ಮಾಧ್ಯಮಗಳು ಹಾಗು ಅನೇಕ ಪತ್ರಿಕೆಗಳ ಸಂಪಾದಕೀಯದಲ್ಲಿ ಬಂದಿರತಕ್ಕಂಥ ವಿಷಯಗಳನ್ನು ತಾವು ನೋಡಿದರೆ ಅರ್ಥವಾಗುತ್ತದೆ. ಈ ಬಜೆಟ್ ಸಾರ್ವಜನಿಕರ ಹಿತದೃಷ್ಟಿಯಿಂದ ಎಷ್ಟರಮಟ್ಟಿಗೆ ಸಾರ್ವಜನಿಕರ ಅಭಿಪ್ರಾಯ ಮತ್ತು ಮೆಚ್ಚುಗೆಗೆ ಪಾತ್ರವಾಗಿದೆ ಎಂಬುದು ಗೊತ್ತಾಗುತ್ತದೆ. ತಾವು ಈ ಬಜೆಟ್‌ನ್ನು ಒಟ್ಟಾರೆ ಓದಿದಾಗ ಇದೊಂದು ಚುನಾವಣಾ ಪ್ರಚಾರದ ಕೈಪಿಡಿ, ಬಿಜೆಪಿಯ Election Manifesto ರೀತಿಯಲ್ಲಿದೆ. ಆದ್ದರಿಂದ, ಇದೊಂದು ಬಜೆಟ್ ಅಲ್ಲ. ಆಶ್ವಾಸನೆಗಳ ಸುರಿಮಳೆ ಮತ್ತು ಕಳೆದ 3–4 ವರ್ಷಗಳ ಯಾವುದೇ ಪ್ಲಾನ್ ಅಥವಾ ನಾನ್‌ಪ್ಲಾನ್‌ನಲ್ಲಿ ಆದಂಥ ಖರ್ಚುಗಳನ್ನು ನೋಡಿಕೊಳ್ಳದೆ ಈ ವರ್ಷ ಕೂಡ ಎತ್ತರದ plan outlay ಅನ್ನು ತೋರಿಸಿ, ಹೆಚ್ಚಿನ ಅಲೋಕೇಷನ್ ತೋರಿಸಿ ಜನರಿಗೆ ಮೋಸ ಮತ್ತು ವಂಚನೆ ಮಾಡತಕ್ಕಂಥ ಕೆಲಸವನ್ನು ಅವರು ಮಾಡಿದ್ದಾರೆ. ಅದರ ಬಗ್ಗೆ ನಾನು ಒಂದೊಂದಾಗಿ ಹೇಳಿಕೊಂಡು ಹೋಗುತ್ತೇನೆ. ಅವರು ಯಾವಾಗಲೂ ಕೂಡ ಸಿಟ್ಟಿನ ಭರದಲ್ಲಿ ಅಥವಾ ತಮ್ಮ ಮಾತುಗಳನ್ನು ಬಹಳಷ್ಟು ಪ್ರಬಲವಾಗಿ ಜನರಿಗೆ ತಿಳಿಸಬೇಕೆಂಬ ದೃಷ್ಟಿಯಿಂದ ದೊಡ್ಡ ಧ್ವನಿಯಲ್ಲಿ ಹೇಳಿರತಕ್ಕಂಥದ್ದು ಕಾಣುತ್ತದೆ. ಆದರೆ, ಇಲ್ಲಿ ಅವರ ಧ್ವನಿ ದೊಡ್ಡದಿದ್ದರೂ ಕೂರ ಜನತೆಗೆ ಕೊಟ್ಟಂಥ ಬಜೆಟ್ ಅತ್ಯಂತ ಚಿಕ್ಕದು. ಅಥವಾ ಅವರಿಗೆ ಸಿಕ್ಕಂಥ ಲಾಭ ಬಹಳ ಕಡಿಮೆ ಎನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಇದೊಂದು ಚುನಾವಣೆ ಪ್ರೇರಿತ ಬಜೆಟ್ ಇದ್ದರೂ ಕೂಡ ಅಚಿತಿಮವಾಗಿ ಜನರಿಗೆ ಸಹಾಯವಾಗುವಂಥ ಬಜೆಟ್ ಆಗಿರಬೇಕು. ಆದರೆ, ಅದು ಯಾವುದೂ ಕೂಡ ಇದರಲ್ಲಿ ಕಾಣುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಇವರ ಬಜೆಟ್ ಮೇಲೆ ಅನೇಕ ಪತ್ರಿಕೆಗಳಲ್ಲಿ ಬಂದಿರುವ ಅನಿಸಿಕೆಗಳನ್ನು ಸಭೆಯ ಮುಂದೆ ಇಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು)

ಏಕೆಂದರೆ, ಕಳೆದ ಸಲ ನೀಡಿದಂಥ ಬಜೆಟ್ ಬಗ್ಗೆ ಪತ್ರಿಕೆಗಳಲ್ಲಿ ಬಂದಂಥ ಸಾಕಷ್ಟು ಹೊಗಳಿಕೆ ಮಾತನ್ನು ನಮ್ಮ ಮುಂದೆ ಇಟ್ಟು ಹೇಳಿದ್ದಾರೆ. ಆದರೆ, ಅದೇ ಮಾತನ್ನು ನಾನು ನಿಮ್ಮ ಮುಂದೆ ಇವತ್ತು ಇಡುತ್ತೇನೆ.

12-30 PM

ಈಗ ಬಜೆಟ್‌ನ ಬಗ್ಗೆ ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕೀಯದಲ್ಲಿ ಏನಿದೆ ಎಂದರೆ, "ಏನಿದ್ದರೂ ಇದು ಅಭಿವೃದ್ಧಿಯ ಪರ ಬಜೆಟ್ ಅಲ್ಲ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಸ್ಪಷ್ಟ ದೃಷ್ಟಿಕೋನಕಾಣದು. ಈ ಹಿನ್ನೆಲೆಯಲ್ಲಿ ರಾಜ್ಯದ ಮುಂದಿನ ಸಾಲಿನ ಬಜೆಟ್ ಚುನಾವಣೆಯ ದೃಷ್ಟಿಯಿಂದಲೇ ರೂಪಿತವಾಗಿರುವುದು ಸ್ಪಷ್ಟ. ಜನಪರವಾದ ಕಾರ್ಯಕ್ರಮಗಳು ನಿರೀಕ್ಷಿತ. ರೈತರ ಓಲೈಕೆ ಅಂತೂ ಅಗತ್ಯ, ಇದರಲ್ಲಿ ಕಾಳಜಿ ಎಂದೇನು ಅಲ್ಲಾ, ರಾಜ್ಯದಿಂದ ಹೆಚ್ಚು ಸ್ಥಾನಗಳನ್ನು ಬಿಜೆಪಿಗೆ ದೊರೆತು ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಸ್ಥಾಪನೆ ಯಡಿಯೂರಪ್ಪನವರ ಗುರಿ, ಹೀಗಾಗಿ ಜನರ ಮೆಚ್ಚುಗೆ ಗಳಿಸುವುದು ಅನಿವಾರ್ಯವೆಂದು ಹೇಳಿ ಈ ಬಜೆಟ್‌ನಲ್ಲಿ ಅದನ್ನು ಬಿಂಬಿಸತಕ್ಕಂತಹ ಪ್ರಯತ್ನವನ್ನು ಮಾಡಿದ್ದಾರೆ" ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಆದರೆ ಇದು ಜನರಿಗೆ ಪ್ರಯೋಜನ ಇಲ್ಲವೆನ್ನುವಂತಹ ಮಾತು ಸ್ಪಷ್ಟವಾಗಿ ಇದರಲ್ಲಿ ಅವರು ತೋರಿಸಿದ್ದಾರೆ. ಬಹುಶಃ ಅವರು ಫೋಟೋ ಹಾಕಿ ಚೆನ್ನಾಗಿ ಪ್ರಿಂಟ್‌ನ್ನು ಕೂಡ ಮಾಡಿದ್ದಾರೆ. ಅವರು ಯಾವಾಗಲೂ ಕೂಡ ಪತ್ರಿಕೆಯವರನ್ನು ಕೋಟ್ ಮಾಡಿಕೊಂಡು ನನಗೆ ಎಲ್ಲಾ ಪತ್ರಿಕೆಗಳ ಮೇಲೆ ಒಲವು ಇದೆ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಅದು ಇದರಲ್ಲಿ ಇದೆ. ಅದೇ ರೀತಿಯಾಗಿ ಮುಂದೆ ಹೇಳುವಂತಹದ್ದು ಸಂಪಾದಕೀಯದ ಕೊನೆಯಲ್ಲಿ ಅದೇ ವಿಜಯ ಕರ್ನಾಟಕದಲ್ಲಿ ಜನಪ್ರಿಯ ಕಾರ್ಯಕ್ರಮಗಳ ಪ್ರಕಟಣೆ ಸುಲಭ ಆದರೆ ಅನುಷ್ಠಾನ ಹೇಗೆ ಎನ್ನುವಂತಹ ಪ್ರಶ್ನೆ. ಕಳೆದ ಸಾಲಿನ ಬಜೆಟ್ ಹೋಲಿಕೆಯಾಗಬೇಕು. ಕಾರ್ಯಕ್ರಮ ಎಷ್ಟು ಜಾರಿಯಾಗಿದೆ ಎಂಬುದರ ಸ್ಪಷ್ಟ ಚಿತ್ರಣ ಸಿಗಬೇಕು. ಈಗ ಹತ್ತಾರು ಕಾರ್ಯಕ್ರಮಗಳು ಇದೆ. ಅವೆಲ್ಲಾ ಈಗ ಅನುಷ್ಠಾನವಾಗದು. ಚುನಾವಣೆ ತಂತ್ರ ಅಷ್ಟೇ" ಇದನ್ನು ನಾನು ಹೇಳಲಿಲ್ಲ. ಇದು ವಿಜಯ ಕರ್ನಾಟಕದಲ್ಲಿ ಬಂದಂತಹ ಸಂಪಾದಕೀಯಕ್ಕೆ ಪುಟದಲ್ಲಿ ಬರೆದಿರುವಂತಹದ್ದನ್ನು ನಾನು ತಮ್ಮ ಮುಂದೆ ಇಡುತ್ತಿದ್ದೇನೆ. ಇದೇ ಪತ್ರಿಕೆಯಲ್ಲಿ ಅವರು ಒಂದು headline ಕೊಟ್ಟು ಬರೆದಿದ್ದಾರೆ. "ಮಹಾಚುನಾವಣೆಗೆ ಮುನ್ನ ಮಹಾಪ್ರಸಾದ" "ಸರ್ವ ಜನಾಂಗದ ಮತಗಳ ತೋಟ, ಕನ್ನಡಿಯೊಳಗಿನ ಗಂಟು, ಚುನಾವಣೆಯ ನಂಟು" ಈ ಎಲ್ಲಾ ಹೆಡ್ ಲೈನ್‌ಗಳು ಕೂಡ ಬಂದಿವೆ. ಇದನ್ನು

ನಾನು ಟೀಕೆ ಮಾಡಿದ್ದೇನೆಂದು ಹೇಳಿ ನಿವುಗಳು ಬೈದುಕೊಳ್ಳಬಾರದು. ನಾನು ಇಂತಹ ಟೀಕೆಯನ್ನು ಮಾಡುವುದು ನಾವು ಅನೇಕ ಸಾರಿ ಮಾಡಿದರೆ ಅದು ನಿಮಗೆ ತಲೆಯಲ್ಲಿ ಅಥವಾ ನಿಮ್ಮ ಹೃದಯದಲ್ಲಿ ಕೂಡುವುದಿಲ್ಲ. ಏಕೆಂದರೆ ನಿಮಗೆ ಯಾವಾಗಲೂ ಕೂಡ ಬೇರೆಯವರು ಹೇಳುವುದನ್ನು ಸ್ವಲ್ಪ ಕೇಳುತ್ತೀರೋ ಹೊರತಾಗಿ ವಿರೋಧ ಪಕ್ಷದವರು ಅದನ್ನು ಅರ್ಥ ಮಾಡಿಕೊಂಡು ಹೇಳಿದಾಗ ಅದನ್ನು ಟೀಕೆ ಎಂದು ತಿಳಿದುಕೊಂಡು ಇದನ್ನು ಅವರು ಹಾಗೆಯೇ ಹೇಳುತ್ತಾರೆ, ನಾನು ಮಾಡುವುದೇ ಮಾಡುವುದು. ಇದನ್ನು ಹೇಳಿರುವುದು ನಾನಲ್ಲ. "ಮಹಾಚುನಾವಣೆಗೆ ಮುನ್ನಾ ಮಹಾಪ್ರಸಾದ" ಸರ್ವ ಜನಾಂಗದ ಮತಗಳ ತೋಟ ಏಕೆಂದರೆ ಇವರೆಲ್ಲಾ ಕುವೆಂಪು ಪದಗಳು ಶಿವರುದ್ರಪ್ಪನವರ ಪದಗಳು, ಅನೇಕ ಬಸವಣ್ಣನವರ ವಚನಗಳು, ಎಲ್ಲವನ್ನೂ ಕೂಡ ಹೇಳುತ್ತಿದ್ದಾರೆ. ಈಗ ಆ ಪತ್ರಿಕೆಯಲ್ಲಿ ಅವೆಲ್ಲವೂ ಕೂಡ ಬಂದಿವೆ. ಇದು ಅಷ್ಟೇ ಅಲ್ಲ. ಇವರು ಕೊಟ್ಟಂಥ ಬಜೆಟ್ ಕನ್ನಡಿಯೊಳಗಿರುವ ಗಂಟು ಎಂದು ಹೇಳಿದ್ದಾರೆ. ಮತ್ತು ಇದೆಲ್ಲವೂ ಕೂಡ ಚುನಾವಣೆಗೆ ನಂಟು ಎನ್ನುವುದನ್ನೂ ಕೂಡ ಪತ್ರಿಕೆಯಲ್ಲಿ ಇವತ್ತು ಸ್ಪಷ್ಟವಾಗಿ ಹೇಳಿದ್ದಾರೆ. ಅದು ಅಲ್ಲದೆ ಪ್ರಜಾವಾಣಿ ಹೆಡ್‌ಲೈನ್ಸ್ ಅದರಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ಈ ಬಜೆಟ್‌ನ ಬಗ್ಗೆ ಒಂದು ರೀತಿಯಲ್ಲಿ ವಿವಿಧ ಜಾತಿ, ವರ್ಗ, ಧಾರ್ಮಿಕ ಸಂಸ್ಥೆ, ದೇವಾಲಯ, ದರ್ಗಾ ಮತ್ತು ಮಠಗಳಿಗೆ ನೀಡಿರುವ ದಾನದ ಪಟ್ಟಿಯಂತೆ ಇದೆ. ಹಣ ಹಂಚಿಕೆ ಮಾಡಿರುವ ರೀತಿಯನ್ನು ನೋಡಿದರೆ ರಾಜ್ಯದಲ್ಲಿ ಅಭಿವೃದ್ಧಿ ಎತ್ತರಕ್ಕೆ ಕೊಂಡೊಯ್ಯುವ ಭರವಸೆ ಈಡೇರುವುದಿಲ್ಲ. ಕುಂಠಿತವಾಗದಿದ್ದರೆ ಸಾಕು ಎನ್ನುವ ಭಾವನೆ ಇದರಿಂದ ಬರುತ್ತದೆ. ಯಾವುದೇ ದೀರ್ಘಾವಧಿ ಯೋಚನೆಗೆ ಹಣ ಹೂಡಿಕೆಯ ಪ್ರಸ್ತಾಪ ಕಾಣುವುದಿಲ್ಲ. ರಾಜ್ಯವನ್ನು ಕಾಡುತ್ತಿರುವ ವಿದ್ಯುತ್, ಕುಡಿಯುವ ನೀರಿನ ಅಭಾವ ಮೂಲಭೂತ ಸೌಕರ್ಯಗಳ ಕೊರತೆ, ವಿಶ್ವ ಆರ್ಥಿಕ ಬಿಕ್ಕಟ್ಟಿನಿಂದ ಉಂಟಾಗಿರುವ ನಿರುದ್ಯೋಗ ಮುಂತಾದ ಗಂಭೀರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ಅವರು ಈ ವರ್ಷವಾದರೂ ಗಮನವನ್ನು ಕೊಡುತ್ತಾರೆಂದು ನಿರೀಕ್ಷಿಸಲಾಗಿತ್ತು. ಆದರೆ ಅದು ಹುಸಿಯಾಯಿತು. ಇದು ಪ್ರಜಾವಾಣಿಯಲ್ಲಿ ಸಂಪಾದಕೀಯವನ್ನು ಬರೆದಿದ್ದಾರೆ. ಅಂದರೆ ಇವರು ಮಾಡಿರುವುದನ್ನು ಯಾವುದು ಕೂಡ ಸರಿಯಿಲ್ಲ, ಮೂಲಭೂತ ಸೌಕರ್ಯಕ್ಕೆ ಪೂರಕವಾದಂತಹ ಬಜೆಟ್ ಇಲ್ಲ; ಇದು ಅಭಿವೃದ್ಧಿಯ ಪರ ಇಲ್ಲ. ಹೋದಸಾರಿ ಮಾಡಲಿಲ್ಲ. ಕನಿಷ್ಠ ಈ ಸಾರಿಯಾದರೂ ಮಾಡುತ್ತಾರೆಂದು ಏನು ಜನರ ಅಪೇಕ್ಷೆ ಇತ್ತು, ಅದು ಹುಸಿಯಾಯಿತು. ಏನು ಈ ಪಟ್ಟಿ ಯಾವ ರೀತಿಯಾಗಿ ಮುಯ್ಯಿ ಕೊಡುತ್ತಾರಲ್ಲಾ ನಮ್ಮ ಕಡೆ ಲಗ್ನದಲ್ಲಿ ಮಾಡುತ್ತಾರೆ, ಆ ರೀತಿಯಾಗಿ ಅದನ್ನು

ಇವರು ಜಾತಿವಾರು ಧಾರ್ಮಿಕ ಸಂಸ್ಥೆಗಳಿಗೆ ದೇವಾಲಯಗಳಿಗೆ ಇವೆಲ್ಲಕ್ಕೂ ಕೂಡ ಮಠಮಂದಿರಗಳಿಗೆ ಕೊಡುವುದನ್ನು ನೋಡಿದರೆ ಇದು ಅಭಿವೃದ್ಧಿ ಪರ ಇಲ್ಲವೆಂದು ಹೇಳಿ ಇದು ಪತ್ರಿಕೆಯ ಅಭಿಪ್ರಾಯವಾಗಿದೆ. ಇಲ್ಲಿ ನಮ್ಮ ಅಭಿಪ್ರಾಯಗಳನ್ನು ಕೊಟ್ಟರೆ ಮಠದವರೂ ನಮಗೆ ಬೈಯುತ್ತಾರೆ, ಧರ್ಮದ ವಿರೋಧಿಗಳೆಂದು ಇವರೂ ಬೈಯುತ್ತಾರೆ. ಆದರೆ ಇಲ್ಲಿ ಸತ್ಯಾಂಶ ಪತ್ರಿಕೆಯವರು ಹೇಳಿದ್ದಾರೆ. ಇವತ್ತಿನದಿವಸ ವಿಜಯ ಕರ್ನಾಟಕದವರು ಅದನ್ನು ಹೇಳಿದರು. ಆಮೇಲೆ ಪ್ರಜಾವಾಣಿ ಸಂಪಾದಕಿಯ ಏನಿದೆ, ಅದರ ಜೊತೆಯಲ್ಲಿಯೇ ಕನ್ನಡಪ್ರಭದವರೂ ಕೂಡ ಏನು ಹೇಳಿದ್ದಾರೆಂದರೆ "ಕಳೆದವರ್ಷ ಯಡಿಯೂರಪ್ಪನವರು ಆರಂಭಿಸಿದ ಆಧ್ಯಾತ್ಮಿಕ ಧಾರ್ಮಿಕ ಸಂಸ್ಥೆಗಳಿಗೆ ಕೊಡುಗೈ ದಾನದ ಪ್ರವೃತ್ತಿ ಚುನಾವಣೆಯ ವರ್ಷದಲ್ಲಿ ಮುಂದುವರಿದರೇನು ಸಹಜವೇ, ಆದರೆ ಇಂತಹ ನಿರ್ದಿಷ್ಟ ಆರ್ಥಿಕ ಸಾಮಾಜಿಕ ಗೊತ್ತುಗುರಿಗಳು ಇಲ್ಲದ ಕೊಡುಗೆಯನ್ನು ಮಿತವ್ಯಯದಿಂದ ಆರಾಧಕರು ಮೆಚ್ಚಿಕೊಳ್ಳುವುದಾದರೂ ಹೇಗೆ?" ಅಂದರೆ ಯಾವ ಪತ್ರಿಕೆಯವರೂ ಕೂಡ ನಿಮ್ಮ ಬಜೆಟ್‌ಗೆ ಇವತ್ತು ಒಪ್ಪಿಲ್ಲ, ಮತ್ತು ಜನರೂ ಕೂಡ ಇದು ಕೇವಲ ಚುನಾವಣೆಯ ಬಗ್ಗೆ ಮಾತ್ರ ಸೀಮಿತ ಇರುವಂತಹ ಬಜೆಟ್ ಹೊರತಾಗಿ ರಾಜ್ಯದ ಅಭಿವೃದ್ಧಿಯ ಬಗ್ಗೆ ಇಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಇದರಲ್ಲಿ ಹೇಳುತ್ತಾರೆ. ಒಂದು ರೀತಿಯಲ್ಲಿ "ಆಡುಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ಯಡಿಯೂರಪ್ಪನವರಿಂದ ಈ ಬಜೆಟ್‌ನಲ್ಲಿ ಯಾವ ಮಠಮಂದಿರ ಜಾತಿ ಗಳಿಗೆ ಕೊಡದೇ ಇಲ್ಲ. ಅವರು ಯಾವುದಾದರೂ ಜಾತಿಯವರು ಸಿಕ್ಕಿದರೆ ಆ ಜಾತಿಯೊಂದು ಬಿಟ್ಟು ಬಾಕಿ ಎಲ್ಲಕ್ಕೂ ಕೂಡ ಅವರು ಇಲ್ಲಿ ಖುಷಿಪಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿಯಾಗಿ Deccan Heraldನಲ್ಲಿಯೂ ಕೂಡ ಅಲ್ಲಿಯೂ ಹೇಳಿದ್ದಾರೆ. 'Yeddyurappa was clearly intent on presenting a populist budget. But on the whole, it is a directionless budget...' ಮಾನ್ಯ ಯಡಿಯೂರಪ್ಪನವರೆ ತಾವು ಕೇಳುತ್ತಿದ್ದೀರಲ್ಲಾ? ಏಕೆಂದರೆ ನಿಮ್ಮ ಮೇಲೆ ಪತ್ರಿಕೆಯವರಿಗೂ ಕೂಡ ವಿಶ್ವಾಸ, ಪತ್ರಿಕೆಯಲ್ಲಿ ಬರುತ್ತಿರುವಂತಹದ್ದು, ಅದರ ಬಗ್ಗೆ ಬಹಳ ಗೌರವ. So Deccan Heraldನವರೂ ಕೂಡ ಹೇಳುತ್ತಾರೆ. ವಿಜಯ ಕರ್ನಾಟಕ ಸಂಪಾದಕೀಯವನ್ನು ಓದಿದ್ದೇನೆ. ಕನ್ನಡಪ್ರಭದ ಸಂಪಾದಕೀಯವನ್ನು ಸಹ ನಾನು ಓದಿದ್ದೇನೆ. ಪ್ರಜಾವಾಣಿಯದು ಸಹ ಓದಿದ್ದೇನೆ, ಈಗ Deccan Heraldನವರು ಹೇಳುತ್ತಾರೆ. 'Yeddyurappa was clearly intent on presenting a populist budget. But on the whole, it is a directionless budget having no vision for the future.' ಏನು, ಇವರಿಗೆ ಈ ರಾಜ್ಯದ ಅಭಿವೃದ್ಧಿಯ ಬಗ್ಗೆ ಮುಂದಾಲೋಚನೆ

ಇಲ್ಲ. ಮುಂಧೆ ನಾವು ಏನು ಮಾಡಬೇಕೆಂಬುದರ ಬಗ್ಗೆ ಕಾಳಜಿ ಇಲ್ಲ. ಅಂತಹ ಒಂದು ಕೆಟ್ಟ ಬಜೆಟ್‌ನ್ನು ಇವರು ಇವತ್ತು ಜನರ ಮುಂದಿಟ್ಟಿದ್ದಾರೆ. ಆದರೆ ಇವರು ನಾನು ರೈತರಿಗಾಗಿ ಇಷ್ಟು ಮಾಡಿದ್ದೇನೆಂದು ಹೇಳುವುದು, ಬಡವರಿಗಾಗಿ ಇಷ್ಟು ಮಾಡಿದ್ದೇನೆ, ರಾಜ್ಯಕ್ಕಾಗಿ ಇಷ್ಟು ಮಾಡಿದ್ದೇನೆಂದು ಹೇಳುತ್ತಿದ್ದಾರೆ. ಇದು ಪತ್ರಿಕೆಯವರ ಅಭಿಪ್ರಾಯ, ಜನರ ಅಭಿಪ್ರಾಯ, ಇದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಯಾರೋ ಒಂದು ಪತ್ರಿಕೆಯವರು ಬರೆದಿದ್ದಾರೆಂದರೆ ಒಂದು ತರಹ ನೀವು ಹೇಳಬಹುದು. ಆದರೆ ಇದು ಎಲ್ಲರ ಅಭಿಪ್ರಾಯವಾಗಿದೆ. ತಮಗೆ ಬಜೆಟ್ ಏನಿದೆ, ಇದು development oriented ಅಲ್ಲ ಮತ್ತು ಮೂಲಭೂತ ಸೌಕರ್ಯಗಳನ್ನು ಕೊಡತಕ್ಕಂತಹ ವ್ಯವಸ್ಥೆ ನಿಮ್ಮ ಬಜೆಟ್‌ನಲ್ಲಿ ಇಲ್ಲ ಎನ್ನುವುದು ಇವತ್ತಿನ ದಿವಸ ಇದರಲ್ಲಿ ಸ್ಪಷ್ಟವಾಗಿದೆ. ಆಮೇಲೆ ಮುಂದೆ ಡೆಕ್ಕನ್ ಹೆರಾಲ್ಡ್‌ನವರು ಹೇಳುತ್ತಾರೆ. 'But having forgone an opportunity for resources mobilization through innovative taxation, the state government will be forced to raise the required money through market borrowing.' ಏಕೆಂದರೆ ಇಷ್ಟೆಲ್ಲಾ promise ಮಾಡಿದ ಮೇಲೆ ಹೊಸ ಟ್ಯಾಕ್ಸ್ ಅಂತೂ ಇಲ್ಲ, ಆದರೆ ಖುಷಿಪಡಿಸುವುದಕ್ಕೋಸ್ಕರ ಒಂದು ಕಡೆ ಈ ಸಾರಿ taxಗೆ holiday ಕೊಟ್ಟರು; ಇನ್ನೊಂದು ಕಡೆ ಏನೆಂದರೆ ಇರತಕ್ಕಂತಹ ಹಣವನ್ನು ಮನಸ್ಸು ಬಂದಂತೆ ಎಲ್ಲಾ ಕಡೆಗೆ ಹಂಚಿಬಿಟ್ಟರು. ಮತ್ತೆ ಕೊನೆಗೆ ಏನೆಂದರೆ ಅಭಿವೃದ್ಧಿ ಕೆಲಸಗಳು ಆಗಬೇಕೆಂದರೆ, ಸಾಲ ಮಾಡಬೇಕು. ಸಾಲವನ್ನು ಮಾಡಿದ ಮೇಲೆ ultimately ಏನಪ್ಪಾ ಅಂದರೆ through market borrowing, which ultimately may lead to a debt trap. ಹಾಗೆ ಈ debt trapನಲ್ಲಿ ಬೀಳತಕ್ಕಂತಹದ್ದು ಇವರು ಖಚಿತ. ನಮಗೆಲ್ಲರಿಗೆ ಪ್ರತಿಯೊಂದು ಮಗುವಿನ ತಲೆಯ ಮೇಲೆ ಇವರು ಪ್ರತಿಯೊಂದು ಮನುಷ್ಯನಿಗೆ ಕರ್ನಾಟಕ ರಾಜ್ಯದಲ್ಲಿರುವಂತಹವರ ತಲೆಯ ಮೇಲೆ 12,000 ರೂಪಾಯಿಗಳ ಸಾಲ ಇದೆ. ಇವರು ಹಿಂದಿನಿಂದಲೂ ತೆಗೆದುಕೊಂಡರೆ ಈಗ ಏನಾದರೂ ಆರ್ಥಿಕವಾಗಿ ಕಡಿವಾಣವನ್ನು ಹಾಕುತ್ತಾರೆ, ಏನು financial fiscal disciplineನ್ನು ತರುತ್ತಾರೆ ಅಥವಾ 3%ಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ borrowing ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುವುದಿಲ್ಲವೆಂದು ಹೇಳಿ ನಾವು ತಿಳಿದುಕೊಂಡರೆ, ಇವರು ಎಲ್ಲಾ ಮಿತಿ ಮೀರಿ ಮುಂದಕ್ಕೆ ಹೋಗಿ ಸಾಲದ ಒಂದು ಬಾವಿಯಲ್ಲಿ ಎಲ್ಲರನ್ನು ತಳ್ಳುತ್ತಿದ್ದಾರೆಯೇ ಹೊರತಾಗಿ ಬೇರೆ ಏನೂ ಉತ್ತಮವಾದಂತಹ ಕೆಲಸವನ್ನು ಇವರು ಮಾಡಿಲ್ಲ. ಅದರ ಜೊತೆಯಲ್ಲಿ ಮಾನ್ಯ ಯಡಿಯೂರಪ್ಪನವರು ಅಲ್ಲಾವುದ್ದೀನ್ ಚಿರಾಗ್ ತೋರಿಸಿದ್ದಾರೆ. ಅದನ್ನು ತಾವು

ನೋಡಿರಬೇಕು, ಆ ಬಗ್ಗೆ ಪೇಪರ್‌ನಲ್ಲಿ ಅಲ್ಲಾವುದ್ದೀನ್ ಅಧ್ಭುತ ದೀಪ ಎಂದು ಬಂದಿದೆ. ಅಲ್ಲಾವುದ್ದೀನ್ ಚಿರಾಗ್‌ನಲ್ಲಿ ಏನೆಂದರೆ ಯಾರು ಏನು ಕೇಳುತ್ತಾರೆ ಅದನ್ನು ಕೊಡುತ್ತೇನೆಂದು ಹೇಳುವುದು. ಏಕೆಂದರೆ 60 ದಿವಸಗಳಲ್ಲಿ ಏನಾದರೂ ಮಾಡಿ ಖುಷಿಪಡಿಸಬೇಕಲ್ಲಾ? May endವರೆಗೆ, April endವರೆಗೆ ಕೇಳಿದ್ದನ್ನು ಕೊಡುತ್ತೇನೆಂದು ಹೇಳುವುದು. ಇಲ್ಲದೆ ಇದ್ದರೂ ಕೂಡ ಇದೆ ಎಂದು ಹೇಳುವುದು. ಈ ಬಗ್ಗೆ ಬಜೆಟ್‌ನಲ್ಲಿ ನಮೂದು ಮಾಡುವುದು. ದುಡ್ಡು ಬಿಡುಗಡೆ ಮಾಡದೇ ಇರುವಂತಹ ರೀತಿಯಲ್ಲಿ ಹೇಳುವುದು. ಆದರೆ ಅಚ್ಚು ಮಾತ್ರ ಬಜೆಟ್‌ನಲ್ಲಿ ಹಾಕಿಸುವುದು. ಈ ರೀತಿಯಾಗಿ ಅವರು ಹೇಳಿದ್ದಾರೆ. ಇವತ್ತು ಸಂಯುಕ್ತ ಕರ್ನಾಟಕದವರೂ ಕೂಡ ಚುನಾವಣೆಯಲ್ಲಿ ಹೆಚ್ಚಿನ ಪ್ರಚಾರವನ್ನು ಇವರ ಪರವಾಗಿ ಮಾಡಿದರು. ಈ ಮಾತನ್ನು ನಾನು ಮಾನ್ಯ ಯಡಿಯೂರಪ್ಪನವರು ಹಾಗೂ ಹಾರ್‍ನಹಳ್ಳಿ ರಾಮಸ್ವಾಮಿಯವರ ಮುಂದೆ ಒಂದೇ ವೇದಿಕೆಯಲ್ಲಿದ್ದಾಗ ಆಗ ನಾನು ಕೂಡ ಇದ್ದೆ. ನಾನು ಹೇಳಿದೆ. ಸ್ವಲ್ಪ ಏನು ನ್ಯಾಯವಾಗಿ ತಕ್ಕಡಿಯನ್ನು ತೂಗಿದರೆ ನಮ್ಮ ಕಡೆಯೂ ಸ್ವಲ್ಪ ನೋಡಿದ್ದರೆ 1%–2% ಹೆಚ್ಚು ಕಡಿಮೆಯಾಗುತ್ತಿತ್ತು ನಿಮ್ಮ ಎಲ್ಲಾ ಸ್ವಲ್ಪ ಭಾರ ಯಡಿಯೂರಪ್ಪನವರ ಕಡೆಗೆ ಆಯಿತು. ಅದಕ್ಕಾಗಿ ಸ್ವಲ್ಪ ತೊಂದರೆಯಾಯಿತು ಎಂದು ನಾನು ಹಾರ್‍ನಳ್ಳಿ ರಾಮಸ್ವಾಮಿ ಹಾಗೂ ಯಡಿಯೂರಪ್ಪನವರಿಗೂ ಕೂಡ ಹೇಳಿದೆ. ನಾನು ಹಿಂದೆ ಹೇಳಲಿಲ್ಲ. ಆದರೆ ಅವರು ಏನು ಬರೆಯುತ್ತಾರೆಂದರೆ" ಬಹುಜನ ಹಿತ ಸುಖಾಯ್ ಬಜೆಟ್ ನೀಡಿ ಯಡಿಯೂರಪ್ಪನವರು ಕೊಡುಗೈ ವೀರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವುದು. ಒಂದು ವೇಳೆ ಆರ್ಥಿಕ ಕುಸಿತದ ಪರಿಣಾಮ ಇನ್ನು ಭೀಕರವಾಗಿ ಉದ್ದೇಶಿತ ಯೋಜನೆಗಳಿಗೆ ಹಣವನ್ನು ಹೊಂದಿಸುವುದು ಕಷ್ಟವಾದಲ್ಲಿ ಆಗ ಮುಖ್ಯಮಂತ್ರಿಗಳು ಕೊಡುವಂತಹ ಕೈವೀರ, ಕೇವಲ ಘೋಷಣೆಯ ವೀರ ಎಂಬ ಅಪವಾದಕ್ಕೆ ತುತ್ತಾಗುವ ಪ್ರಮೇಯ ಬಂದರೆ ಆಶ್ಚರ್ಯ ಪಡಬೇಕಾಗಿಲ್ಲ." ಅವರು ಸ್ವಲ್ಪ soft ಆಗಿ ಹೇಳಿದ್ದಾರೆ. ಬಾಕಿಯವರೆಲ್ಲರೂ ಸ್ಪಷ್ಟವಾಗಿ ಹೇಳಿದ್ದಾರೆ. ಇವರಿಗೆ ದಿಕ್ಕು ಇಲ್ಲ. ದಿಸೆಯಿಲ್ಲ, ಹಣ ಇಲ್ಲವೆಂದು ಏನೂ ಇಲ್ಲವೆಂದು ಹೇಳಿದ್ದಾರೆ. ಇವರು ಸ್ವಲ್ಪ ತೇಲಿಸಿ ಬರೆದಿದ್ದಾರೆ. But ಖಂಡಿತವಾಗಿ ಅದನ್ನೂ ಕೂಡ ಇವರ ಪರ ಬರೆದಿದ್ದಾರೆ. Times of Indiaದವರು ಸಂಪಾದಕೀಯದಲ್ಲಿ ಏನು ಬರೆದಿದ್ದಾರೆಂದರೆ, "A chance lost. Good measures aplenty, but not enough bold initiatives. B.S.Yeddyurappa has squandered a golden opportunity to present a bold and imaginative budget that would have helped Karnataka get out of its 'yo-yo' growth rate syndrome: double digit one year, low single

digit the next year. Yeddyurappa decided to not diplease anybody, if not outright please all. Populist schemes with names that are a mouthful are missing and so are tough actions that would have helped revive the economy by giving the right impetus to critical sectors like agriculture and industry." ಅಂದರೆ ಕೃಷಿಗೆ ಮತ್ತು industryಗೆ ಇವರು ಹೆಚ್ಚಿನ ಒತ್ತನ್ನು ಕೊಟ್ಟಿದ್ದರೆ ಚೆನ್ನಾಗಿ ಆಗುತ್ತಿತ್ತು ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಒಳ್ಳೆಯ ಬಜೆಟ್‌ನ್ನು ಕೊಡುವಂತಹ ಪ್ರಯತ್ನವನ್ನು ಈ ವರ್ಷವೂ ಕೂಡ ಅವರ ಕೈಯಿಂದಾಗಲಿಲ್ಲ; he has lost a golden opportunity to present himself ಅಂತ ಹೇಳಿ ಸ್ಪಷ್ಟವಾಗಿ ಇವತ್ತು Times of India ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ಅದೇ ರೀತಿಯಾಗಿ industrialists ಕೂಡ ಹೇಳಿದ್ದಾರೆ. ಈ ರಾಜ್ಯದ industrialists ಆದರೂ ಕೂಡ appreciate ಮಾಡಿದ್ದಾರಾ? ಅವರು ಏನು ಹೇಳುತ್ತಾರೆಂದರೆ "The state budget seems to have disappointed industrialists who expected relief measures. Their major demands include interest subsidy on power, fee and other sectors."

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಆಮೇಲೆ ಇದರ ಜೊತೆಯಲ್ಲಿ ಇವತ್ತು ಅಂತಿಮವಾಗಿ ಒಂದು ಕಡೆ ಪತ್ರಿಕೆಗಳಲ್ಲಿ ಬಂದಂತಹ ಈ ವಿಚಾರ, ಇನ್ನೊಂದು ಕನ್ನಡ ಚಿತ್ರರಂಗದ ಮೇಲೆಯೂ ಕೂಡ ಸರ್ಕಾರವು ಕೊನೆಯ ಮೊಳೆ ಹೊಡೆದಿದೆ ಎಂದು ಹೇಳಿ ಅಲ್ಲಿಯೂ ಕೂಡ Film Chamber of Commerceನ ಅಧ್ಯಕ್ಷಿಣಿಯವರು ಈ ಮಾತನ್ನು ಹೇಳಿದ್ದಾರೆ. ಹೀಗೆ ಬಜೆಟ್ ಯಾವ ರೀತಿಯಾಗಿದೆ ಎಂಬುದು ಇವೆಲ್ಲಾ ಸಂಪಾದಕೀಯಗಳಲ್ಲಿ ಹೇಳಿದ್ದಾರೆ. ನಿಮ್ಮ ಮಾತಿಗೆ, ನಿಮ್ಮ ಬಜೆಟ್‌ಗೆ ಸ್ಪಷ್ಟವಾಗಿ ಅವರು ಕಂಡೆಮ್ ಮಾಡಿದ್ದಾರೆ ಎನ್ನುವುದಕ್ಕೆ ಈ ಎಲ್ಲಾ ನಿದರ್ಶನಗಳನ್ನು ನಾನು ನಿಮ್ಮ ಮುಂದಿಟ್ಟಿದ್ದೇನೆ. ಇದರ ಜೊತೆಯಲ್ಲಿ ಇವತ್ತು ಇವರ ಬಜೆಟ್‌ನಲ್ಲಿ ಏನಿದೆ, ಏನು ಮಾಡಿದ್ದಾರೆ, ಇವತ್ತು ಇವರ ಬಜೆಟ್‌ನಲ್ಲಿ ಜಾತಿ,ಉಪಜಾತಿ,ಪಂಗಡ, ಇವೆಲ್ಲವನ್ನು ಗುರುತಿಸಿ ಅವುಗಳಿಗೆ ಮಠಗಳನ್ನು ಕಟ್ಟಿಕೊಡಲು, ದೇವಾಲಯಗಳನ್ನು ಕಟ್ಟಿಕೊಡಲು, ಕೋಟಿ ಕೋಟಿ ರೂಪಾಯಿಗಳ ಹಣವನ್ನು 130 ಕೋಟಿ ರೂಪಾಯಿಗಳನ್ನು ಇವರು ಮಠಮಾನ್ಯಗಳಿಗೆ ಕೊಡತಕ್ಕದ್ದನ್ನು ಮಾಡಿದ್ದಾರೆ. ಈ ಕೆಲಸವನ್ನು Endowmentನವರು ಮಾಡುತ್ತಾರೆ. ಆದರೆ Endowment ಪಟ್ಟಿಯೇ ಬಜೆಟ್‌ನಲ್ಲಿ include ಮಾಡಿ ಓದುವುದನ್ನು ನಾನು ಎಲ್ಲಿಯೂ ಕೂಡ ನೋಡಿಲ್ಲ. ನಾನು 37 ವರ್ಷಗಳ ಕಾಲ ಇಲ್ಲಿ ಬಜೆಟ್‌ಗಳನ್ನು ನೋಡಿದ್ದೇನೆ ಯಾವ ಬಜೆಟ್‌ನಲ್ಲಿಯೂ

ಕೂಡ ಇಂತಹ ದೀರ್ಘವಾದಂತಹ ಪಟ್ಟಿಯನ್ನು ಇಲ್ಲಿ ಓದಿರುವುದು ಇಲ್ಲ. ತಾವು ಕೂಡ ಇಲ್ಲಿ 15–20 ವರ್ಷಗಳ ಕಾಲ ಇದ್ದೀರಿ. ಅವರೂ ಕೂಡ ಇದ್ದಾರೆ, ಹೇಳಲಿ ಬೇಕಾದರೆ. ಈ 25 ವರ್ಷದಲ್ಲಿ ಇಂತಹ ಉದ್ದಪಟ್ಟಿಗಳು ಪ್ರತಿಯೊಂದು ಮಠದ ಹೆಸರುಗಳನ್ನು ಬರೆದು, ಪ್ರತಿಯೊಂದು ಜಾತಿಯ ಹೆಸರನ್ನು ಬರೆದು ಇಂತಹ ಬಜೆಟ್ ಭಾಷಣದಲ್ಲಿ ಮಂಡಿಸಿರುವುದನ್ನು ನಾನಂತೂ ನೋಡಿಲ್ಲ. ಆದರೆ ಜನರಿಗೆ ಗೊತ್ತಾಗಬೇಕಲ್ಲಾ? ಅವರನ್ನು ಖುಷಿಪಡಿಸಬೇಕಲ್ಲಾ? ನೋಡಿ ಮುಖ್ಯಮಂತ್ರಿಗಳು ನಮ್ಮ ಪರವಾಗಿದ್ದಾರೆ. ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರು, ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟರು ಅಂತ ಹೇಳಿ ಈ ಒಂದು cheap popularityಗೋಸ್ಕರ ಇಲ್ಲಿಯೇ announce ಮಾಡುವುದು. Endowment ಮುಖಾಂತರ announce ಮಾಡಿದರೆ ಅದಕ್ಕೆ ಅಷ್ಟೊಂದು ಗೌರವ ಬರುವುದಿಲ್ಲ. ಅದಕ್ಕೆ ಅವರು ಇಲ್ಲಿಯೇ ವಿಧಾನಸಭೆಯಲ್ಲಿ ಉಪಯೋಗ ಮಾಡಿಕೊಂಡು ಇಲ್ಲಿಯೇ ಇವತ್ತಿನದಿವಸ 130 ಕೋಟಿ ರೂಪಾಯಿಗಳನ್ನು. ಆಮೇಲೆ 3 ರೂಪಾಯಿಗಳ ಸಬ್ಸಿಡಿ agriculturistಗಳಿಗೆ, ರೈತರಿಗೆ ಕೊಡುವುದಕ್ಕೆ scheduled bank ಕೊಡುವುದಕ್ಕೆ ಅವರಿಗೆ ಇಟ್ಟಂತಹ ಹಣ 250 ಕೋಟಿ ರೂಪಾಯಿಗಳು. 75 ಲಕ್ಷ ಕುಟುಂಬಗಳಿಗೆ ಅನುಕೂಲ ಅಗತಕ್ಕಂತಹ ಜನರಿಗೆ 250 ಕೋಟಿ ರೂಪಾಯಿಗಳ ಮೀಸಲಾತಿ, 18 ಸಂಸ್ಥೆಗಳಿಗೆ ಅನುಕೂಲವಾಗುವುದಕ್ಕೆ 130 ಕೋಟಿ ರೂಪಾಯಿಗಳು. ಇದು ರೈತರ ಪರವಾಗಿ ಇರುವಂತಹ ನಿಮ್ಮ ಕಾಳಜಿಯಾಗಿದೆ. ಅದು ಏನೋ ನಿಮ್ಮ luck ಗೊತ್ತಾಗುತ್ತಿಲ್ಲ. ನೀವು ಅಡ್ಡ ಮಾಡಿದರೂ ಕೂಡ ಸರಿನೇ, ನೀವು ಗೆರೆ ಹಾಕಿದರೂ ಕೂಡ ಸರಿಯೇ, ಅಂತ ತಿಳಿದುಕೊಳ್ಳುವಂತಹ ಜನರು ಮೂಡನಂಬಿಕೆ ಇರುವಂತಹ ಜನರು ಇದ್ದಾರಲ್ಲಾ ಅವರ ಶೋಷಣೆಯನ್ನು ನೀವು ಮಾಡುತ್ತಿದ್ದೀರಿ. ಏಕೆಂದರೆ 75 ಲಕ್ಷ ಕೃಷಿ ಕುಟುಂಬಗಳು ಇದ್ದಾರೆ ಅವರಿಗೆ ಸಬ್ಸಿಡಿಯನ್ನು scheduled bankನಿಂದ ಕೊಡುತ್ತೇನೆಂದು ಹೇಳುತ್ತೀರಿ. 250 ಕೋಟಿ ರೂಪಾಯಿಗಳನ್ನು ಇಡುತ್ತೀರಿ. ಅದರ ಅರ್ಧದಷ್ಟು ಹಣ 18 ಸಂಸ್ಥೆಗಳಿಗೆ ಮಠಮಾನ್ಯಗಳಿಗೆ ನೀವು ಕೊಡುವ ಬಗ್ಗೆ ಹಣ ಇಡುತ್ತೀರೆಂದರೆ ಎಷ್ಟರ ಮಟ್ಟಿಗೆ ನಿಮ್ಮ ರಾಜ್ಯದ ಜನತೆಯ ಬಗ್ಗೆ ಕಾಳಜಿ ಇದೆ? ನಿಮ್ಮ ರಾಜ್ಯದ 6 ಕೋಟಿ ಜನತೆ ಬಗ್ಗೆ ಎಷ್ಟೊಂದು ಕಾಳಜಿ ಮತ್ತು ಆಸಕ್ತಿ ಇದೆ ಎನ್ನುವುದಕ್ಕೆ ಇದು ಸಾಕ್ಷಿ. ಇದರ ಜೊತೆಗೆ, ಕಳೆದ ವರ್ಷದ ಬಜೆಟ್‌ನಲ್ಲೂ ಕೂಡ ಇದೇ ರೀತಿ ಮಾಡಿದ್ದಾರೆ. ಈ ವರ್ಷದ ಬಜೆಟ್‌ನಲ್ಲೂ ಇದೇ ಮಾಡಿದ್ದಾರೆ. ಏನೋ ಆಕಸ್ಮಿಕವಾಗಿ ಯಾವುದೋ ಒಂದು ಶತಮಾನೋತ್ಸವ ಇರುತ್ತದೆ. ಈಗ ಶ್ರೀ ಸಿದ್ಧಗಂಗಾ ಸ್ವಾಮೀಜಿಯವರು, ಅಪರೂಪವಾದಂಥ ವ್ಯಕ್ತಿ, ನೂರು ವರ್ಷಗಳ ಕಾಲ ಬದುಕಿ ಸೇವೆಯನ್ನು ಸಲ್ಲಿಸಿರತಕ್ಕಂಥವರು. ಕೆಲವು ಸಲ 12 ವರ್ಷಗಳಿಗೊಮ್ಮೆ

ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ಆಗುತ್ತದೆ. ಇಂತಹ ಅಪರೂಪವಾದಂಥವುಗಳಿಗೆ ವಿಶೇಷವಾದಂಥ ಗ್ರಾಂಟ್‌ಗಳನ್ನು ಕೊಟ್ಟಿದ್ದಾರೆ ಎಂದರೆ ಪರವಾಗಿಲ್ಲ. ಆದರೆ, ಇವರು ಜಾತಿವಾರು ಪಟ್ಟಿ ಮಾಡಿ, ನಂತರ ಅಲ್ಲಿ ಹೋಗಿ ಜಾತಿವಾರು conference ಮಾಡಿ, ಅಲ್ಲಿ ನಿಮಗೆ ಇಷ್ಟು ಕೊಟ್ಟಿದ್ದೇನೆ, ನೀವು ಬಿ.ಜೆ.ಪಿ.ಗೆ ಕೆಲಸ ಮಾಡಿ ಎಂದು ಹೇಳುತ್ತಾರೆ. ಅದಕ್ಕೋಸ್ಕರ ನೀವು ಹಣವನ್ನು ಖರ್ಚು ಮಾಡಿ, ಇವತ್ತು ರಾಜ್ಯದ ಅಭಿವೃದ್ಧಿಯನ್ನು ಕುಂಠಿತಗೊಳಿಸತಕ್ಕಂಥಾದ್ದನ್ನು ಮಾಡಿದರೆ, ನೀರಾವರಿಯನ್ನು ಕುಂಠಿತಗೊಳಿಸುವುದನ್ನು ಮಾಡಿದರೆ, ಸಣ್ಣ ನೀರಾವರಿಯನ್ನು ಕುಂಠಿತಗೊಳಿಸುವುದನ್ನು ಮಾಡಿದರೆ ಹೇಗೆ? ಇದೇ 130 ಕೋಟಿ ರೂಪಾಯಿಗಳನ್ನು ನೀವು ಸಾಮಾನ್ಯ ಬಡವರಿಗೆ, ಬೋರ್‌ವೆಲ್‌ಗಳನ್ನು ಹಾಕಲು, ಅದರ ಯೋಜನೆಗಳಡಿಯಲ್ಲಿ ಕೊಟ್ಟರೆ, ಕನಿಷ್ಠ 10,000 ಕುಟುಂಬಗಳಿಗಾದರೂ ಕೂಡ ಈ ಬೋರ್‌ವೆಲ್‌ಗಳಿಂದ ಅನುಕೂಲವಾಗುತ್ತಿತ್ತು. ನೀವು ಹೋದ ಸಲವೂ ಅದೇ ರೀತಿ ಮಾಡಿದ್ದೀರಿ. ಈ ಸಲವೂ ಕೂಡ ಇದನ್ನೇ ಮಾಡಿದ್ದೀರಿ. ಇದು ಏನಾಗಿದೆ ಎಂದರೆ, ನಾನು ಹೀಗೆ ಮಾಡುತ್ತಾ ಹೋದರೆ, ಬಹುಶಃ ನನಗೆ ಮತಗಳು ಸಿಗುತ್ತವೆ ಎನ್ನುವ ದೃಷ್ಟಿಯಿಂದ, ಈ ಪಾರ್ಲಿಮೆಂಟ್ ಚುನಾವಣೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಈ ಕೆಲಸವನ್ನು ತಾವು ಮಾಡಿದ್ದೀರಿ. ಅದೇ ರೀತಿಯಾಗಿ ಮುಂದೆ ವಿಶೇಷವಾಗಿ, ಹಣವನ್ನು, developmentನಲ್ಲಿ ಇರುವ ಕೆಲಸಕಾರ್ಯಗಳನ್ನು discrimination ಮಾಡತಕ್ಕಂಥ ಕೆಲಸವನ್ನು ಸಹ ತಾವು ಮಾಡಿದ್ದೀರಿ. ಅಭಿವೃದ್ಧಿಪರ ಎಂದು ನಿಮ್ಮ ಬಜೆಟ್ ಒಂದು ವೇಳೆ ಇದ್ದಿದ್ದರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಈಗಾಗಲೇ ಅನೇಕ ಸಲ ನಿಮ್ಮ ಗಮನಕ್ಕೆ ತಂದಿದ್ದೇನೆ. ಆದರೆ, ಮಾನ್ಯ ಮುಖ್ಯಮಂತ್ರಿಯವರ ಮನಸ್ಸಿಗೆ ಬರುತ್ತಿಲ್ಲ. ತಾವು ಕೂಡ ಇದನ್ನು ಗಮನಿಸಬೇಕಾದಂಥಾದ್ದು. ಏಕೆಂದರೆ, ಇವರು ಯಾವಾಗಲೂ ನಾವು ರೈತರ ಪರ, ರೈತರ ಪರ ಎಂದು ಹೇಳಿಕೊಂಡು ಹೋಗುತ್ತಿದ್ದಾರೆ. ನಾನು ಅಂಕಿ ಅಂಶವನ್ನು ಕೊಡುತ್ತೇನೆ. 2001ರಲ್ಲಿ ಶ್ರೀ ಎಸ್.ಎಂ.ಕೃಷ್ಣರವರು ಏನು ಬಜೆಟ್‌ಅನನು ಮಂಡಿಸಿದ್ದರು, ಅದರಲ್ಲಿ developmental plan out-layನಲ್ಲಿ 39 ಪರ್ಸೆಂಟ್‌ಅನ್ನು ನೀರಾವರಿಗೆ ಇಟ್ಟಿದ್ದರು. 2002ರಲ್ಲಿ 31 ಪರ್ಸೆಂಟ್ ಹಣ ನೀರಾವರಿಗೆ ಇಟ್ಟಿದ್ದರು. 2003ರಲ್ಲಿ 32 ಪರ್ಸೆಂಟ್ ಹಣ ಇಟ್ಟಿದ್ದರು. 2004ರಲ್ಲಿ 31 ಪರ್ಸೆಂಟ್ ಹಣವನ್ನು ನೀರಾವರಿಗೆ ಇಟ್ಟಿದ್ದರು. ಇವರು ರೈತರ ಮಕ್ಕಳೋ ಅಥವಾ ಅಲ್ಲವೋ ಎನ್ನುವುದನ್ನು ನೀವೇ ಹೇಳಬೇಕು. ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ 25.54 ಪರ್ಸೆಂಟ್ ಇಟ್ಟಿದ್ದರು. 2005ರಲ್ಲಿ 29.8 ಪರ್ಸೆಂಟ್ ಇಟ್ಟಿದ್ದರು. ಪುನಃ 2006ರಲ್ಲಿ ಮಾನ್ಯ ಯಡಿಯೂರಪ್ಪನವರು ಬಂದಾಗ

ಮತ್ತೆ 26.48 ಪರ್ಸೆಂಟ್‌ಗೆ ತಂದರು. 2007ರಲ್ಲಿ ತಾವು ಮಂಡಿಸಿದ ಪ್ರಕಾರ 17.69 ಪರ್ಸೆಂಟ್ ಆಯಿತು. ನಂತರ, 2008ರಲ್ಲಿ 13.37 ಪರ್ಸೆಂಟ್. ಈ ವರ್ಷ 14 ಪರ್ಸೆಂಟ್. ಇದು ರೈತರ ಪರವಾಗಿಯೋ ಅಥವಾ ಇಲ್ಲವೋ ಎಂದು ನೀವು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. Out of your total outlay, you have kept fourteen per cent for irrigation. ನೀವು ರೈತರ ಪರವಾಗಿ ಇದ್ದೀರಾ? ರೈತರಿಗಾಗಿ ಖರ್ಚು ಮಾಡುತ್ತಿದ್ದೀರಾ? ಈಗ ಈ figures ತಪ್ಪು ಇದ್ದರೆ, ತಪ್ಪು ಎಂದು ಹೇಳಿಬಿಡಿ. ನೀವು ಕೊಟ್ಟಂಥ ಬಜೆಟ್‌ನಲ್ಲಿ ಇವತ್ತು ನೀವು ನಿಮ್ಮ ಕಾಲದಲ್ಲಿ ಎಂದಿನಿಂದ ಅಧಿಕಾರ ಚುಕ್ಕಾಣಿಯನ್ನು ಹಿಡಿದಿದ್ದೀರೋ, ಆಗ 17 ಪರ್ಸೆಂಟ್, 13 ಪರ್ಸೆಂಟ್, ಈಗ 14 ಪರ್ಸೆಂಟ್. ಈ ರೀತಿಯಾಗಿ ನೀರಾವರಿಗೆ ನಿರ್ಲಕ್ಷ್ಯ ಮಾಡಿದರೆ, ಯಾವ ರೀತಿಯಾಗಿ ನೀವು ನೀರಿನ ಬಳಕೆ ಮಾಡುತ್ತೀರಿ? ಮಾತು ಎತ್ತಿದ್ದರೆ ಹಿಂದಿನವರು ಮಾಡಿದ್ದಾರೆ ಎಂದು ಹೇಳುತ್ತೀರಿ. ಹಿಂದಿನವರು 25 ಪರ್ಸೆಂಟ್, 30 ಪರ್ಸೆಂಟ್ ಹೀಗೆ ಇಟ್ಟಿದ್ದರಿಂದ ಇವತ್ತು ಲಕ್ಷಾಂತರ ಎಕರೆ ಭೂಮಿಗೆ ನೀರನ್ನು ಕುಡಿಸುತ್ತಿದ್ದಾರೆ. ನೀವು ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನಿಮಗೆ opportunity ಸಿಕ್ಕಿತು. ಮೂರು-ನಾಲ್ಕು ಬಜೆಟ್ ಪ್ರೆಸೆಂಟ್ ಮಾಡಿದ್ದೀರಿ. ಆ ಮೂರ್‍ನಾಲ್ಕು ಬಜೆಟ್‌ನಲ್ಲಿ ಏನು ಇಟ್ಟಿದ್ದೀರಿ? ಎಲ್ಲಾ ರೈತರಿಗೆ ಹಣ ಕಡಿಮೆ ಮಾಡಿ, ಮಠ-ಮಾನ್ಯಗಳಿಗೆ ಹಣ ಹೆಚ್ಚಿಗೆ ಇಟ್ಟು ಅಥವಾ populist scheme ನಿಮಗೆ ಯಾವುದು ಬೇಕು, ಅದಕ್ಕೆ ಹಣ ಹೆಚ್ಚಿಗೆ ಇಟ್ಟು, ಇವರಿಗೆ ಬರೀ ಹಸಿರು ಶಾಲು ತೋರಿಸಿದ್ದೀರೇ ಹೊರತಾಗಿ, ಅವರ ಭೂಮಿಯನ್ನು ಹಸಿರು ಮಾಡುವ ಕೆಲಸವನ್ನು ತಾವು ಮಾಡಲಿಲ್ಲ. ಇದು ನೀರಾವರಿ ಬಗ್ಗೆ ಆಯಿತು. ಪತ್ರಿಕೆಯವರು ಈ ಬಾರಿ ಬರೆದಿದ್ದಾರೆ. 20ರಷ್ಟು ಜಾಸ್ತಿ ಮಾಡಿದ್ದಾರೆ ಎಂದು ಬರೆದಿದ್ದಾರೆ. ಏತಕ್ಕೆ 20ರಷ್ಟು ಜಾಸ್ತಿ ಮಾಡಿದ್ದಾರೆ? ಹೋದಸಲ 13 ಪರ್ಸೆಂಟ್ ಇಟ್ಟಿದ್ದರು, ಈ ಸಲ 14 ಪರ್ಸೆಂಟ್ ಇಟ್ಟಿದ್ದಾರೆ. ಅದನ್ನೇ 20 ರಷ್ಟು ಜಾಸ್ತಿ ಎಂದು ಬರೆದಿದ್ದಾರೆ. ನೀವು ಹಿಂದಿನದನ್ನು ಏನಾದರೂ ಹೋಲಿಕೆ ಮಾಡಿದ್ದೀರಾ? Right from Krishna to Siddaramaiah ಮಾಡಿದ್ದೀರಾ? ಇಲ್ಲ ಮಾಡಿಲ್ಲ. ಅದನ್ನು ಹೋಲಿಕೆ ಮಾಡಿ ನೀವು ಹಣವನ್ನು ಬಜೆಟ್‌ನಲ್ಲಿ ಇಟ್ಟಿದ್ದರೆ, ನಿಜವಾಗಲೂ ನಾವು ಶಹಬಾಸ್ ಎಂದು ಹೇಳುತ್ತಿದ್ದೆವು. ಬಂದಿದ್ದೆಲ್ಲವನ್ನು ರೈತರಿಗೆ ಹಾಕುತ್ತಿದ್ದಾರೆ, ರೈತರ ಪರವಾಗಿ ಇದ್ದಾರೆ ಎಂದು ಹೇಳುತ್ತಿದ್ದೆವು. ಆದರೆ, ರೈತರಿಗೆ ಮೋಸ, ವಂಚನೆ ನಿಮ್ಮಿಂದ ಆಗಿದೆಯೇ ಹೊರತಾಗಿ ಬೇರೆ ಯಾರಿಂದಲೂ ಆಗಿಲ್ಲ ಎನ್ನುವ ಮಾತು ಸ್ಪಷ್ಟ. ಎರಡನೆಯದು, ಇವತ್ತು ನೀವು ಇಟ್ಟಂಥ ಹಣದಲ್ಲಿ ಕೂಡ, maintenanceಗೆ ಹೋಗಬೇಕು ಮತ್ತು ಅನೇಕ ರೀತಿಯಿಂದ ಪ್ರಾಜೆಕ್ಟ್‌ಗಳ ದುರಸ್ತಿ ಕೆಲಸಕ್ಕೆ, staff salaryಗೆ ಇದೆಲ್ಲವೂ

ಕೂಡ ಇದೆ. ನಮ್ಮ ಪಕ್ಕದ ರಾಜ್ಯವಾದ ಆಂಧ್ರದಲ್ಲಿ ಕೋಟ್ಯಂತರ ರೂಪಾಯಿಗಳನ್ನು ನೀರಿಗಾಗಿ ಇಟ್ಟಿದ್ದಾರೆ. ತಾವು ಆ ಕೆಲಸವನ್ನು ಮಾಡಬಹುದಾಗಿತ್ತು. ಸಾಲವಂತೂ ಮಾಡೇ ಮಾಡುತ್ತೀರಿ. ಯಾರು ಸಾಲ ಮಾಡಿಲ್ಲ? ಸಾಲ ಯಾವುದಕ್ಕೆ ಮಾಡಿದ್ದೀರಿ? ನೀರಾವರಿಗೆ ಸಾಲ ಮಾಡಿದ್ದೀರಾ? ಅಥವಾ ಯಾವುದಾದರೂ power generationಗೆ ಸಾಲ ಮಾಡಿದ್ದೀರಾ? ಯಾವುದಾದರೂ rural developmentಗೆ ಸಾಲ ಮಾಡಿದ್ದೀರಾ? ಏನಿಲ್ಲ. ಅದೇ ರೀತಿಯಾಗಿ ಇವತ್ತು ನಿಮ್ಮ expenditure ಬಗ್ಗೆ ಆ detail report ಇದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಪವರ್ ಬಗ್ಗೆಯೂ ಕೂಡ ಒಂದು ಮೆಗಾ ವ್ಯಾಟನ್ನು ಹೆಚ್ಚಿಸತಕ್ಕಂಥಾದ್ದು ಕೂಡ ಆಗಲಿಲ್ಲ. ಹಿಂದೆ ಆದಂತಹ complete ಆಗಿದ್ದ, power projectಅನ್ನು ಮಾನ್ಯ ಅಡ್ವಾಣಿ ಸಾಹೇಬರನ್ನು ಕರೆಸಿ ಬಳ್ಳಾರಿಯಲ್ಲಿ inauguration ಮಾಡಿದ್ದನ್ನು ಬಿಟ್ಟರೆ, ಅದಕ್ಕೆ ಇವರ ಕೊಡುಗೆಯೂ ಇಲ್ಲ ಅಥವಾ ಇವರ ಸಹಾಯವೂ ಇಲ್ಲ. ಇವರು ಪವರ್‌ನಲ್ಲಿಯೂ ಕೂಡ failure ಆಗಿರುವುದಲ್ಲದೆ, ತಾಸಿಗೊಂದು ಬಾರಿ ನಾವು 24 hours ವಿದ್ಯುಚ್ಛಕ್ತಿಯನ್ನು ಪೂರೈಸುತ್ತೇವೆ ಎಂದು ಹೇಳುವುದು. ಜೋರಾಗಿ ಮಳೆ ಬಂದಾಗ 24 hours current free ಎಂದು ಹೇಳುವುದು. ನಂತರ, ಶಿವಮೊಗ್ಗದಲ್ಲಿ ಮಳೆ ಕಮ್ಮಿ ಆದ ತಕ್ಷಣ, ಮತ್ತೆ ಲೋಡ್ ಶೆಡ್ಡಿಂಗ್ ಎಂದು ಹೇಳಿ ಬಿಡುವುದು. ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಪ್ರಜಾವಾಣಿಯಲ್ಲಿ ಕೂಡ ಬಂದಿದೆ. ಬೇರೆ ಪತ್ರಿಕೆಗಳಲ್ಲಿ ತಾವು article ಅನ್ನು ನೋಡಬೇಕು. ಈ ರೀತಿ ತಾಸಿಗೊಂದು ಮಾತನ್ನು ಹೇಳುವುದು ಸರಿಯಿಲ್ಲ. ನೀವು ಮೊದಲು ತಿಳಿದುಕೊಂಡು ಹೇಳಬೇಕು. ಸರ್ಕಾರದ ಮಾತನ್ನು ಜನರು ನಂಬುತ್ತಾರೆ. ನಿಮ್ಮ ಮಾತುಗಳನ್ನು ನಂಬಿ ರೈತರು ಬೀಜಗಳನ್ನು ಖರೀದಿ ಮಾಡುತ್ತಾರೆ, ನಿಮ್ಮ ಮಾತನ್ನು ನಂಬಿ ಗೊಬ್ಬರ ಹಾಕುತ್ತಾರೆ, ನಿಮ್ಮ ಮಾತನ್ನು ನಂಬಿ ಏನೋ ಬೆಳೆ ಚೆನ್ನಾಗಿ ಬರುತ್ತದೆ, ನೀರು ಬರುತ್ತದೆ ಎಂದು ಹೇಳಿ, ನಿಮ್ಮ ಮೇಲೆ ಅವಲಂಬಿತರಾಗುತ್ತಾರೆ. ಈ ಎಲ್ಲಾ ಅನುಭವವುಳ್ಳ ಮುಖ್ಯ ಮಂತ್ರಿಗಳಾಗಿರುವ ತಾವು ಹೇಳುವುದಕ್ಕಾಗುವುದಿಲ್ಲವೇ? ಯಾಕಪ್ಪಾ ಹೀಗೆ ಪದೇ ಪದೇ statement ಕೊಡುತ್ತೀರಿ ಎಂದು ಕೇಳಬೇಕು. ಇವತ್ತು ನಮ್ಮ ರಾಜ್ಯದಲ್ಲಿ ತಮಗೆ ಗೊತ್ತಿರುವ ಹಾಗೆ ಕನಿಷ್ಠ 17 ಲಕ್ಷ ಪಂಪ್‌ಸೆಟ್‌ಗಳಿವೆ. ಒಂದು ಪಂಪ್‌ಸೆಟ್ ಕೆಳಗೆ ಕನಿಷ್ಠ ಮೂರು ಎಕರೆಯಿಂದ ನಾಲ್ಕು ಎಕರೆ ನೀರಾವರಿಯಾಗುತ್ತದೆ ಎಂದು ಅಂದಾಜು ಮಡಿದರೆ, ಇವತ್ತು 60 ಲಕ್ಷ ಎಕರೆ ನೀರಾವರಿ ಅದರ ಮೇಲೆ ಅವಲಂಬಿಸಿದೆ. ಆ 60 ಲಕ್ಷ ಎಕರೆ ನೀರಾವರಿಗೆ ಇವತ್ತು ಸರಿಯಾಗಿ ನೀವು 3 phase electricity ಕೊಡದೇ ಹೋದರೆ, ಆ 60 ಲಕ್ಷ ಎಕರೆ ಇವತ್ತು

ಮಣ್ಣುಪಾಲಾಗುತ್ತದೆ. ರೈತರು ಹಾಕಿದಂತಹ ಬೀಜಗಳು ಹೋದವು, ಅವರು ಹಾಕಿದಂಥ ಗೊಬ್ಬರ ಹೋಯಿತು. ರೈತ ತಲೆ ಮೇಲೆ ಕೈ ಹೊತ್ತುಕೊಂಡು, ಸಾಲ ಮಾಡಿಕೊಂಡು ಕೂತಿರುತ್ತಾನೆ. ಇದು ನಿಮಗೆ ಗೊತ್ತಿತ್ತು. ಇಲ್ಲಿ ಎಷ್ಟೋ ಸಲ ನೀವು electricity supply ಇಲ್ಲವೆಂದು ಧರಣಿ ಮಾಡಿದ್ದೀರಿ, House Committee ಮಾಡಬೇಕೆಂದು ಕೇಳಿದ್ದೀರಿ. ಅದರ ಬಗ್ಗೆ ನಿಮಗೆ ಈಗ ನೆನಪಿಲ್ಲವೇ? ಇದರ ಬಗ್ಗೆ ನೀವು ಹೇಳಿಕೆಯನ್ನು ಪದೇ ಪದೇ, ತಾಸಿಗೊಮ್ಮೆ, ಹದಿನೈದು ದಿವಸಗಳಿಗೊಮ್ಮೆ, ತಿಂಗಳಿಗೊಮ್ಮೆ, ಕೊಡುತ್ತಿದ್ದೀರಿ. ಇದು ನನಗೆ ಅಚ್ಚರಿ ಎನಿಸುತ್ತದೆ. ಸರ್ಕಾರ ನಡೆಸತಕ್ಕಂಥವರು ವಿವೇಚನೆಯಿಂದ ಕೆಲಸವನ್ನು ಮಾಡಬೇಕೇ ಹೊರತು, ಅದನ್ನು ಬಿಟ್ಟು ಖುಷಿಪಡಿಸುವುದಕ್ಕೆ ಮಾಡುತ್ತಿದ್ದೀರಿ.

1-00 PM

ಜನರು ಕೇಳುತ್ತಾರೆ, ಅದಕ್ಕೆ ಏನಾದರೂ ಒಂದು statement ಹೇಳುವುದು. ಏಕೆಂದರೆ, ಇವರು ಬಾಯಿಯಲ್ಲಿ ಹೇಳಿದ ತಕ್ಷಣವೇ, ಇವತ್ತು visual medias, ಟಿ.ವಿ.ನವರು ಬಾಯಿಗೆ ಹಚ್ಚಿದ ತಕ್ಷಣ ಇವರು ಬಾಯಿ ದೊಡ್ಡದಾಗಿ ತೆರೆದು ಬಿಡುತ್ತಾರೆ. ಹೀಗಾಗಿ, ಇವತ್ತು ನಮ್ಮ ರೈತರು ಕಷ್ಟದಲ್ಲಿದ್ದಾರೆ, ಮತ್ತು ರೈತರಿಗೆ ಇವತ್ತು ಏನೂ ತೋಚುತ್ತಿಲ್ಲ. ಅವರ ಸಂಕಟವನ್ನು ನಿವಾರಣೆ ಮಾಡುವ ಕೆಲಸವನ್ನು ನೀವು ಮಾಡುತ್ತೀರಿ ಎಂದು ಹೇಳಿದ್ದೀರಿ. 75 ಲಕ್ಷಗಳಲ್ಲಿ ಸುಮಾರು 17 ಲಕ್ಷ ರೈತರನ್ನು ನೀವು ನೋಡಿದಾಗ, ಹೆಚ್ಚು ಕಡಿಮೆ 1/4th ರೈತರು ಅದರ ಮೇಲೆ depend ಆಗಿದ್ದಾರೆ. ಆಮೇಲೆ, power generationಗೆ ಬೇಕಾದಂಥ ಹಣ ಅಥವಾ ಕೆಲಸವನ್ನು ತೆಗೆದುಕೊಳ್ಳುತ್ತಿಲ್ಲ ಎಂಬುದು ಗೊತ್ತಾಗಿದೆ. ಮಾನ್ಯ ಕುಮಾರಸ್ವಾಮಿಯವರ ಸರ್ಕಾರದಲ್ಲಿ, ಮಾನ್ಯ ರೇವಣ್ಣನವರು ವಿದ್ಯುತ್ ಸಚಿವರಾಗಿದ್ದಂಥ ಕಾಲದಲ್ಲಿ, 360 ದಿನಗಳಲ್ಲಿ, 365 ವಿದ್ಯುತ್ ವಿತರಣಾ ಕೇಂದ್ರಗಳನ್ನು ಆರಂಭಿಸುವುದಾಗಿ ಹೇಳಿ, ಹಲವು ಕಂಪನಿಗಳಿಗೆ ಕಾಮಗಾರಿಗಳನ್ನು ಗುತ್ತಿಗೆ ನೀಡಿದ್ದರು. ಆ ಕಾಮಗಾರಿಗಳು ಈಗ ಅರ್ಧಕ್ಕೆ ನಿಂತಿವೆ. ಗುತ್ತಿಗೆದಾರರು ಕಾಮಗಾರಿಗೆ ಬೇಕಾದ ಉಪಕರಣಗಳನ್ನು ಖರೀದಿ ಮಾಡಿ, ಅದರ ಮೇಲೆ ಶೇಕಡಾ 90ರಷ್ಟು ಹಣವನ್ನು ಸರ್ಕಾರದಿಂದ ಪಡೆದು, ಹಾಯಾಗಿ ಆ ಎಲ್ಲಾ ಕಂಪನಿಗಳು ಮಲಗಿವೆ ಎಂದು ಗೊತ್ತಾಯಿತು. ಅವು ಮಲಗಿವೆಯೋ ಅಥವಾ ಎಚ್ಚರವಾಗಿರುವವೋ ಅಥವಾ ಎಬ್ಬಿಸುತ್ತೀರೋ ಏನೋ ಗೊತ್ತಿಲ್ಲ. ಏಕೆಂದರೆ, ತಾವು ಹಣಕಾಸಿನ ಸಚಿವರಾಗಿರುವುದರಿಂದ 90%ನಷ್ಟು ಹಣ ಬಿಡುಗಡೆ ಮಾಡಿರುವುದನ್ನು ನೋಡಿದ್ದೀರೋ ಅಥವಾ ಇಲ್ಲವೋ, ಇದು ಎಲ್ಲಿದೆ ಇದರ ಸ್ಥಿತಿ ಏನು ಎನ್ನುವುದನ್ನು ಹೇಳಬೇಕು. ಮತ್ತು ಈ ರಾಜ್ಯದ ಜನರಿಗೆ ಇದನ್ನು

ತಿಳಿಸಬೇಕಾಗುತ್ತದೆ. ಛತ್ತೀಸ್‌ಘಡದಿಂದ ಥರ್ಮಲ್ ಪ್ಲಾಂಟ್ ಸ್ಥಾಪನೆ ಮಾಡುತ್ತೇವೆ ಎಂದು ಒಂದು ದೊಡ್ಡ ಪ್ರಚಾರವನ್ನು ಮಾಡಿದ್ದೀರಿ. ಇದರ ಬಗ್ಗೆ ವಿಧಾನ ಸೌಧದಲ್ಲೂ ಕೂಡ ದೊಡ್ಡ ಮೀಟಿಂಗ್ ಆಯಿತು. ಈಗ ಆ ಥರ್ಮಲ್ ಪ್ಲಾಂಟ್‌ನ ಸ್ಥಿತಿ ಎಲ್ಲಿದೆ? ಏನಾಯಿತು? ಎಷ್ಟು ಹಣವನ್ನು ಕೊಟ್ಟಿರಿ? ಹಣವನ್ನು ಎಲ್ಲಿಂದ ತಂದಿರಿ? ಎಷ್ಟು ಬಡ್ಡಿಯಿಂದ ತಂದಿದ್ದೀರಿ? ಎಷ್ಟು ಕಂತುಗಳು ಕೊಟ್ಟಿದ್ದೀರಿ? ಯಾವ stage ನಲ್ಲಿ ಆ ಕೆಲಸ ಇದೆ ಎನ್ನುವುದು ನಮಗೆ ಗೊತ್ತಾಗಿಲ್ಲ. ಇದನ್ನು out of budget ನಲ್ಲಿ ಕೊಟ್ಟಿರೋ? ಬಜೆಟ್‌ನಲ್ಲಿ ಕೊಟ್ಟಿರೋ? ಸಾಲದ ರೂಪದಲ್ಲಿ ಕೊಟ್ಟಿರೋ? ಎನ್ನುವುದನ್ನು ಸ್ಪಷ್ಟವಾಗಿ ಈ ಸದನದಲ್ಲಿ ತಿಳಿಸಬೇಕು ಮತ್ತು 2000 ಮೆಗಾ ವ್ಯಾಟ್ ವಿದ್ಯುತ್ತು ಛತ್ತೀಸ್‌ಘಡದಿಂದ ಹರಿದು ಬರುತ್ತಿದೆ ಎಂದು ತಿಳಿದು ಜನರು ಬಹಳಷ್ಟು ಖುಷಿ ಪಟ್ಟಿದ್ದರು. ಅದು ಏನಾಯಿತು? ಅದರ ಬಗ್ಗೆ ಸರ್ಕಾರಕ್ಕೆ ಏನು seriousness ಇದೆ ಎನ್ನುವುದು ನನಗೆ ಗೊತ್ತಿಲ್ಲ. ಅದೇ ರೀತಿಯಲ್ಲಿ ಕ್ಷೇತ್ರವಾರು, 24 hours ವಿದ್ಯುಚ್ಛಕ್ತಿ supply ಮಾಡುತ್ತೇವೆ ಎಂದು ಹೇಳಿದ್ದೀರಿ. ನಾನು ಕೂಡ ಆಗ ತಮಗೆ ಫೋನ್ ಮಾಡಿದ್ದೆ, ತಾವು ಕೋಲಾರದಲ್ಲಿ ಇದ್ದಿರಿ. ನಾನು ಚಿತ್ತಾಪುರದಿಂದ ಫೋನ್ ಮಾಡಿದ್ದೆ. ಅಲ್ಲಿನ ಜನ ನನ್ನನ್ನು ಘೆರಾವೋ ಮಾಡಿದ್ದರು. ನಾನು ಆಗ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳಿಗೆ ಫೋನ್ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು ಫೋನ್‌ನಲ್ಲಿ ಮಾತನಾಡಿದರು. ಅವರಿಗೆ ಅಭಿನಂದಿಸುತ್ತೇನೆ. ಏಕೆಂದರೆ, ಫೋನ್‌ನಲ್ಲಿ ಬಂದರೂ ಅದೇ ದೊಡ್ಡದು ನಮಗೆ. ಆದರೆ, ಫೋನ್‌ನಲ್ಲಿ ಮಾತನಾಡಿ ನಿಮ್ಮ ಚಿತ್ತಾಪುರ ತಾಲ್ಲೂಕಿನಲ್ಲಿಯೂ ಕೂಡ 24 ಗಂಟೆ ವಿದ್ಯುಚ್ಛಕ್ತಿ supply ಮಾಡುತ್ತೇವೆ ಎಂದು ಹೇಳಿ ಘೋಷಣೆ ಮಾಡಿದರು. ನಿಮ್ಮ ಮಾತು ಕೇಳಿ ಅಲ್ಲಿ ನಾನು announce ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಸ್ವತಃ ಹೇಳಿದ್ದಾರೆ, ನೀವು ಚಿಂತೆ ಮಾಡಬೇಡಿ, 24 ಗಂಟೆಯೂ ಕೂಡ ಚಿತ್ತಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು ಆಗುತ್ತದೆ ಎಂದು ನಾನು ಜನರಿಗೆ ಹೇಳಿದೆ. ನೀವು ಹೇಳಿದ್ದು ನಿಜವೇ ಸ್ವಾಮಿ ಹೇಳಿ?

ಶ್ರೀ ಎಸ್.ಸುರೇಶ್‌ಕುಮಾರ್: ಯಾವಾಗ ಹೇಳಿದ್ದಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಹೇಳಿ ಎರಡು ತಿಂಗಳಾಯಿತು.

ಶ್ರೀ ಎಸ್.ಸುರೇಶ್‌ಕುಮಾರ್: ಮಾಲೂರಿನಲ್ಲಿ ಪೈಲಟ್ ಮಾಡುವಾಗ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪೈಲಟ್ ನಮ್ಮದು. ನಮಗೆ ಏಕೆ ನೀವು ಗಂಟು ಬಿದ್ದಿದ್ದೀರಿ. ಅವರು ಹೇಳುತ್ತಾರೆ. ಅವರು ಸ್ವತಃ ಮಾತನಾಡುತ್ತಾರೆ. ಇಂತಹ advisor ಇಟ್ಟುಕೊಂಡು ನಿಮ್ಮ ಗತಿ ಹೀಗಾಗಿದೆ. ಮಧ್ಯದಲ್ಲಿ ನಿಮ್ಮನ್ನು

ಖುಷಿಪಡಿಸುವುದಕ್ಕೆ ಅವರು ಬರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾನು ಫೋನ್‌ನಲ್ಲಿ ಮಾತನಾಡಿದ್ದು ಅವರಿಗೆ ಗೊತ್ತು ಹಾಗೂ ನನಗೆ ಗೊತ್ತು. ಆದರೆ, ಇವರಿಗೆ ಗೊತ್ತಿಲ್ಲ. ಆದರೆ ಮಾನ್ಯ ಯಡಿಯೂರಪ್ಪನವರು ಯಾವಾಗ ಕೈ ಕೊಡುವುದು ಎಂದರೆ. . . .

ಅಧ್ಯಕ್ಷರು: ಬೆಳಗಾಂ ಅಧಿವೇಶನದಲ್ಲಿ ನೀವು ಇದನ್ನು ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈ ಸರ್ಕಾರಕ್ಕೆ ನೂರು ಸಾರಿ ಹೇಳಿದರೂ ಕೂಡ, ಇದು ಎಮ್ಮೆ ಚರ್ಮ ಇದ್ದ ಹಾಗೆ. Sensitive ಇಲ್ಲ. ಮನುಷ್ಯನ ಚರ್ಮ ಆಗಿದ್ದರೆ, ಸ್ವಲ್ಪ ಏನಾದರೂ ಚುಚ್ಚಿದರೆ, ಚಿವುಟಿದರೆ ಗೊತ್ತಾಗುತ್ತದೆ. ಆದರೆ, ಇದು ಎಮ್ಮೆ ಚರ್ಮ, ಇದನ್ನು ಚುಚ್ಚುತ್ತಾ ಇರಬೇಕು. ಆದರೆ, ಮಾನ್ಯ ಸಭಾಧ್ಯಕ್ಷರಾಗಿ ನೀವು ಅವರನ್ನು ಚುಚ್ಚುತ್ತಿಲ್ಲ.

ಅಧ್ಯಕ್ಷರು: ನಾನು ನೆನಪು ಮಾಡುತ್ತಿದ್ದೇನೆ ಅಷ್ಟೆ. ಬೆಳಗಾಂ ಅಧಿವೇಶನದಲ್ಲಿ ನೀವು ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಜೆಟ್‌ನಲ್ಲಿ ಇಲ್ಲ. ಚಿತ್ತಾಪುರ ತಾಲ್ಲೂಕಿನಲ್ಲಿ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜನ್ನು ಕೊಡುತ್ತೇವೆ ಎಂದು ಹೇಳಿದ್ದರು. ಆದರೆ, ಬಜೆಟ್ ನೋಡಿದರೆ ಅದರಲ್ಲಿ ಇಲ್ಲ. ಅಂದರೆ, ನೀವು ಕೊಟ್ಟಂಥ ಮಾತಿಗೂ ಬೆಲೆಯಿಲ್ಲವೆಂದರೆ ಹೇಗೆ? ಬಜೆಟ್‌ನಲ್ಲಿ ಇಲ್ಲ. ನೀವು ನಿಮ್ಮ ಬಜೆಟನ್ನು ತೆಗೆದು ನೋಡಿ. ಆದರೆ, ಈ ರೀತಿಯಾಗಿ ಆಗಬಾರದು. ನೀವು ಕೊಟ್ಟಂಥ ಮಾತಿಗೆ ಬೆಲೆಯಿರಬೇಕು. ಒಬ್ಬ ಮುಖ್ಯಮಂತ್ರಿಗಳು, ಒಬ್ಬ ವಿರೋಧ ಪಕ್ಷದ ನಾಯಕರು ಹೇಳಿದಂಥ ಮಾತನ್ನು ಉಳಿಸಿಕೊಳ್ಳಲಿಲ್ಲವೆಂದರೆ, ನನಗೆ ಅನಿಸಿದ ಮಟ್ಟಿಗೆ ಇದಕ್ಕಿಂತ ದೊಡ್ಡ ಅನ್ಯಾಯ ಬೇರೆಯಿಲ್ಲವೆಂದು ನಾನು ಭಾವಿಸಿದ್ದೇನೆ. ಇದರ ಜೊತೆಗೆ ಗುಡಿಸಲುವಾಸಿಗಳಿಗೆ, ತಾಂಡಾದಲ್ಲಿ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುತ್ತೇವೆ ಎಂದು ಹೇಳಿದ್ದರು. ಇದನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವರೆ. ಆದರೆ, ಈಗ ಅವರಿಗೆ line charges, meter charges ಇವೆಲ್ಲಾ ಕೊಡಬೇಕೆಂದು ನಿಮ್ಮ ಅಧಿಕಾರಿಗಳು ಕೇಳುತ್ತಿದ್ದಾರೆ. ಇಷ್ಟೆಲ್ಲಾ ಕೊಡಲು ಅವರ ಬಳಿ ಹಣವಿರಬೇಕಾದರೆ, ಇಷ್ಟು ದಿವಸಗಳ ಕಾಲ ಕಾಯುವ ಪ್ರಶ್ನೆಯೇ ಬರುತ್ತಿರಲಿಲ್ಲ. ತಾಂಡಾಗಳಲ್ಲಿ, ಜೋಪಡಿಗಳಲ್ಲಿ, ಸ್ಲಂ ಗಳಲ್ಲಿರುವವರಿಗೆ ಶಕ್ತಿಯಿದ್ದಿದ್ದರೆ, ನೇರವಾಗಿ ಅವರೇ ವಿದ್ಯುತ್ತನ್ನು ತೆಗೆದುಕೊಳ್ಳುತ್ತಿದ್ದರು. ಅವರಲ್ಲಿ ಆ ಶಕ್ತಿಯಿಲ್ಲ. ಪೋಲ್ ಹಾಕುವುದು, ಕಂಡಕ್ಟರ್ ಎಳೆಯತಕ್ಕಂಥಾದ್ದು, ವೈರ್ ತೆಗೆದುಕೊಳ್ಳುವಂಥಾದ್ದು, ಇದನ್ನು ಸರ್ಕಾರ ಅವರಿಗೆ ಯೋಜನೆ ಮಾಡಿದೆ. ಆದರೆ, ಇವತ್ತು ಆ ಕೆಲಸ ಆಗುತ್ತಿಲ್ಲ. ಪುಕ್ಕಟೆ ವಿದ್ಯುತ್ ಕೊಡುತ್ತೇವೆಂದು ಹೇಳಿ, ನೀವು ಲೈನ್ ಚಾರ್ಜಸ್

ಕೇಳಿದರೆ, ಅಲ್ಲಿ ಅವರಿಗೆ ಲೈನ್‌ಗಳು ಬೀಳುವುದಿಲ್ಲ, ಅವರಿಗೆ ಲೈಟ್ ಸಿಗುವುದಿಲ್ಲ. ಈ ಕಡೆ ಕೊಡುತ್ತೇವೆಂದು ಹೇಳಿದ ಹಾಗೆಯೂ ಆಯಿತು, ಆ ಕಡೆ ಕೊಡದೇ ಇರುವ ಹಾಗೆಯೂ ಆಯಿತು. ಇದಕ್ಕೆ ನೀವು ಹೇಳಿದ್ದು, ಪುಕ್ಕಟೆ ವಿದ್ಯುತ್‌ಅನ್ನು ಕೊಡುತ್ತೇವೆ ಎಂದು. ಏಕೆಂದರೆ, ಪುಕ್ಕಟೆ ವಿದ್ಯುತ್ತನ್ನು ಕೊಡುತ್ತೇವೆಂದು ಹೇಳಿ supply ಮಾಡಲಿಲ್ಲವೆಂದರೆ, ಪುಕ್ಕಟೆ ಕೊಟ್ಟ ಹಾಗೆ ಆಗುತ್ತದೆ. ಇದು ತಮ್ಮ ಕೆಲಸ. ಅದಕ್ಕಾಗಿ ಇದನ್ನು ನಿಮಗೆ ಕಳುಹಿಸುತ್ತಿದ್ದೇನೆ. ಯಾವರೀತಿಯಾಗಿ 90 ಪರ್ಸೆಂಟ್ ಹಣವನ್ನು ಕೊಟ್ಟು ಈ ರೀತಿಯಾಗಿ ಮಾಡಿದ್ದೀರಿ ಎನ್ನುವುದನ್ನು ಹೇಳುತ್ತಿದ್ದೇನೆ. ಪತ್ರಿಕೆಯಲ್ಲಿ ಕೂಡ ಬಂತು, rural developmentಗೆ ಹೆಚ್ಚಿನ ಹಣ, agricultureಗೆ ಹೆಚ್ಚಿನ ಹಣ. ಹೋದ ಸಲ rural developmentಗೆ ಏನು ಕೊಟ್ಟಿದ್ದೀರಿ, ಅದಕ್ಕಿಂತಲೂ rural developmentಗೆ ಒಂದು ಪರ್ಸೆಂಟ್ ಕಡಿಮೆ. ಓದಿ ಹೇಳುತ್ತೇನೆ. 2008ರಲ್ಲಿ 1,593 ಕೋಟಿ ಕೊಟ್ಟರೆ, ಈ ಸಾಲಿ 1,502 ಕೋಟಿ. ಇದು ಕಡಿಮೆಯಾಯಿತೋ, ಹೆಚ್ಚು ಆಯಿತೋ? ಮಾನ್ಯ ಅಧ್ಯಕ್ಷರೆ, ಯಾಕೋ ನೀವು rural development ಎಂದರೆ ನೀವು serious ಇಲ್ಲವೆಂದು ಕಾಣುತ್ತಿದೆ. ಏಕೆಂದರೆ, ನಿಮ್ಮದು ಪಟ್ಟಣ ಬರುತ್ತದೆ. ಹುಬ್ಬಳ್ಳಿ-ಧಾರವಾಡದವರು ತಾವು. ಹಾಗೆಯೇ, ಕೃಷಿ ಬಗ್ಗೆ ಬಹಳಷ್ಟು ಒತ್ತು ಕೊಟ್ಟಿದ್ದಾರೆ ಎಂದು ಪತ್ರಿಕೆಯವರು ಕೂಡ ಬರೆದರು. ನನಗೆ ಆಶ್ಚರ್ಯ ಹೋದ ಸಲ ಕೊಟ್ಟಿದ್ದು 2,491 ಕೋಟಿ. ಈ ಸಾರಿ ಕೊಟ್ಟಿದ್ದು, 2,122 ಕೋಟಿ. ಇದು ಹೆಚ್ಚಿಗೆ ಆಯಿತೋ, ಕಡಿಮೆ ಆಯಿತೋ? ಅದರಲ್ಲೂ ಕೂಡ ಈಗ plan size ಹೆಚ್ಚಿಗೆಯಾಗಿದೆ. ಏಕೆಂದರೆ, ತಾವು ಒಮ್ಮೆ ಹಿಂದಿನದನ್ನು ನೋಡಿ. ನಾನು ನೋಡಿದ್ದೇನೆ. ಹಿಂದಿನವರೆಲ್ಲರೂ ಕೂಡ 14 ಸಾವಿರ ಕೋಟಿ 16 ಸಾವಿರ ಕೋಟಿ 17 ಸಾವಿರ ಕೋಟಿ ಬಂದ ಮೇಲೆ, ನಿಮ್ಮದು ಒಮ್ಮೆ 24 ಸಾವಿರ ಕೋಟಿ 26 ಸಾವಿರ ಕೋಟಿ ಆಯಿತು. ಈಗ 29 ಸಾವಿರ ಕೋಟಿ ಆಗಿದೆ. ಅಂದರೆ, plan ಗಾತ್ರವನ್ನು ಹೆಚ್ಚಿಗೆ ಮಾಡಿದರೆ, allocation ಹೆಚ್ಚಿನ ಮಾಡಬಹುದಲ್ಲಾ, ಎಂದು ಮಾಡಿದ್ದೀರಿ. ಇಲ್ಲಿ ಹಣವಿಲ್ಲ. "ಊಪರ್ ಶೇರ್‌ವಾನಿ, ಅಂದರ್ ಪರೇಶಾನಿ". ಇವರು ದುಡ್ಡು-ಕಾಸು ಇಲ್ಲದೆ, ಅದಕ್ಕೆ 20 ಕೋಟಿ, 30 ಕೋಟಿ, 100 ಕೋಟಿ ಎಂದು ಹೇಳುವುದು. ಆದರೆ, ಇಲ್ಲಿ ಹಣವೇ ಇಲ್ಲ. Plan out-lay ಹೆಚ್ಚಿಗೆ ಮಾಡುವುದು. ಹಿಂದಿನವರದು 17 ಸಾವಿರ ಕೋಟಿ ಇತ್ತಲ್ಲಾ ಅದನ್ನು ನಾನು 26 ಸಾವಿರ ಕೋಟಿ ಮಾಡಿದ್ದೇನೆ ಎಂದು ಹೇಳುವುದು. ಖರ್ಚು ಮಾಡಿರುವುದು ಎಷ್ಟೆಂದರೆ, 9,590 ಕೋಟಿ ರೂಪಾಯಿಗಳು. ಇದು ಜನವರಿ ಕೊನೆಯವರೆಗೆ ಆಗಿದೆ. ಅಂದರೆ, ಎರಡು ತಿಂಗಳಲ್ಲಿ ನೀವು ಖರ್ಚು ಮಾಡುವಂಥಾದ್ದು, 16 ಸಾವಿರ ಕೋಟಿ ರೂಪಾಯಿಗಳು. ಇದು ಸಾಧ್ಯವೇ? ಏಕೆ ಜನರಿಗೆ ಮೋಸ

ಮಾಡುತ್ತಿರುವುದು? ನೀವು ಹೇಳಿಬಿಡಿ. ಇದು ತಪ್ಪು, ನೀವು ಇಷ್ಟು ದೊಡ್ಡ ಗಾತ್ರದ plan out-lay ಮಾಡಬಾರದಿತ್ತು. ಅಲ್ಲಿ ಖುಷಿಪಡಿಸುವುದಕ್ಕೆ ಹೀಗೆ ಮಾಡಿದ್ದೀರಿ. Planning Commissionನಲ್ಲಿ ಶಹಭಾಷ್‌ಗಿರಿ ತೆಗೆದುಕೊಳ್ಳುವುದಕ್ಕೆ ಮಾಡುವುದು ಇದು. ಹಿಂದೆ ಯಾರು ಮಾಡಿದ್ದಾರೆ? ನಾನು ಮಾಡಿದ್ದೇನೆಯೇ? ಏನು ಮಾಡಿದ್ದೇನೆ? 26 ಸಾವಿರ ಕೋಟಿ ರೂಪಾಯಿ ಎಂದು plan our-lay ತೋರಿಸುವುದು.. ಆದರೆ implement ಮಾಡುವುದು 17-18 ಸಾವಿರ ಕೋಟಿ ರೂಪಾಯಿಯವರೆಗೆ, ಅದೂ ಮುಗಿದರೆ. ಅದೇ ರೀತಿಯಾಗಿ healthಗೆ ಕಳೆದ ಸಾಲಿನಲ್ಲಿ 964 ಕೋಟಿ ರೂಪಾಯಿ ಹಂಚಿಕೆ ಮಾಡಿದ್ದರು. ಈ ಸಾಲಿನಲ್ಲಿ 897 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಶಿಕ್ಷಣ ಕ್ಷೇತ್ರವನ್ನು ತೆಗೆದುಕೊಳ್ಳಿ ಮತ್ತು ಬೇರೆ ಬಾಬ್ತಿನಲ್ಲಿ ಇವತ್ತಿನ ದಿವಸ ತಮ್ಮ ಹಣ ಕಡಿಮೆಯಾಗಿದೆಯೇ ಹೊರತು ಹೆಚ್ಚಾಗಿಲ್ಲ. ಆದರೆ ದುರ್ದೈವ ಏನೆಂದರೆ, ಪತ್ರಿಕೆಗಳಲ್ಲಿ agricultureಗೆ ಒತ್ತು healthಗೆ ಒತ್ತು, ಶಿಕ್ಷಣ, ನೀರಾವರಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ ಎಂದು ಬಂದಿದೆ. ನೀರಾವರಿಗೆ ಎಲ್ಲಿ ಮಹತ್ವ ಕೊಟ್ಟಿದ್ದಾರೆ? ರೈತರನ್ನು ಮಣ್ಣು ಮಾಡಿ ಅವರನ್ನು ಕುಣಿಯೊಳಗೆ ಹಾಕಿ, ಅವರ ಸಮಾಧಿ ಕಟ್ಟಿ ಅದರ ಮೇಲೆ ಎಲ್ಲಾ ಹಣವನ್ನು ಇಟ್ಟಿದ್ದಾರೆ. ಬೇರೆ ಏನೂ ಇಲ್ಲ.

ಬಜೆಟ್‌ನಲ್ಲಿ ಏನಿದೆ? ಒಂದು commitment ಇಲ್ಲ, ದೂರದೃಷ್ಟಿ ಇಲ್ಲ, sense of involvement ಇಲ್ಲ. Financial responsibilities ಇಲ್ಲ. ಜೊತೆಗೆ ಅವರ ದೃಷ್ಟಿಕೋನ ಇರುವುದೇ 60 ದಿನಗಳು. 60 ದಿನಗಳಲ್ಲಿ ಅಲ್ಲಾವುದ್ದೀನ್ ಚಿರಾಗ್‌ನಿಂದ ಏನಾದರೂ ಮಾಯ ಮಂತ್ರ ಮಾಡಿ, ಬಿಜೆಪಿಗೆ ಹೆಚ್ಚಿನ ಸೀಟು ಬರುವಲ್ಲಿ ಏನು ಮಾಡಬೇಕು ಅದನ್ನು ಮೊದಲು ಮಾಡುವುದು. ಅಧಿಕಾರಿಗಳಿಗೂ ಅನೇಕ ಸಲ ಅವರು ಬೈಯುತ್ತಿರುವುದನ್ನು, ಉಪಯೋಗ ಮಾಡುತ್ತಿರುವ ಭಾಷೆಯನ್ನು ನೀವು ನೋಡುತ್ತಿರುತ್ತೀರಿ. ಆರ್.ಎಸ್.ಎಸ್. ಹಾಗೂ ಬಿ.ಜೆ.ಪಿ.ಯ cultureನಲ್ಲಿ ಆ ರೀತಿ ಇಲ್ಲ. ಅವರು ಒಂದೊಂದು ಸಲ ಕತ್ತೆ, ಕುದುರೆ ಎಂದು ಬೈಯುತ್ತಾರೆ, ನಿಮಗೆ ಯಾರು ಈ ರೀತಿ ಕಲಿಸಿದ್ದಾರೆ ಎಂದು ಹೇಳುತ್ತಾರೆ. ಇವೆಲ್ಲಾ ಹೇಳಿಬಿಟ್ಟು, ಆನಂತರ ಕ್ಷಮೆಯನ್ನು ಕೇಳುತ್ತಾರೆ. ಅವರೊಬ್ಬರೇ ಅಲ್ಲ, ಅವರ ಪ್ರಭಾವ ಸಾರಿಗೆ ಸಚಿವರ ಮೇಲೆ ಬಿದ್ದಿದೆ. ಅವರು conductor, driverಗೆ ಬೈಯುತ್ತಾರೆ. ಇವರ ಪ್ರಭಾವ ವಕ್ಫ್ ಸಚಿವರ ಮೇಲೆ ಬಿತ್ತು ಅವರು ಶ್ರೀರಾಮುಲು ಅವರಿಗೆ ಮಹಮ್ಮದ್ ಪೈಗಂಬರ್, ಪ್ರವಾದಿ ಎಂದು ಹೇಳುತ್ತಾರೆ. ಅಷ್ಟೇ ಅಲ್ಲ, ರಾಮಚಂದ್ರಗೌಡರು ಕಲಾವಿದರ ಬೆನ್ನು ಹತ್ತಿದ್ದಾರೆ. ಏಕೆ ಈ ರೀತಿ? ಇವೆಲ್ಲಾ ನನಗೆ

ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳೆ, ಇವರಿಗೆಲ್ಲರಿಗೂ ಒಂದು ಸಲ medical check up ಮಾಡಿಸಿ. Really. ಯಾಕಪ್ಪ ಹೀಗೆ ಮಾಡುತ್ತೀರಿ, ನನಗೆ ಕೆಟ್ಟ ಹೆಸರು ತರುತ್ತಿದ್ದೀರಿ, ಒಬ್ಬೊಬ್ಬರು ಒಂದೊಂದು ರೀತಿಯಾಗಿ ಮಾತನಾಡಿದರೆ ಸರಿ ಹೋಗುವುದಿಲ್ಲ. ನನಗೆ ನಾಳೆ ಉತ್ತರ ಕೊಡಬೇಕಾಗುತ್ತದೆ ಎಂದು ಹೇಳಿ. Anti-terrorist camp, health camp ಎಂದು ಅನೇಕ ಕ್ಯಾಂಪ್‌ಗಳನ್ನು ಮಾಡುತ್ತಿದ್ದೀರಿ. ಅದೇ ರೀತಿ ಮಂತ್ರಿಗಳಿಗೆ Health check up camp ಎಂದು ಮಾಡಿದರೆ ಅದರಲ್ಲಿ ಯಾರು sane, insane, ಒಳ್ಳೆಯವರು, mental balance ಇದೆಯೋ, ಇಲ್ಲವೋ ಬಿ.ಪಿ. ಹೆಚ್ಚಾಗಿದೆಯೋ ಇಲ್ಲವೋ, ಏನೇನಿವೆಯೋ ದಯವಿಟ್ಟು ಅವೆಲ್ಲವನ್ನು ಒಂದು ಸಾರಿ check up ಮಾಡಿಸಿದರೆ ಚೆನ್ನಾಗಿರುತ್ತದೆ. ಕೊನೇ ಪಕ್ಷ ನಿಮಗೆ 60 ದಿವಸವಾದರೂ ಬೇಕೋ? ಚುನಾವಣೆ ಮುಗಿಯುವವರೆಗೆ ಅವರು healthy ಆಗಿ ಇರಬೇಕಲ್ಲವೇ? ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕಲ್ಲವೆ? ನೀವು ಕೊಟ್ಟಿರುವಂತಹ ಕೆಲಸವನ್ನು ಅವರು ಮಾಡಬೇಕಲ್ಲವೇ? ಅಷ್ಟಾದರೂ ಅವರು ಮಾಡಬೇಕಲ್ಲವೇ? ಅದಕ್ಕೋಸ್ಕರ ದಯವಿಟ್ಟು ಒಂದು ಸಾರಿ check up ಮಾಡಿಸಲು ಕಳುಹಿಸಿ ಬಿಡಿ.

ಶ್ರೀ ಆರ್.ಅಶೋಕ್: ಒಂದು ನಿಮಿಷ ಮಾನ್ಯ ಮಲ್ಲಿಕಾರ್ಜುನಖರ್ಗೆಯವರೆ, ತಾವು ನನ್ನ ಹೆಸರನ್ನು ಹೇಳಿದಿರಿ. ನಾನು ಶಿವಮೊಗ್ಗದಲ್ಲಿದ್ದೆ. 30 ಪತ್ರಿಕೆಗಳು ಇದ್ದವು, 30 ಜನ ಪತ್ರಿಕಾ ಪ್ರತಿನಿಧಿಗಳು ಬಂದಿದ್ದರು. ಒಂದು ಪತ್ರಿಕೆಯಲ್ಲಿಯೂ ಬಂದಿಲ್ಲ. ಯಾವುದೋ ಒಂದು ಪತ್ರಿಕೆಯಲ್ಲಿ ಬಂದಿರುವುದನ್ನು ತಾವು quote ಮಾಡಿದ್ದೀರಿ. ಐದು electronic media ಇತ್ತು. ನಾನು ಹೇಳಿರುವುದು ಯಾವುದಾದರೂ ಒಂದು electronic media ದಲ್ಲಿ ಬರಬೇಕಾಗಿತ್ತು, ಅದರಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಯಾವುದಾದರೂ ಒಂದು ಆ ತರಹ electronic media ದಲ್ಲಿ ಬಂದಿರುವುದನ್ನು ನೀವು ಕೊಟ್ಟರೆ, ನೀವು ಎಲ್ಲಿ ತಪ್ಪು ಎಂದು ಹೇಳುತ್ತೀರೋ, ನಿಮ್ಮ ಹತ್ತಿರವೇ ನಾನು ಬಂದು ತಪ್ಪು ಕೇಳಿಕೊಳ್ಳುವುದಕ್ಕೆ ಸಿದ್ಧವಿದ್ದೇನೆ.

ಅಧ್ಯಕ್ಷರು: ಹಾಗೆ ಹೇಳಿಲ್ಲವೆಂದು ಅವರಿಗೆ ಹೇಳಿ.

ಶ್ರೀ ಆರ್.ಅಶೋಕ್: ನಾನು ಹೇಳಿದ್ದೇನೆ. ಅದು ಪತ್ರಿಕಾ ಸಂದರ್ಶನ, ಎಲ್ಲಾ ಪತ್ರಿಕೆಗಳು ಇದ್ದವು, major daily papers, electronic media ಇತ್ತು, ಯಾವುದರಲ್ಲೂ ಬಂದಿಲ್ಲ. ಒಂದೇ ಒಂದು ಸಂಜೆವಾಣಿ ಪತ್ರಿಕೆಯಲ್ಲಿ ಬಂದಿದೆ. ಆ ಪತ್ರಿಕೆ ಬಗ್ಗೆ ನಾನೇನು ಕೆಟ್ಟದಾಗಿ ಹೇಳಿಲ್ಲ. ಅದಕ್ಕೂ clarification ಹೇಳಿದ್ದೇನೆ.

ಆದುದರಿಂದ ಆ ತಹರ ನಾನು ಹೇಳದೆ ಇರುವುದನ್ನು ನನ್ನ ಮೇಲೆ ಏಕೆ ಆಪಾದನೆ ಬರಬೇಕು? ಇದ್ದರೆ, electronic clippings ಇರುತ್ತದೆ, ದಯವಿಟ್ಟು ತೋರಿಸಿ ನಿಮ್ಮ chamberಗೆ ನಾನು ಬರುತ್ತೇನೆ, ಏನಾದರೂ ಆ ತರಹ ಇದ್ದರೆ, ನಾನು ಏನು ತಪ್ಪು ಮಾಡಿದ್ದೇನೆಂದು ತಾವು ಹೇಳಿದರೆ, ಅದಕ್ಕೆ ನಾನು ಶಿಕ್ಷೆ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಇಲಾಖೆಯನ್ನು ನಿಭಾಯಿಸಿದಂತಹವರು, ನಿಮಗೂ ಅದರ ಬಗ್ಗೆ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ ನನ್ನದೊಂದು ಮನವಿ, ಅವರೊಬ್ಬರನ್ನು ಬಿಟ್ಟು ಬಾಕಿಯವರನ್ನು ಕರೆದುಕೊಂಡು ಹೋಗಿ.

ಅಧ್ಯಕ್ಷರು: ಮಮ್ತಾಜ್ ಆಲಿ ಖಾನ್ ಅವರು ಹೇಳಿದ್ದಾರೆ, ಅದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಅವರನ್ನು ಬಿಟ್ಟು ಬಿಡೋಣವೇ?

ಶ್ರೀ ಎಸ್.ಸುರೇಶ್ ಕುಮಾರ್: ಅಶೋಕ್ ಅವರು ಹೇಳಿದ ಹಾಗೆ, ಮಮ್ತಾಜ್ ಆಲಿ ಖಾನ್ ಅವರು 'ನಾನು ಹಾಗೆ ಹೇಳಿಲ್ಲ, ಸಂಪೂರ್ಣವಾಗಿ ಅಪಾರ್ಥ ಮಾಡಿಕೊಂಡಿದ್ದಾರೆ.' ಎಂದು ಅವರೂ ಕೂಡ ಹೇಳಿದ್ದಾರೆ.

ಅಧ್ಯಕ್ಷರು: ಇನ್ನು ಮಾನ್ಯ ರಾಮಚಂದ್ರಗೌಡರೊಬ್ಬರನ್ನು ಕರೆಸಿ ಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಏಕೆ ಮಾತನ್ನು ಹೇಳುತ್ತಿದ್ದೇನೆಂದರೆ, ಸ್ವಲ್ಪ ತಮಾಷೆಯಾಗಿದ್ದರೂ ಕೂಡ ಒಬ್ಬೊಬ್ಬರು ಅನಾವಶ್ಯಕವಾಗಿ ಪ್ರಚೋದನೆ ಮಾಡಿ, ಒಂದೊಂದು ಹೇಳಿಕೆಯನ್ನು ಹೇಳಬಾರದು. ಇದರಿಂದ ನಿಮಗೆ ಏನು ಸಿಗುತ್ತದೆ? ರಾಮಚಂದ್ರಗೌಡರು ಅಲ್ಲಿ ಹೇಳುವಂತಹ ಅವಶ್ಯಕತೆ ಇರಲಿಲ್ಲ. ಕೇಂದ್ರ ಸರ್ಕಾರದವರು ಇಲ್ಲಿ ಬಂದಾಗ ಏನಾದರೂ ನಿಮ್ಮ ಬೇಡಿಕೆಯನ್ನಿಟ್ಟು ಕೇಳುವುದನ್ನು ಬಿಟ್ಟು, ಆ ಕಲಾವಿದರ ಹತ್ತಿರವೇ ಜಗಳವಾಡುತ್ತಾರೆ. ನನಗೆ modern art ಗೊತ್ತು ಎಂದು ಹೇಳುತ್ತಾರೆ. ಇವರಿಗೆ modern art ಎಂದರೆ ಏನು ಗೊತ್ತು? ಇವರಿಗೆ ಏನೂ ಗೊತ್ತಿಲ್ಲ. ಒಳ್ಳೆಯ ಸ್ನೇಹಿತರು, ಚೆನ್ನಾಗಿದ್ದಾರೆ, ನಿಮ್ಮ ಸೇವೆ ಮಾಡುತ್ತಾರೆ. ಅದು ಇಟ್ಟುಕೊಳ್ಳಿ, ಬೇಡ ಎಂದು ಹೇಳುವುದಿಲ್ಲ. ಆದರೆ, ಅನಾವಶ್ಯಕವಾಗಿ ಗೊಂದಲ ಮಾಡಿ, ಸುಮ್ಮನೆ issue ಆಗುವಂಥದ್ದು, ಅದರ ಮೇಲೆ articles ಬರುತ್ತಿವೆ. ಅದು ಬರಲಿ. ನಂತರ, Political vindictiveness ಬಹಳ. ಯಾರು? ಬೇರೆ ವಿರೋಧ ಪಕ್ಷದವರನ್ನು ಸಹಿಸುವ ಹಾಗೆಯೇ ಇಲ್ಲ. ಅವರಿಗೆ ಮಟ್ಟ ಹಾಕಿ ಎಂದು ಹೆದರಿಸುವುದು. ಅವರಿಗೆ ತೊಂದರೆ ಕೊಡುವಂಥದ್ದು, ಅಲ್ಲಿ Sub-Inspector ಇರಲಿ, circle Inspector ಇರಲಿ, ಇವರು ಹೇಳಿದರೆ ಮಾತ್ರ ಕೇಸ್‌ಗಳನ್ನು register ಮಾಡಬೇಕು. ಅವರು ಹೇಳಿದರೆ ಎಲ್ಲ. ಅಪ್ಪಿ ತಪ್ಪಿ ಯಾರಾದರೂ ಶಾಸಕರು ಹೇಳಿದರೆ, ಅವು ಆಗುವ ಹಾಗೆಯೇ ಇಲ್ಲ. ಅವರಿಗೆ

ಯಾರು ಬೇಕೋ ಅವರಿಗೇ ಆಗಬೇಕು. ನಮಗೆ ಹಕ್ಕಿದೆ, ನೀವು ಮಾಡಿಲ್ಲ ಎಂದು ಹೇಳುತ್ತಾರೆ. ನನಗೆ ಅನಿಸಿರುವ ಮಟ್ಟಿಗೆ ಹೀಗೆ ಯಾವ ಮುಖ್ಯಮಂತ್ರಿಗಳು ಈ ರೀತಿ ಮಾಡಿಲ್ಲ. ಏನೋ 5-10% ಹೆಚ್ಚು ಕಡಿಮೆ ಅವರ ಪಕ್ಷಕ್ಕೆ ಮಾಡಿರಬಹುದು. ಆದರೆ, ಈ ರೀತಿ vindictiveness ಅನ್ನು develop ಮಾಡುವುದು, ಶಾಸಕರಿಗೆ ಕಿರುಕುಳ ಕೊಡುವುದು, ಕ್ಷೇತ್ರದ ಅಭಿವೃದ್ಧಿ ವಿಷಯದಲ್ಲಿ ಶಾಸಕರಿಗೆ ಒಂದು ರೀತಿಯಾಗಿ discriminate ಮಾಡುವುದು ಸರಿಯಿಲ್ಲ. ಲೋಕಸಭೆ ಚುನಾವಣೆಯಲ್ಲಿ ನಿಮಗೆ ಮತ ಬೇಕಾಗಿಲ್ಲವೇ? ನನ್ನ ಮತ ಕ್ಷೇತ್ರದಲ್ಲಿರುವ ಜನತೆಯ ಮತ ನಿಮಗೆ ಬೇಕು. ಇನ್ನೊಬ್ಬರ ಮತ ಕ್ಷೇತ್ರದಲ್ಲಿರುವ ಜನತೆಯ ಮತ ನಿಮಗೆ ಬೇಕು. ಆದರೆ, ಮತ ಕ್ಷೇತ್ರಕ್ಕೆ ಕೆಲಸ ಮಾಡಲು ಮಾತ್ರ ಹಣ ಇಲ್ಲ. ಈ ರೀತಿಯಾಗಿ ಇವತ್ತು ನಡೆದಿದೆ. ಆಡಳಿತ ಪಕ್ಷದ ಶಾಸಕರಿಗೆ ಒಂದು ರೀತಿಯಾದ grants ಕೊಡತಕ್ಕಂತಹದ್ದು ಮತ್ತು ವಿರೋಧ ಪಕ್ಷದಲ್ಲಿರುವಂತಹ ಶಾಸಕರಿಗೆ ನಿರ್ಲಕ್ಷ್ಯ ಮಾಡುವುದು. ಹೀಗಾಗಿ ರಾಜ್ಯದ ಅಭಿವೃದ್ಧಿ ಆಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎನ್ನುವುದನ್ನು ತಾವೇ ಹೇಳಿ. ಇಡೀ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಯಾಗಬೇಕು, ಎಲ್ಲರ ಏಳಿಗೆಯಾಗಬೇಕು. ಯಾವುದಾದರೂ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾದರೆ ಮೂರು ಮೂರು constituency ಗಳನ್ನು ದಾಟಿ ಹೋಗುತ್ತದೆ. ಅಲ್ಲಿ ಯಾವುದೋ ಕಾಂಗ್ರೆಸ್ constituency ಬಂದರೆ ಕೆಲಸ ನಿಲ್ಲಿಸುವುದು, ಮತ್ತೆ ಬಿಜೆಪಿ constituency ಬಂದರೆ ಕೆಲಸ ಪ್ರಾರಂಭ ಮಾಡುವುದು ಮತ್ತೆ ಜೆಡಿ(ಎಸ್) constituency ಬಂದರೆ ಕೆಲಸ ನಿಲ್ಲಿಸುವುದು ಮತ್ತೆ ಬಿ.ಜೆ.ಪಿ. ಬಂದರೆ ಪ್ರಾರಂಭ ಮಾಡುವುದು. ಏನೋ ಅಲ್ಪಸ್ವಲ್ಪ 5% discretion ಇದ್ದರೆ ಪರವಾಗಿಲ್ಲ. ಆದರೆ ಇಲ್ಲಿ ಆ ರೀತಿ ಇಲ್ಲ, ಬೇಕಾದ MLA ಗಳಿಗೆ ಒಂದೊಂದು ಕೋಟಿ, ಇನ್ನೊಬ್ಬರಿಗೆ ಏನೂನೇ ಇಲ್ಲ. ಅಂದರೆ, ಅವರು ಜನರಿಂದ ಗೆದ್ದು ಬಂದಂಥವರಲ್ಲವೆ? ನೀವು ಒಂದು ಸಲ ಮುಖ್ಯಮಂತ್ರಿಗಳಾದರೆ, ಆ ಜನರು ನಿಮ್ಮ ಪ್ರಜೆಗಳಲ್ಲವೆ? ಆ ಜನ ಇವತ್ತು ಕರ್ನಾಟಕ ರಾಜ್ಯದಲ್ಲಿ ಬೇಕಾಗಿಲ್ಲವೆ? ನನಗೆ ವಿಚಿತ್ರವೆನಿಸುತ್ತಿದೆ. ಹಿಂದೆ ಯಾವುದೇ ಕಾರ್ಯಕ್ರಮಗಳನ್ನು ನೀವು ತೆಗೆದುಕೊಳ್ಳಿ, ತಾವೇ ವಿರೋಧ ಪಕ್ಷದಲ್ಲಿದ್ದಿರಿ. ಅದು ಭೂ ಸುಧಾರಣೆ ಕಾನೂನೇ ಇರಬಹುದು, un-authorized cultivation regularization ಇರಬಹುದು, ಏಕೆ ನಿಮ್ಮ ಅಧ್ಯಕ್ಷತೆಯಲ್ಲಿ ಅಲ್ಲಿ ಆಗಿಲ್ಲವೇ? ಯಾರಾದರೂ ಬಂದು ಕೈ ಆಡಿಸುತ್ತಿದ್ದರೆ? ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಸದನದಲ್ಲಿರುವಂತಹ ಸದಸ್ಯರೆಲ್ಲರೂ ಒಂದೇ, ಅವರಿಗೆಲ್ಲರಿಗೂ ಸರಿಸಮಾನವಾದ ಗೌರವವನ್ನು ಕೊಡಬೇಕು ಅನ್ನವುದನ್ನು ನೀವು ಮಾಡದೇ ಹೋದರೆ, ಬೇರೆ ಮಂತ್ರಿಗಳು ಹೇಗೆ ಮಾಡುತ್ತಾರೆ ಅಥವಾ ಬೇರೆ ನಮ್ಮ

ಅಧಿಕಾರಿಗಳು ಹೇಗೆ ಮಾಡುತ್ತಾರೆ? ಅಧಿಕಾರಿಗಳು ಮುಖ್ಯಮಂತ್ರಿಗಳಿಗೆ ಅವರ ಬಗ್ಗೆ reservation ಇದೆ, ಎಂದು ಹೇಳಿ, ಅವರ ಬಗ್ಗೆ ಏನೂ ಮಾಡುವುದು ಬೇಕಾಗಿಲ್ಲವೆಂದು ಸಾಮಾನ್ಯ ಕೆಲಸ, ಸಣ್ಣ ಪುಟ್ಟ ಕೆಲಸವೂ ಆಗುವುದಿಲ್ಲ. ಅದಕ್ಕೆ ಇದನ್ನು ನೋಡಿದಾಗ ಖಂಡಿತವಾಗಿಯೂ ನಾನೂ ಹೇಳಬೇಕಾಗುತ್ತದೆ, ಇದು ಬಹಳ vindictiveness ಮತ್ತು ಸರ್ವ ಸಾಮಾನ್ಯ ಶಾಸಕರಿಗೆ ಕಿರುಕುಳ ಕೊಡತಕ್ಕಂಥ ಕೆಲಸ ನಡೆದಿದೆ. ಈಗ ಹಿಂದುಳಿದ ತಾಲ್ಲೂಕುಗಳಿಗೆ ಡಾ:ನಂಜುಂಡಪ್ಪನವರ ವರದಿ ಪ್ರಕಾರ ವಿಶೇಷ ಅನುದಾನ, ಕೊಡುವ ಬಗ್ಗೆ ಹೇಳಬಯಸುತ್ತೇನೆ. ಡಾ: ನಂಜುಂಡಪ್ಪನವರ ವರದಿ ಪ್ರಕಾರ ಸುಮಾರು 114 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಇವತ್ತು ತಾವು, ನಾವೆಲ್ಲರೂ ಗುರ್ತಿಸಿದ್ದೇವೆ. ಆ ರಿಪೋರ್ಟ್‌ನಲ್ಲಿ ಇದನ್ನು ಗುರ್ತಿಸಲಾಗಿದೆ. ಬಜೆಟ್ ಭಾಷಣದಲ್ಲಿ ಪುಟ 13 ಪ್ಯಾರಾ 24ರಲ್ಲಿ ತಾವು ಹೇಳಿದ್ದೀರಿ. 2007–08ರಲ್ಲಿ 1,572 ಕೋಟಿ ರೂ.ಗಳನ್ನು ಇಡಲಾಗಿತ್ತು ಅನಂತರ, 2008–09ರಲ್ಲಿ 2,547 ಕೋಟಿ ರೂ.ಗಳ ಅನುದಾನ ಇಡಲಾಗಿತ್ತು. ಈ ವರ್ಷ 2009–10ನೇ ಸಾಲಿಗೆ ವಿಶೇಷ ಅಭಿವೃದ್ಧಿಗಾಗಿ ಈ ಮುಂಗಡ ಪತ್ರದಲ್ಲಿ 2,574 ಕೋಟಿ ರೂ.ಗಳ ಅನುದಾನವನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ. ತಾವು ಇದನ್ನು ರೆವ್ಯೂ ಮಾಡಿದ್ದೀರಾ? 1,572 ಕೋಟಿ ರೂ.ಗಳಲ್ಲಿ ಎಷ್ಟು ಖರ್ಚಾಗಿದೆ? ಅನಂತರ, 2,547 ಕೋಟಿ ರೂ.ಗಳಲ್ಲಿ ಎಷ್ಟು ಹಣ ಖರ್ಚಾಗಿದೆ? ಯಾವ್ಯಾವ ಕ್ಷೇತ್ರಗಳಲ್ಲಿ, ಯಾವ್ಯಾವ ತಾಲ್ಲೂಕುಗಳಲ್ಲಿ ಹಣ ಬಿಡುಗಡೆಯಾಗಿದೆ? ಅನಂತರ, 2,547 ಕೋಟಿ ರೂ.ಗಳ ವಿಶೇಷ ಅನುದಾನ ಕಳೆದ ವರ್ಷ ಏನು ಕೊಡಲಾಗಿತ್ತು, ಅದರ ವೆಚ್ಚದ ಬಗ್ಗೆ ಬಹುಶಃ ಎಲ್ಲಿಯೂ ನಾವು ಇಷ್ಟು ಖರ್ಚು ಮಾಡಿದ್ದೇವೆಂದು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿಲ್ಲ ಅಥವಾ ನಮಗೆ Performance Budget ನೀಡಿಲ್ಲ. Performance Budget ಇದ್ದಿದ್ದರೆ, at least ನಾವು ನೋಡಬಹುದಾಗಿತ್ತು ಏನೆಂದರೆ, ಜನವರಿ ಅಂತ್ಯದವರೆಗೆ ಎಷ್ಟು ಖರ್ಚು ಮಾಡಿದ್ದೀರಿ? ಅಥವಾ ಇನ್ನು ಎಷ್ಟು ಉಳಿದಿದೆ ಎನ್ನುವುದು ಗೊತ್ತಾಗುತ್ತಿತ್ತು ಅಥವಾ ಇದು Vote on Account ಇದ್ದ ಕಾರಣ ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ತಾವು ಬಿಟ್ಟರೂ at least ನಮಗೆ ತಿಳಿಸಬಹುದಾಗಿತ್ತು. ಅದರಲ್ಲಿ ಹೇಳಬಹುದಾಗಿತ್ತು, ಅದೂ ಇಲ್ಲ. ಆದುದರಿಂದ, ಇದೆಲ್ಲವೂ ಕೂಡ ಡಾ: ನಂಜುಂಡಪ್ಪನವರ ವರದಿ ಪ್ರಕಾರ ಹಣ ಖರ್ಚು ಮಾಡುತ್ತೇವೆಂದು ಹೇಳಿದ್ದರೂ ನಿಜವಾಗಿಯೂ ಖರ್ಚಾಗಿಲ್ಲ, ಹಣವೂ ಬಿಡುಗಡೆಯಾಗಿಲ್ಲ. ಕೇವಲ ಹೋದ ತಿಂಗಳಿನಲ್ಲಿ ಮಾತ್ರ ಹಣವನ್ನು ಕೆಲವು ಕಡೆ ಬಿಡುಗಡೆ ಮಾಡಿ ಪುನಃ ಕೆಲವು ಕಡೆ withdraw ಮಾಡಿದರು. ಕೆಲವು PWD ಕೆಲಸಕ್ಕೆ ಹಣ ಕೊಟ್ಟರು. ಅದನ್ನು ತಕ್ಷಣವೇ withdraw ಮಾಡಿ Rural

Developmentಗೆ ಕೊಟ್ಟರು. ಇದೇನೆಂದು ನನಗೆ ಅರ್ಥವಾಗಲಿಲ್ಲ. ಒಂದು ಕಡೆ Rural Development ಅವಶ್ಯಕತೆ ಇರಬಹುದು, ಇನ್ನೊಂದು ಕಡೆ PWD ರಸ್ತೆಗಳು ಅವಶ್ಯಕತೆ ಇರಬಹುದು, ಮತ್ತೊಂದು ಕಡೆ ಕುಡಿಯುವ ನೀರಿಗೆ ಅವಶ್ಯಕತೆ ಇರಬಹುದು. Sector-wise ಶಾಸಕರುಗಳಿಗೆ ಏನು ಅವಶ್ಯಕತೆ ಇದೆಯೋ, ಅದರ ಪ್ರಕಾರ ಅವರು ಪ್ರಪೋಸ್ ಮಾಡಿದಾಗ 114 ತಾಲ್ಲೂಕುಗಳಲ್ಲಿ ಸುಮಾರು 140 ಎಂ.ಎಸ್.ಎ.ಗಳಿದ್ದಾರೆ. ಅವರ ಸಲಹೆ ಪ್ರಕಾರ ತಾವು ಮಾಡಿದ್ದರೆ ಆ ಹಣ ಖರ್ಚಾಗುತ್ತಿತ್ತು. ಆದರೆ, ಆ ಹಣ ಖರ್ಚಾಗಲಿಲ್ಲ. ಇವತ್ತು ಅದು ಕನ್ನಡಿಯೊಳಗಿನ ಗಂಟಾಗಿ ಇಟ್ಟಿದೆ. ನಂಜುಂಡಪ್ಪನವರ ವರದಿ ಪ್ರಕಾರ ಹಣ ಹೆಚ್ಚಿಗೆ ಇಡುವುದು. 1,500 ಕೋಟಿ ರೂ. ಹೋಗಿ 2,500 ಕೋಟಿ ರೂ.ಗಳಾಯಿತು. ಈಗ ಅದು 2,700 ಕೋಟಿ ರೂ.ಗಳಾಗಿದೆ. ಆದರೆ, ಖರ್ಚು ಏನಾಗಿದೆ? ಇವೆಲ್ಲವನ್ನೂ ಲೆಕ್ಕ ಹಾಕಿದರೆ ಇವತ್ತಿನ ದಿವಸ ನಾವು 6,000, 7,000, 7,080 ಕೋಟಿ 7,500 ಕೋಟಿ ರೂ.ಗಳಾಗುತ್ತದೆ. ಈ 7,500 ಕೋಟಿ ರೂ.ಗಳಲ್ಲಿ ಈ ಎರಡು ವರ್ಷಗಳಲ್ಲಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ತಾವು ಹೇಳಿ, ಆಗ ಜನರಿಗೆ ಗೊತ್ತಾಗುತ್ತದೆ. ನಿಜವಾಗಿಯೂ ನಂಜುಂಡಪ್ಪನವರ ವರದಿ ಪ್ರಕಾರ ಈ ಸರ್ಕಾರ ಕೆಲಸ ಮಾಡುತ್ತಿದೆಯೇ, ಇಲ್ಲವೇ ಎನ್ನುವುದೂ ಗೊತ್ತಾಗುತ್ತದೆ.

ಇನ್ನೊಂದು ಉದಾಹಣೆ ಏನೆಂದರೆ, ಗ್ರಾಮೀಣಾಭಿವೃದ್ಧಿಗೆ ತಾವು 247 ಕೋಟಿ ರೂ.ಗಳ ಅನುದಾನ ತೋರಿಸಿದ್ದೀರಿ. ಆದರೆ, ಅದರ ಪ್ರಕಾರ ಇವತ್ತು ಕೇವಲ 152 ಕೋಟಿ ರೂ. ಮಾತ್ರ ಅದರಲ್ಲಿ ನಮೂದಾಗಿದೆ. ನಂಜುಂಡಪ್ಪನವರ ವರದಿ ಪ್ರಕಾರ ಬಜೆಟ್ ಪ್ರಾವಿಜನ್ ತೋರಿಸಿದ್ದು 247 ಕೋಟಿ ರೂ.ಗಳು. ಆದರೆ, ಗ್ರಾಮೀಣಾಭಿವೃದ್ಧಿಯಲ್ಲಿ ತೋರಿಸಿದ್ದು 152 ಕೋಟಿ ರೂ.ಗಳು. ಅದಲ್ಲದೆ, ಬೃಹತ್ ನೀರಾವರಿ ಅಥವಾ ಸಣ್ಣ ನೀರಾವರಿ, ಇದ್ಯಾವುದಕ್ಕೂ ಹಣ ನೀಡಿಲ್ಲ. ಅದೇ ರೀತಿ ವಿದ್ಯುಚ್ಛಕ್ತಿ ಸೌಕರ್ಯಕ್ಕೂ 175 ಕೋಟಿ ರೂ. ತೋರಿಸಿದ್ದಿರಿ. ನಾನು ಕೂಡ Planning Secretary ಅವರೊಂದಿಗೆ ಮತನಾಡಿದೆ. ಮತ್ತು Managing Director ಅವರೊಂದಿಗೂ ಮಾತನಾಡಿದೆ. ಆದರೆ, ಪ್ರಾಜೆಕ್ಟ್ ಇನ್ನೂ ಕೆಳಗಿನಿಂದ ಬಂದಿಲ್ಲ. ನಾವು ಅದಕ್ಕೆ ಇನ್ನೂ ಅದನ್ನು approve ಮಾಡಿಲ್ಲವೆಂದು Planning Departmentನವರು ಹೇಳುತ್ತಾರೆ. ಅಂದರೆ, ಇನ್ನು ಒಂದು ತಿಂಗಳು ಇದೆ. ಈ ಅವಧಿಯಲ್ಲಿ 175 ಕೋಟಿ ರೂ.ಗಳು ಖರ್ಚಾಗುವುದಕ್ಕೆ ಸಾಧ್ಯವೇ? ಏಕೆ ರಿವ್ಯೂ ಮಾಡುವುದಿಲ್ಲ? ಮಂತ್ರಿಗಳು ಹೋದಾಗ ಅಥವಾ ತಾವು ಇಲ್ಲಿಯೇ ಒಂದು ಕಡೆ ಕುಳಿತು ಈ ಬಜೆಟ್‌ನಲ್ಲಿ ಈ ರೀತಿ department-wise allocation ಆಗಿದೆ, 175 ಕೋಟಿ ರೂ.ಗಳನ್ನು ವಿದ್ಯುಚ್ಛಕ್ತಿ ವಲಯಕ್ಕೆ ನಾನು ಕೊಟ್ಟಿದ್ದೇನೆ, ಇದೇಕೆ

ಖರ್ಚಾಗಿಲ್ಲವೆಂದು ತಾವೂ ಕೇಳುವುದಿಲ್ಲ. ಏಕೆಂದರೆ, ಪಾಪ! ನಿಮಗೆ ಪುರುಸೊತ್ತಿಲ್ಲ. ಗೋಕರ್ಣದಿಂದ ಹಿಡಿದು ತಿರುಪತಿಯಿಂದ ಹಿಡಿದು, ಏಸುದೇವರು, ಓಸುದೇವರಿಗೆಲ್ಲಾ ಅಡ್ಡಾಡಿ ಬರುವುದು.

ನಮ್ಮ ದೇಶದಲ್ಲಿ Anthropology ಪ್ರಕಾರ ನಾವು ಆಗ ಹೇಳುತ್ತಿದ್ದೆವು. ಈಗ ಇನ್ನೂ ಜಾಸ್ತಿಯಾಗಿರಬಹುದು. ನಾವು ಓದುವಾಗ ಹೇಳುತ್ತಿದ್ದರು. ದೇಶದಲ್ಲಿ ಹಿಂದೂ ಧರ್ಮದಲ್ಲಿ 2,756 ಉಪ ಜಾತಿಗಳಿವೆ. ಈಗ ಉಪ ಜಾತಿಗಳು ಇನ್ನೂ ಜಾಸ್ತಿಯಾಗಿರಬಹುದು. ಏಕೆಂದರೆ, ನೀವೇ ಒಂದೊಂದು ಉದ್ಘಾಟನೆ ಮಾಡುತ್ತಿದ್ದೀರಿ. ಪಂಚಮ ಸಾಲಿ ಮಠ, ಸಾದರ ಮಠ, ಬಣಜಿಗರ ಮಠ, ಆದಿ ಮಠ, ಗಾಣಿಗರ ಮಠ, ಉಪ್ಪಾರ ಮಠ, ಹಿಂದುಳಿದವರ ಮಠ, ಛಲವಾದಿ ಮಠ, ಹೀಗೆ ಆ ಮಠ, ಈ ಮಠವೆಂದು ಹೊಸ ಮಠಗಳೆಲ್ಲವನ್ನೂ ಪ್ರೋತ್ಸಾಹಿಸುತ್ತಿದ್ದೀರಿ. ನಿಮ್ಮ ಬಜೆಟ್ ನಿಮ್ಮ plan outlay ಇದೆಯಲ್ಲ, 29,000 ಕೋಟಿ ರೂ.ಗಳು ಸಾಕಾಗುವುದಿಲ್ಲ. ಏಕೆಂದರೆ, ಜಾತಿ, ಉಪ ಜಾತಿಗಳು ಸಾವಿರಾರು ಸಂಖ್ಯೆಯಲ್ಲಿದ್ದಾಗ, ಪಾಪ! ಒಂದೊಂದು ಮಠಕ್ಕೂ ನೀವು ಮಾಡಿಕೊಡಬೇಕಾದರೆ ಈ ಬಜೆಟ್ ಅಂತೂ ಸಾಕಾಗುವುದಿಲ್ಲ. ಇದನ್ನು ತಾವು ಬಹಳ ಗಂಭೀರವಾಗಿ ಆಲೋಚಿಸಬೇಕು. ಏಕೆಂದರೆ, ನಮಗೆ ವೋಟು ಬೇಕಲ್ಲವೆ? ಮತ್ತು ಎಲ್ಲಾ ಉಪ ಜಾತಿಗಳಿಗೂ ಒಂದೊಂದು ಮಠಕ್ಕೂ ಸ್ವಲ್ಪವಾದರೂ ಹಣ ಕೊಡಬೇಕಲ್ಲ? ಇಲ್ಲದಿದ್ದರೆ, ಅವರು ಸಿಟ್ಟಿಗೇಳುತ್ತಾರೆ. ಈ ದೇವರುಗಳು ಸಿಟ್ಟಿಗೆದ್ದರೆ, ನೀವು ಸರ್ವ ನಾಶವಾಗಿ ಹೋಗುತ್ತೀರಿ. ಅದಕ್ಕೋಸ್ಕರ, ನೀವು ಅವರನ್ನೂ ತೃಪ್ತಿಪಡಿಸಬೇಕು ಮತ್ತು ಬಾಲಕೃಷ್ಣರವರು ಹೇಳಿದಂತೆ, ಬೇರೆ ಕೆಲವು ದೇವರುಗಳು, ಕಾಳಮ್ಮ, ಮರುಗಮ್ಮ, ದುರುಗಮ್ಮ, ಇವೆಲ್ಲವೂ ಬಹಳ ಸಿಟ್ಟಿನ ದೇವರುಗಳು. ಅವುಗಳೇನಾದರೂ ಎದ್ದು ನಿಂತರೆ ರಾವಣನ ವಧೆಯಾದಂತೆ, ಬೆಟ್ಟದ ದೇವತೆಯಾದ ಚಾಮುಂಡೇಶ್ವರಿಯು ಬಂದು ನಿಮ್ಮ ಕುತ್ತಿಗೆ ಹಿಡಿದುಕೊಳ್ಳುತ್ತಾಳೆ! ಅದಕ್ಕೋಸ್ಕರ, ಇದರ ಕಡೆಯು ತಾವು ಲಕ್ಷ್ಯ ಕೊಡಿ, ತಾವು ಓಡಾಡುವುದು ಸಾಕು. ಈಗಾಗಲೇ ಸಾಕಷ್ಟು ದೇವರುಗಳು ನಿಮಗೆ ಆಶೀರ್ವಾದ ಮಾಡಿವೆ. ಜನರೂ ಬೆಂಬಲ ಕೊಟ್ಟಿದ್ದಾರೆ. ಆನರ ಬೆಂಬಲ ನಿಮಗೆ ಎಷ್ಟು ಒಳ್ಳೆಯದೆಂದು ಅನಿಸಲಿಲ್ಲ. ನಿಮಗೆ ದೇವರೇ ಹೆಚ್ಚಿಗೆ ಆಶೀರ್ವಾದ ಕೊಟ್ಟಿದ್ದಾರೆಂದು ತಿಳಿದುಕೊಳ್ಳೋಣ. ಆದರೆ, ಎಷ್ಟು ಬೇಕೋ ಅಷ್ಟು ಮಾಡಿ ಬಾಕಿ ಜನರ ಕಲ್ಯಾಣಕ್ಕಾಗಿ ಜನತಾ ಜನಾರ್ದನನ ಸೇವೆ ಎಂದಾದರೂ ಮಾಡಿ. ಆನರಿಗಾಗಿ ನೀವು ಎಲೆಕ್ಟ್ ಆಗಿದ್ದು, ಜನರಿಗೋಸ್ಕರ, ಜನರ ಪರವಾಗಿ, ಜನರ ವತಿಯಿಂದ ನೀವು ಇಲ್ಲಿ ಕುಳಿತಿದ್ದೀರಿ. ಅದಕ್ಕೋಸ್ಕರ ಅವರ ಬಗ್ಗೆ ಸ್ವಲ್ಪ ಗಮನ ಕೊಡಿ. ಏಕೆ 175 ಕೋಟಿ ರೂ.ಗಳನ್ನು ಖರ್ಚು ಮಾಡಲಿಲ್ಲ? ಇಲ್ಲಿಯವರೆಗೂ ಈ ಹಣ ಏಕೆ

ಹಂಚಿಲ್ಲ? ಪ್ರತಿಯೊಂದು ಕಡೆ ಎಲೆಕ್ಟ್ರಿಸಿಟಿಯನ್ನು ದುರಸ್ತಿಗೊಳಿಸುವುದಕ್ಕೋಸ್ಕರ ಏಕೆ ಪ್ರತಿ ತಾಲ್ಲೂಕಿಗೆ ಹೋಗಿಲ್ಲ ಎನ್ನುವುದನ್ನು ತಾವು ತಿಳಿಸಬೇಕು. ಅದಾದ ನಂತರ, ಸುಮಾರು 2,573 ಕೋಟಿ ರೂ.ಗಳ ಅನುದಾನದಲ್ಲಿ ನೀವು ಹೆಚ್ಚು ಹೆಚ್ಚು ಅಲೋಕೇಷನ್ ತೋರಿಸಿದ್ದೀರೇ ಹೊರತು ಇದನ್ನು ಯಾವುದೇ ರೀತಿಯಿಂದ ಅನುಷ್ಠಾನಕ್ಕೆ ತರುವ ಪ್ರಯತ್ನವಾಗಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, HKDB ಮೇಲೆ ಏಕೆ ಸಿಟ್ಟು ಇದೆ? ನನಗೆ ಗೊತ್ತಿಲ್ಲ. ನನ್ನ ಮೇಲೆ ಸಿಟ್ಟಿದ್ದರೆ ಮಾಡಿಕೊಳ್ಳಲಿ. ನನ್ನ ಜಾತಿ ಮೇಲೆ, ನನ್ನ ಮೇಲೆ, ನನ್ನ ಪಂಗಡದ ಮೇಲೆ ಏನಾದರೂ ಸಿಟ್ಟು ಇದ್ದರೆ ಇಟ್ಟುಕೊಳ್ಳಿ. ಆದರೆ, HKDB ಮೇಲೆ ಏಕೆ ಸಿಟ್ಟು? ಅಲ್ಲಿಗೆ ಪ್ರತಿ ಸಲವೂ ಎಲ್ಲಾ ಸರ್ಕಾರಗಳು ಹೆಚ್ಚಿನ ಹಣ ಕೊಡುತ್ತಾ ಬಂದರು. ಆದರೆ ಇವರು ಬಂದ ತಕ್ಷಣ ಅದಕ್ಕೆ Special Area Programmeನಲ್ಲಿ ಹೈದರಾಬಾದ್-ಕರ್ನಾಟಕಕ್ಕೆ ಕಡಿಮೆ ಮಾಡಿದರು. ಈ ಸಲ 30 ಲಕ್ಷ ಕೊಟ್ಟಿದ್ದಾರೆ. ಈ ಹಣ ಕೆಲವು ಸಲ ಕಡಮೆಯಾಗಿರಬಹುದು. ಆದರೆ, at least ನಿಮ್ಮಲ್ಲಿ ಹಣ ಇದೆಯೆಂದಾಗ, ಲ್ಯಾಪ್ಸ್ ಆಗುವಾಗ Hyderabad-Karnataka Development Boardಗೆ ವಿಶೇಷವಾಗಿ head ಕ್ರಿಯೇಟ್ ಮಾಡಿ ಅದಕ್ಕೆ ಡೈವರ್ಟ್ ಮಾಡುವುದು ಏಕಾಗಬಾರದು? ತಾವು ಅದನ್ನು ಮಾಡಲಿಲ್ಲ. ಅನಂತರ, Border Area Developmentಗೆ ಹಣವಿಲ್ಲ, Malnad Area Development Boardಗೆ ಹಣವಿಲ್ಲ. ಅದಕ್ಕೋಸ್ಕರ, at least ವಿಶೇಷ ಕಾರ್ಯಕ್ರಮಗಳನ್ನಾದರೂ ಹಮ್ಮಿಕೊಂಡು ಎಲ್ಲೆಲ್ಲಿಗೆ ಹಣ ಬೇಕೋ, ಅಲ್ಲಿಗೆ ಕೊಡುವ ವ್ಯವಸ್ಥೆ ಇದರಲ್ಲಿ ಆಗಿಲ್ಲ.

1-30 PM

Special Area Programmeಗೆ 181.92 ಕೋಟಿ ಇಟ್ಟಿದ್ದೀರಿ. ಆದರೆ ಇವತ್ತು ಅದರಲ್ಲಿ outlay ಆಗಿರುವುದು ಕೇವಲ 95 ಕೋಟಿ, ಆದರೆ ಬಿಡುಗಡೆಯಾಗಿದ್ದು ಕೇವಲ 20 ಕೋಟಿ. ಇಟ್ಟು ತೋರಿಸುವುದು 181 ಕೋಟಿ, ಅನಂತರ ಗ್ರಾಂಟ್ ತೋರಿಸುವುದು 95 ಕೋಟಿ, ಆದರೆ ಖರ್ಚು ಮಾಡುವುದು ಮಾತ್ರ 20 ಕೋಟಿ. ಇದು ಬಹಳ ವಿಚಿತ್ರವಾಗಿದೆ. ಜನರು ಹೇಗೆ ಇದನ್ನು ಅರ್ಥ ಮಾಡಿಕೊಳ್ಳುತ್ತಾರೋ ಅಥವಾ ಇದರಿಂದ ತಮ್ಮ ಮನಸ್ಸಿಗೆ ಎಷ್ಟರ ಮಟ್ಟಿಗೆ ಸಮಾಧಾನ ಇದೆಯೋ ನನಗೆ ಅರ್ಥವಾಗುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಹಣವನ್ನು ಬಿಡುಗಡೆ ಮಾಡತಕ್ಕ ರೀತಿ ಕೂಡ ಸಾಧ್ಯವಿಲ್ಲ. ಇದರಿಂದ 144 ಕೋಟಿ ಹಣವನ್ನು ಕೇವಲ ಒಂದು ತಿಂಗಳಿನಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ Special Area Programme ನಿಜವಾಗಿಯೂ ಯಾವ ಅರ್ಥದಲ್ಲಿ ಕೂಡ ಸರಿಯಾಗುವುದಿಲ್ಲ. ಅಷ್ಟು ಹಣವನ್ನು

ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವು ಏರಿಯಾ ಏನಿದೆ, ವಲಯವಾರು ಯೋಜನಾ ವೆಚ್ಚವನ್ನು ನೋಡಿದರೆ ನಗರಾಭಿವೃದ್ಧಿಗೆ ಅಲೋಕೇಷನ್ ಮಾಡಿರುವುದು 4,583.63 ಕೋಟಿ ರೂ. ಅಂದರೆ 15% ಆಗುತ್ತದೆ. ಸುರೇಶ್ ಕುಮಾರ್‌ರವರಿಗೆ, ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರಿಗೆ ಖುಷಿ ಪಡಿಸುವುದಕ್ಕೆ ಇಷ್ಟು. ಆದರೆ, ಇದಕ್ಕೆ ವಿರುದ್ಧವಾಗಿ ಗ್ರಾಮೀಣಾಭಿವೃದ್ಧಿಗೆ 1502 ಕೋಟಿ. ಅಂದರೆ ಕೇವಲ 5%. ತಾವು ಹಳ್ಳಿಗಳಿಂದ ಬರುತ್ತೀರಲ್ಲಾ, ಶಿಕಾರಿಪುರ ಮತಕ್ಷೇತ್ರ, ನಾವೆಲ್ಲರೂ ಸಹ 75% ಜನ ಹಳ್ಳಿಗಳಿಂದ್ಲೇನು ಬರುತ್ತೇವೆ ಅವರಿಗೆ ತಮ್ಮ ಅಲೋಕೇಷನ್ 5%. ಆದರೆ, cityಗೆ 15%. ಇದು ನಿಮ್ಮ rural developmentಗೆ ಇರತಕ್ಕ ಕಾಳಜಿ। ರೈತರಿಗೆ, ನೀರಾವರಿಗೆ ತಾವು ಏನು ಕೊಟ್ಟಿದ್ದೀರಿ ಎಂದು ಈಗತಾನೆ ನಾನು ಹೇಳಿದೆ. ಸಾರಿಗೆ ಇಲಾಖೆಗೆ 3,804 ಕೋಟಿ ಅಲೋಕೇಷನ್ ಮಾಡಿದ್ದೀರಿ. ಅಂದರೆ ನಮ್ಮ ಅಶೋಕ್‌ರವರು ಸಹ ಜಾಸ್ತಿ ಅಲೋಕೇಷನ್ ಪಡೆದುಕೊಂಡಿದ್ದಾರೆ. ಅವರ ಮೇಲೂ ಸಹ ನಿಮಗೆ ಪ್ರೀತಿ ಜಾಸ್ತಿ ಎಂದು ಕಾಣುತ್ತದೆ. ಅಂದರೆ ಕಟ್ಟಾ ಸುಬ್ರಹ್ಮಣ್ಯರವರು, ಸುರೇಶ್ ಕುಮಾರ್, ಅಶೋಕ್ ಕುಮಾರ್ ಈ ಎಲ್ಲಾ ಕುಮಾರರುಗಳಿಗೆ ಸೇರಿ 13 ರಿಂದ 15 ಪರ್ಸೆಂಟ್‌ವರೆಗೆ ಕೊಟ್ಟಿದ್ದೀರಿ. ಪಾಪ ಗ್ರಾಮೀಣಾಭಿವೃದ್ಧಿ ಸಚಿವರಾದ ಶೋಭಾ ಕರಂದ್ಲಾಜೆಯವರಿಗೆ 5 ಪರ್ಸೆಂಟ್. ಹೆಣ್ಣುಮಕ್ಕಳಿಗೆ ಅಲ್ಲೂ ಅನ್ಯಾಯ. Rural developmentಗೆ ಅಲ್ಲೂ ಅನ್ಯಾಯ. ಇಲ್ಲಿ ನಿಮ್ಮ ಅಕ್ಕಪಕ್ಕದಲ್ಲಿರುವವರಿಗೆ 13 ಪರ್ಸೆಂಟ್ 15 ಪರ್ಸೆಂಟ್ ಕೊಟ್ಟಿದ್ದೀರಿ. City development ಆಗಬೇಕು. ಅದಕ್ಕೆ ಕೇಂದ್ರ ಸರ್ಕಾರದಿಂದಲೂ ಸಹ ಹಣ ಬರುತ್ತಿರುವುದು ನಿಮಗೆ ಗೊತ್ತಿದೆ. ಅದು JUNNURM ನಲ್ಲಿ ಕೋಟ್ಯಾಂತರ ರೂಪಾಯಿ ಬರುತ್ತಿದೆ. ಆದರೆ, ನೀವು Rural developmentಗೆ ಕಾಳಜಿ ವಹಿಸಬಹುದಾಗಿತ್ತಲ್ಲಾ? ಅದು ಇಲ್ಲ. Biggest chunk of revenue ಬರತಕ್ಕದ್ದು ಕಮರ್ಶಿಯಲ್ ಟ್ಯಾಕ್ಸ್‌ನಿಂದ. ಹೆಚ್ಚುಕಡಿಮೆ ಅದರಿಂದ ಏನು total revenue 61% ನಿರೀಕ್ಷೆ ಮಾಡಲಾಗಿತ್ತೋ ಅದರಿಂದಲೇ ಮಾಡಲಾಯಿತು. ಆದರೆ, ಇವತ್ತು ಅದರಲ್ಲಿಯೂ ಸಹ ಸ್ವಲ್ಪಮಟ್ಟಿಗೆ ಖೋತಾ ಆಗಿದೆ. ನೀವು recession ಎಂದು ಒಂದು ಕಡೆ ಹೇಳಿಕೊಳ್ಳುತ್ತೀರಿ. ಇನ್ನೊಂದು ಕಡೆ ಎಲ್ಲಿ ಸೋರಿ ಹೋಗುತ್ತದೆ ಎಂಬುದು ನಿಮಗೆ ಗೊತ್ತಿರಬೇಕು. ಇದರ ಜೊತೆಯಲ್ಲಿ ಸಾಕಷ್ಟು ಗಾರ್ಮೆಂಟ್ ಫ್ಯಾಕ್ಟರಿಗಳು, ಅವು, ಇವು, ಸಣ್ಣಪುಟ್ಟ ಐ.ಟಿ., ಬಿ.ಟಿ. ಗಳಿಗೆ ತೊಂದರೆ ಆಗಿದೆ. ದೊಡ್ಡ ಐ.ಟಿ. ಬಿ.ಟಿ. ಗಳಿಗೆ ಅಷ್ಟೇನು ತೊಂದರೆಯಾಗಿಲ್ಲ. ಏಕೆಂದರೆ export ಏನಿದೆ ಅಷ್ಟೇ ಕಾಯಂ ಆಗಿ ಉಳಿದಿದೆ. ಆದರೂ ಸಹ ಇದರಲ್ಲಿ ಏಕೆ ಕಡಿಮೆಯಾಯಿತು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಹೇಳಬೇಕು. ನಿನ್ನೆ ಮಾನ್ಯ ಮುಖ್ಯಮಂತ್ರಿಯವರು

ನಾವು ಬಂದು ಒಂಬತ್ತು ತಿಂಗಳುಗಳಾಯಿತು ಈ ಒಂಭತ್ತು ತಿಂಗಳಿನಲ್ಲಿ ಏನು ಮಾಡಬೇಕಾಗಿತ್ತು ಎಂದು ಚೆನ್ನಾಗಿ ಹೇಳಿದರು. ನೋಡಿ, ನೀವು ಮುಖ್ಯಮಂತ್ರಿಗಳಾಗಿ ಒಂಭತ್ತು ತಿಂಗಳು. ಆದರೆ, ಹಣಕಾಸು ಸಚಿವರಾಗಿ ಅಧಿಕಾರವನ್ನು ಚಲಾಯಿಸುತ್ತಿರುವುದು ಸುಮಾರು 29 ತಿಂಗಳುಗಳಿಂದ. ಈ ಹಿಂದೆ 20 ತಿಂಗಳು, ಈಗ 9 ತಿಂಗಳು. ಆದ್ದರಿಂದ ತಮಗೆ ಇದರಲ್ಲಿ ಸಾಕಷ್ಟು ಅವಕಾಶ, ಸಮಯ ಸಿಕ್ಕಿದೆ. ಆ ರೀತಿ ಸಿಕ್ಕಿದ್ದರೂ ಕೂಡ ಈ ಕಾರ್ಯಕ್ರಮಗಳು ಏಕೆ ಅನುಷ್ಠಾನಕ್ಕೆ ಬರುತ್ತಿಲ್ಲ? ಅನುಷ್ಠಾನಕ್ಕೆ ತರಲು ನಿಮ್ಮ ಕೈಯಲ್ಲಿ ಆಗಲಿಲ್ಲ, ಅಥವಾ ನೀವು ಕುಳಿತು ಅದರ ಬಗ್ಗೆ ರೆವ್ಯೂ ಮಾಡಲಿಲ್ಲ, target ನೀವು reach ಮಾಡಲಿಲ್ಲ, ನಿಮ್ಮ physical and financial target reach ಆಗಲಿಲ್ಲವೆಂದರೆ ನೀವು ಅಧಿಕಾರಿಗಳಿಗೆ ಏನು ಕತ್ತೆ ಕಾಯುತ್ತಿದ್ದೀರಿಯೇ ಎಂದು ಬೈಯುವುದು. ಅವರು ಕತ್ತೆ ಕಾಯುತ್ತಾರೋ, ಕುದುರೆ ಕಾಯುತ್ತಾರೋ ಅಥವಾ ನಿಮ್ಮನ್ನು ಕಾಯುತ್ತಾರೋ ನನಗೆ ಗೊತ್ತಿಲ್ಲ. ಆದರೆ ಏಕೆ ಇದನ್ನು ಮಾಡಿಲ್ಲ ಎಂಬುದು ಜನರ ಪ್ರಶ್ನೆ. ಇವತ್ತು ನಿಮ್ಮ plan outlay total expenditure ಕೇವಲ 30 ಪರ್ಸೆಂಟ್ ಇರಬೇಕಾದರೆ ಎಷ್ಟರಮಟ್ಟಿಗೆ ನಿಮ್ಮ ಸಾಧನೆ ಇದೆ ಎಂಬ ಬಗ್ಗೆ ನೀವೇ ಹೇಳಬೇಕು. ನಿಮ್ಮ ಬಾಯಿಯಿಂದಲೇ ಒಂದು ಸಲ 30 ಪರ್ಸೆಂಟ್ ಎಂದು, ಒಂದು ಸಲ 20 ಪರ್ಸೆಂಟ್ ಎಂದು ಹೇಳಿದ್ದೀರಿ. ಈಗೇನು? All right ಹೆಚ್ಚುಕಡಿಮೆ ಮಾರ್ಚ್ ಕೊನೆಯವರೆಗೆ 40 ಪರ್ಸೆಂಟ್ reach ಆಗುತ್ತೀರಿ ಎಂದುಕೊಳ್ಳಿ. ಅಂದರೆ more than 60 ಪರ್ಸೆಂಟ್ ನೀವು expenditure ಮಾಡಲಿಲ್ಲ ಅಥವಾ ಹಣ ಇಲ್ಲ, ಹಣದ ಕೊರತೆ ಇದೆ, ಅಂದರೆ 60 ಪರ್ಸೆಂಟ್‌ನಷ್ಟು ಅಭಿವೃದ್ಧಿ ಕೆಲಸದಿಂದ ಜನರು ವಂಚಿತರಾಗಿದ್ದಾರೆ. ಇದು ಯಾವ ಕಾಲದಲ್ಲೂ ಸಹ ಆಗಿಲ್ಲ. Yes, 5, 10, 15 ಪರ್ಸೆಂಟ್ ವ್ಯತ್ಯಾಸ ಇರಬಹುದು. ಆದರೆ, ಇಲ್ಲಿ 60 ಪರ್ಸೆಂಟ್‌ವರೆಗೆ ನಾವು ಹಿಂದೆ ಬಿದ್ದರೆ ಯಾವ ಆರ್ಥಿಕ ಅಭಿವೃದ್ಧಿಯಾಗುತ್ತದೆ? ಯಾವ ಜಿ.ಡಿ.ಪಿ. growth ಆಗುತ್ತದೆ? ಯಾವ industries ಬರುತ್ತದೆ? ಯಾವ ನೀರಾವರಿ ಚೆನ್ನಾಗಿ ಆಗುತ್ತದೆ? ಯಾವ ವಿದ್ಯುತ್‌ಚ್ಛಕ್ತಿ ಉತ್ಪಾದನೆ ಹೆಚ್ಚಿಗೆಯಾಗುತ್ತದೆ? ಯಾವ ಬಡವರಿಗೆ ಮನೆ ಕಟ್ಟಿಸಿಕೊಡಲು ಆಗುತ್ತದೆ? ಯಾವ ಬಡವರಿಗೆ ಶಿಕ್ಷಣಕ್ಕೆ ಹೆಚ್ಚು ದುಡ್ಡನ್ನು ಕೊಡುವುದಕ್ಕಾಗುತ್ತದೆ? ಇವೆಲ್ಲವನ್ನು ನೋಡಿದರೆ ಖಂಡಿತವಾಗಿ ಇವತ್ತಿನ ದಿವಸ ಅಧಿಕಾರಿಗಳಿಗೆ ನಾವು ಬೈದು ಮಾಡಿಸುವುದಕ್ಕಿಂತಲೂ, ನೀವು ಕುಳಿತು ಇದರ ಬಗ್ಗೆ ಚಿಂತನೆ ಮಾಡಿ ಮಾಡಬೇಕಾಗಿತ್ತು. ಅದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಅದಕ್ಕಾಗಿ ನಾನು ತಮ್ಮಿಂದ ಇವೆಲ್ಲದರ ಉತ್ತರವನ್ನು ಬಯಸುತ್ತಿದ್ದೇನೆ. ಅನಂತರ ಪದೇ ಪದೇ ಒಂದು ಮಾತನ್ನು ಹೇಳುತ್ತೀರಿ, ಇದನ್ನು

ಯಾರು ಹೇಳಿಕೊಟ್ಟರೋ ಗೊತ್ತಿಲ್ಲ, ನನ್ನ ಸರ್ಕಾರವನ್ನು ಉರುಳಿಸಲು ಸಂಚು, ಷಡ್ಯಂತರ ನಡೆಯುತ್ತಿದೆ ಎಂದು ಹೇಳುತ್ತಾರೆ. ಯಾರು ಅದನ್ನು ಮಾಡಿದರು? ನಿಮ್ಮ ಸರ್ಕಾರಕ್ಕೇನಾದರು ಬಾಂಬ್‌ನ್ನು ಇಟ್ಟರೇ? ವಿಧಾನ ಸೌಧದ ಮೂರನೆ ಮಹಡಿಗೆ ಬಂದು ಏನಾದರು ವಿರೋಧ ಪಕ್ಷದವರು ಬಂದು ಬಾಂಬ್‌ನ್ನು ಇಟ್ಟು ಷಡ್ಯಂತರ ರಚಿಸಿ ನಿಮ್ಮ ಸರ್ಕಾರವನ್ನು ಮುಗಿಸಬೇಕೆಂದು ಮಾಡಿದ್ದಾರೆಯೇ? 26 ಸಾವಿರ ಕೋಟಿ ರೂಪಾಯಿಯ plan outlay ಮಾಡಿಕೊಂಡು ಅಭಿವೃದ್ಧಿ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ, ನೀವು ಏಕೆ ಬೇರೆಯವರನ್ನು ದೂರುತ್ತೀರಿ? ಬೇರೆಯವರಿಗೆ ಆಪಾದನೆ ಮಾಡುವುದು, ಈ ರೀತಿ ಹೇಳುವುದು, ಕೆಲವು ಕಡೆ ಸ್ವಾಮಿಗಳ ಹತ್ತಿರ ಹೋಗಿ ಗೋಳೋ ಎಂದು ಅಳುವುದು, "ನೋಡಿ, ನಮ್ಮ ಸರ್ಕಾರವನ್ನು ಇವರೆಲ್ಲ ತೆಗೆಯಬೇಕೆನ್ನುತ್ತಾರೆ, ಸಹಿಸುತ್ತಿಲ್ಲ, ನೀವು ಆಶೀರ್ವಾದ ಮಾಡಿ. ನೀವು ಬೆಂಬಲ ನೀಡಿ, ನಾನು ಒಂದು ಕೈ ನೋಡಿಕೊಳ್ಳುತ್ತೇನೆ." ಎಂದು ಹೇಳುವುದು. ಇದು ಪತ್ರಿಕೆಯಲ್ಲಿ ಬಂದಿದೆ, ಇದನ್ನು ಮಾನ್ಯ ಅಧ್ಯಕ್ಷರು ನೋಡಿರಬೇಕಲ್ಲಾ? ನೀವು ಇದರ ಬಗ್ಗೆ ಸ್ವಲ್ಪ ಹೇಳಿ. ನೀವು ಹೇಳಿದರೆ ಇದಕ್ಕೆ authentic ಆಗಿ seal ಬಿದ್ದಂತೆ. ಇದು ಪತ್ರಿಕೆಯಲ್ಲಿ ಬಂದಿದೆಯೋ, ಇಲ್ಲವೋ ಹೇಳಿ. ಈ ಮಾತನ್ನು ಅವರ ಹತ್ತಿರ ಆಡತಕ್ಕದ್ದಲ್ಲ. ನಿಮಗೆ ಅವರ ಬಗ್ಗೆ ಪೂಜ್ಯ ಭಾವನೆ ಇರಬಹುದು. ನೀವು ತೊಂದರೆಯಲ್ಲಿದ್ದಾಗ ನಿಮಗೆ ಅವರು ಸಹಾಯ ಮಾಡಿರಬಹುದು, ನಿಮ್ಮ ಪರವಾಗಿ ಪ್ರಚಾರ ಮಾಡಿರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಈ ಮಾತನ್ನು ಅವರ ಹತ್ತಿರ ಏಕೆ ಹೇಳಬೇಕು? ತಮ್ಮ ಕಾರ್ಯಕರ್ತರ, ಶಾಸಕರ ಮುಂದೆ ಹೇಳಿ ನಮಗೆ ತೊಂದರೆ ಮಾಡುತ್ತಿದ್ದಾರೆ, ನೀವು ನಮ್ಮ ಜೊತೆ ಇರಿ, ಎಷ್ಟು ಹಣ ಬೇಕೋ ಅಷ್ಟು ಹಣ ಕೊಡುತ್ತೇನೆ, ಅಗತ್ಯವಿದ್ದರೆ ಇನ್ನೂ ಹತ್ತು ಮಂದಿಯನ್ನು ಖರೀದಿ ಮಾಡಿಕೊಂಡು ಬನ್ನಿ ಎಂದು ಹೇಳಲಿ. ಬೇಕಾದರೆ ಕುದುರೆಗಳನ್ನು ನೀವು ಹುಡುಕಾಟ ಮಾಡಿಕೊಂಡು ಭದ್ರ ಮಾಡಿಕೊಳ್ಳಿ. ಈಗ ಅದೇ ಕೆಲಸ ಆಗಿರುವುದು. ಬೇರೆ ಏನೂ ಕೆಲಸ ಇಲ್ಲ. ದುಡ್ಡು ಕೊಡುವುದು, ಖರೀದಿ ಮಾಡುವುದು, ದುಡ್ಡು ಕೊಡುವುದು, ಗೆಲ್ಲಿಸತಕ್ಕದ್ದು. ಇವೆರಡೇ ಕೆಲಸ ಕಳೆದ 9 ತಿಂಗಳಿನಲ್ಲಿ ಆಗಿರುವುದು. ಆ ದೃಷ್ಟಿಯಿಂದ ಗಂಡೂ ಅಲ್ಲ ಹೆಣ್ಣೂ ಅಲ್ಲವೆಂದು ಈ ಅರ್ಥದಲ್ಲಿ ನಾನು ಹೇಳಿದ್ದು. ನೀವು ಬೇರೆಯವರನ್ನು ದೂರುವುದಕ್ಕೆ ಹೋಗಬೇಡಿ. ನಿಮ್ಮ ಕೆಲಸ, ನಿಮ್ಮ ಶಕ್ತಿ ಮೇಲೆ, ನಿಮ್ಮ ಕಾಲ ಮೇಲೆ ಏನು ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡಿಕೊಳ್ಳಿ. ಬೇರೆ ಶಾಸಕರ ಮೇಲೆ, ಬೇರೆ oppositionನವರ ಮೇಲೆ ದೂರುವುದರಿಂದ ನಿಮಗೆ ಏನೂ ಲಾಭವಿಲ್ಲ. ನಾವ್ಯಾರೂ ಕೂಡ ಷಡ್ಯಂತ್ರ ಮಾಡುವವರಲ್ಲ. 'Yes', ಟೀಕೆ ಮಾಡುತ್ತೇವೆ, ಟಿಪ್ಪಣಿ

ಮಾಡುತ್ತೇವೆ. ಇದು ನಮ್ಮ ಹಕ್ಕು. ಇಲ್ಲಿ ಕುಳಿತಾಗ ಆ ಕೆಲಸವನ್ನು ನಾವು ಮಾಡಲೇಬೇಕು. ನಾನು ಈ ಕಡೆಗೆ 18 ವರ್ಷ ಕುಳಿತಿದ್ದೇನೆ, ಆ ಕಡೆಗೆ 20 ವರ್ಷ ಕುಳಿತಿದ್ದೇನೆ. ಅಲ್ಲಿ ಕುಳಿತಾಗ ಆ ಕೆಲಸ ಮಾಡಿದ್ದೇನೆ, ಇಲ್ಲಿಗೆ ಬಂದಾಗ ಈ ಕೆಲಸವನ್ನು ಮಾಡಬೇಕು. ಕೆಲಸ ಮಾಡದಿದ್ದಾಗ ಮಾತ್ರವೇ ಟೀಕೆ ಮಾಡಲಾಗುತ್ತದೆ. ಕೆಲಸ ಮಾಡದಂತೆ ಯಾರೂ ಕೂಡ ನಿಮ್ಮ ಕೈ ಕಟ್ಟಿಲ್ಲ, ಕಾಲು ಕಟ್ಟಿಲ್ಲ. ಎಷ್ಟು ದೂರ ಬೇಕಾದರೂ ಓಡಿ ಎಂದು ನಾವು ಹೇಳುತ್ತಿದ್ದೇವೆ. ಆದರೆ ನಿಮಗೆ ಓಡುವುದಕ್ಕಾಗುತ್ತಿಲ್ಲ. ನಾವ್ಯಾರೂ ನಿಮ್ಮ ಕೈ ಕಟ್ಟಿಲ್ಲ. ಆದರೆ ನೀವು ನಿಮ್ಮ ಬಾಯನ್ನು ಮಾತ್ರ ಖುಲ್ಲಾ ಇಟ್ಟಿದ್ದೀರಿ. ಏನು ಬೇಕೋ ಅದನ್ನು ವಾಗ್ದಾನ ಕೊಡುತ್ತಿದ್ದೀರಿ. ಕೇಳಿದ್ದನ್ನೆಲ್ಲಾ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಸಾವಿರಾರು ಭರವಸೆಗಳನ್ನು ನೀವು ಕೊಟ್ಟುಕೊಂಡೇ ಬಂದಿದ್ದೀರಿ, ಇನ್ನೂ ಕೊಡುತ್ತಲೇ ಇದ್ದೀರಿ. ಈಗೇನೋ ಸ್ವಲ್ಪ ಕಡಿಮೆ ಮಾಡಿದ್ದೀರಿ. ಇಷ್ಟೆಲ್ಲಾ ಕೊಟ್ಟುಕೊಂಡು ಹೋದರೆ, ಪೂರೈಸುವುದು ಕಷ್ಟವಾಗುತ್ತದೆಂದು ಈಗ ನಿಮಗೆ ಗೊತ್ತಾಗಿ ಹೋಗಿದೆ. ಆದ್ದರಿಂದ ಕಳೆದ 3–4 ತಿಂಗಳಿನಿಂದ ಭರವಸೆ ಕೊಡುವುದನ್ನು ನಿಲ್ಲಿಸಿದ್ದೀರಿ. ತಮ್ಮ ಬಾಯಿ ಬಂದ್ ಮಾಡಿದ್ದೀರಿ. ಇವರು ಬಾಯಿ ಬಂದ್ ಮಾಡಿದ್ದಾರೆ, ಆದರೆ ಬೇರೆಯವರು ತೆರೆದಿದ್ದಾರೆ. ಇದೊಂದು ತೊಂದರೆಯಾಗಿದೆ. 'ನನ್ನ ಸರ್ಕಾರವನ್ನು ಉರುಳಿಸಲು ಸಂಚು ನಡೆಯುತ್ತಿದೆ, ಷಡ್ಯಂತ್ರ ನಡೆಯುತ್ತಿದೆ' ಎಂದು ಹೇಳಿಕೊಳ್ಳುತ್ತಿದ್ದೀರಿ. ಇದು ಸತ್ಯಕ್ಕೆ ದೂರವಾದುದು. ನಿಮಗೇನೋ ಕೆಟ್ಟ ಕನಸು ಬಿದ್ದಿರಬೇಕು. ದಯವಿಟ್ಟು ಆ ಕನಸುಗಳನ್ನು ಕಾಣುವುದಕ್ಕೆ ಹೋಗಬೇಡಿ. ಈಗಾಗಲೇ ಪ್ರತ್ಯಕ್ಷವಾಗಿ ನೀವು ಮುಖ್ಯಮಂತ್ರಿಗಳಾಗಿದ್ದೀರಿ. ಆದರೂ ನೀವು ಇನ್ನೂ ಕನಸು ಕಾಣುತ್ತಿದ್ದೀರಾ? ಇನ್ನೂ ಆ ಕಲ್ಪನೆಯಲ್ಲೇ ಇರಬೇಡಿ. ನೀವು ಮುಖ್ಯಮಂತ್ರಿಗಳಾಗಿದ್ದೀರಿ, ಇಲ್ಲಿ ಕುಳಿತಿದ್ದೀರಿ. ಇನ್ನು ಮುಂದೆ ಪ್ರಾಮಾಣಿಕವಾಗಿ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತರತಕ್ಕಂಥ ಪ್ರಯತ್ನ ಮಾಡಬೇಕೇ ಹೊರತಾಗಿ ಇಂತಹ ಸುಳ್ಳು ಆಪಾದನೆಗಳನ್ನು ವಿರೋಧ ಪಕ್ಷದವರ ಮೇಲೆ ಮಾಡಿ, ಅತ್ತೂ ಕರೆದು ಸ್ವಾಮಿಗಳ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಹೋಗಬೇಡಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ನಾವು ನಿಮ್ಮ ಸರ್ಕಾರವನ್ನು ಉರುಳಿಸತಕ್ಕಂಥ ಪ್ರಯತ್ನವನ್ನು ಮಾಡುವುದಿಲ್ಲ. ಪ್ರಯತ್ನ ಮಾಡಿದ್ದರೆ, ಅದೇ ದಿವಸ ನಾವು ಸರ್ಕಾರವನ್ನು ರಚಿಸುತ್ತಿದ್ದೆವು, ಇಲ್ಲವೆಂದು ಅಲ್ಲ. ಆದರೆ ನಮ್ಮಲ್ಲಿ ಇನ್ನೂ ಕೆಲವು ಜನರು, 'ಆ ರೀತಿ ಮಾಡುವುದು ಬೇಡ, ಒಂದು ಅವಕಾಶ ಅವರಿಗೆ ಕೊಡೋಣ, ಆಮೇಲೆ ಏನಾಗುತ್ತದೆಂದು ನೋಡೋಣ' ಎಂದು ಹೇಳಿದರು. ಏನಾಗುತ್ತದೆಂದು ಮುಂದೆ ನೋಡೋಣ, ಈಗಂತೂ ನಿಮಗೆ ಅಧಿಕಾರ ಸಿಕ್ಕಿದೆ. ಅದನ್ನು ಯಾವ ರೀತಿಯಾಗಿ ನೀವು ನಡೆಸಿಕೊಂಡು ಹೋಗುತ್ತಿದ್ದೀರಿ

ಎಂಬುದು ಈಗಾಗಲೇ ಜನರಿಗೆ ಗೊತ್ತಾಗಿದೆ. ಎಷ್ಟರಮಟ್ಟಿಗೆ ಈ ಸರ್ಕಾರ ಶಾಶ್ವತವಾಗಿ ಇರುತ್ತದೋ ನೋಡೋಣ. ಆ ಬಗ್ಗೆ ನಿನ್ನೆ ಅವರು ಹೇಳಿದರು. ಈಗ officersಗಳಿಗೂ confidence ಇಲ್ಲ. ಯಾವಾಗಲೂ ಕೂಡ ಅವರನ್ನು ಎಲ್ಲರೂ ಬಯ್ಯುವುದೇ ಆಗುತ್ತಿದೆ. ಯಾವ ಅಧಿಕಾರಿಗಳು ನಾವಿದ್ದಾಗ ಇದ್ದರೋ, ಅವರೇ ನೀವು ಇದ್ದಾಗಲೂ ಇದ್ದಾರೆ. ಆದರೆ ಕೆಲವು ಅಧಿಕಾರಿಗಳನ್ನು ನೀವು ವಿಶ್ವಾಸಕ್ಕೆ ತೆಗೆದುಕೊಂಡು, ಇಂಥಿಂಥ ಕೆಲಸಗಳನ್ನು ನೀವು ಮಾಡಬೇಕೆಂದು ಅವರಿಗೆ target ಕೊಟ್ಟರೆ, ಅವರು ಮಾಡೇ ಮಾಡುತ್ತಾರೆ. ಏಕೆಂದರೆ, ನಮ್ಮಲ್ಲಿ ಅಷ್ಟೊಂದು ಹದಗೆಟ್ಟಿರುವಂತಹ ವ್ಯವಸ್ಥೆ ಏನೂ ಇಲ್ಲ. ನಮ್ಮಲ್ಲಿ ವ್ಯವಸ್ಥೆ ಚೆನ್ನಾಗಿದೆ. ಆದರೆ ಅವರನ್ನು ನಾವು ತಂದಿದ್ದೇವೆಂದು, ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ, ಶಾಸಕರಾಗಿ, ನಾವು ಯಾವಾಗ ಅವರನ್ನು ದುರುಪಯೋಗ ಪಡಿಸಿಕೊಳ್ಳುತ್ತೇವೋ, ಕಾನೂನು ಏನು ಹೇಳಿದರೂ ನಾವು ಹೇಳಿದಂತೆಯೇ ಅವರು ಕೇಳಬೇಕೆಂದು ಯಾವಾಗ ನಾವು ದುರುಪಯೋಗ ಮಾಡಿಕೊಳ್ಳುತ್ತೇವೋ, ಆಗ ಮಾತ್ರ ಅವರು ಕೆಟ್ಟು ಹೋಗುತ್ತಾರೆ. ಆಗ ಅವರೇನು ಮಾಡುತ್ತಾರೆ ಎಂದರೆ, ನಾವು ಅವರನ್ನು ಎರಡು ಬಾರಿ ತಪ್ಪು ದಾರಿಗೆ ಎಳೆದರೆ, ಅವರು ನಾಲ್ಕು ಬಾರಿ ದಾರಿ ತಪ್ಪಿ ಅವರ ಕೆಲಸ ಮಾಡಿಕೊಳ್ಳುತ್ತಾರೆ. ಆಗ ಸಾಮಾನ್ಯ ಜನರು ಏನು ಹೇಳುತ್ತಾರೆಂದರೆ, 'ಮಂತ್ರಿಗಳ ಬಳಿಗೆ ಏಕೆ ಹೋಗುತ್ತೀರಿ? ಸೀದಾ ಅಲ್ಲೇ ಡೈರೆಕ್ಟ್ ಹೋದರಾಯಿತು, ಆ ಆಫೀಸರನೇ ಎಲ್ಲಾ ಕೆಲಸ ಮಾಡಿಕೊಡುತ್ತಾನೆ' ಎನ್ನುತ್ತಾರೆ. ಆದ್ದರಿಂದ ಇದೆಲ್ಲವನ್ನೂ ಕೂಡ ತಾವು ಗಮನಿಸಬೇಕು. ಅದನ್ನು ಬಿಟ್ಟು, ಕೇವಲ ನಮ್ಮ ಮೇಲೆ ದೂರು ಹೇಳಿಕೊಂಡು ಹೋಗುವುದು ಸರಿಯಲ್ಲ ಎನ್ನತಕ್ಕಂಥ ಮಾತನ್ನು ನಿಮಗೆ ಹೇಳಬಯಸುತ್ತೇನೆ. ಸಾಲ ಮಾತ್ರ ಹೆಚ್ಚಿಗೆ ಆಗುತ್ತಿದೆ. ಇದು ಈಗಲೆ ಆಗುತ್ತಿದೆಯೇ ನೀವು ಕೇಳಬಹುದು. ಆದರೆ ಕ್ರಮೇಣವಾಗಿ ಸಾಲ ಇವತ್ತು ಹೆಚ್ಚಾಗುತ್ತಿದೆ. ಹೆಚ್ಚು ಕಡಿಮೆ 71 ಸಾವಿರ ಕೋಟಿ ರೂ.ಗಳವರೆಗೆ ಅದು ಬರುತ್ತಿದೆ. KSRTC, BDA, LIC, Provident Fund, Guarantee ಕೊಟ್ಟಿರುವುದು ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ ಸುಮಾರು 1 ಲಕ್ಷ 300 ಕೋಟಿ ರೂ.ಗಳವರೆಗೆ ಸಾಲ ಆಗುತ್ತದೆ. Guarantee ಎಲ್ಲಾ ಬಿಟ್ಟರೆ ಅದು ಸುಮಾರು 72 ಸಾವಿರ ಕೋಟಿ ರೂ.ಗಳವರೆಗೆ ಆಗುತ್ತದೆ. ಇದನ್ನು ನಿಭಾಯಿಸತಕ್ಕದ್ದು ಬಹಳ ಕಷ್ಟ. ಆದ್ದರಿಂದ ಆರ್ಥಿಕ ವ್ಯವಸ್ಥೆ ಸರಿ ಇರಬೇಕಾಗಿತ್ತು. Fiscal Responsibility Act ಪ್ರಕಾರ 3%ಗಿಂತ ಹೆಚ್ಚು cross ಆಗಬಾರದು ಎನ್ನತಕ್ಕಂಥ limit ಅನ್ನು ನಾವೇ ಹಾಕಿಕೊಂಡು, ಅದನ್ನು pass ಮಾಡಿಕೊಂಡಿದ್ದೇವೆ. ಈಗ ಆ ಲಿಮಿಟ್ ಮೀರಿ ಹೋಗುತ್ತಿದೆ. ಅದು ಅಲ್ಲೇ ಏಕೆ ಇರಬೇಕು? ಮುಂದೆ ಏಕೆ ಹೋಗಬಾರದು? ಎಂಬ ವಾದ ನಿಮ್ಮದಿರಬಹುದು.

ಎಷ್ಟೇ ಕಷ್ಟ ಬಂದರೂ ಕೂಡ ಹಿಂದಿದ್ದ ಸರ್ಕಾರಗಳು ಆ ಲಿಮಿಟ್‌ನಲ್ಲೇ ನಡೆದುಕೊಳ್ಳುತ್ತಿದ್ದರು. ಅನೇಕ ಯೋಜನೆಗಳಿಗೆ cut ಮಾಡುತ್ತಿದ್ದರು. ಏಕೆಂದರೆ, ಆರ್ಥಿಕ ವ್ಯವಸ್ಥೆ ಕೆಟ್ಟು ಹೋದರೆ ನಮ್ಮ ಮೂಲಭೂತ ಸೌಕರ್ಯಗಳೂ ಬುಡಮೇಲಾಗುತ್ತವೆ, ಅಭಿವೃದ್ಧಿ ಕೆಲಸ ಕುಂಠಿತವಾಗುತ್ತದೆ, GDP growth ನಿಂತು ಹೋಗುತ್ತದೆ. ಆದ್ದರಿಂದ ಸುಭದ್ರವಾದ ಆರ್ಥಿಕ ವ್ಯವಸ್ಥೆ ಇರಬೇಕಾದರೆ, Fiscal Responsibility Actಗೆ ಗೌರವ ಕೊಟ್ಟು, ಅದಕ್ಕೆ ಸೀಮಿತವಾಗಿ ಇರಬೇಕು. ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆಯಿಂದ ನಮಗೆ ಏನೂ ಪ್ರಯೋಜನವಾಗಲಿಲ್ಲವೆಂದು ನೀವು ಹೇಳಿಕೊಂಡಿರಿ. 71 ಸಾವಿರ ಕೋಟಿ ರೂ.ಗಳಲ್ಲಿ ಈ ರಾಜ್ಯಕ್ಕೆ ಸಹಾಯ ಆಗಿರುವುದನ್ನು ತಾವು ದಯವಿಟ್ಟು ಹೇಳಬೇಕಾಗಿದೆ. ಈ ರಾಜ್ಯದ ಒಟ್ಟು 13,76,960 ರೈತರ ಒಟ್ಟು 3655 ಕೋಟಿ 40 ಲಕ್ಷ ರೂ. ಸಾಲ ಮನ್ನಾ ಆಗಿರುವುದು ಖಚಿತವಾಗಿದೆ. ಅಂದರೆ ಕೇಂದ್ರ ಸರ್ಕಾರದ 3655 ಕೋಟಿ ರೂ.ಗಳ ಹಣದಿಂದ ಇವತ್ತು ಇಲ್ಲಿನ ರೈತರಿಗೆ ಅನುಕೂಲವಾಗಿದೆ ಎಂಬ ಮಾತನ್ನು ತಾವೇ ಒಪ್ಪಿಕೊಂಡಿದ್ದೀರಿ. ಆದರೆ, ಹೊರಗಡೆ ಭಾಷಣಗಳಲ್ಲಿ ತಾವು ಅದನ್ನು ಹೇಳುತ್ತಿಲ್ಲ. ಏಕೆಂದರೆ, ಭಾಷಣಗಳಲ್ಲಿ ಆ ಬಗ್ಗೆ ಹೇಳಿದರೆ ನಿಮಗೆ ವೋಟು ಬರುವುದಿಲ್ಲವಲ್ಲ! ಆದ್ದರಿಂದ ಇದನ್ನು ಬಿಟ್ಟು ಬಿಡುತ್ತೀರಿ. ಕೇವಲ ತಮ್ಮದನ್ನು ಮಾತ್ರ ಹೇಳಿಕೊಳ್ಳುತ್ತೀರಿ. 'ಈ ರೀತಿ ಯಾರು ಕೊಟ್ಟಿದ್ದಾರೆ? ಹಿಂದೆ 6%ಗೆ ಕೊಟ್ಟಿದ್ದರು, ಆದರೆ ನಾವು 3%ಗೆ ಕೊಟ್ಟಿದ್ದೇವೆ' ಎಂದು ಹೇಳಿಕೊಳ್ಳುತ್ತೀರಿ. ನಬಾರ್ಡ್ 11%ನಿಂದ 7% ಇಳಿಸಿದ್ದನ್ನು ನೀವು ಹೇಳುವುದಿಲ್ಲ. ನಾವು 11%ನಿಂದ 6%ಗೆ ಇಳಿಸಿದ್ದನ್ನೂ ಸಹ ನೀವು ಹೇಳುವುದಿಲ್ಲ. ನಾವು ಹೆಚ್ಚು ಕಡಿಮೆ 5% ಸಬ್ಸಿಡಿ ಕೊಡತಕ್ಕದ್ದು ಮಾಡಿದ್ದೆವು. ನೀವು ಸಬ್ಸಿಡಿ ಕೊಡತಕ್ಕದ್ದು ಎಷ್ಟಾಯಿತು ಎಂದರೆ, 7%ರಿಂದ 3%ಗೆ, ಎಂದರೆ ಅದು 4% ಆಯಿತು. ಇನ್ನೂ 1% ಕಡಿಮೆಯೇ ಆಯಿತು. ನೀವು ಲಾಭದಲ್ಲೇ ಇದ್ದೀರಿ ಹೊರತಾಗಿ ಲುಕ್ಸಾನ್‌ನಲ್ಲಿ ಇಲ್ಲ. 'ಘೀ ಕಹಾ ಗಯಾ ಎಂದರೆ ಕಿಚಡಿ ಮೇ ಗಯಾ' ಎಂಬಂತೆ ಏನಿದ್ದರೂ ನಿಮಗೆ ಲಾಭವೇ! 'ತುಪ್ಪ ಎಲ್ಲಿ ಬಿತ್ತು ಎಂದರೆ ಕಿಚಡಿಯಲ್ಲಿ ಬಿತ್ತು' ಎನ್ನುವಂತೆ ನಿಮಗೆ ಕೇಂದ್ರ ಸರ್ಕಾರದಿಂದ ಬಂದಿದ್ದೆಲ್ಲಾ ಲಾಭವೇ ಆಗುತ್ತಿದೆ. ಆದರೆ ನೀವು ಅದನ್ನು ಒಪ್ಪಿಕೊಳ್ಳಲಿಕ್ಕೆ ತಯಾರಿಲ್ಲ. ಏಕೆಂದರೆ, ಅದನ್ನು ಒಪ್ಪಿಕೊಂಡರೆ, 'ನನ್ನ ಸರ್ಕಾರಕ್ಕೆ, ನನಗೆ ಬರತಕ್ಕಂಥ credit ತಪ್ಪಿ ಅದು UPA ಸರ್ಕಾರಕ್ಕೆ ಹೋಗುತ್ತದೆ' ಎಂದು ನಿಮಗೆ ಚಿಂತೆಯಾಗಿದೆ. ದಯವಿಟ್ಟು ಯಾರ್‍ಯಾರು ಏನೇನು ಸಹಾಯ ಮಾಡುತ್ತಾರೋ, ಅದನ್ನು ಸ್ವಲ್ಪ ನೆನಪಿಸಿಕೊಳ್ಳಬೇಕು. ಅದನ್ನು ಬಿಡಬಾರದು. ಅದಲ್ಲದೆ ಇವತ್ತು ನಿಮಗೆ 'Distressed Districts' ಅಡಿಯಲ್ಲಿ ಕೂಡ 626 ಕೋಟಿ ರೂ.ಗಳಷ್ಟು ಸಾಲದ ಮೇಲಿನ ಬಡ್ಡಿ ಮನ್ನಾ ಮಡಲಾಗಿದೆ. ಈ

ಪೈಕಿ ಸುಮಾರು 313 ಕೋಟಿ ರೂ.ಗಳಷ್ಟು ಹಣವನ್ನು ಕೇಂದ್ರ ಸರ್ಕಾರ ತುಂಬಿಸಿಕೊಟ್ಟಿದೆ. ಅದರ ಜೊತೆಯಲ್ಲಿ ಈಗ ವಾಣಿಜ್ಯ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, RRB ಇದೆಲ್ಲದರ ಅಂಕಿ ಸಂಖ್ಯೆಗಳು ನಿಮ್ಮ ಬಳಿ ಇವೆ. ಅದನ್ನು ನಾನೇನೂ ಇಲ್ಲಿ ಹೇಳಬೇಕಾಗಿಲ್ಲ. ಅದರಿಂದಲೂ ಕೂಡ ತಾವು ಲಾಭವನ್ನು ಪಡೆದುಕೊಂಡಿದ್ದೀರಿ. ಇದರ ಜೊತೆಗೆ NREGPನಲ್ಲಿ ಎಷ್ಟು ತಮ್ಮಿಂದ ನಿರ್ಲಕ್ಷ್ಯವಾಗಿದೆ ಎಂದರೆ,

> "Karnataka Government has spent only Rs.250 Crores as against Rs.1100 crores allotted under National Rural Employment Guarantee Scheme Act. This was revealed by none other than the Development Commissioner………"

250 ಕೋಟಿ ರೂಗಳು ಮಾತ್ರ ಖರ್ಚು ಮಾಡಿದ್ದೀರಿ. ನಿಮಗೆ ಅಲೋಕೇಷನ್ ಆಗಿದ್ದು 1100 ಕೋಟಿ ರೂ.ಗಳು. ಇದರ ಬಗ್ಗೆ ಏಕೆ ಕಾಳಜಿ ವಹಿಸಿಲ್ಲ? ಇನ್ನುಳಿದ 800 ಕೋಟಿ ರೂ.ಗಳನ್ನು ಕೇವಲ ಒಂದು ತಿಂಗಳಿನಲ್ಲಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಇದರ ಕಡೆಗೆ ನಿಮ್ಮ in-charge ಮಂತ್ರಿಗಳಾಗಲಿ, ನಿವಾಗಲಿ ಏಕೆ ಕಾಳಜಿ ವಹಿಸಲಿಲ್ಲ? ಏಕೆ ಇದರ ಬಗ್ಗೆ ಚಿಂತನೆ ಮಾಡಲಿಲ್ಲ? ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಸ್ಪಷ್ಟವಾಗಿ ಕೇಳುತ್ತೇನೆ. ಒಂದು ಕಡೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತಿದೆ ಎಂದು ಹೇಳುತ್ತೀರಿ. ಆದರೆ ಮತ್ತೊಂದು ಕಡೆ ಕೊಟ್ಟಿದ್ದ ದುಡ್ಡನ್ನೇ ಉಪಯೋಗ ಮಾಡುತ್ತಿಲ್ಲ. ಅದರ ಬಗ್ಗೆ ನೀವು ನಿರ್ವಹಣೆಯನ್ನೇ ಮಾಡುವುದಿಲ್ಲ. ಅದರ ಬಗ್ಗೆ ಕಾಳಜಿ ವಹಿಸುವುದಿಲ್ಲ. ಆಮೇಲೆ, ಹೆಚ್ಚು ಕಡಿಮೆ ನಿಮ್ಮ ಕೊರತೆ ಎಷ್ಟು ಎಂಬುದನ್ನು ನೀವೇ ಒಪ್ಪಿಕೊಂಡಿದ್ದೀರಿ. ಆದರೆ ನೀವು ಈ ಬಜೆಟ್‌ನಲ್ಲಿ ಹೇಳಿದಂತಹ ಕೊರತೆ ಏನಿದೆ, ಬಹುಶಃ ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ಇದು 9 ಸಾವಿರ ಅಥವಾ 10 ಸಾವಿರ ಕೋಟಿ ರೂ.ಗಳವರೆಗೆ ಹೋಗುತ್ತದೆಂದು ನಾನು ಅಂದಾಜು ಮಾಡುತ್ತೇನೆ. ನಿಮ್ಮ ಮಿಡ್‌ಟರ್ಮ್ ರೆವ್ಯೂನಲ್ಲಿ ಸ್ವಲ್ಪ ಹೇಳಿದ್ದೀರಿ. ಆದರೆ ಮಾರ್ಚ್ ಕೊನೆಯವರೆಗೆ ಖಂಡಿತವಾಗಿ 9–10 ಸಾವಿರ ಕೋಟಿ ರೂಪಾಯಿಗಳ ಖೋತ ಬರುತ್ತದೆ ಎನ್ನುವುದನ್ನು ಹೇಳುತ್ತೇನೆ. ಮತ್ತೆ ನಿಮ್ಮ ಪ್ಲಾನ್ ಔಟ್‌ಲೇ ನಲ್ಲಿ 50% ಗಿಂತ ಹೆಚ್ಚು ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನುವುದು ನಿಮ್ಮ ಕೆಲಸ, ಅಂಕಿಅಂಶದಿಂದ, ಹಣ ಬಿಡುಗಡೆಯಿಂದ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮತ್ತೆ ನಾನು ಈಗಾಗಲೆ ಹೇಳಿದಂತೆ, ಪ್ರತಿವರ್ಷ, ಈಗ 2006–07ರಲ್ಲಿ 18,308 ಕೋಟಿ ರೂಪಾಯಿಗಳ plan outlay ಇದೆ, 2007–

08ರಲ್ಲಿ 17,226 ಕೋಟಿ 2008-9ರಲ್ಲಿ 25,953 ಕೋಟಿ, ಮರು ಫಿಕ್ಸ್ ಮಾಡಿದ್ದು 26,188 ಕೋಟಿ. ಈಗ ತಾವು ಫಿಕ್ಸ್ ಮಾಡಿದ್ದು 29,500 ಕೋಟಿ. ತಾವೇ ಯೋಚನೆ ಮಾಡಿ, 26,188 ಕೋಟಿಯಲ್ಲಿ ಇಲ್ಲಿಯವರೆಗೆ ನೀವು ಖರ್ಚು ಮಾಡಿದ್ದು ಜನವರಿ ಕೊನೆಯವರೆಗೆ ಕೇವಲ 9,500 ಕೋಟಿ. Is it possible? ಉಳಿದ 16,000 ಕೋಟಿ ರೂಪಾಯಿಗಳನ್ನು ಈ ಎರಡು ತಿಂಗಳಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವೇ? ತಾವೆ ಹೇಳಿ. ಇಲ್ಲವೆಂದರೆ, ನಮ್ಮದು ತಪ್ಪಾಗಿದೆ, ಇದನ್ನು ಜನರಿಗೆ ತೋರಿಸುವುದಕ್ಕೆ ಮಾಡಿದ್ದು, ದಯವಿಟ್ಟು ಕ್ಷಮಿಸಿ ಎಂದು ಜನರ ಕ್ಷಮೆಯನ್ನಾದರೂ ಕೇಳಿ. ಆದರೆ ಇಷ್ಟೊಂದು ಇಟ್ಟುಕೊಂಡರೂ ಕೂಡ ಅದರ ಬಗ್ಗೆ ಕಾಳಜಿಯಿಲ್ಲ; ಹೇಳುವುದನ್ನು ಮಾತ್ರ ಬಿಡುವುದಿಲ್ಲ. ಅದಕ್ಕಾಗಿ ಇದೆಲ್ಲವನ್ನೂ ಕೂಡ ನಾವು ನೋಡಿದಾಗ ಖಂಡಿತವಾಗಿ ಈ ಸರ್ಕಾರ ಒಳ್ಳೆಯ ಬಜೆಟ್ ನೀಡುವಲ್ಲಿ ವಿಫಲವಾಗಿದೆ. ನಾನು ಕೆಲವು ಪ್ರಮುಖವಾದ ವಿಚಾರಗಳನ್ನು ಹೇಳುತ್ತೇನೆ, ಒಟ್ಟು 16,000 ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡುತ್ತಾರೆನ್ನುವುದು ಬೇರೆ, ನಾನ್ ಪ್ಲಾನ್‌ನಲ್ಲಿಟ್ಟಿದ್ದನ್ನು ಹೆಚ್ಚುಕಡಿಮೆ ಮಾಡಬಹುದು, ಅದಕ್ಕೂ ಹಣದ ಕೊರತೆ ಇದೆ. ನೀವು ಜನರಲ್ ಎಜ್ಯುಕೇಷನ್ ಅನ್ನೇ ತೆಗೆದುಕೊಳ್ಳಿ, ಅದರಲ್ಲಿ 1790 ಕೋಟಿಯಲ್ಲಿ ನೀವು ಖರ್ಚು ಮಾಡಿದ್ದು ಜನವರಿ ಕೊನೆಯವರೆಗೆ 1035 ಕೋಟಿ. ಇನ್ನು ತಾವು 700 ಕೋಟಿ ಖರ್ಚು ಮಾಡಬೇಕು. ಅದೇ ರೀತಿಯಾಗಿ ಇನ್ನು ಮೆಡಿಕಲ್ ಪಬ್ಲಿಕ್ ಹೆಲ್ತ್‌ನಲ್ಲಿ 508 ಕೋಟಿಯಲ್ಲಿ ಇಲ್ಲಿವರೆಗೆ ಖಚಾಗಿದ್ದು 285 ಕೋಟಿ. ವಾಟರ್ ಸಪ್ಲೈ ಅಂಡ್ ಸ್ಯಾನಿಟೇಷನ್‌ನಲ್ಲಿ 307 ಕೋಟಿ ಗುರಿಯಲ್ಲಿ ಖರ್ಚಾಗಿದ್ದು 92 ಕೋಟಿ. ಬೆಳೆಗಳ ರಕ್ಷಣೆಯಲ್ಲಿ 1218 ಕೋಟಿ ಗುರಿಯಲ್ಲಿ 210 ಕೋಟಿ ಖರ್ಚಾಗಿದ್ದು. ಆಮೇಲೆ ರೂರಲ್ ಡೆವಲಪ್‌ಮೆಂಟ್‌ನಲ್ಲಿ 913 ಕೋಟಿಯಲ್ಲಿ ಇಲ್ಲಿಯವರೆಗೆ ಖರ್ಚಾಗಿದ್ದು 360 ಕೋಟಿ. Special Programme for Rural Developmentನಲ್ಲಿ 132 ಕೋಟಿ ಗುರಿಯಲ್ಲಿ ಖರ್ಚಾಗಿದ್ದು 25 ಕೋಟಿ. Rural Employmentನಲ್ಲಿ ಗುರಿ ಇದ್ದದ್ದು 239 ಕೋಟಿ, ಆದರೆ ಖರ್ಚಾಗಿದ್ದು 58 ಕೋಟಿ. ಆಮೇಲೆ MLA Local Area Developmentನಲ್ಲಿ ಗುರಿ 250 ಕೋಟಿಯಲ್ಲಿ 190 ಖರ್ಚಾಗಿದ್ದು. ಇದರಲ್ಲಿ ಎಂಎಲ್‌ಎಗಳಿಗೆ ತಾವು ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿ ಕೇವಲ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಉಳಿದ ಒಂದು ಕೋಟಿ ರೂಪಾಯಿಗಳ ಕೆಲಸವನ್ನು ನಾವು ಮಾಡಬೇಕಾದರೆ, ಸರ್ಕಾರದಿಂದ ಅಪ್ರೂವ್ ಮಾಡಿ ಹಣ ಬಿಡುಗಡೆ ಮಾಡಿದರೆ ನಾವು ಮಾಡುತ್ತೇವೆ ಇಲ್ಲವೆಂದರೆ ಇಲ್ಲವೆಂದು ಡೆಪ್ಯೂಟಿ ಕಮಿಷನರ್ ಹೇಳುತ್ತಾರೆ. ಆದರೆ ನೀವು ಮಾತ್ರ, ಒಂದೂವರೆ

ಕೋಟಿವರೆಗೆ ಕೆಲಸ ಮಾಡಿ ಆಮೇಲೆ ನಾನು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದಿರಿ, ಹಣ ಎಲ್ಲಿದೆ ಸ್ವಾಮಿ? ಏತಕ್ಕೆ ಬಿಡುಗಡೆ ಮಾಡಿಲ್ಲ. ಇದು ಸಾಮಾನ್ಯ Fund. ನೀವು ಈ ಸದನದಲ್ಲಿ ಘೋಷಣೆ ಮಾಡಿದ್ದೀರಿ, ಇದಕ್ಕೆ ತಾವು ಬದ್ಧರಿಲ್ಲವೆಂದರೆ ನಾವೇನು ಹೇಳಬೇಕು? ಯಾವ ಭಾಷೆಯಲ್ಲಿ ಹೇಳಬೇಕು? ಹೇಳಿ. ಆಮೇಲೆ Roads and Bridges, Rs.627 Crores target. ಆದರೆ ಖರ್ಚಾಗಿದ್ದು 387 ಕೋಟಿ. Housing, Rs.610 Crores target. ನೀವು ಖರ್ಚು ಮಾಡಿದ್ದು 392 ಕೋಟಿ. ಆಮೇಲೆ Urban Developmentನಲ್ಲಿ target was fixed at Rs.1,394 Crores, but only Rs.140 Crores already spent. ಮತ್ತೆ ಏಕೆ 15%, 20%, 5% ಅಲೋಕೇಷನ್ ಮಾಡಬೇಕು? ಇದು ನಿಮ್ಮ ಫಿಗರ್ಸ್. ಆಮೇಲೆ Special Welfare Plan, ಇದರಲ್ಲಿ 1013 ಕೋಟಿ ಗುರಿಯಲ್ಲಿ ಖರ್ಚಾಗಿದ್ದು 454 ಕೋಟಿ, ಕೃಷಿಯಲ್ಲಿ 2499 ಕೋಟಿ ಗುರಿಯಲ್ಲಿ 550 ಕೋಟಿ ಖರ್ಚಾಗಿದ್ದು. ಇನ್ನು ಹೇಳುತ್ತಾ ಹೋದರೆ ಸಾಕಷ್ಟು ಇದೆ. ಅನ್ನ ಮಾಡುವಾಗ ಅನ್ನ ಬೆಂದಿದೆಯೋ ಇಲ್ಲವೋ ಎಂದು ನೋಡಬೇಕಾದರೆ ಸ್ವಲ್ಪ ನೋಡುತ್ತಾರೆ. ನಾನು ಇಷ್ಟು ಉದಾಹರಣೆಗಳನ್ನು ಕೊಟ್ಟಿದ್ದೇನೆ. ಇದನ್ನು ನೋಡಿ, ಕೊನೆಯಪಕ್ಷ ಈಗಲಾದರೂ ನಿಮಗೆ ಮನವರಿಕೆಯಾಗಿರಬೇಕು. ನಾನು ನಿಜವಾಗಿಯೂ ಕಳೆದ ಬಜೆಟ್‌ನಲ್ಲಿ ಅನ್ಯಾಯ ಮಾಡಿದ್ದೇನೆ, ಇರುವ ಹಣವನ್ನು ಖರ್ಚು ಮಾಡಿಲ್ಲ, ರಾಜ್ಯದ ಜನತೆಗೆ ತಪ್ಪಾಗಿದೆ, ನಿಜವಾಗಿಯೂ ನೀವು ಜನರನ್ನು ತಪ್ಪುದಾರಿಗೆ ಎಳೆದಿದ್ದಕ್ಕೆ ಅವರ ಕ್ಷಮೆಯನ್ನು ಕೇಳಬೇಕು. ಅದನ್ನು ಬಿಟ್ಟು, ನಿಮಗೆ ಗೊತ್ತಲ್ಲ ಇಲ್ಲಿ ಬರುವವರು ಅರವತ್ತು ವರ್ಷದ ಹಿಂದೆ ಹೋಗುತ್ತಾರೆ. ಅದೇ ರೀತಿಯಾಗಿ ಏಪ್ರಿಲ್, ಮೇ, ಜೂನ್, ಜುಲೈವೈಸ್ ಅದನ್ನು ಹೇಳುವುದಕ್ಕೆ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, ಈಗಾಗಲೆ ಸಾಕಷ್ಟು ಸಮಯವಾಗಿದೆ, ಒಂದು ಮಾತನ್ನು ಇವತ್ತು ನಿಮ್ಮ ಮುಂದೆ ಹೇಳುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಈ ರೀತಿಯಾಗಿ ಬೇಕಾಬಿಟ್ಟಿಯಾಗಿ ಹಣವನ್ನು, ಜನರ ಭಾವನೆಗಳನ್ನು ಕೆರಳಿಸಿ, ಅವರ emotionಅನ್ನು ಭಾವನಾತ್ಮಕತೆಯನ್ನು exploit ಮಾಡುವುದಕ್ಕೆ ಹಣ ಕೊಟ್ಟು, ಜಾತಿವಾದ, ಒಳಪಂಗಡಕ್ಕೆ ಆಸ್ಪದ ಕೊಟ್ಟು ಈ ಸಮಾಜವನ್ನು ಒಡೆಸಬೇಡಿ. ಏಕೆಂದರೆ, ಈ ಸಮಾಜವನನು ಕಟ್ಟುವುದೇ ಕಷ್ಟ, ಈ ದೇಶದಲ್ಲಿ ಐಕ್ಯತೆಯನ್ನು ಉಳಿಸಿಕೊಂಡು ಬರುವುದೇ ದೊಡ್ಡ ಸಮಸ್ಯೆ, ಅಂಥದರಲ್ಲಿ ಜಾತಿ ಜಾತಿಗಳನ್ನು ಒಡೆಯಿಸಿ, ದೇವರಗಳಲ್ಲೂ discrimination ಮಾಡುವುದು ಬೇಡ. ಯಾವುದಾದರು ಈ ದುರ್ಗಮ್ಮ, ಕಾಳಮ್ಮ, ಪೋಚಮ್ಮ ಇಂಥ ದೇವರುಗಳಿಗೆ ಕೋಟಿಗಟ್ಟಲೆ ದುಡ್ಡು ಬಂದಿದ್ದನ್ನು ನಿಮ್ಮ ಪಟ್ಟಿಯಲ್ಲಿ ನಾನಂತು ನೋಡಲೇ ಇಲ್ಲ. ಯಾವುದು ಬಂದಿದೆ ಎಂದರೆ, ಆ ಮಠ, ಈ ಮಠ, ಇಲ್ಲಿ ಹೋಯಿತು, ಅಲ್ಲಿ

ಹೋಯಿತು. ಅಂದರೆ ಏನರ್ಥ? ನಾವು ಇದನ್ನು ಮಾಡುವುದರಿಂದ ಜನರು appreciate ಮಾಡುತ್ತಾರೆಂದು ತಿಳಿದುಕೊಳ್ಳಬೇಡಿ. ತಾತ್ಪೂರ್ತಿಕವಾಗಿ ಇದನ್ನು ಹೊಗಳಬಹುದು. ಮತ್ತು ದೇಶದಲ್ಲಿ ಹೀಗೆ ಇದೆ, ಈ ಸಮಾಜ ಹೀಗೆ ಇದೆ, ಎಲ್ಲಿಯವರೆಗೆ ನಿಮಗೆ ಅಧಿಕಾರವಿರುತ್ತದೆಯೋ ಅಲ್ಲಿಯವರೆಗೆ ನಿಮ್ಮನ್ನು ಹೊಗಳುತ್ತಾರೆ. ಎಂದು ನೀವು ಅಧಿಕಾರವನ್ನು ಬಿಟ್ಟುಹೋಗುತ್ತೀರೋ ನಿಮ್ಮ ಹಿಂದೆ ಒಬ್ಬರೂ ಬರುವುದಿಲ್ಲ. ಈ ರಾಜ್ಯಕ್ಕೆ ದುಡಿದಂಥ ಹನುಮಂತಯ್ಯನವರ ಹಿಂದೆ ಯಾರೂ ಹೋಗಲಿಲ್ಲ, ಪಾಪ ಅವರ ಮನೆಯ ಮುಂದೆ ನೊಣ ಹೊಡೆದುಕೊಂಡು ಕುಳಿತಿದ್ದರೂ ಯಾರು ನೋಡುತ್ತಿರಲಿಲ್ಲ. ನಿಜಲಿಂಗಪ್ಪನವರು ಬಸ್ ನಲ್ಲಿ ಬರುತ್ತಿದ್ದರು, ಯಾರೂ ರಿಸೀವ್ ಮಾಡುವುದಕ್ಕೆ ಇರುತ್ತಿರಲಿಲ್ಲ, ನೀವು ಯಾವ ಮೂಲೆಗೆ ಹೋಗಬೇಕು? ನಾವು ಯಾವ ಮೂಲೆಯಲ್ಲಿರಬೇಕು? ಅದಕ್ಕೆ ದಯವಿಟ್ಟು ಈ ರಾಜ್ಯಕ್ಕೆ ಒಳ್ಳೆಯದಾಗುವುದನ್ನು ನೀವು ನಾವು ಮಾಡೋಣ. ಅದನ್ನು ಬಿಟ್ಟು ನನಗೆ ಖುಷಿ ಬಂದಂತೆ, ರಾಜನಂತೆ, ಟೋಲ್ ಕೊಟ್ಟಂತೆ, ನಿನಗೆ 1 ಕೋಟಿ, ನಿನಗೆ 2 ಕೋಟಿ ಎಂದು ಮಾಡಿದರೆ, ನಿಜವಾಗಲೂ ಈ ರಾಜ್ಯದ ಜನತೆಯ ಬೆವರಿನ ಹಣವನ್ನು ಏನು ನಿಮಗೆ ತೆರಿಗೆಯ ರೂಪದಲ್ಲಿ ಕೊಡುತ್ತಾರೋ, ಅದನ್ನು ನಾವು ದುರುಪಯೋಗ ಮಾಡುತ್ತಿದ್ದೇವೆ, ಕೇವಲ ನಮಗೆ ಅಧಿಕಾರ ಸಿಕ್ಕಿದೆ ಎಂದು ತಿಳಿದುಕೊಂಡು ಆ ಜನರ ಹಣವನ್ನು ಈ ರೀತಿಯಾಗಿ ಪೋಲು ಮಾಡಿದರೆ, ಬಹುಶಃ ಕೆಲವು ಜನರು ನಿಮ್ಮನ್ನು ಮೆಚ್ಚಬಹುದು, ದೇವರಂತೂ ಮೆಚ್ಚುವುದಿಲ್ಲ. ಏಕೆಂದರೆ, ಅವರನ್ನೆಲ್ಲಾ ಸರಿಸಮಾನವಾಗಿ ನೋಡುವವನು ದೇವರು ಹೊರತಾಗಿ, ಈ ರೀತಿ ಅಸಮಾನತೆಯಿಂದ ಕೂಡಿರುವ ಸಮಾಜಕ್ಕೆ, ಇನ್ನೂ ಅಸಮಾನತೆಯನ್ನು ಮಾಡಿ ಎಂದು ಯಾರೂ ಹೇಳುವುದಿಲ್ಲ. ಅದಕ್ಕೆ ಇವರ ಇವತ್ತಿನ ಬಜೆಟ್ ನಲ್ಲಿ ಏನೇನು ಇಲ್ಲ, ಇದೊಂದು Hidden Agendaನೇ.

2-00 PM

ನೀವು ನಿಮ್ಮ ಪಾರ್ಟಿಗೆ ಏನು ಬೇಕೋ ಅದನ್ನೇ ಮಾಡಿಕೊಂಡು ಬರುತ್ತಿದ್ದೀರಿ. ಇವೆಲ್ಲಾ ನೋಡಿದ ಮೇಲೆ ಇದು ಹಿಡನ್ ಅಜೆಂಡಾ ಇದೆ, ಅದರ ಪ್ರಕಾರ ಅವರು ಹೋಗುತ್ತಿದ್ದಾರೆ ಎಂದು ಅನ್ನಿಸುತ್ತಿದೆ. ಆದರೆ ನೀವು ಒಬ್ಬ ರೈತ ಕುಟುಂಬದಿಂದ ಬಂದವರು. ನೀವೇನು ಅರ್ಚಕರಲ್ಲ. ರೈತ ಕುಟುಂಬ ಎಂದು ಹೇಳುವುದು, ರೈತರಿಗೇ ಮೋಸ ಮಾಡುವುದು. ಅಧ್ಯಕ್ಷರೆ, ನೀವೂ ಮಾತನಾಡುವುದಿಲ್ಲ. ನಿಮ್ಮ ಪಾರ್ಟಿಯಲ್ಲಿ ಎಲ್ಲಾ ಜನ ಸ್ವಲ್ಪ ನೋಡಬೇಕು. ಕಳೆದ ಬಾರಿ ಬಜೆಟ್‌ನಲ್ಲಿ ಆದ ಖೋತಾವನ್ನು ತುಂಬಿಕೊಳ್ಳವಂತಹ ಪ್ರಯತ್ನ ಕೂಡ ಮಾಡಿಲ್ಲ. ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ತರಲಿಲ್ಲ, ಆರ್ಥಿಕ ಶಿಸ್ತು ಕಾಪಾಡಲಿಲ್ಲ, ಸಂಪನ್ಮೂಲ ಸಂಗ್ರಹ

ಮಾಡುವುದರಲ್ಲಿ ವಿಫಲರಾಗಿದ್ದಾರೆ. ದಿಕ್ಸೂಚಿ ಇಲ್ಲದೆ ಇವರು ಬಜೆಟನ್ನು ಮಂಡಿಸಿದ್ದಾರೆ. ಸಾಲದ ಬಗ್ಗೆ ಕೂಡ ಗಮನ ಕೊಟ್ಟಿಲ್ಲ. ಉಳಿದ ಯಾವುದೇ ಅಭಿವೃದ್ಧಿ ಪರ ಈ ಬಜೆಟ್ ಇಲ್ಲ. ಅಭಿವೃದ್ಧಿಗಾಗಿ ಇವರು ತಮ್ಮ ಪ್ರಯತ್ನ ಹೋರಾಟ ನಡೆಸಿಲ್ಲ, ದಿಟ್ಟವಾದ ಹೆಜ್ಜೆ ಕೂಡ ಇಟ್ಟಿಲ್ಲ. ಏಕೆಂದರೆ ಕೆಲವು ಕೋರ್ ಸೆಕ್ಟಾರ್‌ಗಳು ಇರುತ್ತವೆ. Power, Roads ಇಂಥವೆಲ್ಲಕ್ಕೂ ಕೂಡ ಹಣ ಕೊಡಬೇಕಾದರೆ ಧೈರ್ಯ ಬೇಕು. ಬಾಕಿವುದಕ್ಕೆಲ್ಲ ಖುಷಿ ಪಡಿಸುವುದಕ್ಕೆ ಏನು ಬೇಕಾದರೂ ಮಾಡಿದರೆ ನಡೆಯುತ್ತದೆ. ಆದರೆ ನಿಜವಾಗಿಯೂ ಜನರ ಅಭಿವೃದ್ಧಿ ಆಗಬೇಕು, ರಾಜ್ಯದ ಅಭಿವೃದ್ಧಿ ಆಗಬೇಕು, ರಾಜ್ಯದ ಏಳಿಗೆ ಆಗಬೇಕು, ಆರ್ಥಿಕವಾಗಿ ಶಕ್ತಿ ಶಾಲಿ ಆಗಬೇಕೆಂದರೆ, ಇವರು ಆ ಮೂಲಭೂತ ಸೌಕರ್ಯವನ್ನು ಕೊಡುವುದರ ಕಡೆ ಗಮನ ಹರಿಸಬೇಕು. ಇವರ ಕಾಲದಲ್ಲಿ ಬಡವರಿಗೆ ಒಂದು ಮನೆ ಕೊಡಲಿಲ್ಲ, ಹೌಸಿಂಗ್ ಬೋರ್ಡ್ ಮನೆಗಳು ಇಲ್ಲ, ಆಶ್ರಯ ಮನೆಗಳು ಇಲ್ಲ, ಈಗ ಏನೋ ಇಂದಿರಾ ಅವಾಸ್‌ದಲ್ಲಿ ಇಷ್ಟು ಮನೆಗಳು, ಅಂಬೇಡ್ಕರ್ ಯೋಜನೆಯಲ್ಲಿ ಇಷ್ಟು ಮನೆಗಳು ಎಂದು ಘೋಷಣೆ ಮಾಡಿದ್ದಾರೆ. ಆದರೆ ಇವರು 20 ತಿಂಗಳು ಅರ್ಥಸಚಿವರಾಗಿದ್ದರು, 9 ತಿಂಗಳು ಮುಖ್ಯ ಮಂತ್ರಿಗಳಾಗಿದ್ದಾರೆ. ಎಷ್ಟು ಮನೆ ಕಟ್ಟಿಸಿ ಕೊಟ್ಟಿದ್ದಾರೆ? ಬಡವರಿಗೆ ಮನೆ ಇಲ್ಲ; ಅದರ ಬಗ್ಗೆ ಚಿಂತೆ ಇಲ್ಲ. ಇಂತಹ ಒಂದು ಕೆಟ್ಟ ಬಜೆಟ್ ಇವತ್ತು ಮಂಡಿಸಿದ್ದಾರೆ, ಇದು ಎಲೆಕ್ಷನ್ ಸ್ಟಂಟ್, ಹಿಡನ್ ಅಜೆಂಡಾವನ್ನು ಹೊರಗಡೆ ತರುವುದಕ್ಕೋಸ್ಕರ, ಪಾರ್ಲಿಮೆಂಟ್ ಚುನಾವಣೆಗೋಸ್ಕರ ಈ ಬಜೆಟನ್ನು ಇವತ್ತು ಮಂಡಿಸಿದ್ದಾರೆ. ಇದನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರೆ, ತಾವು ತಾಳ್ಮೆಯಿಂದ ಕೇಳಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಕೊನೇ ಪಕ್ಷ ಇಲ್ಲಿ ಇಲ್ಲವೆಂದರೂ, ಖಾಸಗಿಯಾಗಿ ಭೇಟಿಯಾದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಿವಿ ಮಾತನ್ನು ಹೇಳಿ, ಸರಿಪಡಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು: ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2.00 ಗಂಟೆ ಐದು ನಿಮಿಷಕ್ಕೆ ಮುಕ್ತಾಯವಾಗಿ ಪುನಃ 3.00 ಗಂಟೆಗೆ ಸೇರುವಂತೆ ನಿರ್ಧರಿಸಿತು.)

3-00 PM

(ಭೋಜನ ವಿರಾಮದ ನಂತರ ಸದನದ ಕಲಾಪವು ಮತ್ತೆ ಮಧ್ಯಾಹ್ನ 3.13ಕ್ಕೆ ಪ್ರಾರಂಭವಾಯಿತು, ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷರು: ಈಗ ಬಜೆಟ್ ಮೇಲೆ ಮುಂದುವರೆದ ಚರ್ಚೆ ಮಾನ್ಯ ಹೆಚ್.ಕೆ.ಕುಮಾರ ಸ್ವಾಮಿಯವರೆ, ಪ್ರಾರಂಭ ಮಾಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ(ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೆ, ಆರ್ಥಿಕ ಸಚಿವರೂ ಆದ ಮಾನ್ಯ ಮುಖ್ಯಮಂತ್ರಿಗಳು 2009-10ನೇ ಸಾಲಿನ ಬಜೆಟ್‌ನ್ನು ಏನು ಮಂಡಿಸಿದ್ದಾರೆ, ಇವತ್ತು ಅನೇಕ ಇಲಾಖೆಗಳಿಗೆ ಅನುದಾನವನ್ನು ಮಂಜೂರು ಮಾಡುವುದಕ್ಕೆ ಆದಾಯ ಮತ್ತು ವೆಚ್ಚದ ಬಾಬ್ತು, ಮತ್ತು ಅನೇಕ ವಿಷಯಗಳನ್ನು ಈ ನಿಟ್ಟಿನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಕರ್ನಾಟಕದ ಜನತೆ ನಮಗೆ ಸ್ಥಿರ ಸರ್ಕಾರವನ್ನು ಕೊಟ್ಟಿದ್ದಾರೆ; ಅದರ ಮೂಲಕ ಆಡಳಿತವನ್ನು ನಾವು ನಡೆಸುತ್ತೇವೆನ್ನುವ ಮಾತನ್ನು ಕೂಡ ಆಡಿದ್ದಾರೆ. ಈಗಾಗಲೆ ನಾವು ಕೇಂದ್ರ ಮತ್ತು ರಾಜ್ಯದಲ್ಲಿ ಅನೇಕ ಸ್ಥಿರ ಸರ್ಕಾರಗಳನ್ನು ನೋಡಿದ್ದೇವೆ. ಸ್ಥಿರ ಸರ್ಕಾರ ಇದ್ದ ಮಾತ್ರಕ್ಕೆ ಪ್ರಗತಿ ಚೆನ್ನಾಗಿ ಆಗುತ್ತದೆನ್ನುವ ಮಾತು ಅಷ್ಟು ಸತ್ಯವಲ್ಲವೆನ್ನುವುದನ್ನು ನಾವು ನೋಡಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಬಹಳಷ್ಟು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ಆಡಳಿತವನ್ನು ಮಾಡಿದೆ. ಮೂರನೆ ಎರಡರಷ್ಟು ಲೋಕಸಭಾ ಸದಸ್ಯರನ್ನು ಹೊಂದಿದಂತಹ ಆವತ್ತಿನ ದಿನಗಳಲ್ಲಿ ಸ್ಥಿರ ಸರ್ಕಾರದಿಂದ ರಾಷ್ಟ್ರದ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಆಗಲಿಲ್ಲ. ರಾಜ್ಯದಲ್ಲಿ ಕೂಡ ಅಂತಹ ಪ್ರಸಂಗಗಳನ್ನು ನಾವು ನೋಡಿದ್ದೇವೆ. ಆ ನಿಟ್ಟಿನಲ್ಲಿ ರಾಜ್ಯದಲ್ಲಿ ಸರ್ವತೋಮುಖ ಅಭಿವೃದ್ಧಿಯಾಗಬೇಕು ಎಂದರೆ ಸ್ಥಿರ ಸರ್ಕಾರಕ್ಕಿಂತ ಹೆಚ್ಚಾಗಿ ರಾಜಕೀಯ ಇಚ್ಛಾಶಕ್ತಿ ಬಹಳ ಮುಖ್ಯ ಎಂದು ನಾನು ಭಾವಿಸಿದ್ದೇನೆ. ಅದೇ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುತ್ತಾ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ಜನಸ್ಪಂದನ ಕಾರ್ಯಕ್ರಮದ ಬಗ್ಗೆ ಅವರು ತುಂಬಾ ಒತ್ತು ಕೊಟ್ಟು ಮಾತನಾಡಿದ್ದಾರೆ. ಜನಸ್ಪಂದನ ಕಾರ್ಯಕ್ರಮ ತುಂಬಾ ಅತ್ಯುತ್ತಮವಾದಂತಹ ಕಾರ್ಯಕ್ರಮ. ಪ್ರತಿ ಶನಿವಾರ ಮಾಡುತ್ತಿರುವಂತಹ ಕಾರ್ಯಕ್ರಮ. ಅದರಿಂದ ಇವತ್ತು ವಾರದಲ್ಲಿ ಕೇವಲ ಐದು ದಿವಸ ಕಛೇರಿ ಕೆಲಸ ಆಗಬೇಕು ಎನ್ನುವ ರೀತಿಯಲ್ಲಿ ಆಗುತ್ತಿದೆ. ಪ್ರತಿ ಶನಿವಾರ ಈ ಜನಸ್ಪಂದನ ಕಾರ್ಯಕ್ರಮವನ್ನು ನಾವು ಹೋಬಳಿ ಮಟ್ಟದಲ್ಲಿ ಏರ್ಪಡಿಸುವುದರಿಂದ ತಹಸೀಲ್ದಾರ್‌ರವರಿಂದ ಹಿಡಿದು ಎಲ್ಲಾ ಇಲಾಖೆ ಅಧಿಕಾರಿಗಳು ಕೂಡ ಹೋಬಳಿಗೆ ಬರಬೇಕು. ಸರ್ಕಾರದ ಎಲ್ಲಾ ಕಛೇರಿಗಳ ಎಲ್ಲಾ ಸಿಬ್ಬಂದಿ ಕೂಡ ಅದರಲ್ಲಿ ಭಾಗಿಯಾಗಿರುತ್ತಾರೆ. ಹಾಗಾಗಿ ಇದನ್ನು ಪ್ರತಿವಾರ ಮಾಡುವುದರಿಂದ ಕಛೇರಿ ಕೆಲಸಗಳೂ ಕೂಳ ನಿಧಾನಗತಿಯಲ್ಲಿ ಆಗುತ್ತವೆ ಮತ್ತು ಸರಿಯಾದ ರೀತಿಯಲ್ಲಿ ಕೆಲಸಗಳಾಗುವುದಿಲ್ಲ. ಜನಸ್ಪಂದನ ಕಾರ್ಯಕ್ರಮದಲ್ಲಿ ಇಲ್ಲಿಯವರೆಗೆ ಸುಮಾರು 6,02,000 ಅರ್ಜಿಯನ್ನು ನಾವು ಸ್ವೀಕರಿಸಿದ್ದೇವೆ, ಅದರಲ್ಲಿ

5,80,000 ಅರ್ಜಿಯನ್ನು ನಾವು ತೀರ್ಮಾನ ಮಾಡಿದ್ದೇವೆಂದು ಅವರು ಹೇಳಿದ್ದಾರೆ. ಅವರು ಯಾವ ರೀತಿ ಅರ್ಜಿಯನ್ನು ತೀರ್ಮಾನ ಮಾಡಿದ್ದಾರೆ? ಎಷ್ಟು ಅರ್ಜಿಗಳಿಗೆ ಉತ್ತರ ಕೊಟ್ಟಿದ್ದಾರೆ? ಇವತ್ತು ಬಂದಿರುವಂತಹ ಅರ್ಜಿಗಳು ಯಾವರೀತಿಯ ಅರ್ಜಿಗಳು? ಅದರಲ್ಲಿ ವೈಯಕ್ತಿಕ ಅರ್ಜಿಗಳು ಇವೆ. ಸಂಧ್ಯಾ ಸುರಕ್ಷಾ ವಿಧವಾ ವೇತನ, ಬೇರೆಬೇರೆ ವೈಯಕ್ತಿಕ ಸಾಲಗಳಿಗೆ ಬಂದಿರುವಂತಹ ಅರ್ಜಿಗಳು ಇರಬಹುದು, ಅದೇರೀತಿ ಅದರಲ್ಲಿ ಸಾರ್ವಜನಿಕ ಕೆಲಸಗಳಿಗಾಗಿ ಬಂದಂತಹ ಅರ್ಜಿಗಳು ಹೆಚ್ಚು ಇವೆ. ಅದರಲ್ಲಿ ರಸ್ತೆ ರಿಪೇರಿ, ಕುಡಿಯುವ ನೀರು, ವಿದ್ಯುತ್ ಸಮಸ್ಯೆ, ಸಾರಿಗೆ ಸಮಸ್ಯೆ ಹೀಗೆ ಅನೇಕ ರೀತಿಯ ಸಮಸ್ಯೆಗಳನ್ನು ಹೊತ್ತಂಥ ಅರ್ಜಿಗಳೂ ಬಂದಿವೆ. ನಾವೂ ಕೂಡ ಶಾಸಕರಾಗಿ ಅಲ್ಲಿ ಸ್ಥಳದಲ್ಲಿ ಹಾಜರಾಗಿ ಎಷ್ಟರಮಟ್ಟಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗಿದೆ ಮತ್ತು ಅದರಿಂದ ಅನುಕೂಲವಾಗಿದೆ? ಇವತ್ತು ಒಂದು ರಸ್ತೆ ಏನಾದರೂ ಮಾಡಬೇಕೆಂದು ಕೇಳಿದರೆ, ಒಂದು ಕಿಲೋಮೀಟರ್ ಪಕ್ಕಾ ರಸ್ತೆ ಮಾಡುವುದಕ್ಕೆ ಇವತ್ತು 20 ರಿಂದ 30 ಲಕ್ಷ ರೂಪಾಯಿ ಹಣ ಬೇಕು. ಒಂದು ಕಿಲೋಮೀಟರ್ ರಸ್ತೆಯನ್ನು ನಾವು ಡಾಂಬರು ಮಾಡಿಕೊಡುತ್ತೇವೆಂದು ಯಾವ ಆಧಾರದ ಮೇಲೆ ಭರವಸೆಯನ್ನು ಕೊಡುವುದಕ್ಕಾಗುತ್ತದೆ? ಕುಡಿಯುವ ನೀರಿನ ಸಮಸ್ಯೆಗೆ ಇವತ್ತು ಒಂದು ಕಿರುನೀರು ಯೋಜನೆಗೆ 5 ರಿಂದ 6 ಲಕ್ಷ ರೂಪಾಯಿ ಹಣ ಬೇಕು. ಈ ರೀತಿ ಪ್ರತಿ ಯೋಜನೆಗೂ ಕೂಡ ಒಂದು ಅಂದಾಜನ್ನು ತಯಾರು ಮಾಡಿ, ಅದಕ್ಕೆ ಒಪ್ಪಿಗೆ ಪಡೆದು, ಹಣ ನಿಗದಿ ಮಾಡಿ, ಅದಕ್ಕೆ ಹಣ ಬಿಡುಗಡೆ ಮಾಡಿ, ಆ ಕೆಲಸವನ್ನು ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ? ಆ ರೀತಿ ಜನಸ್ಪಂದನ ಕಾರ್ಯಕ್ರಮಕ್ಕೆ ಏನು ಅರ್ಜಿಗಳು ಬರುತ್ತಿವೆ, ಅದರಲ್ಲಿ ವೈಯಕ್ತಿಕ ಸಹಾಯ ಬೇಕೆಂದು ಬರುತ್ತಿರುವಂತಹ ಅರ್ಜಿಗಳನ್ನು ನಾವು ತೀರ್ಮಾನ ಮಾಡಬಹುದೇ ಹೊರತು, ಸಾರ್ವಜನಿಕವಾಗಿ ಬರುವಂತಹ ಅರ್ಜಿಗಳಿಗೆ ನಾವು ಯಾವುದೇ ರೀತಿಯ ಉತ್ತರಗಳನ್ನು ಕೊಡುವುದಕ್ಕಾಗುತ್ತಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು 5,80,000 ಅರ್ಜಿಗಳನ್ನು ನಾವು ತೀರ್ಮಾನ ಮಾಡಿದ್ದೇವೆಂದು ಯಾವ ಆಧಾರದ ಮೇಲೆ ಹೇಳಿದ್ದಾರೆಂದು ಗೊತ್ತಿಲ್ಲ. ಬಹುಶಃ ಅಧಿಕಾರಿಗಳು ತಪ್ಪು ಅಂಕಿಅಂಶವನ್ನು ಕೊಟ್ಟಿದ್ದಾರೆ. ಕೇವಲ endorsementಗಳನ್ನು issue ಮಾಡುವುದರಿಂದ ಮಾತ್ರ ಯಾವುದೇ ಪ್ರಗತಿ ಆಗುವುದಿಲ್ಲವೆನ್ನುವ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಬಜೆಟ್ ಮಂಡನೆಯಾದಂತಹ ಸಂದರ್ಭದಲ್ಲಿ ಬಹುಶಃ ಅವರ ದೃಷ್ಟಿ ಲೋಕಸಭಾ ಚುನಾವಣೆ ಕಡೆಗೆ ಇದೆ ಎನ್ನುವುದು ಸುಳ್ಳಲ್ಲ. ಅದರಲ್ಲಿ ಭರವಸೆಗಳ

ಮಹಾಪೂರವನ್ನೇ ಹರಿಸಿದ್ದಾರೆ ಎನ್ನುವ ಮಾತನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕಳೆದ ವರ್ಷ 2008-09ರ ಬಜೆಟ್‌ನಲ್ಲಿ ಅವರೇ ಒಪ್ಪಿಕೊಂಡಿರುವಂತಹ ರೀತಿಯಲ್ಲಿ ಸುಮಾರು 5,000 ಕೋಟಿ ರೂಪಾಯಿ ಕೊರತೆ ಬರುತ್ತದೆ ಎಂದು ಇದೆ. 5,000 ಕೋಟಿ ರೂಪಾಯಿಗಳ ಕೊರತೆಯನ್ನು ಇಟ್ಟುಕೊಂಡು 2008-09ನೇ ಸಾಲಿನಲ್ಲಿ ಯಾವ ಇಲಾಖೆಯ ಕಾರ್ಯಕ್ರಮಗಳನ್ನು ನಾವು ಜಾರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾವು ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಯಾವ ಪ್ರಜೆಗಳಿಗೆ, ಯಾವ ನಾಗರಿಕರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಅದನ್ನೂ ಕೂಡ ತಾವು ಆಲೋಚನೆ ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಅನೇಕ ಇಲಾಖೆಗಳಲ್ಲೂ ಕೂಡ ವಿಫಲತೆಯನ್ನು ಇವತ್ತು ನಾವು ಕಂಡಿದ್ದೇವೆ. ಇವತ್ತು ಸಮಾಜ ಕಲ್ಯಾಣ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಯವರು ಬೆಳಗಾಂ ಅಧಿವೇಶನದಲ್ಲಿ ಅವರೇ ಬರಹದ ಮೂಲಕ ನಮಗೆ ಒಂದು ಟಿಪ್ಪಣಿಯನ್ನು ಕೊಟ್ಟಿದ್ದಾರೆ. 2008-09ನೇ ಸಾಲಿನಲ್ಲಿ SCPಯಲ್ಲಿ ಪರಿಶಿಷ್ಟ ಜಾತಿಯವರ ಉಪ ಯೋಜನೆಗೆ 3,232 ಕೋಟಿ ರೂಪಾಯಿಗಳನ್ನು ಏನು ನಿಗದಿ ಮಾಡಿದ್ದರು, ಅದರಲ್ಲಿ ಡಿಸೆಂಬರ್ 31ಕ್ಕೆ ಕೇವಲ 811 ಕೋಟಿ ರೂಪಾಯಿಗಳು ಬಿಡುಗಡೆಯಾಗಿರುವಂಥಾದ್ದು ಎಂದರೆ ಶೇ.22 ರಿಂದ 23ರಷ್ಟು ಆಗುತ್ತದೆ. ಇದು ಪರಿಶಿಷ್ಟಜಾತಿಗೆ ಮಾತ್ರ. ಈ 811 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣ ಖರ್ಚು ಆಯಿತು? ಇನ್ನೂ 2,421 ಕೋಟಿ ರೂಪಾಯಿಗಳು ಬಾಕಿ ಇದೆ. ಪರಿಶಿಷ್ಟ ಪಂಗಡಕ್ಕೆ 1,263 ಕೋಟಿ ರೂಪಾಯಿಗಳು ನಿಗದಿಯಾಗಿದ್ದರಲ್ಲಿ ಬಿಡುಗಡೆಯಾದಂಥ ಹಣ ಡಿಸೆಂಬರ್ ತಿಂಗಳವರೆಗೆ ಕೇವಲ 350 ಕೋಟಿ ರೂಪಾಯಿಗಳು. ಇದರಲ್ಲಿ ಖರ್ಚು ಆಗಿರುವಂಥ ಹಣ ಎಷ್ಟು? ನಾನು ತಮ್ಮ ಗಮನಕ್ಕೆ ತರುವುದಾದರೆ ಈ ಕಾರ್ಯಕ್ರಮಗಳ ಫಲಾನುಭವಿಗಳನ್ನು ಯಾವುದೇ schemeಗಳಲ್ಲಿ ಇನ್ನೂ ಕೂಡ ಆಯ್ಕೆ ಮಾಡಿಲ್ಲ. ಸಮಾಜ ಕಲ್ಯಾಣ ಇಲಾಖೆಯು ಹಣವನ್ನು ಎಲ್ಲಾ ಇಲಾಖೆಗಳಿಗೆ ಕೊಟ್ಟಿರುವುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನಾವು 200 ಕೋಟಿ ರೂಪಾಯಿಗಳಿಂದ ವಿಶೇಷ ಘಟಕ ಯೋಜನೆಯ ಹಣವನ್ನು 600 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದೇವೆಂದು ಹೇಳಿದ್ದಾರೆ. ಆದರೆ ಯಾವುದೇ ಕಾರ್ಯಕ್ರಮ ಜಾರಿಯಾಗಬೇಕಾದರೆ ಬರೀ ಅನುದಾನವನ್ನು ನಿಗದಿ ಮಾಡಿದರೆ ಸಾಕಾಗುವುದಿಲ್ಲ. ಆ ಅನುದಾನವನ್ನು ಪೂರ್ತಿಯಾಗಿ ಬಿಡುಗಡೆ ಮಾಡಬೇಕು. ಹಣವನ್ನು ಬಿಡುಗಡೆ ಮಾಡಿದರೆ ಸಾಕಾಗುವುದಿಲ್ಲ, ಆ ಹಣ ಖರ್ಚಾಗಬೇಕು, ಬರೀ ಖರ್ಚು ತೋರಿಸಿದರೆ ಸಾಕಾಗುವುದಿಲ್ಲ, ಅದು ಸದುಪಯೋಗವಾಗಬೇಕು. ಆ ರೀತಿ ಸದುಪಯೋಗ ಎಷ್ಟು ಆಗಿದೆ? ದುರುಪಯೋಗ ಎಷ್ಟು ಆಗಿದೆ? ಎಷ್ಟರಮಟ್ಟಿಗೆ ಪರಿಶಿಷ್ಟ ಜಾತಿ ವರ್ಗದ

ಫಲಾನುಭವಿಗಳು ತಮ್ಮ ಆರ್ಥಿಕ ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ? ಅದರ ಮೂಲಕ ಸಾಮಾಜಿಕವಾಗಿ ಎಷ್ಟು ಮೇಲೆ ಬರುವುದಕ್ಕೆ ಸಹಾಯವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಇದೊಂದು ವರ್ಷದ್ದು ಹೇಳುತ್ತಿಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಕಳೆದ ವರ್ಷದಲ್ಲಿ ಇದರ ವಿಫಲತೆ ಎದ್ದು ಕಾಣುತ್ತಿದೆ. ಅದಕ್ಕಾಗಿ ನನಗನಿಸುತ್ತಿರುವಂಥಾದ್ದು ಇವತ್ತು High Power Committee meetings ಕೂಡ ಆಗುತ್ತಿಲ್ಲ, ಇಲ್ಲಿ ಚರ್ಚೆಯಾಗುತ್ತಿಲ್ಲ. ಈ ವರ್ಗಗಳ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಜಾರಿಯಾಗುತ್ತಿದೆಯೆನ್ನುವುದನ್ನು ನಾವು ನೋಡುತ್ತಿಲ್ಲ. ಈ ಕಾರ್ಯಕ್ರಮಗಳು ಎಷ್ಟು ಜಾರಿಯಾಗುತ್ತಿದೆಯೆಂಬುದನ್ನು ಇಲಾಖೆಯ ಮುಖ್ಯಸ್ಥರು ಯಾವ ಜಿಲ್ಲೆಗೂ ಹೋಗಿ ನೋಡುತ್ತಿಲ್ಲ. ಈಗ ಫೆಬ್ರವರಿ 28ನೇ ತಾರೀಖು ಬಂದರೂ ಕೂಡ ಇನ್ನೂ ಫಲಾನುಭವಿಗಳು ಆಯ್ಕೆಯಾಗಿಲ್ಲವೆಂದರೆ, ನಾವು ಎಷ್ಟರಮಟ್ಟಿಗೆ ಈ ಕಾರ್ಯಕ್ರಮಗಳನ್ನು ಜಾರಿ ಮಾಡಬಹುದೆನ್ನುವುದರ ಬಗ್ಗೆ ತಾವು ದಯಮಾಡಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಇಲಾಕೆಯ ಕಾರ್ಯಕ್ರಮಗಳು ಅಡ್ಡಿಯಾಗಿರುವುದಕ್ಕೆ ಆರ್ಥಿಕ ಇಲಾಖೆಯ ಬೆಂಬಲವೂ ಕೂಡ ಇದೆ. ಈ ಸಮಾಜ ಕಲ್ಯಾಣ ಇಲಾಖೆಗೆ ಹಣ ಬಿಡುಗಡೆ ಮಾಡುವುದೆಂದರೆ ಏನೋ ಒಂದು ರೀತಿಯ ತಾತ್ಸಾರ. ನಾವು ಇದನ್ನು ಬಹಳ ನೋಡಿದ್ದೇವೆ. ನಾವು ಬಹಳ ಒತ್ತಾಯ ಮಾಡಿದರೂ ಕೂಡ ಹಣವನ್ನು ಬಿಡುಗಡೆ ಮಾಡುವುದಿಲ್ಲ. Pooled fundಗೆ 200ಕೋಟಿ ರೂಪಾಯಿಗಳಿಂದ 600 ಕೋಟಿ ರೂಪಾಯಿಗಳು. ಕಳೆದ ವರ್ಷ 200 ಕೋಟಿ ರೂಪಾಯಿಗಳಿತ್ತು. ಈ 200 ಕೋಟಿ ರೂಪಾಯಿಗಳಲ್ಲಿ ಈ ದಿವಸದವರೆಗೆ ಅಥವಾ ಕನಿಷ್ಠ ಜನವರಿ 31ನೇ ತಾರೀಖಿನವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ ಎಂಬುದನ್ನು ಸರ್ಕಾರ ಹೇಳಬೇಕು. ಯಾವ್ಯಾವ ಇಲಾಖೆಗಳಿಗೆ ಎಷ್ಟೆಷ್ಟು ಹಣ ಹೋಗಿದೆ? ಯಾವ್ಯಾವ ಇಲಾಖೆಯವರು ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ? ಯಾವ ಕಾರಣಕ್ಕಾಗಿ ಈ ಹಣವನ್ನು ಬಿಡುಗಡೆ ಮಾಡುವುದಿಲ್ಲ? ಏಕೆ ಕುಂಟು ನೆಪವನ್ನು ಹೇಳುತ್ತೀರಿ? ಪ್ರಗತಿ ಹೇಗೆ ಸಾಧ್ಯ? ನಾವು ಭಾಷಣದ ಮೂಲಕ ಪ್ರಗತಿಯನ್ನು ಅಷ್ಟು ಮಾಡುತ್ತೇವೆ, ಇಷ್ಟು ಮಾಡುತ್ತೇವೆಂದು ಹೇಳಿದರೂ ಕೂಡ ಆಗಬೇಕಾದ ಕೆಲಸ ಏಕೆ ಆಗುತ್ತಿಲ್ಲ? ನಮ್ಮ ಸ್ನೇಹಿತರೊಬ್ಬರು ಕಳೆದ ಸಾರಿ ಇಲಾಖೆಯ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದ್ದರು. ಸಮಾಜ ಕಲ್ಯಾಣ ಇಲಾಖೆಯಲ್ಲಿ 1358 ಹುದ್ದೆಗಳು ಖಾಲಿ ಇದೆಯೆಂದು ಅವರೇ ಅಂಕಿ ಅಂಶವನ್ನು ಕೊಟ್ಟಿದ್ದಾರೆ. ಈ 1,358 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳನ್ನು ತಾವು ಖಾಲಿ ಇಟ್ಟುಕೊಂಡು, ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಜಾರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಸಮಾಜ ಕಲ್ಯಾಣ

ಇಲಾಖೆಯಲ್ಲಿ ಮಾತ್ರ ಏಕೆ ತಾವು ಹೊರ ಗುತ್ತಿಗೆ ನೇಮಕಾತಿಯನ್ನು ಮಾಡುತ್ತಿದ್ದೀರಿ? ಪ್ರತಿ ತಾಲ್ಲೂಕುಗಳಲ್ಲಿ ಇರುವಂಥ ಹಾಸ್ಟೆಲ್‌ಗಳಲ್ಲಿ ಶೇ.70 ರಷ್ಟು ಅಡುಗೆಯವರು ಮತ್ತು ನಾಲ್ಕನೆ ದರ್ಜೆಯ ನೌಕರರ ಹುದ್ದೆಗಳು ಖಾಲಿ ಇವೆ. ಅಲ್ಲಿ ವಾರ್ಡನ್‌ಗಳು ಇಲ್ಲ. ಒಬ್ಬೊಬ್ಬ ವಾರ್ಡನ್ ಎರಡು, ಮೂರು ಹಾಸ್ಟೆಲ್‌ಗಳನ್ನು ನೋಡಿಕೊಳ್ಳುತ್ತಿದ್ದಾರೆ. ಇವರು ಒಂದು ಹಾಸ್ಟೆಲ್ ಅನ್ನು ನೋಡುವುದೇ ಕಷ್ಟವಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಗೆ ಏಕೆ ಹೊರ ಗುತ್ತಿಗೆಯವರನ್ನೇ ಮಾಡುತ್ತೇವೆಂದು ಹೇಳುತ್ತಾರೆ? ಹೊರಗುತ್ತಿಗೆ ಎಂದು 2,000, 3,000 ರೂ.ಗಳೆಂದು ನಿಗದಿ ಮಾಡುತ್ತೀರಿ. ಅವನು ಅರ್ಧ ದುಡ್ಡನ್ನು ಕಿತ್ತು ಕೊಳ್ಳುತ್ತಾನೆ. ಇನ್ನು ಅರ್ಧ ಸಂಬಳವನ್ನು ತೆಗೆದುಕೊಂಡು ಅವನು ಎಷ್ಟರಮಟ್ಟಿಗೆ ಮನಸಾರೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ?

ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್: To add to this ಮಾನ್ಯ ಕುಮಾರಸ್ವಾಮಿಯವರೆ, ತಾವು ಏನು ಹೇಳಿದ್ದೀರಿ, ಇದು ಬಹಳ valid point ಇದೆ. ಇದಕ್ಕೆ ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲ. ಇಲ್ಲಿ ಈ ವಿಷಯಗಳನ್ನು ಯಾರು note ಮಾಡಿಕೊಳ್ಳುತ್ತಿದ್ದಾರೋ ಗೊತ್ತಿಲ್ಲ. ಇಲ್ಲಿ ಮಾನ್ಯ ಗೋವಿಂದ ಕಾರಜೋಳರವರು ಇದ್ದಾರೆ. ಅವರಿಗೆ ಇದರಲ್ಲಿ ಆಸಕ್ತಿ ತೋರಿಸುತ್ತಾರೆ ಎಂದು ನಾನು ಅಂದು ಕೊಳ್ಳುತ್ತೇನೆ. ಈಗ ತಾನೆ ಮಾನ್ಯ ಸದಸ್ಯರು ಹೇಳಿದ ಹಾಗೆ, ಮೊರಾರ್ಜಿ ದೇಸಾಯಿ ಶಾಲೆಗಳಲ್ಲೂ ಕೂಡ ನೀವು private ಗುತ್ತಿಗೆದಾರರ ಮುಖಾಂತರ teachers ಅನ್ನು recruitment ಮಾಡುವುದರಲ್ಲಿ ಏನು ಅರ್ಥವಿದೆಯೆಂಬುದನ್ನು ಹೇಳಬೇಕು. ನೀವು ಅವರಿಗೆ daily wages ಅಥವಾ contract basis ಮೇಲೆ hire ಮಾಡಿ ಮಾಡುವ ಉದ್ದೇಶವೇನು ಇದೆ? ಮೊರಾರ್ಜಿ ದೇಸಾಯಿ ಶಾಲೆಯನ್ನು ಪ್ರಾರಂಭ ಮಾಡಿದರೆ ಅದರಿಂದ ಬಡವರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗಬೇಕೆಂಬ ಉದ್ದೇಶ ತಾನೇ ಇರುವಂಥಾದ್ದು. ಅಲ್ಲಿ ನೀವು contract basis ಮೇಲೆ teachersಗೆ 5,000 ರೂಪಾಯಿಗಳನ್ನು ಕೊಟ್ಟು full-fledged teachers ಅನ್ನು ಹಾಕುವುದಕ್ಕೆ ಆಗುವುದಿಲ್ಲವೆಂದರೆ, ಅದರಲ್ಲಿ contract basis ಮೇಲೆ ಎಂದರೆ ಅವನು ಬೇರೆ ಕಮಿಷನ್ ತೆಗೆದುಕೊಳ್ಳಬೇಕು. ಈ ರೀತಿಯಾದರೆ ಸರ್ಕಾರದ ಉದ್ದೇಶ ಏನು ಈಡೇರಿದ ಹಾಗೆ ಆಯಿತು? ಅದಕ್ಕೋಸ್ಕರ ಇದನ್ನು ಸರಿ ಪಡಿಸುವಂಥ ಕೆಲಸವನ್ನು ಸರ್ಕಾರ ಮಾಡಬೇಕು.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಉಪಾಧ್ಯಕ್ಷರೆ,......

ಉಪಾಧ್ಯಕ್ಷರು: ನಿಮ್ಮ ಹೆಸರು ಪಟ್ಟಿಯಲ್ಲಿದೆ. ನೀವು ಮಾತನಾಡುವಾಗ ಹೇಳಿ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಉಪಾಧ್ಯಕ್ಷರೆ, ಒಂದೇ ನಿಮಿಷ. ಸರ್ಕಾರದಿಂದ ಈಗಾಗಲೆ KPSC ಯಿಂದ selection ನಡೆಸುತ್ತಿದೆ. ಅದು Degree colleges ಮತ್ತು PUC colleges ಮತ್ತು High schoolಗಳಲ್ಲಿ Head Master ಗಳ ಹುದ್ದೆಗೆ KPSCಯಿಂದ selection ನಡೆಯುತ್ತಿದೆ. ಅದೇ ರೀತಿಯಲ್ಲಿ ಆರೋಗ್ಯ ಇಲಾಖೆಯು ಕೂಡ KPSC ಯಿಂದ selection ಮಾಡುತ್ತಿದ್ದಾರೆ. ಆದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿರುವಂಥ ಮೊರಾರ್ಜಿ ಶಾಲೆಗಳಲ್ಲಿ ಬಹಳಷ್ಟು ವರ್ಷಗಳಿಂದ ಗುತ್ತಿಗೆ ಆಧಾರ ಮೇಲೆ ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು recruitment ಮಾಡಿ, ಆ ಶಾಲೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಂಥ ಕೆಲಸವನ್ನು ಏಕೆ ಮಾಡುತ್ತಿಲ್ಲ? ಸಮಾಜ ಕಲ್ಯಾಣ ಇಲಾಖೆಯನ್ನು ಏಕೆ ಬಹಳ neglect ಮಾಡುತ್ತಿದ್ದೀರೆಂಬ ವಿಚಾರವನ್ನು ಮಾನ್ಯ ಕುಮಾರಸ್ವಾಮಿಯವರು ಕೇಳುತ್ತಿರುವಂಥ ಪ್ರಶ್ನೆಯಾಗಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ನಮ್ಮ ಸ್ನೇಹಿತರೂ ಕೂಡ ಧ್ವನಿಗೂಡಿಸಿದ್ದಾರೆ. ಇದಕ್ಕಾಗಿ ನಾನು ಹೇಳುವಂಥಾದ್ದು ಏನೆಂದರೆ, ದಯಮಾಡಿ ಸರ್ಕಾರ ಈ ಇಲಾಖೆಗೆ ನೇಮಕಾತಿಯನ್ನು ತಕ್ಷಣ ಮಾಡಬೇಕು. ಈ ಇಲಾಖೆಯ ಕೆಲಸ ನೌಕರರ ಮೂಲಕ ಆಗಬೇಕು, ಕಾರ್ಯಕ್ರಮಗಳು ಜಾರಿಯಾಗುವ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ. ದಯಮಾಡಿ ತಾವು ಆದಷ್ಟು ಬೇಗ ತಮ್ಮ ಅಧ್ಯಕ್ಷತೆಯಲ್ಲಿ High Power Committee ಏನು ಇದೆ. ಇದು ಮೂರು ತಿಂಗಳಿಗೊಂದು ಸಾರಿ ಸಭೆಯನ್ನು ಕರೆಯಬೇಕೆಂದು ಇದೆ. ಅದನ್ನು ಇದುವರೆಗೂ ಕರೆದಿಲ್ಲ, ಈ ಸಭೆಯನ್ನು ಕರೆದು review ಮಾಡಬೇಕು. ಈ ಕಾರ್ಯಕ್ರಮಗಳು ಜಾರಿಯಾಗುವುದಕ್ಕೆ ಸರ್ಕಾರ ಒತ್ತು ಕೊಡಬೇಕೆಂಬ ಮಾತನ್ನು ಹೇಳುತ್ತೇನೆ. ಇನ್ನು ಗ್ರಾಮೀಣಾಭಿವೃದ್ಧಿ ವಿಷಯಕ್ಕೆ ಬಂದರೆ ವಸತಿಯನ್ನು ಕಲ್ಪಿಸುವ ವಿಷಯದಲ್ಲಿ, ಇವತ್ತು ಮಾನ್ಯ ಮುಖ್ಯಮಂತ್ರಿಯವರು ನಾವು ಮೂರು ಲಕ್ಷ ಮನೆಗಳನ್ನು 2009–10ನೇ ಸಾಲಿನಲ್ಲಿ ಕಟ್ಟಿಸುತ್ತೇವೆಂದು ಹೇಳಿದ್ದಾರೆ. ಇದಕ್ಕೆ 1,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ನಾವು 2006–07ನೇ ಇಸವಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ 60 ಮನೆಗಳನ್ನು ಕೊಟ್ಟೆವು. ಅಲ್ಲಿಂದ ಇಲ್ಲಿಯವರೆಗೂ ಇನ್ನೂ ನಡೆಯುತ್ತಿವೆ, ಇದು on-going scheme. 2007–08ರಲ್ಲಿ ಒಂದೇ ಒಂದು ಮನೆಯೂ ಯಾವ ಪಂಚಾಯಿತಿಗೂ ಮಂಜೂರಾಗಿಲ್ಲ. ತಾವು 2008–09ರಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ 25 ಮನೆಗಳನ್ನು ಕೊಟ್ಟಿದ್ದೀರಿ. ಅದೂ ಯಾವಾಗ? ಈಗ ಇನ್ನೂ ಫಲಾನುಭವಿಗಳ ಆಯ್ಕೆ ನಡೆಯುತ್ತಿದೆ. ಅವುಗಳನ್ನು ಇನ್ನೂ ಕಟ್ಟುವುದಕ್ಕೆ ಪ್ರಾರಂಭ ಮಾಡಿಲ್ಲ. ತಾವು

ಈಗ 2009-10ನೇ ಸಾಲಿಗೆ ಏನು ಹೇಳುತ್ತಿದ್ದೀರೆಂದರೆ ಮೂರು ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ. ನೀವು ಏಕೆ ಹೇಳುತ್ತಿದ್ದೀರೆಂದರೆ, ತಾವು ಒಂದು ಪ್ರಸ್ತಾಪ ಮಾಡಿದ್ದೀರಿ. ನಮ್ಮ ಆಡಳಿತದಲ್ಲಿ ಏಪ್ರಿಲ್ 15ನೇ ತಾರೀಖಿನೊಳಗೆ ಯಾವುದೇ ಕಾರ್ಯಕ್ರಮಗಳನ್ನು ಮಾಡುವಂಥಾದ್ದರ ಆದೇಶವನ್ನು ಹೊರಡಿಸಬೇಕೆಂದು ಹೇಳಿದ್ದೀರಿ. ತಾವು ಆ ಕಾಲಮಿತಿಯೊಳಗೆ ಮಾಡುವುದಾದರೆ ಸ್ವಾಗತಾರ್ಹ, ಆ ಆದೇಶವನ್ನು ತುಂಬಾ ಮೆಚ್ಚುವಂಥಾದ್ದು ಆಗಿದೆ. ಅದನ್ನು ನೀವು ಮಾಡಿದರೆ ಆಗುತ್ತದೆ. ಆದರೆ ಏನು ಆಗುತ್ತಿದೆ? ನಾವು ಮಾರ್ಚ್ 31ನೇ ತಾರೀಖಿಗೆ ಆಯವ್ಯಯಕ್ಕೆ ಒಪ್ಪಿಗೆಯನ್ನು ಪಡೆದರೆ, ನಮ್ಮ ಆದೇಶಗಳು, ಕಾರ್ಯಕ್ರಮಗಳು ಹೊರಡುವುದೇ ನವೆಂಬರ್, ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಆಗುತ್ತದೆ. ಕಾರ್ಯಕ್ರಮಗಳು ಜಾರಿಗೆ ಬರುವುದೇ ಫೆಬ್ರವರಿ ತಿಂಗಳು ಆಗುತ್ತದೆ. ಇವತ್ತು ನೀವು ಏನು ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಅದನ್ನು ನೀವು ಜಾರಿಗೆ ತನ್ನಿ. ತಾವು ಏಪ್ರಿಲ್ 15ನೇ ತಾರೀಖಿಗೋ, ಮೇ ತಿಂಗಳಿಗೋ ಆದೇಶವನ್ನು ಹೊರಡಿಸಿ, ಕನಿಷ್ಠ ಪಕ್ಷ ಜೂನ್, ಜುಲೈ ತಿಂಗಳಲ್ಲಿ ಕಾರ್ಯಕ್ರಮಗಳಿಗೆ ನೀವು ಚಾಲನೆಯನ್ನು ಕೊಟ್ಟರೆ, ಆಗ ನಿಮ್ಮ physical target ಏನು ಇರುತ್ತದೆ. financial target ಏನು ಇರುತ್ತದೆ, ಅದನ್ನು ನಾವು ತಲುಪುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ನೀವು physical target ಹೇಳುವುದೇ ಒಂದು, financial target ಹೇಳುವುದೇ ಒಂದು. ಇದು ಒಂದಕ್ಕೊಂದು ಸಂಬಂಧವಿರುವುದಿಲ್ಲವೆಂದ ಮೇಲೆ ಕಾರ್ಯಕ್ರಮಗಳು ಹೇಗೆ ಜಾರಿಯಾಗುತ್ತವೆ? ಇದು ಮನೆಗಳ ಸ್ಥಿತಿಯಾಗಿದೆ. ಇನ್ನು ಗ್ರಾಮೀಣಾಭಿವೃದ್ಧಿಗೆ ಬಂದರೆ ಅನೇಕ ವಿಚಾರಗಳನ್ನು ತಾವು ಇದರಲ್ಲಿ ಪ್ರಸ್ತಾಪ ಮಾಡಿದ್ದೀರಿ. ನನ್ನ ಕ್ಷೇತ್ರಕ್ಕೂ ಸಂಬಂಧಪಟ್ಟ ಹಾಗೆ ಮೊನ್ನೆ ಕ್ಷೇತ್ರ ಪುನರ್ ವಿಂಗಡಣೆಯಾಯಿತು.

3-30 PM

ಕ್ಷೇತ್ರ ಪುನರ್‌ವಿಂಗಡನೆ ಆಗಿರ ತಕ್ಕಂಥಾದ್ದು ಜನಸಂಖ್ಯೆಯ ಆಧಾರದ ಮೇಲೆ. ಈಗ ಬೆಂಗಳೂರು ನಗರದಲ್ಲಿ 28 ಕ್ಷೇತ್ರಗಳಿವೆ. 2-3 ಕಿಲೋಮೀಟರ್ average ನಲ್ಲಿ ಸುಮಾರು ಎರಡೂವರೆ ಲಕ್ಷ population ಇದೆ. ಮಾನ್ಯ ಅಧ್ಯಕ್ಷರಿಗೂ ಗೊತ್ತು, ತಮ್ಮ ಜಿಲ್ಲೆಯಲ್ಲಿ 3 ಕ್ಷೇತ್ರಗಳಿದ್ದುದು 2 ಆದವು, ಹಾಸನ ಜಿಲ್ಲೆಯಲ್ಲಿ 8 ಕ್ಷೇತ್ರಗಳಿದ್ದುದು 7 ಆದವು, ಚಿಕ್ಕಮಗಳೂರು ಜಿಲ್ಲೆಯಲ್ಲಿ 7 ಕ್ಷೇತ್ರಗಳಿದ್ದುದು 6 ಆದವು, ಕಾರವಾರದಲ್ಲೂ ಕೂಡ ಹಾಗೇ ಆಗಿದೆ. ಸುಮಾರು 7-8 ಜಿಲ್ಲೆಗಳಲ್ಲಿ ಸರ್ವತೋಮುಖ ಬೆಳವಣಿಗೆಗೆ ತೊಂದರೆಯಾಗಿದೆ. ನನ್ನ ಕ್ಷೇತ್ರ 173 ಕಿಲೋಮೀಟರ್ ಉದ್ದವಿದೆ, 122 ಕಿಲೋಮೀಟರ್ ಅಗಲವಿದೆ. ಜನಸಂಖ್ಯೆಯ

ಆಧಾರದ ಮೇಲೆ ಪುನರ್‌ವಿಂಗಡನೆ ಮಾಡಿದ್ದರಿಂದ ಈ ರೀತಿ ತೊಂದರೆಯಾಗುತ್ತಿದೆ. ಜನಸಂಖ್ಯೆಯ ಆಧಾರದ ಮೇಲೆ ಅನುದಾನವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ನಿಗದಿ ಮಾಡುತ್ತವೆ. ಅದಕ್ಕಾಗಿ ನಾನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಇನ್ನು ಮೇಲೆ ಅನುದಾನವನ್ನು ನಿಗದಿ ಮಾಡುವಾಗ, ಬಿಡುಗಡೆ ಮಾಡುವಾಗ ಜನಸಂಖ್ಯೆಯನ್ನು ಮಾತ್ರ ಆಧಾರವಾಗಿ ತೆಗೆದು ಕೊಳ್ಳಬಾರದು. ಅಲ್ಲಿಯ ಭೌಗೋಳಿಕ ವಿಸ್ತೀರ್ಣ ಮತ್ತು ಸಮಸ್ಯೆಗಳನ್ನು ಆಧಾರವಾಗಿಟ್ಟು ಕೊಂಡು ಸರ್ಕಾರ ಹಣವನ್ನು ಬಿಡುಗಡೆ ಮಾಡಬೇಕು. ಆಗ ಮಾತ್ರ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿ, ಕುಡಿಯುವ ನೀರಿನ ಸಮಸ್ಯೆ ಇದೆ. ನನ್ನ ಕ್ಷೇತ್ರವಾದ ಸಕಲೇಶಪುರದಲ್ಲಿ ಮೂರು ತಾಲ್ಲೂಕುಗಳು ಬರುತ್ತವೆ. ಅವುಗಳೆಂದರೆ ಸಕಲೇಶಪುರ ತಾಲ್ಲೂಕು, ಆಲೂರು ತಾಲ್ಲೂಕು ಮತ್ತು ಹಾಸನ ತಾಲ್ಲೂಕಿನ ಒಂದು ಹೋಬಳಿ ಬರುತ್ತವೆ. ಅದರಲ್ಲಿ ಒಟ್ಟು 604 revenue villageಗಳು ಬರುತ್ತವೆ. ಸಕಲೇಶಪುರದಲ್ಲಿ ಒಟ್ಟು 223 ಕಂದಾಯ ಗ್ರಾಮಗಳು ಬಂದರೆ, 228 ಹ್ಯಾಮ್ಲೆಟ್ ಗ್ರಾಮಗಳು ಬರುತ್ತವೆ. ಎಲ್ಲ ಹಳ್ಳಿಗಳು ಸೇರಿ ಒಟ್ಟು 1,003 ಹಳ್ಳಿಗಳು ಬರುತ್ತವೆ. ಮಲೆನಾಡು ಹೇಗೆ ಎಂದು ತಮಗೆ ಗೊತ್ತು. ಒಂದು ಊರು ಎಂದರೆ ಐದಾರು ಕಡೆ ಬಡಾವಣೆಗಳಿರುತ್ತವೆ. ಮೊನ್ನೆ ಹಾಸನ ಜಿಲ್ಲೆಗೆ ಗ್ರಾಮೀಣಾಭಿವೃದ್ಧಿ ಸಚಿವರು ಬಂದಾಗ ಚೆನ್ನಾಗಿ review ಮಾಡಿದಿರಿ. ನಮ್ಮ ಸಮಸ್ಯೆ ಏನೆಂದರೆ, ಒಂದು ಊರು ಎಂದರೆ ತಾವು 7–8 ಕಡೆ ಅಂದಾಜು ಇಟ್ಟುಕೊಳ್ಳಬೇಕು. 5–6 ಕಿಲೋಮೀಟರ್ ವ್ಯಾಪ್ತಿಯಲ್ಲಿ ಆ ಊರು ಬರುತ್ತದೆ. ನಾಲ್ಕು ಮನೆಗಳಿಗೆ ಈ ವರ್ಷ ಒಂದು cistern ಇಟ್ಟು ಒಂದು pipeline ಹಾಕಿಕೊಟ್ಟರೆ, ಮುಂದಿನ ವರ್ಷ ಅದೇ ಹಳ್ಳಿಗೆ ಹೋದಾಗ ಬೇರೆ ಕಡೆಯಲ್ಲಿ ಎಲ್ಲೋ ಒಂದು ನಾಲ್ಕು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅಲ್ಲಿಂದ ಅಲ್ಲಿಗೆ ಒಂದು pipeline ಹಾಕಿಕೊಡಿ, ಒಂದು cistern ಇಟ್ಟು ಕೊಡಿ ಸಾರ್ ಎಂದು ಕೇಳುತ್ತಾರೆ. ನಮ್ಮ ಮಲೆನಾಡಿನಲ್ಲಿ ಕೊಳವೆ ಬಾವಿಗಳಲ್ಲಿ ನೀರು ಬರುವುದಿಲ್ಲ, open well ತೆಗೆಯಬೇಕು. ಒಂದು ಕೊಳವೆ ಬಾವಿ ತೆಗೆಯಲು ಇವತ್ತು ಒಂದು ಅಂದಾಜಿನಲ್ಲಿ 60 ಸಾವಿರ ರೂಪಾಯಿಗಳು ಬೇಕು. ಆದರೆ open wellಗೆ ಒಂದೂಮುಕ್ಕಾಲಿನಿಂದ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕು. ಕಿರು ನೀರು ಯೋಜನೆಯಲ್ಲಿ ಒಂದು ಕಿಲೋಮೀಟರ್‌ಗೆ pipeline ಹಾಕುವುದಕ್ಕೆ ಒಂದೂವರೆ ಲಕ್ಷ ರೂಪಾಯಿ ಖರ್ಚು ಬರುತ್ತಿದೆ. ಹಿಂದೆ 25–30 ಸಾವಿರ ರೂಪಾಯಿಗಳಲ್ಲಿ ಹಾಕುತ್ತಿದ್ದರು. ಈ ರೀತಿಯಾಗಿ ಸಮಸ್ಯೆಗಳು ಮತ್ತು ಹಣಕಾಸಿನ ನೆರವು, ಇವೆರಡನ್ನೂ ನೋಡಬೇಕು. ಆದರೆ ಹಣಕಾಸಿನ ನೆರವು ಎಷ್ಟಿದೆ ಎಂದರೆ ಹಿಂದೆ

ಇದ್ದಷ್ಟೇ ಇದೆ. 20 ವರ್ಷಗಳ ಹಿಂದೆ ಒಂದು ಕಿಲೋಮೀಟರ್‌ಜಿಲ್ಲೆಗೆ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೆವು. ಆದರೆ ಇವತ್ತು ಅದೇ ಒಂದು ಕಿಲೋಮೀಟರ್‌ಗೆ ಐದು ಲಕ್ಷ ರೂಪಾಯಿಗಳು ಬೇಕು. ಐದು ಲಕ್ಷ ರೂಪಾಯಿಗಳು ಇಲ್ಲದೇ ಯಾವ ಊರಿನಲ್ಲೂ ಇವತ್ತು ಜೆಲ್ಲಿ ರಸ್ತೆ ಆಗುವುದಿಲ್ಲ. ಸುಸಜ್ಜಿತವಾದಂಥ ಒಂದು ಡಾಂಬರೀಕರಣದ ರಸ್ತೆ ಮಾಡುತ್ತೇನೆ ಎಂದರೆ 25 ರಿಂದ 30 ಲಕ್ಷ ರೂಪಾಯಿಗಳು ಬೇಕು. ಹಿಂದೆ 5 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಆಗುತ್ತಿತ್ತು. ಹೀಗಾಗಿರುವುದರಿಂದ ಅನುದಾನ ಎಷ್ಟಿದೆ ಎನ್ನುವುದನ್ನು ನೋಡಬೇಕು. ಹಿಂದೆ ನೀವು ಎಷ್ಟು ಅನುದಾನ ಕೊಡುತ್ತಿದ್ದೀರೋ ಈಗಲೂ ಅಷ್ಟೇ ಅನುದಾನವಿದೆ. ಆದರೆ ಅಂದಾಜು ಅದರ ಐದರಷ್ಟು, ಆರರಷ್ಟು ಹೆಚ್ಚಾಗಿದೆ. ಪ್ರಗತಿ ಎಷ್ಟಾಯಿತು ಎಂದರೆ, ಇನ್ನೂ ಕೂಡ ಪ್ರಗತಿ ಕಡಿಮೆಯಾಯಿತು. ಆದರೆ ಅದಕ್ಕೆ ಹಣವನ್ನು ತೋರಿಸಿರತಕ್ಕಂಥಾದ್ದು ಜಾಸ್ತಿಯಾಯಿತು. ಹೀಗಾದರೆ ನಮ್ಮ ಗ್ರಾಮೀಣ ಪ್ರದೇಶಗಳು ಹೇಗೆ ಅಭಿವೃದ್ಧಿಯನ್ನು ಕಾಣಲು ಸಾಧ್ಯ? ಇವತ್ತು ನಮ್ಮ ಹಳ್ಳಿಗಳು ಹೇಗಿವೆ? ಹಿಂದಿನ ಸರ್ಕಾರಗಳು, ಬರುವ ಸರ್ಕಾರ, ಈಗಿನ ಸರ್ಕಾರ ಎಂದೆಲ್ಲಾ ನಾನು comment ಮಾಡುವುದಿಲ್ಲ. ಆದರೆ ಇರುವಂಥ ಚಿತ್ರಣವನ್ನು ಇವತ್ತು ನಾವು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಅದಕ್ಕಾಗಿ ಹೇಳುತ್ತಿದ್ದೇನೆ, ತಾವು ಏನು ಅನುದಾನವನ್ನು ನಿಗದಿ ಮಾಡುತ್ತಿದ್ದೀರಿ, ಅದನ್ನು ಹೆಚ್ಚು ಮಾಡಬೇಕು. ಗ್ರಾಮೀಣ ಅಭಿವೃದ್ಧಿಗೆ ಅದರಲ್ಲೂ ರಸ್ತೆಗಳು ಮತ್ತು ಕುಡಿಯುವ ನೀರಿಗೆ ನೀವು ಎಷ್ಟು ಹಣವನ್ನು ಕೊಟ್ಟರೂ ಸಾಲದು. ಅದರಲ್ಲೂ ಕೂಡ ಮಲೆನಾಡು ಪ್ರದೇಶಗಳಿಗೆ ಎಷ್ಟು ಹಣವನ್ನು ಕೊಟ್ಟರೂ ಸಾಲದು. ಮಲೆನಾಡು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಕಾಲು ಸೇತುವೆ ಮತ್ತು ತೂಗು ಸೇತುವೆಗಳಿಗೆ 25 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ತಾವು ನಿರ್ಧಾರ ಮಾಡಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಅದೊಂದು ಒಳ್ಳೆಯ ಯೋಜನೆ. ಅದು ತುಂಬಾ ಅಗತ್ಯವಿತ್ತು. ತಮಗೂ ಅನುಭವವಿದೆ. ಶಿವಮೊಗ್ಗ, ಕಾರವಾರ, ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಯ ಸಕಲೇಶಪುರ ಈ ಕಡೆಗಳಲ್ಲೆಲ್ಲಾ ಇದು ತುಂಬಾ ಅಗತ್ಯವಿದೆ. ಅದೇ ರೀತಿ, ಮಲೆನಾಡು ಅಭಿವೃದ್ಧಿ ಮಂಡಳಿಗೆ ಹಣ ಕೊಡುತ್ತೇವೆ ಅಥವಾ ಕೊಡುವುದಿಲ್ಲ ಎನ್ನುವ ಯಾವುದೇ ಮಾತನ್ನು ತಾವು ಹೇಳುತ್ತಿಲ್ಲ. ನಾನು ಒಂದು ವಿಷಯವನ್ನು ಹೇಳಿದರೆ ಬೇರೆ ಸ್ನೇಹಿತರುಗಳಿಗೆ ಬೇಸರವಾಗಬಹುದು. ಅದು ರಾಜಕೀಯ ಕಾರಣ ಗಳಿಗಾಗಿಯೋ ಅಥವಾ ಬೇರೆಬೇರೆ ಕಾರಣಗಳಿಗಾಗಿಯೋ ಇವತ್ತು ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ 71 ತಾಲ್ಲೂಕುಗಳು ಸೇರಿವೆ. ಆ 71 ತಾಲ್ಲೂಕುಗಳಲ್ಲಿ ಅರ್ಧಕ್ಕಿಂತ ಹೆಚ್ಚು ತಾಲ್ಲೂಕುಗಳು ಮಲೆನಾಡು ಪ್ರದೇಶದಲ್ಲಿ ಬರುವುದೇ ಇಲ್ಲ. ಆ ರೀತಿಯ

ತಾಲ್ಲೂಕುಗಳನ್ನೂ ಸಹ ರಾಜಕೀಯವಾಗಿಯೋ ಅಥವಾ ಮತ್ತೊಂದು ಒತ್ತಡಕ್ಕೋ ಸಿಲುಕಿ ಹಿಂದಿನವರು ಅವುಗಳನ್ನು ಆ ಮಂಡಳಿಯಲ್ಲಿ ಸೇರಿಸಿದ್ದಾರೆ. ಅದನ್ನೂ ಕೂಡ ತಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇನ್ನು ಗ್ರಾಮೀಣ ಪ್ರದೇಶದ ರಸ್ತೆಗಳ ಬಗ್ಗೆ ಹೇಳುವುದಾದರೆ, ಈ ವರ್ಷ ರಸ್ತೆ ಮಾಡಿದರೆ ಮುಂದಿನ ವರ್ಷಕ್ಕೆ ಅವು ಹಾಳಾಗಿ ಹೋಗುತ್ತವೆ. ವಿಚಿತ್ರವೆಂದರೆ, ನನ್ನ ಕ್ಷೇತ್ರದಲ್ಲಿ ಕನಿಷ್ಠವೆಂದರೆ 10 ಇಂಚು ಮಳೆ ಬೀಳುವ ಪ್ರದೇಶದಿಂದ ಹಿಡಿದು 420 ಇಂಚು ಗಳವರೆಗೆ ಮಳೆ ಬೀಳುವ ಪ್ರದೇಶಗಳಿವೆ. ಒಂದೇ ಕ್ಷೇತ್ರದಲ್ಲಿ ಎಷ್ಟೊಂದು ವಿಪರ್ಯಾಸವಿದೆ ತಾವೇ ನೋಡಿ ಉಪಾಧ್ಯಕ್ಷರೆ? ತಮ್ಮ ಕ್ಷೇತ್ರದಲ್ಲಿ ಪೂರ್ತಿ 400 ಇಂಚುಗಳಿಗೂ ಮೇಲೆ ಮಳೆ ಬೀಳುತ್ತದೆ. ನನ್ನ ಕ್ಷೇತ್ರದ ಕಟ್ಟಾಯ ಹೋಬಳಿ ಬಯಲುಸೀಮೆ ಪ್ರದೇಶ, ಅಲ್ಲಿ minimum 10 ಇಂಚು ಮಳೆ ಬೀಳುತ್ತದೆ. ಕಾಡುಮನೆ, ಹೊನಗಳ್ಳ, ಕಾಗೆನರಿ ಎನ್ನುವ ಊರುಗಳಲ್ಲಿ 420 ಇಂಚು maximum ಮಳೆ ಬೀಳುತ್ತದೆ. ಅಲ್ಲಿ ನೀವು ಈ ವರ್ಷ ಎಷ್ಟೇ ಚೆನ್ನಾಗಿ ರಸ್ತೆ ಮಾಡಿದರೂ ಕೂಡ ಮುಂದಿನ ವರ್ಷ ಆ ರಸ್ತೆ ಹಾಳಾಗಿ ಹೋಗಿರುತ್ತದೆ. ಅದಕ್ಕಾಗಿ ಮಾನ್ಯ ಸರ್ಕಾರವನ್ನು ನಾನು ಒತ್ತಾಯ ಮಾಡುವುದೇನೆಂದರೆ ಮಲೆನಾಡು ಪ್ರದೇಶಗಳಿಗೆ ವಿಶೇಷವಾಗಿ ರಸ್ತೆಗಳಿಗೆ ಅನುದಾನವನ್ನು ತಾವು ಇಡಬೇಕು. ಏಕೆಂದರೆ ಅಲ್ಲಿ ರಸ್ತೆಗಳು ಪ್ರತಿವರ್ಷ ಹಾಳಾಗಿ ಹೋಗುತ್ತಿರುತ್ತವೆ. ಹಾಗೆಯೇ ಕುಡಿಯುವ ನೀರಿಗೆ ಹೆಚ್ಚು ಅನುದಾನವನ್ನು ಕೊಡಬೇಕು. ತಾವು ಕಳೆದ ಸಾರಿಗಿಂತ ಈ ಸಾರಿ ಅನುದಾನವನ್ನು ಶೇಕಡಾವಾರು ಸ್ವಲ್ಪ ಹೆಚ್ಚು ಮಾಡಿದ್ದೀರಿ. ಆದರೆ ಸಮಸ್ಯೆಗಳಿಗನುಗುಣವಾಗಿ ಆ ಶೇಕಡಾವಾರು ಅನುದಾನ ಸಾಲದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಇನ್ನು ಸುವರ್ಣ ಗ್ರಾಮ ಯೋಜನೆಯ ಬಗ್ಗೆ ಹೇಳುವುದಾದರೆ, 2006-07ನೇ ಸಾಲಿನಲ್ಲಿ 1,200 ಗ್ರಾಮಗಳಿಗೆ ಹಿಂದೆ ನಾವು ಮಂಜೂರಾತಿ ಕೊಟ್ಟಿದ್ದೆವು. ತಾವೇ ಆಗ ಆರ್ಥಿಕ ಮಂತ್ರಿಗಳಾಗಿದ್ದಿರಿ. ನಮ್ಮ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದರು, ಅವರ ನಾಯಕತ್ವದಲ್ಲಿ ಆದಂಥ ಕೆಲಸ ಅದು. 2007-08ರಲ್ಲಿ ಇಲ್ಲ. 2008-09ನೇ ಸಾಲಿಗೆ ಸಂಬಂಧಪಟ್ಟಂತೆ ಒಂದು ತಿಂಗಳ ಹಿಂದೆ ಸುವರ್ಣ ಗ್ರಾಮದ ಹಳ್ಳಿಗಳ ಪಟ್ಟಿ ಕೊಡಿ ಎಂದು ತಾವು ನಮ್ಮನ್ನು ಕೇಳಿದ್ದೀರಿ. ಈಗ ಪುನಃ 2009-10ನೇ ಸಾಲಿಗೆ ಕೊಡುತ್ತೇವೆ ಎಂದು ತಾವು ಹೇಳಿದ್ದೀರಿ. 2008-09ನೇ ಸಾಲಿನ ಪಟ್ಟಿಗೆ ಈಗ ಒಪ್ಪಿಗೆ ನೀಡಿ, 2009-10ನೇ ಸಾಲಿನದನ್ನೂ ಕೊಡುವಿರಾ? ಅಥವಾ ಒಳ್ಳೆಯದು ಆಯಿತು, ಕೊಟ್ಟ ಹಾಗೆಯೂ ಆಯಿತು, ಮುಂದಕ್ಕೆ ಹೋದ ಹಾಗೆಯೂ ಆಯಿತು, ಈಗ carry over ಕೊಟ್ಟಿದ್ದು ಹೇಳಿಕೊಳ್ಳುವುದಕ್ಕೆ ಒಳ್ಳೆಯದು ಆಯಿತು ಎಂದು ಮಾಡುವಿರಾ, ಹೇಗೆ

ಎನ್ನುವುದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಯವರು ದಯಮಾಡಿ clarify ಮಾಡಬೇಕು. ಕಳೆದ ವರ್ಷಕ್ಕೆ ಒಂದು ಲಿಸ್ಟ್, ಈ ವರ್ಷಕ್ಕೆ ಇನ್ನೊಂದು ಲಿಸ್ಟ್ ಆದರೆ ಅದನ್ನು ಹೇಗೆ ಜಾರಿ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು ಮತ್ತು ಸುವರ್ಣ ಗ್ರಾಮ ಯೋಜನೆಯ ಕಡೆ ಗಮನ ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು, ಉದ್ಯೋಗ ಖಾತರಿ ಯೋಜನೆಯಲ್ಲಿ ಸುಮಾರು 359 ಕೋಟಿ ರೂಪಾಯಿಗಳ ಹಣವನ್ನು ತಾವು ಏಳು ಜಿಲ್ಲೆಗಳಿಗೆ ನಿಗದಿ ಮಾಡಿದ್ದೀರಿ. ಪ್ರಗತಿ ಎಷ್ಟಾಗಿದೆ ಎಂದರೆ ಶೇಕಡ 24ರಷ್ಟು ಪ್ರಗತಿಯಾಗಿದೆ. ನಮ್ಮ ಜಿಲ್ಲೆಯಲ್ಲಿ ಶೇಕಡ 10ರಷ್ಟು ಮಾತ್ರ ಪ್ರಗತಿಯಾಗಿದೆ. ಪ್ರಗತಿ ಕುಂಠಿತವಾಗುವುದಕ್ಕೆ, ಅಡ್ಡಿಯಾಗುವುದಕ್ಕೆ ಕಾರಣಗಳೇನು? ಕಾರಣವೆಂದರೆ, ಅದನ್ನು ಜಾರಿ ಮಾಡತಕ್ಕಂಥ ವಿಧಾನದಲ್ಲಿ ತಪ್ಪಿದೆ. ಅದು ಮೂಲ ಕಾರಣ. ಅದರ ಜೊತೆಗೆ ಅಲ್ಲಿ ನಿಮ್ಮ ಸಿಬ್ಬಂದಿ ಇಲ್ಲ. ಶೇಕಡ 70ರಷ್ಟು ಹಣವನ್ನು ಜಲ ಸಂರಕ್ಷಣೆಗೆ ಕೊಡುತ್ತೇವೆ, ಉಳಿದ ಶೇಕಡ 30ರಷ್ಟು ಹಣವನ್ನು ರಸ್ತೆ, ಚರಂಡಿ ಮತ್ತೊಂದಕ್ಕೆ ಕೊಡುತ್ತೇವೆ ಎಂದು ಹೇಳುತ್ತೀರಿ. ಕೃಷಿ ಹೊಂಡಗಳು ಮತ್ತೊಂದನ್ನು estimate ಮಾಡುವುದಕ್ಕೆ ಜಲಾನಯನದಲ್ಲಿ ಇಡೀ ತಾಲ್ಲೂಕಿಗೆ ಕೃಷಿ ಸಹಾಯಕರು ಇಬ್ಬರೇ ಇರತಕ್ಕಂಥಾದ್ದು. ಕೃಷಿ ಇಲಾಖೆ, ಜಲಾನಯನ ಮತ್ತು ನೀರಿನ ಇನ್ನೊಂದು ಯಾವುದೋ ಒಂದು ಇದೆ, ಇವೆಲ್ಲ ಇಲಾಖೆಗಳು ಸೇರಿ 16–18 ಪೋಸ್ಟ್ ಇರತಕ್ಕಂಥ ತಾಲ್ಲೂಕಿಗೆ ಇರುವುದೇ ಇಬ್ಬರೇ ಕೃಷಿ ಸಹಾಯಕರು. ಎಲ್ಲ ತಾಲ್ಲೂಕುಗಳ ಗತಿಯೂ ಇದೇ ಎನ್ನುವ ಹಾಗೆ ಕಾನುತ್ತಿದೆ. ಹೀಗಿರುವಾಗ ಅವರು ಏನು estimate ಮಾಡುತ್ತಾರೆ? ಉದ್ಯೋಗ ಖಾತರಿ ಯೋಜನೆಯ ಕ್ರಿಯಾ ಯೋಜನೆಯ ಕೆಲಸಗಳನ್ನು ಅವರು ಇನ್ನೂ ಕೂಡ ಪೂರ್ತಿಯಾಗಿ estimate ಮಾಡಿಲ್ಲ. ಹಿಗಿರುವಾಗ ಕಾರ್ಯಕ್ರಮಗಳು ಹೇಗೆ ಜಾರಿಯಾಗುತ್ತವೆ? ತಾವು ಒಂದು ವಿಷಯವನ್ನು ಹೇಳಿದ್ದೀರಿ, ಕಡಿಮೆ ಕೆಲಸ ಕೊಡುತ್ತೇವೆ, ಕೂಲಿ ಹೆಚ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ನಮ್ಮ ಮಲೆನಾಡು ಭಾಗದಲ್ಲಿ ಇವತ್ತು 200 ರಿಂದ 250 ರೂಪಾಯಿ ಕೂಲಿ ಇದೆ. ಆದರೂ ಯಾರೂ ಕೂಡ ಬರುತ್ತಿಲ್ಲ. ಆದ್ದರಿಂದ, ಸರ್ಕಾರಕ್ಕೆ ನನ್ನ ಸಲಹೆ ಎಂದರೆ ತಾವು ಒಂದು ವಿಚಾರವನ್ನು ಇಟ್ಟುಕೊಂಡು ಕೆಲಸವನ್ನು ಮಾಡಬೇಕು. ಆಯಾಯಾ ಪ್ರದೇಶಗಳಿಗೆ ಇದರಿಂದ ಎಷ್ಟು ಅನುಕೂಲವಾಗುತ್ತದೆ ಎನ್ನುವ ಬಗ್ಗೆ ತಿಳಿವಳಿಕೆ ನೀಡಬೇಕು. ನಿಮಗೆ ಕೂಲಿ ಕಡಿಮೆಯಾದರೂ ಕೂಡ ನಿಮ್ಮ ಊರಿನಲ್ಲಿ ಗ್ರಾಮ ನೈರ್ಮಲ್ಯ, ಜಲ ಸಂರಕ್ಷಣೆ ಅಗತ್ಯ ಇರತಕ್ಕಂಥ ಈ ದಿನಗಳಲ್ಲಿ, ಮಳೆ ಕಡಿಮೆಯಾಗಿರತಕ್ಕಂಥ ಈ ದಿನಗಳಲ್ಲಿ, ಮಳೆಯ ನೀರನ್ನು ಹೇಗೆ ಸ್ಟೋರ್ ಮಾಡಬೇಕು ಎನ್ನುವುದರ ಬಗ್ಗೆ ತಿಳಿವಳಿಕೆ ನೀಡಬೇಕು. ಅದು ಒಂದು ರೀತಿ ಆಂದೋಳನದ ರೀತಿಯಲ್ಲಿ ಆಗಬೇಕು.

ನೀರನ್ನು ಶೇಖರಿಸತಕ್ಕಂಥ ಕೆಲಸ, ಜಲಜಾಗೃತಿ ಮೂಡಿಸುವಂಥ ಜಲಾಂದೋಳನದ ರೀತಿಯಲ್ಲಿ ಮಾಡಬೇಕು ಎನ್ನುವ ಜಾಗೃತಿ ಮೂಡಿಸತಕ್ಕಂಥ ಒಂದು ಕೆಲಸವನ್ನು ಸರ್ಕಾರ ಮಾಡಬೇಕು. ರಾಜಸ್ಥಾನ, ಬಿಹಾರ, ತಮಿಳುನಾಡು ಮತ್ತು ಬಡತನ ಹೆಚ್ಚಿರತಕ್ಕಂಥ ರಾಜ್ಯಗಳಲ್ಲಿ ಅದು ಫಲಪ್ರದವಾಗಬಹುದು. ಆದರೆ ನಮ್ಮ ರಾಜ್ಯದಲ್ಲಿ ಇದು ಕಷ್ಟವಿದೆ. ಆ ಕಡೆಗೆ ತಾವು ಗಮನ ಕೊಡುತ್ತೀರಿ ಎನ್ನುವ ಮಾತನ್ನು ಹೇಳುತ್ತೇನೆ. ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ, 2009-10ರ ಸಾಲಿನ ಯೋಜನೆಗಳು ಒಂದು ಕಡೆ ಇರಲಿ. ತಾವು 2008-09ರ ಬಜೆಟ್‌ನಲ್ಲಿ ಏನು ಹೇಳಿದ್ದೀರಿ, ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎನ್ನುವುದನ್ನು ಹೇಳಬೇಕು. ನಮ್ಮ ಹೇಮಾವತಿ ಜಲಾಶಯ ಯೋಜನೆಯಲ್ಲಿ 2005-06, 2006-07, 2007-08ರಲ್ಲಿ ಕಾಮಗಾರಿಗಳನ್ನು ಕೈಗೊಂಡು ನೀರಾವರಿ ನಿಗಮ, ನಿರಾವರಿ ಇಲಾಖೆ ಇದಕ್ಕೆಲ್ಲ ನೀವು ಒಪ್ಪಿಗೆಯನ್ನು ಕೊಟ್ಟಿರಿ. ಒಪ್ಪಿಗೆ ಕೊಟ್ಟ contractorಗಳು agreement ಮಾಡಿಕೊಂಡಿದ್ದಾರೆ. ಕಾಮಗಾರಿಗೆ agreement ಆಗಿದೆ. ಆದರೆ, ಕೆಲಸ ಪ್ರಾರಂಭ ಮಾಡಬೇಡಿ ಎಂದು ಹೇಳಿದ್ದಾರೆ. ಹಾಗಾಗಿ, ಕೆಲಸ ಮಾಡುತ್ತಿಲ್ಲ. ಹಾಗಾದರೆ, ಬಜೆಟ್ ಪುಸ್ತಕದಲ್ಲಿ ನೀರಾವರಿಗೆ ಇಷ್ಟು ಹಣ ಇಟ್ಟಿದ್ದೇವೆಂದು ಏಕೆ ಹೇಳುತ್ತೀರಿ? ಶ್ರೀಸಾಮಾನ್ಯ ಏನೆಂದುಕೊಳ್ಳುತ್ತಾನೆ? ಟಿ.ವಿ.ಯಲ್ಲಿ ನೋಡಿದ ತಕ್ಷಣ, ರೇಡಿಯೋದಲ್ಲಿ ಕೇಳಿದ ತಕ್ಷಣ, ಪತ್ರಿಕೆಯಲ್ಲಿ ಓದಿದ ತಕ್ಷಣ, 'ಓ, ನನ್ನ ಬಡತನ ನೀಗಿ ಹೋಯಿತು, ನಾನು ಇದ್ದಕ್ಕಿದ್ದಂತೆ ಕುಬೇರನಾಗುತ್ತೇನೆ, ಇನ್ನು ಮುಂದೆ ನನ್ನ ಸ್ಥಿತಿ ಸುಧಾರಿಸುತ್ತದೆ' ಎಂದು ಏನೋ ಆಶಾಭಾವನೆ ಹೊಂದುತ್ತಾನೆ. ಜಾರಿ ಮಾಡುವಾಗ ನಾವಿಲ್ಲಿ ಏನು ಮಡುತ್ತೇವೆ? ವರ್ಷ ಪೂರ್ತಿಯಾದರೂ ಕೂಡ contract ತೆಗೆದುಕೊಂಡವನು, agreement ಮಾಡಿಕೊಂಡವನಿಗೂ ಕೂಡ ಕೆಲಸ ಪ್ರಾರಂಭ ಮಾಡಬೇಡಿ, ದುಡ್ಡಿಲ್ಲವೆಂದು ನೀವು ಹೇಳುವುದಾದರೆ ಹೇಗೆ? ನನ್ನ ಸಕಲೇಶಪುರ ಮತ್ತು ಆಲೂರು ಕ್ಷೇತ್ರ ಹೇಮಾವತಿ ತಾಲ್ಲೂಕಿನಲ್ಲಿ ಜಲಾಶಯದ ಹಿನ್ನೀರು ಬರುತ್ತದೆ. ಆಲೂರು ತಾಲ್ಲೂಕಿನಲ್ಲಿ ಸುಮಾರು 17 ಹಳ್ಳಿಗಳು ಶೀತಪೀಡಿತ ಪ್ರದೇಶಗಳಾಗಿದ್ದು, ಅವು ಶೀತಪೀಡಿತ ಪ್ರದೇಶಗಳೆಂದು ಘೋಷಣೆಯಾಗಿದ್ದರೂ ಕೂಡ ಪರಿಹಾರ ಕೊಡುವುದಕ್ಕಾಗಲಿ, ಇನ್ನೂ ಕೂಡ ಒಪ್ಪಿಗೆ 'ಪಡೆಯುವುದಕ್ಕಾಗಲಿ ಆಗಿಲ್ಲ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ಕೋರುವುದೇನೆಂದರೆ, ಬೇರೆ ಏನೇ ಇರಲಿ, ನಮಗೆ ವೈಯಕ್ತಿಕ ಸವಲತ್ತು ಕೊಡುವುದು ಏನೇ ಇರಲಿ, ಅವುಗಳನ್ನು ಕೊಡುವುದರಲ್ಲಿ ಸ್ವಲ್ಪ ದಿನ ತಡವಾದರೂ ಪರವಾಗಿಲ್ಲ, ಇಲ್ಲಿ ಪರಿಹಾರ ಕೊಡಿ. ಜಲಾಶಯದ ಹಿಂಭಾಗದಲ್ಲಿ ಮೇ ತಿಂಗಳಲ್ಲಿ ಮಳೆ ಪ್ರಾರಂಭವಾಗುತ್ತದೆ. ನಾವು ಇಡೀ ನಾಡಿಗೆ ನೀರು ಕೊಡುವಂಥವರು. ಆ ಜನ ಎಲ್ಲಾ ಕಷ್ಟಗಳನ್ನು ಅನುಭವಿಸಿ

ಆ ಮಳೆ ಚಳಿಯಲ್ಲಿ ಜೀವನ ಮಾಡುತ್ತಾರೆ. ಅವರ ಮನೆ ಮುಂದೆ ನೀರು ನಿಲ್ಲುತ್ತದೆ. ಮನೆಯ ಕೆಳಗಡೆ. ಸುಮಾರು ಅರ್ಧ ಅಡಿಯಷ್ಟು ನೀರು ಹರಿಯುತ್ತದೆ. ಅವರು ಅದರ ಮೇಲೆ ಹುಲ್ಲು, ಗೋಣಿಚೀಲ ಹಾಕಿಕೊಂಡು ಮಲಗಿಕೊಳ್ಳುತ್ತಾರೆ. ಅಧಿಕಾರಿಗಳು ಹೋಗಿ ನೋಡಿ ಬರುತ್ತಾರಷ್ಟೆ. ಇಚ್ಛಾಶಕ್ತಿಯ ಕೊರತೆ ಇದೆ. ಏಕೆ? ಅಂಥ ಸಮಸ್ಯೆಗಳಿಗೆ ಹಣ ಖರ್ಚು ಮಾಡಿ ಅಂಥವುಗಳಿಗೆ ಒಪ್ಪಿಗೆ ಕೊಡಿ ಎಂದರೆ 2–3 ಸಲ inspection ಮಾಡುತ್ತಾರೆ. ಬೇಲೂರು ತಾಲ್ಲೂಕಿನಲ್ಲಿಯೂ ಅದೇ ಸಮಸ್ಯೆ ಇದೆ. ಈ ರೀತಿಯ ಸಮಸ್ಯೆಗಳಿಗೆ ಸರ್ಕಾರ ಗಮನ ಹರಿಸಬೇಕಾಗಿದೆ. ಅದಕ್ಕೆ ರಾಜಕೀಯ ಬೆರೆಸಬಾರದು. ಈ ನಿಟ್ಟಿನಲ್ಲಿ ಪ್ರಗತಿಗೆ ಸಹಾಯ ಮಾಡಿ ಎನ್ನುವ ಮಾತನ್ನು ಹೇಳುತ್ತೇನೆ. ಹೇಮಾವತಿ ಜಲಾಶಯದ ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳನ್ನು ತಕ್ಷಣ ಪ್ರಾರಂಭ ಮಾಡಬೇಕು ಎನ್ನುವ ಆದೇಶವನ್ನು ಸರ್ಕಾರ ಕೂಡಲೆ ಹೊರಡಿಸಬೇಕು. ಗೊರೂರು ಜಲಾಶಯದ ಮುಂಭಾಗ ಗೊರೂರು ಗ್ರಾಮವಿದೆ. ಆ ಜಲಾಶಯದ ಮುಂಭಾಗದಲ್ಲಿ ನಮ್ಮ ನೌಕರರ ವಸತಿ ಗೃಹಗಳಿವೆ. ಆ ವಸತಿ ಗೃಹಗಳಿಗೆ filter water ಒದಗಿಸುತ್ತಾರೆ. ಆದರೆ, ಆ ಜಲಾಶಯದ ಮುಂದಿರುವ ಹಳ್ಳಿಗಳ ಜನರಿಗೆ ಮುಂದುಗಡೆ ಹರಿಯುವ ಹೊಳೆಯ ನೀರನ್ನು ನೇರವಾಗಿ ಕುಡಿಯುವುದಕ್ಕೆ ಸರಬರಾಜು ಮಾಡುತ್ತಾರೆ. ಇದರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೋ ಅಥವಾ ಸರ್ಕಾರ ಕಿವಿಗೊಡುತ್ತಿಲ್ಲವೋ ಗೊತ್ತಿಲ್ಲ. ಅವರು ಕುಡಿಯುವ ನೀರಿಗೂ, ಇವರು ಕುಡಿಯುವ ನೀರಿಗೂ ಹೇಗೆ ವ್ಯತ್ಯಾಸವಿದೆ ಎಂದು ನೋಡಬಹುದು. ಇದಕ್ಕೆ ನಾವೇನು ಹೇಳಬೇಕು? ಇದರ ಬಗ್ಗೆ ಗಮನಹರಿಸಬೇಕು. ಜೊತೆಗೆ, ಗೊರೂರು ಗ್ರಾಮಕ್ಕೆ 6(1) notification ಇತ್ಯಾದಿ ಪ್ರತಿಯೊಂದೂ ಆಗಿದೆ. ಇನ್ನೂ ಕೂಡ acquisition process ಅನ್ನು ಪೂರ್ತಿ ಮಾಡುವ ಕೆಲಸ ಆಗಿಲ್ಲ. ಅದಕ್ಕೂ ಕೂಡ ಗಮನಹರಿಸಬೇಕು. ಇನ್ನು, ಗ್ರಾಮೀಣ ಅಭಿವೃದ್ಧಿ ವಿಚಾರದಲ್ಲಿ ಹೇಳುವುದಾದರೆ, ಗ್ರಾಮ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ನಮ್ಮ ಪರಿಶಿಷ್ಟ ಜಾತಿ ಕಾಲೋನಿಗಳಿಗೆ ತಾವು 100 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಅದನ್ನು ನಾನು ಸ್ವಾಗತಿಸುತ್ತೇನೆ. ಅದೇ ತರಹದಲ್ಲಿ ಅಷ್ಟೂ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮನ್ನು ಒತ್ತಾಯಿಸುತ್ತೇನೆ. 100 ಕೋಟಿ ರೂಪಾಯಿಗಳೆಂದು ಹೇಳಿ ಮುಂದಿನ ವರ್ಷ ಮಾರ್ಚ್ ಬಂದಾಗ 5 ಕೋಟಿ, 10 ಕೋಟಿ ರೂಪಾಯಿಗಳನ್ನು ಕೊಟ್ಟರೆ ನಾವೇನು ಮಾಡಬೇಕು? ನಮ್ಮ ಊರಿಗೆ ಚರಂಡಿ, ಕಾಲೋನಿ ಬರುತ್ತದೆಂದು ಅವನೇನೋ ಕಾಯುತ್ತಿದ್ದಾನೆ. ಈಗ ಇಡೀ ಊರುಗಳೇ slumಗಳಾಗಿವೆ. ಆ ಕಾಲೋನಿ ಈ ಕಾಲೊನಿ ಎನ್ನುವ ಪ್ರಶ್ನೆಯೇ ಇಲ್ಲ. ಹಳ್ಳಿಗೆ

ಹೋದರೆ ಎಲ್ಲರ ಗೋಳು ಅದೇ ಇದೆ. ಯಾವ ಹಳ್ಳಿ ಸರಿಯಾಗಿದೆ ಹೇಳಿ? ಕರ್ನಾಟಕ ರಾಜ್ಯದಲ್ಲಿ 27. ಸಾವಿರ ಹಳ್ಳಿಗಳಿವೆ. ಯಾವ ಬೀದಿಗೆ ಹೋದರೂ ಅದೇ ಪರಿಸ್ಥಿತಿ. ಅದಕ್ಕೆ ಯಾರು ಕಾರಣರೋ, ಹಿಂದಿನದೋ, ಇಂದಿನದೋ ಅದು ಬೇಡ. ಇದೊಂದು ಒಳ್ಳೆಯ ಯೋಜನೆಯನ್ನು ತಾವು ಘೋಷಣೆ ಮಾಡಿದ್ದೀರಿ. ಅದು ಜಾರಿಗೆ ಬರಬೇಕು. ಪರಿಶಿಷ್ಟ ಜಾತಿಯ ಜನಸಂಖ್ಯೆ ಎಲ್ಲಿ ಹೆಚ್ಚು ಇರುತ್ತದೆ ಅಂಥ ಹಳ್ಳಿಗಳನ್ನು ತಾವು ಆಯ್ಕೆ ಮಾಡಿಕೊಂಡು ಅವುಗಳ ನೈರ್ಮಲ್ಯವನ್ನು ಕಾಪಾಡುವ ಕೆಲಸವನ್ನು ಮಾಡಬೇಕು ಎಂದು ಒತ್ತಾಯಿಸುತ್ತೇನೆ. ಶುಚಿತ್ವ ಬಹಳ ಮುಖ್ಯ. ಹಳ್ಳಿ ಜನರು ಅನಾರೋಗ್ಯದಿಂದ ಏಕೆ ಬಳಲುತ್ತಿದ್ದಾರೆ? ಅದು anaemic ಇರಬಹುದು, ಮತ್ತೊಂದು ಇರಬಹುದು. ನಮ್ಮ ಮಹಿಳೆಯರು ಶೇ. 60-65 ರಷ್ಟು ಇನ್ನೂ ಕೂಡ ರಕ್ತ ಹೀನತೆಯಿಂದ ನೆರಳುತ್ತಿದ್ದಾರೆ, ಅನೇಕ ರೋಗರುಜಿನಗಳಿಂದ ನರಳುತ್ತಿದ್ದಾರೆ. ಅದಕ್ಕೆ ಏನು ಕಾರಣ? ನಾವು bore-well ತೋಡಿದರೆ ಆ bore-well ಹತ್ತಿರವೇ ಎರಡು ಅಡಿಯಷ್ಟು ಗಲೀಜು ತುಂಬಿರುತ್ತದೆ. ಆ ಗಲೀಜಿನಲ್ಲಿಯೇ ಕೊಡ ಇಡುತ್ತಾರೆ, ಅಲ್ಲಿಯೇ ನೀರು ಹಿಡಿದುಕೊಳ್ಳುತ್ತಾರೆ, ಅದನ್ನೇ ತೆಗೆದುಕೊಂಡು ಅಡುಗೆ ಮಾಡುತ್ತಾರೆ. ನಾವು ಅಲ್ಲಿ ಏನು ಶುಚಿತ್ವ ಮಾಡಬಹುದು? ಅದಕ್ಕಾಗಿ ಇವತ್ತು ಬೇರೆ ಕಾರ್ಯಕ್ರಮಗಳನ್ನು ಬದಿಗಿಟ್ಟು ಗ್ರಾಮ ನೈರ್ಮಲ್ಯಕ್ಕೆ ಮತ್ತು ಶುಚಿತ್ವಕ್ಕೆ ಸರ್ಕಾರ ಹೆಚ್ಚು ಅನುದಾನವನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡಿಸಿರುವುದು 20ನೇ ತಾರೀಖು. ಮೊನ್ನೆ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ 21, 22ನೇ ತಾರೀಖಿನಲ್ಲಿ ಚಿನಕುರಳಿ ತರಹ ಎರಡು ಹಾಸ್ಯವನ್ನು ಬರೆದಿದ್ದಾರೆ. ಶಾಸ್ತ್ರ ಕೇಳಿದರೆ ಆ ಗಿಳಿ ಒಂದೇ ಒಂದು ಪದ ಹೇಳುವುದು ಬಿಟ್ಟರೆ ಬೇರೆ ಏನು ಹೇಳುವುದಿಲ್ಲ. ಅದೇನೆಂದರೆ, 'ಕೋಟಿ, ಕೋಟಿ, ಕೋಟಿ' ಎಂದು. ಅಂದರೆ ಮಾನ್ಯ ಮುಖ್ಯಮಂತ್ರಿಗಳು ಯರು ಕೇಳಿದರೂ ಕೋಟಿ ಬಿಟ್ಟು ಕೆಳಗೆ ಇಳಿದಿಲ್ಲ. ಕೋಟಿ ಮೇಲೆಯೇ ಇದ್ದಾರೆ. ಸಂತೋಷ. ಕೊಡಲಿ. ಆದರೆ, ಹಣವನ್ನು ಎಲ್ಲಿಂದ ತರುತ್ತೀರಿ? ಹೇಗೆ ಕೊಡುತ್ತೀರಿ? ಇಷ್ಟೆಲ್ಲ ಕೊರತೆ ಇದೆಯೆಂದು ಹೇಳುತ್ತಿದ್ದರೂ ಕೂಡ ನಮಗೆ ಅದೇ ಆಶ್ಚರ್ಯ. ಯಾವ ರೀತಿ, ಎಲ್ಲಿಂದ ತಂದು ಖರ್ಚು ಮಾಡುತ್ತೀರಿ ಎನ್ನುವುದು ಕೂಡ ಒಂದು ಚಿಂತೆಯಾಗಿಬಿಟ್ಟಿದೆ. ನಾನು ಗಮನಿಸಿದ್ದೇನೆ. ಎಲ್ಲಾ ಮಠಗಳಿಗೂ, ಎಲ್ಲಾ ಸಂಘಸಂಸ್ಥೆಗಳಿಗೂ, ಎಲ್ಲರಿಗೂ ಕೂಡ ಕೊಟ್ಟಿದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿರಲಿಲ್ಲ. ಅನಿವಾರ್ಯವಾಗಿ ನನಗೆ ಇಷ್ಟವಿಲ್ಲದಿದ್ದರೂ ಕೇಳುತ್ತಿದ್ದೇನೆ. ಜನವರಿ 11ನೇ ತಾರೀಖು ಶಿವಮೊಗ್ಗದಲ್ಲಿ ನಾವು ಛಲವಾದಿ ಮಠದ ಸಭೆಯನ್ನು ಮಾಡಿದ್ದೆವು. ಅದರಲ್ಲಿ ನಮ್ಮ ಮಾನ್ಯ ಪರಮೇಶ್ವರ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮಾನ್ಯ ಮುಖ್ಯಮಂತ್ರಿಗಳೂ

ಕೂಡ ಆ ಕಾರ್ಯಕ್ರಮಕ್ಕೆ ಬಂದು ಮಾತನಾಡಿದಿರಿ. ಆ ಸಭೆಯಲ್ಲಿ 2 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು announce ಮಾಡಿದಿರಿ. ನಾನು ಕೇಳುವುದಿಲ್ಲ, ನನಗೆ ಇಷ್ಟವಿಲ್ಲ, ಆ ತರಹ ಒಳ ಪಂಗಡಗಳು, ಉಪ ಪಂಗಡಗಳ ಆಧಾರದ ಮೇಲೆ, ಹಣ ಕೊಡಿ ನಮ್ಮ ಅಭಿವೃದ್ಧಿ ಅದರಿಂದ ಮಾತ್ರ ಸಾಧ್ಯ. ಎಂದು ವಾದ ಮಾಡಿಸುವುದಕ್ಕೆ ನಾನಂತೂ ಸಿದ್ಧನಿಲ್ಲ. ತಾವು ಬಜೆಟ್‌ನಲ್ಲಿ ಕೆಲವು ವರ್ಗಗಳಿಗೆ 5ಕೋಟಿ ಕೊಡುತ್ತೇನೆ, 3 ಕೋಟಿ ಕೊಡುತ್ತೇನೆ, 2 ಕೋಟಿ ಕೊಡುತ್ತೇನೆ, 1 ಕೋಟಿ ಹಣ ಕೊಡುತ್ತೇವೆಂದು ಹೇಳಿದ್ದೀರಿ. ಹಾಗೆ ಕೊಡುವುದಾದರೆ ನಮಗೂ ಕೊಡಿ ಎಂದು ನನ್ನ ಒತ್ತಾಯವಷ್ಟೆ. ನಾನು ಹೆಚ್ಚು ಒತ್ತಾಯ ಮಾಡುವುದಿಲ್ಲ. ನನಗೆ ಇದರ ಬಗ್ಗೆ press ಮಾಡುವುದಕ್ಕೆ ಇಷ್ಟವಿಲ್ಲ. ಏಕೆಂದರೆ, ಆವತ್ತು ಪರಮೇಶ್ವರ್‌ರವರು ಬಹಳ ಚೆನ್ನಾಗಿ ಮಾತನಾಡಿದರು. ನಾನು ಏನೋ ಬೇರೆ ತರಹದಲ್ಲಿ ರಾಜಕೀಯವಾಗಿ ಎಲ್ಲೆಲ್ಲೋ ನಿಲ್ಲಿಸಿ, start ಮಾಡಿ ಮುಗಿಸಿಬಿಡುತ್ತಾರೆಂದು ನಾನು ಅಂದುಕೊಂಡಿದ್ದೆ. ತುಂಬಾ ತರ್ಕಬದ್ಧವಾಗಿ ಮಾತನಾಡಿದರು. ಆ ಸಭೆಯಲ್ಲಿ ತಾವು ಸಹ ಚೆನ್ನಾಗಿ ಮಾತನಾಡಿದಿರಿ. ಅದು ಇವತ್ತು ಅನಿವಾರ್ಯ ಆಗಿಬಿಟ್ಟಿದೆ. ಇವತ್ತು ಜಾತಿ ಅನಿವಾರ್ಯವಾಗಿದೆಯೋ, ಒಳ ಪಂಗಡಗಳು ಅನಿವಾರ್ಯವಾಗಿದೆಯೋ, ಉಪ ಪಂಗಡಗಳು ಅನಿವಾರ್ಯವಾಗಿದೆಯೋ ಅಥವಾ ಕೆಲವರಿಗೆ ಅನಿವಾರ್ಯವಾಗಿ ಏನಾದರೂ ಆ ಉಪಪಂಗಡಗಳನ್ನು, ಒಳಪಂಗಡಗಳನ್ನು ಎತ್ತಿ ಇವತ್ತು ಹೀಗೆಲ್ಲ ಮಾತನಾಡುತ್ತಿದ್ದಾರೋ ಗೊತ್ತಿಲ್ಲ. ಈಗ ಅದು ಬೇಡ, ಅದನ್ನು ಬೇರೆ ವೇದಿಕೆಯಲ್ಲಿ ಚರ್ಚೆ ಮಾಡೋಣ. ಇನ್ನು ಸಾರಿಗೆ ವಿಚಾರವಾಗಿ ಹೇಳುವುದಾದರೆ, ಮಾನ್ಯ ಸಚಿವರು ಬೆಂಗಳೂರಿನಲ್ಲಿ ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದೀರಿ. ಹಳ್ಳಿ ಜನ ಕೂಡ ಇದೇ ತಹರ ಸೀಟ್‌ನಲ್ಲಿ ಸ್ವಲ್ಪ ಚೆನ್ನಾಗಿ ತಿರುಗಾಡಲಿ. ಹಳ್ಳಿಯಲ್ಲಿ ಜನರು ಓಡಾಡುವುದೇ 3–4 ಕಿಲೋ ಮೀಟರ್. ಅಲ್ಲಿ 3–4 ಸಲ ಬಸ್ಸು ನಿಂತುಹೋಗುತ್ತದೆ. ಎಲ್ಲಾ ಹಳೆಯ ಬಸ್ಸುಗಳನ್ನು ಆಯ್ದು ಡಿಪೋ ಮ್ಯಾನೇಜರ್‌ಗಳು, ವಿಭಾಗ ನಿಯಂತ್ರಣಾಧಿಕಾರಿಗಳು ಎಲ್ಲಾ ಹಳೆಯ ಬಸ್ಸುಗಳನ್ನು ಹಳ್ಳಿಗೆ ಕೊಟ್ಟಿದ್ದಾರೆ. ಒಳ್ಳೆಯ ಸುಖಾಸೀನ ಬಸ್ಸುಗಳನ್ನೆಲ್ಲವನ್ನೂ ಸಿಟಿಗೆ ಕೊಟ್ಟಿದ್ದಾರೆ. ಮಂಗಳೂರು, ಹಾಸನ, ಹಾಸನ–ಬೆಂಗಳೂರು, ಬೆಂಗಳೂರು–ತಿರುಪತಿ ಇರಬಹುದು, ತಿರುಪತಿಗೆ ಹೋಗುವವರಿಗೆ ಮಾತ್ರ ಸುಖಸೀನ ಬಸ್ಸು, ಬಹಳ ಚೆನ್ನಾಗಿ ಹೋಗಿ ವಾಪಸ್ಸು ಬರಬೇಕು. ನಮ್ಮ ಹಳ್ಳಿಯವರು ಅಂಥ ಸುಖಾಸೀನ ಬಸ್ಸುಗಳಲ್ಲಿ ಹೋಗಬಾರದೇ? ಹಣ ಕೊಡುವುದಕ್ಕೆ ಹಳ್ಳಿಯ ಜನರೂ ರೆಡಿ ಇದ್ದಾರೆ. ಸ್ವಲ್ಪ 5 ರೂಪಾಯಿ ಜಾಸ್ತಿಯಾದರೂ ಪರವಾಗಿಲ್ಲ. ಹಳ್ಳಿಗಳಿಗೂ, ಒಳ್ಳೆಯ ಉತ್ತಮವಾದ ಬಸ್ಸುಗಳನ್ನು ಹಾಕಿ. ಅವರೂ ಕೂಡ ಏನು ಟೂರ್ ಕಳುಹಿಸಿದ್ದೀರಲ್ಲ, ಚೀನಾ, ಮಹಾರಾಷ್ಟ್ರ, ಅಲ್ಲಿ

ಇಲ್ಲಿ ಎಲ್ಲ ಹೋಗಿದ್ದಾರಲ್ಲಾ, ಆ 2 ದಿನಕ್ಕೆ ಮಾತ್ರ ಅವರು ಸುಖವಾಗಿ ಇರಬೇಕಾ? ಬೇರೆ ದಿನಗಳಲ್ಲಿ ಒಳ್ಳೆಯ ಸೀಟಿನಲ್ಲಿ ಕುಳಿತುಕೊಂಡು ಹೋಗಲಿ, ಒಳ್ಳೆಯ ಬಸ್ಸುಗಳನ್ನು ಕೊಡಿ. ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಹಿಂದೆ ಸಗೀರ್ ಅಹಮ್ಮದ್‌ರವರು ಸಾರಿಗೆ ಸಚಿವರಾಗಿದ್ದಾಗ ಮಾಡಿದ್ದರು. ಹೀಗೆಯೇ ಪ್ರಾಂತೀಯ ಮನೋಭಾವ ಇದ್ದುಬಿಟ್ಟರೆ ಈ ರೀತಿ ಆಗುತ್ತದೆ. ಸರ್ಕಾರ ನಡೆಸುವವರಿಗೆ, ಮಂತ್ರಿಯಾದವರಿಗೆ, ಶಾಸಕರಾದವರಿಗೆ ದೂರಾಲೋಚನೆ ಇರಬೇಕೇ ಹೊರತು ದುರಾಲೋಚನೆ ಇರಬಾರದು. ಚಿಕ್ಕಮಗಳೂರು ವಿಭಾಗಕ್ಕೆ ಒಂದು ಸೃಷ್ಟಿ ಮಾಡಿಕೊಂಡರು. ಆಗ ನಾನು ಬೇಲೂರು ಕ್ಷೇತ್ರದ ಎಂ.ಎಲ್.ಎ. ಆಗಿದ್ದೆ. ಬೇಲೂರು, ಸಕಲೇಶಪುರ ಎರಡು ಡಿಪೋಗಳನ್ನು ತೆಗೆದು ಅಲ್ಲಿಗೆ ಹಾಕಿದರು. ಸಕಲೇಶಪುರ ಅಂಚಿನಿಂದ ಚಿಕ್ಕಮಗಳೂರಿಗೆ 170 ಕಿಲೋ ಮೀಟರ್ ಆಗುತ್ತದೆ. ಸಕಲೇಶಪುರ ಲಾಸ್ಟ್ ವಿಲೇಜ್‌ನಿಂದ ಚಿಕ್ಕಮಗಳೂರಿಗೆ 170 ಕಿ.ಮೀ. ಬರಬೇಕು. ಸಕಲೇಶಪುರದಿಂದ ಚಿಕ್ಕಮಗಳೂರಿಗೆ 65 ಕಿಲೋ ಮೀಟರ್ ಆಗುತ್ತದೆ. ಒಂದಕ್ಕೊಂದು ಸಂಬಂಧವಿಲ್ಲ. ನಾವು ಆ ಡಿಪೋ ಮ್ಯಾನೇಜರ್, ಆ ವಿಭಾಗ ನಿಯಂತ್ರಣಾಧಿಕಾರಿ, ಡಿ.ಸಿ.ಯವರಿಗೆ ಹೇಳಿ ಸಾಕಾಯಿತು. Administration ಸರಿಯಿಲ್ಲ. ಅಲ್ಲಿ ಹಳೆಯ ಬಸ್ಸು ಹಾಕಿದ್ದಾರೆ. ಅದಕ್ಕೆ ತಾವು ವಿವರ ತರಿಸಿಕೊಳ್ಳಿ. ಸಕಲೇಶಪುರ ಡಿಪೋವನ್ನು ಹಿಂದೆ ಇದ್ದ ಹಾಗೆ ಹಾಸನ ವಿಭಾಗಕ್ಕೆ ಕೊಡಿ ಎಂದು ನಾನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಕುಮಾರಸ್ವಾಮಿಯವರು ಹೇಳಿದ್ದಕ್ಕೆ ಪೂರಕವಾಗಿ ಹೇಳುತ್ತೇನೆ. KSRTC ಮಂತ್ರಿಗಳು hi-tech ಇದ್ದಾರೆ. ಗ್ರಾಮೀಣ ಭಾಗದಲ್ಲಿ hi-tech ಬಸ್ಸುಗಳನ್ನು ಓಡಿಸಲೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಬಸ್ಸು ಓಡಿಸಿದರೆ ಸಾಕಾಗಿದೆ. ಮಾನ್ಯ ಸಚಿವರೆ, ಬಸ್ಸುಗಳೇ ಇಲ್ಲ. ಅದನ್ನು ಏನಾದರೂ ಮಾಡಿ ಬದಲಾವಣೆ ಮಾಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ತಾಂತ್ರಿಕ ಕಾರಣ ಏನೇ ಇರಬಹುದು. ವಿಭಾಗ ಎಂದರೆ ಎಷ್ಟು ಮಾರ್ಗ ಇರಬೇಕೆಂದು ಇದೆ, ಅದು ಗೊತ್ತಿದೆ. ಆದರೆ, ದಯವಿಟ್ಟು ತಾಂತ್ರಿಕ ಕಾರಣ ಒಡ್ಡಬೇಡಿ. ಸಾಮಾನ್ಯ ಜನರ ಹಿತದೃಷ್ಟಿಯಿಂದ ನಗರ ಜನರ ರೀತಿಯಲ್ಲಿ ಒಳ್ಳೆಯ ಸಾರಿಗೆ ವ್ಯವಸ್ಥೆ ಸಿಗಬೇಕೆನ್ನುವ ದೃಷ್ಟಿಯಿಂದ ಸಕಲೇಶಪುರ ಡಿಪೋ ಅನ್ನು ಹಾಸನ ವಿಭಾಗಕ್ಕೆ ವರ್ಗಾಯಿಸಿಕೊಡಿ ಎಂದು ಒತ್ತಾಯಿಸುತ್ತೇನೆ. ಹಾಗೆಯೇ, ಬಸ್ಸುಗಳು ಸಕಾಲಕ್ಕೆ ಬರಬೇಕು. ಉತ್ತಮವಾದ ಬಸ್ಸುಗಳನ್ನು ನಮಗೆ ಕೊಡಿ. ಉದಾಹರಣೆಗೆ, ಮಂಗಳೂರಿನಿಂದ ಬೆಂಗಳೂರಿಗೆ

ಬರುವುದಕ್ಕೆ ಎರಡೆರಡು ನಿಮಿಷಕ್ಕೆ ಒಂದರಂತೆ ಬಸ್ಸುಗಳಿವೆ. ಖಾಲಿ ಓಡುತ್ತಿವೆ. ನಮ್ಮ ಹಳ್ಳಿಗಳಿಗೆ ಹೆಚ್ಚು ಬಸ್ಸುಗಳನ್ನು ಕೊಡಿ. ಆನರಲ್ಲಿ ಜಾಗೃತಿ ಮೂಡಿದೆ. ಈಗ ಅವರು ticket ಕೊಳ್ಳುತ್ತಿದ್ದಾರೆ. ಯಾರೂ ಕೂಡ ಆ ತರಹ ಸೋಮಾರಿತನ ಮಾಡುತ್ತಿಲ್ಲ. ಹಿಂದಿನ ಹಾಗೆ ಭ್ರಷ್ಟಾಚಾರ ಇಲ್ಲ, ಬಹಳ ಕಡಿಮೆಯಾಗಿದೆ. ಈಗ ಆ ತರಹ ಇಲಾಖೆಯಲ್ಲಿ ಇಲ್ಲ. ಅದನ್ನು ನಾನು ಒಪ್ಪುತ್ತೇನೆ. ಹಳ್ಳಿಗಳಿಗೆ ಬಸ್ಸುಗಳನ್ನು ಕೊಡಿ. ನಾವೇನು ಪಾಪ ಮಾಡಿದ್ದೇವೆ, ಆ ಊರಿಗೆ ಬಸ್ಸು ಬರುತ್ತದೆ, ನಮ್ಮೂರು ಇನ್ನೊಂದು ಕಿಲೋ ಮೀಟರ್ ದೂರವಿದೆ, ಅಲ್ಲಿಯವರೆಗೆ ಬಸ್ಸು ಬಂದು ಹೋಗಲಿ ಎಂದು ಹೇಳುತ್ತಾರೆ. ರಸ್ತೆಗೂ ಇದಕ್ಕೂ ಸಂಬಂಧವಿಲ್ಲ. ರಸ್ತೆ ಬಗ್ಗೆ ಆಮೇಲೆ ಹೇಳುತ್ತೇನೆ. ಮೊನ್ನೆ ನಾನು ಕೇಳಿದ ಪ್ರಶ್ನೆಗೆ ಆಲೂರು ಡಿಪೋ ಬಗ್ಗೆ ನಿವೇಶನ ಕೊಟ್ಟರೆ ತಾವು ಬಸ್ ಡಿಪೋ ಕೊಡುತ್ತೇವೆಂದು ಹೇಳಿದ್ದೀರಿ. ನಿವೇಶನ ಕೊಡುವುದಕ್ಕೆ ಪ್ರಯತ್ನಿಸುತ್ತೇನೆ. ದಯಮಾಡಿ, ಆಲೂರಿಗೆ ಬಸ್ಸು ಡಿಪೋ ಮಂಜೂರು ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಅಶೋಕ್(ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸಾರಿಗೆ ಇಲಾಖೆಯಲ್ಲಿ ಸಾರಿಗೆ ನೀತಿಯನ್ನು ತರುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಅದಕ್ಕಿಂತ ಮುಖ್ಯವಾಗಿ ಈ ಬಾರಿ ಸುಮಾರು 3 ಸಾವಿರಕ್ಕೂ ಹೆಚ್ಚು ಬಸ್ಸುಗಳನ್ನು ವಿಶೇಷವಾಗಿ ಅದರಲ್ಲಿ 2 ಸಾವಿರ ಬಸ್ಸುಗಳನ್ನು ಗ್ರಾಮಾಂತರ ಪ್ರದೇಶಗಳಿಗೋಸ್ಕರವೇ ಮೀಸಲಿಡಬೇಕೆಂಬ ಆದೇಶವನ್ನು ಮತ್ತು ಉದ್ದೇಶವನ್ನಿಟ್ಟುಕೊಂಡು ನಾನು ಹೇಳುತ್ತಿದ್ದೇನೆ. ಹಳ್ಳಿಗಳಿಗೆ ಹೆಚ್ಚು ಬಸ್ಸುಗಳನ್ನು ಕೊಡುವ ದೃಷ್ಟಿಯಿಂದ ಬಜೆಟ್‌ನಲ್ಲಿಯೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ, private lobby ಇದೆ. ಅವರಿಗೆ ಏನು routes ಕೊಡಲಾಗಿರುತ್ತದೆ ಅದನ್ನು ಬಿಟ್ಟು ಬೇರೆ ಬೇರೆ routes ನಲ್ಲಿ ಓಡಿಸುವುದರಿಂದಲೂ ನಮ್ಮ ಇಲಾಖೆಗೆ ಆದಾಯ ಕಡಿಮೆಯಾಗುವುದೂ, ಇದೆಲ್ಲ ಇದೆ. ಆ ಎರಡನ್ನೂ ಸರಿಪಡಿಸಿಕೊಂಡರೆ ಇಲಾಖೆಯನ್ನು ಪರಿಪೂರ್ಣವಾಗಿ, ಸಮರ್ಥವಾಗಿ ಮಾಡಬಹುದು ಮತ್ತು ಹಳ್ಳಿಗಾಡಿಗೆ ಹೆಚ್ಚು ಬಸ್ಸು ಕೊಡುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ. ಬೆಂಗಳೂರು ಒಂದೇ ಎಂದಲ್ಲ. ಬೆಂಗಳೂರಿನಲ್ಲಿ ಈಗಾಗಲೆ ನಾವು hi-tech ಬಸ್ಸು ನಿಲ್ದಾಣಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ನಮ್ಮ ಉದ್ದೇಶವೇನೆಂದರೆ ಬೆಂಗಳೂರು ಸುಂದರವಾದರೆ ಇಡೀ ರಾಜ್ಯ ಸುಂದರವಾಗುತ್ತದೆ ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಅದಕ್ಕೋಸ್ಕರ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಈ ತರಹ hi-tech ಬಸ್ಸು ನಿಲ್ದಾಣವಾಗಬೇಕೆನ್ನುವುದು ನನ್ನ ಚಿಂತನೆ ಆಗಿದೆ. ಈ ವರ್ಷದಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಈ ತರಹದ hi-tech bus stand

ಮತ್ತು ಯಾವ್ಯಾವ ತಾಲ್ಲೂಕಿನಲ್ಲಿ ಹೆಚ್ಚು ಜನಸಂದಣಿ ಇದೆ ಅಲ್ಲಿಯೂ ಒಳ್ಳೆಯ ಬಸ್ಸು ನಿಲ್ದಾಣಗಳನ್ನು ನಿರ್ಮಾಣ ಮಾಡಬೇಕು. ನಂಜುಂಡಪ್ಪ ವರದಿ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವಿಭಾಗಕ್ಕೂ 30–30 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಹೆಚ್ಚು ಉಪಯೋಗ ಮಾಡಿಕೊಂಡು, ಆಧುನೀಕರಣ ಮತ್ತು ಹಳ್ಳಿಗಾಡಿಗೆ ಹೆಚ್ಚು ಬಸ್ಸುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಸಚಿವರಿಗೆ ತುಂಬಾ ಧನ್ಯವಾದಗಳು. ಅದೇ ರೀತಿಯಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ, ಅತಿ ಸೂಕ್ಷ್ಮ ಮತ್ತು ದೊಡ್ಡ ಸಮಸ್ಯೆ ಎಂದರೆ ಆನೆ ಹಾವಳಿ. ಅಧಿಕಾರಿಗಳ ಉದಾಸೀನ ಅಥವಾ ಅನೇಕ ಕಾರಣ ಇದರಲ್ಲಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಎಸಳೂರು ವಿಭಾಗ ಮತ್ತು ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಎನ್ನುವ ಹೋಬಳಿಯ ಸುತ್ತಮುತ್ತ ಹಳ್ಳಿಗಳಲ್ಲಿ ಈ ಸಮಸ್ಯೆ ಹೆಚ್ಚಾಗಿದೆ. ಇನ್ನೇನು ಮೇ ತಿಂಗಳು ಬರುತ್ತಿದೆ. ಮೇ ತಿಂಗಳಿನಿಂದ ಪ್ರಾರಂಭವಾದರೆ ಜನವರಿವರೆಗೂ ಸಮಸ್ಯೆ ಇರುತ್ತದೆ. ಈಗಲೂ ಸಮಸ್ಯೆ ಇದೆ. ಈಗಲೂ ಆನೆಗಳ ಹಿಂಡು ಬರುತ್ತಿವೆ. ಈ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕು? ನಾನು ಇಲಾಖೆಯವರಲ್ಲಿ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೂ ಮನವಿ ಮಾಡಿದ್ದೇನೆ. ಬೇರೆ ಬೇರೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಮನವಿ ಮಾಡಿದ್ದೇನೆ. ಆನೆಗಳನ್ನು ಹಿಡಿಯಬೇಕು, ಸ್ಥಳಾಂತರಿಸಬೇಕು. ಆನೆಗಳನ್ನು ಹಿಡಿಯದಿದ್ದರೆ ಏನಾಗುತ್ತದೆ? ಒಂದು ವರ್ಷದ ಈ 8 ತಿಂಗಳಲ್ಲಿ ನನ್ನ ಕ್ಷೇತ್ರದಲ್ಲಿ 3 ಜನ ಸತ್ತಿದ್ದಾರೆ. ಸುಮಾರು 5 ಜನ ಗಾಯಗೊಂಡಿದ್ದಾರೆ. ನಮ್ಮ ಸ್ಥಿತಿ ಹೇಳುತ್ತೇನೆ. ಮಕ್ಕಳು primary, high school ಗೆ ಹೋಗುವುದಕ್ಕೆ ಹೊರಗಡೆಯೇ ಬರುತ್ತಿಲ್ಲ. ಎಲ್ಲರೂ ಶಾಲಾ ಕಾಲೇಜಿಗೆ ಹೋಗುವುದನ್ನು ಬಿಟ್ಟಿದ್ದಾರೆ. ಜನರ್‍ಯಾರು ಕೂಡ ಹೊರಗಡೆ ತಿರುಗಾಡುತ್ತಿಲ್ಲ. ಯಾವ ಸಂದರ್ಭದಲ್ಲಿ ಎಲ್ಲಿ ಆನೆ ಬರುತ್ತದೆ, ಏನು ಮಾಡುವುದೋ ಗೊತ್ತಾಗುತ್ತಿಲ್ಲ. ಆ ಬೇಲಿ ಸಂದಿಯಲ್ಲಿ, ಕಾಡಿನ ಮಧ್ಯದಲ್ಲಿ ಬಂದು ಏನೇನು ಮಾಡುತ್ತವೆ ಎಂದು ಗೊತ್ತಾಗುವುದಿಲ್ಲ. ಮಲೆನಾಡಿನಲ್ಲಿ ಕಾಡಿನ ಮಧ್ಯದಲ್ಲಿ ಮನೆಗಳಿರುತ್ತವೆ. ಆನೆಗಳು ಏನು ಮಾಡುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ? ನಾನು ಈ ಬಗ್ಗೆ ಬಹಳ ಸಲ ಒತ್ತಾಯ ಮಾಡಿದ್ದೇನೆ. ಕೇಳಿದಾಗ, ಉನ್ನತಾಧಿಕಾರಿಗಳು ನಾವು permission ಕೊಡುತ್ತೇವೆ, ಕೊಡಗಿನಲ್ಲಿ ಆನೆಗಳನ್ನು ಹಿಡಿಯುತ್ತಿದ್ದೇವೆ, ಅದು ಮುಗಿದ ಮೇಲೆ ನಿಮ್ಮ ಕಡೆಗೆ ಬರುತ್ತೇವೆಂದು ಹೇಳಿದರು. 4–5 ತಿಂಗಳಿನಿಂದ ಹೀಗೆಯೇ ಹೇಳುತ್ತಿದ್ದಾರೆ. ಡಿಲೆ ಏತಕ್ಕೆ ಆಗುತ್ತಿದೆ ಎಂದು ಕೇಳಿದರೆ, injection ಕೊಡುವುದಕ್ಕೆ ಡಾಕ್ಟರ್ ಬೇಕು. ಡಾಕ್ಟರ್ ಸಿಕ್ಕಿಲ್ಲ. ಅದಕ್ಕಾಗಿ ತಡವಾಗಿದೆ, ನಾವು ಬರುತ್ತೇವೆಂದು

ಹೇಳುತ್ತಾರೆ. ಇನ್ನೇನು ಮಳೆಗಾಲ ಪ್ರಾರಂಭವಾಗುತ್ತದೆ. ಹೇಮಾವತಿಯಿಂದ ಹಿನ್ನೀರು ಬರುವುದಕ್ಕೆ ಪ್ರಾರಂಭವಾಗುತ್ತದೆ. ಕೊಡಗಿನಿಂದ ಈ ಕಡೆಗೆ ಬರುತ್ತವೆ. ನಾವು ಕಾಯಬೇಕು. ಈ ವಿಷಯದಲ್ಲಿ ಸರ್ಕಾರಕ್ಕೆ ಯಾವುದೇ ತರಹದ ಬದ್ಧತೆ ಇಲ್ಲವೆಂದು ನಾನು ಭಾವಿಸುತ್ತೇನೆ. ತುಂಬಾ ಉದಾಸೀನ ಧೋರಣೆಯನ್ನು ತೋರಲಾಗುತ್ತಿದೆ. ಸಮಸ್ಯೆ ಬಂದಾಗ, ಯಾರಿಗಾದರೂ ಗಾಯ ಮಾಡಿದಾಗ, ಯಾರಾದರೂ ಸತ್ತು ಹೋದಾಗ ಎಲ್ಲಾ ಅಧಿಕಾರಿಗಳು ಅಲ್ಲಿ ಓಡಿ ಬರುತ್ತಾರೆ. ಅಧಿಕಾರಿಗಳು ಬಹಳ ಬುದ್ಧಿವಂತಿಗೆ ಉಪಯೋಗಿಸಿ ಇವರ ಸಹವಾಸವೇ ಬೇಡ, ಜಾಗಕ್ಕೆ ಹೋಗುವುದು ಬೇಡವೆಂದು ತಮ್ಮ ಮೊಬೈಲ್ ಅನ್ನು switch off ಮಾಡಿಕೊಳ್ಳುತ್ತಾರೆ. ಆಲೂರು ತಾಲ್ಲೂಕಿನ ಮಾದಿಹಳ್ಳಿ ಎನ್ನುವ ಗ್ರಾಮದಲ್ಲಿ ಮನೆ ಕಟ್ಟಿದ್ದಾರೆ. ಆ ಹೊಸ ಮನೆಯೊಳಗಡೆ ಮೆಕ್ಕೆಜೋಳ ತುಂಬಿದ್ದರು. ಆನೆ ಮನೆಯ ಹಿಂದುಗಡೆಯಿಂದ ಬಂದು ಕಿಟಕಿ ಸರಳನ್ನು ಮುರಿದು ಸೊಂಡಿಲನ್ನು ಒಳಗಡೆ ಹಾಕಿ 2 ಮೂಟೆ ಮೆಕ್ಕೆ ಜೋಳವನ್ನು ತಿಂದು ಹೋಗಿದೆ. ಮತ್ತೆ ಮಾರನೆ ದಿವಸ ಮನೆಯ ಮುಂದುಗಡೆಯಿಂದ ಬಂದಿದೆ. ಆ ಮನೆಯ ಮುಂದೆ ಒಂದು electric pole connection ಅನ್ನು ಮನೆಗೆ ಕೊಟ್ಟಿತ್ತು. ಆನೆ ಸೊಂಡಿಲು ಹಾಕಿದಾಗ ಆ electric wire ಗೆ ಸೊಂಡಿಲು touch ಆಗಿ ಆ ಆನೆ ಸತ್ತುಹೋಗಿದೆ. ರೈತ ಈ ರೀತಿಯ ತೊಂದರೆಗೆ ಸಿಕ್ಕಿಹಾಕಿಕೊಂಡು ಜೀವನದ ಹಕ್ಕು ತೊರೆದಿದ್ದಾನೆ. ಅವನಿಗೆ ಜೀವನ ಮಾಡುವ ಹಕ್ಕಿಲ್ಲ. ಇದು ಅವನಿಗೆ ದೊಡ್ಡ ಸಮಸ್ಯೆಯಾಗಿದೆ. ಅದರ ಮಧ್ಯೆ ಕೇಸ್ ಭಯ ಬೇರೆ. ವಿದ್ಯುತ್ ಸ್ಪರ್ಶ ಮಾಡಿಸಿ ಆನೆಯನ್ನು ಕೊಂದಿದ್ದಾನೆಂದು ಅವನ ಮೇಲೆ ಕೇಸ್ ಹಾಕುತ್ತಾರೆ. ಇದು ನಾವು ಅವನಿಗೆ ಕೊಡುವ ಬಳುವಳಿ. ಅಧಿಕಾರಿಗಳು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಕಲ್ಲವೇ? ಅವನ ಮೇಲೆ ಕೇಸ್ ಹಾಕಲಿಲ್ಲವೆಂದರೆ ತಮ್ಮ ಮೇಲೆ ಬರುತ್ತದೆ. ಏಕೆ ಹೀಗೆ ಆಯಿತು, ನೀವೇಕೆ ಆನೆ ಕೊಂದಿರಿ ಎಂದು ಪರಿಸರವಾದಿಗಳು ಇವರೆಲ್ಲ ಗಲಾಟೆ ಪ್ರಾರಂಭ ಮಾಡುತ್ತಾರೆ. ಸರ್ಕಾರ ಕೇಳುತ್ತದೆ. ಅದಕ್ಕೆ ಹೀಗೆ ಮಾಡುತ್ತಾರೆ. ರಂಗೇಗೌಡ ಎನ್ನುವ ರೈತ ಇವತ್ತು ಆರೋಪಿಯಾಗಿದ್ದಾನೆ. ನಾವು ಸ್ಥಳೀಯ ಜಿಲ್ಲಾ ಸಂರಕ್ಷಣಾಧಿಕಾರಿ, ಎಲ್ಲಾ ಹೋಗಿ ಊರಿನವರನ್ನೆಲ್ಲರನ್ನು ಸಂತೈಸುವಷ್ಟರಲ್ಲಿ ಇಡೀ ದಿವಸ ಕಳೆಯಿತು. ತಮಗೆ ಇದೊಂದು ಉದಾಹರಣೆಯಾಗಿ ಹೇಳುತ್ತಿದ್ದೇನೆ. ಇನ್ನಾದರೂ ಸರ್ಕಾರ ಇರುವ ಸಮಯದಲ್ಲಿ ಆನೆ ಹಿಡಿಯುವುದಕ್ಕೆ ಏನು ಮಾಡುತ್ತದೆ? ಆ ಸ್ಥಳದಲ್ಲಿ ಬಹಿರ್ದೆಸೆಗೆ ಹೋಗದ ಸ್ಥಿತಿ ಇದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪ್ರಶ್ನೆ ಕೇಳಿದ್ದೆ. ಅದನ್ನು ತಾವು un-starred question ಮಾಡಿ ಇಟ್ಟಿದ್ದೀರಿ. ಅದು ಬಂದಿಲ್ಲ. ಈ ಕಡೆಗೆ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ಇನ್ನು, ಶಾಸಕರ

ಅನುದಾನವನ್ನು 50 ಲಕ್ಷದಿಂದ್ 1 ಕೋಟಿ ರೂಪಾಯಿಗಳಿಗೆ ಹೆಚ್ಚಿಸುತ್ತೇವೆಂದು ಹೇಳಿದ್ದೀರಿ. ಒಂದು ಕೋಟಿ ರೂಪಾಯಿಗಳಿಗೆ action plan ಕೊಟ್ಟಿದ್ದು, ಕೆಲಸವೆಲ್ಲ ನಡೆಯುತ್ತಿದೆ. ಇವತ್ತಿನ ದಿವಸ ವೆಚ್ಚಕ್ಕೆ ಅನುಗುಣವಾಗಿ ಶಾಸಕರ ಅನುದಾನವನ್ನು ಮಹಾರಾಷ್ಟ್ರದಲ್ಲಿ 2 ಕೋಟಿ ರೂಪಾಯಿ ಇದೆ, ಬೇರೆ ಬೇರೆ ರಾಜ್ಯಗಳಲ್ಲಿರುವ ಹಾಗೆ ಕನಿಷ್ಠ 2 ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಒತ್ತಾಯಿಸುತ್ತೇನೆ. ಅಧಿಕಾರ ವಿಕೇಂದ್ರೀಕರಣವಾಗಿರಬಹುದು. ಅದು ಪೇಪರ್‌ನಲ್ಲಿದೆ. ಆದರೆ, ಜನರು ಅರ್ಜಿ ಕೊಡುವುದು ಶಾಸಕರಿಗೆ ಮಾತ್ರ. ಶಾಸಕರು, ಮಂತ್ರಿಗಳು, ಮುಖ್ಯಮಂತ್ರಿಗಳು ಈ ಮೂರು ಜನರನ್ನು ಬಿಟ್ಟರೆ ಜನರು ಬೇರೆ ಯಾರಿಗೂ ಅರ್ಜಿ ಕೊಡುತ್ತಿಲ್ಲ. ನಮಗೆ ಕೆಲಸವಿಲ್ಲ, ನಮಗೆ ಒಬ್ಬರೂ ಅರ್ಜಿ ಕೊಡುತ್ತಿಲ್ಲವೆಂದು ಬೇರೆ ವಿಕೇಂದ್ರೀಕರಣದ ಸದಸ್ಯರಿಗೆ ಬಹಳ ಖುಷಿಯಾಗಿದೆ.

4-00 PM

ಕುಡಿಯುವ ನೀರಿನ ಅಧಿಕಾರ ಜಿಲ್ಲಾ ಪಂಚಾಯಿತಿಗೆ ಇದೆ. ರಸ್ತೆ ದುರಸ್ಥಿ ಮಾಡುವ ಅಧಿಕಾರ ಜಿಲ್ಲಾ ಪಂಚಾಯಿತಿಗೆ ಇದೆ. ಬಹಳಷ್ಟು ಕಾರ್ಯಕ್ರಮಗಳ ಅನುಷ್ಠಾನದ ಅಧಿಕಾರ ಜಿಲ್ಲಾ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ, ಗ್ರಾಮ ಪಂಚಾಯಿತಿಗೆ ಇದೆ. ಆದರೆ, ಜನ ವಿಶ್ವಾಸ ಇಟ್ಟಿರುವುದು ಶಾಸಕರ ಮೇಲೆ. ದಯಮಾಡಿ ಆ ನಿಟ್ಟಿನಲ್ಲಿ ಶಾಸಕರಿಗೆ ಏನೇನು ಅಧಿಕಾರ ಕೊಡಬೇಕೋ ಕೊಡಿ. ಜೊತೆಗೆ ಹೆಚ್ಚು ಅನುದಾನ ಕೊಟ್ಟರೆ, ನಾವು ಜನಗಳಿಗೆ ನಿಮ್ಮ ಊರಿಗೆ ಎರಡು ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗೆ ತೆಗೆದುಕೊಳ್ಳಿ, ನಿಮ್ಮ ಊರಿಗೆ ಇದು ತೆಗೆದುಕೊಳ್ಳಿ, ನಿಮ್ಮ ಊರಿಗೆ ಅದು ತೆಗೆದುಕೊಳ್ಳಿ ಎಂದು ಹೇಳಿ ಕೊಡುವಂಥ ವ್ಯವಸ್ಥೆಗೆ ಕನಿಷ್ಠ ನಮ್ಮ ಅನುದಾನವನ್ನು ಎರಡು ಕೋಟಿಗೆ ಹೆಚ್ಚು ಮಾಡಬೇಕೆಂದು ಮನವಿ ಮಾಡುತ್ತೇನೆ. ಉಳಿದ ವಿಷಯಗಳ ಬಗ್ಗೆ ಹೇಳುವುದಾದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಹಾಸನ ಜಿಲ್ಲೆ ಎಂದರೆ ಅಲರ್ಜಿಯಾಗಿ ಬಿಟ್ಟಿದೆ. 29 ಜಿಲ್ಲೆಗಳು ಇವೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು 28 ಜಿಲ್ಲೆಗಳು ಮಾತ್ರ ಇವೆ ಎನ್ನುವ ಭಾವನೆಯನ್ನು ಹೊಂದಿದ್ದಾರೆ, ಅದನ್ನು ಅಷ್ಟೇ ಪರಿಗಣಿಸಿದ್ದಾರೆಂದು ನಾನು ಅಂದು ಕೊಂಡಿದ್ದೇನೆ. ಹೊಸ ಕಾಮಗಾರಿಗಳನ್ನು ತಾವು ಕೊಡುವುದು ಬೇಡ, ಇರಲಿ. ಅದು ಏನಾದರೂ ಕಾರಣಗಳಿರಬಹುದು. ಆದರೆ, ನಡೆಯುತ್ತಿರತಕ್ಕಂಥ ಕಾಮಗಾರಿಗಳಿಗೆ 2007–08 ರಲ್ಲಿ ನಮ್ಮ ಸಕಲೇಶಪುರ ಕೋರ್ಟಿಗೆ ಎರಡು ಕೋಟಿ, ಆಲೂರು ಕೋರ್ಟಿಗೆ ಎರಡು ಕೋಟಿ, ಮಂಜೂರಾಗಿ ಕೆಲಸ ನಡೆಯುತ್ತಿದೆ. ಅಪೆಂಡೆಕ್ಸ್–ಇ ಶೀರ್ಷಿಕೆಯಲ್ಲಿ ಕೆಲಸ ನಡೆಯುತ್ತಿದೆ. 2008–09 ರಲ್ಲಿ ಕೈಬಿಟ್ಟು ಹೋಗಿವೆ. ನಮ್ಮ ಕಾನೂನು ಸಚಿವರು ಅಲ್ಲಿಯೇ ಕುಳಿತಿದ್ದಾರೆ.

ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಸಕಲೇಶಪುರ ಕೋರ್ಟಿನ ಕಟ್ಟಡದ ಕೆಲಸ ಸುಮಾರು ಎಪ್ಪತ್ತು ಲಕ್ಷ ರೂಪಾಯಿನ ಕೆಲಸವಾಗಿದ್ದು ಆ ಬಗ್ಗೆ ಬಿಲ್ ಕೂಡ ಕೊಟ್ಟಿದ್ದಾರೆ. ಇದರಲ್ಲಿ ನೀವು ಹತ್ತು ಲಕ್ಷ ರೂಪಾಯಿ ಪೇಮೆಂಟ್ ಮಾಡಿದ್ದೀರಿ. ಆದರೆ ಇದರಲ್ಲಿ ಬಿಟ್ಟು ಹೋಗಿದೆ. ಅದೇನು ಕುರುಡರಾಗಿ ಬಿಟ್ಟು ಹೋಗಿದೆಯೆ? ಅಥವಾ ಬೇಕೆಂದು ಬಿಟ್ಟಿದ್ದೀರೋ? ಅಥವಾ ನಿಮ್ಮ ಅಧಿಕಾರಿಗಳು ಸರಿಯಾಗಿ ನಿಮಗೆ ಹೇಳಿಲ್ಲವೆ? ಅಥವಾ ನೀವೇ ಬಿಡಿ ಎಂದು ಹೇಳಿದ್ದೀರೋ? ಅಥವಾ ಅಧಿಕಾರಿನೇ ಕುರುಡಾಗಿ ಗೊತ್ತಿಲ್ಲದೆ ಬಿಟ್ಟಿದ್ದಾನೆಯೆ? ದಯಮಾಡಿ ನೀವು ಇದನ್ನು ಹೇಳಬೇಕಲ್ಲವೆ? ಹೊಸ ಕಾಮಗಾರಿ ನಂತರ ನಿಧಾನಕ್ಕೆ ತೆಗೆದುಕೊಳ್ಳೋಣ. ಮುಂದಕ್ಕೆ ಏನೇನು ಆಗುತ್ತದೆ ಎಂಬುದನ್ನು ನಂತರ ನೋಡೋಣ. ನಡೆಯುತ್ತಿರುವ ಕಾಮಗಾರಿಗಳನ್ನು ನಿಲ್ಲಿಸಿ ಬಿಟ್ಟರೆ ಏನು ಸರ್ ಅರ್ಥ? ದಯಮಾಡಿ ನೀವೇ ಹೇಳಿ ಸರ್, ಇದಕ್ಕೆ ಏನು ಮಾಡೋಣ? ನೀವೇ ಉತ್ತರ ಹೇಳಿಬಿಡಿ. ನಾನೇನೂ ಕೇಳುವುದಿಲ್ಲ. ಇದೊಂದು ಉದಾಹರಣೆ ತಮಗೆ ಹೇಳಿದೆ. ಮತ್ತೊಂದು ಅಲ್ಲಿ ಐ.ಬಿ.ಕಟ್ಟಡ ಅದು ನಿಂತಿದೆ. ನಮ್ಮಲ್ಲಿ ರಸ್ತೆಗಳು, ಬೇಲೂರು-ಸೋಮವಾರಪೇಟೆ ರಾಜ್ಯ ಹೆದ್ದಾರಿ 112, ಬೇಲೂರು-ಕೊಡ್ಲಿಪೇಟೆ ರಾಜ್ಯ ಹೆದ್ದಾರಿ 110, ಈ ಎರಡು ರಸ್ತೆಗಳನ್ನು ದಯಮಾಡಿ ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬಂದು ನೋಡಲಿ. ಮಾನ್ಯ ಲೋಕೋಪಯೋಗಿ ಸಚಿವರು ಈ ಕಡೆ ಬಂದು ನಮ್ಮ ಹಳ್ಳಿಗಳನ್ನು ನೋಡಬೇಕು, ಆ ಬಗ್ಗೆ ಮುಂದಕ್ಕೆ ಬಂದಾಗ ಹೇಳುತ್ತೇನೆ. ನೀವು ಮಲೆನಾಡು ಪ್ರದೇಶಕ್ಕೆ ಬಂದು ರಸ್ತೆಗಳು ಹೇಗೆ ಆಗಿವೆ ಎಂದು ನೋಡಿ. ಮಾನ್ಯ ಉದಾಸಿಯವರೆ, ತಾವು ಶಿವಮೊಗ್ಗ ಮತ್ತು ಹಾವೇರಿಗೆ ಹೊಟ್ಟೆ ಬಿರಿಯುವ ತರಹ ಅನುದಾನ ಇಟ್ಟುಕೊಂಡಿದ್ದೀರಿ. ತಮಗೇನು ಯೋಚನೆ ಇಲ್ಲ ಬಿಡಿ. ಸರ್, ನನ್ನ ಹತ್ತಿರ ಮಾಹಿತಿ ಇದೆ ಬೇಕಾದರೆ ಓದಿ ಹೇಳಲೆ? ಓಲೇಕಾರ್‌ರವರೆ ಅದು ಇರಲಿ ಬಿಡಿ. ಸ್ವಲ್ಪ ಕೇಳಿ ಸ್ವಾಮಿ. ಇಲ್ಲಿ ಪಂಚಾಂಗವನ್ನು ಬಿಚ್ಚಿದರೆ, ಎಲ್ಲಾ ಕತೆ ಹೇಳುತ್ತೇನೆ. ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳಿಗೆ 411 ಕೋಟಿ ರೂಪಾಯಿ. ಇದಕ್ಕೆ ನಾನೇನೂ ತಕರಾರು ಮಾಡುತ್ತಿಲ್ಲ. ಅದೇ ತರಹ ನಮ್ಮ ಬೇರೆ ಜಿಲ್ಲೆಗಳಿಗೂ ಕೊಡಿ ಎಂದು ಕೇಳುತ್ತಿರುವುದು. ಆ ಎರಡು ರಸ್ತೆಗಳು ಐದು ಕೋಟಿ ರೂಪಾಯಿಗೆ ಟೆಂಡರ್ ಆಗಿ ಅಗ್ರೀಮೆಂಟ್ ಆಗಿ ನಂತರ ಅವನ ಇ.ಎಂ.ಡಿ. ಕಟ್ಟಿದ್ದಾನೆ. ಇವತ್ತು ಆ ರಸ್ತೆಗಳನ್ನು ಕೈ ಬಿಟ್ಟಿದ್ದಾರೆ. ನಮಗಾಗಿ ಬೇಡಿ. ಅಲ್ಲಿ ಜನ ಬಿಜೆಪಿಗೆ ವೋಟು ಕೊಟ್ಟಿದ್ದಾರಲ್ಲವೆ? ಸೊನ್ನೆ ಏನು ಸುತ್ತಿಲ್ಲವಲ್ಲ? ವೋಟು ಕಡಿಮೆ ಇರಬಹುದು. ನನಗೆ 50 ಸಾವಿರ ವೋಟು ಬಂದಿದೆ, ಬಿಜೆಪಿಯವರಿಗೆ 36 ಸಾವಿರ ವೋಟು ಬಂದಿದೆ, ಕಾಂಗ್ರೆಸ್‌ನವರಿಗೆ 26 ಸಾವಿರ ವೋಟು ಬಂದಿದೆ. ನಿಮಗೆ 36 ಸಾವಿರ ವೋಟು

ಹಾಕಿದ್ದಾರಲ್ಲವೆ? ಹಾಗಾದರೆ ನಿಮಗೆ 36 ಸಾವಿರಕ್ಕಿಂತಲೂ ಹೆಚ್ಚು ಮಾಡಿಕೊಳ್ಳುವ ಆಸೆ ಇಲ್ಲ ಎಂದಾಯಿತು. ಆ ರೀತಿ ತೀರ್ಮಾನಿಸಿದರೆ ನಮಗೆ ಬಹಳ ಸಂತೋಷ. ನಮ್ಮ ಸ್ವಾರ್ಥಕ್ಕೆ ರಸ್ತೆ ಹಾಳಾಗಿ ಹೋದರೂ ನಾವೇ ಮುಂದುವರಿಯೋಣ ಬಿಡಿ. ಆದರೆ, ಪಾಪದ ಜನ ಏನು ಮಾಡಿದ್ದಾರೆ? ಅಲ್ಲಿಯ ಜನ ಏನು ಹೇಳುತ್ತಾರೆಂದರೆ, ಸರ್ ನಿಮ್ಮ ಆಶ್ರಯ ಮನೆ ಬೇಡ, ಬಿಪಿಎಲ್ ಕಾರ್ಡು ಬೇಡ, ದಯವಿಟ್ಟು ಈ ರಸ್ತೆ ಸರಿಮಾಡಿಸಿ ಸರ್ ಎಂದು ಹೇಳುತ್ತಾರೆ. ಕೊನೆಗೆ ಎಲ್ಲಾ ಒತ್ತಡದ ಮೇಲೆ 52 ಲಕ್ಷ ಕೊಟ್ಟಿದ್ದೀರಿ. ಅದಕ್ಕಾಗಿ ಈಗ ಸ್ವಲ್ಪ ಗುಂಡಿ ಮುಚ್ಚಿಸುತ್ತಾ ಇದ್ದೇವೆ. ನಮ್ಮ ಭಾಗದಲ್ಲಿ ಕೆಂಚಮ್ಮನ ಹೊಸಕೋಟೆಯಲ್ಲಿ ಮೊನ್ನೆ ಜಾತ್ರೆಯಾಯಿತು. ಆಗ ಬೆಂಗಳೂರಿನಿಂದ ಜನ ಜಾತ್ರೆಗೆ ಬಂದಿದ್ದರು. ಮಹಿಳೆಯರು, ಅಜ್ಜಿಯರು, ನನಗೆ ಅದು ಯಾರು ಎಂ.ಎಲ್.ಎ. ನೋಡಬೇಕೆಂದು ಹೇಳುತ್ತಿದ್ದರು. ಎಂ.ಎಲ್.ಎ. ಏಕೆ ನೋಡುವುದು ಎಂದರೆ ನನ್ನ ರೂಪ ನೋಡುವ ಆಸೆಗೆ ಕೇಳುತ್ತಿಲ್ಲ, ಆ ಪುಣ್ಯಾತ್ಮ ಯಾರು ರಸ್ತೆ ಮಾಡಿಸಿಲ್ಲವಲ್ಲ ಅವರನ್ನು ಕರೆಯಿರಿ ಎಂದು ಎಲ್ಲಾ ಹೆಂಗಸರು ಸೇರಿಕೊಂಡು ಕೇಳುತ್ತಿದ್ದರು. ಈಗ ಹಳ್ಳಿಯಲ್ಲಿ ಗಂಡಸರು ಮುಷ್ಕರ ಮಾಡುತ್ತಿಲ್ಲ. ಹೆಂಗಸರು ಈಗ ಎಲ್ಲರನ್ನು ಕೇಳುತ್ತಾರೆ. "ಯಾರು ಎಂಎಲ್ಎ? ಈ ರೋಡ್ ಮಾಡಿಸಿಲ್ಲದ ಪುಣ್ಯಾತ್ಮ ಯಾರು ನೋಡೋಣ ಕರೆಯಿರಿ" ಎಂದು ಹೆಂಗಸರು ಕೇಳುತ್ತಾರೆ. ಅದಕ್ಕೆ ನಾನು ಅಲ್ಲಿಂದ ತಪ್ಪಿಸಿಕೊಳ್ಳಬೇಕಲ್ಲ ಅದಕ್ಕೆ "ಅಮ್ಮಾ, ಅದು ಎಷ್ಟಾದರೂ ಖರ್ಚಾಗಲಿ ನಾನು ಸರಿಪಡಿಸುತ್ತೇನೆ" ಎಂದು ಹೇಳಿದೆ. ಅದಕ್ಕೆ ಅವರು "ಅಯ್ಯೋ ಹಿಂದೆ ಇದ್ದವರು ಹೀಗೆ ಬಹಳ ಹೇಳಿದರು, ನಿನ್ನನ್ನು ಹೇಗೆ ನಂಬುವುದು?" ಎಂದು ಕೇಳುತ್ತಾರೆ ಪುನಃ ಅದೇ ಪ್ರಶ್ನೆ ಹಾಕುತ್ತಾರೆ. ಈಗ ನಮ್ಮ ಮಹಿಳೆಯರಲ್ಲಿ ತುಂಬಾ ಜಾಗ್ರತೆ ಮೂಡಿದೆ. ಸ್ತ್ರೀ ಶಕ್ತಿ ಸಂಘದವರು ಇದ್ದಾರೆ, ಅನೇಕ ಮಹಿಳೆಯರು ಇದ್ದಾರೆ. ಇವತ್ತು ಆ ಎರಡು ರಸ್ತೆಗಳ ಗುಂಡಿಗಳನ್ನು ಮುಚ್ಚಿಸುವ ಕೆಲಸ ಶುರುವಾಗಿದೆ. ಹೀಗಾಗಿ ಆ ಎರಡು ರಸ್ತೆಗಳಿಗೆ ಇಎಂಡಿ ಕಟ್ಟಿದ್ದಂಥವುಗಳನ್ನು ತಾವು ಕೈಬಿಟ್ಟಿದ್ದೀರಿ. ದಯವಿಟ್ಟು ಯಾವ ಕಾರಣಕ್ಕಾಗಿ ಬಿಟ್ಟಿದ್ದೀರಿ ಎಂದು ಹೇಳಿ ಸರ್. ಹೆತ್ತೂರು, ಎಂವಿಎಸ್ಎಸ್, ನಾಲ್ಕೂವರೆ ಕೋಟಿ ರೂಪಾಯಿಯ ಕೆಪಿಟಿಸಿಎಲ್‌ನ ಕಾಮಗಾರಿಯನ್ನು ಕೈ ಬಿಟ್ಟಿದ್ದೀರಿ. ಆ ಭಾಗದ ಜನರು ಬೇಡವೆ? ಅವರು ಕತ್ತಲಲ್ಲಿ ಇರಲಿ ಎಂದು ತಮ್ಮ ಆಸೆನಾ? ದಯಮಾಡಿ ಹೇಳಿ. ಹಾಸನಕ್ಕೆ ರೈಲ್ವೆ ನಿಲ್ದಾಣ ಬೇಡವೆ? ನಮಗೆ ರೈಲ್ವೆ ಮಾರ್ಗ ಬೇಡವೇ? ನಮಗೆ ವಿಮಾನ ನಿಲ್ದಾಣ ಬೇಡವೆ? ನಮಗೇನು ಬೇಕು ಬೇಡ ಎಂದು ತಾವು ತೀರ್ಮಾನಿಸಿ. ಏಕೆ ಈ ರೀತಿಯ ತಾರತಮ್ಯ ಮಾಡುತ್ತಿದ್ದೀರಿ? ತಾವು ಯಾರ ಮೇಲೆ ಈ ರೀತಿ ದ್ವೇಷ ತೀರಿಸಿಕೊಳ್ಳುತ್ತಿದ್ದೀರಿ? ಜನರ ಮೇಲೆ ದ್ವೇಷ ತೀರಿಸಿಕೊಳ್ಳುತ್ತಿದ್ದೀರ? ನಮಗೆ

ಅಂತಿಮವಾಗಿ ಜನ ತಾನೆ ಮುಖ್ಯ. ನಾನು ಸಾಂಕೇತಿಕವಾಗಿ ಒಬ್ಬ ಎಂಎಲ್‌ಎ, ನನ್ನದು ಬಿಡಿ. ಮತ್ತೊಬ್ಬ ಉನ್ನತ ಅಧಿಕಾರಿ ಬಿಡಿ, ಮತ್ತೊಬ್ಬ ರಾಜಕಾರಣಿ ಬಿಡಿ, ಜನತೆಗಾದರೂ ಮಾಡಬೇಕಲ್ಲವೆ? ಜನರಿಗೆ ನೀವು ಬೆದರಿಕೆ ಹಾಕುತ್ತಿದ್ದೀರಾ? ನೀವು ನಮ್ಮ ಪಕ್ಷಕ್ಕೆ ವೋಟು ಕೊಡಲಿಲ್ಲವೆಂದರೆ ನಿಮ್ಮ ಹಾಸನ ಜಿಲ್ಲೆಗೆ ಇದೇ ಗತಿ ಎಂದು ಹೇಳಿದ ಹಾಗೆ ನನಗೆ ಅನ್ನಿಸುತ್ತದೆ. ಮುಂದಿನ ಸಾರಿ ವೋಟು ಕೊಡಲಿಲ್ಲವೆಂದರೆ ಸರ್ಕಾರದಿಂದ ನಿಮ್ಮ ಹಾಸನ ಜಿಲ್ಲೆಗೆ ಏನು ಕೊಡುವುದಿಲ್ಲ ನೀವು ಅನುಭವಿಸಿ ಎಂದು ಹೇಳಿದ ಹಾಗೆ ಆಯಿತು. ಇದೇನು ಸರ್? ನೀವು ಕೆಲಸ ಮಾಡಿ, ವೋಟು ನಿಮಗೇ ಕೊಡಲಿ, ಅದಕ್ಕೇನು ನಾವು ಎಲ್ಲರ ಕೈಯನ್ನು ಒತ್ತಿಸಿ ವೋಟು ಹಾಕಿಸಿಕೊಳ್ಳುವುದಕ್ಕೆ ಆಗುತ್ತದೆಯೇ? ಈಗ ಎಲ್ಲಾ ಬಟನ್ ಸಿಸ್ಟಂ ಬಂದಿದೆ. ನೀವು ಎಷ್ಟು ತಲೆ ತುಂಬಿದರೂ ಕೂಡ, ಇವತ್ತು ಮತದಾರ ತುಂಬಾ ಬುದ್ಧಿವಂತನಾಗಿದ್ದಾನೆ. ಅವನ ಮನಸ್ಸಿನಲ್ಲಿ ಏನು ಇರುತ್ತದೆಯೋ ಒಳಗಡೆ ಹೋಗಿ ಅವನು ಅದನ್ನೇ ಮಾಡುವುದು. ಯಾರೇ ಎಷ್ಟು ಹೇಳಿದರು ಅಷ್ಟೆ. ಅದು ಸುಮ್ಮನೆ ನಮ್ಮ ಭ್ರಮೆ. ಹೆಂಡ ಕುಡಿಸಿದರೂ ದುಡ್ಡು ಖರ್ಚು ಮಾಡಿದರೂ ಮತದಾರ ಮಾತ್ರ ಅವನಿಗೆ ದುಡ್ಡು ಹೆಚ್ಚಾಗಿತ್ತು ಅದಕ್ಕೆ ಕೊಟ್ಟು ಹೋದ ಎಂದು ಹೇಳುತ್ತಾನೆ. ಅವರು ಏನು ಮಾಡುತ್ತಾರೋ ಅದನ್ನೇ ಮಾಡುವುದು. ಯಾರಿಗೆ ಹಾಕಬೇಕು, ಯಾವ ಪಕ್ಷಕ್ಕೆ ಹಾಕಬೇಕು, ಯಾರಿಗೆ ವಿಶ್ವಾಸ ಇದೆಯೋ ಅವರಿಗೆ ಓಟು ಹಾಕುತ್ತಾರೆ. ಅದರ ಬಗ್ಗೆ ಇಲ್ಲಿ ಮಾತನಾಡುವುದು ಇದು ವೇದಿಕೆಯಲ್ಲ ಆ ಸಂದರ್ಭವೂ ಅಲ್ಲ ಹೀಗಾಗಿ ಅದನ್ನು ಮಾತನಾಡುವುದು ಬೇಡ. ಅದು ಒಂದು ಕಡೆಗೆ ಇರಲಿ. ಈ ರೀತಿ ಇರುವುದರಿಂದ ದಯಮಾಡಿ ತಾರತಮ್ಯ ಮಾಡಬೇಡಿ ಎಂದು ಒತ್ತಾಯವನ್ನು ಮಾಡುತ್ತೇನೆ. ಕೊನೆಯದಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಸಚಿವರಾದ ನರೇಂದ್ರ ಸ್ವಾಮಿಯವರು ಇಲ್ಲಿಯೇ ಇದ್ದಾರೆ. ಅದು ಕೂಡ ಅಷ್ಟೆ. ನಾನು ಇದ್ದಾಗ 2006-07 ರಲ್ಲಿ ಪರ್‌ಫಾರ್ಮೆನ್ಸ್ 70%. ಈಗ ಎಷ್ಟು ಪರ್ಸೆಂಟ್ ಇದೆ? ನೀವು ಯಾವ ಬ್ಯಾಂಕಿಗೂ ಹೋದರೂ ಸಹಕರಿಸುತ್ತಿಲ್ಲ. ನಾನು ಅದನ್ನು ಮುಂದೆ ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಲೋನ್ ಕೊಡುತ್ತಿಲ್ಲ. ಎಜ್ಯುಕೇಷನ್ ಲೋನ್ ಕೊಡುತ್ತಿಲ್ಲ. ನೀವು ಮಾತ್ರ ಪರಿಶಿಷ್ಟ ಜಾತಿಯ ಮತ್ತು ವರ್ಗದ ಮಕ್ಕಳಿಗೆ ನಾವು ಇಷ್ಟೆಲ್ಲಾ ಆರ್ಥಿಕ ಸಹಾಯ ಮಾಡುತ್ತೇವೆಂದು ಹೇಳುತ್ತೀರಿ. ಅಲ್ಲಿ ಹುಡುಗಿಯರು ಬಂದು ಕಣ್ಣೀರು ಹಾಕುತ್ತಾರೆ. ಲಾ ಕಾಲೇಜಿನಲ್ಲಿ ಓದುವವರು, ಬಿ. ಎಡ್, ಓದುವಂಥ ವಿದ್ಯಾರ್ಥಿಗಳು, ಸರ್ ಫೀ ಕಟ್ಟಿಲ್ಲವೆಂದು ಕಣ್ಣೀರು ಹಾಕುತ್ತಾರೆ. ಸಾಲ ಕೊಡುವ ಬ್ಯಾಂಕ್ ಮ್ಯಾನೇಜರ್ ವಿದ್ಯಾರ್ಥಿನಿಯರಿಗೆ ಬರಿ ಕತೆ ಹೇಳಿ

ಕಳುಹಿಸುತ್ತಾನೆ. ಅಲ್ಲಿ ಇದಕ್ಕೆ ಸಂಬಂಧಪಟ್ಟ ಲೀಡ್ ಬ್ಯಾಂಕ್‌ನವರು ಯಾರು ಬಂದಿದ್ದಾರೋ ನಮಗೆ ಗೊತ್ತಿಲ್ಲ. ಅಧಿಕಾರಿಗಳಿಗೆ ಸ್ವಲ್ಪವಾದರೂ ಮಾನ ಮಾರ್ಯದೆ ಮಾನವೀಯತೆ ಇದೆಯೆ? ಆ ವಿದ್ಯಾರ್ಥಿಗಳು ಕಣ್ಣೀರು ಹಾಕುತ್ತಾರೆ. ನಿಮ್ಮ ಕಾನೂನು ನಿಮ್ಮ ರಿಕವರಿ ಕಟ್ಟಿಕೊಂಡರೆ ಮನೆ ಹಾಳಾಯಿತು. ಇದನ್ನು ತೆಗೆದುಕೊಂಡು ಏನು ಮಾಡುವುದು? ಕೆನರಾ ಬ್ಯಾಂಕ್ 1600 ಕೋಟಿ ಲಾಭ, ಕಾರ್ಪೋರೇಷನ್ ಬ್ಯಾಂಕ್ ಅಷ್ಟು ಕೋಟಿ ಲಾಭ ತಂದಿದೆ ಎಂದು ಎಲ್ಲರೂ ಹೇಳುತ್ತೀರಿ. ನಿಮ್ಮ ಲಾಭ ತೆಗೆದುಕೊಂಡು ಏನು ಮಾಡಬೇಕು? ನಿಮಗೆ ಎಲ್ಲಾ ಸಂಬಳ ಹೆಚ್ಚು ಮಾಡಿಕೊಳ್ಳುವುದಕ್ಕೆ ಬೇಕೆ? ಬಡವರಿಗೆ ಇವತ್ತು ಐದು, ಹತ್ತು ಸಾವಿರ ಸಾಲ ಕೊಡುವುದಿಲ್ಲವೆಂದರೆ ಹೇಗೆ? ಎಜ್ಯುಕೇಷನ್ ಲೋನ್ ಕೊಡುವುದಕ್ಕೆ ಇಪ್ಪತ್ತಾರು ಕಡೆ ಹೋಗಿ ಎನ್.ಓ.ಸಿ. ತರಬೇಕು. ಅವರನ್ನು ಇವರನ್ನು ಕರೆದುಕೊಂಡು ಬಂದು ಶ್ಯೂರಿಟಿ ಕೊಡಿಸಬೇಕು. ಈ ಎಲ್ಲಾ ರೂಲ್ಸ್‌ನ್ನು ಸಿಂಪ್ಲಿಫೈ ಮಾಡಿ. ಮೆಡಿಕಲ್ ಮತ್ತು ಇಂಜಿನಿಯರಿಂಗ್ ಹಾಗೂ ನರ್ಸಿಂಗ್ ಓದುವಂಥ ಹೆಣ್ಣುಮಕ್ಕಳ ಸ್ಥಿತಿ ಇವತ್ತು ಏನಾಗಿದೆ? ನೀವು ಎಷ್ಟು ಮರು ಶುಲ್ಕ ಪಾವತಿ ಕಟ್ಟಿದ್ದೀರಿ? ಸರ್ಕಾರ ಎಷ್ಟು ಮಾಡಿದೆ? ಎಲ್ಲಾ ಹುಡುಗರು ಓದುವುದನ್ನು ಬಿಟ್ಟಿದ್ದಾರೆ, 80% ಮಕ್ಕಳು ಇವತ್ತು ಹಳ್ಳಿಗಳಿಗೆ ಬಂದಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಅದೊಂದು ಒಳ್ಳೆಯ ಕಾರ್ಯಕ್ರಮವಿತ್ತು. ಅದು ಇವತ್ತು ಎಲ್ಲಾ ನಿಂತು ಹೋಗಿದೆ. ಇವತ್ತು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯಲ್ಲಿ 2007-08 ರಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಅಂಗವಿಕಲರ ಸಾಧನ ಸಲಕರಣೆಗಳನ್ನು ಕೊಳ್ಳುವುದಕ್ಕೆ ದುಡ್ಡು ಇಟ್ಟಿದ್ದೆವು. 2007-08 ರಲ್ಲಿ ಇಟ್ಟಂಥ ದುಡ್ಡು ಇದರಲ್ಲಿ ಒಂದು ರೂಪಾಯಿ ಖರ್ಚಾಗಿಲ್ಲ. ಯಾವ ಸಾಧನ ಸಲಕರಣೆಯನ್ನು ಒಂದು ರೂಪಾಯಿಗೆ ತೆಗೆದುಕೊಂಡಿಲ್ಲ. 2008-09ನೇ ಸಾಲಿನಲ್ಲಿ ಎಷ್ಟು ಕೊಟ್ಟಿದ್ದೀರಿ? ಮತ್ತೆ ಏನು ಮಾಡಿದ್ದೀರಿ? ಇಲಾಖೆಯ ಕಾರ್ಯಕ್ರಮಗಳಿಗೆ ಸುತ್ತುನಿಧಿ ಇರುತ್ತದೆ. 1 ಲಕ್ಷ ರೂಪಾಯಿ ಸುತ್ತು ನಿಧಿ ಇದ್ದೆ ಇರುತ್ತದೆಂದು ತಾವು ಕೂಡ ಹೇಳಿದ್ದೀರಿ. ಇವತ್ತಿನ ದಿವಸ 1 ಲಕ್ಷ 40 ಸಾವಿರ ಸ್ತ್ರೀ ಶಕ್ತಿ ಗುಂಪುಗಳಿವೆ. ಈ ಒಂದು ಯೋಜನೆಯನ್ನು ಸ್ವಸಹಾಯ ಗುಂಪುಗಳಿಗೆ ವಿಸ್ತರಿಸಿದರೆ ತಪ್ಪೇನು ಆಗುವುದಿಲ್ಲ. ನಾವು ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಭತ್ಯೆಯನ್ನು ಹೆಚ್ಚು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಪ್ರಕಟಣೆ ಮಾಡಿದ್ದಾರೆ. ಇದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದ ಕಾರ್ಯಕ್ರಮವಾಗಿದೆ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದರ ಬಗ್ಗೆ ಒತ್ತಡ ಇತ್ತು ಮತ್ತೆ ನಾನೂ ಕೂಡ ಆಲೋಚನೆ ಮಾಡಿದ್ದೇನು. ಆದರೆ, ಈಗ ಅದನ್ನು ಜಾರಿ ಮಾಡಿದ್ದೀರಿ. ನಾನು

ಅದನ್ನು ಸ್ವಾಗತ ಮಾಡುತ್ತೇನೆ. ಆದರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ತಾವು ವಿಧಾನ ಪರಿಷತ್‌ನಲ್ಲಿ ಹೇಳಿದ್ದೀರಿ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಿವೃತ್ತಿ ವೇತನದ ಬಗ್ಗೆ ನೀವು ಪರಿಶೀಲನೆ ಮಾಡುತ್ತಿದ್ದೀರಾ ಎಂದು ವಿಧಾನ ಪರಿಷತ್‌ನಲ್ಲಿ ಹಿರಿಯ ಸದಸ್ಯರಾದ ಮಾನ್ಯ ನಾಣಯ್ಯನವರು ನನಗೆ ಪ್ರಶ್ನೆ ಕೇಳಿದರು. ಆಗ ನಾನು ಉತ್ತರ ಕೊಡುವಾಗ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಆದರೆ, ಪತ್ರಿಕೆಯಲ್ಲಿ ಆ ರೀತಿಯಾಗಿ ವರದಿಯಾಗಿದೆ. ಅದನ್ನು ಜಾಸ್ತಿ ಮಾಡಿದರೆ ಒಳ್ಳೆಯದು. ಹಾಗೆಯೇ ನಿವೃತ್ತಿ ವೇತನವನ್ನೂ ಕೂಡ ಮಾಡಿ. ಎಂಥೆಂಥವರೆಲ್ಲ ಹಣವನ್ನು ತಿಂದುಕೊಂಡು ಹೋಗುತ್ತಾರೆ. ಆದ್ದರಿಂದ, ಈ ಬಡವರಿಗೆ 400 ರೂಪಾಯಿ ಕೊಟ್ಟರೆ ನಮ್ಮ ಗಂಟೇನು ಹೋಗುವುದಿಲ್ಲ. ಈಗ ಸಂಧ್ಯಾ ಸುರಕ್ಷಾ ಕಾರ್ಯಕ್ರಮದಲ್ಲಿ ನಾವು ಸರಿಯಾದವರಿಗೆ ಕೊಡುತ್ತಿದ್ದೇವೆಯೇ? ರಾಜಕೀಯ influence ತಂದಂಥವರಿಗೆ ನಾವು ಕೊಡುತ್ತಿಲ್ಲವೇ? ಇವತ್ತಿನ ದಿವಸ ಮತದಾರರ ಪಟ್ಟಿಯಲ್ಲಿ ಏನಾಗಿದೆ ಎಂದರೆ, ಒಬ್ಬ ವ್ಯಕ್ತಿಗೆ ಸುಮಾರು 85 ರಿಂದ 90 ವರ್ಷ ವಯಸ್ಸಾಗಿದ್ದು ಆತ ನಡೆಯುವುದಕ್ಕೆ ಶಕ್ತಿ ಇಲ್ಲ ಮತ್ತೆ ಆತನಿಗೆ ಕೋಲು ಕೊಟ್ಟು ನಡೆಸಬೇಕು. ಆತನಿಗೆ 85 ರಿಂದ 90 ವರ್ಷ ವಯಸ್ಸಾಗಿದ್ದರೂ ಮತದಾರರ ಪಟ್ಟಿಯಲ್ಲಿ 50 ಅಥವಾ 52 ವರ್ಷಗಳೆಂದು ನಮೂದಾಗಿದೆ. ಇದರಿಂದ ಅಧಿಕಾರಿಗಳಿಗೆ ಏನಾಗಬೇಕು? ಆತನಿಗೆ ಸಂಬಳ ಮತ್ತೆ ಇತರೆಯದಲ್ಲ ಗ್ಯಾರಂಟಿಯಾಗಿರುತ್ತದೆ. ಆದ್ದರಿಂದ, ನಾವು ಅದನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯಾದಂಥವುಗಳು ಬೇರೆ ಬೇರೆ ಕಡೆ ನಡೆಯುತ್ತವೆ; ಇವೆಲ್ಲಾ ಒಂದು ಕಡೆ ಇರಲಿ. ಆದರೆ, ಇವತ್ತಿನ ದಿವಸ ಇಲಾಖೆ ಜಾರಿ ಮಾಡುವ ಕಾರ್ಯಕ್ರಮಗಳಲ್ಲಿಯೂ ಕೂಡ ಕುಂಠಿತವಾಗಿದೆ. ಆದ್ದರಿಂದ, ಮಹಿಳೆಯರ ಕಲ್ಯಾಣಕ್ಕೂ ಕೂಡ ಹೆಚ್ಚು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಭಾಗ್ಯಲಕ್ಷ್ಮಿ ಯೋಜನೆಯಲ್ಲಿ 2006-07ನೇ ಸಾಲಿನಲ್ಲಿ ಬಹುಶಃ 1 ಲಕ್ಷದ 75 ಸಾವಿರ ಫಲಾನುಭವಿಗಳಿಗೆ ತಲಾ 10 ಸಾವಿರ ರೂಪಾಯಿಯಂತೆ ಠೇವಣಿ ಮಾಡಿದ್ದೆವು. 2007-08ನೇ ಸಾಲಿನಲ್ಲಿ ಎಷ್ಟು ಮಾಡಲಾಗಿತ್ತೆಂಬುದರ ಬಗ್ಗೆ ನನಗೆ ಗೊತ್ತಿಲ್ಲ. ರಾಜ್ಯಪಾಲರ ಭಾಷಣದಲ್ಲಿ ನಾನು ನೋಡಿದಾಗ 2008-09ನೇ ಸಾಲಿನಲ್ಲಿ 1 ಲಕ್ಷ 48 ಸಾವಿರ ಫಲಾನುಭವಿಗಳಿಗೆ ಕೊಟ್ಟಿದ್ದೀವೆಂದು ಹೇಳಿದ್ದೀರಿ. ಆದರೆ, 1-08-2008 ರಿಂದ ಜಾರಿಗೆ ಬಂದಂಥ ಸದರಿ ಯೋಜನೆಯಲ್ಲಿ ಠೇವಣಿ ಇಡುವಂಥ ಹಣವನ್ನು ತಾವು 20 ಸಾವಿರ

ರೂಪಾಯಿ ಮಾಡಿದ್ದೀರಿ. ಆದರೆ, ಈ ಒಂದು ಹೊಸ ಯೋಜನೆಯ ಪ್ರಕಾರ ಎಷ್ಟು ಜನ ಫಲಾನುಭವಿಗಳಿಗೆ ಕೊಡಲಾಗುತ್ತದೆಂದು ತಾವು ಹೇಳಿಲ್ಲ. ಈ ವರ್ಷ 20 ಸಾವಿರ ರೂಪಾಯಿ ಠೇವಣಿಯಂತೆ ಇಲ್ಲಿಯವರೆಗೆ ಯಾರಿಗೂ ಕೂಡ ಬಾಂಡ್ ಅನ್ನು ವಿತರಣೆಮಾಡಿಲ್ಲ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳತಕ್ಕಂಥದ್ದು ತಪ್ಪು ಹೇಳಿಕೆ ಆಗುತ್ತದೆ. ಆದ್ದರಿಂದ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುವುದೇನೆಂದರೆ, ಈಗ ಟೆಂಡರ್ ಪ್ರಕ್ರಿಯೆಯಲ್ಲಿ 3G ಗೆ ರಿಯಾಯಿತಿ ಕೊಟ್ಟು ಎಲ್ಐಸಿ ಮುಖಾಂತರ ಬಾಂಡ್ ವಿತರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಪ್ರತಿ ಕ್ಷೇತ್ರದ ಜನಸ್ಪಂದನ ಕಾರ್ಯಕ್ರಮದಲ್ಲಿ ಎಲ್ಲಾ ಪಕ್ಷದ ಶಾಸಕರು ಇದನ್ನು ವಿತರಣೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಬಾಂಡ್ ಕೊಡುತ್ತಿರುವುದು ಗೊತ್ತು. ಆದರೆ, ಹೊಸ ಯೋಜನೆ ಪ್ರಕಾರ ಅಂದರೆ, 20 ಸಾವಿರ ರೂಪಾಯಿ ರೀತಿಯಲ್ಲಿ ಜನವರಿ 31ನೇ ತಾರೀಖಿನವರೆಗೆ ಕೊಟ್ಟಿಲ್ಲದ ಬಗ್ಗೆ ನಾನು ಹೇಳುತ್ತಿದ್ದೇನೆ. ನಿಮ್ಮ ಸ್ಕೀಂ ಜಾರಿಗೆ ಬಂದು ಸುಮಾರು 7 ತಿಂಗಳಾಯಿತು. ಆದ್ದರಿಂದ, ಹೊಸ ಸ್ಕೀಂ ಪ್ರಕಾರ ಎಷ್ಟು ಜನರಿಗೆ ಬಾಂಡ್ ಕೊಟ್ಟಿದ್ದೀರೆಂದು ನಾನು ಕೇಳಿದೆಯಷ್ಟೆ. ಹಳೆಯ ಸ್ಕೀಮ್ ಪ್ರಕಾರ ಕೊಟ್ಟಿರುವುದು ನನಗೆ ಗೊತ್ತು. ಆನಂತರ ಇದರ ಬಗ್ಗೆ ಉತ್ತರ ಹೇಳಿ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ: 3G ರಿಯಾಯಿತಿ ಕೊಟ್ಟು ಎಲ್ಐಸಿ ಮುಖಾಂತರ ಬಾಂಡ್‌ಗಳನ್ನು ವಿತರಣೆ ಮಾಡುವ ಆದೇಶವನ್ನು ಡಿಸೆಂಬರ್ ಕೊನೆಯ ತಿಂಗಳಲ್ಲಿ ಕೊಟ್ಟಿದ್ದೇವೆ. ಮತ್ತೆ ಅಂದಿನಿಂದ ಇಂದಿನವರೆಗೆ ಬಂದಂಥ ಎಲ್ಲಾ ಬೇಡಿಕೆಗಳನ್ನು ನಾವು ಪೂರೈಸಿದ್ದೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅಂತಿಮವಾಗಿ ಆಡಳಿತ ಸುಧಾರಣೆಗೆ ಸಂಬಂಧಪಟ್ಟಂಥ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಯಾವುದೇ ಸರ್ಕಾರ ಯಾವುದೇ ರೀತಿಯ ಒಂದು ಯೋಜನೆಯನ್ನು ಪರಿಚಯ ಮಾಡಿ, ಅದು ಜಾರಿಯಾಗಿ ಸಕಾಲಕ್ಕೆ ಅದು ಫಲಾನುಭವಿಗೆ ತಲುಪದಿದ್ದರೆ ಪ್ರಯೋಜನವಾಗುವುದಿಲ್ಲ. ನೀವು ಲಕ್ಷ ಮತ್ತು ಕೋಟಿ ರೂಪಾಯಿಗಳ ಬಗ್ಗೆ ಹೇಳಬಹುದು ಮತ್ತೆ ಲಕ್ಷ ತರಹ ತಾವು ಭಾಷಣ ಮಾಡಿದರೂ ಏನು ಪ್ರಯೋಜನವಾಗುವುದಿಲ್ಲ. ಆಡಳಿತದಲ್ಲಿ ಸುಧಾರಣೆಯಾಗದಿದ್ದರೆ ಮತ್ತು ಕಾಲಮಿತಿ ಹಾಕಿಕೊಂಡು ಕಾರ್ಯಕ್ರಮವನ್ನು ನಡೆಸದಿದ್ದರೆ ಬಹುಶಃ ಯವುದೇ ಸ್ಕೀಂಗಳು ಜಾರಿಯಾಗುವುದಿಲ್ಲ. ಮತ್ತೆ ಕಛೇರಿಯಲ್ಲಿನ ಯಾವುದೇ ಕಡತಕ್ಕೆ ಸಂಬಂಧಪಟ್ಟಂತೆ ಒಂದು ಕಾಲಮಿತಿಯನ್ನು ಹಾಕಿಕೊಂಡು ಅದು ಜಾರಿಯಾಗತಕ್ಕಂಥ ಕೆಲಸ

ಮಾಡಬೇಕು. ಹಿಂದೆ ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಯಾಗಿದ್ದಂಥ ಕಾಲದಲ್ಲಿ A.C. ಮತ್ತು DVC ಹುದ್ದೆಯನ್ನು ರದ್ದು ಮಾಡಿದ್ದರು. ತಹಸೀಲ್ದಾರ್‌ರವರನ್ನು ಉಪ ವಿಭಾಗಾಧಿಕಾರಿ ಸ್ಥಾನಕ್ಕೆ ಉನ್ನತೀಕರಣ ಮಾಡಿ ಆಡಳಿತ ಸುಧಾರಣೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದರು. ಅದು ನಿಜವಾಗಿಯೂ ಕೂಡ ಬಹಳ ಅತ್ಯುತ್ತಮವಾದಂಥ ತೀರ್ಮಾನವಾಗಿತ್ತು. ಇವತ್ತಿನ ದಿವಸ ಮತ್ತೆ ಅದು ಬೇಕಾಗಿದೆ. ನಮ್ಮಗಳ ಸ್ವಾರ್ಥಕ್ಕಾಗಿ ಎರಡು ಕಡೆಯವರೂ ಸೇರಿಕೊಂಡು ಈ ರೀತಿಯಾಗಿ ಮಾಡಿಕೊಂಡಿರಬಹುದು. ಆಗ ತಹಸೀಲ್ದಾರ್ ಬಿಟ್ಟರೆ ಡಿ.ಸಿ. ಇದ್ದರು, ಡಿ.ಸಿ. ನಂತರ ಸರ್ಕಾರ ಇತ್ತು. ಆಗ ರೆವಿನ್ಯೂ ಇಲಾಖೆಯಲ್ಲಿ three-tier system ಇತ್ತು. ನಿಜವಾಗಿಯೂ ಕೂಡ ಇದು ಬೆಸ್ಟ್ ಸಿಸ್ಟಮ್ ಆಗಿತ್ತು. ಸಾಮಾನ್ಯ ಜನರು ಅರ್ಜಿಯನ್ನು ಹಿಡಿದುಕೊಂಡು ಕಚೇರಿಗೆ ಅಲೆಯುವುದು ತಪ್ಪುತ್ತದೆ. ಕಛೇರಿಗೆ ಸಾಮಾನ್ಯ ಜನ ಹೆಚ್ಚುವರಿಯಾಗಿ ಮತ್ತೆ ಹೋದರೆ ಇಡೀ ದಿನ ಎಲ್ಲ ರೀತಿಯ ನಷ್ಟ ಆತನಿಗೆ ಆಗುತ್ತದೆ. ಆಗ ತಹಸೀಲ್ದಾರ್, ಡಿ.ಸಿ. ಮತ್ತು ಸರ್ಕಾರ ಇತ್ತು. ಅಂದರೆ, three-tier system ಇತ್ತು. ಆದರೆ, ಡಿವಿಸಿ ಹುದ್ದೆ ತೆಗೆದು ಈಗ ರೀಜನಲ್ ಕಮಿಷನರ್ ಎಂದು ಮಾಡಿದ್ದೀರಿ. ಕೇವಲ ಹೆಸರು ಮಾತ್ರ ಬೇರೆಯಷ್ಟೆ. ಆದರೆ, ಪ್ರಯೋಜನ ಏನಾಯಿತು? ಪುನಃ AC ಯವರು ಅಲ್ಲಿಯೇ ಇದ್ದಾರೆ. ಇದರಿಂದ ಏನು ಪ್ರಯೋಜನ? ಈ ಕೆಲಸವನ್ನು ವಿಕೇಂದ್ರೀಕರಣವಾದರೂ ಮಾಡಿದ್ದೀರಾ? ಒಂದು ಜಮೀನು ಮಂಜೂರಾಗಬೇಕಾದರೆ ತಹಸೀಲ್ದಾರ್‌ರವರಿಂದ ACಗೆ ಮತ್ತು AC ಯಿಂದ DC ಗೆ ಹೋಗಬೇಕು. ಮತ್ತೆ DC ಯಿಂದ DVC ಗೆ ಬರಬೇಕು. DVC ಯಿಂದ ಸರ್ಕಾರಕ್ಕೆ ಬರಬೇಕು. ಈ ಕೆಲಸ ಸುಲಭವಾಗಿ ಆಗುತ್ತದೆಯೇ? ಆದ್ದರಿಂದ, ಈ ದೃಷ್ಟಿಯಿಂದ ದಯಮಾಡಿ ವಿಕೇಂದ್ರೀಕರಣ ಮಾಡುವುದರ ಜೊತೆಗೆ ಆ ಒಂದು ಸುಧಾರಣೆಯನ್ನು ತರಬೇಕೆಂಬ ಮಾತನ್ನು ಹೇಳುತ್ತಾ ಸರ್ಕಾರಕ್ಕೆ ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, 2008-09ನೇ ಸಾಲಿನ ಬಜೆಟ್‌ನಲ್ಲಿ ತಾವು ಘೋಷಣೆ ಮಾಡಿರತಕ್ಕಂಥ ಕಾರ್ಯಕ್ರಮಗಳು ಇನ್ನೂ ಕೂಡ ಜಾರಿಯಾಗಿಲ್ಲ. ಇಲ್ಲಿ ನೀವು ವಿಫಲರಾಗಿದ್ದೀರಿ. ಈ ವರ್ಷ ಕೂಡ ಅದೇ ಪರಿಸ್ಥಿತಿ ಮುಂದುವರಿಯತಕ್ಕಂಥ ಸ್ಥಿತಿ ಕಾಣುತ್ತದೆ. ಆ ಒಂದು ಕಾರಣಕ್ಕಾಗಿ ತಾವು ಮಂಡಿಸಿರುವ ಬಜೆಟ್‌ನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಶ್ರೀನಿವಾಸ ಪ್ರಸಾದ್‌ರವರೆ, ತಾವು ಮಾತನಾಡಿ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುವುದಕ್ಕಿಂಥ ಮುಂಚೆ ತಮ್ಮ ಗಮನ ಸೆಳೆಯುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈಗ ನಾವೆಲ್ಲರು ಬಜೆಟ್ ಮೇಲೆ

ಮಾತನಾಡುತ್ತಿದ್ದೇವೆ. ಆದರೆ, ಯಾವುದೇ ಇಲಾಖೆಯ Performance Budget and Annual Report ಅನ್ನು ನಮಗೆ ಕೊಟ್ಟಿಲ್ಲ. ಈ ರೀತಿಯಾದರೆ ಸದಸ್ಯರು ಬಜೆಟ್‌ಮೇಲೆ ಯಾವರೀತಿಯಾಗಿ ಮಾತನಾಡಬೇಕು? ಬಜೆಟ್ ಪ್ರಸೆಂಟ್ ಮಾಡುವಾಗ ಆಯಾ ಇಲಾಖೆಯ performance budget ಅನ್ನು ಕೊಡುವುದಿಲ್ಲವೆ? ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಅಥವಾ ಸಂಬಂಧಪಟ್ಟ ಸಚಿವರಿಗೆ ತಾವಾದರೂ ಕೇಳಬೇಕಾಗುತ್ತದೆ. ಸಂಬಂಧಪಟ್ಟಂಥ ಇಲಾಖೆಯವರು Performance budget and Annual report ಅನ್ನು ಕೊಡುವುದಿಲ್ಲವೆ?

ಉಪಾಧ್ಯಕ್ಷರು: ಕೊಡಿಸೋಣ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಸದನ ಕರೆದಿರುವುದೇ ಕೇವಲ ನಾಲ್ಕು ದಿವಸ.

ಉಪಾಧ್ಯಕ್ಷರು: ಈಗ ಅವರು ಮಾತನಾಡಿ ಮುಗಿಸಲಿ. ಕೊಡಿಸುವುದಕ್ಕೆ ಹೇಳುತ್ತೇನೆ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಇದು ಬಹಳ ಮುಖ್ಯವಾದ ವಿಷಯವಾಗಿದೆ. ಮಾಹಿತಿ ಇಲ್ಲದೆ ಮಾತನಾಡುವುದಾದರೂ ಹೇಗೆ?

ಉಪಾಧ್ಯಕ್ಷರು: ಆಯಿತು. ಸೂಚನೆ ಕೊಡಿಸೋಣ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಕೊಡಿಸೋಣವೆಂದಲ್ಲ. ತಾವು ಅಧಿಕಾರಿಗಳಿಗೆ ನಿರ್ಧಿಷ್ಟವಾಗಿ ಹೇಳಬೇಕು. ಮಾನ್ಯ ಸಚಿವರೂ ಕೂಡ ಇದರ ಬಗ್ಗೆ ಗಮನಹರಿಸುತ್ತಿಲ್ಲ. ಮತ್ತೆ ಅಧಿಕಾರಿಗಳೂ ಕೂಡ ಅದನ್ನು ಕೊಡುತ್ತಿಲ್ಲವೆಂದರೆ ಹೇಗೆ? ಮಾನ್ಯ ಶ್ರೀನಿವಾಸ್‌ಪ್ರಸಾದ್‌ರವರು ಹಿರಿಯರಿರುವುದರಿಂದ, ಇದರ ಬಗ್ಗೆ ಮಾತನಾಡುತ್ತಾರೆ. ಆದರೆ, ಈ ಸಾರಿ ಬಹಳಷ್ಟು ಹೊಸ ಸದಸ್ಯರು ಇಲ್ಲಿಗೆ ಬಂದಿದ್ದಾರೆ. ಇಲಾಖೆಗಳಲ್ಲಿ ಏನೇನು ಕಾರ್ಯಕ್ರಮಗಳಿವೆ ಎಂಬುದು ಮತ್ತು ಸರ್ಕಾರದ performance ಯಾವರೀತಿಯ ಇದೆ ಎಂದು ಮತ್ತು ಎಷ್ಟು ಹಣ ಖರ್ಚಾಗಿದೆ ಎಂಬ ವಿಷಯಗಳೆಲ್ಲಾ ಹೇಗೆ ಗೊತ್ತಾಗಬೇಕು? ಆದ್ದರಿಂದ ನಮಗೆ ಈ ಮಾಹಿತಿಗಳನ್ನು ಯಾವಾಗ ಕೊಡುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು. ನಾಳೆಯೊಳಗೆ ಮಾಹಿತಿ ಕೊಡಿಸಿ. ಏಕೆಂದರೆ, ಇನ್ನು ಎರಡು ದಿವಸ ಅಸೆಂಬ್ಲಿ ಇರುವುದರಿಂದ, ಇವತ್ತು ಮತ್ತು ನಾಳೆ ನಾವುಗಳು ಮಾತನಾಡುವುದಕ್ಕೆ ಆಗುತ್ತದೆ. ಇರತಕ್ಕಂಥ ಎರಡು ದಿವಸಗಳಲ್ಲಿ ನಾವು ಬಜೆಟ್ ಮೇಲೆ ನಮ್ಮ ಸಲಹೆಯನ್ನು ಕೊಡಬೇಕಾಗುತ್ತದೆ. ಸರ್ಕಾರ ಹಿಂದೆ ಅನುಷ್ಠಾನ ಮಾಡಿರುವ ಬಗ್ಗೆ ಮತ್ತು ಮಾಡದೇ ಇರತಕ್ಕಂಥ ವಿಷಯಗಳ ಬಗ್ಗೆ ನಾವು ಗಮನ ಸೆಳೆಯಬೇಕಾಗುತ್ತದೆ.

ಉಪಾಧ್ಯಕ್ಷರು: ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆ. ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೆ ತಾವು ಮಾತನಾಡಿ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಇದು ಎಲ್ಲಾ ಶಾಸಕರಿಗೆ ಕೊಡಬೇಕಾಗುತ್ತದೆ. ಈ ರೀತಿ ಹೇಳಿದರೆ ಹೇಗೆ? ಹಾಗಾದರೆ, ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ? ಇದನ್ನು ಕೊಡಿಸತಕ್ಕಂಥದ್ದು ನಿಮ್ಮ ಜವಾಬ್ದಾರಿ ಇದೆ. ಒಂದು ವೇಳೆ ಸರ್ಕಾರದ ಕಡೆಯಿಂದ ಕೊಡಿಸದಿದ್ದರೆ ನೀವು ಕೊಡಿಸಬೇಕಾಗುತ್ತದೆ. ಸದಸ್ಯರ ರಕ್ಷಣೆಗೆ ಯಾರು ಬರಬೇಕು? ಎಲ್ಲಾ ಇಲಾಖೆಯ Performance budget and Annual report ಅನ್ನು ತಾವು ಕೊಡಿಸಬೇಕು. ತಾವು ಇದರ ಬಗ್ಗೆ ಏನು ಹೇಳುತ್ತೀರಿ?

ಉಪಾಧ್ಯಕ್ಷರು: ಡಿಮಾಂಡ್ಸ್ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ Performance budget ಮತ್ತು ಸಂಬಂಧಪಟ್ಟಂಥ ಮಾಹಿತಿ ಕೊಡಲಾಗುತ್ತದೆ. ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೆ, ತಾವು ಮಾತನಾಡಿ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಕೊಡಿಸುವಂಥ ವ್ಯವಸ್ಥೆಯನ್ನು ಮಾಡಿಸಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇಲ್ಲಿಗೆ ಬರಬೇಕಾದರೆ ಇನ್ನು ಬಹಳಷ್ಟು ವರ್ಷ ನಿಮಗೆ ಬೇಕಾಗುತ್ತದೆ. ಆದ್ದರಿಂದ, ನೆಮ್ಮದಿಯಿಂದ ಕುಳಿತುಕೊಳ್ಳಿ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅಲ್ಲಿಗೆ ಬರುವುದಕ್ಕೆ ನನಗೇನೂ ಆತುರವಿಲ್ಲ. ನಾವು ಇಲ್ಲಿಯೇ ಆರಾಮಾಗಿದ್ದೇವೆ. ನೀವು ಈಗ ಅಲ್ಲಿದ್ದೀರಿ. ಚೆನ್ನಾಗಿ ಆ ಸ್ಥಾನವನ್ನು ಕಾಪಾಡಿಕೊಂಡು ಹೋಗಿ ರಾಜ್ಯದ ಜನತೆಗೆ ಒಳ್ಳೆಯದನ್ನು ಮಾಡಿ. ನಿವು ನಮಗೆ ಆ ಎಲ್ಲಾ ಮಾಹಿತಿಯನ್ನು ಕೊಡಿ ಸಾಕು. ಅದನ್ನು ನೋಡಿ ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಾ ಅಥವಾ ಕೆಟ್ಟ ಕೆಲಸ ಮಾಡಿದ್ದೀರಾ ಎಂದು ನೋಡಿ ಹೇಳುತ್ತೇವೆ. ನೀವು ಮಾಡಿರುವುದು ಯಾರಿಗೂ ಗೊತ್ತಾಗಬಾರದೆಂದು ಮರೆಮಾಚುವುದಕ್ಕೆ ಹೋಗುತ್ತಿದ್ದೀರಷ್ಟೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ (ನಂಜನಗೂಡು): ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸುದೀರ್ಘವಾದಂಥ ಬಜೆಟ್ ಭಾಷಣದ ಕೊನೆಯಲ್ಲಿ ಬಹಳ ಮುಖ್ಯವಾದಂಥ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅವರಿಗೆ ಕಳೆದ ಬೆಳಗಾಂ ಅಧಿವೇಶನದಲ್ಲಿ ನಡೆದಂಥ ಕಾರ್ಯಕಲಾಪಗಳ ರೀತಿ ಅವರ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ ತಮ್ಮ ಬಜೆಟ್ ಭಾಷಣದ ಕೊನೆಯಲ್ಲಿ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಗಾಂಧೀಜಿಯವರ ಹೇಳಿಕೆಯ

ಮುಖಾಂತರ ಅವರು ಪ್ರಸ್ತಾಪವನ್ನು ಮಾಡಿದ್ದಾರೆ. ನಮ್ಮ ಲೋಪದೋಷಗಳ ವಿಮರ್ಶೆಗೆ ಕಿವಿಗೊಡಬೇಕು, ಪ್ರಶಂಸೆಗೆ ಅಲ್ಲವೆನ್ನುವ ಮಾತನ್ನು ಅವರು ಹೇಳಿದ್ದಾರೆ. ಗಾಂಧೀಜಿಯವರ ಹೇಳಿಕೆ ನಮಗೆಲ್ಲರಿಗೂ ಪಾಠ ಎನ್ನುವುದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಆಡಳಿತದಲ್ಲಿ ಯಾವುದಾದರೂ ಕುಂದು ಕೊರತೆಗಳು ಇದ್ದರೆ ಅದರ ಬಗ್ಗೆ ಬರಬಹುದಾದ ಟೀಕೆ ಟಿಪ್ಪಣಿಗಳನ್ನು ಸಮಚಿತ್ತದಿಂದ ಸ್ವೀಕರಿಸಿ ಸರಿಪಡಿಸಿಕೊಳ್ಳುವ ಭರವಸೆಯನ್ನು ನೀಡುತ್ತೇನೆ ಎನ್ನತಕ್ಕಂಥ ಮಾತನ್ನು ತುಂಬಾ ಚೆನ್ನಾಗಿ ಮತ್ತು ಬಹಳ ಅರ್ಥಗರ್ಭಿತವಾಗಿ ಹೇಳಿದ್ದಾರೆ. ಬೆಳಗಾಂ ಅಧಿವೇಶನದಲ್ಲಿ ನಡೆದಂಥ ಕಾರ್ಯಕಲಾಪಗಳು, ಬಹುಶಃ ಯಾವ ಉದ್ದೇಶದಿಂದ ಬೆಳಗಾಂ ಅಧಿವೇಶನವನ್ನು ನಡೆಸಿತ್ತೋ ಬಹುಶಃ ಅದರ ಉದ್ದೇಶ ಈಡೇರಲಿಲ್ಲ ಎನ್ನತಕ್ಕಂಥ ರೀತಿಯಲ್ಲಿ ಅವರ ಮನಸ್ಸಿನ ಭಾವನೆಯಲ್ಲಿ ಬಂದಿದೆ. ಏಕೆಂದರೆ ಬೆಳಗಾಂ ಅಧಿವೇಶನದಲ್ಲಿ ನಡೆದಂಥ ಸಮಯದಲ್ಲಿ ಮಾನ್ಯ ಸುರೇಶ್ ಕುಮಾರ್‌ವರೆ, ಮಾನ್ಯ ಜನಾರ್ದನರೆಡ್ಡಿಯವರು ಈ ಕಡೆ ಸ್ವಲ್ಪ ಗಮನವನ್ನು ಕೊಡಲಿ ಎಂದು ಹೇಳುತ್ತಿದ್ದೇನೆ. ಸೂಕ್ಷ್ಮವಾಗಿ ಆ ಬೆಳಗಾಂ ಅಧಿವೇಶನದ ಬಗ್ಗೆ ಹೇಳುತ್ತಿದ್ದೇನೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಬೆಳಗಾಂ ಅಧಿವೇಶನದಲ್ಲಿ ನಡೆದಂಥದ್ದು ಒಂದು ರೀತಿಯಾದಂಥ ಶತೃತ್ವಕ್ಕೆ ಅವಕಾಶ ಕೊಟ್ಟಂತೆ ಆಗಿತ್ತು. ಹಾಗಾಗಿ ನಾನು ತಮ್ಮ ಹೇಳಿಕೆಯ ಹಿನ್ನೆಲೆಯಲ್ಲಿ ಹೇಳತಕ್ಕಂಥದ್ದು ಏನೆಂದರೆ, we are not political enemies. We are political opponents ಎನ್ನತಕ್ಕಂಥ ಮಾತನ್ನು ನಾನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ತಾವು ಹೇಳಿದ್ದೀರಾ? ನಾವು ರಾಜಕೀಯ ಶತ್ರುಗಳು ಅಲ್ಲ, ರಾಜಕೀಯ ವಿರೋಧಿಗಳು ಆಗಿರತಕ್ಕಂಥದ್ದು, ನಮ್ಮ ಪಕ್ಷದ ಸಿದ್ಧಾಂತ ನೀತಿಗಳ ಮೇಲೆ, ನಾವು ನಿಮ್ಮ ಜೊತೆಯಲ್ಲಿ, ನಮ್ಮ ಅಭಿಪ್ರಾಯಗಳು ಇರತಕ್ಕಂಥದ್ದು ಸಹಜ. ಆದರೆ ಬೆಳಗಾಂ ಅಧಿವೇಶನದಲ್ಲಿ ಬಹುಶಃ ಅದನ್ನು ತುಂಬಾ ಮೀರಿ ನಾವು ಒಂದು ರೀತಿಯಾದ ಶತ್ರುತ್ವಕ್ಕೆ ಅವಕಾಶವನ್ನು ಕೊಟ್ಟಂಥದ್ದು ಅಲ್ಲಿ ಬಹಳಷ್ಟು ನಡೆಯಿತು, ಇಲ್ಲವೆಂದು ಹೇಳ ಬೇಡಿ. ಅಲ್ಲಿ ನಡೆದಂಥ ಕಾರ್ಯಕಲಾಪಗಳ ರೀತಿಯ ಬಗ್ಗೆ ನಾವೆಲ್ಲರೂ ಕೂಡ ತಲೆತಗ್ಗಿಸತಕ್ಕಂಥ ರೀತಿಯಲ್ಲಿ ಆಯಿತು. ಆದರೆ ಅದು ಆಗಬೇಕು ಎನ್ನುವಂಥದ್ದು ಅಲ್ಲ. ಆ ದೃಷ್ಟಿಯಲ್ಲಿ ಬಹುಶಃ ತಾವು ತಮ್ಮ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೀರಿ ಎನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಇನ್ನು ಮುಂದೆ ಯಾವುದೇ ಅಧಿವೇಶನದಲ್ಲಿಯೂ ಕೂಡ ಆ ರೀತಿಯಾಗಿ ಆ ಶತ್ರುತ್ವದ ಭಾವನೆಯಲ್ಲಿ ಆಗಬಾರದು ಎನ್ನುವ ರೀತಿಯ ಹಿನ್ನೆಲೆಯಲ್ಲಿ ಹೇಳಿದೆ. ಏಕೆಂದರೆ ಬೆಳಗ್ಗೆ ಮಾತನಾಡುವಾಗ ಮಾನ್ಯ ಖರ್ಗೆಜೀಯವರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದರು. ನಮಗೆ

ಕರ್ನಾಟಕದಲ್ಲಿ ಒಂದು political culture ಇದೆ ಎನ್ನತಕ್ಕಂಥದ್ದನ್ನು ಜ್ಞಾಪಿಸುತ್ತಿದ್ದರು. ನಮಗೆ ಸಂಸ್ಕೃತಿ ಇದೆ ರಾಜಕೀಯ ಹಿನ್ನೆಲೆಯಲ್ಲಿ ಎಂದು ಹೇಳಿ ಅವರು ಕೆಂಗಲ್ ಹನುಮಂತಯ್ಯನವರು, ನಿಜಲಿಂಗಪ್ಪನವರು ಇವರೆಲ್ಲರ ಬಗ್ಗೆ ಕೂಡ ಅವರು ಪ್ರಸ್ತಾಪ ಮಾಡಿದರು. ಅವರು ಸ್ವಾತಂತ್ರ್ಯ ಬಂದ ಮೇಲೆ ಈ ದೇಶದಲ್ಲಿ ಸಂವಿಧಾನವನ್ನು ರಚನೆ ಮಾಡುವಂಥ ಸಂದರ್ಭದಲ್ಲಿಯೂ ಕೂಡ ಇವರಿಬ್ಬರ contribution ಇದೆ. ಅಲ್ಲಿ constitution deliberations ದಲ್ಲಿ ನಡೆದಿರತಕ್ಕಂಥದ್ದರಲ್ಲಿ ಕೆಂಗಲ್ ಹನುಮಂತಯ್ಯನವರು ಮತ್ತು ನಿಜಲಿಂಗಪ್ಪನವರು ಭಾಗವಹಿಸಿದಂಥ ರೀತಿಯಲ್ಲಿ ಆ ಸಂವಿಧಾನವನ್ನು ಯಾವ ರೀತಿಯಲ್ಲಿ ನಾವು ರಚನೆ ಮಾಡಬೇಕು ಎನ್ನುವಂಥ ರೀತಿಯಲ್ಲಿ ಅಲ್ಲಿಯೂ ಕೂಡ ಅವರ ಕೊಡುಗೆ ಇದೆ ಎನ್ನುವಂಥ ರೀತಿಯಲ್ಲಿ ಇದೆ ಎನ್ನುವ ಆ ಹಿನ್ನೆಲೆಯಲ್ಲಿ ಬಹುಶಃ ನಮ್ಮ ಹಳೆಯ ಮೈಸೂರು ಸಂಸ್ಥಾನ ಇದ್ದಾಗ ಕರ್ನಾಟಕ ಏಕೀಕರಣಕ್ಕೆ ಮೊದಲು ಅಥವಾ ಕರ್ನಾಟಕ ಏಕೀಕರಣ ಆದ ಮೇಲೆಲೂ ಕೂಡ ನಮಗೆ ಕರ್ನಾಟಕದ ಒಂದು ಒಳ್ಳೆಯ political culture ಇದೆ ಎನ್ನತಕ್ಕಂಥ ಹಿನ್ನೆಲೆಯಲ್ಲಿ ಮಾತನಾಡುತ್ತಾ ಅವರು ಹೇಳಿದಂಥದ್ದರ ಬಗ್ಗೆ ನಾನು ಅಭಿನಂದನೆಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಬೆಳಗಾಂ ಅಧಿವೇಶನ ಪುನರಾವರ್ತನೆ ಆಗಬೇಕು ಎನ್ನುವಂಥದ್ದು ಅಲ್ಲ. ಅದು ಕೊನೆಯಾಗಬೇಕು ಎನ್ನುವಂಥ ರೀತಿಯಲ್ಲಿ ನಾನು ಆ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು 77 ಪುಟಗಳಷ್ಟು ಒಂದು ಒಳ್ಳೆಯ ದೊಡ್ಡ ಬಜೆಟ್‌ನ್ನು ಪ್ರಸ್ತಾಪ ಮಾಡಿದ್ದಾರೆ. ಚರ್ಚೆಯನ್ನು ಪ್ರಾರಂಭ ಮಾಡಿದಂಥ ನಮ್ಮ ಶಾಸಕಾಂಗ ಪಕ್ಷದ ನಾಯಕರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ದೀರ್ಘವಾಗಿ ಬಹುಶಃ ಅದರ ಬಗ್ಗೆ ವಿಮರ್ಶೆಯನ್ನು ಅದರ ಬಗ್ಗೆ ಲೋಪದೋಷವನ್ನು ಬಹಳ ಚೆನ್ನಾಗಿ ಎತ್ತಿ ತೋರಿಸಿರತಕ್ಕಂಥ ಒಂದು ಪ್ರಯತ್ನವನ್ನೂ ಕೂಡ ಅವರು ಇವತ್ತು ಮಾಡಿದ್ದಾರೆ. ಅದನ್ನು ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಇರತಕ್ಕಂಥ ಎಲ್ಲವನ್ನು ಮತ್ತೆ ಹೇಳುವ ಅವಶ್ಯಕತೆ ಇರುವುದಿಲ್ಲ. ಬಹುಮುಖ್ಯವಾಗಿ ಅವರು ಬೆಳಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಕಳೆದ ಬಜೆಟ್‌ನ ಹಿನ್ನೆಲೆಯಲ್ಲಿ ಅವರು ಕೆಲವು ವಿಷಯಗಳನ್ನು ಮಾತನಾಡುತ್ತಾ ಹೇಳಿರತಕ್ಕಂಥದ್ದು, ಏಕೆಂದರೆ ಮಾನ್ಯ ಯಡಿಯೂರಪ್ಪನವರಿಗೆ ಇದು ನಾಲ್ಕನೇ ಬಜೆಟ್ ಆಗಿರುವಂಥದ್ದು. ಸಮ್ಮಿಶ್ರ ಸರ್ಕಾರದಲ್ಲಿ ಇದ್ದಾಗ ಎರಡು ಬಜೆಟ್‌ನ್ನು ಅವರು ಮಂಡಿಸಿದ್ದಾರೆ. ಈಗಲೂ ಕೂಡ ತಮಗೆ ಏನು ದಕ್ಷಿಣ ಭಾರತದಲ್ಲಿ ಭಾರತೀಯ ಜನತಾ-ಪಕ್ಷಕ್ಕೆ ಪ್ರಾರಂಭದಲ್ಲಿ ಬಹುಮತ ಇಲ್ಲದೇ ಇದ್ದರೂ ಕೂಡ ಪಕ್ಷೇತರ ಸದಸ್ಯರನ್ನು ಸೇರಿಸಿಕೊಂಡು

ಬಹುಮತ ಆದಮೇಲೆ ಕೂಡ ಒಂದು ಬಜೆಟ್‌ನ್ನು ಕೊಟ್ಟಿದ್ದೀರಿ. ಅದು ಆದ ನಂತರ ತಮ್ಮ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರುವ ರೀತಿಯಲ್ಲಿ ಇವತ್ತು ಉಪ ಚುನಾವಣೆಗಳ ಮುಖಾಂತರವೂ ಕೂಡ ತಮಗೆ ಇವತ್ತು ಬಹುಮತ ಇದೆ ಎನ್ನುವಂಥದ್ದು ಕೂಡ ಹೇಳಿದ್ದೀರಿ. ಹಿಂದೆ ಇರುವಂಥ ಎರಡು ಬಜೆಟ್‌ನಲ್ಲಿಯೂ ಕೂಡ ಒಳ್ಳೆಯ ಬಜೆಟ್‌ನ್ನು ಕೊಡುವುದಕ್ಕಾಗಲಿಲ್ಲ. ಆ ಸಮ್ಮಿಶ್ರ ಸರ್ಕಾರದಲ್ಲಿ ಅದು ಆಡಳಿತವೇ ಅಲ್ಲ ಬಿಡಿ ಅದು. ನಿಮ್ಮ 20 ತಿಂಗಳ ಜೆಡಿ(ಎಸ್)-ಬಿಜೆಪಿ ಯ ಒಂದು ಸಮ್ಮಿಶ್ರ ಸರ್ಕಾರ ಇತ್ತು. ಬಹುಶಃ ನಾನು ಕಳೆದ ಸಾಲಿನ ಬಜೆಟ್‌ನಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಹೇಳಿದೆ. ಬಹುಶಃ ಜನ ಆಗ ಭ್ರಮನಿರಸನ ಆಗಿದ್ದರು. ಅದರಿಂದ ಕರ್ನಾಟಕ ರಾಜ್ಯದ ಜನತೆಗೆ ಸಮ್ಮಿಶ್ರ ಸರ್ಕಾರದಿಂದ ಯಾವುದೇ ರೀತಿಯಾದಂಥ ಅನುಕೂಲವಾಗಲಿಲ್ಲ. ತೊಂದರೆಗಳು ಆಯಿತು ಎನ್ನತಕ್ಕಂಥದ್ದು ತಾವು ತಮ್ಮ ಕಳೆದ ಬಜೆಟ್‌ನಲ್ಲಿ ಮಾತನಾಡುತ್ತಾ ತಾವು ಹೇಳಿದಿರಿ. ಅದರಲ್ಲಿ ಒಂದು ಮಾತನ್ನು ಹೇಳಿದೆ. 20 ತಿಂಗಳಲ್ಲಿ ಯಾರಿಗೂ ಅನುಕೂಲವಾಗದೇ ಹೋದರೂ ಕೂಡ ಕರ್ನಾಟಕ ರಾಜ್ಯದ ಜನತೆಗೆ ನಿಮ್ಮ ನಿರೀಕ್ಷೆಯಿಂದ ಯಾವುದೇ ರೀತಿಯಲ್ಲಿ ಅನುಕೂಲತೆ ಮತ್ತು ಸೌಲಭ್ಯಗಳು ಸಿಗದಿದ್ದರೂ ಕೂಡ ಜೆಡಿ(ಎಸ್)ದಿಂದ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದರೂ, ಅದು ಅನಿರೀಕ್ಷಿತವಾದಂಥದ್ದು. ನಿಮಗೂ ಕೂಡ ಯಾವತ್ತೂ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುತ್ತೇವೆಂದು ನಿಮ್ಮ ಕನಸು ಮನಸ್ಸಿನಲ್ಲಿಯೂ ಇರಲಿಲ್ಲ. ಆದರೆ ಕರ್ನಾಟಕವನ್ನು ದಕ್ಷಿಣ ಭಾರತದ ಬಿಜೆಪಿ ಹೆಬ್ಬಾಗಿಲನ್ನಾಗಿ ಮಾಡಿ ಸರ್ಕಾರದಲ್ಲಿ ಪಾಲ್ಗೊಳ್ಳುವಂಥ ಒಂದು ಅವಕಾಶ ಸಿಕ್ಕಿತು, ಇಬ್ಬರಿಗೂ ಅದರಿಂದ ಲಾಭವಾಯಿತು. ಆದರೆ ಕರ್ನಾಟಕದ ಜನತೆಗೆ ನಿಮ್ಮಿಂದ ಏನೂ ಆಗಲಿಲ್ಲವೆನ್ನುವ ಬಗ್ಗೆ ನಾನು ಕಳೆದ ಸಾರಿ ಬಜೆಟ್ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೆ. ಇವತ್ತು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದಾದ ನಂತರ ತಮಗೆ ಆ ಹಿಂದಿನ ಎರಡು ಸಮ್ಮಿಶ್ರ ಸರ್ಕಾರದ ಬಜೆಟ್‌ನ್ನು ಇವರು ಮಂಡಿಸಿರುವಂಥದ್ದು ನಿಮಗೆ ಒಂದು ರೀತಿಯಾದಂಥ uncertainty ಇತ್ತು, ಅಸ್ಥಿರತೆ ಇತ್ತು. ಸರ್ಕಾರ ನಡೆಯುತ್ತದೆಯೋ ಇಲ್ಲವೋ, ಈ ಮೈತ್ರಿ ಎಲ್ಲಿಯವರೆಗೆ ಮುಂದುವರೆಯುತ್ತದೆಯೋ ಎಂದು, ಹಾಗಾಗಿ ನಮಗೆ ಸಿಕ್ಕಿದಷ್ಟು ಲಾಭದಲ್ಲಿ ಇಬ್ಬರೂ ಕೂಡ ಯೋಚನೆಯನ್ನು ಮಾಡುತ್ತಿದ್ದೀರಿ. ಆಗ ಉತ್ತಮವಾದಂಥ ಹಣಕಾಸಿನ ಸಚಿವರು, ಮುಖ್ಯಮಂತ್ರಿಗಳು, ಕೂಡ ಒಳ್ಳೆಯ ಬಜೆಟ್‌ನ್ನು ಕೊಡುವುದರ ಬಗ್ಗೆ ಅವರು ಯೋಚನೆಯನ್ನು ಕೂಡ ಮಾಡಲಿಲ್ಲ, ಅದನ್ನು ಕೊಡುವುದಕ್ಕೆ ಸಾಧ್ಯವೂ ಆಗಲಿಲ್ಲ. ಅಲ್ಲಿ ಇಲ್ಲಿ ಚೂರುಪಾರು, ಅದನ್ನು ಒಂದು ರೀತಿಯ populist ಕೊಡಬೇಕು, ಅದನ್ನು ಕೊಡುವುದಕ್ಕೆ ಅವರು

ಪ್ರಯತ್ನವನ್ನು ಮಾಡಿದರು. ಅದು ಆದ ನಂತರ ನಿಮಗೆ ಬಹುಮತ ಬಂದ ಮೇಲೆ ಕೊಟ್ಟಂಥ ಒಂದು ಬಜೆಟ್ ಏನಿದೆ, ಇವತ್ತು ಕಳೆದ 2008–09ಕ್ಕೆ ಅವರು ಕೊಟ್ಟಿರತಕ್ಕಂಥ ಬಜೆಟ್‌ನಲ್ಲಿ ಇವತ್ತು ಅದರ ಬಗ್ಗೆ ಅವರು ಮಾತನಾಡುತ್ತಾ ಮಾನ್ಯ ವಿದ್ಯುತ್ ಸಚಿವರ ಗಮನವನ್ನು ಸೆಳೆದು ಮಾನ್ಯ ಖರ್ಗೆಯವರು ಬಹಳ ಚೆನ್ನಾಗಿ ಹೇಳಿದರು. ನೀವು ಎಲ್ಲಿ ಸೋತಿದ್ದೀರಿ? ಆರ್ಥಿಕ ಸಮೀಕ್ಷೆಯಲ್ಲಿಯೂ ಕೂಡ ಬಹಳ ಮುಖ್ಯವಾದಂಥದ್ದು ಬಂದಿದೆ. 2008–09ನೇ ಸಾಲಿನಲ್ಲಿ ಆರ್ಥಿಕ ಸಮೀಕ್ಷೆಯಲ್ಲಿ ಬಹಳ ಮುಖ್ಯವಾಗಿ ಎಡವಿರತಕ್ಕಂಥದ್ದು ವಿದ್ಯುತ್ ಕೊರತೆಯನ್ನು ನೀಗಿಸುವಂಥದ್ದರಲ್ಲಿ, ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರಲ್ಲಿ ನೀವು ವಿಫಲರಾದಿರಿ ಎನ್ನುವುದನ್ನು ಕೂಡ ಆರ್ಥಿಕ ಸಮೀಕ್ಷೆಯಲ್ಲಿಯೂ ಕೂಡ ಇದು ಬಂದಿರತಕ್ಕಂಥದ್ದು. ಮಾನ್ಯ ಖರ್ಗೆಜೀಯವರು ಮಾತನಾಡುತ್ತಾ ಅದನ್ನೇ ಹೇಳಿದರು. ನೀವು ಒಂದು ಕಡೆ ವಿದ್ಯುತ್ತಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮಾನ್ಯ ಈಶ್ವರಪ್ಪನವರು ದಿನಾಲೂ ಹೇಳಿಕೆಯನ್ನು ಕೊಡುತ್ತಿದ್ದಾರೆ. ನಿರಂತರವಾಗಿ ವಿದ್ಯುತ್‌ನ್ನು ಸರಬರಾಜು ಮಾಡುತ್ತೇವೆ. ಆದರೆ ನಿರಂತ್ರರ ವಿದ್ಯುತ್ ಅಂಧರೆ ಲೋಡ್‌ಶೆಡ್ಡಿಂಗ್ ಇದೆಯೇ ಹೊರತು ಸಮಸ್ಯೆಯನ್ನು ನೀವು ಬಗೆಹರಿಸಲಿಕ್ಕೆ ಆಗಲಿಲ್ಲ. ಒಂದು ಸಲ ವಿದ್ಯುತ್ ಸಮಸ್ಯೆ ಬಂದರೆ, ತಾವು ಏನು ಅಧಿಕಾರಕ್ಕೆ ಬರುವ ಮೊದಲೆ ಚುನಾವಣೆಯ ಘೋಷಣೆ ಏನು ಮಾಡಿದಿರಿ, ನಿಮ್ಮ ಎಲೆಕ್ಷನ್ manifesto ದಲ್ಲಿ ರೈತರಿಗೆ ಉಚಿತವಾದ ವಿದ್ಯುತ್‌ನ್ನು ಕೊಡುತ್ತೇವೆ ಎನ್ನತಕ್ಕಂಥದ್ದನ್ನು ಹೇಳಿದಿರಿ. ನಿಮ್ಮಿಂದ ಅದನ್ನು ಕೊಡುವುದಕ್ಕಾಗಲಿಲ್ಲ. ಕೋಪ ಬಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಿಮಗೆ ಎಲ್ಲಿಂದ ಉಚಿತವಾದ ವಿದ್ಯುತ್‌ನ್ನು ತರಲಿ ಎಂದು, ನೀವು ತಯಾರು ಮಾಡಿ ಕೊಡುತ್ತೇವೆ ಎನ್ನುವಂಥ ಮಾತನ್ನು ಬಹಳ ಸಿಟ್ಟಿನಿಂದ ಹೇಳುವಂಥ ಒಂದು ಪರಿಸ್ಥಿತಿ ಕೂಡ ಬಂತು. ಇವತ್ತು ಮಾನ್ಯ ಖರ್ಗೆಜೀಯವರು ಮಾತನಾಡುತ್ತಾ ಹೇಳಿದರು. ವಿದ್ಯುತ್ ಸುಧಾರಣೆಯಾಗಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ಅದು ಆಗಲಿಲ್ಲವೆಂದು ಹೇಳಿದರೆ, ಇವತ್ತು 13 ಲಕ್ಷ ಪಂಪ್‌ಸೆಟ್‌ಗಳಿಂದ ಏನಾಗುತ್ತದೆ ಎನ್ನತಕ್ಕಂಥದ್ದರ ಬಗ್ಗೆ ಅವರು ಸೂಕ್ಷ್ಮವಾಗಿ ಹೇಳಿದರು. ಒಂದು ಪಂಪ್‌ಸೆಟ್ಟಿನಿಂದ 4 ಎಕರೆ ಭೂಮಿಗೆ ನೀರಾವರಿಯನ್ನು ಹಾಯಿಸತಕ್ಕಂಥದ್ದು, ಸುಮಾರು 65–70 ಲಕ್ಷ ಎಕರೆ ಜಮೀನು ಇವತ್ತು ಹಾಳಾಗುತ್ತದೆ ಎನ್ನುವುದನ್ನು ಅವರು ಸೂಕ್ಷ್ಮವಾಗಿ ಹೇಳಿದರು. ಕೈಗಾರಿಕೆಗೆ ಎಷ್ಟು ತೊಂದರೆಯಾಗುತ್ತಿದೆ, ಗೃಹ ಬಳಕೆಯ ಬಗ್ಗೆ ಇವೆಲ್ಲವನ್ನು ಕೂಡ ಅವರು ಮಾತನಾಡುತ್ತಾ ಹೇಳಿದರು. ತಮ್ಮ ಇಂದಿನ ಬಜೆಟ್‌ನಲ್ಲಿ ಆಗಿರತಕ್ಕಂಥದ್ದು ಈ ಒಂದು ಸಮೀಕ್ಷೆಯ ಹಿನ್ನೆಲೆಯಲ್ಲಿ ಅವರು ಮಾತನಾಡುತ್ತಾ ಈಗಾಗಲೆ ಅವರು

ಪ್ರಸ್ತಾಪ ಮಾಡಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಯ ಬಗ್ಗೆ ಅವರು ಮಾತನಾಡುತ್ತಾ ಹೇಳಿದ್ದಾರೆ. ಮಠ ಮಾನ್ಯಗಲಿಗೆ ಅನುದಾನ ಕೊಟ್ಟಿರುವ ಬಗ್ಗೆ ಕೂಡ ಬಹಳ ಸೂಕ್ಷ್ಮವಾಗಿ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ತಮಗೆ ಈ ವಿಚಾರವನ್ನು ಕೂಡ ಇವತ್ತು ತಿಳಿಸಿ ಹೇಳಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕಳೆದ ಸಾಲಿನಲ್ಲಿ ನಿಮಗೆ ಇದ್ದಂಥ ಯೋಜನಾ ವೆಚ್ಚವನ್ನು ಏನು ಮಾಡಬೇಕಾಗಿತ್ತು, ಅದರಲ್ಲಿ ನೀವು ಶೇಕಡಾ 50ನ್ನು ಮಾಡುವುದಕ್ಕಾಗಿಲ್ಲವೆಂದು ನೀವೇ ಒಪ್ಪಿಕೊಂಡಿರುವುಂಥದ್ದು. ಶೇಕಡಾ 50 ರಷ್ಟು ಸಾಧನೆಯನ್ನು ನಮಗೆ ಮಾಡುವುದಕ್ಕಾಗಿಲ್ಲ. ಅದಕ್ಕೆ ತಾವು ಅನೇಕ ಕಾರಣಗಳನ್ನು ಈಗಾಗಲೆ ಏಕೆ ಮಾಡುವುದಕ್ಕಾಗಿಲ್ಲವೆಂದು ಕೊಟ್ಟಿರುತ್ತೀರಿ. ಅದನ್ನು ಸರಿಪಡಿಸಿ ಈ ಸಾರಿ ಒಂದು ಸಂಪೂರ್ಣವಾದಂಥ ಬಜೆಟ್‌ನ್ನು ನಮಗೆ ಕೊಡುತ್ತೀರೆಂದು ಆತ್ಮವಿಶ್ವಾಸ ಇತ್ತು; ನಾವು ಉತ್ತಮವಾದ ಬಜೆಟ್‌ನ್ನು ಕೊಟ್ಟಿದ್ದೇವೆಂದು. ಇವತ್ತು ನಮಗೆ ಅರ್ಥವಾಗುತ್ತದೆ. ತಾವು ಯಾವ ಹಿನ್ನೆಲೆಯಲ್ಲಿ ಇವತ್ತು ಕೇಂದ್ರ ಸರ್ಕಾರ ಇರಬಹುದು, ಭಾರತದ ಯಾವುದೇ ರಾಜ್ಯ ಸರ್ಕಾರಗಳು ಇರಬಹುದು, ಇವತ್ತು ಜಾಗತಿಕ ಮಟ್ಟದಲ್ಲಿ ಆಗಿರತಕ್ಕಂಥ ಆರ್ಥಿಕ ಹಿಂಜರಿತ ಏನಿದೆ, ಅದರ ಪ್ರತಿಕೂಲ ಪರಿಣಾಮಗಳು ಏನಾಗಿದೆ, ಇದು ಬಹಳ ಅಪಾಯಕಾರಿಯಾದ ಬೆಳವಣಿಗೆಗಳು ಆಗಿರುವಂಥದ್ದನ್ನು ನಾವು ನೋಡಿರುತ್ತೇವೆ. ಈ ಹಿನ್ನೆಲೆಯಲ್ಲಿ ಉತ್ತಮವಾದಂಥ ಬಜೆಟ್‌ನ್ನು ಕೊಡುವುದು ಬಹಳ ಕಷ್ಟಸಾಧ್ಯವಾಗಿರುವಂಥ ವಿಚಾರದಲ್ಲಿ ತಾವು ಪ್ರಯತ್ನವನ್ನು ಮಾಡಿದ್ದೀರಿ, ಇಲ್ಲವೆನ್ನತಕ್ಕಂಥದ್ದು ಅಲ್ಲ. ಕೇಂದ್ರ ಸರ್ಕಾರ ಕೂಡ ಅದೇ ಧಾಟಿಯಲ್ಲಿ ಯೋಚನೆ ಮಾಡಿರತಕ್ಕಂಥ ಹಿನ್ನೆಲೆಯಲ್ಲಿ ಜೊತೆಗೆ ನಮ್ಮ ಲೋಕಸಭೆಯ ಚುನಾವಣೆ ಹಿನ್ನೆಲೆಯ ಬಗ್ಗೆ ಅದು ನಿಜ, ನಮ್ಮ ಒಂದು ಕಣ್ಣು ಕೂಡ ಆ ಕಡೆ ಇರುತ್ತದೆ. ಯಾವ ರೀತಿಯ ಚುನಾವಣೆಗೆ ಹೋಗಬೇಕು, ಯಾವ ರೀತಿಯ ಚುನಾವಣೆಗೆ ಬೇಕಾದಂಥ ಬಜೆಟ್‌ನ್ನು ಕೊಡಬೇಕು ಎಂದು ಕೇಂದ್ರ ಸರ್ಕಾರ ಕೂಡ ಯೋಚನೆಯನ್ನು ಮಾಡಿದೆ. ಇವತ್ತು ಕೂಡ ತಮ್ಮ ಬಜೆಟ್‌ನ್ನು ಮಂಡಿಸದ ಮೇಲೂ ಕೂಡ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು ಸುಮಾರು 30,000 ಕೋಟಿ ರೂ.ಗಳ ರಿಯಾಯಿತಿಯನ್ನು ಕೊಟ್ಟಿದ್ದಾರೆ. ಅದು ಅವಶ್ಯಕ ಮತ್ತು ಅನಿವಾರ್ಯತೆ ಆಗಿರತಕ್ಕಂಥದ್ದು ಬಹಳ ಎಚ್ಚರಿಕೆಯಿಂದ ಆ ಮಾತನ್ನು ಅವರೂ ಕೂಡ ಹೇಳಿದ್ದಾರೆ. ಇವತ್ತು ಕೊಟ್ಟಿದ್ದಾರೆ, service tax ಇರಲಿ ಅಥವಾ Central excise, duty ಇರಲಿ ಅದರ ಮುಖಾಂತರ ಎಷ್ಟು ರಿಯಾಯಿತಿಯನ್ನು ಕೊಡುವುದಕ್ಕೆ ಸಾಧ್ಯವೋ ಅಷ್ಟು ಕೂಡ ಕೊಟ್ಟಿದ್ದಾರೆ. ಈಗ ತಾವು ಕೂಡ ಪ್ರಯತ್ನವನ್ನು ಮಾಡಿದ್ದೀರಿ. ಈಗ ನಮ್ಮ ರಾಜ್ಯದ ಬಜೆಟ್‌ನ್ನು ತಾವು

ಮಂಡಿಸತಕ್ಕಂಥ ಸಂದರ್ಭದಲ್ಲಿ ಕೂಡ ತಮ್ಮ ಬಗ್ಗೆ ಮಾಧ್ಯಮದಲ್ಲಿಯೂ ಬಂದಿದೆ. ತಾವು ಎಲ್ಲರನ್ನು ಕೂಡ ಸಂತೃಪ್ತಿ ಮಾಡತಕ್ಕಂಥ ಒಂದು ಬಜೆಟ್‌ನ್ನು ಕೊಡುವುದಕ್ಕೆ ತಾವು ಪ್ರಯತ್ನವನ್ನು ಮಾಡಿದ್ದೀರಿ.

4-30 PM

ಹೊಸ ತೆರಿಗೆಗಳು ಇಲ್ಲ, ತುಂಬಾ ರಿಯಾಯಿತಿಗಳಿವೆ. ಅದರಲ್ಲಿ ಎಲ್ಲಾ ಜಾತಿ ಜನಾಂಗದವರೆಲ್ಲರನ್ನೂ ಕೂಡ ಗಮನದಲ್ಲಿಟ್ಟುಕೊಂಡು ಯಾವ ರೀತಿಯಾಗಿ ಮಾಡಬಹುದು ಎಂಬುವುದರ ಬಗ್ಗೆ ತಾವು ಮಾಡುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಅದು ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಸಮಾಜಕಲ್ಯಾಣ, ಸಾರಿಗೆ, ನಗರಾಭಿವೃದ್ಧಿ, ಎಲ್ಲದರ ಬಗ್ಗೆ ತಾವು ಯೋಚನೆಯನ್ನು ಮಾಡಿ ಎಲ್ಲಿಯೂ ಕೂಡ ಯಾರಿಗೂ ಕೂಡ ತೊಂದರೆಯಾಗಬಾರದು ಎನ್ನುವಂತಹ ರೀತಿಯಲ್ಲಿ ತಾವು ಇವತ್ತು ಪ್ರಯತ್ನಗಳನ್ನು ಮಾಡಿದ್ದೀರಿ. ಬಹುಶಃ ನನಗನಿಸುತ್ತದೆ, ಮಾನ್ಯ ಸುರೇಶ್‌ಕುಮಾರ್‌ರವರೆ ನಿಮ್ಮ ambitious programme, ಮುಖ್ಯಮಂತ್ರಿಗಳು ಮತ್ತು ನಿಮ್ಮದೆಲ್ಲಾ ಬಹುಶಃ ಸಂವಿಧಾನದಲ್ಲಿ ಅದಕ್ಕೆ provision ಇದ್ದಿದ್ದರೆ ಬಜೆಟ್ ಪ್ರಾವಿಜನ್‌ನಲ್ಲಿ ಎಲ್ಲರಿಗೂ ಕೂಡ ತಾವು budgetನಲ್ಲಿ allocationನ್ನು ಮಾಡಿಕೊಂಡು ಬಂದುಬಿಡುತ್ತಿದ್ದಿರಿ. ಆದರೆ ಆಪರೇಷನ್ ಕಮಲಕ್ಕೂ ಕೂಡ ಒಂದು ಅವಕಾಶವಿದ್ದರೆ ಅದಕ್ಕೂ ಕೂಡ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಟ್ಟು ಬಿಡುತ್ತಿದ್ದೀರೇನೋ ಗೊತ್ತಿಲ್ಲ. ಬಹುಶಃ ಅದು ಇಲ್ಲದೆ ಇರುವುದರಿಂದ ಆಪರೇಷನ್ ಕಮಲವು ನಿಗೂಢವಾಗಿದೆ. ಅದಕ್ಕೂ ಕೂಡ ತಾವು ಬಿಡುತ್ತಿರಲಿಲ್ಲ. ಆಪರೇಷನ್ ಕಮಲಕ್ಕೂ ಕೂಡ ತಾವು ಬಜೆಟ್‌ನಲ್ಲಿ ಮಾಡುತ್ತಿದ್ದೀರೇನೋ ಗೊತ್ತಿಲ್ಲ. ಅದು hidden agenda ದಲ್ಲಿ ಇದೆ. ಅದರ ಬಗ್ಗೆ ಬಿಡಿ. ಆ ಮಟ್ಟಕ್ಕೆ ತಾವು ಬಜೆಟ್ ಅಲೋಕೇಷನ್ ಯಾವ ರೀತಿಯಾಗಿದೆ ಎಂದು ನಾನು ಹೇಳಿದೆ ಅಷ್ಟೇ. ಎಲ್ಲರನ್ನು ಕೂಡ ತೃಪ್ತಿಪಡಿಸುವಂತಹ ರೀತಿಯಲ್ಲಿ ಬಜೆಟ್‌ನಲ್ಲಿ ಆ ಒಂದು ಯೋಜನೆಯ ಗಾತ್ರದಲ್ಲಿ ಅದನ್ನು ಸೇರಿಸಿರುವಂತಹದ್ದು. ಬಹುಶಃ ಏಕೆ ನಾನು ಆಪರೇಷನ್ ಕಮಲದ ಬಗ್ಗೆ ಮಾತನಾಡಿದೆ ಎಂದು ಹೇಳಿದರೆ ಪ್ರಾರಂಭದಲ್ಲಿಯೇ ತಾವು ಬಜೆಟ್ ಭಾಷಣದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ನಾವು ಕರ್ನಾಟಕ ಜನತೆಯ ಆಶಯದಂತೆ 2008 ಮೇ 31ರಂದು ಅಸ್ತಿತ್ವಕ್ಕೆ ಬಂದ ಭಾರತೀಯ ಜನತಾ ಪಕ್ಷದ ಸರ್ಕಾರ ತನ್ನ ಅಧಿಕಾರ ಅವಧಿಯ 9 ತಿಂಗಳನ್ನು ಪ್ರವೇಶಿಸಿದೆ. ಸ್ಥಿರ ಸರ್ಕಾರವನ್ನು ಬಯಸಿದ ಜನತೆ ಉಪಚುನಾವಣೆಯಲ್ಲಿ ಅಧಿಕ ಸ್ಥಾನವನ್ನು ಗೆಲ್ಲಿಸುವ ಮೂಲಕ ಸರ್ಕಾರಕ್ಕೆ ಸ್ಥಿರತೆಯನ್ನು ತಂದುಕೊಟ್ಟಿದ್ದಾರೆ. ಅದಕ್ಕಾಗಿ ನಾನು ಆಪರೇಷನ್ ಕಮಲ ಎಂದು ಹೇಳಿರುವುದು. ಆಪರೇಷನ್ ಕಮಲದ ಮುಖಾಂತರ

ಇವತ್ತು ಸ್ಥಿರತೆ ಬಂದಿದೆ. ಯಾರು ಇಲ್ಲಿ ಕುಳಿತಿದ್ದೀರೋ ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ರೀತಿಯಾದಂತಹ ದ್ವೇಷವಾಗಲಿ, ಅಥವಾ enmity ಯಾಗಲಿ ಇಲ್ಲ. ಅದರ ಬಗ್ಗೆ ಈಗ ನಾನು ಮಾತನಾಡುವುದಿಲ್ಲ. ಆದರೆ ಯಾರು ಕಳೆದ 9 ತಿಂಗಳ ಹಿಂದೆ ನಡೆದಂತಹ ಚುನಾವಣೆಯಲ್ಲಿ ಅವರುಗಳು ಯಾವ ಪಕ್ಷದಿಂದ ಆರಿಸಿ ಹೋಗಿದ್ದರೋ, ಇಲ್ಲಿ ಕುಳಿತಿರುವಂತಹವರು ಇವತ್ತು ಅಲ್ಲಿ ಕುಳಿತಿದ್ದಾರೆ. ಅವರುಗಳನ್ನು ಆಪರೇಷನ್ ಕಮಲದ ಮುಖಾಂತರ ತೆಗೆದುಕೊಂಡಿದ್ದೀರಿ. ಏಕೆಂದರೆ ನಾನು ನಿಮಗೆ ಹೇಳಿದ್ದೇನೆ; ಈ ಬಗ್ಗೆ ನಿಮಗೆ ಸಂಶಯವಿತ್ತು. ನಿಮಗೆ 110 ಸದಸ್ಯರುಗಳು ಇದ್ದರೂ ಕೂಡ 6 ಜನ ಪಕ್ಷೇತರ ಸದಸ್ಯರುಗಳು ಕೂಡ ಬೆಂಬಲವನ್ನು ಕೊಟ್ಟರೂ ಕೂಡ ನಿಮಗೆ ಸ್ಥಿರವಾದಂತಹ ಸರ್ಕಾರವೆಂದು ನಿಮ್ಮ ಮನಸ್ಸಿಗೆ ಬರಲೇ ಇಲ್ಲ, ಆ. ತರಹ ಭಾವನೆಯೇ ನಿಮಗೇ ಬರಲೇ ಇಲ್ಲ. ಎಲ್ಲೋ ಒಂದು ಕಡೆ ಅಳುಕು, ಏನೋ ಆಗಬಹುದು ಎಂಬ ರೀತಿಯಲ್ಲಿ ತಾವು ಪ್ರಯತ್ನವನ್ನು ಮಾಡಿದ್ದೀರಿ. ಆಪರೇಷನ್ ಕಮಲದ ಮುಖಾಂತರ ಬಹುಶಃ ಇಂಡಿಯಾ ದೇಶದ ಇತಿಹಾಸದಲ್ಲಿ ಎಂದೂ ಕೂಡ ನಡೆಯದೆ ಇರುವಂತಹ ರೀತಿಯಲ್ಲಿ ಆಗಿದೆ. ಇಲ್ಲಿ ಗೆದ್ದಿರುವಂತಹ ಶಾಸಕರಿಗೆ ರಾಜೀನಾಮೆಯನ್ನು ಕೊಡಿಸಿ, ಅವರುಗಳನ್ನು ಸಚಿವರುಗಳನ್ನಾಗಿ ಮಾಡಿ, ಶಾಸಕರಲ್ಲದ ಅವರುಗಳನ್ನು ಸಚಿವರನ್ನಾಗಿ ಪ್ರತಿಜ್ಞೆಯನ್ನು ಸ್ವೀಕಾರ ಮಾಡಿಸಿ, ಮತ್ತೆ ಉಪಚುನಾವಣೆಯನ್ನು ನಡೆಸಿ ಆ ಕ್ಷೇತ್ರಗಳಿಗೆ special package ಗಳನ್ನು ಕೊಟ್ಟು, ಮತ್ತೆ ಆ ಚುನಾವಣೆಗಳು ನಡೆದಿರುವಂತಹ ರೀತಿಯೂ ಇದೆಯಲ್ಲಾ, ಅದನ್ನು ನಡೆಸಿರುವಂತಹ ರೀತಿಯ ಇದೆಯಲ್ಲಾ, ಬಹುಶಃ ನನ್ನಂತಹವನಿಗೂ ಕೂಡ ಆ ಕಡೆ ಇರುವಂತಹವರಿಗೂ ಕೂಡ ಇವತ್ತು ಯಾವ ಮಟ್ಟಕ್ಕೆ ನಮ್ಮಲ್ಲಿ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆ ಯಾವ ರೀತಿಯಾಗಿ ನಾವುಗಳು ತಲೆತಗ್ಗಿಸುವಂತಹ ರೀತಿಯಲ್ಲಿ ಅದು ದಿನೆದಿನೇ deteriorate ಆಗುತ್ತಿದೆ, ಅದರ ಪಾವಿತ್ರತೆಯನ್ನು ಕಳೆದುಕೊಳ್ಳುತ್ತಿದೆ ಎಂಬ ಭಾವನೆ ಬರುತ್ತದೆ. ಆ ಬಗ್ಗೆ ನಾನು parliamentನಲ್ಲಿ 25 ವರ್ಷಗಳ ಕಾಲ ಇದ್ದು ನೋಡಿರುತ್ತೇನೆ. Parliament is a major policy making body. ಬಹುಶಃ it is the highest democratic forum in the World; not only in the country. ಬಹುಶಃ ಅಂತಹ ಸಂಸ್ಥೆಯಲ್ಲಿ ಇದ್ದು ನೋಡಿರುತ್ತೇನೆ. ನಾವು ಸಂವಿಧಾನದಲ್ಲಿ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವಂತಹವರು. ಇವತ್ತು ಯಾವ ರೀತಿಯಾಗಿ ಜನಗಳ mandateನ್ನು ಪಡೆದು ಅಧಿಕಾರವನ್ನು ನಡೆಸಬೇಕು ಎಂದು ಇದೆ. Federal Systemನಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಬಂದಾಗ, ಒಂದು ರಾಜ್ಯಸರ್ಕಾರ

ನಿಜ. ನಾವೆಲ್ಲರೂ ಸೇರಿ anti-defection law ಮಾಡಿರುವಂತಹದ್ದು. ಆದರೂ ಕೂಡ ತಾವು ಅದರ ಬಗ್ಗೆ ಯಾವುದೇ ಕಾನೂನು ಇದ್ದರೂ ಕೂಡ, ಯಾವ ರೀತಿಯಾಗಿ ರಂಗೋಲೆ ಕೆಳಗೆ ತೂರಬೇಕೋ, ಆ ರೀತಿಯಾಗಿ ವ್ಯವಸ್ಥಿತವಾದಂತಹ ರೀತಿಯಲ್ಲಿ ಅವರುಗಳಿಂದ ರಾಜೀನಾಮೆಯನ್ನು ಕೊಡಿಸಿ ಮತ್ತೆ ಅವರುಗಳಿಗೆ special packageನ್ನು ಕೊಟ್ಟು, ಅಷ್ಟೆ ಅಲ್ಲ ಚುನಾವಣೆಗಳು ನಡೆದಂತಹ ರೀತಿ ಇದೆಯಲ್ಲಾ, ಅದು ಸರಿಯಿಲ್ಲ ಅದು ಸರಿಯಿಲ್ಲಾ ಮಾತು ಮಾತಿಗೆ ಮಾನ್ಯ ಯಡಿಯೂರಪ್ಪನವರು ಬಹಳ ತುಂಬಾ ಚೆನ್ನಾಗಿ ಹೇಳುತ್ತಾರೆ. ಭಯೋತ್ಪಾದನೆ ವಿರೋಧಿ ಅಭಿಯಾನದ ಸಂದರ್ಭದಲ್ಲಿ ಭಾರಿ ಹೆಗ್ಗಳಿಕೆಯ ಮಾತನ್ನು ತಾವು ಹೇಳುತ್ತಿದ್ದಿರಿ. ಭಾರತೀಯ ಜನತಾಪಕ್ಷ ದೇಶದ ಪ್ರೇಮದ ಪಕ್ಷ, ರಾಷ್ಟ್ರೀಯತೆಗೆ ನಮ್ಮ ಆದ್ಯತೆ, ಪ್ರಾಮಾಣಿಕತೆ, ಪಾರದರ್ಶಕತೆ, Honesty and Transparency ಅನ್ನತಕ್ಕಂತಹ ಮಾತುಗಳನ್ನು ತಾವು ಹೇಳುತ್ತಿರುತ್ತೀರಿ. ತಾವು ಚುನಾವಣೆಗಳನ್ನು ನಡೆಸಿರುವಂತಹ ರೀತಿ, ನಡೆದುಕೊಂಡಿರುವಂತಹ ರೀತಿ ಯಾವ ರೀತಿ ಇದೆ ಅಂದರೆ ಬಹುಶಃ ಚುನಾವಣೆಯ ಪ್ರಾವಿತ್ರ್ಯತೆ ಹಾಳಾಗಿದೆ. ಆದರೂ ಕೂಡ ನಿಮಗೆ ಬಹುಮತ ಬಂದಿದೆ. ನಾನು ಈ ಮಾತನ್ನು ಏತಕ್ಕಾಗಿ ಹೇಳಿದೆ ಎಂದರೆ, ಆಪರೇಷನ್ ಕಮಲದ ಮುಖಾಂತರ ತಮಗೆ ಬಹುಮತ ಬಂದಿದ್ದರೂ, ಯಾವ ರೀತಿಯಾಗಿ ವಾಮಮಾರ್ಗಗಳನ್ನು ಅನುಸರಿಸಿ ತಾವು ಅಧಿಕಾರಕ್ಕೆ ಬಂದಿದ್ದೀರಿ ಎಂಬುವುದು ಹೆಗ್ಗಳಿಕೆಯಲ್ಲ. ನಿಮಗೆ ಸ್ಥಿರ ಸರ್ಕಾರ ಬೇಕೆಂಬ ರೀತಿಯಲ್ಲಿ ಆ ರೀತಿಯಾಗಿ ನೀವುಗಳು ವರ್ತಿಸಿದ್ದೀರಿ. ಆಪರೇಷನ್ ಕಮಲ ಎಂಬುದರ ಬಗ್ಗೆ ನೋಡಿದಾಗ ಬಹುಶಃ ನನಗೆ ಎದೆ ನಡುಗಿ ಹೋಗುತ್ತೆ, ನೀವು ಯಾವ ಮಟ್ಟಕ್ಕೆ ಹೋಗಿದ್ದೀರಾ ಎಂದು. ಇದು ಈ ಚುನಾವಣೆಗೆ ಅಲ್ಲ. ನಿಮ್ಮ ಬಹುಮತವನ್ನು ತೆಗೆದುಕೊಂಡಿರುವುದಕ್ಕೆ ಅಲ್ಲ. ಗ್ರಾಮಪಂಚಾಯಿತಿಯಿಂದ ಹಿಡಿದು ಎಲ್ಲಾ ಮಟ್ಟದಲ್ಲಿಯೂ ಕೂಡ ಇವತ್ತು ಅಪರೇಷನ್ ಕಮಲ ಎನ್ನುವುದನ್ನು ಬಹುಶಃ ಭಾರತದೇಶದಲ್ಲಿ ಯಾವ ರಾಜ್ಯದಲ್ಲಿಯೂ ಕೂಡ even ಭಾರತೀಯ ಜನತಾಪಕ್ಷವು ಕೂಡ ಬೇರೆ ರಾಜ್ಯದಲ್ಲಿ ಈ ರೀತಿಯಾಗಿ ಮಾಡಿರುವುದನ್ನು ನಾನು ನೋಡಿಲ್ಲ. ಗ್ರಾಮಪಂಚಾಯಿತಿಯಲ್ಲಿ saleable commodity ಮಾಡಿಬಿಟ್ಟಿದ್ದೀರಿ. ತಾವು ಚುನಾಯಿತ ಪ್ರತಿನಿಧಿಗಳಿಗೂ ಕೂಡ, ಆ ಸಂಸ್ಥೆಗಳು ಏನಿದೆ Parliament ನಿಂದ ಕೆಳಗಡೆ ಇರುವವರಿಗೂ ಕೂಡ ಎಲ್ಲಾ democratic institutionಗಳಿಗೂ ಕೂಡ, ಗ್ರಾಮಪಂಚಾಯಿತಿಯವರಿಗೂ ಕೂಡ ಇವತ್ತು ತಾವು ಯಾವ ರೀತಿಯಾಗಿ ನಡೆಸುತ್ತಿದ್ದೀರೆಂದು ದಿನನಿತ್ಯ ನೋಡುತ್ತಿದ್ದೀರಿ. ಗ್ರಾಮಪಂಚಾಯಿತಿಯಲ್ಲಿಯೂ ಕೂಡ ಇವತ್ತು ಆ ಲೆವೆಲ್‌ನಲ್ಲಿಯೂ ಕೂಡ ನಿಮಗೆ ಯಾರ್ಯಾರಿಗೆ ನಿಮಗೆ ಎಷ್ಟೆಷ್ಟು

ಬಹುಮತಗಳು ಬೇಕು ಒಂದು ಗ್ರಾಮ ಪಂಚಾಯಿತಿಯಲ್ಲಿ ಅಲ್ಲಿ ಪಕ್ಷೇತರ ಸದಸ್ಯರುಗಳು ಆಯ್ಕೆಯಾಗಿರುವಂತಹ ಸಂಸ್ಥೆಯಲ್ಲಿಯೂ ಕೂಡ ತಾವು ಬಿಟ್ಟಿರುವುದಿಲ್ಲ. ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು, ಮೊನ್ನೆ ಮಹಾನಗರಪಾಲಿಕೆ ಮೈಸೂರಿನಲ್ಲಿ ನಡೆದಿರುವಂತಹದ್ದರಲ್ಲಿ ನೀವು ಗೆದ್ದಿರುವುದು 18 ಸ್ಥಾನಗಳು. ಆದರೆ ತಾವು ಆಪರೇಷನ್ ಕಮಲದ ಮುಖಾಂತರ ತಾವು ಗೆಲ್ಲುವ ಹತ್ತಿರಕ್ಕೆ ಬಂದಿದ್ದರೂ ಕೂಡ ನಿಮಗೆ 35 ಸ್ಥಾನಗಳು ಗೆಲ್ಲುವುದಕ್ಕಾಗಲಿಲ್ಲ. ಅದು ಯಾವ ರೀತಿಯಾಗಿ ಆಯಿತು? ಇವತ್ತು ಜೆಡಿ(ಎಸ್) ಮತ್ತು ಬೇರೆ ಪಕ್ಷೇತರ ಸದಸ್ಯರುಗಳು ಗೆದ್ದಂತಹವರುಗಳನ್ನು ನೀವು ಇವತ್ತು ಮಾರಾಟದ ವಸ್ತುಗಳನ್ನಾಗಿ ಆಯಾಯ ಸಂಸ್ಥೆಗಳಲ್ಲಿ ಮಾಡಿಬಿಟ್ಟಿದ್ದೀರಿ. ಅರಕಲಗೂಡು ಮುನಿಸಿಪಾಲಿಟಿಯಲ್ಲಿ ನಿಮ್ಮ strength ಏನು? ಅಲ್ಲಿರುವಂತಹದ್ದು ಕಾಂಗ್ರೆಸ್ ಮತ್ತು ಜೆಡಿ(ಎಸ್).ಅಲ್ಲಿ ಒಂದು ಸ್ಥಾನವು ಸಹ ನೀವು ಗೆದ್ದಿರುವುದಿಲ್ಲ. ಆದರೆ ಇವತ್ತು ಅಲ್ಲಿ ಬಹುಮತ ಬರುತ್ತಿದೆ. ಇದು ಹೇಗಾಯಿತು? ಬಹುಶಃ ನಾನು ಒಂದು ಕಡೆ ಮಾತನಾಡುತ್ತಾ ಕೇಳುತ್ತಿದ್ದೆ. ಪುಟ್ಟಪರ್ತಿ ಸಾಯಿಬಾಬಾ ಇದ್ದಾರಲ್ಲಾ, ಅವರೊಬ್ಬರೆ ಕೂಡ ಶೂನ್ಯದಲ್ಲಿ ಏನಾದರೂ ಸಂಪಾದನೆ ಮಾಡುವಂತಹದ್ದು ಇದ್ದದ್ದು. ಶೂನ್ಯದಲ್ಲಿ ಏನು ಕೂಡ ಸೃಷ್ಟಿ ಮಾಡುವುದಕ್ಕಾಗುವುದಿಲ್ಲವೆಂದು ವಿಜ್ಞಾನ ಹೇಳುತ್ತದೆ. ಆದರೆ ಅವರು ಮಾಡಿ ತೋರಿಸುತ್ತಿದ್ದರು. ಶೂನ್ಯದಲ್ಲಿ ನಿಮಗೆ ವಾಚು, ಉಂಗುರ ಮತ್ತು ಚೈನು ಅವರವರ ಅಂತಸ್ತಿಗೆ ತಕ್ಕಂತೆ ಯಾರಾದರೂ ಭಕ್ತಾದಿಗಳು ಹೋದರೆ ಅವರಿಗೆ ಕೊಡುತ್ತಿದ್ದರು. ಅವರು ಶೂನ್ಯದಲ್ಲಿ ಸಂಪಾದನೆಯನ್ನು ಮಾಡಬಹುದು ಎಂದು ಹೇಳುತ್ತಿದ್ದರು. ಆದರೆ ರಾಜಕೀಯದಲ್ಲೂ ಕೂಡ ನೀವು ಒಂದು ಸ್ಥಾನವೂ ಇಲ್ಲದೆ ಶೂನ್ಯದಲ್ಲಿ ಇದ್ದವರು ಅರಕಲಗೂಡು ಮುನಿಸಿಪಾಲಿಟಿಯಲ್ಲಿ ಅಧಿಕಾರಕ್ಕೆ ಬರುತ್ತೀರೆಂದರೆ, ನೀವು ಅಲ್ಲಿ ಬಹುಮತವನ್ನು ತೆಗೆದುಕೊಂಡು ಬರುತ್ತೀರೆಂದರೆ ನೀವು ಯಾವ ರೀತಿಯಾಗಿ ಪುಟ್ಟಪರ್ತಿ ಸಾಯಿಬಾಬಾರವರನ್ನು ಕೂಡ ಮೀರಿಸುವಂತಹ ರೀತಿಯಲ್ಲಿ ರಾಜಕೀಯದ ದೊಂಬರಾಟಗಳು ಇವತ್ತು ಪ್ರಾರಂಭವಾಗಿದೆ ಎಂದು ಹೇಳುತ್ತಿದ್ದೇನೆ. ನಿಮ್ಮನ್ನು ದೂಷಣೆ ಮಾಡಬೇಕೆಂದು ಅಲ್ಲ. ಈ ರೀತಿಯಾಗಿ ಮಾಡುತ್ತಿರುವುದು ಚೆನ್ನಾಗಿಲ್ಲವೆಂದು ಹೇಳುತ್ತಿದ್ದೇನೆ. ಈ ವ್ಯವಸ್ಥೆಯೂ ಸರಿಯಾಗಿ ಕಾಣುತ್ತಿಲ್ಲವೆಂದು ಹೇಳುತ್ತಿದ್ದೇನೆ. ಎಲ್ಲಾ ಕಡೆಯಲ್ಲಿಯೂ ಕೂಡ ಇದು ಆಗಿದೆ.

ಶ್ರೀ ದಿನೇಶ್ ಗುಂಡೂರಾವ್: ಶ್ರೀರಾಮ ಸೇನೆ ಅದು.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ಇವತ್ತು ನಾವೆಲ್ಲರೂ ಕೂಡ ತಲೆತಗ್ಗಿಸುವಂತಹ ರೀತಿಯಲ್ಲಿ ಆಗಿದೆ. ಅದು ಇಲ್ಲಿಯವರೆಗೂ ಕೂಡ percolate ಆಗಿಬಿಟ್ಟಿದೆ. ಏಕೆ ಪಾರ್ಲಿಮೆಂಟ್‌ನಲ್ಲಿ ಅವರು Civil Nuclear Deal ಅಲ್ಲಿ ನಡೆಯುವಂತಹ

ಸಂದರ್ಭದಲ್ಲಿ ಪಾರ್ಲಿಮೆಂಟ್‌ನಲ್ಲಿ ಹಣವನ್ನು ಸುರಿಯುತ್ತಾರೆ, ಪಾರ್ಲಿಮೆಂಟ್ ಮೆಂಬರ್‌ಗಳೇ ತೆಗೆದುಕೊಂಡಿದ್ದಾರೆ. ಇದೇ ಕರ್ನಾಟಕದ ಅಸೆಂಬ್ಲಿಯಲ್ಲಿ Assembly to RajyaSabha ಏನು electionಗಳು ಕೂಡ ನಡೆಯುತ್ತಿದೆ ವಿಧಾನಸಭೆಯಲ್ಲಿ, ಕೈಗಾರಿಕೋದ್ಯಮಿಗಳಿಗೆ ನಮ್ಮ ಶಾಸಕರುಗಳು ನಮಗೆ ಬರೆದುಕೊಡಿ ಎಂದು ದುಡ್ಡು ತೆಗೆದುಕೊಂಡು ವೋಟು ಹಾಕುವಂತಹ ಪರಿಸ್ಥಿತಿ ನಮ್ಮಲ್ಲಿ ಬಂದಿದೆ ಎಂದು ನಾನು ಹೇಳುತ್ತಿದ್ದೇನೆ. ನಮ್ಮಲ್ಲಿಯೂ ಕೂಡ ನಾನು ನಿಮ್ಮೊಬ್ಬರನ್ನೆ ಅಲ್ಲ, ನೀವು ಇನ್ನು ಒಂದು ಮಟ್ಟ ಕೆಳಗಡೆಗೆ ಹೋಗಿ ಇಂತಹ ರಾಜಕೀಯದಲ್ಲಿ ಕಲುಷಿತವಾದಂತಹ ವಾತಾವರಣ ಇವತ್ತು ಸೃಷ್ಟಿಯಾಗಿದೆ ಎನ್ನುವಂತಹ ರೀತಿಯಲ್ಲಿ ಬಹುಶಃ ನಾನು ಈ ಬಗ್ಗೆ ಹೇಳುತ್ತಿದ್ದೆ. ಇವತ್ತು ನಿಮಗೆ ಸ್ಥಿರ ಸರ್ಕಾರ ಬಂದಿದೆ. ಇವತ್ತು ಎಲ್ಲಾ ಮಟ್ಟದಲ್ಲಿಯೂ ಕೂಡ ಎಲ್ಲಾ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿಯೂ ಕೂಡ ಇವತ್ತು ಈ ರೀತಿಯಾದಂತಹ ಅಧಿಕಾರದ ದಾಹದಿಂದ ಮಾಡುವಂತಹದ್ದು ಬಹುಶಃ ಪ್ರಜಾಪ್ರಭುತ್ವಕ್ಕೆ ಮಾಡಿರುವಂತಹ ದೊಡ್ಡ ಘೋರ ಅಪರಾಧ ಎಂದು ಹೇಳುತ್ತೇನೆ. ಭಯೋತ್ಪಾದನೆಯ ಬಗ್ಗೆ ನಾನು ಅನಂತರ ಮಾತನಾಡುತ್ತೇನೆ. ಭಯೋತ್ಪಾದನೆಯ ವಿರೋಧಿ ಅಭಿಯಾನದ ಸಂದರ್ಭದಲ್ಲಿ ತಾವು ಮಾಡಿದಂತಹ ರೀತಿಯಲ್ಲಿ ನಾನು ಆ ಮಾತನ್ನು ಹೇಳುತ್ತೇನೆ. ಏಕೆಂದರೆ ತಾವು ಮಹಾತ್ಮ ಗಾಂಧೀಜಿಯವರ ಬಗ್ಗೆ ಪ್ರಸ್ತಾಪ ಮಾಡುತ್ತೀರಿ. ಕೊನೆಯ ಪುಟದಲ್ಲಿ ತಾವು ಗಾಂಧೀಜಿಯವರ "ವೈರತ್ವ ಬೇಡ" ಎಂಬ ಮಾತುಗಳನ್ನು ತಾವು ಹೇಳಿದ್ದೀರಿ. ನಾವು ಟೀಕೆ ಟಿಪ್ಪಣಿಗಳನ್ನು ಸಮಚಿತ್ತದಿಂದ ಸ್ವೀಕಾರ ಮಾಡಬೇಕು. ಬಜೆಟ್‌ನಲ್ಲಿ 3ನೇ ಅಂಶವನ್ನು ಸಹ ತಾವು ಚೆನ್ನಾಗಿ ಹೇಳಿದ್ದೀರಿ. "ನನ್ನ ಕನಸಿನ ರಾಮರಾಜ್ಯದಲ್ಲಿ ಭಿಕ್ಷುಕನಿಗೂ ಭೂಪತಿಗೂ ಸರಿಸಮಾನವಾದಂತಹ ಹಕ್ಕುಗಳು ದೊರೆಯುವುವು." ಮಾನ್ಯ ಯಡಿಯೂರಪ್ಪನವರೆ ತಾವು ಮುಖ್ಯಮಂತ್ರಿಗಳಾಗಿ ಇಲ್ಲಿ ತಾವು ಸ್ವಲ್ಪ ತಿದ್ದುಪಡಿಯನ್ನು ಮಾಡಿಕೊಳ್ಳಬೇಕಾಗಿತ್ತು. ನಿಮ್ಮ ಕಲ್ಪನೆ ರಾಮರಾಜ್ಯವಲ್ಲಾ, ಬಹಳ ಸ್ಪಷ್ಟವಾಗಿ ಹೇಳಿ. ನಿಮ್ಮ ಕಲ್ಪನೆ ರಾಮಮಂದಿರದ್ದು, ರಾಮರಾಜ್ಯದ ಕಲ್ಪನೆ Broad-based secular concept ಇರತಕ್ಕಂಹದ್ದು. ಜಾತ್ಯತೀತ ತತ್ವದ ಉದಾತ್ತವಾದಂತಹ ನೀತಿಯಲ್ಲಿ ಗಾಂಧೀಜಿಯವರ ರಾಮರಾಜ್ಯದ ಕಲ್ಪನೆ ಇರುವಂತಹದ್ದು, ಆದರೆ ನಿಮ್ಮದು ಸಂಕುಚಿತ ಭಾವನೆಗಳ ಒಂದು ಬಹುಮುಖಿ ಸಂಸ್ಕೃತಿಯ ಸಮಾಜದಲ್ಲಿ ಮತ್ತೊಂದನ್ನು ಅಲ್ಲಿ ಒಡೆದು ಅಲ್ಲಿ ಇರುವಂತಹದ್ದನ್ನು ಅವರಿಗೆ ನೋವಾಗುವಂತಹ ರೀತಿಯಲ್ಲಿ ವರ್ತಿಸಿ ಅಲ್ಲಿ ನಾವು ರಾಮಮಂದಿರವನ್ನು ಕಟ್ಟಬೇಕು ಎಂದು ಇವತ್ತು ಕೂಡ ತಮ್ಮದು ಅದೇ ಘೋಷಣೆಯಾಗಿದೆ. ಇವತ್ತು ಅದೇ ಮಾತು ಮಾನ್ಯ ಅಡ್ವಾಣಿಯವರಾಗಲಿ, ಮಾನ್ಯ ರಾಜನಾಥ್‌ಸಿಂಗ್‌ರವರಾಗಲಿ

ಈಗ ಬರುವಂತಹ ಲೋಕಸಭಾ ಚುನಾವಣೆಯಲ್ಲಿ ನಾವು ಅದನ್ನು ಮರೆಯುವಂತಹ ಪ್ರಶ್ನೆಯೇ ಇಲ್ಲ. ರಾಮಮಂದಿರದ ಕಲ್ಪನೆ ನಮ್ಮ ಮುಂದೆ ಇರುವುದು, ಅದನ್ನು ಕೈಬಿಡುವಂತಹ ಪ್ರಶ್ನೆಯೇ ಇಲ್ಲ. ಎನ್‌ಡಿಎನಲ್ಲಿದ್ದು common agenda. ಇದ್ದಾಗಲೂ ಕೂಡ ನಾವು ಇದನ್ನೇ ಪ್ರಶ್ನೆ ಮಾಡಿದೆವು. ಎನ್‌ಡಿಎನಲ್ಲಿ commonagendaದಲ್ಲಿಯೂ, ನಾವು Article 370ಯ ಬಗ್ಗೆ ಮಾತನಾಡಬಾರದು, Common Civil Code ಬಗ್ಗೆ ಪ್ರಸ್ತಾಪ ಮಾಡಬಾರದು, ರಾಮಮಂದಿರದ ಬಗ್ಗೆ ಮಾತನಾಡಬಾರದು ಎಂದು ಇದ್ದರೂ ಕೂಡ ತಾವು ಮಾತನಾಡದೆ ಹೋದರೂ ಕೂಡ ಇತರ ಬಿಜೆಪಿ ಮುಖಂಡರುಗಳು ಹೇಳುತ್ತಿದ್ದರು. ರಾಮಮಂದಿರದ ಪ್ರಸ್ತಾಪವನ್ನೇ ಮಾಡುತ್ತಿದ್ದರು. ನಾವು ಕೇಳಿದರೆ ಅದು ಎನ್‌ಡಿಎ ಅಜೆಂಡಾ, ಇದು ಬಿಜೆಪಿಯ ಅಜೆಂಡಾ ಎಂದು ಹೇಳುತ್ತಿದ್ದರು. ಹಾಗಾಗಿ ಎನ್‌ಡಿಎ ಸರ್ಕಾರದಲ್ಲಿರುವಂತಹ ಮಿತ್ರಪಕ್ಷಗಳೂ ಕೂಡ ಈ ಧೋರಣೆಯಿಂದ ದೂರ ಸರಿದಿರುವಂತಹದ್ದು. ನಾನು ಏತಕ್ಕಾಗಿ ಹೇಳಿದೆ ಎಂದರೆ, ಇಲ್ಲಿ ತಾವು ಗಾಂಧೀಜಿಯವರ ಬಗ್ಗೆ ಮಾತನಾಡುವಾಗ ತಾವು ಬಹಳ ಎಚ್ಚರಿಕೆಯಿಂದಿರಬೇಕು. ಏಕೆಂದರೆ ಬಿಜೆಪಿ ಆಗುವವರೆಗೂ ಕೂಡ ಅದು erstwhile Bharathiya Janasanghaದಲ್ಲಿ ಎಂದೂ ಕೂಡ ಗಾಂಧೀಜಿಯವರ ಪ್ರಸ್ತಾವನೆಯಿಲ್ಲ. ಇದು 1976ರಲ್ಲಿ ತುರ್ತುಪರಿಸ್ಥಿತಿಯೂ ಬಂದ ನಂತರ ಜನತಾಪಕ್ಷವು ರಚನೆಯಾದಾಗ ಅಲ್ಲಿಗೆ ಸೇರಿದಂತಹ ಬಿಜೆ ಸಂಘದಲ್ಲಿ ಸಮಾಜವಾದ ಸಿದ್ಧಾಂತ ಬರುತ್ತದೆ. ಅನಂತರ 1979ರಲ್ಲಿ ಅದು ಜನತಾಪಕ್ಷವು ಛಿದ್ರವಾದ ಮೇಲೆ ಮತ್ತೆ ಜನಸಂಘವನ್ನು ಬಿಜೆಪಿ ರೂಪದಲ್ಲಿ ನಾವು ಒಂದು ರಾಜಕೀಯ ಪಕ್ಷವಾಗಿ ಸಂಘಟನೆಯನ್ನು ಮಾಡಬೇಕೆಂದು ಬಂದಾಗ ಅಲ್ಲಿಯೂ ಕೂಡ ಚರ್ಚೆಯಾಯಿತು. ಭಾರತೀಯ ಜನತಾ ಪಕ್ಷ 1979ರಲ್ಲಿ ಆದಾಗ ಅಲ್ಲಿ ನಿಮ್ಮದು ಹಳೇ ರಾಗವೇ ಇತ್ತು, ಹಿಂದಿ, ಹಿಂದೂ ಹಿಂದೂಸ್ತಾನ್ ಎನ್ನುವುದೇ ನಮ್ಮ ಗುರಿಯಾಗಬೇಕೆಂಬುದೇ ಇತ್ತು. ಆದರೆ ಮಾಡರೇಟ್ ಬಿಜೆಪಿಯಲ್ಲಿದ್ದಂಥವರು ವಾಜಪೇಯಿ ಮುಖಂಡತ್ವದಲ್ಲಿ ವಿರೋಧ ಮಾಡಿದರು, ಇಲ್ಲ ಸೋಷಿಯಲಿಸಂ ಇಲ್ಲದೇಹೋದರೆ ಆಗುವುದಿಲ್ಲ, ಇವತ್ತು ಕೇವಲ ಈ ಧಾರ್ಮಿಕ ವಿಚಾರಗಳು, ಭಾವನಾತ್ಮಕವಾದ ವಿಚಾರಗಳನ್ನೇ exploit ಮಾಡಿ ಎಲ್ಲಿಯವರೆಗೆ ನಾವು ಹೋಗಲಿಕ್ಕೆ ಸಾಧ್ಯವಾಗುತ್ತದೆ? ಜನ ಇದಕ್ಕೆ ಕಿವಿಗೊಡುವುದಿಲ್ಲ. ಜನಕ್ಕೆ ಬೇಕಾಗುವುದು ಸಾಮಾಜಿಕ ಹಾಗೂ ಆರ್ಥಿಕ ಚಿಂತನೆಗಳ ನೆಲೆಗಟ್ಟಿನ ಮೇಲೆ ಅವರ ಬದುಕು ಹಸನಾಗುವಂಥ ರೀತಿಯಲ್ಲಿ ಮಾಡಬೇಕೆಂದಾಗ ಬಹಳ ಕಷ್ಟಪಟ್ಟು ಆವತ್ತು Gandhian Socialism ಎನ್ನುವುದನ್ನು adopt ಮಾಡಿಕೊಂಡರು. ಇವತ್ತು ಅದನ್ನು ಪ್ರಸ್ತಾಪ ಮಾಡುತ್ತಿರುವುದು ಬಿಜೆಪಿ ಸರ್ಕಾರ

ಅಧಿಕಾರಕ್ಕೆ ಬಂದ ಮೇಲೆ, ತಾವೇನು ಅಲ್ಲಿ Gandhian Socialism ಎನ್ನುವುದನ್ನು 1979ರಲ್ಲಿ ಬಿಜೆಪಿಯವರು ಅಳವಡಿಸಿಕೊಂಡರೋ ಬಹುಶಃ ಅದರ ಮೇಲೆ ಇಲ್ಲಿ ಇವತ್ತು ಗಾಂಧೀಜಿ ತತ್ವ ಇದೆ. ನಾನು ಅದನ್ನು ಏಕೆ ಹೇಳುತ್ತಿದ್ದೇನೆಂದರೆ ಗಾಂಧೀಜಿಯವರ ಹೆಸರನ್ನು ಪ್ರಸ್ತಾಪ ಮಾಡುವಾಗ ನಾವು ಬಹಳ ಎಚ್ಚರಿಕೆಯಿಂದ ಇರಬೇಕು ಏಕೆಂದರೆ ಗಾಂಧೀಜಿ ಸಾಧಾರಣವಾದಂಥ ವ್ಯಕ್ತಿಯಲ್ಲ. ಇವತ್ತು 21ನೇ ಶತಮಾನಕ್ಕೆ ಬಂದಿದ್ದೇವೆ. ಜಗತ್ತಿನಲ್ಲಿರುವಂಥ ಎಲ್ಲಾ ಬುದ್ಧಿಜೀವಿಗಳು ಒಂದು ಕಡೆ ಚರ್ಚೆ ಮಾಡಿದರು. 20ನೇ ಶತಮಾನದಲ್ಲಿ ಜಗತ್ತಿಗೆ ಮನುಷ್ಯನ ಕೊಡುಗೆ ಏನು ಎಂದಾಗ ಎರಡು ಪ್ರಮುಖವಾದ ವಿಷಯಗಳು ಪ್ರಸ್ತಾಪವಾಯಿತು. ಒಂದು ಇವತ್ತಿನ ನ್ಯೂಕ್ಲಿಯರ್ ಬಾಂಬ್ ಏನಿದೆ ಅದು ಆವತ್ತಿನ ಆಟಂಬಾಂಬ್ ಎಂದು. ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ಆಟಂಬಾಂಬ್‌ಅನ್ನು ಸೃಷ್ಟಿ ಮಾಡಿದ್ದಾನೆ. ಅದು ಕ್ಷಣ ಮಾತ್ರದಲ್ಲಿ ಜಗತ್ತನ್ನೇ ಸುಡುವಂಥ ಶಕ್ತಿ ಅದಕ್ಕಿದೆ ಎಂದು. ಮತ್ತೊಂದು ಏನೆಂದರೆ ಗಾಂಧೀಜಿಯವರ non-violence ಅಥವಾ ಅಹಿಂಸೆ ಎಂಬುದು. ಆಟಂಬಾಂಬ್ ಗಿಂತಲೂ ಬಹಳ ಶಕ್ತಿಯುತವಾದ ಕೊಡುಗೆಯನ್ನು ಗಾಂಧೀಜಿಯವರು ಕೊಟ್ಟಿದ್ದಾರೆ. ಜಗತ್ತಿನ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವಂಥ ಶಕ್ತಿ ಅದಕ್ಕಿದೆ ಎಂದು ಹೇಳಿದರು. ಗಾಂಧೀಜಿಯವರು ಇಡೀ ಜಗತ್ತಿನಲ್ಲೇ ಅಸಾಧಾರಣವಾದ ವ್ಯಕ್ತಿ. ಅದು ಒಬಾಮ ಇರಬಹುದು. ಒಬಾಮರವರಿಗೆ ಮಾರ್ಗದರ್ಶಿಗಳಾಗಿರುವ ಮಾರ್ಟಿನ್‌ಲೂಥರ್ ಕಿಂಗ್ ಜೂನಿಯರ್ ಅವರೂ ಕೂಡ ಗಾಂಧೀವಾದಿಯಾಗಿದ್ದರು, ಒಬಾಮ ಕುಡ ಸ್ಮರಿಸಿಕೊಂಡಿದ್ದಾರೆ. ಗಾಂಧೀಯವರು ಸಾಧಾರಣವಾದ ವ್ಯಕ್ತಿಯಲ್ಲ. ಆದ್ದರಿಂದ ಗಾಂಧಿ ಹೆಸರಿನಲ್ಲಿ ತಾವೇನು ಇವತ್ತು ಪ್ರಸ್ತಾಪ ಮಾಡಿದ್ದೀರಿ, ಬಹುಶಃ ಅದರ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯಬೇಕು ಎಂದು ಹೇಳುತ್ತಿರುವುದು. ಗಾಂಧೀಜಿಯವರಿಗೆ ಇದ್ದಂಥದ್ದು ರಾಮ ರಾಜ್ಯದ ಕಲ್ಪನೆ, ಇವತ್ತು ಭಾರತ ದೇಶದಲ್ಲಿರತಕ್ಕಂಥ ಎಲ್ಲಾ ಧರ್ಮೀಯರು ಕೂಡ ಅವರವರ ಧರ್ಮವನ್ನು ಗೌರವಿಸುವಂಥದ್ದು ಅದನ್ನು ಅನುಸರಿಸತಕ್ಕಂಥ ಒಂದು ಜಾತ್ಯತೀತ ಕಲ್ಪನೆಯಲ್ಲಿ ಒಂದು ಧರ್ಮದವರು ಮತ್ತೊಂದು ಧರ್ಮದವರ ಧಾರ್ಮಿಕ ಭಾವನೆಗಳನ್ನು ಗೌರವಿಸಬೇಕು ಎನ್ನುವ ರೀತಿಯಲ್ಲಿ ಅವರ ಕಲ್ಪನೆ ಇದ್ದಂಥದ್ದು. ಅದು ರಾಮರಾಜ್ಯದ ಕಲ್ಪನೆ, ಸುಖೀರಾಜ್ಯದ ಕಲ್ಪನೆಯಾಗಿರುವಂಥದ್ದು ವಿನಃ ರಾಮಮಂದಿರದ ಕಲ್ಪನೆಯಾಗಿರಲಿಲ್ಲವೆಂದು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತೇನು ಗಾಂಧೀಜಿಯವರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಆ ಹಿನ್ನೆಲೆಯಲ್ಲಿ ನಾನು ತಮಗೆ ಹೇಳುವಂಥದ್ದು, ಗಾಂಧೀಜಿಯವರ ತತ್ವಗಳನ್ನು ಅನುಸರಿಸುವುದು ಬಹಳ ಕಷ್ಟವಿದೆ. Preach what you practice ಎನ್ನುತ್ತಾರೆ.

ಹಾಗೆ ಮಾಡಲಿಕ್ಕಾಗುತ್ತದೇನು? ನುಡಿದಂತೆ ನಡೆಯಬೇಕು ಎನ್ನುವ ರೀತಿಯಲ್ಲಿ ಅಥವಾ Simple living, high thinking ರಾಜಕಾರಣಿಗಳಿಗೆ ಸಾಧ್ಯವಾಗುತ್ತದೆಯೇ? ಬಹುಶಃ ಬಹಳ ಕಷ್ಟವಾಗುತ್ತದೆ. ಇದಕ್ಕೆಲ್ಲಾ ತಪಸ್ಸು ಮಾಡಬೇಕಾಗುತ್ತದೆ. ಬಹಳ ಕಠಿಣವಾದಂಥ ರೀತಿಯಲ್ಲಿ ಆಲೋಚನೆಗಳನ್ನು ಮಾಡಿ ಒಂದು ದೃಢ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. At least ಇವತ್ತು ಈ ಬಜೆಟ್‌ನಲ್ಲಿ ಎಲ್ಲರಿಗೂ ಅವಕಾಶ ಮಾಡಿದ್ದೀರಲ್ಲ? ಗಾಂಧೀಜಿಯವರ ಬಗ್ಗೆ ನೀವು ಪ್ರಸ್ತಾಪ ಮಾಡಿದ್ದೀರಲ್ಲ? ನಿಜವಾಗಿಯೂ ಕೂಡ ಗಾಂಧೀಜಿಯವರ ಚಿಂತನೆಗಳು ಹೇಗಿತ್ತು? ಗಾಂಧೀಜಿಯವರ ಚಿಂತನೆ ಇದ್ದುದು ಅಂತ್ಯೋದಯ ಹಾಗೂ ಸರ್ವೋದಯ ಬಗ್ಗೆ. ಬಹುಶಃ ನಾನು ಇಂಡಿಯಾ ದೇಶದಲ್ಲೇ ನಾನು ನೋಡಿದ ಮಟ್ಟಿಗೆ ಬೈರೋನ್‌ಸಿಂಗ್ ಶೆಖಾವತ್ ಅವರು ಮುಖ್ಯಮಂತ್ರಿಯಾಗಿದ್ದಾಗ ಇದನ್ನು adopt ಮಾಡಿದ್ದರು. ಅಂತ್ಯೋದಯವೆಂದರೆ ಏನು ಯಡಿಯೂರಪ್ಪನವರೇ? ಇವತ್ತು ನೀವು ಗಾಂಧೀಜಿಯವರ ಬಗ್ಗೆ ಮಾತನಾಡಿದ್ದೀರಿ. ಗಾಂಧೀಜಿಯವರ ಕನಸು, ಬೆಳಿಗ್ಗೆ ಎದ್ದು ಬಂಗಿ ಕಾಲೋನಿಯಲ್ಲಿ ಸಮಾಜದ ಕೆಳಸ್ತರದವರ ಬಳಿಗೆ ಹೋಗಿ ಚಹಾ ಕುಡಿದು ಪ್ರಾರಂಭ ಮಾಡುತ್ತಿದ್ದರು. ಅನಂತರ ಸರ್ವೋದಯ ಇದೆ. ಅದು ಎಲ್ಲರ ಬಗ್ಗೆ ಚಿಂತನೆ ಮಾಡುವಂಥದ್ದು. ಆದರೆ ಅವರ ಮೊದಲನೆ ಯೋಚನೆ ಇದ್ದದ್ದು ಅಂತ್ಯೋದಯದ ಬಗ್ಗೆ. ನಾನು ಏಕೆ ಅಂತ್ಯೋದಯದ ಬಗ್ಗೆ ಮಾತನಾಡುತ್ತೇನೆಂದರೆ ತಾವು ಗಾಂಧೀಜಿಯವರ ಬಗ್ಗೆ ಪ್ರಸ್ತಾಪ ಮಾಡಿದಾಗ ಗಾಂಧೀಜಿಯವರ ಅಂತ್ಯೋದಯದ ಕಾರ್ಯಕ್ರಮದ ಬಗ್ಗೆ ಚಿಂತನೆಯನ್ನು ತಾವು ಮಾಡಬೇಕಾಗಿತ್ತು. ನಾವು Slumdog Millionaire ನೋಡಿದಾಗ ವಿ.ಎಸ್.ಆಚಾರ್ಯರವರು ಹೇಳಿದ ಮಾತು ನನ್ನ ಮನಸ್ಸಿಗೆ ಭಾರಿ ಖೇದ ಎನ್ನಿಸಿತು. ಮೇಲ್ಮನೆ ವಿಧಾನಪರಿಷತ್‌ನಲ್ಲಿ ಮಾತನಾಡುವಂಥ ಸಂದರ್ಭದಲ್ಲಿ Slumdog Millionaire ಇರಬಹುದು ಅಥವಾ Smile Pinky ಎನ್ನುವಂಥ ಸಾಕ್ಷ್ಯಚಿತ್ರವಿರಬಹುದು. ಇದು ಜಗತ್ತಿನ ಎಲ್ಲಾ ಕಡೆಗೂ ಗಮನವನ್ನು ಸೆಳೆದಿರುವಂಥದ್ದು. ಗಾಂಧೀಜಿಯವರನ್ನು ನಾವು ಅಲ್ಲಿ ನೋಡಬೇಕು. ಆ Slumdog Millionaire ಚಿತ್ರವನ್ನು ನಿರ್ದೇಶನ ಮಾಡಿದ ನಿರ್ದೇಶಕ ತನ್ನ ಎದೆಯನ್ನು ಬಡಿದುಕೊಂಡುಬಿಟ್ಟ, ಏನ್ರೀ ಭಾರತ ದೇಶದ ಸ್ಲಂಗಳಲ್ಲಿ ಈ ಸ್ಥಿತಿಯಿದೆಯೇ? ಇಂಥ Precarious conditionsನಲ್ಲಿ, ಇಂಥ ಶೋಚನೀಯವಾದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆಯೇ? ಸ್ವಾತಂತ್ರ್ಯ ಬಂದು ಇವತ್ತೇನು 60-61 ವರ್ಷಗಳಾಗುತ್ತಿದೆ, ಯಾವರೀತಿಯಾದಂಥ ನಿಕೃಷ್ಟವಾದಂಥ ಬದುಕು। ಈ ದೇಶದ ಜನ ಸಮೂಹಕ್ಕೆ ಸೇರಿದವರಲ್ಲವೇ ಅವರು? ಬಹುಶಃ ಅವರ ಸ್ಥಿತಿಗಳನ್ನು ನೋಡಿ

ಅಲ್ಲಿ ಶೂಟಿಂಗ್ ಮಾಡುವಾಗ 'ಏನಪ್ಪಾ, ಈ ಮಟ್ಟದಲ್ಲಿಯೆ!' ಎಂದು ಆತ ಗಾಬರಿಯಾದ. ನಮ್ಮನ್ನೆಲ್ಲಾ ಕಣ್ಣು ತೆರೆಸುವಂಥ ರೀತಿಯಲ್ಲಿ. ಇವತ್ತು ಆ ಸ್ಲಮ್‌ಗಳ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ಗೃಹಸಚಿವರಾದ ವಿ.ಎಸ್.ಆಚಾರ್ಯರವರು ಅದನ್ನು ಮಾಡಬಾರದಿತ್ತು ಎಂದು ಹೇಳುತ್ತಾರೆ. ಬಹಳ ಕೆಟ್ಟದಾಗಿ ಇರುವುದನ್ನು ಅವರು ತೋರಿಸಿದ್ದಾರೆ. ಏಕೆ ನಿಮ್ಮ ಮನಸ್ಸಿನಲ್ಲಿ ಆ ಭಾವನೆ ಬಂತು? ನೂರಾರು ವರ್ಷಗಳಿಂದ ಸುಖದ ಸುಪ್ಪತ್ತಿಗೆಯಲ್ಲಿರುವಂಥ ಜನರಿಗೆ ಇದು ಅರ್ಥವಾಗುವುದಿಲ್ಲ. ಕೊಳೆಗೇರಿಯಲ್ಲಿರುವ ಜನರ ಬದುಕು ಹೇಗಿದೆ? ಅವರ ಹಿನ್ನೆಲೆ ಹೇಗಿದೆ? ಅವರು ಯಾರು? ಬಹುಶಃ ಇದೆಲ್ಲಾ ಅವರಿಗೆ ಅರ್ಥವಾಗುವುದು ಏನು? ಅದರ ಬಗ್ಗೆ ತೋರಿಸಿರುವುದು ನಿಜ. ಜಗತ್ತಿನ ಕಣ್ಣು ತೆರೆಸಿದ್ದಾರೆ. ಸ್ವತಂತ್ರ ಭಾರತದಲ್ಲಿ ಇನ್ನೂ ಇವತ್ತು ಕೊಳೆಗೇರಿಗಳ ಸ್ಥಿತಿಗತಿಗಳು ಹೇಗಿವೆ ಎಂದು ಜಗತ್ತು ನೋಡಬೇಕಾಗಿದೆ. ಇವರ ಬಗ್ಗೆ ಇವತ್ತು ಗಾಂಧೀಜಿಯವರು ಯೋಚನೆ ಮಾಡಿದ್ದರು. ಇವತ್ತು ನಾವು ಏನು ಮಾಡಿದ್ದೇವೆ ಅದರ ಬಗ್ಗೆ? ಕೇವಲ ಬಜೆಟ್‌ನಲ್ಲಿ ಗಾಂಧೀಜಿಯವರನ್ನು ಪ್ರಸ್ತಾವನೆ ಮಾಡಿಬಿಡುವುದು, ಶ್ರೀ ಜಿ.ಎಸ್.ಶಿವರುದ್ರಪ್ಪ, ಹಿ.ಮ.ನಾಗಯ್ಯನವರ ಕವಿತೆಯನ್ನು, ಕವಿ ನರಸಿಂಹಮೂರ್ತಿಯವರ ಕವಿತೆಯನ್ನು ತೆಗೆದುಕೊಂಡು ಬಜೆಟ್‌ನಲ್ಲಿ ಪ್ರಸ್ತಾಪ ಮಾಡುವುದು, ಆದರೆ ಅದನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೆಯೇ? ಆ ರೀತಿ ಏಕೆ ಆಗಿದೆ ಎಂಬುದನ್ನು ಯೋಚನೆ ಮಾಡಿರುವುದು ಇದೆಯೇ? ಬಹುಶಃ ಅದನ್ನು ನಾನು ನೋಡಿದಾಗ ಇವತ್ತು ಸ್ಲಮ್‌ಗಳ ಬಗ್ಗೆ ಹೇಳಿದರೆ, ಎಲ್ಲಿಯವರೆಗೆ ಸ್ಲಮ್‌ಗಳು ಇರಬೇಕು? ಅದು ಬೆಂಗಳೂರು, ಬಾಂಬೆ, ಕಲ್ಕತ್ತಾದಲ್ಲಿರಲಿ, ಸೂರ್ಯ ಚಂದ್ರರಿರುವವರಿಗೆ ಸ್ಲಮ್‌ಗಳು ಇರಬೇಕೇ? ಇವತ್ತು ಕೊಳೆಗೇರಿಗಳಲ್ಲಿರುವವರ ಜೀವನದಲ್ಲಿ ಚೂರುಪಾರು ತೇಪೆ ಹಾಕಿ ಅವರಿಗೆ rehabilitation ಹೆಸರಿನಲ್ಲಿ ಅವರ ಕಣ್ಣು ಒರೆಸತಕ್ಕಂಥ ಕೆಲಸಗಳು ಆಗಬೇಕೇ? ಏನು ಮಾಡಿದ್ದೀರಿ ಇವತ್ತು? ಇವತ್ತು ನಾವು ನೋಡಿದಾಗ ಬಜೆಟ್ಟಿನಲ್ಲಿ ನಗರಾಭಿವೃದ್ಧಿಗೆ ತಾವು ಹೆಚ್ಚು ಹಣವನ್ನು ಇಟ್ಟಿದ್ದೀರಿ. ನಗರಾಭಿವೃದ್ಧಿಯಲ್ಲಿ ರಾಜ್ಯದ ರಾಜಧಾನಿ ನಗರದಲ್ಲಿದ್ದಾಗಲೂ ಕೂಡ ಅವರ ಸ್ಥಿತಿಗಳು ಸ್ಲಮ್‌ನಲ್ಲಿ ಹೇಗಿವೆ? ಇನ್ನು village atmosphere ಇರತಕ್ಕಂಥ, ಹಳ್ಳಿಗಳ ವಾತಾವರಣದಲ್ಲಿರತಕ್ಕಂಥ ಪ್ರದೇಶಗಳು ಎಷ್ಟಿವೆ? ಅವರಿಗಾಗಿ ಬಜೆಟ್ ಅಲೋಕೇಷನ್‌ನಲ್ಲಿ ಏನು ಮಾಡಿದ್ದೀರಿ? ಅವರ ಬಗ್ಗೆ ಏನು ಯೋಚನೆ ಮಾಡಿದ್ದೇವೆ? ಒಂದು time-bound programme ಇಟ್ಟುಕೊಂಡು ಅವರಿಗೆಲ್ಲಾ ಒಂದು ಪುನರ್ವಸತಿ ಮಾಡಲಿಕ್ಕೆ ನಮಗಾಗುವುದಿಲ್ಲವೇ? ಆ ಯೋಚನೆಯನ್ನು ನಾವು ಮಾಡಿದ್ದೇವೆಯೇ? ಬಹುಶಃ ಅದರ ಬಗ್ಗೆ ಯೋಚನೆಯನ್ನು ಕೂಡ ನಾವು ಮಾಡಲಿಕ್ಕೆ ಹೋಗಿಲ್ಲ. ಬೆಂಗಳೂರಿಗೆ 6,100

ಕೋಟಿ ರೂ. ಅಥವಾ 6,400 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಬಹುಶಃ ಆ ಪ್ರದೇಶಗಳಿಗೂ ತೆಗೆಯಿರಿ, ಕೇವಲ ಮೆಟ್ರೊ ಅಥವಾ ರಸ್ತೆಗಳನ್ನು ಅಗಲೀಕರಣ ಮಾಡುವುದು ನಮ್ಮ ವಾಹನಗಳು ಹೋಗಲಿಕ್ಕೆ, ನಿಜ ಬೇಕಾಗಿದೆ, ಇವತ್ತು ಟ್ರಾಫಿಕ್ ಸಮಸ್ಯೆ ಬಹಳಷ್ಟಿದೆ. ಅವೆಲ್ಲ ಆಗಬೇಕು. ಜೊತೆಜೊತೆಗೆ ಈ ಸ್ಲಮ್‌ಗಳಲ್ಲಿರುವವರ ಬಗ್ಗೆ ಕೂಡ ತಾವು ಯೋಚನೆಗಳನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನವನ್ನು ಸೆಳೆಯುತ್ತೇನೆ. ಈಗಾಗಲೆ 2009-10ರಲ್ಲಿ 29,500 ಕೋಟಿ ರೂ.ಗಳ ಗಾತ್ರದ ಯೋಜನೆಯನ್ನು ತಾವು ಮಾಡಿದ್ದೀರಿ. ನಾನು ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಕೊನೆಯಲ್ಲಿ ಸ್ವಲ್ಪ ನಾನು ಹೇಳುತ್ತೇನೆ. ಏಕೆಂದರೆ ತಮಗೆ ನಾನು ಜ್ಞಾಪಿಸುತ್ತಿರಬೇಕು. ಏಕೆಂದರೆ ತಾವು ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋದಾಗ ಅಲ್ಲಿ ಎಲ್.ಬಸವರಾಜು ಅವರು ಮಾಡಿದ ಭಾಷಣಕ್ಕೆ ಹೊರಗಡೆ ಕೂಡ ಪ್ರತಿಕ್ರಿಯೆಯನ್ನು ಕೊಟ್ಟಿರಿ. ನನ್ನ ಬಜೆಟ್ಟಿನಲ್ಲಿ ನಾನು ತೋರಿಸುತ್ತೇನೆ. ಇಲ್ಲಿ ಅಸ್ಪೃಶ್ಯರು, ದಲಿತರ ಬಗ್ಗೆ ಅವರ ಸ್ಥಿತಿಗತಿಗಳು ಹೇಗಿವೆ ಎಂದು ಹೇಳಿ ಅವರು ಪ್ರಸ್ತಾಪ ಮಾಡಿದರು. Slumdog Millionaireನಲ್ಲಿ ಏನಿದೆಯೋ ಬಹುಶಃ ಅದೇ ಭಾವನೆಗಳನ್ನು ಬಸವರಾಜುರವರು ಚಿತ್ರದುರ್ಗದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಹಳ ಮನದಟ್ಟಾಗುವ ರೀತಿಯಲ್ಲಿ ಹೇಳಿದರು. ಅದಕ್ಕೆ ಪರ ವಿರೋಧ ಇರುವಂಥದ್ದು ಇದೆ, ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೆ ನಾನು ನಿಮ್ಮ ಗಮನವನ್ನು ಸೆಳೆದಾಗ "You see my budget, ಮುಂದಿನ ನನ್ನ ಬಜೆಟ್ಟಿನಲ್ಲಿ ನೋಡಿ, ನಾನು ಯಾವರೀತಿ ಮಾಡುತ್ತೇನೆ." ಅನ್ನುವುದನ್ನು ತಾವು ತುಂಬಾ ಚೆನ್ನಾಗಿ ಹೇಳಿದಿರಿ. ಆ ದೀನ ದಲಿತರ ಪಾಲಿಗೆ, ಆ ಶೋಷಿತರ ಪಾಲಿಗೆ ನಾನು ಬಜೆಟ್ಟಿನಲ್ಲಿ ಒಂದು ಆಶಾಕಿರಣವನ್ನು ಅವರಿಗೆ ಕೊಡುತ್ತೇನೆ ಎನ್ನತಕ್ಕ ಮಾತನ್ನು ತಾವು ಹೇಳಿದಿರಿ. ಬಹುಶಃ ಅದು ನೆನಪಿನಲ್ಲಿದ್ದರೂ ಕೂಡ ತಾವು ಅಸಹಾಯಕರಾದರೇನೋ ಗೊತ್ತಿಲ್ಲ.

ಡಾ|| ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ನನಗೆ ನಿಮ್ಮ ಬಗ್ಗೆ ತುಂಬಾ ಗೌರವವಿದೆ ಶ್ರೀನಿವಾಸ್ ಪ್ರಸಾದ್‌ರವರೆ ನೀವು ಬಹಳ ನುರಿತ ರಾಜಕಾರಣಿ, ಕೇಂದ್ರದಲ್ಲಿ ಸಚಿವರಾಗಿದ್ದಿರಿ. ಮೂಲ ಕಾಂಗ್ರೆಸ್ ಕಟ್ಟಲಿಕ್ಕೆ ಹೋರಾಟ ಮಾಡಿದಿರಿ. ಎನ್.ಡಿ.ಎ.ಸರ್ಕಾರದಲ್ಲಿದ್ದಿರಿ. ಈಗ ನಿಮ್ಮ ಅನುಭವದಿಂದ ಅಲ್ಲಿ ಕುಳಿತಿದ್ದೀರಿ. ನಾನು ನೇರವಾಗಿ ನಿಮ್ಮನ್ನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮದಲ್ಲಿ ನಾನೇನು ಭರವಸೆಯನ್ನು ಕೊಟ್ಟು ಇಲ್ಲಿಗೆ ಬಂದೆ, ಯಾರಾದರೂ ಸ್ವಾತಂತ್ರ್ಯದ ನಂತರ ಒಂದು ಬಜೆಟ್ಟಿನಲ್ಲಿ ಈ ಹಣಕಾಸಿನ ಇಂಥ ಪರಿಸ್ಥಿತಿಯಲ್ಲಿ 114 SC/St ಹೆಣ್ಣುಮಕ್ಕಳ Residential

Schoolನ ಒಂದೇ ಬಾರಿಗೆ ಮಂಜೂರು ಮಾಡಿದಂಥ ಉದಾಹರಣೆ ಇದೆಯೇ? ಇದು ಒಂದು. ಎರಡನೆಯದಾಗಿ ಯಾವ ಮಕ್ಕಳು ಹಾಸ್ಟೆಲ್‌ನಲ್ಲಿ ಓದುತ್ತಿದ್ದಾರೆ, ನನ್ನ ಇತಿಮಿತಿಯಲ್ಲಿ ರೂ.250/- ಇದ್ದುದನ್ನು 500/- ಮಾಡಿದೆ. 400/- ಇದ್ದುದನ್ನು 650/- ಮಾಡಿದೆ. ನಮ್ಮ ಎಸ್.ಸಿ/ಎಸ್.ಟಿ. ಮಕ್ಕಳಿಗೆ ಒಳ್ಳೆಯ ಆಹಾರ ಧಾನ್ಯಗಳು ಸಿಗಲಿ ಎಂದು. ಮತ್ತೆ ತಾಂಡಾಗಳು, ಬಂಜಾರ ತಾಂಡಾಗಳನ್ನು, ಹರಿಜನ ಕಾಲೋನಿಗಳನ್ನು ಮರೆತೇ ಬಿಟ್ಟಿದ್ದರು. ನನ್ನ ಇತಿಮಿತಿಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಆ ತಾಂಡಾಗಳು, ಹರಿಜನ ಕಾಲೋನಿ, ಬೋವಿ ಕಾಲೋನಿ ಅಭಿವೃದ್ಧಿಗೆ ಹಣವನ್ನು ಮೀಸಲಿಟ್ಟಿದ್ದೇನೆ. Pooled fund ಅನ್ನು 200 ಕೋಟಿ ರೂ.ಗಳಿಂದ 600 ಕೋಟಿ ರೂ.ಗಳನ್ನು ಮಾಡಿದ್ದೇನೆ. ಇದನ್ನು ನಾನು ನನ್ನ ಇತಿಮಿತಿಯಲ್ಲಿ ಮಾಡಿದ್ದೇನೆ. ನಾನು ಇಷ್ಟೇ ಹೇಳಲಿಚ್ಛಿಸುವುದು. ಇಷ್ಟು ಅನುಭವವಿರುವಂಥವರಾದ ನಿಮ್ಮಿಂದ ನಾನು ಏನು ನಿರೀಕ್ಷೆ ಮಾಡುತ್ತೇನೆಂದರೆ, ಈ ಹಣಕಾಸಿನ ಇತಿಮಿತಿಯಲ್ಲಿ ನಾನು ಎಸ್.ಸಿ.ಎಸ್.ಟಿ, ಒಬಿಸಿ ಸಮೂಹಕ್ಕೆ ಆದ್ಯತೆ ಕೊಟ್ಟಿದ್ದೇನೆಯೇ ಇಲ್ಲವೇ ಎಂಬುದನ್ನು ತಾವು ನಿಧಾನವಾಗಿ ನೋಡಿ. ಆಮೇಲೆ you please come back to me.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್: ತಾವು ಏನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲವೆಂದು ಹೇಳುತ್ತಿಲ್ಲ. ಇನ್ನೂ ಸ್ವಲ್ಪ ಹೆಚ್ಚಿಗೆ ಕೊಡಬೇಕೆಂದು ಹೇಳುತ್ತಿದ್ದೇನೆ.

ಡಾ: ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಯಾರು 50 ವರ್ಷ ದಾಟಿರುತ್ತಾರೆ, ಮದುವೆ ಆಗಿರುವುದಿಲ್ಲ, ಬೇರೆ ಯಾರೂ ಅವರಿಗೆ ಅವಲಂಬಿತರಾಗಿರುವುದಿಲ್ಲ ಅವರಿಗೂ ಸಹ 400 ರೂಪಾಯಿಗಳನ್ನು ಕೊಡುವಂತಹ ಚಿಂತನೆಯನ್ನು ಮಾಡಿದ್ದೇವೆ. ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ನಿಮಗೆ ಗೊತ್ತಿದೆ. ನಮ್ಮಪ್ಪ ನನಗೆ 18 ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳು ಬರುವ ಹಾಗೆ ಮಾಡಿರಲಿಲ್ಲ. ಇಲ್ಲಿರುವ ಬಹಳ ಜನಗಳಿಗೆ ಅವರ ತಂದೆ-ತಾಯಿಗಳು ಮಾಡಿರುವುದಿಲ್ಲ. ಆದರೆ, ಇದನ್ನು 20-30 ವರ್ಷಗಳ ಹಿಂದೆ ಯೋಚನೆ ಮಾಡಬೇಕಗಿತ್ತು. ಕೂಲಿ ಮಾಡುವವನ ಮಗಳು ಪದವೀಧರಳಾಗಬೇಕು ಎಂಬ ಚಿಂತನೆಯಿಂದ, ಅವರಿಗೆ 18 ವರ್ಷಗಳಾದ ಮೇಲೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕು ಎನ್ನುವ ಯೋಜನೆಯಿಂದ, ಇವತ್ತು ಲಕ್ಷಾಂತರ ಹೆಣ್ಣುಮಕ್ಕಳಿಗೆ ಈ ಯೋಜನೆಯ ಫಲ ಸಿಕ್ಕಿದೆ. ಆ ಇತಿ-ಮಿತಿಯಲ್ಲಿ ಏನು ಮಾಡಬೇಕು ಅದನ್ನು ಮಾಡಿದ್ದೇನೆ. ಎಲ್ಲವನ್ನೂ ಮಾಡಿದ್ದೇನೆ ಎನ್ನುವುದು ಅಲ್ಲ. ಒಂದೆರಡು ಹೆಜ್ಜೆಗಳನ್ನಾದರೂ ಇಟ್ಟಿದ್ದೇನೆ. ಆ ದಿಕ್ಕಿನಲ್ಲಿ ಪ್ರಾಮಾಣಿಕವಾದ ಹೆಜ್ಜೆಯನ್ನು ಇಟ್ಟಿದ್ದೇನೆ ಎಂದರೆ ನೀವು ಒಪ್ಪುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ನೆನಪಿನಲ್ಲಿಟ್ಟುಕೊಂಡು ಈ

ಬಜೆಟ್‌ನಲ್ಲಿ ಕೆಲವು ವಿಷಯಗಳನ್ನು ಸೇರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ಮಾನ್ಯ ಉಪಾಧ್ಯಕ್ಷರೆ, you should have given more thrust ಎಂದು ನಾನು ಹೇಳಿದ್ದೇನೆ. ನಿಮಗಿರುವ ಅಧಿಕಾರದಲ್ಲಿ ನೀವು ಅದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಒತ್ತು ಕೊಡಬೇಕಾಗಿತ್ತು. ಇದನ್ನು priorityಯಲ್ಲಿ ತೆಗೆದುಕೊಳ್ಳಬಹುದಾಗಿತ್ತು. ಮುಂದೆ ಇದನ್ನು ಮಾತನಾಡುವ ಸಂದರ್ಭದಲ್ಲಿ ಸ್ವಲ್ಪ ತಮ್ಮ ಗಮನಕ್ಕೆ ತರುತ್ತೇನೆ. ತಾವು ಕೆಲವು ಕೆಲಸಕಾರ್ಯಗಳನ್ನು ಮಾಡಿರುವುದನ್ನು ನಾವು ಒಪ್ಪಲೇಬೇಕಾಗುತ್ತದೆ. ಈಗ ರೈತರಿಗೆ ತುಂಬಾ ಚೆನ್ನಾಗಿ ಅನುಕೂಲವಾಗಿದೆ. ಶೇಕಡ 3ರಷ್ಟು ಬೆಳೆ ಸಾಲ ಕೊಡಬೇಕೆಂದು ಮಾಡಿರುವುದು ತುಂಬಾ ಒಳ್ಳೆಯದು. ತಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ commercial bankಗಳಿಗೂ ಕೊಡಬೇಕು ಎಂದು ಮಾಡಿದ್ದೀರಿ. ಅಲ್ಲೂ ಕೂಡ ರೈತರಿಗೆ 50 ಸಾವಿರ ರೂಪಾಯಿಗಳ ಸಾಲ ಕೊಡಬೇಕು ಎನ್ನುವ ಯೋಚನೆ ತಮಗೆ ಇದೆ. ತಾವು ಇಂತಿಷ್ಟು ಹಣವೆಂದು ಕೊಟ್ಟಿದ್ದೀರಿ. ಇದು ಬಹಳ ಆಶಾದಾಯಕವಾದಂಥಾದ್ದು. ನಾನು ತಮ್ಮನ್ನು discourage ಮಾಡುತ್ತಿಲ್ಲ. ಜಾಗತಿಕ ಮಟ್ಟದಲ್ಲಿ ಆಗಿರುವ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿಯೂ ಕೂಡ ಉತ್ತಮವಾದ ಬಜೆಟನ್ನು ಕೊಡುವ ಪ್ರಯತ್ನವನ್ನು ತಾವು ಮಾಡಿದ್ದೀರಿ. ಕೇಂದ್ರ ಸರ್ಕಾರವೂ ಮಾಡಿದೆ, ತಾವು ಕೂಡ ಆ ದಿಕ್ಕಿನಲ್ಲಿ ಯೋಚನೆಯನ್ನು ಮಾಡಿದ್ದೀರಿ ಎನ್ನುವ ಮಾತನ್ನು ಹೇಳಿದೆ. ಆದರೆ, ಇನ್ನೂ ಹೆಚ್ಚಿನ ಒತ್ತನ್ನು ಕೊಡುವ ವಿಚಾರಗಳ ಬಗ್ಗೆ ನಾನು ಹೇಳಿದ್ದು ಸ್ಲಂ ಬಗ್ಗೆ ಮಾತನಾಡುತ್ತಾ ಹೇಳಿದ್ದೇನೆ ಅಷ್ಟೆ. ಇವತ್ತು ಏನು Slumdog Missionaire ಬಂದಾಗಿನಿಂದ ಜಗತ್ತೇ ನಮ್ಮ ಕಡೆ ನೋಡುತ್ತಿದೆ. ಹಾಗಾಗಿ, ತಮ್ಮಂಥ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥವರು ಅದರ ಬಗ್ಗೆ ಒತ್ತು ಕೊಡಬೇಕು. ಏಕೆಂದರೆ, most neglected communityಗಳು ಅವು. ಬಹಳ ತಿರಸ್ಕೃತವಾದಂಥವು. ನಮ್ಮ ಗೃಹ ಸಚಿವರು ಬಹಳ casual ಆಗಿ ತೆಗೆದುಕೊಂಡರು. I am sorry to say. ಬಹಳ casual ಆಗಿ ತೆಗೆದುಕೊಂಡರು. ಸ್ಲಂಗಳು ನಮ್ಮ ತಾತ, ಮುತ್ತಾತ, ಪೂರ್ವಿಕರ ಕಾಲದಿಂದಲೂ ಇವೆ. ಸಿನಿಮಾಗಳ ಮುಖಾಂತರ ಇದನ್ನು ಇವತ್ತು ಏನು ತೆಗೆದು ತೋರಿಸುತ್ತಿರುವುದು ಎಂದು ಹೇಳಿದರು. ಜಗತ್ತಿನಲ್ಲಿ ಭಾರತ ದೇಶ ಅಭಿವೃದ್ಧಿ ಹೊಂದುತ್ತಿದೆ, ಇಲ್ಲವೆಂದು ಹೇಳಲಿಲ್ಲ. ಯಾವ ರೀತಿ ಅಭಿವೃದ್ಧಿ ಹೊಂದಿದೆ? ತಮಗೂ ಕೂಡ ಗೊತ್ತಿದೆ. ಶಿಕ್ಷಣಕ್ಕೆ ತಾವು ಇಷ್ಟೊಂದು ಒತ್ತು ಕೊಡುತ್ತಿದ್ದೀರಿ. ನಾನು NDA ಸರ್ಕಾರ ಇದ್ದಾಗ, ಆಹಾರ ಮಂತ್ರಿಯಾಗಿದ್ದಾಗಲೂ ಕೂಡ, ನನಗೆ ಗೊತ್ತಿದೆ.

ಸರ್ವ ಶಿಕ್ಷಣ ಅಭಿಯಾನವನ್ನು ತಂದಾಗ, ಕೇಂದ್ರ ಸರ್ಕಾರ ಏಕೆ mid-day meals ತಂದಿತು ಎಂಬುದು ಗೊತ್ತಿದೆ. ಡಾ: ಅಂಬೇಡ್ಕರ್‌ರವರು ಸಂವಿಧಾನ ಬರೆಯುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದರು. Directive Principlesನಲ್ಲಿ compulsory and free education ಕೊಡಬೇಕು ಎಂದು ಐದು ವರ್ಷದಿಂದ 14 ವರ್ಷದವರೆಗಿನ ಪ್ರತಿ ಮಗುವಿಗೂ ಕೂಡ ಶಿಕ್ಷಣವನ್ನು ಕೊಡಬೇಕು. Education is nothing but knowledge ಎಂದು ಹೇಳಿದ್ದರು. ಇವತ್ತು ಈ ದೇಶದ ಸಮಾಜದಲ್ಲಿ ಜನರು ನಾವು ನೀವು ಸರಿಪಡಿಸಲು ಆಗದೇ ಇರತಕ್ಕಂಥ ರೋಗ-ರುಜಿನಗಳಿಗೆ ತುತ್ತಾಗಿದ್ದಾರೆ. ಸರ್ವ ಶಿಕ್ಷಣ ಅಭಿಯಾನವನ್ನು ತಂದು ಎಲ್ಲರಿಗೂ ಶಿಕ್ಷಣವನ್ನು ಕೊಟ್ಟಿದ್ದರೆ, ಇವತ್ತು ಏನು ಭಯೋತ್ಪಾದನಾ ವಿರೋಧಿ ಅಭಿಯಾನವನ್ನು ಮಾಡುತ್ತಿದ್ದೀರಿ, ಅದಕ್ಕೆ ಇವತ್ತು ಇಡೀ ದೇಶ ನಿಂತು ಕೊಳ್ಳಬೇಕಾಗಿತ್ತು. ಇಲ್ಲ, ಇಲ್ಲಿ ಎಡವಿದ್ದೇವೆ. ನಾವು ಭಯೋತ್ಪಾದನೆ ವಿರುದ್ಧ ಸಿಡಿದೇಳಬೇಕು. ಈ ರಾಷ್ಟ್ರದ ಐಕ್ಯತೆ, ಏಕತೆಗಳ ಬಗ್ಗೆ ನಮಗೆ ಯೋಚನೆ ಮಾಡುವುದಕ್ಕಾಗುತ್ತಿಲ್ಲ, ಕಲ್ಪನೆ ಕೂಡ ಬರುತ್ತಿಲ್ಲ. ಇವತ್ತು ಸರ್ವ ಶಿಕ್ಷಣ ಅಭಿಯಾನ ಬಂದಿದೆ. ಏನಾಗಿದೆ ಎಂದರೆ, mid-day meals ಬಂದಿರುವುದು ಸುಮ್ಮನೆ ಅಲ್ಲ, ಅದು ತಮಗೆ ಗೊತ್ತಿದೆ. ನಾನು ನಗರದಲ್ಲಿ ಇದ್ದಂಥವನು. ಗ್ರಾಮೀಣ ಪ್ರದೇಶದ ಹಿನ್ನೆಲೆಯಿಂದ ಬಂದಿರತಕ್ಕಂಥಾವರು ತಮಗೆ ಗೊತ್ತಿದೆ. ತಂದೆ-ತಾಯಿಗಳಿಗೆ ಮಕ್ಕಳ ಹೊಟ್ಟೆಯೇ ದೊಡ್ಡದು. ಇವತ್ತಿನ generationನಲ್ಲಿ ಶಾಲೆಗೆ ಕಳುಹಿಸುತ್ತಿರುವಂಥ ಮೊದಲನೇ ಪೀಳಿಗೆಯವರೂ ಕೂಡ ಇದ್ದಾರೆ. ಇವತ್ತು ಅದನ್ನು ನೋಡಿದ್ದೀರಿ. ತಾವು ಹೋರಾಟ ಮಾಡಿ ಬಂದಿರತಕ್ಕಂಥವರು. ಇವತ್ತು ಸರ್ವ ಶಿಕ್ಷಣ ಅಭಿಯಾನದಿಂದ ಮಕ್ಕಳಿಗೆ ಪ್ರೋತ್ಸಾಹ ಕೊಡುತ್ತಿದ್ದೇವೆ. ಮಕ್ಕಳಿಗೆ free uniform, free text-books, free health check up ಮಾಡುತ್ತೇವೆ. ಅವರಿಗೆ ಎಲ್ಲಾ ರೀತಿಯಾದಂಥ ಅನುಕೂಲತೆಗಳನ್ನು ಮಾಡಿ ಅವರಿಗೆ mid-day mealsಅನ್ನು ತಂದಿರುವುದು ಏಕೆಂದರೆ, ಯಾವ ತಂದೆ-ತಾಯಿಗಳು ಬಡತನದಲ್ಲಿದ್ದಾರೋ, ಅವರಿಗೆ ಹೊಟ್ಟೆಯೇ ದೊಡ್ಡದು. ತಾವು ದುಡಿದು ತಮ್ಮ ಮಕ್ಕಳಿಗೂ ಒಂದು ತುತ್ತು ತರಬೇಕು ಎಂದು ಹೋದಂಥವರಿಗೆ, ಶಿಕ್ಷಣದ ಬಗ್ಗೆ ಭಾಷಣ ಮಾಡಿದರೆ ಆಗುವುದಿಲ್ಲ. ಇವತ್ತು ತಂದೆ-ತಾಯಿಗಳು ನಮ್ಮ ಹಳ್ಳಿಗಳಲ್ಲಿ ದುಡಿಯುವುದಕ್ಕೆ ಹೋಗದೇ, ಬೇಲದ ಕಾಯಿ, ಸೀಬೆ ಕಾಯಿಗಳನ್ನು ತಿನ್ನುತ್ತಾ ಕುಳಿತುಕೊಂಡಿರುತ್ತಾರೆ. ಅಂತಹ ಮಕ್ಕಳಿಗೆ ಒಳ್ಳೆಯ ಊಟವನ್ನು ಕೊಡುತ್ತೇವೆ ಎಂದರೆ ಶಾಲೆಗೆ ಓಡಿ ಬರುತ್ತವೆ. ಆದ್ದರಿಂದ, ಆ ಮಕ್ಕಳಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಬೇಕು ಎಂದು ಈ broad based concept of mid-day

meals ಇರತಕ್ಕಂಥಾದ್ದು. ಇಸ್ಕಾನ್‌ನಂಥವರು ಇದನ್ನು ಬಹಳ ಎಚ್ಚರಿಕೆಯಿಂದ ಮಾಡುತ್ತಿದ್ದಾರೆ. ಎಲ್ಲೇ ಲೋಪ-ದೋಷಗಳಾದರೂ ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರು ದುರುಪಯೋಗವಾಗದೇ ಇರುವ ರೀತಿಯಲ್ಲಿ ಆ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಇವು ಬಹಳ ಮಹತ್ತರವಾದಂಥ ಕಾರ್ಯಕ್ರಮಗಳು. ಸರ್ಕಾರ ಯಾರ ಬಗ್ಗೆ ಯೋಚನೆ ಮಾಡಬೇಕಾಗಿದೆ? ಇರತಕ್ಕಂಥವರ ಬಗ್ಗೆ ಯೋಚನೆ ಮಾಡುವುದಲ್ಲ. ನಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಯೋಚನೆ ಮಾಡುವುದಲ್ಲ. We know how to get good education for our children. ಅಥವಾ BDAನಿಂದ ಸೈಟ್ ತೆಗೆದುಕೊಂಡು ತಮಗೆ ಮನೆಗಳನ್ನು ಕಟ್ಟಿಕೊಳ್ಳುವುದು; ಅದಲ್ಲ ಸರ್ಕಾರದ ಯೋಚನೆಗಳು. ಸರ್ಕಾರದ ಯೋಚನೆ ಏನಿರಬೇಕೆಂದರೆ, ಯಾರಿಗೆ ಶಿಕ್ಷಣವನ್ನು ಕೊಡುವುದಕ್ಕಾಗುವುದಿಲ್ಲ, ಅವರಿಗೆ ಇರತಕ್ಕಂಥ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಬಗ್ಗೆ ಯೋಚನೆ ಮಾಡಬೇಕು. ಯಾರಿಗೆ ಕೈ-ಕಾಲುಗಳನ್ನು ಚಾಚಿ ಮಲಗುವುದಕ್ಕೆ ಸ್ವಲ್ಪ ಜಾಗವೂ ಇಲ್ಲದೆ, ಮನೆಗಳಿಲ್ಲವೋ ಅಂತಹವರಿಗೆ ಸೈಟ್‌ಗಳನ್ನು ಕೊಡಬೇಕು, ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ನಮ್ಮ commitment ಇರುವಂಥವರಿಗೆ ಕೊಡುವುದು ಸರಿಯಲ್ಲ. ಇರುವಂಥವರು ಹೇಗೆ ಬದುಕಬೇಕು ಎನ್ನುವುದು ಅವರಿಗೆ ಗೊತ್ತಿರುತ್ತದೆ. ಅವರ ಬಗ್ಗೆ ಯೋಚನೆ ಮಾಡುವುದಕ್ಕೆ ಸರ್ಕಾರದ ಕಾರ್ಯಕ್ರಮಗಳಿವೆ. ನಾನು ಆ ಹಿನ್ನೆಲೆಯಲ್ಲಿ ಮಾತನಾಡುವುದಾದರೆ, ಇವತ್ತು ಕೂಡ ಅವರ ಸ್ಥಿತಿಗತಿಗಳು ಹೇಗಿವೆಯೆಂದು ನೋಡಬೇಕು. Slum-dog Millionaire ಚಿತ್ರವನ್ನು ನೋಡಿ. ಅದನ್ನು casualಆಗಿ ತೆಗೆದುಕೊಳ್ಳಬೇಡಿ. ಇವತ್ತು ಕೂಡ ಭಾರತ ದೇಶದಲ್ಲಿ, ಇವತ್ತು ಇಂಗ್ಲೆಂಡ್, ಅಮೆರಿಕ ಅಥವಾ ಇನ್ನೆಲ್ಲೋ ಹೊರಗಡೆ European countries ನಲ್ಲಿ ಸಿಗುವಂತಹ education ಇಲ್ಲಿ ಸಿಗುತ್ತಿದೆ. Convent education ಸಿಗುತ್ತದೆ. ಭಾರತದಲ್ಲಿ ದುಡ್ಡಿರುವಂಥವರು ಯಾರು ಬೇಕಾದರೂ ಒಳ್ಳೆಯ ಶಿಕ್ಷಣವನ್ನು ಪಡೆಯಲು ಅವಕಾಶಗಳಿವೆ. ಆರೋಗ್ಯದ ಬಗ್ಗೆ ಹೇಳುವುದಾದರೆ, ಇವತ್ತು ಇಲ್ಲಿ Hi-tech Hospitalಗಳಿವೆ. ನಾರಾಯಣ ಹೃದಯಾಲಯಕ್ಕೆ ಬೇರೆ ದೇಶಗಳಿಂದ operationಗಳಿಗೆ ಬರುತ್ತಾರೆ. ಬಾಂಬೆಯಲ್ಲಿಯೂ ಕೂಡ ಒಳ್ಳೆಯ Hi-tech Hospitalಗಳಿವೆ, ಅವು ದುಡ್ಡಿರತಕ್ಕಂಥವರಿಗೆ ಮಾತ್ರ. ಆದರೆ, ಆಡಳಿತ ನಡೆಸತಕ್ಕಂಥವರ ಜವಾಬ್ದಾರಿ ಏನೆಂದರೆ, ಯಾರಿಗೆ ಡಾಕ್ಟರ್ ಹತ್ತಿರ ಹೋಗಿ ತೋರಿಸುವುದಕ್ಕೆ ಸಾಧ್ಯವಾಗುವುದಿಲ್ಲವೋ, ಒಂದು ರೂಪಾಯಿ ಕೊಟ್ಟು ಒಂದು tablet ತೆಗೆದುಕೊಳ್ಳುವುದಕ್ಕಾಗುವುದಿಲ್ಲವೋ ಅಂತಹವರಿಗೆ Primary Health Centreನಲ್ಲಿ

ಎಲ್ಲಾ ಸಿಗಬೇಕು ಎನ್ನುವುದು ನಮ್ಮ ಯೋಚನೆಗಳು. ಅವರ ಆರೋಗ್ಯದ ಬಗ್ಗೆ, ಅವರು ಓದುವ ಶಾಲೆಗಳಲ್ಲಿ ಏನಿದೆ ಎಂಬ ಬಗ್ಗೆ ಯೋಚನೆ ಮಾಡಬೇಕು. ಬಡವರ ಮನೆಗೆ ಒಂದು ಸೈಕಲ್ ಕೊಡುವುದು ಎಂದರೆ ಅಷ್ಟು ಸುಲಭವಲ್ಲ. ಸೈಕಲ್ ವಿತರಣೆಯ ಸಮಯದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮಂಥವರಿಗೆ ಆಗ ಸೈಕಲ್ ಸಿಗಬೇಕಾದರೆ ಕನಸಾಗಿತ್ತು. ಇವತ್ತು ಹಳ್ಳಿಗಳಲ್ಲಿ 8ನೇ ತರಗತಿ ಓದುತ್ತಿರುವ ಮಕ್ಕಳಿಗೆ ಒಂದು ಸೈಕಲ್ ಕೊಡುತ್ತೇವೆ ಎಂದು ಹೇಳಿದರೆ, ಆ ಮಕ್ಕಳು ಎಷ್ಟು ಖುಷಿಪಡುತ್ತಾರೆ, ಅವರ ಅಪ್ಪ-ಅಮ್ಮಂದಿರು ಎಷ್ಟು ಖುಷಿಪಡುತ್ತಾರೆ. ಇದು ಇನ್ನೂ ಹೆಚ್ಚಾಗಬೇಕು. ನಾವು ಆ ವರ್ಗದವರ ಬಗ್ಗೆ ಯೋಚನೆ ಮಾಡಬೇಕು. ಅವರ ಬಗ್ಗೆ ಯೋಚನೆ ಮಾಡುವುದು ಜವಾಬ್ದಾರಿಯುತವಾದ ಸರ್ಕಾರದ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು 3% ಬಗ್ಗೆ ತಮಗೆ ಹೇಳಿದೆ. ತಮಗೂ ಕೂಡ ಅದರ ಬಗ್ಗೆ ಗೊತ್ತಿದೆ. ಇವತ್ತು ಏನು 2007-08ರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸೇರಿ ಸಾಲ ಮನ್ನಾ ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕು ಎನ್ನತಕ್ಕಂಥಾದ್ದು, ಫಲಾನುಭವಿಗಳಿಗೆ ಏನು ಕೊಟ್ಟಿದ್ದೀರಿ, ಅದು ಯಾವರೀತಿಯಾಗಿ ಅಕ್ರಮವಾಗಿ ಅನರ್ಹ ಫಲಾನುಭವಿಗಳಿಗೆ ಹೋಗಿದೆ ಹಾಗೂ ಅದನ್ನು ತನಿಖೆ ಮಾಡುತ್ತಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. 110 ಕೋಟಿಯದು ಇದು. ಲೆಕ್ಕಪರಿಶೋಧನೆ ವರದಿ ಪ್ರಕಾರ 110 ಕೋಟಿ ರೂಪಾಯಿಗಳು ದುರುಪಯೋಗವಾಗಿರುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಸುಮಾರು 13 ಜಿಲ್ಲೆಗಳಲ್ಲಿ 81,338 ಪ್ರಕರಣಗಳಿವೆ. ನಾವು ಎಂತಹ ಸಮಾಜದಲ್ಲಿದ್ದೇವೆ? ಒಬ್ಬ ಬಡ ರೈತನಿಗೆ ಸಾಲ ಮನ್ನಾ ಮಾಡಬೇಕು ಎಂದು ಹೋದರೂ ಕೂಡ ಅಲ್ಲಿ ಯಾವ ರೀತಿಯಾದ ಅಕ್ರಮವಾದ ವ್ಯವಹಾರಗಳು ನಡೆದಿವೆ ಎಂದು ನೋಡಬೇಕು. ಇವತ್ತು ನೂರಾರು ಕೋಟಿ ರೂಪಾಯಿಗಳನ್ನು ಇದರಲ್ಲಿ ತಿಂದು ತೇಗಿದ್ದಾರೆ. ಬಹುಶಃ ಯಾವ ರೀತಿಯಾದ ಲೆಕ್ಕಪರಿಶೋಧನೆ ವರದಿ ಬಂದಿದೆ ಎನ್ನುವುದರ ಕಡೆಗೆ ಗಮನವನ್ನು ಕೊಡಬೇಕು. ಯಾರ್ಯಾರು ದುರುಪಯೋಗ ಮಾಡಿಕೊಂಡಿದ್ದಾರೆ ಅವರಿಗೆ ಶಿಕ್ಷೆಯನ್ನು ಕೊಡಬೇಕು. ಇವತ್ತು 5 ಸಾವಿರ ಕೋಟಿ ರೂಪಾಯಿಗಳ ಕೊರತೆ, ಸಂಪನ್ಮೂಲದ ಕೊರತೆ ಇದೆ ಅಥವಾ deficit ಆಗತಕ್ಕಂಥ ರೀತಿಯಲ್ಲಿ ತಾವು ಯೋಚನೆ ಮಾಡಿದ್ದೀರಿ. ನಿಮಗೆ ಆತ್ಮವಿಶ್ವಾಸವಿದೆ. ಯಾವ ರೀತಿಯಲ್ಲಿ ಇದಕ್ಕೆ ಪರಿಹಾರ ಕಂಡು ಹಿಡಿಯಬೇಕು ಎಂದು ನೋಡಬೇಕು. ತಾವು ಹಣಕಾಸಿನ ವಿಚಾರದಲ್ಲಿ ಹಿಂದಿನಿಂದ ಅನುಭವ ಕೂಡ ಇರತಕ್ಕಂಥವರು. ಸಂಪನ್ಮೂಲಗಳ ಸಂಗ್ರಹ ಮಾಡುವ ರೀತಿಯಲ್ಲಿ, ಅದು Commercial tax ಇರಬಹುದು, Excise ಇರಬಹುದು, ರೆವಿನ್ಯೂ ಬಾಬ್ತುಗಳಲ್ಲಿ

ಬರತಕ್ಕಂಥಾದ್ದನ್ನು ತಾವು ಹದ್ದಿನ ಕಣ್ಣಿನಂತೆ ಕಣ್ಣಿಟ್ಟು ನೋಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಬಹಳ ಎಚ್ಚರಿಕೆಯಿಂದ ತಾವು ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗಿದೆ. ಇದು ಅಷ್ಟು ಸುಲಭವಲ್ಲ. ಜಡ್ಡುಗಟ್ಟಿರತಕ್ಕಂಥ ಅಧಿಕಾರಿಶಾಹಿಗಳ ಜೊತೆಯಲ್ಲಿ, ತಾವು ಅವರಿಗೆ ಚುರುಕು ಮುಟ್ಟಿಸಿ, ಸಂಪನ್ಮೂಲವನ್ನು ಸಂಗ್ರಹಿಸುವುದು ಬಹಳ ಮುಖ್ಯ. ಬಹುಶಃ ನೀವು ಈ ರಾಜಕೀಯ ಇಚ್ಛಾಶಕ್ತಿಯ ಜೊತೆಗೆ, ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ಮಾನ್ಯ ಯಡಿಯೂರಪ್ಪನವರಿಗೆ ಈ ರಾಜಕೀಯ ಜಂಜಾಟದಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವೇ? ಏಕೆಂದರೆ, ಬೆಳಗ್ಗೆಯಿಂದ, ಸಂಜೆಯವರೆಗೆ ಕಾವಲು ಕಾಯ್ದು ಮಾಡಬೇಕು. ಈ resources ಅನ್ನು mobilize ಮಾಡುವ ರೀತಿಯಲ್ಲಿ ಬಹುಶಃ ನನಗನಿಸಿದ ಪ್ರಕಾರ ಒಳ್ಳೆಯ Finance Minister 24 ಗಂಟೆಗಳ ಕಾಲ ಅದಕ್ಕೆ dedicate ಮಾಡತಕ್ಕಂಥವರು ಮಾತ್ರ ಮಾಡಲಿಕ್ಕೆ ಸಾಧ್ಯ. ನೂರರಲ್ಲಿ ನೂರೊಂದನೆಯದನ್ನು ಮಾಡಿಕೊಂಡು ಹೋಗುತ್ತೇನೆ ಎಂದು ನೀವೇ ಮಾಡಿದರೆ ಇದು ಬಹಳ ಕಷ್ಟಕರವಾದಂಥಾದ್ದು. ನಿಮ್ಮ ಆಸೆ ಏನಿದೆ ಅಥವಾ ಬಜೆಟ್‌ನಲ್ಲಿ ಇರುವ ಪ್ರಸ್ತಾವನೆಗಳು ಏನಿವೆ ಅದನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ರೀತಿಯಲ್ಲಿ ಇದು ಬಹಳ ಕಷ್ಟಕರವಾದದ್ದು. Pilferage ಗೆ ನೀವು ಅವಕಾಶ ಕೊಡಬಾರದು. ಎಲ್ಲಿ ಸೋರುವಿಕೆ ಇದೆ ಎಂಬುದು ನಿಮಗೆ ಗೊತ್ತಿದೆ ಹಾಗೂ ಅಧಿಕಾರಿಗಳಿಗೆ ಗೊತ್ತಿದೆ. ಬಜೆಟನ್ನು ಮಂಡಿಸುವುದರಲ್ಲಿ ಯಾರು ಪರಿಣಿತರು ಇದ್ದಾರೆ ಅವರೆಲ್ಲರಿಗೂ ಗೊತ್ತಿದೆ. ಸೋರುವಿಕೆ ಎಲ್ಲಿ ಆಗುತ್ತಿದೆ ಎನ್ನುವುದು ನಿಮಗೆಲ್ಲರಿಗೂ ಗೊತ್ತಿದೆ. ಅದನ್ನು ತಡೆಗಟ್ಟಿದರೆ ಸಂಪನ್ಮೂಲದ ಕೊರತೆಯನ್ನು ಎಷ್ಟೋ ನೀಗಿಸಬಹುದು. ಇನ್ನು ಇದರ ಜೊತೆಗೆ ಬಹಳಷ್ಟು ಮಾತುಗಳನ್ನು ಆಡುತ್ತೇವೆ. ಕೆಲವು Boards and Corporations white elephants ಆಗಿದೆ. ಇವೆ. ಅದರ ಬಗ್ಗೆ ನೀವು ಯಾಕೋ ಗಮನ ಕೊಡಲಿಲ್ಲ. Boards and Corporationsಅನ್ನು political rehabilitationಗೆ ಇಟ್ಟುಕೊಂಡಿರುವಂಥಾದ್ದು. ಯಾರಿಗೋ ಅಸೆಂಬ್ಲಿಗೆ ಟಿಕೆಟ್ ಸಿಕ್ಕಿಲ್ಲ. MLA ಆದರೂ ಅವರಿಗೆ ಕೊಡುವುದಕ್ಕೆ ಆಗಲಿಲ್ಲ, ಇದು ಅಲ್ಲ. ರಾಜಕೀಯ ಪುನರ್‌ವ್ಯವಸ್ಥೆಗೆ ಇಟ್ಟುಕೊಂಡಿರುವ ಅನೇಕ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಿವೆ. ಈ ಬಿಳಿ ಆನೆಗಳನ್ನು ಸಾಕುವುದು ಬಹಳ ಕಷ್ಟವಿದೆ. ಇದು ಬೇಕಾಗಿಲ್ಲ. ಇದರ ಬಗ್ಗೆಯೂ ಕೂಡ ಹೆಚ್ಚಿನ ರೀತಿಯಲ್ಲಿ ತಾವು ಗಮನ ಕೊಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಚೆನ್ನಾಗಿ ಹೇಳಿದರು, ವಿರೋಧ ಪಕ್ಷದಲ್ಲಿ ಇದ್ದು ಬರೀ ವಿರೋಧ ಮಾಡುವುದಲ್ಲ. ತಿದ್ದುವ ಕೆಲಸವನ್ನು ಮಾಡಬಹುದು ಎಂದು ಹೇಳಿದರು.

5-00 PM

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಶ್ರೀನಿವಾಸ್ ಪ್ರಸಾದ್ ಅವರು ಮಾತನಾಡಬೇಕಾದರೆ, ಸಂಪನ್ಮೂಲವನ್ನು ಯಾವ ರೀತಿ ಕ್ರೋಢೀಕರಿಸಬೇಕು ಎನ್ನುವ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದಾರೆ. ಇವತ್ತು ಮಾನ್ಯ ಬಾಲಕೃಷ್ಣ ಅವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ. ಬಹುಶಃ ತಮ್ಮ ಗಮನಕ್ಕೂ ಬಂದಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ತಾವೇ ಸಹಿ ಮಾಡಿರುವುದು. ಅವರ ಪ್ರಶ್ನೆಗೆ ನೀವು ಕೊಟ್ಟಿರುವ ಉತ್ತರದಲ್ಲಿ lakhs ಎಂದು ಇದೆ, ಅದು crores ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಅದನ್ನು tally ಮಾಡಿ ನೋಡಿದರೆ ಸ್ವಲ್ಪ mistake ಇರುವುದು ಕಾಣುತ್ತದೆ. ನೀವು 2008-09ನೇ ಸಾಲಿನಲ್ಲಿ 23 ಸಾವಿರದ 98 ಲಕ್ಷ ರೂಪಾಯಿ planನಲ್ಲಿದೆ. ನಿಮ್ಮ ಅಂಕಿ-ಅಂಶಗಳ ಪ್ರಕಾರ ಡಿಸೆಂಬರ್ 31 ರವರೆಗೂ expenditure ಆಗಿರುವುದು ಕೇವಲ 9,549, not even 30% ದಯಮಾಡಿ ಅದನ್ನು ತಾವು ನೋಡಿ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್: ಕೇಂದ್ರ ಸರ್ಕಾರದ ಬಹಳ ಮಹತ್ತರವಾದ ಯೋಜನೆಯಿದೆ. ಏಕೆಂದರೆ, ನಾನು ಶಾಸಕನಾಗಿ ಬಂದಾಗ ಬಹಳ ಹತ್ತಿರದಿಂದ ಕೆಲವು ಕಾರ್ಯಕ್ರಮಗಳನ್ನು ನೋಡುತ್ತಿದ್ದೇನೆ. ಅದರಲ್ಲಿ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಏಕೋ ನೀವು ಮನಸ್ಸು ಮಾಡಲೇ ಇಲ್ಲ. ಬೇರೆ ಬೇರೆ ರಾಜ್ಯಗಳು ಮಾಡುತ್ತಿವೆ. ಉದ್ಯೋಗ ಖಾತ್ರಿ ಯೋಜನೆಗೆ ಸಾಕಷ್ಟು ಹಣ ಬರುತ್ತಿದೆ. ಆದರೆ, ಯೋಜನೆಯಲ್ಲಿ ಹಣ ಖರ್ಚಾಗುತ್ತಿಲ್ಲವೆಂದು ತಮಗೆ ಗೊತ್ತಿದೆ. ವಿಶೇಷವಾಗಿ ಎಲ್ಲಿ ಬರಪೀಡಿತ ಪ್ರದೇಶಗಳಿರುತ್ತವೆಯೋ, ಅಲ್ಲಿರುವವರು ಗುಳೆ ಹೋಗಬಾರದು, ಅವರ ಕೈಗಳಿಗೆ ಕೆಲಸ ಸಿಗಬೇಕೆನ್ನುವ ಉದ್ದೇಶದಿಂದ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದರಲ್ಲಿ ಕೇವಲ 82 ರೂಪಾಯಿ ಕೊಡುತ್ತಾರೆ. ಬೇರೆ ಬೇರೆ ರಾಜ್ಯಗಳು ಇದರ ಬಗ್ಗೆ ಯೋಚನೆ ಮಾಡುತ್ತಿವೆ. ನಂಜನಗೂಡಿನ ಕಡೆ 82 ರೂಪಾಯಿಗೆ ಯಾರೂ ಬರುವುದಿಲ್ಲ. ಬೇರೆ ಕಡೆ 100 ರಿಂದ 150 ರೂಪಾಯಿ ಸಿಗುವಂಥದ್ದು ಇದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವುದು ಮತ್ತು ನಮ್ಮ ಪಾಲು ಸೇರಿಸಿ ಯಾವ ರೀತಿಯಲ್ಲಿ ಯಾವ ಕೈಗಳಿಗೆ ಕೆಲಸ ಕೊಡಬೇಕಾಗಿತ್ತೋ, ಯಾವ ಕುಟುಂಬಗಳಿಗೆ ನಾವು ಆರ್ಥಿಕವಾಗಿ ಸಹಾಯ ಮಾಡಬೇಕಾಗಿತ್ತೋ, ಅದು ಆಗುತ್ತಿಲ್ಲ. ಅದನ್ನು ಮಾಡಬೇಕಾಗಿದ್ದರೆ ನಮ್ಮ ಪಾಲನ್ನೂ ಇನ್ನೂ ಸೇರಿಸಬೇಕಾಗಿದೆ. ಪಕ್ಕದ ಕೇರಳ ರಾಜ್ಯ ಮತ್ತು ಆಂಧ್ರ ಪ್ರದೇಶದಲ್ಲಿ ಈಗಾಗಲೇ 82 ರೂಪಾಯಿಗೆ ಬದಲು 100 ರೂಪಾಯಿ ಮೇಲೆ 110, 120 ರೂಪಾಯಿಯನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಈ

ಯೋಜನೆಯು ಕಡುಬಡವರಿಗೆ ಸೇರಿದ್ದರಿಂದ ತಾವು ಮಾತನಾಡುವ ಸಂದರ್ಭದಲ್ಲಿ ನಮ್ಮ ಬಜೆಟ್‌ನಲ್ಲಿ ನಮ್ಮ ಪಾಲನ್ನೂ ಸೇರಿಸಿ, 82 ರೂಪಾಯಿ ಕೊಡುವ ಬದಲು ಸುಮಾರು 100ರಿಂದ 120 ರೂಪಾಯಿಯವರೆಗೂ ಹೆಚ್ಚಿಸಬೇಕು. ಯೋಜನೆಯಲ್ಲಿ ಬರುವಂತಹ ಹಣವನ್ನು ಸದುಪಯೋಗಪಡಿಸಿಕೊಳ್ಳಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಬದಲಾಯಿಸಬೇಕಾಗಿದೆ. Food for work ಅಡಿಯಲ್ಲಿ ಏನು ಕೊಡುತ್ತಿದ್ದೀರಿ ಆ ರೀತಿಯಲ್ಲಿ ಉಪಯೋಗವಾಗವುದಕ್ಕೆ ಕೊಟ್ಟರೆ, ಸಾಕಷ್ಟು ಬೇರೆ ರೀತಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಕೇವಲ social forestry, ಕೆರೆಗಳಲ್ಲಿ ಹೂಳೆತ್ತುವುದು, ಇವುಗಳಿಂದ ಹಣ ಖರ್ಚಾಗುತ್ತಿರುವುದು ಆಗುತ್ತಿಲ್ಲ. ಹಾಗಾಗಿ ಸ್ವಲ್ಪ ಬದಲಾವಣೆಯಾಗಬೇಕು. ಕೇಂದ್ರ ಸರ್ಕಾರಕ್ಕೆ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ನಾವು ಹಣವನ್ನು ತೆಗೆದುಕೊಳ್ಳುತ್ತಿದ್ದೇವೆಂದು ನಾವು ರಾಜ್ಯ ಸರ್ಕಾರದವರು ಪತ್ರ ಬರೆಯೋಣ. ಆ ಯೋಜನೆಯಡಿಯಲ್ಲಿ ಬಹಳ scope ಇತ್ತು. ಸಂಪೂರ್ಣವಾಗಿ ಹಣ ಖರ್ಚಾಗುತ್ತಿತ್ತು. ಅಲ್ಲಿ ಇಲ್ಲಿ ದುರುಪಯೋಗವಾಗುತ್ತಿತ್ತು. ಆದರೆ, ಸಂಪೂರ್ಣವಾಗಿ ಬಡವರಿಗೆ, ಕೂಲಿಗಳಿಗೆ ಕೆಲಸ ಸಿಗುತ್ತಿತ್ತು, ಸಹಾಯವಾಗುವಂತಹ ರೀತಿಯಲ್ಲಿತ್ತು. ಆ ರೀತಿಯಲ್ಲಿ ಯೋಜನೆಯನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡಿಸುವ ಮೊದಲು ಬಹಳ ಸಂತೋಷವಾಯಿತು. ತಾವು ಸಫಾಯಿ ಕರ್ಮಚಾರಿಗಳ ಜೊತೆ ಬಹಳ ಸಲ ಭೇಟಿ ಮಾಡಿದ್ದೀರಿ. ಗಾಂಧೀಜಿಯವರ ಅಂತ್ಯೋದಯ ಯೋಜನೆ ಬಗ್ಗೆ ಮಾತನಾಡುವಾಗ, ಪೌರ ಕಾರ್ಮಿಕರು ಯಾರೆಂದರೆ, ಸಮಾಜದ ಕೆಳಸ್ತರದಲ್ಲಿರತಕ್ಕಂಥವರು. ನಮ್ಮ ಸಮಾಜದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಜಾತಿ ಜನಾಂಗದವರೂ ಸಫಾಯಿ ಕರ್ಮಚಾರಿಗಳ ಸ್ವಚ್ಛತೆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅವರ ಬದುಕು ಹೇಗಿದೆ ಎನ್ನುವುದರ ಬಗ್ಗೆ ತಮ್ಮ ಗಮನ ಸೆಳೆಯಬೇಕಾಗಿದೆ. ಇವತ್ತು ಅವರ ಸ್ಥಿತಿ ಹೇಗಾಗಿದೆ? ಪಾಪ ಇವತ್ತೂ ಸಹ ದಿನಗೂಲಿಯಲ್ಲಿ ನರಳುತ್ತಿದ್ದಾರೆ. ಮನುಷ್ಯತ್ವದ ಲವಲೇಶವೂ ಅವರ ಪಾಲಿಗೆ ಸಿಗುತ್ತಿಲ್ಲ. ಸಮಾಜದಲ್ಲಿ ಸಾಮಾಜಿಕವಾಗಿ ದೂರ ಇರತಕ್ಕಂಥವರು, ಆರ್ಥಿಕವಾಗಿ ಅವರನ್ನು ಮೇಲುಸ್ತರಕ್ಕೆ ತರುವ ಪ್ರಯತ್ನ ನಡೆಯುತ್ತಿದೆಯೇ? ಇಲ್ಲ. ಅವರು ಇನ್ನೂ contract basisನಲ್ಲಿ ದಿನಗೂಲಿ ನೌಕರರಾಗಿ ದುಡಿಯುತ್ತಿದ್ದಾರೆ. ಯಾರಿಗೋ contract ಕೊಡುತ್ತೀರಿ ಅವರ ಹತ್ತಿರ ಜೀತದಾಳಾಗಿ ಕೆಲಸ ಮಾಡಬೇಕು. ಅದು ಮೈಸೂರು ನಗರಪಾಲಿಕೆ, ಬೆಂಗಳೂರು ಮುನಿಸಿಪಾಲಿಟಿಗಳು ಇರಬಹುದು. ಇನ್ನೂ ಒಂದು ಹೆಜ್ಜೆ ಹೇಳಬೇಕೆಂದರೆ, ಮಾನ್ಯ ಈಶ್ವರಪ್ಪನವರೆ, ನಿಮ್ಮ ಕ್ಷೇತ್ರದಲ್ಲಿ ಹೇಳಿ

ನೀವು ಯಾವುದಾದರೂ ಗ್ರಾಮಕ್ಕೆ ಹೋದರೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪೌರ ನೌಕರರು ಸ್ವಚ್ಛತೆ ಕೆಲಸವನ್ನು ಮಾಡುವ ಎರಡು ಮೂರು ಕುಟುಂಬಗಳು ಇರುತ್ತವೆ. ಅವರ ಸ್ಥಿತಿಗತಿಗಳು ಹೇಗಿದೆ? ಅವರಿಗೆ ಸಂಬಳ ಕೊಡುತ್ತಿದ್ದೇವೆಯೇ? ಗ್ರಾಮ ಪಂಚಾಯಿತಿಗಳಿಗೆ ಹಣಕಾಸಿನ ಸಂಪನ್ಮೂಲ ಇದೆಯೇ? ಪಾಪ, ಕೊಟ್ಟಷ್ಟಕ್ಕೆ ಯಾವ ರೀತಿ worst than beggars ಎಂದು ಹೇಳಬಹುದು. ಒಬ್ಬ ಭಿಕ್ಷುಕ ಬೇಡಿಯಾದರೂ ಒಂದಷ್ಟು ಹಣವನ್ನು ಸಂಪಾದಿಸುತ್ತಾನೆ. ಅವರ ಕಥೆ ಹಳ್ಳಿಯಲ್ಲಿ ಹೇಳುವ ಹಾಗೆ ಇಲ್ಲ. ಸರಿಯಾಗಿ ಅವರಿಗೆ ಅನುಕೂಲತೆಯಿಲ್ಲ, ಒಂದು ಮನೆ ಇಲ್ಲ, ಕುಡಿಯುವ ನೀರಿಗಾಗಿ ಹತ್ತಿರ ಸೇರಿಸುವುದಿಲ್ಲ, ಅವರು ಹೇಗೆ ಬದುಕಬೇಕು? ಸಂಬಳವಿಲ್ಲ, ಕಾಡಿ ಬೇಡಿ ಹೇಗೋ ಸಾಯಂಕಾಲ ಆದರೆ ಜೀವನ ದೂಡುವಂಥದ್ದು ಇದೆ. ಇದರ-ಬಗ್ಗೆ ಯೋಚಿಸಬೇಕು. ತಮ್ಮ ಜೊತೆ ಮಾತನಾಡಲು ಸಫಾಯಿ ಕರ್ಮಾಚಾರಿ ಮುಖಂಡರು ಬೆಂಗಳೂರಿಗೆ ಬಂದಿದ್ದರು. ಮೈಸೂರಿನವರು ಸಹಾ ಬಂದಿದ್ದರು. ಪೆದ್ದಣ್ಣ, ಮಾರಣ್ಣನವರು ಬಂದಿದ್ದರು. ಸಧ್ಯ ಈಗಲಾದರೂ ಅವರಿಗೆ ವಿಮೋಚನೆ ಸಿಗುತ್ತದೆ, ಮೋಕ್ಷ ಸಿಗುತ್ತದೆ ಎಂದು ನಾನು ಸಂತೋಷಪಟ್ಟೆ. ಅವರ ಸ್ಥಿತಿಗತಿ ಹೇಗಿದೆ? ಯಾವ ರೀತಿ exploit ಮಾಡುತ್ತಿದ್ದಾರೆ? ಅವರ ಕೆಲಸ ಏನು ನಡೆಯುತ್ತಿದೆ? ಅದರಲ್ಲೂ ಇವತ್ತು ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿದ್ದಾರೆ. ತಾವು ಹೇಳಬೇಕು, ಯಾವುದೇ ಗ್ರಾಮ ಪಂಚಾಯಿತಿಯಲ್ಲಿ ತಲತಲಾಂತರದಲ್ಲಿ ಕೆಲಸ ಮಾಡಿಕೊಂಡು ಬರುತ್ತಿರುವವರಿಗೆ ಇವತ್ತಿಗೂ ಕೂಡ ಮನೆ ಇಲ್ಲ. ಅವರಿಗೆ ಸಂಬಳವಿಲ್ಲ. ಅವರ ಜೀವನಕ್ಕೆ ದಾರಿಯಿಲ್ಲ ಅವರಿಗೆ ಏನು ಮಾಡಬೇಕೆಂದು ಇದ್ದೀರಿ? ಎಲ್ಲಿಯವರೆಗೆ ಅವರು ಈ ರೀತಿ ಮುಂದುವರೆಯಬೇಕು? ಎಲ್ಲಾ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್‌ಗಳಲ್ಲಿ ಯಾವ್ಯಾವ ಗ್ರಾಮಗಳಲ್ಲಿ ಈ ರೀತಿ ಸ್ವಚ್ಛತೆ ಮಾಡುವ ಪೌರ ಕಾರ್ಮಿಕರು ಇದ್ದಾರೋ ಅವರಿಗೆ ಕಡ್ಡಾಯವಾಗಿ ಜನತಾ ಮನೆಗಳನ್ನು ಕೊಡಬೇಕೆಂದು ಹೇಳಿ. ಜನತಾ ಮನೆಗಳನ್ನು ನಿಮ್ಮ ಆಡಳಿತದಲ್ಲಿ ಕೊಡಿ. ಅದು ಗ್ರಾಮೀಣಾಭಿವ್ರದ್ಧಿ ಸಚಿವರ ಕರ್ತವ್ಯ. ಯಾವ್ಯಾವ ಗ್ರಾಮಗಳಲ್ಲಿ ಈ ರೀತಿ ಸ್ವಚ್ಛತಾ ಕೆಲಸವನ್ನು ಮಾಡುವವರಿದ್ದಾರೆ ಅವರಿಗೆ ವಿಶೇಷ ಮನೆಗಳನ್ನು ನಾನು ಬಿಡುಗಡೆ ಮಾಡಿದ್ದೇನೆಂದು ಸಚಿವರು ಘೋಷಣೆ ಮಾಡಲಿ. ಆ ಕೆಲಸವನ್ನು ಮಾಡಿ ನಿಮಗೆ ಶಕ್ತಿ ಇದೆ. ಒಳ್ಳೆಯ ಕೆಲಸವನ್ನು ಮಾಡಲು ನಿಮಗೆ ಅವಕಾಶವಿದೆ. ಎಲ್ಲಿ ಸೈಟ್ ಇಲ್ಲವೋ ಅಲ್ಲಿ ತಕ್ಷಣ ಸೈಟ್ ಕೊಡಲು ಏನು ತೊಂದರೆ? ಒಂದು ಗ್ರಾಮದಲ್ಲಿ ಎಷ್ಟಿರುತ್ತಾರೆ ಒಂದೆರೆಡು ಮೂರು ಇರಬಹುದು. ಸೈಟ್ ಕೊಡಿ ನೆಮ್ಮದಿಯಿಂದ ಇರುತ್ತಾರೆ. ಸಂಬಳ ಕೊಡಿ ಸಾಕು, ಇನ್ನೇನೂ ಬೇಡ. ಕೇಂದ್ರ ಸರ್ಕಾರ ಮತ್ತು

ರಾಜ್ಯ ಸರ್ಕಾರ Price Indexಗೆ ತಕ್ಕಂತೆ organized sector ಗೆ ಹಣವನ್ನು ಕೊಡುತ್ತದೆ. ಬೇಕಾದ್ದು ಕೊಡುತ್ತದೆ. ಬೇಕಾದಷ್ಟು allowances, ಬೇಕಾದಷ್ಟು salary, LTC ಗಳು, festival advance ಎಲ್ಲವನ್ನೂ ಕೊಡುತ್ತೇವೆ. ಮತ್ತೆ, ಅವರ ಕಥೆ ಏನಾಗಬೇಕು? ಅವರನ್ನು ಯಾರು ನೋಡುತ್ತಾರೆ? ಸಫಾಯಿ ಕರ್ಮಚಾರಿಗಳ ಬಗ್ಗೆ ಮಾತನಾಡಬೇಕು. ಅವರಿಗೆ ಯಾವ ರೀತಿಯ ಅನುಕೂಲತೆ ಕೊಡಬೇಕೆಂದು ತಾವು ಯೋಜನೆ ಮಾಡಬೇಕು. ಅವರೂ ಸಹ ಮನುಷ್ಯರಾಗಿ ಬಾಳುವ ರೀತಿಯಲ್ಲಿ ನಾವು ನೋಡಬೇಕಾಗಿದೆ. ಕನಿಷ್ಠವಾದ ಸೌಲಭ್ಯವನ್ನು, ಅನುಕೂಲತೆಯನ್ನು ತಾವು ಕೊಡಬೇಕಾಗಿದೆ. ನಾನು ಕಳೆದ ಸಾಲಿನ ಬಜೆಟ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ನಾನು ಕೂಡ ಪರಿಶಿಷ್ಟ ಜಾತಿಗೆ ಸೇರಿದವನು, ಪರಿಶಿಷ್ಟ ಜಾತಿ ನೂರೊಂದಿದೆ. It is not a community. ಪರಿಶಿಷ್ಟ ಜಾತಿ, It is a list of castes, ಈ ತರಹದವರು ಬಹಳ ಇದರಲ್ಲಿ ಸೇರಿದ್ದಾರೆ. ಅದು ಜಾತಿಗಳ ಪಟ್ಟಿ, ಅದರಲ್ಲಿ ಯಾರಿದ್ದಾರೆ, lion share ಯಾರು ತೆಗೆದುಕೊಳ್ಳುತ್ತಾರೆ ಅದು ಬೇರೆಯ ವಿಷಯ. ಒಂದು ಕಡೆಯಲ್ಲ, you take Backward Class. ಅಲ್ಲೂ ಕೂಡ ಆಗುತ್ತಿರುವುದು ಅದೆ. ಪರಿಶಿಷ್ಟ ಜಾತಿಯಲ್ಲಿ ಕೆಳಗಡೆ ಇರುವಂಥವರಿಗೆ ಏನಾದರೂ ನಿಗಮ ಮಾಡಿದರೆ, ನಾನು ಮೊದಲು ಸಫಾಯಿ ಕರ್ಮಚಾರಿಗಳಿಗೆ ಒಂದು ಪ್ರತ್ಯೇಕವಾದ ನಿಗಮ ಮಾಡಿ ಎಂದು ಹೇಳುತ್ತೇನೆ. ನಿಗಮ ಮಾಡಿದರೆ ಅವರಿಗೆ ಸಾರ್ಥಕವಾಗುತ್ತದೆ. ಯಾವ ರೀತಿ ಅವರ ನೆರವಿಗೆ ಹೋಗಬಹುದು, ಅವರ ಕಷ್ಟ ಸುಖಗಳನ್ನು ಹೇಗೆ ಕಾಣಬಹುದು, ಅವರ ಆರ್ಥಿಕ ಜೀವನ ಯಾವ ರೀತಿ ಹಸನಾಗಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಹೇಗೆ ಇವತ್ತು Category 1-A, 2-A ನಲ್ಲಿ ಬಾಯಿ ಬಡಿದುಕೊಳ್ಳುತ್ತಿದ್ದಾರೋ 2-A ಯಲ್ಲಿರುವವರು 1-A category ಗೆ ಹೋಗಬೇಕು, ನಮಗೆ ಆಗುವುದಿಲ್ಲ, ಇಲ್ಲಿ ನೂರೆಂಟು ಜಾತಿಗಳಿವೆ, ನಾವು ಅತ್ಯಂತ ಹಿಂದುಳಿದವರು, ಹಿಂದುಳಿವರಲ್ಲೇ ಬಹಳ ಮುಂದುವರೆದವರ ಜೊತೆ ನಾವು compete ಮಾಡಲು ಸಾಧ್ಯವಾಗುವುದಿಲ್ಲವೆಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಪರಿಶಿಷ್ಟ ಜಾತಿಯವರಿಗೂ ಅದೇ ಸ್ಥಿತಿ ಇದೆ. ನಾನು Parliament ನಲ್ಲೂ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ನಾನು ಇಲ್ಲಿ ಮಾತನಾಡುವಂಥದ್ದಲ್ಲ. Reservation ಬಂದು 50 ವರ್ಷಗಳಾಯಿತು. 1950 ರಲ್ಲಿ ಸಂವಿಧಾನ ಬಂದಾಗ reservation ಅನ್ನು ಒಪ್ಪಿಕೊಂಡಥದ್ದು. ಈಗ ಬಹಳಷ್ಟು ಬದಲಾವಣೆಯಾಗಿವೆ. who are SCs? who are STs? ಇವತ್ತು ಮಂಡಲ್ ಕಮಿಷನ್ ಬಂದಿದೆ. who are OBCs? ಯಾರಿಗೆ ಮಾಡಿದ್ದೇವೇನು?

Reservation ಮಾಡಿರುವ ಉದ್ದೇಶವೆಂದರೆ, deserving communities ಗೆ, deserving peopleಗೆ ಹೋಗಬೇಕೆಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ಆ broad-based concept ಅನ್ನು dilute ಮಾಡಿ ಯಾರು ಬೇಕಾದರೂ ಎಲ್ಲಿಗೆ ಬೇಕಾದರೂ ಸೇರಿಕೊಳ್ಳಬಹುದು. ಯಾರು ಬೇಕಾದರೂ ಎಸ್.ಸಿ., ಯಾರು ಬೇಕಾದರೂ ಎಸ್.ಟಿ. ಆಗಬಹುದು. ರಾಜ್ಯ ಸರ್ಕಾರ ತನ್ನ ರಾಜಕೀಯ ತೆವಲಿನಿಂದ recommend ಮಾಡುವುದು, ಕೇಂದ್ರ ಸರ್ಕಾರದ ಮೇಲೆ ಲಾಬಿ ಮಾಡುವುದು, ಸೇರಿಸಿಕೊಳ್ಳತಕ್ಕಂಥದ್ದು. No grouse against any other community. ಇವತ್ತು ಎಲ್ಲರಿಗೂ ನ್ಯಾಯ ಸಿಗಬೇಕು. ಸಿಗುವಂಥದ್ದು ಇದೆ. ನಮ್ಮ ತಂದೆ ಕಾಲದಲ್ಲಿ reservation ಎಂದರೆ, ಮೊದಲು ಅಸಹ್ಯ ಪಡುತ್ತಿದ್ದರು. ನಾನು ಶಾಲೆಗೆ ಹೋಗುವಾಗ, ಪರಿಶಿಷ್ಟ ಜಾತಿಯವನು scholarship ತೆಗೆದುಕೊಳ್ಳುತ್ತಿದ್ದಾನೆಂದರೆ ಅಸಹ್ಯ ಪಡುತ್ತಿದ್ದರು. ಏನಪ್ಪಾ ಅವನು ಕೈಲಾದವನು, ಇವತ್ತು scholarshipಗೆ ಹೋಗುತ್ತಿದ್ದಾನೆ, ಏನು ಕೇಳುತ್ತಿದ್ದಾನೆ, Begging Bowl, ಭಿಕ್ಷಾಟನೆ ಮಾಡುತ್ತಿದ್ದಾನೆ ಎಂದು ಹೇಳುತ್ತಿದ್ದರು. ಇವತ್ತು ಎಲ್ಲರಿಗೂ Begging Bowl ಬೇಕಾಗಿದೆ. ಇವತ್ತು reservation ಯಾರಿಗೆ ಬೇಡ? ಮಂಡಲ್ ಕಮಿಷನ್ Parliament ನಲ್ಲಿದೆ, ಮಂಡಲ್ ಕಮಿಷನ್‌ನಲ್ಲಿ ಬಂದಥದ್ದು reservation ಬೇಡ ಎಂದೋ ಅಥವಾ ನಮಗೂ ಕೊಡಿ ಎಂದು ಮಾಡಿದರೋ? Creamy layer ನವರು, upper community ಯವರೂ ಕೂಡ ನಮಗೂ ಕೊಡಿ, ನಮಗೂ ಬಡತನವಿದೆ, ನಮಗೂ reservation ಬೇಕು ಎಂದು ಹೇಳಿದರು. 'Scrap reservation' ಎಂದು ಯಾರು ಹೇಳಲಿಲ್ಲ. Reservation ಎಲ್ಲರಿಗೂ ಬೇಕು ಎಂದು ಅದರ ಮಹತ್ವ ಇವತ್ತು ಎಲ್ಲರಿಗೂ ಗೊತ್ತಾಗುತ್ತಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, backward class ನಲ್ಲಿ ಎರಡ್ಮೂರು decision ತೆಗೆದುಕೊಂಡು ಹೋಗಿರುವುದು, it is not good. It is not a good gign and healthy development. ಬಹಳ ತಪ್ಪು ಮಾಡುತ್ತಿದ್ದೀರಿ. ಸಮಾಜದಲ್ಲಿ ನಿರಂತರವಾಗಿ ತುಳಿತಕ್ಕೊಳಗಾದವರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಆಗ ಇದು ನಿಜವಾದ ಬಜೆಟ್ ಎಂದು ಚಿಂತನೆ ಮಾಡಬಹುದು. ಸಮಾಜದಲ್ಲಿ ನಿರಂತರವಾಗಿ ತುಳಿತಕ್ಕೊಳಗಾದವರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಮುಖ್ಯಮಂತ್ರಿಗಳೆ, ತಮ್ಮ ಆಡಳಿತದಲ್ಲಿ ಇವತ್ತು ಶಾಸ್ವತವಾದ ಹಿಂದುಳಿದವರ್ಗಗಳ ಕಮೀಷನ್ ಇಲ್ಲವೆ? ದ್ವಾರಕನಾಥ್ ಅದರ ಅಧ್ಯಕ್ಷರಲ್ಲವೇ? ಅದನ್ನು ಒಂದು ಕಡೆ ಇಟ್ಟು, ಇಡೀ ಭಾರತ ದೇಶದಲ್ಲಿ ಎಲ್ಲೂ ನಡೆದಿಲ್ಲ, 18 ಕೋಟಿ ರೂಪಾಯಿ ಕೊಟ್ಟು ಜಾತಿವಾರು ಜನಗಣತಿ

ನಡೆಯುತ್ತಿದೆ. ಅದರಲ್ಲಿ ಯಾವ್ಯಾವ ಜಾತಿ ಜನಸಂಖ್ಯೆ ಎಷ್ಟಿದೆ ಎನ್ನುವ ಮಾಹಿತಿ ಸಿಗುತ್ತದೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಎಷ್ಟು? ಅವರ ಸಾಮಾಜಿಕ ಸ್ಥಿತಿಗತಿ ನಿಮ್ಮ ಮುಂದೆ ಬರುತ್ತಿದೆ. ನೀವೇ ಮಾಡಿರುವಂಥದ್ದು. ಅದಕ್ಕೂ ಮೊದಲು ನೀವು ತೆಗೆದುಕೊಳ್ಳುವಂಥದ್ದು ಏನು ಆತುರವಿತ್ತು? ಯಾವುದೋ ಒಂದು ಸಮುದಾಯದ ಒತ್ತಡಕ್ಕೆ ಮಣಿದು ಅವರೆಲ್ಲರನ್ನೂ 3ಎ ಗೆ 2ಎ ಗೆ ಸೇರಿಸುತ್ತೀರೋ, 2ಎ ನಿಂದ 1 ಕ್ಕೆ ಸೇರಿಸಲು ಹೋಗುತ್ತೀರೊ ಗೊತ್ತಿಲ್ಲ. ಮೊನ್ನೆ ಬೆಂಗಳೂರಿನಲ್ಲಿ ಒಂದು ಸಮಾವೇಶ. ಅಲ್ಲಿ ಹೇಳುವುದು ನಮಗೆ ನಿಜವಾಗಿಯೂ ಆಸೆ ಇದೆ. ಅಲ್ಲಿ ಹೇಳಿದ ತಕ್ಷಣ ನಮ್ಮ ಕೆಲಸವಾಗುವುದಿಲ್ಲ. ಸರ್ಕಾರದವರು ತಾವು ಕಾಯಬಹುದು. ತಾವು ತುಂಬ ಒಳ್ಳೆಯ decision ಮಾಡಬಹುದು. ಯಾರ ಹಂಗು ಇಲ್ಲದೆ ತಮ್ಮ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಮಾಡಬಹುದು. ಅದನ್ನು speed up ಮಾಡಿಸಿ. ಹಿಂದುಳಿದ ವರ್ಗದ ಶಾಶ್ವತ ಆಯೋಗವೇನಿದೆ, ಧ್ವಾರಕನಾಥ್ ಅಧ್ಯಕ್ಷರೇನಾಗಿದ್ದಾರೆ, ಹಣ ಕೊಟ್ಟಿದ್ದೀರಿ, ಎಲ್ಲವನ್ನು ಕೊಟ್ಟಿದ್ದೀರಿ, ಖಾಸಗಿಯವರ ಕೈಯಲ್ಲಿ ಬೇಡ, ಸರ್ಕಾರದ ಕೈಯಲ್ಲಿ ಮಾಡಿಸುವುದಕ್ಕೆ ನೀವು ಒಪ್ಪಿಕೊಂಡಿರಿ. ಅವರ ಕೈಯಲ್ಲೇ ಜನಗಣತಿ ಮಾಡುವುದಕ್ಕೆ ಒಪ್ಪಿಕೊಂಡು ಎಲ್ಲಾ ಆಗಿದೆಯಲ್ಲಾ? ಈಗ ಏಕೆ ಆತುರವಾಗಿ decision ತೆಗೆದುಕೊಳ್ಳುತ್ತೀರಾ? ಇದನ್ನು ಎಲ್ಲರೂ ಕೇಳುತ್ತಾರೆ. ಇದು pandora's Box opan ಮಾಡಿದ ಹಾಗೆ. ಬೇಡಿ. ನೀವೇ ಬಂದು ಇಲ್ಲಿ ಸಿಕ್ಕಿಹಾಕಿಕೊಳ್ಳುತ್ತೀರಾ? ನಿಜವಾದಂಥ ಸಾಮಾಜಿಕ ನ್ಯಾಯ ಬೇಕು ಎಂದರೆ ಆ ವರದಿಯನ್ನು ಬೇಗ ತೆಗೆದುಕೊಳ್ಳಿ. ಅನಂತರ ಯಾರ್ಯಾರನ್ನು ಎಲ್ಲೆಲ್ಲಿಗೆ ಕೊಡಬೇಕು ಎಂಬುದನ್ನು ಮಾಡಿ. 1ಏ ಯಾರು? 2ಏ ಯಾರು? 3ಬಿ ಯಾರು? 3ಬಿ ಯಾರು ಎಲ್ಲೆಲ್ಲಿ ಕೇಳುತ್ತಿದ್ದಾರೆ? ಯಾಕೆ ಕೇಳುತ್ತಿದ್ದಾರೆ? 2ಏ ನಲ್ಲಿ ಇನ್ನೂ ಅಸಹಾಯಕರಾಗಿರುವ ಅತ್ಯಂತ ಹಿಂದುಳಿದ ವರ್ಗ ಇದೆ. ಅವರನ್ನು ಬೇರೆಯವರ ಕಪಿಮುಷ್ಠಿಯಲ್ಲಿ ಅಲ್ಲಿರುವ ಹಿಂದುಳಿದವರ ಕೈಯಿಂದ ಬಿಡಿಸಿ ಬೇರೆ ಎಲ್ಲಿ ಕೊಡಬೇಕೋ ಕೊಡೋಣ. ಅದೆಲ್ಲವನ್ನೂ ಮಾಡಬಹುದು. ಆದ್ದರಿಂದ ಇಲ್ಲಿ ಈಗ ಏನು ಮಾಡಲು ಹೊರಟಿದ್ದೀರಿ, ಅದನ್ನು ದಯಮಾಡಿ ಮಾಡಲು ಹೋಗಬೇಡಿ. ಹಿಂದುಳಿದ ವರ್ಗದವರಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ.

ಶಿಕ್ಷಣದ ಬಗ್ಗೆ ಹೇಳುವುದಾದರೆ, ಪ್ರಾಥಮಿಕ ಹಂತದಲ್ಲಿ ಎಲ್ಲಾ ವ್ಯವಸ್ಥೆಗಳನ್ನು ತುಂಬಾ ಚೆನ್ನಾಗಿ ಮಾಡಿದ್ದಾರೆ. ಅದು, ಹೈಸ್ಕೂಲ್ ಮಕ್ಕಳಿಗೆ ಸೈಕಲ್ ಕೊಡುವಂಥದ್ದು, ಉಚಿತ ಪಠ್ಯಪುಸ್ತಕಗಳನ್ನು ಕೊಡುವಂಥದ್ದು, ಸಮವಸ್ತ್ರ ಕೊಡುವಂಥದ್ದು, mid-day meals ಕೊಡತಕ್ಕದ್ದು, ಆ ಶಾಲೆಗಳನ್ನು ಯಾವ ರೀತಿ

ಅಭಿವೃದ್ಧಿ ಮಾಡಬೇಕು, ನಮ್ಮಂಥವರೆಲ್ಲ ಯಾವ ಶಾಲೆಗಳಲ್ಲಿ ಓದಿದೆವು, ಆ ಶಾಲೆಗಳನ್ನು ಯಾವ ರೀತಿ ಬೆಳವಣಿಗೆ ಮಾಡಬೇಕು, ಯಾವ ರೀತಿಯಲ್ಲಿ ಸಹಕರಿಸಬೇಕು ಎಂಬ ಬಗ್ಗೆ ತುಂಬಾ ಚೆನ್ನಾಗಿ ಕಾರ್ಯಕ್ರಮಗಳು ಆಗುತ್ತಿದೆ. ಸರ್ವಶಿಕ್ಷಣ ಅಭಿಯಾನದಲ್ಲಿ ಶಾಲಾ ಕೊಠಡಿಗಳು ಸಿಗುತ್ತಿದೆ. ಆ ಸುವರ್ಣ ಯೋಜನೆಯಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮಗಳು ಆಗುತ್ತಿದೆ. ಆದರೆ, ಅದನ್ನು ಇನ್ನೂ ಹೆಚ್ಚು ಮಾಡಬಹುದು. ಮಠಗಳಿಗೆ 130 ಕೋಟಿ ಕೊಟ್ಟಿದ್ದಕ್ಕೆ ಖರ್ಗೆಯವರು ನಮ್ಮ ವಿರೋಧವಿಲ್ಲವೆಂದು ಹೇಳಿದರು. ದೊಡ್ಡ ದೊಡ್ಡ ಮಠದವರು ನಿಮ್ಮನ್ನು ಕೇಳಿದ್ದಾರೆಯೇ? ಅವರು ಸಂತೃಪ್ತಿಯಾಗಿದ್ದಾರೆ. ಅವರು ಯಾರೂ ಬಂದು ಕೇಳಿಲ್ಲ. ಸುರೇಶ್‌ಕುಮಾರ್‌ರವರೆ, ನಿಮಗೆ ಯಾರಾದರೂ ತ್ರಿಮತಸ್ಥರು ಅರ್ಜಿ ಕೊಟ್ಟಿದ್ದಾರೆಯೇ? ಉಡುಪಿಯವರು, ಶೃಂಗೇರಿಯವರು, ಪರಕಾಲ ಮಠದವರು ನೆಮ್ಮದಿಯಿಂದ ಇದ್ದಾರೆ. ಅವರು ಯಾರೂ ಸಹ ನಿಮ್ಮಿಂದ ಕೇಳುತ್ತಿಲ್ಲ. ನಾವು exploit ಮಾಡುತ್ತಿರುವುದು ಯಾರನ್ನು? ಈ ಸಣ್ಣ ಸಣ್ಣ ಮಠಗಳಿಗೆ, ಜಾತಿಯವರಿಗೆ ನೋಡು ನಿನ್ನ ಜಾತಿಗೆ ಇಷ್ಟು ಕೊಟ್ಟಿದ್ದೇನೆ, ಅವರ ಜಾತಿಗೆ ಅಷ್ಟು ಕೊಟ್ಟಿದ್ದೇನೆಂದು ಮೂಗಿಗೆ ತುಪ್ಪ ಸವರುವ ಕೆಲಸವಾಗುತ್ತಿದೆ. ಆ ಜಾತಿಗೆ ಮಠಗಳು ಪ್ರಶ್ನೆಯಲ್ಲ, ಅವರ ಸರ್ವಾಂಗೀಣ ಅಭಿವೃದ್ಧಿ ಬೆಳವಣಿಗೆ ಅವರಿಗೆ ಶಿಕ್ಷಣವನ್ನು ಕೊಡತಕ್ಕದ್ದು, ಆರ್ಥಿಕವಾಗಿ ಅವರ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಯೋಚನೆಗಳನ್ನು ಮಾಡಬೇಕು. ಅವರನ್ನು ರಾಷ್ಟ್ರದ ಮುಖ್ಯ ವಾಹಿನಿಗೆ ತರತಕ್ಕ ಪ್ರಯತ್ನಗಳು ಇವತ್ತಿನ ದಿವಸ ಆಗಬೇಕು. ಇದು niver-ending business ಎಂದು ನಮ್ಮ ಶಾಸಕಾಂಗ ಪಕ್ಷದ ನಾಯಕರು ಹೇಳಿದರು. ನೀವು ಎಷ್ಟು ಕೊಟ್ಟರೂ ಅವರನ್ನು ತೃಪ್ತಿಪಡಿಸಲು ಆಗುವುದಿಲ್ಲ. ಆದರೆ, ನಾವು ಏನಾದರೂ ಮತನಡಲು ಹೋದರೆ ನೀವು ಬಹಳ ಬೇಗ ಅದನ್ನು ದೊಡ್ಡದು ಮಾಡುತ್ತೀರಿ. ಆದ್ದರಿಂದ ನಿಮಗೆ ಎಲ್ಲೋ ಒಂದು ಕಡೆ ನಿಮ್ಮ ಆ ಹಳೆಯ religious sentiments ಹೋಗುತ್ತಿಲ್ಲವೆಂದು ನಾನು ಹೇಳಿದ್ದು. ಆ ಒಂದು ಧಾರ್ಮಿಕ ಭಾವನೆಗಳು, ಜಾತಿಯ ಭಾವನೆಗಳನ್ನು ಕೆರಳಿಸತಕ್ಕ ರೀತಿಯಲ್ಲಿ ಅದರ ಮೂಲಕ ವೋಟನ್ನು ತೆಗೆದುಕೊಳ್ಳುತ್ತೇವೆ. ಆದರೆ, ಅದರಲ್ಲಿ ನೀವು ಒಂದು ಹೆಜ್ಜೆ ಮುಂದೆ ಹೋಗಿದ್ದೀರಿ. ಅದನ್ನು ಬಿಟ್ಟು ನಾವು socio-economic programmes ಕೊಟ್ಟು ಅದನ್ನು ತೆಗೆದುಕೊಳ್ಳಬಹುದು ಎಂಬುದನ್ನು ತೋರಿಸಬೇಕು ಎಂಬುದು ನಿಮಗೆ ಇದೆಯೇ? ಆದ್ದರಿಂದ ನೀವು ಅದರಲ್ಲಿ ಅವರನ್ನು ತೃಪ್ತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಿ, ಈ ಕಡೆ ಹೆಚ್ಚು ಒತ್ತನ್ನು ಕೊಡಿ. ಆ ಹಣವನ್ನು ಈ ರೀತಿ ಸುವರ್ಣಗ್ರಾಮ ಯೋಜನೆಗೆ ಕೊಡಬಹುದು, ತುಂಬಾ ಚೆನ್ನಾಗಿರತಕ್ಕದ್ದು. ಒಂದು ಗ್ರಾಮವನ್ನು ತೆಗೆದುಕೊಂಡರೆ

ಸಂಪೂರ್ಣವಾಗಿ ಒಳ್ಳೆಯ ರಸ್ತೆಗಳನ್ನು, ಕಾಂಕ್ರೀಟ್ ರಸ್ತೆಗಳನ್ನು, ಒಳಚರಂಡಿ, ಸಮುದಾಯಭವನ ಮಾಡಬಹುದು. ಸಂಬಂಧಪಟ್ಟ ಸಚಿವರು ಸ್ವಲ್ಪ alert ವಹಿಸಿ ಅಲ್ಲಿಗೆ ಹೋಗಿ ದುರುಪಯೋಗವಾಗದಂತೆ ಪರಿಶೀಲನೆ ಮಾಡಿದರೆ ಇದು ನಿಜವಾಗಿಯೂ ತುಂಬಾ ಚೆನ್ನಾಗಿ ಆಗುತ್ತದೆ. ಈ ರೀತಿ ಒಂದೊಂದು ಕ್ಷೇತ್ರಕ್ಕೆ 5 ಕೊಡುವುದರಲ್ಲಿ 10 ಕೊಡಬಹುದು. ತುಂಬಾ ಚೆನ್ನಾಗಿ ಆಗುತ್ತದೆ. ನೀವು ಒಂದು target ಇಟ್ಟುಕೊಂಡರೆ ಅದನ್ನು ಮುಟ್ಟಲು ಸಹ ಸಾಧ್ಯವಾಗುತ್ತದೆ. ಮಠಗಳಿಗೆ ಕೊಡುವುದರ ಬಗ್ಗೆ ನಾನು ಮಾತನಾಡಲು ಹೋದರೆ ಕಷ್ಟವಾಗುತ್ತದೆ. ಮಠಗಳು ಎಂದರೆ ಇವತ್ತು ಬಹಳ ಯೋಚನೆಯಿಂದ ಮಾಡಬೇಕಾಗುತ್ತದೆ. ನಾನು ಅಂಬೇಡ್ಕರ್‌ರವರ ಬಗ್ಗೆ ಬಂದಾಗ ಅದನ್ನೇ ಹೇಳಬೇಕೆಂದಿದ್ದೆ. ಮಾನ್ಯ ಪೂಜ್ಯ ಶಿವಕುಮಾರಸ್ವಾಮಿಗಳ ಹೆಸರನ್ನು ತುಮಕೂರು universityಗೆ ಇಟ್ಟಿದ್ದೀರಿ. ಬಹಳ ಸಂತೋಷ. ಇನ್ನು ಕೆಲವು ಹೊಸ universityಗಳನ್ನು ಮಾಡುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಪ್ರಸ್ತಾಪ ಮಾಡುತ್ತಾ ತುಂಬಾ ಒಳ್ಳೆಯ ಮಾತುಗಳನ್ನು ಹೇಳಿದರು. ಪ್ರಾಥಮಿಕ ಶಾಲೆಯ ಶಿಕ್ಷಣವನ್ನು ಮುಗಿಸಿದಾಗ Higher Education ನಲ್ಲಿ ಕೇವಲ 60 ಪರ್ಸೆಂಟ್ ಬರುತ್ತಿದ್ದಾರೆ. ಆದರೆ, ನಮ್ಮ ಗುರಿ ಇರತಕ್ಕದ್ದು 75 ಪರ್ಸೆಂಟ್ ಬರಬೇಕು ಎನ್ನತಕ್ಕದ್ದು ನಿಮ್ಮ ಬಜೆಟ್‌ನಲ್ಲಿ ಇರುವಂಥದ್ದು. ಅದನ್ನು ಮಾಡತಕ್ಕ ರೀತಿಯಲ್ಲಿ ತುಂಬಾ ಚೆನ್ನಾಗಿದೆ. ಅದನ್ನು ಯೋಚನೆ ಮಾಡಬೇಕಾದದ್ದೇ. Higher Education ನಲ್ಲಿ ಬಂದಷ್ಟು ಒಳ್ಳೆಯದಾಗುತ್ತದೆ. Higher Education ಸಚಿವರಾದ ಅರವಿಂದ ಲಿಂಬಾವಳಿಯವರು ಇಲ್ಲಿ ಇಲ್ಲ. ಜೆ.ಡಿ.(ಎಸ್) ನಲ್ಲಿ ಮಾನ್ಯ ರೇವಣ್ಣನವರು ಪಿ.ಡಬ್ಲ್ಯೂ.ಡಿ ಸಚಿವರಾಗಿದ್ದಾಗ 60–70 ಲಕ್ಷವನ್ನು ಕೊಟ್ಟಿದ್ದಾರೆ. ಮಾನ್ಯ ಬಾಲಕೃಷ್ಣರವರೆ ನಿಮ್ಮ ಮಾಗಡಿಯಲ್ಲೂ ಕೊಟ್ಟಿರಬಹುದು. ಆದರೆ, ಅದು ಹಾಗೆಯೇ ಇದೆ. ಏಕೆಂದರೆ ಅಲ್ಲಿ ಸ್ಥಳಗಳು ಇಲ್ಲ. ನಂಜನಗೂಡಿಗೆ 60 ಲಕ್ಷ ಕೊಟ್ಟಿದ್ದಾರೆ. ಹುಲ್ಲಹಳ್ಳಿ ನನ್ನ ಕ್ಷೇತ್ರ, 70 ಲಕ್ಷ ಕೊಟ್ಟಿದ್ದಾರೆ. ಆದರೆ ನಿವೇಶನವೇ ಇಲ್ಲ. ಅದನ್ನು pursue ಮಾಡುವುದಿಲ್ಲ. ನಾನು ನಂಜನಗೂಡಿನಲ್ಲಿ First Grade College, Junior College ಜೊತೆಯಲ್ಲಿ ನಡೆಯುತ್ತಿದೆ. ಅದೂ ಪಾಳಿ ಪದ್ಧತಿಯಲ್ಲಿ. ಬೆಳಗ್ಗೆ ಪಿ.ಯು.ಸಿ. ನಡೆದರೆ ಮಧ್ಯಾಹ್ನ ಡಿಗ್ರಿ ಕಾಲೇಜು ನಡೆಯುತ್ತಿದೆ. ನೀವು ಕೊಟ್ಟಿರುವ ಹಣ ಇದೆ. ಅಲ್ಲಿ ಸೆರಿಕಲ್ಚರ್‌ನವರು ಆರೂವರೆ ಎಕರೆ ನಿವೇಶನ ಕೊಟ್ಟಿದ್ದಾರೆ. ನಾನು ಅವರ ಬೆನ್ನುಹತ್ತಿ ಸೆರಿಕಲ್ಚರ್ ಇಲಾಖೆಯಿಂದ ಬಂದು ಅದರ ಕಾರ್ಯದರ್ಶಿಯವರಿಂದ ಆಗಿ ಶಿಕ್ಷಣ ಇಲಾಖೆ ಬಂದು ಕನ್‌ಸೆಂಟ್ ತೆಗೆದುಕೊಳ್ಳಬೇಕು. ಪಿ.ಡಬ್ಲ್ಯೂ.ಡಿ. ಯವರ 60 ಲಕ್ಷಕ್ಕೆ ನೀವೂ ಒಂದು ಸ್ವಲ್ಪ

ಸೇರಿಸಿದ್ದರೆ first class collegeನ್ನು ಅವರಿಗೆ ಮಾಡಿಕೊಡಬಹುದು. ಹುಲ್ಲಹಳ್ಳಿ ವಿಚಾರದಲ್ಲಿ ಈಗ ತಾನೆ ಅಲ್ಲಿನ ತಹಶೀಲ್ದಾರರ ಜೊತೆ ಮಾತನಾಡಿದೆ. ಅವರು ಅಲ್ಲಿ ಒಂದು ಖರಾಬು ಭೂಮಿ ಇದೆ, ಕೊಡೋಣವೆಂದು ಹೇಳಿದರು. ಅಲ್ಲಿ 70 ಲಕ್ಷ ಇದೆ. ಅಲ್ಲಿ ಕಟ್ಟಡವೇ ಇಇಲ ಕೊಠಡಿಯಲ್ಲಿ ಡಿಗ್ರಿ ಕ್ಲಾಸ್‌ಗೆ ಬರುವ ವಿದ್ಯಾರ್ಥಿಯನ್ನು ಕೂರಿಸಿದರೆ ನಾನು ಡಿಗ್ರಿ ಓದುತ್ತಿದ್ದೇನೆ ಎಂಬ ಭಾವನೆ ಅವನಲ್ಲಿ ಬರಬೇಕಲ್ಲವೇ? ಆದರೆ, ಅಲ್ಲಿ ಅದು ಇಲ್ಲ. ನಂಜನಗೂಡಿನಲ್ಲಿ ಹೆಣ್ಣುಮಕ್ಕಳ ಸರ್ಕಾರಿ ಪದವಿ ಪೂರ್ವ ಕಾಲೇಜು ಇದೆ, ಒಟ್ಟು ಮೂರು ಸಾವಿರ ಮಕ್ಕಳಿದ್ದು ಅದರಲ್ಲಿ ಒಂದೂವರೆ ಸಾವಿರ ಮಕ್ಕಳು ಪಿ.ಯು.ಸಿ.ಗೆ ಬರುತ್ತಾರೆ, ಒಂದೂವರೆ ಸಾವಿರ ಹೈಸ್ಕೂಲ್‌ನಲ್ಲಿ ಇದ್ದಾರೆ. ಆದರೆ, ರೂಮ್‌ಗಳು ಇಲ್ಲ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ನಂಜನಗೂಡಿಗೆ ಬಂದಿದ್ದಾಗ ಅವರ ಗಮನವನ್ನು ಸೆಳೆದೆ, ಪ್ರಾಥಮಿಕ ಶಿಕ್ಷಣ ಸಚಿವರಿಗೆ ಹೇಳಿ ಆ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಒಂದು ಜೂನಿಯರ್ ಕಾಲೇಜನ್ನು ಕೊಡಿ, ಇಲ್ಲಿ ನಾನು ನಮ್ಮ ಎಂ.ಎಲ್.ಎ., ಎಂ.ಎಲ್.ಸಿ. ಫಂಡ್ಸ್‌ನಿಂದ ಏನೇನು ಬರುತ್ತದೆ, ಎಲ್ಲರೂ ಸೇರಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇಲ್ಲಿಗೆ ಏನೇನು ಕೊಠಡಿಗಳು ಬೇಕೋ ಅವೆಲ್ಲವನ್ನೂ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಇವತ್ತು ಶಿಕ್ಷಣದ ಬಗ್ಗೆ ಮಾತನಾಡಿದ್ದಾರೆ. ಲಿಂಬಾವಳಿಯವರ ಕಾರ್ಯಕ್ರಮವೇನು? ನಿಜ, ನಾನೂ ಭಯೋತ್ಪಾದನೆ ವಿರೋಧಿ ಆಂದೋಲನದಲ್ಲಿ ಭಾಗವಹಿಸಿದ್ದೇನೆ. ಇವತ್ತು ನಾವೇ ಅದರ ವಾರಸುದಾರರು ಎಂದು ಏಕೆ ಮಾಡುತ್ತಿದ್ದೇವೆ? ಇದು ಇಂದು ಜಾಗತಿಕ ಸಮಸ್ಯೆಯಾಗಿದೆ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್ ಅಂಥ ದೇಶಗಳು ಇದರಿಂದ ನಡುಗಿಹೋಗಿದೆ. ಇದು ಜಾಗತಿಕ ಸಮಸ್ಯೆಯಾಗಿದೆ. ತಮಗೆ ಗೊತ್ತಿದೆ ಅಮೆರಿಕದಲ್ಲಿ World Trade Centre ಮೇಲೆ attack ಆದಮೇಲೆ ಇವತ್ತಿನವರೆಗೆ ಒಂದು ಘಟನೆ ಅಲ್ಲಿ ನಡೆದಿಲ್ಲ. ಏಕೆ ನಡೆದಿಲ್ಲ? ಇಡೀ ಅಮೆರಿಕ ಒಂದಾಗಿದೆ, ಕರಿಯರಿರಬಹುದು, ಬಿಳಿಯರಿರಬಹುದು, ಜಗತ್ತಿನ ಯಾವುದೇ ಭಾಗದಿಂದ ನಾಗರಿಕರಾಗಿರಬಹುದು. ನಾವೆಲ್ಲಾ ಅಮೆರಿಕದವರು ಒಂದು, ಯಾವುದೇ ಕಾರಣಕ್ಕೆ ಇನ್ನು ಮುಂದೆ ಈ ರೀತಿಯ ಭಯೋತ್ಪಾದಕತೆಗೆ ಅವಕಾಶ ಕೊಡುವುದಿಲ್ಲವೆಂದು ಒಂದಾಗಿದ್ದಾರೆ. ಅಲ್ಲಿ ಆ ಘಟನೆಯಾದಮೇಲೆ ಮತ್ತೆ ಏನಾದರೂ ಘಟನೆಯಾಗಿದೆಯೇ? ಸಾಧ್ಯವೇ ಇಲ್ಲ. ಅವರ ಮನಸ್ಸಿನಲ್ಲಿ ಇಡೀ ಅಮೆರಿಕ ಒಂದು ಎಂಬ ಭಾವನೆ ಬಂದಿದೆ. ಆದರೆ, ನಮ್ಮಲ್ಲಿ ನಮ್ಮ ದೇಶ ಒಂದು ಎಂಬ ಭಾವನೆ ಬಂದಿದೆಯೇ? ನೀವು ವಿದ್ಯಾರ್ಥಿಗಳನ್ನು ಭಯೋತ್ಪಾದಕತೆಯ ವಿರೋಧ ಆಂದೋಲನದಲ್ಲಿ ಕರೆತಂದಿರುವುದು ಒಂದು ರೀತಿ ಹೈಜಾಕ್ ಮಾಡಿದಂತೆ. ಅದು ಹೈಜಾಕ್ ಮಾಡಿದಂಥ crowd. ನಮ್ಮ ಯಡಿಯೂರಪ್ಪನವರು

ಭಾಷಣ ಮಾಡುತ್ತಾರೆಂದರೆ ಅವರೆಲ್ಲ ಸ್ಕೂಲ್‌ನವರು ಬಸ್ ಮಾಡಿ ಎಲ್ಲರನ್ನೂ ಕರೆದುಕೊಂಡು ಬರುತ್ತಾರೆ. ಅವರೂ ಸಹ ಐಸ್‌ಕ್ರೀಮ್, ಕಡ್ಲೆಕಾಯಿ ತಿನ್ನುತ್ತಾ ನಿಂತಿರುತ್ತಾರೆ. ನೀವು ಭಯೋತ್ಪಾದಕತೆ ಬಗ್ಗೆ ಭಾಷಣ ಮಾಡುತ್ತೀರಿ. national integrity, unity ಎಲ್ಲದರ ಬಗ್ಗೆ ಹೇಳುತ್ತಿರುತ್ತೀರಿ. ನಾಳೆ ಅಡ್ವಾಣಿಯವರು ಬಂದ ದಿನವೂ ಅಷ್ಟೆ, ನೀವು ಎರಡೂವರೆ ಲಕ್ಷ ಜನರನ್ನು ಸೇರಿಸುತ್ತೇವೆಂದರೆ, ಯಾರೂ ಕೂಡ ಭಯೋತ್ಪಾದನೆ ವಿರೋಧ ಅಭಿಯಾನದಲ್ಲಿ ಭಾಗವಹಿಸುತ್ತಿದ್ದೇವೆ, ರಾಷ್ಟ್ರ ಬಹಳ ಸಂಕಷ್ಟದಲ್ಲಿದೆ, ಅಪಘಾತಕ್ಕೆ ಈಡಾಗುತ್ತಿದೆ, ನಾವೆಲ್ಲ ಸೆಟೆದು ನಿಂತುಕೊಳ್ಳಬೇಕು ಎಂದು ಬರುವುದಿಲ್ಲ. ಬರೀ ವಿದ್ಯಾರ್ಥಿಗಳದ್ದು ಒಂದೇ ಅಲ್ಲ, ಇಡೀ ಭಾರತ ದೇಶದ ಎಲ್ಲಾ ಜನಸಮೂಹದವರು ನಿಂತುಕೊಳ್ಳಬೇಕು. ಇದು ಎಲ್ಲರ ಸವಾಲು ಸಹ ಆಗಿರತಕ್ಕದ್ದು. ಆ ರೀತಿಯಾದ ವಾತಾವರಣ ಇದೆಯೇ? ಖಂಡಿತಾ ಇಲ್ಲ. ಏಕೆಂದರೆ ಕೇಂದ್ರದಲ್ಲಿ ಮಂತ್ರಿಯಾಗಿ ನನಗೆ ಅನುಭವವಿದೆ. ನಾನು golbilisationನ ಹಿನ್ನೆಲೆಯನ್ನು ಏಕೆ ಇಷ್ಟು ಹೆದರುತ್ತೇವೆಂದು ಯೋಚನೆ ಮಾಡಿದೆ. ಜಾಗತೀಕರಣ ಪ್ರಶ್ನೆ ಬಂದಾಗ, ಉದಾರೀಕರಣ, ಖಾಸಗೀಕರಣ ಪ್ರಶ್ನೆ ಬಂದಾಗ, disinvestment ಪ್ರಶ್ನೆ ಬಂದಾಗ, foreign direct investment ಪ್ರಶ್ನೆ ಬಂದಾಗ ಹೆದರಿ ನಡುಗಿಹೋಗಿಬಿಡುತ್ತೇವೆ. ನಮಗೆ ಆತ್ಮ ವಿಶ್ವಾಸವೆ ಇಲ್ಲ. ನಾನು ಅಮೆರಿಕಕ್ಕೆ ಹೋದಾಗ ನಾನು consumer Affairs Minister ಆಗಿದ್ದೆ. ಅಲ್ಲಿ ಚೈನೀಸ್ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗೆ ಹೋಗಿದ್ದೆ, ಏಕೆ ಅಮೆರಿಕದ ಜನರು ಚೈನಾ ದೇಶದ ವಸ್ತುಗಳಿಗೆ ಮುಗಿಬೀಳುತ್ತಾರಲ್ಲಾ ಎಂದು. ಒಂದು ಡಾಲರ್ ಕೊಟ್ಟರೆ ಅವರ ಮನೆಗೆ ಬೇಕಾದಷ್ಟು ವಸ್ತುಗಳು ಸಿಗುತ್ತದೆ. ಹೇಗೆ ಅವನಿಗೆ ಒಂದು ಡಾಲರ್‌ಗೆ ಎಷ್ಟೊಂದು workout ಆಗುತ್ತದೆ ಎಂದು ನೋಡಿದೆ. ಅವನಿಗೆ ಯಾವ ರೀತಿಯಾಗಿ ಲಾಭವಾಗುತ್ತದೆ, ಯಾವ ರೀತಿ ಇದನ್ನು ನಡೆಸುತ್ತಿದ್ದಾರೆ ಎಂಬುದನ್ನು ನೋಡಿದೆ. ಚೈನಾ ದೇಶದಲ್ಲಿ ಎಲ್ಲರ ಕೈಯಲ್ಲೂ ಕೆಲಸವಿದೆ. ಯಾರೇ ಆಗಿದ್ದರೂ ಅಲ್ಲಿ ಕೆಲಸ ಸಿಗುತ್ತದೆ. ಅವನಿಗೆ ಕೆಲಸ ಸಿಕ್ಕಿದಾಗ, ಸಿಕ್ಕಿದರಲ್ಲಿ ಅವನಿಗೆ ಆದಾಯ ಬರುತ್ತದೆ. ನಮಗೆ cost of production and quality ಎರಡು ಮಾತ್ರ ಬಹಳ important. ಇದರಲ್ಲಿ ಅವರು ಸವಾಲಾಗಿ ತೆಗೆದುಕೊಂಡು ಮಾಡಿದ್ದಾರೆ. ನಮ್ಮಲ್ಲಿ ಅದು ಏಕೆ ಆಗುವುದಿಲ್ಲ? ನಾನು ಯೋಚನೆ ಮಾಡಿದೆ. ನಾನೇ ನಿಂತು ನನ್ನ ಜನಾಂಗದ ಹಿನ್ನೆಲೆಯಲ್ಲಿ ಯೋಚನೆ ಮಾಡಿದೆ. ಏಕೆ ಆಗುವುದಿಲ್ಲವೆಂದರೆ, ಈ ರೀತಿ ಯಾರು ನತದೃಷ್ಟರಿದ್ದಾರೋ, ಸಮಾಜದಲ್ಲಿ ತಲೆತಲಾಂತರಗಳಿಂದ ತುಳಿಸಿಕೊಂಡು ಇನ್ನೂ ಈ ಸಮಾಜದಲ್ಲಿ 40 ಕೋಟಿಯಷ್ಟು India ದೇಶದಲ್ಲಿ ಇದ್ದಾರೋ ಅವರು ಯಾರೂ ಕೂಡ ಈ ದೇಶದ ಉತ್ಪಾದನೆಗೆ ತೊಡಗಿಸಿಕೊಳ್ಳುತ್ತಿಲ್ಲ. ಇಲ್ಲಿ

ಭಾರತೀಯರು ಯೋಚನೆಯೇ ಮಾಡಿಲ್ಲ. ಅವರೆಲ್ಲ ಕೂಲಿ ನಾಲಿ ಮಾಡಿ ಭಿಕಾರಿಗಳಾಗಿ ಬಿದ್ದಿದ್ದಾರೆ, ಹೊಟ್ಟೆ ತುಂಬಿದರೆ ಸಾಕು ಎಂದು. ಅವರನ್ನು ಈ ದೇಶದ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದೀರೋ? ನೀವು ಹೇಗೆ ಜಾಗತೀಕರಣದಲ್ಲಿ ಸ್ಪರ್ಧೆ ಮಾಡುವುದಕ್ಕೆ ಸಾಧ್ಯ ಆಗುತ್ತದೆ? ಇಲ್ಲ. ಇದು ಬುರುಡೆ ಮಾತುಗಳಿಂದ ಆಗುವುದಿಲ್ಲ. ಭಯೋತ್ಪಾದಕತೆಯೂ ಅಷ್ಟೇ ಆಗಿರುವುದು. ನೀವು ಭಯೋತ್ಪಾದಕತೆ ವಿರೋಧಿ ಆಂದೋಲನಕ್ಕೆ ಯಾವ ದಿನವನ್ನು ಆಯ್ಕೆ ಮಾಡಿಕೊಂಡಿರಿ? ಸಿ.ಟಿ.ರವಿಯವರೆ, ನೀವು ಆಯ್ಕೆ ಮಾಡಿಕೊಂಡಿರುವಂಥದ್ದು, ಸ್ವಾಮಿ ವಿವೇಕಾನಂದರ ಜನ್ಮ ದಿನವನ್ನು. 'ಯುವಕರಿಗೆ ಏಳಿ ಎದ್ದೇಳಿ ಗುರಿ ಮುಟ್ಟುವವರೆಗೆ ನಿಲ್ಲದಿರಿ' ಎನ್ನುವ ಕರೆಯನ್ನು ಕೊಟ್ಟಿದ್ದೀರಿ. ಆದರೆ, ತಾವು ಸ್ವಾಮಿ ವಿವೇಕಾನಂದರ ಮನಸ್ಸಿನ ನಿಜವಾದ ಚಿಂತನೆಯನ್ನು suppress ಮಾಡುತ್ತಿದ್ದೀರಿ. ಅದು ನಿಮಗೆ ಅನ್ನಿಸುವುದಿಲ್ಲವೇ? ಸ್ವಾಮಿ ವಿವೇಕಾನಂದರ ಮನಸ್ಸಿನಲ್ಲಿ ಇದ್ದದ್ದನ್ನು ನೀವು ಯಾವ ರೀತಿ project ಮಾಡುತ್ತೀರಿ? ಸ್ವಾಮಿ ವಿವೇಕಾನಂದರು ನಿಜವಾದ ಹಿಂದೂ ಸನ್ಯಾಸಿ ಎನ್ನತಕ್ಕ ರೀತಿಯಲ್ಲಿ ಮಾಡುತ್ತಿದ್ದೀರಿ. ನಿಮ್ಮ ಗುರಿ ಇರತಕ್ಕದ್ದೇ ಅದು. It is not so. ಅವರ ಚಿಂತನೆಗಳನ್ನು ನೋಡಿ. ಭಾರತೀಯ ಸಂಸ್ಕೃತಿ ಏನಿದೆ, ಇದು ಇವತ್ತು ಕೂಡ stagnant water ಆಗಿ ನಿಂತಿದೆ. ಕ್ರಿಯಾಶೀಲ ಇಲ್ಲ, ಚಲನಶೀಲ ಇಲ್ಲ. ಈ ಭಾರತೀಯ ಸಂಸ್ಕೃತಿಗೆ ಕ್ರಿಯಾಶೀಲ ಮತ್ತು ಚಲನಶೀಲತೆ ತಂದುಕೊಟ್ಟವರು ಮತ್ತು ಸಮಾಜದ ಕಣ್ಣು ತೆರೆಸಿದವರು ವಿವೇಕಾನಂದರು. ನಿಮ್ಮ ಉಪನಿಷತ್‌ಗಳಲ್ಲಿ ಇರುವುದು ಮಾತ್ರವಲ್ಲ, ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ ಇವೆಲ್ಲದರ ಜೊತೆ ಜೊತೆಯಲ್ಲಿಯೇ ಇವತ್ತು ಏನು ಮಾತನಾಡುತ್ತಿದ್ದೇವೆ, ದರಿದ್ರ ನಾರಾಯಣ ದೇವೋಭವ ಎಂದು ಹೇಳಿದವರು ವಿವೇಕಾನಂದರು. ಬಹುಶಃ, ನೀವು ಆ ವಾಣಿಯನ್ನು ತಿಳಿಸಬೇಕಾಗಿದೆ. ಸಮಾಜದಲ್ಲಿ ತುಳಿತಕ್ಕೊಳಗಾಗಿರುವವರನ್ನು ಮೇಲಕ್ಕೆ ತರಲು ಅವರು ದನಿ ಏರಿಸಿದರು. ಅವರು ನಿಜವಾದ ಹಿಂದೂ ಸನ್ಯಾಸಿ ಎಂದು ಒಂದು ಕಡೆ ಹೇಳುತ್ತೀರಿ. ಇಲ್ಲ. ಹಿಂದೂ ಧರ್ಮವೆಂದರೆ, it is a collection of Castes ಎಂದು ಇತ್ತು. ಇವತ್ತಿಗೂ ಇದೆ. ಹಿಂದೂ ಧರ್ಮಕ್ಕೆ, ಧರ್ಮದ ಕಲ್ಪನೆ ಇದೆಯೇ? ಜಾತಿಗಳ ಸಂಗ್ರಹ. ಕೆಳ ಜಾತಿಯವನನ್ನು ಮೇಲ್ಜಾತಿಯವನು ಮಾನಸಿಕವಾಗಿ ನನಗೆ ಸರಿಸಮಾನವೆಂದು ಒಪ್ಪಿಕೊಳ್ಳಲು ತಯಾರಿಲ್ಲ. ಇದನ್ನು ತೆಗೆದುಹಾಕಬೇಕೆಂದು ಪ್ರಯತ್ನಿಸಿದವರು ವಿವೇಕಾನಂದರು. ಈ ಪರಿಸ್ಥಿತಿ ಇವತ್ತಿಗೂ ಇದೆ. ನನ್ನಂತಹವರ ಮನಸ್ಸಿನಲ್ಲೂ ಇರುತ್ತದೆ. ನನ್ನಂತಹವರು ಎಂದರೆ, ನಮ್ಮ ಜನರಿದ್ದರೂ ನನಗಿಂತಲೂ ಕೆಳಗಡೆ ಇರುವ ಪೌರ ಕಾರ್ಮಿಕ ನನಗೆ ಸರಿಸಮಾನನಲ್ಲ. ನೂರಾರು ವರ್ಷಗಳ

ವೈದಿಕ ಸಂಸ್ಕೃತಿಯ ಪ್ರಭಾವ ನನ್ನ ಮನಸ್ಸಿನ ಮೇಲಾಗಿದೆ. ಯಾವುದೇ ಮೇಲ್ವರ್ಗದವನು ತನಗಿಂತಲೂ ಕೆಳಜಾತಿಯವನನ್ನು ಸಮಾನನೆಂದು ಒಪ್ಪಿಕೊಳ್ಳುವುದಕ್ಕೆ ಇವತ್ತೂ ಮಾನಸಿಕವಾಗಿ ತಯಾರಿಲ್ಲ. ಇದನ್ನು ಬದಲಾವಣೆ ಮಾಡಿದವರು ಸ್ವಾಮಿ ವಿವೇಕಾನಂದರು. ಭಾರತೀಯ ಸಂಸ್ಕೃತಿ ಕ್ರಿಯಾಶೀಲವಾಗಬೇಕು, ಚಲನಶೀಲವಾಗಬೇಕು, ಇದು ಎಲ್ಲರ ಬದುಕನ್ನು ಹಸನುಗೊಳಿಸುವ ಸಂಸ್ಕೃತಿಯಾಗಬೇಕೆಂದು ಚಿಕಾಗೋದಲ್ಲಿ ಯೋಜನೆ ಮಾಡಿದರು. ಅವರು ಚಿಕಾಗೋಗೆ ಹೋಗಿ air-conditioned roomನಲ್ಲಿ ಇರಬಹುದಿತ್ತು. ಕಿಟಾರನೆ ಕಿರುಚಿ ಹೊರಗೆ ಬಂದು ಏಕೆ ಮಲಗಿಕೊಳ್ಳುತ್ತಾರೆ? ಎಂತಹ ಪಾಪ ಮಾಡಿದೆ? ಕೊಲ್ಕತ್ತಾ ನಗರದಲ್ಲಿ ನೋಡಿದರು. ಹೊಟ್ಟೆಗೆ ಹಿಟ್ಟಿಲ್ಲದೆ, ಗಾರ್ಬೇಜ್‌ನಲ್ಲಿ ಬಿಸಾಡಿರುವ ಅನ್ನ ತಿನ್ನುವ, ತಲೆಗೆ ಎಣ್ಣೆ ಇಲ್ಲದೆ, ಬಟ್ಟೆ ಇಲ್ಲದಿರುವ ಒಂದು ಸಮಾಜದಿಂದ ಬಂದಿರುವವನು, ನಾನು ಇಲ್ಲಿ ಮಲಗುವುದಕ್ಕೆ ಎಂತಹ ಪಾಪ ಮಾಡಿದೆ ಎಂದು ಹೊರಗಡೆ ಮಲಗುತ್ತಾರೆ। ಅವರ ಜೀವನದ ಗುರಿ ಇದ್ದದ್ದೇ ಇದು. ಅದನ್ನು ನೀವು ಯಾವ ಕಡೆ ತರುತ್ತಿದ್ದೀರಿ?

ನಾನು ಭಯೋತ್ಪಾದನಾ ವಿರೋಧಿ ಅಭಿಯಾನದಲ್ಲಿ ಭಾಗವಹಿಸಿದ್ದೆ. ವಿದ್ಯಾರ್ಥಿಗಳಿಗೆ ಏನು ಹೇಳಿದೆನೆಂದರೆ, ನೀವು ಇದರ ಬಗ್ಗೆ ಯೋಚಿಸಬೇಕಾಗಿದೆ. We cannot bluff them. ಯಾರೋ ಬಂದು, ನಾನು ಕೇಸರೀಕರಣ ಮಾಡುತ್ತೇನೆ, ನಾನು ರಾಜಕೀಯ ಪ್ರಭಾವದಿಂದ ಎಲ್ಲಾ ನಕ್ಸಲೈಟ್‌ಗಳನ್ನು ಸುಧಾರಣೆ ಮಾಡುತ್ತೇನೆಂದರೆ, ಅದು ಸಾಧ್ಯವಿಲ್ಲ. ಯೋಚಿಸುವ ಶಕ್ತಿ ಇದೆ. ನಮ್ಮ ಭ್ರಮೆ ಅದು. ಅವರಿಗೆ ಯೋಚಿಸುವ ಶಕ್ತಿ ಇದೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಯೋಚಿಸುವ ಶಕ್ತಿ ಅವರಿಗಿದೆ. ಆದರೆ, ನಾವು ಮಾಡಬೇಕಾಗಿರುವುದೇನೆಂದರೆ, ನೀವು ನಿಜವಾದ ರಾಷ್ಟ್ರೀಯತೆಯ ಕಲ್ಪನೆ ತರಬೇಕಾಗಿದ್ದರೆ, ಅವರ ಮನಸ್ಸಿನಲ್ಲಿರುವ ಕ್ಷುಲ್ಲಕ ವಿಚಾರಗಳಾದ ಜಾತೀಯತೆ, ಅಸಮಾನತೆ, ನಮ್ಮ ಸಮಾಜವನ್ನು ಕಾಡುತ್ತಿರುವ ಇತರ ರೋಗ-ರುಜಿನಗಳ ಬಗ್ಗೆ ಅವರಲ್ಲಿ ಜಾಗೃತಿಯುಂಟು ಮಾಡುವ ಮೂಲಕ ಅವರನ್ನು ಬಡಿದೆಬ್ಬಿಸಬೇಕು. ಇದು ಸ್ವಾಮಿ ವಿವೇಕಾನಂದರ ನಿಜವಾದ ಕನಸಾಗಿತ್ತು. ನೀವು ಇದರ ಪ್ರಯತ್ನ ಮಾಡದೆ, ಭಯೋತ್ಪಾದನೆ ವಿರುದ್ಧ ಇವತ್ತು ಅಭಿಯಾನ ಹೊರಡುತ್ತೇವೆಂದರೆ, ಹೇಗೆ ಸಾಧ್ಯವಾಗುತ್ತದೆ?

ನೀವು ಇನ್ನೊಂದು ಮಾಡಬಹುದು. ಏನೇ ಆದರೂ ನೀವು ಹಿಂದೂ ಧರ್ಮದ ಬಗ್ಗೆ ಬಹಳ ಕಟ್ಟಾಳುಗಳಾಗಿರುವವರು. ಹಿಂದೂ ಧರ್ಮದಲ್ಲಿರುವ ಒಂದು stigma, ಕಳಂಕ, ಅದಕ್ಕೆ ಒಂದು ಕಪ್ಪುಚುಕ್ಕೆ ಏನೆಂಬುದು ಗೊತ್ತಿದೆ. ಇಲ್ಲಿರುವ ಅಸಮಾನತೆ, ಜಾತೀಯತೆ, ಅದರಲ್ಲೂ ಅಸ್ಪೃಶ್ಯತೆ ಇದೆ. ಇವುಗಳ ಬಗ್ಗೆ ಏಕೆ ನೀವು

ಒಂದು ಆಂದೋಳನವನ್ನೂ ಮಾಡಿಲ್ಲ? ಇದೇ ರೀತಿ ಮಾಡಬಹುದಲ್ಲ? ವಿದ್ಯಾರ್ಥಿಗಳನ್ನು ಬಡಿದೆಬ್ಬಿಸಬಹುದಲ್ಲ? ವಿದ್ಯಾರ್ಥಿಗಳು ಹಿಂದೆ right or wrong ಏನೋ ತಪ್ಪು ಮಾಡಿದ್ದಾರೆ, ಅದು ನಿಮ್ಮಲ್ಲಿ ಬರಬಾರದು. "ನಾವೆಲ್ಲರೂ ಒಂದು" ಎನ್ನುವ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಮಾಡಬಹುದಿತ್ತಲ್ಲವೇ? ಬಹುಶಃ, ನೀವು ಇದರ ಪ್ರಯತ್ನವನ್ನೇ ಮಾಡಲಿಲ್ಲ. ಅವರಿಗೆ ನೀವು ಈ ರೀತಿಯಾದ ಆಲೋಚನೆಗಳನ್ನೇ ಕೊಡುತ್ತಿಲ್ಲ. ನೀವು ಎಲ್ಲೆಯೋ ಒಂದು ಕಡೆ ಭ್ರಮೆಯಲ್ಲಿದ್ದೀರಿ. ಅವರನ್ನು ಎಲ್ಲಿಯೋ ಒಂದು ಕಡೆ ಹಿಡಿದು ಕಟ್ಟಿಹಾಕಿಬಿಡುತ್ತೇವೆ, ಹಿಂದೂತ್ವದತ್ತ ಅವರನ್ನು ಆಕರ್ಷಿಸುತ್ತೇವೆ ಎನ್ನುವುದು.

ಹಿಂದೂತ್ವ ಬೇಡವೆಂದು ಹೇಳುವುದಿಲ್ಲ. ಅದನ್ನು ವಿರೋಧ ಮಾಡುವುದಲ್ಲ. ಆದರೆ, ಮನುಷ್ಯನ ಒಳಿತಿಗೆ ಒಂದು ಧರ್ಮವನ್ನು ಬಳಸಬೇಕೇ ಹೊರತು ಧರ್ಮವನ್ನು ವೈಭವೀಕರಿಸುವುದಲ್ಲ. ನಾವು ಬಹಳ ಮಾಡುತ್ತಿದ್ದೇವೆ. ದಿನೇ ದಿನೇ ಧರ್ಮದ ವೈಭವೀಕರಣವಾಗುತ್ತಿದೆಯೇ ವಿನಾ ಆ ಧರ್ಮವನ್ನು ಮನುಷ್ಯನ ಒಳಿತಿಗಾಗಿ ಬಳಸತಕ್ಕಂಥದ್ದು ಆಗಬೇಕು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ, ನೀವು ಮಾಡುತ್ತಿರುವ ಭಯೋತ್ಪಾದನಾ ವಿರೋಧಿ ಚಳವಳಿ ಹೇಗಿರಬೇಕು ಎನ್ನುವುದರ ಬಗ್ಗೆ ನಾನು ವಿದ್ಯಾರ್ಥಿಯಾಗಿದ್ದಾಗ ಜಪಾನ್‌ನಲ್ಲಿ ನಡೆದ ಘಟನೆ ನನ್ನ ಮನಸ್ಸಿಗೆ ಬಂತು. ನಾನು ಯೋಚಿಸಿದಾಗ ನನಗೆ ಆಶ್ಚರ್ಯವಾಗುತ್ತಿತ್ತು. ಎರಡನೇ ವಿಶ್ವ ಸಮರದಲ್ಲಿ ಅಮೆರಿಕದ ದಾಳಿಗೆ ತತ್ತರಿಸಿ ಹೋಗಿ, ಒಂದು ಗರಿಕೆಯನ್ನೂ ಬೆಳೆಯುವುದಕ್ಕಾಗುವುದಿಲ್ಲ ಎಂದು ಹೇಳಿದಂತಹ ಜಪಾನ್‌ನಂತಹ ಒಂದು ಪುಟ್ಟ ರಾಷ್ಟ್ರ ಕಂಡು ಇವತ್ತು ಜಗತ್ತಿನಲ್ಲಿ ಅಮೆರಿಕದವರು ಹೊಟ್ಟೆಯುರಿ ಪಡುತ್ತಾರೆ. ಅಲ್ಲಿಂದ ಆಗುವ ಉತ್ಪಾದನೆಗಳನ್ನು, ಕಾರುಗಳನ್ನು ಒಡೆದು ಹಾಕುತ್ತಾರೆ. ಆ ಮಟ್ಟಕ್ಕೆ ಇವತ್ತು ಬೆಳೆದಿರುವ, ಒಂದು ಬುದ್ಧಿಶಕ್ತಿ ಇರುವ ರಾಷ್ಟ್ರ. ಇದು ಹೇಗೆ ಸಾಧ್ಯವಾಯಿತು? ಒಂದು ಗರಿಕೆಯೂ ಬೆಳೆಯದಿರುವ ರಾಷ್ಟ್ರದಲ್ಲಿ ಇವತ್ತು ಹೇಗೆ ಅಭಿವೃದ್ಧಿ ಆಗಿದೆ? ಬಹುಶಃ, ನಾನು ಓದಿದ್ದೆ. ಅದನ್ನು ನಮ್ಮ ವಿದ್ಯಾರ್ಥಿಗಳಿಗೆ ಹೇಳಬೇಕೆನಿಸಿತ್ತು. ಆವತ್ತು ಅವರಿಗೆ ಹೇಳಿದೆ. ಜಪಾನ್ ದೇಶಕ್ಕೆ ಒಬ್ಬ ವಿದೇಶಿ ಹೋಗಿರುತ್ತಾನೆ. ಅವನಿಗೆ ಆಶ್ಚರ್ಯವಾಗುತ್ತದೆ. ಅವನು ಒಂದು ಹೈಸ್ಕೂಲಿಗೆ ಹೋಗುತ್ತಾನೆ. ಅಲ್ಲಿನ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡುತ್ತಾ, ವಿದ್ಯಾರ್ಥಿಗಳಿಗೆ ಒಂದು ಪ್ರಶ್ನೆ ಕೇಳುತ್ತಾನೆ. "ಮಕ್ಕಳೆ, ನಿಮಗೊಂದು ಪ್ರಶ್ನೆ ಕೇಳಲೆ?" ಎಂದಾಗ 'ಕೇಳಿ' ಎನ್ನುತ್ತಾರೆ. "ಜಪಾನ್ ದೇಶ ಏನಿದೆ, ಈ ಜಪಾನ್ ದೇಶದಲ್ಲಿರುವ ನೀವುಗಳೆಲ್ಲರೂ ಬೌದ್ಧ ಧರ್ಮಾವಲಂಬಿಗಳು. ಆದರೆ, ಬೌದ್ಧ ಧರ್ಮವನ್ನು ಸ್ಥಾಪಿಸಿದ ಬುದ್ಧ ಭಾರತ ದೇಶದಲ್ಲಿ ಹುಟ್ಟಿದಂತಹವನು. ಬುದ್ಧ

ಇವತ್ತು ಇಲ್ಲ, ಸತ್ತು ಹೋಗಿದ್ದಾನೆ. ಸತ್ತು ಹೋದ ಬುದ್ಧ ನಾಳೆ ಜೀವಂತವಾಗಿ ಎದ್ದು ಒಂದು ಸೈನ್ಯ ತೆಗೆದುಕೊಂಡು ಜಪಾನ್ ದೇಶದ ಮೇಲೆ ಯುದ್ಧಕ್ಕೆ ಬಂದರೆ ಏನು ಮಾಡುತ್ತೀರಿ?" ಎಂದು ಕೇಳಿದನು. ತಕ್ಷಣ ಒಬ್ಬ ವಿದ್ಯಾರ್ಥಿ ಹೇಳುತ್ತಾನೆ. "ನನ್ನ ಮೊದಲನೇ ಗುಂಡು ಬುದ್ಧನ ಎದೆಗೆ." ಎನ್ನುತ್ತಾನೆ. ವಿದೇಶಿಗನಿಗೆ ಆಶ್ಚರ್ಯವಾಗುತ್ತದೆ. "ಏನಯ್ಯಾ, ನಿನ್ನ ಧರ್ಮದ ಸಂಸ್ಥಾಪಕನಿಗೇ ಗುಂಡಿಕ್ಕುತ್ತೀಯಾ?" ಎಂದಾಗ, ವಿದ್ಯಾರ್ಥಿ, "ಹೌದು" ಎನ್ನುತ್ತಾನೆ. "ಏಕೆ?" ಎಂದು ಕೇಳಿದಾಗ, "ನನಗೆ ನನ್ನ ದೇಶ ಉಳಿದರೆ, ನನ್ನ ಧರ್ಮ ಉಳಿಯುತ್ತದೆ, ನನ್ನ ಸಂಸ್ಕೃತಿಯೂ ಉಳಿಯುತ್ತದೆ, ನನ್ನ ಕುಟುಂಬವೂ ಉಳಿಯುತ್ತದೆ." ಎನ್ನುತ್ತಾನೆ. ಆದರೆ, ಇವತ್ತಿನ ವಿದ್ಯಾರ್ಥಿಗಳನ್ನು ನೋಡಿದರೆ, ಅವರ ಮನಸ್ಸಿನಲ್ಲಿ ಈ ರೀತಿ ಇದೆಯೇ? ಆ ಧರ್ಮದ ಆಫೀಮು ಕೊಟ್ಟುಬಿಟ್ಟಿದ್ದೀರಿ. ಅವರಿಗೆ ನೀವು ಜಾತಿಯ ಆಫೀಮುಗಳನ್ನು ಕೊಟ್ಟುಬಿಟ್ಟಿದ್ದೀರಿ, ಅಲ್ಲಿಯೇ ಅವರು ಗಿರಕಿ ಹೊಡೆಯುತ್ತಿದ್ದಾರೆ. ಮತ್ತೆ ಅವರಿಂದ ಏನು ಒಳ್ಳೆಯದನ್ನು ಬಯಸೋಣ? ವಿದ್ಯಾರ್ಥಿಗಳು ಬದಲಾವಣೆಯಾಗುವ ರೀತಿಯಲ್ಲಿ ಯೋಚನೆ ಮಾಡಿಸಬೇಕು. ಇಷ್ಟೊತ್ತಿಗೆ ಈ ಕೆಲಸ ಆಗಿದ್ದರೆ ಇವತ್ತು ಇಡೀ ದೇಶ ಎದ್ದು ನಿಲ್ಲುತ್ತಿತ್ತು. ಇಡೀ ದೇಶದ ಜನರೆಲ್ಲರೂ ಎದ್ದು ನಿಲ್ಲುತ್ತಿದ್ದರು. ಪಾಪ! ಅವರಿಗೆ ಭಾವೈಕ್ಯತೆ ಗೊತ್ತಿಲ್ಲ, ಶೇಕಡ 40ರಷ್ಟು ಜನರಿಗೆ ಇನ್ನೂ ದೇಶದಲ್ಲಿ ಏನಾಗುತ್ತಿದೆ ಎಂಬುದೂ ಗೊತ್ತಿಲ್ಲ. ದುಡಿಮೆ ಮಾಡಿ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುವವರು ಇದ್ದಾರೆ. ಆದರೆ, ಈ ತರಹದ ಯೋಜನೆಗಳನ್ನು ನೀವು ವಿದ್ಯಾರ್ಥಿಗಳಿಗೆ, ಅರವಿಂದ ಲಿಂಬಾವಳಿಯವರು ಪಾಪ, ಏನೋ, ಯಾವುದೋ ಒಂದು ಭ್ರಮೆಯಲ್ಲಿ ಅದನ್ನು ಮಾಡಿದ್ದಾರೆಂಬುದನ್ನು ಹೇಳುತ್ತೇನೆ.

ಒಂದು ಮಾತನ್ನು ಹೇಳಬೇಕೆಂದರೆ, ನನಗೆ ಬಹಳ ಸಂತೋಷವಾಯಿತು. ನಮ್ಮ ಮುಖ್ಯಮಂತ್ರಿಗಳು ತುಮಕೂರಿಗೆ ಹೋಗಿ ಡಾ: ಶಿವಕುಮಾರ ಸ್ವಾಮೀಜಿಯವರಿಗೆ 100 ವರ್ಷಗಳು ತುಂಬಿ, 101 ವರ್ಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಅವರಿಗೆ ತಾವು ಭಕ್ತಿಪೂರ್ವಕವಾಗಿ ನಮನಗಳನ್ನು ಸಲ್ಲಿಸಿದ್ದೀರಿ. ಅದಾದ ನಂತರ, ಅವರ ಹೆಸರನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ನಾಮಕಾರಣ ಮಾಡಬೇಕೆಂದು ನಿರ್ಧರಿಸಿ, ನಾಮಕಾರಣ ಮಾಡಿದ್ದೀರಿ. ಈ ಕುರಿತು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಕೈಗೊಂಡಿರುವುದು ಬಹಳ ಸಂತೋಷವಾಗಿದೆ ಮತ್ತು ಬಜೆಟ್‌ನಲ್ಲೂ ಆ ವಿಷಯವನ್ನು ಪ್ರಸ್ತಾಪಿಸಿದ್ದೀರಿ. ಅಮತಹ ಒಬ್ಬ ಆಧ್ಯಾತ್ಮಿಕ, ಧಾರ್ಮಿಕ ಮುಖಂಡರು ಸದಾ ನಮ್ಮ ಕಣ್ಣಿನಲ್ಲಿರಬೇಕು. ಶಿಕ್ಷಣದಲ್ಲಿ ಕ್ರಾಂತಿ ಮಾಡಿ, ಬಾರತದ ಭೂಪಟದಲ್ಲಿ ಅವರು ತುಮಕೂರಿಗೆ ಒಂದು ಸ್ಥಾನ ಕಲ್ಪಿಸಿರುವುದಕ್ಕೆ ಅವರೆಲ್ಲರೂ

ಪ್ರಾತಃಸ್ಮರಣೀಯರು. ಸಮಾಜದ ಬಗ್ಗೆ ಯೋಚಿಸುವ ಅಂತಹವರನ್ನು ನೆನೆಯುತ್ತೇವೆ ಎಂಬುದನ್ನು ತಿಳಿಸಬಯಸುತ್ತೇನೆ.

ಅದೇ ರೀತಿ ಇನ್ನೊಂದು ವಿಚಾರ ಬಹಳ ದಿವಸಗಳಿಂದಲೂ ಮನಸ್ಸಿನಲ್ಲಿದೆ. ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಡಾ: ಅಂಬೇಡ್ಕರ್‌ರವರ ಹೆಸರಿಡಬೇಕೆಂದು ಯೋಚಿಸಿ ಬಹಳ ದಿವಸಗಳಾಯಿತು. ಇನ್ನೂ ಏಕೆ ಅವರ ಹೆಸರಿಟ್ಟಿಲ್ಲ? ಅಂಬೇಡ್ಕರ್‌ರವರು ಸಾಧಾರಣ ವ್ಯಕ್ತಿಯೇ? ಶಿಕ್ಷಣವೆಂದರೆ, ಥಟ್ಟನೆ ಬರುವುದು ಅಂಬೇಡ್ಕರ್ ಹೆಸರು. 118 ವರ್ಷಗಳ ಹಿಂದೆ ಒಬ್ಬ ಅಸ್ಪೃಶ್ಯನಾಗಿ ಹುಟ್ಟಿ, ಅಸ್ಪೃಶ್ಯರ ನೆರಳು ಕೂಡ ಮೇಲ್ವರ್ಗದವರ ಮೇಲೆ ಬೀಳದಿರುವ ಸಂದರ್ಭದಲ್ಲಿ, ಅಸ್ಪೃಶ್ಯರನ್ನು ಶಾಲೆಯೊಳಗೆ ಸೇರಿಸದಿರುವ ಸಂದರ್ಭದಲ್ಲಿ ಶಿಕ್ಷಣ ಪಡೆದು ಹೋರಾಟ ಮಾಡಿದಂತಹವರು. ಇಡೀ ಜಗತ್ತಿನಲ್ಲಿ ಅತ್ಯಂತ ಹೆಚ್ಚು ವಿದ್ಯಾವಂತರಾದವರು, ಬುದ್ಧಿವಂತರಾದವರು, ಈ ದೇಶಕ್ಕೆ ಸಂವಿಧಾನ ಬರೆದುಕೊಡುವ ಶಕ್ತಿಯನ್ನು ರೂಪಿಸಿಕೊಂಡ ಅಂಬೇಡ್ಕರ್ ಶಿಕ್ಷಣಕ್ಕೆ ಆದ್ಯತೆ ಕೊಟ್ಟರು. ನಾನಾಗಲಿ, ಖರ್ಗೆಯವರಾಗಲಿ, ನಾವೆಲ್ಲರೂ ಬಂದಿರುವಂಥಾದ್ದು we are not asset owning community. ಪರಮೇಶ್ವರ್ ಇರಬಹುದು, ಗೋವಿಂದ ಕಾರಜೋಳ್ ಇರಬಹುದು, ಇವತ್ತು ಬಂದಿರುವ ನಮ್ಮೆಲ್ಲರಿಗೂ ಶಿಕ್ಷಣವೇ ಆಸ್ತಿಯಾಗಿತ್ತು. ನಮ್ಮನ್ನು ನೀವು ಎಲ್ಲಿ ಬಿಟ್ಟಿದ್ದೀರಿ? ಬೇರೆ ಕಡೆ ನಿಮಗೆ ಅವಕಾಶಗಳೇ ಇಲ್ಲವಲ್ಲ? ನಿಮ್ಮ ಬಜೆಟ್‌ನಲ್ಲಿ ನಾವು ಎಲ್ಲಿ ಹೋಗಿ ಲಾಭ ಪಡೆಯುವುದು? ಯಾವ casteಗಳಲ್ಲಿ ನಮಗೆ exemption ಸಿಗುತ್ತದೆ? ಯಾವ ಹೋಟೇಲುಗಳನ್ನು ನಡೆಸುವುದಕ್ಕಾಗುತ್ತದೆ? ಇವತ್ತಿಗೂ ಯಾವ ಬಿಸಿನೆಸ್‌ಗೆ ಹೋಗುತ್ತೇವೆ? ನಮ್ಮನ್ನು ಬಿಟ್ಟಿದ್ದೀರೇನು? ನಮ್ಮ ಪಾಲಿಗೆ ಏನಾದರೂ ಸಿಗುತ್ತದೆಂದರೆ, ಅದು ಶಿಕ್ಷಣ ಮಾತ್ರ. ಅದರ ಮೂಲ ಯಾರು? ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರು. ಅವರು ನಮಗೆ ಕೊಟ್ಟಿರುವ ಕರೆ "ನೀವು ಶಿಕ್ಷಣ ಪಡೆಯಿರಿ. ನಾವು asset owning community ಅಲ್ಲ, ನಮಗೆ ಇದು ಶಿಕ್ಷಣದಲ್ಲಿ ನಮಗೊಂದು ದೊಡ್ಡ ಅವಕಾಶ." ಎನ್ನತಕ್ಕಂಥ ರೀತಿಯಲ್ಲಿ ಅವರು ಕೊಟ್ಟಿರುವುದರಿಂದ ನಾವು ಪಡೆದಿದ್ದೇವೆ. ಅಂತಹ ವ್ಯಕ್ತಿಯ ಹೆಸರನ್ನು ನೀವು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಇಟ್ಟಲ್ಲಿ ನಿಜಕ್ಕೂ ಕೂಡ ಅದು ಎದ್ದು ಕಾಣುತ್ತದೆಂಬುದನ್ನು ಹೇಳಬಯಸುತ್ತೇನೆ. ಶೋಷಿತರಿಗೆ ಅದು ಎದ್ದು ಕಾಣುತ್ತದೆ. ಅಂಬೇಡ್ಕರ್‌ರವರು ಶಿಕ್ಷಣ ಪಡೆದಿದ್ದರಿಂದ ಇವತ್ತು ಜಗತ್ತಿನಲ್ಲಿಯೇ ಅತ್ಯಂತ ವಿದ್ಯಾವಂತರಾದರು, ಬುದ್ಧಿವಂತರಾದರು, ಸಮಾಜದ ಬಗ್ಗೆ ಚಿಂತನೆ ಮಾಡುವ, ಸಾಮಾಜಿಕ ಕ್ರಾಂತಿಗಳ ಸಾಲಿನಲ್ಲಿ ಅಗ್ರಗಣ್ಯರಾಗಿ ನಿಂತಿರುವುದು ಅವರು ಪಡೆದ ಶಿಕ್ಷಣದಿಂದಾಗಿಯೇ. ನಾವು ಮಾತು ಮಾತಿಗೂ ಹೇಳುತ್ತೇವೆ, ಶಿಕ್ಷಣದ ಬಗ್ಗೆ

ಯೋಚನೆ ಮಾಡುತ್ತೇವೆ, ಹೇಳುತ್ತಿರುತ್ತೇವೆ. ಏಕೆ ಮಾಡುವುದಿಲ್ಲ? ಏಕೆ ಜಿಜ್ಞಾಸೆಯಲ್ಲಿ ಇಟ್ಟಿರುತ್ತೀರಿ? ಮಾಡಬೇಕು. ಈಗ ಹೇಗೆ ತುಮಕೂರಿಗೆ ಹೆಸರಿಟ್ಟಿದ್ದೀರೋ, ಗುಲ್ಬರ್ಗಾಕ್ಕೂ ಅದೇ ರೀತಿ ಮಾಡಿ. ಬಸವಣ್ಣನವರ ಹೆಸರನ್ನು ದಾವಣಗೆರೆ ವಿಶ್ವವಿದ್ಯಾಲಯಕ್ಕೆ ಇಡಿ. ಮಾಡಬಹುದಲ್ಲ? ಏಕೆ ಅಂಬೇಡ್ಕರ್ ಹೆಸರು ಬಂದಾಗ ಹಿಂಜರಿಯುತ್ತೇವೆ? ಕೆಲವು ಸಲ ನಾವು ನೇರವಾಗಿ ಹೇಳಿದರೆ ಕೋಪ ಬರುತ್ತದೆ. ಬಹಳ ತಪ್ಪು ತಿಳಿದುಕೊಳ್ಳುತ್ತಾರೆ. ಆಗ ನಾವು ಹೇಳುವುದಕ್ಕೆ ಹೋಗುವುದಿಲ್ಲ, ಬಾಯ್ಮುಚ್ಚಿಕೊಂಡು ಕುಳಿತುಕೊಂಡುಬಿಡುತ್ತೇವೆ. ಮಧ್ಯೆ ಇರುವ ಕಷ್ಟದಲ್ಲಿ ಇವರನ್ನೇಕೆ ಮೈಮೇಲೆ ಹಾಕಿಕೊಳ್ಳಬೇಕು? ಎಷ್ಟು ಸಾಧ್ಯವೋ ಅಷ್ಟನ್ನು ನಾವು ಯೋಚನೆ ಮಾಡಿಕೊಂಡು ಹೋಗಬೇಕೆಂಬ ರೀತಿಯಲ್ಲಿ ನಾವು ಮಾಡುತ್ತೇವೆ. ದಯಮಾಡಿ ಇದನ್ನೂ ತಾವು ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, "2009-10ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ 114 ವಸತಿ ಶಾಲೆಗಳನ್ನು **'ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ'** ಹೆಸರಿನಲ್ಲಿ ತೆರೆಯಲು ರೂ.100 ಕೋಟಿ ಅನುದಾನವನ್ನು ನಿಡಲಾಗುವುದು. ಈ ಶಾಲೆಗಳಲ್ಲಿ ಶೇ.25ರಷ್ಟು ಇತರ ವರ್ಗಗಳ ವಿದ್ಯಾರ್ಥಿನಿಯರಿಗೆ ಅವಕಾಶ ನೀಡಲಾಗುವುದು". ಇದು ಬಹಳ ಚೆನ್ನಾಗಿದೆ. ಇವತ್ತು ವಸತಿ ನಿಲಯಗಳು ಬಹಳ ಶೋಚನೀಯವಾದ ಸ್ಥಿತಿಯಲ್ಲಿವೆ. ನಾವು ಏನು ಕೊಡುತ್ತೇವೋ, ಅದು ಸರಿಯಾಗಿ ಉಪಯೋಗವಾಗಿಲ್ಲ. ಅಲ್ಲಿನ ಮಕ್ಕಳಿಗೆ ತೊಂದರೆಯಾಗುತ್ತಿರುವುದಲ್ಲದೆ, ದುರುಪಯೋಗ ವಿಪರೀತ ಆಗುತ್ತಿದೆ. ಇದಕ್ಕೆ ಸಂಬಂಧಪಟ್ಟ ಸಚಿವರು, ಆ ಇಲಾಖೆಯಲ್ಲಿರುವ ಅಧಿಕಾರಿಗಳೆಲ್ಲರೂ ಅದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಆ ತರಹ ಮಾಡಿದ್ದಂತಹವರಿಗೆ, ನೀವೇನು ಅದರ ಬಗ್ಗೆ ಕರುಣೆ ಇಟ್ಟುಕೊಳ್ಳಬೇಡಿ, ನಿಷ್ಕರುಣೆಯಿಂದ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ರೀತಿಯಲ್ಲಿ ನೀವು ಮಾಡಬೇಕು ಎನ್ನುವ ವಿಚಾರವನ್ನು ಹೇಳಬಯಸುತ್ತೇನೆ.

ಬಜೆಟ್‌ನಲ್ಲಿ ನಾನು ಸುಮ್ಮನೆ ತಮ್ಮನ್ನು ಕೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಮಾತನಾಡಿದರು. ನನಗೆ ಪರಿಶಿಷ್ಟ ಜಾತಿ, ಪಂಗಡದವರು ಮತ್ತು ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ಕೇವಲ 7.26% ಕೊಟ್ಟಿದ್ದೀರಿ ಎನ್ನುವುದು. You must have more thrust ಎನ್ನುವ ರೀತಿಯಲ್ಲಿ ನಾನು ಆ ಮಾತನ್ನು ಹೇಳಿದೆ. ತಾವು ಮುಂದೆ ಅದನ್ನು ಪರಿಗಣಿಸಬೇಕು. ನಗರಾಭಿವೃದ್ಧಿಗೆ 15.5%, ನಗರಾಭಿವೃದ್ಧಿಯಿಂದಲೂ ತೆಗೆದು, ಸುರೇಶ್‌ಕುಮಾರ್‌ರವರು ನಗರ ಪ್ರದೇಶದಲ್ಲಿ ಬರುವಂತಹವರು, ನಮ್ಮ ಕೊಳೆಗೇರಿಗಳು, ಅಲ್ಲಿರುವ ಪೌರ ಕಾರ್ಮಿಕರು, ಅವರ ಬೆಳವಣಿಗೆಗಳಿಗೂ ತಾವು ಹೆಚ್ಚಿನ ರೀತಿಯಲ್ಲಿ ಅದನ್ನು ಸದುಪಯೋಗ

ಪಡೆದುಕೊಳ್ಳುವ ರೀತಿಯಲ್ಲಿ ತಾವು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಏಕೆಂದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಎಂದರೆ, ಪೂರ್ಣ ಬಜೆಟ್‌ನಲ್ಲಿ 18% ಎನ್ನುವಂಥಾದ್ದು ಇತ್ತು, ಅದು ಆಗಿರುವುದು ಕಷ್ಟ ಸಾಧ್ಯ. ಆದರೂ ಹೆಚ್ಚಿನ ರೀತಿಯಲ್ಲಿ ಪರಿಶಿಷ್ಟರನ್ನು ಕೂಡ ರಾಷ್ಟ್ರದ ಮುಖ್ಯವಾಹಿನಿಗೆ ತರುವ ರೀತಿಯಲ್ಲಿ ತಾವು ಪ್ರಯತ್ನಗಳನ್ನು ಮಾಡಬೇಕು.

5-30 PM

ಬಹುಶಃ ಈ ಬಜೆಟ್ ಪಾಸ್ ಆದ ಮೇಲೆ ಲೋಕಸಭಾ ಚುನಾವಣೆಯಾದ ನಂತರ, ಅದರ ಫಲಿತಾಂಶ ಏನೇ ಆಗಲಿ, ಮತ್ತೆ ನಾವು ಸೇರುವವರಿದ್ದೇವೆ; ತಾವು ಶಾಸಕಾಂಗ ಪಕ್ಷದ ನಾಯಕರೂ ಸಹ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಯಾವುದೇ ಬಜೆಟ್ ಬಗ್ಗೆ ನಾವು ಅಲ್ಲಿದ್ದಾಗ ಕೂಡ ಮಾತನಾಡಿದ್ದೇವೆ, ಮಂಡಿಸಿದ್ದೇವೆ. ಈ ಕಡೆಗೆ ಬಂದಾಗಲೂ ಸಹ ನಾವು ಅದರ ಬಗ್ಗೆ ಮಾತನಾಡಿದ್ದೇವೆ. ಅದರಲ್ಲಿ ಇರತಕ್ಕಂಥ ಲೋಪದೋಷಗಳನ್ನು ಎತ್ತಿ ಹೇಳಿ, ಬಜೆಟ್ ಇಡೀ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಸಹಾಯ ಆಗಬೇಕೆನ್ನುವ ರೀತಿಯಲ್ಲಿ ನಾವು ಇವತ್ತೂ ಕೂಡ ತಮಗೆ ಸಲಹೆಗಳನ್ನು ಕೊಟ್ಟಿದ್ದೇವೆ. ಬಜೆಟ್ ಮೇಲೆ ಮಾತನಾಡುತ್ತಾ, ಅದರ ನ್ಯೂನತೆಗಳು ಮತ್ತು ಅದರ ಒಳ್ಳೆಯ ಅಂಶಗಳನ್ನೂ ಸಹ ನಾವು ಇಲ್ಲಿ ಪ್ರಸ್ತಾಪಿಸಿದ್ದೇವೆ ಎಂಬ ಮಾತನ್ನು ಹೇಳುತ್ತೇನೆ. ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ಎಲ್ಲರಿಗೂ ಕೂಡ ನಮಸ್ಕಾರಗಳನ್ನು ತಿಳಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಬಾಲಕೃಷ್ಣರವರು ಈಗ ಮಾತನಾಡಬಹುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಶಿವಲಿಂಗೇಗೌಡರು ಮಾತನಾಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು: ಆಯಿತು, ದಯವಿಟ್ಟು ತಾವು ಕೇವಲ 10 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ [ಅರಸೀಕೆರೆ]: ಸನ್ಮಾನ್ಯ ಉಪಾಧ್ಯಕ್ಷರೆ, 2009-10ನೇ ಸಾಲಿಗೆ ಮಂಡಿಸಿರತಕ್ಕಂಥ ಈ ಮುಂಗಡ ಪತ್ರದ ಮೇಲೆ ಅನೇಕ ಜನ ಅನೇಕ ಶಾಸಕರು, ನಾಯಕರುಗಳು ಈ ಸಂದರ್ಭದಲ್ಲಿ ಮಾತನಾಡಿದ್ದಾರೆ. 2008-09ನೇ ಸಾಲಿನ ಬಜೆಟ್ ಮಂಡಿಸಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲವನ್ನೂ ಸಂಪೂರ್ಣವಾಗಿ ನಾವು ಕಾರ್ಯಗತಕ್ಕೆ ತರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಅವರು ಆವತ್ತು 55,273.95 ಕೋಟಿ ರೂ.ಗಳ ಅಂದಾಜನ್ನು

ಮಂಡಿಸಿದ್ದರು. ಪುನಃ ಪರಿಷ್ಕೃತ ಅಂದಾಜಿನ ರೀತ್ಯಾ ಅದು 53,096.81 ಕೋಟಿ ರೂ.ಗಳ ಅಂದಾಜಾಗಿದೆ. ಅದರಲ್ಲಿ ಇವತ್ತು ಅವರು ಎಷ್ಟು per cent ಹಣವನ್ನು ಈ ರಾಜ್ಯದ ಸಾರ್ವಜನಿಕರ ಹಿತದೃಷ್ಟಿಯಿಂದ ಖರ್ಚು ಮಾಡಿದ್ದಾರೆ ಎನ್ನುವುದು ಬಹಳ ಪ್ರಮುಖವಾಗಿರತಕ್ಕಂಥ ವಿಚಾರ. ಕೇವಲ ಬಜೆಟ್ ಅನ್ನು ಮಂಡನೆ ಮಾಡುವುದು ಮುಖ್ಯವಲ್ಲ. ಬಜೆಟ್ ಮಂಡನೆ ಆದಾಗ, ಎಲ್ಲಾ ಜನ ಆಶಾಗೋಪುರವನ್ನು ಇಟ್ಟುಕೊಂಡು ಕೇಳುತ್ತಾರೆ. ಇಂಥಿಂಥ ಇಲಾಖೆಗಳಿಗೆ ಇಂಥಿಂಥ ಬಾಬತ್ತಿನಲ್ಲಿ ಇಷ್ಟಿಷ್ಟು ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದಾರೆ, ಪರವಾಗಿಲ್ಲ ಎನ್ನತಕ್ಕಂಥ ಭಾವನೆ ಜನರಲ್ಲಿ ಇರುತ್ತದೆ. ಆದರೆ ವರ್ಷದ ಕೊನೆಯ ಅಂತ್ಯದಲ್ಲಿ ಯಾವ ಪ್ರಮಾಣದಲ್ಲಿ ಆ ಇಲಾಖೆಗೆ ಆ ಹಣ ಹೋಗಿರುತ್ತದೆ, ಜನಗಳ ಉಪಯೋಗಕ್ಕೆ ಎಷ್ಟರಮಟ್ಟಿಗೆ ಸಹಕಾರ ಸಿಕ್ಕಿರುತ್ತದೆ ಎನ್ನತಕ್ಕಂಥ ವಿಚಾರವನ್ನೂ ಸಹ ನಾವು ಇವತ್ತು ತಿಳಿದುಕೊಳ್ಳಬೇಕಾಗಿರುತ್ತದೆ. ಬಹುಶಃ ಬಜೆಟ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅಂದಾಜಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದ ಮೇಲೆ, ಕೊನೆಗೆ ಅವರು ಸಾರ್ವಜನಿಕರಿಗೆ ಮಾಡಿರತಕ್ಕಂಥ ವೆಚ್ಚ ಏನಿದೆ, ಅದನ್ನೂ ಸಹ ಇವತ್ತು ಪಾರದರ್ಶಕತೆಗೆ ಒಳಪಡಿಸಬೇಕು. ಸಂಪೂರ್ಣವಾಗಿ ಜನತೆಯ ಮುಂದೆ ಅದೂ ಸಹ ಚರ್ಚೆಯಾಗಬೇಕು. ಏತಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅದರ ಬಗ್ಗೆ ಹೇಳುತ್ತಿದ್ದರು. ಅವರು ವಿರೋಧ ಪಕ್ಷದ ನಾಯಕರಾಗಿರುವುದರಿಂದ ಅವರಿಗೆ ಸ್ವಲ್ಪ ಅಂಕಿ ಸಂಖ್ಯೆಗಳು ಸಿಕ್ಕಿದೆ. ನನಗೆ ಸಿಗುವುದು ಕಷ್ಟ. ಕಳೆದ ಸಾರಿ ಬಜೆಟ್‌ನಲ್ಲಿ ಮೀಸಲಿರಿಸಿದ್ದ ಹಣದಲ್ಲಿ ಎಷ್ಟು ಪ್ರಮಾಣವನ್ನು ವ್ಯಯ ಮಾಡಿದ್ದಾರೆ, ಅದು ಎಷ್ಟರಮಟ್ಟಿಗೆ ಸಾರ್ವಜನಿಕವಾಗಿ ಜನಗಳಿಗೆ ಉಪಯೋಗವಾಗಿದೆ ಎಂಬುದು ಎಲ್ಲರಿಗೂ ಗೊತ್ತಾಗಬೇಕು. ಇವತ್ತು ಅವರೇ ಹೇಳಿದ ರೀತಿಯಲ್ಲಿ ಪರಿಷ್ಕೃತ ಅಂದಾಜಿನ ಪ್ರಕಾರ 26 ಸಾವಿರ ಕೋಟಿ ರೂ.ಗಳ ಅಂದಾಜಿನ ಯೋಜನೆಗೆ ಹಣವನ್ನೇನು ಖರ್ಚು ಮಾಡಬೇಕಾಗಿತ್ತು, ಅದರಲ್ಲಿ ಬಹುಶಃ ಅವರೇ ಈ ಪುಸ್ತಕದಲ್ಲಿ ಹೇಳಿರುವ ಪ್ರಕಾರ, ಇದರಲ್ಲಿ ಪ್ರಿಂಟ್ ಆಗಿರುವ ಪ್ರಕಾರ 17 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಇನ್ನು 9 ಸಾವಿರ ಕೋಟಿ ರೂ.ಗಳು ಏನಾಯಿತು? ಕೇವಲ ಈ ಒಂದು ತಿಂಗಳ ಅವಧಿಯಲ್ಲಿ 9 ಸಾವಿರ ಕೋಟಿ ರೂ.ಗಳ ಹಣವನ್ನು ಖರ್ಚು ಮಾಡಲಿಕ್ಕೆ ಸಾಧ್ಯವೇ? ಆ ರೀತಿ ಖರ್ಚು ಮಾಡಲಿಕ್ಕೆ ಹೋದರೆ, ಅದು ಎಷ್ಟರಮಟ್ಟಿಗೆ ಉಪಯೋಗವಾಗಬಹುದು, ಎಷ್ಟರಮಟ್ಟಿಗೆ ಜನಗಳಿಗೆ ಸಾರ್ವಜನಿಕ ರಂಗದಲ್ಲಿ ಅದು ತಲುಪಬಹುದು, ಉಪಯೋಗಕ್ಕೆ ಬರಬಹುದು? ಅನ್ನತಕ್ಕಂಥ ವಿಚಾರವನ್ನು ನಾವು ತಿಳಿದುಕೊಳ್ಳಬೇಕು. ಬರೀ ಈ

ಸದನದಲ್ಲಿ ಮಾತನಾಡುವುದು, ಕೇಳುವುದು, ಹೋಗುವುದು ಮುಖ್ಯವಲ್ಲ. ಯಾವಾಗ ಅಂತಿಮವಾಗಿ ಸಾರ್ವಜನಿಕ ವೆಚ್ಚದ ಲೆಕ್ಕಪತ್ರಗಳ ಪರಿಶೋಧನೆ ಆಗುತ್ತದೆ, ಅದನ್ನೂ ಸಹ ಗಣನೆಗೆ ತೆಗೆದುಕೊಂಡು, ಶ್ವೇತಪತ್ರವನ್ನು ಮಂಡಿಸುವುದರ ಮುಖಾಂತರ ಈ ರಾಜ್ಯಕ್ಕಾಗಿ ಮಾಡಲಾಗಿರುವ ವೆಚ್ಚವನ್ನೂ ಕೂಡ, ಈ ರಾಜ್ಯದ ಸಮಸ್ತ ಜನತೆಗೆ ತಿಳಿಯಪಡಿಸಬೇಕೆಂಬುದು ನನ್ನ ಅಭಿಪ್ರಾಯ. ಈ ಸರ್ಕಾರ ಎಷ್ಟರಮಟ್ಟಿಗೆ ತಾನು ಕೊಟ್ಟಂತಹ ಭರವಸೆಗಳನ್ನು ಸಂಪೂರ್ಣ ಪ್ರಮಾಣದಲ್ಲಿ ಈಡೇರಿಸಿದೆ ಎಂಬುದು ಜನತೆಗೆ ಆಗ ಗೊತ್ತಾಗುತ್ತದೆ. ಕೇವಲ ಅಂಕಿ ಸಂಖ್ಯೆಗಳಲ್ಲಿ ಅವರು ಕೊಡತಕ್ಕಂಥ ಮಾಹಿತಿಯಿಂದಲೇ ನಾವು ತೃಪ್ತಿ ಪಡಬೇಕಾಗಿಲ್ಲ. ಒಂದೊಂದು ಪುಸ್ತಕದಲ್ಲಿ, ಒಂದೊಂದು ವರದಿಯಲ್ಲಿ, ಒಂದೊಂದು ರೀತಿಯಲ್ಲಿ ನಾವು ಮಾಡಿರತಕ್ಕಂಥ ವೆಚ್ಚವನ್ನು ಕೊಡತಕ್ಕಂಥ ಪರಿಪಾಠ ಇರುವುದನ್ನು ಇವತ್ತು ನಾನು ನೋಡುತ್ತಿದ್ದೇನೆ. ಆದ್ದರಿಂದ ಆಗಿರುವ ವೆಚ್ಚದ ಬಗ್ಗೆ ಅನುಮಾನ ಬರುತ್ತದೆ. 4–5 ಪುಸ್ತಕಗಳನ್ನು ರೆಫರ್ ಮಾಡಿದರೆ, ಅಧಿಕಾರಿಗಳನ್ನು ಕೇಳಿದರೆ, ಮತ್ತೊಂದು ಕಡೆ ಮಾಹಿತಿಯನ್ನು ಪಡೆಯಲಿಕ್ಕೆ ಪ್ರಾರಂಭ ಮಾಡಿದರೆ, ಬಹುಶಃ ಅವರು ಕೊಡತಕ್ಕಂಥ ಅಂಕಿ ಸಂಖ್ಯೆಗಳು ನಿಜವಾಗಿಯೂ ಅಸತ್ಯತೆಯಿಂದ ಕೂಡಿರತಕ್ಕದ್ದರಲ್ಲಿ ಸಂಶಯವಿಲ್ಲ. ಇವತ್ತಿನ ದಿವಸ ಏನೊಂದು ವ್ಯವಹಾರ ನಡೆಯುತ್ತಿದೆ, ಅದು ನಿಲ್ಲಬೇಕಾದರೆ ದಯವಿಟ್ಟು ಈ ವರ್ಷದ ಕೊನೆಯಲ್ಲಿ ಅಂತಿಮವಾಗಿ 'ಈ ರಾಜ್ಯದ ಜನತಗೆ ನಾನು ಇಷ್ಟು ಕೋಟಿ ರೂ.ಗಳ ಬಜೆಟ್ ಅನ್ನು ಮಂಡನೆ ಮಾಡಿದ್ದೆ, ಇಷ್ಟು ಕೋಟಿ ರೂ.ಗಳನ್ನು ಇಂಥಿಂಥ ಬಾಬತ್ತಿನಿಂದ ನಾನು ಸ್ವೀಕಾರ ಮಾಡಿದ್ದೇನೆ, ಸ್ವೀಕಾರ ಮಾಡಿ ಈ ರಾಜ್ಯದ ಜನತೆಗೆ ಇಂಥಿಂಥ ಬಾಬತ್ತಿನಲ್ಲಿ ಖರ್ಚು ಮಾಡಿದ್ದೇನೆ' ಎನ್ನತಕ್ಕಂಥದ್ದನ್ನು ಶ್ವೇತಪತ್ರದ ಮುಖಾಂತರವೇ ಸದನಕ್ಕೆ ತಿಳಿಸಬೇಕು. ಇದನ್ನೇನಾದರೂ ಈ ರಾಜ್ಯದ ಜನತೆಗೆ ತಿಳಿಸಿದರೆ, ಬಹುಶಃ ಇದರಿಂದ ಒಳ್ಳೆಯದಾಗುತ್ತದೆ. ಆಗ ನಿಜವಾಗಿಯೂ ಯಾರೂ ಸಹ ಯಾವುದೇ ರೀತಿಯಾದ ಅನ್ಯಾಯಕ್ಕೆ ಒಳಗಾಗಿದ್ದೇವೆ ಎಂದು ಹೇಳುವುದಕ್ಕೆ ಆಸ್ಪದವಿರುವುದಿಲ್ಲ. ನಿಜವಾಗಿಯೂ ಎಲ್ಲರಿಗೂ ಇದರಿಂದ ತೃಪ್ತಿದಾಯಕವಾದ ವ್ಯವಸ್ಥೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದು ನನ್ನ ಒತ್ತಾಯ, ನನ್ನ ಒಂದು ಮನವಿ. ರಾಜ್ಯದ ಜನತೆಯ ಪರವಾಗಿ ನಾನು ಈ ಒಂದು ಮನವಿಯನ್ನು ಮಾಡಿದ್ದೇನೆ. ಯಾವ ರೀತಿಯಾಗಿ ಬಜೆಟ್ ಅನ್ನು ಸಾರ್ವಜನಿಕವಾಗಿ ಮಂಡನೆ ಮಾಡುತ್ತೀರಿ, ಅದೇ ರೀತಿಯಲ್ಲಿ ಈ ರಾಜ್ಯದಲ್ಲಿ ಆಗಿರತಕ್ಕಂಥ ಸಾರ್ವಜನಿಕ ವೆಚ್ಚವನ್ನು ಯಾವ್ಯಾವ ಇಲಾಖೆಗೆ, ಯಾವ್ಯಾವ ಬಾಬತ್ತಿನಲ್ಲಿ ಎಷ್ಟೆಷ್ಟು ಮಾಡಿದ್ದೀರಿ ಎನ್ನುವುದನ್ನು ಶ್ವೇತಪತ್ರದ ಮುಖಾಂತರವೇ

ಕೊಡಬೇಕು, ಈ ರಾಜ್ಯದ ಜನತೆಗೆ ತೋರಿಸಬೇಕು ಎನ್ನುವುದನ್ನು ನಾನು ಮತ್ತೊಮ್ಮೆ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇವತ್ತು 2009–10ನೇ ಸಾಲಿನ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ನಿಜ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದರು, ಅದು ಸತ್ಯ. ಜಾಗತಿಕ ಹಣಕಾಸಿನ ಬಿಕ್ಕಟ್ಟಿನಿಂದ ಇವತ್ತು ಈ ರಾಷ್ಟ್ರ ಮತ್ತು ರಾಜ್ಯಗಳು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿವೆ ಎನ್ನುವುದು ಸತ್ಯದಿಂದ ಕೂಡಿದೆ. ಆದರೂ ರಾಜ್ಯದ ವ್ಯವಸ್ಥೆಯೊಳಗೆ, ಇವತ್ತು ನಾವು ನಮ್ಮ ಇತಿಮಿತಿಯಲ್ಲಿ ಬಜೆಟ್‌ಅನ್ನು ಮಂಡನೆ ಮಾಡಬೇಕಾಗಿದೆ. ಕಳೆದ ಸಾರಿ 9 ಸಾವಿರ ಕೋಟಿ ರೂ.ಗಳನ್ನು ಬಂಡವಾಳಕ್ಕೋಸ್ಕರವೇ ಹೂಡುವುದಾಗಿ ನೀವು ಹೇಳಿದ್ದಿರಿ. ಬೆಂಗಳೂರಿನ ಭೂಮಿಯನ್ನು ಮಾರಿ, ಭೂಮಿಯ ವ್ಯವಹಾರದಿಂದ 3 ಸಾವಿರ ಕೋಟಿ ರೂ.ಗಳನ್ನು ಪಡೆದು, ಅದನ್ನು ಈ ರಾಜ್ಯದ ಅಭಿವೃದ್ಧಿಯ ಬಂಡವಾಳವನ್ನಾಗಿ ನಆವು ಪರಿವರ್ತನೆ ಮಾಡುತ್ತೇವೆ, ಹೂಡುತ್ತೇವೆ ಎನ್ನತಕ್ಕಂಥ ಮಾತನ್ನು ನೀವು ಹೇಳಿದ್ದಿರಿ. ಬಹುಶಃ ನೀವು ಬಳ್ಳಾರಿಯಲ್ಲಿ ವರದಿಯನ್ನು ಕೊಟ್ಟಿದ್ದೀರಿ. 3 ಸಾವಿರ ಕೋಟಿ ರೂ.ಗಳಿಗೆ 138 ಕೋಟಿ ರೂ.ಗಳು ಮಾತ್ರ ಇವತ್ತು ಆ ಒಂದು ಬಾಬತ್ತಿನಿಂದ ಬಂದಿದೆ. ನೀವು ಹೇಳಿದಂತೆ 3 ಸಾವಿರ ಕೋಟಿ ರೂ.ಗಳು ಇವತ್ತು ಈ ರಾಜ್ಯದ ಬಂಡವಾಳವಾಗಿ ಪರಿವರ್ತನೆ ಆಗಲಿಲ್ಲ. ಈ ರಾಜ್ಯದ ಬಂಡವಾಳದಲ್ಲಿ ಖೋತಾ ಬಿದ್ದಾಗ, ಯಾವುದೇ asset create ಆಗುವುದಿಲ್ಲ. Asset create ಆಗದಿದ್ದ ಸಂದರ್ಭದಲ್ಲಿ ಈ ರಾಜ್ಯದ ಆರ್ಥಿಕ ವ್ಯವಸ್ಥೆ ಸರಿ ಹೋಗುವುದಿಲ್ಲ. ಈ ರಾಜ್ಯದ ಆರ್ಥಿಕ ವ್ಯವಸ್ಥೆ ಸುಭದ್ರವಾಗಬೇಕಾದರೆ, ಆ ಬಂಡವಾಳದ ವೆಚ್ಚವನ್ನು ನಾವು ಜಾಸ್ತಿ ಮಾಡಬೇಕು. ಎಲ್ಲಿಯವರೆಗೆ ನಾವು ಬಂಡವಾಳದ ವೆಚ್ಚವನ್ನು ಹೆಚ್ಚಿಗೆ ರೂಢಿಸುವುದಿಲ್ಲವೋ, ಅಲ್ಲಿಗೆ ಹಣವನ್ನು ತೊಡಗಿಸುವುದಿಲ್ಲವೋ, ಅಲ್ಲಿಯವರೆಗೆ ಈ ರಾಜ್ಯದ ಆರ್ಥಿಕ ಸುಧಾರಣೆ, ಆರ್ಥಿಕ ಪರಿಸ್ಥಿತಿ ಸರಿಹೋಗುವುದಿಲ್ಲ. ನಾವು ರಾಜಸ್ವ ಹಣವನ್ನು ಯಾವ್ಯಾವ ರೂಪದಲ್ಲಿ ಹಣ ಬರುತ್ತದೆಯೋ ಅದರಲ್ಲಿ ಹಣವನ್ನು ಉಳಿಸಿ ನಾವು ಬಂಡವಾಳಕ್ಕೆ ತೊಡಗಿಸಬೇಕು. ಇವತ್ತು ಸಾಲ ತೆಗೆದುಕೊಂಡು ಬಂಡವಾಳವನ್ನು ಹೂಡುವುದನ್ನು ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಮಾಡಬೇಕು. ನಮಗೆ ಆದಾಯವೇನು ಬರುತ್ತದೆ, ಅದರಲ್ಲೇ ಬಂಡವಾಳವನ್ನು ತೊಡಗಿಸಿದಾಗ ಮಾತ್ರ ಈ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯ ಸುಧಾರಣೆಯಾಗುತ್ತದೆ. ನಮ್ಮ ಇತಿಮಿತಿಯನ್ನು ನೋಡಿಕೊಂಡು ಆ ಬಂಡವಾಳದ ವೆಚ್ಚವನ್ನು ಒಂದು ಪ್ರಾಮಾಣಿಕ ರೀತಿಯಲ್ಲಿ ಹೂಡುವುದು ಒಂದು ಉತ್ತಮವಾದ ಕೆಲಸವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ರಾಜ್ಯ ಒಟ್ಟು ಆಂತರಿಕ ಉತ್ಪನ್ನದ ಮೇಲೆ

3%ಗಿಂತ ಒಳಗಡೆ ನಾವು ಈ ರಾಜ್ಯದ ಆರ್ಥಿಕ ಕೊರತೆಯನ್ನಿಟ್ಟುಕೊಳ್ಳಬೇಕೆನ್ನುವ ಕಾನೂನು ಚೌಕಟ್ಟು ಇದೆ. ಇವತ್ತು ಕೇಂದ್ರ ಸರ್ಕಾರದ ಸಲಹೆ ಮೇರೆಗೆ ನಾವು ಮೂರುವರೆ ಪರ್ಸೆಂಟಿಗೂ ಸಹ ನಾವು ಹೋಗಲು ಸರಿಪಡಿಸುವ ಕಾನೂನು ತರಬೇಕು ಎನ್ನುವ ಒಂದು ಸಲಹೆಯನ್ನೇನು ನೀಡಿದ್ದಾರೆ, ಆವಾಗ ನಾವು ಆ ಒಂದು ಆರ್ಥಿಕ ಉತ್ಪನ್ನದಿಂದ ಬರುವ ಹಣವನ್ನು ನಾವು ಬಂಡವಾಳವಾಗಿ ಪರಿವರ್ತನೆ ಮಾಡಬೇಕು. ಬಹುಶಃ ಬಂಡವಾಳವಾಗಿ ಪರಿವರ್ತನೆ ಮಾಡದೆ ಸಾಮಾಜಿಕ, ಸೇವಾ, ಸಾಮಾನ್ಯ ಕ್ಷೇತ್ರಗಳಿಗೆ ಎಲ್ಲಿಯವರೆಗೆ ನಾವು ಹೆಚ್ಚಿಗೆ ಹಣವನ್ನು ತೊಡಗಿ ಸುತ್ತೇವೆಯೊ ಅಲ್ಲಿಯವರೆಗೆ ಆರ್ಥಿಕ ಸುಭದ್ರತೆಯನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾವು ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಇವತ್ತು ಯಾವುದೋ ಒಂದು ಚುನಾವಣೆಯ ಹಿತದೃಷ್ಟಿಯಿಂದಲೋ, ಇಲ್ಲ ಈ ರಾಜ್ಯ ಜನತೆಯನ್ನು ತೃಪ್ತಿಪಡಿಸಬೇಕು, ಪ್ರತಿಯೊಂದು ವರ್ಗದ ಜನತೆಯನ್ನು ತೃಪ್ತಿಪಡಿಸಬೇಕೆನ್ನುವ ದೃಷ್ಟಿಯಿಂದಲೋ, ಇವತ್ತು ನಾವು ಈ ರಾಜ್ಯದ ಎಲ್ಲಾ ಬಂಡವಾಳವನ್ನು ಕೇವಲ ಸೇವಾ ಕ್ಷೇತ್ರಕ್ಕೆ ಮತ್ತು ಸಾಮಾನ್ಯ ಕ್ಷೇತ್ರಕ್ಕೆ ಹೆಚ್ಚಿಗೆ ಹಣವನ್ನು ತೊಡಗಿಸಿ, ನಾವು ಬಂಡವಾಳ ವೆಚ್ಚಕ್ಕೆ ಹಣವನ್ನು ತೊಡಗಿಸದೆ ಹೋದ ಸಂದರ್ಭದಲ್ಲಿ ನಿಜವಾಗಿಯೂ ಈ ರಾಜ್ಯದ ಆರ್ಥಿಕ ಸುಭದ್ರತೆಯನ್ನು ಕಾಪಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಮಾನ್ಯ ಮುಖ್ಯಂತ್ರಿಗಳು ಮಂಡಿಸಿದ ಬಜೆಟ್‌ನಲ್ಲಿ, ಆರ್ಥಿಕ ಕ್ಷೇತ್ರಕ್ಕೆ ನಿಜವಾಗಿಯೂ ಕಳೆದ ಸಾರಿಯೂ ಕಡಿಮೆ ಮಾಡಿದ್ದರು, ಈ ಸಾರಿಯೂ ಕಡಿಮೆ ಮಾಡಿದ್ದಾರೆ. ಇವತ್ತು ಯಾವುದೇ ಸಾಮಾಜಿಕ ಮತ್ತು ಸಾಮಾನ್ಯ ಕ್ಷೇತ್ರದಲ್ಲಿ ಖರ್ಚು ಮಾಡುವ ಹಣ ಉಳಿಯುವುದಿಲ್ಲ, ಅದನ್ನು ಸ್ವಲ್ಪಮಟ್ಟಿಗಾದರೂ ಮಾಡಲೇ ಬೇಕಾಗುತ್ತದೆ. ನೀವು ಬಂಡವಾಳ ವೆಚ್ಚವನ್ನು ಸಾಲದ ಮೂಲಕ ತೆಗೆದುಕೊಂಡು ಮಾಡುತ್ತೇವೆಂದು ಹೇಳುತ್ತೀರಿ, ಅದನ್ನು ಸಾಲದ ರೂಪದಲ್ಲಿ ತೆಗೆದುಕೊಳ್ಳದಿರುವ ಸಂದರ್ಭದಲ್ಲಿ ನಿಜವಾಗಿಯು ಅಸೆಟ್ ಕ್ರಿಯೇಟ್ ಆಗುವುದಿಲ್ಲ. ಅದಕ್ಕಾಗಿ ನೀವು ಸಾಮಾಜಿಕ ಸೇವೆಗೆ ರೂ.18,731 ಕೋಟಿಯನ್ನೇನು ನಿಗದಿ ಮಾಡಿದ್ದೀರಿ, ಆರ್ಥಿಕ ಸೇವೆಗೆ ಕೇವಲ ರೂ.11,060 ಕೋಟಿ ರೂಪಾಯಿಗಳನ್ನೇನು ನಿಗದಿ ಮಾಡಿದ್ದೀರಿ, ಸಾಮಾನ್ಯ ಸೇವೆಗೆ ರೂ.14,725.59 ಕೋಟಿ ರೂಪಾಯಿಗಳನ್ನೇನು ನಿಗದಿ ಮಾಡಿದ್ದೀರಿ, ಇದರಿಂದ ಈ ರಾಜ್ಯದಲ್ಲಿ ಬಂಡವಾಳವನ್ನು ಹೂಡುವುದರಲ್ಲಿ ನೀವು ಇವತ್ತು ಸಾಲದ ಮುಖಾಂತರ 6000 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಕೇವಲ 9000 ಕೋಟಿ ರೂಪಾಯಿಗಳನ್ನು ಮಾತ್ರ ಈ ರಾಜ್ಯದಲ್ಲಿ ಬಂಡವಾಳವಾಗಿ ಹೂಡುತ್ತೇವೆನ್ನುವ ವ್ಯವಸ್ಥೆಯನ್ನು ಬಜೆಟ್‌ನಲ್ಲೇನು ಮಾಡಿಕೊಂಡಿದ್ದೀರಿ, ನಿಜವಾಗಿಯೂ ಈ ರಾಜ್ಯದ

ಆರ್ಥಿಕತೆಯ ಸುಭದ್ರತೆಯ ದೃಷ್ಟಿಯಿಂದ ಪ್ರಾಮಾಣಿಕವಾದ ಕೆಲಸವಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಿಜ, ಇವತ್ತು ಪ್ರಪಂಚದ ಆರ್ಥಿಕ ದುರ್ವ್ಯವಸ್ಥೆಯಲ್ಲಿ ಆಗಿರುವ ಕೆಲವೊಂದು ಆರ್ಥಿಕ ಮುಗ್ಗಟ್ಟನ್ನು ನಾವು ಅರ್ಥ ಮಾಡಿಕೊಂಡಾಗ, ಈ ಸಂದರ್ಭದಲ್ಲಿ ಸಂಪನ್ಮೂಲವನ್ನು ಕ್ರೂಢೀಕರಿಸುವುದು ಬಹಳ ಕಷ್ಟವಿದೆ, ತೆರಿಗೆಯ ಮೂಲದಿಂದಲೂ ತೆರಿಗೆಯನ್ನು ಕ್ರೋಢೀಕರಿಸುವುದು ಕಷ್ಟವಿದೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಇರುವ ತೆರಿಗೆ ಬಾಬತ್ತಿನ ಎಲ್ಲಾ ಹಣವನ್ನು ಸಾಮಾಜಿಕ ಸೇವೆಯ ಹಿತದೃಷ್ಟಿಯಿಂದ ಎಲ್ಲಾ ಧಾರ್ಮಿಕ ಕ್ಷೇತ್ರಗಳಿಗೆ ನೀವು ಹೆಚ್ಚಿನ ಹಣವನ್ನೇನು ತೊಡಗಿಸುತ್ತಿದ್ದೀರಿ, ಇದು ಎಲ್ಲಾ ನಾಯಕರುಗಳು ಹೇಳಿದಂತೆ, ಚುನಾವಣೆಯ ಹಿತದೃಷ್ಟಿಯಿಂದ ಎಲ್ಲಾ ವರ್ಗಗಳಿಗೆ, ಜಾತಿ, ಉಪಜಾತಿಗಳಿಗೆ ಕೊಡುತ್ತಿರುವ ಪದ್ಧತಿ ಏನಿದೆ, ಇದು ರಾಜ್ಯ ಆರ್ಥಿಕ ಇಕ್ಕಟ್ಟಿಗೆ ಕಾರಣವಾಗುತ್ತದೆ ಎಂಬುದನ್ನು ಸಹ ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಒಂದು ಸಮುದಾಯವನ್ನು ಕರೆಯಿಸಿ 2 ಕೋಟಿ ರೂ. ಖರ್ಚು ಮಾಡಿ ಸಮಾವೇಶವನ್ನು ನಡೆಸುತ್ತೀರಿ. ಅಲ್ಲಿ ಅವರಿಗೆ ಒಂದು ಕೋಟಿ ರೂಪಾಯಿಗಳನ್ನು ಘೋಷಣೆ ಮಾಡುತ್ತೀರಿ. ಇದರಿಂದೇನಾಗುತ್ತದೆ? ಜಾತಿ ಜಾತಿಗಳ ಮಧ್ಯದಲ್ಲಿ ಸಂಘರ್ಷ ಪ್ರಾರಂಭವಾಗುತ್ತದೆ. ಇವತ್ತು ಕೊಡಬೇಕಾದರೆ, ಜಾತಿಗಳನ್ನು ಕರೆಯಿಸಿ, ಸಮಾವೇಶಗಳನ್ನೇ ಮಾಡಿ ಅವರಿಗೆ ಅನುದಾನವನ್ನು ಕೊಡುವ ಅವಶ್ಯಕತೆ ಇಲ್ಲ. ಇಡೀ ಒಂದು ಜನಾಂಗಕ್ಕೆ 1–2 ಕೋಟಿ ಹಣವನ್ನು ಕೊಡುವುದರ ಮುಖಾಂತರವೇ ಆ ಸಮಾಜ ಉದ್ಧಾರವಾಗುವುದಿಲ್ಲ, ಉದ್ಧಾರ ಮಾಡುವುದಕ್ಕೂ ಸಾಧ್ಯವಿಲ್ಲ. ಇದನ್ನು ತಿಳಿದುಕೊಂಡು ಸಮಾವೇಶವನ್ನು ಮಾಡಿ, ರಾಜಕೀಯ ಇಚ್ಛಾಶಕ್ತಿಯಿಂದ, ಈ ರಾಜ್ಯಕ್ಕೆ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುವ ವ್ಯವಸ್ಥೆಯನ್ನೇನು ನಡೆಸಿಕೊಂಡು ಬರುತ್ತಿದ್ದೀರಿ ಅದು ಈ ದೇಶದ, ಈ ರಾಜ್ಯದ ಆರ್ಥಿಕ ದೃಷ್ಟಿಯಿಂದ ಒಳ್ಳೆಯ ಸಂಪ್ರದಾಯವಲ್ಲ, ಈ ಸಂಪ್ರದಾಯವನ್ನು ದಯಮಾಡಿ ಇನ್ನು ಮುಂದೆ ಬಿಟ್ಟು ಬಿಡಿ. ಈಗ ಆಗಿದ್ದು ಆಗಿ ಹೋಗಿದೆ, ಮುಂದಾದರೂ ತಾವು ದಯಮಾಡಿ ಈ ಸಂಪ್ರದಾಯವನ್ನು ಮಾನ್ಯ ಮುಖ್ಯಮಂತ್ರಿಗಳು ಕೈಬಿಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದು ಪರೋಕ್ಷವಾಗಿ ನಿಮ್ಮ ಪಕ್ಷವನ್ನು ಬೆಳೆಸುವಂಥದ್ದು; ಈ ರಾಜ್ಯದ ಸೌಲತ್ತನ್ನು, ಹಣಕಾಸನ್ನು ಉಪಯೋಗಿಸಿಕೊಂಡು ಪರೋಕ್ಷವಾಗಿ ಈ ಪಕ್ಷವನ್ನು ಬೆಳೆಸುವಂಥದ್ದು, ಈ ನಿಟ್ಟಿನಲ್ಲಿ ನೀವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೀರೆಂದು ನಾನು ಈ ಸಂದರ್ಭದಲ್ಲಿ ನೇರವಾಗಿ ಆರೋಪವನ್ನು ಮಾಡಬೇಕಾಗುತ್ತದೆ. ಅದೇರೀತಿ, ಕಳೆದ ಸಾರಿ ರೈತರಿಗೆ ಒಂದುಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು

ಬಜೆಟ್‌ನಲ್ಲಿ ಹೇಳಿದಿರಿ. ಅದನ್ನು ಒಣಭೂಮಿ ಇರುವವರಿಗೆ ಕೊಡುತ್ತೇವೆಂದು ಹೇಳಿದಿರಿ. ಅವನ ಮನೆಯ ಮುಂದೆ ಒಂದೇ ಒಂದು ತೆಂಗಿನ ಮರವನ್ನು ಹಾಕಿಕೊಂಡಿದ್ದರೆ, ಬಾಗಾಯಿತು ಎಂದು ಬರೆದಿದ್ದರೆ, ಅಂಥವನಿಗೆ ಆ ಸಾವಿರ ರೂಪಾಯಿಗಳನ್ನು ಕೊಟ್ಟಿಲ್ಲ, ಒಂದೇ ಒಂದು ಕುಂಟೆ ತರಿ ಇದ್ದರೆ ಕೊಟ್ಟಿಲ್ಲ, ಇವತ್ತು ಮೂರು ಎಕರೆ ಜಮೀನು ಇರುವವನಿಗೆ ಕೊಟ್ಟಿಲ್ಲ. ಆದರೆ ಆ ಒಂದು ವ್ಯವಸ್ಥೆಯೊಳಗಡೆ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಆವತ್ತು ನೀವು ಇಂಥಿಂಥ ಕಾನೂನಿನ ಚೌಕಟ್ಟನ್ನು ಮಾಡುತ್ತೇವೆಂದು ಹೇಳಲಿಲ್ಲ. ಎಲ್ಲಾ ಸಣ್ಣ ಹಿಡುವಳಿದಾರರಿಗೆ, ಅತೀ ಸಣ್ಣ ರೈತರಿಗೆ ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದಿರಿ. ಆದರೆ ಆ ಒಣ ಭೂಮಿಯಲ್ಲಿ ಇವತ್ತು ಕೆರೆ ತುಂಬಿ ಹತ್ತು ವರ್ಷವಾಗಿದೆ. ಆ ಭೂಮಿ ಕೆಳಗಿರುವುದು ತರಿಭೂಮಿಯೇ? ಅದು ಒಣಭೂಮಿ, ಅದಕ್ಕೆ ನೀವು ರಿಯಾಯಿತಿಯನ್ನು ಕೊಡಬೇಕಾಗಿತ್ತು. ಆಯಿತು, ಆ ಸಾವಿರ ರೂಪಾಯಿಗಳನ್ನು ಕೊಟ್ಟರೆ, ಬ್ಯಾಂಕ್ ನಲ್ಲಿ 500 ರೂಪಾಯಿ ಕೊಟ್ಟು ಅಕೌಂಟ್ ತೆರೆಯದೆ ಆ ಹಣವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಆ ಕಾರ್ಯಕ್ರಮ ಯಶಸ್ವಿಯಾಯಿತೇ? ಇದರಿಂದ ರೈತ ಉದ್ಧಾರವಾದನೇ? ಅದೇ 220 ಕೋಟಿ ಹಣವನ್ನು ಇವತ್ತು ಕೋಲ್ಡ್ ಸ್ಟೋರೇಜ್ ಕಟ್ಟುವುದರ ಮೂಲಕ ಈ ಮಾರುಕಟ್ಟೆಯ ಏರುಪೇರಿನಲ್ಲಿ ಆ ರೈತ ಬೆಳೆದ ಪದಾರ್ಥಗಳನ್ನು ಇಡುವ ವ್ಯವಸ್ಥೆಯನ್ನು ಮಾಡಿದ್ದರೆ ಒಂದು ಅಸೆಟ್ ಆಗುತ್ತಿತ್ತು, ಇದನ್ನು ನೀವು ಮಾಡಲಿಲ್ಲ. ಎಲ್ಲರಿಗೂ ಕೇವಲ ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದಿರಿ. ಇವತ್ತು ನಿಜವಾಗಿಯೂ ಅದು ಯಾರ್‍ಯಾರ ಪಾಲಾಗಿದೆಯೋ ಏನಾಗಿದೆಯೋ ಗೊತ್ತಾಗುತ್ತಿಲ್ಲ. ಅದು ರೈತರಿಗೆ ಸಿಗುತ್ತಿಲ್ಲ. ಇಂಥ ಪರಿಸ್ಥಿತಿಯ ಜೊತೆಗೆ 3% ಬಡ್ಡಿಗೆ ಈ ರಾಜ್ಯದ ರೈತರಿಗೆ ಸಾಲವನ್ನು ಕೊಡುತ್ತೇವೆಂದು ಮಾಡಿದ್ದೀರಿ. ಮಾಡಿರುವ ಪ್ರಯತ್ನವೇನೋ ಒಳ್ಳೆಯದು. ಆದರೆ ಕರ್ನಾಟಕ ರಾಜ್ಯದಲ್ಲಿರುವ ಸುಮಾರು ಒಂದು ಕೋಟಿ ರೈತ ಸಮುದಾಯಕ್ಕೆ ಕೇವಲ ನೀವು ಇಟ್ಟಿರುವುದು, ಸಹಕಾರ ಕ್ಷೇತ್ರದಿಂದ 150 ಕೋಟಿ, ಇನ್ನೊಂದು 250 ಕೋಟಿ ಸೇರಿದಂತೆ 400 ಕೋಟಿಯನ್ನು ಇಟ್ಟಿದ್ದೀರಿ. ಇದರಲ್ಲಿ ಇವತ್ತು 20 ಸಾವಿರ ಜನರಿಗೆ ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಅಷ್ಟೊಂದು ಜನಸಂಖ್ಯೆಯಲ್ಲಿರುವವರಿಗೆ ನೀವೇನು ಮಾಡಿದಿರಿ? 50 ಸಾವಿರ ರೂಪಾಯಿಗಳ ಒಳಗೆ ಸಾಲ ತೆಗೆದುಕೊಳ್ಳುವ ಎಲ್ಲಾ ರೈತರು ವಾಣಿಜ್ಯ ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಂಡರೆ, ಸಹಕಾರಿ ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಂಡರೆ, ನೀವು ಒಂದು ಕಂಡಿಷನ್ ಮಾಡಿ, 50 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡಿರುವ ಎಲ್ಲಾ ವಾಣಿಜ್ಯ ಬ್ಯಾಂಕಿನ ರೈತರು ಎಂದು ಹೇಳಿದ್ದೀರಿ. ದೊಡ್ಡ

ರೈತರು, ಸಣ್ಣ ರೈತರು ಎಂದು ನೀವು ಇಲ್ಲಿ ಹೇಳಿಲ್ಲ. ಎಲ್ಲಾ ರೈತರಿಗೆ ಎಂದು ಹೇಳಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಇರತಕ್ಕಂತಹ ರೈತ ಕುಟುಂಬಗಳ ಸಂಖ್ಯೆ ಎಷ್ಟು? ಕೇವಲ 250 ಕೋಟಿ ರೂಪಾಯಿಗಳನ್ನು ಕೊಟ್ಟರೆ ಈ ರಾಜ್ಯದ ಎಲ್ಲಾ ಜನರಿಗೆ, ಈ ರಾಜ್ಯದ ಎಲ್ಲಾ ರೈತ ಕುಟುಂಬಕ್ಕೆ ನೀವು ವ್ಯವಸ್ಥೆ ಮಾಡಿದ ಹಾಗಾಯಿತಾ? ಈ ರಾಜ್ಯದ ಎಲ್ಲಾ ರೈತರು ಅದರ ಪ್ರತಿಫಲ ಪಡೆಯುವುದಕ್ಕೆ ಸಾಧ್ಯವಾಯಿತಾ ಎನ್ನತಕ್ಕಂತಹ ಮಾತನ್ನು ಸಹ ನೀವು ಇವತ್ತು ತಿಳಿದುಕೊಳ್ಳಬೇಕಾಗುತ್ತದೆ. ಇದೂ ಕೂಡ ಚುನಾವಣಾ ಗಿಮಿಕ್. ಕೇವಲ ಹನ್ನೆರಡುವರೆಸಾವಿರ ಲಕ್ಷ ಜನರಿಗೆ ನೀವು ಅದರ ಫಲವನ್ನು ಕೊಡುವುದಾದರೆ, ಇರತಕ್ಕಂತಹ 75 ಲಕ್ಷ ಜನ ರೈತ ಕುಟುಂಬಕ್ಕೆ ನೀವು ಏನು ಕೊಡುತ್ತೀರಿ? ಇದು ಪೂರ್ಣ ಪ್ರಮಾಣದಲ್ಲಿ ರೈತರಿಗೆ ಕೊಡತಕ್ಕಂತಹ ಆಶೀರ್ವಾದ ಎನ್ನತಕ್ಕಂಥದ್ದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಕಳೆದ ಸಾರಿ ಸ್ತ್ರೀ ಶಕ್ತಿ ಸಹಕಾರ ಗುಂಪುಗಳಿಗೆ 6% ಬಡ್ಡಿ ದರದಲ್ಲಿ ಹಣ ಕೊಡುತ್ತೇವೆಂದು ಹೇಳಿದ್ದಿರಿ. ಈ ಸಾರಿಯ ಮುಂಗಡಪತ್ರದಲ್ಲಿ ಅದರ ಸದ್ದು ಇಲ್ಲ. ಅದನ್ನು ಕೈ ಬಿಟ್ಟಿದ್ದೀರಿ. ಅದು ಬಹಳ ಉತ್ತಮವಾದ ಕೆಲಸ ಇತ್ತು. ಎಲ್ಲಾ ಸ್ತ್ರೀಶಕ್ತಿ ಸಂಘದವರು ತಮ್ಮ ಕುಟುಂಬಗಳು ಆರ್ಥಿಕ ಸಂಕಷ್ಟದಲ್ಲಿದ್ದಂತಹ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಅದನ್ನು ತೆಗೆದುಕೊಂಡು ವ್ಯವಹಾರಗಳನ್ನು ನಡೆಸಿಕೊಂಡು, ಹಸುಗಳನ್ನು ಸಾಕಿಕೊಂಡು, ಗುಡಿ ಕೈಗಾರಿಕೆಗಳನ್ನು ಮಾಡಿಕೊಂಡು, ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರು. ಅದನ್ನು ಕೈಬಿಟ್ಟಿದ್ದೀರಿ. ದಯಮಾಡಿ ಅದನ್ನು ಪರಿಶೀಲನೆ ಮಾಡುತ್ತೀರಿ ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಆರೋಗ್ಯ ಕವಚ ಎನ್ನುವುದು ಬಹಳ ಮಹತ್ತರವಾದ ಮತ್ತು ಉತ್ತಮವಾದ ಸಾಧನೆ ಹಾಗೂ ಉತ್ತಮವಾದ ಯೋಜನೆ ಎನ್ನತಕ್ಕಂತಹ ಮಾತನ್ನು ತಾವು ಹೇಳಿದ್ದೀರಿ. ಇವತ್ತು ನಾವು ಆ ಯೋಜನೆಯನ್ನು ಬಹಳ ಸಂಶಯಾಸ್ಪದವಾಗಿ ನೋಡಬೇಕಾಗಿದೆ. ಇವತ್ತು 20 ಕಿ.ಮೀ. ಹೋಗಿ 20 ಕಿ.ಮೀ. ಬಂದರೆ 40 ಕಿ.ಮೀ. ಆಗುತ್ತದೆ. 1400 ರೂ.ಗಳನ್ನು ಅವರು ಕ್ಲೇಮ್ ಮಾಡುತ್ತಾರೆ. ಔಟ್ ಸೋರ್ಸ್‌ನಿಂದ ಸೇವಾ ಮನೋಭಾವನೆ ಇರತಕ್ಕಂತಹವರು ಆ ಕಂಪನಿಗೆ ಕೊಟ್ಟಿದ್ದೀರೋ ಅವರು ನಾನು ತಿಳಿದುಕೊಂಡಿರುವ ಹಾಗೆ 1400 ರೂ. ಕ್ಲೇಮ್ ಮಾಡುತ್ತಿದ್ದಾರೆ. ಅದಕ್ಕೆ ಎಷ್ಟು ಡೀಸೆಲ್ ಖರ್ಚಾಗುತ್ತದೆ, ನಾವೆಲ್ಲಾ ಲೆಕ್ಕ ಹಾಕಿದ್ದೇವೆ. ಹೋಗಿ ಕರೆದುಕೊಂಡು ಬರಲಿಕ್ಕೆ 300 ರಿಂದ 350 ರೂ. ದುಡ್ಡು ಖರ್ಚಾಗಬಹುದು. ಅದಕ್ಕೆ 1400 ರೂ. ಕೊಟ್ಟರೆ ಹೇಗೆ? ಈ ದೇಶದ ಹಾಗೂ ಈ ರಾಜ್ಯದ ದುಡ್ಡಲ್ಲವಾ? 108 ಎಂದು ಒತ್ತಿದ ತಕ್ಷಣ ಹೋಗಿ ಕರೆದುಕೊಂಡು ಬರುತ್ತಾರೆಂದು ಇರಬಹುದು. ದುಡ್ಡು ಕೊಟ್ಟರೆ ಎಲ್ಲರೂ ಕರೆದುಕೊಂಡು ಬರುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು

ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. 1400 ರೂ.ಗಳನ್ನು ಕೇವಲ 20 ಕಿ.ಮೀ. ಹೋಗಿ ಕರೆದುಕೊಂಡು ಬರುವುದಾದರೆ, ಅದು ಈ ರಾಜ್ಯದ ಬೊಕ್ಕಸಕ್ಕೆ ನಷ್ಟ ಅಲ್ಲವಾ ಎನ್ನತಕ್ಕಂಥದ್ದನ್ನು ನೀವು ಯೋಚನೆ ಮಾಡಬೇಕು. ಆಂಬ್ಯುಲೆನ್ಸ್‌ಗಳನ್ನು ಕೊಳ್ಳುವಾಗ ಅದಕ್ಕೆ 16 ಲಕ್ಷ ರೂ.ಗಳವರೆಗೆ ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ. ಅದು ತಪ್ಪು. ಕೇವಲ 8 ರಿಂದ 10 ಲಕ್ಷ ರೂ. ಗಳಲ್ಲಿ ಇವತ್ತು ಆಂಬ್ಯುಲೆನ್ಸ್ ಬರುತ್ತವೆ. 13,14,15 ಲಕ್ಷ ರೂ. ಗಳವರೆಗೆ ಕೊಟ್ಟು ಕೊಂಡುಕೊಳ್ಳುವುದಾದರೆ ಅದರಲ್ಲಿ ಬಹಳ ಅವ್ಯವಹಾರ ನಡೆದಿದೆ. ಇದರ ಬಗ್ಗೆ ತಾವು ವಿಮರ್ಶೆ ಮಾಡಬೇಕು. ಅದು ಕಾರ್ಯಕ್ರಮ ಒಳ್ಳೆಯದಾದರೂ, ಅದು ರಾಜ್ಯದ ಆರ್ಥಿಕ ದೃಷ್ಟಿಯಿಂದ ಇದರಲ್ಲಿ ಏನೋ ಮೋಸ ಅಡಗಿದೆ ಎಂಬ ಭಾವನೆ ಇದೆ. ಅದನ್ನು ದಯಮಾಡಿ ಪೂರ್ಣ ಪ್ರಮಾಣದಲ್ಲಿ ಆ ಯೋಜನೆಯ ಎಲ್ಲಾ ಸಾರಾಂಶಗಳನ್ನು ನಮ್ಮ ಪ್ರತಿನಿಧಿಗಳಿಗೆ ಕೊಡಬೇಕು. ನೀವು ಯಾವುದೇ ಯೋಜನೆ ತರಬೇಕಾದರೂ, ಯೋಜನೆಯ (ಕಾರ್ಯಕ್ರಮಗಳ) ಹಿಂದೆ ಇರತಕ್ಕಂತಹ ಪಾಲಿಸಿಯನ್ನು ನಮಗೆ ಕೊಡುವುದಿಲ್ಲ. ನಮಗೆ ಹೇಳುವುದಿಲ್ಲ. ನಾವು ಯಾರ ಹತ್ತಿರವೋ ಹೋಗಿ ತಿಳಿದುಕೊಳ್ಳಬೇಕು. ಜನಪ್ರತಿನಿಧಿಗಳಿಗೆ ಗೊತ್ತಿಲ್ಲದೆ ಮುಚ್ಚಿಟ್ಟು ಆ ಕಾರ್ಯಕ್ರಮವನ್ನು ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತೀರಿ. ನಮ್ಮ ತಾಲ್ಲೂಕಿಗೆ ಆ ಕಾರ್ಯಕ್ರಮ ಬಂದಾಗ ನಮಗೆ ಗೊತ್ತಾಗುತ್ತದೆ. ಅವರು 20 ಕಿ.ಮೀ. ಮೇಲೆ ಹೋಗುವುದಿಲ್ಲ, 20 ಕಿ.ಮೀ. ನಿಂದ ತೆಗೆದುಕೊಂಡು ಬಂದರೆ ಮೂರು ಬ್ಯಾಚ್‌ಗಳಲ್ಲಿ 9 ಜನ ಇರುತ್ತಾರೆ. ಔಟ್ ಸೋರ್ಸ್‌ನಲ್ಲಿ 3,000 ರೂ. ಸಂಬಳ ಕೊಡುತ್ತಾರೆ. 9 ಜನ ಇರುತ್ತಾರೆ, 9 ಜನರಿಂದ 27 ರಿಂದ 30 ಸಾವಿರ ರೂ. ಅವರಿಗೆ ಆಗುತ್ತದೆ ಡೀಸೆಲ್ ದುಡ್ಡು ಆರೇಳು ಸಾವಿರ ಆಗುತ್ತದೆ. ಅವರಿಗೆ ಕೊಡುವುದು 30,000 ಆಗುತ್ತದೆ. ಅವರು 100 ಪಾಯಿಂಟ್ ಮಾಡಿದರೆ, 1,40,000 ರೂ. ಹಣ ತೆಗೆದುಕೊಳ್ಳುತ್ತಾರೆ. ಎಷ್ಟು ಲಾಸ್ ಆಗುತ್ತದೆ? 1200 ರೂ.ಗೆ 350 ರೂ. ತೆಗೆದುಕೊಂಡರೆ ಎಷ್ಟು ಹಣ ಲಾಸ್ ಆಗುತ್ತದೆ ಎನ್ನತಕ್ಕಂಥದ್ದನ್ನು ತಾವು ಈ ಸಂದರ್ಭದಲ್ಲಿ ಯೋಚನೆ ಮಾಡಿ. ನನಗೆ ಬಂದ ಮಾಹಿತಿ ಪ್ರಕಾರ ಈ ಕಾರ್ಯಕ್ರಮದ ಬಗ್ಗೆ ನಾನು ಹೇಳಿದ್ದೇನೆ. ಅದರ ಬಗ್ಗೆ ತಾವು ಸವಿಸ್ತಾರವಾಗಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅದರ ಜೊತೆಯಲ್ಲಿ ಪಡಿತರ ಚೀಟಿ ವಿಚಾರ. ಪಡಿತರ ಚೀಟಿ ವಿಚಾರದಲ್ಲಿ ಈಗಾಗಲೆ ನೀವು ಕಾರ್ಡುಗಳನ್ನು ಕೊಟ್ಟು ಅದರ ಮೂಲಕ ಅಕ್ಕಿ ಹಂಚುತ್ತಿದ್ದೀರಿ. ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದಿರಿ, ಕೊಡಲಿಲ್ಲ. ಮುಂದಿನ ಸಾರಿ ನೋಡೋಣವೆಂದು ಹೇಳಿದಿರಿ ಈ ಸಾರಿ ಬಜೆಟ್‌ನಲ್ಲಿಯೂ ಅದರ ಬಗ್ಗೆ ಸುದ್ದಿ ಇಲ್ಲ, ನೀವು ಅದರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಅದು ಈ ರಾಜ್ಯದ ಜನತೆಗೆ ಗೊತ್ತಾಗುತ್ತದೆ. ನೀವು ಚುನಾವಣೆಯಲ್ಲಿ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಲಿಕ್ಕೆ ಆಗಲಿಲ್ಲ ಎನ್ನತಕ್ಕಂಥದ್ದು ಜನಜನಿತವಾಗಿ ಗೊತ್ತಾಗುತ್ತದೆ. ಎರಡು ರೂಪಾಯಿಗೆ ಅಕ್ಕಿ ಕೊಡುವುದಕ್ಕಾಗಲಿಲ್ಲ. ಆದರೆ ಬೆಳಗಾಂನಲ್ಲಿ ನಡೆದಂತಹ ವಿಧಾನಸಭಾ ಅಧಿವೇಶನದಲ್ಲಿ ನೀವು ಮಾತು ಕೊಟ್ಟಿದ್ದೀರಿ. ಏನು ಅಡಿಷನಲ್ಲಾಗಿ 30 ಲಕ್ಷ ಜನರ ಫೋಟೋ ಹಿಡಿದು ನೆಮ್ಮದಿ ಕೇಂದ್ರದ ಮೂಲಕ ಅರ್ಜಿಗಳನ್ನು ಸ್ವೀಕಾರ ಮಾಡಿದ್ದೀರಿ, ಅವರಿಗೆ ಮಾರ್ಚ್ ಒಂದನೇ ತಾರೀಖಿನಿಂದ ನಾನು ಅಕ್ಕಿಯನ್ನು ಬಿಡುಗಡೆ ಮಾಡುತ್ತೇನೆ; ಆ ಮೇಲೆ ಅದರಲ್ಲಿರತಕ್ಕಂತಹ ಫಲಾನುಭವಿಗಳು ಸರಿಯೋ ತಪ್ಪೋ ಎನ್ನತಕ್ಕಂಥದ್ದನ್ನು ತನಿಖೆಯನ್ನು ಮಾಡಿಸುತ್ತೇನೆ ಎಂದು ಹೇಳಿದ್ದೀರಿ. 30 ಲಕ್ಷ ಜನ ಏನು ನೆಮ್ಮದಿ ಕೇಂದ್ರದ ಮುಂದೆ ಬಂದರು, ಅವರಿಗೆ ಮಾರ್ಚ್ ಒಂದನೇ ತಾರೀಖಿನಿಂದ ಅಕ್ಕಿಯನ್ನು ಕೊಡುತ್ತೇನೆ ಎನ್ನತಕ್ಕಂತಹ ಮಾತನ್ನು ನೀವು ಬೆಳಗಾಂ ಅಧಿವೇಶನದಲ್ಲಿ ಹೇಳಿದ್ದೀರಿ. ಸದನದಲ್ಲಿ ರೆಕಾರ್ಡ್ ಆಗಿದೆ. ಆದರೆ ನೀವು ಇವತ್ತು ಈ ಬಜೆಟನ್ನು ಮಂಡಿಸಬೇಕಾದರೆ ಪಡಿತರ ಚೀಟಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ ಹೊರತು ಅಕ್ಕಿಯನ್ನು ಕೊಡತಕ್ಕಂತಹ ವಿಚಾರವನ್ನು ತಾವು ಪ್ರಸ್ತಾಪ ಮಾಡಿಲ್ಲ. ಇದು ಜನತೆಯ ಮುಂದೆ ಹೋಗುತ್ತದೆ. ಇದು ಕೇವಲ ಚುನಾವಣೆಗೋಸ್ಕರ ಕೊಡತಕ್ಕಂತಹ ಆಶ್ವಾಸನೆ ಅಲ್ಲ. ನೀವು ಉತ್ತರ ಕೊಡತಕ್ಕಂತಹ ಕಾಲದಲ್ಲಿ ಮಾರ್ಚ್ ಒಂದನೇ ತಾರೀಖಿನಿಂದ ನಾನು ಈ ರಾಜ್ಯದಲ್ಲಿ ಏನು 30 ಲಕ್ಷ ಜನ ನೆಮ್ಮದಿ ಕೇಂದ್ರದಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ ಅವರೆಲ್ಲರಿಗೂ ಅಕ್ಕಿಯನ್ನು ಕೊಡುತ್ತೇನೆ ಎನ್ನತಕ್ಕಂತಹ ವಿಚಾರವನ್ನು ಘೋಷಣೆ ಮಾಡಬೇಕಾಗುತ್ತದೆ. ಅದರ ಬಗ್ಗೆ ನೀವು ಸವಿಸ್ತಾರವಾದ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತಿದ್ದೇನೆ. ನನಗೆ ಗೊತ್ತಿರತಕ್ಕಂತಹ ಮಾಹಿತಿ ಪ್ರಕಾರ ಹಿಂದೆ ಇದ್ದಂತಹ ಕಾರ್ಡುಗಳಿಗೆ ಅಕ್ಕಿಯನ್ನು ಕೊಡಲಿಕ್ಕೆ ಹಣ ಸಾಕಾಗುವುದಿಲ್ಲ. ಆದರೆ ಈ 30 ಲಕ್ಷ ಜನರಿಗೆ ಎಲ್ಲಿಂದ ಹಣ ತರುತ್ತೀರಿ? ಕೇವಲ ಹೇಳತಕ್ಕಂಥದ್ದು ಮುಖ್ಯ ಅಲ್ಲ. ಕೇಂದ್ರ ಸರ್ಕಾರದಿಂದ ಅಕ್ಕಿ ಸಿಗುತ್ತದಾ ಎಂದು ನೀವು ಇವತ್ತು ಯೋಚನೆ ಮಾಡಬೇಕಾಗಿದೆ. ಈ ವಿಷಯವನ್ನು ನೀವು ಸದನದಲ್ಲಿ ಹೇಳಬೇಕಾಗುತ್ತದೆ. ಅಬಕಾರಿ ಇಲಾಖೆ ಬಗ್ಗೆ ಹೇಳಬೇಕೆಂದರೆ, ಹಿಂದೆ ಅಬಕಾರಿ ಇಲಾಖೆಗಳನ್ನು ಗ್ರಾಮ ಮಟ್ಟದಲ್ಲಿ ತೆರೆಯಬೇಕೆಂದು ಹೊರಟರು. ಆದರೆ ಎಲ್ಲರ ಒತ್ತಡದ ಮೇಲೆ ಅದು ನಿಂತಿತು. ಅಬಕಾರಿ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಲಿಗೆ ನೀವು ಇಷ್ಟೇ ಕೇಸ್ ಮಾರಬೇಕೆಂದು ತಾಕೀತು ಮಾಡಿದ್ದಾರೆ. ತಾಕೀತು ಮಾಡಿದಾಗ ಆ ತಾಲ್ಲೂಕಿನ ಅಧಿಕಾರಿಗಳು ಹೇಳುತ್ತಾರೆ, ಅವರು ರೀಟೇಲ್, ಅಂಗಡಿಯವರು ಹೋಲ್‌ಸೇಲ್

ಅಂಗಡಿಯವರು ತೆಗೆದುಕೊಂಡು ವ್ಯಾನ್‌ನಲ್ಲಿ ತುಂಬಿಕೊಂಡು ಊರು ಊರುಗಳಲ್ಲಿ ಮಾರುತ್ತಿದ್ದಾರೆ. ಸ್ತ್ರೀ ಶಕ್ತಿ ಸಂಘದವರು ಅದನ್ನು ಹಿಡಿದುಕೊಂಡು ಬರುತ್ತಾರೆ, ಅವರಿಗೆ ಕೇಸ್ ಹಾಕಿಸುವುದಕ್ಕೆ ಹೋಗುತ್ತಾರೆ, ಆದರೆ ಇವತ್ತಿಗೂ ಅದು ನಿಂತಿಲ್ಲ. ಪ್ರತಿಯೊಂದು ಊರಿನಲ್ಲಿ ಬಾರ್‌ಗಳು ಆಗಿವೆ. ಪ್ರತಿಯೊಂದು ಊರಿನಲ್ಲಿ ಇವತ್ತು ಸಾರಾಯಿ ಮಾರಾಟ ನಡೆಯುತ್ತಿದೆ. ಸಾರಾಯಿ ಅಂಗಡಿಗಳು ಇದ್ದಾಗ ಸಾರಾಯಿ ಅಂಗಡಿಗಳಲ್ಲಿ ವ್ಯಾಪಾರ ನಡೆಯುತ್ತಿತ್ತು. ಇವತ್ತು ಒಂದು ಊರಿಗೆ ಏಳೆಂಟು ಅಂಗಡಿಗಳಾಗಿವೆ. ಇದು ಸುಳ್ಳಾದರೆ ಪರೀಕ್ಷೆಮಾಡಿ. ಏಳೆಂಟು ಊರುಗಳಲ್ಲಿ ಎಲ್ಲಿ ಸರ್ಕಲ್ ಇದೆ, ಎಲ್ಲಿ ಗಲ್ಲಿ ಇದೆ, ಅಲ್ಲಿ ಇವತ್ತು ಬ್ರಾಂದಿ ಶಾಪ್‌ಗಳ ರೀತಿಯಲ್ಲಿ ಇವತ್ತು ಮಾರಾಟ ನಡೆಯುತ್ತಿದೆ. ಇದಕ್ಕೋಸ್ಕರವಾಗಿ ಈ ಸಾರಾಯಿಯ ನಿಷೇಧವನ್ನು ಮಾಡಬೇಕಾಗಿತ್ತಾ? ಇವತ್ತು ಆ ಬ್ರಾಂದಿಗಳನ್ನು ಕುಡಿದು ಜನ ಹಾಳಾಗುತ್ತಿದ್ದಾರೆ. ಪ್ರತಿಯೊಂದು ಊರಿನಲ್ಲಿ 10-10 ಅಂಗಡಿಗಳು ಆಗಲಿಕ್ಕೆ ಕಾರಣ ಯಾರು? ಆ ತಾಲ್ಲೂಕಿನ ಅಧಿಕಾರಿಯನ್ನು ಕರೆದು ಕೇಳಿದರೆ, ಅರಸೀಕೆರೆ ತಾಲ್ಲೂಕಿನಲ್ಲಿ 22,500 ಕೇಸ್ ನಾನು ಮಾರದೇ ಇದ್ದರೆ ನಮಗೆ ಮೇಲಧಿಕಾರಿಗಳು ನೋಟಿಸ್ ಕೊಡುತ್ತಾರೆ, ಮೀಟಿಂಗ್‌ನಲ್ಲಿ ಬೈಯುತ್ತಾರೆ, ಏನು ಮಾಡುವುದು ಸಾರ್, ಅದಕ್ಕೋಸ್ಕರ ಬೀದಿ ಬೀದಿಯಲ್ಲಿ ಮಾರುತ್ತಿದ್ದರೂ ನಾವು ಕೇಳುವುದಕ್ಕೆ ಹೋಗುವುದಿಲ್ಲ. ಎಲ್ಲಿ ಮಾರಿದರೂ ನಮಗೆ ಖರ್ಚಾಗಬೇಕು. ಎಂದು ಹೇಳುತ್ತಾರೆ.

ಶ್ರೀ ಸಿ.ಸಿ. ಪಾಟೀಲ್: ಬೀದಿ ಬೀದಿಯಲ್ಲಿ ಮಾರುತ್ತಾರೆಂದು ತಾವು ಏನು ಹೇಳುತ್ತಿದ್ದೀರಿ ಅದು ಬಹುತೇಕ ಅರಸೀಕೆರೆ ಒಳಗೆ ಮಾತ್ರ ಸೀಮಿತ ಇರಬಹುದೇನೋ ಎಂದು ನನ್ನ ಭಾವನೆ.

6-00 PM

ಉಪಾಧ್ಯಕ್ಷರು: ಗೌಡರೆ, ನೀವು ಬೇಗ ಮುಗಿಸಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಎಲ್ಲಾ ಕ್ಷೇತ್ರಗಳಲ್ಲಿ ಅಂಗಡಿಗಳಲ್ಲಿ ಮಾರುತ್ತಿದ್ದಾರೆ.

ಶ್ರೀ ಸಾ.ರಾ. ಮಹೇಶ್: ಎಲ್ಲಾ ಕ್ಷೇತ್ರಗಳಲ್ಲಿ ಅಧಿಕಾರಿಗಳಿಗೆ ಇಷ್ಟು ಮಾರಲೇಬೇಕು ಎಂದು ಟಾರ್ಗೆಟ್ ಕೊಡುತ್ತಿದ್ದಾರೆ. ಮತ್ತೆ ಇನ್ನೊಂದು ಕಡೆ ಸಾರಾಯಿಯನ್ನು ನಿಷೇಧ ಮಾಡಿದ್ದೇವೆ ಎಂದು ಹೇಳುತ್ತೀರಿ.

ಶ್ರೀ ಸಿ.ಸಿ. ಪಾಟೀಲ್: ಸಾರಾಯಿ ನಿಷೇಧವನ್ನು ಏನು ಮಾಡಲಾಗಿದೆ ಆ ಪ್ರಕಾರ ನಮ್ಮ ಕಡೆಯಲ್ಲಿ ಸಾರಾಯಿ ಮಾರಾಟ ನಮ್ಮ ಕಡೆಯಲ್ಲಿ ಇಲ್ಲ. ಆದರೆ ಆ ಭಾಗದಲ್ಲಿ ಅವರ ಸಲಿಗೆಯಿಂದ ಏನಾದರೂ ನಡೆಯುವುದಿದ್ದರೆ ನಡೆಯುತ್ತಿರಬಹುದೇನೋ ಎಂದು ನನ್ನ ಭಾವನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಾನು ಯಾವಾಗಲೂ ನಿಜಾಂಶವಿಲ್ಲದೆ ನಿಮ್ಮನ್ಯಾರನ್ನೂ ಟೀಕೆ ಮಾಡಬೇಕು ಎಂದು ಟೀಕೆ ಮಾಡುವುದಿಲ್ಲ. ನಿಜಾಂಶ, ನಾವು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರು. ಅಂಥ ಎಷ್ಟು ಕೇಸ್‌ಗಳನ್ನು ಅಲ್ಲಿ ಪ್ರತಿ ದಿವಸ ಹಿಡಿಯುತ್ತಿದ್ದಾರೆ, ಎಷ್ಟು ವ್ಯಾನ್‌ಗಳಲ್ಲಿ ಮಾರುತ್ತಾರೆ, ಈ ಬಗ್ಗೆ ಟಾರ್ಗೆಟ್ ಫಿಕ್ಸ್ ಮಾಡಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನಿಮ್ಮ ಅಧಿಕಾರಿಗಳನ್ನು ಕೇಳಿ ನೋಡಿ.

ಶ್ರೀ ಸಿ.ಸಿ. ಪಾಟೀಲ್: ಟಾರ್ಗೆಟ್ ಏಕೆ ಫಿಕ್ಸ್ ಮಾಡುತ್ತಾರೆ ಎಂದರೆ, ಸೆಕೆಂಡ್ಸ್ ಥರ್ಡ್ಸ್ ಬರಬಾರದು ಎಂದು. . .

ಶ್ರೀ ಕೆ.ಎಂ. ಶಿವಲಿಂಗೇಗೌಡ: ಈಗ ಸೆಕೆಂಡ್ಸ್ ಕೂಡ ಇಲ್ಲ, ಥರ್ಡ್ಸ್ ಕೂಡ ಇಲ್ಲ, ಇಗ ಅದೆಲ್ಲವನ್ನೂ ಸ್ಟ್ರಿಕ್ಟ್ ಮಾಡಿದ್ದೀರಿ. ಈಗ ಎಂ.ಎಸ್.ಐ.ಎಲ್.ನಿಂದ ಸ್ಟ್ರಿಕ್ಟ್ ಆಗಿ ವ್ಯಾಪಾರ ನಡೆಯುತ್ತಿದೆ. ಸರ್ಕಾರಕ್ಕೆ ಆದಾಯ ಕೂಡ ಬರುತ್ತಿದೆ.

ಶ್ರೀ ಸಾ.ರಾ. ಮಹೇಶ್: ಮಾನ್ಯ ಉಪಾಧ್ಯಕ್ಷರೆ, ಈ ರೀತಿಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್‌ರಿಂದ ವರದಿಯನ್ನು ತರಿಸಲಿ. ಎಷ್ಟೆಷ್ಟು ಕೇಸ್ ಫಿಕ್ಸ್ ಆಗಿದೆಯೆಂದು ಅವರೇ ನೋಡಿಬಿಡಲಿ. ಎಲ್ಲಾ ದಿನಸಿ ಅಂಗಡಿಗಳಲ್ಲಿಯೂ, ಮೆಡಿಕಲ್ ಸ್ಟೋರ್‌ಗಳಲ್ಲಿ ಸಿಗಬೇಕಾದಂಥ ಔಷಧಿಗಳು ಸಿಗದಿದ್ದರೂ ಕೂಡ ಎಣ್ಣೆ ಮಾತ್ರ ಎಲ್ಲಾ ಕಡೆ ಸಿಗುತ್ತಿದೆ.

ಶ್ರೀ ಸಿ.ಟಿ. ರವಿ: ಶಿವಲಿಂಗೇಗೌಡರೆ, ಅವರು ದಿನಸಿ ಅಂಗಡಿಯಲ್ಲಿ ಎಣ್ಣೆ ಸಿಗುತ್ತಿದೆಯೆಂದು ಹೇಳಿದರು. ದಿನಸಿ ಅಂಗಡಿಯಲ್ಲಿ ಎಣ್ಣೆ ಸಿಗದೇ ಇನ್ನೇನು ಸಿಗಬೇಕು ಹೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಿಮ್ಮ ಹಾಗೆಯೇ experts ಗೆದ್ದು ಬಂದಿರುತ್ತಾರ? ಸ್ವಲ್ಪ ತಪ್ಪಾಗುತ್ತದೆ. ಏನು ಮಾಡುವುದಕ್ಕಾಗುತ್ತದೆ? ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮದಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಟಾಸ್ಕ್‌ಫೋರ್ಸ್ ಮಾಡಿದ್ದೀರಿ. ನಿಜವಾಗಿಯೂ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಅದಕ್ಕೆ ಅನುದಾನವನ್ನು ಕೊಡಿ. ನಿಜವಾಗಿಯೂ ನೀವು ಶಾಸಕರ ಗೌರವ ಉಳಿಸಿದ್ದೀರಿ. ಪ್ರತಿ ದಿವಸ ಎದ್ದು ನೀರಿಲ್ಲವೆಂದು ನಾವು ಜಿಲ್ಲಾ ಪಂಚಾಯಿತಿ ಮೆಂಬರ್‌ಗಳ ಹತ್ತಿರ ಹೋಗಿ ನಾವು ಕೈಮುಗಿಯುವುದನ್ನು ನಿಲ್ಲಿಸಿದ್ದೀರಿ. ಇಂಥ ಒಳ್ಳೆಯ ವಿಚಾರವನ್ನು ನಾವು ಸ್ವಾಗತ ಮಾಡುತ್ತೇವೆ. ಇನ್ನು ರಾಜೀವ್ ಗಾಂಧಿ ಸಬ್‌ಮಿಶನ್‌ನಿಂದ ಮತ್ತು ಇನ್ಯಾವ್ಯಾವುದೋ ರೂಪದಲ್ಲಿ ದೊಡ್ಡ ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರನ್ನು ಕೊಡುತ್ತಿದ್ದಿರಿ. ಆದರೆ ಅವುಗಳಿಗೆ ಸರಿಯಾದ maintenance

ಇಲ್ಲದೇ ಅವುಗಳು ಹಾಳಾಗುತ್ತಿತ್ತು. ಬಹಳ ದೊಡ್ಡ ಮನಸ್ಸು ಮಾಡಿ ಅದಕ್ಕೆ ನೀವು ಹಣವನ್ನು ಇಟ್ಟಿದ್ದೀರಿ.. ಇವೆಲ್ಲಾ ಬಹಳ ಉತ್ತಮವಾದಂಥ ಕೆಲಸಗಳು. ಇದಲ್ಲದೇ ಬೀದಿ ದೀಪಗಳನ್ನು ಅಳವಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೀರಿ. ಇದು ನಿಜವಾಗಿಯೂ ಒಳ್ಳೆಯ ಕೆಲಸವೇ ಆಗಿದೆ. ಅದನ್ನು ನಾವು ಸ್ವಾಗತವನ್ನು ಮಾಡುತ್ತೇವೆ. ಎಲ್ಲವನ್ನೂ ನಾವು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ಕೆಲಸವನ್ನು ಮಾಡಿದ್ದರೆ ಸ್ವಾಗತವನ್ನು ಮಾಡುತ್ತೇವೆ. ಒಂದು ತಪ್ಪು ಏನಾದರೂ ಇದ್ದರೆ ಆ ತಪ್ಪನ್ನು ತಪ್ಪು ಎಂದು ಹೇಳುತ್ತೇವೆ. ಅದರ ಬಗ್ಗೆ ಪರಾಮರ್ಶೆಯನ್ನು ಮಾಡತಕ್ಕಂಥದ್ದು ಒಳ್ಳೆಯದೆ. ಆ ಬಗ್ಗೆ ಒಳ್ಳೆಯ ಸಲಹೆ, ಸೂಚನೆಗಳಿದ್ದರೆ ತೆಗೆದುಕೊಳ್ಳಿ, ಒಂದು ವೇಳೆ ದ್ವೇಷದಿಂದ ಹೇಳಿದ್ದರೆ ಅದನ್ನು ನೀವು ಕೈಬಿಡಿ.

ಉಪಾಧ್ಯಕ್ಷರು: ಬೇಗ ಮುಗಿಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇಲ್ಲ. ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ಗಂಟೆ ಸಮಯವನ್ನು ಕೊಡಬೇಕು. ನೀವು ಈ ರೀತಿ ತಾರತಮ್ಯವನ್ನು ಮಾಡಬೇಡಿ. ಎಲ್ಲರಿಗೂ ಒಂದೊಂದು ಗಂಟೆ ಸಮಯ ಕೊಟ್ಟಿರುವಾಗ ನನಗೆ ಏಕೆ ಈ ರೀತಿ ನೀವು ಹೇಳುತ್ತೀರಿ? ನನಗೂ ಕೂಡ ಅಷ್ಟೇ ಸಮಯವನ್ನು ಕೊಡಿ. ನೀವು ಈ ರೀತಿ ತಾರತಮ್ಯವನ್ನು ಮಾಡಬೇಡಿ.

ಉಪಾಧ್ಯಕ್ಷರು: ನಿಮ್ಮ ಪಕ್ಷಕ್ಕೆ ಕೊಟ್ಟಿರುವುದೇ ಒಂದೂವರೆಗಂಟೆ. Please, ಬೇಗ ಮುಗಿಸಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಯಶಸ್ವಿನಿ ಕಾರ್ಯಕ್ರಮವೇನಿದೆ ಅದು ಒಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಆ ಯಶಸ್ವಿನಿ ಕಾರ್ಯಕ್ರಮಕ್ಕೆ ಕಳೆದ ಸಾಲಿನಲ್ಲಿ ಬಜೆಟ್‌ನಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರೋ ಅಷ್ಟೇ ಹಣವನ್ನು ಈ ಸಾಲಿನಲ್ಲಿ ಇಟ್ಟಿದ್ದೀರಿ. ದಯಮಾಡಿ ಈ ಕಾರ್ಯಕ್ರಮಕ್ಕೆ ಇನ್ನೂ ಸ್ವಲ್ಪ ಹೆಚ್ಚು ಹಣವನ್ನು ಇಡಿ. ಈ ಕಾರ್ಯಕ್ರಮದಿಂದ ಈ ದೇಶದ ಬಡವರು ನಿಜವಾಗಿಯೂ ಉದ್ಧಾರವಾಗಿದ್ದಾರೆ. ಅವರಿಗೆ ಬರತಕ್ಕಂಥ ರೋಗರುಜಿನಗಳ ಕಷ್ಟವನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಆರೋಗ್ಯ ಇಲಾಖೆಯಲ್ಲಿ ಮಾಡಿರತಕ್ಕಂಥ ಈ ಯೋಜನೆ ನಿಜವಾಗಿಯೂ ಉತ್ತಮವಾಗಿದೆ. ದಯಮಾಡಿ ಆ ಯೋಜನೆಗೆ ಇನ್ನಷ್ಟು ಹಣವನ್ನು ತೊಡಗಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿ ಮೊನ್ನೆ ಇನ್ನೊಂದು ಸ್ಕೀಂ ಬಗ್ಗೆ ಪತ್ರಿಕೆಯಲ್ಲಿ ನೀವು ಅನೌನ್ಸ್ ಮಾಡಿದ್ದೀರಿ. 66 ಸಾವಿರ ಕಿ.ಮೀ.ರಸ್ತೆಯನ್ನು ನಾವು ಅಭಿವೃದ್ಧಿಪಡಿಸುತ್ತೇವೆ ಎಂದು ನೀವು ಹೇಳಿರುವುದು ಪತ್ರಿಕೆಗಳಲ್ಲಿ ಮತ್ತು ಮಧ್ಯಮಗಳಲ್ಲಿ ವರದಿ ಬಂತು. ನೀವು ಒಂದು ಶಂಕುಸ್ಥಾಪನೆಯನ್ನು ಮಾಡಿದಿರಿ

ಎಂದು ಕಾಣುತ್ತದೆ. ಆದರೆ ಎಲ್ಲಿದೆ ಹಣ? ಖಾಸಗಿ ಸಹಭಾಗಿತ್ವ ಎಂದು ಹೇಳಿದ್ದೀರಿ. ಈ ರಾಜ್ಯದಲ್ಲಿ ಜನಪ್ರತಿನಿಧಿಗಳು ಎಂದು ನಾವು ಇಲ್ಲಿ ಇದ್ದೇವೆ. ಯಾವುದೇ ಒಂದು ಯೋಜನೆಯನ್ನು ತರಬೇಕಾದರೆ, ಮೊದಲು ಇಂಥ ದೊಡ್ಡ ಪ್ರಮಾಣದ ಯೋಜನೆಯನ್ನು ತರತಕ್ಕಂಥ ಕಾಲದಲ್ಲಿ ಜನಪ್ರತಿನಿಧಿಗಳನ್ನು ಕತ್ತಲೆ ಕೋಣೆಯಲ್ಲಿಟ್ಟು ಇಂಥ ಯೋಜನೆಗಳನ್ನು ತಯಾರು ಮಾಡತಕ್ಕಂಥದ್ದಲ್ಲ. ಮೊದಲು ಪಾಲಿಸಿಯನ್ನು ತಯಾರು ಮಾಡಬೇಕು. ಆ ಪಾಲಿಸಿ ಬಗ್ಗೆ ಜನಪ್ರತಿನಿಧಿಗಳನ್ನು ಕರೆಸಿ ಚರ್ಚೆಯನ್ನು ಮಾಡಬೇಕು. ಜನಪ್ರತಿನಿಧಿಗಳ ಮಧ್ಯದಲ್ಲಿ ಚರ್ಚೆಯಾದ ನಂತರ ಅದನ್ನು ಸಾರ್ವಜನಿಕ ರಂಗಕ್ಕೂ ಬಿಡಬೇಕು. ಅವರಿಂದ ಈ ಬಗ್ಗೆ ಯಾವ ರೀತಿಯ ಪ್ರತಿಕ್ರಿಯೆ ಬರುತ್ತದೆ ಎನ್ನತಕ್ಕಂಥದ್ದನ್ನು ನಾವು ಆಲೋಚನೆಯನ್ನು ಮಾಡಬೇಕು. ತದನಂತರ ಆ ಕಾರ್ಯಕ್ರಮವನ್ನು ಜಾರಿಗೆ ತರತಕ್ಕಂಥದ್ದು ಆಗಬೇಕು. ಪ್ರಜಾಪ್ರಭುತ್ವ ವ್ಯವಸ್ಥೆ ನಮ್ಮಲ್ಲಿ ಇರುವುದು. ಆದರೆ ನೀವು ಮಧ್ಯಾಹ್ನ 12.00 ಗಂಟೆಗೆ ಕ್ಯಾಬಿನೆಟ್ ಮೀಟಿಂಗ್ ಮಾಡುತ್ತೀರಿ. ನಾಳೆ 3.00 ಗಂಟೆಗೆ ಗುದ್ದಲಿ ಪೂಜೆಯನ್ನು ಮಾಡುತ್ತೀರಿ. ಇವು ಯೋಜನೆಗಳೆ? ನಾವೇನೂ ಜನಪ್ರತಿನಿಧಿಗಳಲ್ಲವೆ? ನಮ್ಮ ಜನರು ಇಷ್ಟೊಂದು ಕಿ.ಮೀ. ರಸ್ತೆಯನ್ನು ಹೇಗೆ ಮಾಡುತ್ತಾರೆ ಎಂದು ನಮ್ಮನ್ನು ಕೇಳಿದರೆ ಅವರಿಗೆ ಹೇಳುವುದಕ್ಕೆ ನಮಗೇ ಇದರ ಬಗ್ಗೆ ಮೊದಲು ವಿಚಾರ ಗೊತ್ತಿರುವುದಿಲ್ಲ. ಮಾಧ್ಯಮದವರೂ ಕೂಡ ಈ ಬಗ್ಗೆ ವಿವರಗಳನ್ನು ಬರೆಯುವುದಿಲ್ಲ. ಮಾಧ್ಯಮದವರು ಬರೆಯುವುದಿಷ್ಟೇ, ಯಡಿಯೂರಪ್ಪನವರ ಕೊಡುಗೆ, 66 ಸಾವಿರ ಕಿ.ಮೀ. ರಸ್ತೆ ಆಗಿಹೋಯಿತು, ಉತ್ತರ ಕರ್ನಾಟಕಕ್ಕೆ ಮೊದಲನೆಯ ಸ್ಥಾನ, ದಕ್ಷಿಣ ಕರ್ನಾಟಕಕ್ಕೆ ಎರಡನೆಯ ಸ್ಥಾನ. ಇದು ಈ ರೀತಿ ಬರುತ್ತದೆ. ನಾವು ಮಾಧ್ಯಮದಲ್ಲಿ ಇದನ್ನು ನೋಡಿದ್ದೂ ನೋಡಿದ್ದೇ. ಇನ್ನೇನು ರಸ್ತೆಗಳೆಲ್ಲಾ ಆಗಿಹೋಗುತ್ತದೆ ಎಂದುಕೊಂಡರೆ ನೀವು ಈಗ ಹೇಳುತ್ತಿದ್ದೀರಿ ಖಾಸಗಿ ಸಹಭಾಗಿತ್ವವೆಂದು. ಹತ್ತು ಸಾವಿರ ಕಿ.ಮೀ. ಹೆದ್ದಾರಿ ರಸ್ತೆಗಳನ್ನು ಮಾಡಲು ಯೋಜನೆ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದೀರಿ. ಪಾಲಿಸಿ ಮ್ಯಾಟರ್‌ನಲ್ಲಿ ಹೆದ್ದಾರಿಗಳಾದರೂ ಆಗಬಹುದು. ಆದರೆ ಗ್ರಾಮೀಣ ಪ್ರದೇಶದ ರಸ್ತೆಗಳನ್ನು ನೀವು ಖಾಸಗಿ ಸಹಭಾಗಿತ್ವದಲ್ಲಿ ಮಾಡುತ್ತೇವೆಂದು ಹೇಳಿದ್ದೀರಲ್ಲ ಇದನ್ನು ನಾವು ನಂಬಬಹುದೆ? ಇದನ್ನು ನಾವು ನಂಬಬಹುದೆ? ಇವತ್ತು ಬೆಳ್ಳೂರು ಕ್ರಾಸ್‌ನಿಂದ ಹಾಸನಕ್ಕೆ ರಸ್ತೆ ಮಾಡುವ ಬಗ್ಗೆ ಕರೆದಿರುವ ಟೆಂಡರ್‌ಗೆ ಇನ್ನೂ ಯಾರೂ ಬಂದಿಲ್ಲ. ಏನಿವತ್ತು District Roads ಇವೆ, ಗ್ರಾಮೀಣ ರಸ್ತೆಗಳಿವೆ ಅವುಗಳಿಗೆ ಯಾವ ರೀತಿಯ ಪಾಲಿಸಿಯನ್ನು ನೀವು ಮಾಡಿದ್ದೀರಿ ಎಂಬುದನ್ನು ಜನತೆಗೆ ಹೇಳುವುದಕ್ಕೆ ಮೊದಲು ನಮಗೇ ಗೊತ್ತಿಲ್ಲ. ನೀವು ಹೇಳಿ. ಮೊದಲು ನೀವು ಪಾಲಿಸಿ ಬಿಡಿ.

ಆಮೇಲೆ ಯೋಜನೆಯನ್ನು ಮಾಡಿ. ಆಮೇಲೆ ಕಾರ್ಯಗತವನ್ನು ಮಾಡಿ, ಸ್ವಾಮಿ. ನಮ್ಮನ್ನೆಲ್ಲಾ ಏಕೆ ಕತ್ತಲೆ ಕೋಣೆಯಲ್ಲಿಡುತ್ತೀರಿ? ಇದು ಕೇವಲ ಚುನಾವಣಾ ದೃಷ್ಟಿಯಿಂದ ಆತುರ ಆತುರವಾಗಿ ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಮಾಡಬೇಡಿ. ಇವತ್ತು ಖಾಸಗಿ ಸಹಭಾಗಿತ್ವದಲ್ಲಿ ನಿಮ್ಮದು ಎಷ್ಟು ಪರ್ಸೆಂಟ್? ಅವರದು ಎಷ್ಟು ಪರ್ಸೆಂಟ್? ಅವರಿಗೆ ನೀವು ಏನೇನು ಸವಲತ್ತುಗಳನ್ನು ಕೊಡುತ್ತೀರಿ? ಅವರು ಯಾವ ರೀತಿಯಲ್ಲಿ ಹಣದ ಬಗ್ಗೆ ಹೇಳಿದ್ದಾರೆ? ಇದನ್ನೆಲ್ಲಾ ಜನತೆಗೆ ನೀವು ತಿಳಿಸಬೇಕು. ಈ ಬಗ್ಗೆ ಮೊದಲು ಜನಪ್ರತಿನಿಧಿಗಳಿಗೆ ತಿಳಿಸಬೇಕು. ಜನಪ್ರತಿನಿಧಿಗಳಿಗೆ ತಿಳಿಸದೇ ಇರತಕ್ಕಂಥ ಕಾನೂನು, ಯೋಜನೆಗಳು ಈ ದೇಶದಲ್ಲಿ ಬರುವುದಾದರೆ ನಮ್ಮ ಸ್ಥಿತಿಗತಿ ಏನು ಎನ್ನತಕ್ಕದ್ದರ ಬಗೆ ನೀವು ಯೋಚನೆಯನ್ನು ಮಾಡಬೇಕು. ಇವತ್ತು ಯಾವುದೇ ಒಬ್ಬರು ಶಾಸಕರಿಗೂ ಕೂಡ ಆ ವಿಚಾರ ಗೊತ್ತಿಲ್ಲ. 66 ಸಾವಿರ ಕಿ.ಮೀ., ಖಾಸಗಿ ಸಹಭಾಗಿತ್ವ, ಯಾರು ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ದುಡ್ಡು ಕೊಟ್ಟು ಕಾರ್ ಓಡಿಸಿಕೊಂಡು ಹೋಗುವುದು, ಬಸ್ ಓಡಿಸಿಕೊಂಡು ಹೋಗುವುದಕ್ಕೆ ಇವತ್ತು ಆಗುತ್ತದೆಯೇ? ಆ ರಸ್ತೆಗಳಲ್ಲಿ ಎಷ್ಟು ವೆಹಿಕಲ್‌ಗಳು ಹೋಗುತ್ತವೆ? ಇದು ಸಾಧ್ಯವಿದೆಯೇ? ಆದುದರಿಂದ ಈ ಬಗ್ಗೆ ಮೊದಲು ಪಾಲಿಸಿ ಮಾಡಿ. ಆ ಪಾಲಿಸಿಯನ್ನು ಶಾಸನಸಭೆಯಲ್ಲಿ ಮಂಡಿಸಿ. ಮಂಡಿಸಿ ಆ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕಾಗುವುದಕ್ಕಾಗುತ್ತದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸದನದಲ್ಲಿ ಚರ್ಚೆಯಾಗಲಿ. ಚರ್ಚೆಯಾದ ಮೇಲೆ ಈ ಬಗ್ಗೆ ಜನಗಳನ್ನೂ ಕೇಳೋಣ. ಜನಗಳು ಒಪ್ಪಿಕೊಂಡ ಮೇಲೆ ಆಮೇಲೆ ಕಾರ್ಯಕ್ರಮದ ಬಗ್ಗೆ ಯೋಜನೆಯನ್ನು ರೂಪಿಸಬೇಕು. ಅದನ್ನು ಬಿಟ್ಟು ಕ್ಯಾಬಿನೆಟ್‌ನಲ್ಲಿ ಮಧ್ಯಾಹ್ನ ತೀರ್ಮಾನವನ್ನು ತೆಗೆದುಕೊಳ್ಳುವುದು, ಬೆಳಗ್ಗೆ ಎದ್ದು ಗುದ್ದಲಿ ಪೂಜೆಯನ್ನು ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದನ್ನು ದಯಮಾಡಿ ಇನ್ನು ಮುಂದೆ ಮಾಡಬೇಡಿ. ಇಂಥ ಕಾರ್ಯಕ್ರಮಗಳಿಗೆ ದಯಮಾಡಿ ಇನ್ನುಮುಂದೆ ಅವಕಾಶ ಮಾಡಿಕೊಡಬೇಡಿ. ಇದು ಹಂಡ್ರೆಡ್ ಪರ್ಸೆಂಟ್ ಎಂದು ನಾನು ತಿಳಿದುಕೊಂಡೆ. ಹಂಡ್ರೆಡ್ ಪರ್ಸೆಂಟ್ ಖಾಸಗಿ ಸಹಭಾಗಿತ್ವ ಎಂದು ಹೇಳಿದರು. ಇದು ಸಕ್ಸಸ್ ಆಗುವುದಿಲ್ಲ. ಹಂಡ್ರೆಡ್ ಪರ್ಸೆಂಟ್ ಖಾಸಗಿ ಸಹಭಾಗಿತ್ವದಲ್ಲಿ ಗ್ರಾಮೀಣ ರಸ್ತೆಗಳನ್ನು ಮಾಡುವುದಕ್ಕೆ ಯಾರೂ ಬರುವುದಿಲ್ಲ. ಆದುದರಿಂದ ನೀವು ದಯಮಾಡಿ ತಿಳಿದುಕೊಳ್ಳಬೇಕು. ಇಂಥ ಕಾರ್ಯಕ್ರಮಗಳನ್ನು ಯಾವುದೇ ಕಾರಣದಿಂದ ಇವತ್ತು ಕಾರ್ಯರೂಪಕ್ಕೆ ತರತಕ್ಕಂಥ ರೀತಿಯಲ್ಲಿ ನೀವು ಯೋಜನೆಯನ್ನು ಮಾಡಬಾರದು ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಇನ್ನು ಇವತ್ತು ನೀರಾವರಿಗೆ ನೀವು ಹಣವನ್ನು ತೊಡಗಿಸಿದ್ದೀರಿ. ಇವತ್ತು ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಆ

ನೀರಾವರಿಗೆ ಇಡತಕ್ಕಂಥ ಹಣದಲ್ಲಿ ನೀವು ಎಷ್ಟು ಇವತ್ತು ಕೃಷ್ಣಾ ಜಲ ಭಾಗ್ಯ ನಿಗಮದಿಂದ, ಕಾವೇರಿ ಜಲಭಾಗ್ಯ ನಿಗಮದಿಂದ ಬ್ರಾಂಡ್‌ಗಳಿಗೆ ರೀಪೇಮೆಂಟ್ ಕೊಡಬೇಕು ಎಂಬ ಬಗ್ಗೆ ತಿಳಿಸುತ್ತಿಲ್ಲ. ಒಟ್ಟು 3,000 ಚಿಲ್ಲರೆ ಕೋಟಿ ರೂಪಾಯಿ ಎಂದು ಹೇಳಿದಿರಿ. ಅದರಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಸಾಲಕ್ಕೆ ಹೋಗುತ್ತದೆ. ಇನ್ನು ಎಷ್ಟು ಉಳಿದುಕೊಳ್ಳುವುದು? ನೀವು announce ಮಾಡಿರುವ ಯೋಜನೆಗಳು ಎಷ್ಟು? ಏತನೀರಾವರಿ ಯೋಜನೆಗಳು ಎಷ್ಟು? ಚಿಮ್ಮಲಗಿ ಏತ ನೀರಾವರಿ ಯೋಜನೆ ಒಂದಕ್ಕೆ 2,173 ಕೋಟಿ ರೂಪಾಯಿ ಎಂದು ಹೇಳಿದಿರಿ. ಅಪ್ಪರ್ ಭದ್ರಾಗೆ 3,000 ಕೋಟಿ ರೂಪಾಯಿ ಎಂದು ಹೇಳಿದಿರಿ. ಅದು ಎಲ್ಲಿಂದ ಬರುತ್ತದೆ? ಏತ ನೀರಾವರಿಗಳನ್ನು ಮಾಡಿ ಉದ್ಧಾರವಾಗುವುದಕ್ಕೆ ಆಗುತ್ತದೆಯೇ? ಇಂತಹ ಕಾರ್ಯ ಕ್ರಮಗಳನ್ನು ಮಾಡಿಕೊಡುವುದಕ್ಕೆ ಹಣ ಎಲ್ಲಿದೆ? ಬಂಡವಾಳದ ವೆಚ್ಚವನ್ನು ಹೆಚ್ಚಿಗೆ ಮಾಡಿ ನೀರಾವರಿಗೆ ತೊಡಗಿಸಿ. ನೀರಾವರಿಯಾದರೆ ಅದು permanent asset create ಆಗುತ್ತದೆ. ದಯವಿಟ್ಟು ಆ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಇವತ್ತು 5 ಜಿಲ್ಲೆಯ ಭವಿಷ್ಯದ ಹಿತದೃಷ್ಟಿಯಿಂದ ಹೇಳುವುದಾದರೆ ನೇತ್ರಾವತಿ ತಿರುವಿನ ಯೋಜನೆ ಇದೆ. ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ 15 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಟ್ಟಿದ್ದರು. ಮಾನ್ಯ ಪರಮಶಿವಯ್ಯರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಕುಡಿಯುವ ನೀರು ಯೋಜನೆ ಬಗ್ಗೆ ಒಂದು ಕಮಿಟಿ ರಚನೆ ಮಾಡಿದ್ದಿರಿ, ಆ ಕಮಿಟಿ report ತೆಗೆದುಕೊಂಡಿಲ್ಲ. ದಯಮಾಡಿ ಆ ಕಮಿಟಿ ರಿಪೋರ್ಟ್ ಅನ್ನು ತೆಗೆದುಕೊಳ್ಳಿ. ಇವತ್ತು ನೇತ್ರಾವತಿ ತಿರುವನ್ನು ಮಾಡುವುದರ ಮುಖಾಂತರ ಐದು ಜಿಲ್ಲೆಗಳು ಪಾವನವಾಗುತ್ತದೆ. ಇದನ್ನು ಕೈಬಿಡಬೇಡಿ. ದಯಮಾಡಿ ನೇತ್ರಾವತಿ ತಿರುವು ಯೋಜನೆಯನ್ನು ತೆಗೆದುಕೊಳ್ಳಬೇಕು. ಇದು ಏತನೀರಾವರಿ ಅಲ್ಲ. ಇದು ಕಾಲುವೆಗಳ ಮುಖಾಂತರ ನೀರನ್ನು ಹರಿಸುವಂತಹ ಒಂದು ಯೋಜನೆ ಹಿಂದೆ ಇದ್ದಂತಹ ಮಾನ್ಯ ವಿಶ್ವೇಶ್ವರಯ್ಯನವರನ್ನು ಅನ್ನದಾತರು ಎಂದು ಮಂಡ್ಯ ಜಿಲ್ಲೆ ಹಾಗೂ ಬೆಂಗಳೂರಿನವರೆಲ್ಲ ಕೂಡ ಕರೆಯಬೇಕಾಗುತ್ತದೆ. ಅದೇ ರೀತಿ ಮಾನ್ಯ ಪರಮಶಿವಯ್ಯನವರು ಮಾಡಿರುವಂತಹ ಯೋಜನೆ ಏನಿದೆ, ಅದರಿಂದ ಬೆಂಗಳೂರು ಜಿಲ್ಲೆಯಿಂದ ಕೋಲಾರ ಜಿಲ್ಲೆಯವರೆಗೆ, ನಮ್ಮ 5 ಜಿಲ್ಲೆಗೆ ಅವರು ಅನ್ನದಾತರಾಗುತ್ತಾರೆ. ಅದರ ಬಗ್ಗೆ ನಾನು ಕುಳಿತು ಬಹಳ ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ಅದು ನಿಜವಾಗಲೂ ಸತ್ಯದಿಂದ ಕೂಡಿದೆ. ಅವರು challenge ತೆಗೆದುಕೊಂಡಿದ್ದಾರೆ. ಆ ಯೋಜನೆ fail ಆದರೆ ನಾನು ನೀವು ಕೇಳಿದ ದಂಡಕ್ಕೆ ಗುರಿಯಾಗುತ್ತೇನೆಂದು ಹೇಳಿದ್ದಾರೆ. ಆದುದರಿಂದ ದಯಮಾಡಿ ಅದನ್ನು

ಕಾರ್ಯಗತ ಮಾಡಿ. ಹಿಂದೆ ಮಾನ್ಯ ಕೃಷ್ಣ ಅವರ ನೇತೃತ್ವದಲ್ಲಿ ಕಮಿಟಿ ರಚನೆಯಾಗಿ ಕೇಂದ್ರ ಸರ್ಕಾರದ ಇಸ್ರೋ ಕಂಪನಿಗೆ ಏನು ಕೊಟ್ಟಿದ್ದರು, ಆ ಕಂಪನಿಗೆ ದುಡ್ಡು ಕೊಟ್ಟಿಲ್ಲವಾದ್ದರಿಂದ ಅವರು ನಿಮಗೆ ರಿಪೋರ್ಟ್ ಕೊಟ್ಟಿಲ್ಲ. ಈ ರೀತಿ ಮಾಡಬೇಡಿ. ದಯಮಾಡಿ ವರದಿಯನ್ನು ತರಿಸಿ. ಇವತ್ತು ಆ ಐದು ಜಿಲ್ಲೆಯ ಜನ ಸಂಪೂರ್ಣವಾಗಿ ಆ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಒತ್ತಾಯ ಮಾಡುತ್ತೇವೆ. ಬಂಡವಾಳದ ವೆಚ್ಚ ಏನಿದೆ, ಅದರಲ್ಲಿ ಈ ಕಾರ್ಯವನ್ನು ಮಾಡುವುದಕ್ಕೆ ಈ ಸಾರಿ 2,000 ಕೋಟಿ ರೂಪಾಯಿಯನ್ನು ಇಟ್ಟು, ನೇತ್ರಾವತಿ ತಿರುವು ಮಾಡುವಂತಹ ಒಂದು ಯೋಜನೆಗೆ ಚಾಲನೆಯನ್ನು ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇವತ್ತು ಹಿಂದುಳಿದ ವರ್ಗಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀವು ಕೊಡುತ್ತಿದ್ದೀರಿ. ನಿಜ, ಹಿಂದುಳಿದ ವರ್ಗಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದೀರಿ. ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದರು. ಹಿಂದುಳಿದ ವರ್ಗಕ್ಕೆ ಕೆಲವೊಂದು ವಿಚಾರಗಳನ್ನು ಮಾಡಿದಂತಹ ವ್ಯಕ್ತಿಗಳನ್ನು ಇಂತಹ ಸಭೆಗಳಲ್ಲಿ ಹೇಳ ಬೇಕಾಗುತ್ತದೆ. ಇದೇ ಸದನದಲ್ಲಿ ಹಿಂದುಳಿದ್ದ ವರ್ಗಕ್ಕೆ ರಾಜಕೀಯ ಮೀಸಲಾತಿಯನ್ನು ಕೊಟ್ಟಿರತಕ್ಕಂಥವರು, ಈ ರಾಜ್ಯದಲ್ಲಿ ಮೂರು ಜನ ಯುಗಪುರುಷರಿದ್ದಾರೆ. ಆರ್ಥಿಕ ಸಂಕಷ್ಟದಲ್ಲಿದ್ದಂತಹ ಹಿಂದುಳಿದ ವರ್ಗಗಳಿಗೆ, ಆರ್ಥಿಕ ನಿಗಮಗಳನ್ನು ಸ್ಥಾಪನೆ ಮಾಡಿದವರು ದಿ: ದೇವರಾಜ್ ಅರಸುರವರು. ಅದೇ ರೀತಿಯಲ್ಲಿ ಇವತ್ತು ಹಿಂದುಳಿದ ವರ್ಗಕ್ಕೆ ರಾಜಕೀಯ ಕ್ಷೇತ್ರದಲ್ಲಿ ರಾಜಕೀಯ ಮೀಸಲಾತಿಯನ್ನು ನೀಡಿ, ಸ್ಥಳೀಯ ಸಂಸ್ಥೆಗಳೇನಿವೆ, ಅದರಲ್ಲಿ ಎಲ್ಲಾ ಹಿಂದುಳಿದ ಜನಾಂಗದವರು ಪಾಲ್ಗೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದವರೆಂದರೆ, ಅವರು ಈ ದೇಶದ ಮಾಜಿ ಪ್ರಧಾನಿಗಳಾದಂತಹ ಶ್ರೀಮಾನ್ ದೇವೇಗೌಡರು ಎನ್ನುವುದನ್ನು ನಾವು ಈ ಸಂದರ್ಭದಲ್ಲಿ ಅರ್ಥ ಮಾಡಿಕೊಳ್ಳಬೇಕು. ಅದನ್ನು ಅವರೇ ಮಾಡಿದವರು, ಅದನ್ನು ಯಾರೂ ಅಲ್ಲಗೆಳೆಯುವುದಕ್ಕಾಗುವುದಿಲ್ಲ. ರಾಜಕೀಯ ಮೀಸಲಾತಿಯನ್ನು ಇವತ್ತು ಹಿಂದುಳಿದ ವರ್ಗಕ್ಕೆ ಏನಾದರೂ ಕೊಟ್ಟಿದ್ದರೆ, ಅದು ಶ್ರೀಮಾನ್ ದೇವೇಗೌಡರು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿ ವಿ.ಪಿ. ಸಿಂಗ್‌ರವರು, IAS, IPS ಯಾವ ಒಂದು ವರ್ಗಕ್ಕೆ ಮೀಸಲಾಗಿತ್ತು ಆ ಜನಾಂಗ ಅಲ್ಲ, ಹಿಂದುಳಿದ ವರ್ಗಕ್ಕೆ IAS, IPS ಕೊಡಬೇಕು ಎಂದು ಒಬ್ಬ ವ್ಯಕ್ತಿ ನಾನು ಚುನಾಯಿತನಾಗಿ ಬರುವವರೆಗೂ ದೆಹಲಿಯನ್ನು ಪ್ರವೇಶ ಮಾಡುವುದಿಲ್ಲವೆಂದು ಹೇಳಿ ಮಂಡಲ್ ಕಮಿಷನ್ ಮುಖಾಂತರ ಅಧಿಕಾರವನ್ನು ತ್ಯಾಗ ಮಾಡಿರುವಂತಹ ಒಬ್ಬ ವ್ಯಕ್ತಿ. ಅವರು ಹಿಂದುಳಿದ ವರ್ಗಗಳ

ಏಳಿಗೆಗೋಸ್ಕರವಾಗಿ ಮಾಡಿರುವಂತಹ ಪ್ರಾಮಾಣಿಕತೆಯನ್ನು ನಾವು ಈ ಸಂದರ್ಭದಲ್ಲಿ ನೆನೆದುಕೊಳ್ಳಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಈ ದೇಶದ ಜನತೆಯ ದೃಷ್ಟಿಯಿಂದ, ನೀವು ಮಾಡಿರುವಂತಹ ಜಾತಿ ಜಾತಿಗಳ ಮಧ್ಯದಲ್ಲಿ ಸಂಘರ್ಷವನ್ನು ತಂದಿಟ್ಟು, ಇವತ್ತು ಎಲ್ಲಾ ಜನಾಂಗಗಳಿಗೆ, ಸಾಮಾಜಿಕ ಸೇವೆಗಳಿಗೆ ಮೀಸಲು ಎನ್ನುವಂತಹ ರೀತಿಯಲ್ಲಿ ಈ ಒಂದು ಬಜೆಟ್‌ನ್ನು ಮಂಡನೆ ಮಾಡಿದ್ದೀರಿ. ಇದು ಬಹಳ ಅವೈಜ್ಞಾನಿಕವಾದಂತಹ ಬಜೆಟ್. ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಬಂಡವಾಳದ ವೆಚ್ಚದಲ್ಲಿ ನೀಡಿರುವಂತಹ ಹಣ ಕಡಿಮೆ ಇದೆ. ಯಾವ ರಾಜ್ಯ ಬಂಡವಾಳ ವೆಚ್ಚವನ್ನು ಮಾಡತಕ್ಕಂಥದ್ದರಲ್ಲಿ ಮೊದಲನೆ ಸ್ಥಾನ ಪಡೆಯುತ್ತದೆ, ಅದನ್ನು ನಮ್ಮ ವೈರಿಗಳಾದರೂ ಮೆಚ್ಚುತ್ತೇವೆ ಎಂದು ಹೇಳಿ. ಸಾಮಾನ್ಯ ವಿಷಯಗಳಿಗೆ ಹೆಚ್ಚಿನ ಹಣವನ್ನು ಕೊಟ್ಟಿರುವುದರಿಂದ ಇದನ್ನು ನಾವು ವಿರೋಧ ಮಾಡುತ್ತೇನೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

4. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ: ಸಾಗರ ಕ್ಷೇತ್ರ ಮತ್ತು ಮಲೆನಾಡಿನ ಬಹುಭಾಗಗಳಲ್ಲಿ ಒಣಗಿದ ಬಿದಿರುಗಳಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದಲ್ಲಿ, ಇಡೀ ಅರಣ್ಯ ಸಂಪತ್ತು ನಾಶವಾಗುವ ಸಂಭವ ಇರುತ್ತದೆ. ಆದುದರಿಂದ ಉಪಯುಕ್ತವಾದುದನ್ನು ಬಳಸಿಕೊಂಡು ನಂತರದಲ್ಲಿ ಈ ಬಿದಿರುಗಳನ್ನು ನಾಶ ಮಾಡುವಂತೆ ಮುಂಜಾಗ್ರತ ಕ್ರಮವನ್ನು ಕೈಗೊಳ್ಳುವ ಬಗ್ಗೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು (ಸಾಗರ): ಮಾನ್ಯ ಉಪಾಧ್ಯಕ್ಷರೆ, ಸಾಗರ ಕ್ಷೇತ್ರ ಮತ್ತು ಮಲೆನಾಡಿನ ಬಹುಭಾಗಗಳಲ್ಲಿ ಒಣಗಿದ ಬಿದುರುಗಳಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದಲ್ಲಿ, ಇಡೀ ಅರಣ್ಯ ಸಂಪತ್ತು ನಾಶವಾಗುವ ಸಂಭವ ಇರುತ್ತದೆ. ಆದುದರಿಂದ ಉಪಯುಕ್ತವಾದುದನ್ನು ಬಳಸಿಕೊಂಡು ನಂತರದಲ್ಲಿ ಈ ಬಿದಿರುಗಳನ್ನು ನಾಶ ಮಾಡುವಂತೆ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

2007-08 ಮತ್ತು 2008-09ನೇ ಸಾಲಿನಲ್ಲಿ ಹೂಬಿಟ್ಟ ಮತ್ತು ಒಣಗಿರುವ ಬಿದಿರುಗಳನ್ನು ತೆಗೆಯಲು ದಿನಾಂಕ: 19-02-2008, 07-03-2008 ಮತ್ತು 16-05-2008 ರಂದು ಟೆಂಡರ್ ಕರೆಯಲಾಗಿತ್ತು. ಆದರೆ, ಯಾವುದೇ ಟೆಂಡರ್ ಬಾರದೇ ಇದ್ದುದರಿಂದ ಒಣಗಿದ ಬಿದಿರುಗಳನ್ನು ಇಲಾಖಾ ವತಿಯಿಂದ ತೆಗೆಯಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ, ಒಣ ಬಿದಿರು ತೆಗೆಯುವ ಕಾರ್ಯಕ್ರಮದ ವಿವರ ಕೆಳಗಿನಂತಿದೆ.

ವಿಭಾಗ	ದೊರೆಯಬಹುದಾದ ಬಿದಿರುಗಳು (ಮೆಟ್ರಿಕ್ ಟನ್)	ಇಲಾಖಾ ಮತ್ತು ಎಂಪಿಎಂ ವತಿಯಿಂದ ಕಟಾವಣೆ ಮಾಡಿರುವ ಪ್ರಮಾಣ (ಟನ್)
ಶಿವಮೊಗ್ಗ	3723	2914
ಸಾಗರ	1740	-
ಭದ್ರಾವತಿ	297830	1500
ಒಟ್ಟು	383293	4414

ಇದೂ ಅಲ್ಲದೆ, ಇತರ ಮಲೆನಾಡು ಪ್ರದೇಶಗಳಲ್ಲಿ ಇಲಾಖಾ ವತಿಯಿಂದ ಹಾಗೂ ಕರ್ನಾಟಕ ಕೈಗಾರಿಕಾ ವತಿಯಿಂದ ಒಣ ಬಿದಿರು ತೆಗೆಯಲು ಈ ಕೆಳಗಿನಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವೃತ್ತ	ವಿಭಾಗ	ಒಣ ಬಿದಿರು ದೊರಕುವ ಪ್ರಮಾಣ	ಇಲಾಖಾ ವತಿಯಿಂದ ಕಟಾವಣೆಯಾದ ಪ್ರಮಾಣ	ಎಂಪಿಎಂ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಕಟಾವಣೆಯಾದ ಬಿದಿರಿನ ಪ್ರಮಾಣ
ಕೆನರಾ	ಹಳಿಯಾಳ	50,000	16777	2885
	ಕಾರವಾರ	3,000	3000	-
	ಯಲ್ಲಾಪುರ	5,150	2500	-
ಶಿವಮೊಗ್ಗ	ಭದ್ರಾವತಿ	297830	-	1500
	ಸಾಗರ	1740	-	-
	ಶಿವಮೊಗ್ಗ	83723	-	2914

ಬೆಳಗಾಂ	ಬೆಳಗಾಂ	2035383	10300	-
	ಒಟ್ಟು	**2446686**	**32577**	**7299**

ಈ ರೀತಿ ಇಲಾಖಾ ವತಿಯಿಂದ, ಎಂಪಿಎಂ ಮತ್ತು ಕರ್ನಾಟಕ ಅರಣ್ಯ ಕೈಗಾರಿಕಾ ವತಿಯಿಂದ ಒಣ ಬಿದಿರು ಕಟಾವಣೆ ಮಾಡಲಾಗುತ್ತಿದೆ. ಆದರೆ ಒಣ ಬಿದಿರಿಗೆ ಹೆಚ್ಚಿನ ಬೇಡಿಕೆ ಇಲ್ಲದಿರುವುದರಿಂದ ಪ್ರಗತಿ ಕಡಿಮೆಯಾಗಿರುತ್ತದೆ.

ಅದಾಗ್ಯೂ, ಇಲಾಖಾ ಎಲ್ಲಾ ಸಿಬ್ಬಂದಿಗಳಿಂದ, ದಿನಗೂಲಿ ನೌಕರರಿಂದ ಬೇರೆ ವೀಕ್ಷಕರ ಹೆಚ್ಚುವರಿ ನೇಮಕದಿಂದ, ಬೆಂಕಿ ಬೀಳದಂತೆ ಮುಂಜಾಗ್ರತಾ ಕ್ರಮವಾಗಿ ಬೆಂಕಿ ರೇಖೆಗಳ ನಿರ್ಮಾಣ ಮುಂತಾದ ಕ್ರಮಗಳಿಂದ, ಬೆಂಕಿ ಅನಾಹುತವಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ರಾಷ್ಟ್ರೀಯ ಉದ್ಯಾನವನಗಳಲ್ಲಿ ಹಾಗೂ ವನ್ಯ ಪ್ರಾಣಿ ಧಾಮಗಳಲ್ಲಿ, ಒಣಗಿರುವ ಬಿದಿರನ್ನು ತೆಗೆಯಲು ಅವಕಾಶವಿರುವುದಿಲ್ಲ.

ಶ್ರೀ ಬಿ.ಕೆ.ಗೋಪಾಲಕೃಷ್ಣ ಬೇಳೂರು: ಮಾನ್ಯ ಉಪಾಧ್ಯಕ್ಷರೆ, ನಾನು ಎರಡು ಪಾಯಿಂಟ್ ಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಲೆನಾಡಿನಲ್ಲಿ ಬಿದಿರಿನ ಬಗ್ಗೆ ಹಿಂದೆ ಕೇಳಿರಬಹುದು. ಬಿದಿರಿಗೆ ರಾಜನ್ ಹೈತ್ ಎಂದು ಹೇಳುತ್ತಾರೆ, ಅಂದರೆ ಬಿದಿರಕ್ಕಿ ಬರುತ್ತದೆಂದು ಹೇಳುತ್ತಾರೆ. ಇದು ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಬಂದಿದೆ. 50-60ವರ್ಷಗಳ ಹಿಂದೆ ಬಿದಿರಕ್ಕಿ ಬರುತ್ತದೆಂದು ಹೇಳುತ್ತಿದ್ದರು. ಅದನ್ನು ನಮ್ಮ ಹಿರಿಯರು ಊಟ ಮಾಡಿದ್ದಾರೆಂದು ಹೇಳುತ್ತಿದ್ದರು. ಈಗ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಬಿದಿರಕ್ಕಿ ಯಿಂದ ಈಗ ಬಿದಿರು ನಾಶ ಹೋಗುವ ಸಮಯದಲ್ಲಿ ಬಂದಿದೆ. ನಮ್ಮ ಉದ್ದೇಶವೇನೆಂದರೆ, ರಾಜ್ಯದ ಬೊಕ್ಕಸಕ್ಕೆ ಆದಾಯ ಬರಬೇಕೆಂಬ ಉದ್ದೇಶ ಇದು ಹೇಗಿದ್ದರೂ ಹಾಳಾಗಿ ಹೋಗುತ್ತದೆ. ಇದನ್ನು ಕರಕುಶಲ ವಸ್ತುಗಳಿಗೆ ಮತ್ತು ಇತರೆ ಮೂಲಗಳಿಗೆ ಕೊಡುವುದಕ್ಕೆ ಅಥವಾ ಕಾಗದ ಕಾರ್ಖಾನೆಗಳಿಗೆ ಕೊಡುವುದಕ್ಕಾಗಿ ವಿಶೇಷವಾಗಿ ಕೊಡುತ್ತಾರೆ. ಬಿದಿರು ಬಹಳಷ್ಟು ಇದೆ. ಅದನ್ನು ಸರ್ಕಾರ ಹರಾಜು ಅಥವಾ ಟೆಂಡರ್ ಮಾಡುವುದರಿಂದ ರಾಜ್ಯದ ಬೊಕ್ಕಸಕ್ಕೂ ಹೆಚ್ಚಿನ ಆದಾಯ ಬರುತ್ತದೆಂಬ ಮಾತನ್ನು ನಾನು ಹೇಳಬೇಕಾಗುತ್ತದೆ. ಅದಕ್ಕೋಸ್ಕರ 40-50 ವರ್ಷಗಳಿಗೊಮ್ಮೆ ಇದು ಬರುವುದು. ಇದು ಬಹಳ ವರ್ಷಗಳ ನಂತರ ಬಂದಿದೆ. ಈ ಬಿದಿರಕ್ಕಿ ಬಂದಮೇಲೆ ಇದು ಪೂರ್ತಿ ಒಣಗಿ ಹೋಗುತ್ತದೆ. ಹಾಗಾಗಿ ಮತ್ತೆ ಇದರಲ್ಲಿ ಬಿದಿರು ಹುಟ್ಟಿ ಬರಬೇಕೆಂದರೆ ಬಹಳ ದಿವಸಗಳಾಗುತ್ತದೆ. ಆದುದರಿಂದ ಸರ್ಕಾರ ಈ ಬಿದಿರನ್ನು ಉಪಯೋಗ ಮಾಡುವಂಥಾದನ್ನು ಮಾಡಬಹುದು. ಇದರ ಬೇಡಿಕೆ ಕರಕುಶಲಕ್ಕೆ ಹೆಚ್ಚು ಇದೆ. ಅದಕ್ಕಾಗಿ ಅದರ ಬಗ್ಗೆ

ಸರ್ಕಾರ ಹೆಚ್ಚಿನ ಗಮನವನ್ನು ಕೊಟ್ಟು ಈ ಯೋಜನೆಯನ್ನು ಅತ್ಯಂತ ತ್ವರಿತಗತಿಯಲ್ಲಿ ಟೆಂಡರ್ ಮೂಲಕ ಇದನ್ನು ಹರಾಜಿಗೆ ಕೊಡಬೇಕೆಂಬ ಮಾತನ್ನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಉಪಾಧ್ಯಕ್ಷರೆ, ಈಗಾಗಲೆ ಟೆಂಡರ್ ಕರೆಯಲಾಗಿದ್ದು, ಅದಕ್ಕೆ response ಕಡಿಮೆ ಇದೆ. ಆದರೂ ಕೂಡ ಮಾನ್ಯ ಸದಸ್ಯರು ಬಿದಿರನ್ನು ಕರಕುಶಲಕ್ಕೆ ಕೊಟ್ಟು ಸಹಾಯ ಮಾಡಬೇಕೆಂದು ತಿಳಿಸಿದ್ದಾರೆ. ಅದನ್ನು ಖಂಡಿತವಾಗಿಯೂ ಸರ್ಕಾರ ಪರಿಗಣಿಸುತ್ತದೆ. ಈ ಬಗ್ಗೆ ಸಂಬಂಧಪಟ್ಟಂಥ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಸೂಕ್ತ ನಿರ್ದೇಶನವನ್ನು ಕೊಡುತ್ತೇವೆ.

(ಆ) ವಿಷಯ: ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಪ್ರದೇಶಕ್ಕೆ ಸೇರಿದ ಕಬಿನಿ ಎರಡನೇ ಹಂತದ ಏತ ನೀರಾವರಿ ಯೋಜನೆಗೆ 2004ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಈವರೆಗೂ ಕ್ರಮ ಕೈಗೊಳದಿರುವ ಬಗ್ಗೆ.

****

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ): ಮಾನ್ಯ ಉಪಾಧ್ಯಕ್ಷರೆ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಪ್ರದೇಶಕ್ಕೆ ಸೇರಿದ ಕಬಿನಿ ಎರಡನೇ ಹಂತದ ಏತ ನೀರಾವರಿ ಯೋಜನೆಗೆ 2004ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು. ಈ ವರೆಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಮಾನ್ಯ ಜಲ ಸಂಪನ್ಮೂಲ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕಬಿನಿ ಜಲಾಶಯವನ್ನು ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕಿನ ಬೀಚನಹಳ್ಳಿ ಸಮೀಪದಲ್ಲಿ ಕಬಿನಿ ನದಿಗೆ ಅಡ್ಡಲಾಗಿ ನಿರ್ಮಿಸಿದ್ದು, 1986ರ ಅನುಮೋದಿತ ಯೋಜನಾ ವರದಿಯಂತೆ ಈ ಯೋಜನೆಯು ಹರಿ ನೀರಾವರಿ ಹಾಗೂ ಏತ ನೀರಾವರಿ ಘಟಕಗಳನ್ನು ಒಳಗೊಂಡಿರುತ್ತದೆ. ಹರಿ ನೀರಾವರಿಗೆ 32.35 ಟಿ.ಎಂ.ಸಿ., ಏತ ನೀರಾವರಿಗೆ 27.30 ಟಿ.ಎಂ.ಸಿ. ನೀರಿನ ಅಗತ್ಯತೆ ಇದ್ದು, ಹರಿ ನೀರಾವರಿಯಿಂದ 110000 ಎಕರೆ (44546 ಹೆ) ಹಾಗೂ ಏತ ನೀರಾವರಿಯಿಂದ 123347 ಎಕರೆ (49918 ಹೆ) ಪ್ರದೇಶಕ್ಕೆ ಅಂದರೆ ಒಟ್ಟಾರೆ 233347 ಎಕರೆ (94434 ಹೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಿದ್ದು, ಹರಿ ನೀರಾವರಿ ಕಾಮಗಾರಿಯು ಪೂರ್ಣಗೊಂಡಿದ್ದು, ಇದರಿಂದ

109273 ಎಕರೆ ಪ್ರದೇಶ ನೀರಾವರಿಗೊಳಪಟ್ಟಿದೆ. ಈ ಯೋಜನೆಯಲ್ಲಿ ಸರಾಸರಿ 36.474 ಟಿ.ಎಂ.ಸಿ. ನೀರನ್ನು ಉಪಯೋಗಿಸಲಾಗುತ್ತಿದೆ.

1987ನೇ ಇಸವಿಯಲ್ಲಿ ಸಮಗ್ರ ಕಬಿನಿ ಜಲಾಶಯ ಯೋಜನೆಯ ರೂ.390.00 ಕೋಟಿಗಳ ಅಂದಾಜಿಗೆ ಮಂಜೂರಾತಿ ದೊರೆತಿದ್ದು, ಇದರಲ್ಲಿ ಏತ ನೀರಾವರಿ ಯೋಜನೆಗೆ ರೂ.250.00 ಕೋಟಿಗಳ ಅವಕಾಶವನ್ನು ಮಾಡಲಾಗಿತ್ತು. ಈ ಯೋಜನೆಯ ಪ್ರಕಾರ ಹಾಲಿ ಇರುವ ಕಬಿನಿ ಜಲಾಶಯದಿಂದ ಸಗರೆ ದೊಡ್ಡಕೆರೆ ಮತ್ತು ಅಪ್ಪರ್ ನುಗು ಅಣೆಕಟ್ಟೆಗೆ ನೀರನ್ನು ಎತ್ತಿ ಅಲ್ಲಿಂದ ನಾಲೆಗಳ ಮುಖಾಂತರ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಉದ್ದೇಶಿಸಲಾಗಿತ್ತು.

ಆದರೆ ಜಲಾಶಯಗಳ ಮುಳುಗಡೆ ಪ್ರದೇಶವು ಅರಣ್ಯ ಪ್ರದೇಶದಲ್ಲಿ ಬರುತ್ತಿದ್ದರಿಂದ ಸರ್ವೆ ಮಾಡಲು ಅರಣ್ಯ ಇಲಾಖೆಯಿಂದ ಅನುಮತಿ ದೊರಕಲಿಲ್ಲ. ಅಲ್ಲದೆ, ಹಾಲಿ ಕಬಿನಿ ಜಲಾಶಯದ ಮುಳುಗಡೆ ಪ್ರದೇಶದ ಕೆಲವು ಹಳ್ಳಿಗಳ ಪುನರ್‌ವಸತಿ ಗ್ರಾಮಗಳೂ ಸಹ ಸದರಿ 2ನೇ ಹಂತದ ಜಲಾಶಯಗಳ ಮುಳುಗಡೆ ಪ್ರದೇಶವಲ್ಲಿದ್ದು, ಗ್ರಾಮಸ್ಥರ ವಿರೋಧದಿಂದಾಗಿ ಸರ್ವೆ ಕಾರ್ಯವನ್ನು ತೆಗೆದುಕೊಳ್ಳಲಾಗಲಿಲ್ಲ. ಇದರಿಂದ ಪರ್ಯಾಯ ಪ್ರಸ್ತಾವನೆಯನ್ನು ತಯಾರಿಸಿದ್ದು, ಇದರ ಪ್ರಕಾರ (ಕಬಿನಿ 2ನೇ ಹಂತದ ಯೋಜನೆ) ಕಬಿನಿ ಜಲಾಶಯದ ಹಿನ್ನೀರಿನಿಂದ 9.128 ಟಿ.ಎಂ.ಸಿ. ನೀರನ್ನು 29200 ಹೆಚ್.ಪಿ.ಯ ಪಂಪ್‌ಗಳಿಂದ ಬಿದರಹಳ್ಳಿ ಹಾಗೂ ಅಂತರಸಂತೆ ಗ್ರಾಮಗಳ ಹತ್ತಿರ ಎತ್ತಿ ಕ್ರಮವಾಗಿ 256 ಕಿ.ಮೀ., ಹಾಗೂ 15 ಕಿ.ಮೀ., ಉದ್ದಕ್ಕೆ ನೀರನ್ನು ಹರಿಸಿ 123347 ಎಕರೆ ಪ್ರದೇಶದಲ್ಲಿ ಖಾರೀಫ್ ಅರೆ ನೀರಾವರಿ ಬೆಳೆಯನ್ನು ಬೆಳೆಯಲು ಯೋಜಿಸಲಾಗಿದೆ.

2002-03ರ ದರದಂತೆ ಸಮಗ್ರ ಕಬಿನಿ ಯೋಜನೆಯಲ್ಲಿನ ಹರಿ ನೀರಾವರಿ ವ್ಯವಸ್ಥೆಗೆ ರೂ.531.00 ಕೋಟಿಗಳು ಹಾಗೂ ಏತ ನೀರಾವರಿ ವ್ಯವಸ್ಥೆಗೆ ರೂ.702.00 ಕೋಟಿಗಳು ಒಟ್ಟಾರೆಯಾಗಿ ರೂ.1233.00 ಕೋಟಿಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು, ಇದಕ್ಕೆ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯಿಂದ ಒಪ್ಪಿಗೆ ದೊರೆತಿದ್ದು, ಸದರಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದೆ.

ಸರ್ಕಾರಕ್ಕೆ ಸಲ್ಲಿಸಿರುವ ಈ ಯೋಜನಾ ವರದಿಯಂತೆ ಕಬಿನಿ ಹರಿ ನೀರಾವರಿ ಹಾಗೂ ಏತ ನೀರಾವರಿಗೆ ಬೇಕಾಗಿರುವ ಒಟ್ಟು 41.378 ಟಿ.ಎಂ.ಸಿ. ಸೇರಿದಂತೆ ಹಾಗೂ ಕಬಿನಿ ಕಣಿವೆಯಲ್ಲಿ ಬರುವ ಇತರೆ ಏತ ನೀರಾವರಿ ಯೋಜನೆಗಳು ಸೇರಿದಂತೆ ಸಮಗ್ರ ಕಬಿನಿ ಯೋಜನೆಗೆ ಒಟ್ಟಾರೆ 65 ಟಿ.ಎಂ.ಸಿ. ನೀರಿನ ಅಗತ್ಯತೆ ಇರುತ್ತದೆ.

ಅದರಂತೆ ಕಾವೇರಿ ನ್ಯಾಯ ಮಂಡಳಿಯ ಮುಂದೆ ಸಮಗ್ರ ಕಬಿನಿ ಯೋಜನೆಗೆ ಒಟ್ಟಾರೆ 65 ಟಿ.ಎಂ.ಸಿ. ನೀರಿನ ಬೇಡಿಕೆಯನ್ನು ಕರ್ನಾಟಕ ರಾಜ್ಯವು ಮಂಡಿಸಿತ್ತು. ಆದರೆ, ದಿನಾಂಕ:05.02.2007ರ ಅಂತಿಮ ತೀರ್ಪಿನಲ್ಲಿ ನ್ಯಾಯಮಂಡಳಿಯು ಈ ಯೋಜನೆಗೆ ಹರಿ ನೀರಾವರಿಯಲ್ಲಿ 2ನೇ ಬೆಳೆಗೆ ಹೊರತುಪಡಿಸಿ ಹಾಗೂ ಅನುಮೋದಿಸಿರುವ ಬೆಳೆ ಪದ್ಧತಿಯನ್ನು ಪರಿಗಣಿಸಿ 11.99 ಟಿ.ಎಂ.ಸಿ. ನೀರನ್ನು ಮಾತ್ರ ಹಂಚಿಕೆ ಮಾಡಿರುತ್ತದೆ.

ಕಬಿನಿ 2ನೇ ಹಂತದ ಯೋಜನೆಯ ಕಾಮಗಾರಿಗೆ ಸಂಬಂಧಿಸಿದಂತೆ ಕಮ್ಯಾಂಡ್ ಏರಿಯಾ ಸರ್ವೆ ಕಾಮಗಾರಿಗಳು ಒಳಗೊಂಡಂತೆ ಸರ್ವೆ ಕೆಲಸಗಳು ಪೂರ್ಣಗೊಂಡಿದ್ದು, ಒಟ್ಟಾರೆ ರೂ.116.24 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಆದರೆ, ನ್ಯಾಯ ಮಂಡಳಿಯ ತೀರ್ಪನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿ ಸಲ್ಲಿಸಿರುತ್ತದೆ ಹಾಗೂ ಸದರಿ ಅರ್ಜಿಯ ವಿಚಾರಣೆಯು ಬಾಕಿ ಇರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿನ ನಂತರ ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಆರ್.ಧ್ರುವನಾರಾಯಣ: ಮಾನ್ಯ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ದೊಡ್ಡ ಮನಸ್ಸು ಮಾಡಿದರೆ, ಈ ಯೋಜನೆ ಕಾರ್ಯಗತವಾಗುವಂಥಾದ್ದಕ್ಕೆ ಅವಕಾಶಗಳು ಇವೆ. ಇದು 1,23,347 ಎಕರೆ ಪ್ರದೇಶಕ್ಕೆ ನೀರಾವರಿಯಾಗುವ ಯೋಜನೆಯಾಗಿದ್ದು, ಇದು ಕಬಿನಿ 2nd stage ಆಗಿದ್ದು, ಇದಕ್ಕೆ 1,233 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಬೇಕಾಗಿರುವಂಥಾದ್ದು 9.128 ಟಿ.ಎಂ.ಸಿ. ಮಾತ್ರ ನೀರು ಬೇಕಾಗಿರುವಂಥಾದ್ದು. ಈಗ ನಮಗೆ ಕಾವೇರಿ ಟ್ರಿಬ್ಯುನಲ್ ತೀರ್ಪಿನಂತೆ 270 ಟಿ.ಎಂ.ಸಿ. ಮಾತ್ರ ನೀರು ಲಭ್ಯವಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವಂಥಾದ್ದು ಏನೆಂದರೆ ನೀರು ನಿರ್ವಹಣೆ ಮಾಡುವಂಥಾದ್ದರಲ್ಲಿ seepage waste ಏನು ಹೋಗುತ್ತದೆ, ಇಂಥಾದ್ದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, cropping pattern ಅನ್ನು ಸ್ವಲ್ಪ change ಮಾಡಿದರೆ, ನಮಗೆ 9.128 ಟಿ.ಎಂ.ಸಿ. ನೀರು ಬೇಕಾಗಿರುವಂಥಾದ್ದು. ನೀವು ಈ ತೀರ್ಪಿಗೋಸ್ಕರ ಕಾಯಬೇಕಾಗಿಲ್ಲ. ನಮಗೆ ಈಗ ಕೊಡುತ್ತಿರುವಂಥ 270 ಟಿ.ಎಂ.ಸಿ. ನೀರು ಏನು ಇದೆ, ಅದರಲ್ಲೆ ನೀರನ್ನು ನಿರ್ವಹಣೆ ಮಾಡುವಂಥದ್ದರಲ್ಲೆ ಈ 9.128 ಟಿ.ಎಂ.ಸಿ. ನೀರನ್ನು ನಾವು ಉಳಿಸಿಕೊಳ್ಳಬಹುದು. ತಾವು ಪ್ರಯತ್ನ ಮಾಡಬೇಕು. ಇದರಿಂದ ನಮ್ಮ ಭಾಗದಲ್ಲಿ ಏನಾಗಿದೆಯೆಂದರೆ ಕುಡಿಯುವ ನೀರಿಗೆ ಬಹಳ ಸಮಸ್ಯೆಯಾಗಿದೆ. ನಮ್ಮ ಜಿಲ್ಲೆಯ ರೈತರು ತಮ್ಮನ್ನು ಭೇಟಿ ಮಾಡಿದ್ದಾರೆ. ತಾವು ಕೂಡ ನಮ್ಮ

ಚಳುವಳಿಗಳಲ್ಲೆಲ್ಲಾ ಭಾಗವಹಿಸಿದ್ದೀರಿ. ನಮ್ಮ ಜಿಲ್ಲೆಯ ಹಿನ್ನೆಲೆಯೆಲ್ಲಾ ತಮಗೆ ಚೆನ್ನಾಗಿ ಗೊತ್ತಿದೆ. ತಾವು ಮನಸ್ಸು ಮಾಡಿದರೆ, ನಿಜವಾಗಿಯೂ broader out-lookನಲ್ಲಿ, ತಾವು ವಿಶಾಲ ಮನಸ್ಸಿನಿಂದ ನೋಡಿದರೆ, ಈ 1,23,000 ಎಕರೆಗೆ ನೀರಾವರಿ ಕೊಡುವ ಕೆಲಸವಾಗುತ್ತದೆ. ತಾವು ತೀರ್ಪಿನ ಪ್ರಕಾರವೇ ನಮಗೆ ಏನು ನೀರಿನ ಹಂಚಿಕೆಯಾಗಿದೆ ಆ 270 ಟಿ.ಎಂ.ಸಿ.ನೀರಿನಲ್ಲೆ ತಾವು ಇದನ್ನು ತೆಗೆದುಕೊಳ್ಳಬಹುದು. ಈಗ ಬಹಳಷ್ಟು ಕಡೆ ಚಾನೆಲ್ ಏನು ಇದೆ, ಆ ಚಾನೆಲ್ ಅನ್ನು ಲೈನಿಂಗ್ ಮಾಡತಕ್ಕಂಥಾದ್ದು, wastage ಏನು ಇದೆ, ಇದನ್ನೆಲ್ಲಾ ತಾವು ಕ್ರೋಢೀಕರಿಸಿದರೆ 9.128 ಟಿ.ಎಂ.ಸಿ. ನೀರಿಗೆ ನಿಜವಾಗಿಯೂ ತೊಂದರೆಯಾಗುವುದಿಲ್ಲ.

6-30 PM

ತಾವು ಅಧಿಕಾರಿಗಳ ಸಭೆ ಕರೆಯಿರಿ. ತಾವು ಅಧಿಕಾರಿಗಳೊಂದಿಗೆ ಸಮಗ್ರವಾದಂಥ ಒಂದು review ಮಾಡಿದರೆ. ಅವರು ನಿರ್ವಹಣೆ ಮಾಡುವುದರಲ್ಲೇ ನಮಗೆ ಅನುಕೂಲವಾಗುತ್ತದೆ. ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಬೇಕು. ಇದೊಂದು ಒಳ್ಳೆಯ ಯೋಜನೆ. ಇದನ್ನು ತಾವು ಅನುಷ್ಠಾನಕ್ಕೆ ತರಬೇಕು ಎನ್ನುವ ಒತ್ತಾಯವನ್ನು ಮಾಡಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಸನ್ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ಸಚಿವರಾದ ಧ್ರುವನಾರಾಯಣ್‌ರವರು ಹೇಳಿರುವಂತೆ ನಿಜವಾಗಲೂ ಕೂಡ ಆ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮೊದಲನೇ ಬಾರಿ ಈ ಯೋಜನೆಯನ್ನು ಮಾಡಿದಾಗ, ಅದು ಅರಣ್ಯ ಪ್ರದೇಶದಲ್ಲಿ ಹಾದುಹೋಗುವುದರಿಂದ ಬಹಳಷ್ಟು ತಾಂತ್ರಿಕ ತೊಂದರೆಗೆ ಈಡಾಯಿತು. ಇದನ್ನು ಪುನರ್ ಪರಿಶೀಲನೆ ಮಾಡಿ ನುಗು ಅರಣ್ಯ ಪ್ರದೇಶವನ್ನು ಹೊರತುಪಡಿಸಿ ಈ ಯೋಜನೆಯನ್ನು re-modeling ಮಾಡಿ ಮಾಡುವುದಕ್ಕೆ ಈಗಾಗಲೆ ಆದೇಶವನ್ನು ಕೊಟ್ಟಿದ್ದೇವೆ. ಈಗ ಬಂದಿರುವಂಥ ಸಮಸ್ಯೆ allocationಗೆ ಸಂಬಂಧಿಸಿದ್ದು. Allocation ನ್ನಿನ ದೃಷ್ಟಿಯಿಂದ, Tribunalನ ಅಂತಿಮ ನಿರ್ಣಯವನ್ನು ನಾವು ಇನ್ನೂ ಪೂರ್ಣ ಒಪ್ಪಿಕೊಂಡಿಲ್ಲ. ಅದು ಈಗಾಗಲೆ Special Leave Petition ಮುಖಾಂತರ Supreme Court ಎದುರಿಗೆ ಇದೆ. ನಾವು ಈಗಾಗಲೆ ಅಚ್ಚುಕಟ್ಟನ್ನು develop ಮಾಡಿರುವಂಥಾದ್ದು ಮತ್ತು ವಿಶೇಷವಾಗಿ ಕಬಿನಿಯಲ್ಲಿ excess water ಏನು ಹೋಗುತ್ತಿದೆ, ಆ ಹಂಚಿಕೆಯಲ್ಲಿ ನಮ್ಮ ಕರ್ನಾಟಕಕ್ಕೆ ಅನ್ಯಾಯವಾಗಿದೆ, ಅದನ್ನು ನೇರವಾಗಿ ಕೇರಳದಿಂದ ತಮಿಳುನಾಡಿಗೆ ಕೊಡಬೇಕೆ ಹೊರತಾಗಿ ನೀವು ಇಟ್ಟುಕೊಳ್ಳಬಾರದು ಎಂದೇನು ಅಂತಿಮ Tribunal Order ಆಗಿದೆ, ಅದು natural

justice ಗೆ ಸಂಬಂಧವಿಲ್ಲದ ರೀತಿಯಲ್ಲಿ ಇದೆ. ಆದ್ದರಿಂದ ನಮಗೆ ವಿಶ್ವಾಸ ಇದೆ, ಈ ಒಂದು Special Leave Petition ಮುಖಾಂತರ, ಅಂತಿಮ ವರದಿ ಬರುವುದಕ್ಕೆ ಮುಂಚೆಯೇ ನಾವು ಒಂದು prayer ಅನ್ನು ಮಾಡಬೇಕು ಎಂದು ನಾನು ಈಗಾಗಲೆ ಸಂಬಂಧಪಟ್ಟಂಥ legal cell ಗೆ ಹೇಳಿದ್ದೇನೆ. ವಿಶೇಷವಾಗಿ ಕಬಿನಿಯಲ್ಲಿ ಒಂದು interim relief ಕೊಡಿ ಎಂದು ಕೇಳಿದ್ದೇವೆ. ಏಕೆಂದರೆ, ಇಲ್ಲಿ backward districts ಬರುತ್ತವೆ. Prime Minister packageನಲ್ಲೂ ಕೂಡ Drought-prone Area programme (D.P.A.P) ಎಂದು ಬರುತ್ತಿದೆ. ಆದ್ದರಿಂದ, ಇಲ್ಲಿ ಕೂಡಲೇ ಕನಿಷ್ಠವೆಂದರೂ ಕುಡಿಯುವ ನೀರು ಮತ್ತು ಕೆರೆ ತುಂಬಿಸುವುದಕ್ಕೆ ನೀರು ಕೊಡಬೇಕು ಎನ್ನುವ ದೃಷ್ಟಿಯಿಂದ ಒಂದು interim relief ಕೊಡಿ, ಸುಮಾರು 15 T.M.C. ನೀರಾದರೂ ನಮಗೆ ಬೇಕು ಎನ್ನುವ ಒಂದು prayer ಮಾಡಲಿಕ್ಕೆ ನಾವು ಎಲ್ಲ ಸಿದ್ಧತೆಯನ್ನು ಒಂದು ಕಡೆಯಲ್ಲಿ ಕಾನೂನಾತ್ಮಕವಾಗಿ ಮಾಡಿಕೊಳ್ಳುತ್ತಿದ್ದೇವೆ. ಇನ್ನೊಂದು ಕಡೆ, ನಾನು ಮೈಸೂರಿಗೆ ಬಂದಾಗ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೇನೆ. ಬೆಂಗಳೂರಿನಲ್ಲೂ ಕೂಡ ಸಭೆ ಕರೆದು ಚರ್ಚೆ ಮಾಡಿದ್ದೇನೆ. ಕಾವೇರಿ ಬೇಸಿನ್‌ನಲ್ಲಿ better management of water ಮುಖಾಂತರ ನಾವು ನೀರನ್ನು ಉಳಿಸಿಕೊಳ್ಳಬೇಕು ಮತ್ತು ಇದಕ್ಕಾಗಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಈಗಾಗಲೆ ನಾವು K.R.S. modernization ಅನ್ನು ತೆಗೆದು ಕೊಂಡಿದ್ದೇವೆ. ಸುಮಾರು 12 T.M.C. ನೀರನ್ನು ಅಲ್ಲಿ ಉಳಿತಾಯ ಮಾಡುವಂಥ ಯೋಜನೆ ನಮ್ಮದಾಗಿದೆ. ಅದೇ ರೀತಿ, ನಿಮಗೆ ಗೊತ್ತಿದ್ದಂತೆ, Kabini II Stage modernization ಗೆ ಈಗಾಗಲೆ Work Order issue ಮಾಡಿದ್ದೇವೆ. ಆ ಕೆಲಸವನ್ನು ಇನ್ನು ಮೂರು ತಿಂಗಳಲ್ಲಿ ಮುಗಿಸುತ್ತೇವೆ. ಅಲ್ಲೂ ಕೂಡ ಕೆಲವು T.M.C. ನೀರನ್ನು save ಮಾಡುತ್ತೇವೆ. ಈ ವಿಷಯ ಇನ್ನೂ ಹೆಚ್ಚಿನ ರೀತಿಯಲ್ಲಿ ಚರ್ಚೆಯಾಗಬೇಕಾಗಿದೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಬೇಕಾಗುತ್ತದೆ. Cropping pattern ಅನ್ನು ಬದಲಾವಣೆ ಮಾಡುವುದು ಅಷ್ಟು ಸುಲಭವಲ್ಲ, ನಿಮಗೆಲ್ಲ ಗೊತ್ತಿದೆ. ಇಷ್ಟು ವರ್ಷದಿಂದ ನಾವೆಲ್ಲ ಮಾತನಾಡುತ್ತಿದ್ದೇವೆ, ಒಂದು ಪೀಕ್‌ಗೆ ನಾವು ನೀರಾವರಿ ಮಾಡಿದರೂ ಕೂಡ, ಈಗ ಭತ್ತವನ್ನು ಬೆಳೆಯುತ್ತಿದ್ದಾರೆ, ಎರಡು ಪೀಕ್ ತೆಗೆದುಕೊಳ್ಳುತ್ತಿದ್ದಾರೆ, ಇದೆಲ್ಲಾ ನಿಮಗೆ ಗೊತ್ತಿರುವಂಥ ವಿಚಾರ. ಆ ಬಗ್ಗೆ ಈಗ ಚರ್ಚೆ ಬೇಡ. Night irrigation ಮಾಡುವಂಥ ಯೋಜನೆಯನ್ನು ಕೂಡ ಈ ಸಂದರ್ಭದಲ್ಲಿ ನಾವು ಮಾಡಲು ಹೊರಟಿದ್ದೇವೆ. ಹಿರಿಯ ಸದಸ್ಯರಾದ ಜಯಚಂದ್ರರವರು ಇಲ್ಲಿದ್ದಾರೆ. ನಾವು ಅದನ್ನು encourage ಮಾಡಬೇಕು.

ಏಕೆಂದರೆ ರಾತ್ರಿಯ ಹೊತ್ತು ನಾವು ನೀರು ಬಿಟ್ಟಾಗ, ಅದನ್ನು ರೈತರು ತೆಗೆದುಕೊಳ್ಳದೇ ಹಳ್ಳಗಳಿಗೆ ಹರಿದು ಹೋಗಿರುವ ಸಾಕಷ್ಟು ಉದಾಹರಣೆಗಳನ್ನು ಕಾವೇರಿ ಮತ್ತು ಕೃಷ್ಣಾ ಈ ಎರಡೂ ಕಡೆಗಳಲ್ಲಿ ನಾವು ನೋಡಿದ್ದೇವೆ. ಅದನ್ನು ಪ್ರಾಯೋಗಿಕವಾಗಿ ನಮ್ಮ Mysore Division ನಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. Night irrigation ಆದರೆ, ವ್ಯರ್ಥವಾಗಿ ಹರಿದು ಹೋಗುವ ಬಹಳಷ್ಟು ನೀರನ್ನು ನಾವು ಉಳಿಸಿಕೊಳ್ಳಲು ಸಾಧ್ಯವಿದೆ. ಆ ಉಳಿಕೆಯಿಂದ ಇತರ ಯೋಜನೆಗಳನ್ನು ಕೂಡ ಮಾಡುವುದಕ್ಕೆ ಸಾಧ್ಯ ಎನ್ನುವುದು ನಮ್ಮ ಭಾವನೆಯಾಗಿದೆ. ಆ ಎಲ್ಲಾ ಹಿನ್ನೆಲೆಯಲ್ಲಿ, ನೀವು ಹೇಳಿದಂಥ ರೀತಿಯಲ್ಲಿ, ಪುನರ್ ಪರಿಶೀಲನೆ ಮಾಡುತ್ತೇವೆ. ಒಂದು ಮೀಟಿಂಗ್‌ಅನ್ನು ಕರೆದು, ಅದಕ್ಕೆ ನಿಮ್ಮನ್ನೂ ಕರೆಯುತ್ತೇನೆ. 9 T.M.C. ನೀರು ಸಿಗುವುದಕ್ಕೆ ಸಾಧ್ಯವಿಲ್ಲ. ಆದರೆ ಕುಡಿಯುವ ನೀರಿಗಾಗಿ, R.D.P.R. ನಿಂದ specific ಆಗಿ population ಬಗ್ಗೆ ವರದಿಯನ್ನು ತರಿಸಿಕೊಂಡು ಮಾಡುತ್ತೇವೆ. ಕುಡಿಯುವ ನೀರಿಗೆ ಆದ್ಯತೆ ಕೊಡಬೇಕು ಎಂದು ಈಗಾಗಲೇ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಕೂಡ ಇದೆ, Central Water Policy ಯಲ್ಲೂ ಇದೆ, State Water Policy ಯಲ್ಲೂ ಕೂಡ ಇದೆ. ಆದ್ದರಿಂದ, ಅದು fundamental right ಎನ್ನುವ ರೀತಿಯಲ್ಲಿ ಕುಡಿಯುವ ನೀರನ್ನು ಕೊಡುವಂಥ ವಿಚಾರವಿರುವುದರಿಂದ specific ಆಗಿ population ಆಧಾರದ ಮೇಲೆ ಕುಡಿಯುವ ನೀರಿಗಾಗಿ ಏನು ಯೋಜನೆಯನ್ನು ಮಾಡಬೇಕೋ ಅದನ್ನು ಮಾಡುವುದಕ್ಕೆ ಸರ್ಕಾರ ಎಲ್ಲಾ ರೀತಿಯಲ್ಲಿ ಈಗಾಗಲೆ ತಾಂತ್ರಿಕ ಪರಿಶೀಲನೆ ಮಾಡುತ್ತಿದೆ. ಇದಕ್ಕೆಂದೇ ವಿಶೇಷವಾಗಿ ಒಂದು ಸಭೆಯನ್ನು ಕರೆಯುತ್ತೇನೆ. ಅದಕ್ಕೆ ತಮ್ಮನ್ನು ಮತ್ತು ಇತರ ಸಂಬಂಧಪಟ್ಟಂಥ ಶಾಸಕರನ್ನು ಕರೆಯುತ್ತೇನೆ. ನಾವೆಲ್ಲರೂ ಸೇರಿ ತೀರ್ಮಾನವನ್ನು ಮಾಡಿ ಈ ಒಂದು ಯೋಜನೆಗೆ ಬೇರೆ ರೂಪದಲ್ಲಿ, ಹೊಸ ರೀತಿಯಲ್ಲಿ ಚಾಲನೆ ಕೊಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಆರ್. ಧ್ರುವನಾರಾಯಣ್: ಈ ಯೋಜನೆಗೆ ಈಗಾಗಲೆ command area survey ಆಗಿದೆ. ಕಾವೇರಿ ನೀರಾವರಿ ನಿಗಮದಿಂದಲೂ ಕೂಡ ಅನುಮೋದನೆಯಾಗಿದೆ. 23-05-2005ರ ಸಚಿವ ಸಂಪುಟ ಸಭೆಯಲ್ಲೂ ಕೂಡ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ. ಎಲ್ಲವೂ ಕೂಡ ರೆಡಿ ಇದೆ. ಕೆ.ಆರ್.ಎಸ್. ಆಧುನೀಕರಣ ಮಾಡುತ್ತಿದ್ದೇವೆ, ಕಬಿನಿ ಎರಡನೇ ಹಂತದ ಯೋಜನೆಯಲ್ಲಿ ಆಧುನೀಕರಣ ಮಾಡುತ್ತಿದ್ದೇವೆ, ಅದರಿಂದ ನೀರನ್ನು ಉಳಿತಾಯ ಮಾಡಬಹುದು ಎಂದು ತಾವು ಹೇಳಿದಿರಿ. ಈ ರೀತಿಯ savings ನಲ್ಲೇ ತಾವು 9

T.M.C. ಮಾಡಬಹುದು. ದಯವಿಟ್ಟು ತಾವು ದೊಡ್ಡ ಮನಸ್ಸು ಮಾಡಿ, ಈ ವರ್ಷದಲ್ಲಿಯೇ ಕಬಿನಿ ಎರಡನೇ ಹಂತದಲ್ಲಿ ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಈಗ ಈಶ್ವರಪ್ಪನವರು ಇಲ್ಲಿಯೇ ಇದ್ದಾರೆ. ಅವರು ನೀರಾವರಿ ಸಚಿವರಾಗಿದ್ದಾಗ ನಮ್ಮಲ್ಲಿಗೆ ಬಂದು, ಕಬಿನಿ ಎರಡನೇ ಹಂತವನ್ನು ನಾನು ಮಾಡಿಯೇ ಮಾಡುತ್ತೇನೆ ಎಂದು ಹೇಳಿ ಸುತ್ತೂರು ಜಯಂತಿಯ ಸಂದರ್ಭದಲ್ಲಿ ಘೋಷಣೆಯನ್ನೂ ಮಾಡಿದ್ದರು. ತಾವು ಅವರಿಗಿಂತಲೂ ಕೂಡ ಆಸಕ್ತಿಯಿಂದಿದ್ದೀರಿ. ಇದು ತಮ್ಮಿಂದ ಆಗುತ್ತದೆ, ಇದೇನು ದೊಡ್ಡದಲ್ಲ. ತಾವು ಬಹಳ ಉತ್ಸುಕರಾಗಿದ್ದೀರಿ. ಹಿಂದೆ, ನಮ್ಮ ಜಿಲ್ಲೆಯಲ್ಲಿ ನಡೆದ ಚಳುವಳಿಗಳಲ್ಲೆಲ್ಲಾ ತಾವು ಬಂದು ಸಕ್ರಿಯವಾಗಿ ಭಾಗವಹಿಸಿದ್ದೀರಿ. ಈಗ ತಮ್ಮ ಕೈಯಲ್ಲೇ ಅಧಿಕಾರವಿದೆ. 9 T.M.C. ನೀರನ್ನು ಕೊಡುವುದು ತಮಗೆ ದೊಡ್ಡದಾಗುವುದಿಲ್ಲ. ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಿ, ಅಧಿಕಾರಿಗಳ ಸಭೆ ಕರೆದು, ನೀರಿನ ಉಳಿತಾಯ ಏನಿದೆ, ಅದರಲ್ಲಿ ಈ ವರ್ಷದಿಂದಲೇ ಅನುಷ್ಠಾನಕ್ಕೆ ತರುವುದಕ್ಕೆ ತಾವು ಪ್ರಯತ್ನ ಮಾಡಬಹುದು.

ಶ್ರೀ ಬಸವರಾಜ ಬೊಮ್ಮಾಯಿ: ಈ ಕಾರ್ಯ ಮಾಡುವುದರಿಂದ ಎಷ್ಟು saving ಆಗುತ್ತದೆ ಎನ್ನುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಒಂದು estimate ಮಾಡಿ ಆಮೇಲೆ ತೀರ್ಮಾನವನ್ನು ತೆಗೆದುಕೊಳ್ಳೋಣ ಎಂದು ಹೇಳುತ್ತೇನೆ.

(ಇ) **ವಿಷಯ:** ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಗುಲ್ಬರ್ಗಾ–ಅಫಜಲಪುರ ರಸ್ತೆಯಿಂದ ದೇವಲಗಾಣಗಾಪುರವರೆಗಿನ ರಸ್ತೆ ಕಾಮಗಾರಿಯಲ್ಲಿ ಪ್ರಾರಂಭಿಸುವ ಬಗ್ಗೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ): ಸನ್ಮಾನ್ಯ ಅಧ್ಯಕ್ಷರೆ, ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ಜನಾರ್ಧನ ರೆಡ್ಡಿಯವರ ಗಮನ ಸೆಳೆಯುವುದೇನೆಂದರೆ, ಚೌಡಾಪುರ–ದೇವಲಗಾಣಗಾಪುರ ರಸ್ತೆ ಕಾಮಗಾರಿಗಳನ್ನು ಪ್ರಾರಂಭಿಸುವುದರ ಬಗ್ಗೆ ಅವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲ ಸೌಲಭ್ಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಗುತ್ತೇದಾರ್‌ರವರು ಹೇಳಿರುವ ವಿಚಾರಕ್ಕೆ ಸಂಬಂಧಿಸಿದಂತೆ, ಶ್ರೀ ದತ್ತಾತ್ರೇಯಸ್ವಾಮಿ ದೇವಸ್ಥಾನವಿರುವಂಥ ಪ್ರದೇಶವಾದ ದೇವಲಗಾಣಗಾಪುರಕ್ಕೆ ಕೇವಲ ಕರ್ನಾಟಕ ರಾಜ್ಯದಿಂದ ಮಾತ್ರವಲ್ಲ, ಆಂಧ್ರ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳಿಂದ ಮತ್ತು ಬೇರೆ ದೇಶಗಳಿಂದಲೂ ಕೂಡ ಪ್ರವಾಸಿಗರು ಬರುತ್ತಿ ದ್ದಾರೆ ಎನ್ನುವ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಹಾಗಾಗಿ, ಈಗಾಗಲೆ ಆ ರಸ್ತೆಯನ್ನು ಲೋಕೋಪಯೋಗಿ ಇಲಾಕೆಯ ವತಿಯಿಂದ 10.80 ಕಿಲೋಮೀಟರ್ಸ್

ಅನ್ನು 5 ಕೋಟಿ 34ಲಕ್ಷ ರೂಪಾಯಿಗಳ ವೆಚ್ಚದಲ್ಲಿ estimate ಮಾಡಿದ್ದು, ಅದು ಈಗಾಗಲೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ. ಆ ಬಗ್ಗೆ ಬೆಳಗ್ಗೆ ನಾನು ಲೋಕೋಪಯೋಗಿ ಸಚಿವರೊಂದಿಗೆ ಮಾತನಾಡಿದ್ದೇನೆ. ಅದಕ್ಕೆ ಹಣವನ್ನು ಬಿಡುಗಡೆ ಮಾಡಿ ಶೀಘ್ರದಲ್ಲಿಯೇ ಕೆಲಸ ಕೈಗೆತ್ತಿಕೊಳ್ಳುವಂಥಾದ್ದನ್ನು ಮಾಡುತ್ತೇವೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಈ ಪ್ರಸ್ತಾವನೆ ಕಳೆದ 2-3 ವರ್ಷಗಳಿಂದಲೂ ಸರ್ಕಾರದ ಗಮನಕ್ಕೆ ಬರುತ್ತಿದೆ. ಕರ್ನಾಟಕವಲ್ಲದೆ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಿಂದ ಪ್ರವಾಸಿಗರು ಬರುತ್ತಾರೆ ಎಂದು ಅವರೇ ಹೇಳುತ್ತಿದ್ದಾರೆ. ಇಲ್ಲಿಗೆ ದೇಶದ ಇತರ ಮೂಲೆಮೂಲೆಗಳಿಂದ ಲಕ್ಷಾಂತರ ಜನರು ಆ ದೇವಸ್ಥಾನಕ್ಕೆ ಬರುತ್ತಾರೆ. ತಾವು ಚಿಕ್ಕಮಗಳೂರಿನ ದತ್ತಪೀಠಕ್ಕೆ ಕೋಟಿಗಟ್ಟಳೆ ಹಣವನ್ನು ಖರ್ಚು ಮಾಡುತ್ತೀರಿ. ಇಲ್ಲಿ ಬಹಳ ಪ್ರಸಿದ್ಧವಾದಂಥ ದತ್ತಾತ್ರೇಯಸ್ವಾಮಿಯ ದೇವಸ್ಥಾನವಿದ್ದು ಇದು ಐತಿಹಾಸಿಕವಾದಂಥ ಸ್ಥಳವಾಗಿದೆ. ಆದ್ದರಿಂದ ಇದಕ್ಕೆ ವಿಳಂಬ ಮಾಡದೇ ಶೀಘ್ರವಾಗಿ ರಸ್ತೆ ಕಾಮಗಾರಿಗೆ ಅನುದಾನವನ್ನು ಕೊಡಬೇಕು. ಅಲ್ಲಿಯ ಜನ ಸರ್ಕಾರಕ್ಕೂ ಉಗುಳುತ್ತಿದ್ದಾರೆ, ಶಾಸಕರಿಗೂ ಉಗುಳುತ್ತಿದ್ದಾರೆ. ಅಂಥ ಪರಿಸ್ಥಿತಿ ಇದೆ. ಅಲ್ಲಿ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಅಲ್ಲಿ ಹೋಗಬೇಕಾದರೆ ಬಹಳ ದುರಸ್ಥಿತಿಯಲ್ಲಿರುವ ರಸ್ತೆಯಲ್ಲಿ ಹೋಗಬೇಕಾಗಿದೆ. ಆದ್ದರಿಂದ, ದಯವಿಟ್ಟು ತಾವು ಶೀಘ್ರದಲ್ಲಿಯೇ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ಸದನಕ್ಕೆ ಆಶ್ವಾಸನೆಯನ್ನು ಕೊಡಬೇಕಾಗುತ್ತದೆ. ನೀವು ಕ್ಯಾಬಿನೆಟ್‌ನಲ್ಲಿ ಆ ಪ್ರಸ್ತಾವನೆಯನ್ನು ತಂದರೆ ಅದು approval ಆಗಿ ಕೆಲಸವಾಗುತ್ತದೆ. ಆದರೆ ಅದು ಇನ್ನೂ ಕ್ಯಾಬಿನೆಟ್ ಸಬ್ಜೆಕ್ಟ್‌ನಲ್ಲಿ include ಆಗಿಲ್ಲ. ನಾನು ಆ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ದಯವಿಟ್ಟು ಅದನ್ನು ಯಾವಾಗ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಟಿ.ಬಿ.ಜಯಚಂದ್ರ: ಪ್ರವಾಸಿ ತಾಣಗಳಿಗೆ ಸಂಪರ್ಕವನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಕಲ್ಪಿಸತಕ್ಕಂಥ ಪರಿಕಲ್ಪನೆ ರಾಜ್ಯದ ದೃಷ್ಟಿಯಿಂದ, ಜನಗಳ ದೃಷ್ಟಿಯಿಂದ ಮತ್ತು ಟೂರಿಸಂ ದೃಷ್ಟಿಯಿಂದ ಒಳ್ಳೆಯದಲ್ಲ. ಈ ರೀತಿಯಾಗಿ ನೀವು ಪ್ರಸ್ತಾವನೆಯನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸುತ್ತೇವೆ ಎಂದು ಹೇಳಿದರೆ, ಅಲ್ಲಿ ಆದ್ಯತೆಗಳು ಇರುವುದಿಲ್ಲ. ಟೂರಿಸಂಗೆಂದೇ ಇಷ್ಟು ಹಣ ಎಂದು ಹೇಳಿ ನಿಗದಿ ಮಾಡಿ, P.W.D.ಯಲ್ಲಿ ಇದಕ್ಕೆಂದೇ ಒಂದು separate Head of Account ಇಟ್ಟುಕೊಂಡು ಅದರಲ್ಲಿ ಖರ್ಚು ಮಾಡತಕ್ಕಂಥಾದ್ದನ್ನು ಮಾಡಿದರೆ ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ನೀವು ಒಂದು estimate ಮಾಡಿ ಕಳುಹಿಸಿಕೊಡುತ್ತೀರಿ, ಅದಕ್ಕೆ ಅನುದಾನ ಸಿಗಲಿಲ್ಲ ಎಂದು ಹೇಳುತ್ತಾರೆ. ಈಗಾಗಲೆ ಮಾನ್ಯ ಸದಸ್ಯರು ಹೇಳಿದ

ಹಾಗೆ ಈ ಪ್ರಸ್ತಾವನೆಯನ್ನು 3–4 ವರ್ಷಗಳಿಂದ ಕಳುಹಿಸುತ್ತಿದ್ದಾರೆ. ಇನ್ನು 10 ವರ್ಷಗಳಾದರೂ ಇದು ಹೀಗೆಯೇ ನಡೆಯುತ್ತಿರುತ್ತದೆ. ಆದ್ದರಿಂದ, ನಿರ್ದಿಷ್ಟವಾಗಿ ಇಷ್ಟು allocation ನಮಗೆ ಎಂದು ನೀವು ತೆಗೆದುಕೊಂಡರೆ ಅದರಿಂದ ಬಹಳ ಸಹಾಯವಾಗುತ್ತದೆ. ಇದು ಬಾಬಾ ಬುಡನ್‌ಗಿರಿಯಷ್ಟೇ ಪವಿತ್ರವಾದ ಜಾಗ ಎಂದೂ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮತ್ತೊಂದು ಇಂಥ ಜಾಗ ಸಿಕ್ಕಿತಲ್ಲ ಎಂದು ಹೇಳಿ ಸಿ.ಟಿ.ರವಿಯವರು ಮತ್ತು ನಿಮ್ಮ ಭಾಗದ ಎಲ್ಲರೂ ಇದಕ್ಕೆ ಸಹಕಾರ ಕೊಡುತ್ತಾರೆ. ಆ ದೃಷ್ಟಿಯಿಂದಲಾದರೂ ಕೂಡ ದಯಮಾಡಿ ಅದನ್ನು improvement ಮಾಡತಕ್ಕಂಥ ಕೆಲಸವನ್ನು ಮಾಡಿದರೆ ಒಳ್ಳೆಯದು. ಅದಕ್ಕೆ ನೀವು ಒಂದು Head of Account ಇಟ್ಟುಕೊಂಡು ನಿರ್ದಿಷ್ಟವಾಗಿ ಹಣವನ್ನು ನಿಗದಿ ಮಾಡತಕ್ಕಂಥಾದ್ದು ಸೂಕ್ತ.

ಶ್ರೀ ಜಿ. ಜನಾರ್ದನ ರೆಡ್ಡಿ: ನಮ್ಮ ಲೋಕೋಪಯೋಗಿ ಸಚಿವರು ಇಲ್ಲಿಯೇ ಇದ್ದಾರೆ. ಅವರ ಜೊತೆ ನಾನು ಬೆಳಗ್ಗೆ ಮಾತನಾಡಿದ್ದೆನೆ. ನಮ್ಮ ಶಾಸಕ ಮಿತ್ರರು ಮತ್ತು ತಾವು ಹೇಳಿದ ಹಾಗೆ, ನಿರ್ದಿಷ್ಟವಾದ ಸಮಯದಲ್ಲಿ ಮಾಡುತ್ತೇವೆ. ಕಳೆದ 2–3 ವರ್ಷಗಳಿಂದ ಇದು ಪ್ರಸ್ತಾಪವಾಗುತ್ತಿತ್ತು. ಆದರೆ, ಕೆಲಸ ಮಾಡಲು ಸಮಯ ನಿಗದಿ ಮಾಡಿ ಮಾಡುತ್ತಿಲ್ಲ ಎಂದು ತಾವು ಏನು ಹೇಳುತ್ತಿದ್ದೀರಿ, ಖಂಡಿತವಾಗಿಯೂ maximum ಎಂದರೆ ಇನ್ನು ಒಂದು ತಿಂಗಳ ಸಮಯ, ಅಷ್ಟರೊಳಗೆ ಈ ಕೆಲಸವನ್ನು ಪ್ರಾರಂಭ ಮಾಡುವಂಥ ಒಂದು ಕೆಲಸವನ್ನು ಖಂಡಿತವಾಗಿ ಕೂಡ ನಾವು ಮಾಡುತ್ತೇವೆ. ಒಂದು ವೇಳೆ election code of conduct ಬಂತೆಂದರೆ election ಮುಗಿದ ಮೇಲೆ 15 ದಿವಸದೊಳಗೆ ಕೆಲಸ ಪ್ರಾರಂಭಿಸುತ್ತೇನೆ. ಕಳೆದ ಮೂರು ವರ್ಷಗಳಿಂದ ಆಗದಿರುವುದನ್ನು 30 ದಿವಸಗಳಲ್ಲಿ ಮಾಡಿಸುತ್ತೇನೆಂದು ನಾನು ಹೇಳುತ್ತಿದ್ದೇನೆ. In case election ಬಂದು code of conduct ಬಂತು ಎಂದರೂ ಕೂಡ election ಮುಗಿದ ಮೇಲೆ 15 ದಿವಸದ ಒಳಗಡೆಯೇ ನಮ್ಮ ಲೋಕೋಪಯೋಗಿ ಸಚಿವರ ಜೊತೆ ಬಂದು ನಿಮ್ಮ ಸಮಕ್ಷಮದಲ್ಲಿ ನಿಂತುಕೊಂಡು ಪೂಜೆ ಮಾಡಿ ಕೆಲಸ ಪ್ರಾರಂಭಿಸುತ್ತೇನೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್: Election ಮುಗಿದ ಮೇಲೆ ಕೆಲಸ ಪ್ರಾರಂಭಿಸುತ್ತೇನೆಂದರೆ ಮತ್ತೆ ಅದು ವಿಳಂಬವಾಗುವ chances ಇದೆ. ಈಗಾಗಲೆ ಒಂದು ತಿಂಗಳೊಳಗೆ ಮಾಡಿಸುತ್ತೇನೆಂದು ಹೇಳಿದಿರಿ ಆ ಪ್ರಕಾರ ಅದಕ್ಕೆ stick on ಆಗಿ.

ಶ್ರೀ ಜಿ.ಜನಾರ್ದನ ರೆಡ್ಡಿ: ಅದನ್ನೇ ಮಾಡೋಣ.

ಶ್ರೀ ಮಾಲಿಕಯ್ಯ ವಿ.ಗುತ್ತೇದಾರ್: Election code of conduct ಬಂತು ಎಂದರೆ ಹೊಸದಾಗಿ programme ಮಾಡುವುದಕ್ಕೆ ಆಗುವುದಿಲ್ಲ, ಒಪ್ಪುತ್ತೇನೆ. ನೀವು announce ಮಾಡಿ. ಇನ್ನೂ election date declare ಆಗಿಲ್ಲ. ನಾಳೆಯ ಕ್ಯಾಬಿನೆಟ್‌ನಲ್ಲಿ ಅನೌನ್ಸ್ ಮಾಡಿ. ಬೇಕಾದರೆ, programme ಚಾಲೂ ಮಾಡಿ. ನಮಗೆ ಛಾಯಾಗ್ರಾಹಕರನ್ನು ಕರೆದು, ಪತ್ರಿಕೆಯಲ್ಲಿ ಬರುವುದು ಬೇಕಾಗಿಲ್ಲ. ನಮಗೆ ಕೆಲಸವಾಗಬೇಕಾಗಿದೆ. ಅದರ ಬಗ್ಗೆ ಅವರು ಶೀಘ್ರದಲ್ಲಿಯೇ ಮಾಡುತ್ತೇವೆಂದು ಆಶ್ವಾಸನೆ ಕೊಡಬೇಕು. ಜೊತೆಗೆ, ಪ್ರವಾಸೋದ್ಯಮ ಇಲಾಖೆಗೆ ಆ ಕ್ಷೇತ್ರ ಸೇರಿದೆ. ಅದಕ್ಕೆ ಕೇಂದ್ರ ಸರ್ಕಾರದ ಸಮ್ಮತಿ ಕೂಡ ಇದೆ. ಸಾಕಷ್ಟು development ಕೂಡ ಆಗಬೇಕಾಗಿದೆ. ಅದರ ಬಗ್ಗೆ ಕೂಡ ತಾವು ಪ್ರವಾಸೋದ್ಯಮ ಸಚಿವರಾಗಿ ಮಾಡಬೇಕು. ತಾವು ಎಲ್ಲಿ ಹೋದರೂ ಕೂಡ ಅಲ್ಲಿ ತಮ್ಮ ಬಹಳಷ್ಟು ಹೇಳಿಕೆಗಳನ್ನು ನಾನು ಗಮನಿಸಿದ್ದೇನೆ. ತಾವು ನಮ್ಮ ಭಾಗದವರಾಗಿದ್ದೀರಿ. ಬಳ್ಳಾರಿ ಎಂದರೆ ನಮ್ಮ ಭಾಗದವರೇ ಇದ್ದೀರಿ. ವಿಶೇಷವಾಗಿ ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ. ಅಭಿವೃದ್ಧಿಯ ಬಗ್ಗೆ ತಾವು ಸಹಕಾರ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಜನಾರ್ದನರೆಡ್ಡಿ: ಈಗಾಗಲೆ ಗುಲ್ಬರ್ಗಾ ಜಿಲ್ಲೆಯಲ್ಲಿ ಆ ಛಾಯಾಭಗವತಿ, ಅಪ್ಪನಕೆರೆ, ಸಣ್ಣಕೆರೆ ಮತ್ತು ಚಂದ್ರಪಲ್ಲಿ ಡ್ಯಾಂಗಳಿಗೆ ನಾನು ಮಂತ್ರಿಯಾದ ಮೇಲೆ 3 ಕೋಟಿ 93 ಲಕ್ಷ ರೂಪಾಯಿಗಳ ಬಿಡುಗಡೆಯನ್ನು ಜಿಲ್ಲಾಧಿಕಾರಿಗಳಿಗೆ ಮಾಡಿದ್ದೇನೆ. ಅದರ ಟೆಂಡರ್ ಕರೆದು, ಆ ಕೆಲಸ ಈಗಾಗಲೆ ನಡೆಯುತ್ತಿದೆ. ಹಾಗೆಯೇ, ಈ ಕೆಲಸ ಕೂಡ ನಿಮಗೆ ಹೇಳಿದ ಪ್ರಕಾರ, ನಾವು ಮಾಡುತ್ತೇವೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್: ತಾವು ಪಟ್ಟಿ ಓದಿದ್ದು ನೋಡಿದರೆ, ನಿಮ್ಮ ಶಾಸಕರು ಎಲ್ಲೆಲ್ಲಿದ್ದಾರೆ ಅಲ್ಲಿ ನಾನು ಮಾಡಿದ್ದೇನೆಂದು ಹೇಳುತ್ತಿದ್ದೀರಿ. ಏಕೆ, ನಾವು ಕಾಂಗ್ರೆಸ್ ಪಕ್ಷದ ಎಂ.ಎಲ್.ಎ. ಇದ್ದ ಜಾಗದಲ್ಲಿ ಮಾಡಿದ್ದೀರಾ?

ಶ್ರೀ ಜಿ.ಜನಾರ್ದನರೆಡ್ಡಿ: ಇಲ್ಲ, ಆ ರೀತಿ ಮಾಡಿಲ್ಲ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್: ದಯವಿಟ್ಟು, ಆ ರೀತಿ ಮಾಡುವುದು ಬೇಡ. ಅವರೇ ಹೇಳುತ್ತಿದ್ದಾರೆ. ಚಿಂಚೋಳಿಯಲ್ಲಿ ಅವರ ಪಕ್ಷದ ಎಂಎಲ್ಎ ಇದ್ದಾರೆ. ಗುಲ್ಬರ್ಗಾದಲ್ಲಿಯೂ ಅವರ ಪಕ್ಷದ ಎಂ.ಎಲ್.ಎ. ಇದ್ದಾರೆ. ಆ ತರಹ ತಾರತಮ್ಯ ಆಗಬಾರದು. ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಎಲ್ಲರಿಗೂ ಸರಿಯಾಗಿ ನ್ಯಾಯ ಸಿಗಬೇಕು.

ಉಪಾಧ್ಯಕ್ಷರು: ಒಂದು ತಿಂಗಳೊಳಗೆ ಮಾಡಿಕೊಡುತ್ತೇನೆಂದು ಈಗ ಹೇಳಿದರಲ್ಲ?

ಶ್ರೀ ಜಿ. ಜನಾರ್ದನ ರೆಡ್ಡಿ: ಜಯಚಂದ್ರರವರು ಹಿರಿಯರಿದ್ದಾರೆ. ಅವರ ಮುಂದೆ ನಾನು ಮಾತನಾಡುತ್ತಿದ್ದೇನೆ. ಒಂದು ತಿಂಗಳೊಳಗೆ ನಾನು ಮಾಡಿಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಇವರು ಕಾಂಗ್ರೆಸ್‌ನವರು ಇರಬಹುದು, ದೇವರು ಮಾತ್ರ ನಿಮ್ಮದೇ ಅಲ್ಲವೇ?

ಶ್ರೀ ಜಿ.ಜನಾರ್ದನ ರೆಡ್ಡಿ: ಹಾಗೇನಿಲ್ಲ, ನಮಗೆಲ್ಲರಿಗೂ ದೇವರೇ.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ 11-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಾಯಂಕಾಲ 6 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿ:26ನೇ ಫೆಬ್ರವರಿ, 2009ರ ಗುರುವಾರದಂದು ಬೆಳಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

Pres Set ಚುಕ್ಕಿಗುರುತಿಲ್ಲದ ಪ್ರಶ್ನೆಗಳು 25-2-2009

13ಶ್ರೀ ರುದ್ರೇಶಗೌಡ ವೈ.ಎಸ್.
ಬೇಲೂರು ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನದ ಬಗ್ಗೆ
ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಹಾಸನ ಜಿಲ್ಲೆಯ ಬೇಲೂರು ಪಟ್ಟಣದಲ್ಲಿರುವ ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನವು ವಿಶ್ವವಿಖ್ಯಾತ ದೇವಸ್ಥಾನ ಆಗಿರುವುದು ನಿಜವೇ;

ಹೌದು.

ಆ) ಹಾಗಿದ್ದಲ್ಲಿ, ಸದರಿ ದೇವಸ್ಥಾನವನ್ನು ಇಲ್ಲಿಯವರೆಗೂ ಅಭಿವೃದ್ಧಿ ಮಾಡದಿರಲು ಕಾರಣವೇನು;

ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನವು ಕೇಂದ್ರ ಪುರಾತತ್ವ ಇಲಾಖೆಯಿಂದ ನಿರ್ವಹಿಸಲ್ಪಡುವ ರಾಷ್ಟ್ರೀಯ ಸಂರಕ್ಷಿತ ಸ್ಮಾರಕವಾಗಿದ್ದು, ದೇವಾಲಯದ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೇಂದ್ರೀಯ ಪುರಾತತ್ವ ಇಲಾಖೆಯು ಕ್ರಮ ವಹಿಸಬೇಕಾಗುತ್ತದೆ.

ಧಾರ್ಮಿಕ ದತ್ತಿ ಇಲಾಖಾ ವತಿಯಿಂದ ದೇವಾಲಯದ ಧಾರ್ಮಿಕ ಕಾರ್ಯನಿರ್ವಹಿಸಲು ಅವಕಾಶ ಇರುತ್ತದೆಯೇ ಹೊರತು ಅಭಿವೃದ್ಧಿಪಡಿಸಲು ಅವಕಾಶವಿರುವುದಿಲ್ಲ.

ಇ) ಈ ದೇವಸ್ಥಾನದ ಒಳಗಡೆ ಹಾಗೂ ಹೊರ ಆವರಣದಲ್ಲಿ ವಿದ್ಯುತ್ ದೀಪಗಳು ಇಲ್ಲದೇ ಪ್ರವಾಸಿಗರಿಗೆ ರಾತ್ರಿ ವೇಳೆ ದೇವಸ್ಥಾನವನ್ನು ವೀಕ್ಷಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ದೇವಾಲಯದ ಒಳಗಡೆ ಹಾಗೂ ಹೊರ ಆವರಣದಲ್ಲಿ ಬೆಳಕಿನ ವ್ಯವಸ್ಥೆ ಕಲ್ಪಿಸಲಾಗಿದೆ. ಆದ್ದರಿಂದ ರಾತ್ರಿಯ ವೇಳೆಯಲ್ಲಿ ದೇವಸ್ಥಾನವನ್ನು ವೀಕ್ಷಿಸಲು ತೊಂದರೆಯಾಗುತ್ತಿರುವುದಿಲ್ಲ.

ಈ) ಬೇಲೂರು ಬಸ್ ನಿಲ್ದಾಣದಿಂದ ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನ ಸೇರುವ ರಸ್ತೆಗೆ ಮರುಡಾಂಬರೀಕರಣ ಮಾಡದೇ ಸಂಪೂರ್ಣ ಗುಂಡಿ ಬಿದ್ದಿರುವುದು ನಿಜವೇ; ಹಾಗಿದ್ದಲ್ಲಿ, ಕಾಮಗಾರಿ ಏಕೆ ತೆಗೆದುಕೊಂಡಿರುವುದಿಲ್ಲ;

ಹೌದು.

ಬೇಲೂರು ಬಸ್ ನಿಲ್ದಾಣದಿಂದ ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನದವರೆಗೆ ರಸ್ತೆಯಲ್ಲಿರುವ ಗುಂಡಿಗಳನ್ನು ಲೋಕೋಪಯೋಗಿ ಇಲಾಖೆಯು ಮುಚ್ಚಿದೆ. ಸದರಿ ರಸ್ತೆಗೆ ಮರು ಡಾಂಬರೀಕರಣ ಕಾಮಗಾರಿಯನ್ನು ರೂ.165.00 ಲಕ್ಷಗಳಲ್ಲಿ ಕೈಗೊಳ್ಳಲು ಪ್ರವಾಸೋದ್ಯಮ ಇಲಾಖೆಯು ಲೋಕೋಪಯೋಗಿ ಇಲಾಖೆಗೆ ಅನುಮೋದನೆ ನೀಡಿದ್ದು, ಕಾಮಗಾರಿ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯು ಟೆಂಡರ್ ಕರೆಯಲಾಗಿದೆ. ತಾಂತ್ರಿಕ ಬಿಡ್‌ಗೆ ಲೋಕೋಪಯೋಗಿ ಇಲಾಖೆಯು ಅನುಮೋದನೆ ಪಡೆದು, ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಲೋಕೋಪಯೋಗಿ ಇಲಾಖೆಯು ಪೂರ್ಣಗೊಳಿಸುತ್ತಿದೆ.

ಸಂಖ್ಯೆ: ಕಂಇ 17 ಮುಸಪ್ರ 2009

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿಧಾನ ಸಭೆ

46ಶ್ರೀ ಪಾಟೀಲ್ ಎ.ಎಸ್. (ನಡವಳ್ಳಿ) (ದೇವರ ಹಿಪ್ಪರಗಿ)
ಮಾನ್ಯ ಇಂಧನ ಸಚಿವರು.

****

ಅ) ಹೆಸ್ಕಾಂ ಬಿಜಾಪುರ ವಿಭಾಗ ಮತ್ತು ಇಂಡಿ ವಿಭಾಗಕ್ಕೆ ಕಳೆದ ಏಪ್ರಿಲ್ 2008 ರಿಂದ ಇಲ್ಲಿಯವರೆಗೆ ಬಂದಿರುವ ಒಟ್ಟು ವಿದ್ಯುತ್ ಸಾಮಗ್ರಿಗಳ ಸಂಖ್ಯೆ ಎಷ್ಟು ಹಾಗೂ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಆ) ಈ ಟ್ರಾನ್ಸ್‌ಫಾರ್ಮರ್‌ಗಳನ್ನು ಯಾವ ಯಾವ ವಿಧಾನ ಸಭಾ ಕ್ಷೇತ್ರಕ್ಕೆ ವಿತರಿಸಲಾಗಿದೆ.

ವಿಧಾನ ಸಭಾ ಕ್ಷೇತ್ರಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.

ಇ) ಜಿಲ್ಲೆಯ ಯಾವ ಯಾವ ವಿಧಾನ ಸಭಾ ಕ್ಷೇತ್ರದಲ್ಲಿ ಅಲ್ಯೂಮಿನಿಯಂ ವೈಯರ್ ಹಾಗೂ ಇತ್ಯಾದಿ ವಿದ್ಯುತ್ ಉಪಕರಣಗಳನ್ನು ವಿತರಿಸಲಾಗಿದೆ (ವಿವರ ನೀಡುವುದು);

ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಇಎನ್ 9 ಪಿಪಿಎಂ 2009

ಕೆ.ಎಸ್. ಈಶ್ವರಪ್ಪ
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಎ.ಎಸ್. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 46 ಕ್ಕೆ ಅನುಬಂಧ-1

ಹೆಸ್ಕಾಂ ಬಿಜಾಪುರ ವಿಭಾಗ ಮತ್ತು ಇಂಡಿ ವಿಭಾಗಕ್ಕೆ ಕಳೆದ ಏಪ್ರಿಲ್ 2008 ರಿಂದ ಇಲ್ಲಿಯವರೆಗೆ ಬಂದಿರುವ ಒಟ್ಟು ವಿದ್ಯುತ್ ಸಾಮಗ್ರಿ ಮತ್ತು ಟ್ರಾನ್ಸ್‌ಫಾರ್ಮರ್‌ನ ಸಂಖ್ಯೆಗಳ ವಿವರಗಳು

ಕ್ರ. ಸಂ.	ಏಪ್ರಿಲ್ 2008 ರಿಂದ ಹಂಚಿಕೆ ಮಾಡಲಾಗಿರುವ ಸಾಮಗ್ರಿಗಳು	ವಿಭಾಗಾವಾರು ಹಂಚಿಕೆ ಮಾಡಿರುವ ಪರಿಮಾಣ		ಒಟ್ಟು
		ಬಿಜಾಪುರ	ಇಂಡಿ	
1	25 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ (ಸಂಖ್ಯೆಗಳಲ್ಲಿ)	456	164	620
2	63 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ (ಸಂಖ್ಯೆಗಳಲ್ಲಿ)	397	81	478
3	100 ಕೆ.ವಿ.ಎ.-ಟ್ರಾನ್ಸ್‌ಫಾರ್ಮರ್ (ಸಂಖ್ಯೆಗಳಲ್ಲಿ)	376	19	395
4	ವ್ಹಿಸಲ್ ವಾಹಕ (ಕಿ.ಮೀ.ಗಳಲ್ಲಿ)	268.86	328.2	597.06

5	ರ್‍ಯಾಬಿಟ್ ವಾಹಕ (ಕಿ.ಮೀ.ಗಳಲ್ಲಿ)	52.88	17.6	70.48
6	ಕಂಬಗಳು (ಸಂಖ್ಯೆಗಳಲ್ಲಿ)	3484	3113	6597

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಎ.ಎಸ್. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 46 ಕ್ಕೆ ಅನುಬಂಧ-2

ವಿಧಾನ ಸಭಾ ಕ್ಷೇತ್ರಾವಾರು ವಿತರಿಸಲಾಗಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆಗಳ ವಿವರಗಳು

ವಿಧಾನ ಸಭಾ ಕ್ಷೇತ್ರದ ಹೆಸರು	ಏಪ್ರಿಲ್ 2008 ರಿಂದ ಹಂಚಿಕೆ ಮಾಡಲಾಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು			
	25 ಕೆ.ವಿ.ಎ	63 ಕೆ.ವಿ.ಎ	100 ಕೆ.ವಿ.ಎ	ಒಟ್ಟು
ಬಿಜಾಪುರ ವಿಭಾಗ				
ಬಿಜಾಪುರ	9	13	18	40
ಬಾಗೇವಾಡಿ	133	125	126	384
ದೇವರಹಿಪ್ಪರಗಿ	67	34	28	129
ಬಬಲೇಶ್ವರ	116	108	97	321
ನಾಗಠಾಣ	59	67	57	183
ಮುದ್ದೇಬಿಹಾಳ	69	50	50	169
ಇಂಡಿ ವಿಭಾಗ				
ಇಂಡಿ	79	29	8	116
ನಾಗಠಾಣ	12	5	6	23
ಸಿಂಧಗಿ	56	38	5	99
ದೇವರಹಿಪ್ಪರಗಿ	17	9	0	26

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಎ.ಎಸ್. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 46 ಕ್ಕೆ ಅನುಬಂಧ-3

ಬಿಜಾಪುರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಾವಾರು ವಿತರಿಸಲಾಗಿರುವ ಅಲ್ಯೂಮಿನಿಯಂ ವೈಯರ್ ಹಾಗೂ ಇತ್ಯಾದಿ ವಿದ್ಯುತ್ ಉಪಕರಣಗಳ ವಿವರಗಳು

ವಿಧಾನ ಸಭಾ ಕ್ಷೇತ್ರದ ಹೆಸರು	ಏಪ್ರಿಲ್ 2008 ರಿಂದ ಹಂಚಿಕೆ ಮಾಡಲಾಗಿರುವ ವಿದ್ಯುತ್ ಪರಿವರ್ತಕಗಳು

	ವ್ಹಿಸಲ್ ವಾಹಕ ಕಿ.ಮೀ.ಗಳಲ್ಲಿ	ರ್‍ಯಾಬಿಟ್ ವಾಹಕ ಕಿ.ಮೀ.ಗಳಲ್ಲಿ	ಕಂಬಗಳು ಸಂಖ್ಯೆ ಗಳಲ್ಲಿ	ಇತರೆ
ಬಿಜಾಪುರ ವಿಭಾಗ				ಇತರೆ ಅವಶ್ಯಕ ಮಾರ್ಗ ಸಾಮುಗ್ರಿಗಳನ್ನು ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಅವಶ್ಯಕತೆಗನು ಗುಣವಾಗಿ ಪೂರೈಸಲಾಗಿದೆ
ಬಿಜಾಪುರ	12.152	2.390	676	
ಬಾಗೇವಾಡಿ	90.381	17.778	761	
ದೇವರಹಿಪ್ಪರಗಿ	26.583	5.229	325	
ಬಬಲೇಶ್ವರ	74.431	14.641	578	
ನಾಗಠಾಣ	28.861	5.677	375	
ಮುದ್ದೇಬಿಹಾಳ	36.456	7.171	768	
ಇಂಡಿ ವಿಭಾಗ				
ಇಂಡಿ	153.4	12	1600	
ನಾಗಠಾಣ	35.7	1	790	
ಸಿಂಧಗಿ	112	4.6	489	
ದೇವರಹಿಪ್ಪರಗಿ	27.1	0	234	

ಕರ್ನಾಟಕ ವಿದಾನಸಭೆ

47ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ)
ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ವಿವಿಧ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು (ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಯ ವಿವರಗಳನ್ನು ಗ್ರಾಮವಾರು ಅಂಕಿ ಅಂಶಗಳನ್ನು ಒದಗಿಸುವುದು);

ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ವಸತಿ ಯೋಜನೆಗಳಡಿ ಒಟ್ಟು 4923 ಮನೆಗಳನ್ನು ನೀಡಲಾಗಿದ್ದು ವಿವರ ಇಂತಿದೆ.

ರಾಜ್ಯ ಸರ್ಕಾರದ ಯೋಜನೆಗಳು:

ಯೋಜನೆಗಳು	05–06	06–07	07–08	ಒಟ್ಟು
ಗ್ರಾಮೀಣ ಆಶ್ರಯ	1442	2022	*	3464

ಗ್ರಾಮೀಣ ಅಂಬೇಡ್ಕರ್	60	*	141	201
ಗ್ರಾಮೀಣ ಆಶ್ರಯ – ವಿಶೇಷ ವರ್ಗ	*	232	*	232
ಒಟ್ಟು	**1502**	**2254**	**141**	**3897**

ಕೇಂದ್ರ ಸರ್ಕಾರದ ಯೋಜನೆಗಳು:

ಯೋಜನೆಗಳು	05–06	06–07	07–08	ಒಟ್ಟು
ಇಂದಿರಾ ಅವಾಸ್ ಯೋಜನೆ	414	253	359	1026
ಒಟ್ಟು	**414**	**253**	**359**	**1026**

* ಸರ್ಕಾರದಿಂದ ಈ ಶ್ರೇಣಿಗಳಿಗೆ ಗುರಿ ನಿಗದಿಪಡಿಸಿರುವುದಿಲ್ಲ.

ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಿದೆ.

ಆ) ಈ ಮನೆಗಳ ನಿರ್ಮಾಣಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ಯಾವ ಯಾವ ಯೋಜನೆಯ ನೆರವಿನಿಂದ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ;

ಈ ಮನೆಗಳ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದಿಂದ ಒಟ್ಟು ರೂ. 1003.10 ಲಕ್ಷ ಹಣವನ್ನು ಕೇಂದ್ರ ಸರ್ಕಾರದಿಂದ ರೂ.245.70 ಲಕ್ಷ ಹಣವನ್ನು ಖರ್ಚು ಮಾಡಲಾಗಿದೆ.

ಇ) ಈ ಅವಧಿಯಲ್ಲಿ ಸದರಿ ಯೋಜನೆಗಳಡಿಯಲ್ಲಿ ನಿರ್ಮಿಸಲು ಯೋಜಿಸಿರುವ ಮನೆಗಳೆಷ್ಟು; ನಿಗದಿತ ಸಮಯದಲ್ಲಿ ಮನೆಗಳನ್ನು ನಿರ್ಮಿಸದಿರಲು ಕಾರಣವೇನು;

ಈ ಅವಧಿಯಲ್ಲಿ ಸದರಿ ಯೋಜನೆಗಳಡಿಯಲ್ಲಿ ಒಟ್ಟು 4923 ಮನೆಗಳನ್ನು ನಿರ್ಮಿಸಲು ಯೋಜಿಸಿದ್ದು 4007 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು 913ಮನೆಗಳು ಪ್ರಗತಿಯಲ್ಲಿದ್ದು 3 ಮನೆಗಳ ಫಲಾನುಭವಿಗಳು ಮನೆಯನ್ನು ಪ್ರಾರಂಭ ಮಾಡಿರುವುದಿಲ್ಲ. ಈ ಕೆಳಕಂಡ ಕಾರಣಗಳಿಂದ ಸದರಿ ಮನೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಆಗಿರುವುದಿಲ್ಲ.

1. ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬವಾಗುತ್ತಿರುವುದು.

2. ಫಲಾನುಭವಿಗಳು ಕಡುಬಡವರಾಗಿರುವುದರ ಜೊತೆಗೆ ಕೂಲಿಗಾಗಿ ವಲಸೆ ಹೋಗುತ್ತಿದ್ದು ನಿಗದಿತ ಅವಧಿಯಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳದಿರುವುದು.
3. ಫಲಾನುಭವಿಗಳು ಮೊದಲ ಕಂತಿನ ಹಣವನ್ನು ಪಡೆಯಲು ತಳಪಾಯ ನಿರ್ಮಿಸಿಕೊಳ್ಳಬೇಕಾಗಿದ್ದು, ಮೊದಲ ಹಂತದಲ್ಲಿ ಫಲಾನುಭವಿಗಳ ಬಳಿ ಹಣದ ಕೊರತೆ ಇರುವುದು.

2005-06ನೇ ಸಾಲಿನಿಂದ ಎಲ್ಲಾ ವಸತಿ ಯೋಜನೆಗಳನ್ನು ಗ್ರಾಮ ಪಂಚಾಯಿತ್ತಿಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಈ) ಈ ಕ್ಷೇತ್ರದಲ್ಲಿ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ (ಗ್ರಾಮವಾರು ಅಂಕಿ ಅಂಶಗಳೊಂದಿಗೆ ಪೂರ್ಣ ವಿವರಗಳನ್ನು ನೀಡುವುದು);

ಈ ಕ್ಷೇತ್ರದಲ್ಲಿ ಒಟ್ಟು 913 ಮನೆಗಳ ಕಾಮಗಾರಿ ಪ್ರಗತಿಯಲ್ಲಿದ್ದು ನಿಗಮವು ಯೋಜನೆಗಳನ್ನು ಗ್ರಾಮಪಂಚಾಯಿತಿವಾರು ಅನುಷ್ಠಾನಗೊಳಿಸಲಾಗುತ್ತಿದ್ದು ವಿವರಗಳನ್ನು ಅನುಬಂಧ 'ಅ' ದಲ್ಲಿ ಲಗತ್ತಿಸಿದೆ.

ಉ) ಪ್ರಸಕ್ತ ವರ್ಷದಲ್ಲಿ ಸದರಿ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಮನೆಗಳೆಷ್ಟು (ಜಿಲ್ಲಾವಾರು ಮತ್ತು ಕ್ಷೇತ್ರವಾರು ಮೀಸಲಿಟ್ಟ ಹಣವೆಷ್ಟು ವಿವರ ನೀಡುವುದು);

2008-09ನೇ ಸಾಲಿನಲ್ಲಿ ಹಿಂದಿನ ಶ್ರೇಣಿಯಲ್ಲಿ ಪ್ರಗತಿಯಲ್ಲಿದ್ದ ಮನೆಗಳ ಪೈಕಿ ಈವರೆಗೆ ಒಟ್ಟು 237089 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 'ಆ' ಲಗತ್ತಿಸಲಾಗಿದೆ.

ಯೋಜನೆಗಳು	2008-09ನೇ ಸಾಲಿನಲ್ಲಿ ಪೂರ್ಣಗೊಂಡ ಮನೆಗಳು	ಮೀಸಲಿಟ್ಟ ಹಣ (ಲಕ್ಷಗಳಲ್ಲಿ)
ಗ್ರಾಮೀಣ ಆಶ್ರಯ	163989	44277.03
ಗ್ರಾಮೀಣ ಅಂಬೇಡ್ಕರ್	10124	2734.29
ಇಂದಿರಾ ಆವಾಸ್ ಯೋಜನೆ	60942	15235.50
ನಗರ ಆಶ್ರಯ	2034	511.75
ಒಟ್ಟು	**237089**	**62758.57**

ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ಗ್ರಾಮ ಪಂಚಾಯತ್‌ಗಳಿಂದ ಹೆಚ್ಚುವರಿ ಮನೆಗಳಿಗಾಗಿ ಪ್ರಸ್ತಾವನೆ ಸರ್ಕಾರಕ್ಕೆ ಬಂದಿವೆಯೆ;

ಹೌದು.

ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಬರುವ ದಿಂಡವಾರ ಗ್ರಾಮಪಂಚಾಯಿತಿಗೆ 30 ಮನೆಗಳನ್ನು 2006-07ನೇ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ನೀಡಲು 19.09.2008ರಂದು ನಿಗಮವನ್ನು ಕೋರಲಾಗಿರುತ್ತದೆ.

ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು?

2006-07ನೇ ಶ್ರೇಣಿಯು ಮುಕ್ತಾಯಗೊಂಡು 2 ವರ್ಷಗಳಾಗಿರುವುದರಿಂದ ಈ 30 ಮನೆಗಳ ಫಲಾನುಭವಿಗಳು ಅರ್ಹರಿದ್ದಲ್ಲಿ ಪ್ರತಿ ವರ್ಷ ನೀಡಲಾಗುವ ಗುರಿಯಲ್ಲಿ ಪರಿಗಣಿಸಿಕೊಳ್ಳಲು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಿಳಿಸಲಾಗಿದೆ.

ವಇ/48/ಯುಹೆಚ್ಎಸ್/09

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿಧಾನಸಭೆ

52 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಸುವರ್ಣ ಗ್ರಾಮೋದಯ ಯೋಜನೆಯ 1ನೇ ಹಂತದ ಕಾರ್ಯಕ್ರಮಕ್ಕೆ ಒದಗಿಸಲಾಗಿರುವ ಅನುದಾನವೆಷ್ಟು; ರಾಜ್ಯದಲ್ಲಿ ಒಟ್ಟು ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ;

ಸುವರ್ಣ ಗ್ರಾಮೋದಯ ಯೋಜನೆಯ 1ನೇ ಹಂತದ ಕಾರ್ಯಕ್ರಮಕ್ಕೆ ಮಂಜೂರಾಗಿರುವ ಅನುದಾನ ರೂ.1000.00 ಕೋಟಿಗಳು. ಈ ಪೈಕಿ ರೂ.850.00 ಕೋಟಿಗಳನ್ನು 2006-07 ರಿಂದ 2008-09ನೇ ಸಾಲುಗಳ ಆಯವ್ಯಯದಲ್ಲಿ ಒದಗಿಸಲಾಗಿದೆ. 1ನೇ ಹಂತದಲ್ಲಿ 1204 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಆ) ಬೆಳಗಾವಿ ಜಿಲ್ಲೆಗೆ ಈ ಯೋಜನೆಯ 1ನೇ ಹಂತದ ಕಾರ್ಯಕ್ರಮಕ್ಕೆ ಒದಗಿಸಲಾದ ಅನುದಾನವೆಷ್ಟು; ಜಿಲ್ಲೆಯಲ್ಲಿ ಆಯ್ಕೆಯಾದ ಗ್ರಾಮಗಳ ಸಂಖ್ಯೆ ಎಷ್ಟು;

ಬೆಳಗಾವಿ ಜಿಲ್ಲೆಗೆ ಈ ಯೋಜನೆಯ 1ನೇ ಹಂತದ ಕಾರ್ಯಕ್ರಮಕ್ಕೆ ಮಂಜೂರಾಗಿರುವ ಅನುದಾನ ರೂ.89.30 ಕೋಟಿ. ಬೆಳಗಾವಿ ಜಿಲ್ಲೆಯಲ್ಲಿ 97 ಗ್ರಾಮಗಳು ಆಯ್ಕೆಯಾಗಿವೆ.

ಇ) ಜಿಲ್ಲೆಯಲ್ಲಿ ಯೋಜನೆಗೆ ಒದಗಿಸಲಾದ ಅನುದಾನವನ್ನು ಸಂಪೂರ್ಣ ಬಳಕೆ ಮಾಡಲಾಗಿದೆಯೇ; ಉಳಿದಿರುವ ಅನುದಾನವೆಷ್ಟು; ಉಳಿದಿರುವ ಅನುದಾನವನ್ನು ಯಾವ ರೀತಿ ಬಳಕೆ ಮಾಡಲು ಉದ್ದೇಶಿಸಲಾಗಿದೆ;

ಜಿಲ್ಲೆಯಲ್ಲಿ ಯೋಜನೆ ಇನ್ನೂ ಪ್ರಗತಿ ಹಂತದಲ್ಲಿದ್ದು, ಯಾವ ಗ್ರಾಮದಲ್ಲಿ ಹಣ ಉಳಿತಾಯವಾಗುತ್ತಿದಿಯೋ ಅಲ್ಲಿ ಹೆಚ್ಚಿನ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆ.

a) What is the amount provided and number of village selected under the 1st phase of Suvarna Gramodaya Yojane being implemented by RD & PR Department;

For the 1st phase of Suvarna Gramodaya Yojane Rs.1000.00 crore was sanctioned. Of which Rs.850.00 crore since 2006-07 has been provided in the budget. 1204 villages have been selected under 1st phase.

b) What is the amount provided and number of villages selected in Belagavi District in the 1st phase of the scheme;

Rs.89.30 crore have been sanctioned to Belagavi district. 97 villages have been selected under 1st phase.

c) Whether the amount provided to the district have been completely utilized; What is the balance? And how the balance fund will be utilized;

The project is under progress in the districts. The balance fund is being utilized for the additional work of the same village

ನಂ.ಗ್ರಾಅಪ:27:ಸುಗ್ರಾಯೋ:2009

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು,

<u>ಕರ್ನಾಟಕ ವಿದಾನಸಭೆ</u>

72ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ)
ಇಂಧನ ಸಚಿವರು.

****

ಅ) ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿ ಗ್ರಾಮದ 66/11 ಕೆ.ವಿ. ವಿದ್ಯುತ್ ಮಂಜೂರಾಗಿದೆಯೇ;

393.02 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಆ) ತೆರಕಣಾಂಬಿ ಗ್ರಾಮದ 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 66/11 ಕೆ.ವಿ. ಉಪಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಮಂಜೂರಾತಿ ನೀಡಲಾಗಿದೆಯೇ;

620.14 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಇ) ಹಾಗಿದ್ದಲ್ಲಿ, ಈ ವಿದ್ಯುತ್ ಉಪಕೇಂದ್ರ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

2009-10 ರ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸಂಖ್ಯೆ: ಇಎನ್ 10 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

<u>ಕರ್ನಾಟಕ ವಿದಾನಸಭೆ</u>

73 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್
(ಗುಂಡ್ಲುಪೇಟೆ)

ಅ) ಗುಂಡ್ಲುಪೇಟೆ ಪಟ್ಟಣದಿಂದ ಹಂಗಳ ಗ್ರಾಮಕ್ಕೆ ನದಿ ಮೂಲದಿಂದ ಕುಡಿಯುವ ನೀರು ಒದಗಿಸುವ ಯೋಜನೆಗೆ ಸರ್ಕಾರದ ಮಂಜೂರಾತಿ ದೊರೆತಿದೆಯೇ?

ರೂ.130.50ಲಕ್ಷ ಅಂದಾಜು ಮೊತ್ತದ ಈ ಯೋಜನೆಗೆ ಆಗಸ್ಟ್ 2007ರಲ್ಲಿ ಮಂಜೂರಾತಿ ನೀಡಲಾಗಿದೆ.

ಆ) ಈ ಯೋಜನೆಗೆ ಮಂಜೂರಾತಿ ನೀಡುವಾಗ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯವರು ತಿಳಿಸಿದ ಮೊತ್ತಕ್ಕೆ ಮಂಜೂರಾತಿ ನೀಡದಿರುವುದರಿಂದ ಯೋಜನೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಪುನಃ ದಿನಾಂಕ:12-03-2008ರಲ್ಲಿ ರೂ.182.86ಲಕ್ಷ ಮೊತ್ತದ ಪರಿಷ್ಕೃತ ಯೋಜನೆಗೆ ಒಪ್ಪಿಗೆ ನೀಡಿ KUWS & DB ಯೋಜನೆ ಕಾರ್ಯಗತಗೊಳಿಸಿದಾಗ ತಗಲುವ ವಾಸ್ತವಿಕ ವೆಚ್ಚ ಆಧರಿಸಿ ಅನುದಾನ ಬಿಡುಗಡೆ ಮಾಡುವುದಾಗಿ ತಿಳಿಸಲಾಗಿದೆ. ಆದರೂ ಈ ಯೋಜನೆಯ ಅನುಷ್ಠಾನದಲ್ಲಿ KUWS & DB ವತಿಯಿಂದ ವಿಳಂಬವಾಗುತ್ತಿರುವುದು ಕಂಡು ಬಂದಿದೆ.

ಇ) ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳೇನು?

KUWS & DB ಗೆ ತ್ವರಿತವಾಗಿ ಯೋಜನೆಯ ಕಾಮಗಾರಿಯನ್ನು ಅನುಷ್ಠಾನ ಗೊಳಿಸಲು ತಿಳಿಸಿದೆ. ದಿನಾಂಕ:20-05-2008ರಲ್ಲಿ ಕರೆಯಲಾಗಿದ್ದ ಟೆಂಡರ್‌ಗೆ ಗುತ್ತಿಗೆದಾರರು ಹೆಚ್ಚಿನ ದರ ನಮೂದಿಸಿದ ಕಾರಣ, ಟೆಂಡರ್ ರದ್ದು ಪಡಿಸಿ, ದಿನಾಂಕ:06-02-2009ರಂದು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

A) Whether the approval has been accorded by Government for the drinking water supply scheme to Hangala village from Gundlupet Town based on the river source;

Approval has been accorded to Rs.130.50lakh estimate during August 2007, for this scheme.

B) Has come to the notice of Government that there is delay on account of non-sanctioning of this scheme to the estimated amount posed by KUWS & DB;

While agreeling again to the revised cost estimate of Rs.182.86 lakh on 12-03-2008, KUWS & DB has been Informed that actual amount will be released when the scheme is commissioned. However, it is noticed that there is delay from KUWS & DB.

C) What are the measures initiated, to speed up the implementation of this scheme?

KUWS & DB has been informed to expedite the scheme works. Since the bid amount was on higher side against the tender, Tender has been cancelled and short term tender has been called for on 06-02-2009.

ಸಂ.ಗ್ರಾಅಪ 16 ಗ್ರಾನೀಸ(1)09

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

(13ನೇ ವಿಧಾನ ಸಭೆ. 2ನೇ ಅಧಿವೇಶನ)

75 ಶ್ರೀ ಮಂಜು.ಎ (ಅರಕಲಗೂಡು)

ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ಹಾಸನ ಜಿಲ್ಲೆಯ ಅರಕಲಗೂಡು ಹಾಗೂ ಹೊಳೇನರಸೀಪುರ ತಾಲ್ಲೂಕುಗಳಲ್ಲಿ 2007-08ನೇ ಸಾಲಿಗೆ ಮಂಜೂರು ಮಾಡಲ್ಪಟ್ಟ ಆಶ್ರಯ ಮನೆಗಳೆಷ್ಟು (ವಿವರಗಳನ್ನು ಒದಗಿಸುವುದು);

2007-08ನೇ ಸಾಲಿಗೆ ರಾಜ್ಯ ಸರ್ಕಾರವು ಆಶ್ರಯ ಯೋಜನೆಯಡಿ ಗುರಿಯನ್ನು ನೀಡಿರುವುದಿಲ್ಲ. ಆದರೆ, 2007-08ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಹಿಂದಿನ ಶ್ರೇಣಿಯಲ್ಲಿ ಪ್ರಗತಿಯಲ್ಲಿದ್ದ 1669 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

2007-08ನೇ ಆರ್ಥಿಕ ವರ್ಷದಲ್ಲಿ ಹೊಳೇನರಸೀಪುರ ಮನೆಗಳು			
ಯೋಜನೆ	ಅರಕಲಗೂಡು	ಹೊಳೆನರಸೀಪುರ	ಒಟ್ಟು
ಗ್ರಾಮೀಣ ಆಶ್ರಯ	955	714	1669

ಆ) ಹಾಗಿದ್ದಲ್ಲಿ, ಬಡ ಫಲಾನುಭವಿಗಳಿಗೆ ನೀಡಲಾದ ಆಶ್ರಯ ಮನೆಗಳೆಷ್ಟು;

ಈ ಮೇಲ್ಕಂಡ ಎಲ್ಲಾ ಮನೆಗಳನ್ನೂ ಬಡವರಿಗಾಗಿಯೇ ನೀಡಲಾಗಿದೆ.

ಇ) ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾಗಿ ಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ರದ್ದುಪಡಿಸಿರುವ ಮನೆಗಳ ಸಂಖ್ಯೆ ಎಷ್ಟು?

ಆಶ್ರಯ ಯೋಜನೆಯಡಿ ಅರಕಲಗೂಡು ತಾಲ್ಲೂಕು ಮತ್ತು ಹೊಳೇನರಸೀಪುರ ತಾಲ್ಲೂಕುಗಳಿಗೆ ಮಂಜೂರಾದ ಮನೆಗಳು, ಪೂರ್ಣಗೊಂಡ ಮನೆಗಳು ಮತ್ತು ರದ್ದು ಪಡಿಸಿರುವ ಮನೆಗಳ ವಿವರಗಳು ಕೆಳಗಿನಂತಿವೆ.

ಅರಕಲಗೂಡು ತಾಲ್ಲೂಕು:

ವಿವರಗಳು	ಗ್ರಾಮೀಣ ಆಶ್ರಯ (1995-96 ರಿಂದ 2008-09ರವರೆಗೆ)	ನಗರ ಆಶ್ರಯ (1995-96 ರಿಂದ 2005-06 ರವರೆಗೆ)
ಮಂಜೂರಾದ ಮನೆಗಳು	6518	1082
ನಿಗಮದಿಂದ ಅನುಮೋದಿಸಿದ ಮನೆಗಳ ಸಂಖ್ಯೆ	6402	402
ಪೂರ್ಣಗೊಂಡ ಮನೆಗಳು	4204	396
ಪ್ರಗತಿಯಲ್ಲಿರುವ ಮನೆಗಳು	1556	6
ಇನ್ನೂ ಪ್ರಾರಂಭವಾಗ ಬೇಕಾಗಿರುವ ಮನೆಗಳು	505	0
ರದ್ದು ಪಡಿಸಿದ ಮನೆಗಳು	142	680

ಹೊಳೇನಗಸೀಪುರ ತಾಲ್ಲೂಕು:

ವಿವರಗಳು	ಗ್ರಾಮೀಣ ಆಶ್ರಯ (1995-96 ರಿಂದ 2008-09ರವರೆಗೆ)	ನಗರ ಆಶ್ರಯ (1995-96 ರಿಂದ 2005-06 ರವರೆಗೆ)
ಮಂಜೂರಾದ ಮನೆಗಳು	8335	1307
ನಿಗಮದಿಂದ ಅನುಮೋದಿಸಿದ ಮನೆಗಳ ಸಂಖ್ಯೆ	7643	926
ಪೂರ್ಣಗೊಂಡ ಮನೆಗಳು	6135	920
ಪ್ರಗತಿಯಲ್ಲಿರುವ ಮನೆಗಳು	1252	6
ಇನ್ನೂ ಪ್ರಾರಂಭವಾಗ ಬೇಕಾಗಿರುವ ಮನೆಗಳು	241	0
ರದ್ದು ಪಡಿಸಿದ ಮನೆಗಳು	710	381

ಸಂಖ್ಯೆ: ವಇ 22 ಹೆಚ್‌ಎಎಂ 2009

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು

ಕರ್ನಾಟಕ ವಿಧಾನಸಭೆ
(13ನೇ ವಿಧಾನ ಸಭೆ. 2ನೇ ಅಧಿವೇಶನ)

91ಶ್ರೀ ಜಯಚಂದ್ರ ಟಿ.ಬಿ. (ಶಿರಾ)

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ತುಮಕೂರು ಜಿಲ್ಲೆಯ, ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಹುಳಿಯಾರು ಮತ್ತು ದಸೂಡಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮದವತಿಯಿಂದ ಮನೆಕಟ್ಟುವಲ್ಲಿ ವ್ಯಾಪಕ ಅವ್ಯವಹಾರ ವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಈ ಹಗರಣದಲ್ಲಿ ಭಾಗಿಯಾಗಿರುವವರು ಯಾರುಯಾರು; ಅವರುಗಳ ಮೇಲೆ ಸರ್ಕಾರ ಕಾನೂನಿನ್ವಯ ತೆಗೆದುಕೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು)?

ಹುಳಿಯಾರು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಈ ಹಗರಣದಲ್ಲಿ ಹುಳಿಯಾರು ಗ್ರಾಮಪಂಚಾಯಿತಿಯ ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಭಾಗಿಯಾಗಿರುವುದಾಗಿ ವರದಿಯಾಗಿದೆ. ದಿನಾಂಕ:13-01-2009ರಂದು ಹುಳಿಯಾರು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾದ ಶ್ರೀ ನಂದಕೃಷ್ಣರವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. ಗ್ರಾಮ ಪಂಚಾಯತಿಯ ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಮೇಲೆ ದಿನಾಂಕ: 31-01-2009 ರಂದು ಕ್ರಿಮಿನಲ್ ಕೇಸ್ ದಾಖಲಾಗಿಸಲಾಗಿದೆ ಹಾಗೂ ಅವ್ಯವಹಾರಗಳಿಗೆ ಕಾರಣರಾಗಿರುವ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಸದಸ್ಯರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮ 48(4) ಹಾಗೂ 43(ಎ) ರನ್ವಯ ಸದಸ್ಯತ್ವದಿಂದ ವಜಾ ಮಾಡಲು ಪ್ರಸ್ತಾಪಿಸಲಾಗಿದೆ.

ದಸೂಡಿ ಗ್ರಾಮಪಂಚಾಯಿತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ವಿರುದ್ಧ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲು ತನಿಖೆ ನಡೆಸುವಂತೆ ತುಮಕೂರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಗಿದೆ.

ಸಂಖ್ಯೆ: ವಇ 24 ಹೆಚ್‌ಎಎಂ 2009

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿದಾನಸಭೆ
(13ನೇ ವಿಧಾನ ಸಭೆ. 2ನೇ ಅಧಿವೇಶನ)

92ಶ್ರೀ ಜಯಚಂದ್ರ ಟಿ.ಬಿ. (ಶಿರಾ)

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ರಾಜ್ಯದಲ್ಲಿ ನಿವೇಶನ ರಹಿತರ ಹಾಗೂ ಗುಡಿಸಲು ವಾಸಿಗಳ ಸಂಖ್ಯೆ ಎಷ್ಟು; ಇವರಿಗೆ ವಸತಿ ಸೌಕರ್ಯ ಕಲ್ಪಿಸಲು ಶಾಶ್ವತವಾಗಿರುವ ಯೋಜನೆಯಡಿ ಕಾರ್ಯಕ್ರಮವನ್ನು ರೂಪಿಸಲು ಸರ್ಕಾರದ ಗಮನದಲ್ಲಿದೆಯೇ;

2003 ರಲ್ಲಿ ನಡೆಸಿದ ಸರ್ವೆ ಪ್ರಕಾರ ರಾಜ್ಯದಲ್ಲಿ ಸುಮಾರು 12,99,789 ವಸತಿರಹಿತರು ಮತ್ತು 12,98,813 ನಿವೇಶನರಹಿತರು ಇದ್ದು, ಇವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವ ದೃಷ್ಟಿಯಿಂದ ಪ್ರತಿ ವರ್ಷ ಸರ್ಕಾರವು ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಅವಾಸ್ ಯೋಜನೆಗಳಡಿಯಲ್ಲಿ ಮನೆಗಳ ಗುರಿಯನ್ನು ನಿಗದಿಪಡಿಸಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡುತ್ತಿದೆ.

ಆ) ಈ ರೀತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಶ್ರಯ ಸಮಿತಿಗಳನ್ನು ರಚಿಸಿ ಈ ಮೂಲಕ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಎಲ್ಲಾ ಗ್ರಾಮೀಣ ವಸತಿ ಕಾರ್ಯಕ್ರಮಗಳ ಅನುಷ್ಠಾನ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಿ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಡಿ ಅರ್ಹ ಫಲಾನುಭವಿಗಳನ್ನು ವಸತಿರಹಿತ ಮತ್ತು ನಿವೇಶನರಹಿತರ ಪಟ್ಟಿಯಿಂದ ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ಕ್ರಮ ಕೈಗೊಂಡಿರುತ್ತದೆ. ನಗರ

ಪ್ರದೇಶಕ್ಕೆ ಸಂಬಂಧಿಸಿದಂತೆ ವಸತಿ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಆಶ್ರಯ ಸಮಿತಿಗಳಿಗಿದ್ದು, ಸರ್ಕಾರವು 224 ನಗರ ಸ್ಥಳೀಯ ಸಂಸ್ಥೆಗಳ ಪೈಕಿ ಈವರೆಗೆ 21 ನಗರ ಸ್ಥಳೀಯ ಸಂಸ್ಥೆಗಳಿಗೆ ಆಶ್ರಯ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಿರುತ್ತದೆ.

ಸಂಖ್ಯೆ: ವಇ 23 ಹೆಚ್ಎಎಂ 2009

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿದಾನಸಭೆ

(13ನೇ ವಿಧಾನ ಸಭೆ. 2ನೇ ಅಧಿವೇಶನ)

93ಶ್ರೀ ಜಯಚಂದ್ರ ಟಿ.ಬಿ. (ಶಿರಾ)

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಶಿರಾ ತಾಲ್ಲೂಕು ಬರಗಾಲಪೀಡಿತ ಹಾಗೂ ಅತೀ ಹಿಂದುಳಿದ ಪ್ರದೇಶವಾಗಿದ್ದು ಆರ್ಥಿಕವಾಗಿ ಜನರು ಅಸಹಾಯಕರಾಗಿದ್ದು ನಿವೇಶನ ಮತ್ತು ಮನೆ ಇಲ್ಲದವರು ಹಾಗೂ ರಾಜ್ಯದ ಗಡಿ ಪ್ರದೇಶದಲ್ಲಿರುವ ಜನರಿಗೆ ವಿಶೇಷವಾಗಿ ಮನೆಗಳನ್ನು ಕೊಡಲು ಸರ್ಕಾರ ಯಾವುದಾದರು ಕಾರ್ಯಕ್ರಮವನ್ನು ರೂಪಿಸಿದೆಯೇ;

ಪ್ರಸಕ್ತ ಸಾಲಿನಲ್ಲಿ ಸರ್ಕಾರವು ನಿಗದಿಪಡಿಸಿದ ಗುರಿಯಂತೆ ಶಿರಾ ತಾಲ್ಲೂಕಿಗೆ ಪ್ರತಿ ಗ್ರಾಮ ಪಂಚಾಯಿತಿಗೆ 25 ಮನೆಗಳಂತೆ 900 ಮನೆಗಳನ್ನು ಹಂಚಿಕೆ ಮಾಡುವುದರ ಜೊತೆಗೆ ಹಿಂದುಳಿದ ಪ್ರದೇಶದ ಪ್ರತಿ ಗ್ರಾಮಪಂಚಾಯಿತಿಗೆ 10 ಮನೆಗಳಂತೆ ಹೆಚ್ಚುವರಿಯಾಗಿ 360 ಮನೆಗಳನ್ನು ನೀಡಲಾಗಿದೆ.

ಆ) ಹಾಗಿದ್ದಲ್ಲಿ, ಯಾದವ ಜನಾಂಗದವರು ಹೆಚ್ಚಾಗಿದ್ದು ವಿಶೇಷವಾದ ಯೋಜನೆಯನ್ನು ರೂಪಿಸಿ ಗುಡಿಸಲು ರಹಿತ ತಾಲ್ಲೂಕನ್ನಾಗಿ ಮಾಡಲು ಸರ್ಕಾರ ಚಿಂತನೆ ನಡೆಸುವುದೆ?

ಯಾದವ ಜನಾಂಗದವರಿಗೆ ಪ್ರತ್ಯೇಕವಾಗಿ ಯಾವುದೇ ವಸತಿ ಯೋಜನೆಗಳನ್ನು ಸರ್ಕಾರವು ಜಾರಿಗೆ ತಂದಿರುವುದಿಲ್ಲ. ಆದರೆ ಈ ಜನಾಂಗದವರಿಗೆ ಈಗಾಗಲೇ ಜಾರಿಯಲ್ಲಿರುವ ಆಶ್ರಯ ಮತ್ತು ಇಂದಿರಾ ಅವಾಸ್ ಯೋಜನೆಗಳಡಿಯಲ್ಲಿ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಲಾಗುವ ಗುರಿಯಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗುತ್ತಿದೆ.

ಸಂಖ್ಯೆ: ವಇ 26 ಹೆಚ್‌ಎಎಂ 2009

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿದಾನಸಭೆ

95 ಶ್ರೀ ಮಹದೇವ ಪ್ರಸಾದ ಹೆಚ್.ಎಸ್.
ಪ್ರಾಧಿಕಾರ ರಚನೆಯ ಬಗ್ಗೆ
ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಶ್ರೀ ಮಲೈ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಹೌದು.

ಆ) ಹಾಗಿದ್ದರೆ, ಅಭಿವೃದ್ಧಿ ಪ್ರಾಧಿಕಾರ ರಚಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಪ್ರಾಧಿಕಾರವನ್ನು 2009-10ನೇ ಸಾಲಿನಲ್ಲಿ ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಕಂಇ 18 ಮುಸಪ್ರ 2009

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿದಾನ ಸಭೆ

96
ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್ (ಗುಂಡ್ಲುಪೇಟೆ)
ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

1) ಗುಂಡ್ಲುಪೇಟೆ ಪಟ್ಟಣದಲ್ಲಿ 14 ಬೀದಿಗಳನ್ನು ಕೊಳಚೆ ಪ್ರದೇಶವೆಂದು ಘೋಷಣೆ ಮಾಡಿ. ಆ ಕೊಳಚೆ ನಿವಾಸಿಗಳಿಗೆ ಮೂಲ ಸೌಕರ್ಯ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಗುಂಡ್ಲುಪೇಟೆ ಪಟ್ಟಣದಲ್ಲಿ 14 ಬೀದಿಗಳನ್ನು ಕೊಳಚೆ ಪ್ರದೇಶವೆಂದು ಘೋಷಣೆ ಮಾಡಿ, ಆ ಕೊಳಚೆ ನಿವಾಸಿಗಳಿಗೆ ಮೂಲ ಸೌಕರ್ಯ ಒದಗಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2) ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಗುಂಡ್ಲುಪೇಟೆ ಪಟ್ಟಣದ 14 ಬೀದಿಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಗುರುತಿಸಲಾಗಿದ್ದು ಈ ಪ್ರದೇಶಗಳು ಮಂಡಳಿ ಕಾಯಿದೆಯಡಿ ಘೋಷಣೆ ಮಾಡಲು ಗುಣಲಕ್ಷಣಗಳು ಹೊಂದಿದ್ದಲ್ಲಿ ಘೋಷಣೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಸಂಬಂಧಿಸಿದ ಪುರಸಭೆಯವರನ್ನು ಕೋರಿ ದಾಖಲೆಗಳನ್ನು ಪಡೆದು ನಂತರ ಘೋಷಣೆಗೆ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುವುದು ಘೋಷಣೆ ನಂತರ ಮೂಲಭೂತ ಸೌಕರ್ಯಗಳನ್ನು ಹಣ ಲಭ್ಯತೆ ಆಧಾರಿಸಿ ಆದ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು.

ವಇ 03 ಕೊಮುಂವಿ 08

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿದಾನ ಸಭೆ

102ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

1) ಸೇಡಂ ಪಟ್ಟಣದ ಕೊಳಚೆ ಪ್ರದೇಶಗಳಲ್ಲಿ ಬರುವ ಬಸವ ನಗರ, ಇಂದಿರಾ ನಗರ ಬಡಿಬೇಸ ಹರಿಜನವಾಡಾದಲ್ಲಿ ಕಳೆದ ವರ್ಷ ಅತಿವೃಷ್ಟಿಯಾದಾಗ ಎಲ್ಲಾ ಮನೆಗಳಲ್ಲಿ ನೀರು ನಿಂತು ಅಲ್ಲಿಯ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸೇಡಂ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳಲ್ಲಿ ಕಳೆದ ವರ್ಷ ಅತಿವೃಷ್ಟಿಯಿಂದ ಮನೆಗಳಲ್ಲಿ ನೀರು ನಿಂತು ಅಲ್ಲಿಯ ಜನರಿಗೆ ತೊಂದರೆಯಾಗಿರುವ ಬಗ್ಗೆ ಸ್ಥಳೀಯ ಪುರಸಭೆಯಾಗಲಿ, ತಹಸಿಲ್ದಾರಾಗಲಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಅಥವಾ ಸರ್ಕಾರದ ಗಮನಕ್ಕೆ ತಂದಿರುವುದಿಲ್ಲ. ಅದಾಗಿಯೂ ಈ ಕೊಳಚೆ ಪ್ರದೇಶಗಳಲ್ಲಿ ಜನರಿಗೆ ತೊಂದರೆಯಾಗಿರುವುದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

2) ಹಾಗಿದ್ದಲ್ಲಿ, ಕೊಳಚೆ ನಿರ್ಮೂಲನಾ ಮಂಡಳಿಯಿಂದ ಶಾಶ್ವತವಾಗಿ ಅದೇ ಸ್ಥಳದಲ್ಲಿ ಬುನಾದಿ ಎತ್ತರ ಮಾಡಿ ಮನೆಗಳನ್ನು ನಿರ್ಮಾಣ ಮಾಡುವ ಸಲುವಾಗಿ ಮಂಜೂರಾತಿ ನೀಡಲಿದೆಯೇ?

ಸದರಿ ಕೊಳಚೆ ಪ್ರದೇಶಗಳಲ್ಲಿನ ಮನೆಗಳ ಬುನಾದಿ ಎತ್ತರ ಮಾಡಿ ಮನೆಗಳನ್ನು ನಿರ್ಮಿಸಲು ಯಾವುದೇ ಯೋಜನೆಯಡಿಯಲ್ಲಿ, ಮಂಜೂರಾತಿಯಾಗಿರುವುದಿಲ್ಲ. ಆದರೂ ಸಹ ಮಾನ್ಯ ಶಾಸಕರು ಸೂಚಿಸಿದಂತೆ ನೀರು ತುಂಬಿಕೊಂಡಂತಹ ಮನೆಗಳನ್ನು IHSDP ಯೋಜನೆಯಡಿಯಲ್ಲಿ ಪುನರ್‌ನಿರ್ಮಿಸಲು (in-situ) ಪ್ರಸ್ತಾವನೆ ತಯಾರಿಸಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

ವಇ 04 ಕೊಮಂವಿ 08

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿದಾನ ಸಭೆ

103 ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲ್, [ಸೇಡಂ]
ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ) ಸೇಡಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬಹಳಷ್ಟು ಸಿಮೆಂಟ್ ಕಂಪೆನಿಗಳು ಪ್ರಾರಂಭ ವಾಗುತ್ತಿರುವುದರಿಂದ, ಸೇಡಂ ಮತ್ತು ಸುಲೇ ಪೇಟದಲ್ಲಿ ಸರಕಾರಿ ತಾಂತ್ರಿಕ ಕಾಲೇಜು [ಪಾಲಿಟೆಕ್ನಿಕ್] ಪ್ರಾರಂಭಿಸುವ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಸೇಡಂ ತಾಲ್ಲೂಕು ಸೇರಿದಂತೆ ರಾಜ್ಯದ ಇತರೆ ತಾಲ್ಲೂಕುಗಳಲ್ಲಿ ಮುಂಬರುವ ವರ್ಷಗಳಲ್ಲಿ ಅನುದಾನ ಹಾಗೂ ಅವಶ್ಯಕತೆಯನ್ನು ಆಧರಿಸಿ ಹಂತ ಹಂತವಾಗಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುವುದು.

ಇಡಿ: 46 : ಯೋಯೋಕ 2009

ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿದಾನ ಸಭೆ

104ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಮಾನ್ಯ ಪಶುಸಂಗೋಪನಾ ಸಚಿವರು

ಅ) ಸೇಡಂ ಮತಕ್ಷೇತ್ರದಲ್ಲಿ ಹೊಸದಾಗಿ ಪಶುಚಿಕಿತ್ಸಾಲಯಗಳು ಪ್ರಾರಂಭಿಸುವ ಪ್ರಸ್ತಾವನೆ ಸರಕಾರದಲ್ಲಿದೆಯೇ;

ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವ್ಯದ್ಯರಿರುವ ಪಶುವೈದ್ಯ ಚಿಕಿತ್ಸಾಲಯ ಇರಬೇಕಾಗಿದೆ. ಸೇಡಂ ಮತಕ್ಷೇತ್ರದಲ್ಲಿ 2003ನೇ ಜಾನುವಾರು ಗಣತಿಯಂತೆ 83284 ಜಾನುವಾರು ಘಟಕಗಳಿದ್ದು ಅವುಗಳ ಎದರಾಗಿ 17 ಪಶುವೈದ್ಯ ಸಂಸ್ಥೆಗಳು ಇರಬೇಕಾಗಿರುತ್ತದೆ. ಆದರೆ, ಸೇಡಂ ತಾಲ್ಲೂಕಿನಲ್ಲಿ ಈಗಾಗಲೇ 19 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಹೊಸದಾಗಿ ಪಶುಚಿಕಿತ್ಸಾಲಯ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವ ಸ್ಥಳಗಳಲ್ಲಿ (ಗ್ರಾಮ) ಪ್ರಾರಂಭಿಸಲಾಗುವುದು)?

ಉದ್ಭವಿಸುವುದಿಲ್ಲ.

ಸಂಖ್ಯೆ: ಪಸಂಮೀ 132 ಪಸಸೇ 2009

(ರೇವೂನಾಯಕ್ ಬೆಳಮಗಿ)
ಪಶುಸಂಗೋಪನಾ ಸಚಿವರು

ಕರ್ನಾಟಕ ವಿದಾನ ಸಭೆ

106 ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)

ಅ) 2000 ಜನಸಂಖ್ಯೆಗಳಿಗಿಂತ ಕಡಿಮೆ ಇರುವ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಸ್ವಚ್ಛ ಗ್ರಾಮ ಯೋಜನೆ ಮಾದರಿಯಲ್ಲಿ ಸರ್ಕಾರವು ಯೋಜನೆ ಹಮ್ಮಿಕೊಳ್ಳಲು ಇಚ್ಛಿಸಿದೆಯೇ;

ಈಗಾಗಲೇ ಸುವರ್ಣ ಗ್ರಾಮೋದಯ ಯೋಜನೆ ಅನುಷ್ಠಾನದಲ್ಲಿರುವುದರಿಂದ ಸಧ್ಯಕ್ಕೆ ಸ್ವಚ್ಛಗ್ರಾಮ ಯೋಜನೆ ಮಾದರಿಯ ಇನ್ನೊಂದು ಹೊಸ ಯೋಜನೆ ಹಮ್ಮಿಕೊಳ್ಳುವ ಉದ್ದೇಶವಿರುವುದಿಲ್ಲ.

ಆ) ಹಾಗಿದ್ದಲ್ಲಿ, ಅದರ ರೂಪರೇಶೆಗಳು ಯಾವುವು ಮತ್ತು ಕಾರ್ಯಕ್ರಮಗಳೇನು?

-ಉದ್ಭವಿಸುವುದಿಲ್ಲ-

ಸಂ:ಗ್ರಾಅಪ 15ಗ್ರಾನೀಸ(1)09

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕರ್ನಾಟಕ ವಿದಾನಸಭೆ

107 ಶ್ರೀ ಪ್ರತಾಪಗೌಡ ಪಾಟೀಲ [ಮಸ್ಕಿ]
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಮಸ್ಕಿ ಪದವಿ ಪೂರ್ವ ಮಹಿಳಾ ಕಾಲೇಜಿನ ಕಟ್ಟಡದ ಟೆಂಡರ್ ಪ್ರಕ್ರಿಯೆ ಯಾವ ಹಂತ ದಲ್ಲಿದೆ;

ಮಸ್ಕಿಯ ಮಹಿಳಾ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಮುಗಿದಿರುತ್ತದೆ.

ಇಡಿ: 46 : ಯೋಸಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿದಾನ ಸಭೆ

108 ಶ್ರೀ ಪ್ರತಾಪಗೌಡ ಪಾಟೀಲ್
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಮಸ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಹೊಸದಾಗಿ ಮಂಜೂರಾತಿ ನೀಡಲಾಗುವುದೇ?

ಮಸ್ಕಿ ವಿಧಾನ ಸಭಾ ಕ್ಷೇತ್ರವೂ ಒಳಗೊಂಡಂತೆ ರಾಜ್ಯದ ವಿವಿಧ ಕ್ಷೇತ್ರಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೊಸ ಸರ್ಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಸಂಖ್ಯೆ : ಇಡಿ 67 ಎಂಸಿಡಿ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

(13ನೇ ವಿಧಾನ ಸಭೆ. 2ನೇ ಅಧಿವೇಶನ)

115 ಶ್ರೀ ಅಮರೇಶ್ (ಮುಳಬಾಗಿಲು)

ಮಾನ್ಯ ವಸತಿ ಹಾಗೂ ಮುಜಯಾಯಿ

ಸಚಿವರು

ಅ) ಅತೀ ಹಿಂದುಳಿದ ಹಾಗೂ ಬರಪೀಡಿತ ಪ್ರದೇಶವಾದ ಮುಳಬಾಗಿಲು ತಾಲ್ಲೂಕಿಗೆ 2007-08 ರಲ್ಲಿ ಮಂಜೂರಾಗಿರುವ ಆಶ್ರಯ ಮನೆಗಳು ಎಷ್ಟು (ವಿವರ ನೀಡುವುದು);

2007-08ನೇ ಸಾಲಿಗೆ ರಾಜ್ಯ ಸರ್ಕಾರವು ಯಾವ ತಾಲ್ಲೂಕಿಗೂ ಮನೆಗಳ ನಿರ್ಮಾಣದ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ಅದರಂತೆ ಈ ಸಾಲಿಗೆ, ಮುಳಬಾಗಿಲು ತಾಲ್ಲೂಕಿಗೂ ಗುರಿಯನ್ನು ನಿಗದಿಪಡಿಸಿವುದಿಲ್ಲ.

ಆ) ಮುಳಬಾಗಿಲು ತಾಲ್ಲೂಕಿಗೆ 2008-09ನೇ ಸಾಲಿನಲ್ಲಿ ಎಷ್ಟು ಆಶ್ರಯ ಮನೆಗಳನ್ನು ನೀಡಲು ತೀರ್ಮಾನಿಸಲಾಗಿದೆ; ಮಂಜೂರು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಮುಳಬಾಗಿಲು ತಾಲ್ಲೂಕಿಗೆ 2008-09ನೇ ಸಾಲಿಗೆ ಗ್ರಾಮೀಣ ಆಶ್ರಯ ಯೋಜನೆಯಡಿ 1050 ಮನೆಗಳ ಗುರಿಯನ್ನು ನೀಡಲಾಗಿದೆ. ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಸಂಖ್ಯೆ: ವಇ 30 ಹೆಚ್‌ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

117

ಶ್ರೀ ಅಮರೇಶ್ (ಮುಳಬಾಗಿಲು)

ಮಾನ್ಯ ಪಶುಸಂಗೋಪನಾ ಸಚಿವರು.

ಅ) ಕೋಲಾರ ಜಿಲ್ಲೆ, ಮುಳುಬಾಗಿಲು ತಾಲ್ಲೂಕಿನಲ್ಲಿ ಇರುವ ಪಶುಸಂಗೋಪನಾ ಕೇಂದ್ರಗಳು ಎಷ್ಟು ಹಾಗೂ ಪಶುಸಂಗೋಪನಾ ಕೇಂದ್ರಗಳಲ್ಲಿರುವ ಸಿಬ್ಬಂದಿ ವರ್ಗ ಎಷ್ಟು? (ವರ್ಗವಾರು ವಿವರ ನೀಡುವುದು).?

22 ಪಶುಸಂಗೋಪನಾ ಕೇಂದ್ರಗಳಿರುತ್ತವೆ. ಅವುಗಳ ವಿವರ ಕೆಳಕಂಡಂತಿರುತ್ತದೆ.

1.	ಪಶು ಆಸ್ಪತ್ರೆ	–	01
2.	ಪಶು ಚಿಕಿತ್ಸಾಲಯ	–	11
3.	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	–	04
4.	ಕೃತಕ ಗರ್ಭಧಾರಣಾ ಕೆಂದ್ರ	–	05
5.	ಸಂಚಾರಿ ಪಶು ಚಿಕಿತ್ಸಾಲಯ	–	01
	ಒಟ್ಟು	–	22

ಮೇಲ್ಕಂಡ 22 ಪಶುವೈದ್ಯ ಸಂಸ್ಥೆಗಳಲ್ಲಿ ಒಟ್ಟು 78 ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ 42 ಹುದ್ದೆಗಳು ಭರ್ತಿಯಾಗಿದ್ದು, ಉಳಿದ 36, ಹುದ್ದೆಗಳು ಖಾಲಿ ಇವೆ. ವಿವರ ಈ ಕೆಳಗಿನಂತಿವೆ:

ಕ್ರ ಸಂ.	ಹುದ್ದೆಗಳ ವಿವರ	ಮಂಜೂರ	ಭರ್ತಿ	ಖಾಲಿ
1.	ಸಹಾಯಕ ನಿರ್ದೇಶಕರು	1	1	0
2.	ಪಶುವೈದ್ಯಾಧಿಕಾರಿ	13	6	7
3.	ಪಶುವೈದ್ಯಕೀಯ ಮೇಲ್ವಿಚಾರಕರು	1	1	0
4.	ಹಿರಿಯ ಪಶುಪರೀಕ್ಷಕರು	9	4	5
5.	ಪಶುಪರೀಕ್ಷಕರು	11	8	3
6.	ಪಶುವೈದ್ಯಕೀಯ ಸಹಾಯಕರು	7	3	4
7.	ದ್ವಿತೀಯ ದರ್ಜೆ ಸಹಾಯಕರು	1	1	0
8.	ವಾಹನ ಚಾಲಕರು	1	1	0
9.	'ಡಿ' ದರ್ಜೆ ನೌಕರರು	34	17	17
	ಒಟ್ಟು:	78	42	36

ಆ) ತಾಲ್ಲೂಕಿನ ಪಶುಸಂಗೋಪನಾ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ. ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಿ ಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಬಂದಿದೆ.

ರಾಜ್ಯದಲ್ಲಿ ಖಾಲಿಯಿರುವ ಪಶುವೈದ್ಯಾಧಿಕಾರಿಗಳ 200 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಗೊಂಡಿದೆ. ಈ ಆಯ್ಕೆ ಪಟ್ಟಿ ಸ್ವೀಕೃತವಾದ ಕೂಡಲೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಖಾಲಿಯಿರುವ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆಯಲಾಗಿದೆ. ಅಲ್ಲಿಂದ ಆಯ್ಕೆಪಟ್ಟಿ ಬಂದ ಕೂಡಲೇ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ.

ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತದೆ.

ಪಶುವೈದ್ಯಕೀಯ ಸಹಾಯಕರ 4 ಹುದ್ದೆಗಳು ಖಾಲಿಯಿದ್ದು, ಇದರಲ್ಲಿ ದಿನಾಂಕ:17–02–2009 ರಂದು 07 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ

ಇ) ಕೋಲಾರ ಜಿಲ್ಲೆ, ಮುಳುಬಾಗಿಲು ತಾಲ್ಲೂಕಿಗೆ 2007–08 2008–09 ರಲ್ಲಿಸರ್ಕಾರದಿಂದ ಹೊಸದಾಗಿ ಎಷ್ಟು ಪಶುಸಂಗೋಪನಾ ಕೇಂದ್ರಗಳು ಮಂಜೂರಾಗಿರುತ್ತವೆ? ಮಂಜೂರಾಗಿದ್ದಲ್ಲಿ ಯಾವ ಯಾವ ಗ್ರಾಮ ಪಂಚಾಯತ್‌ಗಳಿಗೆ ಮಂಜೂರು ಮಾಡಲಾಗಿದೆ?

ಕೋಲಾರ ಜಿಲ್ಲೆ ಮುಳುಬಾಗಿಲು ತಾಲ್ಲೂಕಿನಲ್ಲಿ 2007–08ನೇ ಸಾಲಿನಲ್ಲಿ ಒಂದು ಪಶುಚಿಕಿತ್ಸಾಲಯವನ್ನು ತಿಮ್ಮಾರಾವುತನಹಳ್ಳಿ (ತಿಮ್ಮರಾವುತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ) ತೆರೆಯಲು ಮಂಜೂರಾತಿ ನೀಡಲಾಗಿದೆ. 2008–09ನೇ ಸಾಲಿನಲ್ಲಿ ಯಾವುದೇ ಪಶುಚಿಕಿತ್ಸಾಲಯ ಮಂಜೂರಾಗಿರುವುದಿಲ್ಲ.

ಸಂಖ್ಯೆ: ಪಸಂಮೀ 133 ಪಸಸೇ 2009

(ರೇವೂನಾಯಕ್ ಬೇಳಮಗಿ)
ಪಶುಸಂಗೋಪನಾ ಸಚಿವರು.

ಕರ್ನಾಟಕ ವಿಧಾನಸಭೆ
13ನೇ ವಿಧಾನಸಭೆ 2ನೇ ಅಧಿವೇಶನ

119 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು.

ಅ) ನಂಜುಂಡಪ್ಪ ವರದಿಯಲ್ಲಿ ಹಿಂದುಳಿದಿರುವ ತಾಲ್ಲೂಕುಗಳಿಗೆ ಗ್ರಾಮೀಣಾಭಿವೃದ್ಧಿಗೆ ವಿವಿಧ ಕಾಮಗಾರಿಗಳಿಗೆ, ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಿಗಿಂತ ಎಷ್ಟು ಹಣವನ್ನು ಹೆಚ್ಚಿಗೆ ಮೀಸಲಿಡಲಾಗಿದೆ (ವಿವರ ನೀಡುವುದು);

ನಂಜುಡಪ್ಪ ವರದಿಯಲ್ಲಿ ಹಿಂದುಳಿದಿರುವ ತಾಲ್ಲೂಕುಗಳಿಗೆ ಗ್ರಾಮೀಣಾಭಿವೃದ್ಧಿ ಇಲಾಖೆಯ ವಿವಿಧ ಕಾಮಗಾರಿಗಳಿಗೆ 8 ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಡಿ 5500 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

ಆ) 2008-09ನೇ ಸಾಲಿನಲ್ಲಿ ನಂಜುಂಡಪ್ಪ ವರದಿಯಲ್ಲಿ ಸೇರಿರುವ ತಾಲ್ಲೂಕುಗಳಿಗೆ ತೆಗೆದುಕೊಂಡಿರುವ ವಿಶೇಷ ಅನುದಾನ ಹಾಗೂ ಕಾರ್ಯಕ್ರಮಗಳೇನು?

ವಿವರವನ್ನು ಅನುಬಂಧ-Iರಲ್ಲಿ ಒದಗಿಸಲಾಗಿದೆ.

ಇ) ನಂಜುಡಪ್ಪ ವರದಿಯ ಬದ್ಧತೆಯನ್ನು ಗ್ರಾಮೀಣಾಭಿವೃದ್ಧಿಯಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಯಾವ ಕಾಲ ಮಿತಿಯನ್ನು ಹಮ್ಮಿಕೊಳ್ಳಲಾಗಿದೆ.

ನಂಜುಡಪ್ಪ ವರದಿಯ ಬದ್ಧತೆಯನ್ನು ಗ್ರಾಮೀಣಾಭಿವೃದ್ಧಿಯಲ್ಲಿ ಅನುಷ್ಠಾನಗೊಳಿಸಲು ವಿಶೇಷ ಅಭಿವೃದ್ಧಿ ಯೋಜನೆಯನ್ನು 8 ವರ್ಷಗಳ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ವಿಧಾನ ಸಭೆ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 119ರ ಅನುಬಂಧ-1
2008-09 ನೇ ಸಾಲಿನಲ್ಲಿ ನಂಜುಡಪ್ಪ ವರದಿಯಲ್ಲಿ ಸೇರಿರುವ ತಾಲ್ಲೂಕುಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ತೆಗೆದುಕೊಂಡಿರುವ ವಿಶೇಷ ಕಾರ್ಯಕ್ರಮಗಳ ವಿವರ:

(ರೂ.ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆ	ಆಯವ್ಯಯ ಹಂಚಿಕೆ
1	ಡಾ: ನಂಜುಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳಲ್ಲಿ ರಸ್ತೆ ಕಾಮಗಾರಿಗಳು	200.00
2	ಗ್ರಾಮೀಣ ಸಂಪರ್ಕ	20.00
3	ಬ್ಲಾಕ್ ಅನುದಾನ (ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ) (ಗ್ರಾಮೀಣ ರಸ್ತೆಗಳು)	80.00

4	ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಕೆಲಸಗಳು (RIDF-NABARD)	52.11
5	ಜಿಲ್ಲಾ ಪಂಚಾಯತ್ ಕೆರೆಗಳ ಪುರ್ನವಸತಿ ಮತ್ತು ಪುನಃಶ್ಚೇತನ	50.00
6	ಕರ್ನಾಟಕ ಗ್ರಾಮೀಣ ಬಡತನ ಹಾಗೂ ಪಂಚಾಯಿತಿ ಯೋಜನೆ ಇ.ಎ.ಪಿ. (ಗ್ರಾಮ ಸ್ವರಾಜ್)	160.03
7	ಗ್ರಾಮೀಣ ನೀರು ಸರಬರಾಜು	100.00
	ಒಟ್ಟು	**662.14**

ಕರ್ನಾಟಕ ವಿಧಾನ ಸಭೆ

121 ಬಾಲಕೃಷ್ಣ ಹೆಚ್.ಸಿ.(ಮಾಗಡಿ)
ಇಂಧನ ಸಚಿವರು.

****

ಅ) 'ಪ್ರಸ್ತುತ ರಾಜ್ಯದಲ್ಲಿ ಗೃಹ ಬಳಕೆ, ಕೃಷಿ ಪಂಪ್ ಸೆಟ್ ಹಾಗೂ ಕೈಗಾರಿಕೆಗಳಿಗೆ ದಿನಕ್ಕೆ ಎಷ್ಟು ಅವದಿ ಹಾಗೂ ಯಾವ ಪ್ರಮಾಣದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ (ವಿವರ ನೀಡುವುದು);

ಪ್ರಸ್ತುತ ರಾಜ್ಯದ ನಗರ ಪ್ರದೇಶಗಳಲ್ಲಿ ಗೃಹ ಬಳಕೆ, ಕೈಗಾರಿಕೆಗಳಿಗೆ ದಿನದ 24 ಗಂಟೆಗಳ ಅವಧಿಗೆ ಹಾಗೂ ಗ್ರಾಮೀಣ ಪ್ರದೇಶಗಳ ಗೃಹ ಬಳಕೆ, ಕೈಗಾರಿಕೆ ಹಾಗೂ ಕೃಷಿ ಬಳಕೆದಾರರಿಗೆ ದಿನದ 6 ಗಂಟೆಗಳ ಅವಧಿಗೆ 3 ಫೇಸ್‌ನಲ್ಲಿ ಮತ್ತು 6 ಗಂಟೆಗಳ ಅವಧಿಗೆ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

2007–08ನೇ ಸಾಲಿನಲ್ಲಿ ರಾಜ್ಯದಲ್ಲಿ ಗೃಹ ಬಳಕೆ, ಕೈಗಾರಿಕೆ ಹಾಗೂ ಕೃಷಿ ಪಂಪುಸೆಟ್ಟುಗಳು ಬಳಸಿದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ವಿವರ	ಬಳಸಿದ ವಿದ್ಯುತ್ತಿನ ಪ್ರಮಾಣ (ಮಿಲಿಯನ್ ಯೂನಿಟ್ಟುಗಳಲ್ಲಿ)
1	ಗೃಹ ಬಳಕೆ	6,268
2	ಕೈಗಾರಿಕೆ	6,907
3	ಕೃಷಿ ಪಂಪುಸೆಟ್ಟುಗಳು	8,540

ಆ) ರಾಜ್ಯದಲ್ಲಿ ಸಂಪೂರ್ಣವಾಗಿ ಬಳಕೆಗೆ ಬೇಕಾಗಿರುವ ಅವಶ್ಯಕತೆಯಿರುವ ವಿದ್ಯುತ್ ಪ್ರಮಾಣವೆಷ್ಟು ಹಾಗೂ ಹಾಲಿ ಲಭ್ಯವಿರುವ ವಿದ್ಯುತ್‌ನ ಪ್ರಮಾಣವೆಷ್ಟು:

ರಾಜ್ಯದಲ್ಲಿ 2008-09 ನೇ ಸಾಲಿಗೆ ಅಗತ್ಯವಿರುವ ಅನಿರ್ಬಂಧಿತ ಅಂದಾಜು ವಿದ್ಯುತ್ ಬೇಡಿಕೆ 46,965 ಮಿಲಿಯನ್ ಯೂನಿಟ್ಟುಗಳು. ರಾಜ್ಯದ ಆಂತರಿಕ ಮೂಲಗಳಿಂದ ವಿದ್ಯುತ್ ಉತ್ಪಾದನೆ **23,450** ಮಿಲಿಯನ್ ಯೂನಿಟ್ಟುಗಳು ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ಕೇಂದ್ರಗಳಿಂದ ಲಭ್ಯವಾಗುವ ರಾಜ್ಯದ ಪಾಲು **11,500** ಮಿಲಿಯನ್ ಯೂನಿಟ್ಟುಗಳು.

ಇ) ವಿದ್ಯುತ್ ಅಭಾವ ನೀಗಿಸಲು 2008 ನೇ ಸಾಲಿನಿಂದ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು)?

ವಿದ್ಯುತ್ ಅಭಾವ ನೀಗುವ ಸಲುವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

4. ಕರ್ನಾಟಕ ಸರ್ಕಾರವು ದಿನಾಂಕ 17-12-2008 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
5. ಕರ್ನಾಟಕ ಸರ್ಕಾರವು ದಿನಾಂಕ 30-12-2008 ರಂದು ಆದೇಶ ಹೊರಡಿಸಿ ಎಲ್ಲಾ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
6. ಇದರ ಜೊತೆಗೆ ರಾಜ್ಯವು ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ ಮುಖಾಂತರ ಮತ್ತು ಹೊರ ರಾಜ್ಯವಾದ ಛತ್ತೀಸ್‌ಗಢ್ ದಿಂದ ವಿದ್ಯುತ್ತನ್ನು ಪಡೆಯುತ್ತಿದೆ.
7. ಈ ರೀತಿಯಾಗಿ ಹೆಚ್ಚುವರಿ ವಿದ್ಯುತ್ತಿಗೆ ನವೆಂಬರ್-2008 ರಿಂದ ಜನವರಿ-2009 ರವರೆಗೆ 1008 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಕರ್ನಾಟಕ ಸರ್ಕಾರವು 350 ಕೋಟಿ ರೂ.ಗಳನ್ನು ನೀಡಿದ್ದು, ಮಿಕ್ಕ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸುತ್ತವೆ.

ಸಂಖ್ಯೆ: ಇಎನ್ 12 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನಸಭೆ

124 ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್[ಹಾಸನ]
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ. ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು [ವಿವರಗಳನ್ನು ನೀಡುವುದು]

ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ 30 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 07 ಸರ್ಕಾರಿ ಪ್ರೌಢಶಾಲೆಗಳು ಮಂಜೂರಾಗಿರುತ್ತದೆ. ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ. ಈ ಶಾಲೆಗಳಿಗೆ ಕೊಠಡಿಗಳನ್ನು ನಿರ್ಮಿಸಲಾಗಿದೆಯೇ;

ನಿರ್ಮಿಸಲಾಗಿದೆ.

ಇ. ಹಾಗಿದ್ದಲ್ಲಿ, ಈ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ;

ಒದಗಿಸಲಾಗಿದೆ.

ಈ. ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗದಿದ್ದಲ್ಲಿ ಕಾರಣಗಳೇನು [ವಿವರಗಳನ್ನು ನೀಡುವುದು];

ಪ್ರಶ್ನೆ ಉದ್ಭವಿಸುವುದಿಲ್ಲ.

ಉ. ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಊ. ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಪ್ರಶ್ನೆ ಉದ್ಭವಿಸುವುದಿಲ್ಲ.

ಋ. ಖಾಲಿ ಇರುವ ಶಿಕ್ಷಕರನ್ನು ಭರ್ತಿ ಮಾಡಲು ಸರ್ಕಾರ ಯಾವ ರೀತಿಯ ಮಾನದಂಡಗಳನ್ನು ಅನುಸರಿಸುತ್ತಿದೆ [ವಿವರಗಳನ್ನು ನೀಡುವುದು]

ಖಾಲಿ ಇರುವ ಹುದ್ದೆಗಳನ್ನು ಅಗತ್ಯತೆ ಅನುಸಾರ ವೃಂದ ಮತ್ತು ನೇಮಕಾತಿ ನಿಯಮ ಮತ್ತು ಮೀಸಲಾತಿ ನಿಯಮವನ್ನು ಅನುಸರಿಸಿ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು.

ಇಡಿ:51: ಯೋಸಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಬರುವ ಶಾಲೆಗಳ ಪಟ್ಟಿ

ಕ್ರ.ಸಂ	ಶಾಲೆಯ ಹೆಸರು
1	ಸರ್ಕಾರಿ ಪ್ರೌಢ ಶಾಲೆ ಕನ್ನಡ ಗೋರಿಪಾಳ್ಯ
2	ಸರ್ಕಾರಿ ಪ್ರೌಢ ಶಾಲೆ (ಉರ್ದು) ಗೋರಿಪಾಳ್ಯ
3	ಸರ್ಕಾರಿ ಸಂಯುಕ್ತ ಪ್ರೌಢ ಶಾಲೆ ಅರಳೇಪೇಟೆ
4	ಸರ್ಕಾರಿ (ಉರ್ದು ಮತ್ತು ಆಂಗ್ಲ) ಬಾರ್‌ಲೇನ್
5	ಸರ್ಕಾರಿ ಪ್ರೌಢ ಶಾಲೆ ಸುಲ್ತಾನಪೇಟೆ
6	ಸರ್ಕಾರಿ ಪ್ರೌಢ ಹಳೇಕೋಟೆ
7	ಸರ್ಕಾರಿ ಪ್ರೌಢ ಶಾಲೆ ನೂತನಕೋಟೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 124ಕ್ಕೆ ಅನುಬಂಧ

ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಬರುವ ಶಾಲೆಗಳ ಪಟ್ಟಿ

ಕ್ರ.ಸಂ	ಶಾಲೆಯ ಹೆಸರು
1	ಸ.ಕ.ಕಿ.ಪ್ರಾ.ಶಾಲೆ ಆನಂದಪುರ.ಮೈಸೂರು ರಸ್ತೆ
2	ಸ.ತಮಿಳು.ಕಿ.ಪ್ರಾಥಮಿಕಶಾಲೆ,ಚಾಮರಾಜಪೇಟೆ
3	ಸ.ತಮಿಳು.ಕಿ.ಪ್ರಾಥಮಿಕಿಶಾಲೆ,ಆನಂದಪುರ
4	ಸ.ತಮಿಳು.ಹಿ.ಪ್ರಾ.ಶಾಲೆ.ಹಳೇಕೋಟೆ
5	ಜಿ.ಕೆ.ಹೆಚ್.ಪಿ.ಎಸ್. ಸಿ.ಎ.ಆರ್.ಪಿ.ಲೇನ್
6	ಸ.ಕ.ಮಾ.ಪ.ಶಾಲೆ.ಪಾದರಾಯನಪುರ
7	ಸ.ಕ.ಮಾ.ಪ.ಶಾಲೆ. ಗೋರಿಪಾಳ್ಯ
8	ಸ.ಕ.ಬಾ.ಮಾ.ಶಾಲೆ.ಚಾಮರಾಜಪೇಟೆ
9	ಸ.ಕ.ಹಿ.ಪ್ರಾ.ಶಾಲೆ. ಹಳೇಕೋಟೆ
10	ಸ.ಹಿ.ಪ್ರಾ.ಶಾಲೆ ಜನತಾಕಾಲೋನಿ ಹಳೇಗುಡ್ಡದಹಳ್ಳಿ
11	ಸ.ಉ.ಹಿ.ಪ್ರಾ.ಶಾಲೆ ಪಾದರಾಯನಪುರ (ಕಾರ್ಪು)
12	ಸ.ಉ.ಹಿ.ಪ್ರಾ.ಶಾಲೆ. ಪಾರೂಕಿಯಾನಗರ
13	ಸ.ಉ.ಹಿ.ಪ್ರಾ.ಶಾಲೆ ಗೋರಿಪಾಳ್ಯ
14	ಸ.ಉ.ಹಿ.ಪ್ರಾ.ಶಾಲೆ ಚಾಮರಾಜಪೇಟೆ
15	ಸ.ಉ.ಹಿ.ಪ್ರಾ.ಶಾಲೆ ಟಿಪ್ಪುನಗರ್

16	ಜಿ.ಎಲ್.ಪಿ.ಎಸ್. ಕೆಮ್ಮಣ್ಣಗುಂಡಿ
17	ಸ.ಕ.ಮತ್ತು ತ.ಹಿ.ಪ್ರಾ.ಶಾಲೆ ಆಂಜನಪ್ಪತೋಟ
18	ಜಿ.ಟಿ.ಹೆಚ್.ಪಿ.ಎಸ್ ಬೇಲಿಮಠ (ತಮಿಳು)
19	ಜಿ.ಎಂ.ಪಿ.ಎಸ್.ಅರಳೇಪೇಟೆ
20	ಜಿ.ಎಂ.ಪಿ.ಎಸ್. ಸುಲ್ತಾನಪೇಟೆ
21	ಸ.ಉ.ಹಿ.ಪ್ರಾ.ಶಾಲೆ ಟಾರ್‌ಲೇನ್ (ಹುಡುಗ)
22	ಸ.ಉ.ಹಿ.ಪ್ರಾ.ಶಾಲೆ ಬಾರ್‌ಲೇನ್ (ಹುಡುಗಿ)
23	ಸ.ಉ.ಹಿ.ಪ್ರಾ.ಶಾಲೆ ಸುಲ್ತಾನ್ ಪೇಟೆ (ಹುಡುಗ)
24	ಸ.ಉ.ಹಿ.ಪ್ರಾ.ಶಾಲೆ ಕುಂಬಾರ್ ಪೇಟೆ
25	ಸ.ಉ.ಕಿ.ಪ್ರಾ.ಶಾಲೆ ಚಾಲಿಮಹಲ್
26	ಸ.ಉ.ಕಿ.ಪ್ರಾ.ಶಾಲೆ ಕಾರಾಪಾಂಡಲಪೇಟೆ
27	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆಜಾದ್‌ನಗರ
28	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಂಚೆಪಾಳ್ಯ
29	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕರೀತಿಮ್ಮನ ಹಳ್ಳಿ
30	ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಅಂಚೆಪಾಳ್ಯ

ಕರ್ನಾಟಕ ವಿಧಾನಸಭೆ

126 ಶ್ರೀ ಕರಡಿ ಸಂಗಣ್ಣ ಅಮರಪ್ಪ[ಕೊಪ್ಪಳ]
ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ) ಕೊಪ್ಪಳ ನಗರಕ್ಕೆ ಹಿಂದಿನ ಸರ್ಕಾರ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕಳೆದ ಸಾಲಿನಲ್ಲಿ ಕೊಪ್ಪಳ ನಗರಕ್ಕೆ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ಕಾಲೇಜನ್ನು ಪ್ರಾರಂಭಿಸದಿರಲು ಕಾರಣಗಳೇನು; [ವಿವರಗಳನ್ನು ನೀಡುವುದು]

ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಕೊಪ್ಪಳ ನಗರದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಈ ಶೈಕ್ಷಣಿಕ ವರ್ಷದಲ್ಲಿಯೇ ಪ್ರಾರಂಭಿಸಲಾಗುವುದೇ;

ಅನುದಾನದ ಲಭ್ಯತೆಯನ್ನು ಆಧರಿಸಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಈ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಸ್ಥಳ ಗುರುತಿಸಿದೆಯೇ;

ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಕಾಲೇಜಿನ ನೂತನ ಕಟ್ಟಡದ ಕಾಮಗಾರಿಯನ್ನು ಸರ್ಕಾರ ಪ್ರಾರಂಬಿಸಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಪ್ರಾಂರಭಿಸಲಾಗಿದೆ; ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಪ್ರಮಾಣ ಎಷ್ಟು; (ವಿವರವನ್ನು ನೀಡುವುದು);

ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಈ ಇಂಜಿನಿಯರಿಂಗ್ ಕಾಲೇಜಿನ ಕಟ್ಟಡಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಮಿತಿಯನ್ನೇನಾದರೂ ವಿಧಿಸಿದೆಯೇ? ಹಾಗಿದ್ದಲ್ಲ, ಯಾವಾಗ ಪೂರ್ಣಗೊಳಿಲಾಗುವುದು?

ಪ್ರಶ್ನೆ ಉದ್ಭವಿಸುವುದಿಲ್ಲ.

ಇಡಿ: 47 : ಯೋಯೋಕ 2009

ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

122 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ(ಚಿಕ್ಕೋಡಿ ಸದಲಗ)
ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಅ) ಚಿಕ್ಕೋಡಿ ತಾಲ್ಲೂಕಿನ ಖಡಕಲಾಟ ಹಾಗೂ ಇತರೆ ಗ್ರಾಮಗಳು (ಮಲ್ಟಿ ವಿಲೇಜ್) ಕುಡಿಯುವ ನೀರಿನ ಯೋಜನೆಗಳು;

ಚಿಕ್ಕೋಡಿ ತಾಲ್ಲೂಕಿನ ಖಡಕಲಾಟ್ ಹಾಗೂ ಇತರೆ 10 ಗ್ರಾಮಗಳ ಕುಡಿಯುವ ನೀರಿನ ಸರಬರಾಜು ಕಾಮಗಾರಿಯನ್ನು ಜಲ ನಿರ್ಮಲ ಯೋಜನೆಯ ಬಹು ಗ್ರಾಮ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ.

ಆ) ಚಿಕ್ಕೋಡಿ ತಾಲ್ಲೂಕಿನ ಖಡಕಲಾಟ ಹಾಗೂ ಇತರೆ 11 ಗ್ರಾಮಗಳ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಮಂಜೂರಾಗಿ ಎಷ್ಟು ವರ್ಷವಾಯಿತು.

ಚಿಕ್ಕೋಡಿ ತಾಲ್ಲೂಕಿನ ಖಡಕಲಾಟ ಹಾಗೂ ಇತರೆ 10 ಗ್ರಾಮಗಳ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಮಂಜೂರಾಗಿ ಸುಮಾರು 2 ವರ್ಷ 9 ತಿಂಗಳುಗಳಾಗಿವೆ.

ಇ) ಈ ಕಾಮಗಾರಿಯು ಪೂರ್ಣಗೊಂಡಿದೆಯೇ;

ಈ ಕಾಮಗಾರಿಯ ಸಾಮಾನ್ಯ ಸೌಲಭ್ಯಗಳ ಸಿವಿಲ್ ಕಾಮಗಾರಿಗಳು ಫೆಬ್ರವರಿ-2008 ರಲ್ಲಿ ಪೂರ್ಣಗೊಂಡಿದ್ದು, ದಿನಾಂಕ 16-07-2008 ರಂದು ಜಂಟಿ ಸಮಿತಿಗೆ ಹಸ್ತಾಂತರಿಸಲಾಗಿದೆ. ಹಾಗೂ ಸದರಿ ಗ್ರಾಮಗಳ ಆಂತರಿಕ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ) ಹಾಗಿದ್ದಲ್ಲ, ಕಾಮಗಾರಿ ಪೂರ್ಣಗೊಳಿಸಲು ಯಾವ ಕ್ರಮ ಕೈಗೊಂಡಿದೆ;

ಯೋಜನಾ ಗ್ರಾಮಗಳ ಆಂತರಿಕ ಸೌಲಭ್ಯಗಳನ್ನು (In village Facility) ಮೇಲ್ದರ್ಜೆಗೇರಿಸಲು ಟೆಂಡರ್ ಕರೆಯಲಾಗಿದೆ.

ಉ) ಈ ಯೋಜನೆಗೆ ಒಳಪಡುವ ಗ್ರಾಮಗಳ ಗ್ರಾಮಸ್ಥರಿಗೆ ದಿನನಿತ್ಯ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುತ್ತಿದೆಯೇ?

ಹೌದು, ಕಲ್ಪಿಸಲಾಗುತ್ತಿದೆ.

ಸಂಖ್ಯೆ: ಗ್ರಾಅಪ/ಕನೀಸಂ/401/2009

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಕರ್ನಾಟಕ ವಿಧಾನ ಸಭೆ

123 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ(ಚಿಕ್ಕೋಡಿ ಸದಲಗ)

ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಅ) ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಹಾಗೂ ಕಲ್ಲೋಳ ಗ್ರಾಮಗಳ ಜಲ ನಿರ್ಮಲ ಯೋಜನೆಗಳ ಕಾಮಗಾರಿಗಳು;

ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಹಾಗೂ ಕಲ್ಲೋಳ ಗ್ರಾಮಗಳ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳನ್ನು ಜಲ ನಿರ್ಮಲ ಯೋಜನೆಯ ಹಂತ-3 ರಡಿಯಲ್ಲಿ ತೆಗೆದುಕೊಳ್ಳಲಾಗಿದೆ.

ಆ) ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಹಾಗೂ ಕಲ್ಲೋಳ ಗ್ರಾಮಗಳಲ್ಲಿ ಜಲ ನಿರ್ಮಲ ಯೋಜನೆಯ ಕಾಮಗಾರಿಗಳು ಮಂಜೂರಾಗಿ ಎಷ್ಟು ವರ್ಷವಾಯಿತು:

ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಮಂಜೂರಾಗಿ ಸುಮಾರು 2 ವರ್ಷ 10 ತಿಂಗಳುಗಳಾಗಿದೆ. ಹಾಗೂ ಕಲ್ಲೋಳ ಗ್ರಾಮ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಮಂಜೂರಾಗಿ ಸುಮಾರು 2 ವರ್ಷ 9 ತಿಂಗಳುಗಳಾಗಿದೆ.

ಇ) ಈ ಎರಡು ಗ್ರಾಮಗಳಲ್ಲಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆಯೇ;

ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಹಾಗೂ ಕಲ್ಲೋಳ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯ ಮುಕ್ತಾಯದ ಹಂತದಲ್ಲಿರುತ್ತದೆ.

ಈ) ಕಾಮಗಾರಿಗಳು ಪೂರ್ಣಗೊಳ್ಳದೇ ಇದ್ದಲ್ಲಿ, ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಗ್ರಾಮದ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯನ್ನು ಮಾರ್ಚ್-2009 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಸಂಖ್ಯೆ: ಗ್ರಾಅಪ/ಕನೀಸಂ/405/2009

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಕರ್ನಾಟಕ ವಿಧಾನ ಸಭೆ

162ಶ್ರೀ ಸಿದ್ದು ಸವದಿ (ತೇರದಾಳ್)
ಇಂಧನ ಸಚಿವರು.

****

ಅ) ರಾಜ್ಯದಲ್ಲಿರುವ ಒಟ್ಟು ವಿದ್ಯುತ್ತಿನ ಬೇಡಿಕೆ ಎಷ್ಟು; ಉತ್ಪಾದನೆ ಎಷ್ಟು;

2008-09ನೇ ಸಾಲಿನಲ್ಲಿ ರಾಜ್ಯದ ಅಂದಾಜಿಸಲಾದ ಒಟ್ಟು ವಿದ್ಯುತ್ತಿನ ಬೇಡಿಕೆ 46,965 ದಶಲಕ್ಷ ಯೂನಿಟ್ಟುಗಳು ಹಾಗೂ ರಾಜ್ಯದ ಆಂತರಿಕ ಮೂಲಗಳಿಂದ ವಿದ್ಯುತ್ ಉತ್ಪಾದನೆ 23,450 ಮಿಲಿಯನ್ ಯೂನಿಟ್ಟುಗಳು ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ಕೇಂದ್ರಗಳಿಂದ ಲಭ್ಯವಾಗುವ ರಾಜ್ಯದ ಪಾಲು 11,500 ಮಿಲಿಯನ್ ಯೂನಿಟ್ಟುಗಳು.

ಆ) ಈ ಕೊರತೆಯನ್ನು ಯಾವ ರೀತಿ ಸರಿದೂಗಿಸಲಾಗುವುದು; ಈ ಸಮಸ್ಯೆಯನ್ನು ಯಾವಾಗ ಸರಿಪಡಿಸಲಾಗುವುದು;

ವಿದ್ಯುತ್ ಅಭಾವ ನೀಗುವ ಸಲುವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕರ್ನಾಟಕ ಸರ್ಕಾರವು ದಿನಾಂಕ 17-12-2008 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
2. ಕರ್ನಾಟಕ ಸರ್ಕಾರವು ದಿನಾಂಕ 30-12-2008 ರಂದು ಆದೇಶ ಹೊರಡಿಸಿ ಎಲ್ಲಾ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
3. ಇದರ ಜೊತೆಗೆ ರಾಜ್ಯವು ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ ಮುಖಾಂತರ ಮತ್ತು ಹೊರ ರಾಜ್ಯವಾದ ಛತ್ತೀಸ್‌ಗಢ್ ದಿಂದ ವಿದ್ಯುತ್ತನ್ನು ಪಡೆಯುತ್ತಿದೆ .
4. ಈ ರೀತಿಯಾಗಿ ಹೆಚ್ಚುವರಿ ವಿದ್ಯುತ್ತಿಗೆ ನವೆಂಬರ್-2008 ರಿಂದ ಜನವರಿ-2009 ರವರೆಗೆ 1008 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಕರ್ನಾಟಕ ಸರ್ಕಾರದಿಂದ 35 ಕೋಟಿ ರೂ.ಗಳನ್ನು ನೀಡಲಾಗಿದೆ.

ಇ) ಯಾವ ಮೂಲಗಳಿಂದ ಉತ್ಪಾದನೆ ಮತ್ತು ಖರೀದಿ ಮಾಡಲಾಗುವುದು ಹಾಗೂ ಬೇಡಿಕೆ ಮತ್ತು ಪೂರೈಕೆಯಲ್ಲಿರುವ ವ್ಯತ್ಯಾಸವನ್ನು ಕಂಪನಿವಾರು ಮಾಹಿತಿ ಕೊಡುವುದು;

ವಿವಿಧ ಮೂಲಗಳಿಂದ ದಿನವಹಿ ವಿದ್ಯುತ್ ಉತ್ಪಾದನೆ ಮತ್ತು ಖರೀದಿಯಿಂದ ಲಭ್ಯವಾಗುತ್ತಿರುವ ವಿದ್ಯುತ್ತಿನ ಪ್ರಮಾಣ ವಿವರಗಳು ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಮೂಲ	ಲಭ್ಯತೆ ದಶಲಕ್ಷ ಯೂನಿಟ್ಟುಗಳಲ್ಲಿ
1	ಕರ್ನಾಟಕ ವಿದ್ಯುತ್ ನಿಗಮ (ಜಲ ವಿದ್ಯುತ್)	30

2	ಕರ್ನಾಟಕ ವಿದ್ಯುತ್ ನಿಗಮ (ಶಾಖೋತ್ಪನ್ನ)	40
3	ಕೇಂದ್ರ ವಿದ್ಯುತ್ ಜಾಲದಿಂದ	32
4	ಸ್ವತಂತ್ರ ಬೃಹತ್ ವಿದ್ಯುತ್ ಉತ್ಪಾದಕರಿಂದ	02
5	ಅಸಂಪ್ರದಾಯಕ ಇಂಧನ ಮೂಲಗಳಿಂದ	08
6	ರಾಜ್ಯದಲ್ಲಿರುವ ಖಾಸಗಿ ಬೃಹತ್ ವಿದ್ಯುತ್ ಉತ್ಪಾದಕರಿಂದ	09
7	ಛತ್ತೀಸ್‌ಗಢ ಮತ್ತು ಇಂಡಿಯನ್ ಎನರ್ಜಿ ಎಕ್ಸ್ ಚೇಂಜ್ ಮುಖಾಂತರ	04
	ಒಟ್ಟು	**125**

ಈ) ಎಂದಿನಿಂದ ಕೊರತೆ ಉಂಟಾಯಿತು ಮತ್ತು ವರ್ಷವಾರು ಉತ್ಪಾದಿಸಿದ ಮಾಹಿತಿ ನೀಡುವುದು;

ಕರ್ನಾಟಕ ರಾಜ್ಯದಲ್ಲಿ 2008 ರಲ್ಲಿ ಮುಂಗಾರು ಮಳೆ ವಿಫಲತೆಯಿಂದ ವಿದ್ಯುತ್ ಅಭಾವ ಪರಿಸ್ಥಿತಿ ಉಂಟಾಯಿತು. ಆದ್ದರಿಂದ, 2008, 2009ನೇ ವರ್ಷಗಳಲ್ಲಿ ಹಿಂದಿನ ವರ್ಷಗಳಿಗಿಂತ ಹೆಚ್ಚಾಗಿ ಕೊರತೆ ಉಂಟಾಗಿದೆ.

ಕಳೆದ 5 ವರ್ಷಗಳಲ್ಲಿ ರಾಜ್ಯಕ್ಕೆ ವಿದ್ಯುತ್ ಸರಬರಾಜು ಮಾಡಲಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ.

ವರ್ಷ	ಸರಬರಾಜು ಮಾಡಲಾದ ವಿದ್ಯುತ್ತಿನ ಪ್ರಮಾಣ ದಶಲಕ್ಷ ಯೂನಿಟ್ಟುಗಳಲ್ಲಿ
2004–2005	33,110
2005–2006	34,250
2006–2007	40,379
2007–2008	40,195
2008–2009	41,185*

* ಅಂದಾಜಿಸಿರುವುದು

ಉ) ರೈತರ ಪಂಪ್ ಸೆಟ್ಟುಗಳಿಗೆ ಕಡಿಮೆ ವಿದ್ಯುತ್ ಪೂರೈಕೆಯಿಂದ ಆರ್ಥಿಕ ತೊಂದರೆ ಆಗುವುದಿಲ್ಲವೇ?

ರಾಜ್ಯದ ರೈತರಿಗೆ ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ. ಈ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರ್ಕಾರದಿಂದ 2008-09ರ ಅವಧಿಗೆ 500 ಕೋಟಿ ರೂಪಾಯಿ ನಿಗಧಿ ಪಡಿಸಿ ದಿನಾಂಕ: 7.2.2009 ರ ಅಂತ್ಯಕ್ಕೆ ರೂ.231.25 ಕೋಟಿ ಪ್ರತ್ಯೇಕವಾಗಿ ಸಹಾಯಧನ ಬಿಡುಗಡೆ ಮಾಡಲಾಗಿರುತ್ತದೆ.

ಸಂಖ್ಯೆ: ಇಎನ್ 13 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
(ಇಂಧನ ಸಚಿವರು)

ಕರ್ನಾಟಕ ವಿಧಾನ ಸಭೆ

163 ಶ್ರೀ ಸಿದ್ದು ಸವದಿ (ತೆರದಾಳ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ತೇರದಾಳ್ ಮತಕ್ಷೇತ್ರದಲ್ಲಿ 04 ಜೂನಿಯರ್ ಕಾಲೇಜು ಮತ್ತು 5 ಪ್ರೌಢ ಶಾಲೆಗಳ ಬೇಡಿಕೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಬಂದಿದ್ದರೆ, ಎಂದಿನಿಂದ ಮಂಜೂರಾತಿ ನೀಡಲಾಗುವುದು; ಇಲ್ಲವಾದಲ್ಲಿ ಗ್ರಾಮೀಣ ಮಕ್ಕಳಿಗೆ ಅದರಲ್ಲೂ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುವುದಿಲ್ಲವೆ;

ಸ್ಥಳೀಯ ಶೈಕ್ಷಣಿಕ ಅಗತ್ಯತೆ ಮತ್ತು ಸಂಪನ್ಮೂಲದ ಲಭ್ಯತೆಯ ಆಧಾರದ ಮೇಲೆ ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಇ) ಈ ಕ್ಷೇತ್ರದಲ್ಲಿ ಅನೇಕ ಪ್ರೌಢ ಶಾಲೆ ಮತ್ತು ಕಾಲೇಜುಗಳಿಗೆ ಕಟ್ಟಡದ ಕೊರತೆಯಿರುವುದರಿಂದ ಸದರಿ ಕಟ್ಟಡವನ್ನು ಎಂದಿನಿಂದ ನಿರ್ಮಿಸಲಾಗುವುದು?

ಸರ್ಕಾರಿ ಪದವಿ ಪೂರ್ವ ಕಾಲೇಜು, ನವಲಗಿ, ಜಮಖಂಡಿ ತಾಲ್ಲೂಕು, ಕೇಸರಕೊಪ್ಪ, ಮುಧೋಳ ತಾಲ್ಲೂಕು ಮತ್ತು ಮಹಾಲಿಂಗಪುರ, ಮುಧೋಳ ತಾಲ್ಲೂಕು ಈ ಕಾಲೇಜುಗಳಿಗೆ ಆರ್.ಐ.ಡಿ.ಎಫ್-14 ರಡಿ ಕಟ್ಟಡಗಳು ಮಂಜೂರಾಗಿದ್ದು, ಕಟ್ಟಡ ನಿರ್ಮಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು. ಪ್ರೌಢಶಾಲೆಗೆ ಸಂಬಂಧಿಸಿದಂತೆ (1) ಸರ್ಕಾರಿ ಉರ್ದು ಪ್ರೌಢಶಾಲೆ ಹನಗಂಡಿಯಲ್ಲಿ 5 ಕೊಠಡಿ (2) ಸರ್ಕಾರಿ ಪ್ರೌಢಶಾಲೆ, ಮದಬಾವಿಯಲ್ಲಿ 5 ಕೊಠಡಿ (3) ಸರ್ಕಾರಿ ಪ್ರೌಢಶಾಲೆ, ಡವಳೇಶ್ವರದಲ್ಲಿ 2 ಕೊಠಡಿ (4)

ಸರ್ಕಾರಿ ಪ್ರೌಢಶಾಲೆ, ಮಹಾಲಿಂಗಪುರದಲ್ಲಿ ಕೊಠಡಿಗಳ ಅವಶ್ಯಕತೆ ಇರುತ್ತದೆ. ಅದರಲ್ಲಿ ಮದಬಾವಿ ಸರ್ಕಾರಿ ಪ್ರೌಢಶಾಲೆಗೆ, ಆರ್.ಐ.ಡಿ.ಎಫ್.-14 ರಲ್ಲಿ 18.70 ಲಕ್ಷ ರೂ.ಗಳಲ್ಲಿ 4 ಕೊಠಡಿಗಳ ನಿರ್ಮಾಣಕ್ಕೆ ಪ್ರಸ್ತಾಪಿಸಿದ್ದು, ನಬಾರ್ಡ್‌ನ ಅನುಮೋದನೆ ದೊರೆತ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಸಂಖ್ಯೆ: ಇಡಿ 20 ಎಸ್‌ಜಹೆಚ್ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

164 ಶ್ರೀ ಸಿದ್ದು ಸವದಿ (ತೆರದಾಳ್)
ಮಾನ್ಯ ವಸತಿ ಹಾಗೂ ಮುಜರಾಯಿ

ಸಚಿವರು

1. ತೇರದಾಳ ಮಹಾಲಿಂಗಪುರ ಮತ್ತು ರಬಕವಿ-ಬನಹಟ್ಟಿ ನಗರ ಪ್ರದೇಶಗಳಲ್ಲಿ ಸಾವಿರಾರು ಆಶ್ರಯ ರಹಿತ ಕುಟುಂಬಗಳಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

2003ರ ಸ್ಥಳೀಯ ಸಂಸ್ಥೆಗಳ ಸಮೀಕ್ಷೆ ಪ್ರಕಾರ ಈ ಕೆಳಗಿನಂತೆ ನಿವೇಶನರಹಿತರು ಮತ್ತು ವಸತಿರಹಿತರಿರುತ್ತಾರೆ.

	ವಸತಿರಹಿತರು	ನಿವೇಶನರಹಿತರು	ಒಟ್ಟು
ತೇರದಾಳ	33	113	146
ಮಹಾಲಿಂಗಪುರ	1114	735	1879
ರಬಕವಿ ಬನಹಟ್ಟಿ	944	250	1194
ಒಟ್ಟು	2091	1098	3219

2. ಹಾಗಿದ್ದಲ್ಲ, ಎಂದಿನಿಂದ ಈ ಎಲ್ಲಾ ಕುಟುಂಬಗಳಿಗೆ ಆಶ್ರಯವನ್ನು ಒದಗಿಸಲಾಗುವುದು;

ತೇರದಾಳ, ಮಹಾಲಿಂಗಪುರ ಮತ್ತು ರಬಕವಿ-ಬನಹಟ್ಟಿ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ವಸತಿರಹಿತರಿಗೆ ರಾಜ್ಯ ಸರ್ಕಾರದ ನಗರ ಆಶ್ರಯ ಯೋಜನೆಯಡಿಯಲ್ಲಿ 2000-01 ರಿಂದ 2005-06 ರವರೆಗೆ 1355 ಮನೆಗಳನ್ನು ಮಂಜೂರು ಮಾಡಿದ್ದು, 1213 ಮನೆಗಳನ್ನು ಪೂರ್ಣಗೊಳಿಸಿ 140 ಮನೆಗಳು ಪ್ರಗತಿಯಲ್ಲಿರುತ್ತವೆ ಹಾಗೂ 2 ಮನೆಗಳು ಇನ್ನೂ ಪ್ರಾರಂಭವಾಗಬೇಕಾಗಿರುತ್ತದೆ.

ಸ್ಥಳ	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗಬೇಕಾದ ಮನೆಗಳು

ತೇರದಾಳ	624	604	20	0
ಮಹಾಲಿಂಗಪುರ	431	321	110	0
ರಬಕವಿ ಬನಹಟ್ಟಿ	300	288	10	2
ಒಟ್ಟು	1355	1213	140	2

ಮುಂದೆ ನಗರ ಆಶ್ರಯ ಯೋಜನೆಯಡಿಯಲ್ಲಿ ಗುರಿ ನಿಗದಿಪಡಿಸಿ ಉಳಿದಂತಹ ಫಲಾನುಭವಿಗಳಿಗೆ ಸೂರು ಕಲ್ಪಿಸಲಾಗುವುದು.

3 ಈ ಮೂರೂ ನಗರಗಳಲ್ಲಿ ಆಶ್ರಯವಾಗಿ ಮನೆ ಕಟ್ಟಿಕೊಂಡು ಅರಣ್ಯ ವರ್ಷಗಳಿಂದ ನಾಲ್ಕಾರು ಸಾವಿರ ಕುಟುಂಬಗಳಿದ್ದು, ಅವರೆಲ್ಲರಿಗೆ ಹಕ್ಕುಪತ್ರ ಕೊಡುವ ಯೋಜನೆ ಇದೆಯೇ; ಇದ್ದಲ್ಲಿ ಎಂದಿನಿಂದ ಕೊಡಲಾಗುವುದು;

ಈ ಪ್ರದೇಶವು ಅರಣ್ಯ ವ್ಯಾಪ್ತಿಗೆ ಬರುವುದರಿಂದ ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ಪ್ರಕಾರ ಅರಣ್ಯ ಪ್ರದೇಶದಲ್ಲಿ ವಸತಿ ಸೌಲಭ್ಯಕ್ಕಾಗಿ ನಿವೇಶನ ನೀಡಲು ಅವಕಾಶವಿರುವುದಿಲ್ಲ.

4 ಆಶ್ರಯ ಮನೆ ಮಂಜೂರಾತಿ ಕೊಡಲು ನಿವೇಶನಗಳ ಕೊರತೆಯಿರುವುದು ನಿಜವಲ್ಲವೇ

ಹೌದು,

5 ಆಶ್ರಯ ಮನೆಗಳಿಗಾಗಿ ಜಮೀನುಗಳನ್ನು ಖರೀದಿಸಲು ಇರುವ ಬೆಲೆ ಮತ್ತು ನಿಯಮಗಳೇನು;

ಸರ್ಕಾರವು ಖಾಸಗಿ ಜಮೀನುಗಳನ್ನು ಖರೀದಿಸಲು ಮಾರ್ಗಸೂಚಿ ಬೆಲೆಯನ್ನು ನಿಗದಿಪಡಿಸಿದ್ದು, ಮಾರ್ಗಸೂಚಿ ಬೆಲೆಯ ಎರಡರಷ್ಟಕ್ಕೆ ಖಾಸಗಿ ಜಮೀನುಗಳನ್ನು ಖರೀದಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

6 ಹಾಗಿದ್ದಲ್ಲಿ, ಯಾವ ಮೂಲದಿಂದ ಆಶ್ರಯ ಮನೆಗಳನ್ನು ನೀಡಲಾಗುವುದು;

ತೇರದಾಳ, ಮಹಾಲಿಂಗಪೂರ ಮತ್ತು ರಬಕವಿ–ಬನಹಟ್ಟಿ ನಗರ ಪ್ರದೇಶಗಳಲ್ಲಿ ವಸತಿ ರಹಿತರಿಗೆ ನಗರ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು

ನೀಡಲಾಗುವುದು. ನಿವೇಶನರಹಿತರಿಗೆ ನಿವೇಶನ ಒದಗಿಸಲು ನಗರ ನಿವೇಶನ ಯೋಜನೆ ಇದ್ದು, ಈ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಲಾಗುವುದು. ನಿವೇಶನ ಹಂಚಲು ಸರ್ಕಾರಿ ಜಮೀನ ಲಭ್ಯವಿಲ್ಲದಿದ್ದಲ್ಲಿ ಜಿಲ್ಲಾಧಿಕಾರಿಗಳು ಮೇಲೆ ತಿಳಿಸಿರುವಂತ ಕ್ರಮ ಕೈಗೊಂಡು ಜಮೀನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು. ತದನಂತರ ನಿವೇಶನ ರಚಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಿ ಮನೆಗಳನ್ನು ನೀಡಲಾಗುವುದು.

ಸಸಂಖ್ಯೆ: ವಇ 28 ಹೆಚಿಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

164ಶ್ರೀ ಸಿದ್ದು ಸವದಿ (ತೆರದಾಳ್)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.
ರಾಜ್ ಸಚಿವರು

ಅ. ರಾಜ್ಯದಲ್ಲಿ ಒಟ್ಟು ಎಷ್ಟು ಗ್ರಾಮ ಪಂಚಾಯತಿಗಳಿವೆ; ಯಾವ ನಿಯಮಾವಳಿ ಪ್ರಕಾರ ರಚನೆ ಮಾಡಲಾಗಿದೆ.

ರಾಜ್ಯದಲ್ಲಿ ಒಟ್ಟು 5628 ಗ್ರಾಮ ಪಂಚಾಯಿತಿಗಳಿರುತ್ತವೆ. ಇವುಗಳನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಗಳು 1993ರ ಪ್ರಕರಣ 4 ಮತ್ತು 5 ರನ್ವಯ ರಚನೆ ಮಾಡಲಾಗುವುದು./-ಮಾಡಲಾಗಿದೆ.

ಆ. ಹಾಲಿ ಗ್ರಾಮ ಪಂಚಾಯತ್‌ಗಳಿಂದ ಬೇರ್ಪಟ್ಟು, ಹೊಸ ಪಂಚಾಯತ್‌ಗಳಿಗೆ ಬೇಡಿಕೆಯಿದ್ದು, ಅದನ್ನು ಹೇಗೆ ಮತ್ತು ಎಂದು ರಚನೆ ಮಾಡಲಾಗುವುದು;

ಕ.ಪಂ.ರಾ. ಅಧಿನಿಯಮ 1993ರ ಪ್ರಕರಣ 4(1)(2)(ಎ)(ಬಿ) ರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೆ ಒಳಪಟ್ಟು ಅನುಮತಿಯೊಂದಿಗೆ ಕ್ರಮ ಕೈಗೊಳ್ಳುವರು.

ಇ. ಮಾಡದಿದ್ದಲ್ಲಿ, ಸಣ್ಣ ಗ್ರಾಮಗಳಿಗೆ ತಾರತಮ್ಯವಾಗುವುದರಿಂದ ಅದನ್ನು ಸರಿಪಡಿಸಲು ಯೋಜನೆಯನ್ನೇನಾದರೂ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

(ಆ) ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ:ಗ್ರಾಅಪ:18: ಗ್ರಾಪಸ:2009

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗ್ರಾಮೀಣ ನೀರು
ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಕರ್ನಾಟಕ ವಿಧಾನಸಭೆ

166 ಶ್ರೀ ಸಿದ್ದು ಸವದಿ (ತೆರದಾಳ್)

ಅ. ತೇರದಾಳ ಮತಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳಿಗೆ ಮಲ್ಟಿವಿಲೇಜ್ ಯೋಜನೆಯಲ್ಲಿ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಮಾಡಲಾಗಿದೆ;

ತೇರದಾಳ ಮತಕ್ಷೇತ್ರದಲ್ಲಿ ಮಲ್ಟಿ ವಿಲೇಜ್ ಯೋಜನೆಯಡಿಯಲ್ಲಿ 12 ಗ್ರಾಮಗಳನ್ನೊಳಗೊಂಡ 2 ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿವೆ. ಇದಲ್ಲದೆ, ಜಮಖಂಡಿ ತಾಲ್ಲೂಕಿನ ಯಲ್ಲಟ್ಟಿ ಮತ್ತು ಹಳಿಂಗಳಿ ಯೋಜನೆಯಡಿ 9 ಗ್ರಾಮಗಳ ಕುಡಿಯುವ ನೀರಿನ ಯೋಜನೆ ಮಂಜೂರು ಮಾಡಲಾಗಿದೆ.

ಆ. ಈ ಯೋಜನೆಗಳು ಯಾವ ಹಂತದಲ್ಲಿ ಇವೆ; ಎಂದಿನಿಂದ ಪ್ರಾರಂಭಿಸಲಾಗುವುದು;

ಈ ಯೋಜನೆಗಳ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಮಾರ್ಚ್ 2009ರಲ್ಲಿ ಕಾಮಗಾರಿ ಪ್ರಾರಂಭಿಸಲು ಉದ್ದೇಶಿಸಿದೆ.

ಇ. ರಾಜ್ಯದಲ್ಲಿ ಈ ಯೋಜನೆಯಲ್ಲಿ ಎಷ್ಟು ಕೆಲಸಗಳನ್ನು ಪ್ರಾರಂಭಿಸಲಾಗಿದೆ; ಕ್ಷೇತ್ರವಾರು ಮಾಹಿತಿ ನೀಡುವುದು?

ರಾಜ್ಯದಲ್ಲಿ ಈ ತೆರನಾದ 194 ಬಹುಗ್ರಾಮ ಯೋಜನೆಗಳನ್ನು ಮಂಜೂರು ಮಾಡಲಾಗಿದ್ದು 38 ಪೂರ್ಣಗೊಂಡಿವೆ. 2005-06ನೇ ಸಾಲಿನಿಂದ ಮಂಜೂರಾದ 144 ಯೋಜನೆಗಳ ಪೈಕಿ 107 ಯೋಜನೆಗಳಿಗೆ ಕಾರ್ಯಾದೇಶ ನೀಡಲಾಗಿದೆ. ಜಿಲ್ಲಾವರು ಸಬ್‌ಮಿಷನ್ ಕಾರ್ಯಕ್ರಮದಡಿ ಮಂಜೂರಾದ ಯೋಜನೆಗಳ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

A. For how many villages drinking water projects have been formulated under Multi village Scheme in Therdal Constituency;

2 Drinking water schemes consisting of 12 villages have been sanctioned under Multi Village Scheme in Therdal Constituency. Apart from this, 9 villages drinking water scheme have been

sanctioned under Yellahtti and Halingall project of Jamkandi Taluk.

B. What is the stage of these schemes; when they will be started;

Tendering process of these schemes is undergoing. It is programmed to start the work during March 2009.

C. Under this scheme, how many works have been started in the State; Constituency-wise information be furnished?

194 Multi Village Scheme of this type have been sanctioned in the State. Of them, 38 have been completed. From 2005-06, 144 MVS have been sanctioned, of which 107 have been issued work orders. The district-wise details of approved schemes under Sub- Mission Program is furnished vide **Annexure-1.**

ಸಂ:ಗ್ರಾಅಪ 25 ಗ್ರಾನೀಸ(1) 09

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಚುಕ್ಕೆ ರಹಿತ ಪ್ರಶ್ನೆ:166ರ ಲಗತ್ತು ಅನುಬಂಧ-1/Annexure-1 2005-06-20

SUBMISSION SCHEME-ABSTRACT AS ON JANUARY 2009

Sl. No.	District	Total no.of Schemes Formulated	Total no.of Habitations covered	Total no.of WQA Habitations proposed for coverage	Scheme Cleared by GoI Amt	Tenders Approved		Tenders under process		Work Order Issued
						No.	Amount	No.	Amount	
1	2	3	4	5	6	7	8	9	10	11
1	Bangalkote	19	219	130	11591.73	12	8015.16	1	320.27	12
2	Belagaum	13	105	82	7747.17	11	7134.71	2	1175.00	11
3	Bellary	34	137	137	8074.09	26	5901.25	0	0.00	25
4	Bijapur	8	96	69	3476.04	7	3574.13	1	700.00	7
5	CHIKKABALLA PURAr	1	8	5	474.00	1	474.00	0	0.00	1
6	Chickballapur	2	190	113	2714.20	2	1798.14	0	0.00	2

7	Chickmagalur	3	27	24	1340.50	2	741.10	0	0.00	2
8	Chitradurga	1	27	23	796.06	1	1025.00	0	0.00	1
9	Davanagere	11	154	129	8050.17	11	10202.65	0	0.00	11
10	Dharwad	3	7	6	539.87	3	550.11	0	0.00	3
11	Gadag	6	21	17	1380.51	6	1534.76	0	0.00	6
12	Gulbarga	6	34	34	1065.25	6	1489.35	0	0.00	6
13	Hassan	2	75	51	1622.00	1	2570.48	1	104.78	1
14	Haveri	1	16	7	700.80	1	1036.20	0	0.00	1
15	Kolar	1	184	143	3619.00	1	4010.00	0	0.00	1
16	Koppal	11	182	142	9238.19	7	5935.42	2	890.88	5
17	Mandya	7	148	123	5210.30	6	5430.05	1		6
18	Ramanagar	2	40	39	1085.00	0	0.00	0	0.00	0
19	Raichur	8	125	70	8316.40	4	3948.47	4	3303.70	1
20	Shimoga	3	34	32	1215.34	3	1414.35	0	0.00	3
21	Tumkur	2	8	7	387.70	2	326.24	0	0.00	2
	TOTAL	**144**	**1837**	**1383**	**78644.32**	**113**	**67111.57**	**12**	**6494.73**	**107**

ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ (ಗ್ರಾನೀಸ) ಇಲಾಖೆ

ಕರ್ನಾಟಕ ವಿಧಾನ ಸಭೆ

168 ಶ್ರೀ ಧ್ರುವನಾರಾಯಣ್ ಆರ್

ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ಮತ್ತು ಆದಾಯ

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಅಭಿವೃದ್ಧಿಗಾಗಿ 2008-09ರಲ್ಲಿ ಬಿಡುಗಡೆ ಮಾಡಲಾದ ಅನುದಾನ ಎಷ್ಟು;

ರಾಜ್ಯದಲ್ಲಿ ದೇವಸ್ಥಾನಗಳ ಅಭಿವೃದ್ಧಿಗಾಗಿ 2008-09ನೇ ಸಾಲಿನಲ್ಲಿ ರೂ.2267.26 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಆ) ಅವುಗಳಲ್ಲಿ ಪ್ರಮುಖ ದೇವಸ್ಥಾನಗಳು ಯಾವುವು; ಅವುಗಳಿಗೆ ನೀಡಲಾದ ಅನುದಾನ ಎಷ್ಟು;

ಪ್ರಮುಖವಾದ 34 ದೇವಸ್ಥಾನಗಳಿಗೆ ರೂ.437.00 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿದೆ. (ವಿವರ ಲಗತ್ತಿಸಿದೆ)

ಇ) ಅನುದಾನ ಪಡೆದ ದೇವಸ್ಥಾನಗಳಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆಯೇ;

ಇಲ್ಲ.

ಈ) ಆದಾಯ ಬರುತ್ತಿದ್ದಲ್ಲಿ, ಯಾವ ಯಾವ ದೇವಸ್ಥಾನದಿಂದ ಎಷ್ಟೆಷ್ಟು ಆದಾಯ ಬರುತ್ತಿದೆ?

ಉದ್ಭವಿಸುವುದಿಲ್ಲ.

ಸಂಖ್ಯೆ:ಕಂಇ 19 ಮುಸಪ್ರ 2009 (ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

2008-09ನೇ ಸಾಲಿನಲ್ಲಿ ಮುಜರಾಯಿ ಇಲಾಖಾ ವತಿಯಿಂದ ಪ್ರಮುಖ ದೇವಸ್ಥಾನಗಳಿಗೆ ಅನುದಾನ ಮಂಜೂರು ಮಾಡಿದ ವಿವರ

ಅನುಬಂಧ

ಕ್ರಸಂ	ದೇವಸ್ಥಾನದ ಹೆಸರು ಮತ್ತು ಗ್ರಾಮ	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)
1	ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ದೇವಸ್ಥಾನ, ಎಡೆಯೂರು, ಕುಣಿಗಲ್ ತಾಲ್ಲೂಕು	200.00

2	ಶ್ರೀ ಕ್ಷೇತ್ರ ರೇಣುಕಾಯಲ್ಲಮ್ಮ ದೇವಸ್ಥಾನ, ಯಲ್ಲಮ್ಮನಗುಡ್ಡ, ಸೌವದತ್ತಿ (ತಾ) ಬೆಳಗಾವಿ ಜಿಲ್ಲೆ	100.00
3	ಶ್ರೀ ಹಾಸನನಾಂಭ ದೇವಸ್ಥಾನ, ಹಾಸನ ಟೌನ್	50.00
4	ಶ್ರೀ ವೆಂಕಟರಮಸ್ವಾಮಿ ದೇವಸ್ಥಾನ. ತಲಕಾಯಲಬೆಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ	10.00
5	ಶ್ರೀ ಪಾರ್ವತಮ್ಮನರ ದೇವಾಲಯ, ಅಮೃತೂರು, ಕುಣಿಗಲ್ (ತಾ)	5.00
6	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಚನ್ನಮಾನಹಳ್ಳಿ, ರಾಮನಗರ ಜಿಲ್ಲೆ	5.00
7	ಶ್ರೀ ಲಕ್ಷ್ಮೀವೆಂಕಟೇಶ್ವರಸ್ವಾಮಿ ದೇವಸ್ಥಾನ, ಹೂಡಿ, ಮಹದೇವಪುರ	5.00
8	ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ಚಾರ್ಮಾಡಿ ಗ್ರಾಮ, ಬೆಳ್ತಂಗಡಿ (ತಾ)	5.00
9	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಮುಳಬಾಗಿಲು	5.00
10	ಶ್ರೀ ಅನಂತಪದ್ಮನಾಭ ದೇವಸ್ಥಾನ, ಪರ್ಡೂರು, ಉಡುಪಿ ಜಿಲ್ಲೆ	4.00
11	ಶ್ರೀ ಪಟ್ಟಲದಮ್ಮ ದೇವಸ್ಥಾನ, ಕಂಬದಹಳ್ಳಿ, ಮಂಡ್ಯ ತಾಲ್ಲೂಕು	3.00
12	ಶ್ರೀ ಲಕ್ಷ್ಮೀರಂಗನಾಥಸ್ವಾಮಿ ದೇವಸ್ಥಾನ, ಗುಳೇಹರವಿ, ತುಮಕೂರು (ತಾ)	3.00
13	ಶ್ರೀ ಕಲ್ಮೇಶ್ವರ ಮಂದಿರ, ಹಲಗಾ, ಬೆಳಗಾವಿ ಗ್ರಾಮಾಂತರ	3.00
14	ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ, ಮಂಡಿಕಲ್ಲು, ಚಿಕ್ಕಬಳ್ಳಾಪುರ	3.00
15	ಶ್ರೀ ರಾಜ ಉತ್ಸವಾಂಭ ದೇವಸ್ಥಾನ, ಚಿತ್ರದುರ್ಗ ಟೌನ್	2.50
16	ಶ್ರೀ ಚಿಕ್ಕದೇವಮ್ಮ ದೇವಿ ದೇವಸ್ಥಾನ, ಹೆಚ್.ಡಿ. ಕೋಟೆ ತಾಲ್ಲೂಕು	2.00
17	ಶ್ರೀ ಗಿರಿಮಲ್ಲೇಶ್ವರ ಮಹಾರಾಜ ದೇವಸ್ಥಾನ, ಬಿಜಾಪುರ ಜಿಲ್ಲೆ	2.00
18	ಶ್ರೀ ರಾಮೇಶ್ವರದೇವಸ್ಥಾನ, ತೀರ್ಥಹಳ್ಳಿ	2.00

19	ಶ್ರೀ ಭೋಗನಂದೀಶ್ವರಸ್ವಾಮಿ ದೇವಸ್ಥಾನ, ನಂದಿ, ಚಿಕ್ಕಬಳ್ಳಾಪುರ ಜಿಲ್ಲೆ	2.00
20	ಶ್ರೀ ಸೌಮ್ಯಕೇಶವ ದೇವಸ್ಥಾನ, ನಾಗಮಂಗಲ, ಮಂಡ್ಯ ಜಿಲ್ಲೆ	2.00
21	ಶ್ರೀ ಮಹಾಬಲೇಶ್ವರ ದೇವಸ್ಥಾನ, ತುಂಬಲೇಮಠ, ಹೊಲನಗದ್ದೆ, ಕುಮಟ	2.00
22	ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನ, ಸೀಕಲ್ಲು, ಕೋಲಾರ ಜಿಲ್ಲೆ	2.00
23	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಕೋಟೆ ಬೀದಿ, ಯಲಹಂಕ	2.00
24	ಶ್ರೀ ದೊಡ್ಡಗಣಪತಿ ದೇವಸ್ಥಾನ, ಬಸವನಗುಡಿ	2.00
25	ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ, ಬಸವನಗುಡಿ	2.00
26	ಹರಿಹರ ಗುಡ್ಡದ ಶ್ರೀ ಕುಮಾರಸ್ವಾಮಿ ದೇವಸ್ಥಾನ	2.00
27	ಶ್ರೀ ಚಿಕ್ಕಲ್ಲೂರು ಸಿದ್ದಪ್ಪಾಜಿ ಸ್ವಾಮಿ ದೇವಸ್ಥಾನ, ಹೊಸಮಠ, ಕೊಳ್ಳೇಗಾಲ (ತಾ)	2.00
28	ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ; ಲೋಕಿಕೆರೆ, ದಾವಣಗೆರೆ (ತಾ)	2.00
29	ಶ್ರೀ ಲಕ್ಷೀನರಸಿಂಹಸ್ವಾಮಿ ದೇವಸ್ಥಾನ; ಚಿಕ್ಕರಸನಕುಪ್ಪ, ಬಂಗಾರಪೇಟೆ (ತಾ)	2.00
30	ಶ್ರೀ ಚನ್ನಿಗರಾಯಸ್ವಾಮಿ ದೇವಾಲಯ, ಮಾಗಡಿ (ತಾ) ರಾಮನಗರ ಜಿಲ್ಲೆ	1.50
31	ಶ್ರೀ ರೇವಣ್ಣ ಸಿದ್ದೇಶ್ವರ ದೇವಸ್ಥಾನ, ಅವ್ವೇರಹಳ್ಳಿ, ರಾಮನಗರ ಜಿಲ್ಲೆ	1.00
32	ಶ್ರೀ ಮಂಜುನಾಥ ದೇವಸ್ಥಾನ, ಕದ್ರಿ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ	1.00
33	ಶ್ರೀ ತಿರುಮಲ ರಂಗನಾಥಸ್ವಾಮಿ ದೇವಸ್ಥಾನ, ಮಾಗಡಿ, ರಾಮನಗರ ಜಿಲ್ಲೆ	1.00
34	ಶ್ರೀ ಹಿರೇಕುರುವತ್ತಿ ಶ್ರೀ ಕ್ಷೇತ್ರದ ಅಭಿವೃದ್ಧಿಗಾಗಿ, ಹೂವಿನಹಡಗಲಿ ತಾಲ್ಲೂಕು	1.00
	ಒಟ್ಟು	437.00

ಕುಂಇ 19 ಮುಸಪ್ರ 2009

(ಜಿ.ರಾಮಚಂದ್ರಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಕರ್ನಾಟಕ ವಿಧಾನಸಭೆ
(13ನೇ ವಿಧಾನ ಸಭೆ. 2ನೇ ಅಧಿವೇಶನ)

169
ಧ್ರುವ ನಾರಾಯಣ್ ಆರ್.(ಕೊಳ್ಳೆಗಾಲ)
ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

1. ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಡಲು 2006-07, 2007-08 ಮತ್ತು 2008-09 ರಲ್ಲಿ ಎಷ್ಟು ಹಣವನ್ನು ಬಳಸಲಾಗಿದೆ;

ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳಿಗೆ 2006-07, 2007-08 ಮತ್ತು 2008-09 ರಲ್ಲಿ ಒಟ್ಟು ರೂ.143876.16 ಲಕ್ಷಗಳನ್ನು ಬಳಸಲಾಗಿದೆ. ವಿವರಗಳು ಕೆಳಗಿನಂತಿವೆ:

(ರೂ.ಲಕ್ಷಗಳಲ್ಲಿ)

ವರ್ಷ	ಗ್ರಾಮೀಣ	ನಗರ	ಒಟ್ಟು
2006-07	34780.12	756.26	35536.38
2007-08	58789.02	1123.80	59912.82
2008-09 (31.01.09 ರವರೆಗೆ)	47896.12	530.84	48426.96
ಒಟ್ಟು	**141465.26**	**2410.9**	**143876.16**

2. ಆಶ್ರಯ ಮನೆಗಳ ನಿರ್ಮಾಣಕ್ಕೆ ನಿವೇಶನಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

3. ನಿವೇಶನಗಳ ನಿರ್ಮಾಣಕ್ಕೆ 2008-09ರಲ್ಲಿ ನೀಡಲಾದ ಅನುದಾನ ಎಷ್ಟು;

ನಿವೇಶನಗಳ ನಿರ್ಮಾಣಕ್ಕೆ 2008-09ರ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ರೂ.6245.16 ಲಕ್ಷಗಳ (ನಗರ ನಿವೇಶನಗಳಿಗೆ ರೂ.6068.16 ಲಕ್ಷಗಳು ಮತ್ತು ಗ್ರಾಮೀಣ ನಿವೇಶನಗಳಿಗೆ ರೂ.177 ಲಕ್ಷಗಳು) ಅನುದಾನವನ್ನು ಒದಗಿಸಿದೆ.

4. ವಸತಿ ಹೀನರಿಗೆ ನಿವೇಶನಗಳನ್ನು ಕೊಟ್ಟು, ನಂತರ ಆಶ್ರಯ ಮನೆಗಳ ನಿರ್ಮಾಣಕ್ಕೆ ಅನುದಾನ ನೀಡುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತದೆ.

ನಿವೇಶನ ರಹಿತರಿಗೆ ನಿವೇಶನವನ್ನು ನೀಡಲು ಈಗಾಗಲೇ ಆಶ್ರಯ ನಿವೇಶನ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯಡಿ ಲಭ್ಯವಿರುವ ಸರ್ಕಾರಿ ಭೂಮಿಯನ್ನು ಆಶ್ರಯ ಯೋಜನೆಗೆ ವರ್ಗಾಯಿಸಿಕೊಂಡು ಬಡಾವಣೆ ರಚಿಸಿ ನಿವೇಶನಗಳನ್ನು ನೀಡಲಾಗುತ್ತಿದೆ. ಒಂದು ವೇಳೆ ಸರ್ಕಾರಿ ಭೂಮಿ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನುಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಖರೀದಿಸಿ ನಿವೇಶನಗಳನ್ನು ಒದಗಿಸಲಾಗುತ್ತಿದೆ. ನಿವೇಶನ ಒದಗಿಸಿ ನಂತರ ಸಧ್ಯ ಅನುಷ್ಠಾನದಲ್ಲಿರುವ ಗ್ರಾಮೀಣ ಆಶ್ರಯ, ಗ್ರಾಮೀಣ ಅಂಬೇಡ್ಕರ್, ಇಂದಿರಾ ಆವಾಸ್ ಮತ್ತು ನಗರ ಆಶ್ರಯ ಯೋಜನೆಗಳ ಮೂಲಕ ವಸತಿ ಸೌಕರ್ಯ ಕೊಡಬಹುದಾಗಿದೆ. ಇದಲ್ಲದೆ ವಸತಿ ರಹಿತರಿಗೆ ನಿವೇಶನಗಳನ್ನು ವಿತರಿಸಿ, ನಂತರ ವಿತರಿಸಲಾದ ನಿವೇಶನದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು 2006ರಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಆಯ್ಕೆಯಾದ 1200 ಗ್ರಾಮಗಳಲ್ಲಿ ಪ್ರತಿ ಗ್ರಾಮದಲ್ಲಿ ಕನಿಷ್ಠ 10 ಎಕರೆಯಂತೆ ಜಮೀನನ್ನು ಖರೀದಿಸಲು ಸರ್ಕಾರದಿಂದ ಈಗಾಗಲೇ ರೂ.25.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಮೊದಲ ಹಂತದಲ್ಲಿ ನಿವೇಶನಗಳನ್ನು ವಿತರಿಸಿ, ನಂತರ ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶ ಹೊಂದಲಾಗಿದೆ.

ಸಂಖ್ಯೆ :ವಇ 25 ಹೆಚ್‌ಎಎಂ 2009 **(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)**
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನಸಭೆ

170 ಧ್ರುವ ನಾರಾಯಣ್ ಆರ್.(ಕೊಳ್ಳೆಗಾಲ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ. ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008-09ರ ಸಾಲಿಗೆ ನಿಗದಿಪಡಿಸಲಾದ ಮೊತ್ತ ಎಷ್ಟು;

ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008-09ರ ಸಾಲಿಗೆ 140.00ಕೋಟಿರೂಗಳನ್ನು ಒದಗಿಸಲಾಗಿದೆ.

ಆ. ಸೈಕಲ್ ಪೂರೈಸಲು ಯಾವ ಯಾವ ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ.

ಸೈಕಲ್ ಪೂರೈಸಲು ಮೆ:ಅಟ್ಲಾಸ್ ಸೈಕಲ್ಸ್(ಹ) ಲಿ., ಮಧ್ಯಪ್ರದೇಶ, ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ, ಹೀರೋ ಸೈಕಲ್ಸ್ ಲಿ., ಲೂಧಿಯಾನ ಮತ್ತು ಏವನ್ ಸೈಕಲ್ಸ್ ಲಿ., ಲೂಧಿಯಾನ. ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ.

ಇ. ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಸೈಕಲ್‌ಗಳ ಗುಣಮಟ್ಟಕ್ಕೆ ಸರಿಸಮಾನವಾದವುಗಳಾಗಿವೆಯೇ;

ಬೈಸಿಕಲ್‌ಗಳ ಗುಣಮಟ್ಟವನ್ನು ಭಾರತೀಯ ಗುಣಮಟ್ಟ ಮಾಪನದಲ್ಲಿ ನಿಗಧಿಗೊಳಿಸಿರುವಂತೆ ಕಾಯ್ದುಕೊಳ್ಳಲಾಗಿದೆ.

ಈ. ಹಾಗೆ ಪೂರೈಸಲಾಗುತ್ತಿರುವ ಪ್ರತಿ ಸೈಕಲ್‌ನ ಬೆಲೆ ಎಷ್ಟು;

ಪ್ರತಿ ಬೈಸಿಕಲ್‌ನ ದರ ರೂ.2397/-ಕ್ಕೆ ನಿಗಧಿಗೊಳಿಸಿದೆ.

ಉ. 2008-09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ಏಳು ಲಕ್ಷ ವಿದ್ಯಾರ್ಥಿಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಸೈಕಲ್ ನೀಡಲಾಗಿದೆ?

2008-09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಈವರೆಗೆ 1,82,102 ವಿದ್ಯಾರ್ಥಿಗಳಿಗೆ ಬೈಸಿಕಲ್‌ಗಳನ್ನು ವಿತರಿಸಲಾಗಿದೆ.

ಇಡಿ:49: ಯೋಯೋಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

171 ಶ್ರೀ ಧ್ರುವನಾರಾಯಣ್ ಆರ್. (ಕೊಳ್ಳೇಗಾಲ)

ಇಂಧನ ಸಚಿವರು.

****

ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು;

ಆ) ಅದಕ್ಕೆ ತಗಲುತ್ತಿರುವ ಉತ್ಪಾದನಾ ವೆಚ್ಚ ಎಷ್ಟು;

2007-08ನೇ ಸಾಲಿನಲ್ಲಿ ರಾಜ್ಯದ ಆಂತರಿಕ ವಿದ್ಯುತ್ ಉತ್ಪಾದನೆಯಿಂದ ಲಭ್ಯವಾದ 29,258 ದಶಲಕ್ಷ ಯೂನಿಟ್ಟುಗಳೂ ಸೇರಿದಂತೆ ವಿವಿಧ ಮೂಲಗಳಿಂದ ರಾಜ್ಯಕ್ಕೆ ಲಭ್ಯವಾದ ವಿದ್ಯುತ್ತಿನ ಒಟ್ಟು ಪ್ರಮಾಣ 40,195 ದಶಲಕ್ಷ ಯೂನಿಟ್ಟುಗಳು. ಇದಕ್ಕೆ ತಗುಲಿದ ವೆಚ್ಚವು 7885.20 ಕೋಟಿ ರೂ.ಗಳು.

ಇ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಕೊರತೆ ಇದೆ;

ಪ್ರಸಕ್ತ ಸಾಲಿನಲ್ಲಿ (2008-09) ಸುಮಾರು 2000 ದಿಂದ 2500 ಮೆಗಾವ್ಯಾಟ್‌ಗಳಷ್ಟು ದಿನದ ಗರಿಷ್ಠ ಬೇಡಿಕೆಯಲ್ಲಿ ಕೊರತೆ ಇದೆ.

ಈ) ಕೊರತೆ ನೀಗಿಸಿಕೊಳ್ಳಲು ಕೈಗೊಂಡ ಕ್ರಮಗಳೇನು?

ವಿದ್ಯುತ್ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಪಾವಧಿ ಕ್ರಮಗಳು:

1. ರಾಜ್ಯದ ಎಲ್ಲಾ ಖಾಸಗಿ ವಿದ್ಯುತ್ ಉತ್ಪಾದಕರುಗಳಿಗೆ, 30-12-2008ರ ಸರ್ಕಾರಿ ಆದೇಶದ ಪ್ರಕಾರ ಗರಿಷ್ಟ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯನ್ನು ಮಾಡಿ ರಾಜ್ಯದ ವಿದ್ಯುತ್ ಜಾಲಕ್ಕೆ ನೀಡಲು ಸೂಚಿಸಿದೆ.
2. ಮೆ:ಜೆ.ಎಸ್. ಡಬ್ಲ್ಯೂ ಮತ್ತು ಮೆ : ಜಿ.ಎಂ.ಆರ್. ರವರಿಂದ ಮೇ 2009ರ ಅಂತ್ಯದವರೆಗೆ ದಿನವಹಿ 400 ಮೆಗಾ ವ್ಯಾಟ್ ಗಳಷ್ಟು (9.60 ದಶಲಕ್ಷ ಯೂನಿಟ್ಟುಗಳು) ರಾಜ್ಯದ ವಿದ್ಯುತ್ ಜಾಲಕ್ಕೆ ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ.
3. ಅಸಂಪ್ರದಾಯಕ ವಿದ್ಯುತ್ ಉತ್ಪಾದನಾ ಮೂಲಗಳಿಂದ ಹೆಚ್ಚುವರಿಯಾಗಿ ದಿನವಹಿ ಸರಾಸರಿ 5 ರಿಂದ 6 ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಪಡೆಯಲಾಗುತ್ತಿದೆ.
4. ಫೆಬ್ರವರಿ 2009 ರ ಅಂತ್ಯದ ವರೆಗೆ ಛತ್ತೀಸ್ ಘಡದಿಂದ 200 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಪಡೆಯಲಾಗುತ್ತಿದೆ.
5. ಇಂಡಿಯನ್ ಎನರ್ಜಿ ಎಕ್ಸ್ಚೇಂಜ್ ಮೂಲಕ ಒಂದು ದಿನ ಮುಂಚಿತ ಆಧಾರದಲ್ಲಿ (On day ahead basis) ವಿದ್ಯುತ್ತನ್ನು ಪಡೆಯಲಾಗುತ್ತಿದೆ. ಜನವರಿ 09 ರಿಂದ 20-2-09 ರವರೆಗೆ 21.165 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ಖರೀದಿಸಲಾಗಿರುತ್ತದೆ.

ಮಧ್ಯಮಾವಧಿ ಕ್ರಮಗಳು:

ಮೆ : ವಿ.ಬಿ.ಸಿ. ಫೆರೋ ಅಲಾಯ್ಸಿ ಸಂಸ್ಥೆಯಿಂದ 600 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಹಂತ ಹಂತವಾಗಿ ಪಡೆಯಲು ಇಂಗಿತ ಪತ್ರ (LOI) ವನ್ನು ನೀಡಲಾಗಿರುತ್ತದೆ.

ದೀರ್ಘಕಾಲಿಕ ಕ್ರಮಗಳು:

ಸ್ಪರ್ಧಾತ್ಮಕ ಬಿಡ್ ಮೂಲಕ (ರಾಜ್ಯದಲ್ಲಿ):

1. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ– ಗುಲ್ಬರ್ಗಾದಲ್ಲಿ 12ನೇ ಯೋಜನಾವಧಿಯಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
2. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ – ಘಟಪ್ರಭಾದಲ್ಲಿ 12 ನೇ ಯೋಜನಾವಧಿಯಲ್ಲಿ ಕಾರ್ಯರಂಭ ಅಂದಾಜಿಸಲಾಗಿದೆ.

ಕರ್ನಾಟಕ ವಿಧಾನ ಸಭೆ

172 ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)

ಇಂಧನ ಸಚಿವರು.

****

ಅ) ಸಾಗರ ತಾಲ್ಲೂಕು ಜೋಗದಲ್ಲಿರುವ ಶರಾವತಿ ವಿದ್ಯುತ್ ಯೋಜನೆಯಿಂದ ನೂರಾರು ಕೋಟಿ ರೂ.ಗಳ ಆದಾಯ ಬರುತ್ತಿದ್ದು ಹಾಗೂ ನಾಡಿಗೆ ಬೆಳಕು ನೀಡುತ್ತಿರುವುದು ನಿಜವಲ್ಲವೇ;

ಅ) ಶರಾವತಿ ಜಲ ವಿದ್ಯುತ್ ಯೋಜನೆಯಿಂದ ಕರ್ನಾಟಕ ರಾಜ್ಯಕ್ಕೆ ವಿದ್ಯುತ್ ಸರಬರಾಜಾಗುತ್ತಿದ್ದು, ಈ ಯೋಜನೆ ಕರ್ನಾಟಕದ ಬಹುಮುಖ್ಯವಾದ ವಿದ್ಯುತ್ ಉತ್ಪಾದನಾ ಕೇಂದ್ರವಾಗಿರುವುದು ಹೆಮ್ಮೆಯ ವಿಷಯವಾಗಿದೆ. ಈ ಯೋಜನೆಯಡಿ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯ ಜೊತೆಗೆ ರಾಜ್ಯದ ಇತರ ಭಾಗಗಳಾದ ರಾಯಚೂರು, ಬಳ್ಳಾರಿ, ನಾಗಝರಿ (ಕಾಳಿ ಯೋಜನೆ), ವರಾಹಿ, ಆಲಮಟ್ಟಿ ಇತ್ಯಾದಿ ಹಾಗೂ ಕೇಂದ್ರ ಸರ್ಕಾರದ ಯೋಜನೆಯಾದ ಕೈಗಾ ಅಣು ವಿದ್ಯುತ್ ಸ್ಥಾವರದಿಂದ ಉತ್ಪಾದಿಸಲಾಗುತ್ತಿರುವ ವಿದ್ಯುತ್ ಹಾಗೂ ಕೇಂದ್ರ ಯೋಜನೆಗಳಿಂದ ಲಭ್ಯವಾಗುವ ರಾಜ್ಯದ ಪಾಲು ಹಾಗೂ ಖಾಸಗಿ ವಿದ್ಯುತ್ ಉತ್ಪಾದಕರಿಂದ ಪಡೆಯುವ ವಿದ್ಯುತ್ತನ್ನು ಕ್ರೋಢೀಕರಿಸಿ, ಲಭ್ಯತೆ ಹಾಗೂ ಬೇಡಿಕೆಗೆ ಅನುಗುಣವಾಗಿ ರಾಜ್ಯದ ಎಲ್ಲಾ ಭಾಗಗಳಿಗೆ ಕರ್ನಾಟಕ ಸರ್ಕಾರವು ವಿದ್ಯುತ್ ಸರಬರಾಜು ಕಂಪನಿವಾರು ಹಂಚಿರುತ್ತದೆ. ಈ ಹಂಚಿಕೆಯ ಪ್ರಕಾರ ವಿದ್ಯತ್ ಸರಬರಾಜು ಮಾಡಲಾಗುತ್ತದೆ.

ಆ) ಈ ಭಾಗಕ್ಕೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುವ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆಯೇ?

ಪ್ರಸ್ತುತ ಸಾಗರ ತಾಲ್ಲೂಕಿನ ನಗರ ಪ್ರದೇಶಗಳಲ್ಲಿ ದಿನದ 24 ಗಂಟೆಗಳ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ದಿನದ 6 ಗಂಟೆಗಳ ಅವಧಿಯಲ್ಲಿ 3 ಫೇಸ್ ಹಾಗೂ 6 ಗಂಟೆಗಳ ಅವಧಿಯಲ್ಲಿ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಅಧಿಕ ಕೃಷಿ ನೀರಾವರಿ ಪಂಪುಸೆಟ್ಟುಗಳನ್ನು ಹೊಂದಿರುವ ಗೌತಮಪುರ ಹಾಗೂ ಉಲ್ಲೂರು 11 ಕೆ.ವಿ. ಫೀಡರ್ ಗಳನ್ನು ಗುರುತಿಸಿ ಆರ್.ಎಲ್.ಎಂ.ಎಸ್. ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ಅನುಷ್ಠಾನಗೊಂಡ ನಂತರ ಗೌತಮಪುರ ಹಾಗೂ ಉಲ್ಲೂರು 11 ಕೆ.ವಿ. ಫೀಡರ್‌ಗಳಿಂದ ವಿದ್ಯುತ್ ಸರಬರಾಜಾಗುವ ಗ್ರಾಮಾಂತರ ಪ್ರದೇಶಗಳಲ್ಲಿನ ವಾಸದ ಮನೆಗಳಿಗೆ ದಿನದ ಎಲ್ಲಾ ಸಮಯದಲ್ಲಿ ನಿರಂತರ ವಿದ್ಯುತ್ ಸರಬರಾಜು ಮಾಡಲು ಸಾಧ್ಯವಾಗುವುದು.

ಸಂಖ್ಯೆ: ಇಎನ್ 15 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

172 ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)

ಅ) ಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಭೂಸೇನಾ ನಿಗಮಕ್ಕೆ ವಹಿಸಲಾಗಿರುವ ಕಾಮಗಾರಿಗಳಾವುವು (ಕಳೆದ 3 ವರ್ಷಗಳ ಮಾಹಿತಿ ನೀಡುವುದು);

ಅನುಬಂಧ-1ರಲ್ಲಿ ವಿವರ ನೀಡಿದೆ.

ಆ) ಈ ನಿಗಮವು ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

– ಇಲ್ಲ –

ಇ) ಬಂದಿದ್ದಲ್ಲಿ, ಈ ನಿಗಮದ ವಿರುದ್ಧ ಕೈಗೊಂಡಿರುವ ಕ್ರಮಗಳಾವುವು?

ಉದ್ಭವಿಸುವುದಿಲ್ಲ.

ಸಂ: ಗ್ರಾಅಪ 44 ಇಜಿಎಸ್(ಕಭೂನಿ)2009

ದಿನಾಂಕ:24.02.2009

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು

ಅನುಬಂಧ -1

ಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಭೂಸೇನಾ ನಿಗಮಕ್ಕೆ ಕಳೆದ 3 ವರ್ಷಗಳಲ್ಲಿ ವಹಿಸಲಾದ ಕಾಮಗಾರಿಗಳ ವಿವರಗಳು

(ಲಕ್ಷಗಳಲ್ಲಿ)

ಕ್ರ ಸಂ.	ವಹಿಸಲಾದ ಕಾಮಗಾರಿಗಳ ಹೆಸರು	ತಾಲ್ಲೂಕು	ಅಂದಾಜು ಮೊತ್ತ	ಬಿಡುಗಡೆಯಾದ ಅನುದಾನ	ದಿನಾಂಕ		ಪ್ರಗತಿ		ಷರಾ
					ಪ್ರಾರಂಭ	ಮುಕ್ತಾಯ	ಆರ್ಥಿಕ (ರೂ)	ಭೌತಿಕ	
	ಸುವರ್ಣಗ್ರಾಮ ಯೋಜನೆ ಎಡೆಹಳ್ಳಿ ಹಂತ-2								
1	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ಗೇರು ಬೀಚ್ ಸ್ಕೂಲ್ ಮುಖ್ಯರಸ್ತೆಯಿಂದ ಹರಿಜನ ಕಾಲೋನಿ ನದಿತೀರ	ಸಾಗರ	9.80	9.80	ಸೆಪ್ಟಂಬರ್ -08	ಮಾರ್ಚ್-08	8.57	ಕಾಮಗಾರಿ ಮುಕ್ತಾಯಗೊಂಡಿದೆ	
2	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ಹೊಸನಗರ ರಸ್ತೆಯಿಂದ ಕರ್ಮಪ್ಪ ಮನೆ ಸ್ಕೂಲ್ ತನಕ	ಸಾಗರ	0.82	0.82	ಸೆಪ್ಟಂಬರ್ -08	ನವೆಂಬರ್ -08	0.82		
3	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ಯಡಹಳ್ಳಿ ಹೊಸನಗರ ರಸ್ತೆಯಿಂದ	ಸಾಗರ	0.98	0.98	ಸೆಪ್ಟಂಬರ್ -08	ನವೆಂಬರ್ -08	0.98		

	ಅಂಗನವಾಡಿ ಹಿಂಬದಿಯಿಂದ ಕೆಂಗಿ ಖಾನಾಪುರ ತನಕ								
4	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ಅಡೂರು ಮುಖ್ಯರಸ್ತೆಯಿಂದ ಕೆಂಗ ಖಾನಾಪುರ ಕೂಡು ಹೊಸರಸ್ತೆ	ಸಾಗರ	4.55	4.55	ಸೆಪ್ಟಂಬರ್ –08	ಮಾರ್ಚ್– 09	4.00	ಕಾಮಗಾರಿಗಳು. ಪ್ರಗತಿಯಲ್ಲಿದೆ.	
5	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ಯಡಹಳ್ಳಿ ವೃತ್ತದಿಂದ ಹರಿಜನ ಕಾಲೋನಿವರೆಗೆ	ಸಾಗರ	7.45	7.45	ಸೆಪ್ಟಂಬರ್ –08	ಮಾರ್ಚ್– 09	3.58		
6	ಸಿಡಿ ಕಾಮಗಾರಿ(ಪೈಪ್ ಕಲವರ್ಟ್)	ಸಾಗರ	2.90	2.90	ಸೆಪ್ಟಂಬರ್ –08	ಮಾರ್ಚ್– 09	2.52		
	ಹಂತ–2ರ ಒಟ್ಟು		**26.50**	**26.50**			**20.47**		
	2007–08(ಹಂತ–1 ಮತ್ತು 2ರ)ಒಟ್ಟು		**40.60**	**40.60**			**34.57**		

ಅನುಬಂಧ –1

ಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಭೂಸೇನಾ ನಿಗಮಕ್ಕೆ ಕಳೆದ 3 ವರ್ಷಗಳಲ್ಲಿ ವಹಿಸಲಾದ ಕಾಮಗಾರಿಗಳ ವಿವರಗಳು

(ಲಕ್ಷಗಳಲ್ಲಿ)

ಕ್ರ ಸಂ.	ವಹಿಸಲಾದ ಕಾಮಗಾರಿಗಳ ಹೆಸರು	ತಾಲ್ಲೂಕು	ಅಂದಾಜು ಮೊತ್ತ	ಬಿಡುಗಡೆಯಾದ ಅನುದಾನ	ದಿನಾಂಕ		ಪ್ರಗತಿ		ಷರಾ
					ಪ್ರಾರಂಭ	ಮುಕ್ತಾಯ	ಆರ್ಥಿಕ (ರೂ)	ಭೌತಿಕ	
	2006–07ರಲ್ಲಿ ಯಾವುದೇ ಕಾಮಗಾರಿ ವಹಿಸಿರುವುದಿಲ್ಲ.		0.00	0.00			0.00		
	2007–08								
1	ಸುವರ್ಣಗ್ರಾಮ ಯೋಜನೆ ಎಡೆಹಳ್ಳಿ ಹಂತ–1								
1	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಎಸ್.ಸಿ.ಕಾಲೋನಿಯಿಂದ ಗಣಪತಿ ರಸ್ತೆ	ಸಾಗರ	2.85	2.85	ಸೆಪ್ಟಂಬರ್ –07	ಮಾರ್ಚ್–08	2.85		
2	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ಹೊಸ ನಗರ ರಸ್ತೆಯಿಂದ ರಂಬೂಸಾಬ್ ಮನೆ ಕೆಂಚಾಮರ ರಸ್ತೆ	ಸಾಗರ	7.20	7.20	ಸೆಪ್ಟಂಬರ್ –07	ಮಾರ್ಚ್–08	7.20	ಕಾಮಗಾರಿ ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ	

3	ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ದೇವಸ್ಥಾನದಿಂದ ಕೆಂಚಾಮರ ರಸ್ತೆ ಕ್ರಾಸ್	ಸಾಗರ	4.05	4.05	ಸೆಪ್ಟಂಬರ್ –07	ಮಾರ್ಚ್–08	4.05		
	ಹಂತ–1ರ ಒಟ್ಟು		**14.10**	**14.10**			**14.10**		

ಅನುಬಂಧ –1

ಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಭೂಸೇನಾ ನಿಗಮಕ್ಕೆ ಕಳೆದ 3 ವರ್ಷಗಳಲ್ಲಿ ವಹಿಸಲಾದ ಕಾಮಗಾರಿಗಳ ವಿವರಗಳು

(ಲಕ್ಷಗಳಲ್ಲಿ)

ಕ್ರ ಸಂ.	ವಹಿಸಲಾದ ಕಾಮಗಾರಿಗಳ ಹೆಸರು	ತಾಲ್ಲೂಕು	ಅಂದಾಜು ಮೊತ್ತ	ಬಿಡುಗಡೆಯಾದ ಅನುದಾನ	ದಿನಾಂಕ		ಪ್ರಗತಿ		ಷರಾ
					ಪ್ರಾರಂಭ	ಮುಕ್ತಾಯ	ಆರ್ಥಿಕ (ರೂ)	ಭೌತಿಕ	
	2008–09								
1.	ದುರಸ್ತಿ ಕಾಮಗಾರಿಗಳು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಸಾಗರ ಪಟ್ಟಣ	ಸಾಗರ	0.50	0.50	ಫೆಬ್ರವರಿ–09	ಏಪ್ರಿಲ್–09	0.00		
2	ದುರಸ್ತಿ ಕಾಮಗಾರಿಗಳು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಸಾಗರ	ಸಾಗರ	1.75	1.75	ಫೆಬ್ರವರಿ–09	ಏಪ್ರಿಲ್–09	0.00	ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.	

	ಪಟ್ಟಣ								
3	ದುರಸ್ತಿ ಕಾಮಗಾರಿಗಳು ಮೆಟ್ರಿಕ್ ನಂತರ ಬಾಲಕಿಯರ	ಸಾಗರ	0.75	0.75	ಫೆಬ್ರವರಿ–09	ಏಪ್ರಿಲ್–09	0.00		
4	ನಿಸರ್ಗ ಸಮುದಾಯ ಭವನ ನಿರ್ಮಾಣ, ಹಕ್ಕರೆ	ಸಾಗರ	4.00	4.00	ಫೆಬ್ರವರಿ–09	ಅಕ್ಟೋಬರ್–09	0.00		
5	ರಸ್ತೆ ಅಭಿವೃದ್ಧಿ ಕಾಮಗಾರಿ ಹೊಸಹಳ್ಳಿ, ಹಂಸಗಾರು ಗ್ರಾಮ	ಸಾಗರ	6.00	6.00	ಫೆಬ್ರವರಿ–09	ಅಕ್ಟೋಬರ್–09	0.00		
	2008–09ರಲ್ಲಿ ಒಟ್ಟು		**13.00**	**13.00**			**0.00**		
	ಒಟ್ಟು ಮೊತ್ತ		**96.67**	**96.67**			**71198883.10**		

ಕರ್ನಾಟಕ ವಿಧಾನ ಸಭೆ

176

ಶ್ರೀಸುರೇಶ್‌ಬಾಬು.ಸಿ.ಬಿ (ಚಿಕ್ಕನಾಯಕನಹಳ್ಳಿ)

ಮಾನ್ಯ ಪಶುಸಂಗೋಪನಾ ಸಚಿವರು

(ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪಶು ಆಸ್ಪತ್ರೆ ಮತ್ತು ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಸಿಬ್ಬಂದಿ ವರ್ಗದವರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ?

ಬಂದಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಶುವೈದ್ಯ ಸಂಸ್ಥೆಗಳಿಗೆ ಒಟ್ಟಾರೆ 74 ವಿವಿಧ ವೃದಂದ ಸಿಬ್ಬಂದಿ ಮಂಜೂರಾಗಿದ್ದು, 48 ಹುದ್ದೆಗಳು ಭರ್ತಿಯಾಗಿದೆ ಹಾಗೂ 26 ಹುದ್ದೆಗಳು ಖಾಲಿ ಇರುತ್ತದೆ. ಅವುಗಳ ವೃಂದಾವಾರು ವಿವರ ಈ ಕೆಳಗಿನಂತಿವೆ:

ಹುದ್ದೆಗಳ ವಿವರ	ಮಂಜೂರು	ಭರ್ತಿ	ಖಾಲಿ
ಸಹಾಯಕ ನಿರ್ದೇಶಕರು	2	2	–
ಪಶುವೈದ್ಯಾಧಿಕಾರಿ	10	7	3
ಪಶುವೈದ್ಯಕೀಯ ಮೇಲ್ವಿಚಾರಕರು	1	1	–
ಹಿರಿಯ ಪಶುಪರೀಕ್ಷಕರು	13	7	6
ಪಶುಪರೀಕ್ಷಕರು	5	4	1
ಪಶುವೈದ್ಯಕೀಯ ಸಹಾಯಕರು	11	9	2
ದ್ವಿತೀಯ ದರ್ಜೆ ಸಹಾಯಕರು	1	1	–
ವಾಹನ ಚಾಲಕರು	1	–	1
"ಡಿ" ದರ್ಜೆ ನೌಕರರು	30	17	13
ಒಟ್ಟು	**74**	**48**	**26**

(ಆ) ಹಾಗಿದ್ದಲ್ಲಿ, ಇನ್ನೆಷ್ಟು ದಿನಗಳಲ್ಲಿ ಖಾಲಿಯಿರುವ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ರಾಜ್ಯದಲ್ಲಿ ಖಾಲಿಯಿರುವ ಪಶುವೈದ್ಯಾಧಿಕಾರಿಗಳ 200 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಗೊಂಡಿದೆ. ಅಂತಿಮ ಆಯ್ಕೆ ಪಟ್ಟಿ

ಸ್ವೀಕೃತವಾದ ಕೂಡಲೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತದೆ.

ಅದೇ ರೀತಿ ಖಾಲಿಯಿರುವ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿದ್ದು, ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷರ ಹುದ್ದೆಗಳನ್ನು ಪಶುವೈದ್ಯಕೀಯ ಪರೀಕ್ಷಕರ ಮುಂಬಡ್ತಿಯಿಂದ ಭರ್ತಿ ಮಾಡಲಾಗುವುದು. ಖಾಲಿ ಇರುವ ಎರಡು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಲ್ಲಿ ಒಂದನ್ನು ದಿನಾಂಕ:17-02-2009ರಲ್ಲಿ ಭರ್ತಿ ಮಾಡಿದೆ. ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲಾಗುವುದು.

ಸಂಖ್ಯೆ:ಪಸಂಮೀ 129 ಪಸಸೇ 2009 (ರೇವೂನಾಯಕ್ ಬೇಮಗಿ)
ಪಶುಸಂಗೋಪನಾ ಸಚಿವರು.

ಕರ್ನಾಟಕ ವಿಧಾನ ಸಭೆ

177 ಶ್ರೀ ಸುರೇಶ್‌ಬಾಬು.ಸಿ.ಬಿ (ಚಿಕ್ಕನಾಯಕನಹಳ್ಳಿ)
ಇಂಧನ ಸಚಿವರು.

*****

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕಂದೀಕೆರೆ ಹೋಬಳಿ ಕಾತ್ರಿಕೆಹಾಳ್ ಗ್ರಾಮದಲ್ಲಿ ನೂತನವಾಗಿ ಉಪ ವಿದ್ಯುತ್ ಸ್ಥಾವರ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆಯೇ;

ಈ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಆ) ಮಂಜೂರಾದಂದಿನಿಂದ ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭಿಸಲು ಯಾವಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಇ) ಕಾಮಗಾರಿ ಪ್ರಾರಂಭಿಸಲು ವಿಳಂಬವಾಗುತ್ತಿರುವುದೇಕೆ ಮತ್ತು ಎಂದಿನಿಂದ ಪ್ರಾರಂಭಿಸಲಾಗುವುದು?

ಆ) ಮತ್ತು ಇ)

830.31 ಲಕ್ಷ ರೂ.ಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಉದ್ದೇಶಿತ ಉಪ ಕೇಂದ್ರದ ನಿರ್ಮಾಣಕ್ಕೆ 2 ಎಕರೆ 20 ಗುಂಟೆ ಸರ್ಕಾರಿ

ಜಮೀನನ್ನು ದಿನಾಂಕ 27.11.2006 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ. ಕಾಮಗಾರಿಗಳನ್ನು 200-10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಉದ್ದೇಶಿಸಿದೆ.

ಸಂಖ್ಯೆ: ಇಎನ್ 16 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

178 ಶ್ರೀ ಸಿ.ಬಿ.ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

01. ಚಿಕ್ಕನಾಯಕನಹಳ್ಳಿ ತಾಲ್ಲೂಕು, ಶ್ರೀ ಗ್ರಾಮಾಂತರ ವಿದ್ಯಾಪೀಠ ಶಿಕ್ಷಣ ಸಂಸ್ಥೆ, ಹಂದನಕೆರೆಯ ಆಡಳಿತ ಮಂಡಳಿಗೂ ಹಿಂದಿ ಶಿಕ್ಷಕಿ ಇವರುಗಳಿಗೆ ವಿವಾದವಿರುವುದು ಹಾಗೂ ವಿವಾದವು ನ್ಯಾಯಾಲಯದ ಮೆಟ್ಟಿಲೇರಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ;

ಹೌದು

02. ಈ ವಿದ್ಯಾಸಂಸ್ಥೆಯವರು, ಹಿಂದಿ ಸಹ ಶಿಕ್ಷಕರು ಹುದ್ದೆಗೆ ಬೇರೆ ಒಬ್ಬರನ್ನು ನೇಮಕ ಮಾಡಿಕೊಳ್ಳಲು, ಅನುಮೋದನೆ ಪಡೆಯಲು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ಅನುಮೋದನೆ ನೀಡಲಾಗಿದೆಯೇ;

ಶ್ರೀಮತಿ ಕೆ.ಎಲ್.ಪುಷ್ಪಾವತಿ ಬಿನ್ ಲಿಂಗರಾಜಪ್ಪ-ಹಿಂದಿ ಸಹ ಶಿಕ್ಷಕರು ಇವರನ್ನು ನಿಯಾಮಾನುಸಾರ ನೇಮಕಾತಿ ಮಾಡಿಕೊಂಡು ಪ್ರಸ್ತಾವನೆ ಸಲ್ಲಿಸಿ ಇಲಾಖೆಯಿಂದ ಅನುಮೋದನೆ ಪಡೆದಿರುತ್ತಾರೆ.

03. ವಿವಾದವು ನ್ಯಾಯಾಲಯದಲ್ಲಿರುವುದರಿಂದ, ಇಲಾಖೆಯಿಂದ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ (ಮಾಹಿತಿ ನೀಡುವುದು).

ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವ ಅಭ್ಯರ್ಥಿಯು ಸಾಮಾನ್ಯ ವರ್ಗದ ಅಭ್ಯರ್ಥಿಯಾಗಿದ್ದು, ಇವರ ನೇಮಕಾತಿ ಅನುಮೋದಿಸಲು ನಿಯಮಗಳಲ್ಲಿ ಅವಕಾಶ ಇಲ್ಲದೇ ಇರುವ ಬಗ್ಗೆ ರಿಟ್ ಅರ್ಜಿ ಸಂಖ್ಯೆ:5545/2006ಕ್ಕೆ ಸಂಬಂಧಿಸಿದಂತೆ, ಉಚ್ಚ ನ್ಯಾಯಾಲಯಕ್ಕೆ ಕಂಡಿಕೆವಾರು ಉತ್ತರ ಹಾಗೂ ಕರಡು ಆಕ್ಷೇಪಣಾ ಹೇಳಿಕೆಯನ್ನು ಇಲಾಖೆಯಿಂದ ಸಲ್ಲಿಸಲಾಗಿದೆ. ಈ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಇಡಿ 24 ಎಸ್‌ಇಎಸ್ 2009

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

179 ಶ್ರೀ ಸಿ.ಬಿ.ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ)
ಉತ್ತರಿಸುವ ದಿನಾಂಕ : 25-02-2009
ಉತ್ತರಿಸುವ ಸಚಿವರು : ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ. ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಹೊಸದಾಗಿ ಮಂಜೂರಾಗಿರುವ ಸರ್ಕಾರಿ ಪದವಿ ಪೂರ್ವ ಮತ್ತು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ಮೂಲಭೂತ ಸೌಕರ್ಯಗಳ ಹಾಗೂ ಕಟ್ಟಡಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಹೊಸದಾಗಿ ಯಾವುದೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿರುವುದಿಲ್ಲ.2006-07 ಮತ್ತು 2007-08 ಸಾಲಿನಲ್ಲಿ ಚಿಕ್ಕನಾಯಕನ ಹಳ್ಳಿಯ ಕಾತರಕಿಹಾಳ್, ಬರಗೂರು ಬೆಳಗಲಿ, ಹುಳಿಯಾರ್ ಮತ್ತು ದೊಡ್ಡಣ್ಣಗೆರೆ ಗಳಲ್ಲಿ ಸ.ಪದವಿ ಪೂರ್ವ ಕಾಲೇಜುಗಳು ಮಂಜೂರಾಗಿವೆ. ಉಪನ್ಯಾಸಕರುಗಳ ಹಾಗೂ ಮೂಲಭೂತ ಸೌಕರ್ಯಗಳ ಹಾಗೂ ಕಟ್ಟಡಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ;

ಆ. ಈ ಕೊರತೆಗಳನ್ನು ನೀಗಿಸುವ ದೃಷ್ಟಿಯಿಂದ ಸರ್ಕಾರ ಯೋಜನೆಗಳನ್ನು ಹಾಕಿಕೊಂಡಿದೆಯೇ;

ಪ್ರಶ್ನೆ ಉದ್ಭವಿಸುವುದಿಲ್ಲ.

ಆದರೆ ಪದವಿ ಪೂರ್ವ ಕಾಲೇಜಿಗೆ, ಸಂಬಂಧಿಸಿದಂತೆ ಕಾತರಕಿಹಾಳ್‌ನಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಆರ್.ಐ.ಡಿ.ಎಫ್-13ರಡಿ 3 ಕೊಠಡಿಗಳನ್ನು ಮಂಜೂರು ಮಾಡಲಾಗಿದೆ. ಈ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರ ಹುದ್ದೆ ಖಾಲಿ ಇರುತ್ತದೆ. ತಾತ್ಕಾಲಿಕವಾಗಿ ಕೊರತೆ ನೀಗಿಸಲಾಗಿದೆ.

ಬರಗೂರು, ಬೆಳಗಲಿಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಧ್ಯ ಖಾಸಗಿ ಪ್ರೌಢಶಾಲೆಯಲ್ಲಿ ನಡೆಸಲಾಗುತ್ತಿದೆ. ಈ ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರ ಹುದ್ದೆ ಖಾಲಿ ಇದ್ದು, ಸಧ್ಯಕ್ಕೆ ಅಲ್ಲಿ ಪ್ರಾಂಶುಪಾಲರು ಆ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ.

ಹುಳಿಯಾರ್‌ನಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಧ್ಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆಸಲಾಗುತ್ತಿದೆ. ಈ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರ

ಹುದ್ದೆ ಖಾಲಿ ಇರುತ್ತದೆ. ತಾತ್ಕಾಲಿಕವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ಕೊರತೆ ನೀಗಿಸಲಾಗಿದೆ.

ದೊಡ್ಡಣ್ಣಗೆರೆಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಧ್ಯ ಸರ್ಕಾರಿ ಪ್ರೌಡ ಶಾಲೆಯಲ್ಲಿ ನಡೆಸಲಾಗುತತಿದೆ. ಈ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರ ಹುದ್ದೆ ಖಾಲಿ ಇರುತ್ತದೆ. ತಾತ್ಕಾಲಿಕವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ಕೊರತೆ ನೀಗಿಸಲಾಗಿದೆ. ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯು ಕೆ.ಪಿ.ಎಸ್..ಸಿ ಯಲ್ಲಿ ನಡೆಯುತ್ತಿದ್ದು, ಆಯ್ಕೆ ಪ್ರಕ್ರಿಯೆ ಮುಗಿದ ಕೂಡಲೇ ಕೊರತೆ ಇರುವ ಕಡೆ ಉಪನ್ಯಾಸಕರುಗಳನ್ನು ಭರ್ತಿ ಮಾಡಲಾಗುವುದು.

ಮೇಲ್ಕಂಡ ಬರಗೂರುಬೆಳಗಲಿ, ಹುಳಿಯಾರ ಮತ್ತು ದೊಡ್ಡಣ್ಣಗೆರೆ ಪದವಿ ಪೂರ್ವ ಕಾಲೇಜುಗಳಿಗೆ ನಿವೇಶನದ ಕೊರತೆಯಿಂದಾಗಿ ಕಟ್ಟಡವನ್ನು ಒದಗಿಸಲು ತೊಂದರೆಯಾಗಿರುತ್ತದೆ.

ಇ. ಮುಂದಿನ ಎಷ್ಟು ದಿನದೊಳಗೆ ಈ ಕೊರತೆಗಳನ್ನು ಸರಿಪಡಿಸಲಾಗುವುದು?

ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿವೇಶನಗಳು ಲಭ್ಯವಾದ ಕೂಡಲೇ ಮುಂದಿನ ವರ್ಷಗಳಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಯೋಜನೆಗಳನ್ನು ಹಾಕಿ ಕೊಳ್ಳಲಾಗುವುದು.

ಇಡಿ : 42 : ಯೋಸಕ 2009 **ಉನ್ನತ ಶಿಕ್ಷಣ ಸಚಿವರು**

ಕರ್ನಾಟಕ ವಿಧಾನ ಸಭೆ

180 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ [ಗೌರಿಬಿದನೂರು]

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ. ಗೌರಿಬಿದನೂರು ತಾಲ್ಲೂಕಿನಲ್ಲಿರುವ ಸರ್ಕಾರಿ ಹಿರಿಯ, ಕಿರಿಯ, ಪ್ರೌಢಶಾಲೆಗಳ ಸಂಖ್ಯೆ ಎಷ್ಟು; ಈ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಗೌರಿಬಿದನೂರು ತಾಲ್ಲೂಕಿನಲ್ಲಿ

ಕ್ರಸ	ಶಾಲಾ ಹಂತ	ಶಾಲೆಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
1	ಸರ್ಕಾರಿ ಕಿರಿಯ ಪ್ರಾ.ಶಾಲೆ	202	36438
2	ಸರ್ಕಾರಿ ಹಿರಿಯ ಪ್ರಾ.ಶಾಲೆ	109	

3	ಸ.ಪ್ರೌಢಶಾಲೆ	21	

ಆ. ಗೌರಿಬಿದನೂರು ತಾಲ್ಲೂಕಿನಲ್ಲಿ ಸರ್ಕಾರಿ ಕಿರಿಯ, ಹಿರಿಯ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದರೂ ಸಹ ಇವರುಗಳಿಗೆ ಸರಿಯಾದ ಕೊಠಡಿಯ ಸೌಕರ್ಯವು ಇಲ್ಲದೇ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ ಕೆಳಕಂಡ ಶಾಲೆಗಳಿಗೆ ಕೊಠಡಿಗಳ ಕೊರತೆ ಇರುತ್ತದೆ.

ಸ.ಪ್ರೌ.ಶಾಲೆ ಆಲೀಪುರ	6 ಕೊಠಡಿಗಳು.
ಸ.ಪ್ರೌ.ಶಾಲೆ ವಾಟದ ಹೊಸಹಳ್ಳಿ	6 ಕೊಠಡಿಗಳು
ಸ.ಪ್ರೌ.ಶಾಲೆ ಹುದುಗೂರು	4 ಕೊಠಡಿಗಳು
ಸ.ಪ್ರೌ.ಶಾಲೆ ರಮಾಪುರ	3 ಕೋಠಡಿಗಳು.

ಇ. ಹಾಗಿದ್ದರೆ, ಇದರ ನಿವಾರಣೆಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು; 2006-07, 2007-08, ಮತ್ತು 2008-09 ರಲ್ಲಿ ಈ ಶಾಲೆಗಳ ಅಭಿವೃದ್ಧಿಗೆ ಸರ್ಕಾರವು ಬಿಡುಗಡೆ ಮಾಡಲಾದ ಅನುದಾನವೆಷ್ಟು;

ಸ.ಪ್ರೌ.ಶಾಲೆ ವಾಟದ ಹೊಸಹಳ್ಳಿ, ಇಲ್ಲಿಗೆ ಆರ್.ಐ.ಡಿ.ಎಫ್-14ರಡಿ 18.70ಲಕ್ಷರೂಗಳ ವೆಚ್ಚದಲ್ಲಿ 4 ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಪ್ರಸ್ತಾಪಿಸಿದ್ದು, ನಬಾರ್ಡ್‌ನ ಅನುಮೋದನೆ ದೊರೆತ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಮುಂದಿನ ವರ್ಷಗಳಲ್ಲಿ ಉಳಿದ ಶಾಲೆಗಳಿಗೆ ಅನುದಾನದ ಲಭ್ಯತೆಯನ್ನು ಆಧರಿಸಿ ಕೊಠಡಿಗಳನ್ನು ನಿರ್ಮಿಸಲಾಗುವುದು.

ಈ. ಈ ಶಾಲೆಗಳ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ತುಂಬಲು ಸರ್ಕಾರವು ಕೈ ಗೊಳ್ಳುವ ಕ್ರಮವೇನು?

ಶಿಕ್ಷಕರ ಕೊರತೆ ಇರುವುದಿಲ್ಲ.

ಇಡಿ:52:ಯೋಸಕ 2009 ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

183 ಶ್ರೀ ವೆಂಕಟಶಿವಾರೆಡ್ಡಿ ಜಿ.ಕೆ. (ಶ್ರೀನಿವಾಸಪುರ)
ಇಂಧನ ಸಚಿವರು.

****

ಅ). ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತಕ್ಷೇತ್ರ ಹೋಳೂರು ಹೋಬಳಿಯಲ್ಲಿ 66 ಕೆ.ವಿ.ವಿದ್ಯುತ್ ಘಟಕ ಹೊಸದಾಗಿ ಸ್ಥಾಪಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ). ರೋಣೂರು, ರಾಯಲ್ಪಾಡ್ ಹೋಬಳಿಗೆ 66 ಕೆ.ವಿ. ವಿದ್ಯುತ್ ಘಟಕ ಸ್ಥಾಪನೆ ಸರ್ಕಾರದ ಗಮನದಲ್ಲಿ ಇದೆಯೇ?

ಇಲ್ಲ.

ಇ) ರೋಣೂರು ಮತ್ತು ರಾಯಲ್ಪಾಡ್ ಹೋಬಳಿಯ ಆಂಧ್ರಪ್ರದೇಶದ ಗಡಿ ಭಾಗದ ಮತ್ತು ಹಿಂದುಳಿದ ಪ್ರದೇಶವಾದುದರಿಂದ ಇಲ್ಲಿಯ ರೈತರಿಗೆ ವಿದ್ಯುತ್ ಪೂರೈಕೆಯಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಶ್ರೀನಿವಾಸಪುರ ತಾಲ್ಲೂಕಿನ ಕಸಬಾ ಹೋಬಳಿಗೆ ಸೇರಿರುವ ಸುತ್ತಮುತ್ತಲಿನ ಹಳ್ಳಿಗೆ ವಿದ್ಯುತ್ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ವಿದ್ಯುತ್ ಲಭ್ಯತೆಯನ್ನು ಆಧರಿಸಿ ಮತ್ತು ಸರ್ಕಾರದ ಆದೇಶದ ಪ್ರಕಾರ ಗ್ರಾಮೀಣ ಭಾಗಗಳಿಗೆ ಪ್ರಸ್ತುತ 6 ಗಂಟೆಗಳ ಕಾಲ 3 ಪೇಸ್ ವಿದ್ಯುತ್ ಹಾಗೂ 6 ಗಂಟೆಗಳ ಕಾಲ ಸಿಂಗಲ್ ಪೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ವಿದ್ಯುತ್ ಕೊರತೆಯ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿದೆ. ನೀರಾವರಿ ಪಂಪುಸೆಟ್ಟುಗಳನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ಹಳ್ಳಿಗಳಿಗೆ 24 ಗಂಟೆಗಳ ಕಾಲ ಸತತ ವಿದ್ಯುತ್ ಪೂರೈಸಲು ರಾಜ್ಯ ಸರ್ಕಾರವು 'ನಿರಂತರ ಜ್ಯೋತಿ' ಯೋಜನೆಯನ್ನು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಮಾಸ್ತಿಯಲ್ಲಿ ಜಾರಿಗೆ ತಂದಿದೆ. ಅದರಂತೆ ಮುಂಬರುವ ವರ್ಷಗಳಲ್ಲಿ ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ನಿರಂತರ ಜ್ಯೋತಿ ಯೋಜನೆಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರವು ಉದ್ದೇಶಿಸಿದೆ.

ಉ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ವಿದ್ಯುತ್ ಅಭಾವ ನೀಗುವ ಸಲುವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕರ್ನಾಟಕ ಸರ್ಕಾರವು ದಿನಾಂಕ 17-12-2008 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್

11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.

2. ಕರ್ನಾಟಕ ಸರ್ಕಾರವು ದಿನಾಂಕ 30-12-2008 ರಂದು ಆದೇಶ ಹೊರಡಿಸಿ ಎಲ್ಲಾ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ವಿದ್ಯುತ್‌ನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.

3. ಇದರ ಜೊತೆಗೆ ರಾಜ್ಯವು ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ ಮುಖಾಂತರ ಮತ್ತು ಹೊರ ರಾಜ್ಯವಾದ ಛತ್ತೀಸ್‌ಗಢ್ ದಿಂದ ವಿದ್ಯುತ್ತನ್ನು ಪಡೆಯುತ್ತಿದೆ.

ಈ ರೀತಿಯಾಗಿ ಹೆಚ್ಚುವರಿ ವಿದ್ಯುತ್ತಿಗೆ ನವೆಂಬರ್-2008 ರಿಂದ ಜನವರಿ-2009 ರವರೆಗೆ 1008 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಕರ್ನಾಟಕ ಸರ್ಕಾರವು 350 ಕೋಟಿ ರೂ.ಗಳನ್ನು ನೀಡಿದ್ದು, ಮಿಕ್ಕ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸುತ್ತವೆ.

ಸಂಖ್ಯೆ: ಇಎನ್ 17 ಪಿಪಿಎಂ 2009 (ಕೆ.ಎಸ್.ಈಶ್ವರಪ್ಪ)

ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

184 ಶ್ರೀ ವೆಂಕಟಶಿವಾರೆಡ್ಡಿ ಜಿ.ಕೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ). ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತಕ್ಷೇತ್ರದಲ್ಲಿ ಸರ್ಕಾರಿ ಜೂನಿಯರ್ ಕಾಲೇಜುಗಳ ಸಂಖ್ಯೆ ಎಷ್ಟು (ವಿವರ ನೀಡುವುದು).

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರದಲ್ಲಿ 07 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇವೆ. ಕಾಲೇಜಿನ ವಿವರಗಳು ಕೆಳಕಂಡಂತಿವೆ.

1) ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಶ್ರೀನಿವಾಸಪುರ.
2) ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಶ್ರೀನಿವಾಸಪುರ.
3) ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಯಲಪಾಡು.
4) ಸರ್ಕಾರಿ ಪದವಿ ಪೂರ್ವ ಕಾಲೇಜು, ದಳಸನೂರು.
5) ಸರ್ಕಾರಿ ಪದವಿ ಪೂರ್ವ ಕಾಲೇಜು, ಗೋಣಿಪಲ್ಲಿ.
6) ಸರ್ಕಾರಿ ಪದವಿ ಪೂರ್ವ ಕಾಲೇಜು, ಸೋಮಯಾಜಲಹಳ್ಳಿ.
7) ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾದನಹಳ್ಳಿ ಕ್ರಾಸ್.

ಆ) ಈ ವರ್ಷ ಹೊಸದಾಗಿ, ಜೂನಿಯರ್ ಕಾಲೇಜನ್ನು ಸ್ಥಾಪಿಸುವ, ಆಲೋಚನೆ ಸರ್ಕಾರಕ್ಕೆ ಇದೆಯೇ.

ಇ) ಹಾಗಿದ್ದಲ್ಲಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಯಲ್ಲೂರು, ರೋಣೂರುನಲ್ಲಿ ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರ ತೀರ್ಮಾನ ಕೈಗೊಂಡಿದೆಯೇ.

ಈ) ಯಲ್ಲೂರು ಮತ್ತು ರೋಣೂರುಗಳ ಸುತ್ತಮುತ್ತ ಹೈಸ್ಕೂಲ್ ಹೆಚ್ಚಾಗಿರುವುದರಿಂದ ಹಿಂದುಳಿದ ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇವರ ಅನುಕೂಲಕ್ಕಾಗಿ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ?

ಸ್ಥಳೀಯ ಶೈಕ್ಷಣಿಕ ಅಗತ್ಯತೆ ಮತ್ತು ಸಂಪನ್ಮೂಲದ ಲಭ್ಯತೆಯ ಆಧಾರದ ಮೇಲೆ ನಿರ್ಣಯ ಕೈಗೊಳ್ಳಲಾಗುವುದು.

ಸಂಖ್ಯೆ:ಇಡಿ 16 ಎಸ್‌ಹೆಚ್‌ಹೆಚ್ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

185 ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು

ಅ. ಕೇಂದ್ರ ಸರ್ಕಾರದಿಂದ 12ನೇ ಹಣಕಾಸಿನ ಯೋಜನೆಗೆ 2008-09ನೇ ಸಾಲಿನಲ್ಲಿ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಣ ಎಷ್ಟು;

ಕೇಂದ್ರ ಸರ್ಕಾರದಿಂದ 12ನೇ ಹಣಕಾಸಿನ ಯೋಜನೆಯಡಿ 2008-09ನೇ ಸಾಲಿನಲ್ಲಿ ರಾಜ್ಯಕ್ಕೆ ಮೊದಲ ಕಂತಾಗಿ ರೂ. 8880.00 ಲಕ್ಷಗಳು ಬಿಡುಬಡೆಯಾಗಿರುತ್ತದೆ.

ಆ. ಈ ಹಣ ಖರ್ಚು ಮಾಡಲು ಕೇಂದ್ರ ಸರ್ಕಾರದ ಮಾರ್ಗಸೂಚಿಗಳೇನು;

ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ. ಸ್ಥಳೀಯ ಸಂಸ್ಥೆಗಳಿಗೆ ಈ ಹಣವನ್ನು ಸಮಾನಾಂತರವಾಗಿ ಹಂಚಲಾಗಿದೆಯೆ?

ಜನಸಂಖ್ಯೆ ಆಧಾರದ ಮೇರೆಗೆ ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಸಮಾನಾಂತರವಾಗಿ ಹಂಚಿಕೆ ಮಾಡಲಾಗುತ್ತದೆ.

ಸಂಖ್ಯೆ : ಗ್ರಾಅಪ:19:ಗ್ರಾಪಸ:2009

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಅನುಬಂಧ-1

12ನೇ ಹಣಕಾಸು ಆಯೋಗದ ಅನುದಾನ ಬಳಕೆಯ ಮಾರ್ಗಸೂಚಿಗಳು

12ನೇ ಹಣಕಾಸು ಆಯೋಗವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಾಗರಿಕ ಸೌಲಭ್ಯ ಕಾರ್ಯಕ್ರಮಗಳಿಗಾಗಿ ನಿಗದಿ ಮಾಡಿರುವ ಅನುದಾನವನ್ನು 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳು ತಲಾ ಶೇಕಡಾ 70:20:10 ರಂತೆ ಕ್ರಮವಾಗಿ ಪಡೆಯುತ್ತವೆ.

ರಾಜ್ಯವು ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳಿಗೆ ಪೂರಕವಾಗಿ 2005-06 ರಿಂದ 2009-10 ರವರೆಗಿನ ಐದು ವರ್ಷಗಳ ಅವಧಿಗೆ ನಿಗದಿಯಾಗಿರುವ ಅನುದಾನವನ್ನು ವಿವಿಧ ಕಾರ್ಯಕ್ರಮಗಳಿಗೆ ಈ ಕೆಳಕಂಡ ಮಾರ್ಗಸೂಚಿಯನ್ವಯ ಉಪಯೋಗಿಸತಕ್ಕದ್ದು:

<u>ಗ್ರಾಮ ಪಂಚಾಯಿತಿ:</u>

1) ನೀರು ಸರಬರಾಜು ಯೋಜನೆಗಳಡಿ ದುರಸ್ತಿ, ಆಧುನಿಕರಣ ಹಾಗೂ ನಿರ್ವಹಣೆ
2) ನೈರ್ಮಲ್ಯ ಕಾರ್ಯಕ್ರಮಗಳಾದ ಒಳಚರಂಡಿ ಹಾಗೂ ಪಾದಚಾರಿ ರಸ್ತೆಗಳು,
3) ನೀರು ಸರಬರಾಜು ಯೋಜನೆ, ಅಂತರ್ಜಲ ವೃದ್ಧಿ ಹಾಗೂ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆ
4) ಬಡ ಕುಟುಂಬಗಳಿಗೆ ಮಳೆನೀರು ಕೊಯ್ಲು ಪದ್ಧತಿಯನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳುವುದು
5) ಊರಿಗೊಂದು ಕೆರೆ ಊರಿಗೊಂದು ವನ ನಿರ್ಮಾಣ
6) ಗ್ರಾಮ ಪಂಚಾಯಿತಿಗಳ ಗಣಕೀಕರಣ, ಡಾಟಾಬೇಸ್ ಹಾಗೂ ಲೆಕ್ಕಪತ್ರ ನಿರ್ವಹಣೆ ಮತ್ತು ಸೃಜನೆ
7) ಗ್ರಾಮ ಪಂಚಾಯತಿಗಳ ಕಟ್ಟಡಗಳು

<u>ತಾಲ್ಲೂಕು ಪಂಚಾಯಿತಿ</u>

1) ಗ್ರಾಮೀಣ ಮಾರುಕಟ್ಟೆ ಮೂಲಭೂತ ಸೌಲಭ್ಯಗಳನ್ನು ಸೃಜಿಸುವುದು, ಅಭಿವೃದ್ಧಿಪಡಿಸುವುದು.
2) ಕೃಷಿ ಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿ ಹಾಗೂ ನಿರ್ವಹಣೆ
3) ವಾರದ ಮಾರುಕಟ್ಟೆಸಂತೆ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆ

4) ಸರ್ಕಾರಿ ಪ್ರೌಢ/ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಡೆಸ್ಕ್, ಕ್ರೀಡಾ ಸಾಮಗ್ರಿಗಳನ್ನು ಒಳಗೊಂಡಂತೆ ಸಲಕರಣೆ ಹಾಗೂ ಸಾಮಗ್ರಿಗಳ ಸರಬರಾಜು, ಪ್ರಯೋಗ ಶಾಲೆ ಸಾಮಗ್ರಿಗಳು ಹಾಗೂ ವಿತರಣೆ

5) ಅಂಗನವಾಡಿ ಕಟ್ಟಡಗಳು

6) ತಾಲ್ಲೂಕು ಪಂಚಾಯಿತಿಗಳ ಗಣಕೀಕರಣ, ಡಾಟಾಬೇಸ್ ಹಾಗೂ ಲೆಕ್ಕ ಪತ್ರ ನಿರ್ವಹಣೆ ಮತ್ತು ಸೃಜನೆ.

ಜಿಲ್ಲಾ ಪಂಚಾಯತ್

1) ಜಿಲ್ಲಾ ಪಂಚಾಯತಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವ ಕಡೆಗಳಲ್ಲಿ ಜಿಲ್ಲಾ ಪಂಚಾಯತ್ ಕಚೇರಿ ಕಟ್ಟಡಗಳ ನಿರ್ಮಾಣ ಹಾಗೂ ಪೀಠೋಪಕರಣ,

2) ಅಸಾಂಪ್ರದಾಯಕ ಇಂಧನ ಮೂಲಗಳಾದ ಸೌರ ಫಲಕಗಳು, ಗಾಳಿ ಗಿರಮಿಗಳು ಮತ್ತು ಗೋಬರ್ ಬೈಯೋಮಾಸ್ ಸ್ಥಾವರಗಳನ್ನು ಪ್ರೋತ್ಸಾಯಿಸುವುದು,

3) ಆಹಾರ ಸಂಸ್ಕರಣ ಘಟಕಗಳ ಗುರುತಿಸುವಿಕೆ ಹಾಗೂ ಅಭಿವೃದ್ಧಿ

4) ಗ್ರಾಮೀಣ ಪ್ರದೇಶಗಳಲ್ಲಿ ತಯಾರಿಸಲಾದ ಗ್ರಾಮೀಣ ವಸ್ತುಗಳಿಗಾಗಿ ಪ್ರದರ್ಶನ ಮಳಿಗೆ, ಮಾರುಕಟ್ಟೆ ಸಂಕೀರ್ಣಗಳನ್ನು ಗುರುತಿಸುವುದು ಹಾಗೂ ಆಯೋಜಿಸುವುದು,

5) ಜಿಲ್ಲಾ ಪಂಚಾಯಿತಿಗಳ ಗಣಕೀಕರಣ, ಡಾಟಾಬೇಸ್ ಹಾಗೂ ಲೆಕ್ಕ ಪತ್ರ ನಿರ್ವಹಣೆ ಮತ್ತು ಸೃಜನೆ.

6) ಗ್ರಾಮೀಣ ಕ್ರೀಡಾಂಗಣ.

7) ಬಯಲು ರಂಗಮಂದಿರ.

ಕರ್ನಾಟಕ ವಿಧಾನ ಸಭೆ

186 ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)

ಅ. ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಮಳೆ ನೀರು ಕೊಯ್ಲು ಕಾರ್ಯಕ್ರಮದಲ್ಲಿ ಹಣ ಮಂಜೂರಾಗಿರುವುದು ನಿಜವೇ;

ನಿಜ

ಆ. ಕೋಲಾರ ಜಿಲ್ಲೆಯಿಂದ ಇತ್ತಿಚೆಗೆ ಚಿಕ್ಕಬಳ್ಳಾಪುರ ಜಿಲ್ಲೆ ವಿಂಗಡಣೆಯಾಗಿದ್ದು, ಈ ಜಿಲ್ಲೆಯಲ್ಲಿಯೂ ಸಹ ತೀವ್ರ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ. ಹಾಗಿದ್ದಲ್ಲಿ, ಈ ಕಾರ್ಯಕ್ರಮ ಚಿಕ್ಕಬಳ್ಳಾಪುರ ಜಿಲ್ಲೆಗೆ ವಿಸ್ತರಿಸಲಾಗುವುದೇ?

ಚಿಕ್ಕಬಳ್ಳಾಪುರ ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮಳೆ ನೀರಿನ ಕೊಯ್ಲು ಕಾರ್ಯಕ್ರಮ ಅನುಷ್ಠಾನದಲ್ಲಿದೆ.

ಸಂ:ಗ್ರಾಅಪ 19 ಗ್ರಾನೀಸ(1)09 **(ಶೋಭಾ ಕರಂದ್ಲಾಜೆ)**

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಕರ್ನಾಟಕ ವಿಧಾನ ಸಭೆ

210 ಶ್ರೀ ವಿಶ್ವನಾಥ ಎಸ್.ಆರ್.

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ಮಂಜೂರಾಗಿರುವ ಪ್ರೌಢ ಶಾಲೆಗಳೆಷ್ಟು ಹಾಗೂ ಪದವಿ ಪೂರ್ವ ಕಾಳೇಜುಗಳು ಎಷ್ಟು ಹಾಗೂ ಎಲ್ಲೆಲ್ಲಿ ಮಂಜೂರಾಗಿವೆ;

2008-09ನೇ ಸಾಲಿನಲ್ಲಿ ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ.

ಆ) ಯಲಹಂಕ ಹಳೆ ಬಸ್ ನಿಲ್ದಾಣದ ಪಕ್ಕದ ಸರ್ಕಾರಿ ಪ್ರಾಥಮಿಕ ಪಾಠ ಶಾಲೆಯನ್ನು ಸ್ಥಳಾಂತರಿಸಿ ಶಾಲೆಯ ಜಾಗವನ್ನು ಬಸ್ ಸ್ಟ್ಯಾಂಡ್ ಕಟ್ಟಲು ಬಿಟ್ಟು ಕೊಡುವ ವಿಚಾರ ಯಾವ ಹಂತದಲ್ಲಿದೆ;

ಈ ಶಾಲೆ ನಡೆಸಲು ಸೂಕ್ತ ಸ್ಥಳಾವಕಾಶ ದೊರೆತ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಇ) ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?

ಶಾಲೆಯನ್ನು ನಡೆಸಲು ಸೂಕ್ತ ಸ್ಥಳಾವಕಾಶ ಲಭ್ಯವಾದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಇಡಿ 65 ಎಂಸಿಡಿ 2009 **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

ಕರ್ನಾಟಕ ವಿಧಾನ ಸಭೆ

278 ಶ್ರೀ ಸಂಪಂಗಿ ಎನ್.

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಶ್ರೀ ತಿರುಪತಿ-ತಿರುಮಲ ದೇವಸ್ಥಾನಕ್ಕೆ ರಾಜ್ಯ ಸರ್ಕಾರವು ಮಹಾರಾಜರ ಕಾಲದಲ್ಲಿ ಒದಗಿಸಿರುವಂತಹ ಆಭರಣ, ವಜ್ರ, ವೈಡೂರ್ಯಗಳು ಎಷ್ಟು; ವಿವರ ಒದಗಿಸುವುದು; ಇದರ ಅಂದಾಜು ಮೊತ್ತವೇನು;

ಕರ್ನಾಟಕ ಸರ್ಕಾರದಿಂದ ಮಹಾರಾಜರ ಕಾಲದಲ್ಲಿ ಒದಗಿಸಿರುವ ಆಭರಣಗಳು ಹಾಗೂ ಪೂಜಾ ಕೈಂಕರ್ಯದ ವಸ್ತುಗಳು ಈ ಕೆಳಕಂಡಂತಿವೆ.

ಕ್ರ.ಸಂ.	ಆಭರಣಗಳ ವಿವರಣೆ	ಸಂಖ್ಯೆ	ತೂಕ
1	ಚಿನ್ನದ ಛತ್ರಿ (ಕೊಡೆ) ಜೊತೆ ಬೆಳ್ಳಿಯ ತಟ್ಟೆ	01	401 ತೊಲ ಬಂಗಾರ ಮತ್ತು 517 ತೊಲ ಬೆಳ್ಳಿ
2	ಪ್ಲಾಟಿನಂ ಕಂಠೀಹಾರ	01	23–03–0 ತೊಲ
3	ಪದ್ಮಾವತಿ ದೇವಿಗೆ ಚಿನ್ನದ ಕಂಠೀಹಾರ	01	02–09–15 ತೊಲ
4	ಬೆಳ್ಳಿಯ ಸಿದ್ಧಿ	01	113–08–0 ತೊಲ
5	ಬೆಳ್ಳಿಯ ದೀವಟಿಗೆ	02	64–12–0 ತೊಲ
6	ಬೆಳ್ಳಿಯ ಗಂಗಳ	01	107–4–0 ತೊಲ
7	ಬೆಳ್ಳಿಯ ಚೆಂಬು	02	180–4–0 ತೊಲ
8	ದಂತ ಪಲ್ಲಕ್ಕಿ (ಚಿನ್ನ)	01	13–14–6 ತೊಲ
9	ಬೆಳ್ಳಿಯ ಗಜ ವಾಹನ	01	294 ಸೀರ್ಸ್ ಬೆಳ್ಳಿ ಮತ್ತು 1 ಸೀರ್ಸ್ ಚಿನ್ನ
10	ಸರ್ವ ಭೂಪಾಲ ವಾಹನ	01	7–0–6 ತೊಲ ಬೆಳ್ಳಿ
11	ಚಿನ್ನದ ಲಕ್ಷ್ಮೀಹಾರ	01	389–0–0 ತೊಲ
12	ಬೆಳ್ಳಿಯ ಅಖಂಡ	01	1889–9–0 ತೊಲ
13	ಬೆಳ್ಳಿಯ ಆರತಿ ತಟ್ಟೆ	01	73–9–0 ತೊಲ
14	ಬೆಳ್ಳಿಯ ನಕ್ಷತ್ರ ತಟ್ಟೆ	01	191–8–0 ತೊಲ
15	ಬೆಳ್ಳಿಯ ನವನೀತ ತಟ್ಟೆ	01	86–12– ತೊಲ
16	ಬೆಳ್ಳಿಯ ನವನೀತ ಆರತಿ ಕಪ್	01	10–8–0 ತೊಲ
17	ಚಿನ್ನದ ಸಾಲಿಗ್ರಾಮ ಹಾರ	01	488 1/4 ತೊಲ ಬಂಗಾರ

18	ಬೆಳ್ಳಿಯ ತಟ್ಟೆ	01	73 1/4 ತೊಲ
19	ಬೆಳ್ಳಿಯ ತಟ್ಟೆ	01	124 ತೊಲ
20	ಬೆಳ್ಳಿಯ ಮೊಹಜರ್ಾಲ	04	
21	ಮಕರ ಕಂಠೀಹಾರ (ಗಂಡುಬೇರುಂಡ)		
22	ವಜ್ರ ಮತ್ತು ಕೆಂಪು ಮಕರ ಕಂಠೀಹಾರ		
23	ವೈಜಯಂತಿ ಮಾಲೆ		
24	ಸೂರ್ಯಪ್ರಭ ವಾಹನ		
25	ಚಂದ್ರಪ್ರಭ ವಾಹನ		
26	ಬೆಳ್ಳಿಯ ಗರುಡ ವಾಹನ		

ಮೇಲ್ಕಂಡ ಆಭರಣ ಹಾಗೂ ಪೂಜಾ ಕೈಂಕರ್ಯದ ವಸ್ತುಗಳ ಅಂದಾಜು ಮೊತ್ತವನ್ನು ನಿರ್ಧರಿಸಿರುವುದಿಲ್ಲ.

ಆ) ಶ್ರೀ ತಿರುಪತಿ-ತಿರುಮಲ ದೇವಸ್ಥಾನದಲ್ಲಿ ಕರ್ನಾಟಕ ವ್ಯಾಪ್ತಿಯಲ್ಲಿರುವಂತಹ ಆಸ್ತಿಯ ವಿವರ ಒದಗಿಸುವುದು;

ತಿರುಮಲದಲ್ಲಿನ ಟೌನ್ ಸರ್ವೆ 2 ಬಿ ವಾರ್ಡ್ ನಂ. 4 ಬ್ಲಾಕ್-ಬಿ ಆರ್.ಎಸ್.ನಂಬರ್ 592/ಭಾಗ, 636-4, 637/1, 637/2, 637/3, 637/4 ರಲ್ಲಿ ಕರ್ನಾಟಕ ಸರ್ಕಾರದ ವಶದಲ್ಲಿ ಒಟ್ಟು 7.05 ಎಕರೆ ಜಮೀನು ಇರುತ್ತದೆ.

ತಿರುಪತಿಯಲ್ಲಿ ಸರ್ವೆ ನಂಬರ್ 4253 ಹಾಘೂ 4254 ರಲ್ಲಿನ ರವಿನ್ಯೂ ವಾರ್ಡ್ ಸಂಖ್ಯೆ 11 ರಲ್ಲಿ 46.5 ಸೆಂಟ್ಸ್ ವಿಸ್ತೀರ್ಣದ ಸ್ವಂತ ಸ್ಥಳವನ್ನು ಹೊಂದಿರುತ್ತದೆ.

ತಿರುಚಾನೂರಿನಲ್ಲಿ 16.25 ಸೆಂಟ್ಸ್ ವಿಸ್ತೀರ್ಣದ ಜಮೀನು ಇರುತ್ತದೆ.

ಇ) ಶ್ರೀ ಕೇತ್ರಕ್ಕೆ ರಾಜ್ಯ ಸರ್ಕಾರದಿಂದ ಒದಗಿಸುತ್ತಿರುವಂತಹ ಸೌಕರ್ಯಗಳೇನು; ವರ್ಷವಾರು ವಿವರ ಹಾಗೂ ಅಂದಾಜು ವೆಚ್ಚ ಎಷ್ಟು;

ಶ್ರೀ ಕ್ಷೇತ್ರಕ್ಕೆ ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ರೂ.3.00 ಲಕ್ಷ ಅನುದಾನವನ್ನು ಒದಗಿಸುತ್ತಿದ್ದು, ಸದರಿ ಅನುದಾನದಿಂದ ತಿರುಮಲದ ಶ್ರೀ ವೆಂಕಟೇಶ್ವರಸ್ವಾಮಿಯವರಿಗೆ ಪೂಜಾ ಸಾಮಗ್ರಿ ಹಾಗೂ ನೈವೇದ್ಯಾಕ್ಕಾಗಿ ಪಡಿತರ ಸಾಮಾಗ್ರಿಗಳನ್ನು ಒದಗಿಸಲು ಬಳಸಲಾಗುತ್ತಿದೆ.

ಈ) ಶ್ರೀ ಕ್ಷೇತ್ರಕ್ಕೆ ರಾಜ್ಯ ಸರ್ಕಾರದ ವತಿಯಿಂದ ಭಕ್ತಾದಿಗಳಿಗೆ, ಯಾತ್ರಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳು ಯಾವುವು (ವಿವರ ಒದಗಿಸುವುದು)?

ರಾಜ್ಯ ಸರ್ಕಾರದ ವತಿಯಿಂದ ಭಕ್ತಾದಿಗಳಿಗೆ ಪ್ರಮುಖವಾಗಿ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ವಸತಿ ಸೌಲಭ್ಯಕ್ಕಾಗಿ ರಾಜ್ಯ ಛತ್ರದಲ್ಲಿ ಕರ್ನಾಟಕ ಪ್ರವಾಸಿ ಸೌಧದಲ್ಲಿ 86 ಕೊಠಡಿಗಳು, 50 ಕೊಠಡಿಗಳನ್ನೊಳಗೊಂಡ 17 ಕುಠೀರಗಳು, 08 ಕೊಠಡಿಗಳನ್ನು ಒಳಗೊಂಡ ಅತಿಥಿಗೃಹ ಹಾಗೂ 24 ಕೊಠಡಿಗಳನ್ನು ಒಳಗೊಂಡ ಕರ್ನಾಟಕ ಕಲ್ಯಾಣ ಮಂಟಪವಿದ್ದು, ಎಲ್ಲಾ ಕೊಠಡಿಗಳನ್ನು ಯಾತ್ರಿಕರಿಗೆ ಹಂಚಿಕೆ ಮಾಡಲಾಗುತ್ತಿದೆ. ಅಲ್ಲದೆ 01 ಕಲ್ಯಾಣ ಮಂಟಪವಿದ್ದು, ಮದುವೆ ಹಾಗೂ ಇತರೆ ಶುಭ ಸಮಾರಂಭಗಳಿಗೆ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಒದಗಿಸಲಾಗುತ್ತಿದೆ.

ಸಂಖ್ಯೆ:ಕಂಇ 20 ಮುಸಪ್ರ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

280 ಶ್ರೀ.ಸಂಪಂಗಿ.ಎನ್.(ಬಾಗೇಪಲ್ಲಿ)

ಅ) ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದ ಅನುದಾನವೆಷ್ಟು; ರಾಜ್ಯ ಸರ್ಕಾರದಿಂದ ಯೋಜನೆಗೆ ನೀಡಿದ ಅನುದಾನವೆಷ್ಟು; ಕಳೆದ 2 ವರ್ಷಗಳಲ್ಲಿ ಈ ಯೋಜನೆಗೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ನೀಡಿದ ಮೊತ್ತವೆಷ್ಟು;

ಕೇಂದ್ರ ಸರ್ಕಾರದಿಂದ ಉದ್ಯೋಗ ಖಾತರಿ ಯೋಜನೆಗೆ ಬಂದ ಅನುದಾನದ ವಿವರ, ಸದರಿ ಅನುದಾನಕ್ಕೆ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡಿದ ವಿವರಗಳನ್ನು ಈ ಮುಂದಿನಂತೆ ನೀಡಿದೆ.

(ಲಕ್ಷ ರೂ.ಗಳಲ್ಲಿ)

ಕ್ರ ಸಂ.	ವರ್ಷ	ಬಿಡುಗಡೆ		
		ಕೇಂದ್ರದ ಪಾಲಿನ ಅನುದಾನ	ರಾಜ್ಯದ ಪಾಲಿನ ಅನುದಾನ	ಒಟ್ಟು ಮೊತ್ತ
1	2006-07	24250.39	2033.752	26284.142

2	2007-08	26852.40	2553.59	29405.99
3	2008-09 (19.2.09 ರಂತೆ)	31339.29	3199.58	34538.87

ಕೇಂದ್ರ ಸರ್ಕಾರವು ಅನುದಾನವನ್ನು ನೇರವಾಗಿ ಜಿಲ್ಲೆಗಳಿಗೆ ತನ್ನ ಪಾಲನ್ನು ಬಿಡುಗಡೆ ಮಾಡುತ್ತದೆ. ಅದಕ್ಕೆ ಪೂರಕವಾಗಿ, ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ನೇರವಾಗಿ ಜಿಲ್ಲೆಗಳಿಗೆ ಬಿಡುಗಡೆ ಮಾಡುತ್ತದೆ. ರಾಜ್ಯ ಸರ್ಕಾರದಿಂದ ತಾಲ್ಲೂಕುವಾರು ಅನುದಾನವನ್ನು ಬಿಡುಗಡೆ ಮಾಡುವುದಿಲ್ಲ. ಆದ್ದರಿಂದ, ಕಳೆದ 2 ವರ್ಷಗಳಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ). ಉದ್ಯೋಗ ಖಾತರಿ ಯೋಜನೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಷ್ಟು ಕೂಲಿ ಕಾರರಿಗೆ ಉದ್ಯೋಗ ನೀಡಲಾಗಿದೆ; ಯಾವ ಯಾವ ಕೆಲಸಗಳು, ಅದಕ್ಕಾಗಿ ವ್ಯಯ ಮಾಡಿದ ಮೊತ್ತವೆಷ್ಟು(ಕಳೆದ 2 ವರ್ಷಗಳ ತಾಲ್ಲೂಕು ವಾರು ವಿವರಣೆ ಒದಗಿಸುವುದು)

ಉದ್ಯೋಗ ಖಾತರಿ ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜನವರಿ 2009ರ ಅಂತ್ಯದವರೆಗೆ 15,134 ಕೂಲಿಕಾರರಿಗೆ ಉದ್ಯೋಗವನ್ನು ನೀಡಲಾಗಿದೆ. ಕೈಗೊಳ್ಳಲಾದ ಕೆಲಸಗಳು ಮತ್ತು ಅದಕ್ಕಾಗಿ ವೆಚ್ಚ ಮಾಡಲಾದ ತಾಲ್ಲೂಕುವಾರು ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ದಿನಾಂಕ:1.4.2008 ರಿಂದ ಮೂರನೇ ಹಂತದಡಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜಾರಿಗೆ ಬಂದಿರುತ್ತದೆ.

ಇ). ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದಲ್ಲಿ ನೋಡಿಕೊಳ್ಳುವ ಅಧಿಕಾರಿಗಳು ಯಾರು ಯಾರು ಮತ್ತು ಈ ಯೋಜನೆಯನ್ನು ಸರಿಯಾದ ರೀತಿಯಲ್ಲಿ ನಡೆಸದೇ ಇರುವ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದು ಕೊಳ್ಳಲಾಗಿದೆ?

ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯ ಮಟ್ಟದಲ್ಲಿ ಕಾರ್ಯದರ್ಶಿಗಳು, ನಿರ್ದೇಶಕರು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಪಂಚಾಯತ್ ಕಾರ್ಯದರ್ಶಿಗಳು, ಉಸ್ತುವಾರಿ ಮಾಡುತ್ತಾರೆ. ಸದರಿ ಯೋಜನೆಯು ಒಂದು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿದ್ದು, ಬೇಡಿಕೆಯ

ಆಧಾರದ ಮೇಲೆ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ, ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿದ್ದು, ಬೇಡಿಕೆಯ ಆಧಾರದ ಮೇಲೆ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ, ಬೇಡಿಕೆ ಸಲ್ಲಿಸಿದವರಿಗೆಲ್ಲ ಉದ್ಯೋಗವನ್ನು ನೀಡಲಾಗುತ್ತಿದೆ. ಸದರಿ ಯೋಜನೆಯು ಅನುಷ್ಠಾನದಲ್ಲಿ ಮಾರ್ಗಸೂಚಿಗಳು ಅಥವಾ ಅಧಿನಿಯಮವನ್ನು ಉಲ್ಲಂಘನೆ ಮಾಡಿದಲ್ಲಿ ಅಂತಹವರ ವಿರುದ್ಧ ಪರಶೀಲಿಸಿ, ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ.

ಸಂ.ಗ್ರಾಅಪ:35:ಉಖಾಯೋ:09 ದಿನಾಂಕ.21.02.2009

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

Annexure-1

National Rural Employment Guarantee Scheme-Karnataka

Releases for the years 2006-07, 2007-08 and 2008-09 (up to 19th Feburary 2009)

(Rs.in lakhs)

Sl. No	District	2006-07			2007-08			2008-09		
		Central	State	Total	Central	State	Total	Central	State	Total
1	Bidar	2313.01	102.138	2415.148	2000.00	326.36	2326.36	3768.61	;08.001	4076.61
2	Chitradurga	9185.56	661.654	9847.214	4534.80	398.66	4933.46	3280.67	514.147	3824.82
3	Davangere	6859.91	479.86	7339.77	3098.99	397.38	3496.37	6894.40	32.62	7227.02
4	Gulbarga	3602.23	474.06	4076.29	2525.73	268.68	2794.41	2738.39	73.84	3012.23
5	Raichur	2289.68	316.04	2605.72	2559.30	255.93	2815.23	3796.23	79.62	4175.85
Total I Phase		**24250.39**	**2033.752**	**26284.142**	**14718.82**	**1647.01**	**16365.83**	**20478.30**	**1138.23**	**22316.53**
6	Belagaum	-	-	-	4106.91	212.59	4319.5	0.00	192.25	192.25
7	Bellary	-	-	-	1688.00	162.95	1850.95	840.66	34.060	924.72
8	Chikkmagalur	-	-	-	1411.47	132.42	1543.89	0.00	2.88	2.88
9	Hassan	-	-	-	2111.01	204.06	2315.07	500.00	51.19	551.19
10	Kodagu	-	-	-	829.33	77.10	906.43	0.00	3.58	3.58
11	Shimoga	-	-	-	1986.66	117.46	2104.12	500.00	125.36	625.36

Total II Phase		-	-	-	**12133.38**	**906.58**	**13039.96**	**1840.66**	**59.32**	**2299.98**
Total Phase I and II		-	-	-	**26852.20**	**2553.59**	**29405.79**	**22318.96**	**2291.55**	**24616.51**
12	Bagalkot	-	-	-	-	-	-	1251.78	12.18	1376.96
13	Bangalore (U)	-	-	-	-	-	-	239.29	23.99	263.22
14	Bangalore ®	-	-	-	-	-	-	308.20	30.82	339.02
15	Bijapur	-	-	-	-	-	-	263.35	26.34	289.69
16	CHIKKABALLAPURAr	-	-	-	-	-	-	213.64	21.36	235.00
17	Chikkbalapura	-	-	-	-	-	-	248.50	24.85	273.35
18	D.Kannada	-	-	-	-	-	-	158.17	15.817	173.99
19	Dharwad	-	-	-	-	-	-	159.67	15.967	175.64
20	Gadag	-	-	-	-	-	-	263.39	26.34	289.73
21	Haveri	-	-	-	-	-	-	211.89	21.189	233.08
22	Kolar	-	-	-	-	-	-	542.28	54.228	96.51

23	Koppal	-	-	-	-	-	-	199.25	19.088	219.97
24	Mandya	-	-	-	-	-	-	190.88	19.088	219.97
25	Mysore	-	-	-	-	-	-	1902.58	190.26	202.84
26	Ramanagar	-	-	-	-	-	-	248.50	24.85	273.35
27	Tumkur	-	-	-	-	-	-	464.75	46.48	511.23
28	Udupi	-	-	-	-	-	-	131.17	13.12	144.29
29	U.Kannada	-	-	-	-	-	-	2023.04	202.30	2225.24
Total Phase III		-	-	-	-	-	-	9020.33	902.03	9922.36
Grand Total								**31339.29**	**3199.58**	**34538.87**

Annexure-2

Legislative Assembly unstarred question No.280 tabled by Sri.Sampangi.N.(Bagepalli)

Sl. No.	Category of works	No.of works taken up in Chikkaballapur district						Total No.of works	Expenditure incurrect (Rs.in lakhs)
		Chikkaballapur	Chintamani	Sidlaghatta	Gowribidanur	Bagepalli	Gudibande		
1	2	3	4	5	6	7	8	9	10
1	Water conservation and water	11	18	23	11	20	5	88	35.995

	harvesting								
2	Drought proofing, including afforestation and tree plantation	7	-	1	3	3	4	18	6.094
3	Irrigation canals, including micro and minor irrigation works	6	-	1	-	10	9	26	11.777
4	Provision of irrigation facility	-	-	-	-	-	-	-	-
5	Renovation of traditional water bodies	2	27	-	1	26	-	56	47.014
6	Land development	-	-	-	-	-	-	1	3.08
7	Flood control and protection works, including drainage in waterlogged areas	-	-	-	-	42	-	42	17.44
8	Rural connectivity to provide all-weather access	7	-	1	-	-	1	9	3.123
9	Any other work that may be notified by the Central Government	-	9	-	-	-	-	9	3.24

	Total:	33	54	27	15	101	19	249	127.77
	Expenditure incurred(Rs.in lakhs)	9.73	45.50	13.74	5.93	45.57	7.30	-	127.77

ಕರ್ನಾಟಕ ವಿಧಾನಸಭೆ

(13ನೇ ವಿಧಾನ ಸಭೆ. 2ನೇ ಅಧಿವೇಶನ)

286 ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ)

ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು.

ಅ). ಆಶ್ರಯ ನಿವೇಶನಗಳನ್ನು (ಉಚಿತ ನಿವೇಶನ ಕಳೆದ ನಾಲ್ಕು ವರ್ಷಗಳಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಯಾವ ವರ್ಷದಲ್ಲಿ ವಿತರಿಸಲಾಗಿದೆ.)

ಕಳೆದ ನಾಲ್ಕು ವರ್ಷಗಳಿಂದ ಅಂದರೆ 2004-05, 2005-06, 2006-07, 2007-08, ಮತ್ತು 2008-09ರಲ್ಲಿ ಈ ಕೆಳಗಿನಂತೆ ನಿವೇಶನಗಳನ್ನು ವಿತರಿಸಲಾಗಿದೆ.

ವರ್ಷ	ಗ್ರಾಮೀಣ ನಿವೇಶನ ಯೋಜನೆ	ನಗರ ನಿವೇಶನ ಯೋಜನೆ
2004-05	4762	2379
2005-06	6814	3160
2006-07	2280	3566
2007-08	1191	2066
2008-09	139	134
ಒಟ್ಟು	15186	11305

ತಾಲ್ಲೂಕುವಾರು, ಪಟ್ಟಣವಾರು ಮತ್ತು ವರ್ಷವಾರು ವಿವರ ಅನುಬಂಧ 1ರಲ್ಲಿ ನೀಡಲಾಗಿದೆ.

(ಪುಟಗಳು ಹೆಚ್ಚು ಇರುವುದರಿಂದ ಮಾನ್ಯ ಸದಸ್ಯರಿಗೆ, ಮಾತ್ರ ನೀಡಲಾಗುವುದು)

ಆ). ನಿವೇಶನ ವಿತರಣೆ ಯಾವಾಗಿನಿಂದ ಪ್ರಾರಂಭಿಸಲಾಗುವುದು;

ನಗರ ಪ್ರದೇಶದಲ್ಲಿ ನಿವೇಶನ ಯೋಜನೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ನಿವೇಶನ ಯೋಜನೆ ಜಾರಿಯಲ್ಲಿದ್ದು, 2000-01ರಿಂದ ಪ್ರತಿ ವರ್ಷ ಗುರಿಯನ್ನು ನಿಗದಿಪಡಿಸಿ ನಿವೇಶನ ಹಂಚಿಕೆ ಮಾಡಲಾಗುತ್ತಿದೆ.

ಇ). ಸರಕಾರಿ ಜಮೀನಿನಲ್ಲಿ ಭೂ ರಹಿತರು ನಿವೇಶನ ರಹಿತ ಬಡವರು ಕೆಲವು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರಿಗೆ ಆ ಸ್ಥಳ ಮಂಜೂರಾತಿಗೆ ಅವಕಾಶ ಮಾಡಿಕೊಡಲಾಗುವುದೇ;

ಸರ್ಕಾರಿ ಜಮೀನಿನಲ್ಲಿ ಭೂರಹಿತರು ನಿವೇಶನರಹಿತ ಬಡವರು ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರಿಗೆ ಸ್ಥಳ ಮಂಜೂರಾತಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಕ್ರಮಕೈಗೊಳ್ಳುವರು.

ಈ). ಯಾವ ರೀತಿಯಲ್ಲಿ ಯಾವ ನಮೂನೆಯಲ್ಲಿ ಫಲಾನುಭವಿಗಳು ಅರ್ಜಿ ಸಲ್ಲಿಸಬೇಕು?

ಆಶ್ರಯ ನಿವೇಶನ ಯೋಜನೆಯಡಿ ನಿವೇಶನ ಪಡೆಯಲು ಅರ್ಜಿ ನಮೂನೆ 1-ನ್ನು ಆಯಾ ಸ್ಥಳೀಯ ಸಂಸ್ಥೆಯಿಂದ ಪಡೆದು ತುಂಬಿ ಸಹಿ ಮಾಡಿ ಸ್ಥಳೀಯ ಸಂಸ್ಥೆಗೆ ಸಲ್ಲಿಸಬೇಕು.

ಸಂಖ್ಯೆ: ವಇ 21 ಹೆಚ್ ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನಸಭೆ

312 ಶ್ರೀ ಹೆಚ್.ಎಸ್.ಪ್ರಕಾಶ್ (ಹಾಸನ)

ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ ವಸತಿ ಹಾಗೂ ಮುಜರಾಯಿ ಸಚಿವರು.

ಅ) ರಾಜ್ಯ ಗೃಹ ಮಂಡಳಿಯು ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಚೆನ್ನಪಟ್ಟಣ ಗ್ರಾಮದ ಬಳಿ ನಿವೇಶನ ಹಾಗೂ ಮನೆಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದು ನಿಜವೇ; ಹಾಗಿದ್ದಲ್ಲಿ, ವಶಪಡಿಸಿ ಕೊಂಡಿರುವ ಜಮೀನೆಷ್ಟು?

ಹೌದು ನಿಜ.

ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ 153 ಎಕರೆಗಳಾಗಿರುತ್ತದೆ.

ಆ) ಈ ಜಮೀನಿನಲ್ಲಿ ಹಂಚಿಕೆಯನ್ನು ಮಾಡಿರುವ ನಿವೇಶನಗಳೆಷ್ಟು; ಹಾಗೂ ಮನೆಗಳೆಷ್ಟು; ಇದಕ್ಕಾಗಿ ಸಾರ್ವಜನಿಕರಿಂದ ಬಂದ ಅರ್ಜಿಗಳೆಷ್ಟು,

ಸದರಿ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸುತ್ತಿದ್ದು, ಬಡಾವಣೆಯ ವಿನ್ಯಾಸ ನಕ್ಷೆ, ಅಂತಿಮಗೊಳ್ಳುವ ಹಂತದಲ್ಲಿದೆ. ಒಟ್ಟು ಅಂದಾಜು 1600 ನಿವೇಶನಗಳನ್ನು ರಚನೆ ಮಾಡಬಹುದಾಗಗಿರುತ್ತದೆ. ಈ ಪೈಕಿ 200 ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸುವ ಉದ್ದೇಶವಿದೆ. ಸದರಿ ಬಡಾವಣೆಯ ಬೇಡಿಕೆ ಸಮೀಕ್ಷೆಯ ಪ್ರಕಾರ 6515 ಅರ್ಜಿಗಳು ಬಂದಿದ್ದು.

ಇ) ಸಾರ್ವಜನಿಕರ ನಿರಾಸಕ್ತಿಯಿಂದಾಗಿ ನಿವೇಶನಗಳನ್ನು ಪೂರ್ತಿಯಾಗಿ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇದರಲ್ಲಿ 4541 ಅರ್ಜಿದಾರರು ಆರಂಭಿಕ ಠೇವಣಿಯನ್ನು ಪಾವತಿಸಿರುತ್ತಾರೆ. ಇನ್ನೂ ನಿವೇಶನ ಮತ್ತು ಮನೆಳನ್ನು ಹಂಚಿಕೆ ಮಾಡಿರುವುದಿಲ್ಲ. ನಿವೇಶನ/ಮನೆಗಳನ್ನು ಕೋರಿ ಮೇಲೆ ವಿವರಿಸಿದಂತೆ 6515 ಅರ್ಜಿಗಳು ನೋಂದಣಿಯಾಗಿದ್ದು ಇದರಲ್ಲಿ 4541 ಅರ್ಜಿದಾರರು ಆರಂಭಿಕ ಠೇವಣಿಯನ್ನು ಪಾವತಿಸಿರುವುದನ್ನು ಗಮನಿಸಿದಾಗ ಸಾರ್ವಜನಿಕರಿಗೆ ಆಸಕ್ತಿ ಇರುವುದು ಕಂಡು ಬಂದಿರುತ್ತದೆ.

ಈ) ಹಾಗಿದ್ದಲ್ಲಿ, ಹಾಸನ ತಾಲ್ಲೂಕಿನ ಕಸಬಾ ಹೋಬಳಿ ಹರಳಹಳ್ಳಿ, ದಾಸರಕುಪ್ಪ ಮತ್ತು ಚಿಕ್ಕಕೊಂಡಗೊಳದ ಸುತ್ತ ಜಮೀನನ್ನು ನಿವೇಶನ ಹಾಗೂ ಮನೆಗಳಿಗಾಗಿ 4(1) ನೀಟಿಫಿಕೇಶನ್ ನೀಡಿರುವುದು ನಿಜವೇ;

ಬೇಡಿಕೆ ಸಮೀಕ್ಷೆ ಪ್ರಕಾರ ಹೆಚ್ಚಿನ ಅರ್ಜಿಗಳು ಬಂದಿರುವುದರಿಂದ ಈಗಾಗಲೇ ನಿರ್ಮಾಣವಾಗುತ್ತಿರುವ ಬಡಾವಣೆಯಲ್ಲಿ ಎಲ್ಲರಿಗೂ ನಿವೇಶನ ಹಂಚಿಕೆ ಮಾಡಲು ಸಾಧ್ಯವಿಲ್ಲದಿರುವುದರಿಂದ ಹಾಸನ ತಾಲ್ಲೂಕು, ಕಸಬಾ ಹೋಬಳಿ, ಸತ್ಯ ಮಂಗಲ, ಮಾವಿನಹಳ್ಳಿ, ಚಿಕ್ಕಕೊಂಡಗೊಳ ಗ್ರಾಮಕ್ಕೆ ಸೇರಿದ ಒಟ್ಟು 597ಎಕರೆ ವಿಸ್ತೀರ್ಣದ ಜಮೀನನ್ನು ಭೂ-ಸ್ವಾಧೀನಪಡಿಸಿಕೊಳ್ಳಲು 4(1)ರ ಅಧಿಸೂಚನೆ ಹೊರಡಿಸಿರುವುದು ನಿಜವಿರುತ್ತದೆ. ಆದರೆ ಹರಳಹಳ್ಳಿ ಮತ್ತು ದಾಸರಕೊಪ್ಪ ಗ್ರಾಮಗಳಿಗೆ ಸೇರಿದಂತೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನಡೆಸಿರುವುದಿಲ್ಲ.

ಉ) ನಿವೇಶನಗಳಿಗಾಗಿ ಸಾರ್ವಜನಿಕರಿಂದ ಮನವಿಗಳಿಲ್ಲದಿದ್ದರೂ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಮೇಲೆ ವಿವರಿಸಿದಂತೆ ಬೇಡಿಕೆ ಸಮೀಕ್ಷೆಯಲ್ಲಿ ಒಟ್ಟು 6515 ಅರ್ಜಿಗಳು ಬಂದಿದ್ದು, ಇದರಲ್ಲಿ 4541 ಅರ್ಜಿದಾರರು ಪ್ರಾರಂಭಿಕ ಠೇವಣಿಯನ್ನು ಪಾವತಿಸಿರುವುದರಿಂದ ಬೇಡಿಕೆ ಪೂರೈಸಲು ಸದರಿ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ.

ಊ) ಹಾಗಿದ್ದಲ್ಲಿ, ಈ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲಾಗುವುದೇ (ವಿವರಗಳನ್ನು ನೀಡುವುದು.)

ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ವಇ ಕಗ್ಯಮಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು.

ಕರ್ನಾಟಕ ವಿಧಾನಸಭೆ

281 ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ)

ಅ. ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಧಿಕವಾಗಿರುವುದರಿಂದ ಅನೇಕ ಮಕ್ಕಳು, ವೃದ್ಧರಿಗೆ ಎಲುಬು ನೋವುಗಳು ಮತ್ತು ವಿವಿಧ ರೋಗಗಳಿಂದ ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ. ಬಂದಿದ್ದಲ್ಲಿ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆಯೇ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪರ್ಯಾಯ ಕುಡಿಯುವ ನೀರಿನ ಯೋಜನೆಗಳನ್ನು ಮತ್ತು ಡಿ–ಫ್ಲೋರಿಡೇಶನ್ ಘಟಕಗಳನ್ನು ಅಳವಡಿಸಲಾಗಿದೆ. ತಾಲ್ಲೂಕಲುವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಇ. ಪ್ರತಿ ತಾಲ್ಲೂಕುಗಳಲ್ಲಿ ಪ್ರತಿ ಪಂಚಾಯತಿಯಲ್ಲೂ ಒಂದು ಕೆರೆಯ ನೀರನ್ನು ಕುಡಿಯುವ ನೀರಿಗಾಗಿ ಮೀಸಲಿಡಲಾಗಿದೆಯೇ; ಇಟ್ಟಿದ್ದರೆ, ಆ ಕೆರೆಯಿಂದ ಆ ಪಂಚಾಯಿತ್ತಿಯ ಎಲ್ಲಾ ಹಳ್ಳಿಗಳಿಗೆ ಕುಡಿಯುವ ನೀರನ್ನು ಪೂರೈಸಲು ಕ್ರಮತೆಗೆದುಕೊಳ್ಳಲಾಗಿದೆಯೇ (ವಿವರ ಒದಗಿಸುವುದು);

ಪ್ರತಿ ಪಂಚಾಯಿತಿಯಲ್ಲಿ ಕುಡಿಯುವ ನೀರಿಗಾಗಿಯೇ ಕೆರೆಯನ್ನು ಮೀಸಲಾಗಿರಿಸಿರುವುದಿಲ್ಲ.

ಈ. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಅಧಿಕಾವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ; ಬಂದಿದ್ದರೆ, ಎಷ್ಟು ಹಳ್ಳಿಗಳಲ್ಲಿ ಜನರು ಫ್ಲೋರೈಡ್ ನೀರನ್ನು ಸೇವಿಸುತ್ತಿದ್ದಾರೆ, ಇದಕ್ಕಾಗಿ ಸರ್ಕಾರದದಿಂದ ಫ್ಲೋರೈಡ್‌ರಹಿತ ಕುಡಿಯುವ ನೀರನ್ನು ಒದಗಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ (ಮಾಹಿತಿಯನ್ನು ಒದಗಿಸುವುದು).

ಬಂದಿದೆ. ಈ ತಾಲ್ಲೂಕುಗಳಲ್ಲಿನ ಸುಮಾರು 292 ಜನವಸತಿಗಳ ಒಟ್ಟು 2.195ಲಕ್ಷ ಜನತೆ ಫ್ಲೋರೈಡ್‌ಯುಕ್ತ ನೀರು ಸೇವಿಸುತ್ತಿದ್ದಾರೆ. ತಾಲ್ಲೂಕುವಾರು ಕೈಗೊಂಡಿರುವ ಕ್ರಮದ ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಸಂಗ್ರಾಅಪ 17 ಗ್ರಾನೀಸ(1) 09

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು

ಕರ್ನಾಟಕ ವಿಧಾನಸಭೆ
(13ನೇ ವಿಧಾನ ಸಭೆ. 2ನೇ ಅಧಿವೇಶನ)

283 ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ)
ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು.

ಅ). ರಾಜೀವ್ ಗಾಂಧಿ ವಸತಿ ನಿಗಮದಿಂದ ಮಂಜೂರಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳ ಅನುಷ್ಠಾನದಲ್ಲಿ ಫಲಾನುಭವಿಗಳಿಗೆ ನೋಂದಾವಣಿ ಅಗತ್ಯವಿದೆಯೇ;

ಹೌದು.

ಆ). ಸಾಲದ ಮೊತ್ತ ಮಂಜೂರಾತಿ ಇಲ್ಲದ ಮನೆಗಳಿಗೆ ನೋಂದಾವಣಿ ಅನಗತ್ಯವಲ್ಲವೇ;

ಫಲಾನುಭವಿಗಳು ಮಂಜೂರಾದ ಮನೆಯನ್ನು ಯಾವುದೇ ಕಾರಣಕ್ಕೂ ಪರಭಾರೆ/ಬಾಡಿಗೆ/ಭೋಗ್ಯ/ಮಾರಾಟ ಮಾಡುವುದರ ಮೂಲಕ ಮತ್ತೆ ವಸತಿರಹಿತರಾಗಬಾರದೆಂಬ ಹಾಗೂ ಒಮ್ಮೆ ವಸತಿ ಸೌಕರ್ಯ ಪಡೆದವರೇ ಮತ್ತೆ ಪಡೆಯಬಾರದೆಂಬ ಹಿತದೃಷ್ಟಿಯಿಂದ ನೋಂದಾವಣಿಯನ್ನು ಕಡ್ಡಾಯ ಮಾಡಲಾಗಿದೆ.

ಇ). ಪ್ರತಿ ಹಂತದಲ್ಲಿ ;ಪಂಚಾಯತ್ ಕಾರ್ಯದರ್ಶಿಯೊಡನೆ ಫಲಾನುಭವಿಗಳು ಮನೆಯ ಮುಂದೆ ಪೋಟೊ ತೆಗೆಯಿಸುವ ಅಗತ್ಯವೇನು;

ಫಲಾನುಭವಿಗಳು, ಮನೆಗಳನ್ನು ನಿರ್ಮಿಸಿಕೊಳ್ಳದಿದ್ದರೂ ಅನುದಾನವನ್ನು ಪಡೆದುಕೊಳ್ಳುವುದು, ಹಳೇ ಮನೆ ತೋರಿಸಿ ಹಣವನ್ನು ಪಡೆದುಕೊಳ್ಳುವುದು, ಅನುದಾನವನ್ನು ಮನೆ ನಿರ್ಮಿಸಿಕೊಳ್ಳುವುದರ ಬದಲು ಇತರೆ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳುವುದು, ಬೇರೆಯವರ ಮನೆ ಮುಂದೆ ಫಲಾನುಭವಿಯು ಪೋಟೋ ತೆಗೆಸಿ ನೀಡುವುದು, ಕಂಪ್ಯೂಟರ್‌ನಲ್ಲಿ ಡಿಜಿಟಲ್ ಮಿಕ್ಸಿಂಗ್ ಮಾಡಿ, ಛಾಯಾಚಿತ್ರಗಳನ್ನು ನೀಡಿ ಅನುದಾನವನ್ನು ಪಡೆದುಕೊಳ್ಳುವುದು ಮುಂತಾದ ರೀತಿಯಲ್ಲಿ ಯೋಜನೆಯ ಅನುದಾನದ ದುರುಪಯೋಗ ತಡೆಯಲು ಈ ಕ್ರಮದ ಅಗತ್ಯವಿರುತ್ತದೆ.

ಈ). ಪುರಸಭೆಯ ವ್ಯಾಪ್ತಿಯಲ್ಲಿ ಅಂಬೇಡ್ಕರ್ –ಆಶ್ರಯ ಮನೆಗಳನ್ನು ಏಕೆ ವಿತರಿಸುತ್ತಿಲ್ಲ?

ಮನೆಗಳ ನಿರ್ಮಾಣದ ಗುರಿಯನ್ನು ನಿಗದಿ ಪಡಿಸಿರುವುದಿಲ್ಲವಾದ್ದರಿಂದ ಈ ಮನೆಗಳನ್ನು ವಿತರಿಸುತ್ತಿಲ್ಲ.

ಸಂಖ್ಯೆ: ವಇ 27 ಹೆಚ್ ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

284 ಶ್ರೀ ಗೋಪಾಲ ಭಂಡಾರಿ ಹೆಚ್

ಉನ್ನತ ಶಿಕ್ಷಣ ಸಚಿವರು

ಅ). ಕಾರ್ಕಳ ತಾಲ್ಲೂಕಿನ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಕಾರ್ಕಳದಲ್ಲಿರುವ ಕಾಲೇಜಿನಲ್ಲಿ ಈ ಶೈಕ್ಷಣಿಕ ವರ್ಷ ಪ್ರಾರಂಭದಂದಿನಿಂದ ಯಾವ ಯಾವ ಹೆಸರಿನ ಉಪನ್ಯಾಸಕರನ್ನು ಯಾವ ದಿನಾಂಕದಲ್ಲಿ ವರ್ಗಾಯಿಸಲಾಗಿದೆ;

ಈ ಶೈಕ್ಷಣಿಕ ವರ್ಷದ ವರ್ಗಾವಣೆಯಲ್ಲಿ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ 05 ಉಪನ್ಯಾಸಕರುಗಳನ್ನು ವರ್ಗಾವಣೆ ಮಾಡಲಾಗಿದೆ. ಹಾಗೂ ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಉಪನ್ಯಾಸಕರ್‍ಯಾರನ್ನು ವರ್ಗಾವಣೆ ಮಾಡಿರುವುದಿಲ್ಲ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ). ಆ ಕಾಲೇಜುಗಳಲ್ಲಿ ಹಾಲಿ ಖಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರ ಹುದ್ದೆ ಎಷ್ಟೆಷ್ಟು; ತೆರವಾಗಿರುವ ಹುದ್ದೆಗಳೆಷ್ಟು;

: ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೆಜು:-

ಮಂಜೂರಾದ ಹುದ್ದೆಗಳು .	10
ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ:	04
ಖಾಲಿ ಇರುವ ಹುದ್ದೆಗಳ ಸಂಖ್ಯೆ:	06

ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು:

ಮಂಜೂರಾದ ಹುದ್ದೆಗಳು	05
ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ:	05

ಖಾಲಿ ಇರುವ ಹುದ್ದೆಗಳಿರುವುದಿಲ್ಲ.

ಇ). ವರ್ಷದ ಮಧ್ಯದಲ್ಲಿ ವರ್ಗಾವಣೆ ಮಾಡಿದಾಗ ಅಲ್ಲಿಗೆ ಉಪನ್ಯಾಸಕರನ್ನು ಕೊಡದಿರಲು ಕಾರಣವೇನು; ಯಾವಾಗ ಭರ್ತಿ ಮಾಡಲಾಗುವುದು?

ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಪ್ರಾಂಶುಪಾಲರಿಗೆ ಅನುಮತಿ ನೀಡಲಾಗಿದೆ. ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದವರಿಗೆ ಸ್ಥಳನಿಯುಕ್ತಿಗೊಳಿಸುವ ಸಂದರ್ಭದಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಕಾರ್ಯಭಾರಕ್ಕನುಗುಣವಾಗಿ ಭರ್ತಿ ಮಾಡಲಾಗುವುದು.

(ಇಡಿ 06 ಯುಜಿಹೆಚ್ 2008)

(ಅರವಿಂದ ಲಿಂಬಾವಳಿ)
ಉನ್ನತ ಶಿಕ್ಷಣ ಸಚಿವರು

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಗೋಪಾಲ ಭಂಡಾರಿ.ಹೆಚ್.(ಕಾರ್ಕಳ) ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 284ಕ್ಕೆ

ಕಾರ್ಕಳ ತಾಲ್ಲೂಕಿನ ಹೆಬ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ವರ್ಗಾವಣೆಯಾದ ಉಪನ್ಯಾಸಕರ ಬಗ್ಗೆ ಮಾಹಿತಿ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಸರ್ಕಾರಿ ಅಧಿಸೂಚನೆ ಸಂಖ್ಯೆ & ದಿನಾಂಕ	ವರ್ಗಾವಣೆಗೊಂಡ ಉಪನ್ಯಾಸಕರ ಹೆಸರು, ಪದನಾಮ & ವಿಷಯ	ವರ್ಗಾವಣೆಗೊಂಡ ಕಾಲೇಜು	ಷರಾ
1		ಶಿವಪ್ರಕಾಶ್.ಜಿ.ಎಸ್, ಇತಿಹಾಸ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ಬೀರೂರು	--
2		ಮಹಾದೇವಯ್ಯ, ರಾಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ಹುಲ್ಲಹಳ್ಳಿ, ನಂಜನಗೂಡು ತಾ	--
3		ಡಾ:ಕುಬೇರನಾಯ್ಕ,	ಸರ್ಕಾರಿ ಆರ್.ಸಿ.	ಬೆಂಗಳೂರು

	ಇಡಿ 176 ಡಿಸಿಇ 2008(1), ದಿ:30-08-08	ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ವಾಣಿಜ್ಯ ಕಾಲೇಜು, ಬೆಂಗಳೂರು	ಸರ್ಕಾರಿ ಆರ್.ಸಿ.ವಾಣಿಜ್ಯ ಕಾಲೇಜಿನ ಡಾ: ವಿಶ್ವಮೂರ್ತಿ ಇವರನ್ನು ಕುಬೇರನಾಯ್ಕ ಹುದ್ದೆಗೆದುರಾಗಿ ವರ್ಗಾವಣೆ ಮಾಡಲಾಗಿದೆ
4		ಆಶಾಲತ,ಬಿ, ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ಶೃಂಗೇರಿ	--
5	ಇಡಿ 18 ಡಿಸಿಇ 2009, ದಿ:30-01-09	ಸುಧಾಕರ್,ಕೆ.ಜಿ. ವಾಣಿಜ್ಯಶಾಸ್ತ್ರ ಉಪನ್ಯಾಸಕರು, ಸಪ್ರದಕಾ, ಹೆಬ್ರಿ	ಸಪ್ರದಕಾ, ತೀರ್ಥಹಳ್ಳಿ	--

ಕಾರ್ಕಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಯಾರನ್ನೂ ಬೇರೆ ಕಾಲೇಜಿಗೆ ವರ್ಗಾವಣೆ ಮಾಡಿರುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರು

ಕರ್ನಾಟಕ ವಿಧಾನಸಭೆ

285

ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ)

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

1. ಕಾರ್ಕಳ ಪುರಸಭೆಯ ವ್ಯಾಪ್ತಿಯಲ್ಲಿ ಎಷ್ಟು ಕಾಲೋನಿಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಗುರುತಿಸಲಾಗಿದೆ?

ಕಾರ್ಕಳ ಪುರಸಭೆಯ ವ್ಯಾಪ್ತಿಯಲ್ಲಿ 9 ಕೊಳಚೆ ಪ್ರದೇಶಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಕೊಳಚೆ ಪ್ರದೇಶಗಳೆಂದು ಘೋಷಿಸಲಾಗಿರುತ್ತದೆ.

1. ಬೊಬ್ಬಳ ಕೊರವರ ಕಾಲೋನಿ	2. ಧನಶಾಲಾ
3. ಬಂಡಿಮಠ	4. ಬಾಂಗ್ಲ ಗುಡ್ಡ
5. ಹವಲ್ದಾರ್ ಬೆಟ್ಟು	6. ಐತಕಟ್ಟೆ
7. ಬೊಬ್ಬಳ ಕೊರವರಕೇರಿ ಹತ್ತಿರ	8. ದುರ್ಗ ನರ್ಸಿಂಗ್ ಹೋಂ
	9. ರಾಣೀಕೇರಿ

2. ಅವುಗಳನ್ನು ಅಭಿವೃದ್ಧಿ ಪಡಿಸಲು ಯಾವ ಯಾವ ಕಾಲೋನಿಗಳಿಗೆ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ?

<u>1997–98</u>

1. ಬೊಬ್ಬಳ ಕೊರವರಕೇರಿ –ರೂ.7.74 ಲಕ್ಷಗಳು
2. ಬಾಂಗ್ಲೆ ಗುಡ್ಡ –ರೂ.0.92 ಲಕ್ಷಗಳು

<u>1999–2000</u>

1. ಧನಶಾಲಾ –ರೂ.1.30 ಲಕ್ಷಗಳು
2. ಬಾಂಗ್ಲೆ ಗುಡ್ಡ –ರೂ.4.35 ಲಕ್ಷಗಳು
3. ಬೊಬ್ಬಳ ಕೊರವರಕೇರಿ –ರೂ.2.65 ಲಕ್ಷಗಳು

<u>2002–2003</u>

1. ರಾಣೀಕೇರಿ –ರೂ.1.55 ಲಕ್ಷಗಳು
2. ದುರ್ಗ ನರ್ಸಿಂಗ್ ಹೋಂ ಹತ್ತಿರ –ರೂ. 1.70 ಲಕ್ಷಗಳು
3. ಬಾಂಗ್ಲ ಗುಡ್ಡ –ರೂ.10.72 ಲಕ್ಷಗಳು

2006–07

1. ರಾಣೀಕೇರಿ –ರೂ.4.75 ಲಕ್ಷಗಳು

3. ನಡು ರಸ್ತೆಯಲ್ಲಿರುವ ಮೂಲಭೂತ ಸೌಕರ್ಯಗಳ ಕೊರತೆ ಇರುವ ಈ ಕಾಲೋನಿಗಳನ್ನು ಇಲಾಖೆ ಪರಿಶೀಲಿಸಿದೆಯೇ.

ಪರಿಶೀಲಿಸಿದೆ.

4. ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು ಯಾವುದು ಯಾವಾಗ ಅಭಿವೃದ್ಧಿ ಪಡಿಸಲಾಗುವುದು?

ರಸ್ತೆ, ಚರಂಡಿ, ಕಾಂಕ್ರೀಟ್, ಪೇವಿಂಗ್, ಅಡ್ಡಮೋರಿ, ಬೀದಿ ದೀಪ, ಕುಡಿಯುವ ನೀರು ಇತ್ಯಾದಿ ಅನುದಾನಕ್ಕೆ ಅನುಗುಣವಾಗಿ ಆದ್ಯತೆ ಮೇರೆಗೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ವಇ 02 ಕೊಮಂಪಿ 09

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನಸಭೆ

287 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಎಷ್ಟು ಮನೆಗಳು ಮತ್ತು ಶೌಚಾಲಯಗಳು ಮಂಜೂರಾಗಿವೆ;

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅಂದರೆ 2005-06, 2006-07 ಮತ್ತು 2007-08 ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಒಟ್ಟು 5022 ಮನೆಗಳು ಮಂಜೂರಾಗಿದ್ದು ವಿವರಗಳು ಕೆಳಗಿನಂತಿವೆ;

ಯೋಜನೆ	ವರ್ಷ		
	2005-06	**2006-07**	**2007-08**
ಗ್ರಾಮೀಣ ಆಶ್ರಯ	1400	2100	0
ನಗರ ಆಶ್ರಯ	290	0	0
ಗ್ರಾಮೀಣ ಅಂಬೇಡ್ಕರ್	0	0	163
ಐಎವೈ ಒಟ್ಟು	399 **2089**	400 **2500**	270 **433**

ರಾಜ್ಯ ಸರ್ಕಾರದ ಯೋಜನೆಗಳಾದ ಗ್ರಾಮೀಣ ಆಶ್ರಯ, ಗ್ರಾಮೀಣ ಅಂಬೇಡ್ಕರ್ ಹಾಗೂ ನಗರ ಆಶ್ರಯ ಯೋಜನೆಗಳಲ್ಲಿ ಶೌಚಾಲಯ ನಿರ್ಮಿಸಬೇಕಾಗಿರುವದು ಕಡ್ಡಾಯವಾಗಿರುವುದಿಲ್ಲ.

ಕೇಂದ್ರ ಸರ್ಕಾರ ಯೋಜನೆಯಾದ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಕಡ್ಡಾಯವಾಗಿ ಎಲ್ಲಾ ಮನೆಗಳನ್ನು ಫಲಾನುಭವಿಗಳೇ ನಿರ್ಮಿಸಿಕೊಳ್ಳಬೇಕಾಗಿರುತ್ತದೆ. ಈ ಯೋಜನೆಯಡಿಯಲ್ಲಿ 2006–07ನೇ ಶ್ರೇಣಿಯ ವರೆಗಿನ ಮನೆಗಳಿಗೆ ಶೌಚಾಲಯ ನಿರ್ಮಿಸಿಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಇಂದಿರಾ ಆವಾಸ್ 2007–08 ಮತ್ತು 2008–09ನೇ ಶ್ರೇಣಿಯಡಿಯಲ್ಲಿ ನೀಡಲಾದ ಗುರಿಗೆ ಶೌಚಾಲಯ ನಿರ್ಮಿಸಬೇಕಾಗಿರುವುದು ಕಡ್ಡಾಯವಾಗಿರುವುದಿಲ್ಲ, ಆದರೆ ಈ ಫಲಾನುಭವಿಗಳನ್ನು ಕಡ್ಡಾಯವಾಗಿ ಸಂಪೂರ್ಣ ಸ್ವಚ್ಛತಾ ಆಂಧೋಲನ ಯೋಜನೆಯಡಿಯಲ್ಲಿ (Total Sanitation Program) ಪರಿಗಣಿಸಲು ತಿಳಿಸಲಾಗಿದೆ. ಸಂಪೂರ್ಣ ಸ್ವಚ್ಛತಾ ಆಂಧೋಲನ ಯೋಜನೆಯನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನವಾಗುತ್ತಿದೆ.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ವಾಂಬೆ ಯೋಜನೆಯಡಿಯಲ್ಲಿ 60 ಮನೆಗಳು, ಶೌಚಾಲಯಗಳು–7 ಮಂಜೂರಾಗಿವೆ ಹಾಗೂ ಐ.ಹೆಚ್.ಎಸ್.ಡಿ.ಪಿ. 150 ಮನೆಗಳು ಮಂಜೂರಾತಿ ದೊರೆತಿದ್ದು, ಮನೆಗಳ ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಆ) 'ಈ ಪೈಕಿ ಎಷ್ಟು ಮನೆಗಳು ಮತ್ತು ಶೌಚಾಲಯಗಳು ಪೂರ್ಣಗೊಂಡು ಎಷ್ಟು ಫಲಾನುಭವಿಗಳಿಗೆ ಹಂಚಲಾಗಿದೆ (ಗ್ರಾಮವಾರು ವಿವರಗಳನ್ನು ಒದಗಿಸುವುದು);

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ಮೇಲೆ ತಿಳಿಸಿರುವಂತೆ ಮಂಜೂರಾದ ಮನೆಗಳಲ್ಲಿ 31.01.2009 ರಲ್ಲಿದ್ದಂತೆ ರಾಜ್ಯ ಸರ್ಕಾರದ ಯೋಜನೆಗಳಡಿಯಲ್ಲಿ ಒಟ್ಟು 1642 ಮನೆಗಳನ್ನು ಹಾಗೂ ಕೇಂದ್ರ ಸರ್ಕಾರದ ಯೋಜನೆಯಾದ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 785 ಮನೆಗಳನ್ನು ನಿರ್ಮಿಸಲಾಗಿರುತ್ತದೆ. 785 ಮನೆಗಳ ಪೈಕಿ 678 ಶೌಚಾಲಯಗಳನ್ನು ಫಲಾನುಭವಿಗಳು ನಿರ್ಮಿಸಿಕೊಂಡಿರುತ್ತಾರೆ.

ಗ್ರಾಮ ಪಂಚಾಯಿತಿವಾರು ವಿವರ ಅನುಬಂಧ–1 ರಲ್ಲಿ ನೀಡಲಾಗಿದೆ.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವಾಂಬೆ ಯೋಜನೆಯಡಿಯಲ್ಲಿ 60 ಮನೆಗಳು ಪೂರ್ಣಗೊಂಡು ಫಲಾನುಭವಿಗಳಿಗೆ ಹಂಚಿಕಾತಿ ಮಾಡಲಾಗಿದೆ. 7 ಶೌಚಾಲಯಗಳ ಪೈಕಿ 3 ಶೌಚಾಲಯಗಳು ಪೂರ್ಣಗೊಂಡಿದ್ದು, 3 ಶೌಚಾಲಯಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಇನ್ನುಳಿದ 1 ಶೌಚಾಲಯ ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ವಾಂಬೆ ಮನೆಗಳು

1. ಭೀಮನಗರ ಕೊ.ಪ್ರ – 21 ಸಂಖ್ಯೆ
2. ಸಿದ್ಧಾರ್ಥನಗರ ಕೊ.ಪ್ರ – 38 ಸಂಖ್ಯೆ
3. ದನಗಾರಗಲ್ಲಿ ಕೊ.ಪ್ರ – 1 ಸಂಖ್ಯೆ

60 ಸಂಖ್ಯೆ

ಶೌಚಾಲಯಗಳು

1. ಸಿದ್ಧಾರ್ಥನಗರ ಕೊ.ಪ್ರ – 2 ಸಂಖ್ಯೆ
2. ಮಾಂಗವಾಡ ಕೊ.ಪ್ರ – 1 ಸಂಖ್ಯೆ
3. ಅಶೋಕನಗರ ಕೊ.ಪ್ರ – 1 ಸಂಖ್ಯೆ
4. ಕಲವಾಡಿಹುಡ್ಕೋಕಾಲನಿ ಕೊ.ಪ್ರ – 1 ಸಂಖ್ಯೆ
5. ಕುಂಬಾರಗಲ್ಲಿ – 1 ಸಂಖ್ಯೆ
6. ಜೋಷಿವಾಡ ಕೊ.ಪ್ರ – 1 ಸಂಖ್ಯೆ

ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಇ) ಮೇಲ್ಕಂಡ ಅವಧಿಯಲ್ಲಿ ಮನೆಗಳು ಹಾಗೂ ಶೌಚಾಲಯಗಳ ನಿರ್ಮಾಣಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಿರುವ ಹಣವೆಷ್ಟು;

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ರಾಜ್ಯ ಸರ್ಕಾರದ ಯೋಜನೆಗಳಡಿಯಲ್ಲಿ ಪೂರ್ಣಗೊಳಿಸಿದ 1791 ಮನೆಗಳಿಗೆ ಹಾಗೂ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಪೂರ್ಣಗೊಳಿಸಲಾದ 795 ಮನೆಗಳ ಸಂಬಂಧಿಸಿದಂತೆ ಪ್ರತಿ ವರ್ಷ ವೆಚ್ಚ ಮಾಡಿದ ಹಣದ ವಿವರ ಕೆಳಗಿನಂತಿದೆ.

(ರೂ.ಲಕ್ಷಗಳಲ್ಲಿ)

ಯೋಜನೆ	ವರ್ಷ		
	2005–06	**2006–07**	**2007–08**
ಗ್ರಾಮೀಣ ಆಶ್ರಯ	313.50	161.10	0
ನಗರ ಆಶ್ರಯ	0	0	0
ಗ್ರಾಮೀಣ ಅಂಬೇಡ್ಕರ್	0	0	0
ಐಎವೈ	97.36	78.08	18.54
ಒಟ್ಟು	**410.86**	**239.18**	**18.54**

2005–06 ರಿಂದ 2007–08ನೇ ಶ್ರೇಣಿಯವರೆಗೆ ಇಂದಿರಾ ಆವಾಸ್ ಯೋಜನೆಯಡಿ ಶೌಚಾಲಯಗಳ ನಿರ್ಮಾಣಕ್ಕಾಗಿ ಭಾಲ್ಕಿ ತಾಲ್ಲೂಕಿನಲ್ಲಿ ಒಟ್ಟು ರೂ.4.07 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಮಾಹಿತಿಗಳು

(ರೂ.ಲಕ್ಷಗಳಲ್ಲಿ)

	2005–06	2006–07	2007–08
ಮನೆಗಳು	8.00	9.13	5.20
ಶೌಚಾಲಯಗಳು	3.10	3.10	3.05

ಈ) ನಿಗಧಿತ ಅವಧಿಯಲ್ಲಿ ಮನೆಗಳು ಹಾಗೂ ಶೌಚಾಲಯಗಳನ್ನು ನಿರ್ಮಿಸುವಲ್ಲಿ ವಿಳಂಬಕ್ಕೆ ಕಾರಣಗಳೇನು; ಇದಕ್ಕೆ ಕಾರಣಕರ್ತರಾದವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ಈ ಕೆಳಕಂಡ ಕಾರಣಗಳಿಂದ ಸದರಿ ಮನೆಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಆಗಿರುವುದಿಲ್ಲ.

1. ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬವಾಗುತ್ತಿರುವುದು.
2. ಫಲಾನುಭವಿಗಳು ಕಡುಬಡವರಾಗಿರುವುದರ ಜೊತೆಗೆ ಕೂಲಿಗಾಗಿ ವಲಸೆ ಹೋಗುತ್ತಿದ್ದು ನಿಗದಿತ ಅವಧಿಯಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳದಿರುವುದು.
3. ಫಲಾನುಭವಿಗಳು ಮೊದಲ ಕಂತಿನ ಹಣವನ್ನು ಪಡೆಯಲು ತಳಪಾಯ ನಿರ್ಮಿಸಿಕೊಳ್ಳಬೇಕಾಗಿದ್ದು, ಮೊದಲ ಹಂತದಲ್ಲಿ ಫಲಾನುಭವಿಗಳ ಬಳಿ ಹಣದ ಕೊರತೆ ಇರುವುದು.

ಮನೆಗಳನ್ನು ಹಾಗೂ ಶೌಚಾಲಯಗಳನ್ನು ಫಲಾನುಭವಿಗಳೆ ನಿರ್ಮಿಸಿಕೊಳ್ಳುತ್ತಿರುವುದರಿಂದ, ಫಲಾನುಭವಿಗಳಿಗೆ ತಿಳುವಳಿಕೆ ನೀಡಿ ಮನೆಗಳನ್ನು ಬೇಗನೆ ಪೂರ್ಣಗೊಳಿಸಿಕೊಳ್ಳಲು ಪ್ರೇರೇಪಿಸಲಾಗುತಿದೆ.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಯೋಜನೆಗಳಲ್ಲಿ ನಿವಾಸಿಗಳು ತಮ್ಮ ಗುಡಿಸಲುಗಳನ್ನು ತೆರವುಗೊಳಿಸುವಲ್ಲಿ ವಿಳಂಬ ಮಾಡಿರುವುದರಿಂದ ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ.

ಸಂಖ್ಯೆ:ವಇ/47/ಯುಹೆಚ್‌ಎಸ್/09

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)

ವಸತಿ ಹಾಗೂ ಮುಜರಾಯಿ ಸಚಿವರು:

ಅನುಬಂಧ-1

Rural Ashraya 2005-2006 Series Progress Report as on 31.01.2009

Taluk	Constituency	Grama Panchayat	Target	Houses Completed	Houses Under Progress	Houses Unstarted
Bhalki	Bhalki	Ambesangvi	40	37	3	0
Bhalki	Bhalki	Baloor	38	35	3	0
Bhalki	Bhalki	Beeri(b)	40	38	2	0
Bhalki	Bhalki	Bhatambra	5	5	0	0
Bhalki	Bhalki	Byalhalli(k)	40	37	3	0
Bhalki	Bhalki	Dadgi	40	37	3	0
Bhalki	Bhalki	Dhanoora	40	7	33	0
Bhalki	Bhalki	Dongapur	40	38	2	0
Bhalki	Bhalki	Gorchincholli	35	33	2	0
Bhalki	Bhalki	Halbarga	40	37	3	0
Bhalki	Bhalki	Janthi	36	33	3	0
Bhalki	Bhalki	Joldapka	38	36	2	0
Bhalki	Bhalki	Kanji	37	34	3	0
Bhalki	Bhalki	Konmelkunda	40	0	40	0
Bhalki	Bhalki	Lakhangaon	40	38	2	0
Bhalki	Bhalki	Madkatti	38	35	3	0
Bhalki	Bhalki	Malchapur	33	28	5	0
Bhalki	Bhalki	Methimelkunda	33	29	4	0
Bhalki	Bhalki	Nittur(b)	40	38	2	0
Bhalki	Bhalki	Shivani	38	36	2	0
Bhalki	Bhalki	Siddeshwar	39	36	3	0
Bhalki	Bhalki	Talwad(k)	29	27	2	0

Bhalki	Bhalki	Telgaon	40	36	4	0
Bhalki	Hulsoor	Alwai	35	33	2	0
Bhalki	Hulsoor	Chalkapur	40	37	3	0
Bhalki	Hulsoor	Dawargaon	40	37	3	0
Bhalki	Hulsoor	Inchoor	39	35	4	0
Bhalki	Hulsoor	Khatakchincholli	39	29	2	8
Bhalki	Hulsoor	Kurubkhelgi	39	22	17	0
Bhalki	Hulsoor	Mahkar	40	38	2	0
Bhalki	Hulsoor	Morambi	40	36	4	0
Bhalki	Hulsoor	Saigaon	21	17	2	2
Bhalki	Hulsoor	Tugaon(h)	40	36	4	0
Bhalki	Hulsoor	Wanjerkhed	40	33	2	0
Bhalki	Hulsoor	Warwatti	40	37	3	0
Total			1292	1105	177	10

ಅನುಬಂಧ-1

Rural Ashraya 2006-2007 Series Progress Report as on 31.01.2009

Taluk	Constituency	Grama Panchayat	Target	Houses Completed	Houses Under Progress	Houses Unstarted
Bhalki	Bhalki	Ambesangvi	60	`24	36	0
Bhalki	Bhalki	Baloor	60	29	26	5
Bhalki	Bhalki	Beeri(b)	60	32	22	6
Bhalki	Bhalki	Byalhalli(k)	60	4	56	0
Bhalki	Bhalki	Dadgi	60	16	41	3
Bhalki	Bhalki	Dhanoora	60	15	44	1
Bhalki	Bhalki	Dongapur	60	5	47	8
Bhalki	Bhalki	Gorchincholli	32	0	32	0

Bhalki	Bhalki	Halbarga	60	18	34	8
Bhalki	Bhalki	Janthi	60	6	48	6
Bhalki	Bhalki	Joldapka	60	29	27	4
Bhalki	Bhalki	Kanji	58	0	58	0
Bhalki	Bhalki	Konmelkunda	60	7	52	1
Bhalki	Bhalki	Lakhangaon	60	34	25	1
Bhalki	Bhalki	Madkatti	60	0	58	2
Bhalki	Bhalki	Malchapur	60	40	19	1
Bhalki	Bhalki	Methimelkunda	60	25	35	0
Bhalki	Bhalki	Nittur(b)	60	20	34	6
Bhalki	Bhalki	Shivani	60	23	28	9
Bhalki	Bhalki	Siddeshwar	59	28	18	13
Bhalki	Bhalki	Talwad(k)	60	6	42	12
Bhalki	Bhalki	Telgaon	60	37	23	0
Bhalki	Hulsoor	Alwai	60	16	40	4
Bhalki	Hulsoor	Chalkapur	58	8	45	5
Bhalki	Hulsoor	Inchoor	60	38	16	6
Bhalki	Hulsoor	Khatakchincholli	60	0	58	2
Bhalki	Hulsoor	Kurubkhelgi	60	11	41	8
Bhalki	Hulsoor	Mahkar	60	17	32	11
Bhalki	Hulsoor	Morambi	50	10	38	2
Bhalki	Hulsoor	Saigaon	60	23	37	0
Bhalki	Hulsoor	Tugaon(h)	60	0	60	0
Bhalki	Hulsoor	Wanjerkhe	60	7	51	2
Bhalki	Hulsoor	Warwatti	45	9	36	0
Total			**1922**	**537**	**1259**	**126**

ಅನುಬಂಧ-1

ಇಂದಿರಾ ಆವಾಸ್ ಯೋಜನೆಯಡಿ ಪೂರ್ಣಗೊಂಡ ಮನೆಗಳು ಮತ್ತು ಶೌಚಾಲಯಗಳ ವಿವರ

Year	GP	Target	Houses completed	Under progress	Unstarted	Sanitary latrine constructed
2005-2006	Dadgi	52	52	0	0	52
2005-2006	Malchapur	30	30	0	0	30
2005-2006	Byalhalli(k)	25	25	0	0	25
2005-2006	Dhanoora	36	36	0	0	36
2005-2006	Talwad(k)	21	21	0	0	21
2005-2006	Baloor	27	27	0	0	27
2005-2006	Nittur(b)	23	23	0	0	23
2005-2006	Bhatambra	29	29	0	0	29
2005-2006	Lakhangaon	30	30	0	0	30
2005-2006	Shivani	52	52	0	0	52
2005-2006	Inchoor	25	25	0	0	25
2005-2006	Kurubkhelgi	24	24	0	0	24
2005-2006	Khatakchincholli	25	25	0	0	25
2005-2006 Total		**399**	**399**	**0**	**0**	**399**
2006-2007	Gorchincholli	27	15	12	0	15
2006-2007	Madkatti	29	20	9	0	14
2006-2007	Kanji	28	15	13	0	13
2006-2007	Siddeshwar	29	21	8	0	17
2006-2007	Konmelkunda	30	16	14	0	16
2006-2007	Dongapur	29	19	10	0	19
2006-2007	Methimelkunda	28	14	14	0	14
2006-2007	Warwatti	200	200	0	0	96
2006-2007 Total		**400**	**320**	**80**	**0**	**204**
2007-2008	Morambi	5	0	5	0	0

2007-2008	Joldapka	31	13	17	1	13
2007-2008	Halbarga	26	6	18	2	6
2007-2008	Ambesangvi	27	15	11	1	15
2007-2008	Beeri(b)	31	5	25	1	5
2007-2008	Telgaon	31	13	18	0	13
2007-2008	Mehkar	31	6	23	2	6
2007-2008	Saigaon	31	0	31	0	0
2007-2008	Morambi	26	13	11	2	13
2007-2008	Dawargaon	31	5	24	2	5
2007-2008 Total		**270**	**76**	**183**	**11**	**76**
Grand Total		**1069**	**795**	**263**	**11**	**679**

ಕರ್ನಾಟಕ ವಿಧಾನಸಭೆ

288 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಬಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ಎಷ್ಟು ಹೆಚ್ಚುವರಿ ಕೊಠಡಿಗಳು ಮಂಜೂರಾಗಿವೆ; ಇವುಗಳ ಪೈಕಿ ಇಲ್ಲಿಯವರೆಗೆ ಎಷ್ಟು ಪೂರ್ಣಗೊಂಡಿವೆ ಮತ್ತು ಎಷ್ಟು ಅಪೂರ್ಣಗೊಂಡಿವೆ;

ಬಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕಳೆದ 3 ವರ್ಷದ ಅವಧಿಯಲ್ಲಿ ಮಂಜೂರಾದ ಹೆಚ್ಚುವರಿ ಕೊಠಡಿಗಳು ವಿವರಗಳು ಈ ಕೆಳಕಂಡಂತಿವೆ:-

ವರ್ಷ	ಮಂಜೂರಾದ ಕೊಠಡಿ	ಹಂತ				
		ಕೊಠಡಿಗಳ ಸಂಖ್ಯೆ		ಮುಕ್ತಾಯ ಹಂತದಲ್ಲಿರುವ ಕೊಠಡಿಗಳ ಸಂಖ್ಯೆ	ಪೂರ್ಣಗೊಂಡಿರುವ ಕೊಠಡಿಗಳ ಸಂಖ್ಯೆ	ನಿರ್ಮಾಣ ಕಾರ್ಯ ಪ್ರಾರಂಭವಾಗದೆ ಇರುವ ಶಾಲಾ ಕೊಠಡಿಗಳ ಸಂಖ್ಯೆ
		ಲಿಂಟಲ್	ರೂಫ್			
2006-07	306	03	10	22	271	-
2007-	-	-	-	-	-	-

08						
2008–09	46	26	01	–	–	19
ಒಟ್ಟು	352	29	11	22	271	19

ಆ) ಇದಕ್ಕಾಗಿ ಎಷ್ಟು ಹಣ ಮಂಜೂರಾಗಿದೆ; ಈ ಹಣದಿಂದ ಎಷ್ಟು ಕೊಠಡಿಗಳನ್ನು ನಿರ್ಮಿಸಲಾಗಿದೆ; ಅಪೂರ್ಣಗೊಂಡಿರುವ ಕೊಠಡಿಗಳಿಗೂ ಸಹ ಹಣ ವೆಚ್ಚ ಮಾಡಿರುವುದು ನಿಜವೇ(ಪೂರ್ಣ ವಿವರಗಳನ್ನು ಗ್ರಾಮಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಮಂಜೂರಾದ ಹಣದ ವಿವರ ಈ ಕೆಳಗಿನಂತಿದೆ:-

ವರ್ಷ	ಮಂಜೂರಾದ ಕೊಠಡಿ	ಬಿಡುಗಡೆಯಾದ ಹಣ (ರೂ.ಲಕ್ಷಗಳಲ್ಲಿ)
2006–07	306	703.80
2007–08	–	–
2008–09	46	174.80
ಒಟ್ಟು	352	878.60

2006–07ರಿಂದ 2008–09ರವರೆಗೆ 3 ವರ್ಷದ ಅವಧಿಯಲ್ಲಿ 352 ಹೆಚ್ಚುವರಿ ಕೊಠಡಿಗಳು ಮಂಜೂರಾಗಿದ್ದು, ಒಟ್ಟು ರೂ.878.60 ಲಕ್ಷ ಮಂಜೂರಾಗಿದೆ. ಇದರಲ್ಲಿ 271 ಕೊಠಡಿಗಳು ಪೂರ್ಣಗೊಂಡಿದ್ದು, ಉಳಿದ 81 ಕೊಠಡಿಗಳ ಕಾಮಗಾರಿ ವಿವಿಧ ಹಂತದಲ್ಲಿವೆ.

19 ಕೊಠಡಿಗಳಿಗೆ ಜನವರಿ 2009 ರಲ್ಲಿ ಅನುದಾನ ಬಿಡುಗಡೆಯಾಗಿದ್ದು, ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಅಪೂರ್ಣಗೊಂಡಿರುವ ಕೊಠಡಿಗಳಿಗೆ ಕೆಲಸಕ್ಕನುಗುಣವಾಗಿ ಆಯಾ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರ ಜಂಟಿ ಖಾತೆಯಿಂದ ಹಣ ಬಿಡುಗಡೆ ಮಾಡಿದ್ದು, ಇನ್ನೂ ಪೂರ್ಣಗೊಳ್ಳಬೇಕಾದ ಕಾಮಗಾರಿಗಾಗಿ ಮೊತ್ತ ಆಯಾ ಶಾಲೆಯ ಎಸ್.ಡಿ.ಎಂ.ಸಿ ಜಂಟಿ ಖಾತೆಯಲ್ಲಿ ಉಳಿದಿರುತ್ತದೆ.

(ಗ್ರಾಮವಾರು ಅಂಕಿ ಅಂಶಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.).

ಇ) ಕೊಠಡಿಗಳು ಅಪೂರ್ಣ ಗೊಂಡಿದ್ದರೂ ಪೂರ್ಣ ಹಣವನ್ನು ಖರ್ಚು ಮಾಡುವ ಮೂಲಕ ಈ ಅಕ್ರಮ ವ್ಯವಹಾರಗಳಿಗೆ ಕಾರಣಕರ್ತರಾದವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಅಕ್ರಮ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಇಂತಹ ಅವ್ಯವಹಾರಗಳು ಕಂಡು ಬಂದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ:ಇಡಿ 64 ಎಂಸಿಡಿ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅನುಬಂಧ

ಸರ್ವ ಶಿಕ್ಷಣ ಅಭಿಯಾನ-ಬೀದರ

2006-07ನೇ ಸಾಲಿನ ಹೆಚ್ಚುವರಿ ಕೋಣೆಗಳ ವಿವರ (ತಿಂಗಳು : ಜನವರಿ 2009)

ತಾಲ್ಲೂಕು : ಭಾಲ್ಕಿ ಘಟಕ ವೆಚ್ಚ : 2.30 ಲಕ್ಷ

ಕ್ರ ಸಂ.	ಶಾಲೆಯ ಹೆಸರು	ಗುರಿ		ಫೌಂಡೇಶನ್	ಬೇಸಮೆಂಟ್	ಲಿಂಟಲ್	ರೂಫ	ಫಿನಿಶಿಂಗ	ಪೂರ್ಣಗೊಂಡ	ಬಿಡುಗಡೆಯಾದ ಹಣ
		ಭೌತಿಕ	ಘ.ವೆ							
1	ಸಹಿಪ್ರಾಶಾಲೆ ಅಂಬೆಸಾಂಗವಿ	4	2.30						4	9.20
2	ಸಹಿಪ್ರಾಶಾಲೆ ವಳಸಂಗ	3	2.30						3	6.90
3	ಸಹಿಪ್ರಾಶಾಲೆ ಹುಪಳಾ	3	2.30						3	6.90
4	ಸಹಿಪ್ರಾಶಾಲೆ ಕರಡಿಯಾಳ	1	2.30						1	2.30
5	ಸಹಿಪ್ರಾಶಾಲೆ ಧಾರಾಜವಾಡಿ	1	2.30						1	2.30
6	ಸಹಿಪ್ರಾಶಾಲೆ ಸೈದಾಪೂರವಾಡಿ	2	2.30						2	4.60
7	ಸಹಿಪ್ರಾಶಾಲೆ ಎನ್.ಟಿ.ಎಂ.ಎಸ್.ಭಾಲ್ಕಿ	10	2.30						10	23.00
8	ಸಹಿಪ್ರಾಶಾಲೆ ಗಂಜ್ ಭಾಲ್ಕಿ	3	2.30				1	2		6.90
9	ಸಹಿಪ್ರಾಶಾಲೆ ಅಶೋಕನಗರ ಭಾಲ್ಕಿ	2	2.30					2		4.60
10	ಸಹಿಪ್ರಾಶಾಲೆ ಭಾಲ್ಕಿ ಕನ್ಯಾ	4	2.30						4	9.20
11	ಸಹಿಪ್ರಾಶಾಲೆ ಭೀಮನಗರ ಭಾಲ್ಕಿ	5	2.30			1			4	11.50
12	ಸಹಿಪ್ರಾಶಾಲೆ ಸಿಬಿನಗರ ಭಾಲ್ಕಿ	2	2.30						2	4.60

13	ಸಹಿಪ್ರಾಶಾಲೆ ಇಂದಿರಾನಗರ ಭಾಲ್ಕಿ	2	2.30						2	4.60
14	ಸಹಿಪ್ರಾಶಾಲೆ ಧನ್ನೂರ (ಎಸ್)	3	2.30						3	6.90
15	ಸಹಿಪ್ರಾಶಾಲೆ ಧನ್ನೂರ (ಎಸ್) ಉರ್ದು	1	2.30						1	2.30
16	ಸಹಿಪ್ರಾಶಾಲೆ ಸೇವಾನಗರ	2	2.30						2	4.60
17	ಸಹಿಪ್ರಾಶಾಲೆ ಗರ್ಮಾ ಥಾಂಡಾ	2	2.30						2	4.60
18	ಸಹಿಪ್ರಾಶಾಲೆ ದಾದೂಡಿ ಥಾಂಡಾ	1	2.30						1	2.30
19	ಸಹಿಪ್ರಾಶಾಲೆ ಮಳಚಾಪೂರ	3	2.30						3	6.90
20	ಸಹಿಪ್ರಾಶಾಲೆ ರೂದ್ನೂರ	2	2.30						2	4.60
21	ಸಹಿಪ್ರಾಶಾಲೆ ರುದ್ನೋರ ಥಾಂಡಾ	1	2.30						1	2.30
22	ಸಹಿಪ್ರಾಶಾಲೆ ಖಾನಾಪೂರ ಥಾಂಡಾ	1	2.30						1	2.30
23	ಸಹಿಪ್ರಾಶಾಲೆ ಹಾಲಹಳ್ಳಿ (ಕೆ)	1	2.30						1	11.50
24	ಸಹಿಪ್ರಾಶಾಲೆ ಬ್ಯಾಲಹಳ್ಳಿ (ಕೆ)	5	2.30						5	4.60
25	ಸಹಿಪ್ರಾಶಾಲೆ ಹಾಲಹಳ್ಳಿ ಥಾಂಡಾ	2	2.30						2	6.90
26	ಸಹಿಪ್ರಾಶಾಲೆ ನೀಲಮನಳ್ಳಿ	3	2.30						3	4.60
27	ಸಹಿಪ್ರಾಶಾಲೆ ಹಾಲಹಳ್ಳಿ ಕ್ಯಾಂಪ್	2	2.30						2	4.60
28	ಸಹಿಪ್ರಾಶಾಲೆ ಹುಣಜಿ (ಕೆ)	2	2.30						2	4.60
29	ಸಹಿಪ್ರಾಶಾಲೆ ಕಣಜಿ	2	2.30				1	1		4.60
30	ಸಹಿಪ್ರಾಶಾಲೆ ಜ್ಯಾಂತಿ	2	2.30						2	4.60
31	ಸಹಿಪ್ರಾಶಾಲೆ ತರನಳ್ಳಿ	3	2.30				1		2	6.90

32	ಸಹಿಪ್ರಾಶಾಲೆ ಜೊಳದಾಬಕಾ	4	2.30						4	9.20
33	ಸಹಿಪ್ರಾಶಾಲೆ ಗೋದಿಹಪ್ಪರ್ಗಾ	1	2.30						1	2.30
34	ಸಹಿಪ್ರಾಶಾಲೆ ಚಿಕ್ಕಲಚಂದಾ	2	2.30						2	4.60
35	ಸಹಿಪ್ರಾಶಾಲೆ ಮರೂರ	4	2.30						4	9.20
36	ಸಹಿಪ್ರಾಶಾಲೆ ಸಿದ್ದೇಶ್ವರ ವಾಡಿ	2	2.30						2	4.60
37	ಸಹಿಪ್ರಾಶಾಲೆ ಸಿದ್ದೇಶ್ವರ	2	2.30						2	4.60
38	ಸಹಿಪ್ರಾಶಾಲೆ ಕೆ.ಚಂಚೋಳ್ಳಿ	2	2.30					2		4.60
39	ಸಹಿಪ್ರಾಶಾಲೆ ಸಿಕಂದ್ರಾಬಾದ ವಾಡಿ	1	2.30						1	2.30
40	ಸಹಿಪ್ರಾಶಾಲೆ ಡೋಣಗಾಂವ	2	2.30						2	4.60
41	ಸಹಿಪ್ರಾಶಾಲೆ ಮಾಸಿಮಾಡು	1	2.30						1	2.30
42	ಸಹಿಪ್ರಾಶಾಲೆ ಕುರುಬಖೇಳಗಿ	2	2.30						2	4.60
43	ಸಹಿಪ್ರಾಶಾಲೆ ಎಣಕೋರ	2	2.30					1	1	4.60
44	ಸಹಿಪ್ರಾಶಾಲೆ ಎಣಕೋರ ಉರ್ದು	2	2.30						2	4.60
45	ಸಹಿಪ್ರಾಶಾಲೆ ಲಖಣಗಾಂವ	2	2.30						2	4.60
46	ಸಹಿಪ್ರಾಶಾಲೆ ಅತ್ನೂರ	3	2.30						3	6.90
47	ಸಹಿಪ್ರಾಶಾಲೆ ಸೋಮಪೂರ	2	2.30						2	4.60
48	ಸಹಿಪ್ರಾಶಾಲೆ ಕಾಕನಾಳ	3	2.30						3	6.90
49	ಸಹಿಪ್ರಾಶಾಲೆ ಮೇಥಿಮೆಳಕುಂದಾ	3	2.30					3		6.90
50	ಸಹಿಪ್ರಾಶಾಲೆ ಮೇಥಿಮೆಳಕುಂದಾ ವಾಡಿ	2	2.30						2	4.60

51	ಸಹಿಪ್ರಾಶಾಲೆ ವರವಟ್ಟಿ (ಬಿ)	1	2.30						1	2.30
52	ಸಹಿಪ್ರಾಶಾಲೆ ಮಾವಿನಹಳ್ಳಿ	1	2.30						1	2.30
53	ಸಹಿಪ್ರಾಶಾಲೆ ನಾವದಗಿ	1	2.30						1	2.30
54	ಸಹಿಪ್ರಾಶಾಲೆ ಬ್ಯಾಲಹಳ್ಳಿ (ಡಬ್ಲೋ)	1	2.30						1	2.30
55	ಸಹಿಪ್ರಾಶಾಲೆ ವರವಟ್ಟಿ ವಾಡಿ	1	2.30						1	2.30
56	ಸಹಿಪ್ರಾಶಾಲೆ ರಾಮತೀರ್ಥ ವಾಡಿ	1	2.30						1	2.30
57	ಸಹಿಪ್ರಾಶಾಲೆ ಮದಕಟ್ಟಿ	5	2.30						5	11.50
58	ಸಹಿಪ್ರಾಶಾಲೆ ತಳವಾಡ (ಕೆ)	1	2.30					1		2.30
59	ಸಹಿಪ್ರಾಶಾಲೆ ತಳವಾಡ (ಎಂ)	2	2.30						2	4.60
60	ಸಹಿಪ್ರಾಶಾಲೆ ಸಿದ್ದಾಮೂರ ವಾಡಿ	2	2.30						2	4.60
61	ಸಹಿಪ್ರಾಶಾಲೆ ಜಾಯಗಾಂವ	1	2.30					1		2.30
62	ಸಹಿಪ್ರಾಶಾಲೆ ಶಮಶಾಮೂರ ವಾಡಿ	1	2.30						1	2.30
63	ಸಹಿಪ್ರಾಶಾಲೆ ಭಾತಂಬ್ರಾ	6	2.30						6	13.80
64	ಸಹಿಪ್ರಾಶಾಲೆ ಗೋರ ಚಂಚೋಳ್ಳಿ	1	2.30						1	2.30
65	ಸಹಿಪ್ರಾಶಾಲೆ ಕೋರುರ (ಹೆಚ್)	2	2.30						2	4.60
66	ಸಹಿಪ್ರಾಶಾಲೆ ತೆಲಗಾಂವ	2	2.30			2				4.60
67	ಸಹಿಪ್ರಾಶಾಲೆ ಕಳಸದಾಳ ಕಳಸದಾಳ	2	2.30						2	4.60
68	ಸಹಿಪ್ರಾಶಾಲೆ ತೆಗಂಮೂರ	4	2.30						4	9.20
69	ಸಹಿಪ್ರಾಶಾಲೆ ಹಾಲಹಿಪ್ಪರ್ಗಾ	2	2.30						2	4.60

70	ಸಹಿಪ್ರಾಶಾಲೆ ಕುರನಳ್ಳಿ	1	2.30						1	2.30
71	ಸಹಿಪ್ರಾಶಾಲೆ ಕೋಸಮ	2	2.30						2	4.60
72	ಸಹಿಪ್ರಾಶಾಲೆ ನಾಗೋರ (ಕೆ)	1	2.30						1	2.30
73	ಸಹಿಪ್ರಾಶಾಲೆ ಹಲಬರ್ಗಾ	1	2.30				1		1	2.30
74	ಸಹಿಪ್ರಾಶಾಲೆ ಮೋರಂಬಿ	1	2.30							2.30
75	ಸಹಿಪ್ರಾಶಾಲೆ ಆರ್. ಗೌಡಗಾಂವ	1	2.30						1	2.30
76	ಸಹಿಪ್ರಾಶಾಲೆ ಉಬ್ಬಾ	4	2.30						4	9.20
77	ಸಹಿಪ್ರಾಶಾಲೆ ಹೊನಳ್ಳಿ	2	2.30						2	4.60
78	ಸಹಿಪ್ರಾಶಾಲೆ ಕುಂಟೆಗಾಂವ	3	2.30						3	6.90
79	ಸಹಿಪ್ರಾಶಾಲೆ ಬಾಜೋಳಗಾ (ಕೆ)	1	2.30						1	2.30
80	ಸಹಿಪ್ರಾಶಾಲೆ ಬಸವನಗುಡಿ	2	2.30						2	4.60
81	ಸಹಿಪ್ರಾಶಾಲೆ ಕೇಸರಜವಳಗಾ	4	2.30						4	9.20
82	ಸಹಿಪ್ರಾಶಾಲೆ ಸಾಯಗಾಂವ ಥಾಂಡಾ	1	2.30						1	2.30
83	ಸಹಿಪ್ರಾಶಾಲೆ ವಾಂಜರಖೇಡ್	5	2.30						5	11.50
84	ಸಹಿಪ್ರಾಶಾಲೆ ಜಮಖಂಡಿ	2	2.30						2	4.60
85	ಸಹಿಪ್ರಾಶಾಲೆ ಕೊಂಗಳಿ	2	2.30						2	4.60
86	ಸಹಿಪ್ರಾಶಾಲೆ ಇಂಚೂರ	4	2.30				2	2		9.20
87	ಸಹಿಪ್ರಾಶಾಲೆ ಲಾಧಾ	2	2.30						2	4.60
88	ಸಹಿಪ್ರಾಶಾಲೆ, ಹಲ್ಸಿ (ಎಲ್)	2	2.30						2	4.60

89	ಸಹಿಪ್ರಾಶಾಲೆ ಖುದಾವಂದಪೂರ	3	2.30						3	6.90
90	ಸಹಿಪ್ರಾಶಾಲೆ ವಾಗಲಗಾಂವ	3	2.30						3	6.90
91	ಸಹಿಪ್ರಾಶಾಲೆ ನಾರಾದ ಸಂಗಮ್	1	2.30						1	2.30
92	ಸಹಿಪ್ರಾಶಾಲೆ ಮೋಹಕರ ಥಾಂಡಾ	1	2.30						1	2.30
93	ಸಹಿಪ್ರಾಶಾಲೆ ಅಲವಯಿ	2	2.30						2	4.60
94	ಸಹಿಪ್ರಾಶಾಲೆ ಅಟ್ಟೂರಗಾ	2	2.30						2	4.60
95	ಸಹಿಪ್ರಾಶಾಲೆ ಮಾಣಿಕೇಶ್ವರ	2	2.30				2			4.60
96	ಸಹಿಪ್ರಾಶಾಲೆ ಹರಿವಾಡಿ	2	2.30						2	4.60
97	ಸಹಿಪ್ರಾಶಾಲೆ ಎಗ್.ಎಂ.ವಾಡಿ	2	2.30						2	4.60
98	ಸಹಿಪ್ರಾಶಾಲೆ ಉರ್ದು ಅಲವಯಿ	2	2.30						2	4.60
99	ಸಹಿಪ್ರಾಶಾಲೆ ಗುಂಜರಗಾ	3	2.30						3	6.90
100	ಸಹಿಪ್ರಾಶಾಲೆ ಕಲವಾಡಿ	3	2.30					3		6.90
101	ಸಹಿಪ್ರಾಶಾಲೆ ಕುಂಟೆಸಿರ್ಸಿ	1	2.30				1			2.30
102	ಸಹಿಪ್ರಾಶಾಲೆ ಹರನಾಳ	2	2.30						2	4.60
103	ಸಹಿಪ್ರಾಶಾಲೆ ನಿಟ್ಟೂರು (ಬಿ)	4	2.30						4	9.20
104	ಸಹಿಪ್ರಾಶಾಲೆ ಚಂದಾಪುರ	1	2.30					1		2.30
105	ಸಹಿಪ್ರಾಶಾಲೆ ಹಜನಾಳ	2	2.30						2	4.60
106	ಸಹಿಪ್ರಾಶಾಲೆ ನಾಗರಾಳ	2	2.30						2	4.60
107	ಸಹಿಪ್ರಾಶಾಲೆ ಮೊರಾಳ	1	2.30						1	2.30

108	ಸಹಿಪ್ರಾಶಾಲೆ ಖಾಶಂಪೂರ	1	2.30						1	2.30
109	ಸಹಿಪ್ರಾಶಾಲೆ ಬೀರಿ (ಕೆ)	1	2.30						1	2.30
110	ಸಹಿಪ್ರಾಶಾಲೆ ಗೋರನಾಳ	1	2.30						1	2.30
111	ಸಹಿಪ್ರಾಶಾಲೆ ಜೈನಾಪುರ	1	2.30						1	2.30
112	ಸಹಿಪ್ರಾಶಾಲೆ ಡೋಣಗಾಂವ	1	2.30						1	2.30
113	ಸಹಿಪ್ರಾಶಾಲೆ ಬಲ್ಲೂರ ಥಾಂಡಾ	1	2.30				1			2.30
114	ಸಹಿಪ್ರಾಶಾಲೆ ಲಖಣಗಾಂವ (ಉರ್ದು)	1	2.30						1	2.30
115	ಸಹಿಪ್ರಾಶಾಲೆ ಭಾಗ್ಯನಗರ	2	2.30						2	4.60
116	ಸಹಿಪ್ರಾಶಾಲೆ ಭಾಗ್ಯನಗರ	2	2.30						2	4.60
117	ಸಹಿಪ್ರಾಶಾಲೆ ಲಂಜನಾಡ್	3	2.30						3	6.90
118	ಸಹಿಪ್ರಾಶಾಲೆ ಭಾಟಸಾಂಗವಿ	2	2.30						2	4.60
119	ಸಹಿಪ್ರಾಶಾಲೆ ಕಾಸರತುಗಾಂವ ವಾಡಿ	2	2.30						2	4.60
120	ಸಹಿಪ್ರಾಶಾಲೆ ಖಿಟಕಚಂಚೋಳ್ಳಿ (ಉರ್ದು)	1	2.30						1	2.30
121	ಸಹಿಪ್ರಾಶಾಲೆ ಶ್ರೀಮಾಳಿ	5	2.30						5	11.50
122	ಸಹಿಪ್ರಾಶಾಲೆ ಮೇಹಕರ	5	2.30						5	11.50
123	ಸಹಿಪ್ರಾಶಾಲೆ ಕೊಟಗ್ಯಾಳವಡಿ	2	2.30						2	4.60
124	ಸಹಿಪ್ರಾಶಾಲೆ ಹಲ್ಸಿ ತುಗಾಂವ	2	2.30						2	4.60
125	ಸಹಿಪ್ರಾಶಾಲೆ ಕಾಸರತುಗಾಂವ	3	2.30						3	6.90

126	ಸಹಿಪ್ರಾಶಾಲೆ ಕೋರೂರ (ಹಳೇ)	2	2.30						2	4.60
127	ಸಹಿಪ್ರಾಶಾಲೆ ಆನಂದವಾಡಿ	2	2.30						2	4.60
128	ಸಹಿಪ್ರಾಶಾಲೆ ಬಾಜೋಳಗಾ	2	2.30						2	4.60
129	ಸಹಿಪ್ರಾಶಾಲೆ ಹಾಲಗೊರ್ಟಾ	1	2.30						1	2.30
130	ಸಹಿಪ್ರಾಶಾಲೆ ದಾಡಗಿ	2	2.30						2	4.60
131	ಸಹಿಪ್ರಾಶಾಲೆ ವಾಂಜರಖೇಡ್ ತಾಂಡಾ	1	2.30						1	2.30
132	ಸಹಿಪ್ರಾಶಾಲೆ ಎಕಲಾಸಪೂರವಾಡಿ	1	2.30						1	2.30
133	ಸಹಿಪ್ರಾಶಾಲೆ ನಿಡೆಬಾನ	3	2.30						3	6.90
134	ಸಹಿಪ್ರಾಶಾಲೆ ಹಚಿಕಮಠ	2	2.30						2	4.60
135	ಸಹಿಪ್ರಾಶಾಲೆ ಕವಲಾಪೂರ	3	2.30					1	2	6.90
136	ಸಹಿಪ್ರಾಶಾಲೆ ನೇಳಗಿ	3	2.30						3	6.90
137	ಸಹಿಪ್ರಾಶಾಲೆ ಅಳಂದಿ	5	2.30						5	11.50
138	ಸಹಿಪ್ರಾಶಾಲೆ ಅಮದಾಬಾದ	1	2.30						1	2.30
139	ಸಹಿಪ್ರಾಶಾಲೆ ಚಿಟ್ಟಾ	2	2.30					2		4.60
140	ಸಹಿಪ್ರಾಶಾಲೆ ಜಳಕಾಪೂರವಾಡಿ	1	2.30						1	2.30
	ಒಟ್ಟು	**306**	**322.00**	**0**	**0**	**3**	**10**	**22**	**271**	**703.80**

ಕರ್ನಾಟಕ ವಿಧಾನ ಸಭೆ

289 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)

ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಜಲ ನಿರ್ಮಲ ಯೋಜನೆಯಡಿಯಲ್ಲಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ; ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ ಹಾಗೂ ಎಷ್ಟು ಅಪೂರ್ಣವಾಗಿವೆ;

ಕಳೆದ ಮೂರು ವರ್ಷಗಳಲ್ಲಿ ಅಂದರೆ 2005-06, 2006-07 ಹಾಗೂ 2007-08ನೇ ಸಾಲುಗಳಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಜಲ ನಿರ್ಮಲ ಯೋಜನೆಯಡಿಯಲ್ಲಿ ಒಟ್ಟು 6 ಗ್ರಾಮ ಪಂಚಾಯಿತಿ ವ್ಯಾಪ್ತಿಯಡಿ 23 ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ 23 ಗ್ರಾಮಗಳ ಪೈಕಿ 22 ಗ್ರಾಮಗಳಲ್ಲಿನ ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಒಂದು ಗ್ರಾಮದಲ್ಲಿನ ಕಾಮಗಾರಿ ಮಾತ್ರ ಪ್ರಗತಿಯಲ್ಲಿರುತ್ತದೆ.

ಆ) ಈ ಗ್ರಾಮಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮೇಲ್ಕಂಡ ಅವಧಿಯಲ್ಲಿ ವೆಚ್ಚ ಮಾಡಿರುವ ಹಣವೆಷ್ಟು (ಗ್ರಾಮಾವಾರು ವಿವರಗಳನ್ನು ಒದಗಿಸುವುದು);

ಈ ಗ್ರಾಮಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಈವರೆಗೆ ರೂ.261.34 ಲಕ್ಷಗಳನ್ನು ವೆಚ್ಚ ಮಾಡಿದ್ದು, ವೆಚ್ಚ ಮಾಡಲಾಗಿರುವ ಹಣದ ಗ್ರಾಮಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ಪೈಕಿ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಂಡು ಜನರಿಗೆ ನೀರಿನ ಸೌಲಭ್ಯ ದೊರಕುತ್ತಿದೆ;

19 ಹಳ್ಳಿಗಳಲ್ಲಿ ಜನರಿಗೆ ಕುಡಿಯುವ ನೀರಿನ ಸೌಲಭ್ಯ ದೊರಕುತ್ತಿದೆ.

ಈ) ಮೇಲ್ಕಂಡ ಅವಧಿಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿದ್ದರೂ ಸಹ ಹಲವಾರು ಗ್ರಾಮಗಳಲ್ಲಿ ಕಾಮಗಾರಿಗಳು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದೇ ಅಪೂರ್ಣಗೊಂಡಿರುವುದರಿಂದ ಕುಡಿಯುವ ನೀರಿನ ಸೌಲಭ್ಯ ದೊರೆಯದೇ ಇರುವುದು ನಿಜವೇ;

ಇಲ್ಲ.

ಉ). ಹಾಗಿದ್ದಲ್ಲಿ, ಇದಕ್ಕೆ ಕಾರಣಕರ್ತರಾದವರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಉದ್ಭವಿಸುವುದಿಲ್ಲ.

ಸಂಖ್ಯೆ: ಗ್ರಾಅಪ/ಕನೀಸಂ/403/2009

(ಶೋಭಾ ಕರಂದ್ಲಾಜೆ)
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಅನುಬಂಧ

ಜಲ ನಿರ್ಮಲ ಯೋಜನೆಯಡಿ ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಅನುಷ್ಠಾನಗೊಳಿಸಲು ತೆಗೆದುಕೊಂಡಿರುವ ಗ್ರಾಮಗಳಲ್ಲಿ ಗ್ರಾಮಾವಾರು ವೆಚ್ಚ ಮಾಡಿರುವ ಹಣದ ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಗ್ರಾಮ ಪಂಚಾಯತ್	ಗ್ರಾಮ	ಕಾಮಗಾರಿಯ ವಿವರ	ಕಾಮಗಾರಿಯ ಅಂದಾಜು ಮೊತ್ತ	ಈವರೆಗೆ ಮಾಡಲಾದ ವೆಚ್ಚ	ಭೌತಿಕ ಪ್ರಗತಿ ವಿವರ
1	ಅಳವಾಯಿ	1) ಅಳವಾಯಿ	ನೀರು ಸರಬರಾಜು	17.86	15.82	ಕಾಮಗಾರಿ ಪೂರ್ಣಗೊಂಡಿದೆ
		2) ಅತ್ತರ್ಗಾ	ನೀರು ಸರಬರಾಜು	12.38	6.87	ಕಾಮಗಾರಿ ಪೂರ್ಣಗೊಂಡಿದೆ
		3) ಹರಿವಾಡಿ	ನೀರು ಸರಬರಾಜು	5.78	4.78	ಕಾಮಗಾರಿ ಪೂರ್ಣಗೊಂಡಿದೆ
		4) ಮಾಣಿಕೇಶ್ವರ	ನೀರು ಸರಬರಾಜು	21.23	16.45	ಕಾಮಗಾರಿ ಪ್ರಗತಿಯಲ್ಲಿದೆ
		5) ಯಲ್ಲಮ್ಮವಾಡಿ	ನೀರು ಸರಬರಾಜು	13.06	8.70	ಕಾಮಗಾರಿ ಪೂರ್ಣಗೊಂಡಿದೆ
2	ಭಾತಂಬ್ರಾ	6) ಆನಂದವಾಡಿ	ನೀರು ಸರಬರಾಜು	22.41	15.90	ಕಾಮಗಾರಿ ಪೂರ್ಣಗೊಂಡಿದೆ
		7) ಭಾತಂಬ್ರಾ	ನೀರು ಸರಬರಾಜು	48.60	27.57	ಕಾಮಗಾರಿ ಪೂರ್ಣಗೊಂಡಿದೆ
3	ಗೊರಚಿಂಚೋಳ್ಳಿ	8) ಕೊರೂರ	ನೀರು ಸರಬರಾಜು	26.76	16.97	ಕಾಮಗಾರಿ ಪೂರ್ಣಗೊಂಡಿದೆ
		9) ಕೊಟಗೇರಾ	ನೀರು ಸರಬರಾಜು	12.60	7.31	ಕಾಮಗಾರಿ ಪೂರ್ಣಗೊಂಡಿದೆ
		10) ನಿಡೇಬಾನ	ನೀರು ಸರಬರಾಜು	19.39	13.10	ಕಾಮಗಾರಿ ಪೂರ್ಣಗೊಂಡಿದೆ
4	ಶಿವಣಿ	11) ಕಾಕನಾಳ	ನೀರು ಸರಬರಾಜು	5.44	6.92	ಕಾಮಗಾರಿ ಪೂರ್ಣಗೊಂಡಿದೆ
		12)	ನೀರು ಸರಬರಾಜು	10.20	4.73	ಕಾಮಗಾರಿ ಪೂರ್ಣಗೊಂಡಿದೆ

		ಕಾಸರತುಗಾಂವವಾಡಿ				
		13) ಕಾಸರತುಗಾಂವ	ನೀರು ಸರಬರಾಜು	13.25	8.80	ಕಾಮಗಾರಿ ಪೂರ್ಣಗೊಂಡಿದೆ
		14) ಶಿವಣಿ	ನೀರು ಸರಬರಾಜು	32.56	20.77	ಕಾಮಗಾರಿ ಪೂರ್ಣಗೊಂಡಿದೆ
5	ತಳವಾಡ(ಕೆ)	15) ಧಾರಜವಾಡಿ	ನೀರು ಸರಬರಾಜು	15.22	4.12	ಕಾಮಗಾರಿ ಪೂರ್ಣಗೊಂಡಿದೆ
		16) ಕಾದಲಾಬಾದ	ನೀರು ಸರಬರಾಜು	12.60	10.33	ಕಾಮಗಾರಿ ಪೂರ್ಣಗೊಂಡಿದೆ
		17) ಕರಡಿಯಾಳ	ನೀರು ಸರಬರಾಜು	13.39	7.05	ಕಾಮಗಾರಿ ಪೂರ್ಣಗೊಂಡಿದೆ
		18) ಸೈದಾಪೂರವಾಡಿ	ನೀರು ಸರಬರಾಜು	9.28	7.44	ಕಾಮಗಾರಿ ಪೂರ್ಣಗೊಂಡಿದೆ
		19) ತಳವಾಡ(ಕೆ)	ನೀರು ಸರಬರಾಜು	21.81	12.97	ಕಾಮಗಾರಿ ಪೂರ್ಣಗೊಂಡಿದೆ
6	ವರಹಟ್ಟಿ	20) ಬ್ಯಾಲಹಳ್ಳಿ	ನೀರು ಸರಬರಾಜು	18.47	14.87	ಕಾಮಗಾರಿ ಪೂರ್ಣಗೊಂಡಿದೆ
		21) ಮಾವಿನಹಳ್ಳಿ	ನೀರು ಸರಬರಾಜು	8.81	5.33	ಕಾಮಗಾರಿ ಪೂರ್ಣಗೊಂಡಿದೆ
		22) ನವದಗಿ	ನೀರು ಸರಬರಾಜು	16.74	13.61	ಕಾಮಗಾರಿ ಪೂರ್ಣಗೊಂಡಿದೆ
		23) ವರಹಟ್ಟಿ	ನೀರು ಸರಬರಾಜು	20.12	10.93	ಕಾಮಗಾರಿ ಪೂರ್ಣಗೊಂಡಿದೆ
			ಒಟ್ಟು	**397.96**	**261.34**	

ಕರ್ನಾಟಕ ವಿಧಾನಸಭೆ

290 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ [ಭಾಲ್ಕಿ]
ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ. ಭಾಲ್ಕಿ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು; ಇವು ಎಲ್ಲೆಲ್ಲಿ ಇವೆ;

ಪಟ್ಟಣದಲ್ಲಿ ಒಂದು ಕಾಲೇಜು ಪ್ರಾರಂಭಿಸಲಾಗಿದೆ.

ಆ. ಈ ಪೈಕಿ ಎಷ್ಟು ಕಾಲೇಜಿಗೆ ಸ್ವಂತ ಕಟ್ಟಡ ಇದೆ; ಎಷ್ಟು ಕಾಲೇಜುಗಳು ಕಟ್ಟಡದ ಸಮಸ್ಯೆಯನ್ನು ಎದುರಿಸುತ್ತಿವೆ;

ಭಾಲ್ಕಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2007-08ನೇ ಸಾಲಿನಲ್ಲಿ ಪ್ರಾರಂಭಿಸಿದ್ದು, ಕಟ್ಟಡ ಕಾಮಗಾರಿಗೆ ರೂ.75.00 ಲಕ್ಷಗಳ ಅಂದಾಜಿಗೆ ರೂ.22.50 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿತ್ತು. ಆದರೆ, ನಿವೇಶನ ಇದುವರೆಗೂ ಲಭ್ಯವಾಗಿರುವುದಿಲ್ಲ. ನಿವೇಶನ ಪಡೆಯುವ ಪ್ರಕ್ರಿಯೆಗಳು ಜಾರಿಯಲ್ಲಿವೆ. ನಿವೇಶನ ಲಭ್ಯವಾದ ತಕ್ಷಣ ಮತ್ತೆ ಅನುದಾನ ಒದಗಿಸಿ ಕಟ್ಟಡ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ. ಪದವಿ ಕಾಲೇಜಿಗೆ ಕಟ್ಟಡದ ಸಮಸ್ಯೆ ಇರುವುದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಯಾವ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.

ಕಾಲೇಜಿನ ತರಗತಿಗಳನ್ನು ತಾತ್ಕಾಲಿಕವಾಗಿ ಬಾಲ್ಕಿ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲಾಗುತ್ತಿದೆ.

ಈ. ಕಟ್ಟಡದ ಸಮಸ್ಯೆ ಇರುವ ಡಿಗ್ರಿ ಕಾಲೇಜಿಗೆ ಬಾಡಿಗೆ ಕಟ್ಟಡವನ್ನು ಪಡೆದುಕೊಂಡು ಕಾಲೇಜನ್ನು ನಡಸುವ ಬಗ್ಗೆ ಸರ್ಕಾರದ ಮುಂದಿರುವ ಕ್ರಮಗಳೇನು

ಸರ್ಕಾರಿ ಕಟ್ಟಡ ಲಭ್ಯವಿಲ್ಲದಿದ್ದಲ್ಲಿ ಖಾಸಗಿಯವರಿಂದ ಬಾಡಿಗೆ ಆಧಾರದ ಮೇಲೆ ನಡೆಸಲು ಪ್ರಾಂಶುಪಾಲರಿಂದ ಪ್ರಸ್ತಾವನೆ ಬಂದಲ್ಲಿ ಅನುಮತಿ ನೀಡಲಾಗುವುದು.

ಇಡಿ:42: ಯೋಸಕ 2009

ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

291 ಶ್ರೀ ಹೆಚ್.ಡಿ.ರೇವಣ್ಣ
ಉನ್ನತ ಶಿಕ್ಷಣ ಸಚಿವರು

ಅ) ಹಾಸನ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಸಂಖ್ಯೆ ಎಷ್ಟು ಹಾಗೂ ಖಾಸಗಿ ಕಾಲೇಜುಗಳಲ್ಲಿರುವ ಬಿ.ಬಿ.ಎಂ.ಕೋರ್ಸ್‌ಗಳಿರುವ ಸಂಖ್ಯೆ ಎಷ್ಟು ಮಾಹಿತಿ ನೀಡುವುದು;

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ – 15

ಅನುದಾನಿತ ಕಾಲೇಜುಗಳಲ್ಲಿ – 09

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಬಿ.ಬಿ.ಎಂ. ಕೋರ್ಸ್‌ಗಳಿಗೆ ಉಪನ್ಯಾಸಕರ ಕೊರತೆ ಇರುವುದು ನಿಜವೇ; ಹಾಗಿದ್ದಲ್ಲಿ ಇವರುಗಳ ಸಂಖ್ಯೆ ಎಷ್ಟು; ಇವುಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮವೇನು;

:ಹೌದು, ಇವರುಗಳ ಸಂಖ್ಯೆ: 176

592 ವಾಣಿಜ್ಯಶಾಸ್ತ್ರ ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬಲು ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಬರೆಯಲಾಗಿದೆ. ಅವುಗಳ ಪೈಕಿ 176 ಬಿ.ಬಿ.ಎಂ. ತರಗತಿಗಳಿಗೆ ಬೋಧಿಸುವ ಉಪನ್ಯಾಸಕರ ಹುದ್ದೆಗಳು ಒಳಗೊಂಡಿವೆ. ಅದಲ್ಲದೆ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಅನುಮತಿ ನೀಡಲಾಗಿದೆ.

ಇ) ಹಾಸನ ಜಿಲ್ಲೆಯ ಹೊಳೆನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಎಂ.ಬಿ.ಎ. ಕೋರ್ಸ್‌ಗೆ ಎ.ಐ.ಸಿ.ಇ.ಟಿ. ಅನುಮತಿ ನೀಡಿದೆಯೇ; ಹಾಗಿದ್ದಲ್ಲಿ, ಈ ಕೋರ್ಸ್‌ನ್ನು ಪ್ರಾರಂಭ ಮಾಡದಿರಲು ಕಾರಣವೇನು;

ಎ.ಐ.ಸಿ.ಟಿ.ಇ. ಸಂಸ್ಥೆಯೊಂದಿಗೆ ಪತ್ರ ವ್ಯವಹಾರ ನಡೆಯುತ್ತಿದ್ದು, ಪರಿಣಿತರ ತಂಡವು ಇನ್ನೂ ಕಾಲೇಜುಗೆ ಭೇಟಿ ನೀಡಿರುವುದಿಲ್ಲ. ಈ ತಂಡವು ಭೇಟಿ ನೀಡಿ ಎ.ಐ.ಸಿ.ಟಿ.ಇ. ಅನುಮತಿ ನೀಡಿದ ನಂತರ ಈ ಕಾಲೇಜಿನಲ್ಲಿ ಎಂ.ಬಿ.ಎ. ಕೋರ್ಸ್‌ನ್ನು ಪ್ರಾರಂಭಿಸಲಾಗುವುದು.

ಈ) 2009–10ನೇ ಅವಧಿಗೆ ಎಂ.ಬಿ.ಎ. ಕೋರ್ಸ್‌ನ್ನು ಪ್ರಾರಂಭ ಮಾಡಲಾಗುವುದೇ ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದೇ; ಮಾಹಿತಿ ನೀಡುವುದು?

ಎಂ.ಬಿ.ಎ. ಕೋರ್ಸ್ ಪ್ರಾರಂಭಕ್ಕೆ ಎಐಸಿಟಿಇ ಅನುಮತಿ ದೊರೆತ ಕೂಡಲೇ ಸದರಿ ಕೋರ್ಸ್ ಪ್ರಾರಂಭಿಸಲು ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಜರುಗಿಸಲಾಗುವುದು.

(ಇಡಿ 05 ಯುಜಿಹೆಚ್ 2008) **(ಅರವಿಂದ ಲಿಂಬಾವಳಿ)**

ಉನ್ನತ ಶಿಕ್ಷಣ ಸಚಿವರು

<u>ಕರ್ನಾಟಕ ವಿಧಾನಸಭೆ</u>

292 ಶ್ರೀ ರೇವಣ್ಣ ಹೆಚ್.ಡಿ. [ಹೊಳೇನರಸೀಪುರ]

ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ. ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಗಳನ್ನು ನಬಾರ್ಡ್ ಯೋಜನೆಯ ಆರ್.ಐ.ಡಿ.ಎ.ಫ್–13 ರ ಅನುದಾನದಲ್ಲಿ ಪ್ರಾರಂಭ

ಮಾಡಲು ಮಂಜೂರಾತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಜಿಲ್ಲಾವಾರು ಮಾಹಿತಿ ನೀಡುವುದು;

ಹೌದು,

ನಬಾರ್ಡ್ ಆರ್.ಐ.ಡಿ.ಎಫ್–13 ಜಿಲ್ಲಾವಾರು ಮಾಹಿತಿಯ ಕಾಮಗಾರಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ. ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್–13 ರ ಅನುದಾನದಲ್ಲಿ ಪ್ರಾರಂಭ ಮಾಡಲಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಗಳೆಷ್ಟು; ಪೂರ್ಣಗೊಂಡಿರುವ ಕಟ್ಟಡಗಳೆಷ್ಟು; ಪ್ರಾರಂಭಿಸದಿರುವ ಕಟ್ಟಡಗಳೆಷ್ಟು; ಪ್ರಾರಂಭಿಸದಿರಲು ಕಾರಣಗಳೇನು (ಜಿಲ್ಲಾವಾರು ಮಾಹಿತಿ ನೀಡುವುದು)

ನಬಾರ್ಡ್ ಆರ್.ಐ.ಡಿ.ಎಫ್.–13 ಯೋಜನೆಯಡಿಯಲ್ಲಿ 27 ಹೊಸ ಕಾಮಗಾರಿಗಳು ಮತ್ತು 27 ವಿಸ್ತರಣಾ ಕಾಮಗಾರಿಗಳು ಹೀಗೆ ಒಟ್ಟು 54 ಕಾಮಗಾರಿಗಳಿಗೆ ಕಾರ್ಯದೇಶ ನೀಡಲಾಗಿದೆ ಕಾಮಗಾರಿಗಳ ಪ್ರಾರಂಭಿಕ ಪ್ರಕ್ರಿಯೆಗಳು ಜಾರಿಯಲ್ಲಿದ್ದು ಕಟ್ಟಡ ಕಾಮಗಾರಿಗಳನ್ನು ತುರ್ತಾಗಿ ಪ್ರಾರಂಭಿಸಲು ಸೂಚಿಸಲಾಗಿದೆ.

ಈ ಯೋಜನೆಯಡಿ ಯಾವುದೇ ಕಟ್ಟಡ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ.

ಇಡಿ: 41 : ಯೋಸಕ 2009

ಉನ್ನತ ಶಿಕ್ಷಣ ಸಚಿವರು

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ 292ಕ್ಕೆ ಅನುಬಂಧ

SANCTION OF LOAN UNDER RIDF XIII – KARNATAKA

SL NO	NAME OF PROJECT	DISTRICT	LATEST COST	INELIGIBLE COST	BALANCE COST	RIDF – LOAN 2007-08	2008-09	2009-10	TOTAL	STATE GOVT CONT.@	OTHER CONT.
1	Terdal	Bagalakot	25.00	-	25.00	4.25	8.50	8.50	21.25	3.75	-
2	Hesaraghatta	Bangalore Rural	25.00	-	25.00	4.25	8.50	8.50	21.25	3.75	-
3	Sadalaga	Belgaum	25.00	-	25.00	4.25	8.50	8.50	21.25	3.75	-
4	Kampli	Bellary	25.00	-	25.00	4.25	8.50	8.50	21.25	3.75	-
5	Ajjampura	Chikmagalur	25.00	-	25.00	4.25	8.50	8.50	21.25	3.75	-
6	parusharampura	Chitradurga	25.00	-	25.00	4.25	8.50	8.50	21.25	3.75	-
7	Heleyangadi	Dakshina Kannada	25.00	-	25.00	4.25	8.50	8.50	21.25	3.75	-
8	Bellare	Dakshina Kannada	25.00	-	25.00	4.25	8.50	8.50	21.25	3.75	-
9	Mayakonda	Davangere	25.00	-	25.00	4.25	8.50	8.50	21.25	3.75	-
10	Alnavara	Dharwad	25.00	-	25.00	4.25	8.50	8.50	21.25	3.75	-
11	Gudigeri	Dharwad	25.00	-	25.00	4.25	8.50	8.50	21.25	3.75	-
12	Gandasi	Hassan	25.00	-	25.00	4.25	8.50	8.50	21.25	3.75	-
13	Jawagal	Hassan	25.00	-	25.00	4.25	8.50	8.50	21.25	3.75	-
14	Bannur	Mysore	25.00	-	25.00	4.25	8.50	8.50	21.25	3.75	-
15	Maski	Raichur	25.00	-	25.00	4.25	8.50	8.50	21.25	3.75	-
16	Kuduru	Ramnagar	25.00	-	25.00	4.25	8.50	8.50	21.25	3.75	-
17	Huliyar	Tumkur	25.00	-	25.00	4.25	8.50	8.50	21.25	3.75	-
18	Hebri	Udupi	25.00	-	25.00	4.25	8.50	8.50	21.25	3.75	-
19	Shankaranarayan	Udupi	25.00	-	25.00	4.25	8.50	8.50	21.25	3.75	-
20	Savalagi	Bagalakote	50.00	-	50.00	8.50	17.00	17.00	42.50	7.50	-
21	Inapura	Belgaum	50.00	-	50.00	8.50	17.00	17.00	42.50	7.50	-
22	Panchanahalli	Chikmagalur	50.00	-	50.00	8.50	17.00	17.00	42.50	7.50	-
23	Gajendragada	Dharwad	50.00	-	50.00	8.50	17.00	17.00	42.50	7.50	-
24	Kamalapura	Gulbarga	50.00	-	50.00	8.50	17.00	17.00	42.50	7.50	-
25	Konanur	Hassan	50.00	-	50.00	8.50	17.00	17.00	42.50	7.50	-

26	Bankapura	Haveri	50.00	-	50.00	8.50	17.00	17.00	42.50	7.50	-
27	kapu	Udupi	50.00	-	50.00	8.50	17.00	17.00	42.50	7.50	-
28	Hebbur	Tumkur	89.25	-	89.25	15.17	30.34	30.35	75.86	13.39	-
29	K.K.Koppa	Belgaum	100.00	-	100.00	17.00	34.00	34.00	85.00	15.00	-
30	Tekkalakote	Bellary	100.00	-	100.00	17.00	34.00	34.00	85.00	15.00	-
31	Chitaguppa	Bidar	100.00	-	100.00	17.00	34.00	34.00	85.00	15.00	-
32	Illakal	Bijapur	100.00	-	100.00	17.00	34.00	34.00	85.00	15.00	-
33	Kalasa	Chikmagalur	100.00	-	100.00	17.00	34.00	34.00	85.00	15.00	-
34	Hulakoti	Gadag	100.00	-	100.00	17.00	34.00	34.00	85.00	15.00	-
35	Kalagi	Gulbarga	100.00	-	100.00	17.00	34.00	34.00	85.00	15.00	-
36	Halebeedu	Hassan	100.00	-	100.00	17.00	34.00	34.00	85.00	15.00	-
37	Halli Mysore	Hassan	100.00	-	100.00	17.00	34.00	34.00	85.00	15.00	-
38	Hosabande Harlapura	Koppal	100.00	-	100.00	17.00	34.00	34.00	85.00	15.00	-
39	Saligrama	Mysore	100.00	-	100.00	17.00	34.00	34.00	85.00	15.00	-
40	Rippanpete	Shimoga	100.00	-	100.00	17.00	34.00	34.00	85.00	15.00	-
41	Tyamagondlu	Bangalore Rural	200.00	-	200.00	34.00	68.00	68.00	170.00	30.00	-
42	Kittur	Belgaum	200.00	-	200.00	34.00	68.00	68.00	170.00	30.00	-
43	Birur	Chikmagalur	200.00	-	200.00	34.00	68.00	68.00	170.00	30.00	-
44	Bharamasagar	Chitradurga	200.00	-	200.00	34.00	68.00	68.00	170.00	30.00	-
45	Kharjagi	Gulbarga	200.00	-	200.00	34.00	68.00	68.00	170.00	30.00	-
46	Udayapura	Hassan	200.00	-	200.00	34.00	68.00	68.00	170.00	30.00	-
47	Banawara	Hassan	200.00	-	200.00	34.00	68.00	68.00	170.00	30.00	-
48	Hirisave	Hassan	200.00	-	200.00	34.00	68.00	68.00	170.00	30.00	-
49	Mosalehosalli	Hassan	200.00	-	200.00	34.00	68.00	68.00	170.00	30.00	-
50	Paduvalahippe	Hassan	200.00	-	200.00	34.00	68.00	68.00	170.00	30.00	-
51	Kyatanahalli	Mandya	200.00	-	200.00	34.00	68.00	68.00	170.00	30.00	-
52	Bilikere	Mysore	200.00	-	200.00	34.00	68.00	68.00	170.00	30.00	-
53	Bidadi	Ramnagar	137.80	-	137.80	23.43	46.85	46.85	117.13	20.67	-
54	Dandinashivara	Tumkur	200.00	-	200.00	34.00	68.00	68.00	170.00	30.00	-
	Total		4902.05	-	4902.05	833.35	1666.69	1666.70	4166.74	735.31	-

TOTAL NUMBER OF PROJECTS – 54

* IF THE STATE GOVERNMENT IS ABLE TO EXECUTE THE PROJECTS AHEAD OF PHYSICAL TARGET/PHASING PERIOD, FUNDS WILL BE RELEASED ACCORDINGLY,

@ INELIGIBLE COST, IF ANY, WILL BE BORNE BY THE STATE GOVERNMENT IN ADDITION TO THE STATE GOVERNMENT CONTRIBUTION.

ಕರ್ನಾಟಕ ವಿಧಾನ ಸಭೆ

293 ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)
ಇಂಧನ ಸಚಿವರು.

* * * *

ಅ) ರಾಜ್ಯದಲ್ಲಿ ವಿದ್ಯುತ್ ಅಭಾವವಿರುವುದು ನಿಜವೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; ಪೂರ್ಣ ಮಾಹಿತಿ ನೀಡುವುದು?

ಹೌದು. 2007–08 ನೇ ಸಾಲಿನಲ್ಲಿ ರಾಜ್ಯದ ಆಂತರಿಕ ವಿದ್ಯುತ್ ಉತ್ಪಾದನೆಯಿಂದ ಲಭ್ಯವಾದ 29,258 ದಶಲಕ್ಷ ಯೂನಿಟ್ಟುಗಳೂ ಸೇರಿದಂತೆ ವಿವಿಧ ಮೂಲಗಳಿಂದ ರಾಜ್ಯಕ್ಕೆ ಲಭ್ಯವಾದ ವಿದ್ಯುತ್ತಿನ ಒಟ್ಟು ಪ್ರಮಾಣ 40,195 ದಶಲಕ್ಷ ಯೂನಿಟ್ಟುಗಳು, ಇದಕ್ಕೆ ತಗುಲಿದ ವೆಚ್ಚವು 7885.20 ಕೋಟಿ ರೂ.ಗಳು. ಪ್ರಸ್ತಕ ಸಾಲಿನಲ್ಲಿ (2008–09) ಸುಮಾರು 2000 ದಿಂದ 2500 ಮೆಗಾವ್ಯಾಟ್‌ಗಳಷ್ಟು ದಿನದ ಗರಿಷ್ಠ ಬೇಡಿಕೆಯಲ್ಲಿ ಕೊರತೆ ಇದೆ.

ವಿದ್ಯುತ್ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಪಾವಧಿ ಕ್ರಮಗಳು:

1. ರಾಜ್ಯದ ಎಲ್ಲಾ ಖಾಸಗಿ ವಿದ್ಯುತ್ ಉತ್ಪಾದಕರುಗಳಿಗೆ. 30–12–2008 ರ ಸರ್ಕಾರಿ ಆದೇಶದ ಪ್ರಕಾರ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯನ್ನು ಮಾಡಿ ರಾಜ್ಯದ ವಿದ್ಯುತ್ ಜಾಲಕ್ಕೆ ನೀಡಲು ಸೂಚಿಸಿದೆ.
2. ಮೆ : ಜೆ.ಎಸ್. ಡಬ್ಲ್ಯೂ ಮತ್ತು ಮೆ : ಜಿ.ಎಂ.ಆರ್. ರವರಿಂದ ಮೇ 2009 ರ ಅಂತ್ಯದ ವರೆಗೆ ದಿನವಹಿ 400 ಮೆಗಾ ವ್ಯಾಟ್ ಗಳಷ್ಟು (9.60 ದಶಲಕ್ಷ ಯೂನಿಟ್ಟುಗಳು) ರಾಜ್ಯದ ವಿದ್ಯುತ್ ಜಾಲಕ್ಕೆ ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ.
3. ಅಸಂಪ್ರದಾಯಕ ವಿದ್ಯುತ್ ಉತ್ಪಾದನಾ ಮೂಲಗಳಿಂದ ಹೆಚ್ಚುವರಿಯಾಗಿ ದಿನವಹಿ ಸರಾಸರಿ 5 ರಿಂದ 6 ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಪಡೆಯಲಾಗುತ್ತಿದೆ.
4. ಫೆಬ್ರವರಿ 2009 ರ ಅಂತ್ಯದ ವರೆಗೆ ಛತ್ತೀಸ್ ಘಡದಿಂದ 200 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಪಡೆಯಲಾಗುತ್ತಿದೆ.
5. ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ ಮೂಲಕ ಒಂದು ದಿನ ಮುಂಚಿತ ಆಧಾರದಲ್ಲಿ (On day ahead basis) ವಿದ್ಯುತ್ತನ್ನು ಪಡೆಯಲಾಗುತ್ತಿದೆ. ಜನವರಿ 09 ರಿಂದ 20–2–09 ರವರೆಗೆ 21.165 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ಖರೀಸಲಾಗಿರುತ್ತದೆ.

ಮಧ್ಯಮಾವಧಿ ಕ್ರಮಗಳು:

ಮೆ : ವಿ.ಬಿ.ಸಿ. ಫೆರೋ ಅಲಾಯ್ಸ್ ಸಂಸ್ಥೆಯಿಂದ 600 ಮೆಗಾ ವ್ಯಾಟ್ ಗಳಷ್ಟು ವಿದ್ಯುತ್ತನ್ನು ಹಂತ ಹಂತವಾಗಿ ಪಡೆಯಲು ಇಂಗಿತ ಪತ್ರ (LOI) ವನ್ನು ನೀಡಲಾಗಿರುತ್ತದೆ.

ಧೀರ್ಘಕಾಲಿಕ ಕ್ರಮಗಳು :

ಸ್ಪರ್ಧಾತ್ಮಕ ಬಿಡ್ ಮೂಲಕ (ರಾಜ್ಯದಲ್ಲಿ) :

1. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ– ಗುಲ್ಬರ್ಗಾದಲ್ಲಿ 12ನೇ ಯೋಜನಾವಧಿಯಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
2. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ – ಘಟಪ್ರಭಾದಲ್ಲಿ 12 ನೇ ಯೋಜನಾವಧಿಯಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.

ಪಿ.ಎಸ್.ಯು. (P.S.U) ಮೂಲಕ :

ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿ :

1. ಬಿಜಾಪುರ ಜಿಲ್ಲೆಯ ಕುಡುಗಿಯಲ್ಲಿ ಮೆ: ಎನ್.ಟಿ.ಪಿ.ಸಿ. ರವರಿಂದ 4000 ಮೆಗಾವ್ಯಾಟ್ 12ನೇ ಯೋಜನಾವಧಿಯಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ. ಕೇಂದ್ರ ಇಂಧನ ಮಂತ್ರಾಲಯವು ವಿದ್ಯುತ್ ಅನ್ನು ಹಂಚಿಕೆ ಮಾಡಬೇಕಿದೆ.
2. ಕೈಗಾ 4 ನೇ ಘಟಕ : ಮೆ : ಎನ್.ಪಿ.ಸಿ.ಐ.ಎಲ್ ರವರಿಂದ (ತಾತ್ಕಾಲಿಕವಾಗಿ, ರಾಜ್ಯದ ಪಾಲು 60 ಮೇಗಾ ವ್ಯಾಟ್) 2009–10 ರಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
3. ಎನ್.ಎಲ್.ಸಿ.ಟಿ.ಪಿ.ಎಸ್. : ವಿಸ್ತರಣೆ (NLC TPS : II Expansion) : ಮೆ : ಎನ್.ಎಲ್.ಸಿ. ರವರಿಂದ (ತಾತ್ಕಾಲಿಕವಾಗಿ, ರಾಜ್ಯದ ಪಾಲು 110 ಮೆಗಾವ್ಯಾಟ್) 1ನೇ ಘಟಕವು ನವೆಂಬರ್ 2009 ರಲ್ಲಿ ಮತ್ತು 2ನೇ ಘಟಕವು ಮಾರ್ಚ್ 2010 ರಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
4. ಟುಟಿಕೋರಿನ್ (Tuticorin) : ಮೆ :ಎನ್.ಎಲ್.ಸಿ. ಮತ್ತು ತಮಿಳುನಾಡು ವಿದ್ಯುತ್ ಮಂಡಳಿ ರವರ ಸಹಭಾಗಿತ್ವದಲ್ಲಿ (ತಾತ್ಕಾಲಿಕವಾಗಿ, ರಾಜ್ಯದ ಪಾಲು 262 ಮೆಗವ್ಯಾಟ್) 1ನೇ ಘಟಕವು ಮಾರ್ಚ್ 2012 ರಲ್ಲಿ ಮತ್ತು 2ನೇ ಘಟಕವು ಆಗಸ್ಟ್ 2012 ರಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
5. ಸಿಂಹಾದ್ರಿ ಹಂತ 2 : ಮೆ : ಎನ್.ಟಿ.ಪಿ.ಸಿ ರವರಿಂದ (ತಾತ್ಕಾಲಿಕವಾಗಿ, ರಾಜ್ಯದ ಪಾಲು 140 ಮೆಗಾವ್ಯಾಟ್) 1ನೇ ಘಟಕವು ನವೆಂಬರ್ 2010 ರಲ್ಲಿ ಮತ್ತು 2ನೇ ಘಟಕವು ಮೇ 2011 ರಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
6. ವಲ್ಲೂರು ಟಿ.ಪಿ.ಪಿ. ಮೆ : ಎನ್.ಟಿ.ಪಿ.ಸಿ. ಮತ್ತು ತಮಿಳುನಾಡು ವಿದ್ಯುತ್ ಮಂಡಳಿ ಸಹಭಾಗಿತ್ವದಲ್ಲಿ (ತಾತ್ಕಾಲಿಕವಾಗಿ, ರಾಜ್ಯದ ಪಾಲು 125

ಮೆಗಾವ್ಯಾಟ್) 1ನೇ ಘಟಕವು ನವೆಂಬರ್ 2010 ರಲ್ಲಿ ಮತ್ತು 2ನೇ ಘಟಕವು ಮೇ 2011 ರಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ. 3ನೇ ಘಟಕಕ್ಕೆ ಮುಖ್ಯ ಯೋಜನಾ ಘಟಕದ ಅವಾರ್ಡ್ ಕಾರ್ಯವು ಪ್ರಗತಿಯಲ್ಲಿದೆ.

7. ಕುದನ್ ಕುಲಂ ಅಣು ವಿದ್ಯುತ್ ಘಟಕ : ಮೆ : ಎನ್.ಪಿ.ಸಿ.ಐ.ಎಲ್ ರವರಿಂದ (ತಾತ್ಕಾಲಿಕವಾಗಿ, ರಾಜ್ಯದ ಪಾಲು 442 ಮೆಗಾವ್ಯಾಟ್) 1000 ಮೆಗಾವ್ಯಾಟ್‌ನ 1ನೇ ಘಟಕವು ಡಿಸೆಂಬರ್ 2009 ರಲ್ಲಿ ಮತ್ತು 2ನೇ ಘಟಕವು ಏಪ್ರಿಲ್/ಮೇ 2010 ರಲ್ಲಿ ಕಾರ್ಯಾರಂಭ ಅಂದಾಜಿಸಲ್ಾಗಿದೆ.

ಸ್ವತಂತ್ರ ವಿದ್ಯುತ್ ಉತ್ಪಾದಕರುಗಳಿಂದ:

ಒಡಂಬಡಿಕೆ ಮುಖಾಂತರ:

1. ಮೆ: ಯು.ಪಿ.ಸಿ.ಎಲ್. ರವರು 1015 ಮೆಗಾವ್ಯಾಟ್ ಸಾಮರ್ಥ್ಯದಲ್ಲಿ ಒಂದನೇ ಘಟಕವನ್ನು ಫೆಬ್ರವರಿ 2010 ರಲ್ಲಿ ಮತ್ತು ಎರಡನೇ ಘಟಕವನ್ನು ಜೂನ್ 2010 ರಲ್ಲಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುತ್ತವೆ.
2. ಮೆ : ಎಚ್.ಟಿ.ಪಿ.ಪಿ.ಎಲ್. ರವರ 500 ಮೆ.ವ್ಯಾ. ಸ್ಥಾವರವು 12 ನೇ ಯೋಜನಾವಧಿಯಲ್ಲಿ ಉತ್ಪಾದನೆ ಪ್ರಾರಂಭಿಸುತ್ತದೆ.

ಸ್ಪರ್ಧಾತ್ಮಕ ಬಿಡ್‌ಗಳ ಮುಖಾಂತರ :

1. ಮೆ : ಆರ್.ಇ.ಎಲ್. ರವರು ಆಂಧ್ರ ರಾಜ್ಯದ ಕೃಷ್ಣಪಟ್ಟಣಂ ನಲ್ಲಿ 12ನೇ ಯೋಜನಾವಧಿಯಲ್ಲಿ 4000 ಮೆಗಾವ್ಯಾಟ್ ಸ್ಥಾವರವನ್ನು ಸ್ಥಾಪಿಸಲಿದ್ದು ಅದರಲ್ಲಿ ಕರ್ನಾಟಕದ ಪಾಲು 800 ಮೆಗಾವ್ಯಾಟ್ ಆಗಿರುತ್ತದೆ.
2. ಮಹಾರಾಷ್ಟ್ರದ ಮುಂಗೆಯಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರು ಸ್ಥಾವರವನ್ನು 12ನೇ ಯೋಜನಾವಧಿಯಲ್ಲಿ ಸ್ಥಾಪಿಸಲಿದ್ದು ಇದರಲ್ಲಿ ಕರ್ನಾಟಕ ಪಾಲು 500 ಮೆಗಾವ್ಯಾಟ್ ಆಗಿರುತ್ತದೆ.
3. ತಮಿಳುನಾಡು ರಾಜ್ಯದಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರು ಸ್ಥಾವರವನ್ನು 12 ನೇ ಯೋಜನಾವಧಿಯಲ್ಲಿ ಸ್ಥಾಪಿಸಲಿದ್ದು ಇದರಲ್ಲಿ ಕರ್ನಾಟಕದ ಪಾಲು 800 ಮೆಗಾವ್ಯಾಟ್ ಆಗಿರುತ್ತದೆ.

ಒರಿಸ್ಸಾ ರಾಜ್ಯದಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರು ಸ್ಥಾವರನ್ನು 12 ನೇ ಯೋಜನಾವಧಿಯಲ್ಲಿ ಸ್ಥಾಪಿಸಲಿದ್ದು ಇದರಲ್ಲಿ ಕರ್ನಾಟಕದ ಪಾಲು 700 ಮೆಗಾವ್ಯಾಟ್ ಆಗಿರುತ್ತದೆ.

ಆ) ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ಹಾಗೂ ಅವಶ್ಯಕತೆ ಇರುವ ವಿದ್ಯುತ್ ಪ್ರಮಾಣವೆಷ್ಟು?

ಪ್ರಸ್ತುಕ ಸಾಲಿನಲ್ಲಿ (2008-09) ರಾಜ್ಯದ ಆಂತರಿಕ ಉತ್ಪಾದನೆಯೂ ಸೇರಿದಂತೆ ವಿವಿಧ ಮೂಲಗಳಿಂದ ಲಭ್ಯವಾಗಬಹುದಾದ ವಿದ್ಯುತ್ ನ ಪ್ರಮಾಣ

ಸುಮಾರು 41,185 ದಶಲಕ್ಷ ಯೂನಿಟ್ಟುಗಳೆಂದೂ ಹಾಗೂ ಈ ಸಾಲಿನಲ್ಲಿ ಅವಶ್ಯಕತೆ ಇರುವ ವಿದ್ಯುತ್ತಿನ ಪ್ರಮಾಣವು ಸುಮಾರು 46,965 ದಶಲಕ್ಷ ಯೂನಿಟ್ಟುಗಳೆಂದೂ ಅಂದಾಜು ಮಾಡಲಾಗಿದೆ.

ಇ) ಕೊರತೆಯನ್ನು ನೀಗಿಸಲು ಸರ್ಕಾರವು ವಿದ್ಯುಚ್ಛಕ್ತಿಯನ್ನು ಕೊಂಡು ಕೊಳ್ಳಲು ಅನುಸರಿಸಿರುವ ಮಾರ್ಗಗಳಾವುವು?

ಕೊರತೆಯನ್ನು ನೀಗಿಸಲು ಸರ್ಕಾರವು ಈ ಕೆಳಕಂಡಂತೆ ವಿದ್ಯುತ್ತನ್ನು ಕೊಂಡುಕೊಳ್ಳುತ್ತಿದೆ. ಅಲ್ಪಾವಧಿ ವಿದ್ಯುತ್ ಖರೀದಿಯನ್ನು ಡಿಸೆಂಬರ್ 2008 ಅಂತ್ಯದವರಿಗೆ ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿ ಮಾಡಲಾಗುತ್ತಿತ್ತು. ಜನವರಿ 2009 ರ ನಂತರ ಕರ್ನಾಟಕ ಸರ್ಕಾರವು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ರಾಜ್ಯದ ಎಲ್ಲ ವಿದ್ಯುತ್ ಉತ್ಪಾದಕರು ರಾಜ್ಯದ ವಿದ್ಯುತ್ ಜಾಲಕ್ಕೆ ವಿದ್ಯುತ್ ನೀಡಬೇಕೆಂದು ನಿರ್ದೇಶನ ನೀಡಿದೆ.

ಅಲ್ಪಾವಧಿ ಕ್ರಮಗಳು: ಕರ್ನಾಟಕ ಸರ್ಕಾರವು ವಿದ್ಯುತ್ ಕಾಯ್ದೆ 2003 ರ ಸೆಕ್ಷನ್ 11 ರ ಅನ್ವಯ ರಾಜ್ಯದ ಈ ಕೆಳಕಂಡ ವಿದ್ಯುತ್ ಉತ್ಪಾದಕರುಗಳಿಗೆ ಜನವರಿ 2009 ರಿಂದ ಮೇ 09 ರವರೆಗೆ ಅಲ್ಪಾವಧಿ ವಿದ್ಯುತ್ ಕೊರತೆ ನೀಗಿಸಲು ರಾಜ್ಯದ ವಿದ್ಯುತ್ ಜಾಲಕ್ಕೆ ವಿದ್ಯುತ್ ನೀಡಬೇಕೆಂದು ನಿರ್ದೇಶನ ನೀಡಿದೆ.

1. ಜಿ.ಎಂ.ಆರ್. ಎನರ್ಜಿ ಲಿಮಿಟೆಡ್ ರವರು ತಮ್ಮ ಮಂಗಳೂರಿನ 220 ಮೆಗಾವ್ಯಾಟ್ ಸಾಮರ್ಥ್ಯದ ಘಟಕದಿಂದ ವಿದ್ಯುತ್ ಅನ್ನು ಪ್ರತಿ ಯೂನಿಟ್‌ಗೆ 5.50 ರಂತೆ ಮೇ 2009 ರ ಅಂತ್ಯದವರೆಗೆ ರಾಜ್ಯದ ವಿದ್ಯುತ್ ಜಾಲಕ್ಕೆ ನೀಡುವುದು. (ಕಂಪನಿಯು ಈ ದರವನ್ನು ಒಪ್ಪಿಕೊಂಡಿಲ್ಲದ ಕಾರಣ ವಿಷಯವು ಮಾನ್ಯ ಹೈಕೋರ್ಟ್ ಕಮಿಷನ ಮುಂದಿದೆ.
2. ಜೆ.ಎಸ್.ಡಬ್ಲ್ಯೂ ಎನರ್ಜಿ ಲಿಮಿಟೆಡ್ ರವರು ತಮ್ಮ ತೋರಣಗಲ್ಲಿನ ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ ಪ್ರತಿ ಯೂನಿಟ್‌ಗೆ 6.50 ರಂತೆ ಮೇ 2009 ರ ಅಂತ್ಯದವರೆಗೆ ರಾಜ್ಯದ ವಿದ್ಯುತ್ ಜಾಲಕ್ಕೆ ನೀಡುವುದು.
3. ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತಗೊಂಡಿರುವ ಎಲ್ಲಾ ಸಕ್ಕರೆ ಸಹ ವಿದ್ಯುತ್ ಉತ್ಪಾದಕರು ತಾವು ಉತ್ಪಾದಿಸುವ ವಿದ್ಯುತ್ ಅನ್ನು ಪ್ರತಿ ಯೂನಿಟ್‌ಗೆ ರೂ.6.50 ರಂತೆ ಮೇ ತಿಂಗಳವರೆಗೆ ರಾಜ್ಯದ ವಿದ್ಯುತ್ ಜಾಲಕ್ಕೆ ನೀಡುತ್ತವೆ.
4. ಇದರಂತೆ ಎಲ್ಲ ಬಯೋಮಾಸ್ ವಿದ್ಯುತ್ ಉತ್ಪಾದಕರು ಪ್ರತಿ ಯೂನಿಟ್ ಗೆ ರೂ.5.00 ರಂತೆ ರಾಜ್ಯದ ವಿದ್ಯುತ್ ಜಾಲಕ್ಕೆ ನೀಡುತ್ತವೆ.
5. ಛತ್ತೀಸ್‌ಘಡ ರಾಜ್ಯದಿಂದ ಸುಮಾರು 200 ಮೆಗಾವ್ಯಾಟ್ ವಿದ್ಯುತ್ತನ್ನು ಪ್ರತಿ ನಿತ್ಯ 24 ಘಂಟೆಗಳು ದಿನಾಂಕ 5-2-09 ರಿಂದ 28-2-09 ರವರೆಗೆ

ಪ್ರತಿ ಯೂನಿಟ್‌ಗೆ ರೂ.6.34 ರಂತೆ (ಆ ರಾಜ್ಯದ ಗಡಿಯಲ್ಲಿ) ರಾಜ್ಯವು ಪಡೆಯುತ್ತಿರುತ್ತದೆ.

6. ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್‌ನಿಂದ ಒಂದು ದಿನ ಮುಂಚಿತ ಆಧಾರದ ಮೇಲೆ ಜನವರಿ 09 ರಿಂದ 20-2-09 ರವರೆಗೆ 21.165 ಮಿಲಿಯನ್ ಯೂನಿಟ್‌ಗಳನ್ನು ರೂ.11.263 ಕೋಟಿ ವೆಚ್ಚ ಮಾಡಿ ಪಡೆದಿರುತ್ತದೆ.

ಈ) ಹೊರ ರಾಜ್ಯಗಳಿಂದ ಒಂದು ಯೂನಿಟ್‌ಗ ಕೊಂಡು ಕೊಳ್ಳುತ್ತಿರುವ ದರವೆಷ್ಟು ಹಾಗೂ ಗ್ರಾಹಕರಿಗೆ ವಿಧಿಸುತ್ತಿರುವ ದರವೆಷ್ಟು; ವಿದ್ಯುಚ್ಛಕ್ತಿ ಖರೀದಿಸುತ್ತಿರುವುದರಿಂದ ಸರ್ಕಾರವು ಭರಿಸುತ್ತಿರುವ ನಷ್ಟವೆಷ್ಟು?

ಛತ್ತೀಸ್‌ಘಡ ರಾಜ್ಯದಿಂದ ಕೊಂಡುಕೊಳ್ಳುತ್ತಿರುವ ವಿದ್ಯುತ್ತನ್ನು ಪ್ರತಿ ಯೂನಿಟ್‌ಗೆ ರೂ.6.34 (ಆ ರಾಜ್ಯದ ಗಡಿಯಲ್ಲಿ) ರಂತೆ ಪಡೆಯಲಾಗುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು 2005 ರಲ್ಲಿ ನಿಗದಿಪಡಿಸಿರುವ ವಿದ್ಯುತ್ ದರಗಳನ್ನೇ ಗ್ರಾಹಕರಿಗೆ ವಿಧಿಸಲಾಗುತ್ತಿದ್ದು, 2007-08 ರ ಸಾಲಿನಲ್ಲಿ ಗ್ರಾಹಕರಿಂದ ಪಡೆಯಲಾದ ಸರಾಸರಿ ವಸೂಲಿ ದರವು ಪ್ರತಿ ಯೂನಿಟ್‌ಗೆ ರೂ.2.74. ಇದರಿಂದಾಗಿ ಹೊರ ರಾಜ್ಯದಿಂದ ಪಡೆಯಲಾಗುತ್ತಿರುವ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ಹೆಚ್ಚುವರಿಯಾಗಿ ರೂ.3.60 ಗಳನ್ನು ಪಾವತಿಸಬೇಕಾಗುತ್ತದೆ.

ಉ) ರಾಜ್ಯಕ್ಕೆ ಅವಶ್ಯಕತೆ ಇರುವ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ತಗಲುವ ಸಮಯವೆಷ್ಟು ಹಾಗೂ ಇದಕ್ಕಾಗಿ ಮಾಸ್ಟರ್ ಪ್ಲಾನ್ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ, ಪೂರ್ಣ ಮಾಹಿತಿಯನ್ನು ನೀಡುವುದು?

ವಿವರಗಳನ್ನು ಪ್ರಶ್ನೆ 'ಅ' ಕ್ಕೆ ನೀಡಿರುವ ಉತ್ತರದಲ್ಲಿ ನೀಡಲಾಗಿರುತ್ತದೆ.

ಸಂಖ್ಯೆ: ಇಎನ್ 18 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

294 ಶ್ರೀ ಹೆಚ್.ಡಿ. ರೇವಣ್ಣ [ಹೊಳೆನರಸೀಪುರ]
ಮಾನ್ಯ ಉನ್ನತ ಶಿಕ್ಷಣ ಸಚಿವರು.

ಅ. ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ಮಾಹಿತಿ ನೀಡುವುದು.

ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 3051 ಉಪನ್ಯಾಸಕರ ಹುದ್ದೆಗಳು ಖಾಲಿ ಇರುತ್ತದೆ.ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 2550

ಉಪನ್ಯಾಸಕರ ಹುದ್ದೆಗಳ ಆಯ್ಕೆ ಪ್ರಕ್ರಿಯೆ ಈಗಾಗಲೇ ಪ್ರಾರಂಭಿಸಲಾಗಿದ್ದು, ಕೆಲವು ವಿಷಯಗಳ ಆಯ್ಕೆ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ. ಉಳಿದ ವಿಷಯಗಳ ಉಪನ್ಯಾಸಕರ ಹುದ್ದೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅಂತಿಮ ಆಯ್ಕೆ ಪಟ್ಟಿ ಬರಬೇಕಾಗಿರುತ್ತದೆ. ನಂತರ ಈ ಹುದ್ದೆಗಳ ಭರ್ತಿ ಕುರಿತು ಮುಂದಿನಕ್ರಮ ಜರುಗಿಸಲಾಗುವುದು ಖಾಲಿ ಹುದ್ದೆಗಳ ಜಿಲ್ಲಾ ಮತ್ತು ಕಾಲೇಜುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಕಾಲಕಾಲಕ್ಕೆ ಗೌರವ ಧನವನ್ನು ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು;

ಬಂದಿದೆ.

2008-09ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳ ಸಂಭಾವನೆ ವೆಚ್ಚ ಭರಿಸಲು 800.00 ಲಕ್ಷರೂಗಳನ್ನು ಒದಗಿಸಲಾಗಿದ್ದು, ಸದರಿ ಅನುದಾನವು ಪೂರ್ತಿಯಾಗಿ ಖರ್ಚಾಗಿರುತ್ತದೆ. 2008-09ನೇ ಸಾಲಿನಲ್ಲಿ ಯೋಜನೆಯಡಿಯ ಲೆಕ್ಕಶೀರ್ಷಿಕೆ 2202-03-103-2-01 ಅಡಿಯಲ್ಲಿ ಒಟ್ಟು 13.00ಕೋಟಿರೂಗಳನ್ನು ಅತಿಥಿ ಉಪನ್ಯಾಸಕರಿಗೆ ಸಂಭಾವನೆ ಪಾವತಿಸಲು ಬಿಡುಗಡೆ ಮಾಡಲಾಗಿದೆ. ಈ ಉದ್ದೇಶಕ್ಕಾಗಿ ಯೋಜನೇತರ ಲೆಕ್ಕಶೀರ್ಷಿಕೆಯಡಿ ಶೀಘ್ರವಾಗಿ ಹಣ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಇ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ನಿಜವೇ; ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು;

ನಿಜ.

ರಾಜ್ಯದಲ್ಲಿ ಒಟ್ಟಾರೆ 349 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, ಅದರಲ್ಲಿ ಹೊಸದಾಗಿ ಪ್ರಾರಂಭಿಸಲಾದ 182 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ನಿವೇಶನ ಪಡೆಯಲಾಗಿದ್ದು, ಉಳಿದ 71 ಕಾಲೇಜುಗಳಿಗೆ ನಿವೇಶನ ಪಡೆಯುವ ಬಗ್ಗೆ ಎಲ್ಲಾ ವಿಧವಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸದರಿ ಕಾಲೇಜುಗಳಿಗೆ ಕಟ್ಟಡವನ್ನು ಒದಗಿಸಲು 2008-09ನೇ ಸಾಲಿಗೆ ರಾಜ್ಯವಲಯ ಯೋಜನೆಯಲ್ಲಿ ಲೆಕ್ಕಶೀರ್ಷಿಕೆ 4202 ರಲ್ಲಿ 50.00 ಕೋಟಿರೂಗಳನ್ನು ಒದಗಿಸಲಾಗಿದೆ. ಅಲ್ಲದೇ ನಬಾರ್ಡ್ ಸಹಾಯಾನುದಾನದ ಆರ್.ಐ.ಡಿ.ಎಫ್ 13 ರಡಿ 50.00ಕೋಟಿ ರೂಗಳ ವೆಚ್ಚದಲ್ಲಿ ಕಟ್ಟಡಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ನಿವೇಶನ ಲಭ್ಯವಿರುವ ಎಲ್ಲಾ ಕಾಲೇಜುಗಳ ಕಟ್ಟಡಗಳ ದುರಸ್ತಿ ಕಾಮಗಾರಿ ಹಾಗೂ ಹಳೆಯ ಕಾಲೇಜುಗಳ ವಿಸ್ತರಣಾ ಕಟ್ಟಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನು ಮೋದನೆ ನೀಡಿ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಇತರೆ ಮೂಲಭೂತ ಸೌಕರ್ಯಗಳಾದ ಪೀಠೋಪಕರಣ,

ಗ್ರಂಥಾಲಯ, ಕಛೇರಿ ವೆಚ್ಚ, ಹಾಗೂ ಪ್ರಯೋಗಾಲಯ ಉಪಕರಣಗಳಿಗಾಗಿ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಪ್ರಾಂಶುಪಾಲರ ಬೇಡಿಕೆಯನ್ನಾಧರಿಸಿ ಅಗತ್ಯ ಅನುದಾನವನ್ನು ಒದಗಿಸಲಾಗಿದೆ.

ಇಡಿ 07 ಯುಜಿಹೆಚ್ 2009

(ಅರವಿಂದ ಲಿಂಬಾವಳಿ)
ಉನ್ನತ ಶಿಕ್ಷಣ ಸಚಿವರು.

ಕಾಲೇಜು ಶಿಕ್ಷಣ ಇಲಾಖೆ
ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆ, ಹುದ್ದೆಗಳ ಜಿಲ್ಲಾವಾರು ಕಾಲೇಜುವಾರು ವಿವರ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	2	3	4	5
	ಬೆಂಗಳೂರು ನಗರ			
1	ಸಕಕಾ ಬೆಂಗಳೂರು	69	59	10
2	ಸವಿಕಾ ಬೆಂಗಳೂರು	89	54	35
3	ಮಮಕಕಾ ಬೆಂಗಳೂರು	91	67	24
4	ಮಮವಿಕಾ ಬೆಂಗಳೂರು	103	77	26
5	ಸರ್ಕಾರಿ ಆರ್.ಸಿ. ವಾಣಿಜ್ಯ ಕಾಲೇಜು, ಬೆಂಗಳೂರು	37	24	13
6	ವಿಹೆಚ್ ಡಿ ಗೃಹ ವಿಜ್ಞಾನ ಕಾಲೇಜು, ಬೆಂಗಳೂರು	93	65	28
7	ಸಪ್ರದಕಾ ವಿಜಯನಗರ ಬೆಂಗಳೂರು	32	28	4
8	ಸಪ್ರದಕಾ ಕೆ.ಆರ್.ಪುರಂ ಬೆಂಗಳೂರು	35	27	8
9	ಸಪ್ರದಕಾ ಗಂಗಾನಗರ, ಬೆಂಗಳೂರು	15	15	0
10	ಸಪ್ರದಕಾ ಹೆಸರಘಟ್ಟ	8	4	4
11	ಸಪ್ರದಕಾ ಯಲಹಂಕ	13	8	5
12	ಸಪ್ರದಕಾ ರಾಜಾಜಿನಗರ	12	7	5
13	ಸಪ್ರದಕಾ ಜಯನಗರ	12	7	5
14	ಸಪ್ರದಕಾ ಮಲ್ಲೇಶ್ವರಂ	13	8	5
15	ಸಪ್ರದಕಾ ಪೀಣ್ಯ	12	6	6
16	ಸಪ್ರದಕಾ ಫ್ರೇಜರ್ ಟೌನ್	13	5	8

17	ಸಪ್ರದಕಾ ಹೊಸೂರು ಸರ್ಜಾಪುರ	14	9	5
18	ಸಪ್ರದಕಾ ಕೆಂಗೇರಿ	12	5	7
19	ಸಪ್ರದಕಾ ಅನೇಕಲ್	11	6	5
	ಬೆಂಗಳೂರು (ಗ್ರಾಮಾಂತರ ಜಿಲ್ಲೆ)			
20	ಸಪ್ರದಕಾ ದೊಡ್ಡಬಳ್ಳಾಪುರ	11	6	5
21	ಸಪ್ರದಕಾ ದೇವನಹಳ್ಳಿ	9	4	5
-22	ಸಪ್ರದಕಾ ಹೊಸಕೋಟೆ	16	13	3
23	ಸಪ್ರದಕಾ ನೆಲಮಂಗಲ	12	5	7
24	ಸಪ್ರದಕಾ ತ್ಯಾಮಗೊಂಡ್ಲು	12	2	10
25	ಸಪ್ರದಕಾ ಸೂಲಿಬೆಲೆ	12	0	12
	ರಾಮನಗರ ಜಿಲ್ಲೆ	0	0	0
26	ಸಪ್ರದಕಾ ರಾಮನಗರ	25	25	0
27	ಸಕಾಕಾ ರಾಮನಗರ	12	0	12
28	ಸಪ್ರದಕಾ ರಾಮನಗರ	12	5	7
29	ಸಪ್ರದಕಾ ಕನಕಪುರ	11	6	5
30	ಸಪ್ರದಕಾ ಚನ್ನಪಟ್ಟಣ	23	21	2
31	ಸಪ್ರದಕಾ ಮಾಗಡಿ	14	9	5
32	ಸಪ್ರದಕಾ ಕುದೂರು	5	5	0
33	ಸಪ್ರದಕಾ ಬಿಡದಿ	12	6	6
34	ಸಪ್ರದಕಾ ಹಾರೋಹಳ್ಳಿ	12	1	11
35	ಸಪ್ರದಕಾ ಕೋಡಿಹಳ್ಳಿ	12	0	12
	ತುಮಕೂರು ಜಿಲ್ಲೆ			
36	ಸಕಕಾ ತುಮಕೂರು	54	37	17
37	ಸವಿಕಾ ತುಮಕೂರು	73	62	11
38	ಸಪ್ರದಕಾ ಕುಣಿಗಲ್	15	12	3
39	ಸಪ್ರದಕಾ ಹೆಬ್ಬೂರು	6	3	3
40	ಸಪ್ರದಕಾ ಗುಬ್ಬಿ	19	17	2
41	ಸಪ್ರದಕಾ ಪಾವಗಡ	16	13	3
42	ಸಪ್ರದಕಾ ಸಿರಾ	28	21	7
43	ಸಪ್ರದಕಾ ತುರುವೇಕೆರೆ	11	9	2
44	ಸಪ್ರದಕಾ ಕೊರಟಗೆರೆ	13	11	2
45	ಸಪ್ರದಕಾ ಚಿಕ್ಕನಾಯಕನಹಳ್ಳಿ	5	2	3
46	ಸಪ್ರದಕಾ ಮಧುಗಿರಿ	19	12	7
47	ಸಪ್ರದಕಾ ಹುಳಿಯಾರ್	8	7	1
48	ಸಪ್ರದಕಾ ತಿಪಟೂರು	12	8	4
49	ಸಪ್ರದಕಾ ದಂಡಿನ ಶಿವರ	12	2	10

50	ಸಪ್ರದಕಾ ಬುಕ್ಕಾಪಟ್ಟಣ	12	0	12
51	ಸಪ್ರದಕಾ ನೊಣವಿನಕೆರೆ	12	0	12
52	ಸಪ್ರದಕಾ ಬಡವನಹಳ್ಳಿ	12	0	12
	ಕೋಲಾರ ಜಿಲ್ಲೆ			
53	ಸಬಾಕಾ ಕೋಲಾರ	64	35	29
54	ಸಮಕಾ ಕೋಲಾರ	56	45	11
55	ಸಕಾಕಾ ಕೋಲಾರ	11	6	5
56	ಸಪ್ರದಕಾ ಮುಳುಬಾಗಿಲು	23	16	7
57	ಸಪ್ರದಕಾ ಬಂಗಾರಪೇಟೆ	11	6	5
58	ಸಪ್ರದಕಾ ಶ್ರೀನಿವಾಸಪುರ	11	9	2
59	ಸಪ್ರದಕಾ ಮಾಲೂರು	18	11	7
60	ಸಪ್ರದಕಾ ಕೆ.ಜಿ.ಎಫ್	12	6	6
61	ಸಪ್ರದಕಾ ವೇಮಗಲ್	12	0	12
62	ಸಪ್ರದಕಾ ಬಂಗಾರು ತಿರುಪತಿ	12	0	12
	ಚಿಕ್ಕಬಳ್ಳಾಪುರ ಜಿಲ್ಲೆ	0	0	0
63	ಸಪ್ರದಕಾ ಚಿಕ್ಕಬಳ್ಳಾಪುರ	44	35	9
64	ಸಬಾಕಾ ಚಿಂತಾಮಣಿ	29	18	11
65	ಸಮಕಾ ಚಿಂತಾಮಣಿ	32	21	11
66	ಸಪ್ರದಕಾ ಶಿಡ್ಲಘಟ್ಟ	14	8	6
67	ಸಪ್ರದಕಾ ಗುಡಿಬಂಡೆ	8	5	3
68	ಸಪ್ರದಕಾ ಗೌರಿಬಿದನೂರು	12	4	8
69	ಸಪ್ರದಕಾ ಬಾಗೇಪಲ್ಲಿ	12	2	10
	ಮೈಸೂರು ಜಿಲ್ಲೆ			
70	ಮಮಕಕಾ ಮೈಸೂರು	103	79	24
71	ಮಮವಿಕಾ ಮೈಸೂರು	109	70	39
72	ಸಪ್ರದಕಾ ಕುವೆಂಪುನಗರ, ಮೈಸೂರು	19	13	6
73	ಸಮಕಾ ಮೈಸೂರು	18	7	11
74	ಸಪ್ರದಕಾ ಹೆಚ್.ಡಿ.ಕೋಟೆ	13	10	3
75	ಸಪ್ರದಕಾ ಕೆ.ಆರ್.ನಗರ	36	30	6
76	ಸಪ್ರದಕಾ ಸಾಲಿಗ್ರಾಮ	12	2	10
77	ಸಪ್ರದಕಾ ಹುಣಸೂರು	26	20	6
78	ಸಪ್ರದಕಾ ಪಿರಿಯಾಪಟ್ಟಣ	10	3	7
79	ಸಪ್ರದಕಾ ಬನ್ನೂರು	12	8	4
80	ಸಪ್ರದಕಾ ನಂಜನಗೂಡು	12	6	6
81	ಸಪ್ರದಕಾ ಟಿ.ನರಸೀಪುರ	12	5	7
82	ಸಪ್ರದಕಾ ಬಿಳಿಕೆರೆ	12	3	9
83	ಸಪ್ರದಕಾ ಹನಗೋಡು	12	0	12

84	ಸಮಕಾ ಹುಣಸೂರು	12	0	12
85	ಸಪ್ರದಕಾ ಸಿದ್ಧಾರ್ಥ ಬಡಾವಣೆ ಮೈಸೂರು	12	2	10
86	ಸಪ್ರದಕಾ ಉಲ್ಲಹಳ್ಳಿ	12	1	11
	ಚಾಮರಾಜನಗರ ಜಿಲ್ಲೆ			
87	ಸಪ್ರದಕಾ ಹನೂರು	10	4	6
88	ಸಪ್ರದಕಾ ಚಾಮರಾಜನಗರ	20	11	9
89	ಎಸ್.ಎಂ.ಸಿ.ಕೊಳ್ಳೇಗಾಲ	19	14	5
90	ಸಪ್ರದಕಾ ಯಳಂದೂರು	12	1	11
91	ಸಪ್ರದಕಾ ಗುಂಡ್ಲುಪೇಟೆ	12	3	9
92	ಸಪ್ರದಕಾ ಕುದೇರು	12	0	12
93	ಸಪ್ರದಕಾ ಕಬ್ಬಹಳ್ಳಿ	12	0	12
	ಮಂಡ್ಯ ಜಿಲ್ಲೆ			
94	ಸಬಾಕಾ ಮಂಡ್ಯ	55	30	25
95	ಸಮಕಾ ಮಂಡ್ಯ	71	55	16
96	ಸಪ್ರದಕಾ ಶ್ರೀರಂಗಪಟ್ಟಣ	13	10	3
97	ಸಪ್ರದಕಾ ಕೆ.ಆರ್.ಪೇಟೆ	25	18	7
98	ಸಪ್ರದಕಾ ಮಳ್ಳವಳ್ಳಿ	10	7	3
99	ಸಮಕಾ ಮದ್ದೂರು	13	8	5
100	ಸಪ್ರದಕಾ ಕೊಪ್ಪ (ಮದ್ದೂರು)	4	3	1
101	ಸಪ್ರದಕಾ ನಾಗಮಂಗಲ	12	3	9
102	ಸಪ್ರದಕಾ ಪಾಂಡವಪುರ	12	4	8
103	ಸಪ್ರದಕಾ ಕ್ಯಾತನಹಳ್ಳಿ	12	1	11
104	ಸಪ್ರದಕಾ ಭಾರತೀನಗರ	12	1	11
105	ಸಪ್ರದಕಾ ಕೆ.ಆರ್.ಸಾಗರ	12	0	12
106	ಸಪ್ರದಕಾ ಹಲಗೂರು	12	0	12
107	ಸಪ್ರದಕಾ ಮೇಲುಕೋಟೆ	12	0	12
108	ಸಮಕಾ ಕೆ.ಆರ್.ಪೇಟೆ	12	0	12
	ಹಾಸನ ಜಿಲ್ಲೆ			
109	ಸಕಕಾ ಹಾಸನ	46	32	14
110	ಸವಿಕಾ ಹಾಸನ	63	32	31
111	ಸಮಕಾ ಹಾಸನ	13	9	4
112	ಸಪ್ರದಕಾ ಹೊಳೆನರಸೀಪುರ	26	15	11
113	ಸಮಕಾ ಹೊಳೆನರಸೀಪುರ	13	5	8
114	ಸಪ್ರದಕಾ ಪಡುವಲಹಿಪ್ಪೆ	12	2	10
115	ಸಪ್ರದಕಾ ಅರಸೀಕೆರೆ	12	5	7
116	ಸಪ್ರದಕಾ ಸಕಲೇಶಪುರ	7	4	3
117	ಸಪ್ರದಕಾ ಅರಕಲ ಗೂಡು	14	10	4

118	ಸಪ್ರದಕಾ ಬೇಲೂರು	13	9	5
119	ಸಪ್ರದಕಾ ಕೊಣನೂರು	15	8	7
120	ಸಪ್ರದಕಾ ಜಾವಗಲ್	5	3	2
121	ಸಪ್ರದಕಾ ಗಂಡಸಿ	9	2	7
122	ಸಪ್ರದಕಾ ಚನ್ನರಾಯಪಟ್ಟಣ	17	11	6
123	ಸಪ್ರದಕಾ ಆಲೂರು	5	5	0
124	ಸಪ್ರದಕಾ(ಗೃಹವಿಜ್ಞಾನ) ಹಾಸನ	12	0	12
125	ಸಪ್ರದಕಾ ಹಿರಿಸಾವೆ	12	0	12
126	ಸಪ್ರದಕಾ ಉದಯಪುರ	12	1	11
127	ಸಪ್ರದಕಾ ಬಾಣಾವರ	12	0	12
128	ಸಪ್ರದಕಾ ಹಳ್ಳಿ ಮೈಸುರು	12	2	10
129	ಸಕಾಕಾ .ಹಾಸನ ನಗರ	12	2	10
130	ಸಕಾಕಾ ಹೊಳೆನರಸೀಪುರ	12	0	12
131	ಸಪ್ರದಕಾ (ಗೃಹವಿಜ್ಞಾನ) ಹೊಳೆನರಸೀಪುರ	12	0	12
132	ಸಕಾಕಾ ಪಡುವಲಹಿಪ್ಪೆ	12	0	12
133	ಸಪ್ರದಕಾ ಮೊಸಳೆ ಹೊಸಹಳ್ಳಿ	12	1	11
134	ಸಪ್ರದಕಾ ಹಳೇಬೀಡು	12	1	11
135	ಸಪ್ರದಕಾ ಹೆತ್ತೂರು	12	0	12
	ಶಿವಮೊಗ್ಗ ಜಿಲ್ಲೆ			
136	ಸಪ್ರದಕಾ ಕೆ.ಆರ್.ಪುರಂ, ಶಿವಮೊಗ್ಗ	11	8	3
137	ಸಪ್ರದಕಾ ಶಿಕಾರಿಪುರ	18	18	0
138	ಸಪ್ರದಕಾ ಹೊಸನಗರ	13	9	4
139	ಸಪ್ರದಕಾ ಸೊರಬ	12	4	8
140	ಸಪ್ರದಕಾ ಅನವಟ್ಟಿ	5	4	1
141	ಸಪ್ರದಕಾ ಹೊಳೆಹೊನ್ನೂರು	10	6	4
142	ಸಮಕಾ ಸಾಗರ	30	17	13
143	ಸಪ್ರದಕಾ ಭದ್ರಾವತಿ	21	18	3
144	ಸರ್.ಎಂ.ವಿ.ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ	33	26	7
145	ಸರ್.ಎಂ.ವಿ.ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿ	25	17	8
146	ಸಪ್ರದಕಾ ತೀರ್ಥಹಳ್ಳಿ	12	2	10
147	ಸಪ್ರದಕಾ ರಿಪ್ಪನ್ ಪೇಟೆ	12	3	9
148	ಸಪ್ರದಕಾ ಶಿರಾಳಕೊಪ್ಪ	12	2	10
	ಚಿತ್ರದುರ್ಗ ಜಿಲ್ಲೆ			

149	ಸಕಕಾ ಚಿತ್ರದುರ್ಗ	32	26	6
150	ಸವಿಕಾ ಚಿತ್ರದುರ್ಗಾ	58	34	24
151	ಸಪ್ರದಕಾ ಹಿರಿಯೂರು	9	6	3
152	ಸಪ್ರದಕಾ ಪರಶುರಾಮಪುರ	10	4	6
153	ಸಪ್ರದಕಾ ಹೊಸದುರ್ಗ	29	24	5
154	ಸಪ್ರದಕಾ ಚಳ್ಳಕೆರೆ	38	31	7
155	ಸಪ್ರದಕಾ ಮೊಳಕಾಲ್ಮೂರು	9	4	5
156	ಸಪ್ರದಕಾ ಹೊಳಲ್ಕೆರೆ	12	3	9
157	ಸಪ್ರದಕಾ ಭರಮಸಾಗರ	12	1	11
158	ಸಪ್ರದಕಾ ಜವನಗೊಂಡನಹಳ್ಳಿ	12	0	12
	ದಾವಣಗೆರೆ ಜಿಲ್ಲೆ			
159	ಸಪ್ರದಕಾ ಚನ್ನಗಿರಿ	28	18	10
160	ಸಪ್ರದಕಾ ನ್ಯಾಮತಿ	11	6	5
161	ಸಪ್ರದಕಾ ಮಾಯಕೊಂಡ	8	6	2
162	ಸಪ್ರದಕಾ ದಾವಣಗೆರೆ	39	27	12
163	ಸಪ್ರದಕಾ ಹೊನ್ನಾಳಿ	12	1	11
164	ಸಪ್ರದಕಾ ಹರಿಹರ	12	6	6
165	ಸಪ್ರದಕಾ ಹರಪನಹಳ್ಳಿ	12	5	7
166	ಸಪ್ರದಕಾ ಜಗಳೂರು	12	2	10
167	ಸಮಕಾ ದಾವಣಗೆರೆ	12	4	8
168	ಸಪ್ರದಕಾ ಸಂತೆ ಬೆನ್ನೂರು	12	2	10
169	ಸಪ್ರದಕಾ ಬಸವಾಪಟ್ಟಣ	12	0	12
	ಚಿಕ್ಕಮಗಳೂರು ಜಿಲ್ಲೆ			
171	ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು	50	28	22
172	ಸಪ್ರದಕಾ ಕೊಪ್ಪ	19	16	3
173	ಸಪ್ರದಕಾ ಮೂಡಿಗೆರೆ	11	9	2
174	ಸಪ್ರದಕಾ ನರಸಿಂಹರಾಜಪುರ	15	6	9
175	ಸಪ್ರದಕಾ ಅಜ್ಜಂಪುರ	11	6	5
176	ಸಪ್ರದಕಾ ಪಂಚನಹಳ್ಳಿ	8	5	3
177	ಸಪ್ರದಕಾ ಕಡೂರು	34	15	19
178	ಸಪ್ರದಕಾ ಶೃಂಗೇರಿ	12	2	10
179	ಸಪ್ರದಕಾ ತರಿಕೆರೆ	12	3	9
180	ಸಪ್ರದಕಾ ಕಳಸ	12	0	12
181	ಸಪ್ರದಕಾ ಬೀರೂರು	12	1	11
182	ಸಪ್ರದಕಾ ಯಗಟಿ	12	0	12
183	ಸಪ್ರದಕಾ ಸಖರಾಯಪಟ್ಟಣ	12	2	10
	ದಕ್ಷಿಣ ಕನ್ನಡ ಜಿಲ್ಲೆ			

184	ಸಪ್ರದಕಾ ಉಪ್ಪಿನಂಗಡಿ	13	7	6
185	ಸಪ್ರದಕಾ ಬೆಳ್ತಂಗಡಿ	8	7	1
186	ಸಪ್ರದಕಾ ಬೆಳ್ಳಾರೆ	13	7	6
187	ಸಪ್ರದಕಾ ಬೆಟ್ಟಂಪಾಡಿ	11	5	6
188	ಸಪ್ರದಕಾ ಹಳೆಯಂಗಡಿ	14	8	6
189	ಸಪ್ರದಕಾ ವಾಮದಪದವು	10	4	6
190	ಸಪ್ರದಕಾ ವಿಟ್ಲ	14	11	3
191	ಸಪ್ರದಕಾ ಕಾವೂರು ಮಂಗಳೂರು	13	5	8
192	ಸಪ್ರದಕಾ ಬಂಟ್ವಾಳ	12	2	10
193	ಸಪ್ರದಕಾ ಪುತ್ತೂರು	12	5	7
194	ಸಪ್ರದಕಾ ಸೂಳ್ಯ	12	1	11
195	ಸಪ್ರದಕಾ ಬಲ್ಮಠ ಮಂಗಳೂರು	12	4	8
196	ಸಪ್ರದಕಾ ಮಂಜಾಲ ಕಟ್ಟೆ	12	0	12
197	ಸಪ್ರದಕಾ ಸಿದ್ಧನ ಕಟ್ಟೆ	12	0	12
198	ಸಪ್ರದಮಕಾ ಮಂಗಳೂರು	12	2	10
	ಉಡುಪಿ ಜಿಲ್ಲೆ			
199	ಸಪ್ರದಕಾ ಉಡುಪಿ	26	16	6
200	ಸಮಕಾ ಅಜ್ಜರಕಾಡು ಉಡುಪಿ	19	13	6
201	ಸಪ್ರದಕಾ ಬಾರಕೂರು	16	7	9
202	ಸಪ್ರದಕಾ ಬೈಂದೂರು	9	7	2
203	ಸಪ್ರದಕಾ ಕಾಪು	10	8	2
204	ಸಪ್ರದಕಾ ಹೆಬ್ರಿ	13	7	6
205	ಸಪ್ರದಕಾ ಕಾರ್ಕಳ	5	5	0
206	ಸಪ್ರದಕಾ ಹಿರಿಯಡಕ	12	1	11
207	ಸಪ್ರದಕಾ ಶಂಕರನಾರಾಯಣ	13	8	5
208	ಸಪ್ರದಕಾ ಕುಂದಾಪುರ	12	1	11
209	ಸಪ್ರದಕಾ ಕೋಟಾ–ಪಡುಕೆರೆ	12	0	12
	ಕೊಡಗು ಜಿಲ್ಲೆ			
210	ಸಪ್ರದಕಾ ಕುಶಾಲನಗರ	18	10	8
211	ಸಪ್ರದಕಾ ನಾಪೋಕ್ಲು	8	7	1
212	ಸಪ್ರದಕಾ ಮಡಿಕೇರಿ	12	5	7
213	ಸಪ್ರದಕಾ ವಿರಾಜಪೇಟೆ	12	2	10
	ಧಾರವಾಡ ಜಿಲ್ಲೆ			
214	ಸಪ್ರದಕಾ ಧಾರವಾಡ	15	5	10
215	ಸಪ್ರದಕಾ ಅಳ್ನಾವರ	15	10	5
216	ಸಪ್ರದಕಾ ಗುಡಿಗೇರಿ	13	6	7
217	ಸಪ್ರದಕಾ ರಾಜನಗರ ಹುಬ್ಬಳ್ಳಿ	18	11	7

218	ಸಪ್ರದಕಾ ನವಲಗುಂದ	12	2	10
219	ಸಪ್ರದಕಾ ಕಲಘಟಗಿ	12	1	11
220	ಸಪ್ರದಕಾ ಕುಂಧಗೋಳ	12	2	10
221	ಸಪ್ರದಕಾ ಅಣ್ಣಿಗೇರಿ	12	1	11
	ಗದಗ ಜಿಲ್ಲೆ			
222	ಸಪ್ರದಕಾ ಗದಗ	13	2	11
223	ಸಪ್ರದಕಾ ನರುಗುಂದ	19	11	8
224	ಸಪ್ರದಕಾ ಗಜೇಂದ್ರಗಡ	11	2	9
225	ಸಪ್ರದಕಾ ರೋಣ	7	2	5
226	ಸಪ್ರದಕಾ ಮುಂಡರಗಿ	9	3	6
227	ಸಪ್ರದಕಾ ಶಿರಹಟ್ಟಿ	12	7	5
228	ಸಪ್ರದಕಾ ಹುಲಕೋಟಿ	12	1	11
229	ಸಪ್ರದಕಾ ಮುಳಗುಂದ	12	0	12
230	ಸಪ್ರದಕಾ ನರೇಗಲ್	12	0	12
	ಹಾವೇರಿ ಜಿಲ್ಲೆ			
231	ಸಪ್ರದಕಾ ಹಾವೇರಿ	14	4	10
232	ಸಪ್ರದಕಾ ಹಿರೇಕೆರೂರು	18	9	9
233	ಸಪ್ರದಕಾ ಸವಣೂರು	20	9	11
234	ಸಪ್ರದಕಾ ಅಕ್ಕಿಆಲೂರು	9	6	3
235	ಸಪ್ರದಕಾ ಬಂಕಾಪುರ	6	2	4
236	ಸಪ್ರದಕಾ ರಾಣಿಬೆನ್ನೂರು	12	2	10
237	ಸಪ್ರದಕಾ ಬ್ಯಾಡಗಿ	12	2	10
238	ಸಪ್ರದಕಾ ಶಿಗ್ಗಾಂವ್	12	1	11
239	ಸಪ್ರದಕಾ ಹಾನಗಲ್	12	0	12
240	ಸಪ್ರದಕಾ ಸುಣಕಲ್ ಬಿದರಿ	12	0	12
	ಉತ್ತರ ಕನ್ನಡ ಜಿಲ್ಲೆ			
241	ಸಪ್ರದಕಾ ಹಳಿಯಾಳ	16	8	8
242	ಸ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಕಾರವಾರ	39	29	10
243	ಸಪ್ರದಕಾ ಮುಂಡಗೋಡು	9	7	2
244	ಸಪ್ರದಕಾ ಯಲ್ಲಾಪುರ	15	10	5
245	ಸಪ್ರದಕಾ ಕುಮಟಾ	12	1	11
246	ಸಪ್ರದಕಾ ಜೋಯಿಡಾ	12	0	12
247	ಸಪ್ರದಕಾ ಅಂಕೋಲಾ	12	2	10
248	ಸಪ್ರದಕಾ ಹೊನ್ನಾವರ	12	0	12
249	ಸಪ್ರದಕಾ ಭಟ್ಕಳ	12	0	12
250	ಸಪ್ರದಕಾ ಶಿರಸಿ	12	1	11
251	ಸಪ್ರದಕಾ ಸಿದ್ದಾಪುರ	12	0	12

252	ಸಪ್ರದಕಾ ಮಂಕಿ	12	0	12
253	ಸಪ್ರದಕಾ ಬಾಡ	12	1	11
	ಬೆಳಗಾಂ ಜಿಲ್ಲೆ			
254	ಸಪ್ರದಕಾ ಬೆಳಗಾಂ	11	3	8
255	ಸಪ್ರದಕಾ ನೇಸರಗಿ	5	3	2
256	ಸಪ್ರದಕಾ ಖನಾಪುರ	6	5	1
257	ಸಪ್ರದಕಾ ಬೈಲಹೊಂಗಲ	12	7	5
258	ಸಪ್ರದಕಾ ಸದಲಗ	13	8	5
259	ಸಪ್ರದಕಾ ಹುಕ್ಕೇರಿ	12	0	12
260	ಸಪ್ರದಕಾ ಖಾನಾಪುರ	12	1	11
261	ಸಪ್ರದಕಾ ಸೌದತ್ತಿ	12	2	10
262	ಸಪ್ರದಕಾ ಗೋಕಾಕ್	12	1	11
263	ಸಪ್ರದಕಾ ರಾಮದುರ್ಗ	12	0	12
264	ಸಪ್ರದಕಾ ಚಿಕ್ಕೋಡಿ	12	0	12
265	ಸಪ್ರದಕಾ ರಾಯಭಾಗ	12	0	12
266	ಸಪ್ರದಕಾ ಅಥಣಿ	12	1	11
267	ಸಪ್ರದಕಾ ಕೆ.ಕೆ.ಕೊಪ್ಪ, ಬೆಳಗಾಂ	12	0	12
268	ಸಪ್ರದಕಾ ಕಿತ್ತೂರು, ಬೈಲಹೊಂಗಲ ತಾ:	12	2	10
269	ಸಪ್ರದಕಾ ತೆಲಸಂಗ	12	0	12
270	ಸಪ್ರದಕಾ ಪಾಶ್ವಪುರ	12	0	12
271	ಸಪ್ರದಕಾ ಕಟಗೇರಿ	12	0	12
272	ಸಪ್ರದಕಾ ಮೂಡಲಗಿ	12	0	12
	ಬಾಗಲಕೋಟೆ ಜಿಲ್ಲೆ			
273	ಸಪ್ರದಕಾ ಬಾಗಲಕೋಟೆ	16	8	8
274	ಸಪ್ರದಕಾ ಬೀಳಗಿ	15	5	10
275	ಸಪ್ರದಕಾ ಜಮಖಂಡಿ	16	9	7
276	ಸಪ್ರದಕಾ ತೇರದಾಳ	3	3	0
277	ಸಪ್ರದಕಾ ಸಾವಳಗಿ	4	0	4
278	ಸಪ್ರದಕಾ ಮುಧೋಳ	12	0	12
279	ಸಪ್ರದಕಾ ಬಾದಾಮಿ	12	2	10
280	ಸಪ್ರದಕಾ ಹುನಗುಂದ	12	0	12
281	ಸಪ್ರದಕಾ ಇಳಕಲ್	12	0	12
282	ಸಪ್ರದಕಾ ಲೋಕಾಪುರ	12	0	12
283	ಸಪ್ರದಕಾ ಹುನ್ನೂರ	12	0	12
	ಬಿಜಾಪುರ ಜಿಲ್ಲೆ			
284	ಸಪ್ರದಕಾ ಬಿಜಾಪುರ	16	10	6
285	ಸಪ್ರದಕಾ ಗೊಳಸಂಗಿ	6	2	4

286	ಸಪ್ರದಕಾ ಬಸವನಬಾಗೇವಾಡಿ	12	2	10
287	ಸಪ್ರದಕಾ ಮುದ್ದೇಬಿಹಾಳ	12	2	10
288	ಸಪ್ರದಕಾ ಇಂಡಿ	12	3	9
289	ಸಪ್ರದಕಾ ಸಿಂದಗಿ	12	1	11
290	ಸಪ್ರದಕಾ ಮಮದಾಪುರ	12	0	12
	ಗುಲ್ಬರ್ಗಾ ಜಿಲ್ಲೆ			
291	ಸಕಾ ಗುಲಬರ್ಗಾ	71	48	23
292	ಸಪ್ರದಕಾ ಯಾದಗಿರಿ	20	18	2
293	ಸಪ್ರದಕಾ ಜೇವರ್ಗಿ	12	8	4
294	ಸಪ್ರದಕಾ ಶಹಾಪುರ	17	17	0
295	ಸಪ್ರದಕಾ ಚಿತ್ತಾಪುರ	16	7	9
296	ಸಪ್ರದಕಾ ಸೇಡಂ	17	12	5
297	ಸಪ್ರದಕಾ ಅಫ್‌ಜಲ್‌ಪುರ	7	4	3
298	ಸಪ್ರದಕಾ ಗುರುಮಿಠಕಲ್	12	8	4
299	ಸಪ್ರದಕಾ ಸುರಪುರ	11	8	3
300	ಸಪ್ರದಕಾ ಕಮಲಾಪುರ	14	14	0
301	ಸಪ್ರದಕಾ ಆಳಂದ	12	3	9
302	ಸಪ್ರದಕಾ ಚಿಂಚೋಳಿ	12	3	9
303	ಸಪ್ರದಕಾ ಕಾಳಗಿ, ಚಿತ್ತಾಪುರ ತಾ:	12	2	10
304	ಸಪ್ರದಕಾ ಖರ್ಜಗಿ	12	0	12
305	ಸಪ್ರದಕಾ ಮಹಗಾಂವ್ ಕ್ರಾಸ್	12	2	10
306	ಸಪ್ರದಕಾ ಜೇವರ್ಗಿ ಕಾಲೋನಿ	12	2	10
307	ಸಪ್ರದಕಾ ಪರ್ತಬಾದ್	12	0	12
308	ಸಪ್ರದಕಾ ಕೆಂಬಾವಿ	12	0	12
309	ಸಪ್ರದಕಾ ಮಾದನ ಹಿಪ್ಪರಗಾ	12	0	12
310	ಸಪ್ರದಕಾ ಸುಲೇಪೇಟೆ	12	0	12
	ರಾಯಚೂರು ಜಿಲ್ಲೆ			
311	ಸಪ್ರದಕಾ ರಾಯಚೂರು	22	6	16
312	ಸಪ್ರದಕಾ ಸಿಂಧನೂರು	22	18	4
313	ಸಪ್ರದಕಾ ಮಾನ್ವಿ	12	8	4
314	ಸಪ್ರದಕಾ ದೇವದುರ್ಗ	7	6	1
315	ಸಪ್ರದಕಾ ಮಸ್ಕಿ	6	5	1
316	ಸಪ್ರದಕಾ ಲಿಂಗಸಗೂರು	12	1	11
317	ಸಪ್ರದಕಾ ಜಾಲಹಳ್ಳಿ	12	0	12
318	ಸಪ್ರದಕಾ ಮುದಗಲ್ಲು	12	0	12
	ಕೊಪ್ಪಳ ಜಿಲ್ಲೆ			
319	ಸುಪ್ರದಕಾ ಯಲಬುರ್ಗಾ	14	9	5

320	ಸಪ್ರದಕಾ ಗಂಗಾವತಿ	17	13	4
321	ಸಪ್ರದಕಾ ಕೊಪ್ಪಳ	10	5	5
322	ಸಪ್ರದಕಾ ಕುಷ್ಟಗಿ	10	4	6
323	ಸಪ್ರದಕಾ ಹೊಸಬಂಡಿ ಅರಳಾಪುರ	12	0	12
324	ಸಪ್ರದಕಾ ಹಿಟ್ನಾಳ	12	0	12
325	ಸಪ್ರದಕಾ ಅಳವಂಡಿ	12	0	12
326	ಸಪ್ರದಕಾ ಶ್ರೀರಾಮನಗರ	12	0	12
327	ಸಪ್ರದಕಾ ಹಿರೇವಂಕಲಕುಂಟ	12	0	12
328	ಸಪ್ರದಕಾ ಇರಕಲ್ ಗಡ	12	0	12
329	ಸಪ್ರದಕಾ ಕನಕಗಿರಿ	12	0	12
	ಬಳ್ಳಾರಿ ಜಿಲ್ಲೆ			
330	ಸಪ್ರದಕಾ ಕೂಡ್ಲಿಗಿ	13	4	9
331	ಸಪ್ರದಕಾ ಬಳ್ಳಾರಿ	54	36	18
332	ಸಪ್ರದಕಾ ಕುರುಗೋಡು	12	2	10
333	ಸಪ್ರದಕಾ ಕಂಪ್ಲಿ	6	4	2
334	ಸಪ್ರದಕಾ ಸಿರಗುಪ್ಪ	16	10	6
335	ಸಪ್ರದಕಾ ರಾಮನಗರ ಹಗರಿಬೊಮ್ಮನಹಳ್ಳಿ	12	7	5
336	ಸಪ್ರದಕಾ ಸಂಡೂರು	12	0	12
337	ಸಪ್ರದಕಾ ಹೊಸಪೇಟೆ	12	7	5
338	ಸಪ್ರದಕಾ ಹೂವಿನ ಹಡಗಲಿ	12	0	12
339	ಸಪ್ರದಕಾ ತೆಕ್ಕಲಕೋಟೆ	12	1	11
340	ಸಪ್ರದಕಾ ಮರಿಯಮ್ಮನಹಳ್ಳಿ	12	0	12
341	ಸಪ್ರದಕಾ ಬಳ್ಳಾರಿ ನಗರ	12	1	11
342	ಸಪ್ರದಕಾ ಮೋಕ	12	0	12
	ಬೀದರ್ ಜಿಲ್ಲೆ			
343	ಸಪ್ರದಕಾ ಬೀದರ್	26	25	1
344	ಸಪ್ರದಕಾ ಔರಾದ್	12	2	10
345	ಸಪ್ರದಕಾ ಬಸವಕಲ್ಯಾಣ	12	4	8
346	ಸಪ್ರದಕಾ ಬಾಲ್ಕಿ	12	4	8
347	ಸಪ್ರದಕಾ ಹುಮ್ನಾಬಾದ್	12	4	8
348	ಸಪ್ರದಕಾ ಚಿಟಗುಪ್ಪ	12	2	10
349	ಸಪ್ರದಕಾ ಮನಹಳ್ಳಿ	12	1	11
350	ಸಪ್ರದಕಾ ಹುಲಸೂರು	12	0	12

ಕಾಲೇಜು ಶಿಕ್ಷಣ ನಿರ್ದೇಶಕರು

ಕರ್ನಾಟಕ ವಿಧಾನ ಸಭೆ

295 ಶ್ರೀ ರೇವಣ್ಣ ಹೆಚ್.ಡಿ.(ಹೊಳೆನರಸೀಪುರ)ವಿಧಾನ ಸಭಾ ಸದಸ್ಯರು
ಮಾನ್ಯ ಪಶುಸಂಗೋಪನಾ ಸಚಿವರು, ಕರ್ನಾಟಕ ಸರ್ಕಾರ

ಅ) ಕೇಂದ್ರ ವಿಮಾ ಯೋಜನೆಯಡಿಯಲ್ಲಿ ಪಶುಸಂಗೋಪನಾ ಇಲಾಖೆಗೆ ಕೇಂದ್ರ ಸರ್ಕಾರ 2 ಕೋಟಿ ಹಣವನ್ನು ನೀಡಿದೆಯೇ, ಹಾಗಿದ್ದಲ್ಲಿ, ಅದನ್ನು ವಿತರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಭಾರತ ಸರ್ಕಾರವು 2006–07ನೇ ಸಾಲಿನಲ್ಲಿ ರೂ.69.48 ಲಕ್ಷಗಳನ್ನು ಮತ್ತು 2007–08ನೇ ಸಾಲಿನಲ್ಲಿ ರೂ.300.00 ಲಕ್ಷಗಳನ್ನು ಜಾನುವಾರು ವಿಮಾ ಯೋಜನೆಯಡಿ ಬಿಡುಗಡೆಗೊಳಿಸಿದೆ. ಈ ಯೋಜನೆಯನ್ನು ರಾಜ್ಯದ 4 ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ (ರಾಮನಗರ ಹೊಸ ಜಿಲ್ಲೆ ಸೇರಿದಂತೆ), ಮಂಡ್ಯ ಹಾಗೂ ಕೋಲಾರ(ಚಿಕ್ಕಬಳ್ಳಾಪುರ ಹೊಸ ಜಿಲ್ಲೆ ಸೇರಿದಂತೆ) ಜಿಲ್ಲೆಗಳಲ್ಲಿ ಪೈಲೆಟ್ ಯೋಜನೆಯಾಗಿ ಅನುಷ್ಠಾಗೊಳಿಸಿದೆ.

ಯೋಜನೆ ಅನುಷ್ಠಾನದ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಒಟ್ಟು 2006–07 ನೇ ಸಾಲಿನಲ್ಲಿ ಬಿಡುಗಡೆಯಾಗಿ ಉಪಯೋಗವಾಗದೇ ಉಳಿದಿರುವ ಅನುದಾನ	69.48
ಭಾರತ ಸರ್ಕಾರದಿಂದ 2007–08 ರಲ್ಲಿ ಬಿಡುಗಡೆಗೊಂಡ ಅನುದಾನ	300.00
ಒಟ್ಟು 2007–08 ನೇ ಸಾಲಿಗೆ ಲಭ್ಯವಿರುವ ಅನುದಾನ	369.48
2007–08ನೇ ಸಾಲಿನಲ್ಲಿ ವೆಚ್ಚವಾಗಿರುವ ಅನುದಾನ	109.69
2007–08ನೇ ಸಾಲಿನ ಅಂತ್ಯಕ್ಕೆ ಉಳಿಕೆ ಯಾದ ಅನುದಾನ	259.79

ಈ ಯೋಜನೆಯನ್ನು 2007–08ನೇ ಸಾಲಿನಲ್ಲಿ ಈ ನಾಲ್ಕು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದ್ದು, 13,853 ಜಾನುವಾರುಗಳನ್ನು ವಿಮೆಗೆ ಒಳಪಡಿಸಲಾಗಿದೆ. 2008–09ನೇ ಸಾಲಿಗೆ ಈ ಯೋಜನೆಯಿಂದ ಸದರಿ ಜಿಲ್ಲೆಗಳನ್ನು ಕೈಬಿಡಲಾಗಿದೆ.

2008–09ನೇ ಸಾಲಿಗೆ ಭಾರತ ಸರ್ಕಾರದಿಂದ ಈ ಯೋಜನೆಯಡಿ ಇನ್ನೂ ಅನುದಾನವನ್ನು ಬಿಡುಗಡೆಯಾಗಬೇಕಾಗಿರುತ್ತದೆ.

ಈ ಜಾನುವಾರು ವಿಮಾ ಯೋಜನೆಯನ್ನು 2008–09ನೇ ಸಾಲಿನಲ್ಲಿ 4 ಜಿಲ್ಲೆಗಳಾದ ಬೆಳಗಾಂ, ಗುಲ್ಬರ್ಗಾ, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ವಿಸ್ತರಿಸಿ, 70,000 ಹೈನು ರಾಸುಗಳನ್ನು ವಿಮೆಗೊಳಪಡಿಸುವ ಗುರಿ ನೀಡಿ, ರೂ.764,00 ಲಕ್ಷಗಳಿಗೆ ಭಾರತ ಸರ್ಕಾರ ಅನುಮೋದನೆ ನೀಡಿರುತ್ತದೆ.

2007–08ನೇ ಸಾಲಿನಲ್ಲಿ ಉಳಿಕೆಯಾಗಿರುವ ಅನುದಾನ ರೂ.259.79 ಇನ್ನೂ ಲಭ್ಯವಿದೆ. ಈ ಅನುದಾನವನ್ನು ಭಾರತ ಸರ್ಕಾರದ ನಿಯಾಮಾನುಸಾರ

2008–09ನೇ ಸಾಲಿನಲ್ಲಿ ಹೊಸ 4 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಪಸಂಮೀ : 11 : ಸಲೆವಿ : 2009.

(ರೇವೂನಾಯಕ್ ಬೆಳಮಗಿ)
ಪಶುಸಂಗೋಪನಾ ಸಚಿವರು.

ಕರ್ನಾಟಕ ವಿಧಾನ ಸಭೆ

296 ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]
ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಅ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿರುವ ವಿವಿಧ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು(ಭಾಷಾವಾರು ಶಾಲೆಗಳ ಸಂಖ್ಯೆ ನೀಡುವುದು);

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿರುವ ವಿವಿಧ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಈ ಕೆಳಕಂಡಂತಿವೆ.

ಮಾಧ್ಯಮ	ಬೆಂ.ಉತ್ತರ	ಬೆಂ.ದಕ್ಷಿಣ	ಬೆಂ. ಗ್ರಾಮಾಂತರ
ಕನ್ನಡ	421	784	1074
ತಮಿಳು	13	13	00
ತೆಲುಗು	06	03	02
ಉರ್ದು	72	109	75
ಒಟ್ಟು	512	909	1150

ಆ. ಈ ಜಿಲ್ಲೆಗಳಲ್ಲಿರುವ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು; ಉರ್ದು ಶಾಲೆಗಳಿಗೆ ಮಂಜೂರಾಗಿರುವ ಕನ್ನಡ ಮತ್ತಿತರ ಶಿಕ್ಷಕರುಗಳ ಎಷ್ಟು ಹುದ್ದೆಗಳು ಖಾಲಿ ಇವೆ; ಅವುಗಳನ್ನು ತುಂಬಲು ಸರ್ಕಾರದ ಕ್ರಮಗಳೇನು;

ಜಿಲ್ಲೆ	ಉರ್ದು ಶಾಲೆಗಳ ಸಂಖ್ಯೆ	ಖಾಲಿ ಇರುವ ಕನ್ನಡ ಶಿಕ್ಷಕರ ಹುದ್ದೆಗಳ ಸಂಖ್ಯೆ
ಬೆಂ.ಉತ್ತರ	72	00
ಬೆಂ.ದಕ್ಷಿಣ	109	09
ಬೆಂ.ಗ್ರಾಮಾಂತರ	75	01

ರಾಜ್ಯದಲ್ಲೆಡೆ ಮೇಲ್ಕಂಡ 100 ಖಾಲಿ ಹುದ್ದೆಗಳೂ ಸೇರಿದಂತೆ ಒಟ್ಟು ಖಾಲಿ ಇರುವ 4928 ಕನ್ನಡ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ. ಉರ್ದು ಸರ್ಕಾರಿ ಶಾಲೆಗಳಲ್ಲಿ ಕಟ್ಟಡ ಮತ್ತಿತರ ಮೂಲಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆಯೇ; ಇಲ್ಲವಾದಲ್ಲಿ ಎಷ್ಟು ಶಾಲೆಗಳು ಈ ಕೊರತೆಯನ್ನು ಎದುರಿಸುತ್ತಿವೆ?

ಬೆಂ.ಉತ್ತರ ಜಿಲ್ಲೆಯಲ್ಲಿ 34 ಉರ್ದುಶಾಲೆಗಳಲ್ಲಿ ಮೂಲಭೂತ ಸೌಲಭ್ಯದ ಕೊರತೆ ಇರುತ್ತದೆ.

ಬೆಂ. ದಕ್ಷಿಣ ಜಿಲ್ಲೆಯಲ್ಲಿನ ಎಲ್ಲಾ 109 ಉರ್ದುಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲಾಗಿದೆ.

ಬೆಂ.ಗ್ರಾಮಾಂತರ ಜಿಲ್ಲೆಯಲ್ಲಿ 3 ಉರ್ದು ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. 16 ಶಾಲೆಗಳಿಗೆ ಶೌಚಾಲಯ, 20 ಶಾಲೆಗಳಿಗೆ ಕುಡಿಯುವ ನೀರು, 22 ಶಾಲೆಗಳಿಗೆ ವಿದ್ಯುತ್ ಮತ್ತು 27 ಶಾಲೆಗಳಿಗೆ ಕಾಂಪೌಂಡ್ ಸೌಲಭ್ಯಗಳಿರುವುದಿಲ್ಲ. ಅನುದಾನವನ್ನು ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಇವುಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಕ್ರಮ ವಹಿಸಲಾಗುವುದು.

ಇಡಿ 53 ಯೋಸಕ 2009

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

297

ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು.

1. ನಗರ ಪ್ರದೇಶಗಳಲ್ಲಿನ ಬಡ ವಸತಿಹೀನ ಜನರಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ರೂಪಿಸಿರುವ ಯೋಜನೆಗಳ ವಿವರಗಳೇನು? ಎಷ್ಟು ಜನರಿಗೆ ಕಳೆದ ಎರಡು ವರ್ಷಗಳಲ್ಲಿ ಮನೆ ಮತ್ತು ನಿವೇಶನಗಳನ್ನು ಒದಗಿಸಿ ಕೊಡಲಾಗಿದೆ?

ನಗರ ಪ್ರದೇಶಗಳಲ್ಲಿನ ಬಡ ವಸತಿಹೀನ ಜನರಿಗೆ ವಸತಿ ಸೌಲಭ್ಯ ಕಲ್ಪಿಸಲು pf.pಎಲ್ಟ್ ಮಂಡಳಿಗೆ ಅವಕಾಶವಿರುವುದಿಲ್ಲ. ಆದರೆ ನಗರದ ಪ್ರದೇಶಗಳಲ್ಲಿ ಮಂಡಳಿ ವತಿಯಿಂದ ಘೋಷಿತ ಕೊಳವೆ ಪ್ರದೇಶಗಳಲ್ಲಿನ ನಿವಾಸಿಗಳಿಗೆ ವಸತಿ ಸೌಲಭ್ಯ ಒದಗಿಸಲು ಕೇಂದ್ರ ಸರ್ಕಾರವು JNNURMನ BSUP-IHSDP ಯೋಜನೆಗಳನ್ನು ರೂಪಿಸಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಮಂಜೂರಾದ ಯೋಜನೆ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂಖ್ಯೆ	ಹಂತ	ಯೋಜನೆ	ಮನೆಗಳು
1	Bangalore Phase 1	BSUP	11603
2	Bangalore Phase- II	BSUP	3151

3	Mysore Phase-I	BSUP	2738
4	Mysore Phase II	BSUP	2500
	ರಾಜ್ಯದ 25 ನಗರ/ ಪಟ್ಟಣಗಳಲ್ಲಿ	IHSDP	13033

2. ಈ ಪ್ರದೇಶಗಳಲ್ಲಿ ಆಕ್ರಮ ಭೂಮಿ ಒತ್ತುವರಿ ಭೂಮಿಯನ್ನು ಹಾಗೂ ಸರ್ಕಾರಿ ಭೂಮಿಯಲ್ಲಿ ನಗರವಾಸಿ ಬಡಕುಟುಂಬಗಳಿಗೆ ಮನೆ ನಿವೇಶನಗಳನ್ನು ಒದಗಿಸಲು ಕ್ರಮ ಜರುಗಿಸುವುದೇ?

ನಗರ ಪ್ರದೇಶಗಳಲ್ಲಿ ಮಂಡಳಿ ವತಿಯಿಂದ ಘೋಷಿಸಲ್ಪಟ್ಟ ಪ್ರದೇಶಗಳನ್ನು ಹೊರತುಪಡಿಸಿ ಉಳಿದಂತೆ ಆಕ್ರಮ ಭೂಮಿ ಒತ್ತುವರಿ ಭೂಮಿಯನ್ನು ಹಾಗೂ ಸರ್ಕಾರಿ ಭೂಮಿಯಲ್ಲಿ ನಗರ ವಾಸಿ ಬಡ ಕುಟುಂಬಗಳಿಗೆ ಮನೆ/ ನಿವೇಶನಗಳನ್ನು ಒದಗಿಸಲು ಮಂಡಳಿಗೆ ಅವಕಾಶವಿರುವುದಿಲ್ಲ.

3. ನಗರ ಪ್ರದೇಶಗಳಲ್ಲಿ ಗುಣಮಟ್ಟದ ವಸತಿ ಸಮುಚ್ಚಯಗಳನ್ನು ನಿರ್ಮಿಸಿ ಹಂಚುವ ಕುರಿತಾದ ವಸತಿ ಯೋಜನೆಗೆ ತ್ವರಿತ ಚಾಲನೆ ನೀಡುವುದು?

ಮೇಲ್ಕಂಡ ಯೋಜನೆಗಳಲ್ಲಿ ಹಾಲಿ ಇರುವ ಕೊಳಚೆ ಪ್ರದೇಶಗಳಲ್ಲಿಯೇ ಒಳ್ಳೆಯ ಗುಣಮಟ್ಟದ ಮನೆಗಳನ್ನು ನಿಗಧಿತ ಅವಧಿಯಲ್ಲಿ ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ವಇ 01 ಕೊಮಂವಿ 09

(ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು

ಕರ್ನಾಟಕ ವಿಧಾನ ಸಭೆ

298 ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]
ಇಂಧನ ಸಚಿವರು.

ಅ). ರಾಜ್ಯದಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳು ಮತ್ತು ಸಕ್ಕರೆ ಕಾರ್ಖಾನೆಗಳು ಸೇರಿದಂತೆ ಖಾಸಗಿ ವಿದ್ಯುತ್ ಕಂಪನಿಗಳು ಉತ್ಪಾದಿಸುತ್ತಿರುವ ವಿದ್ಯುತ್ ಪ್ರಮಾಣದ ವಿವರಗಳೇನು?

ರಾಜ್ಯದಲ್ಲಿ ಜನವರಿ 2009 ರಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಪ್ರಮಾಣ 30.86 ದಶಲಕ್ಷ ಯೂನಿಟ್ಟುಗಳು ಮತ್ತು ಸಕ್ಕರೆ ಕಾರ್ಖಾನೆಗಳ ಸಹ ವಿದ್ಯುತ್ ಉತ್ಪಾದನಾ ಘಟಕಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಪ್ರಮಾಣ 165.17 ದಶಲಕ್ಷ ಯೂನಿಟ್ಟುಗಳೂ ಸೇರಿದಂತೆ ಖಾಸಗಿ ವಿದ್ಯುತ್ ಕಂಪನಿಗಳು ಜನವರಿ 2009 ರಲ್ಲಿ ಉತ್ಪಾದಿಸಿದ ವಿದ್ಯುತ್ತಿನ ಒಟ್ಟು ಪ್ರಮಾಣ 594.83 ದಶಲಕ್ಷ ಯೂನಿಟ್ಟುಗಳು.

ಆ). ಅವುಗಳಿಂದ ಹೊರ ರಾಜ್ಯಗಳಿಗೆ ಮಾರಾಟವಾಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ಕರ್ನಾಟಕದಿಂದ ಪಡೆದ ವಿದ್ಯುತ್‌ನ್ನು ಪುನಃ ಕರ್ನಾಟಕದ ವಿತರಣಾ ಕಂಪನಿಗಳಿಗೆ ಹೆಚ್ಚಳ ದರದಲ್ಲಿ ಮಾರಾಟ ಮಾಡುತ್ತಿರುವ ಕುರಿತು ಸರ್ಕಾರದಲ್ಲಿ ಉಪಲಬ್ಧವಿರುವ ವಿವರಗಳೇನು?

ಇ). ಈ ಖಾಸಗಿ ಕಂಪನಿಗಳು ಮುಕ್ತ ವಿದ್ಯುತ್ ಮಾರಾಟ ನೀತಿಯಿಂದಾಗಿ ಕೊರತೆ ಎದುರಿಸುತ್ತಿರುವ ಈ ರಾಜ್ಯಕ್ಕೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಲು ಮುಂದಾಗುವುದೇ?

ಆ) ಮತ್ತು ಇ)

ಸರ್ಕಾರದ ದಿನಾಂಕ 30-12-2008 ರ ಆದೇಶದಂತೆ ಯಾವುದೇ ಖಾಸಗಿ ವಿದ್ಯುತ್ ಉತ್ಪಾದಕರು ಹೊರ ರಾಜ್ಯಗಳಿಗೆ ಮುಕ್ತ ಮಾರಾಟದನ್ವಯ ವಿದ್ಯುತ್ ಮಾರಾಟ ಮಾಡುವಂತಿಲ್ಲ. ತಮ್ಮಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ತನ್ನು ರಾಜ್ಯದ ವಿದ್ಯುತ್ ಜಾಲಕ್ಕೆ ಮಾತ್ರ ನೀಡಲು ಸೂಚಿಸಲಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ 17-12-2008 ರಂದು ಆದೇಶ ಹೊರಡಿಸಿ ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೇ ನೀಡಬೇಕೆಂದು ಆದೇಶ ನೀಡಿದ್ದೆ. ಕರ್ನಾಟಕ ಸರ್ಕಾರವು ಅದೇ ದಿನದಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರುಗಳಿಗೆ 1-12-2008 ರಿಂದ ಅನ್ವಯವಾಗುವಂತೆ ತಾವು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡುವ ವಿದ್ಯುತ್‌ಗೆ ಯೂನಿಟ್ ಒಂದಕ್ಕೆ ರೂ.7.25 ಅನ್ನು ನಿಗದಿಪಡಿಸಿ ಮೇ-2009 ರವರೆಗೆ ಖರೀದಿಸಲು ಆದೇಶ ನೀಡಲಾಗಿದೆ.

ಮುಂದುವರೆದು, ಆಮದು ಕಲ್ಲಿದ್ದಲಿನ ಬೆಲೆಯಲ್ಲಿನ ಇಳಿಕೆಯು ಸೇರಿದಂತೆ ಕಬ್ಬಿನ ಸಿಪ್ಪೆ ಮತ್ತು ವಿದ್ಯುತ್ತನ್ನು ಉತ್ಪಾದಿಸಲು ಬಳಸುವ ಇತರೆ ಸಾಮಗ್ರಿಗಳ ದರಗಳಲ್ಲಿ ಆಗಿರುವ ಪರಿಷ್ಕರಣೆಯ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ದಿನಾಂಕ 27-1-2009 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಕಾರ್ಖಾನೆಗಳಿಗೆ ನೀಡುವ ಪ್ರತಿ ಯೂನಿಟ್ ದರವನ್ನು ರೂ.6.50 ಕ್ಕೆ ಕಡಿಮೆ ಮಾಡಿ ಅದನ್ನು ಖರೀದಿಸಲು ಅನುಮೋದನೆ ನೀಡಿದೆ. ಈ ದರವು 1-1-2009 ರಿಂದ 31-5-2009 ರವರೆಗೆ ಚಾಲ್ತಿಯಲ್ಲಿರುತ್ತದೆ.

ಕರ್ನಾಟಕ ಸರ್ಕಾರದ ಮೇಲ್ಕಂಡ ಆದೇಶದ ಪ್ರಕಾರ ಎಲ್ಲಾ ಸಹ ಸಕ್ಕರೆ ವಿದ್ಯುತ್ ಕಾರ್ಖಾನೆಗಳು ಕರ್ನಾಟಕದ ವಿದ್ಯುತ್ ಜಾಲಕ್ಕೇ ಈಗ ವಿದ್ಯುತ್ತನ್ನು ಸರಬರಾಜು ಮಾಡುತ್ತಿವೆ.

ಸಂಖ್ಯೆ: ಇಎನ್ 19 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

299 ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]
ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಅ. ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಕುರಿತು ಸರ್ಕಾರ ಮಾಡುತ್ತಿರುವ ತಲಾವಾರು ಮತ್ತು ಒಟ್ಟು ಮೊತ್ತ ಎಷ್ಟು; ಸರ್ಕಾರಿ ಶಾಲೆಗಳಲ್ಲಿ ಈ ಸೌಲಭ್ಯವನ್ನು ಪಡೆಯುವ ಮಕ್ಕಳ ಸಂಖ್ಯೆ ಎಷ್ಟು;

2008-09ನೇ ಸಾಲಿಗೆ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಗಾಗಿ ಸರ್ಕಾರವು ಯೋಜನೆಯಡಿ ಒಟ್ಟು 98638.78ಲಕ್ಷರೂಗಳನ್ನು ಮತ್ತು ಯೋಜನೇತರದಡಿ 367696.47ಲಕ್ಷರೂಗಳನ್ನು ಖರ್ಚು ಮಾಡಿದೆ. ಸರ್ಕಾರದ ವತಿಯಿಂದ ಪ್ರತಿ ಮಕ್ಕಳಿಗೆ [ಖಾಸಗಿ ಮತ್ತು ಸರ್ಕಾರಿ] 8008.51 ರೂ ವೆಚ್ಚವಾಗುತ್ತಿದೆ.

ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 58.23ಲಕ್ಷ ಮಕ್ಕಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

ಆ. ಗುಣ ಮಟ್ಟದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುತ್ತಿರುವ ಖಾಸಗಿ ಶಿಕ್ಷಣ ವಲಯದ ಮಾದರಿಯಲ್ಲಿ ಶಿಕ್ಷಣ ನೀಡುವ ದಿಶೆಯಲ್ಲಿ ಸರ್ಕಾರದ ವೈಫಲ್ಯತೆಗೆ ಕಾರಣಗಳೇನು; ಅವುಗಳ ನಿವಾರಣೆಗಾಗಿ ಸರ್ಕಾರದ ಕ್ರಮಗಳೇನು;

ಸರ್ಕಾರಿ ಶಾಲೆಗಳಲ್ಲಿ ಗುಣ ಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ನೀಡಲು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಈ ಕೆಳ ಕಂಡಂತೆ ಕ್ರಮವಹಿಸಲಾಗಿದೆ.

- 13691 ಶಾಲೆಗಳಲ್ಲಿ ನಲಿ-ಕಲಿ ವಿಧಾನದಲ್ಲಿ ಬೋಧನೆ ಮಾಡಲಾಗುತ್ತಿದ್ದು, 2009-10ನೇ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
- ಶಿಕ್ಷಕರ ಸಬಲೀಕರಣಕ್ಕಾಗಿ ಗರಿಷ್ಠ ವಾರ್ಷಿಕ 20 ದಿನಗಳ ಸೇವಾ ನಿರತ ತರಬೇತಿ ನೀಡಲಾಗುತ್ತಿದೆ.
- ಆಯ್ದ 9 ಜಿಲ್ಲೆಗಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸಂಚಾರಿ ವಿಜ್ಞಾನ ಪ್ರಯೋಗಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ.
- ಆಯ್ದ ಶಾಲೆಗಳಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣ ನೀಡಲಾಗುತ್ತಿದೆ.
- ಗುಲ್ಬರ್ಗಾ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಜುಸಾಟ್ ಮೂಲಕ ಶಿಕ್ಷಣ ನೀಡಲಾಗುತ್ತಿದೆ.
- ಓದುವ ಕೌಶಲ್ಯ ಉತ್ತಮ ಪಡಿಸಲು ಓದುವೆ ನಾನು ಕಾರ್ಯಕ್ರಮ ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ 11 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಇ. ಪ್ರಾಥಮಿಕ ಶಿಕ್ಷಣವನ್ನು ಗುಣಮಟ್ಟದೊಂದಿಗೆ ಖಾಸಗಿ ವಲಯಕ್ಕೆ ಸರಿ ಸಮವಾಗಿ ನೀಡುವ ನಿಟ್ಟಿನಲ್ಲಿ ಸರ್ಕಾರದ ನೀತಿ ಸಂಹಿತೆಗಳೇನು?

ಸರ್ಕಾರಿ ಶಾಲೆಗಳ ಎಲ್ಲಾ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗಲು ಮತ್ತು ಮಧ್ಯದಲ್ಲಿ ಶಾಲೆ ಬಿಡದಿರಲು ತನ್ಮೂಲಕ ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯಲು ಸಾಧ್ಯವಾಗುವಂತೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಇಡಿ: 51 : ಯೋಸಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

300

ಶ್ರೀ ಹ್ಯಾರೀಸ್ ಎನ್.ಎ

ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು.

ಅ) ರಾಜ್ಯದಲ್ಲಿ ಸಾರ್ವಜನಿಕರಿಂದ ವಸೂಲು ಮಾಡುತ್ತಿರುವ ಗ್ರಂಥಾಲಯ ಕರದ ವಾರ್ಷಿಕ ಮೊತ್ತ ಎಷ್ಟು; ಪಾವತಿಯಾಗದೇ ಉಳಿದಿರುವ ಹಣದ ಮೊತ್ತ ಎಷ್ಟು; ಬಾಕಿ ಪಾವತಿಗಾಗಿ ಕೈಗೊಂಡ ಕ್ರಮಗಳೇನು;

ಆ) ಗ್ರಾಮ ಪಂಚಾಯಿತಿಗಳಿಂದ ಮತ್ತು ಮಹಾನಗರ ಪಾಲಿಕೆಗಳಿಂದ ಹಾಗೂ ಮತ್ತಿತರ ಸಂಸ್ಥೆಗಳಿಂದ ಬಾಕಿ ವಸೂಲಾತಿಗಾಗಿ ಸರ್ಕಾರದ ಮುಂದಿರುವ ಕ್ರಮಗಳೇನು;

ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳು ವಸೂಲು ಮಾಡುವ ಆಸ್ತಿ ತೆರಿಗೆಗಳ ಮೇಲೆ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ, 1965ರ ಸೆಕ್ಷನ್ 30 ರಂತೆ ಶೇ.6ರಷ್ಟು ಮೊತ್ತವನ್ನು ಗ್ರಂಥಾಲಯ ಕರ ವಿಧಿಸಲಾಗುತ್ತಿದೆ. ಅದರಂತೆ ದಿನಾಂಕ:01-04-2007 ರಿಂದ 31.12.2008ರವರೆಗೆ ಒಟ್ಟು ರೂ.35.00 ಕೋಟಿ ಗ್ರಂಥಾಲಯ ಕರ ವಸೂಲಾಗಿರುತ್ತದೆ. ದಿನಾಂಕ:31.03.2007ರ ಅಂತ್ಯಕ್ಕೆ ರಾಜ್ಯದ ವಿವಿಧ ಮಹಾನಗರ ಪಾಲಿಕೆ, ನಗರ ಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ಇತರೆ ಅಧಿಸೂಚಿತ ಸಂಸ್ಥೆಗಳಿಂದ ಒಟ್ಟು ರೂ.52.20 ಕೋಟಿ ಗ್ರಂಥಾಲಯ ಕರ ಬಾಕಿ ಇರುತ್ತದೆ. ಸದರಿ ಬಾಕಿ ಗ್ರಂಥಾಲಯ ಕರ ವಸೂಲಾತಿ ಕುರಿತು ಆಯಾಯ ನಗರ/ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದ್ದು, ಅವರು ಸಂಬಂಧಿಸಿದ ಜಿಲ್ಲೆಯ ನಗರ ಸಭೆ, ಮಹಾನಗರ ಪಾಲಿಕೆ ಇವರೊಂದಿಗೆ ನಿರಂತರ ಸಂಪರ್ಕ ಹೊಂದಿರುತ್ತಾರೆ.

ಇ) ಗ್ರಂಥಾಲಯ ಕರವನ್ನು ಅನುದಾನದಲ್ಲಿಯೇ ಕಡಿತ ಮಾಡುವ ವಿಧಾನವನ್ನು ಅನುಸರಿಸುವ ಕುರಿತಾದ ಪರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಆ ಕುರಿತಾದ ವಿವರಗಳೇನು?

-ಇಲ್ಲ-

ಇಡಿ 40 ಎಲ್ ಐಬಿ 2009

(ಸಹಿ)
ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು

(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ಕರ್ನಾಟಕ ವಿಧಾನ ಸಭೆ

301
ಶ್ರೀ ಬಚ್ಚೇಗೌಡ.ಕೆ.ಪಿ. (ಚಿಕ್ಕಬಳ್ಳಾಪುರ)
ಮಾನ್ಯ ಪಶುಸಂಗೋಪನಾ ಸಚಿವರು.

(ಅ) ರಾಜ್ಯದಲ್ಲಿರುವ ಪಶುವೈದ್ಯ ಶಾಲೆಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರಗಳನ್ನು ನೀಡುವುದು.

1940

(ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿದೆ)

(ಆ) ರಾಜ್ಯದಲ್ಲಿ ಪಶುವೈದ್ಯರ ಎಷ್ಟು ಹುದ್ದೆಗಳು ಖಾಲಿ ಇವೆ? ಜಿಲ್ಲಾವಾರುವಿವರಗಳನ್ನು ನೀಡುವುದು.

1088

(ಜಿಲ್ಲಾವಾರು ವಿವರ ಅನುಬಂಧ-2 ರಲ್ಲಿದೆ)

(ಇ) ಖಾಲಿಯಿರುವ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡುವುದೇ?

ಪಶುವೈದ್ಯ ಪದವೀಧರರ ಲಭ್ಯತೆ ಅವಲಂಬಿಸಿ ಹಂತಹಂತವಾಗಿ ಅವುಗಳನ್ನು ಭರ್ತಿ ಮಾಡಲಾಗುವುದು.

(ಈ) ಹಾಗಿದ್ದಲ್ಲಿ, ಯಾವಾಗ ಭರ್ತಿ ಮಾಡಲಾಗುವುದು ಹಾಗೂ ಈ ಭರ್ತಿಗೆ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು? ವಿವರಗಳನ್ನು ನೀಡುವುದು.

200 ಪಶುವೈದ್ಯಾಧಿಕಾರಿಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿಸಿದ್ದು, ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕ್ರಿಯೆ ಪ್ರಾರಂಭಿಸಿದ್ದು, ಪಶು ವೈದ್ಯಾಧಿಕಾರಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿರುತ್ತದೆ. ಅಂತಿಮ ಆಯ್ಕೆ ಪಟ್ಟಿ ಬಂದ ಕೂಡಲೇ ಖಾಲಿಯಿರುವ ಹುದ್ದೆಗಳನ್ನು ತುಂಬಲಾಗುವುದು.

(ಉ). ಪಶುವೈದ್ಯರನ್ನು ಬೇರೆ ಇಲಾಖೆಗಳಿಗೆ ಸರ್ಕಾರ ನಿಯೋಜಿಸುತ್ತಿರುವುದು ನಿಜವೇ?

ಇಲ್ಲ.

(ಊ). ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು, ವಿವರಗಳನ್ನು ನೀಡುವುದು.

ಪ್ರಶ್ನೆ ಉದ್ಭವಿಸುವುದಿಲ್ಲ.

(ಋ). ಚಿಕ್ಕಬಳ್ಳಾಪುರ ಜಿಲ್ಲೆ ಕೇಂದ್ರವಾಗಿದ್ದು, ಪಶುವೈದ್ಯರ ಹಾಗೂ ಪಶು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

(ಎ). ಹಾಗಿದ್ದಲ್ಲಿ, ಯಾವಾಗ ಭರ್ತಿ ಮಾಡಲಾಗುವುದು ಹಾಗೂ ಈ ಭರ್ತಿಗೆ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು? ವಿವರಗಳನ್ನು ನೀಡುವುದು.

200 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಗೊಂಡಿದೆ. ಅಂತಿಮ ಆಯ್ಕೆ ಪಟ್ಟಿ ಇಲಾಖೆಯಿಂದ ಸ್ವೀಕೃತವಾದ ಕೂಡಲೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತದೆ. 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪ್ರಕ್ರಿಯೆ ಪ್ರಾರಂಭಿಸಿದೆ. ಈ ಆಯ್ಕೆ ಪ್ರಕ್ರಿಯೆ ಮುಗಿದ ಕೂಡಲೇ ಖಾಲಿ ಇರುವ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಪಶುವೈದ್ಯಕೀಯ ಪರೀಕ್ಷಕರ ವೃಂದದಿಂದ ಮುಂಬಡ್ತಿ ನೀಡುವ ಮೂಲಕ ತುಂಬಲಾಗುವುದು.

ಪಶುವೈದ್ಯಕೀಯ ಸಹಾಯಕರ 18 ಹುದ್ದೆಗಳನ್ನು ಜಿಲ್ಲೆಯಲ್ಲಿ ಖಾಲಿಯಿದ್ದು, ಇದರಲ್ಲಿ ದಿನಾಂಕ:17-02-2009 ರಂದು 07 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಸಂಖ್ಯೆ: ಪಸಂಮೀ 131 ಪಸಸೇ 2009

(ರೇವೂನಾಯಕ ಬೇಳಮಗಿ)
ಪಶುಸಂಗೋಪನಾ ಸಚಿವರು.

ಅನುಬಂಧ-1

ಪ್ರಶ್ನೆ ಸಂಖ್ಯೆ:301 ಶ್ರೀ ಬಚ್ಚೇಗೌಡ ಕೆ.ವಿ.(ಚಿಕ್ಕಬಳ್ಳಾಪುರ ಕ್ಷೇತ್ರ)

ರಾಜ್ಯದಲ್ಲಿನ ಪಶು ಚಿಕಿತ್ಸಾಲಯ ಸಂಸ್ಥೆಗಳ ಜಿಲ್ಲಾವಾರು ವಿವರ(ದಿನಾಂಕ31-12-2008 ರಂತೆ)

ಕ್ರ.ಸಂ	ಜಿಲ್ಲೆಯ ಹೆಸರು	ಪಶುಚಿಕಿತ್ಸಾಲಯಗಳ ಸಂಖ್ಯೆ
1	ಬೆಂಗಳೂರು ನಗರ	57
2	ಬೆಂಗಳೂರು ಗ್ರಾಂ	36
3	ತುಮಕೂರು	103
4	ಚಿತ್ರದುರ್ಗ	50
5	ದಾವಣಗೆರೆ	69
6	ಕೋಲಾರ	51
7	ಶಿವಮೊಗ್ಗ	72
8	ಮೈಸೂರು	70
9	ಚಾಮರಾಜನಗರ	32
10	ದಕ್ಷಿಣಕನ್ನಡ	35
11	ಉಡುಪಿ	37
12	ಹಾಸನ	85
13	ಚಿಕ್ಕಮಗಳೂರು	66
14	ಮಂಡ್ಯ	99
15	ಕೊಡಗು	28
16	ಬೆಳಗಾವಿ	153
17	ಬಿಜಾಪುರ	59
18	ಬಾಗಲಕೋಟೆ	75
19	ಧಾರವಾಡ	46
20	ಗದಗ	55
21	ಹಾವೇರಿ	59
22	ಉತ್ತರ ಕನ್ನಡ	80
23	ಗುಲ್ಬರ್ಗಾ	150
24	ಬಳ್ಳಾರಿ	80
25	ಬೀದರ್	81
26	ರಾಯಚೂರು	63
27	ಕೊಪ್ಪಳ	51

28	ರಾಮನಗರ	51
29	ಚಿಕ್ಕಬಳ್ಳಾಪುರ	47
	ಒಟ್ಟು:	**1940**

ಅನುಬಂಧ-2

ಪ್ರಶ್ನೆ ಸಂಖ್ಯೆ:301 ಶ್ರೀ ಬಚ್ಚೇಗೌಡ ಕೆ.ವಿ.(ಚಿಕ್ಕಬಳ್ಳಾಪುರ ಕ್ಷೇತ್ರ)

ರಾಜ್ಯದಲ್ಲಿನ ಪಶು ವೈದ್ಯಾಧಿಕಾರಿ ಹುದ್ದೆಗಳ ಜಿಲ್ಲಾವಾರು ವಿವರ

ಕ್ರಸಂ	ಜಿಲ್ಲೆಯ ಹೆಸರು	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
1	ಬೆಂಗಳೂರು ನಗರ	104	101	3
2	ಬೆಂಗಳೂರು ಗ್ರಾಂ	44	39	5
3	ತುಮಕೂರು	129	95	34
4	ಚಿತ್ರದುರ್ಗ	66	40	26
5	ದಾವಣಗೆರೆ	83	67	16
6	ಕೋಲಾರ	69	47	22
7	ಶಿವಮೊಗ್ಗ	86	55	31
8	ಮೈಸೂರು	91	60	31
9	ಚಾಮರಾಜನಗರ	41	13	28
10	ದಕ್ಷಿಣಕನ್ನಡ	50	24	26
11	ಉಡುಪಿ	42	26	16
12	ಹಾಸನ	103	57	46
13	ಚಿಕ್ಕಮಗಳೂರು	83	55	28
14	ಮಂಡ್ಯ	113	64	49
15	ಕೊಡಗು	36	14	22
16	ಬೆಳಗಾವಿ	178	92	86
17	ಬಿಜಾಪುರ	69	44	25
18	ಬಾಗಲಕೋಟೆ	83	51	32
19	ಧಾರವಾಡ	63	33	30
20	ಗದಗ	67	18	49

21	ಹಾವೇರಿ	79	33	46
22	ಉತ್ತರ ಕನ್ನಡ	96	19	77
23	ಗುಲ್ಬರ್ಗಾ	177	39	138
24	ಬಳ್ಳಾರಿ	102	29	73
25	ಬೀದರ್	91	62	29
26	ರಾಯಚೂರು	74	15	59
27	ಕೊಪ್ಪಳ	60	24	36
28	ರಾಮನಗರ	59	45	14
29	ಚಿಕ್ಕಬಳ್ಳಾಪುರ	59	48	11
	ಒಟ್ಟು:	**2397**	**1309**	**1088**

ಷರಾ:–ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ 84 ನಿವೃತ್ತ ಪಶುವೈದ್ಯರನ್ನು 2 ವರ್ಷಗಳ ಅವಧಿಗೆ ನೇಮಕಾತಿ ಮಾಡಿದೆ

ಕರ್ನಾಟಕ ವಿಧಾನ ಸಭೆ

302

ಶ್ರೀ ಬಚ್ಚೇಗೌಡ ಕೆ.ಪಿ (ಚಿಕ್ಕಬಳ್ಳಾಪುರ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ಚಿಕ್ಕಬಳ್ಳಾಪುರ ನಗರ ಜಿಲ್ಲಾ ಕೇಂದ್ರವಾಗಿದ್ದು, ಪ್ರತ್ಯೇಕ ಬಾಲಕಿಯರ ಪದವಿ ಪೂರ್ವ ಕಾಲೇಜನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು.

ಪ್ರಸ್ತಾವನೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯುಕ್ತರ ಪರಿಶೀಲನೆಯಲ್ಲಿದೆ.

ಇ). ಹಾಗಿದ್ದಲ್ಲಿ, ಈಗಿರುವ ಕಾಲೇಜಿನ ಆವರಣದಲ್ಲಿ ಹೊಸ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳವುದೇ;

ಇಲ್ಲ.

ಈ). ಹಾಗಿದ್ದಲ್ಲಿ, ಈ ಕೊಠಡಿಗಳನ್ನು ನಿರ್ಮಿಸಲು ಈ ವರ್ಷದಿಂದ ಅನುದಾನವನ್ನು ಬಿಡುಗಡೆ ಮಾಡುವುದೇ;

ಉ) ಹಾಗಿದ್ದಲ್ಲಿ, ಬಿಡುಗಡೆ ಮಾಡುವ ಅನುದಾನದ ಪ್ರಮಾಣ ಎಷ್ಟು, ವಿವರಗಳನ್ನು ನೀಡುವದು?

ಉದ್ಭವಿಸುವುದಿಲ್ಲ.

ಸಂಖ್ಯೆಇಡಿ 18 ಎಸ್‌ಹೆಚ್‌ಹೆಚ್ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

303 ಶ್ರೀ ಬಾಲಕೃಷ್ಣ ಹೆಚ್.ಸಿ[ಮಾಗಡಿ]

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು:

ಅ. ರಾಜ್ಯದಲ್ಲಿ ನಬಾರ್ಡ್ ಯೋಜನೆಯ ಆರ್.ಐ.ಡಿ.ಡಫ್–12ರ ಅನುದಾನದಿಂದ ಪೂರ್ಣಗೊಂಡಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳೆಷ್ಟು; ಅಪೂರ್ಣಗೊಂಡಿರುವ ಕಾಲೇಜುಗಳ ಕಟ್ಟಡಗಳೆಷ್ಟು ಹಾಗೂ ಪ್ರಾರಂಭಿಸದಿರುವ ಕಟ್ಟಡಗಳೆಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು:

ರಾಜ್ಯದಲ್ಲಿ ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್–12 ರ ಅನುದಾನದಲ್ಲಿ

ಮಂಜೂರಾಗಿರುವುದು	ಪೂರ್ಣಗೊಂಡಿರುವುದು	ಅಪೂರ್ಣ ಗೊಂಡಿರುವುದು	ಪ್ರಾರಂಭಿಸದೇ ಇರುವುದು
404	47	322	35

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ. ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡವನ್ನು ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್–12 ರಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದರೂ ಹಣವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಹಣವನ್ನು ಬಿಡುಗಡೆ ಮಾಡದಿರುವದಕ್ಕೆ ಕಾರಣವೇನು?

ಬಂದಿದೆ.

2008–09ನೇ ಸಾಲಿಗೆ ನಬಾರ್ಡ್ ಯೋಜನೆಯ ಕಾಮಗಾರಿಗಳಿಗೆ 63.00ಕೋಟಿರೂಗಳನ್ನು ಒದಗಿಸಿದ್ದು, ಅದರಲ್ಲಿ ಆರ್ಥಿಕ ಇಲಾಖೆಯ ಸೂಚನಯನ್ವಯ ಶೇ.50 ರಷ್ಟು ಹಣವನ್ನು ಎಂದರೆ 31.50ಕೋಟಿರೂಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ ಶೇ.50 ರಷ್ಟು ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ಇ. ಈಗಾಗಲೇ ಕಾಮಗಾರಿಯನ್ನು ಪೂರ್ಣಗೊಳಿಸಿ ಬಿಲ್ಲುಗಳು ಬಾಕಿ ಇರುವುದು ನಿಜವೇ; ಹಾಗಿದ್ದಲ್ಲಿ, ಪಾವತಿಸಬೇಕಾದ ಹಣವೆಷ್ಟು; ಗುತ್ತಿಗೆದಾರರಿಗೆ ಪಾವತಿಸಲು ಅನುಸರಿಸುವ ಮಾನದಂಡವೇನು;[ಜಿಲ್ಲಾವರು ಮಾಹಿತಿ ನೀಡುವುದು];

ನಿಜ.

ಈ ಯೋಜನೆಯ ಒಟ್ಟು ಮೊತ್ತ 60.04 ಕೋಟಿರೂಗಳಲ್ಲಿ ಇದುವರೆವಿಗೂ 27.44ಕೋಟಿರೂಗಳು ಖರ್ಚಾಗಿದ್ದು, ಅಕ್ಟೋಬರ್–08ರವರೆಗೆ 4.50ಕೋಟಿರೂಗಳನ್ನು ನಬಾರ್ಡ್ ನಿಂದ ಮರುಪಾವತಿ ಪಡೆಯಲಾಗಿದ್ದು, ಇನ್ನೂ

22.93 ಕೋಟಿರೂಗಳ ಮರುಪಾವತಿ ಪಡೆಯಬೇಕಾಗಿರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.

ನಬಾರ್ಡ್ ಕಾಮಗಾರಿಗಳು ಪ್ರಗತಿಯಾಗುತ್ತಿದ್ದಂತೆ ಸಂಬಂಧಿಸಿದ ಅಧಿಕಾರಿಗಳ ಮುಖಾಂತರ ನಿಗದಿತ ನಮೂನೆಯಲ್ಲಿ ಅನುದಾನವನ್ನು ಮರುಪಾವತಿಸಲು ನಬಾರ್ಡ್‌ಗೆ ಪ್ರಸ್ತಾವನೆ ಸಲ್ಲಿಸಲು ಎಲ್ಲಾ ಕಾಮಗಾರಿಗಳಿಗೂ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಇಡಿ:47:ಯೋಸಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ವಿಧಾನ ಸಭಾ ಪ್ರಶ್ನೆ ಸಂಖ್ಯೆ 303ಕ್ಕೆ ಅನುಬಂಧ-1

ಆರ್ ಐಡಿಎಫ್-12ರ ಕಾಮಗಾರಿಗಳ ಪ್ರಗತಿ ವಿವರ

ಕ್ರಮ. ಸಂ	ಜಿಲ್ಲೆಯ ಹೆಸರು	ಪೂರ್ಣಗೊಂಡಿರುವ ಕಾಮಗಾರಿಗಳು	ಅಪೂರ್ಣಗೊಂಡಿರುವ ಕಾಮಗಾರಿಗಳು	ಪ್ರಾರಂಭಿಸದೇ ಇರುವ ಕಾಮಗಾರಿಗಳು	ಒಟ್ಟು ಕಾಮಗಾರಿಗಳು
1	2	3	4	5	6
01	ಬೆಂಗಳೂರು ದಕ್ಷಿಣ	01	01	– –	02
02	ಬೆಂಗಳೂರು ಗ್ರಾಮಾಂತರ	—	02	01	03
03	ರಾಮನಗರ	—	07	01	08
04	ಬಳ್ಳಾರಿ	—	12	03	15
05	ಬೆಳಗಾವಿ	02	18	01	21
06	ಬಾಗಲಕೋಟೆ	01	10	—	11
07	ಬಿಜಾಪುರ	—	07	02	09
08	ಬೀದರ್	—	08	—	08
09	ದಾವಣಗೆರೆ	02	09	01	12
10	ಚಿತ್ರದುರ್ಗ	02	10	—	12
11	ಚಿಕ್ಕಮಗಳೂರು	01	09	—	10
12	ಗದಗ	02	07	02	11
13	ಹಾವೇರಿ	08	05	01	14
14	ಧಾರವಾಡ	—	09	01	10
15	ಗುಲ್ಬರ್ಗಾ	02	23	01	26
16	ಹಾಸನ	—	40	02	42
17	ಕೋಲಾರ	03	08	01	12
18	ಚಿಕ್ಕಬಳ್ಳಾಪುರ	01	03	—	04
19	ಚಾಮರಾಜನಗರ	—	07	03	10
20	ಮೈಸೂರು	—	26	02	28
21	ಮಂಡ್ಯ	03	17	03	23
22	ಉತ್ತರ ಕನ್ನಡ	03	07	01	11
23	ಕೊಪ್ಪಳ	03	09	—	12
24	ರಾಯಚೂರು	03	11	03	17
25	ದಕ್ಷಿಣ ಕನ್ನಡ	01	11	02	14
26	ಉಡುಪಿ	02	07	02	11
27	ಶಿವಮೊಗ್ಗ	04	08	—	12

28	ತುಮಕೂರು	02	28	02	32
29	ಕೊಡಗು	01	03	—	04
	ಒಟ್ಟು	47	322	35	404

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 303 ಕ್ಕೆ ಅನುಬಂಧ-2

ಆರ್.ಐ.ಡಿ.ಎಫ್-12ರಡಿಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಬಾಕಿ ಬಿಲ್ಲುಗಳ ವಿವರ

[ರೂ.ಲಕ್ಷಗಳಲ್ಲಿ]

ಕ್ರ ಸಂ.	ಜಿಲ್ಲೆಯ ಹೆಸರು	ಯೋಜನೆಯ ಒಟ್ಟು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ	ಪಾವತಿಸಿರುವ ಮೊತ್ತ	ಬಾಕಿ ಇರುವ ಬಿಲ್ಲುಗಳ ಮೊತ್ತ
1	ಬೆಂ.ನಗರ	19.60	15.00	0.00	15.00
2	ಬೆಂ.ಗ್ರಾಮಾಂತರ	49.00	16.00	0.00	16.00
3	ರಾಮನಗರ	216.00	72.00	0.00	72.00
4	ಕೋಲಾರ	150.40	92.81	46.10	46.71
5	ಚಿಕ್ಕಬಳ್ಳಾಪುರ	39.20	30.00	0.00	30.00
6	ತುಮಕೂರು	390.60	129.91	0.00	129.91
7	ಚಿತ್ರದುರ್ಗ	134.00	80.00	16.05	63.95
8	ದಾವಣಗೆರೆ	174.80	58.50	0.00	58.50
9	ಶಿವಮೊಗ್ಗ	225.00	209.00	85.69	123.31
10	ಮೈಸೂರು	363.00	136.00	0.00	136.00
11	ಚಾಮರಾಜನಗರ	121.00	41.00	4.65	36.35
12	ಮಂಡ್ಯ	405.60	135.00	0.00	135.00
13	ಹಾಸನ	630.80	210.00	0.00	210.00
14	ಚಿಕ್ಕಮಗಳೂರು	129.00	78.00	26.25	51.75
15	ಕೊಡಗು	39.20	20.00	20.00	0.00
16	ದಕ್ಷಿಣ ಕನ್ನಡ	206.00	100.00	0.00	100.00
17	ಉಡುಪಿ	114.40	100.00	33.86	66.14
18	ಬೆಳಗಾಂ	415.40	150.00	0.00	150.00
19	ಬಿಜಾಪುರ	183.20	61.00	13.87	47.13
20	ಬಾಗಲಕೋಟೆ	212.60	70.00	14.88	55.12
21	ಧಾರವಾಡ	150.40	50.00	0.00	50.00
22	ಗದಗ	212.60	81.00	0.00	81.00
23	ಹಾವೇರಿ	215.80	100.00	31.35	68.65
24	ಉತ್ತರ ಕನ್ನಡ	160.20	123.78	15.69	108.09
25	ಗುಲ್ಬರ್ಗಾ	323.6	230	61.28	168.72
26	ಬಳ್ಳಾರಿ	232.20	142.00	0.00	142.00

27	ರಾಯಚೂರು	215.80	72.00	0.00	72.00
28	ಕೊಪ್ಪಳ	143.80	60.00	0.00	60.00
29	ಬೀದರ್	130.80	80.81	80.81	0.00
	ಒಟ್ಟು	6004.00	2743.81	450.48	2293.33

ಸಹಿ/-
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

306

ಶ್ರೀ ಕುಮಾರಸ್ವಾಮಿ ಕೆ.ಜಿ.(ಶಿವಮೊಗ್ಗ ಗ್ರಾಮಾಂತರ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ಪದವಿ ಪೂರ್ವ ಶಿಕ್ಷಣ ಇಲಾಖೆಯು ವಾರ್ಷಿಕ ಕ್ರೀಡಾಕೂಟದಲ್ಲಿ ಜಾನಪದ ಆಟಗಳನ್ನು ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಅಳವಡಿಸಿದ್ದರೆ, ಯಾವ ಯಾವ ಆಟಗಳನ್ನು ಅಳವಡಿಸಿದೆ;

ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಜಾನಪದ ಆಟಗಳನ್ನು ನಡೆಸಲು ಜಿಲ್ಲಾ ಉಪ ನಿರ್ದೇಶಕರುಗಳಿಗೆ ತಿಳಿಸಲಾಗಿದೆ. ಹಾಗೂ ದಾಖಲಾತಿ ಸುತ್ತೋಲೆಯಲ್ಲಿಯೂ ಸಹ ತಿಳಿಸಲಾಗಿದೆ. ಉದಾ: ಲಗೋರಿ, ಹಗ್ಗ-ಜಗ್ಗಾಟ, ಬುಗುರಿ ಆಟ, ಕೆಸರುಗದ್ದೆ ಓಟ, ಪತ್ತಮಣಿ, ಹೌಸಿ-ಹೌಸಿ, ಗೋಲಿ ಆಟ, ಪಗಡೆ ಇತ್ಯಾದಿ.

ಇ). ರಾಜ್ಯದಲ್ಲಿರುವ ಸ್ಥಳೀಯ ಜಾನಪದ ಆಟಗಳ ಹೆಸರುಗಳನ್ನು ತಿಳಿಸಲಾಗುವುದೇ.

1) ಲಗೋರಿ 2) ಪಗಡೆ 3) ಬುಗುರಿ ಆಟ 4) ಚಿನ್ನಿದಾಂಡು 5) ಮುಷ್ಟಿಯುದ್ಧ 6) ಸರಬಡಗಿ 7) ಚೆಂಡಿನಾಟ 8) ಕುಂಟೆಬಿಲ್ಲೆ 9) ಲಂಗಡಿ 10) ಹಂದ್ಯಾಳ 11) ಭಾರ ಎತ್ತುವ ಸ್ಪರ್ಧೆ 12) ಗುಡ್ಡ ಹತ್ತುವ ಸ್ಪರ್ಧೆ 13) ಕಣ್ಣಿಗೆ ಬಟ್ಟೆ ಕಟ್ಟಿ ಮಡಿಕೆ ಹೊಡೆಯುವ ಸ್ಪರ್ಧೆ 14) ಹಗ್ಗ- ಜಗ್ಗಾಟ 15) ಕೆಸರುಗದ್ದೆ ಓಟ 16) ಸರಮಣಿ 17) ಉಪ್ಪಾರುಪಟ್ಟೆ 18) ಸಕ್ಕ ಸರಗಿ 19) ಪತ್ತಮಣಿ 20) ಹೌಸಿ-ಹೌಸಿ ಇತ್ಯಾದಿ.

ಸಂಖ್ಯೆ: ಇಡಿ 54 ಟಿಪಿಯು 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

307 ಶ್ರೀ ಜಯಚಂದ್ರ ಟಿ.ಬಿ. (ಶಿರಾ).
ಇಂಧನ ಸಚಿವರು.

ಅ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದಸೂಡಿಯಲ್ಲಿ ವಿದ್ಯುತ್ ಉಪಸ್ಥಾವರ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಇದುವರೆಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದಸೂಡಿಯಲ್ಲಿ 66/11 ಕೆ.ವಿ. ಉಪ ವಿದ್ಯುತ್ ಕೇಂದ್ರದ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿದ್ದು, ಮುಗಿಯುವ ಹಂತದಲ್ಲಿದೆ. ಕಾಮಗಾರಿಯ ಅಂದಾಜು ವೆಚ್ಚ ರೂ.690.57 ಲಕ್ಷಗಳಾಗಿರುತ್ತದೆ.

ಆ) ವಿದ್ಯುತ್ ಉಪ ಸ್ಥಾವರ ಕಾಮಗಾರಿಯ ಪ್ರಗತಿಯು ಯಾವ ಹಂತದಲ್ಲಿದೆ?

ಜೂನ್ 2009 ರ ಅಂತ್ಯದೊಳಗೆ ಸದರಿ ವಿದ್ಯುತ್ ಉಪಕೇಂದ್ರವನ್ನು ಕಾರ್ಯೋನ್ಮುಖಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಸಂಖ್ಯೆ: ಇಎನ್ 20 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

311 ಶ್ರೀ ಪ್ರಕಾಶ್ ಹೆಚ್.ಎಸ್[ಹಾಸನ].
ಮಾನ್ಯ ಪ್ರಾಥಮಿಕ ಮತ್ತು ಶಿಕ್ಷಣ ಸಚಿವರು.

ಅ. ರಾಜ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಮತ್ತು ಪ್ರೌಢ ಶಾಲೆಗಳ ಕಟ್ಟಡಗಳನ್ನು ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್ 13ರ ಅನುದಾನದಲ್ಲಿ ಪ್ರಾರಂಭ ಮಾಡಲು ಮಂಜೂರಾತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ [ಹಾಗಿದ್ದಲಿ, ಜಿಲ್ಲಾವಾರು ಮಾಹಿತಿ ನೀಡುವುದು]

ಬಂದಿದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಆ. ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್ ಅನುದಾನದಲ್ಲಿ ಪ್ರಾರಂಭ ಮಾಡಲಾಗಿರುವ ಪದವಿ ಪೂರ್ವ ಕಾಲೇಜುಗಳ ಮತ್ತು ಪ್ರೌಢಶಾಲೆಗಳ ಕಟ್ಟಡಗಳೆಷ್ಟು; ಪೂರ್ಣಗೊಂಡಿರುವ ಕಟ್ಟಡಗಳೆಷ್ಟು; ಪ್ರಾರಂಭಿಸದಿರುವ ಕಟ್ಟಡಗಳೆಷ್ಟು; ಪ್ರಾರಂಭಿಸದಿರಲು ಕಾರಣಗಳೇನು? [ಜಿಲ್ಲಾವಾರು ಮಾಹಿತಿ ನೀಡುವುದು]

ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್ ಅನುದಾನದಲ್ಲಿ ಪ್ರಾರಂಭಮಾಡಲಾಗಿರುವ ಪದವಿ ಪೂರ್ವ ಕಾಲೇಜುಗಳ ಮತ್ತು ಪ್ರೌಢಶಾಲೆಗಳ

ಕಟ್ಟಡಗಳ, ಪೂರ್ಣಗೊಂಡಿರುವ ಕಟ್ಟಡಗಳ ಮತ್ತು ಪ್ರಾರಂಭಿಸದಿರುವ ಕಟ್ಟಡಗಳ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.

ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿವೇಶನ ವಿವಾದ, ಶಾಲಾ ಸ್ಥಳಾಂತರ, ಮುಂತಾದ ಕಾರಣಗಳಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.

ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ಎಸ್.ಆರ್.ದರ ಪರಿಷ್ಕರಣೆಗಾಗಿ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಕಳುಹಿಸಿಕೊಡಲಾಗಿದೆ.

ಇಡಿ: 48: ಯೋಸಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

NATIONAL BANK FOR AGRICULTURE AND RURAL DEVELOPMENT

State Projects Department

MUMBAI
C-24, 'G'Block
Bandra-Kurle Complex
P.B. No.8121
Bandra (East)
Mumbai-400 051
Tel. : 26530068
Fax : 26530101
E-mail: spd@nabard.org

Ref.No.NB.SPD/ 1605/RIDF-XIII(Karnataka) / 95PSC/2007-2008
11 February 2008

The Hon'ble Governor of the State of Karnataka
Through
The Secretary
Finance Department
Secretariat
Government of Karnataka
BANGALORE

Category of the Project - Rural Infrastructure Development Fund-XIII

	(RIDF-XIII)
Name of the Project	- Government Pre University Colleges (Higher Secondary Schools) Project
Loan sanctioned	- Rs.6008.09 lakh

Dear Sir,

Please refer to captioned project forwarded by you for our consideration for providing loan assistance under the Rural Infrastructure Development Fund-XIII (RIDF-XIII)- We are. Pleased to inform you that we have sanctioned loan for the same as per the details given below:-

i) Type of Project	:	Government Pre University Colleges (Higher Secondary Schools) Project
ii) No. of projects	:	379
iii) Total Financial Outlay	:	Rs. 7068.65lakh
iv) Expenditure already incurred by Govt. of Karnataka upto 31 March 2007	:	Nil
v) Loan from NABARD (as in schedule-I)	:	Rs.6008.09 lakh
vi) Amount to be contributed by the State Govt.	:	Rs.1060.56 lakh

vii) Cut-off date for reimbursing the expenditure : Work done/expenditure incurred from 01.04.2007

viii) Period of completion of the projects : 31 March 2009

ix) Rate of Interest : Interest on loans under this sanction will be at 6.5% (0.5% above Bank Rate as on date of sanction)
(As per para 8 of General Terms and Conditions)

x) Period of loan : 7 years from the date of drawal, including a grace period of two years
(As per para 9 of General Terms and Conditions)

2. This sanction is subject to:-

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರ ಬಂದಿದೆ, ಉತ್ತರದಲ್ಲಿ ಈ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲವೆಂದು ತಿಳಿಸಿದ್ದಾರೆ. ನಾನು ಚಿಕ್ಕಬಳ್ಳಾಪುರ ಜಿಲ್ಲೆಗೆ ಒಂದು ಮೆಡಿಕಲ್ ಕಾಲೇಜನ್ನು ಸರ್ಕಾರದಿಂದ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದೆಯೇ? ಎಂದು ಕೇಳಿದೆ. ಅದಕ್ಕೆ ಅವರು ಈ ಬಗ್ಗೆ ಪ್ರಸ್ತಾವನೆಇಲ್ಲವೆಂದು ತಿಳಿಸಿರುತ್ತಾರೆ. ಈ ಒಂದು ಕಾರಣಕ್ಕೆ ಆ ಜಿಲ್ಲೆಯನ್ನು ಏಕೆ ಮಾಡಬೇಕಾಗಿತ್ತು? ಇವತ್ತು ಹೊಸ ಜಿಲ್ಲೆಯಾಗಿರುವಂಥ ಚಿಕ್ಕಬಳ್ಳಾಪುರ ಜಿಲ್ಲೆಗೆ ಒಂದು ವೈದ್ಯಕೀಯ ಕಾಲೇಜನ್ನು ಕೊಡುವಂಥಾದ್ದಕ್ಕೆ ಗಮಹರಿಸದೇ ಹೋದರೆ, ಮತ್ತೆ ಇದರ ಬಗ್ಗೆ ಆಸಕ್ತಿ ಇಲ್ಲದೇ ಹೋದರೆ, ಆ ಜಿಲ್ಲೆಯನ್ನು ಮಾಡಿದರು ಉದ್ಧೇಶ ಏನು? ಸರ್.ಎಂ.ವಿಶ್ವೇಶ್ವರಯ್ಯನವರು ಹುಟ್ಟಿದಂಥ ಚಿಕ್ಕಬಳ್ಳಾಪುರದಲ್ಲಿ ಇವತ್ತು ಅವರ ಹೆಸರಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಇವರು ಹಮ್ಮಿಕೊಳ್ಳುತ್ತಾರೆ, ಯಾವುದೇ ಒಂದು ದೊಡ್ಡ ಕಾರ್ಯಕ್ರಮವನ್ನು ಮಾಡಿದರೆ ಸರ್.ಎಂ.ವಿಶ್ವೇಶ್ವರಯ್ಯನವರ ಹೆಸರನ್ನು ಪ್ರಸ್ತಾಪ ಮಾಡಿ.

ಅಧ್ಯಕ್ಷರು: ಮಾನ್ಯ ಸಂಪಂಗಿಯವರೆ, ನಿಮ್ಮ ಪ್ರಶ್ನೆಗೆ ಪೂರಕವಾಗಿ ಕೇಳಿ.

ಶ್ರೀ ಎನ್.ಸಂಪಂಗಿ: ಇಂಥ ಜಿಲ್ಲೆಗೆ ಯಾವುದೇ ಒಂದು ದೊಡ್ಡ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಸರ್ಕಾರದಿಂದ ಕೊಡುತ್ತಿಲ್ಲ. ಇವತ್ತು

ವೈದ್ಯಕೀಯ ಶಿಕ್ಷಣದಲ್ಲಿ ಬಡಮಕ್ಕಳು ಅಲ್ಲಿ ಓದುವುದಕ್ಕೆ ಅನುಕೂಲವಾಗುತ್ತಿಲ್ಲ. ಅಂದರೆ ನಾವು ಗಡಿನಾಡ ಪ್ರದೇಶಗಳು, ಹಿಂದುಳಿದ ತಾಲ್ಲೂಕುಗಳಲ್ಲಿನ ಮಕ್ಕಳು ಯಾರು ಕೂಡ ಡಾಕ್ಟರ್‌ಗಳು ಆಗಬಾರದು ಅಥವಾ ಇಂಜಿನಿಯರ್‌ಗಳು ಆಗಬಾರದು.

ಅಧ್ಯಕ್ಷರು: ಮಾನ್ಯ ಸಂಪಂಗಿಯವರೆ, ನೀವು ಪ್ರಶ್ನೆಯ ಮೇಲೆ ಏನು ಕೇಳಬೇಕೋ ಕೇಳಿ. ನೀವು ಬಜೆಟ್ ಮೇಲೆ ಭಾಷಣ ಮಾಡುವಾಗ ಏಕೆ ಬೇಕೆಂಬುದನ್ನು ಹೇಳಿ, ಈಗ ನೀವು ಕೇಳಿರುವ ಪ್ರಶ್ನೆಗೆ ಪ್ರಸ್ತಾವನೆ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಇವರು ಸರ್ಕಾರದ ಮುಂದೆ ಪ್ರಸ್ತಾವನೆ ಇಲ್ಲವೆಂದು ಇವರು ಕೊಟ್ಟಿರುವುದರಲ್ಲಿ ಒಂದೇ ಉತ್ತರವಿದೆ.

ಅಧ್ಯಕ್ಷರು: ತಾವು ಏಕೆ ಆಗಬೇಕೆಂಬುದರ ಬಗ್ಗೆ ಹೇಳಿ.

ಶ್ರೀ ಎನ್.ಸಂಪಂಗಿ: ಅದರ ಬಗ್ಗೆ ನಾನು ಕೇಳಿದ್ದೇನೆ. ಅವರು ವೈದ್ಯಕೀಯ ಶಿಕ್ಷಣ ಕಾಲೇಜನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಉತ್ತರ ಕೊಟ್ಟಿದ್ದಾರೆ, ಮತ್ತೇ ಯಾವತ್ತು ಪ್ರಾರಂಭ ಮಾಡುತ್ತೀರಿ, ಹೇಗೆ ಪ್ರಾರಂಭ ಮಾಡುತ್ತೀರೆಂದು ಕೇಳಿದ್ದೇನೆ. ಎರಡನೆಯ ಪ್ರಶ್ನೆ ಗ್ರಾಮಾಂತರ ಪ್ರದೇಶದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇನ್ನಿತರೆ ವೈದ್ಯಕೀಯ ಶಿಕ್ಷಣವೆಂದರೆ Paramedical course ಬಡತನದಲ್ಲಿರುವಂಥ ಮಕ್ಕಳಿಗೆ ಅನುಕೂಲವಾಗುವ ರೀತಿಯ course ಗಳನ್ನು ತಾವು ಯಾವಾಗ ಪ್ರಾರಂಭ ಮಾಡುತ್ತೀರೆಂದು ಕೇಳುತ್ತೇದ್ದೇನೆ.

ಶ್ರೀ ರಾಮಚಂದ್ರ ಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೊಸ ಜಿಲ್ಲೆಗಳಲ್ಲ, ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಮೆಡಿಕಲ್ ಕಾಲೇಜ್‌ಗಳು ಇಲ್ಲ. ನಾವು ಮೆಡಿಕಲ್ ಕಾಲೇಜುಗಳನ್ನು ಮಾಡುತ್ತೇವೆಂದು ಹೊಸ ಜಿಲ್ಲೆಗಳನ್ನು ಮಾಡಿಲ್ಲ. ಹೊಸ ಜಿಲ್ಲೆಗಳನ್ನು ಮಾಡುವಂಥಾದ್ದು ಆಡಳಿತಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಚಿದ ದೊಡ್ಡ ದೊಡ್ಡ ಜಿಲ್ಲೆಗಳನ್ನು bifrecate ಮಾಡಿ ಆಡಳಿತಕ್ಕೆ ಅನುಕೂಲವಾಗುವಂತೆ ಜಿಲ್ಲೆಗಳನ್ನು ಮಾಡಿದ್ದೇವೆ. ಇಲ್ಲಿ ಮೆಡಿಕಲ್ ಕಾಲೇಜಿಗಾಗಿ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿಲ್ಲ. ಸರ್ಕಾರದ ಮುಂದೆ ತಾವು ಯಾರಾದರೂ ಶಾಸಕರು ಮತ್ತು ಇತರರು ಬರೆದು ನಮಗೆ ಮೆಡಿಕಲ್ ಕಾಲೇಜು ಬೇಕೆಂದು ಬರೆದಿದ್ದರೆ ಇದು ಪ್ರಸ್ತಾಪವಾಗುತ್ತಿತ್ತು. ಈ ವಿಷಯ ಪ್ರಸ್ತಾಪವಾದ ಮೇಲೆ ಯಾವ ಹಂತದಲ್ಲಿ ಮಾಡಬಹುದೆಂದು ನೋಡಿ ಮಾಡಬಹುದಾಗಿತ್ತು. ಆದರೆ ನಮಗೆ ಯಾವುದೇ ಪ್ರಸ್ತಾವ ಬಂದಿಲ್ಲದೇ ಇರುವುದರಿಂದ ನಮ್ಮ ಮುಂದೆ ಪ್ರಸ್ತಾವನೆ ಇಲ್ಲವೆಂದು ಹೇಳಿದ್ದೇನೆ. ನಾನು ಅಷ್ಟೆ ಹೇಳಿರುವುದು, ಈಗಾಗಲೇ ರಾಜ್ಯದಲ್ಲಿ 6 ಹೊಸ ಮೆಡಿಕಲ್ ಕಾಲೇಜುಗಳನ್ನು ಮಾಡಿರುವಂಥದ್ದು ತಮ್ಮ ಗಮನಕ್ಕೂ ಬಂದಿದೆ. ಒಂದೊಂದು ಕಾಲೇಜನ್ನು ಪ್ರಾರಂಭ ಮಾಡುವಾಗಲೇ 120 ಕೋಟಿ ರೂಪಾಯಿಗಳು

ಬೇಕಾಗುತ್ತದೆ, ಮತ್ತೇ ಆ ಕಾಲೇಜನ್ನು ನಡೆಸಿಕೊಂಡು ಹೋಗುವುದಕ್ಕೆ ಪ್ರತಿ ವರ್ಷ ಹಣ ಬೇಕಾಗುತ್ತದೆ. ಇದು ಸಮಸ್ಯೆ, ಈಗ ನಾವು ಮಾಡಿರುವಂಥ 6 ಕಾಲೇಜುಗಳಿಗೆ ನಮಗೆ ಬೇಕಾಗಿರುವಷ್ಟು ಅಧ್ಯಾಪಕರುಗಳು ಸಿಗುತ್ತಿಲ್ಲ. Medical Council of India ದವರು ಈಗ ನಾವು ಮಾಡಿರುವಂಥ ಕಾಲೇಜುಗಳನ್ನೇ recognize ಮಾಡದೇ ಬಹಳ ತೊಂದರೆಯನ್ನು ಕೊಟ್ಟರು. ಹಾಗಾಗಿ ನಾವು ಹೊರ ರಾಜ್ಯಗಳಿಗೆ ಹೋಗಿ qualified lecture ಗಳನ್ನು ತೆಗೆದುಕೊಳ್ಳಬೇಕೆಂದು ತೆಗೆದುಕೊಂಡು ಬಂದಿದ್ದು ಈಗಲೂ 1%, 2%, ಕೆಲವು ಕಡೆಗಳಲ್ಲಿ 3% ನಷ್ಟು shortage lecturers ಇದ್ದಾರೆ. ಈಗ ಮತ್ತೊಂದು ಕಾಲೇಜನ್ನು ಕೂಡಲೇ ಮಾಡಬೇಕೆಂದರೆ ಸುಮಾರು 400 bed ಇರುವಂಥ ಆಸ್ಪತ್ರೆಯನ್ನು ಕಟ್ಟಬೇಕು. ನಾವು ಮೊದಲು ಆಸ್ಪತ್ರೆಯನ್ನು ಕಟ್ಟಿ ನಂತರ ಕಾಲೇಜನ್ನು ಮಾಡವಂತ ಪ್ರವೃತ್ತಿಗೆ ಹೋಗಬೇಕು. ನೀವು ಈಗ ಪ್ರಸ್ತಾವನೆಯನ್ನು ಚರ್ಚೆ ಮಾಡಿದ್ದೀರಾ, ಅದನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳುತ್ತದೆ. ನಾವು ಒಂದು ಕಾಲೇಜು ಮಾಡಬೇಕೆಂದರೆ ಒಮ್ಮೆಗೆ 25 ಎಕರೆ ಜಾಗ ಒಂದೇ ಪ್ಲಾಟ್‌ನಲ್ಲಿ ಸಿಗಬೇಕು, 400 bed Hospital ಆಗಬೇಕು, ಮತ್ತೆ ಅದಕ್ಕೆ ಬೇಕಾಗಿರುವಂಥ ವೈದ್ಯಕೀಯ ಶಿಕ್ಷಕರು ಬೇಕಾಗುತ್ತದೆ. ನೀವು ಇನ್ನೊಂದು ವಿಚಾರ paramedical ಬಗ್ಗೆ ಕೇಳಿದ್ದೀರಿ. ಇದನ್ನೂ ಮಾಡೋಣ, ಈಗಾಗಲೇ ನಮ್ಮ ರಾಜ್ಯದಲ್ಲಿರುವಂಥ paramedical ಕಾಲೇಜುಗಳಲ್ಲಿ ನಮಗೆ ಬೇಕಾದಷ್ಟು students ಬರುತ್ತಿಲ್ಲ. ಈ ಬಗ್ಗೆ ನಾನು ನಿಮಗೆ ಹೇಳುತ್ತೇನೆ. ನಮಲ್ಲಿ 68 paramedical college ಗಳಿಗೆ ಒಂದೊಂದು Government paramedical college ಇದೆ. ಈ 68 paramedical college ಗಳಿಗೆ students ಬರುತ್ತಿಲ್ಲ. ಇನ್ನು ಆಯುರ್ವೇದ ಕಾಲೇಜು ಸರ್ಕಾರದ್ದು 3 ಇದ್ದು ಒಟ್ಟು 57 ಕಾಲೇಜುಗಳಿದ್ದು ಅದರಲ್ಲಿ 5 ಕಾಲೇಜುಗಳಿಗೆ ಸರ್ಕಾರದಿಂದ ಅನುದಾನವನ್ನು ಕೊಡುತ್ತಿದ್ದೇವೆ. ಅದಕ್ಕೆ ಅನುದಾನವನ್ನು ಕೊಟ್ಟರೂ ಈ 57 ಕಾಲೇಜುಗಳಿಗೂ ಬೇಕಾಗಿರುವಷ್ಟು students ಬರುತ್ತಿಲ್ಲ. Dental college 39 ಇದೆ, ಅದರಲ್ಲಿ ಸರ್ಕಾರದ್ದು ಎರಡು ಇದೆ. ಬಳ್ಳಾರಿ ಕಾಲೇಜಿಗೆ admissions ಆಗೇ ಇಲ್ಲ, ಬರೀ ಮೂರು admission ಆಯಿತು. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ PUC ಯವರಿಗೆ interview ಎಂದು ಮಾಡಿ, ಅದನ್ನು ಕಳೆದ ಬಾರಿ fill up ಮಾಡಬೇಕಾಗಿ ಬಂತು. Nursing college 299 ಇವೆ. ನಮ್ಮ ಇಡೀ ದೇಶದಲ್ಲಿ ಯಾವುದೇ ರಾಜ್ಯದಲ್ಲೂ ಇಲ್ಲದೇ ಇರುವಷ್ಟು medical college ನಮ್ಮ ರಾಜ್ಯದಲ್ಲಿದೆ. ಈ 299 ಕಾಲೇಜುಗಳಲ್ಲಿ 6 ಕಾಲೇಜುಗಳು ಮಾತ್ರ ಸರ್ಕಾರದ್ದು ಇದ್ದು, ಈ ಸರ್ಕಾರದ ಕಾಲೇಜಿಗೂ ಇನ್ನೂ ಸರಿಯಾದ ಸಂಖ್ಯೆಯಲ್ಲಿ students ಬರುತ್ತಿಲ್ಲ. ನಮ್ಮ ರಾಜ್ಯದಲ್ಲಿ ಹೋಮಿಯೋಪತಿ 10 ಕಾಲೇಜುಗಳು ಇವೆ. ಈ 10 ಕಾಲೇಜಿನಲ್ಲಿ ಒಂದು ಸರ್ಕಾರದ ಕಾಲೇಜು ಆಗಿದ್ದು,

ಇನ್ನು 9 Private college ಗಳಾಗಿವೆ. ಇನ್ನು ನಮ್ಮ ರಾಜ್ಯದಲ್ಲಿ ಒಟ್ಟು 4 ಯುನಾನಿ ಕಾಲೇಜುಗಳಿದ್ದು, ಒಂದು ಸರ್ಕಾರದ್ದು, ಇನ್ನು 3 ಖಾಸಗಿಯದ್ದು ಇದೆ. ಇಷ್ಟೊಂದು ಕಾಲೇಜುಗಳು ಇದ್ದರೂ ಇನ್ನೊಂದು ಕಾಲೇಜು ಮಾಡಬೇಕೆಂದರೆ.. .. ..

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಬಹಳ ವಿಸ್ತಾರವಾಗಿ ಹೇಳುತ್ತಿದ್ದಾರೆ. ಸರ್ಕಾರಿ ಕಾಲೇಜುಗಳಿಗೆ ಏಕೆ admission ಅಷ್ಟೊಂದು ಕಡಿಮೆಯಾಗುತ್ತಿದೆ ಎನ್ನುವುದರ ಬಗ್ಗೆ.. ..

ಶ್ರೀ ರಾಮಚಂದ್ರಗೌಡ: ಸರ್ಕಾರೀ ಕಾಲೇಜುಗಳಿಗೆ admission ಆಗುತ್ತಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ನೀವು ಬಳ್ಳಾರಿ ಸರ್ಕಾರಿ ಕಾಲೇಜಿಗೆ admission ಆಗುತ್ತಿಲ್ಲವೆಂದು ಹೇಳಿದಿರಲ್ಲಾ. . .

ಶ್ರೀ ರಾಮಚಂದ್ರ ಗೌಡ: ನಾನು ಬಳ್ಳಾರಿಯಲ್ಲಿ dental college ಗೆ ಮಾತ್ರ ಹೇಳಿದ್ದು. ಅಲ್ಲಿ ಎಲ್ಲಾ ಬಹಳ ಚೆನ್ನಾಗಿದೆ. ಅಲ್ಲಿ ಹೊಸದಾಗಿ ಮಾಡಿದ ಕಾಲೇಜಿಗೆ CET ಯಲ್ಲಿ last round ನವರೆಗೆ ಹೋದರೂ ಕೂಡ ಯಾರೂ ಬರಲಿಲ್ಲ. ಕೊನೆಗೆ open ಆಗಿ ಬಿಟ್ಟೆವು, PUC ಯಲ್ಲಿ ಯಾರ್‍ಯಾರು eligible ಇದ್ದಾರೋ ಅವರಿಗೆ ಕೊಡಬೇಕೆಂದು ಬಿಟ್ಟೆವು. ಆಮೇಲೆ ಎಲ್ಲಾ ಸೀಟುಗಳು fill up ಆಯಿತು. ಈ ವರ್ಷ ನಾವು 48% ಸರ್ಕಾರದ ಸೀಟು ಎಂದು private college ನವರಿಗೆ ಮಾಡಿದೆವು, 50 ಸೀಟು ಜಾಸ್ತಿ ಮಾಡಿದ್ದೇವೆ. ಈ ವರ್ಷ ಇಡೀ ರಾಜ್ಯದಲ್ಲಿ 50 ಸೀಟನ್ನು ಜಾಸ್ತಿ ಮಾಡಿದ್ದರಿಂದ ಒಂದು ಕಾಲೇಜು ಮಾಡಿದಷ್ಟು ಶಕ್ತಿ ಸಾಮರ್ಥ್ಯ ಇದಕ್ಕೆ ಬಂದಿದೆಯೆಂಬ ಮಾತನ್ನು ಹೇಳುತ್ತೇನೆ. ನಿಮ್ಮ ಪ್ರಸ್ತಾವನೆಯನ್ನು ಕಳುಹಿಸಿ, ನಾವು ಅದನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಯಾರಾದರೂ private ಆಗಿ ಕಾಲೇಜನ್ನು ಮಾಡುವುದಾದರೆ. . . .

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಚಾಮರಾಜ ನಗರದಲ್ಲಿ ಒಂದು private college ತೆರೆಯುವ ಬಗ್ಗೆ ಪ್ರಸ್ತಾವನೆ ಇತ್ತು. ಅದು ಏನಾಯಿತು?

ಶ್ರೀ ರಾಮಚಂದ್ರಗೌಡ: ನಾನು ಕೇಳಿದರೆ ಕೊಡುತ್ತೇವೆಂದು ಹೇಳಿದೆ.

ಅಧ್ಯಕ್ಷರು: ಆಯಿತು, ಮಾನ್ಯ ಸಂಪಂಗಿಯವರೆ ಕೇಳಿ,

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳುವಂಥದ್ದು ಈಗ ಒಂದು ಕಾಲೇಜನ್ನು ಪ್ರಾರಂಭ ಮಾಡಬೇಕೆಂದರೆ 120 ಎಕರೆ ಜಮಿನು, ಮತ್ತು 120 ಕೋಟಿ ರೂ.ಗಳೆಂದು ಏನೋ ಹೇಳಿದರು. ಹಾಗಾದರೆ ಇದಕ್ಕೆ ಇವರು ಹೆದರಿಕೊಂಡು ಇವತ್ತು ಸರ್ಕಾರಿ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ....

ಅಧ್ಯಕ್ಷರು: ಮಾನ್ಯ ಸಂಪಂಗಿಯವರೆ, ಮಾನ್ಯ ಸಚಿವರು ಇಷ್ಟೆಲ್ಲಾ explain ಮಾಡಿ ಹೇಳಿದ್ದಾರೆ.

ಶ್ರೀ ಎನ್. ಸಂಪಂಗಿ: ಏಕೆಂದರೆ ಈಗ private collegeಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಮಾನ್ಯ ರಾಮಚಂದ್ರ ಗೌಡರು ಹೇಳಿರುವಂಥ

ವಿಷಯವನ್ನು ನಾನು ಯಾವುದೋ ಒಂದು ಪತ್ರಿಕೆಯಲ್ಲಿ ನೋಡಿದೆ. ಇವರು CET ಯನ್ನು ಇವತ್ತು ಮುಚ್ಚುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ರಾಮಚಂದ್ರಗೌಡ : ಇರುವಂಥ ಕಾಲೇಜುಗಳನ್ನು ಉಳಿಸುವುದಕ್ಕೋಸ್ಕರ, ಎಲ್ಲಿ admissions ಆಗುತ್ತಿಲ್ಲ ಅಲ್ಲಿ........

(ಗೊಂದಲ)

ಅಧ್ಯಕ್ಷರು :– ನಿಮಗೆ ಅವಶ್ಯಕತೆ ಇದ್ದರೆ ಪ್ರಸ್ತಾವನೆ ಕಳುಹಿಸಿ, follows up ಮಾಡಿ.

(ಗೊಂದಲ)

ಶ್ರೀ ಎನ್.ಸಂಪಂಗಿ : ಆ ಜನಗಳ್ಯಾರೂ para medical ಓದಬಾರದೇ ಅಥವಾ ಅವರು ವೈದ್ಯಕೀಯ ಶಿಕ್ಷಣಕ್ಕೆ ಹೋಗಬಾರದೇ?

ಅಧ್ಯಕ್ಷರು : ಎಲ್ಲ ವಿಷಯಗಳನ್ನು ಅವರು ಹೇಳಿದರಲ್ಲ.

ಶ್ರೀ ಎನ್.ಸಂಪಂಗಿ : ಆ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ ಎಂದು ನಾನು ಕೆಳುತ್ತಿದ್ದೇನೆ. ಇವರು ರಾಜ್ಯದ್ದು ಹೇಳಿಬಿಟ್ಟು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಏನಾಗಿದೆ, ಅಲ್ಲಿ ಯಾವ ಮಕ್ಕಳು ಓದುತ್ತಿದ್ದಾರೆ, ಎಷ್ಟು ಸಂಖ್ಯೆಯಲ್ಲಿ ಓದುತ್ತಿದ್ದಾರೆ ಎನ್ನುವುದ್ಯಾವುದನ್ನೂ ಹೇಳಿಲ್ಲ.

ಶ್ರೀ ರಾಮಚಂದ್ರಗೌಡ : ನೀವು ಪ್ರಸ್ತಾವನೆಯನ್ನು ಕಳುಹಿಸಿ.

ಅಧ್ಯಕ್ಷರು : ಆಯಿತು, ಈಗ ಮುಂದಿನ ಪ್ರಶ್ನೆ. ಶಿವಶಂಕರರೆಡ್ಡಿಯವರೇ ಪ್ರಶ್ನೆಯನ್ನು ಕೇಳಿ.

ಗೌರಿಬಿದನೂರು ಕ್ಷೇತ್ರ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳ ಸುವ್ಯವಸ್ಥೆ ಬಗ್ಗೆ.

43 (378) ಶ್ರೀ. ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)

ಶ್ರೀ. ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಗೌರಿಬಿದನೂರು ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು? ಇದರಲ್ಲಿ ಮೇಲ್ದರ್ಜೆಗೇರಿಸಲ್ಪಟ್ಟ ಆಸ್ಪತ್ರೆಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು)?

ಗೌರಿಬಿದನೂರು ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ–	:	19
ಸಾರ್ವಜನಿಕ ಆಸ್ಪತ್ರೆ	;	01
ಪ್ರಾಥಮಿಕ ಆರೋಗ್ಯ ಕೇಂದ್ರಗಳು	:	17
ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರ	:	01

ಇದರಲ್ಲಿ 7 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಸರ್ಕಾರದ ಆದೇಶದ ಸಂಖ್ಯೆ: ಆಕುಕ/481/ಸಿಜಿಎಂ/2007, ದಿನಾಂಕ: 02–06–2007 ರಲ್ಲಿ ಮೇಲ್ದರ್ಜೇಗೇರಿಸಲಾಗಿದೆ. ವಿವರ ಈ ಕೆಳಕಂಡಂತಿದೆ:

1. ದೋರಿನಾಯಕನ ಪಾಳ್ಯ
2. ಹುಡುಬೂರು
3. ಕಲ್ಲಿನಾಯಕನ ಹಳ್ಳಿ
4. ಕುರುಡಿ
5. ನಾಗರಗೆರೆ
6. ರಾಂಪುರ
7. ವಿಧುರಾಶ್ವಥ.

ಆ) ಮೇಲ್ದರ್ಜೆಗೇರಿಸಲ್ಪಟ್ಟ ಆಸ್ಪತ್ರೆಗಳಲ್ಲಿ ರೋಗಿಗಳ ಉತ್ತಮ ಚಿಕಿತ್ಸೆಗೆ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸಮಸ್ಯೆಯನ್ನು ಯಾವಾಗ ನಿವಾರಿಸಲಾಗುವುದು ಹಾಗೂ ಸರ್ಕಾರವು ಕೈಗೊಂಡ ಕ್ರಮವೇನು?

ಸಾರ್ವಜನಿಕ ಆಸ್ಪತ್ರೆ ಗೌರಿಬಿದನೂರಿನಲ್ಲಿ 10 ತಜ್ಞರ ಹುದ್ದೆ ಮಂಜೂರಾಗಿದ್ದು 8 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಸ್ತ್ರೀ ರೋಗ ತಜ್ಞವೈದ್ಯರು ಮತ್ತು ಕಣ್ಣಿನ ತಜ್ಞರ ಎರಡು ಹುದ್ದೆಗಳು ಮಾತ್ರ ಖಾಲಿ ಇರುತ್ತದೆ. ತಾಲ್ಲೂಕಿನಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ

ಇಲಾಖೆಯಲ್ಲಿ ತಜ್ಞವೈದ್ಯರ ಹುದ್ದೆಗಳು ಕೊರತೆಯಿರುತ್ತದೆ ಈ ಕೊರತೆಯನ್ನು ನೀಗಿಸಲು ತಜ್ಞವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞವೈದ್ಯರುಗಳನ್ನು ಸಂದರ್ಶಕ ತಜ್ಞವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೊತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಇ) ಆಸ್ಪತ್ರೆಯ ಆವರಣದಲ್ಲಿ ಶುಚಿತ್ವ ಇಲ್ಲದೇ ರೋಗಿಗಗಳು ಪರಿತಪಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ. ಇದರ ನಿವಾರಣೆಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಸಾರ್ವಜನಿಕ ಆಸ್ಪತ್ರೆ ಗೌರಿಬಿದನೂರಿನಲ್ಲಿ ಶುಚಿತ್ವಕ್ಕಾಗಿ ನಾನ್ ಕ್ಲೀನಿಕಲ್ ಸರ್ವಿಸ್‌ನಡಿ ಆಸ್ಪತ್ರೆಯ ಶುಚಿತ್ವವನ್ನು ನಿರ್ವಹಿಸಲಾಗುತ್ತಿದೆ. ಇತರೆ ಆಸ್ಪತ್ರೆಗಳಲ್ಲಿ ಸಹ ಆರೋಗ್ಯ ರಕ್ಷಾ ಸಮಿತಿ ಅನುಮೋದನೆ ಪಡೆದು ಮುಕ್ತನಿಧಿಯಿಂದ ಶುಚಿತ್ವ ಕಾರ್ಯವನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) 2008-09ನೇ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸದಾಗಿ ಆಸ್ಪತ್ರೆಯನ್ನೂ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಶ್ರೀ. ಎನ್.ಹೆಚ್. ಶಿವಶಮಕರ್‌ರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರ ಸಮಂಜಸವಾಗಿದೆ. ಆದರೆ ಕೆಲವು ವಿಚಾರಗಳನ್ನು ಸಚಿವರ ಗಮನಕ್ಕೆ ತರಲು ಬಯಸುತ್ತೇನೆ. ನೀವು ಮೇಲ್ದರ್ಜೆಗೇರಿಸಿರುವ ಏಳು ಆಸ್ಪತ್ರೆಗಳ ಕಟ್ಟಡಗಳಿಗೆ ಕಳೆದ ಆರು ತಿಂಗಳ ಹಿಂದೆ ಹಣ ಮಂಜೂರಾಗಿದೆ. ಆದರೆ ಇದುವರೆಗೂ ಕಾಮಗಾರಿಗಳು ಪ್ರಾರಂಭವಾಗಿಲ್ಲ. ಪಟ್ಟಣದಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಸ್ಥಳಾವಕಾಶ ಬಹಳ ಕಡಿಮೆ ಇದೆ. ಅಲ್ಲಿ ಎರಡು ವಾರ್ಡ್‌ಗಳನ್ನು ಹೆಚ್ಚಿಗೆ ನಿರ್ಮಾಣ ಮಾಡುವುದಕ್ಕೆ ಹಣ ಒದಗಿಸಬೇಕು ಎಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಒಂದು Ambulance ಕೂಡ ಪಟ್ಟಣದ ಆಸ್ಪತ್ರೆಗೆ ಬೇಕಾಗಿದೆ. ದಯಮಾಡಿ ಮಾನ್ಯ ಮಂತ್ರಿಗಳು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ.ಬಿ.ಶ್ರೀರಾಮುಲು: ಗೌರಿಬಿದನೂರು ತಾಲ್ಲೂಕಿನಲ್ಲಿ ಒಟ್ಟು 19 ಆಸ್ಪತ್ರೆಗಳಿದ್ದು, ಅವುಗಳಲ್ಲಿ 1 ಸಾರ್ವಜನಿಕ ಆಸ್ಪತ್ರೆ, 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 1 ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರಗಳು ಇರುತ್ತವೆ. ಇದರಲ್ಲಿ 7 ಪ್ರಾಥಮಿಕ ಆರೋಗ್ಯ ಘಟಗಳನ್ನು ಪ್ರಾಥಮಿಕ ಆರೋಗ್ಯ ಕೆಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ. ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ 10 ಮಂದಿ ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 8 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ಇನ್ನೂ ಎರಡು ವಾರ್ಡ್‌ಗಳು ಬೇಕಾಗಿದೆ ಮತ್ತು ಮೇಲ್ದರ್ಜೆಗೇರಿಸಿರುವ ಕೇಂದ್ರಗಳಿಗೆ ಕಟ್ಟಡಗಳು ಆಗಬೇಕು ಎಂದು ಕೇಳಿದ್ದಾರೆ. ಅದಕೆ ಆದಷ್ಟು ಬೇಗನೆ ನಾವು ಆರ್ಥಿಕ ಇಲಾಖೆಯಿಂದ ಹಣವನ್ನು ಪಡೆದು ಆ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಪ್ರಯತ್ನವನ್ನು ಮಾಡುತ್ತೇವೆ.

ಉಡುಪಿ ಜಿಲ್ಲಿಯಲ್ಲಿರುವ ಆರೋಗ್ಯ ಕೇಂದ್ರಗಳ ಮಾಹಿತಿ ಬಗ್ಗೆ

44 (269) ಶ್ರೀ. ಗೋಪಾಲ ಭಂಡಾರಿ.ಹೆಚ್ (ಕಾರ್ಕಳ)

ಶ್ರೀ. ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿರುವ ಆರೋಗ್ಯ ಕೇಂದ್ರಗಳು ಯಾವುವು: ಅವುಗಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳಗಳು ಯಾವುವು (ಊರುಗಳ ಹೆಸರನ್ನು ತಿಳಿಸುವುದು)?

ಉಡುಪಿ ಜಿಲ್ಲೆಯಲ್ಲಿ; ಜಿಲ್ಲಾ ಆಸ್ಪತ್ರೆ	–	1
ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ	–	1
ಸಮುದಾಯ ಆರೋಗ್ಯ ಕೇಂದ್ರಗಳು	–	6

(2 ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಸೇರಿ) ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು – 62 ಕಾರ್ಯ ನಿರ್ವಹಿಸುತ್ತಿವೆ. (ವಿವರಗಳನ್ನು ಅನುಬಂಧ-1 ಲಗತ್ತಿಸಲಾಗಿದೆ)

ಆ) ಈ ಪೈಕಿ ಸ್ವಂತ ಕಟ್ಟಡವಿರುವ ಮತ್ತು ಸ್ವಂತ ಕಟ್ಟಡಗಳಿಲ್ಲದ ಆರೋಗ್ಯ ಕೇಂದ್ರಗಳು ಯಾವುವು?

2 ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ಕೋಡಿ ಬೇಂದ್ರೆ ಹಾಗೂ ಕುಕ್ಕಂದೂರುಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ ಉಳಿದ ಎಲ್ಲಾ ಕೇವ್ಮದ್ರಗಳಿಗೆ ಸ್ವಂತ ಕಟ್ಟಡವಿರುತ್ತದೆ.

ಇ) ಸ್ವಂತ ಕಟ್ಟಡವಿಲ್ಲದ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಕೈಗೊಂಡಿರುವ ಕ್ರಮವೇನು?

ಹಣದ ಲಭ್ಯತೆಯನ್ನು ಆಧರಿಸಿ ಆದ್ಯತೆ ಮೇರೆಗೆ ಕಟ್ಟಡ ನಿರ್ಮಾಣ ತೆಗೆದುಕೊಳ್ಳಲಾಗುತ್ತಿದೆ.

ಈ) ಕಾರ್ಕಳ ತಾಲ್ಲೂಕಿನ ಆರೋಗ್ಯ ಇಲಾಖೆಯಲ್ಲಿ ಯಾವ ಯಾವ ವರ್ಗದ ಹುದ್ದೆಗಳು ಖಾಲಿ ಇವೆ?

ಕಾರ್ಕಳ ತಾಲ್ಲೂಕಿನಲ್ಲಿ ಖಾಲಿ ಇರುವ ಹುದ್ದೆಗಳ ಪಟ್ಟಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಉ) ಹಾಗಿದ್ದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ: 7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು

ಅನುಬಂಧ – 1

ಪ್ರಶ್ನೆ: (ಅ)&(ಅ).ರ ಉತ್ತರ: ಉಡುಪಿ ಜಿಲ್ಲೆಯಲ್ಲಿರುವ ಆರೋಗ್ಯ ಕೇಂದ್ರಗಳ/ಕಟ್ಟಡ ಲಭ್ಯತೆ ವಿವರ

ಕ್ರಮ	ಸಂಸ್ಥೆ/ಕಛೇರಿಯ ಹೆಸರು		ಷರಾ
	ಉಡುಪಿ ತಾಲ್ಲೂಕು		
1.	ಸಂಚಾರಿ ಆರೋಗ್ಯ ಘಟಕ [ಗುಡ್ಡಕಾಡು & ಬುಡಕಟ್ಟು ಜನಾಂಗ] ಉಡುಪಿ	ಇಲ್ಲ	ಜಿಲ್ಲಾ ಆರೋಗ್ಯ & ಕು.ಕ.ಕಛೇರಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.
2	ಸಮುದಾಯ ಆ.ಕೇಂದ್ರ ಬ್ರಹ್ಮಾವರ	ಇದೆ	
3	ಸಮುದಾಯ ಆರೋಗ್ಯ ಕೇಂದ್ರ ಶಿರ್ವ	ಇದೆ	
4	ಸಂಚಾರಿ.ಗಿ.ಆ.ಘಟಕ,ಪೆರ್ಡೂರು	ಇದೆ	
5	ಪ್ರಾ.ಆ.ಕೇಂದ್ರ ಆವರ್ಸೆ	ಇದೆ	
6	ಪ್ರಾ.ಆ.ಕೇಂದ್ರ ಬಾರ್ಕೂರು	ಇದೆ	
7	ಪ್ರಾ.ಆ.ಕೇಂದ್ರ ಹಿರಿಯಡ್ಕ	ಇದೆ	
8	ಪ್ರಾ.ಆ.ಕೇಂದ್ರ ಹಿರೇಬೆಟ್ಟು	ಇದೆ	
9	ಪ್ರಾ.ಆ.ಕೇಂದ್ರ ಕೋಡಿಬೆಂಗ್ರೆ	ಇಲ್ಲ	ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.
10	ಪ್ರಾ.ಆ.ಕೇಂದ್ರ ಕೆಮ್ಮಣ್ಣು	ಇದೆ	
11	ಪ್ರಾ.ಆ.ಕೇಂದ್ರ ಕೊಳಲಗಿರಿ	ಇದೆ	
12	ಪ್ರಾ.ಆ.ಕೇಂದ್ರ ಹಳ್ಳಿ	ಇದೆ	
13	ಪ್ರಾ.ಆ.ಕೇಂದ್ರ ಕೊಕ್ಕರ್ಣೆ	ಇದೆ	
14	ಪ್ರಾ.ಆ.ಕೇಂದ್ರ ಕೋಟೆ	ಇದೆ	
15	ಪ್ರಾ.ಆ.ಕೇಂದ್ರ ಕಾಡು	ಇದೆ	
16	ಪ್ರಾ.ಆ.ಕೇಂದ್ರ ಮಣಿಪುರ	ಇದೆ	
17	ಪ್ರಾ.ಅ.ಕೇಂದ್ರ ಮೂಡಬೆಟ್ಟು	ಇದೆ	
18	ಪ್ರಾ.ಆ.ಕೇಂದ್ರ ಮುದರಂಗಡಿ	ಇದೆ	
19	ಪ್ರಾ.ಆ.ಕೇಂದ್ರ ಮಲ್ಪೆ	ಇದೆ	
20	ಪ್ರಾ.ಅ.ಕೇಂದ್ರ ಮಂದರ್ಶಿ	ಇದೆ	
21	ಪ್ರಾ.ಆ.ಕೇಂದ್ರ ಪರ್ಣಂಕಿಲ	ಇದೆ	
22	ಪ್ರಾ.ಆ.ಕೇಂದ್ರ ಪಡುಬಿದ್ರೆ	ಇದೆ	

23	ಪ್ರಾ.ಆ.ಕೇಂದ್ರ ಪೇತ್ರಿ	ಇದೆ	
24	ಪ್ರಾ.ಆ.ಕೇಂದ್ರ ಸಾಯ್ಬರಕಟ್ಟೆ	ಇದೆ	
25	ಪ್ರಾ.ಆ.ಕೇಂದ್ರ ಸಾಲಿಗ್ರಾಮ	ಇದೆ	
26	ಪ್ರಾ.ಆ.ಕೇಂದ್ರ ಸಾಸ್ತಾನ	ಇದೆ	
	ಕುಂದಾಪುರ ತಾಲ್ಲೂಕು		
27	ಪ್ರಾ.ಆ.ಕೇಂದ್ರ ಆಲೂರು	ಇದೆ	
28	ಪ್ರಾ.ಆ.ಕೇಂದ್ರ ಬಸ್ರೂರು	ಇದೆ	
29	ಪ್ರಾ.ಆ.ಕೇಂದ್ರ ಬೈಂದೂರು	ಇದೆ	
30	ಪ್ರಾ.ಆ.ಕೇಂದ್ರ ಬಿದ್ಕಲಕಟ್ಟೆ	ಇದೆ	
31	ಪ್ರಾ.ಆ.ಕೇಂದ್ರ ಬೆಳ್ವೆ	ಇದೆ	
32	ಪ್ರಾ.ಆ.ಕೇಂದ್ರ ಗಂಗೊಳ್ಳಿ	ಇದೆ	
33	ಪ್ರಾ.ಆ.ಕೇಂದ್ರ ಹಾಲಾಡಿ	ಇದೆ	
34	ಪ್ರಾ.ಆ.ಕೇಂದ್ರ ಹಳ್ಳಿಹೊಳೆ	ಇದೆ	
35	ಪ್ರಾ.ಆ.ಕೇಂದ್ರ ಹಕ್ಲಾಡಿ	ಇದೆ	
36	ಪ್ರಾ.ಆ.ಕೇಂದ್ರ ಕೆದೂರು	ಇದೆ	
37	ಪ್ರಾ.ಆ.ಕೇಂದ್ರ ಕಿರಿಮಂಜೇಶ್ವರ	ಇದೆ	
38	ಪ್ರಾ.ಆ.ಕೇಂದ್ರ ಕುಂಭಾಶಿ	ಇದೆ	
39	ಪ್ರಾ.ಆ.ಕೇಂದ್ರ ಕೊಲ್ಲೂರು	ಇದೆ	
40	ಪ್ರಾ.ಆ.ಕೇಂದ್ರ ಕೂರ್ಗಿ	ಇದೆ	
41	ಪ್ರಾ.ಆ.ಕೇಂದ್ರ ಕಂಡ್ಲೂರು	ಇದೆ	
42	ಪ್ರಾ.ಆ.ಕೇಂದ್ರ ಕೋಡಿ	ಇದೆ	
43	ಪ್ರಾ.ಆ.ಕೇಂದ್ರ ಕೋಟೇಶ್ವರ	ಇದೆ	
44	ಪ್ರಾ.ಆ.ಕೇಂದ್ರ ಮರದಂತೆ	ಇದೆ	
45	ಪ್ರಾ.ಆ.ಕೇಂದ್ರ ನಾಡ	ಇದೆ	
46	ಪ್ರಾ.ಆ.ಕೇಂದ್ರ ಶಂಕರನಾರಾಯಣ	ಇದೆ	
47	ಪ್ರಾ.ಆ.ಕೇಂದ್ರ ಶಿರೂರು	ಇದೆ	
48	ಪ್ರಾ.ಆ.ಕೇಂದ್ರ ಸಿದ್ದಾಪುರ	ಇದೆ	
49	ಪ್ರಾ.ಆ.ಕೇಂದ್ರ ವಂಡ್ಸೆ	ಇದೆ	
50	ಸಾರ್ವಜನಿಕ ಆಸ್ಪತ್ರೆ ಕುಂದಾಪುರ	ಇದೆ	
	ಕಾರ್ಕಳ ತಾಲ್ಲೂಕು		
51	ಪ್ರಾ.ಆ.ಕೇಂದ್ರ ಅಜೆಕಾರು	ಇದೆ	
52	ಪ್ರಾ.ಆ.ಕೇಂದ್ರ ಬೈಲೂರು	ಇದೆ	

53	ಪ್ರಾ.ಆ.ಕೇಂದ್ರ ಬಜಗೋಳಿ	ಇದೆ	
54	ಪ್ರಾ.ಆ.ಕೇಂದ್ರ ಬೆಳ್ಮಣ್ಣು	ಇದೆ	
55	ಪ್ರಾ.ಆ.ಕೇಂದ್ರ ದೊಂದರಂಗಡಿ	ಇದೆ	
56	ಪ್ರಾ.ಆ.ಕೇಂದ್ರ ದುರ್ಗ	ಇದೆ	
57	ಪ್ರಾ.ಆ.ಕೇಂದ್ರ ಹಿರ್ಗಾನ	ಇದೆ	
58	ಸಮುದಾಯ ಆ.ಕೇಂದ್ರ ಹೆಬ್ರಿ	ಇದೆ	
59	ಸಮುದಾಯ ಆ.ಕೇಂದ್ರ ನಿಟ್ಟೆ	ಇದೆ	
60	ಪ್ರಾ.ಆ.ಕೇಂದ್ರ ಇನ್ನ	ಇದೆ	
61	ಪ್ರಾ.ಆ.ಕೇಂದ್ರ ಇರ್ವತ್ತೂರು	ಇದೆ	
62	ಪ್ರಾ.ಆ.ಕೇಂದ್ರ ಈದು	ಇದೆ	
63	ಪ್ರಾ.ಆ.ಕೇಂದ್ರ ಕುಂದೂರು	ಇದೆ	ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.
64	ಪ್ರಾ.ಆ.ಕೇಂದ್ರ ಮಾಳ	ಇದೆ	
65	ಪ್ರಾ.ಆ.ಕೇಂದ್ರ ನುಚಳಿಕೆ	ಇದೆ	
66	ಪ್ರಾ.ಆ.ಕೇಂದ್ರ ಹಳ್ಳಿ	ಇದೆ	

ಅನುಬಂಧ –II

ಕಾರ್ಕಳ ತಾಲ್ಲೂಕಿನ ಆರೋಗ್ಯಯ ಇಲಾಖೆಯಲ್ಲಿ ಖಾಲಿ ಹುದ್ದೆಗಳ ವಿವರ

ಕ್ರ.ಸಂ	ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ		
		ಮಂಜೂರಾದ	ಕಾರ್ಯನಿರತ	ತೆರವು
	ವೃಂದ 'ಎ'			
1	ತಾಲ್ಲೂಕು ಆರೋಗ್ಯಧಿಕಾರಿ	1	0	1
2	ತಜ್ಞರು (SP) ಎಂ.ಡಿ.ಜನರಲ್ ಮೆಡಿಸಿನ್	16	15	1
3	ವೈದ್ಯಾಧಿಕಾರಿಗಳು (GDMO) (ಗುತ್ತಿಗೆ ಆಧಾರದ ವೈದ್ಯರ ರಾಜೀನಾಮೆ ಹುದ್ದೆ ತೆರವು ಇದೆ).	18	17	1
	ವೃಂದ 'ಬಿ'	0	0	0
	ವೃಂದ 'ಸಿ'			
1	ಪ್ರಥಮ ದರ್ಜೆ ಸಹಾಯಕ	13	4	9
2	ದ್ವಿತೀಯ ದರ್ಜೆ ಸಹಾಯಕ	6	2	4

3	ಹಿರಿಯ ಟೈಪಿಸ್ಟ್	1	0	**1**
4	ಕಿರಯ ಪ್ರಯೋಗ ಶಾಲಾ ಟೆಕ್ನೋಲೋಜಿಸ್ಟ್	13	11	**2**
5	ಕ್ಷ-ಕಿರಣ ತಂತ್ರಜ್ಞ	3	2	**1**
6	ಇ.ಸಿ.ಜಿ. ತಂತ್ರಜ್ಞ	1	0	**1**
7	ನೇತ್ರ ಸಹಾಯಕರು	3	2	**1**
8	ಕಿರಿಯ ಫಾರ್ಮಾಸಿಸ್ಟ	18	10	**8**
9	ಶುಶ್ರೂಷಣಾಧಿಕಾರಿ(ನರ್ಸಿಂಗ್ ಸೂಪಂರಿಂಟಂಡೆಟ್-1)	1	0	**1**
10	ಶುಶ್ರೂಷಣಾಧಿಕಾರಿ(ನರ್ಸಿಂಗ್ ಸೂಪಂರಿಂಟಂಡೆಟ್-2)	2	1	**1**
11	ಹಿರಿಯ ಶುಶ್ರೂಷಕರು	2	1	**1**
12	ಕಿರಿಯ ನಾನ್-ಮೆಡಿಕಲ್ ಸುಪರ್ವೈಸರ್	2	0	**2**
13	ಕ್ಷೇತ್ರ ಆರೋಗ್ಯ ಶಿಕ್ಷಣಾದಿಕಾರಿ	5	1	**4**
14	ಹಿರಿಯ ಆರೋಗ್ಯ ಸಹಾಯಕ (ಪು)	8	5	**3**
15	ಹಿರಿಯ ಆರೋಗ್ಯ ಸಹಾಯಕ (ಮ)	9	6	**3**
16	ಕಿರಿಯ ಆರೋಗ್ಯ ಸಹಾಯಕ (ಮ)	38	7	**31**
17	ಕಿರಿಯ ಆರೋಗ್ಯ ಸಹಾಯಕ (ಮ)			
	ವೃಂದ 'ಡಿ'			
1	ಗ್ರೂಪ್ 'ಡಿ' ನೌಕರರು	37	15	**22**
2	ಎಕ್ಸ್-ರೇ ಅಟೆಂಡರ್	1	0	**1**
3	ಲ್ಯಾಬ್ ಅಟೆಂಡರ್	1	0	**1**
4	ಅಡುಗೆಯವರು	4	0	**4**
5	ಅಡುಗೆ ಸಹಾಯಕರು	2	0	**2**

ಶ್ರೀ. ಹೆಚ್.ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಮತ್ತು ನಮ್ಮ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಎಷ್ಟು ಕಡೆಗಳಲ್ಲಿ

ಕಟ್ಟಡವಿಲ್ಲ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಕೋಡಿಬೇಂದ್ರೆ ಮತ್ತು ಕುಕ್ಕಂದೂರು ಆರೋಗ್ಯ ಕೇಂದ್ರಗಳಗೆ ಸ್ವಂತ ಕಟ್ಟಡ ಇಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಕೆಲವು ಆರೋಗ್ಯ ಕೇಂದ್ರಗಳಿಗೆ ಕಟ್ಟಡಗಳಿವೆ. ಆದರೆ ಅವು ಕೇವಲ ಒಂದು ಕೋಣೆ ಅಥವಾ ಎರಡು ಕೋಣೆಯ ಕಟ್ಟಡಗಳಾಗಿವೆ. ಒಂದು ಆರೋಗ್ಯ ಕೇಂದ್ರಕ್ಕೆ ಎಷ್ಟರ ಮಟ್ಟಿನ ಕಟ್ಟಡಗಳ ಅವಶ್ಯಕತೆ ಇದೆ ಅಷ್ಟರಮಟ್ಟಿನ ಕಟ್ಟಡಗಳಿಲ್ಲ. ಸ್ವಂತ ಕಟ್ಟಡಗಳಿದ್ದರೂ ಕೂಡ ಅವು ಸಣ್ಣ ಕಟ್ಟಡಗಳಾಗಿದ್ದು, ಹಿಂದೆ ತಾಲ್ಲೂಕು ಬೋರ್ಡ್ ಇದ್ದಾಗ ಕಟ್ಟಿಕೊಟ್ಟಂಥ ಸಣ್ಣ ಕಟ್ಟಡಗಳಾಗಿವೆ. ಅವು ಸ್ವಂತ ಕಟ್ಟಡಗಳು ನಿಜ. ಆದರೆ, ಒಂದು ಆರೋಗ್ಯ ಕೇಂದ್ರಕ್ಕೆ ಎಷ್ಟರ ಮಟ್ಟಿನ ಕಟ್ಟಡದ ಅವಶ್ಯಕತೆ ಇದೆಯೋ, ಅಷ್ಟರ ಮಟ್ಟಿನ ಕಟ್ಟಡ ಇಲ್ಲ. ಆದ್ದರಿಂದ, ಅವುಗಳನ್ನೂ ಕೂಡ ಸರಿಯಾದ ಕಟ್ಟಡ ಇಲ್ಲ ಎನ್ನುವ ಲೆಕ್ಕದಲ್ಲಿ ತೆಗೆದುಕೊಂಡು ಅವುಗಳಿಗೂ ಕಟ್ಟಡವನ್ನು ಕಟ್ಟತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಂಥವುಗಳ ಪಟ್ಟಿಯನ್ನೂ ಕೂಡ ತಾವು ತೆಗೆದುಕೊಳ್ಳಬೇಕು ಎಂಬುದಾಗಿ ಹೇಳುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಹುದ್ದೆಗಳ ಕೊರತೆ ಎಷ್ಟಿದೆ ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆ. ನನ್ನ ತಾಲ್ಲೂಕಿನ ಮಟ್ಟಿಗೆ ನಾನು ಕೇಳುವುದಾದರೆ, 18 Pharmacist ಹುದ್ದೆಗಳಲ್ಲಿ 8 ಹುದ್ದೆಗಳು ಖಾಲಿ ಇವೆ. ಅವರು ಉತ್ತರದಲ್ಲಿ ಹೇಳಿರುವಂತೆ, ಕಿರಿಯ ಆರೋಗ್ಯ ಸಹಾಯಕರ 38 ಹುದ್ದೆಗಳ ಪೈಕಿ 31 ಹುದ್ದೆಗಳು ಖಾಲಿ ಇವೆ. ಇನ್ನು, ಬಹಳ ಸಮಸ್ಯೆ ಇರತಕ್ಕಂಥಾದ್ದು ಗ್ರೂಪ್ 'ಡಿ' ನೌಕರರದು. ಗ್ರೂಪ್ 'ಡಿ' ನೌಕರರ 37 ಹುದ್ದೆಗಳನ್ನು 22 ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳ ಸಂಖ್ಯೆಯೇ ಜಾಸ್ತಿ ಇದೆ, ತುಂಬಿರತಕ್ಕಂಥ ಹುದ್ದೆಗಳ ಸಂಖ್ಯೆ ಕಡಿಮೆ ಇದೆ. ಇವುಗಳನ್ನು ಭರ್ತಿ ಮಾಡಲು ಮಾಡಿರುವ ನೇಮಕಾತಿ ನಿಯಮಗಳಿಗೆ ಆಕ್ಷೇಪಣೆಗಳನ್ನು call for ಮಾಡಿದ್ದೇವೆ ಎಂದು ಹೇಳುತ್ತಾರೆ. ಇದರಿಂದ ಬಹಳಷ್ಟು ಸಮಯ ವ್ಯರ್ಥವಾಗಿ ಹೋಗ ಬಹುದು ಎನ್ನುವುದು ನನ್ನ ಅನಿಸಿಕೆ. ಇದ್ದಂಥ ನಿಯಮಗಳಲ್ಲೇ ಈ ಹುದ್ದೆಗಳನ್ನು ಭರ್ತಿ ಮಾಡಲು ಏನಾದರೂ ಸಮಸ್ಯೆ ಇದೆಯೇ? ಅದಷ್ಟು ಬೇಗ ಭರ್ತಿ ಮಾಡಲು ಏನಾದರೂ ಕ್ರಮ ತೆಗೆದುಕೊಳ್ಳುವಿರಾ ಎನ್ನುವ ವಿಚಾರ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ.ಬಿ.ಶ್ರೀರಾಮುಲು: ಉಡುಪಿ ಜಿಲ್ಲೆಯಲ್ಲಿ 1 ಜಿಲ್ಲಾ ಆಸ್ಪತ್ರೆ, 1 ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ, 6 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ 62 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳ ವಿವರಗಳನ್ನು ತಮಗೆ ಒದಗಿಸಿರುವ ಉತ್ತರದಲ್ಲಿ ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ. 2 ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ಕೋಡಿಬೇಂದ್ರ ಹಾಗೂ ಕುಕ್ಕಂದೂರುಗಳಲ್ಲಿ ಸ್ವಂತ ಕಟ್ಟಡ ಇರುವುದಿಲ್ಲ. ಉಡುಪಿ ಜಿಲ್ಲೆಗೆ ಒಟ್ಟು 88 ವೈದ್ಯಾಧಿಕಾರಿ ಹುದ್ದೆಗಳನ್ನು ಮಂಜೂರಾತಿ ಮಾಡಿದ್ದು, ಅದರಲ್ಲಿ 82 ವೈದ್ಯಾಧಿಕಾರಿಗಳು ಕರ್ತವ್ಯವನ್ನು ನಿರ್ವಹಿಸುತ್ತಿದ್ದು, 6

ಹುದ್ದೆಗಳು ಖಾಲಿ ಇರುತ್ತವೆ. ಕಾರ್ಕಳ ತಾಲ್ಲೂಕು ಆಸ್ಪತ್ರೆಯಲ್ಲಿ 16 ಮಂದಿ ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 15 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ ಸಾಮಾನ್ಯ ವೈದ್ಯಾಧಿಕಾರಿಗಳ 18 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 17 ವೈದ್ಯಾಧಿಕಾರಿಗಳು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ತಜ್ಞ ವೈದ್ಯರ ಹುದ್ದೆಗಳಿಗೆ ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು visiting specialist doctors ಆಗಿ ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮೋದನೆ ನೀಡಲಾಗಿದೆ. ಆ ರೀತಿಯ ನಿವೃತ್ತ ತಜ್ಞ ವೈದ್ಯರಿಗೆ 50,000 ರೂಪಾಯಿಗಳ ಸಂಬಳವನ್ನು ಕೊಡುತ್ತೇವೆಂದರೂ ಯಾರೂ ಮುಂದೆ ಬರುತ್ತಿಲ್ಲ. ತಜ್ಞ ವೈದ್ಯರ ಕೊರತೆ ಏಕೆ ಎಂದರೆ, ಮೆಡಿಸನ್ನಿನಲ್ಲಿ post graduation ಮುಗಿದ ನಂತರ M.D. ಮತ್ತು M.S ಕೋರ್ಸುಗಳಿಗೆ private medical college ಗಳಲ್ಲಿ ಒಂದು ಕೋಟಿ ರೂಪಾಯಿಗಳ donation ಅನ್ನು ಕೇಳುತ್ತಿದ್ದಾರೆ. ಸರ್ಕಾರದಿಂದ ಪ್ರತಿವರ್ಷ M.B.B.S ಮುಗಿದಂಥ 60 ರಿಂದ 70 ಮಂದಿಗೆ post graduation ಗೆ ಕಳುಹಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಅವರು M.D. ಅಥವಾ M.S ಪದವಿಯನ್ನು ಪಡೆದು ಬಂದ ನಂತರ ಅಗತ್ಯತೆ ಮೇರೆಗೆ ಅವರನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಅದೇ ರೀತಿ, ಇಲಾಖೆಯಲ್ಲಿ ಖಾಲಿ ಇರುವ 5,021 ಅರೆ ವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಮಾಡಿರುವ draft notification objections ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿದ್ದು, 22-2-2009ಕ್ಕೆ ಆ ಅವಧಿ ಮುಗಿದಿದೆ. ಆ objections ಅನ್ನು ಪರಿಗಣಿಸಿದ ನಂತರ ಆದಷ್ಟು ಬೇಗನೆ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಗೋಪಾಲ ಭಂಡಾರಿ: ನಾನು ಕೇಳಿರುವಂಥಾದ್ದು ಏನೆಂದರೆ, ತಾಲ್ಲೂಕು ವೈದ್ಯಾಧಿಕಾರಿಗಳು ಹುದ್ದೆ ಒಂದೇ ಒಂದು ಇದ್ದು ಅದೂ ಕೂಡ ಸುಮಾರು ಎರಡು ವರ್ಷಗಳಿಂದ ತೆರವಾಗಿದೆ. ಯಾವುದೋ ಒಂದು ಆರೋಗ್ಯ ಕೇಂದ್ರದ ವೈದ್ಯರನ್ನು ತಾಲ್ಲೂಕು ವೈದ್ಯಾಧಿಕಾರಿಗಳಾಗಿ ನಿಯೋಜನೆ ಮಾಡಿದ್ದು, ಅವರು ಆರೋಗ್ಯ ಕೇಂದ್ರದಲ್ಲೂ ಇರುವುದಿಲ್ಲ, ಇಲ್ಲೂ ಇರುವುದಿಲ್ಲ. ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ. ತಜ್ಞ ವೈದ್ಯರು ಅಂದರೆ post graduation ಆದಂಥವರು ಸಿಗುತ್ತಿಲ್ಲ ಎಂದು ತಾವು ಹೇಳಿದಿರಿ. ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಬೇಕಾದಂಥ ವ್ಯವಸ್ಥೆ ಮಾಡಬಹುದು. ಆದರೆ ನಾನು ಕೇಳುತ್ತಿರುವುದು, ಆರೋಗ್ಯ ಕೇಂದ್ರಗಳಲ್ಲಿನ ಸಿಬ್ಬಂದಿಯ ಕೊರತೆಯ ಬಗ್ಗೆ. ಉದಾಹರಣೆಗೆ ನಾನು ಈಗಾಗಲೇ ಹೇಳಿದ್ದೇನೆ. ಪ್ರಥಮ ದರ್ಜೆ ಸಹಾಯಕರನ್ನು ಭರ್ತಿ ಮಾಡಲು ಹೊಸ ನಿಯಮ ಬೇಕಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಪ್ರಥಮ ದರ್ಜೆ ಸಹಾಯಕರ 13 ಹುದ್ದೆಗಳಲ್ಲಿ 9 ಹುದ್ದೆಗಳು ಖಾಲಿ ಇವೆ. ಈ ರೀತಿ ಇಲ್ಲಿ ಬಹಳ ದೊಡ್ಡ

ಸಂಖ್ಯೆಯಲ್ಲಿ ಹುದ್ದೆಗಳು ತೆರವಾಗಿರುವುದು ತಾವು ಕೊಟ್ಟ ಪಟ್ಟಿಯಲ್ಲಿಯೇ ಕಾಣುತ್ತಿದೆ. ಆದ್ದರಿಂದ, ತಾವು ಹೇಳಿದ ಕಾರಣಕ್ಕಾಗಿ ಹುದ್ದೆಗಳನ್ನು ಖಾಲಿಯಾಗಿ ಮುಂದುವರೆಸದೇ, ಬೇರೆ ಏನಾದರೊಂದು ತುರ್ತು ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡುವಿರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ.ಬಿ. ಶ್ರೀರಾಮುಲು: ತಾವು ಏನು ಪ್ರಶ್ನೆಯನ್ನು ಎತ್ತಿದ್ದೀರಿ, ಅದಕ್ಕೆ ಸಂಬಂಧಿಸಿದಂತೆ ಆದಷ್ಟು ಬೇಗನೆ ಅದನ್ನು ಸರಿಪಡಿಸುವಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಮಸ್ಕಿ ಪಟ್ಟಣದ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನು ಮಾಡುವ ಬಗ್ಗೆ.

45 (120) ಶ್ರೀ. ಪ್ರತಾಪಗೌಡ ಪಾಟೀಲ (ಮಸ್ಕಿ)

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಸ್ಕಿ ಪಟ್ಟಣದ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಮಸ್ಕಿ ಪಟ್ಟಣವು ಲಿಂಗಸೂಗೂರು ತಾಲ್ಲೂಕಿನಲ್ಲಿದ್ದು, ಸದರಿ ತಾಲ್ಲೂಕಿನ ಜನಸಂಖ್ಯೆಯು 2001 ಜನಗಣತಿ ಪ್ರಕಾರ 3,20,879 ಆಗಿದೆ. ಮಾರ್ಗಸೂಚಿಗಳ ಪ್ರಕಾರ, ಪ್ರತಿ 1,200,000 ಜನಸಂಖ್ಯೆಗೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದಾಗಿದ್ದು. ಈಗಾಗಲೇ ಲಿಂಗಸಗೂರು ತಾಲ್ಲೂಕಿನಲ್ಲಿ, ಮೂರು ಸಮುದಾಯ ಆರೋಗ್ಯ ಕೇಂದ್ರಗಳು ಇರುವ ಕಾರಣ ಹೊಸ ಸಮುದಾಯ ಆರೋಗ್ಯ ಕೇಂದ್ರ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಶ್ರೀ ಪ್ರತಾಪಗೌಡ ಪಾಟೀಲ್: ಮಾನ್ಯ ಸಭಾಧ್ಯಕ್ಷರೆ, ಮಸ್ಕಿ ಪಟ್ಟಣಕ್ಕೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿದಾಗ ಆ ತಾಲ್ಲೂಕಿನ ಜನಸಂಖ್ಯೆಗನುಗುಣವಾಗಿ ಸಮುದಾಯ ಆರೋಗ್ಯ ಕೇಂದವನ್ನು ಒದಗಿಸುವುದಕ್ಕೆ ಆಗುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಮಸ್ಕಿ ಪಟ್ಟಣ ಸುಮಾರು 25 ಸಾವಿರ ಜನಸಂಖ್ಯೆಯನ್ನು ಹೊಂದಿರುವಂಥ ಪಟ್ಟಣ ಮತ್ತು ಸುಮಾರು ಮೂರು ತಾಲ್ಲೂಕುಗಳ ವ್ಯಾಪ್ತಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಕೇಂದ್ರ ಸ್ಥಾನವಾಗಿರುವುದರಿದ ಅಲ್ಲಿ ಈಗಿರುವಂಥ ಆಸ್ಪತ್ರೆಯ ಅನುಕೂಲಗಳು ಸಾಕಾಗುವುದಿಲ್ಲ. ಆದರೆ ಮಸ್ಕಿ ಪಟ್ಟಣ ಸುಮಾರು 25 ಸಾವಿರ ಜನಸಂಖ್ಯೆ ಹೊಂದಿದೆ. ಸುಮಾರು 3 ತಾಲ್ಲೂಕುಗಳ ವ್ಯಾಪ್ತಿಯ ಸುತ್ತಮುತ್ತಲ ಹಳ್ಳಿಗಳಿಗೆ ಕೇಂದ್ರ ಸ್ಥಾನವಾಗಿರುವುದರಿಂದ ಈಗಿರುವ ಆಸ್ಪತ್ರೆಯ ಅನುಕೂಲ ಸಾಕಾಗುವುದಿಲ್ಲ. ಈಗಾಗಲೇ 2006-07 ರಿಂದ ಸರ್ಕಾರದ ಮಟ್ಟದಲ್ಲಿ correspondence ನಡೆದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಈಗಾಗಲೇ ಪತ್ರ

ಸಂಖ್ಯೆ HSD 66 ರ ಪ್ರಕಾರ 2006-07ರಲ್ಲಿ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಜಿಲ್ಲಾ ಆರೋಗ್ಯ ಕೇಂದ್ರದಿಂದ ಕೆಲವು ಮಾಹಿತಿಗಳನ್ನು ಕೇಳಿದ್ದಾರೆ. ಆ ನಿಟ್ಟಿನಲ್ಲಿ ಇವತ್ತು ಸರ್ಕಾರಕ್ಕೆ ಸಾಕಷ್ಟು ಮಾಹಿತಿಯನ್ನು ಈಗಾಗಲೇ ನೀಡಲಾಗಿದೆ. ಹಿಂದೆ ಕುಮಾರಸ್ವಾಮಿಯುವರು ಮುಖ್ಯಮಂತ್ರಿಯಾಗಿದ್ದಾಗ ಹಿಂದಿನ ಶಾಸಕರು ಕೊಟ್ಟಂಥ ಮನವಿಗೆ ಮಂಜೂರಾತಿ ಮಾಡಬಹುದೆಂದು ಆದೇಶವನ್ನು ಆ ಪತ್ರದ ಮೇಲೆ ಮಾಡಿದ್ದಾರೆ. ಆ ನಿಟ್ಟಿನಲ್ಲಿ ಮಸ್ಕಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಬಹಳಷ್ಟು ಅವಶ್ಯಕತೆ ಇದೆ. ಕಾರಣ, ಇದನ್ನು ತಾವು ಪರಿಗಣಿಸಿ, ಈ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕು. ಏಕೆಂದರೆ, ಮಸ್ಕಿ ಪಟ್ಟಣ ತಾಲ್ಲೂಕು ಕೇಂದ್ರವಾಗುವ ಅವಕಾವಿದೆ. ಈಗಾಗಲೇ ಎಲ್ಲಾ ಆಯೋಗಗಳೂ ಇದನ್ನು ಹೇಳಿವೆ.

ಶ್ರೀ.ಬಿ.ಶ್ರೀರಾಮುಲು: ಮಸ್ಕಿ ಪಟ್ಟಣ ಲಿಂಗಸುಗೂರು ತಾಲ್ಲೂಕಿನಲ್ಲಿದೆ. ಕೇಂದ್ರ ಸರ್ಕಾರದ guidelines ಪ್ರಕಾರ ಪ್ರತಿ ಒಂದು ಲಕ್ಷ ಇಪ್ಪತ್ತು ಸಾವಿರ ಜನಸಂಖ್ಯೆ ಹೊಂದಿರುವ ಪ್ರದೇಶಕ್ಕೆ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದು. ಆದರೆ, ಅಷ್ಟು ಜನಸಂಖ್ಯೆ ಇಲ್ಲದ ಕಾರಣ, ಲಿಂಗಸುಗೂರು ತಾಲ್ಲೂಕಿನಲ್ಲಿ 3 ಲಕ್ಷದ 20 ಸಾವಿರದ 879 ಜನಸಂಖ್ಯೆ ಇದ್ದು, ಮಾರ್ಗಸೂಚಿಗಳ ಪ್ರಕಾರ, ಮೂರು ಸಮುದಾಯ ಆರೋಗ್ಯ ಕೇಂದ್ರಗಳನ್ನು ಆ ತಾಲ್ಲೂಕಿಗೆ ಮಂಜೂರು ಮಾಡಲಾಗಿದೆ. ಲಿಂಗಸುಗೂರಿನಲ್ಲಿ ಹಳೆ ಹೊಸೂರಿನಲ್ಲಿ, ಮದುಗಲ್‌ನಲ್ಲಿ ಮೂರು ಈಗಾಗಲೇ ಮಂಜೂರಾತಿಯಾಗಿರುವ ಕಾರಣ ಒಂದು ಲಕ್ಷದ 20 ಸಾವಿರ ಜನಸಂಖ್ಯೆ ಇದ್ದರೆ ಮಾತ್ರ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದೆಂದು ಕೇಂದ್ರ ಸರ್ಕಾರದ ಮಾರ್ಗಸೂಚಿ ಇದೆ. ಅದಕ್ಕೋಸ್ಕರ ಲಿಂಗಸುಗೂರಿನಲ್ಲಿ 3 ಲಕ್ಷ 20 ಸಾವಿರದ 879 ಜನಸಂಖ್ಯೆ ಇರುವ ಕಾರಣ ಇನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದಷ್ಟು ಬೇಗ ಈ ಸರ್ಕಾರಿ ಆಸ್ಪತ್ರೆಯನ್ನು ಯಾವ ರೀತಿಯಲ್ಲಿ ಮೇಲ್ದಜೇಗೇರಿಸಬೇಕನ್ನುವುದರ ಬಗ್ಗೆ ನಾನು ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ಸ್ಥಾಪನೆ ಬಗ್ಗೆ

46 (369) ಶ್ರೀ.ರೇವಣ್ಣ ಹೆಚ್.ಡಿ (ಹೊಳೇನರಸೀಪುರ)

ಶ್ರೀ.ಡಿ.ಸುಧಾಕರ, (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಅ ಹಾಸನ ಜಿಲ್ಲೆ ಹೊಳೆನರಸಿಪುರ ತಾಲ್ಲೂಕು, ಪಡುವಲಹಿಪ್ಪ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿದೆಯೇ ಹಾಗಿದ್ದಲ್ಲಿ ಇದಕ್ಕಾಗಿ ಮೀಸಲಿಟ್ಟ ಹಣವೆಷ್ಟು;

ಪಡುವಲಹಿಪ್ಪ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ

2 ಮೆಟ್ರಿಕ್–ಪೂರ್ವ ಹಾಗೂ 2 ಮೆಟ್ರಿಕ್–ನಂತರ ಹೀಗೆ ಒಟ್ಟು 4 ವಿದ್ಯಾರ್ಥಿನಿಲಯಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ. ಹೊಸದಾಗಿ ಯಾವುದೇ ವಿದ್ಯಾರ್ಥಿನಿಲಯ ಪ್ರಾರಂಭಿಸಲು ಮಂಜೂರಾತಿ ನೀಡಿರುವುದಿಲ್ಲ.

ಆ ವಿದ್ಯಾರ್ಥಿನಿಲಯದ ಕಟ್ಟಡದ ಕಾಮಗಾರಿಯನ್ನು ಪ್ರಾರಂಭ ಮಾಡಲಾಗಿದೆಯೇ;

1) ಮೆಟ್ರಿಕ್– ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು ಆರ್.ಐ.ಡಿ.ಎಫ್ ಯೋಜನೆಯಡಿಯಲ್ಲಿ ಕೈಗೊಂಡಿದ್ದು, ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು, ವಿದ್ಯುತ್ ಸಂಪರ್ಕ ಒದಗಿಸಬೇಕಾಗಿದೆ.

2). ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯದ ಕಟ್ಟಡವನ್ನು 2006–07ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ರೂ.40.00 ಲಕ್ಷ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಜಿಲ್ಲಾಧಿಕಾರಿಗಳವರೆಗೆ ವಹಿಸಲಾಗಿತ್ತು.

ಜಿಲ್ಲಾಧಿಕಾರಿಗಳು ತಮ್ಮ ದಿ:2.4.2008ರ ಆದೇಶದಲ್ಲಿ ಕರ್ನಾಟಕ ಭೂ ಸೇನಾ ನಿಗಮಕ್ಕೆ ನಿರ್ಮಾಣ ಕಾರ್ಯ ವಹಿಸಿದ್ದು, ನಿಗಮದವರು ಅನುಮೋದಿತ ಮೊತ್ತಕ್ಕೆ ನಿರ್ಮಾಣ ಮಾಡದೆ ಪರಿಷ್ಕೃತ ಅಂದಾಜು ವೆಚ್ಚದ ಪಟ್ಟಿ ಸಲ್ಲಿಸಿ ಅನುಮೋದನೆ ಕೋರಿದ್ದರ ಮೇರೆಗೆ, ಅವರಿಗೆ ನೀಡಲಾದ ಆದೇಶವನ್ನು ಹಿಂದಕ್ಕೆ ಪಡೆದು ದಿ:17–1–2009ರಲ್ಲಿ ನಿರ್ಮಾಣ ಕಾರ್ಯವನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿದೆ.

ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದು, ನೆಲ ಸಮತಟ್ಟು ಮಾಡಿ ಮಾರ್ಕ್ ಮಾಡಲಾಗಿದೆ.

ಇ ಹಾಗಿಲ್ಲದಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು ಹಾಗೂ ಇದಕ್ಕಾಗಿ ಮಂಜೂರು ಮಾಡಿದ ಹಣವೆಷ್ಟು?

ನಿರ್ಮಾಣ ಕಾರ್ಯ ಪ್ರಾರಂಭಿಸಲಾಗಿದ್ದು ಇದಕ್ಕಾಗಿ ರೂ.40.00 ಲಕ್ಷ ಹಣ ಮಂಜೂರು ಮಾಡಲಾಗಿದೆ. ನಿರ್ಮಿತಿ ಕೇಂದ್ರಕ್ಕೆ ರೂ.10.00 ಲಕ್ಷ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಪಡುವಲಹಿಪ್ಪೆ ಗ್ರಾಮದಲ್ಲಿ ಒಂದು pre metric hostel ಅನ್ನು ಪ್ರಾರಂಭ ಮಾಡುವುದಕ್ಕೆ ಆದೇಶ ಕೊಟ್ಟಿದ್ದರು. 17/1 ರಲ್ಲಿ ನಿರ್ಮಾಣ ಮಾಡುವುದಕ್ಕೆ ನಿರ್ಮಿತಿ ಕೇಂದ್ರಕ್ಕೆ ಕೊಟ್ಟಿದ್ದು, ಕೆಲಸ ಪ್ರಾರಂಭವಾಗಿದೆ ಎಂದು ಹೇಳಿದ್ದೀರಿ. ಆದರೆ, ಇವತ್ತಿನವರೆಗೆ ಕೆಲಸ ಪ್ರಾರಂಭವಾಗಿಲ್ಲ. ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಅಥವಾ ಆ ನಿರ್ಮಿತಿ ಕೇಂದ್ರದವರು ಮಾಡುವ ಕೆಲಸದ quality ಸರಿಯಿಲ್ಲವೆಂದರೆ, ಜಿಲ್ಲಾಪಂಚಾಯತ್ ಅಥವಾ PWD ಗೆ ಅದನ್ನು ವಹಿಸುತ್ತೀರಾ? ಅಥವಾ ನಿರ್ಮಿತಿ ಕೇಂದ್ರದಲ್ಲಿಯೇ ಏನಾದರೂ ಪ್ರಾಮಾಣಿಕವಾಗಿ ಕೆಲಸ ಮಾಡಿ ಆ ಕೆಲಸವನ್ನು ಮುಗಿಸಿಕೊಂಡುತ್ತೀರಾ ಎಂದು ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ. ಡಿ. ಸುಧಾಕರ: ಈಗಾಗಲೇ ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದು. ಇದಕ್ಕೆ ಆಗಲೇ 40 ಲಕ್ಷ ರೂಪಾಯಿ ಬಿಡುಗಡೆಯಾಗಿದೆ. ನಿರ್ಮಿತಿ ಕೇಂದ್ರಕ್ಕೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಈಗಾಗಲೇ ನೆಲ ಸಮತಟ್ಟು ಮಾಡಿ ಮಾರ್ಕ್ ಕೂಡ ಮಾಡುತ್ತಿದ್ದಾರೆ. ಇದರ ಬಗ್ಗೆ ಮತ್ತೇ ಜಿಲ್ಲಾಧಿಕಾರಿಯವರ ಜೊತೆ ಚರ್ಚಿಸಿ, ತಕ್ಷಣ ಕಾರ್ಯಾರಂಭ ಮಾಡುವುದಕ್ಕೆ ಸೂಚನೆ ಕೊಟ್ಟು, ಕೆಲಸವನ್ನು ತ್ವರಿತವಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಕೆಲಸ ಪ್ರಾರಂಭವಾಗಿದೆ ಎಂದು ಹೇಳುತ್ತೀರಿ. ಆದರೆ, ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ: ಏಕೆಂದರೆ, ನಾನು ಪ್ರತಿನಿತ್ಯ ಅದನ್ನು ನೋಡುತ್ತಿರುತ್ತೇನೆ. ಅದಕ್ಕೋಸ್ಕರ, ದಯಮಾಡಿ ಕೂಡಲೇ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಬೇಕು.

ಅಧ್ಯಕ್ಷರು: ಕೆಲಸ ಪ್ರಾರಂಭವಾಗಿದೆ ಎಂದು ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಆದರೆ, actual ಆಗಿ field ನಲ್ಲಿ ಕೆಲಸ ಪ್ರಾರಂಭವಾಗಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ನೀವು enquiry ಮಾಡಿ ಆದಷ್ಟು ಬೇಗ ಕೆಲಸ ಮಾಡಲಿಕ್ಕೇನು ಮಾಡಬೇಕೋ ಅದನ್ನು ಮಾಡಿ.

ಶ್ರೀ ಡಿ. ಸುಧಾಕರ : ಆಗಬಹುದು

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವ್ಯವಸ್ಥೆ ಬಗ್ಗೆ.

48 (275) ಶ್ರೀ. ಜಿ.ಕೆ.ವೆಂಕಟಶಿವಾ ರೆಡ್ಡಿ

ಶ್ರೀ ಡಿ. ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ಶಾಲೆಗಳ ಸಂಖ್ಯೆ ಎಷ್ಟು;

385

ಆ) ಈ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು (ವಿವರ ನೀಡುವುದು);

ಆ ಸಂಬಂಧದ ವಿವರ ಈ ಕೆಳಗಿನಂತಿವೆ.

ಭೋಧಕ ಸಿಬ್ಬಂದಿ			ಭೋಧಕೇತರ ಸಿಬ್ಬಂದಿ		
ನಿಯೋಜನೆ	ಕರಾರು	ಹೊರಗುತ್ತಿಗೆ	ನಿಯೋಜನೆ	ಕರಾರು	ಹೊರಗುತ್ತಿಗೆ
154	466	2183	484	35	2126

2803 ಭೋಧಕರು ಹಾಗೂ 2645 ಭೋಧಕೇತರ ನೌಕರರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ಹಾಗಿದ್ದಲ್ಲಿ, ಅನ್ಯಕರ್ತವ್ಯದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು;

154 ಬೋಧಕ, 484 ಬೋಧಕೇತರ ವರ್ಗದ ನೌಕರರು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಈ) ಹಾಗಿದ್ದಲ್ಲಿ, ಈ ಶಾಲೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಾಗಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು;

ಅಧಿಸೂಚನೆ ಸಂಖ್ಯೆ: ಸಕಇ 42 ಮೊದೇಶಾ 2008, ದಿನಾಂಕ:10–10–2008ರ ಮುಖಾಂತರ ಬೋಧಕ ಹುದ್ದೆಗಳನ್ನು ಸಂಬಂಧಪಟ್ಟ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೇರಿಸಿಕೊಳ್ಳಲಾಗಿದ್ದು ಪ್ರಾಂಶುಪಾಲರ ಮತ್ತು ಶಿಕ್ಷಕರ ಹುದ್ದೆಗಳನ್ನು ತುಂಬುವ ಕುರಿತಂತೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಅಧ್ಯಕ್ಷರು: ಶ್ರೀ ಎನ್.ಎ. ಹ್ಯಾರಿಸ್‌ರವರ ಪ್ರಶ್ನೆ ಸಂ.47(358) ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ. ಕೆ.ಪಿ. ಬಚ್ಚೇಗೌಡ (ಶ್ರೀ ಜಿ.ಕೆ. ವೆಂಕಟಶಿವಾರೆಡ್ಡಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 2803 ಬೋಧಕರು, 2645 ಬೋಧಕೇತರ ನೌಕರರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಹೇಳಿದ್ದಾರೆ. ಇವರ್‍ಯಾರೂ ಕೂಡ ಇಲಾಖೆಗೆ ಸಂಬಂಧಪಟ್ಟವರಲ್ಲ. 154 ಬೋಧಕ, 484 ಬೋಧಕೇತರ ನೌಕರರು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಹೊರ ಗುತ್ತಿಗೆಯ ಆಧಾರದ ಮೇಲೆ 2126 ಬೋಧಕೇತರ ಸಿಬ್ಬಂದಿ ಮತ್ತು 2183 ಬೋಧಕ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಹೇಳಿದ್ದಾರೆ. ಇವತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಪೂರ್ಣ ಪ್ರಮಾಣದ ಇಲಾಖಾ ಸಿಬ್ಬಂದಿ ಇಲ್ಲದೆ ಬಹಳ ಶೋಚನೀಯ ಸ್ಥಿತಿಯಲ್ಲಿವೆ. ಶೀಘ್ರಗತಿಯಲ್ಲೇ ನೇಮಕಾತಿ ಮೂಲಕ ತುಂಬಿಸುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಯಾವಾಗ ತುಂಬುರೆನ್ನುವುದನ್ನು ಹೇಳಲಿಲ್ಲ. ಜೊತೆಗೆ, ಅದರ ಮೇಲೆ ಯಾವ ಇಲಾಖೆಯ control ಸಹ ಇಲ್ಲ. ಜಿಲ್ಲಾಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಅಡಿಯಲ್ಲಿ ಅದು ನಡೆಯುತ್ತಿದ್ದರೂ ಸಹ ಅದರ ಮೇಲೆ ಸರ್ಕಾರದ ನಿಯಂತ್ರಣವಿಲ್ಲದೆ ಶಾಲೆಗಳ ಸ್ಥಿತಿ ತುಂಬಾ ಅಧೋಗತಿಗಿಳಿದಿದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ. ಡಿ. ಸುಧಾಕರ: ಈಗಾಗಲೇ ಖಾಲಿ ಇರುವ ಹುದ್ದೆಗಳನ್ನು ತುಂಬಲಿಕ್ಕೆ Finance Department ನ ಅನುಮೋದನೆಯ ನಿರೀಕ್ಷೆಯಲ್ಲದ್ದೇವೆ. ಜೊತೆಗೆ, ಇದನ್ನು ಸ್ವತಂತ್ರವಾಗಿ ನಿರ್ವಹಣೆ ಮಾಡಲಿಕ್ಕೆ ಜಿಲ್ಲಾಪಂಚಾಯತ್‌ನಿಂದ ಹೊರಗೆ ತಂದು ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕೆಂಬ ಪರಿಶೀಲನೆ ಮತ್ತು ಚಿಂತನೆ ಸರ್ಕಾರದ ಮಟ್ಟದಲ್ಲಿ ನಡೆದಿದೆ. ಇದನ್ನು ಶೀಘ್ರದಲ್ಲಿಯೇ ಅನುಷ್ಠಾನ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಕಟ್ಟಡ ಬಗ್ಗೆ

49 (83) ಶ್ರೀ. ಸುರೇಶ್‌ಗೌಡ (ನಾಗಮಂಗಲ)

ಶ್ರೀ. ಡಿ. ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ) ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಯಾವ ವರ್ಷದಲ್ಲಿ ಮಂಜೂರಾತಿ ನೀಡಲಾಗಿದೆ; ಹಾಗಿದ್ದಲ್ಲಿ, ಹಣ ಬಿಡುಗಡೆ ಮಾಡಲಾಗಿದೆಯೇ; (ವಿವರ ಒದಗಿಸುವುದು);

ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಜಾತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ 2003–04ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು ರೂ.24.50 ಲಕ್ಷಗಳ ಮೊತ್ತವನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

ಆ) ಹಾಗಿಲ್ಲದಿದ್ದಲ್ಲಿ, ಈವರೆವಿಗೂ ಕಟ್ಟಡ ಕಾಮಗಾರಿ ಪ್ರಾರಂಭವಾಗದಿರಲು ಕಾರಣಗಳೇನು;

ಹಾಲಿ ಇರುವ ನಿವೇಶನಕ್ಕೆ ಸೂಕ್ತ ರಸ್ತೆ ಸಂಪರ್ಕವಿರುವುದಿಲ್ಲ. ನಿವೇಶನದ ಪಕ್ಕದ ಜಮೀನಿನ ಮಾಲೀಕರಿಂದ ತಕರಾರು ಇರುತ್ತದೆ. ಅದಲ್ಲದೆ ನಿವೇಶನದ ಪಕ್ಕ ಕಾಲುವೆ ಇದ್ದು ಕಾಲುವೆಗೆ ತಡೆಗೋಡೆ ಇಲ್ಲದ ಕಾರಣ ಪಾಯವನ್ನು ಎತ್ತರಿಸಿ ಕಾಲಂ ಹಾಕಿ ಕಟ್ಟಡ ನಿರ್ಮಿಸಬೇಕಾಗುತ್ತದೆ. ಇದಕ್ಕೆ ರೂ.38.75 ಲಕ್ಷಗಳನ್ನು ಹೆಚ್ಚುವರಿ ವೆಚ್ಚ ಉಂಟಾಗಲಿದೆ. ಇದರಿಂದಾಗಿ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಳಂಬ ಉಂಟಾಗುತ್ತಿದೆ.

ಇ ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ ಮೇಲೆ (ಆ) ರಲ್ಲಿ ವಿವರಸಿರುವುದರ ಮೇರೆಗೆ ಕಟ್ಟಡದ ಪರಿಷ್ಕೃತ ಅಂದಾಜುಗಳಿಗೆ ಸಂಬಂಧಿಸಿದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ:ಸಕಇ 77 ಪಕವಿ 2009

ಶ್ರೀ ಸುರೇಶ್‌ಗೌಡ: ನನ್ನ ಕ್ಷೇತ್ರದ ಕೊಪ್ಪ ಗ್ರಾಮದ ಪರಿಮಿತಿಯಲ್ಲಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ 2005–06ನೇ ಸಾಲಿನಲ್ಲಿ ಸುಮಾರು 24 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಈ ಹಣವನ್ನು ಸಹ ಕರ್ನಾಟಕ ಭೂ ಸೇನಾ ನಿಗಮದವರಿಗೆ ನೀಡಲಾಗಿದೆ. ತದನಂತರ, ಅವರು ಪಕ್ಕದಲ್ಲಿ ಯಾವುದೋ ಒಂದು ಕಾಲುವೆ ಇದೆ ಎಂದು, 24, ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲವೆಂದು, 46.5 ಲಕ್ಷ ರೂಪಾಯಿಗಳಿಗೆ ಒಂದು ಅಂದಾಜು ಸಿದ್ಧಪಡಿಸಿ, ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದಕ್ಕೆ 58.5 ಲಕ್ಷ ರೂಪಾಯಿಗಳಿಗೆ ಒಂದು ಅಂದಾಜು ಸಿದ್ಧಪಡಿಸಿ, ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದಕ್ಕೆ 58.5 ಲಕ್ಷ ರೂಪಾಯಿಗಳಿಗೆ ಇನ್ನೊಂದು ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಸುಮಾರು ಮೂರು ವರ್ಷಗಳ ಹಿಂದೆ ಭೂ

ಸೇನಾ ನಿಗಮದವರು ಈ ಕೆಲಸಕ್ಕಾಗಿ 24 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಮೂರು ವರ್ಷಕ್ಕೆ ಬಡ್ಡಿಯೇ ಸುಮಾರು 5–8 ಲಕ್ಷ ರೂಪಾಯಿಗಳಾಗುತ್ತಿದೆ. ಅಂದಿನ ಶಾಸಕರ ಒತ್ತಾಯಕ್ಕೆ ಇಲ್ಲಿ ಪಾಯ ಮಾತ್ರ ತೆಗೆದಿದ್ದಾರೆ. ಆದರೆ, ಉತ್ತರದಲ್ಲಿ, ಅಲ್ಲಿ ರಸ್ತೆ ಇಲ್ಲ, ತೊಂದರೆ ಇದೆ. ಸೈಟ್ ಇದೆ, ಕೆಲಸವನ್ನು ಪ್ರಾರಂಭಿಸಿ, ಪಾಯ ತೆಗೆದಿದ್ದಾರೆಂದು ಹೇಳಿದ್ದಾರೆ. ಆದರೆ, ಅಲ್ಲಿ ಇದುವರೆಗೆ ಸಹ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಅದರ ಜೊತೆಗೆ, ಭೂ ಸೇನಾ ನಿಗಮದವರು ಮಾಡುವ ಯಾವುದೇ ಕಾಮಗಾರಿ ನಾವು ನಮ್ಮ ಕ್ಷೇತ್ರದಲ್ಲಿ ಗಮನಿಸಿದಂಥ ಸಂದರ್ಭದಲ್ಲಿ ಯಾವುದೂ ಗುಣಮಟ್ಟದ ಕೆಲಸವಾಗಿಲ್ಲ. ದಯಮಾಡಿ, ಅದನ್ನೇನಾದರೂ ಸಚಿವರು ಮನಸ್ಸು ಮಾಡಿ, ಅದಕ್ಕೆ ಬೇರೆ Agency ಯನ್ನು ಫಿಕ್ಸ್ ಮಾಡಿ PWD ಅಥವಾ ಬೇರೆಯವರಿಗೆ ಕೊಟ್ಟು ಆದಷ್ಟು ಬೇಗ ಕೆಲಸ ಮಾಡಿಸಬೇಕು. ಏಕೆಂದರೆ, ಅಲ್ಲಿರುವ ಎಲ್ಲಾ ಹಾಸ್ಟೆಲ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದರಿಂದ, ಸರ್ಕಾರದಿಂದ ಹಣ ಹೋಗುತ್ತಿದೆ. ಅದನ್ನು ತಪ್ಪಿಸಲಿಕ್ಕೆ ಹಣ ಸೋರಿಕೆ ತಡೆಗಟ್ಟುವುದಕ್ಕೋಸ್ಕರ ತಕ್ಷಣ ಕಾಮಗಾರಿಗಳನ್ನು ಕೈಗೊಳ್ಳುತ್ತಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ. ಸುಧಾಕರ: ಹಾಲಿ ಇರುವ ನಿವೇಶನದ ಪಕ್ಕದಲ್ಲಿ ಕಾಲುವೆ ಇದ್ದು, ಅದಕ್ಕೆ ಕಾಲಂ ಹಾಕಿ ಕಟ್ಟಬೇಕೆಂದು ಅವರು ಹೊಸದಾಗಿ ಮಂಜೂರಾತಿಯನ್ನು ಕೇಳಿದ್ದಾರೆ. ಈಗಾಗಲೇ ನಾವು ಆ ಮಂಜೂರಾತಿಯನ್ನು ಪರಿಶೀಲನೆ ಮಾಡಿ ತಕ್ಷಣ ಆ ಕಾಮಗಾರಿಯನ್ನು ಮಾಡಲಿಕ್ಕೆ ನಾನು ಇವತ್ತು ಸೂಚನೆ ಕೊಡುತ್ತೇನೆ. ಜೊತೆಗೆ, Land Army ಗೆ ಏನು ಕೊಟ್ಟಿದ್ದೇವೆ, ಅವರು ಶೀಘ್ರವಾಗಿ ಕೆಲಸ ಮಾಡಲಿಕ್ಕೆ ಸಹ directionಅನ್ನು ಕೊಡುತ್ತೇನೆ ಮತ್ತು ಕಾಮಗಾರಿಯನ್ನು 8–10 ತಿಂಗಳಲ್ಲಿ ಮುಗಿಸಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಸುರೇಶ್‌ಗೌಡ: ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಯಾವಾಗ ಮುಗಿಸಿಕೊಡುತ್ತೀರಿ ಎಂಬುದನ್ನು ತಾವು ಹೇಳಬೇಕು.

ಶ್ರೀ ಡಿ ಸುಧಾಕರ: ಆ ಕಾಮಗಾರಿಯನ್ನು ಪೂರ್ಣ ಮಾಡಿಸಿಕೊಡುತ್ತೇನೆ.

ಖಾಲಿ ಹುದ್ದೆಗಳ ಭರ್ತಿ ಮಾಡುವುದರ ಬಗ್ಗೆ.

50 (276)

ಶ್ರೀ. ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ)

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ 2000 ಕ್ಕೂ ಹೆಚ್ಚು 3 ಮತ್ತು 4ನೇ ದರ್ಜೆ ನೌಕರರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ ಇಲಾಖೆಯ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಇ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ (ಮಾಹಿತಿ ನೀಡುವುದು)

ಈ ಕೆಳಕಂಡ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ತುಂಬಲು ಉದ್ದೇಶಿಸಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಪ್ರಥಮ ದರ್ಜೆ ಸಹಾಯಕರು	50
2	ಸೀನಿಯರ್ ವಾರ್ಡನ್	27
3	ವಾರ್ಡನ್	450
	ಒಟ್ಟು	527

ಅದೆ ರೀತಿ ಈ ಕೆಳಕಂಡ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ತುಂಬಲು ಉದ್ದೇಶಿಸಿದೆ.

ಕ್ರ.ಸಂ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಬೆರಳಚ್ಚುಗಾರರು	50
2	ವಾಹನ ಚಾಲಕರು	12
3	ಅಡುಗೆಯವರು	1311
4	ಅಡುಗೆ ಸಹಾಯಕರು	944
5	ರಾತ್ರಿ ಕಾವಲುಗಾರರು	303
6	ಜವಾನರು	30
	ಒಟ್ಟು	2650

ಶ್ರೀ ಹೆಚ್. ಕೆ. ಕುಮಾರಸ್ವಾಮಿ: ಕಳೆದ ವರ್ಷ ನಾನು ಪ್ರಶ್ನೆ ಕೇಳಿದಾಗ ಇಲಾಖೆಯಲ್ಲಿ 1358 ಸಿ ಮತ್ತು ಡಿ ದರ್ಜೆಯ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದರು. ಈ ವರ್ಷ ಸ್ವಲ್ಪ ಹೆಚ್ಚು ಇರಬಹುದು ಎಂದು ನಾನು 2000 ಕ್ಕೂ ಹೆಚ್ಚು ಸಿ ಮತ್ತು ಡಿ ನೇ ದರ್ಜೆಯ ಹುದ್ದೆಗಳು ಖಾಲಿ ಇರುವುದು ನಿಜವೇ ಎಂದು ಕೇಳಿದ್ದೆ. ಅದಕ್ಕೆ ಅವರು 'ಹೌದು' ಎಂದು ಹೇಳಿದ್ದಾರೆ. ಕೆಲಸಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ನಿಜವೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಒಪ್ಪಿಕೊಂಡಿದ್ದಾರೆ. ಮಾನ್ಯ ಸಚಿವರೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಇಲಾಖೆಯಲ್ಲಿ ಖಾಲಿ ಇರುವ ಸಿ ಮತ್ತು ಡಿ ದರ್ಜೆ ನೌಕರರ ಒಟ್ಟು ಸಂಖ್ಯೆ 3177.

ಇದನ್ನು ಅವರೇ ಒಪ್ಪಿಕೊಂಡಿದ್ದಾರೆ. ಅದರಲ್ಲಿ head cook, ಹುದ್ದೆ 2255 ಇವೆ. ಇಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಇಲಾಖೆಯಿಂದ ಹೇಗೆ ಮಾಡಲಿಕ್ಕೆ ಸಾಧ್ಯವಾಗುತ್ತದೆ? ಇಲ್ಲಿ 527 ಹುದ್ದೆಗಳನ್ನು ಲೋಕಸೇವಾ ಆಯೋಗದ ಮೂಲಕ ತುಂಬುವುದಕ್ಕೆ ಉದ್ದೇಶ ಹೊಂದಿದ್ದೇವೆಂದು ಹೇಳೀದ್ದೀರಿ. ತಾವಿನ್ನೂ ಉದ್ದೇಶದಲ್ಲಿಯೇ ಇದ್ದೀರಿ. ಉಳಿದಂಥ 2650 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಾವು ತುಂಬುತ್ತೇವೆಂದು ಹೇಳುತ್ತೀರಿ. ಯಾವ ಕಾರಣಕ್ಕಾಗಿ ಈ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೀವು ತೆಗೆದುಕೋಳ್ಳುತ್ತಿದ್ದಿರಿ? ನೇರ ನೇಮಕಾತಿ ಏಕೆ ಮಾಡುತ್ತಿಲ್ಲ, ನಿಮಗೆ ಆರ್ಥಿಕ ಇಲಾಖೆಯವರು ಒಪ್ಪಿಗೆ ಕೊಡುತ್ತಿಲ್ಲವೋ ಅಥವಾ ಆರ್ಥಿಕ ಇಲಾಖೆಯವರಿಗೆ ನಮ್ಮ ಇಲಾಖೆ ಕಂಡರೆ ಉದಾಸೀನವೋ ಅಥವಾ ನೀವು ಮೇಲ್ಮಟ್ಟದಲ್ಲಿ ಪ್ರಯತ್ನ ಮಾಡುತ್ತಿಲ್ಲವೋ? ಏನು ಕಾರಣ?

ಶ್ರೀ ಡಿ. ಸುಧಾಕರ: ಈಗಾಗಲೇ 527 ಹುದ್ದೆಗಳನ್ನು ತುಂಬಲು KPSC ಗೆ ಪತ್ರ ಬರೆದು ನೇರ ನೇಮಕಾತಿ ಮಾಡಿಕೊಳ್ಳುವುದಕ್ಕೆ ಸೂಚನೆ ಕೊಟ್ಟಿದ್ದೇವೆ, ಜೊತೆಗೆ ಖಾಲಿ ಇರುವ 3000 ಕ್ಕೂ ಹೆಚ್ಚು ಹುದ್ದೆಗಳಲ್ಲಿ 2650 ಹುದ್ದೆಗಳನ್ನು ಹೊರ ಸಂಪನ್ಮೂಲದಿಂದ ತುಂಬಿದ್ದೇವೆ. ಆದರೆ ಇದನ್ನು ಖಾಯಂ ಮಾಡುವುದಕ್ಕೆ ಮತ್ತು ಖಾಯಂ ಆಗಿ ತೆಗೆದುಕೊಳ್ಳುವುದಕ್ಕೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಈ ಆರ್ಥಿಕ ವರ್ಷದಲ್ಲಿ ಆರ್ಥಿಕ ಸಂಪನ್ಮೂಲ ನೋಡಿಕೊಂಡು ಪೂರ್ಣ ಪ್ರಮಾಣದಲ್ಲಿ ಈ ಹುದ್ದೆಗಳನ್ನು ತುಂಬಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಕೆ ಕುಮಾರಸ್ವಾಮಿ: ಕರ್ನಾಟಕ ಲೋಕಸೇವಾ ಆಯೋಗದವರು ಮೊದಲನೇ ದರ್ಜೆ, ಎರಡನೇ ಹುದ್ದೆಗಳನ್ನು ನೇಮಕಾತಿ ಮಾಡುವುದರಲ್ಲಿಯೇ ತುಂಬಾ busy ಆಗಿದ್ದಾರೆ. ಪ್ರಕಟಣೆಗಳು ಬರುತ್ತಿರುವುದನ್ನು ತಾವು ನೋಡುತ್ತಿದ್ದೀರಿ, ಯಾವುದಕ್ಕೆ importance ಕೊಡಬೇಕು. ಕೊಡಬಾರದೆನ್ನುವುದು ಅವರಿಗೆ ಗೊತ್ತಿದೆ. ಅವರು ಸಮಾಜ ಕಲ್ಯಾಣ ಇಲಾಖೆಗೆ importance ಕೊಡುವುದಿಲ್ಲ. ಅವರು Importance ಕೊಡುತ್ತಾರೆಂದು ನಾನಂತೂ ನಿರೀಕ್ಷೆ ಮಾಡುವುದಿಲ್ಲ. ಅದಕ್ಕಾಗಿ, ಇಲಾಖಾ ಮಟ್ಟದಲ್ಲಿಯೇ ಒಂದು ಸಮಿತಿ ರಚಿಸಿ. ತಾವು ಜೇಷ್ಠತೆ ಆಧಾರದ ಮೇಲೆ, ಅಂಕಗಳ ಆಧಾರದ ಮೇಲೆ ನೇಮಕ ಮಾಡಿ. Interview ಮಾಡಿ ಎಂದು ನಾನು ಹೇಳುತ್ತಿಲ್ಲ. ಆದಷ್ಟು ಬೇಗ ಈ ಎಲ್ಲಾ ಹುದ್ದೆಗಳನ್ನು ತುಂಬಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ. ಡಿ. ಸುಧಾಕರ: ಹಿರಿಯ ಸದಸ್ಯರು ಹೇಳಿದಂಥ ಸಲಹೆ ಪ್ರಕಾರ 527 ಹುದ್ದೆಗಳನ್ನು ಬಿಟ್ಟು ಮುಂದೆ ಬರುವ ಹುದ್ದೆಗಳಿಗೆ ನಮ್ಮ ಇಲಾಖಾ ಅಡಿಯಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ರಾಜ್ಯದಲ್ಲಿ ಎಲ್ಲೆಲ್ಲಿ ಪಿ.ಟಿ.ಪಿ. ತರಬೇತಿ ಕೇಂದ್ರಗಳ ಸ್ಥಾಪನೆ ಬಗ್ಗೆ.

51 (55) ಶ್ರೀ ಪಾಟೀಲ್ ಎ.ಎಸ್. ನಡಹಳ್ಳಿ (ದೇವರ ಹಿಪ್ಪರಗಿ)

ಶ್ರೀ ಬಿ.ಎನ್.ಬಚ್ಚೇಗೌಡ (ಮಾನ್ಯ ಕಾರ್ಮಿಕ ಸಚಿವರು.)

ಅ) 2009–10ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಐ.ಟಿ.ಐ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ?

2009–10ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವ ಬಗ್ಗೆ ಅನುದಾನದ ಲಭ್ಯತೆಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು

ಆ) ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಐ.ಟಿ.ಐ. ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು?

ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿರುವುದಿಲ್ಲ.

ಇ) ಹಾಗಿಲ್ಲದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಅತ್ಯಂತ ಹಿಂದುಳಿದ ಕೇಂದ್ರವಾದ ದೇವರಹಿಪ್ಪರಗಿ ಕ್ಷೇತ್ರದಲ್ಲಿ ಐ.ಟಿ.ಐ. ತರಬೇತಿ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ?

ಪ್ರಸಕ್ತ ಸಾಲಿನಲ್ಲಿ ಅತಿ ಹಿಂದುಳಿದ ಕೇಂದ್ರವಾದ ದೇವರಹಿಪ್ಪರಗಿ ಕ್ಷೇತ್ರದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಅನುದಾನದ ಲಭ್ಯತೆಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಅನ್ವಯಿಸುವುದಿಲ್ಲ.

ಶ್ರೀ ಎ.ಎಸ್. ಪಾಟೀಲ(ನಡಹಳ್ಳಿ): ಮಾನ್ಯ ಸಚಿವರು ಉತ್ತರಿಸಿದ್ದಾರೆ. ಆದರೆ, ಅವರ ಉತ್ತರ ನಮಗೆ ಸಮಾಧಾನ ತಂದಿಲ್ಲ. ಎರಡನೆಯದಾಗಿ, ಅವರು ತಮ್ಮ ಉತ್ತರದಲ್ಲಿ ಅತ್ಯಂತ ಹಿಂದುಳಿದಿರುವ ದೇವರಹಿಪ್ಪರಗಿ ಮತಕ್ಷೇತ್ರದಲ್ಲಿ ITI college ಅನ್ನು ಪ್ರಾರಂಭ ಮಾಡುವುದಕ್ಕೆ ಅನುದಾನದ ಲಭ್ಯತೆ ಆಧರಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಸನ್ಮಾನ್ಯ ಸಚಿವರೆ, ತಾವು ನಂಜುಂಡಪ್ಪ ವರದಿಯನ್ನು ಓದಿದ್ದೀರಿ ಎಂದು ಭಾವಿಸಿದ್ದೇನೆ. ಬಜೆಟ್‌ನಲ್ಲೂ ಕಳೆದ ಮೂರು ವರ್ಷಗಳಿಂದ ಬಹಳಷ್ಟು ನೋಡಿದ್ದೇವೆ, ನೋಡುತ್ತಿದ್ದೇವೆ. 2300,2500,3000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಉತ್ತರ ಕರ್ನಾಟಕ ಅದರಲ್ಲೂ ವಿಶೇಷವಾಗಿ ಮುಂಬೈ ಕರ್ನಾಟಕದ ಹಿಂದುಳಿದ ಪ್ರದೇಶವಾದ ದೇವರ ಹಿಪ್ಪರಗಿ ಮತ ಕ್ಷೇತ್ರ 159ನೇ ಸ್ಥಾನದಲ್ಲಿದೆ. ತಾವು ನಂಜುಂಡಪ್ಪ ವರದಿ ನೋಡಬೇಕು. 159ನೇ ಸ್ಥಾನದಲ್ಲಿರುವ ತಾಲ್ಲೂಕು ಕೇಂದ್ರಕ್ಕೆ, ಕ್ಷೇತ್ರ ಪುನರ್‌ವಿಂಗಡಣೆ ಆದಮೇಲೆ ದೇವರ ಹಿಪ್ಪರಗಿ ಮತಕ್ಷೇತ್ರ ಹೊಸ ಮತಕ್ಷೇತ್ರವಾಗಿದೆ. ಅಲ್ಲಿ ITI

college ಇಲ್ಲ. ಅದನ್ನು ಕೊಡಲು ತಮ್ಮಲ್ಲಿ ಮನವಿ ಮಾಡಿಕೊಂಡಾಗ. ತಾವು ಅನುದಾನ ಲಭ್ಯತೆ ಆಧರಿಸಿ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ಹಾಗಾದರೆ, ಅನುದಾನ ಇಲ್ಲವೇ? ಹಾಗಾದರೆ, ನಂಜುಂಡಪ್ಪ ವರದಿಯನ್ನು implement ಮಾಡುತ್ತೇವೆಂದು ಏಕೆ ಹೇಳುತ್ತೀರಿ? ಸರ್ಕಾರದಲ್ಲಿ ಹಣವಿಲ್ಲ ಕಾಲೇಜು ಮಂಜೂರು ಮಾಡುವುದಕ್ಕೆ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರೆ ಒಳ್ಳೆಯದು. ಅಥವಾ ಇದರಲ್ಲೂ ಏನಾದರೂ ತಾರತಮ್ಯವಿದೆಯೇ? ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ನಾವಿದ್ದೇವೆ ಎಂದು ಈ ರೀತಿ ಉತ್ತರ ಕೊಡುತ್ತೀರಾ? ಯಾವುದು ಎನ್ನುವುದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು. ತಾವು ಇಲ್ಲಿಗೆ ITI college ಮಂಜೂರು ಮಾಡಲೇಬೇಕೆಂಬ ಒತ್ತಾಯ ಮಾಡುತ್ತೇನೆ. ಏಕೆಂದರೆ, ಅತ್ಯಂತ ಹಿಂದುಳಿದ ಮತಕ್ಷೇತ್ರದಿಂದ ನಾವು ಬಂದಿದ್ದೇವೆ. ಈ ರೀತಿಯಾಗಿ ಸರ್ಕಾರ ಉತ್ತರ ಕೊಟ್ಟು ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದೇವರ ಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ITI college ಅನ್ನು 2009–10 ರ ಸಾಲಿನಲ್ಲಿ ಮಂಜೂರು ಮಾಡಲೇಬೇಕೆಂದು ಒತ್ತಾಯಿಸುತ್ತೇನೆ, ಆ ಬಗ್ಗೆ ತಾವು ಸ್ಪಷ್ಟ ಉತ್ತರವನ್ನು ಈ ಸದನದಲ್ಲಿ ನೀಡಬೇಕೆಂದು ತಮ್ಮನ್ನು ನಾನು ಆಗ್ರಹಿಸುತ್ತೇನೆ.

ಶ್ರೀ. ಬಿ.ಎನ್. ಬಚ್ಚೇಗೌಡ: ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಈಗಾಗಲೇ ಎರಡು ಅನುದಾನಿತ ಮತ್ತು 6 ಖಾಸಗಿ ITI college ಗಳು ಕೆಲಸ ಮಾಡುತ್ತಿವೆ. ತಮ್ಮ ಮತ ಕ್ಷೇತ್ರದಲ್ಲಿ ಒಟ್ಟು 8 ITI college ಗಳು ಕೆಲಸ ಮಾಡುತ್ತಿವೆ ಅಲ್ಲಿ ಸರ್ಕಾರಿ ITI college ಇಲ್ಲ. ಈ ರಾಜ್ಯದಲ್ಲಿ ಒಟ್ಟು 1085 ITI college ಗಳಿದ್ದು ಸುಮಾರು 1 ಲಕ್ಷ ವಿದ್ಯಾರ್ಥಿಗಳು ಒಂದು ವರ್ಷಕ್ಕೆ ವಿದ್ಯಾಭ್ಯಾಸ ಮುಗಿಸಿ ಹೊರಗೆ ಬರುತ್ತಾರೆ. 2007–08ರಲ್ಲಿ ರಾಜ್ಯದಲ್ಲಿ ಒಟ್ಟು 37 ಸರ್ಕಾರಿ ITI college ಗಳಿಗೆ ಮಂಜೂರಾತಿ ಕೊಡಲಾಗಿದೆ. 2008–09ರಲ್ಲಿ 175 ತಾಲ್ಲೂಕುಗಳಲ್ಲಿ ಯಾವ ತಾಲ್ಲೂಕುಗಳಲ್ಲಿ ಇಲ್ಲ ಅಲ್ಲಿಗೆ 10 ಸರ್ಕಾರಿ ITI college ಗಳನ್ನು ಕೊಟ್ಟು, 175 ತಾಲ್ಲೂಕುಗಳಲ್ಲಿಯೂ ಒಂದೊಂದು ಸರ್ಕಾರಿ ITI college ಇರಬೇಕೆಂದು ಈ ರೀತಿ ಕೊಡುತ್ತಾ ಬರಲಾಗಿದೆ. ಆ ರೀತಿ ಎಲ್ಲಾ ಕಡೆ coverage ಮಾಡಬೇಕೆಂದಿದೆ. ತಾವು ಹೇಳಿದ ಹಾಗೆ, ಹಿಂದುಳಿದ ಪ್ರದೇಶಗಳಿಗೂ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಅದನ್ನು ಮುಂದಿನ ದಿನಗಳಲ್ಲಿ ನಮ್ಮ ಅನುದಾನ ಏನಿದೆ ಅದರ ಪ್ರಕಾರ, ಬಜೆಟ್‌ನಲ್ಲಿ ಕೊಡುವುದನ್ನು ನೋಡಿ ಹಿಂದುಳಿದ ಪ್ರದೇಶಗಳಿಗೆ ಕೊಡುವ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಆರ್ಥಿಕ ವ್ಯವಸ್ಥೆ ನೋಡಿ ಲಭ್ಯವಿರುವ ಹಣದಲ್ಲಿ ಕೊಡುತ್ತೇವೆಂದು ಹೇಳಿದ್ದೇನೆ. ನೀವು ಕೇಳಿರುವುದನ್ನು ನಿರಾಕರಿಸಿಲ್ಲ, ತಾವು ಆ ಬಗ್ಗೆ ನಿರಾಶರಾಗಬೇಕಾಗಿಲ್ಲ. ಮುಂದಿನ ದಿನಗಳಲ್ಲಿ ಆ ಪ್ರಯತ್ನ ಮಾಡಿ ನಮ್ಮ ಅನುದಾನ ಆಧರಿಸಿ ಲಭ್ಯ ಹಣಕಾಸಿನ ವ್ಯವಸ್ಥೆಯಲ್ಲಿ ಕೊಡುವ ಕಾರ್ಯ ಮಾಡುತ್ತೇವೆ.

ಶ್ರೀ ಎ.ಎಸ್. ಪಾಟೀಲ(ನಡಹಳ್ಳಿ): ನಮ್ಮ ಜಿಲ್ಲೆಯನ್ನು ತೆಗೆದುಕೊಂಡರೆ ಮೂರು ITI college ಗಳನ್ನು ಮಂಜೂರು ಮಾಡಿದ್ದೀರಿ. ಬಿಜಾಪುರದಲ್ಲಿ, ಬಬಲೇಶ್ವರದಲ್ಲಿ, ನಾಲತ್ವಾಡದಲ್ಲಿ ಒಂದೊಂದು ಸರ್ಕಾರಿ ITI college ಗಳಿವೆ. ನಮ್ಮ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿವೆ. ನನ್ನ ಮತಕ್ಷೇತ್ರ ಸಿಂಧಗಿ ತಾಲ್ಲೂಕಿಗೆ ಬರುತ್ತದೆ. ಅದಕ್ಕೆ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ತಾವು ಖಾಸಗಿ ITI ಗಳಿವೆ Permission ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇವತ್ತು ITI college ಗಳಲ್ಲಿ ಅತ್ಯಂತ ಬಡವರ ಮಕ್ಕಳು ಅತೀ ಹೆಚ್ಚು percentage ತೆಗೆದುಕೊಂಡಿರುವವರು ಓದುತ್ತಾರೆ. ಅವರು immediate ಆಗಿ ಕೆಲಸಕ್ಕೆ ಸೇರಬೇಕಾಗಿದೆ, ಅವರು ಅವರ ಕುಟುಂಬದ ಆಧಾರವಾಗಿ ನಿಲ್ಲಬೇಕಾಗಿರುವುದರಿಂದ ಅವರು ITI ಗೆ ಸೇರುತ್ತಾರೆ. ಆ ಬಡ ಮಕ್ಕಳು ಖಾಸಗಿ ITI college ಗೆ ಸೇರಲಿಕ್ಕೆ ಹೋದರೆ 20 ಸಾವಿರ ರೂಪಾಯಿಗಳನ್ನು donation ರೂಪದಲ್ಲಿ ಕೊಡಬೇಕಾಗುತ್ತದೆ. ಸನ್ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಏನಾದರೊಂದು ಸ್ಪಷ್ಟನೆ ಕೊಡಿ. 2009–10ರಲ್ಲಿನ ಮತಕ್ಷೇತ್ರವಾಗಲಿ, ಇನ್ನೊಂದು ಮತಕ್ಷೇತ್ರವಾಗಲಿ, ಒಟ್ಟಿನಲ್ಲಿ ಸಿಂಧಗಿ ತಾಲ್ಲೂಕಿಗೆ ಒಂದು ಸರ್ಕಾರಿ ITI college ಕೊಡುತ್ತೇವೆಂದು ಆಶ್ವಾಸನೆ ಕೊಡಿ. ಸಿಂಧಗಿ ಕ್ಷೇತ್ರದ ಶಾಸಕರು ಇಲ್ಲಿಯೇ ಇದ್ದಾರೆ. ಶಾಸಕರೇ, ತಾವೂ ಹೇಳಿ. ಅವರೂ ಕೂಡ ನಿಮ್ಮ ಪಕ್ಷದ ಶಾಸಕರೇ, ಸಿಂಧಗಿ ತಾಲ್ಲೂಕು ಬಹಳ ಹಿಂದುಳಿದಿದೆ. ಅವರಲ್ಲಿಯೂ ಕೂಡ ನಾನು ಮನವಿ ಮಾಡುತ್ತೇನೆ. ತಾವು ಸಿಂಧಗಿ ತಾಲ್ಲೂಕಿನ ಬಡ ಮಕ್ಕಳಿಗೆ ಅನುಕೂಲವಾಗುವ ಹಾಗೆ ಕನಿಷ್ಠ ಒಂದು ಸರ್ಕಾರಿ ITI college ಅನ್ನು ಮಂಜೂರು ಮಾಡಲೇಬೇಕೆಂದು ಆಗ್ರಹಿಸುತ್ತೇನೆ. ನೀವು ಮಂಜೂರು ಮಾಡುತ್ತೇವೆಂದು ಹೇಳಿದರೆ ಸಾಕು.

ಶ್ರೀ ಬಿ.ಎನ್. ಬಚ್ಚೇಗೌಡ: 2009–10ರಲ್ಲಿ ಶಾಸಕರು ಅವರವರ ಕ್ಷೇತ್ರಗಳಿಗೆ ಈ ರೀತಿ ITI college ಗಳು ಬೇಕೆಂದು ಬೇಡಿಕೆ ಸಲ್ಲಿಸಿದ್ದು, ಸುಮಾರು 85 ಅರ್ಜಿಗಳು ಬಂದಿದ್ದು ಅದೇ ರೀತಿ ಖಾಸಗಿಯವರೂ ಕೇಳಿದ್ದಾರೆ. ಇದರಲ್ಲಿ ಆದ್ಯತೆಯನ್ನು ಕೊಟ್ಟು ಎಲ್ಲೆಲ್ಲಿ ITI college ಇಲ್ಲ ಅಥವಾ ಎಲ್ಲಿ ಬೇಕು ಎಂಬುದನ್ನು ನೋಡಿ ನಾವು ಮತ್ತು ಇಲಾಖೆಯವರು ಆದ್ಯತೆ ಮೇಲೆ ಹಣಕಾಸಿನ ಚೌಕಟ್ಟಿನಲ್ಲಿ ಕೊಡುವುದಕ್ಕೆ ಮುಖ್ಯಮಂತ್ರಿಗಳು ಮತ್ತು ನಾವು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ವಿತರಿಸುವ ಬಗ್ಗೆ.

52 (274) ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಜಿಲ್ಲಾ ಪಂಚಾಯಿತಿ ಮುಖಾಂತರ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿಗಳನ್ನು ವಿತರಿಸುವುದರಿಂದ ಸಕಾಲದಲ್ಲಿ ಔಷಧಿಗಳು ತಲುಪದೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು, ಜಿಲ್ಲ ಪಂಚಾಯಿತಿಯ ಅನುದಾನದಲ್ಲಿ ಔಷಧಿಗಳನ್ನು ಪಡೆದು ವಿತರಿಸಲು ಸಕಾಲದಲ್ಲಿ ಜಿಲ್ಲಾ ಪಂಚಾಯತ್‌ಗಳಿಂದ ಆಡಳಿತಾತ್ಮಕ ಮಂಜೂರಾತಿ ದೊರಕದೆ ಇರುವುದರಿಂದ ಜಿಲ್ಲಾ ಪಂಚಾಯತ್ ಅಧೀನ ಆರೋಗ್ಯ ಸಂಸ್ಥೆಗಳಿಗೆ ಔಷಧಿಗಳನ್ನು ವಿತರಿಸಲು ವಿಳಂಬವಾಗಿರುತ್ತದೆ.

ಆ) ಹಾಗಿದ್ದಲ್ಲಿ ಈ ವಿಳಂಬವನ್ನು ತಡೆಗಟ್ಟಲು ಜಿಲ್ಲಾಧಿಕಾರಿಗಳ ಮುಖಾಂತರ ಔಷಧಿಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ?

ಆಧುನಿಕ ವೈಜ್ಞಾನಿಕ ಪದ್ಧತಿಯಂತೆ ಔಷಧಿ ಸಂಗ್ರಹಣೆ, ವಿಶ್ಲೇಷಣೆ ಹಾಗೂ ವಿತರಣೆಯ ನಿರ್ದಿಷ್ಟ ಕಾರ್ಯಕ್ರಮಕ್ಕಾಗಿ ಯೂರೋಪಿಯನ್ ಆಯೋಗದ ಧನ ಸಹಾಯದಿಂದ ಕರ್ನಾಟಕ ಡ್ರಗ್ ಲಾಜಿಸ್ಟಿಕ್ ಅಂಡ್ ಉಗ್ರಾಣ ಸಂಸ್ಥೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಸ್ಥಾಪಿಸಿತವಾಗಿದ್ದು ಸದರಿ ಸಂಸ್ಥೆಯ ಮೂಲಕವೇ ಔಷಧಿಗಳನ್ನು ವಿತರಣೆ ಮಾಡಬೇಕಾಗಿರುತ್ತದೆ. ಜಿಲ್ಲಾ ಪಂಚಾಯತ್‌ಗಳಿಂದ ಆಡಳಿತಾತ್ಮಕ ಮಂಜೂರಾತಿ ಪಡೆಯುವಲ್ಲಿ ಉಂಟಾಗುತ್ತಿರವು ವಿಳಂಬವನ್ನು ತಪ್ಪಿಸಲು ಸಂಬಂಧಪಟ್ಟ ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರವರಿಗೆ ಔಷಧಿಗಳ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ನೀಡುವ ಕುರಿತು ಆದೇಶ ಹೊರಡಿಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಕೋರಲಾಗಿದ್ದು, ಸದರಿ ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳು ಸರಬರಾಜುವಾಗುವುದು ವಿಳಂಭವಾಗುವುದರ ಬಗ್ಗೆ ನಾನು ಕೇಳಿದ್ದಕ್ಕೆ ಇದು ಸತ್ಯವೆಂದು ಹೇಳಿದ್ದಾರೆ. ಏಕೆಂದರೆ, ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಬಡವರು ಮಾತ್ರ ಬರುತ್ತಾರೆ ಶ್ರೀಮಂತರು ಯಾರು ಬರುವುದಿಲ್ಲ. ಹೀಗಾಗಿ ವಿಳಂಭ ಏಕೆ ಆಗುತ್ತದೆ ಎಂದರೆ, ಬಹುಶಃ ಗುತ್ತಿಗೆದಾರರದು ಯಾವುದು ಅಪ್ರೂವಲ್ ಆಗುತ್ತಿಲ್ಲವೆಂದು ಕಾಣುತ್ತದೆ. ಅವರಿಂದ ಈ ಸಮಸ್ಯೆಯಾಗಿರಬಹುದೆಂದು ಕಾಣುತ್ತದೆ. ದಯವಿಟ್ಟು ನೀವು ಜಿಲ್ಲಾ ಪಂಚಾಯಿತಿಗೆ ಕೊಡುವುದನ್ನು ತಪ್ಪಿಸಿ ಡಿ.ಸಿ.ಅಥವಾ CEO ರವರಿಗೆ ನೇರವಗಿ ಕೊಡುವಂಥಾದ್ದು ಆಗಬೇಕು. ನಮ್ಮ ತಾಲ್ಲೂಕಿಗೆ ಸುಮಾರು ಐವತ್ತು ಲಕ್ಷ ರೂಪಾಯಿ ಬರುವಂಥದ್ದರಲ್ಲಿ ಹತ್ತು ಲಕ್ಷ ರೂಪಾಯಿ ಮಾತ್ರ ಬಿಡುಗಡೆಯಾಗಿದೆ. ಹೀಗಾಗಿ ತಾವು ಔಷಧಿಗಳನ್ನು ಸರಬರಾಜು ಮಾಡುವುದರಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿ ವಿಳಂಭವಾಗಬಾರದು. ಏಕೆಂದರೆ ಅಲ್ಲಿ ಬಡರೋಗಿಗಳು ಬಹಳಷ್ಟು ಜನ ಬರುವುದರಿಂದ ಅವರಿಗೆ ಕಷ್ಟವಾಗುತ್ತದೆ. ಹೀಗಾಗಿ ನೀವು ಔಷಧಿಗಳನ್ನು ನೇರವಾಗಿ ಡಿ.ಸಿ. ಅಥವಾ C.E.O ರವರಿಗೆ ಕೊಟ್ಟು ಅಪ್ರೂವಲ್ ಆಗುವ ರೀತಿ ಮಾಡಬಹುದು. ಇದರ ಜೊತೆಗೆ ಈಗಾಗಲೇ ತಾವು

ಬೇರೆ ಬೇರೆ ಕಂಪನಿಗಳಿಗೆ ಕೊಡುತ್ತೇವೆಂದು ಹೇಳಿದಿರಿ. ಮತ್ತೊಂದು ವಿಶೇಷ ಏನೆಂದರೆ, SIGMA Marketing Systems ಎನ್ನುವ ಒಂದು ಕಂಪನಿ ಇದೆ. ಈ ಕಂಪನಿಯ ಮೂಲಕ ಈಗಾಗಲೇ ಸುಮಾರು 21 ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ವಿತರಿಸಲಾಗಿದೆ. ವಿಶೇಷವಾಗಿ ಅದೊಂದು ಡಮ್ಮಿ ಕಂಪನಿ. ಡುಪ್ಲಿಕೇಟ್ ಮಾಡುವಂಥ ಕಂಪನಿ. ಇದರಿಂದಾಗಿ ಇವತ್ತು ಎಷ್ಟು ಸಮಸ್ಯೆಯಾಗಿದೆ ಎಂದರೆ, ಎಂದು ನಮ್ಮ ತಾಲ್ಲೂಕುಗಳಲ್ಲಿರುವಂಥ ಎಲ್ಲಾ ಡಾಕ್ಟರ್‌ಗಳು ವರ್ಗಾವಣೆಯಾಗಬೇಕು ಇಲ್ಲದಿದ್ದರೆ ಸಮಸ್ಯೆ ಎಂದು ಹೇಳುತ್ತಾರೆ. ಡಾಕ್ಟರ್‌ಗಳ ಸಮಸ್ಯೆ ಏನು ಇಲ್ಲ. ಮೇಲಾಧಿಕಾರಿಗಳಿಂದ ಆಗಿರುವಂಥ ಸಮಸ್ಯೆ. ಅವರು 21 ಆಸ್ಪತ್ರೆಗಳಿಗೆ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸದೆ ಕೊಟ್ಟಿರುವುದು, ಸ್ಯಾಂಪಲ್‌ಗಳನ್ನು ತಂದು ತೋರಿಸಿರುವುದನ್ನು ಮಾರಿದ್ದಾರೆ. ಈಗ ಡಾಕ್ಟರ್ಸ್ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಅವರ ಮೇಲೆ ಹೆಚ್ಚಿನ ಒತ್ತಡ ಹಾಕಿರುವುದರಿಂದ ಇವತ್ತು ಆ ಎಲ್ಲಾ ಡಾಕ್ಟರ್‌ಗಳು ಸಮಸ್ಯೆಯಲ್ಲಿ ಇದ್ದಾರೆ. ಇದನ್ನು ಏಕೆ ಮಾಡಿದರು? ಆ ಅಧಿಕಾರಿಗಳು ಏನು ಮಾಡುತ್ತಿದ್ದರು? SIGMA Marketing systems ಎಂಬ ಕಂಪನಿ ಎನು ಇದೆ ಇದು ಡಮ್ಮಿ ಕಂಪನಿ ಎಂದು ಗೊತ್ತಿದೆ. ಈ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಶ್ರೀರಾಮುಲು: ಜಿಲ್ಲಾ ಪಂಚಾಯತ್ ಅಧೀನ ಆರೋಗ್ಯ ಸಂಸ್ಥೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ನೂರು ಹಾಸಿಗೆಗಳಿಗಿಂತ ಕಡಿಮೆ ಇರುವ ಸಾರ್ವಜನಿಕ ಆಸ್ಪತ್ರೆಗಳಿಗೆ ಶೇಕಡ 60 ಅನುದಾನದಲ್ಲಿ ಔಷಧಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನೇರವಾಗಿ ಜಿಲ್ಲ ಪಂಚಾಯಿತಿಗೆ ಬಿಡುಗಡೆ ಮಾಡಲಾಗುತ್ತದೆ. ಈಗಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾವತಿಯಿಂದ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಲಾಗಿರುವುದು ಶೇಕಡ 60 ಅನುದಾನವನ್ನು ನೇರವಾಗಿ Karnataka State Durgs and Logistic Warehouse Society ಗೆ ಬಿಡುಗಡೆ ಮಾಡಲಾಗಿದ್ದು, ಕೋರಿರುವ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಇಲಾಖೆಯ ಪ್ರಸ್ತಾವನೆಗೆ ಒಪ್ಪಿಗೆ ನೀಡಲಿಲ್ಲ. ನಾವು ಒಂದು ಕಡೆಗೆ ಅಧಿಕಾರ ವಿಕೇಂದ್ರೀಕರಣ, ಎಲ್ಲರಿಗೂ ಆರೋಗ್ಯ ಇಲ್ಲಾ ಕಡೆಗೂ ಆರೋಗ್ಯ ಎನ್ನುವ ಪರಿಸ್ಥಿಯಲ್ಲಿ ನಾವಿಂದು ನಿಂತಿದ್ದೇವೆ. ಸರ್ಕಾರಿ ಆಸ್ಪತ್ರೆಗಳಿಗೆ ಹೋದಂಥ ಸಂದರ್ಭದಲ್ಲಿ ಬಡವರಿಗೆ ಬಹಳ ಕಷ್ಟವಾಗುತ್ತದೆಂದು ಮಾನ್ಯ ಸದಸ್ಯರು ಹೇಳಿದರು. ನೂರು ಹಾಸಿಗೆಗಿಂತ ಹೆಚ್ಚಿಗೆ ಇರುವಂಥ ಆಸ್ಪತ್ರೆಗಳಿಗೆ ಸರ್ಕಾರದ ವತಿಯಿಂದ ನೇರವಾಗಿ ಔಷಧಿಗಳನ್ನು ವಿತರಿಸಲಾಗುತ್ತದೆ. ನೂರು ಹಾಸಿಗೆಗಳಿಗಿಂತ ಕಡಿಮೆ ಇರುವ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಿಗೆ ಶೇಕಡ 60 ರಷ್ಟು ಜಿಲ್ಲಾ ಪಂಚಾಯಿತಿ ವತಿಯಿಂದ ಅನುದಾನದ ಮೂಲಕ ಔಷಧಿಗಳು ಲಭ್ಯವಾಗುತ್ತದೆ. ಅನೇಕ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರು ಮತ್ತು ಮಾನ್ಯ ಮಂತ್ರಿಗಳು ಸಾರ್ವಜನಿಕ

ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿರುವಚಿಥ ರೋಗಿಗಳನ್ನು ಡಾಕ್ಟರ್‌ಗಳು ಔಷಧಿಗಾಗಿ ಚೀಟಿಗಳನ್ನು ಬರೆದು ಕೊಡುತ್ತಾರೆಯೆ? ಎಂದು ಕೇಳುತ್ತೇವೆ. ಇದಕ್ಕೆ ಉತ್ತರವಾಗಿ ಕೆಲವು ಕಡೆ ಬರೆದು ಕೊಡುತ್ತಾರೆ, ಕೆಲವು ಕಡೆ ಬರೆದುಕೊಟ್ಟಿಲ್ಲ ಎನ್ನುವಂಥ ಮಾತನ್ನು ರೋಗಿಗಳು ಹೇಳುವುದನ್ನು ನಾವು ನೋಡಿದ್ದೇವೆ. ನೂರು ಹಾಸಿಗೆಗಿಂತ ಕಡಿಮೆ ಇರುವ ಆಸ್ಪತ್ರೆಗಳಿಗೆ ಶೇಕಡ 60 ರಷ್ಟು ಜಿಲ್ಲಾ ಪಂಚಾಯಿತಿಯಿಂದ ಒದಗಿಸಬೇಕಾದ ಔಷಧಿಗಳಿಗೆ ಸಂಬಂಧಪಟ್ಟಂತೆ ಆಸ್ಪತ್ರೆಯ ಡಿ.ಹೆಚ್.ಓ. ಗಳು ಒಂದು ಬೇಡಿಕೆಯ ಪಟ್ಟಿಯನ್ನು ಜಿಲ್ಲಾ ಪಂಚಾಯಿತಿಗಳಿಗೆ ಕೊಡಬೇಕಾಗುತ್ತದೆ ಜಿಲ್ಲಾ ಪಂಚಾಯಿತಿಯವರು ಲಭ್ಯತೆಯ ಮೇಲೆ karnataka State Drugs and Logistic Warehouse Society ಗಳು ನಮ್ಮ ರಾಜ್ಯದಲ್ಲಿ, ಗುಲ್ಬರ್ಗಾ, ಬೀದರ್, ಬಿಜಾಪುರ, ಬಾಗಲಕೋಟೆ, ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಮೈಸೂರು, ಚಾಮರಾಜನಗರ, ಬೆಳಗಾವಿ, ಉತ್ತರ ಕನ್ನಡ, ಬಳ್ಳಾರಿ, ಚಿತ್ರದುರ್ಗ, ರಾಯಚೂರ, ಕೊಪ್ಪಳ, ಧಾರವಾಡ, ಗದಗ್, ದಾವಣಗೆರೆ, ಹಾವೇರಿ ಕೋಲಾರ ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ ಹಾಸನ, ಕೊಡುಗು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಇನ್ನು ಹನ್ನೆರಡು ಕಡೆ ಈ ಉಗ್ರಾಣಗಳ ಕೆಲಸ ನಡೆಯುತ್ತಿದೆ. ಶೇಕಡ 60 ಜಿಲ್ಲಾ ಪಂಚಾಯಿತಿಯಿಂದ ಏನು ಕೊಡುತ್ತಿದ್ದಾರೆ ಇದರಿಂದಾಗಿ ಬಹಳಷ್ಟು ಕಡೆ ಔಷಧಿಗಳು ಸರಬರಾಜಾಗುವುದು ವಿಳಂಬವಾಗುತ್ತದೆ. ಈ ಸಂದರ್ಭದಲ್ಲಿ ರೋಗಿಗಳಿಗೆ ಕಷ್ಟವಾಗುತ್ತದೆ. ಅದಕೋಸ್ಕರ ನಾನು ಈ ಹಿಂದೆ ಕೂಡ ಬೇರೆ ಬೇರೆ ಕಾರಣಗಳಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದೆ, ಅದರೆ, ಶೇಕಡ 60 ರಷ್ಟು ಹಣವನ್ನು ನಾವು ಬಿಟ್ಟುಕೊಡುವುದಿಲ್ಲ ಎನ್ನುವ ಮಾತನ್ನು ಅವರು ಹೇಳಿದರು. ತಾವು ಒಂದು ಕಂಪನಿಯ ಬಗ್ಗೆ ಪ್ರಸ್ತಾಪಿಸಿದಿರಿ, ನಾವು ಈಗಾಗಲೇ ಡೂಪ್ಲಿಕೇಟ್ ಔಷಧಿಗಳನ್ನು ಸರಬರಾಜು ಮಾಡಿದಂಥ ಕೆಲವು ಕಂಪನಿಗಳನ್ನು ಕಪ್ಪುಪಟ್ಟಿಗೆ ಸೇರಿಸಿದ್ದೇವೆ. Bright Drugs Industry Indore, Kupur Pharmacists Delhi, Siricon Drugs Pharmacists Private, Limited, Modern Laboratories Indore, ಸರ್ಕಾರ ಈ ಎಲ್ಲಾ ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಿದೆ. ಇವತ್ತು ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳಾಗುತ್ತಿವೆ. ತಾವು ನೋಡಿದ ಹಾಗೆ ನಮ್ಮ ಇಲಾಖೆಗೆ ಸರ್ಕಾರದಿಂದ ಪ್ರಥಮಬಾರಿಗೆ 815 ಡಾಕ್ಟರ್‌ಗಳನ್ನು ಕೊಟ್ಟರು, ಸುಮಾರು 515 ಪ್ಯಾರಾಮೆಡಿಕಲ್ ಸ್ಟ್ಯಾಪ್‌ನ್ನು ಕೊಟ್ಟರು, ಸರ್ಕಾರದಲ್ಲಿ ಬಡತನ ರೇಖೆಗಿಂತ ಕೆಳಗಡೆ ಇರುವಂಥ ಬಡಜನರಿಗೆ ಇನ್ಸೂರೆನ್ಸ್ ಕೊಡಬೇಕೆಂದು ತೀರ್ಮಾನಿಸಿ ನಿನ್ನೆ ಗೆಜೆಟ್ ನೋಟಿಫಿಕೇಷನ್ ಆಯಿತು. ನೀವು ಏನು SIGMA Marketing systems ಕಂಪನಿ ಬಹಳಷ್ಟು ಅವ್ಯವಹಾರ ಮಾಡುತ್ತಿದೆ, ಕರ್ನಾಟಕ ರಾಜ್ಯದಲ್ಲಿ ಆ ಕಂಪನಿಗೆ ಬಹಳ ಕೆಟ್ಟ ಹೆಸರು ಇದೆ ಎಂದು ತಾವೇನು ಹೇಳಿದಿರಿ, ಅದರ ಬಗ್ಗೆ ಆ ಕಂಪನಿಯ ಮೇಲೆ ನಾವು ಯಾವ್ಯಾವ ರೀತಿಯಲ್ಲಿ ಅವ್ಯವಹಾರ

ನಡೆಸಿದ್ದಾರೆಂದು ನೋಡಿ, ಅದನ್ನು ಕಪ್ಪುಪಟ್ಟಿಗೆ ಸೇರಿಸಿ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ತಿಳಿಬಯಸುತ್ತೇನೆ.

ಡಾ: ಬಗಲಿ ಸರ್ವಭೌಮ ಸಾತಗೌಡ: ಈಗಿರುವ ಪದ್ಧತಿ ಒಳ್ಳೆಯದು ಈಗ ಇರುವಂಥ ಔಷಧಿ ವಿತರಣಾ ವ್ಯವಸ್ಥೆ ಬಹಳ ಚೆನ್ನಾಗಿದೆ. ಇದನ್ನು ಪುನ: ಜಿಲ್ಲಾ ಪಂಚಾಯಿತಿಗೆ ಕೊಟ್ಟರೆ ಹಾಳಾಗಿ ಹೋಗುತ್ತದೆ. ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಪಾರದರ್ಶಕವಾಗಿ ಔಷಧಿಗಳ ಖರೀದಿಯಾಗುತ್ತಿದೆ ಮತ್ತು ವೇರ್‌ಹೌಸಿಂಗ್ ಮೂಲಕ ಔಷಧಿಗಳು ಸರಿಯಾಗಿ ಮುಟ್ಟುತ್ತಿವೆ. ಇದನ್ನು ಪುನಃ ಜಿಲ್ಲಾ ಪಂಚಾಯಿತಿಗೆ ಕೊಟ್ಟರೆ ಈ ವ್ಯವಸ್ಥೆ ಹಾಳಾಗಿ ಹೋಗುತ್ತದೆ. ಹೀಗಾಗಿ ಇರುವಂಥ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಟಿ.ಟಿ.ಕೃಷ್ಣಪ್ಪ: SIGMA Company is a fraud company It is known to everybody. ಯಾರೋ ಅಂದಿನ ನಿರ್ದೇಶಕರು ಮಾಡಿದ ತಪ್ಪಿಗೆ ಸುಮಾರು 300 ರಿಂದ 400 ನೌಕರರು ಮತ್ತು ಅಧಿಕಾರಿಗಳು ಇವತ್ತು ಸಫರ್ ಪಡುತ್ತಿದ್ದಾರೆ. ಇಲ್ಲಿ ಏನಾಗಿದೆ ಅವರು ಡ್ರಗ್ಸ್‌ನ್ನು ಖರೀದಿಸಿ ಸರಬರಾಜು ಮಾಡಿದ್ದಾರೆ. ಸರಬರಾಜು ಆಯಿತೋ ಇಲ್ಲವೋ ಆ ವಿಚಾರ ಇನ್ನೂ ತನಿಖೆಯಲ್ಲಿ ಇದೆ. ಆದರೆ, ಅಲ್ಲಿಯ ನೌಕರರಿಗೆ ಬಡ್ತಿಯಾಗಲಿ ಮತ್ತೊಂದಕ್ಕೆ ಎಲ್ಲಾ ತೊಂದರೆಗಳಾಗಿವೆ. ಬಹಳ ಜನ ನೌಕರರು with pension retired ಆಗಿದ್ದಾರೆ. ಅವರ ಬಗ್ಗೆ ತಾವು ಗಮನಹರಿಸಬೇಕು. Top and head of institutions ಯಾವ ಅಧಿಕಾರಿಯೇ ಇರಬಹುದು, ನೀವು ಸಂಬಂಧಪಟ್ಟ ಅಧಿಕಾರಿಗೆ ಪನಿಷ್‌ಮೆಂಟ್ ಮಾಡಿ. ಬಾಟಂ ಲೆವಲ್‌ನಲ್ಲಿ ಇರುವಂಥ ಗ್ರೂಪ್ ಸಿ ಮತ್ತು ಡಿ ನೌಕರುಗಳಿಗೆ even Medical Officers ವರಗೆ ಇಂಥ ಎಲ್ಲಾ ನೌಕರರುಗಳಿಗೆ ಈ ತನಿಖೆಯನ್ನು ಡ್ರಾಪ್ ಮಾಡಿ ಅವರಿಗೆ ಕೊಡುವ ಸವಲತ್ತುನ್ನು ಕೊಡುವುದು ಬಹಳ ಉಚಿತವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಬಿ.ಶ್ರೀರಾಮುಲು: Sigma Marketing Systems company ಮೇಲೆ ಕಳೆದ ಸರ್ಕಾರದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು ಜೊತೆಯಲ್ಲಿ ಆ ಬಗ್ಗೆ ಸಂಪೂರ್ಣವಾಗಿ ಎಲ್ಲಾ ರೀತಿಯ ತನಿಖೆಯಾಗಬೇಕೆಂದು ಆದೇಶವನ್ನು ಹೊರಡಿಸಿದ್ದರು. ಈಗ ಆ ತನಿಖೆ ನಡೆಯುತ್ತಿದೆ. ಆ ತನಿಖೆ ಸಂಪೂರ್ಣವಾಗಿ ಮುಗಿದ ನಂತರ ಅದಷ್ಟು ಬೇಗನೆ ಆ SIGMA Marketing Systems company ಯನ್ನು ಕಪ್ಪುಪಟ್ಟಿಗೆ ಸೇರಿಸುವುದರ ಜೊತೆಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಕೆಲಸ ನಾವು ಮಾಡುತ್ತೇವೆ.

ಶ್ರೀ ಎಂ.ಟಿ.ಕೃಷ್ಣಪ್ಪ: low level ನೌಕರರ ಮೇಲೆ ನೀವು ಕ್ರಮ ಜರುಗಿಸಬೇಡಿ. ಏಕೆಂದರೆ ಯಾರೋHead of the Director ಮಾಡಿರುವ ಕೆಲಸ

Group C & D, low level and peripheral level ನಲ್ಲಿರುವಂಥ ಡಾಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳುವುದು ಅರ್ಥವಿಲ್ಲ. ಅವರು ಸಪ್ಲೈ ಮಾಡಿದ್ದಾರೆ, ಯಾರೋ ಅಮಾಯಕರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. Group C & D, Medical Officers ಮೇಲೆ ಇರುವ Enquiry ಯನ್ನು ಡ್ರಾಪ್ ಮಾಡಿ, Joint Director and above rank ಇರುವವರ ಮೇಲೆ enquiry insist ಮಾಡಿ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ.ಶ್ರೀರಾಮುಲು: ನಾನು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಜಮಖಂಡಿ ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸುವ ಬಗ್ಗೆ.

53 (381) ಶ್ರೀ. ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)

ಶ್ರೀ ಬಿ.ಶ್ರೀ ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ನೂರು ಹಾಸಿಗೆಗಳುಳ್ಳ ಜಮಖಂಡಿಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಇಲ್ಲ

ಆ) ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಲು ಕೈಗೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ

ಇ) ಈ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ?

ಜಮಖಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ 13 ತಜ್ಞ ವೈದ್ಯರ ಹುದ್ದೆ ಮಂಜೂರಾಗಿದ್ದು 8 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, 5 ತಜ್ಞರ ಹುದ್ದೆ ಖಾಲಿ ಇದೆ. (ಜಿ.ಎಸ್/ ಜಿ.ಎಮ್./ ರೋಡಿಯೋಲಜಿಸ್ಟ್/ ಚರ್ಮರೋಗ/ ದಂತ ತಜ್ಞರು)

86 ಅರೆ ವೈದ್ಯಕೀಯ ಸಿಬ್ಬಂದಿ ಹುದ್ದೆ ಮಂಜೂರಾಗಿದ್ದು 68 ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, 18 ಸಿಬ್ಬಂದಿ ಹುದ್ದೆಗಳು ಖಾಲಿ ಇದೆ.

ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ ತಜ್ಞ ವೈದ್ಯೆರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ: 7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ

ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು

ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಇ) ಆಸ್ಪತ್ರೆಯ ಆವರಣದಲ್ಲಿ ಶುಚಿತ್ವ ಇಲ್ಲದೇ ರೋಗಿಗಳು ಪರಿತಪಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ. ಇದರ ನಿವಾರಣೆಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಸಾರ್ವಜನಿಕ ಆಸ್ಪತ್ರೆ ಗೌರಿಬಿದನೂರಿನಲ್ಲಿ ಶುಚಿತ್ವಕ್ಕಾಗಿ ನಾನ್ ಕ್ಲಿನಿಕಲ್ ಸರ್ವಿಸ್‌ನಡಿ ಆಸ್ಪತ್ರೆಯ ಶುಚಿತ್ವವನ್ನು ನಿರ್ವಹಿಸಲಾಗುತ್ತಿದೆ. ಇತರೆ ಆಸ್ಪತ್ರೆಗಳಲ್ಲಿ ಸಹ ಆರೋಗ್ಯ ರಕ್ಷಾ ಸಮಿತಿ ಅನುಮೋದನೆ ಪಡೆದು ಮುಕ್ತನಿಧಿಯಿಂದ ಶುಚಿತ್ವ ಕಾರ್ಯವನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) 2008-09ನೇ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸದಾಗಿ ಆಸ್ಪತ್ರೆಯನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್:- ಮಾನ್ಯ ಅಧ್ಯಕ್ಷರೆ, ಜಮಖಂಡಿ ಆಸ್ಪತ್ರೆಯ ಅವ್ಯವಸ್ಥೆ ಬಗ್ಗೆ 5 ಭಾಗ ಮಾಡಿ ಪ್ರಶ್ನೆಗಳನ್ನು ಕೇಳಿದ್ದೆ. ಸನ್ಮಾನ್ಯ ಮಂತ್ರಿಗಳು ಕೇವಲ 3 ಭಾಗದ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಉಳಿದ ಎರಡು ಭಾಗದ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ. ನ್ನ ಪ್ರಶ್ನೆ ಏನೆಂದರೆ, ಬಾಗಲಕೋಟೆ ಜಿಲ್ಲೆಯಲ್ಲಿ ಬಾಗಲಕೋಟೆ ನಂತರ ಜಮಖಂಡಿ ಉಪ ವಿಭಾಗ ಕೂಡ ಅತ್ಯಂತ ಮಹತ್ವದ ಕೇಂದ್ರವಾಗಿದೆ. ಜಮಖಂಡಿ, ಮುಧೋಳ್, ಬೀಳಗಿ, ಹಾಗೂ ಬೆಳಗಾಂ ಜಿಲ್ಲೆಯ ಕುಡಚಿ ಮತ್ತು ರಾಯಬಾಗ್ ಭಾಗಗಳಿಂದ ರೋಗಿಗಳು ಜಮಖಂಡಿ ಆಸ್ಪತ್ರೆಗೆ ಬರುತ್ತಾರೆ. ಪ್ರತಿ ದಿವಸ ಸುಮಾರು 800 ರಿಂದ 1000 ಜನ ರೋಗಿಗಳು ಚಿಕಿತ್ಸೆಗೋಸ್ಕರ ಜಮಖಂಡಿ ಆಸ್ಪತ್ರೆಗೆ ಭೇಟಿ ಕೊಡುತ್ತಾರೆ. ಇಂಥ ಒಂದು ಮಹತ್ವದ ಕೇಂದ್ರದಲ್ಲಿರುವ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಬಹಳ ಅವಶ್ಯಕವೆಂದು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ಇದನ್ನೂ ಮೇಲ್ದರ್ಜೆಗೇರಿಸುವುದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ಕೇಳುವುದಕ್ಕೆ ಬಯಸುತೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಜಮಖಂಡಿ ಆಸ್ಪತ್ರೆ ನೂರು ಹಾಸಿಗೆಯ ವ್ಯವಸ್ಥೆಯುಳ್ಳ ಆಸ್ಪತ್ರೆಯಾಗಿದೆ. ಜಮಖಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ 13 ವೈದ್ಯರ ಹುದ್ದೆ ಮಂಜೂರಾಗಿದ್ದು 8 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 5 ತಜ್ಞರ ಹುದ್ದೆ ಖಾಲಿ ಇದೆ ಮತ್ತು 86 ಅರೆ ವೈದ್ಯಕೀಯ ಸಿಬ್ಬಂದಿ ಹುದ್ದೆ

ಮಂಜೂರಾಗಿದ್ದು 68 ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, 18 ಸಿಬ್ಬಂದಿ ಹುದ್ದೆಗಳು ಖಾಲಿ ಇದೆ. ಜಮಖಂಡಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಆದಷ್ಟು ಬೇಗ ಮೇಲ್ದರ್ಜೆಗೇರಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:- ಮಾನ್ಯ ಅಧ್ಯಕ್ಷರೆ, ಸಾಕಷ್ಟು ಹುದ್ದೆಗಳು ಈಗ ಖಾಲಿ ಇವೆ. ಉದಾಹರಣೆಗೆ ಅಲ್ಲಿ Surgeon post and Chief Medical Officer Post and 5 Senior Medical Officer Posts ಖಾಲಿ ಇವೆ. ಮತ್ತೆ Medical Surgeon, General Surgeon, Physician and pharmacists ಇಲ್ಲ. ಮತ್ತೆ ಅನೇಕ ಸಣ್ಣ ಸಣ್ಣ ಹುದ್ದೆಗಳು ಸಹ ಖಾಲಿ ಇವೆ. ಈಗಾಗಲೇ ಎಲ್ಲರು ಪ್ರಶ್ನೆಯನ್ನು ಕೇಳೀರುವುದಕ್ಕೆ ಉತ್ತರ ಕೊಟ್ಟಂತೆ ನನಗೂ ಕೂಡ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನನ್ನ ಮುಖ್ಯ ಪ್ರಶ್ನೆ ಏನೆಂದರೆ, ಆ ಆಸ್ಪತ್ರೆ ಸರಿಯಾಗಿ ನಡೆದು ಸಾರ್ವಜನಿಕರ ಉಪಯೋಗಕ್ಕೆ ಬರಬೇಕೆಂದರೆ, ಕೂನೋಪಕ್ಷ ಅಲ್ಲಿಗೆ chief Medical Officer ಹುದ್ದೆಯನ್ನು ಭರ್ತಿ ಮಾಡಿ. ಅಲ್ಲಿಗೆ ಒಳ್ಳೆಯ ಮುಖ್ಯ ವೈದ್ಯಾಧಿಕಾರಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೋಳ್ಳುತ್ತೇನೆ.

ಶ್ರೀ ಬಿ.ಶ್ರೀರಾಮುಲು:- ಮಾನ್ಯ ಅಧ್ಯಕ್ಷರೆ, ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರನ್ನು Visiting Specialists Doctor ಆಗಿ ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಒಟ್ಟಾರೆ 1135 ತಜ್ಞ ವೈದ್ಯರ ಹುದ್ದೆಗಳು ಖಾಲಿ ಇವೆ. ನಮ್ಮ ರಾಜ್ಯದಲ್ಲಿ ಒಂದು ವರ್ಷಕ್ಕೆ ಎಂ.ಡಿ. ಮತ್ತು ಎಂಎಸ್‌ಗೆ 60 ಮಂದಿ..

ಅಧ್ಯಕ್ಷರು: ಮಾನ್ಯ ಶೀರಾಮುಲುರವರೆ, ಜಮಖಂಡಿ ಆಸ್ಪತ್ರೆಗೆ ಒಬ್ಬ Chief Medical Officer ಹುದ್ದೆಯನ್ನು ತಕ್ಷಣ ಭರ್ತಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಬಿ.ಶ್ರೀಮುಲು:- ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗ ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಎಂ.ಡಿ. ಮತ್ತು ಎಂಎಸ್ ಕೋರ್ಸ್ ಮುಗಿಸಿರುವಂಥವರಲ್ಲಿ ಸುಮರು 60 ರಿಂದ 70 ಜನ ತಜ್ಞ ವೈದ್ಯರನ್ನು ನೇಮಕ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ, ಇದನ್ನು ಜಾಸ್ತಿ ಮಾಡಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಎಂಡಿ ಮತ್ತು ಎಂಎಸ್ ಕೋರ್ಸ್‌ಗಳನ್ನು ಮುಗಿಸಿಕೊಂಡು ಬರತಕ್ಕಂಥವರನ್ನು ಯಾವರೀತಿಯಾಗಿ ಭರ್ತಿ

ಮಾಡಬೇಕೆಂಬುದರ ಬಗ್ಗೆ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಅಲ್ಲಿ ಯಾರಿಗೆ incharge ಕೊಡಬೇಕೆಂದು ತಾವು ಕೇಳುತ್ತಿರುವ ವಿಷಯದ ಬಗ್ಗೆ ತಾವು ನನ್ನ ಜೊತೆ ಬಂದು ಚರ್ಚೆ ಮಾಡಿ, ಆದಷ್ಟು ಬೇಗನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:- ಮಾನ್ಯ ಅಧ್ಯಕ್ಷರೆ, ಜಮಖಂಡಿ ಆಸ್ಪತ್ರೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ನಡೆಸಿದ್ದಾರೆ. ಬಹುಶಃ 2001 ರಿಂದ ಇಲ್ಲಿಯವರೆಗೆ...

ಅಧ್ಯಕ್ಷರು:- ಯಾವ ವಿಷಯವನ್ನು ತಾವು ಕೇಳುತ್ತಿದ್ದೀರಿ?

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:- ಜಮಖಂಡಿ ಆಸ್ಪತ್ರೆಯಲ್ಲಿರುವ ಮೇಲ್ವಿಚಾರಕರು user fund ಅನ್ನು ಸರ್ಕಾರಕ್ಕೆ ಜಮಾ ಮಾಡದೆ ಅವ್ಯವಹಾರ ಮಾಡಿದ್ದಾರೆ.

ಅಧ್ಯಕ್ಷರು:- ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಇದರಲ್ಲಿ ಪ್ರಶ್ನೆ ಇಲ್ಲ ಆದ್ದರಿಂದ, ವಿಷಯಾಂತರ ಮಾಡುವುದಕ್ಕೆ ಹೋಗಬೇಡಿ. ಈಗ ಸದರಿ ಪ್ರಶ್ನೆಗೆ ಅವರು ಉತ್ತರ ಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:- ಮಾನ್ಯ ಅಧ್ಯಕ್ಷರೆ, ನಾನು 5 ಪ್ರಶ್ನೆಗಳನ್ನು ಕೇಳಿದ್ದೆ. ಆದರೆ, ಇದರಲ್ಲಿ 3 ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು:- ಇರಬಹುದು. ಆದರೆ, ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ನಿಮ್ಮ ಪ್ರಶ್ನೆ ಇದರಲ್ಲಿ ಇಲ್ಲ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:- ಈ ಆಸ್ಪತ್ರೆಯ ಆಡಳಿತದಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಪ್ರಶ್ನೆಗಳ ಪಟ್ಟಿಯಲ್ಲಿ ಇದು ಪ್ರಿಂಟ್ ಆಗಿದೆ. ಆದರೆ, ಮಾನ್ಯ ಮಂತ್ರಿಗಳು ನೀಡಿರುವ ಉತ್ತರದಲ್ಲಿ ಈ ಪ್ರಶ್ನೆ ಪ್ರಿಂಟ್ ಆಗಿಲ್ಲ. ನಾನು ಕೇಳಿರುವ 5 ಪ್ರಶ್ನೆಗಳಿಗೆ ಕೇವಲ 3 ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಟ್ಟಿದ್ದಾರೆಂದು ನಾನು ಮೊದಲೇ ಹೇಳಿದ್ದೇನೆ. ಅಲ್ಲಿ ಸುಮಾರು 2 ಲಕ್ಷ 92 ಸಾವಿರ ರೂಪಾಯಿ ಸರ್ಕಾರಕ್ಕೆ ಜಮಾ ಆಗಬೇಕಾಗಿತ್ತು ಆದರೆ, ಸದರಿ ಹಣವನ್ನು ಜಮಾ ಮಾಡಿಲ್ಲ. ಇಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವಾಗಿದೆ. 2001 ರಿಂದ ಇಲ್ಲಿಯವರೆಗೆ ಅಕೌಂಟಿಂಗ್ ಆಗಿಲ್ಲ. ಈ ವಿಷಯವನ್ನು ಜಿಲ್ಲೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಾಗ ಅಕೌಂಟಿಂಗ್ ಮಾಡಿಸುತ್ತೇವೆಂಬ ಆಶ್ವಾಸನೆಯನ್ನು ಆ ಸಂದರ್ಭದಲ್ಲಿ ಕೊಟ್ಟಿದ್ದರು. ಆದ್ದರಿಂದ, ಅಕೌಂಟಿಂಗ್ ಕೆಲಸ ಮಾಡಿ ಸಂಬಂಧಪಟ್ಟ ವ್ಯಕ್ತಿಯ ಮೇಲೆ ಕ್ರಮ ತೆಗೆದು ಕೊಳ್ಳಲಾಗಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಬಿ.ಶ್ರೀರಾಮುಲು:- ಮಾನ್ಯ ಅಧ್ಯಕ್ಷರೆ, ಕದಂಬ ಮತ್ತು ಬಿಜುಗೆರೆ ಎಂಬುವವರು user fund 2,91,022 ರೂಪಾಯಿಗಳನ್ನು ದುರುಪಯೋಗ

ಮಾಡಿದ್ದಾರೆ. ಇವರುಗಳನ್ನು ದಿನಾಂಕ 2.02.2009 ರಿಂದ ಅಮಾನತು ಮಾಡಲಾಗಿದೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:- ಅವರುಗಳ ಮೇಲೆ ತನಿಖೆ ಮಾಡಿಸಿ.

ಶ್ರೀ ಬಿ.ಶ್ರೀರಾಮುಲು:- ತನಿಖೆ ಮಾಡಿಯೆ ಅಮಾನತು ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳಲಾಯಿತು.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:- ಅಲ್ಲಿಗೆ ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿಯನ್ನು ತಕ್ಷಣ ಕೊಡಬೇಕು.

ಶ್ರೀ ಬಿ.ಶ್ರೀರಾಮುಲು:- ಆದಷ್ಟು ಬೇಗ ಕೊಡಲಾಗುತ್ತದೆ.

ಮುಳಬಾಗಿಲು ಕ್ಷೇತ್ರದಲ್ಲಿ ಮಹಿಳಾ ವೈದ್ಯರ ನೇಮಕಾತಿ ಮಾಡುವ ಬಗ್ಗೆ.

54 (128) ಶ್ರೀ. ಅಮರೇಶ್ (ಮುಳಬಾಗಲು)
ಶ್ರೀ ಬಿ. ಶ್ರೀ ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮುಳಬಾಗಿಲು ತಾಲ್ಲೂಕಿನ ಹೋಬಳಿಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಮುಳಬಾಗಿಲು ತಾಲ್ಲೂಕಿನ ಎಲ್ಲಾ ಹೋಬಳಿ ಆಸ್ಪತ್ರೆಗಳಲ್ಲಿ 18 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು ಎಲ್ಲಾ ವೈಧ್ಯಾಧಿಕಾರಿಗಳೂ ಸಹ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ರಾಜ್ಯದಲ್ಲಿನ ಯಾವುದೇ ಸರ್ಕಾರಿ ಆಸ್ಪತ್ರೆಗೆ ಮಹಿಳಾ ವೈಧ್ಯಾಧಿಕಾರಿ ಎಂಬ ಹುದ್ದೆ ನಿರ್ದಿಷ್ಟವಾಗಿ ಇರುವುದಿಲ್ಲ.

ಆ) ಹಾಗಿದ್ದಲ್ಲಿ, ಮಹಿಳಾ ವೈದ್ಯರ ನೇಮಕಾತಿಯನ್ನು ಯಾವ ಅವಧಿಯೊಳಗಾಗಿ ಪೂರ್ಣಗೊಳಿಸಲಾಗುವುದು?

ಉದ್ಭವಿಸುವುದಿಲ್ಲ.

ಇ) ಹೋಬಳಿಗಳ ಆಸ್ಪತ್ರೆಯಲ್ಲಿ ರಾತ್ರಿಯ ಸಮಯದಲ್ಲಿಯೂ ವೈದ್ಯರುಗಳು ಕರ್ತವ್ಯದಲ್ಲಿ ಇರುವ ಹಾಗೆ ಸರ್ಕಾರ ಕ್ರಮ ಕೈಗೊಂಡಿದೆಯೇ (ವಿವರ ನೀಡುವುದು)? ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರು ಕೇಂದ್ರ ಸ್ಥಾನದಲ್ಲಿದ್ದು ತುರ್ತು ಸೇವೆಯನ್ನು ರಾತ್ರಿಯ ಸಮಯದಲ್ಲಿಯೂ ಸಹ ಒದಗಿಸಲಾಗಿದೆ.

ಶ್ರೀ ಅಮರೇಶ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಹೋಬಳಿ ಕೇಂದ್ರ ಸ್ಥಾನದಲ್ಲಿ ವೈದ್ಯಾಧಿಕಾರಿಗಳು ಯಾವುದೇ ಕಾರಣಕ್ಕೂ ಇರುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಮಾಹಿತಿಯನ್ನು

ಕೂಡ ಯುವಕರಿದ್ದೀರಿ. ನೀವು ಸ್ವಲ್ಪ inspectionಗಳನ್ನು ಮಾಡಬೇಕಾಗುತ್ತದೆ. ಅದನ್ನು ತಾವು ಮಾಡದೆ ಹೋದರೆ DHO ಗಳಿಗೂ ಜವಾಬ್ದಾರಿಯನ್ನು ಕೊಡದೆ ಹೋದರೆ ಇದು ಹೀಗೆಯೇ ಮುಂದುವರಿಯುತ್ತದೆ. ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವವರೆಲ್ಲರೂ ಬಡವರು ಆಗಿದ್ದಾರೆ. ನೀವು ಯಾವುದೇ ಆರೋಗ್ಯ ಕವಚಗಳನ್ನು ಮಾಡಿದರೂ ಕೂಡ ಅಲ್ಲಿ ಜವಾಬ್ದಾರಿಯಿಂದ ಕೆಲಸವನ್ನು ಮಾಡದೆ ಹೋದರೆ ಆ ಕವಚಗಳು ಏನು ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ದಯಮಾಡಿ ಈ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ.ಬಿ.ಶ್ರೀರಾಮುಲು: ಮಾನ್ಯ ಅಧ್ಯಕ್ಷರೇ, ಹಿರಿಯ ನಾಯಕರಾದಂತಹ ಮಾನ್ಯ ಸಿದ್ದರಾಮಯ್ಯನವರು ಹೇಳಿರುವಂತಹದ್ದ ಸರಿಯಾಗಿದೆ. ಬಹಳಷ್ಟು ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಅದರಲ್ಲೂ ನಮ್ಮ ಗ್ರಾಮೀಣ ಭಾಗದಲ್ಲಿ ಎಎನ್‌ಎಂಗಳು, ಡಾಕ್ಟರ್‌ಗಳು ಆಸ್ಪತ್ರೆಯ ಕ್ವಾರ್ಟ್‌ನ್‌ಗಳಲ್ಲಿ ಉಳಿಯುತ್ತಿಲ್ಲ. ಬಹಳಷ್ಟು ಸಿನಿಮಾಗಳು, ಇತ್ತೀಚೆಗೆ ಬರುತ್ತಿವೆ. ಆ ಸಿನಿಮಾಗಳಿಂದ ಬಹಳಷ್ಟು ಮಂದಿ ಡಾಕ್ಟರ್‌ಗಳು ಹೀರೋಗಳು ಆಗಿದ್ದಾರೆ. ಕೆಲವು ಸಿನಿಮಾಗಳಲ್ಲಿ ಡಾಕ್ಟರ್‌ಗಳು ವಿಲನ್ ಕೂಡ ಆಗಿದ್ದಾರೆ. ಅಂತಹ ಸಿನಿಮಾಗಳೇ ನಮ್ಮ ರಾಜ್ಯದಲ್ಲಿ ನೂರು ದಿನಗಳು ಓಡಿದೆ. ಅಂದರೆ ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅಲ್ಲಿ ಡಾಕ್ಟರ್‌ಗಳು ಕಡ್ಡಾಯವಾಗಿ ಉಳಿಯಬೇಕು. ಅಲ್ಲಿರುವಂತಹ DHOಗಳು ಇರಬಹುದು, ನಮ್ಮ ಎಎನ್‌ಎಂಗಳು ಇರಬಹುದು ತಾಲ್ಲೂಕು ಮಟ್ಟದ ಅಧಿಕಾರಿಗಳು ಆಗಿರಬಹುದು. ಅಲ್ಲಿ ಅವರುಗಳು ಕಡ್ಡಾಯವಾಗಿ ಉಳಿಯಬೇಕು. ಈಗ ಇರುವಂತಹ ಪರಿಸ್ಥಿತಿಯಲ್ಲಿ ಸಾಕಷ್ಟು ಜನರು ಉಳಿಯುತ್ತಿಲ್ಲ. ಸಾಕಷ್ಟು ಜಾಗ್ರತೆಯನ್ನು ವಹಿಸಬೇಕೆಂದು ಸಾಕಷ್ಟು ಸಿನಿಮಾಗಳು ಬರುತ್ತಿವೆ. ಎಲ್ಲಾ ಸಿನಿಮಾಗಳು ಆರೋಗ್ಯ ಇಲಾಖೆಯ ವತಿಯಿಂದಲೇ ತೆಗೆಯುತ್ತಿದ್ದಾರೆ. ಇವತ್ತು ನಾನು ಕಡ್ಡಾಯವಾಗಿ ಪ್ರಯತ್ನವನ್ನು ಮಾಡುತ್ತಿದ್ದೇನೆ. ಎಲ್ಲಾ ರೆಕಾರ್ಡ್ಸ್‌ನ್ನು ತೆಗೆದು ನೋಡಿ. ಆರೋಗ್ಯ ಇಲಾಖೆಗೆ ಎಲ್ಲಾ ಇಲಾಖೆಯನ್ನು ನಾನು ಕಂಪೇರ್ ಮಾಡುವುದಕ್ಕೆ ಹೋಗುವುದಿಲ್ಲ. ಬಹಳಷ್ಟು ಒಳ್ಳೆಯ ಕೆಲಸಗಳು ಆಗುತ್ತಿದೆ. ಅಲ್ಲಿ ವಿರೋಧಪಕ್ಷದಲ್ಲಿ ಕುಳಿತ ನೀವೆಲ್ಲರೂ ಕೂಡ ಅದನ್ನು ಒಪ್ಪಿಕೊಳ್ಳಲೇಬೇಕು. ಏಕೆಂದರೆ ತಾವು ಸಂಪೂರ್ಣವಾಗಿ ಕಡತವನ್ನು ತೆಗೆದು ನೋಡಿದರೆಗೊತ್ತಾಗುತ್ತದೆ. ಮುಂಬರುವಂತಹ ದಿನಗಳಲ್ಲಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೆ ಹೋಗುವಂತಹ ಪ್ರಯತ್ನವನ್ನು ನಾನು ನಡೆಸುತ್ತೇನೆ. ಅದಷ್ಟು ನಾನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಗ್ರಾಮೀಣ ಭಾಗಕ್ಕೆ ಹೋಗಬೇಕಾದರೆ ಅದಕ್ಕೆ ಸಮಯವು ಬೇಕಾಗುತ್ತದೆ. ಮುಂಬರುವಂತಹ ದಿನಗಳಲ್ಲಿ ಕಡ್ಡಾಯವಾಗಿ ಒಂದು ರೂಲ್‌ನ್ನು ತಂದು ಒಂದು ಹೊಸ ನೀತಿಯನ್ನು ತಂದು ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಟ್ಟು ಸೆಕ್ಯುರಿಟಿಯಾಗಿರಬಹುದು, ನೀರಿನ ವ್ಯವಸ್ಥೆಯಾಗಿರಬಹುದು, ಕರೆಂಟ್

ಆಗಿರಬಹುದು, ಅವರಿಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿ ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಹಳ್ಳಿಯ ಭಾಗದ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಅಲ್ಲಿರುವಂತಹ ವ್ಯವಸ್ಥೆಯನ್ನು ಅದಷ್ಟು ಬೇಗನೆ ನಾನು ಸರಿ ಮಾಡಿಕೊಡುತ್ತೇನೆಂದು ಈ ಸಭೆಯ ಮೂಲಕ ಈ ರಾಜ್ಯದ ಜನರಿಗೆ ನಾನು ತಿಳಿಸುತ್ತೇನೆ.

ಅಧ್ಯಕ್ಷರು: ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿಯವರು ಸದನದಲ್ಲಿ ಇಲ್ಲಾ. ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲರವರೆ ತಾವು ಪ್ರಶ್ನೆಯನ್ನು ಕೇಳಿ.

ಸೇಡಂ ಕ್ಷೇತ್ರ ವ್ಯಾಪ್ತಿಯಲ್ಲಿ ವೈದ್ಯರ ಕೊರತೆ ಬಗ್ಗೆ.

56 (133) ಶ್ರೀ.ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಶ್ರೀ.ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದಲ್ಲಿರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ 5 ತಜ್ಞ ವೈದ್ಯರ ಹುದ್ದೆ ಮಂಜೂರಾಗಿದ್ದ 2 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ 3 ತಜ್ಞ ವೈದ್ಯರ ಹುದ್ದೆ ಖಾಲಿ ಇದೆ.

ಆ) ಹಾಗಾದ್ದಲ್ಲಿ, ಸೇಡಂ ತಾಲ್ಲೂಕಿನಲ್ಲಿ ಮತ್ತು ಮತಕ್ಷೇತ್ರದಲ್ಲಿ ಖಾಲಿ ಇರುವ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾಗಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯುನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ: 7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಚಿತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅವರು ಉತ್ತರವನ್ನು ಒದಗಿಸಿರುವುದರಲ್ಲಿ ತಪ್ಪಾಗಿದೆ. ನಾನು ಕೇಳಿರುವಂತಹ ಒಂದು simple ಪ್ರಶ್ನೆಗೆ ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ, ಸೇಡಂ ತಾಲ್ಲೂಕಿನ ಮುಧೋಳದಲ್ಲಿರುವಂತಹ Community Health Center ನಲ್ಲಿ ವೈದ್ಯರ ಕೊರತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯಾ ಎಂದು ಕೇಳಿದ್ದೇನೆ. ಅವರು ಬಂದಿದೆ ಎಂದು ಹೇಳಿದ್ದಾರೆ. ಅಲ್ಲಿ 5 Specialist post Sanctioned ಇದೆ. ಅದರಲ್ಲಿ ಇಬ್ಬರು specialist ಗಳು ಕೆಲಸವನ್ನು ಮಾಡುತ್ತಿದ್ದಾರೆಂದು ತಪ್ಪು ಮಾಹಿತಿಯನ್ನು ಈ ಸದನಕ್ಕೆ ಕೊಟ್ಟಿದ್ದಾರೆ. ಅಲ್ಲಿರುವುದು ಒಬ್ಬರೇ ಡಾಕ್ಟರ್, ಅವರು ಎಂಬಿಬಿಎಸ್ ಆಗಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ನೋಡಬೇಕು. ಅಧಿಕಾರಿಗಳು ಯಾವ ರೀತಿಯಾಗಿ ಬರೆದುಕೊಡುತ್ತಾರೆ. ಈ ರೀತಿಯಾಗಿ ತಪ್ಪು ಮಾಹಿತಿಯನ್ನ ಕೊಟ್ಟಿರುವುದರಿಂದ ನಾವು ಏನು ಹೇಳಬೇಕು. 5 Sanctioned Specialist Post ನಲ್ಲಿ, ಅಲ್ಲಿ ಒಬ್ಬರು ಸಹ ಕೆಲಸವನ್ನು ಮಾಡುತ್ತಿಲ್ಲ. ಅಲ್ಲಿ ಎಂಬಿಬಿಎಸ್ ಡಾಕ್ಟರ್ ಮಾತ್ರ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲಿ 5 Post ಗಳು ಖಾಲಿ ಇವೆ. ಅಲ್ಲಿ ಇಬ್ಬರು ಕೆಲಸವನ್ನು ಮಾಡುತ್ತಿದ್ದಾರೆಂದರೆ, ನಾನು ಏನು ಮಾಡಲಿ ಅಧ್ಯಕ್ಷರೆ, ನೀವು ಈ ಬಗ್ಗೆ ಒಂದು enquiry ಯನ್ನು ಮಾಡಿ. ಅಲ್ಲಿ ಒಂದು ವೇಳೆ ಇಬ್ಬರು ತಜ್ಞ ವೈದ್ಯರು ಇದ್ದರೆ I am satisfied. At least ಒಂದು ಸಿಹೆಚ್‌ಸಿಯಲ್ಲಿ ಇಬ್ಬರು ಇದ್ದಾರೆಂದರೆ ಹೇಗೆ? ಅಲ್ಲಿ ಒಬ್ಬರು ಸಹ ಇರುವುದಿಲ್ಲ. ಅಲ್ಲಿ ಒಬ್ಬರು ಎಂಬಿಬಿಎಸ್ ಡಾಕ್ಟರ್ ಕೆಲಸವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು. ಇಲ್ಲಿ ತಪ್ಪು ಮಾಹಿತಿ ಇದೆ. ತಾವು ಮಾಹಿತಿಯನ್ನು ತರಿಸಿಕೊಂಡು ಇಬ್ಬರಿಗೆ ಅಲ್ಲಿಗೆ posting ಮಾಡಿದರೆ ನಾನು accept ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಅಯಿತು. ಮಾನ್ಯ ಶ್ರೀರಾಮುಲುರವರೆ, ತಾವು ಮಾತನಾಡಿ. ಅವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಬಿ.ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಸೇಡಂ ತಾಲ್ಲೂಕಿನಲ್ಲಿ ಮುಧೋಳ ಗ್ರಾಮದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರಕ್ಕೆ 5 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 2 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ, 3 ತಜ್ಞ ವೈದ್ಯರ ಹುದ್ದೆ ಖಾಲಿ ಇದೆ. ಸೇಡಂ ಮತಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು 221 ಅರೆ ವೈದ್ಯಕೀಯ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 135 ಹುದ್ದೆಗಳು.

ಅಧ್ಯಕ್ಷರು: ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಬೇಸಿಕ್ ಪ್ರಶ್ನೆಯನ್ನು ಕೇಳಿರುವುದು 5 ಜನ ತಜ್ಞ ವೈದ್ಯರ ಹುದ್ದೆ ಮಂಜೂರಾಗಿದೆ. 2 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆಂದು ಉತ್ತರವನ್ನು ಕೊಟ್ಟಿದ್ದೀರಿ. ಆ ಮಾಹಿತಿಯು ಸರಿಯಿಲ್ಲವೆಂದು ಅವರು ಹೇಳುತ್ತಿದ್ದಾರೆ. ಅವರು ಬೇಸಿಕ್ ಆಗಿ ;ಇಬ್ಬರು ತಜ್ಞ

ವೈದ್ಯರು ಇಲ್ಲವೆಂದು ಹೇಳುತ್ತಿದ್ದು, ಅವರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: 5 ಜನ ತಜ್ಞ ವೈದ್ಯರಲ್ಲಿ 3 ಜನ ತಜ್ಞ ವೈದ್ಯರು ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತಿದ್ದೀರಿ. ಅಲ್ಲಿ ಇಬ್ಬರು ಸಹ ಕೆಲಸವನ್ನು ಮಾಡುತ್ತಿಲ್ಲ. ಅಲ್ಲಿ ಒಬ್ಬ ಎಂಬಿಬಿಎಸ್ ಡಾಕ್ಟರ್ ಮಾತ್ರ ಇದ್ದಾರೆ. specialist ಡಾಕ್ಟರ್ ಯಾರೂ ಕೆಲಸವನ್ನು ಮಾಡುತ್ತಿಲ್ಲ. ನಾನು ಕೇಳಿರುವಂತಹ ಪ್ರಶ್ನೆ 5 ಜನ specialist ಹುದ್ದೆಗಳು ಖಾಲಿ ಇವೆ ಎಂದು ಕೇಳುತ್ತಿದ್ದೇನೆ. ನೀವು ಇಬ್ಬರು ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿದ್ದೀರಿ.

ಒಬ್ಬ MBBS ಡಾಕ್ಟರ್ ಮಾತ್ರ ಕೆಲಸವನ್ನು ಮಾಡುತ್ತಿದ್ದಾನೆ. ಇಲಿ ತಪ್ಪ ಮಾಹಿತಿಯನ್ನು ಕೊಟ್ಟಿದ್ದಾರೆ. ಇಲ್ಲಿ ಯಾರು ಅಧಿಕಾರಿಗಳು ತಪ್ಪು ಮಾಹಿತಿಯನ್ನ ಕೊಟ್ಟದ್ದಾರೆ ಅದನ್ನು ತಾವು ತರಿಸಿಕೊಂಡು ನೋಡಿ. ನಾನು ಇಲ್ಲಿ ಪ್ರಶ್ನೆಯನ್ನು ಕೇಳಿರುವಂತಹ ಉದ್ದೇಶವೇನೆಂದರೆ, ಅಲ್ಲಿಗೆ 2–3 specialists ಡಾಕ್ಟರ್‌ನ್ನು ಕೊಡಿ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅಲ್ಲಿ ಇಬ್ಬರು ಕೆಲಸವನ್ನು ಮಾಡುತ್ತಿದ್ದರೆ ನಾನು ಏತಕ್ಕಾಗಿ ಪ್ರಶ್ನೆಯನ್ನು ಕೇಳುತ್ತಿದ್ದೆ.

ಶ್ರೀ ಸಿ.ಟಿ.ರವಿ: ಡಾಕ್ಟರೆ, ನಿಮ್ಮನ್ನು ಸೇರಿಸಿಯೇ ಹೇಳಿರಬೇಕು.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರೆ, ತಾವು clarfication ಅನ್ನು ತರಿಸಿಕೊಂಡು ನೋಡಿ. ಈಗ ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನೀವು ಮಾಹಿತಿಯನ್ನು ದಯಮಾಡಿ ತರಿಸಿನೋಡಿ. ಯಾರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಅವರ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳಿ, ಆಮೇಲೆ ತಾವು 2 ಡಾಕ್ಟರ್ಸ್ ಹುದ್ದೆಗಳು ಇದೆ ಎಂದು ಹೇಳಿದ್ದೀರಿ, 2 ಡಾಕ್ಟರ್ ಹುದ್ದೆಗಳನ್ನು ತಾವು ಹಾಕಿಕೊಂಡು ನಾನು ಒಪ್ಪಿಕೊಳ್ಳುತ್ತೇನೆ. ನೀವು ಅಲ್ಲಿಗೆ ಎರಡು ಡಾಕ್ಟರ್ ಹುದ್ದೇಗಳನ್ನು ಕೊಟ್ಟರೆ I am satisfied. I will accept this ಇನ್ನು ಎರಡನೆಯ ಉಪಪ್ರಶ್ನೆ ಇದೆ, ಅಲ್ಲಿ ಏನು ಕೇಳಿರುವುದೆಂದರೆ, ನಿವು ಯಾವಾಗ specialist ಗಳನ್ನು post ಭರ್ತಿ ಮಾಡುತ್ತೀರೆಂದು ನಾನು ಕೇಳಿದ್ದೇನೆ. ಅದರ ಬಗ್ಗೆ ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆಂದರೆ , 5021 ಅರ್ಜಿಗಳನ್ನು call for ಮಾಡಿದ್ದೇವೆ, ಆ ಬಗ್ಗೆ Recruitment Rules ಹುದ್ದೆಗಳಿಗೆ ಅನ್ನು ಮಾಡಿದ್ದೇವೆ, ಆ ಬಗ್ಗೆ objections ಅನ್ನು call for ಮಾಡಿದ್ದೇವೆಂದು ತಾವು ಹೇಳುತ್ತಿದ್ದೀರಿ, ಇದು ಸ್ವಾಗತಾರ್ಹ. ಇದನ್ನು ನಾವು Welcome ಮಾಡುತ್ತೇವೆ. It is good. ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. specialist Doctors ಬಗ್ಗೆ ತಾವು ಹೇಳಿದ್ದೀರಿ, 1300 ಜನ specialist ಡಾಕ್ಟರ್ ಗಳು vacant ಇವೆ, ಅವು fill up ಆಗುವುದಿಲ್ಲ. ಏಕೆ ಆಗುವುದಿಲ್ಲವೆಂದರೆ, ನೀವು 5021 ಡಾಕ್ಟರ್ಸ್ ಹುದ್ದೆಗಳನ್ನು ಕರೆಯುತ್ತೀರಲ್ಲಾ ಅದರಲ್ಲಿ MS, MD ಮಾಡಿದವರು ಒಂದು ವೇಳೆ apply

ಮಾಡಿದರೆ ನೀವು ಅವರಿಗೆ, same scale ಕೊಟ್ಟರೆ ಯಾರು ಬರುವುದಿಲ್ಲ. ಅದಕ್ಕಾಗಿ ನಾನು last Assembly ಯಲ್ಲಿಯೂ ಕೂಡ ಒಂದು suggestion ಅನ್ನು ಸಹ ಕೊಟ್ಟಿದ್ದೆ. ಮಾನ್ಯ ಸಚಿವರು ಇದನ್ನು ನೋಟ್ ಮಾಡಿಕೊಂಡು ತಜ್ಞ ವೈದ್ಯರು ಏನಿದ್ದಾರೆ, ಅವರನ್ನು starting ನಲ್ಲಿ recruitment ಮಾಡುವಾಗ ಬೇರೆ ಸ್ಕೇಲ್‌ನ್ನು ಕೊಡಬೇಕಾಗುತ್ತದೆಂದು. ನೀವು ಬೇರೆ ಸ್ಕೇಲ್‌ನ್ನು ಕೊಡದೆ ಇದ್ದರೆ. ನೀವು MBBS ಇದ್ದವರಿಗೂ MD ಇದ್ದವರಿಗೂ ಒಂದೇ scale ಕೊಟ್ಟು recruitment ಮಾಡಿಕೊಳ್ಳುತ್ತೇವೆಂದರೆ ಯಾರು ಬರುತ್ತಾರೆ? ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಇಷ್ಟೊಂದು ಹುದ್ದೆಗಳು ಖಾಲಿಯಿರುವುದು. ಮಾನ್ಯ ಸಚಿವರಿಗೆ ಇನ್ನೊಂದು ಸಲಹೆಯನ್ನು ಕೊಡುವುದೇನೆಂದರೆ, ಹೋದ ಸಾರಿ ಮಾನ್ಯ ಆರ್. ಅಶೋಕರವರು ಇದ್ದಾಗ ನಾವು ಒಂದು ಸಲಹೆಯನ್ನು ಕೊಟ್ಟಿದ್ದೇವು. ಏಕೆಂದರೆ ತಾವು specialists ಡಾಕ್ಟರ್ಸ್ post ಗಳನ್ನು fill up ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಕಡ್ಡಾಯವಾಗಿ ನೀವು ಒಂದು ಕಾನೂನನ್ನು ತನ್ನಿ, ಏನೆಂದರೆ Government colleges ನಲ್ಲಿ ಸರ್ಕಾರವು ಮೆರಿಟ್ ಮೇಲೆ ಹಣವನ್ನು ಒದಗಿಸುತ್ತದೆ. ಎಂಡಿ ಸೀಟಿಗೆ ಅಪ್ಲೈ ಮಾಡಿ ಸೀಟನ್ನು ತೆಗೆದುಕೊಳ್ಳುತ್ತಾರೆ ಅವರುಗಳಿಗೆ ಒಂದು ವರ್ಷಗಳ ಕಾಲ ಕಡ್ಡಾಯವಾಗಿ Community Health Centres ಎಂದು ಹೇಳುತ್ತಾರಲ್ಲಾ ಅಲ್ಲಿ sanctioned post ಗಳು ಇಲ್ಲ. community Health Centres ನಲ್ಲಿ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಒಂದು ವರ್ಷಗಳ ಕಾಲ ಕಡ್ಡಾಯವಾಗಿ ಕೆಲಸವನ್ನು ಮಾಡಬೇಕು ಹಾಗೂ ನಿಮಗೆ fall scale ಕೊಡುತ್ತೇವೆಂದರೆ ಇದನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದೆ ಇದ್ದರೆ ಭರ್ತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗ ಮಾನ್ಯ ಸಚಿವರು ಒಂದು ಕಾನೂನನ್ನು ತರಬೇಕು ಇಲ್ಲವೆಂದರೆ ನಮ್ಮ ಹಳ್ಳಿಯ ಪ್ರದೇಶದಲ್ಲಿ Community Health Centres ನಲ್ಲಿ ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಇರುವುದಕ್ಕೆ ಸಾಧ್ಯವೇ ಇಲ್ಲ, ಏಕೆಂದರೆ, ನೀವು ಹೇಳಿದ ಹಾಗಿ 60 – 70 ಜನರು ಪಾಸ್ ಆಗುತ್ತಾರೆ. ನಮಗೆ ವೈದ್ಯರ ಕೊರತೆ, 1,000 ಇದೆ. ಈಗ ಇರತಕ್ಕಂತಹವರು ಏನೇ ಇರಲಿ, ನಿಮ್ಮ in service ಆಗಲಿ ಅಥವಾ merit ನಲ್ಲಿ ಬರುವಂತಹ ಎಲ್ಲರಿಗೂ ಕೂಡ compulsory ಆಗಿ ಒಂದು ಕಾನೂನನ್ನು ತಂದರೆ ಅದಕ್ಕೆ ಪರಿಹಾರವನ್ನು ಕಂಡುಹಿಡಿಯಬಹುದು.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಿ.

ಶ್ರೀ ಬಿ.ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಅಲ್ಲಿ 3 ಮಂದಿ ತಜ್ಞ ವೈದ್ಯಾಧಿಕಾರಿಗಳು ಕೆಲಸವನ್ನು ಮಾಡುತ್ತಿಲ್ಲವೆನ್ನುವಂತಹ ಪ್ರಶ್ನೆ, ನಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವಿಚಾರವನ್ನು ಮಾಡುತ್ತೇನೆ. ಏಕೆಂದರೆ ನನಗೆ ಕೊಟ್ಟಿರುವಂತಹ ಮಾಹಿತಿಯಲ್ಲಿ 3 ಮಂದಿ ವೈದ್ಯರು

ಎಂದು ಕೊಟ್ಟಿದ್ದಾರೆ. ಅಲ್ಲಿ ಕೆಲಸವನ್ನು ನಿರ್ವಹಿಸುತ್ತಿಲ್ಲವೆಂದು ಹೇಳಿದ್ದೀರಿ, ಆದರ ಬಗ್ಗೆ ವಿಚಾರಣೆಯನ್ನು ಮಾಡುತ್ತೇನೆ. ಇದರ ಜೊತೆಯಲ್ಲಿ ತಜ್ಞ ವೈದ್ಯರು ವರ್ಷಕ್ಕೆ 60-70 ಮಂದಿ ಮಾತ್ರ ಬರುತ್ತಾರೆ. ಅದಕ್ಕಿಂತಲೂ ಜಾಸ್ತಿ ಬರುವುದಕ್ಕಾಗುವುದಿಲ್ಲ. ಆದಕ್ಕಾಗಿ MBBS, MD, MS doctor ಗಳು ಖಾಸಗಿ ಆಸ್ಪತ್ರೆಯಲ್ಲಿ ಅಂದರೆ ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟನ್ನು ಪಡೆಯಬೇಕಾದರೆ ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳು ಆಗುತ್ತಿದೆ. ಇವತ್ತು ಬಹಳಷ್ಟು ಹುದ್ದೆಗಳು ಖಾಲಿ ಇವೆ, ನಾವು ಒಂದು ಪ್ರಯತ್ನವನ್ನು ಮಾಡೋಣ. ವೇತನ ತಾರತಮ್ಯದ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಬೆಂಗಳೂರಿನಲ್ಲಿ ಈ ಬಗ್ಗೆ ದೊಡ್ಡ ಮುಷ್ಕರವು ಕೂಡ ನಡೆಯಿತು. ವೇತನ ತಾರತಮ್ಯದ ಬಗ್ಗೆ ಬಹಳಷ್ಟು ಮುಷ್ಕರಗಳು ನಡೆದ ನಂತರ ಇವತ್ತು MBBS doctors ಗಳಿಗೆ ಬೇರೆ ವೇತನ ಇದೆ, MD ಮತ್ತು MS doctors ಗಳಿಗೆ ಬೇರೆ ವೇತನವನ್ನು ಕೂಡ ನಾವು ಮಾಡಿದ್ದೇವೆ. ಆದಷ್ಟು ಬೇಗನೆ ಇದರ ಬಗ್ಗೆ ನಾವು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡೋಣ. ಈ ಸಮಸ್ಯೆ ಬಹಳಷ್ಟು ವರ್ಷಗಳಿಂದ ಬಂದಿದೆ. ನಾನು ಇವತ್ತು ಆರೋಗ್ಯ ಮಂತ್ರಿಯಾಗಿದ್ದಕೋಸ್ಕರ ಇದು ಉದ್ಭವವಾಗಿಲ್ಲ. ಅದಷ್ಟು ಬೇಗನೆ ಈ ಬಗ್ಗೆ ಹಿರಿಯರೆಲ್ಲರೂ ಸಲಹೆಯನ್ನೂ ಪಡೆದು ಯಾವ ರೀತಿಯಾಗಿ ಇದನ್ನು ಸರಿಪಡಿಸಬೇಕು ಎಂಬ ಬಗ್ಗೆ ತಮಗೆ ಮಾಹಿತಿಯನ್ನು ಕೊಟ್ಟ ತಕ್ಷಣ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಿ ಇದನ್ನು ಯಾವ ರೀತಿಯಾಗಿ ಪರಿಹಾರ ಮಾಡಬೇಕೆಂದು ನೋಡೋಣ. ಈ ಬಗ್ಗೆ ಒಂದು ಸಭೆಯನ್ನು ಕರೆದು ಎಲ್ಲರ ಸಲಹೆಯನ್ನು ಪಡೆದು ಇದನ್ನು ಯಾವ ರೀತಿಯಾಗಿ ಸರಿಪಡಿಸಬೇಕೆಂಬುದರ ಬಗ್ಗೆ ಯೋಚನೆ ಮಾಡುತ್ತೇನೆ

ಶ್ರೀ ಎ.ಮಂಜು: ಮಾನ್ಯ ಮಂತ್ರಿಗಳು ರೆಗ್ಯುಲರ್ ಆಗಿ ಸಿಕ್ಕಿದರೆ definiteಆಗಿ problems ಗಳು solvedಆಗುತ್ತದೆ. ದಯಮಾಡಿ we are requesting the minister, to take action.

ಶ್ರೀ ಗೋವಿಂದ ಎಂ.ಕಾರಜೋಳ: ಮಂತ್ರಿಗಳ ಏಕೆ ಬೇಕು ಈಗ ನಿಮ್ಮ ಆರೋಗ್ಯ ಚೆನ್ನಾಗಿದೆಯಲ್ಲಾ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಈ ಸಭೆಯಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಬೆಂಗಳೂರಿನ ಆಸ್ಪತ್ರೆಗೆ ಸಂಬಂಧಪಟ್ಟಹಾಗೆ ಸ್ಥಳ ಪರಿಶೀಲನೆಯನ್ನು ಮಾಡೋಣ, ಈ ಬಗ್ಗೆ ಒಂದು ಸಭೆಯನ್ನು ಬೆಂಗಳೂರಿನಲ್ಲಿ ಕರೆಯುತ್ತೇವೆಂದು ಹೇಳಿದ್ದರು. ದಯಮಾಡಿ ಮಾನ್ಯ ಸಚಿವರು ಅದನ್ನು ನೆನಪಿಸಿಕೊಂಡು ತುರ್ತಾಗಿ ಸಭೆಯನ್ನು ಕರೆಯಬೇಕು. ಬೆಂಗಳೂರು ನಗರದ ಆಸ್ಪತ್ರೆಯಲ್ಲಿ ಬಹಳಷ್ಟು ಕೊರತೆ ಇದೆ. ದಯಮಾಡಿ ಬಡವರು ಹೋಗತಕ್ಕಂತಹ ಆಸ್ಪತ್ರೆಗಳಲ್ಲಿ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಬಗ್ಗೆ ಇದೇ ಸಭೆಯಲ್ಲಿ ಭರವಸೆಯನ್ನು ಕೊಟ್ಟಿದ್ದೀರಿ. ಆ ಸಭೆಯನ್ನು ಯಾವಾಗ

ಕರೆಯುತ್ತೀರೆಂದು ಬೆಂಗಳೂರಿನ ಶಾಸಕರಿಗೆ ತಿಳಿಸಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಎನ್.ಎ.ಹ್ಯಾರೀಸ್: ಮಾನ್ಯ ಅಧ್ಯಕ್ಷರೆ, ಬೆಂಗಳೂರು ಆಸ್ಪತ್ರೆಯೂ Government ಗೆ ಸೇರುವುದಿಲ್ಲವೆಂದು ತಿಳಿಸಿದ್ದೀರಲ್ಲಾ, ಅದರ ಬಗ್ಗೆ ಸ್ವಲ್ಪ ತಿಳಿಸಬೇಕು.

ಶ್ರೀ ಗೋವಿಂದ ಎಂ ಕಾರಜೋಳ: ಬೆಂಗಳೂರಿನ ಶಾಸಕರ ಸಲಹೆಯನ್ನು ಪರಿಗಣಿಸುತ್ತೇವೆ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರು ಪ್ರಶ್ನೆಗೆ ಉತ್ತರವನ್ನುಕೊಟ್ಟಿಲ್ಲ.

ಶ್ರೀ ಎನ್.ಎ.ಹ್ಯಾರೀಸ್: ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇತ್ತು. ಅದರ ಬಗ್ಗೆ ನನಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು: ತಮ್ಮ ಪ್ರಶ್ನೆಯೂ ವರ್ಗಾವಣೆಯಾಗಿದೆ.

ಶ್ರೀ ಎನ್.ಎ.ಹ್ಯಾರೀಸ್: ಬದಲಾವಣೆ ಎಂದರೆ, ಸರ್ಕಾರಿ ಆಸ್ಪತ್ರೆ ಇಲ್ಲಾ ಅಂತನಾ?

ಶ್ರೀ ಬಿ. ಶ್ರೀರಾಮುಲು: ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಮಾನ್ಯ ಸಚಿವರು ಕರೆಕ್ಟ್ ಸಮಯಕ್ಕೆ ಸಿಗುತ್ತಿಲ್ಲವೆನ್ನುವಂತಹ ಮಾತನ್ನು ಹೇಳಿದ್ದಾರೆ ಕರ್ನಾಟಕ ರಾಜ್ಯದಲ್ಲಿ ಇವತ್ತು ಬೆಂಗಳೂರಿನಲ್ಲಿದ್ದರೆ ಮಾತ್ರ ಸಚಿವರು ಚೆನ್ನಾಗಿ ಕೆಲಸವನ್ನು ಮಾಡುತ್ತಾರೆನ್ನುವಂತಹ ವಿಷಯ ತಮ್ಮ ತಲೆಯಲ್ಲಿ ಇದೆಯೋ, ಅಥವಾ ಬೇರೆ ಏನಿದೆಯೋ ಗೊತ್ತಿಲ್ಲ. ನಾನು ಮಂತ್ರಿಯಾಗಿ ರಾಜ್ಯದ ಜಿಲ್ಲೆಗಳಿಗೂ ಭೇಟಿಯನ್ನು ಕೊಡಬೇಕಾಗುತ್ತದೆ. ನಾನು ಮಂತ್ರಿಯಾದ ನಂತರ ಯಾವ ರೀತಿಯಾಗಿ ಸರ್ಕಾರದಲ್ಲಿ ಕೆಲಸವನ್ನು ಮಾಡಿದ್ದೇನೆ, ಯಾವ ರೀತಿಯಾಗಿ ನಮ್ಮ ಇಲಾಖೆಗಳಲ್ಲಿ ಕೆಲಸಗಳು ಆಗುತ್ತಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ಇವತ್ತು ನಾನು ಜಿಲ್ಲಾ ಆಸ್ಪತ್ರೆಗಳಿಗೆ ಬೇಟಿಯನ್ನು ಕೊಟ್ಟು ಎಲ್ಲವನ್ನು ಸರಿಪಡಿಸುವ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇವತ್ತು ನಿಮ್ಮೆಲ್ಲರ ಉದ್ದೇಶವೇನೆಂದರೆ, ಕೇವಲ ಬೆಂಗಳೂರಿನಲ್ಲಿ, ಮಾಧ್ಯಮದಲ್ಲಿ ಫೋಟೋಗಳ ಮೂಲಕ ನಿಮಗೆ ಕಂಡರೆ ಮಾತ್ರ ಚೆನ್ನಾಗಿ ಕೆಲಸವನ್ನು ಮಾಡುತ್ತಾರೆನ್ನುವಂತಹ ಕಲ್ಪನೆ ಏನಿದೆ ಅದನ್ನು ತಲೆಯಿಂದ ತೆಗೆದುಹಾಕಬೇಕಾಗುತ್ತದೆ.

(ಗೊಂದಲ)

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್: ಗುಲ್ಬರ್ಗದಲ್ಲಿ DHO ಗಳು ಕೆಲಸವನ್ನು ಮಾಡುತ್ತಿಲ್ಲ. ಇವರು ಎಲ್ಲಾ ಜಿಲ್ಲೆಗಳಿಗೆ ಭೇಟಿ ಕೊಟ್ಟು ಆಡಳಿತವನ್ನು ಚುರುಕು ಮಾಡಿದ್ದೇನೆಂದು ಹೇಳುತ್ತಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿರುವಂತಹ ಡಾಕ್ಟರ್‌ಗಳು ಕುಡಿದು ಬಂದು ಕೆಲಸವನ್ನು ಮಾಡುತ್ತಿದ್ದಾರೆ.

ಶ್ರೀ. ಆರ್. ರೋಷನ್ ಬೇಗ್: ಮಾನ್ಯ ಸದಸ್ಯರಾದ ಶ್ರೀ ಹ್ಯಾರೀಸ್‌ರವರು ಕೇಳಿರುವಂತಹ ಪ್ರಶ್ನೆ ಏನೆಂದರೆ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬರುವಂತಹ hospitals ಬಗ್ಗೆ ಅವರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಮಾನ್ಯ ಸಚಿವರು ಬೇರೆ ಉತ್ತರವನ್ನು ಕೊಡತ್ತಿದ್ದಾರೆ. ಅವರು ಏನಾದರೂ ಹೇಳಬೇಕಾಗಿತ್ತು ಇಲ್ಲಾ Chief Minister ರವರ ವ್ಯಾಪ್ತಿಗೆ ಬರುತ್ತದೆ, ಅವರು ಉತ್ತರವನ್ನು ಕೊಡುತ್ತಾರೆಂದು ಹೇಳಬಹುದಾಗಿತ್ತು. ಇವರು ಕೇಳಿರುವುದಕ್ಕೆ ಅವರು ಬೇರೆಯದನ್ನು ಹೇಳುತ್ತಿದ್ದರೆ.

ಶ್ರೀ ಬಿ.ಶ್ರೀರಾಮುಲು: ಅದು ಬೆಂಗಳೂರು ಮಹಾನಗರ ಪಾಲಿಕೆಗೆ ಬರುತ್ತದೆ. ಅದು ನಮ್ಮ ಇಲಾಖೆಯು ವ್ಯಾಪ್ತಿಯಲ್ಲಿ ಬರುವುದಿಲ್ಲ.

ಶ್ರೀ ಎನ್.ಎ.ಹ್ಯಾರೀಸ್: ಅಂದರೆ ಬೆಂಗಳೂರು ಮಹಾನಗರ ಪಾಲಿಕೆಯೊಳಗಡೆ Government Hospitals ಇಲ್ಲ ಅಂತನಾ?

ಅಧ್ಯಕ್ಷರು: ಮಾನ್ಯ ಸಚಿವರು ಈ ಬಗ್ಗೆ ಪ್ರತ್ಯೇಕವಾಗಿ ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದಾರೆ. ಅದರಲ್ಲಿ ಇದೆಲ್ಲದರ ಬಗ್ಗೆ ವಿಚಾರ ಮಾಡಿ. ಈಗ ಹ್ಯಾರೀಸ್‌ರವರೆ...

ಶ್ರೀ ನೆ.ಲ. ನರೇಂದ್ರಬಾಬು: ಅದು ಬೆಂಗಳೂರು ಮಹಾನಗರ ಪಾಲಿಕೆಗೆ ಹೇಗೆ ಬರುತ್ತದೆ?

ಅಧ್ಯಕ್ಷರು: ಮಾನ್ಯ ನರೇಂದ್ರಬಬುರವರೆ, ಅವರು ಸಭೆಯನ್ನು ಕರೆದು ಮಾತನಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಇಲ್ಲಿ ಸಚಿವರು ನಮಗೆ ಸಿಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ನಾನು ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳುತ್ತಿಲ್ಲ.

ಅಧ್ಯಕ್ಷರು: ಹ್ಯಾರೀಸ್‌ರವರ ಪ್ರಶ್ನೆಗೆ ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲಿ ಇದ್ದೀರಿ. ಬೆಂಗಳೂರು ಆಸ್ಪತ್ರೆಯ ಬಗ್ಗೆ. ಹ್ಯಾರೀಸ್‌ರವರೆ one minute..

ಶ್ರೀ ಬಿ. ಶ್ರೀರಾಮುಲು :ಕೆ.ಸಿ.ಜನರಲ್ ಆಸ್ಪತ್ರೆ, ಜಯದೇವ ಆಸ್ಪತ್ರೆಯೂ ನಮಗೆ ಬರುತ್ತದೆ. ಬೇರೆ ಎಲ್ಲವೂ ಕೂಡ ಮಹಾನಗರ ಪಾಲಿಕೆಗೆ ಹೋಗುತ್ತದೆ. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಎನ್.ಎ.ಹ್ಯಾರೀಸ್: ನೀವು ನನಗೆ ಉತ್ತರವನ್ನೆ ಕೊಡಲಿಲ್ಲ. ಇವು ನಮ್ಮ ಇಲಾಖೆಗೆ ಬರುವುಧಿಲ್ಲವೆಂದು ಹೇಳುತ್ತಿದ್ದೀರಿ. ಹೇಗೆ ಹೇಳುತ್ತೀರಿ.

ಅಧ್ಯಕ್ಷರು: ನಿಮ್ಮ ಪ್ರಶ್ನೆಯೂ ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಇಲ್ಲಿ ಸರ್ಕಾರಿ ಆಸ್ಪತ್ರೆಗಳು ಇವೆ. ಮಹಾನಗರ ಪಾಲಿಕೆಯ ಆಸ್ಪತ್ರೆಗಳು ಸಹ ಇವೆ. ಇಲ್ಲಿ ಶಾಸಕರನ್ನು ಈ ಸದನವು ಮುಗಿದ ನಂತರ ಮಾರ್ಚ್ ಮೊದಲನೆಯ ವಾರದಲ್ಲಿ ಬೇರೆಬೇರೆ

ಕಾಮಗಾರಿಗಳು ಕುರಿತಂತೆ ಎಲ್ಲರನ್ನು ಕರೆದು ಏನೇನು ಸಮಸ್ಯೆಗಳು ಇವೆ ಅದರ ಬಗ್ಗೆ ನಾವು ಅಧ್ಯಯನವನ್ನು ಮಾಡುತ್ತೇವೆ. ಅವರ ಸಮಸ್ಯೆಗಳನ್ನು ಬಗೆಹರಿಸುತ್ತೇವೆ.

ಅಧ್ಯಕ್ಷರು: ಆಯಿತು. ಈಗ ಪ್ರಶ್ನೋತ್ತರವನ್ನು ಮುಗಿಸೋಣ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಸರ್ಕಾರಿ ಆಸ್ಪತ್ರೆಗಳು ದೊಡ್ಡ ಆಸ್ಪತ್ರೆಗಳು ಎಲ್ಲಾ ಇವೆ, ಆ ಲಿಸ್ಟ್ ಎಲ್ಲವನ್ನು ಕೊಡುತ್ತೇವೆ ನಿಮಗೆ, ಅಲ್ಲಿ ಮೀಟಿಂಗ್ ಮಾಡಿದಾಗ ಎಲ್ಲಾ ಉತ್ತರವನ್ನು ನಿಮಗೆ ಕೊಡುತ್ತೇವೆ.

ಅಧ್ಯಕ್ಷರು: ಈಗ ನರೇಂದ್ರಬಾಬುರವರೇ, ಕಟ್ಟಾಸುಬ್ರಹ್ಮಣ್ಯ ನಾಯ್ಡುರವರು ಮಹಾನಗರಪಾಲಿಕೆಯ ಸಚಿವರು ಇದ್ದಾರೆ, ಅಲ್ಲಿ ಕರೆದು ಮಾತನಾಡುತ್ತೇನೆಂದು ಅವರು ಹೇಳಿದರು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ತೆಗೆದುಕೊಳ್ಳೋಣ.

ಶ್ರೀ ರಾಮಚಂದ್ರ ಗೌಡ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಸದಸ್ಯರ ಪ್ರಶ್ನೆ...

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಇರಿ, ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ನೆ.ಲ.ನರೇಂದ್ರಬಾಬು: ನರ್ಸಿಂಗ್ ಹೋಂಗಳು ದುಬಾರಿಯಾಗುತ್ತಿವೆ, ಬಡವರು ಅಲ್ಲಿಗೆ ಹೋಗಲಿಕ್ಕಾಗುತ್ತಿಲ್ಲ. ಆಗಾಗ ಈ ಬಗ್ಗೆ ಸದನದಲ್ಲಿ ಕೇಳುತ್ತಿದ್ದೇವೆ. ಇದುವರೆಗೂ ಸಹ ಉತ್ತರ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ವೈದ್ಯಕೀಯ ಶಿಕ್ಷಣ ಸಚಿವರು ಅದಕ್ಕೆ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಕೇಳಿ.

(ಗೊಂದಲ)

ಅಧ್ಯಕ್ಷರು: ಕಟ್ಟಾಸುಬ್ರಹ್ಮಣ್ಯನಾಯ್ಡುರವರೇ ಸಮಾಧಾನ ತಂದುಕೊಳ್ಳಿ, ರಾಮಚಂದ್ರ ಗೌಡರು ಮಾತನಾಡುತ್ತಿದ್ದಾರೆ. ಯಾರೂ ಮಾತನಾಡಬೇಡಿ. ಎಲ್ಲರೂ ಒಮ್ಮೆಲೆ ಮಾತನಾಡಿದರೆ ಹೇಗೆ?

ಶ್ರೀ ಬಿ.ರಮಾನಾಥ ರೈ: ಅಶೋಕರವರು ಸಹ ಮೂರು ವರ್ಷ ಆರೋಗ್ಯ ಮಂತ್ರಿಗಳಾಗಿದ್ದರು. ನಿಮ್ಮ ಸರ್ಕಾರಕ್ಕೆ ಜವಾಬ್ದಾರಿ ಇರಬೇಡವೇ. ಅಶೋಕರವರು ಸಹ ಹೆಲ್ತ್ ಮಿನಿಸ್ಟರ್ ಆಗಿರಲಿಲ್ಲವೇ ಈಗ ಏಕೆ 5 ತಿಂಗಳು ಆದರೂ ಕ್ರಮ ಕೈಗೊಂಡಿಲ್ಲ.

ಅಧ್ಯಕ್ಷರು: ರಮಾನಾಥ ರೈರವರು ಕುಳಿತುಕೊಳ್ಳಿ.

ಶ್ರೀ ರಾಮಚಂದ್ರ ಗೌಡ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಹ್ಯಾರಿಸ್‌ರವರ ಪ್ರಶ್ನೆ ಬೆಂಗಳೂರು ನಗರಸಭೆಯ ಆಡಳಿತದಲ್ಲಿ ಬರುವಂಥ ಆಸ್ಪತ್ರೆಗಳಿಗೆ ಸಂಬಂಧಿಸಿದ್ದು ಆ ಆಸ್ಪತ್ರೆಗಳು ನಮ್ಮ ಆರೋಗ್ಯ ಇಲಾಖೆಗೆ

ಬರುವುದಿಲ್ಲ. ಆದ್ದರಿಂದ ಪ್ರಶ್ನೆಯನ್ನು ನಗರಸಭೆ ಪಾಲಿಕೆಗೆ ವರ್ಗಾಯಿಸಿರುವುದರಿಂದ ಅಲ್ಲಿಂದ ನಿಮಗೆ ಉತ್ತರ ಬರುತ್ತದೆ ಎನ್ನುವ ಮಾತು ಅಷ್ಟೇ ಇನ್ನೇನಿಲ್ಲ.

ಶ್ರೀ ನೆ.ಲ.ನರೇಂದ್ರಬಾಬು: ಆರೋಗ್ಯ ಇಲಾಖೆಯ ವ್ಯಾಪ್ತಿಗೆ ಕೆ.ಸಿ.ಜಿ.ಆಸ್ಪತ್ರೆ ಬರುವುದಿಲ್ಲವೆ?

(ಗೊಂದಲ)

ಅಧ್ಯಕ್ಷರು: ನಗರಾಭಿವೃದ್ಧಿ ಇಲಾಖೆಯು ಸಚಿವರಿಂದ ಉತ್ತರ ಕೊಡಿಸುತ್ತೇನೆ ಬಿಡಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಆರೋಗ್ಯ ಸಚಿವರು ಕೆ.ಸಿ.ಜಿ. ಆಸ್ಪತ್ರೆ ಆರೋಗ್ಯ ಇಲಾಖೆಗೆ ಬರುತ್ತದೆಂದು ಹೇಳಿದ್ದಾರೆ. ಹ್ಯಾರಿಸ್ರವರ ಪ್ರಶ್ನೆ ನಗರಾಭಿವೃದ್ದಿ ಇಲಾಖೆಗೆ ವರ್ಗಾವಣೆ ಆಗಿದೆ. ಅಲ್ಲಿಂದಲೇ ಉತ್ತರ ಸಿಗುತ್ತದೆ.

ಶ್ರೀ ಶ್ರೀರಾಮುಲು (ಮಾನ್ಯ ಆರೋಗ್ಯ ಸಚಿವರು): ಕೆ.ಸಿ.ಜನರಲ್ ಆಸ್ಪತ್ರೆ ಆರೋಗ್ಯ ಇಲಾಖೆಗೆ ಬರುತ್ತದೆಂದು ಸ್ಪಷ್ಟವಾಗಿ ಹೇಳಿದ್ದೇನೆ.

ಅಧ್ಯಕ್ಷರು: ನಿಮ್ಮ ಪ್ರಶ್ನೆ ನಗರಾಭಿವೃದ್ಧಿ ಇಲಾಖೆಗೆ ಬರುತ್ತದೆ, ಅಲ್ಲಿಂದ ನಿಮಗೆ ಉತ್ತರ ಕೊಡಿಸುತ್ತೇನೆ ಧ್ರುವನಾರಾಯಣರವರೇ ನಿಮ್ಮದೇನು ಹೇಳಿ. ಶ್ರೀರಾಮುಲುರವರೇ ಒಂದು ಸಾರಿ ಚಾಮರಾಜನಗರ ಜಿಲ್ಲೆಗೆ ಹೋಗಿ ಬಂದುಬಿಡಿ, ಅಲ್ಲಿಗೆ ಯಾರೂ ಹೋಗುತ್ತಿಲ್ಲ, ನಾನು ಕಂದಾಯ ಸಚಿವನಾಗಿದ್ದಾಗ ಹೋಗಿ ಬಂದಿದ್ದೇನೆ. ನೀವು ಒಂದು ಸಾರಿ ಹೋಗಿ ಬಂದುಬಿಡಿ.

ಶ್ರೀ ಶ್ರೀರಾಮುಲು (ಆರೋಗ್ಯ ಸಚಿವರು): ಆಯಿತು.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನೆ, ಸಾಂಖ್ಯಿಕ ಸಚಿವರು): ದಿನಾಂಕ 26.02.2009 ರಂದು 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 49 ಪ್ರಶ್ನೆಗಳಿಗೆ ಪೈಕಿ 44 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅನುಬಂಧ-1

ಅಧ್ಯಕ್ಷರು: ಈಗ ಸಿದ್ಧರಾಮಯ್ಯನವರು 2008-09ನೇ ಸಾಲಿನ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ವರದಿಯನ್ನು ಒಪ್ಪಿಸುವುದು.

ಶ್ರೀ ಎ.ಬಿ.ರಮೇಶಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ನನ್ನ ಪ್ರಶ್ನೆಗೆ ಉತ್ತರವೇ ಬಂದಿಲ್ಲ ಸರ್.

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ನಾಳೆ ಬೆಳಿಗ್ಗೆ ಬರುತ್ತದೆ. Held over Question ನಲ್ಲಿ ಬರುತ್ತದೆ, ಇವತ್ತಿಲ್ಲ. ಇವತ್ತಿನ ಪ್ರಶ್ನೋತ್ತರದಲ್ಲಿ ನಿಮ್ಮ ಪ್ರಶ್ನೆಯಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ಅವರು ಕೇಳುತ್ತಿರುವುದು ಇಷ್ಟೆ, ಮೊನ್ನೆ ಲೋಕೋಪಯೋಗಿ ಇಲಾಖೆ ಸಚಿವರು ನಾಳೆ ಬೆಳಿಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಅಧಿಕಾರಿಗಳಿಂದ ಉತ್ತರವನ್ನು ತರಿಸಿ ಕೆ-ಶಿಪ್-2 ನಲ್ಲಿ ಮೊದಲನೇ ಹಂತದಲ್ಲಿ 585 ಕಿ.ಮೀ. ರಸ್ತೆಯಾಗಿತ್ತು. ಅದರಲ್ಲಿ ಕೆಲವು ಬದಲಾವಣೆ ಮಾಡಿದ್ದಾರೆ ಎಂದು ನಾನು ಮೊನ್ನೆ ರೈಸ್ ಮಾಡಿದ್ದೆ. ಅದಕ್ಕೆ ನಾಡಿದ್ದು ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದರು. ಅದನ್ನು Held over questionನಲ್ಲಿ ಮಾಡಿರುವಿರಾ?

ಅಧ್ಯಕ್ಷರು: ಹೌದು, ನಾಳೆ ಬೆಳಿಗ್ಗೆ ಉತ್ತರ ಕೊಡಿಸುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ: ಆಯಿತು.

ಅಧ್ಯಕ್ಷರು: ಈಗ ಸಿದ್ದರಾಮಯ್ಯನವರು 2008-09ನೇ ಸಾಲಿನ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಮೊದಲನೇ ಹಾಗೂ ಎರಡನೇ ವರದಿಯನ್ನು ಒಪ್ಪಿಸುವುದು.

2.<u>ವರದಿಯನ್ನೊಪ್ಪಿಸುವುದು</u>

ಶ್ರೀ ಸಿದ್ದರಾಮಯ್ಯ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಅರಣ್ಯ, ಪರಿಸರ, ಜೀವಿಶಾಸ್ತ್ರ ಇಲಾಖೆಗೆ ಸಂಬಂಧಿಸಿದ ಮೊದಲನೆ ಹಾಗೂ ಎರಡನೇ ವರದಿಗಳನ್ನು ಸದನದಲ್ಲಿ ನಿಮ್ಮ ಅನುಮತಿಯೊಡನೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. <u>ವಿತ್ತೀಯ ಕಾರ್ಯಕಲಾಪಗಳು</u>

2009-10ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಅಧ್ಯಕ್ಷರು: ಈಗ ಸಿದ್ಧರಾಮಯ್ಯನವರು ಬಜೆಟ್ ಮೇಲೆ ಮಾತನಾಡಲಿಕ್ಕೆ ಪ್ರಾರಂಭ ಮಾಡಬಹುದು.

ಶ್ರೀ ಸಿದ್ದರಾಮಯ್ಯ: ಆಗಬಹುದು. ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಹಣಕಾಸಿನ ಅಧಿಕಾರಿಗಳು ಇಲ್ಲ, ಮಂತ್ರಿಗಳು ಇಲ್ಲ. ಇದು ಬಜೆಟ್ ಸೆಷನ್.

ಅಧ್ಯಕ್ಷರು: ಮುಖ್ಯಮಂತ್ರಿಗಳು ಬಂದರು ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ನೀವು ಮಾತನಾಡುವುದನ್ನು ಕೇಳಲಿಕ್ಕೆ ನಾನು ಬಂದಿದ್ದೇನೆ. ನೀವು ಮಾತನಾಡುವಾಗ

ನಾನು ಬರದೆ ಇನ್ನಾವಾಗ ಬರಬೇಕು. ನಿಮ್ಮ ಅನುಭವ ಹಾಗೂ ಸಲಹೆಗಳನ್ನು ಕೇಳುವುದಕ್ಕೋಸ್ಕರ ನಾನು ಬಂದಿದ್ದೇನೆ.

ಶ್ರೀ ಸಿದ್ಧರಾಮಯ್ಯ(ವರುಣ): ಸಂತೋಷ. ನೀವು ಬಂದಿರುವುದರಿಂದ ನನಗೆ ಹುರುಪು ಸ್ವಲ್ಪ ಜಾಸ್ತಿಯಾಗುತ್ತದೆ. ಹಣಕಾಸಿನ ಸಚಿವರು ಇದ್ದರೆ ನಮಗೆ ಹೆಚ್ಚು ಉತ್ಸಾಹ ಬರುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಬಹಳ ಉತ್ಸಾಹದಲ್ಲಿರುವುದರಿಂದ ಹೊಸ ಹೊಸ ಸಲಹೆಗಳು ಬರುತ್ತವೇನೋ ಎಂದು ನಾನಂದುಕೊಂಡಿದ್ದೇನೆ.

ಶ್ರೀ ಸಿದ್ಧರಾಮಯ್ಯ (ವರುಣ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹಾಗು ಹಣಕಾಸಿನ ಸಚಿವರಾದಂಥ ಮಾನ್ಯ ಎಡಿಯೂರಪ್ಪನವರು 2009-10 ನೇ ಸಾಲಿನ ಮುಂಗಡ ಪತ್ರವನ್ನು ಈ ತಿಂಗಳೂ 20ನೇ ತಾರೀಖು ಸದನದ ಮುಂದೆ ಮಂಡಿಸಿದ್ದಾರೆ. ಈಗಾಗಲೇ ಈ ಮುಂಗಡ ಪತ್ರದ ಮೇಲೆ ಸಾರ್ವಜನಿಕವಾಗಿ ಚರ್ಚೆ ಕೂಡ ಪ್ರಾರಂಭವಾಗಿ, ಸಾರ್ವಜನಿಕ ಅಭಿಪ್ರಾಯಗಳು ಕೂಡ ಬಂದಿವೆ. ಪತ್ರಿಕೆಯವರು ಮತ್ತು ಟಿ.ವಿ. ಮಾಧ್ಯಮದವರು ತಮ್ಮ ಅಭಿಪ್ರಾಯಗಳನ್ನು ಈ ಮುಂಗಡ ಪತ್ರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸಾರ್ವಜನಿಕವಾಗಿ ಬಂದಿರುವಂಥ ಟೀಕೆ ಟಿಪ್ಪಣಿಗಳು, ಅಭಿಪ್ರಾಯಗಳನ್ನು ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಸಂಪಾದಕೀಯಗಳನ್ನು, ಸಂಪಾದಕೀಯದಲ್ಲಿ ಪತ್ರಿಕಾ ಸಂಪಾದಕರುಗಳು ಅವರು ವ್ಯಕ್ತಪಡಿಸಿರುವಂಥ ಅಭಿಪ್ರಾಯಗಳನ್ನು ಇಲ್ಲಿ ಸದನದ ಗಮನಕ್ಕೆ ತಂದಿದ್ದಾರೆ. ಹಾಗಾಗಿ ಮತ್ತೆ ಅದನ್ನೆಲ್ಲಾ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ, ಸಮಯ ವ್ಯರ್ಥವಾಗುತ್ತದೆ, ಆ ಕಾರಣಕೋಸ್ಕರವಾಗಿ ಎಲ್ಲಾ ಪತ್ರಿಕೆಗಳಲ್ಲಿ ಬಂದಿರುವಂಥ ಅಭಿಪ್ರಾಯಗಳು ಮತ್ತು ಸಂಪಾದಕೀಯಗಳನ್ನು ಅಲ್ಲಿ ಬಹಳ ಸ್ಪಷ್ಟವಾಗಿ ಎಲ್ಲರೂ ಹೇಳಿದ್ದಾರೆ. ಮುಂದಿನ ವರ್ಷಕ್ಕೆ ಮಂಡಿಸಿರುವಂಥ ಈ ಆಯವ್ಯಯ,ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮುಂದಿನ ಚುನಾವಣೆಯಲ್ಲಿ ಗೆಲ್ಲಬೇಕೆಂಬ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಮಂಡಿಸಿರುವ ಆಯವ್ಯಯವೇ ಹೊರತು ರಾಜ್ಯದ ಬೆಳವಣಿಗೆಯ ದೃಷ್ಟಿಯಿಂದಲೀ ಅಥವಾ ದೂರದೃಷ್ಟಿಯಿಂದ ಕೂಡಿರುವಂಥ ಆಯವ್ಯಯವಾಗಲೀ ಅಲ್ಲ. ಇವತ್ತು ಆರ್ಥಿಕ ಬಿಕ್ಕಟ್ಟು ಜಗತ್ತು, ರಾಷ್ಟ್ರ ಮತ್ತು ರಾಜ್ಯದಲ್ಲಿ ಆಗಿದೆ ಎಂದು ಅವರೇ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಆರ್ಥಿಕ ಬಿಕ್ಕಟ್ಟಿಗೆ ಪರಿಹಾರಗಳನ್ನು ಪಡೆಯುವಂಥದ್ದಾಗಲೀ, ಈ ಬಜೆಟ್ ರಾಜ್ಯದ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುವಂಥದ್ದಾಗಲೀ, ಯಾವುದೂ ಇದರಲ್ಲಿ ಇಲ್ಲ. ಈ ಬಜೆಟ್ಟಿನಲ್ಲಿ ಒಂದು ಗುರಿಯೇ ಇಲ್ಲ.

ಮಾನ್ಯ ಯಡಿಯೂರಪ್ಪನವರು ಈಗ 4ನೇ ಆಯವ್ಯಯ ಮಂಡಿಸುತ್ತಿದ್ದಾರೆ. ಬಹುಶಃ ಅವರು ಈ ಆಯವ್ಯಯದಲ್ಲಿ ಇವತ್ತಿನ ಆರ್ಥಿಕ ಬಿಕ್ಕಟ್ಟಿನ ಸಮಸ್ಯೆಗಳಿಗೆ ಪರಿಹಾರ ಕೊಡುತ್ತಾರೆ ಎನ್ನತಕ್ಕಂಥ ಅಂದಾಜು ಇತ್ತು ಹಾಗೂ ಜನರಲ್ಲಿ ಆ ಬಗ್ಗೆ

ನಿರೀಕ್ಷೆ ಕೂಡ ಇತ್ತು. ಆ ನಿರೀಕ್ಷೆ ಸಂಪೂರ್ಣವಾಗಿ ಹುಸಿಯಾಗಿದೆ. ಕೇಂದ್ರ ಸರ್ಕಾರದ ಆಯವ್ಯಯ ಮಂಡನೆಯಾದಾಗ ಮಾನ್ಯ ಯಡಿಯೂರಪ್ಪನವರು ಈ ಮಧ್ಯಂತರ ಆಯವ್ಯಯದಲ್ಲಿ ಯಾವುದೇ ಗೊತ್ತು-ಗುರಿ ಇಲ್ಲ, ಇದು ಒಂದು ಟೊಳ್ಳು ಬಜೆಟ್ ಮತ್ತು ಆರ್ಥಿಕ ಬಿಕ್ಕಟಿಗೆ ಯಾವುದೇ ಪರಿಹಾರಗಳನ್ನು ಮಾನ್ಯ ಪ್ರಣಬ್ ಮುಖರ್ಜಿಯವರು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಕೇಂದ್ರ ಸರ್ಕಾರದ ಆಯವ್ಯಯ ದೇಶದ ದೃಷ್ಟಿಯಿಂದ ಒಳ್ಳೆಯ ಆಯವ್ಯಯ ಅಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಬಹುಶ: ಕೇಂದ್ರದವರು ಮಂಡಿಸಿದ ಮೇಲೆ ಇವರು ಮಂಡಿಸಿರತಕ್ಕಂಥ ಆಯವ್ಯಯ ಇದು. ಕೇಂದ್ರ ಸರ್ಕಾರದ ಆಯವ್ಯಯ ಮಂಡನೆ ಆದಮೇಲೆ ಇವರು ಮಂಡಿಸಿರತಕ್ಕಂಥಾದ್ದು. ಬಹುಶಃ ಅವರು ಹೇಳೀರತಕ್ಕಂಥ ಅಭಿಪ್ರಾಯಗಳನ್ನು ಗಮನದಲ್ಲಿ ಇಟ್ಟುಕೊಂಡು ಕೇಂದ್ರಸರ್ಕಾರದ ಆಯವ್ಯಯದಲ್ಲಿ ಏನೇನು ಅಭಿಪ್ರಾಯಗಳನ್ನು ಅವರು ವ್ಯಕ್ತಮಾಡಿದ್ದಾರೆ, ಅವನ್ನೆಲ್ಲಾ ಇವರ ಆಯವ್ಯಯದಲ್ಲಿ ಆ ತರಹದ ಟೀಕೆಗಳಿಗೆ ಅವಕಾಶ ಇಲ್ಲದೇ ಇರುವಂತೆ ಇವರು ಮುಂಗಡ ಪತ್ರವನ್ನು ಮಂಡಿಸುತ್ತಾರೆ ಎಂದು ನನಗೂ ನಿರೀಕ್ಷೆ ಇತ್ತು. ಆದರೆ, ಆ ನಿರೀಕ್ಷೆ ಹುಸಿಯಾಗಿದೆ, ಆ ತರಹ ಈ ಆಯವ್ಯಯದಲ್ಲಿ ಎಲ್ಲಿ ನೋಡಿದರೂ ಕೂಡ ಇದು ಕಾಣಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು 2008-09 ರ ಆಯವ್ಯಯದಲ್ಲಿ ಅವರು ನಿರೀಕ್ಷೆ ಮಾಡಿದಂತಹ ತೆರಿಗೆ ಸ್ವೀಕೃತಿಗಳು ಮತ್ತು ಅವರು ಏನು ಖರ್ಚು ಮಾಡುತ್ತಾರೆ ಎಂದು forecast ಮಾಡಿದ್ದಾರೆ, 2008-09ರ ಆಯವ್ಯಯದಲ್ಲಿ ನೀವು ಅದನ್ನು ನೋಡಿದರೆ revenue receipt 4,423 ಕೋಟಿ ರೂಪಾಯಿಗಳ budget estimates ಇದೆ, ಇವತ್ತು revised estimates ಇದೆ. 4,423 ಕೋಟಿ ಕಡಿಮೆಯಾಗುತ್ತದೆ ಎಂದು ಹೇಳೀ ಅವರು ಮುಂದಿನ ವರ್ಷದ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ರೆವಿನ್ಯೂ ವಿಷಯದ ಸೈಡ್‌ನಲ್ಲಿ ಹೇಳಿದ್ದಾರೆ. ಹಾಗೆ capital receipts ನಲ್ಲಿ, miscellaneous capital receipts ನಲ್ಲಿ, ಲೆಕ್ಕ ಇಟ್ಟುಕೊಂಡು ಲೆಕ್ಕ ತೋರಿಸಿದ್ದಾರೆ. ಆ miscellaneous receipts ಹಾಗೂ capital receipts ಎಂದು ಏನು ಇದೆ, ಅದರಲ್ಲಿ ಜಮೀನು ಮಾರಿ ರಾಮಸ್ವಾಮಿಯವರ ಸಮಿತಿಯವರು ಪತ್ತೆ ಹಚ್ಚಿದಂಥ ಜಮೀನುಗಳನ್ನು ಮಾರಿದರೆ, ನಮಗೆ ಈ ವರ್ಷ ಮೂರು ಸಾವಿರ ಕೋಟಿ ರೂಪಾಯಿಗಳು ಬರುತ್ತದೆ ಎಂದು ಅಂದಾಜು ಮಾಡಿಕೊಂಡಿದ್ದರು. ಆದರೆ, ಇಲ್ಲಿಯವರೆಗೆ ಅವರು half yearly report ಅನ್ನು ಬೆಳಗಾಂನಲ್ಲಿ ಏನು ಮಂಡಿಸಿದ್ದಾರೆ, ಅದರ ಪ್ರಕಾರ ಬರೀ 138 ಕೋಟಿ ರೂಪಾಯಿಗಳು ಮಾತ್ರ ಸಂದಾಯವಾಗಿದೆ. ಬರೀ 138 ಕೋಟಿ ರೂಪಾಯಿಗಳು, ಅಂದರೆ, revenue receipts ನಲ್ಲಿ 4,423 ಕೋಟಿ ಇಲ್ಲ. ಅದು ಅಂದಾಜು. ನನ್ನ ಪ್ರಕಾರ ಅದಕ್ಕಿಂತಲೂ ಕಡಿಮೆಯಾಗಬಹುದು. ನನ್ನ ಪ್ರಕಾರ 4,423 ಕೋಟಿ ನಮಗೆ revenue receipts ನಲ್ಲಿ ತೆರಿಗೆ ಬರುವುದಿಲ್ಲ ಎಂದು ಏನು

ಹೇಳಿದ್ದಾರೆ. ಅದಕ್ಕಿಂತಲೂ ಜಾಸ್ತಿ ಆಗಬಹುದು. It may be five thousand crores. ಏಕೆಂದರೆ, ಇನ್ನೂ ಮೂರು ತಿಂಗಳಿಗೆ ಇವರಿಗೆ ಲೆಕ್ಕವಿಲ್ಲ. ಜನವರಿ, ಫೆಬ್ರವರಿ, ಮಾರ್ಚ್‌ನಲ್ಲಿ ಎಷ್ಟು ಬರುತ್ತದೆ ಎಂದು ಅಂದಾಜಿನ ಮೇಲೆ ಹೇಳಿದ್ದಾರೆ. ಪ್ರತಿ ತಿಂಗಳು ಬರತಕ್ಕಂಥ ತೆರಿಗೆ ಪ್ರಮಾಣ ನೋಡಿದರೆ, it will be around five thousand crores, ಅದು 4,423 ಕೋಟಿ ರೂಪಾಯಿಗಳು ಅಷ್ಟೇ ಅಲ್ಲ. ಇದು 4,423 ಕೋಟಿ ಮತ್ತು capital receipts ನಲ್ಲಿ ಸುಮಾರು 8,862 ಕೋಟಿ ಇಷ್ಟು ಹಣ. ಸುಮಾರು 7,200 ಕೋಟಿ ಅಷ್ಟು ಹಣ ಇವರಿಗೆ ಈ ವರ್ಷದ ಆಯವ್ಯಯದಲ್ಲಿ ಬಂದಿಲ್ಲ. ಹಣ ವಸೂಲು ಮಾಡುವುದರಲ್ಲಿ ಬಹಳ ಹಿಂದೆ ಬಿದ್ದಿದ್ದಾರೆ. ಆದರೆ, 7,004 ಕೋಟಿ ರೂಪಾಯಿಗಳ ಕೊರತೆ ಆಗಿದೆ. ಆ revenue receipts ನಲ್ಲಿ capital receipts ಮತ್ತು ನಲ್ಲಿ ಸುಮಾರು more than 10% ಇವತ್ತು receipts ಕಡಿಮೆಯಾಗುತ್ತಿದೆ. ಇದರ ಪರಿಣಾಮ ಏನಾಗುತ್ತದೆ ಎಂದರೆ, ಇಲ್ಲಿ social services ಗಳಿಗೆ, ಮತ್ತು ಆರ್ಥಿಕ ಸೇವೆಗಳಿಗೆ ಹಣ ಖರ್ಚು ಮಾಡುವಂಥಾದ್ದು ಬಹಳ ಗಣನೀಯವಾಗಿ ಕಡಿಮೆಯಾಗುತ್ತದೆ. ಹಾಗಾಗಿ, ಇವರು social sector ಗಳಲ್ಲಿ ಮತ್ತು economic sector ಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕಡಿತವನ್ನು ಮಾಡಿದ್ದಾರೆ. ಅದಕ್ಕೆ 2008–09 ರಲ್ಲಿ GDP growth 5.5. ಆಗಬಹುದು ಅದು ಇನ್ನೂ ಕಡಿಮೆಯಾಗಬಹುದು. ಬೆಳವಣಿಗೆಯಲ್ಲಿ ಆಗುತ್ತದೆ, ಆಸ್ತಿ ನಿರ್ಮಾಣವಾಗಬೇಕು, ಆಹಾರದ ಉತ್ಪಾದನೆ ಜಾಸ್ತಿಯಾಗಬೇಕು, ಕೈಗಾರಿಕೆ ಉತ್ಪನ್ನಗಳು ಜಾಸ್ತಿಯಾಗಬೇಕು, ಸೇವಾ ವಲಯ ಕ್ಷೇತ್ರದಲ್ಲಿ ಬೆಳವಣಿಗೆಯಾಗಬೇಕು, ಇವು ಏನು ಆಗದೇ ರಾಜ್ಯದ ಆಸ್ತಿ ಹೇಗೆ ಬೆಳವಣಿಗೆಯಾಗುತ್ತದೆ? ಕಳೆದ ವರ್ಷ 11% ಬೆಳವಣಿಗೆಯಾಗಿದೆ ಎಂದು ಹೇಳಿದರು. 2007–08ರಲ್ಲಿ 11% ಬೆಳವಣಿಗೆಯಾಗಿದೆ ಎಂದು ಹೇಳಿದರು. 2008–09ರಲ್ಲಿ ಅವರು 5.5.%ಗೆ ಬಂದಿದ್ದಾರೆ. ಇವರು ಏನು ಕೇಂದ್ರ ಸರ್ಕಾರದ ಆಯವ್ಯಯವನ್ನು ಟೀಕೆ ಮಾಡಿದರು, ಅಲ್ಲಿ ಇಷ್ಟೆಲ್ಲಾ ಆರ್ಥಿಕ recession ಇದೆ, ಬಿಕ್ಕಟ್ಟು ಇದೆ ಎಂದರೂ ಕೂಡ 7.1% ಆರ್ಥಿಕ ಬೆಳವಣಿಗೆಯಾಗಬಹುದು ಎಂದು ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ, ಎಷ್ಟು ಇತ್ತು. 2007–08ರಲ್ಲಿ 9.1% ಇತ್ತು. because of the Financial crisis ಅದು 7.1% ಎಂದು ಅವರು ಕೂಡ ಅಂದಾಜು ಮಾಡಿದ್ದಾರೆ. ಇವರು 5.5 ಎಂದು ಹೇಳಿದ್ದಾರೆ. ನೀವು 7,200 ಕೋಟಿ ರೂಪಾಯಿ ಖರ್ಚು ಮಾಡದೇ, ವ್ಯವಸಾಯಕ್ಕೆ ಹಣ ಖರ್ಚು ಮಾಡಿ, ನೀರಾವರಿಗೆ ಹಣ ಖರ್ಚು ಮಾಡಿ, ವಿದ್ಯುಚ್ಛಕ್ತಿಗೆ ಹಣ ಖರ್ಚು ಮಾಡಿ, Rural Development ಗೆ ಹಣ ಖರ್ಚು ಮಾಡಿ, ಶಿಕ್ಷಣಕ್ಕೆ, ಆರೋಗ್ಯಕ್ಕೆ, social welfare Department Health ಗೆ ಇಷ್ಟೆಲ್ಲಾ ಹಣವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಖರ್ಚು

ಮಾಡಿದ್ದೀರಿ. ಇವರು ಬಜೆಟ್‌ನ್ನು ಮಾತ್ರ ಬಹಳ ದೊಡ್ಡದಾಗಿ ಜನರ ಮುಂದೆ ಇಟ್ಟಿದ್ದಾರೆ. 2006–07ರಲ್ಲಿ, ಬಜೆಟ್ plan size 16,166 ಕೋಟಿ ಇತ್ತು. 2007–08ಕ್ಕೆ 17,782 ಕೋಟಿ ಆಯಿತು. ಅದು ಸ್ವಲ್ಪ ವಾಸ್ತವಿಕ ನೆಲಗಟ್ಟಿನಲ್ಲಿ ಇರತಕ್ಕಂಥ ಬಜೆಟ್ ಆಗಿತ್ತು. 16,166 ಕೋಟಿಯಿಂದ, 2007–08 ಕ್ಕೆ 17,782 ಕೋಟಿಗೆ ಹೆಚ್ಚಿಸಿ, ಸುಮಾರು 1,000 ಕೋಟಿ ಹೆಚ್ಚು ಮಾಡಿದರು, ಹಾಗಾಗಿ, ಅದು realistic ಆಗಿ ಇತ್ತು ಎಂದು ಹೇಳಬಹುದು. 2007–08 ನೇ ಸಾಲಿನಲ್ಲಿ, 17,782 ಕೋಟಿ ರೂಪಾಯಿಗಳಲ್ಲಿ 17,200 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಅದರಲ್ಲೂ 500 ಕೋಟಿ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಲು ಸಾಧ್ಯವಾಗಲಿಲ್ಲ. 2008–09 ರ plan size 45–50% ಬೆಳೆದಿದೆ ಎಂದು ಹೇಳಿ, 17,782 ಕೋಟಿಯಿಂದ 25,952 ಕೋಟಿ ರೂಪಾಯಿಗೆ ನಿಗದಿ ಮಾಡಿದರು ಅಂದರೆ, ಸುಮಾರು 26 ಸಾವಿರ ಕೋಟಿ ರೂಪಾಯಿಗಳನ್ನು plan size ದೊಡ್ಡದಾಯಿತು. ರಾಜ್ಯದ ಬೆಳವಣಿಗೆಗೋಸ್ಕರ ಎಷ್ಟೊಂದು ಹಣವನ್ನು ತೊಡಗಿಸುತ್ತಿದ್ದಾರೆ, ಅದರಿಂದ ರಾಜ್ಯ ಬೆಳವಣಿಗೆಯಾಗುತ್ತದೆ ಎಂದು ಜನರು ನಿರೀಕ್ಷೆ ಮಾಡಬೇಕು. 2008–09 ರಲ್ಲಿ ಬಹಳ unprecedent ಆಗಿ ರಾಜ್ಯದ ಬೆಳವಣಿಗೆಯಾಗುತ್ತದೆ. ಕಾರಣ ಸುಮಾರು 8 ಸಾವಿರ ಕೋಟಿಗೂ ಹೆಚ್ಚಾಗಿ ನಾವು plan size ನಲ್ಲಿ ಹಣ ಖರ್ಚು ಮಾಡುತ್ತಿದ್ದೇವೆ, ಸುಮಾರು 8 ಸಾವಿರ ಕೋಟಿ ಒಂದೇ ವರ್ಷದಲ್ಲಿ ಖರ್ಚು ಮಾಡುವುದರಿಂದ ರಾಜ್ಯದ ಬೆಳವಣಿಗೆ ಬಹಳ ವೇಗವಾಗಿ ಹೋಗುತ್ತದೆ ಎಂದು ಇವರು ಭ್ರಮ ಲೋಕದಲ್ಲಿ ಈ ತರಹ ಸೃಷ್ಟಿ ಮಾಡಿಕೊಂಡರು. ರಾಜ್ಯದ ಜನತೆಗೂ ಆಶಾ ಗೋಪುರವನ್ನು ಕಟ್ಟಿದರು. ಆದರೆ, ಇವರು 25,952 ಕೋಟಿಗೆ ಸುಮಾರು 22 ಸಾವಿರ ಕೋಟಿ ಖರ್ಚಾಗಬಹುದೆಂದು ಅವರು ನಿರೀಕ್ಷೆ ಮಾಡಿದ್ದರು. ಆದರೆ, ಮೊನ್ನೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಡಿಸಂಬರ್‌ವರೆಗೆ 9,500 ಕೋಟಿ ರೂಪಾಯಿ ಖರ್ಚು ಮಾಡದೇ ಇರುವವರು ಇನ್ನು ಮೂರು ತಿಂಗಳಿನಲ್ಲಿ 13 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆಯೇ ಎಂದು ಪ್ರಸ್ತಾಪ ಮಾಡಿದರು. ಖರ್ಚು ಮಾಡಲು ಯಾವ machineries ಇಟ್ಟುಕೊಂಡಿದ್ದೀರಿ? ಅದೇ machineries ಅಲ್ಲವೇ. ಖರ್ಚು ಮಾಡಲು ಹಣವೆಲ್ಲಿದೆ? ಬಳ್ಳಾರಿಯಿಂದ ಹಣ ತಂದರೂ ಆಗುವುದಿಲ್ಲ. ಗುಲ್ಬರ್ಗಾದಿಂದ ಹಣ ತಂದರೂ ಆಗುವುದಿಲ್ಲ. 7,200 ಕೋಟಿ ರೂಪಾಯಿ ಕಣ್ಣಿಗೆ ಕಾಣುವ ಹಾಗೆಯೇ 10% ಖೋತಾ ಆಗುತ್ತಿದೆ. 47,215 ಕೋಟಿ ರೂಪಾಯಿ ವಿಶೇಷವಾಗಿ ತೆರಿಗೆ ವಸೂಲು ಮಾಡುವುದರಿಂದ ಬರುತ್ತದೆ ಎಂದು ಲೆಕ್ಕ ಹಾಕಿದ್ದರು. ಅದನ್ನು ಈಗ revised estimate ನಲಿ cut-down ಮಾಡಿದ್ದೀರಿ. 25 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಲು ಹಣ ಎಲ್ಲಿಂದ ಬರುತ್ತದೆ? ಹಣವನ್ನು ಪ್ರಿಂಟ್ ಮಾಡಲು ಸಾಧ್ಯವೇ? ಹೀಗೆ ಹೇಳಿದರೆ ಮಾನ್ಯ

ಮುಖ್ಯಮಂತ್ರಿಗಳು ಒಪ್ಪುವುದಿಲ್ಲ. ನಾವು ಎಲ್ಲಿಂದಲೋ ಹಣವನ್ನು ತೆಗೆದುಕೊಂಡು ಬರುತ್ತೇವೆಂದು ಹೇಳುತ್ತಾರೆ. ಎಲ್ಲಿಂದ ಹಣ ತರುತ್ತಾರೆ? CAG ಅವರು 2002-03 ರಿಂದ 2007-08ರ ಮಾರ್ಚ್ 31 ಕ್ಕೆ ಕೊನೆಗೊಂಡಂತೆ ಬಜೆಟ್ ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಒಂದು ಕಡೆ ಅವರು ಗಮನಿಸಿರುವ ಅಂಶವನ್ನು ಬಹಳ ಮುಖ್ಯವಾಗಿ ನಿಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರುತ್ತಿದ್ದೇನೆ. ಇವರು 2007-08 ನೇ ಸಾಲಿಗೆ 57,439 ಕೋಟಿ ಖರ್ಚುಮಾಡುತ್ತೇವೆಂದು forecast ಮಾಡಿದ್ದರು. ಹಣಕಾಸು ಇಲಾಖೆ ಕೊಟ್ಟಿದ್ದರು ಲೆಕ್ಕದ ಪ್ರಕಾರ ಆ ವರ್ಷ 57,439 ಕೋಟಿ ಖರ್ಚು ಮಾಡಬೇಕಾಗಿತ್ತು.

(ಈ ಹಂತದಲ್ಲಿ ಮಾನ್ಯ ಎನ್. ಯೋಗಿಶ್ ಭಟ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

But whereas Finance Department has released in the year 2007-08, Rs. 48,487 crores only. ಅಂದರೆ, ಇನ್ನೂ 8,942 ಕೋಟಿ ರೂಪಾಯಿಗಳು ಬಿಡುಗಡೆಯೇ ಆಗಿಲ್ಲ. CAG report ಪ್ರಕಾರ, ಸುಮಾರು 15 ಇಲಾಖೆಗಳಲ್ಲಿ 100 ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣ ಖರ್ಚಾಗದೇ ಉಳಿದಿದೆ. ಅಂದರೆ ಇವರು ಸಂಪನ್ಮೂಲವನ್ನು ಕ್ರೋಢೀಕರಣ ಮಾಡಿಲ್ಲ. ಅಷ್ಟರ ಮಟ್ಟಿಗೆ ಹಣ ಉಳಿದು ಹೋಯಿತು. ಈಗಲೂ ಕೂಡ 2008-09 ಕ್ಕೆ 25,952 ಕೋಟಿ plan size ಅಂದರೆ, ನನ್ನ ಪ್ರಕಾರ ಡಿಸೆಂಬರ್‌ವರೆಗೆ ಒಂಭತ್ತೂವರೆ ಸಾವಿರ ಕೋಟಿ ಮಾತ್ರ ಖರ್ಚಾಗಿದೆ. ಮೂರು ಸಾವಿರ ಕೋಟಿ ಪ್ರತಿ ತಿಂಗಳು ಖರ್ಚು ಮಾಡುತ್ತಾರೆ ಎಂದರೂ ಸುಮಾರು ಒಂಭತ್ತು ಸಾವಿರ ಕೋಟಿ ಖರ್ಚು ಮಾಡಬಹುದು. It will not cross more than Rs. 18,000/- crores. ಪ್ರಸ್ತುತ ವರ್ಷದ 26 ಸಾವಿರ ಕೋಟಿ plan ನಲ್ಲಿ ಸುಮಾರು 8 ರಿಂದ 10 ಸಾವಿರ ಕೋಟಿ ರೂಪಾಯಿ ಖೋತ ಆಗುತ್ತದೆ. ರಾಜ್ಯದ ಬೆಳವಣಿಗೆ, ಅಭಿವೃದ್ಧಿ ಆ ಪ್ರಮಾಣದಲ್ಲಿ ಕುಂಠಿತವಾಗುತ್ತದೆ. ಎಷ್ಟು ತೆರಿಗೆಗಳು ಕಡಿಮೆಯಾಗುತ್ತವೆ ಎಂದು ಹೇಳಿದರೂ ಕೂಡ, revised estimate ಮಾಡಿ ಇಟ್ಟಿದ್ದರೂ ಕೂಡ ಇವರು non- plan expenditure non-development expenditure ಅನ್ನು cut down ಮಾಡಲು ಏನಾದರೂ ಕ್ರಮವನ್ನೂ ತೆಗೆದುಕೊಂಡಿದ್ದಾರೆಯೇ? There are reports submitted to the Government. ರಾಮಸ್ವಾಮಿಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ, ವೀರಪ್ಪ ಮೊಯಿಲಿಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ, ನಾನು ಸಹ ಹಣಕಾಸಿನ ಮಂತ್ರಿಯಾಗಿದ್ದಾಗ ಹಣಕಾಸು ಇಲಾಖೆಗೆ ಒಂದು ರಿಪೋರ್ಟ್ ಕೊಟ್ಟಿದ್ದೇನೆ. ಎಲ್ಲೆಲ್ಲಿ non-development expenditure cut down ಮಾಡುಲು ಸಾಧ್ಯವಿದೆ, non-plan expenditure cut down ಮಾಡಲು ಸಾಧ್ಯವಾಗುತ್ತದೆ ಎನ್ನುವುದು ಆ report ನಲ್ಲಿ ಇರುತ್ತದೆ. ಇಂತಹ ಆರ್ಥಿಕ ಬಿಕ್ಕಟ್ಟಿನ

ಸನ್ನಿವೇಶದಲ್ಲೂ, ಆರ್ಥಿಕ ಬಿಕ್ಕಟ್ಟು ಇದೆ ಅದಕ್ಕೋಸ್ಕರ ನಮಗೆ ತೆರಿಗೆ ಕಡಿಮೆಯಾಯಿತು ಎಂದು ಕಾರಣಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. On the other hand, ಹಣಕಾಸು ಇಲಾಖೆಯಿಂದ ಏನು ಮಾಡಿದ್ದಾರೆ? non-development expenditure cut down ಮಾಡಲು ಏನು ಮಾಡಿದ್ದೇವೆ? ನೀವು ನೋಡಿ, general services ಖರ್ಚಾಗಿರುವುದರಲ್ಲಿ ಒಂದೂ ರೂಪಾಯಿಯು ಕಡಿಮೆಯಾಗಿಲ್ಲ. General service ನಲ್ಲಿ ಎಷ್ಟು forecast ಮಾಡಿತ್ತು ಅದಕ್ಕಿಂತ ಹೆಚ್ಚಾಗಿದೆ. ಸಂಬಳ, ಪಿಂಚಣಿ, ಬಡ್ಡಿ ಪಾವತಿ ಇವೆಲ್ಲವೂ non-plan expenditure ನಲ್ಲಿ ಬರುತ್ತದೆ. ಇವೆಲ್ಲವೂ ಕೂಡ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಾಗಿದೆಯೇ ಹೊರತು ಕಡಿಮೆ ಆಗಿಲ್ಲ. ಅದರ ಅರ್ಥ ಸಂಬಳ, ಪಿಂಚಣಿ, ಬಡ್ಡಿ ಕೊಡುವುದು, ಇವು ಯಾವುದರಲ್ಲೂ ಕೂಡ ಒಂದು ರೂಪಾಯಿ ಕಡಿಮೆ ಮಾಡಲು ಪ್ರಯತ್ನ ಮಾಡಿಲ್ಲ.

ಒಂದೇ ಒಂದು ರೂಪಾಯಿಯನ್ನೂ ಮಾಡಿಲ್ಲ. ಮತ್ತೆ ಹೇಗೆ ರಾಜ್ಯದ ಆರ್ಥಿಕ ಬೆಳವಣಿಗೆಯಾಗುತ್ತದೆ? ನಾವು ಅಭಿವೃದ್ಧಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇವೆ, ಬಹಳ ವೇಗವಾಗಿ ನಮ್ಮ ಬೆಳವಣಿಗೆ ಆಗುತ್ತಿದೆ. ನಮ್ಮ ಬೆಳವಣಿಗೆಯ ತಲಾ ಆದಾಯ ಮತ್ತು ರಾಜ್ಯದ ಬೆಳವಣಿಗೆ all India level ನಲ್ಲಿ 15 ಪ್ರಮುಖ ರಾಜ್ಯಗಳಿವೆ, ಅವು 7ನೇ ಸ್ಥಾನದಲ್ಲಿ ಯಡಿಯೂರಪ್ಪನವರು ಬರುವುದಕ್ಕೆ ಮುಂಚೆಯೂ ಇತ್ತು, ಈಗಳು ಅಲ್ಲಯೇ ಇದೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವ ಮುಂಚಿತವಾಗಿಯೂ ಮತ್ತು ಹಣಕಾಸು ಮಂತ್ರಿಯಾಗುವ ಮುಂಚಿವಾಗಿಯೂ ಅಲ್ಲಿಯೇ ಇತ್ತು. ಈಗಲೂ ಅಲ್ಲಿಯೇ ಇದೆ. ಅಂದರೆ, ಬೆಳವಣಿಗೆ ಎಲ್ಲಿದೆ? ಬೇರೆಲ್ಲಾ sources ನಿಂದ ಬೇರೆ ಹಣಕಾಸು ಮಂತ್ರಿಗಳಿಗಿಂತಲೂ ನಾವು ಬೆಳವಣಿಗೆ ಹೆಚ್ಚು ಮಾಡಿದ್ದೇವೆಂದರೆ, where is the evidence? ಏನೂ ಇಲ್ಲ. ಕಡಿಮೆಯಾಗಿದೆ. It is a matter of fact. ಅಭಿವೃದ್ಧಿ ಕುಂಠಿತವಾಗಿದೆ.

ಅನಂತರ, ತೆರಿಗೆಗಳು, ಕೂಡ ಕಡಮೆಯಾಗುತ್ತಾ ಬಂದಿದೆ ಮತ್ತು ಸಾಲ ಕೂಡ ನೀವು ಬಜೆಟ್ ಪುಸ್ತಕದ ಕೊನೆಯಲ್ಲಿ ಕೆಲವು ಮಾಹಿತಿಗಳನ್ನು ಕೊಟ್ಟಿದ್ದೀರಿ. ರಾಜ್ಯಕ್ಕೆ ಬರುವ receipts ಇದೆಯಲ್ಲ, ಒಂದು ರೂಪಾಯಿಯಲ್ಲಿ ಯಾವ್ಯಾವ್ಯಾಗ ಬಾಬುಗಳಿಂದ ಬಂದವು ಎಂಬುದನ್ನು ಕೊಡುತ್ತಾರೆ. 2006–07ನೇ ಸಾಲಿನಿಂದಲೂ ಬಜೆಟ್ ಅನ್ನು ಇವರೇ ಮಂಡಿಸಿದ್ದಾರೆ. ಅಲ್ಲಿಂದ ಒಟ್ಟು ನಾಲ್ಕು ಬಜೆಟ್‌ಗಳನ್ನು ಮಂಡಿಸಿದ್ದಾರೆ. ನಮಗೆ 2006–07 ರಲ್ಲಿ ಒಟ್ಟು resources ನಲ್ಲಿ ಸಾಲದಿಂದ ಬಂದಿದ್ದು 6 ಪೈಸೆ, 2007–08 ರಲ್ಲಿ ಸಾಲದಿಂದ ಬಂದಿದ್ದು 9 ಪೈಸೆ, 6 ರಿಂದ 9 ಪೈಸೆಯಾಯಿತು. ಅಂದರೆ, 3 ಪೈಸೆ ಜಾಸ್ತಿಯಾಯಿತು, 2008–09ಕ್ಕೆ 9 ರಿಂದ 15 ಪೈಸೆಯಷ್ಟಾಯಿತು. ಅಂದರೆ, ಒಂದು ರೂಪಾಯಿಯಲ್ಲಿ 2006–07 ರಲ್ಲಿ 6 ಪೈಸೆ,

2007–08 ರಲ್ಲಿ 6 ರಿಂದ 9 ಪೈಸೆ ಹೆಚ್ಚಾಯಿತು. ಮತ್ತೆ 2008–09 ಕ್ಕೆ 9 ರಿಂದ 15 ಪೈಸೆಯಾಯಿತು. ಮುಂದಿನ ಬಜೆಟ್‌ನಲ್ಲಿ ಅಂದರೆ, ಈಗ ಮಂಡಿಸಿರುವ ಬಜೆಟ್‌ನಲ್ಲಿ 15 ರಿಂದ 17 ಪೈಸೆಯಷ್ಟು ಜಾಸ್ತಿಯಾಗಬೇಕು. ಏಕೆಂದರೆ, ಈ ವರ್ಷ ಜಾಸ್ತಿ ಸಾಲ ಮಾಡಿದ್ದಾರೆ. 3,500 ಕೋಟಿ ರೂ.ಗಳಷ್ಟು open market ನಿಂದ ಸಾಲ ತೆಗೆದುಕೊಳ್ಳುತ್ತಾರೆ. ಈ ಸಾಲ. 7,800 ಕೋಟಿ ರೂ.ಗಳಷ್ಟು ಮಾಡಿದ್ದಾರೆ. Growth borrowing from open market about more than 28%. ಅಂದರೆ, ಈ ಅಂಕಿ–ಅಂಶಗಳನ್ನು ನೋಡಿದರೆ, ಇವತ್ತು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ಕಡೆ ಹೋಗುತ್ತಿದೆ ಎನ್ನುವುದನ್ನು ಯಾರು ಬೇಕಾದರೂ ಕೂಡ ಸುಲಭವಾಗಿ ನೋಡುವುದಕ್ಕೆ ಸಾಧ್ಯವಾಗುತ್ತದೆ.

ಸಾಲ ನೋಡಿ. ಈ ವರ್ಷ, 2008–09 ಕ್ಕೆ debt stock 60,142 ಕೋಟಿ ರೂ.ಗಳಷ್ಟಿದೆ. ಒಟ್ಟು ನಮ್ಮ ಎಲ್ಲಾ ಸಾಲಗಳು, consolidated debt stock, ಹೊರಗಡೆಯ ಸಾಲ ಬಿಟ್ಟು ಅಂದರೆ, ಬಜೆಟ್‌ನಿಂದಾಚೆ ಹೊರಗಡೆಯಿಂದ ನಾವು ಸಾಲ ತೆಗೆದುಕೊಳ್ಳುತ್ತೇವೆ, ನಿಗಮಗಳ ಮೂಲಕ ಸಾಲ ತೆಗೆದುಕೊಳ್ಳುತ್ತೇವೆ. ಅದರ ಮೇಲೆ ತೆಗೆದುಕೊಂಡಿರುವ ಸಾಲಗೂ 4,700 ಕೋಟಿ ರೂ.ಗಳಷ್ಟಿದೆ. ಅದನ್ನು ಸೇರಿಸಿದರೆ 2008–09ಕ್ಕೆ 65,000 ಕೋಟಿ ರೂ.ಗಳಷ್ಟು ಸಾಲ ಆಗುತ್ತದೆ. ನಾವು ಈಗ 6 ಕೋಟಿಯಷ್ಟು ಜನರಿದ್ದೇವೆ. 65 ಕೋಟಿಯಷ್ಟು ಸಾಲ, ನಾನು ಸಾಲ ತೆಗೆದುಕೊಳ್ಳಬಾರದೆಂದು ಹೇಳುವುದಿಲ್ಲ. ಆದರೆ, ನಮ್ಮ ಸಾಲ ಹೇಗಿರಬೇಕೆಂದರೆ, it should be on the basis of affordability, not on the basis of availability. That is the agreed principle under the student management of the finances. Affordability ಸಾಲ ಸಿಗುತ್ತದೆಂದು ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. Available ಸಾಲ ನನಗೆ ಸಿಗುತ್ತದೆ, ನನಗೆ ಸಾಮರ್ಥ್ಯ ಇದೆ, ಅದಕ್ಕೋಸ್ಕರ ಸಾಲವನ್ನು ಎಷ್ಟು ಬೇಕಾದರೂ ತೆಗೆದುಕೊಳ್ಳೋಣವೆಂದು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದರೆ, ನಮ್ಮ ಸಾಮರ್ಥ್ಯ ಎಷ್ಟಿದೆಯೋ, ಎಷ್ಟು ಕೊಡುವುದಕ್ಕಾಗುತ್ತದೆಯೋ, ನಮ್ಮ ಅಭಿವೃದ್ಧಿಗಳನ್ನು ನೋಡಿಕೊಂಡು, ಅಭಿವೃದ್ಧಿ ಕೆಲಗಳಿಗೆ ಇಷ್ಟು ಮತ್ತು ತೆಗೆದುಕೊಂಡ ಸಾಲಗಳೆಲ್ಲವನ್ನೂ ನಾವು ಬೇರಾವುದೋ ಬಾಬುಗಳಿಗೆ ಖರ್ಚು ಮಾಡಬಾರದು. ಅದನ್ನು asset creation ಗೆ ಮಾತ್ರ ಮಾಡಬೇಕು

ಛೇರ್ಮನ್: ಸಿದ್ಧರಾಮಯ್ಯನವರೆ, ಒಂದು ವಿಷಯವನ್ನು academic interest ನಿಂದ ಕೇಳುತ್ತಿದ್ದೇನೆ. 1 ಲಕ್ಷ 32 ಸಾವಿರ ಕೋಟಿ ರೂ.ಗಳ ಆಂತರಿಕ ಉತ್ಪನ್ನವಿರುವ ಸಂದರ್ಭದಲ್ಲಿ asset formation ಗೆ 50% ತನಕ ಸಾಲ ಪಡೆದುಕೊಳ್ಳಬಹುದೆಂದು ತಜ್ಞರು ಹೇಳುವ ಮಾತು. ಅದರ ಬಗ್ಗೆ ತಮ್ಮ ಸಲಹೆ ಏನು?

ಶ್ರೀ ಸಿದ್ದರಾಮಯ್ಯ: ನಾನು ಸಾಲ ತೆಗೆದುಕೊಳ್ಳಬಾರದೆಂದು ಹೇಳಿಲ್ಲ. ಸಾಲ ನಮ್ಮ ಶಕ್ತಿಗನುಗುಣವಾಗಿ ಇರಬೇಕೇ ಹೊರತು ಈಗ ಆಂಧ್ರಪ್ರದೇಶ ಸರ್ಕಾರದ ಬಜೆಟ್ ನೋಡಿಲ್ಲ. ಅವರು ಎಲ್ಲಾ ಸರ್ಕಾರಿ ಜಮೀನನ್ನು ಮಾರಿಕೊಂಡಿದ್ದಾರೆಂತೆ, ನಾನು ಹೈದರಾಬಾದ್‌ಗೆ ಹೋಗಿ ಕೇಳಿದಾಗ ಆಂಧ್ರಪ್ರದೇಶದಲ್ಲಿರುವ ಎಲ್ಲಾ ಜಮೀನನ್ನು ಮಾರಿ ದುಡ್ಡು ಕಲೆಕ್ಟ್ ಮಾಡಿದ್ದಾರಂತೆ, ಹಾಗಾಗಿ, ಆ ದುಡ್ಡನ್ನೂ ಸೇರಿಸಿಕೋಂಡಿರಬಹುದೆಂದು ಕಾಣುತ್ತದೆ. ಜಮೀನು ಮಾರಾಟ ಮಾಡಿದರೆ 3,000 ಕೋಟಿ ಬರುತ್ತದೆ, ಆದುದರಿಂದ ಜಮೀನು ಮಾರಾಟ ಮಾಡಬೇಕಾಗುತ್ತದೆಂದು ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಈವರ್ಷ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಮುಂದಿನ ವರ್ಷಕ್ಕೂ 1,900 ಕೋಟಿ ರೂ.ಗಳು ಬರುತ್ತದೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ವರ್ಷ 138 ಕೋಟಿ ರೂ.ಗಳು ಬಂದಿದೆ. ಇದರ ಅನುಭವವಿದ್ದರೂ ಮುಂದಿನ ವರ್ಷಕ್ಕೆ 1,900 ಕೋಟಿ ರೂ.ಗಳು ಬರುತ್ತದೆಂದರೆ, ಮುಂದಿನ ವರ್ಷಕ್ಕೆ ಎಲ್ಲಿಂದ ಬರುತ್ತದೆ? What is your experience this year? What is your experience last year? Though there is a very bad experience in these 2 years. ಮತ್ತೆ 1,900 ಕೋಟಿ ರೂ.ಗಳಷ್ಟು ಲೆಕ್ಕ ಹಾಕಿಕೊಂಡರೆ ನಂಬಬೇಕೆ? ಜನರು ಇದನ್ನು ನಂಬಬೇಕೆ? ಸುಮ್ಮನೆ ಈ ತರಹ ಗಾಳಗೋಪುರ ಕಟ್ಟುವುದಕ್ಕಾಗುವುದಿಲ್ಲ. ನಾವು ಅದಕ್ಕೋಸ್ಕರವೇ fiscal responsibility ಹಾಕಿದ್ದು.

1988–99 ರಿಂದ 2001–02 ರವರೆಗೆ ರಾಜ್ಯದ ಆರ್ಥಿಕ ಪರಿಸ್ಥಿತಿ ಕುಲಗೆಟ್ಟು ಹೋಗಿತ್ತು. Fiscal deficit 5.2% ಗೆ ಹೋಗಿತ್ತು 2001–02 ರಲ್ಲಿ. ಮತ್ತೆ ರೆವಿನ್ಯೂ ಕೊರತೆ ಸುಮಾರು 4,000 ಕೋಟಿ ರೂ.ಗಳಿಗಿಂತಲೂ ಜಾಸ್ತಿಯಾಗಿತ್ತು. ಸಾಲ ತೆಗೆದುಕೊಂಡು ಬಂದು revenue expenditure ಮಾಡುವ ಸಂಬಳ ಕೊಡುವ ಪರಿಸ್ಥಿತಿಗೆ ಹೊರಟು ಹೋಗಿದ್ದೆವು. ಆ ಕಾರಣದಿಂದ 11th and 12th Finance Commission ಎಲ್ಲವೂ ರಾಷ್ಟ್ರಮಟ್ಟದಲ್ಲಿ ಆಗಿ ಇದರ ಬಗ್ಗೆ ಗಂಭೀರವಾಗಿ ಯೋಚಿಸಿ, ಬರಿ ಕರ್ನಾಟಕ ಒಂದೇ ಅಲ್ಲ, ದೇಶದ ಎಲ್ಲಾ ರಾಜ್ಯಗಳಲ್ಲೂ ಆರ್ಥಿಕ ಪರಿಸ್ಥಿತಿ ಹದಗೆಟ್ಟು, ಅದನ್ನು ಸರಿಪಡಿಸಬೇಕೆಂದು 2002ರಲ್ಲಿ Fiscal Rsponsibility ಪಾಸ್ ಆಯಿತು. ಅದಾದ ನಂತರ, ನಾವು ಕೆಲವು ಗೊತ್ತು-ಗುರಿಗಳನ್ನು ಇಟ್ಟುಕೊಂಡಿದ್ದೇವೆ. ಅದಕ್ಕೋಸ್ಕರ ಪ್ರತಿ ವರ್ಷವೂ ಬಜೆಟ್ ಮಂಡಿಸಿದಾಗ Medium Term Fiscal plan ಮಂಡಿಸಬೇಕು,

ಇವತ್ತಿನಿಂದ ಮುಂದಿನ ನಾಲ್ಕು ವರ್ಷಗಳವರೆಗೆ ಅಂದಾಜುಗಳು ಹೇಗಿರುತ್ತದೋ, ತೆರಿಗೆ ಬೆಳವಣಿಗೆ ಹೇಗಿರುತ್ತದೋ, capital Receipts ಹೇಗಿರುತ್ತದೋ Revenue Receipts ಹೇಗಿರುತ್ತದೋ, Revenue Expenditure ಹೇಗಿರುತ್ತದೋ, Capital Expenditure ಹೇಗಿರುತ್ತದೋ, ಸಾಲ ಹೇಗೆ ಬೆಳವಣಿಗೆ

ಆಗುತ್ತದೆ, ಯಾವ ರೀತಿ ಇಟ್ಟುಕೊಳ್ಳಬೇಕು. ಯಾವ ಪ್ರಮಾಣದಲ್ಲಿ ಇಟ್ಟುಕೊಳ್ಳಬೇಕೆಂಬ ಬಗ್ಗೆ Fiscal Responsibility Act ನಲ್ಲಿ ನಾವು ಹೇಳಿದ್ದೇವೆ. ಆ ಚೌಕಟ್ಟಿನಲ್ಲಿಯೇ ನಾವು ಮಾಡಿಕೊಳ್ಳಬೇಕು. ಈ ವರ್ಷ ಆ ಚೌಕಟ್ಟನ್ನು ಮೀರಿದ್ದೇವೆ. ಏಕೆಂದರೆ, ಯಾವುದೇ ಕಾರಣಕ್ಕೂ Fiscal Responsibility Act ನಲ್ಲಿ ನಾವು ಏನು ಹೇಳಿಕೊಂಡಿದ್ದೆವು ಎಂದರೆ, fiscal deficit. There are two types of deficits. One is, Revenue Deficit, another is, Fiscal Deficit. Revenue Deficit ನಲಿ 2004-05 ರಲ್ಲಿ ಒಂದು ವರ್ಷ ಮುಂಚಿತವಾಗಿ ನಾವು surplus, ಬಂದೆವು. ಅದಾದ ನಂತರ, continuous ಆಗಿ 2006-07ರಲ್ಲಿ 4,000 ಕೋಟಿ ಚಿಲ್ಲರೆಯಷ್ಟು surplus, 2007-08 ರಲ್ಲಿ 2,900 ರೂ.ಗಳು ಸುಮಾರು 3,000ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿತ್ತು. 3,200 ಕೋಟಿ ರೂ.ಗಳಷ್ಟು surplus, ಹಣ capital receipts ನಲ್ಲಿ ಖರ್ಚು ಮಾಡುವುದಕ್ಕೆ ಸಿಕ್ಕಿತು.

2007-08ರಲ್ಲಿ ಸುಮಾರು ಮೂರು ಸಾವಿರ ಕೋಟಿ surplus, ಹಣ capital side ನಲ್ಲಿ ಖರ್ಚು ಮಾಡುವುದಕ್ಕೆ ಸಿಕ್ಕಿತ್ತು. 2006-07 ರಲ್ಲಿ ನಾಲ್ಕು ಸಾವಿರ ಕೋಟಿ surplus ಸಿಕ್ಕಿತ್ತು. ಆದರೆ, ಈಗ 2008-09 ರಲ್ಲಿ ಎಲ್ಲಾ ಸರ್ಕಸ್ ಮಾಡಿ 767 ಕೋಟಿ ಸಿಗಬಹುದು ಎಂದು ಅಂದಾಜು ಮಾಡಿಕೊಂಡಿದ್ದಾರೆ. ಅಷ್ಟು ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಅದು ಅಂದಾಜು. ಇವೆಲ್ಲ ಲೆಕ್ಕವಲ್ಲ. ಆದರೆ, 2006-07 ರಲ್ಲಿ ಮತ್ತು 2007-08 ರಲ್ಲಿ ಆಗಿರುವುದೆಲ್ಲಾ ಅಲಕೌಂಟ್ಸ್ ಆಗಿರುವಂಥದ್ದು. ಇದರ ಪ್ರಕಾರ ಒಂದು ರೂಪಾಯಿಯೂ ಸಿಕ್ಕುವುದಿಲ್ಲ. ಮುಂದಿನ ವರ್ಷಕ್ಕೆ ಸುಮಾರು ಸಾವಿರ ಚಿಲ್ಲರೆ ಕೋಟಿ surplus ಸಿಗುತ್ತದೆಂದು ಹೇಳಿಕೊಂಡಿದ್ದಾರೆ. Social services, Economic services ನಲ್ಲಿ cut ಮಾಡಿ ಎಲ್ಲಾ ಬಿಗಿ ಮಾಡಿ ಇದನ್ನು ತೋರಿಸಿದ್ದಾರೆ. ಕೇಂದ್ರ ಸರ್ಕಾರ ಬೇರೆ ಇವರಿಗೆ permission ಕೊಟ್ಟಿದ್ದಾರೆ. ನಿಮ್ಮ physical deficit ಈ ವರ್ಷಕ್ಕೆ 2.88 ಇಟ್ಟುಕೊಳ್ಳುತ್ತೇವೆಂದು ಹೇಳಿದ್ದರು ಅದು 3.49 ಆಗಿಬಿಟ್ಟಿದೆ. ಸುಮಾರು ಮೂರೂವರೆ, ಅದಕ್ಕಿಂತ ಜಾಸ್ತಿ ಸಹ ಆಗಬಹುದು. ಲೆಕ್ಕ ಹಾಕಿದ ಮೇಲೆ ಎಷ್ಟು ಬರುತ್ತದೋಗೊತ್ತಿಲ್ಲ. ಅಂದರೆ ಈ ವರ್ಷ ಮೂರು ಪರ್ಸೆಂಟ್‌ಗಿಂತ ಜಾಸ್ತಿ Economic Recession ಇರುವುದರಿಂದ ಮಾಡಿಕೊಳ್ಳಿ, ಅದಕ್ಕೋಸ್ಕರ to protect the expenditure on the social services and ecpenditure on the economic services ಅದನ್ನು maintain ಮಾಡಬೇಕು ಎಂಬುದು ಅದರ ಅರ್ಥ. ಅದನ್ನೂ ಇವರು ಮಾಡಲಿಲ್ಲ. Over all, in the process ಏನಾಗಿದೆಯೆಂದರೆ 7 ಪರ್ಸೆಂಟ್ social services ನಲ್ಲಿ cut ಆಗುತ್ತದೆ. ಇನ್ನೂ

ಜಾಸ್ತಿಯಾಗಬಹುದು. Economic services ನಲ್ಲಿ economic services ಅಂದರೆ ಕೃಷಿ, ನೀರಾವರಿ, ವಿದ್ಯುತ್, ಗ್ರಾಮೀಣಾಭಿವೃದ್ಧಿ ಇವುಗಳು ಬರುವ ಕಡೆಗಳಲ್ಲಿ ಸುಮಾರು 17 ಪರ್ಸೆಂಟ್ cut ಆಗುತ್ತದೆ. Over all more than 8 ಪರ್ಸೆಂಟ್ cut ಆಗುತ್ತದೆ. ಇದನ್ನು ಹೇಗೆ ಬೆಳವಣಿಗೆಯ ಪರವಾಗಿದೆಯೆಂದು ಹೇಳುವುದಕ್ಕಾಗುತ್ತದೆ? ಇದು ಅಭಿವೃದ್ಧಿ ಪರವಾಗಿದೆಯೆಂದು ಹೇಳುವುದಕ್ಕಾಗುತ್ತದೆಯೇ? ಇಷ್ಟೆಲ್ಲಾ ಆದರೂ ಸಹ, ನಾನು ಬೇರೆ ಬೇರೆ ಕಾಲದಲ್ಲಿ ಮಂಡಿಸಿರುವ ಎಲ್ಲಾ ಬಜೆಟ್‌ಗಳನ್ನು ನೋಡಿದ್ದೇನೆ. ಈ ರೀತಿ non-developmental expenditure ನ್ನು ಸ್ವೇಚ್ಚೆಯಾಗಿ ಕೊಡುವುದನ್ನು ನಾನು ಎಲ್ಲೂ ನೋಡಿಲ್ಲ. ಹಣವೇ ಇಲ್ಲದಿರುವಾಗ, ಕೃಷಿಗೆ, ನೀರಾವರಿಗೆ, ಗ್ರಾಮೀಣಾಭಿವೃದ್ಧಿಗೆ, ಕುಡಿಯುವ ನೀರಿಗೆ, ಶಿಕ್ಷಣಕ್ಕೆ ಆರೋಗ್ಯಕ್ಕೆ, ಸೋಶಿಯಲ್ ಸ್ಕೀಮ್‌ಗಳಿಗೆ ಹಣ ಕಡಿಮೆ ಇರುವಾಗ ನೀವು ತೆಗೆದುಕೊಂಡು ಅಲ್ಲಿ ದೇವಸ್ಥಾನಕ್ಕೆ ಕೊಡುತ್ತೇವೆ, ಮತ್ತೊಂದಕ್ಕೆ ಕೊಡುತ್ತೇವೆಂದರೆ ಹೇಗೆ? ಹಣ ಧಾರಾಳವಾಗಿದ್ದರೆ ಎಲ್ಲಾ ದೇವಸ್ಥಾನಕ್ಕೆ ಕೊಟ್ಟುಬಿಡಿ. ನಮ್ಮದೇನು ತಕರಾರಿಲ್ಲ. ಕರ್ನಾಟಕದಲ್ಲಿ ಎಷ್ಟು ದೇವಸ್ಥಾನಗಳಿವೆಯೋ ಗೊತ್ತಿಲ್ಲ. ಮಾನ್ಯ ಖರ್ಗೆಯವರು ಏಳು ಸಾವಿರ ಜಾತಿಗಳು ಇವೆ. ಎಂದರು ಇನ್ನೂ ಎಂದರು ಮೂರೂವರೆ ಸಾವಿರ ಜಾತಿಗಳು ಇವೆ, ಇನ್ನು ಇದರ ಬಗ್ಗೆ ಸರಿಯಾಗಿ ಲೆಕ್ಕ ಸಿಗುತ್ತಿಲ್ಲ. ಏಕೆಂದರೆ ಸರ್ವೆಯೇ ಆಗಿಲ್ಲವಲ್ಲಾ? ಅದು ಅಷ್ಟು ಇದೆಯೋ ಗೊತ್ತಿಲ್ಲ. ಅಂದಾಜಿನ ಮೇಲೆ ಹೇಳಿದ್ದಾರೆ. ಎಲ್ಲಾ ಜಾತಿಗಳಿಗೂ ತೆಗೆದುಕೊಳ್ಳಿ ನಿನಗೆ ಐದು, ಹತ್ತು ಕೋಟಿ ಎಂದು ಕೊಡಲು ಆಗುತ್ತದೆಯೇ? ಆ ರೀತಿ ಕೊಡುವುದರಿಂದ ಅವರ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯಾಗುತ್ತದೆಯೇ? ಏನೂ ಆಗುವುದಿಲ್ಲ. ರಾಜ್ಯದ ಬೆಳವಣಿಗೆಯೂ ಆಗುವುದಿಲ್ಲ. ಅವರ quality life ಕೂಡ improvement ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವು ಮತ್ತು ನೀವು ಕಾಗಿನೆಲೆ ಅಭಿವೃದ್ಧಿ ಬಗ್ಗೆ ಕನಕದಾಸರ ಪೀಠದ ವಿಚಾರದಲ್ಲಿ ಹೋಗಿ ಉದ್ಘಾಟನೆ ಮಾಡಿ ಬಂದೆವು. ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆವು. ಕಾಗಿನೆಲೆಯಲ್ಲಿ ನಾವು 15–20 ಕೋಟಿ ಖರ್ಚು ಮಾಡಿದರೆ ಆ ಸುತ್ತ ಮುತ್ತ ಇರುವ ಹಳ್ಳಿಗಳ ರಸ್ತೆಗಳು ಅಭಿವೃದ್ಧಿ ಕಾರ್ಯಗಳು, ಇನ್ನು ಸಾವಿರಾರು ವರ್ಷಗಳಿಗೆ ಇಂಥ ಮಹಾನುಭಾವ ಹುಟ್ಟಿದ್ದ ಎಂಬುದನ್ನು ನೆನಪಿನಲ್ಲಡುವಂಥ ಒಂದು permanent work ಅದರ ನೆಲ್ಲಿಪದಲ್ಲಿ ರಸ್ತೆಗಳು, ಕಟ್ಟಡಗಳು, ಅಭಿವೃದ್ಧಿ ಕಾರ್ಯಗಳು, ಕೆರೆಕಟ್ಟೆಗಳು ಇವೆಲ್ಲ ಆಗುತ್ತದೆ. ಅದನ್ನು ನಾವು ನೀವು ಹೋಗಿ ನೋಡಿಕೊಂಡು ಬಂದಿದ್ದೇವೆ. ನನ್ನ ಆಸೆ ಏನು ಎಂದರೆ ಯಾವ್ಯಾವುದೋ ಪಾಪಕ್ಕೆ, ಯಾರ‍್ಯಾರದೋ ಕಾರಣಕ್ಕಾಗಿ ಮಳೆ ಬೆಳೆ ಆಗದೆಯೆ ಸುಭಿಕ್ಷೆ ಇಲ್ಲದಿರುವ ಈ ಪರಿಸ್ಥಿತಿ ಇದೆಯಲ್ಲಾ, ದೇವರಾದರೂ ಏನಾದರು ಕಣ್ಣುಬಿಟ್ಟು ನೋಡಿ, ಇನ್ನಾದರೂ ಮನುಷ್ಯ ಪ್ರಯತ್ನದಿಂದ ಆಗಲಿಲ್ಲ, ದೇವರ

ದಯೆಯಿಂದಲಾದರೂ ಒಳ್ಳೆಯದು ಆಗುತ್ತದೆಂದು ನನ್ನ ನಂಬಿಕೆ. ಹೀಗಾಗಿ ನಿಶ್ಚಿತವಾಗಿ ಅದನ್ನು ತಾವು ನೋಡುವವರಿರುತ್ತೀರಾ. ಆ ಪೂಜೆ ಪುರಸ್ಕಾರಗಳೂ, ದೇವರು ದಿಂಡರ ಪರಿಣಾಮ ಒಳ್ಳೆಯದು ಆಗುತ್ತದೆ ಎಂಬುದನ್ನು ನೀವೇ ಪ್ರತ್ಯಕ್ಷವಾಗಿ ನೋಡುವಿರಂತೆ.

[ಗೊಂದಲ]

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರ ನಂಬಿಕೆಯಿಂದ ಈ ಮಾತನ್ನು ಅವರು ಹೇಳಿದ್ದಾರೆ. ಈ ದೇಶದಲ್ಲಿ ನಮಗೆ ಬೇಕಾದಷ್ಟು ಆಹಾರ ಧಾನ್ಯದ ಉತ್ಪತ್ತಿ ಇರಲಿಲ್ಲವೆಂಬುದು ನಮಗೆ ಗೊತ್ತಿದೆ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ಅಥವಾ ಅದರ ಪೂರ್ವದಲ್ಲಿ ಕೂಡ ನಮ್ಮ ದೇಶದಲ್ಲಿರುವ ಜನರಿಗೆ ಹೊಟ್ಟೆ ತುಂಬುವಷ್ಟು ಅನ್ನ, ಆಹಾರ ಧಾನ್ಯ ಇರಲಿಲ್ಲ. ಆಗ ಪಂಡಿತ್ ಜವಹರಲಾಲ್ ನೆಹರುರವರು, ಡಾ:ಸ್ವಾಮಿನಾಥ್‌ರವರಂಥ experts ಮತ್ತು ಅನೇಕ irrigation projects ತಜ್ಞರು ಇವರೆಲ್ಲರೂ ಇವರೆಲ್ಲರು ಸೇರಿ ನಮ್ಮ ದೇಶದಲ್ಲಿ ಮಾಡಿದ ಮೊದಲ ಕೆಲಸವೇನೆಂದರೆ ಬಾಕ್ರಾನಂಗಲ್‌ನಂಥ ದೊಡ್ಡ ದೊಡ್ಡ ಡ್ಯಾಂಗಳು, public sectors ನಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು, ಅನೇಕ ನೀರಾವರಿ ಯೋಜನೆಯನ್ನು ತೆಗೆದುಕೊಂಡು ಆಹಾರದ ಉತ್ಪಾದನೆಯನ್ನು ಮಾಡಿದರು. ಪಂಡಿತ್ ಜನಹರಲಾಲ್ ನೆಹರುರವರಿಗೆ ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದರೆ ಅದಕ್ಕೆ ಅವರು ಇವೆಲ್ಲವು ಕೂಡ modern temples, ಆಧುನಿಕ ಗುಡಿಗಳು ಎಂದು ಉತ್ತರ ಕೊಟ್ಟರು. ಈ ದೇವಾಲಯಗಳು ಇದ್ದರೆ ನಮ್ಮ ದೇಶದ ಅಭಿವೃದ್ಧಿಯಾಗುತ್ತದೆ, ಅದಕ್ಕಾಗಿ ಇದನ್ನು ಕಟ್ಟಿಸುತ್ತಿದ್ದೇನೆಂದು ಆ ಪುಣ್ಯಾತ್ಮ ಹೇಳಿದರೆ, ಇಲ್ಲಿ ಇವರಿಗೆ ನೀರಾವರಿಗೆ ರೈತರಿಗೆ ನೀರು ಕೊಡಿ ಎಂದರೆ ಇದಕ್ಕೆ 220 ಕೋಟಿಯಂತೆ, ಅಲ್ಲಿ ಮಠಮಾನ್ಯರಿಗೆ 130 ಕೋಟಿಯಂತೆ. ಇದು ನ್ಯಾಯವೇ? ಮೊದಲು ಇದನ್ನು ಮಾಡಿ ಉಳಿದರೆ ಮುಂದೆ ನೋಡೋಣ. ಜನರು ವಿದ್ಯುತ್‌ಚ್ಛಕ್ತಿ ಇಲ್ಲವೆಂದು ಸಾಯುತ್ತಿರುವುದು ನಿಮಗೇ ಗೊತ್ತಿದೆ. 15 ಲಕ್ಷ ಪಂಪುಸೆಟ್‌ನವರು ವಿದ್ಯುತ್ ಇಲ್ಲವೆಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ದಿನಾ ಎದ್ದು ನೀವು ಅವರಿಗೆ ಆಶ್ವಾಸನೆ ಕೊಡುತ್ತೀರಿ. ಇಂಥ ಎಲ್ಲಾ ಕೊರತೆ ಇದ್ದಾಗ ಇದು ಮಾಡುವುದು ಸೂಕ್ತವೆ ಎಂಬ ಪ್ರಶ್ನೆ ಈ ದೇಶದ ಮುಂದಿದೆ. ಅದಕ್ಕೆ ನೀವು ಸಮರ್ಥನೆಯನ್ನು ಯಾವ ರೀತಿಯಾದರು ಮಾಡಿಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾನು ನೂರಕ್ಕೆ ನೂರು ಒಪ್ಪಕೊಳ್ಳುತ್ತೇನೆ. ಈ ಕೆರೆಕಟ್ಟೆ, ಜಲಾಶಯಗಳು, ಕನ್ನಾಂಬಾಡಿ ಕಟ್ಟೆಯನ್ನೇನು ಸರ್.ಎಂ.ವಿಶ್ವೇಶ್ವರಯ್ಯ ಕಟ್ಟಿದರು ಇಂಥದ್ದೇ permanent works. ಬುದ್ಧ ವಿಹಾರಕ್ಕೆ ಖರ್ಗೆಯವರು ಹೇಳಿದರೆಂದು ನಾನು 6–7 ಕೋಟಿ ಹಣವನ್ನು ಕೊಟ್ಟೆ. ಅಲ್ಲೇನು ವಿಹಾರಕ್ಕೆ ಕೊಟ್ಟಿದ್ದೇವೆಯೇ? ಆ ನೆಪದಲ್ಲಿ Infrastructure

development ಮಾಡಿದ್ದೇವೆ. ಅದು ಈ ಲೆಕ್ಕದಲ್ಲೇ ಬರುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಬುದ್ಧ ವಿಹಾರಕ್ಕೆ 6–7 ಕೋಟಿಯನ್ನೇನು ಕೊಟ್ಟು ಖರ್ಚು ಮಾಡಿದೇವೆ, ನಾನು ನಿಮ್ಮನ್ನೇ ಕೇಳುತ್ತೇನೆ. ನಾವೇನು ಅಲ್ಲಿ ಗುಡಿ ಗುಮ್ಮಾರಗಳನ್ನು ಕಟ್ಟಿದೆವೆಯೇ? ಆ ನೆಪದಲ್ಲಿ ಕುಡಿಯುವ ನೀರು, ರಸ್ತೆಗಳ ಅಭಿವೃದ್ಧಿಯನ್ನು ಮಾಡಿದ್ದೇವೆ. ಬೀದರ್‌ನಲ್ಲಿ ಸಿಖ್ ಸಮುದಾಯದವರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ 120 ಕೋಟಿ ಮಾಡುತ್ತಿದ್ದೇವೆ. ಇಡೀ ಬೀದರ್ ಜಿಲ್ಲೆಯಲ್ಲಿ 25 ವರ್ಷದಿಂದ ಏನು ಕೆಲಸ ಆಗಿರಲಿಲ್ಲ ಅಷ್ಟು ಕೆಲಸ ಆ ಒಂದು ಜಿಲ್ಲೆಯಲ್ಲಿ ನಡೆಯುತ್ತಿದೆ. ದೇವರ ಹೆಸರಿನಲ್ಲಿ ಇನ್ನೊಂದರ ಹೆಸರಿನಲ್ಲಿ ನಾವು ಮಾಡುತ್ತಿರುವ infrastructure development, ಶಿಕ್ಷಣ ಸಂಸ್ಥೆಗೆ encouragement ಮಾಡುತ್ತಿದ್ದೇವೆಯೇ ಹೊರತು ದೇವರು ದಿಂಡರಿಗೇ ಕೊಡುತ್ತಿಲ್ಲ, ಮಾಧ್ಯಮದ ಮೂಲಕ ತಪ್ಪು ಗ್ರಹಿಕೆ ಆಗುತ್ತಿದೆ. ಆ ನೆಪದಲ್ಲಿ, ಮಠ ಮಂದಿರಗಳು ಎಂದರೆ ಶಿಕ್ಷಣ ಸಂಸ್ಥೆಗಳಿಗೆ ಕೊಡುತ್ತಿದ್ದೇವೆ. ರಸ್ತೆಗಳಿಗೆ, ಅಭಿವೃದ್ಧಿ ಕೆಲಸಗಳಿಗೆ ಕೊಡುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಖಾಯಿಲೆ ಇದ್ದವರಿಗೆ ಮೊದಲ ಬರತಕ್ಕಂಥ ಔಷಧಿಯನ್ನು ಕೊಡಬೇಕು. ife saving drugs ಕೊಡಬೇಕು. ಆಮೇಲೆ ಉಳಿದದ್ದು. ನೀವು ನೂರು ಕಡೆ ಮಾಡಿರಬೇಕು. ಅದೇ ರೀತಿ ಬುದ್ಧವಿಹಾರದಲ್ಲೂ ರಸ್ತೆ ಮಾಡಿರಬೇಕು, ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ನಿಮಗೆ ಅಷ್ಟು ಅಸೂಯೆ ಇದ್ದರೆ ಬೇಕಾದರೆ ಆ ರಸ್ತೆಯನ್ನೇ ತೆಗೆದುಕೊಂಡು ಹೋಗಿ ಎಂದು ನಾನು ಹೇಳಿದೆ. ಬೇಕಾದರೆ ಆ Road ಕುಡಿಯುವ ನೀರಿನದನ್ನೇಲ್ಲಾ ಕಿತ್ತುಕೊಂಡು ಹೋಗಿ. ನೀವು ಹತ್ತಾರು ತಪ್ಪು ಮಾಡುವಾಗ ಇದೂ ಒಂದು ತಪ್ಪು ಮಾಡಿರಬಹುದು.

ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ...

[ಗೊಂದಲ]

ಛೇರ್ಮನ್:– ಮಾನ್ಯ ನಾಯ್ಡುರವರೆ, ತಾವು ಮಧ್ಯೆ ಮಾತನಾಡಬೇಡಿ. ಮಾನ್ಯ ಖರ್ಗೆಯವರು ಮಾತನಾಡಲಿ. ತಾವು ಬೇಕಾದರೆ ನಂತರ ಮಾತನಾಡಿ. ಮಾನ್ಯ ಖರ್ಗೆಯವರು ಮಾತನಾಡಲಿ. ತಾವು ಬೇಕಾದರೆ ನಂತರ ಮಾತನಾಡಿ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:– ರೋಷನ್‌ಬೇಗ್, ನಾನು ಎಲ್ಲವನ್ನೂ ನೋಡಿದ್ದೀನಪ್ಪ, ನಿನಗಿಂತಲೂ ಒಳ್ಳೆಯ portfolio ತೆಗೆದುಕೊಂಡು ನಾನು ನಿಭಾಯಿಸಿದ್ದೇನೆ.

[ಗೊಂದಲ]

ಛೇರ್ಮನ್ :– ಮಾನ್ಯ ನಾಯ್ಡುರವರೆ, ತಾವು ನಂತರ ಮಾತನಾಡಿ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ರೋಷನ್‌ಬೇಗ್, ನಿನಗಿಂತಲೂ ಒಳ್ಳೆಯ portfolio ನಾನು ಮೊದಲೇ ತೆಗೆದುಕೊಂಡು ನಿಭಾಯಿಸಿದ್ಧೇನೆ. ನಿನಗಿಂತಲೂ ಒಳ್ಳೆಯ portfolio ದಲ್ಲಿ ನಾನಿದ್ದೇನೆ. ಇದನ್ನು ನೀವು ಅರ್ಥ ಮಾಡಿಕೊಳ್ಳಿ ನಿನಗಿಂತಲೂ ಒಳ್ಳೆಯ post ನಲ್ಲಿ ಇದ್ದೇನೆ, ನಿನಗಿಂತಲೂ ಒಳ್ಳೆಯ ಜಾಗದಲ್ಲಿದ್ದೇನೆ. ನೀವೇನೂ ನನಗೆ ಹೇಳಬೇಕಾಗಿಲ್ಲ. [ಗೊಂದಲ] ನಾನು ಒಳ್ಳೆಯ portfolio ವನ್ನು ನೋಡಿ ಬಂದಿದ್ದೇನೆ. ಇವತ್ತೂ ನನ್ನ ಹತ್ತಿರ 5 portfolio ಇದೆ. ನೀವು ಕೇಳಿದ್ದಕ್ಕೆ ಕೊಡಲಿಲ್ಲ. ಇದನ್ನು ಮಾನ್ಯ ಯಡಿಯೂರಪ್ಪನವರು ನನಗೆ ಕೊಟ್ಟಿದ್ದಾರೆ. ನೀವಲ್ಲ ನಮಗೆ ಕೊಟ್ಟಿರುವುದು. ಮಾನ್ಯ ಯಡಿಯೂರಪ್ಪನವರು ನನಗೆ ಇದನ್ನು ಕೊಟ್ಟಿರುವುದು. [ಗೊಂದಲ] ನಿನಗಿಂತಲೂ ಒಳ್ಳೆಯ portfolio ದಲ್ಲಿ, ನಿನಗಿಂತಲೂ ಒಳ್ಳೆಯ ಕೆಲಸವನ್ನು ಮಾಡಿದ್ದೇನೆ. ನೀವೇನು ನಮಗೆ ಹೇಳುವುದು?

[ಗೊಂದಲ]

ಡಾ: ಬಿ.ಎಸ್.ಯಡಿಯೂರಪ್ಪ:- ಹಜ್ ಯಾತ್ರಿಗಳಿಗೆ...

[ಗೊಂದಲ]

ಶ್ರೀ ಆರ್. ರೋಷನ್ ಬೇಗ್:- Sir, I protest. ಬೆಂಗಳೂರು ನಗರದಲ್ಲಿ ಇವರು ಮಂತ್ರಿಗಳಾಗಿದ್ದಾರೆ. ಬೆಂಗಳೂರು ನಗರದಲ್ಲಿ ಇರುವ ಆಸ್ಪತ್ರೆಯಲ್ಲಿ Patients ಕುಡಿಯುವುದಕ್ಕೆ ನೀರಿಲ್ಲ, ತೊಳೆಯುವುದಕ್ಕೆ ನೀರಿಲ್ಲ. ಏನು ಮಾತನಾಡುತ್ತೀರಿ?

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ನೀವು ಮಾಡಿದ್ದು ಪಾಪ. 50 ವರ್ಷದಿಂದ ಬೆಂಗಳೂರು ನಗರದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ನೀವು ನೀರು ಕೊಡಲಿಲ್ಲ. ನೀವು ಮಾಡಿದ ಪಾಪದ ಕೊಡ ಇವತ್ತು ತುಳುಕುತ್ತಿದೆ. [ಗೊಂದಲ] ಬೆಂಗಳೂರಿಗೆ 40–50 ಟಿಎಂಸಿ ನೀರು ಬೇಕಾಗಿತ್ತು. ಕೇಂದ್ರಗಳಲ್ಲಿ ನೀವು ಇದ್ದಿರಿ, ರಾಜ್ಯದಲ್ಲಿ ನೀವು ಇದ್ದಿರಿ. ಬೆಂಗಳೂರು ನಗರಕ್ಕೆ ನೀವು ಕುಡಿಯುವ ನೀರು ಕೊಡಲಿಲ್ಲ. ಮೋಸ ಮಾಡಿದವರು ನೀವು, ದಗಾ ಮಾಡಿದವರು ನೀವು. ಈ ರಾಜ್ಯದ ಜನತೆಗೆ, ಬೆಂಗಳೂರು ನಗರ ಜನತೆಗೆ ಮೋಸ ಮಾಡಿದವರು ನೀವು. ನೀವು ಜವಾಬ್ದಾರರು, ನಾವಲ್ಲ.[ಗೊಂದಲ] you are the culprit here.

[ಗೊಂದಲ]

ಛೇರ್ಮನ್:- ಇಲ್ಲಿ ಬಜೆಟ್ ಮೇಲೆ ಚರ್ಚೆಯಾಗುತ್ತಿದೆ. ಮೂಲ ಚರ್ಚೆಯಿಂದ ಬೇರೆ ಕಡೆಗೆ ಹೋಗಬೇಡಿ. ದಯವಿಟ್ಟುಕುಳಿತುಕೊಳ್ಳಿ.

[ಗೊಂದಲ]

ಶ್ರೀ ಬಿ.ರಮಾನಾಥ ರೈ:- ಮಂತ್ರಿಗಳೇ ಮಧ್ಯೆ ಪ್ರವೇಶ ಮಾಡಿದರೆ ಹೇಗೆ?

[ಗೊಂದಲ]

ಛೇರ್ಮನ್:- ಮಾನ್ಯ ನಾಯ್ಡುರವರೆ, ತಾವು ಕುಳಿತುಕೊಳ್ಳಿ, ನಿಮಗೆ ಅವಕಾಶ ಕೊಟ್ಟಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ. [ಗೊಂದಲ], ಮಾನ್ಯ ರಮಾನಾಥ ರೈರವರೆ, ನಿಮ್ಮನ್ನೂ ಕರೆದಿಲ್ಲ ತಾವೂ ಕೂಡ ದಯವಿಟ್ಟು ಕುಳಿತುಕೊಳ್ಳಿ [ಗೊಂದಲ] ಮಾನ್ಯ ಸಿದ್ದರಾಮಯ್ಯನವರೆ, ತಾವು ಮಾತನಾಡುವುದನ್ನು ಮುಂದುವರೆಸಿ. [ಗೊಂದಲ] ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇಲ್ಲಿ ಯಾರೂ ಪರಸ್ಪರ ಮಾತನಾಡುವುದು ಬೇಡ.

[ಗೊಂದಲ]

ಡಾ:ಬಿ.ಎಸ್.ಯಡಿಯೂರಪ್ಪ:- ದಯವಿಟ್ಟು ಈ ಕಡೆಗೆ ಯಾರೂ ಮಾತನಾಡಬೇಡಿ.

[ಗೊಂದಲ]

ಶ್ರೀ ಬಿ.ರಮಾನಾಥ ರೈ:- ಏಕೆ ಅದನ್ನೇ ಹೇಳುವುದು?

[ಗೊಂದಲ]

ಛೇರ್ಮನ್ :- ಮಾನ್ಯ ರಮಾನಾಥ ರೈರವರೆ, ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಡಾ: ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ನಾನೇನು ಹೇಳುತ್ತೇನೆ ಎಂದರೆ, ಅನುಭವ ಇರುವಂತಹ, ಹಣಕಾಸಿನ ಸಚಿವರಾಗಿ ಇಷ್ಟು ಒಳ್ಳೆಯ ಕೆಲಸ ಮಾಡಿರುವಂತಹ ಮಾನ್ಯ ಸಿದ್ದರಾಮಣ್ಣನವರು ಮಾತನಾಡಬೇಕಾದರೆ, ಮಾನ್ಯ ಖರ್ಗೆಯವರು ಮಾತನಾಡಬೇಕಾದರೆ ಮಧ್ಯದಲ್ಲಿ ಸ್ವಲ್ಪ ಕೆಣಕಿದರೆ, ಅವರು ಇನ್ನೂ ಹೆಚ್ಚಿನ ಉತ್ಸಾಹದಲ್ಲಿ ನಮಗೆ ಸಲಹೆ ಕೊಡುತ್ತಾರೆ ಎಂಬುದು ನಮ್ಮ ಭಾವನೆ. ನನ್ನ ವಿಚಾರವೇನೆಂದರೆ, ನಮ್ಮದು ತಪ್ಪಾದರೆ ನಿಲ್ಲಿಸೋಣ. ಉದಾಹರಣೆಗೆ, ಹಜ್ ಯಾತ್ರೆಗೆ ಎಲ್ಲರೂ ಡಿಮ್ಯಾಂಡ್ ಮಾಡಿದರು, ನಾನು 5 ಕೋಟಿ ರೂ.ಗಳನ್ನು ತೆಗೆದಿಟ್ಟಿದ್ದೇನೆ. ನನ್ನ ದೃಷ್ಟಿಯಿಂದ ಅದು waste ಅಲ್ಲ. ಅದು ಮೂಲಭೂತ ಸವಲತ್ತುಗಳನ್ನು ಒದಗಿಸುವಂತಾದ್ದು. ಆ point ಅನ್ನು ನಾನು ಇಲ್ಲಿ ಹೇಳಲಿಕ್ಕೆ ಹೊರಟಿದ್ದೆ. ಇದೊಂದು ಭಾಗ. ಎರಡನೆಯದು, ನೀವು ಕೊಡಲಿಲ್ಲ. you are right, ಮಾನ್ಯ ಸಿದ್ದರಾಮಣ್ಣ ಕೊಡಲಿಲ್ಲ. ಹಿಂದಿನ ಯಾವುದೇ ಸರ್ಕಾರದಲ್ಲಿ ದೇವರು ದಿಂಡರಿಗೆ ಕೊಡಲಿಲ್ಲ, OK. ಆದರೆ ಮೂಲ ಭೂತ ಸೌಲಭ್ಯಗಳೇನು ಸಿಗಬೇಕಾಗಿತ್ತೋ, ಅದು ಸಿಕ್ಕಿತೇ? ಬೆಂಗಳೂರಿನ ಬಗ್ಗೆ ಈಗ ಮಾತನಾಡಿದಿರಿ. ಸವಲತ್ತುಗಳನ್ನು ಕೊಡದಂತೆ ನಾವು ತಡೆದಿದ್ದೇವೆಯೇ? ನಾವು ಬಂದು ಕೇವಲ 8-9 ತಿಂಗಳಾಯಿತು. ನಾನು ವರ್ಷದ ಕೊನೆಯೊಳಗೆ, ದೇವರು-ದಿಂಡರಿಗೂ ದುಡ್ಡು ಕೊಡುತ್ತೇವೆ, ಬೆಂಗಳೂರನ್ನು ಮತ್ತು ರಾಜ್ಯವನ್ನು ಅಭಿವೃದ್ಧಿ ಮಾಡಿ, ಮೂಲಭೂತ ಸವಲತ್ತುಗಳನ್ನು ಒದಗಿಸದಿದ್ದರೆ, ಆಗ ಕೇಳಿ. ನಾನು ನಿಮಗೆ ಉತ್ತರ ಕೊಡುತ್ತೇನೆ.

[ಗೊಂದಲ]

[ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಡಾ: ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ಈ ಸರ್ಕಾರದ ಉದ್ದೇಶ, social investmentಗಿಂತ social expenditure ಮಾಡಿದರೆ ರಾಜ್ಯದ ಅಭಿವೃದ್ಧಿಯಾಗುತ್ತದೆ, ಜನರ ಹಿತವಾಗುತ್ತದೆ ಎನ್ನುವ ಭಾವನೆ ಇರುವಂತೆ ಕಾಣುತ್ತದೆ. ಜೊತೆಗೆ ಜನರ ಏಳಿಗೆಗಿಂತ ಹೆಚ್ಚಾಗಿ ಮಠ ಮತ್ತು ದೇವಸ್ಥಾನಗಳಿಗೆ ದುಡ್ಡು ಕೊಟ್ಟರೆ, ಸುಖೀರಾಜ್ಯ ಸ್ಥಾಪನೆ ಮಾಡಿದಂತಾಗುತ್ತದೆಂದು ನೀವು ಭಾವಿಸಿದ್ದೀರಿ. ಅನೇಕ ಸಾಹಿತಿಗಳು ಮತ್ತು ಕವಿಗಳ ಹೆಸರುಗಳನ್ನೂ ಇಲ್ಲಿ ಉಲ್ಲೇಖ ಮಾಡಿದ್ದಾರೆ. ಇದೆಲ್ಲವನ್ನೂ ನೋಡಿದಾಗ, ಹಿಂದೆ ಡಿ.ವಿ.ಗುಂಡಪ್ಪನವರಿಗೆ ಸನ್ಮಾನ ಮಾಡಬೇಕು, pension ಕೊಡಬೇಕೆಂದು ಹೇಳಿದಾಗ, ಡಿ.ವಿ.ಜಿ.ಯವರು 'ಏಕ್ರೀ? Tax payers ದುಡ್ಡು ನನಗೆ ಕೊಡುತ್ತೀರಿ, ಅದು ನನಗೆ ಬೇಡ' ಎಂದು ಅವರು pension ಸಹ ತೆಗೆದುಕೊಳ್ಳಲಿಲ್ಲ, ಸನ್ಮಾನವನ್ನೂ ಸಹ ಸ್ವೀಕಾರ ಮಾಡಲಿಲ್ಲ. ಅಂತಹ ಉದಾಹರಣೆಗಳಿವೆ. ಬಜೆಟ್‌ನಲ್ಲಿ ಗಾಂಧೀಜಿ ಸೇರಿದಂತೆ ಅನೇಕ ಮಹನೀಯರ ಹೆಸರುಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅವರು ಯಾವ ರೀತಿಯಾಗಿ ನಡೆದುಕೊಂಡರು ಎನ್ನುವುದನ್ನು ಅನುಸರಿಸುವುದು ಬಿಟ್ಟು, ಬೇರೆ ಬೇರೆ ತರಹ ನಡೆದುಕೊಂಡು ಹೋದರೆ ಹೇಗೆ? ಇಲ್ಲಿ backward class ಮತ್ತು minority education institutions ಇವೆ. Institutions ಗೆ. ಕೊಡಬೇಕಾದರೆ ಅವರಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ? ಇವರ ಸಂಸ್ಥೆಗಳು ಎಷ್ಟಿವೆ? ವರ್ಷಕ್ಕೆ grant-in-aid ಯಾರ್ಯಾರು ಎಷ್ಟೆಷ್ಟು ತೆಗೆದುಕೊಳ್ಳುತ್ತಿದ್ದಾರೆ? Tax payers money ಯಾವ್ಯಾವುದಕ್ಕೆ ಎಷ್ಟೆಷ್ಟು ಬಳಕೆಯಾಗುತ್ತದೆ? ಒಟ್ಟಾರೆ ರಾಜ್ಯದ ಅಭಿವೃದ್ಧಿ ಮತ್ತು ಜನರ ಹಿತ ಆಗದಿದ್ದ ಮೇಲೆ, ಮಠಗಳನ್ನು ಮತ್ತು ದೇವಸ್ಥಾನಗಳನ್ನು ಎರಡನೆಯದಾಗಿಟ್ಟುಕೊಂಡು, ಅಭಿವೃದ್ಧಿ ಕಡೆ ಹೆಚ್ಚು ಗಮನ ಕೊಡದಿದ್ದರೆ, ಇದೇ ಮುಖ್ಯವೆಂದು ಹೇಳಿದರೆ, ಯಾವ ರೀತಿ ಅಭಿವೃದ್ಧಿಯಾಗುತ್ತದೆ ಅಥವಾ tax payers money ಗೆ ಬಜೆಟ್‌ಗೆ ಏನು ಅರ್ಥ ಮತ್ತು ಗೌರವ ಅದಕ್ಕಾಗಿ ಸರ್ಕಾರ ತನ್ನ ದೃಷ್ಟಿಕೋನವನ್ನು ಬದಲಾವಣೆ ಮಾಡಿಕೊಳ್ಳಬೇಕು. ಅವರ ಧಾರ್ಮಿಕವಾದಂತಹ, ವಿಧಿ ಅಥವಾ ಆಚಾರಗಳನ್ನು ಖಾಸಗಿಯಾಗಿ ಏನಾದರೂ ಮಾಡಿಕೊಳ್ಳಲಿ. ಅದನ್ನು ಕಾನೂನು ಬದ್ಧವಾಗಿ ರಾಜ್ಯಾಂಗದ ಕೆಳಗಡೆ ನಡೆಸುವಂತಾದ್ದು ರಾಜ್ಯಾಂಗಕ್ಕೆ ಮಾಡಿದಂತಹ ಅಪಚಾರವಾಗುತ್ತದೆ.

ಶ್ರೀ ಸಿದ್ದರಾಮಯ್ಯ:- Sorry. ಇದೆಲ್ಲಾ ಇರಬೇಕು. ಇಲ್ಲದಿದ್ದರೆ ನಿಮ್ಮ ಆದ್ಯತೆಗಳೆಲ್ಲಾ ನಮಗೆ ಗೊತ್ತಾಗುತ್ತಲೇ ಇರಲಿಲ್ಲವಲ್ಲ. ನಿಮ್ಮ ಆದ್ಯತೆಗಳೇ ನಮಗೆ ಗೊತ್ತಿರಲಿಲ್ಲ. ನೀವು ಹೇಳಿದ್ದು ನಮಗೆ ಒಳ್ಳೆಯದೇ ಆಯಿತು. ಮಾನ್ಯ ಅಧ್ಯಕ್ಷರೇ, ಕಾಗಿನೆಲೆಗೆ ಕೊಟ್ಟಿದ್ದೇವೆ, ಬಸವ ಕಲ್ಯಾಣಕ್ಕೆ ಕೊಟ್ಟಿದ್ದೇವೆ, ಕೂಡಲ ಸಂಗಮ

ಕೊಟ್ಟಿದ್ದೇವೆ, ಅಲ್ಲಿ ಬುದ್ಧ ವಿಹಾರಕ್ಕೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. Alright, ಅವುಗಳಿಗೆಲ್ಲಾ ಕೊಟ್ಟಿರುವುದಕ್ಕೆ thanks ಹೇಳೋಣ. ಮಾನ್ಯ ಜೆ.ಹಚ್.ಪಟೇಲರ ಸಂಪುಟದಲ್ಲಿ ನಾನು ಹಣಕಾಸಿನ ಸಚಿವನಾಗಿದ್ದಾಗಲೇ ಕೂಡಲ ಸಂಗಮ ಅಭಿವೃದ್ಧಿಗೆ ಖರ್ಚು ಮಾಡಿದ್ದೆವು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಆಗ ದೇವರು ಇರಲಿಲ್ಲವೇ?

ಶ್ರೀ ಸಿದ್ದರಾಮಯ್ಯ :- ಅದನ್ನು ದೇವರು ಎಂದು ಮಾಡಲಿಲ್ಲ ಸುಮ್ಮನೆ ಕುಳಿತುಕೊಳ್ಳಿ, ಬಸವಣ್ಣ ದೇವರಲ್ಲ, ಕುಳಿತುಕೊಳ್ಳಿ.

[ಗೊಂದಲ]

ಶ್ರೀ ;ಕಟ್ಟಾ ಸುಬ್ರಹಣ್ಯ ನಾಯ್ಡು:- ಕಾಗಿನೆಲೆ ಮಠ ಅಲ್ಲವೇ?

[ಗೊಂದಲ]

ಶ್ರೀ ಸಿದ್ದರಾಮಯ್ಯ:- ನಿಮ್ಮ ಪ್ರಕಾರ ಬಸವಣ್ಣನನ್ನು ನೀವು ದೇವರು ಎಂದೇ ಇಟ್ಟಕೊಳ್ಳಿ. ಅದಕ್ಕೆ ನಮ್ಮದೇನೂ ತಕರಾರಿಲ್ಲ. ಕನಕದಾಸರನ್ನು ದೇವರು ಎಂದು ನಾನು ಅಂದುಕೊಳ್ಳುವುದಿಲ್ಲ. ಬಸವಣ್ಣ ದೇವರು ಎಂದು ನಾನು ಅಂದುಕೊಳ್ಳುವುದಿಲ್ಲ. ಅವರು ಸಮಾಜ ಸುಧಾರಕರು, ಒಬ್ಬ ದೊಡ್ಡ ಶರಣರು. ಕನಕದಾಸರು ಒಬ್ಬ ಶ್ರೇಷ್ಠ ದಾಸರು, ಅವರೂ ಕೂಡ ಸಮಾಜ ಸುಧಾರಕರು. ಅವರನ್ನು ಆ ಹಿನ್ನೆಲೆಯಲ್ಲಿ ನೋಡುತ್ತಿದ್ದೇವೆಯೇ ಹೊರತು, ಬಸವಣ್ಣನವರನ್ನು ದೇವರು ಎಂದು ನೋಡುವುದಿಲ್ಲ. ಕಾಗಿನೆಲೆಯಲ್ಲೂ ಕೂಡ ಕನಕದಾಸರನ್ನು ದೇವರು ಎಂದು ನೋಡುವುದಿಲ್ಲ. ಅವರನ್ನು ಒಬ್ಬ reformer ಎಂದು ನಾವು ನೋಡುತ್ತೇವೆ, ಅವರೊಬ್ಬರು ಶ್ರೇಷ್ಠ ದಾಸರೆಂದು ನಾವು ನೋಡುತ್ತೇವೆ. ಎಲ್ಲರನ್ನೂ ದೇವರು ಎಂದು ಹೇಳಿಬಿಟ್ಟರೆ ಹೇಗೆ? ಮಾನ್ಯ ಅಧ್ಯಕ್ಷರೆ, ಮುಜರಾಯಿ ಇಲಾಖೆ ಎಂಬುದಿದೆ. ಮುಜರಾಯಿ ಇಲಾಖೆಗೆ ಇನ್ನೊಂದಿಷ್ಟು ದುಡ್ಡು ಕೊಡಿ. ಯಾವ್ಯಾವ ದೇವಸ್ಥಾನಗಳು ಶಿಥಿಲವಾಗಿವೆಯೋ, ಅವುಗಳನ್ನು ರಿಪೇರಿ ಮಾಡತಕ್ಕದ್ದು, ಇತ್ಯಾದಿಗಳನ್ನು ಆ ಹಣದಿಂದ ಮಾಡಲಿ, ಅದಕ್ಕೆ ನಮ್ಮದೇನೂ ತಕರಾರಿಲ್ಲ. But, ಇಲ್ಲಿ ಯಾವ ಹಣವನ್ನು ನಾವು ಅಭಿವೃದ್ಧಿಗೆ ಖರ್ಚು ಮಾಡಬೇಕಾಗಿತ್ತೋ, ಆ ಹಣವನ್ನು ತೆಗೆದುಕೊಂಡು ಹೋಗಿ, ನಾವು ಯಾವ್ಯಾವುದಕ್ಕೋ non developmental expenditure ಮಾಡತಕ್ಕ ರೀತಿ ಇದೆಯಲ್ಲಾ, that is a bad practice. It's very bad practice. ಹಾಗಾದರೆ, ನೀರಾವರಿಗೆ ಹಣ ಖರ್ಚು ಮಾಡುವುದು ಬೇಡ, ವಿದ್ಯುಚ್ಛಕ್ತಿ ಉತ್ಪಾದನೆಗೆ ಹಣ ಖರ್ಚು ಮಾಡುವುದು ಬೇಡ, ವಿದ್ಯುಚ್ಛಕ್ತಿ ಉತ್ಪಾದನೆಗೆ ಹಣ ಖರ್ಚು ಮಾಡುವುದು ಬೇಡ, ಮನೆ ಕಟ್ಟಿಸುವುದು ಬೇಡ, ಬಡವರಿಗೆ ಅಕ್ಕಿ ಕೊಡುವುದು ಬೇಡ, ಎಲ್ಲರೂ ಬರೇ ದೇವಸ್ಥಾನಗಳನ್ನೇ ಕಟ್ಟಿಕೊಂಡು ಕುಳಿತುಬಿಡೋಣ. ಅದರಿಂದ ಎಲ್ಲರಿಗೂ ಹೊಟ್ಟೆ ತುಂಬುತ್ತದೆ! ಅದನ್ನೇ ಮಾಡುವುದಕ್ಕಾಗುತ್ತದೆಯೇ? ಯಾಗ ಯಜ್ಞಗಳನ್ನೇ ಮಾಡಿಕೊಂಡು ಕುಳಿತುಕೊಂಡು

ಬಿಡೋಣ. ಮಳೆಯೂ ಬರುತ್ತದೆ, ಬೆಳೆಯೂ ಬರುತ್ತದೆ, ಎಲ್ಲಾ ಬರುತ್ತದೆ. ಆದ್ದರಿಂದ ನಾವೆಲ್ಲ ಅದನ್ನೇ ಮಾಡೋಣ. ದೇವರ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದೇವೆ, ದೇವಸ್ಥಾನಗಳಿಗೂ ಸಹ ಹೋಗುತ್ತೇವೆ. ಕುವೆಂಪು ಹೇಳಿರತಕ್ಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಕುವೆಂಪುರವರು ದೇವಸ್ಥಾನಗಳು, ಮಂದಿರಗಳು, ಮಠಗಳು, ಚರ್ಚ್‌ಗಳು ಎಲ್ಲವನ್ನೂ ಬಿಟ್ಟು ಹೊರಗಡೆ ಬನ್ನಿ ಎಂದು ಹೇಳೀದ್ದಾರೆ. ಅವರ ವಿಚಾರ ತಾನೇ ಮುಖ್ಯವಾಗಿರುವುದು ಬಸವಣ್ಣನವರೂ ಸಹ ಅದನ್ನೇ ಹೇಳಿದ್ದಾರೆ. ದೇವಸ್ಥಾನಕ್ಕೆ ಹೋಗಲೇಬೇಕೆಂದು ಬಸವಣ್ಣನವರು ಹೇಳಿದ್ದಾರೆಯೇ? 'ಉಳ್ಳವರು ದೇವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯ ನನ್ನ ದೇಹವೆ ದೇಗುಲ, ನನ್ನ ಕಾಲೇ ಕಂಬ ನನ್ನ ಶಿರವೇ ಹೊನ್ನ ಕಳಸವಯ್ಯ ಕೂಡಲು ಸಂಗಮದೇವ' ಎಂದು ಅವರು ಹೇಳಿದ್ದಾರೆ. ಅವರು ದೇವಸ್ಥಾನಗಳನ್ನೇ ಮಾಡಿ ಎಂದು ಹೇಳಿದ್ದಾರೆಯೇ?

ಶ್ರೀ ರಾಮಚಂದ್ರಗೌಡ:– ನೀವೇ ದೇವರು,

ಶ್ರೀ ಸಿದ್ದರಾಮಯ್ಯ :– ಏಕೋ ಮಾನ್ಯ ರಾಮಚಂದ್ರಗೌಡರೆ, ನೀವು ಮುಂಚೆ ಸರಿಯಾಗಿದ್ದೀರಿ. ಇತ್ತೀಚೆಗೆ ಏಕೋ ಈ ತರಹ ಆಗಿಬಿಟ್ಟಿದ್ದೀರಿ.

ಡಾ: ಹೆಚ್.ಸಿ.ಮಹದೇವಪ್ಪ :– ನೀವು ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಪಕ್ಕ ಕುಳಿತುಕೊಂಡು ಕೆಟ್ಟಿದ್ದೀರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ನಿಮ್ಮನ್ನೂ ದೇವರು ಎಂದು ಹೇಳುತ್ತಿದ್ದಾರೆ. ನಿಮಗೂ ಈಗ ಬಜೆಟ್‌ನಲ್ಲಿ 2 ಕೋಟಿ ರೂ.ಗಳನ್ನು ಕೊಡುತ್ತಾರೆ ಬಿಡಿ.

ಶ್ರೀ ಸಿದ್ದರಾಮಯ್ಯ:– ನಾನು ದೇವರಲ್ಲ. ದೇವರು ಎಂದು ಯಾರೂ ಕೂಡ ಆಗಲಿಕ್ಕೆ ಸಾಧ್ಯವಿಲ್ಲ. ಯಾರಿಗೂ ದೇವರು ಎಂದು ಹೇಳಲೂ ಬಾರದು.

ಶ್ರೀ ರಾಮಚಂದ್ರಗೌಡ:– 'ದೇವರೇ' ಎಂದು ಸಂಬೋಧಿಸಿ ಮಾತನಾಡಿಸುತ್ತಾರೆ. ಅದು ಇರುವ ಪದ್ಧತಿ.

ಶ್ರೀ ಸಿದ್ದರಾಮಯ್ಯ ;– ಸುಮ್ಮನೆ ಇರುವುದು ಬಿಟ್ಟು, ನೀವು ಇತ್ತೀಚೆಗೆ ಏನೇನೋ ಹೇಳಿ ಬೈಸಿಕೊಳ್ಳುತ್ತಿದ್ದೀರಲ್ಲ? ಈ ರೀತಿ ಹೇಳಿ ಫಜೀತಿಗೆ ಸಿಕ್ಕಿಹಾಕಿಕೊಳ್ಳಬೇಡಿ.

ಆದುದರಿಂದ, ನಾನು ಮುಜರಾಯಿ ದೇವಸ್ಥಾನಗಳನ್ನು ರಿಪೇರಿ ಮಾಡಬಾರದೆಂದು ಹೇಳುವುದಕ್ಕೆ ಹೋಗಲಿಲ್ಲ. ಇಲ್ಲಿ ನಾವು ಹಣಕಾಸಿನ ಬಿಕ್ಕಟ್ಟಿನಲ್ಲಿ ಸಿಕ್ಕಹಾಕಿಕೊಂಡಿದ್ದೇವೆ. ಪ್ಲಾನ್‌ನಲ್ಲಿ 10,–000 ಕೋಟಿ ಕಡಿತವಾಗುತ್ತಿದೆ, ನೀರಾವರಿಗೆ ಹಣ ಕೊಡುವುದಕ್ಕಾಗಲಿಲ್ಲ. ನೀರಾವರಿಗೆ 29% ಖರ್ಚು ಮಾಡುತ್ತಿದ್ದದ್ದು, ಇವತ್ತು ಯಾವ ಪರ್ಸೆಂಟ್‌ಗೆ ಬಂದಿದ್ದೇವೆ? 13%ಗೆ. ಇದಕ್ಕೆ ಖರ್ಚು ಮಾಡಬೇಕೋ ಅಥವಾ 29%ಗೆ ತೆಗೆದುಕೊಂಡು ಹೋಗಬೇಕೋ ಇಲ್ಲ ಮತ್ತೆ ಇವೆಲ್ಲಾ ಖರ್ಚು ಮಾಡಿ ಅದನ್ನು 5% ಗೆ ತೆಗೆದುಕೊಂಡು ಹೋಗಬೇಕೊ? That is my point. 2005–06 ರಲ್ಲಿ 29% ನೀರಾವರಿಗೆ ಇದ್ದದ್ದು, it has been reduced to 13%

ಮುಂದಿನ ವರ್ಷಕ್ಕೆ ಪ್ಲಾನ್ ಸೈಜೆ 29,500ಕೋಟಿ ಇದೆ, ಅದಕ್ಕೆ ಅನುಗುಣವಾಗಿ ಈ ವರ್ಷ ನೀರಾವರಿಗೆ ಇಡಬೇಕಾದ್ದದ್ದು ಸುಮಾರು 6,000–7,000 ಕೋಟಿ ಇಡಬೇಕಾಗಿತ್ತು to maintain that percentage. ನೀವು ಎಲ್ಲಿ ಇಟ್ಟಿದ್ದೀರಿ? ನೀರಾವರಿಯಾಗಬೇಕು. ಇವತ್ತು food production ನೀವೆ ಒಪ್ಪಕೊಂಡಿದ್ದೀರಿ, ಈ ಸಾರಿ ನಮಗೆ ಸರಿಯಾಗಿ ಮಳೆಯಾಗಲಿಲ್ಲ, ಹಿಂಗಾರು ಮಳೆ ಕಡಿಮೆಯಾಯಿತು, ಆದುದರಿಂದ ಆಹಾರ ಉತ್ಪಾದನೆ ಎಷ್ಟು ಆಗಬೇಕಾಗಿತ್ತೋ ಅದಕ್ಕಿಂತ ಕಡಿಮೆ, ಅಂದರೆ 2008–09ಕ್ಕೆ 125 ಲಕ್ಷ ಟನ್ ಆಹಾರ ಉತ್ಪಾದನೆಯಾಗುತ್ತದೆ ಎಂದು ಲೆಕ್ಕ ಇಟ್ಟುಕೊಂಡಿದ್ದರು. ಎಷ್ಟು ಆಗಬಹುದು, ಅಂದಾಜು 108 ಲಕ್ಷ ಟನ್ ಆಗುತ್ತದೆಂದ ಎಕನಾಮಿಕ್ ಸರ್ವೇನಲ್ಲಿ ಇಟ್ಟುಕೊಂಡಿದ್ದೀರಿ, ಒಂದೊಂದರಲ್ಲಿ ಒಂದೊಂದು ರೀತಿ ಹೇಳಿದ್ದಾರೆ. 108 ಎಂದರೆ ಅದಕ್ಕಿಂತ ಕಡಿಮೆಯಾಗಬಹುದು. Every year population growth 2% ಇದೆ, ಕರ್ನಾಟಕದಲ್ಲಿ 1.8% ಇದೆ, ಪ್ರತಿ ವರ್ಷ 2% population growth ಇರುವಾಗ ನಿಮ್ಮ ಫುಡ್ ಪ್ರೊಡಕ್ಷನ್ ಹೆಚ್ಚಾಗಬೇಕೋ ಕಡಿಮೆಯಾಗಬೇಕೋ, ಕೃಷಿ ರಂಗಕ್ಕೆ ಹೆಚ್ಚು ಖರ್ಚು ಮಾಡಬೇಕೋ ಕಡಿಮೆ ಮಾಸಬೇಕೋ? If you don't invest more money on agriculture sector, how can you expect more production? ಹಣವನ್ನು ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಮಾಡಿದ್ದೀರಿ, ಫುಡ್ ಪ್ರೊಡಕ್ಷನ್ ಹೇಗೆ ಆಗುತ್ತದೆ? ನೀವು ಏನು ಹೇಳುತ್ತೀರಿ, ಇಲ್ಲ, ನಾವು ಸಾವಯವ ಕೃಷಿ 100 ಕೋಟಿ ಕೊಟ್ಟಿದ್ದೇವೆ, ಸಣ್ಣ ಅತೀ ಸಣ್ಣ ರೈತರಿಗೆಲ್ಲಾ ಒಂದೊಂದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ, 3% ಬಡ್ಡಿದರದಲ್ಲಿ ಸಾಲವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. But where is the result? The result is zero. ನೀರಾವರಿಯನ್ನು ನೀವು ಹೆಚ್ಚು ಮಾಡಲಿಲ್ಲ, ವಿದ್ಯುಚ್ಛಕ್ತಿ ಹೆಚ್ಚು ಮಾಡಲು ನೀವು ಪ್ರಯತ್ನ ಮಾಡಲಿಲ್ಲ. ಹೆಚ್ಚು ಮಾಡುವುದಿರಲಿ, T&D losses, Transmission loss, Distribution loss and theft 2002–03 ರಲ್ಲಿ 35.6% ಇತ್ತು, ಈಗ ಎಷ್ಟಾಗಿದೆ? ನಿಮ್ಮ Medium Term Fiscal plan ನಲ್ಲಿ 27.06% ಆಗಿದೆ ಎಂದು ಹೇಳುತ್ತಾರೆ. ಅಂದರೆ ನಿಮಗೆ Fiscal Responsibility Act ಪ್ರಕಾರ ಅದನ್ನು ಪ್ರತಿ ವರ್ಷ 5% ಕಡಿಮೆ ಮಾಡಬೇಕೆನ್ನುವ ಗುರಿ ಇತ್ತು. From the day of Fiscal demand started, ಇವತ್ತಿನವರೆಗೆ ನೀವು ಕಡಿಮೆ ಮಾಡಿರುವುದು 35.6–2706%. ಎಷ್ಟಾಯಿತು About 8%. ಏಕೆ, 16ನ್ನು ಕಡಿಮೆ ಮಾಡುವುದನ್ನು ಪ್ರಯತ್ನ ಮಾಡಬಾರದಾಗಿತ್ತು? ನೀವು ಪಂಪ್ ಸೆಟ್‌ಗಳಿಗೆಲ್ಲಾ ಹೇಗೆ ವಿದ್ಯುತ್ ಕೊಡುತ್ತೀರಿ? 6 ಗಂಟೆ 3 ಫೇಸ್ ನಲ್ಲಿ ವಿದ್ಯುತ್ ಕೊಡುತ್ತೇವೆಂದು ನೀವು ಆದೇಶವನ್ನು ಹೊರಡಿಸಿದ್ದೀರಿ, but the truth is, 3 ಗಂಟೆನೂ ಸರಿಯಾಗಿ ವಿದ್ಯುತ್ ಸಿಗುತ್ತಿಲ್ಲ. ನಾವು ಏನು ಲೆಕ್ಕಾ ಹಾಕಿಕೊಂಢಿದ್ದೇವೆಂದರೆ, 15 ಲಕ್ಷ

ಹೆಕ್ಟೇರ್‌ನಲ್ಲಿ ಗ್ರೌಂಡ್‌ವಾಟರ್ ಮೂಲಕ ನೀರನ್ನು ಕೊಟ್ಟು ಆಹಾರ ಉತ್ಪಾದನೆ ಹೆಚ್ಚು ಮಾಡಬೇಕು. Where is the power to increase the agriculture production? ಪವರೇ ಇಲ್ಲ, ಗ್ರೌಂಡ್ ವಾಟರ್ ಅನ್ನು ತೆಗೆಯಲು ವಿದ್ಯುತ್ ಇದ್ದರೆ ತಾನೆ ಪಂಪ್ ಸೆಟ್ ಓಡುವುದು? ಅಲ್ಲಿ ಸ್ವಿಚ್ ಹಾಕಿ ಬರುವುದರೊಳಗೆ ನಿಂತು ಹೋಗಿರುತ್ತದೆ, ಫುಡ್ ಪ್ರೊಡಕ್ಷನ್ ಹೇಗೆ ಜಾಸ್ತಿಯಾಗುತ್ತದೆ? ರಾತ್ರಿ 12 ಗಂಟೆ ಮೇಲೆ ನಿಲ್ಲಿಸಿಬಿಟ್ಟರೆ, ಹಳ್ಳಿಗಳಲ್ಲಾದರೆ ಪರವಾಗಿಲ್ಲ, ಇಲ್ಲೆಲ್ಲಾ ಕಳ್ಳತನಗಳೆಲ್ಲಾ ಆರಂಭವಾಗಿವೆ, ಕೊಲೆಗಳು, ಸುಲಿಗೆಗಳು ಏಕೆ ಆಗುತ್ತವೆಂದರೆ ಇದಕ್ಕೆ. ಕತ್ತಲೆಯಲ್ಲಿ ಬೆಳಿಗ್ಗೆ ಹೊತ್ತು ನುಗ್ಗಿಬಿಡುತ್ತಾರೆ, ಈಗ ಮಧ್ಯಾಹ್ನದ ಹೊತ್ತೆ ಶುರು ಮಾಡಿಕೊಂಡಿದ್ದಾರೆ. ಕರೆಂಟ್ ಇಲ್ಲದೆ ಈಗ ಹಳ್ಳಿಗಳಲ್ಲೂ ಕಳ್ಳತನಗಳು ಶುರುವಾಗಿದ್ದಾವೆ. ಹೊಟ್ಟೆಗಿಲ್ಲದವರು ಏನು ಮಾಡುತ್ತಾರೆ? ಬದುಕುವುದಕ್ಕೋಸ್ಕರ ಈ ರೀತಿಯ ಕೆಲಸಗಳನ್ನು ಶುರು ಮಾಡಿಕೊಳ್ಳುತ್ತಾರೆ. ಬಚ್ಚೇಗೌಡರಿಗೆ ಹಳ್ಳಿಜೀವನ ಗೊತ್ತಿದೆ, ಅವರು ತೋಟಗೀಟ ಮಾಡಿಕೊಂಡಿದ್ದಾರೆ, ನಿಮ್ಮ ತೋಟಕ್ಕೆ ಕರೆಂಟ್ ಇದೆಯೊ, ಎಲ್ಲ ಒಣಗಿ ಹೋಗಿದ್ದಾವೆ ಒಂದು ಸಾರಿ ಹೋಗಿ ನೋಡಿಕೊಂಡು ಬನ್ನಿ. ನೀರಾವರಿ ಫ್ಲೋ ವಾಟರ್ ಮೂಲಕ 35 ಹೆಕ್ಟೇರ್ ಪೊಟೆನ್ಸಿಯಲ್ ಇದೆ ಎಂದು ಹೇಳುತ್ತಿದ್ದೀರಿ, ಏನು 3 ವರ್ಷದಿಂದ ಜಾಸ್ತಿಯಾಯಿತೊ? ಅಲ್ಲಿ ಇನ್ನು 24 ಲಕ್ಷನೇ ಇದೆ, 35 ಲಕ್ಷವಾಗಬೇಕು. 10 ಲಕ್ಷ ಮೈನರ್ ಇರಿಗೇಷನ್‌ನಿಂದ ಮಾಡುತ್ತೇವೆ, ಆಹಾರ ಉತ್ಪಾದನೆ ಜಾಸ್ತಿ, ಗ್ರೌಂಡ್ ವಾಟರ್ ನಿಂದ 15 ಲಕ್ಷ ಹೆಕ್ಟೇರ್, ಎಲ್ಲಾ ಸೇರಿ 60 ಹೆಕ್ಟೇರ್ ಗೆ ನೀರು ಕೊಟ್ಟು ಆಹಾರ ಉತ್ಪಾದನೆಯನ್ನು ದ್ವಿಗುಣ ಮಾಡುತ್ತೇವೆ, ಎಲ್ಲಿದೆ ದ್ವಿಗುಣ? ಕಳೆದ ಸಾರಿಯಷ್ಟು ಈ ಸಾರಿ ಬಂದಿಲ್ಲವೆನ್ನುವಾಗ ದ್ವಿಗುಣವೆಲ್ಲಿ? ದ್ವಿಗುಣದ ಕಡೆ ಹೆಜ್ಜೆಯಾದರು ಹಾಕಬೇಕಲ್ಲ. ಕಳೆದ ಸಾರಿ ಕೊಟ್ಟಿದ್ದ ದುಡ್ಡನ್ನು ಕೂಡ ಕಡಿಮೆ ಮಾಡಿಬಿಟ್ಟಿದ್ದೀರಿ, ಅಲೊಕೇಷನ್ ಮಾಡುವುದು ಒಂದು ಖರ್ಚು ಮಾಡುವುದು ಇನ್ನೊಂದು, ದುಡ್ಡನ್ನೇ ಬಿಡುಗಡೆ ಮಾಡುವುದಿಲ್ಲ. ನಾನು ಹೇಳಿದಂತೆ 57,429 ಕೋಟಿ 2007–08 ರಲ್ಲಿ ಖರ್ಚನ್ನು ತೋರಿಸಿಬಿಟ್ಟು ಬಿಡುಗಡೆ ಮಾಡಿರುವುದು 48,487 ಕೋಟಿ. ಇದನ್ನು ನಾನು ಹೇಳುತ್ತಿರುವುದಲ್ಲ, ಇದು AGS report. It is not my figure, ಇದು ಸಿಎಜಿಯವರ ಫಿಗರ್ಸ್. ನೀವು ಸುಮಾರು 9000 ಕೋಟಿಯನ್ನು ಬಿಡುಗಡೆ ಮಾಡಿಲಿಲ್ಲವೆಂದರೆ, ಏಕೆ ಪ್ಲಾನ್ ಅಲೋಕೇಷನ್ ಅನ್ನು ಅಷ್ಟು ದೊಡ್ಡದಾಗಿ ಮಾಡುತ್ತೀರಿ? ನೀವು ವಾಸ್ತವಿಕ ಜಗತ್ತಿನಲ್ಲಿ ಸ್ವಲ್ಪ ನಿಂತುಕೊಂಡು ಕಾರ್ಯಕ್ರಮಗಳನ್ನು ಮಾಡಿ, ಎಲ್ಲಾ ಭ್ರಮಾಲೋಕದಲ್ಲಿ ನಿಂತುಕೊಂಡು ಮಾಡುವುದಕ್ಕೆ ಹೋದರೆ, ಅದು ಒಂದು ದಿನ ಎಕ್ಸ್‌ಪೋಸ್ ಆಗಿಯೇ ಆಗುತ್ತದೆ. ಈಗ ನೀವು ದುಡ್ಡನ್ನೆ ಬಿಡುಗಡೆ ಮಾಡುವುದಿಲ್ಲವೆಂದು ಸಿಎಜಿ ಎಕ್ಸ್‌ಪೋಸ್ ಮಾಡಿಲ್ಲವೇ? ಮುಂದಿನ ವರ್ಷ ಎಷ್ಟು ಬಿಡುಗಡೆ ಮಾಡುವುದಿಲ್ಲವೆಂದು ಗೊತ್ತಾಗುವುದಿಲ್ಲವೊ, ಪ್ಲಾನ್‌ಗೆ 26,000 ಕೋಟಿಯನ್ನು ಎಲ್ಲಿಂದ ಮಾಡುತ್ತೀರಿ? ಬಿಡುಗಡೆ ಮಾಡುವುದಕ್ಕೆ ಎಲ್ಲಿದೆ ದುಡ್ಡು? ಅದರ ಜೊತೆಗೆ

ಇಲ್ಲೇ ಖರ್ಚಾಗಿರುವುದಿಲ್ಲ, ಪ್ರತಿ ವರ್ಷ 10-15% ಸಪ್ಲಿಮೆಂಟರಿ ಎಸ್ಟಿಮೇಟ್, ಇಲ್ಲೇ ದುಡ್ಡು ಬಿಡುಗಡೆಯಾಗಿರುವುದಿಲ್ಲ, ಇಲ್ಲೇ ರಿಸೋರ್ಸಸ್ 7000-8000 ಕೋಟಿ ಆಗಿರುವುದಿಲ್ಲ. in addition to that, ಹೋದ ಹೋದಾಗೆಲ್ಲಾ ನಿಮಗೆ ಇಷ್ಟು ಕೋಟಿ ಕೊಡುತ್ತೇನೆ, ಅಷ್ಟು ಕೋಟಿ ಕೊಡುತ್ತೇನೆಂದು ಪ್ರಕಟಣೆ ಮಾಡಿರುತ್ತಾರಲ್ಲ, ಅವೆಲ್ಲಾ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಸೇರಿರುತ್ತದೆ. Fiscal Responsibility Act ನಲ್ಲಿ ಈ ರೀತಿ ಮಾಡಿ ಎಂದು ಹೇಳಿದ್ದಾರೆಯೇ?

ಈ ತರಹ ಮಾಡಿಕೊಳ್ಳಿ ನಮಗೆ ಇಷ್ಟ ಬಂದ ಹಾಗೆ ಹೇಳಿ ಎಂದು ಹೇಳಿದ್ದಾರಾ? ಇವನ್ನೆಲ್ಲಾ ಮಾಡಬಾರದು ಎಂದು Fiscal Responsibility Act ನಲ್ಲಿ ಬಹಳ specific ಆಗಿ ಹೇಳಿರುವುದು. ಇವೆಲ್ಲಾ ಮಾಡಬಾರದು ಮತ್ತೆ ಹಿಂದಿನ ಹಳೆಯ ಪರಿಸ್ಥಿತಿ ಕರ್ನಾಟಕ್ಕೆ ಬರಬಾರದು, ಹಿಂದಿನ ಆರ್ಥಿಕ ಪರಿಸ್ಥಿತಿ ಕರ್ನಾಟಕಕ್ಕೆ ಬರಬಾರದು ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಬೇಕೆಂದು. ಈ ವರ್ಷ 47.215 ಕೋಟಿ ರೂ. ಬರುತ್ತದೆ ಎಂದು ಲೆಕ್ಕ ಹಾಕಿಕೊಂಡಿದ್ದರು, ಅದನ್ನು ಅವರು 42,247 ಕೋಟಿ ರೂ.ಗೆ ರೆಡ್ಯೂಸ್ ಮಾಡಿ ಬಿಟ್ಟಿದ್ದಾರೆ. 47,240 ಕೋಟಿ ರೂ. ಬರುತ್ತದೆ, ರೆವಿನ್ಯೂ ರಿಸೀಟ್ಸ್ ಇಷ್ಟು ಬರುತ್ತದೆ ಎಂದು ಲೆಕ್ಕ ಹಾಕಿಕೊಂಡಿದ್ದರು. ನಿರೀಕ್ಷೆ ಇತ್ತು. ಈಗ ಅದನ್ನು ರಿವೈಸ್ ಮಾಡಿ, ನಮಗೆ ರಿಸಿಷನ್ ಬಂದು ಬಿಟ್ಟಿತು ಆದ್ದರಿಂದ ರಿವೈಸ್ ಮಾಡಿದ್ದೇವೆ, ದೇವಸ್ಥಾನಗಳಿಗೆ ಕೊಟ್ಟಿದ್ದೇವೆ, ಮಠಗಳಿಗೆ ಕೊಟ್ಟಿದ್ದೇವೆ ಅದರಿಂದ ರಿಸಿಷನ್ ಆಗಿದ ಎಂದು ಹೇಳಿ ಈಗ 42,817 ಕೋಟಿ ರೂ.ಗೆ ಇಟ್ಟುಕೊಂಡಿದ್ದೀರಿ. You cannot reach this also. Because it is not an accounted figure, it is also an estimated figure. ಇದೂ ಕೂಡ ತಲುಪತ್ತದೆಯೋ ಇಲ್ಲವೋ ಗೊತ್ತಿಲ್ಲ. ಏಕೆ ಈ ತರಹ ಮಾಡುವುದಕ್ಕೆ ಹೋಗುತ್ತೀರಿ? ಇದು ಒಂದು ರೀತಿಯಲ್ಲಿ ಜನಗಳಿಗೆ ದಾರಿ ತಪ್ಪಿಸತಕ್ಕಂತಹ, ಮೋಸ ಮಾಡತಕ್ಕಂತಹ, ಕೆಲಸ ಆಗುತ್ತದೆ. ಪತ್ರಿಕೆಯವರು ಬರೆಯುತ್ತಾರೆ, ಏನು ಕರ್ನಾಟಕದಲ್ಲಿ ಪ್ಲ್ಯಾನ್ ಸೈಜ್ 29,500 ಕೋಟಿ ಇದೆ ಎಂದು ಬರೆಯುತ್ತಾರೆ. ಇಲ್ಲಿ ಕಟ್ ಆಗಿರುವುದು ಯಾರಿಗೂ ಗೊತ್ತಾಗುವುದಿಲ್ಲ. ಜನಗಳ ಎಷ್ಟು ಕಟ್ ಆಗಿದೆ ಎಂದು ಅದನ್ನೆಲ್ಲಾ ನೋಡುವುದಕ್ಕೆ ಹೋಗುತ್ತಾರಾ? ನನಗೇ ಗೊತ್ತಾಗುವುದಿಲ್ಲ. ಇನ್ನು ಅವರಿಗೆ ಗೊತ್ತಾಗುತ್ತದಾ? ಏಕೆಂದರೆ ಫಿಗರ್ಸ್ ಎಲ್ಲಾ transparency ನೇ ಇರುವುದಿಲ್ಲ. ಸಾಧ್ಯವಾದ ಮಟ್ಟಿಗೆ ಪರದರ್ಶಕವಾಗಿರಬೇಕೆಂದು ಹೇಳುತ್ತಾರೆ. ಬಜೆಟ್‌ನಲ್ಲಿ ಇಟ್ಟಿರತಕ್ಕಂತಹ ಅಂಕಿ ಅಂಶಗಳೆಲ್ಲ ಪಾರದರ್ಶಕವಾಗಿರಬೇಕು. ಗೋಪ್ಯವನ್ನು ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡಬೇಕು. ಎಲ್ಲವೂ ಗೋಪ್ಯವೇ ಆದರೆ ಏನು ಮಾಡುವುದು? ಎಲ್ಲ ಗೋಪ್ಯವೇ ಆಗಿಬಿಟ್ಟರೆ ಕಷ್ಟವಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಮೂರು ಬಜೆಟ್‌ಗಳನ್ನು ಮಂಡಿಸಿದಾಗ Medium Term Fiscal Plan ಅದೂ ಮಂಡಿಸಿರಲಿಲ್ಲ. Over review budget ಅದನ್ನೂ

ಮಂಡಿಸಿರಲಿಲ್ಲ. Half year report ಅದನ್ನೂ ಮಂಡಿಸಿರಲಿಲ್ಲ. ಈ ಸಾರಿ ಏನೋ ಮಂಡಿಸಿದ್ದೀರಿ. ನಾವು ಹೇಳಿ ಹೇಳೀ ಸಾಕಾದ ಮೇಲೆ ನಾಲ್ಕನೇ ಸಾರಿಗೆ ಈ ಸಾರಿ ಮಂಡಿಸಿದ್ದೀರಿ. ಅದನ್ನು ಮಂಡಿಸುವುದಕ್ಕೆ ಹೋಗೇ ಇರಲಿಲ್ಲ ಇವರು. Fiscal Responsibility Act ಓದುವುದಕ್ಕೇ ಹೋಗಿರಲಿಲ್ಲ. ಈ ಸಾರಿ ಏನು ಓದಿದ್ದೀರೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನೀವೇ ಇಷ್ಟು ಶ್ರಮ ಹಾಕಿ ಓದಿ ಭಟ್ಟಿ ಇಳಿಸಿ ನಮಗೆ ಮಾರ್ಗದರ್ಶನ ಮಾಡುತ್ತೀರಿ ಅದನ್ನು ನಾನು ನೆನಪು ಇಟ್ಟುಕೊಳ್ಳುತ್ತೇನೆ ಎಂದು ಹೇಳೀದೆ.

ಶ್ರೀ ಸಿದ್ದರಾಮಯ್ಯ : ನಿಮ್ಮ ಶ್ರವಣ ಶಕ್ತಿ ಮೇಲೆ ನಿಮ್ಮ ಜ್ಞಾಪಕ ಶಕ್ತಿ ಮೇಲೆ ನನಗೆ ಬಹಳ ನಂಬಿಕೆ ಇದೆ. ಇನ್ನು ಮೇಲೆ ನೀವು ಓದುವುದಕ್ಕೇ ಹೋಗಬೇಡಿ, ನಾವು ಹೇಳಿದ್ದನ್ನು ಕೇಳಿಕೊಂಡು ಬರೆದು ಬಿಡಿ. ಶ್ರಮವೇ ಬೇಡ. ಸುಮ್ಮನೆ ಚುನಾವಣೆಗೆ ಓಡಾಡಿಕೊಂಡು ಇರಿ. ಇವರೆಲ್ಲಾ ಓದುವುದೇ ಬೇಡ ನಾವೆಲ್ಲ ಹೇಳುವುದು ಕೇಳಿಕೊಂಡು ಸುಮ್ಮನೆ ಇದ್ದುಬಿಡಿ.

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಒಂದು ಗಂಟೆ ಆಯಿತು.

ಶ್ರೀ ಸಿದ್ದರಾಮಯ್ಯ: ಇನ್ನು ಒಂದು ಗಂಟೆ ಕೋಡಿ ಸಾಕು. ಇಲ್ಲ ನಿಲ್ಲಿಸಿ ಎಂದರೆ ನಿಲ್ಲಿಸಿ ಬಿಡುತ್ತೇನೆ.

ಅಧ್ಯಕ್ಷರು: ನನ್ನದೇನೂ ಅಭ್ಯಂತರವಿಲ್ಲ. ನಾನು ಮೊದಲಿನಿಂದಲೂ ನಿಮಗೆ ನಿಯಂತ್ರಣ ಹಾಕಿಲ್ಲ. ನೀವೇ ಅರ್ಥ ಮಾಡಿಕೊಳ್ಳಿ. ನಿಮ್ಮ ಪಕ್ಷದಿಂದ ಒಟ್ಟು 18 ಹೆಸರುಗಳು ಬಂದಿವೆ. ಈಗ ಮಾತನಾಡಿರುವವರು ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಮತ್ತು ಶ್ರೀನಿವಾಸಪ್ರಸಾದ್ ಮೂರು ಜನ ಮಾತನಾಡಿದ್ದೀರಿ. ನಿಮ್ಮ ಪಕ್ಷದ ಸಮಯ ನೀವೇ ತೆಗೆದುಕೊಳ್ಳಿ. ಇವತ್ತು ಸಾಯಂಕಾಲದ ಒಳಗೆ ಮುಗಿಸಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಎಷ್ಟು ಹೊತ್ತಾದರೂ ಇವತ್ತು ಸಾಯಂಕಾಲದ ಒಳಗೆ ಇದು ಮುಗಿಯಬೇಕು. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮಾತನಾಡಬೇಕು.

ಶ್ರೀ ಸಿದ್ದರಾಮಯ್ಯ: ಮಾತನಾಡಲಿ, ಎಲ್ಲರೂ ಮಾತನಾಡಲಿ, I don't come in their way.

ಅಧ್ಯಕ್ಷರು: ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವೇ ನಿಯಂತ್ರಣ ಹಾಕಿಕೊಳ್ಳಿ, ನಾನು ಏನೂ ಹೇಳುವುದಿಲ್ಲ. ನೀವು ನಿಲ್ಲಿಸಿ ಎಂದು ನಾನು ಹೇಳುವುದಿಲ್ಲ. ಅದು ನಿಮಗೆ ಬಿಟ್ಟದ್ದು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ನನ್ನ ಒಂದು ಸಲಹೆ ಏನೆಂದರೆ, ನಾಳೆ ಮಧ್ಯಾಹ್ನದವರೆಗೆ ಚರ್ಚೆ ಆಗಲಿ. ಮಧಾಹ್ನದ ಮೇಲೆ ಉತ್ತರ ಕೊಡಲಿ. ರಾತ್ರಿ ಅಲ್ಲಿಗೆ ಹೋಗಲಿ. ಉತ್ತರ ನೀವು ಹೇಗೂ

ಕೇಳಿಸಿಕೊಂಡಿದ್ದೀರಿ, ದಬಾಯಿಸುತ್ತೀರಿ. ನಾಳೆ ಮಧ್ಯಾಹ್ನದವರೆಗೂ ಚರ್ಚೆ ಮುಂದುವರೆಯಲಿ. ನೀವು ಅನುಮತಿ ಕೊಟ್ಟರೆ ಮುಂದುವರೆಸುತ್ತೇನೆ.

ಅಧ್ಯಕ್ಷರು: ನಾನು ಅನುಮತಿ ಕೊಟ್ಟಿದ್ದೇನೆ. ನಿಮಗೆ ಬಿಟ್ಟಿದ್ದು. ನಿಮ್ಮ ಉಳಿದ ಶಾಸಕರಿಗೆ ಅವಕಾಶ ಸಿಗಲಿಲ್ಲವೆಂದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಎರಡು ಗಂಟೆಯವರೆಗೆ ಮಾತನಾಡಿ. ಅವರು ಮಾತನಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಉಳಿದ ಶಾಸಕರು ಸ್ವಲ್ಪ ತ್ಯಾಗ ಮಾಡಬೇಕು.

ಶ್ರೀ ಸಿದ್ಧರಾಮಯ್ಯ: ಅವರೆಲ್ಲಾ ನನ್ನನ್ನೇ ಮಾತನಾಡಿ ಎಂದು ಹೇಳುತ್ತಿದ್ದಾರೆ. ಯಾಕೋ disturb ಆಯಿತು, ಮೂರು ಗಂಟೆಗೆ ಮುಂದುವರೆಸೋಣ.

ಅಧ್ಯಕ್ಷರು: ಆದಷ್ಟು ಸಮಯವನ್ನು ನೋಡಿಕೊಂಡು ಮಾತನಾಡಿ. ಉಳಿದವರೂ ಮಾತನಾಡುವವರಿದ್ದಾರೆ. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ ಒಂದು ಗಂಟೆಗೆ 57 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 3.00 ಗಂಟೆಗೆ ಸೇರುವಂತೆ ನಿರ್ಧರಿಸಿತು)

(ಭೋಜನ ವಿರಾಮದ ನಂತರ ಸದನದ ಕಲಾಪವು 3.13ಕ್ಕೆ ಪ್ರಾರಂಭವಾಯಿತು ಮಾನ್ಯ ಉಪಾಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

2009-10 ನೇಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ:

ಶ್ರೀ ಆರ್. ರೋಷನ್‌ಬೇಗ್: ಮಾನ್ಯ ಉಪಾಧ್ಯಕ್ಷರೇ, front bench ನಲ್ಲಿ ಯಾರೂ ಇಲ್ಲ.

ಉಪಾಧ್ಯಕ್ಷರು: ಬರುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

ಉಪಾಧ್ಯಕ್ಷರು: ಸರ್ಕಾರ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೇ, ನಾವಿಲ್ಲ ಇದ್ದೇವೆ.

(ಗೊಂದಲ)

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೇ, ಎಲ್ಲಿದೆ ಸರ್ಕಾರ? ಸರ್ಕಾರವೇ ಇಲ್ಲವಲ್ಲ ಸ್ವಾಮಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ರಾಜ್ಯದಲ್ಲಿ ಯಡಿಯೂರಪ್ಪ ಸದನದಲ್ಲಿ ಕುಳಿತುಕೊಂಡಷ್ಟು ಸಮಯ ಯಾವ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತುಕೊಳ್ಳುವುದಿಲ್ಲವೆಂದು ಅನಿಸುತ್ತದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಶಿವಕುಮಾರ್ ಎಲ್ಲಿದ್ದಾರೆ ಹುಡುಕಿಕೊಡಿ ಎಂದು ನಾನು Intelligence ಗೆ ಹೇಳಿದ್ದೇನೆ, ಕೇಳಿ. ನಮ್ಮ ಕಾಂಗ್ರೆಸ್ಸ್ ಸ್ನೇಹಿತರೆಲ್ಲ ಬಂದು ಶಿವಕುಮಾರ್ ಪತ್ತೆ ಇಲ್ಲ, ಹುಡುಕಿಕೊಡಿ ಎಂದು ನನ್ನನ್ನು ಕೇಳಿದರು.

ಉಪಾಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರಲ್ಲ, ಚರ್ಚೆಯನ್ನು ಮುಂದುವರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಶಿವಕುಮಾರ್‌ರವರು ಕಾಲು ಕೆರೆದುಕೊಂಡು ಜಗಳಕ್ಕೆ ಬರುವುದಕ್ಕೋಸ್ಕರ ನೋಡುತ್ತಿದ್ದಾರೆ ನಾವು ಶಿವಕುಮಾರ್‌ರವರಿಗೆ ಅವಕಾಶ ಮಾಡಿಕೊಡುತ್ತಿಲ್ಲ. ಏನಾದರೂ ಮಾಡಿ ಒಂದು ಸಣ್ಣ ಸಣ್ಣ ವಿಷಯ ಹುಡುಕಿ. ಜಗಳ ಮಾಡಲು ಬರುತ್ತೀರಿ. ನೀವು ನೋಡಿದರೆ ಪತ್ತೆನೇ ಇಲ್ಲ. ಸಿದ್ದರಾಮಣ್ಣನವರನ್ನು ಬಿಟ್ಟು ನೀವು ಒಬ್ಬರೇ ಎಲ್ಲೋ ಹೋಗಿರುತ್ತೀರಿ. ನೀವು ಬಂದರೆ ಅವರು ಇರುವುದಿಲ್ಲ. ನಾವು ಏನು ಮಾಡಬೇಕು ಎಂದು ದಿಕ್ಕು ತೋಚುತ್ತಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಿದ್ಧರಾಮಣ್ಣನವರನ್ನು ಹಾಗೂ ಶಿವಕುಮಾರ್‌ರವರನ್ನು ಒಟ್ಟಿಗೆ ಸೇರಿಸಿದ್ದು ಮಾನ್ಯ ಮುಖ್ಯಮಂತ್ರಿಗಳೇ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಹಳ ಸದುದ್ದೇಶದಿಂದ ಮಾಡಿದ್ದೇನೆ. ಆದರೆ ನೀವು ಎಲ್ಲಿ ಮಧ್ಯೆ ಬಂದು ಕುಳಿತುಕೊಂಡು ಬಿಡುತ್ತೀರೋ ಎಂದು ನನಗೆ ಭಯ ಅಷ್ಟೇ. ಅವರಿಬ್ಬರು ಕುಳಿತುಕೊಂಡರೆ ನನಗೇನು ಭಯವಿಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾದಮೇಲೆ, ಸಾಲ ಹೆಚ್ಚು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. Debt stock 65,000 ಕೋಟಿ ಆಗುತ್ತಿದೆ. ಮುಂದೆ ಅದು 77,000 ಕೋಟಿ ರೂಪಾಯಿ ಆಗುತ್ತದೆ. ನಾನು ಸಾಲ ತೆಗೆದುಕೊಳ್ಳಬಾರದು ಎಂದು ಹೇಳುವುದಿಲ್ಲ. ಆದರೆ ಪ್ರತಿವರ್ಷ ಅದನ್ನು ಹೆಚ್ಚು ಮಾಡಿಕೊಂಡು debt service, interest payment, repayment of loan ಗೆ ಇವೆಲ್ಲ ಹೆಚ್ಚಾಗಿಬಿಟ್ಟರೆ, ಮತ್ತೆ ನಮಗೆ developmental activities ಹಣ ಕಡಿಮೆಯಾಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತಾ ಹೋಗುತ್ತದೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಈಗಲೇ ಇವರು ಎಚ್ಚರಿಕೆ ವಹಿಸದೇ ಹೋದರೆ, ಈಗಾಗಲೇ ಅವರು ದಾರಿ ತಪ್ಪಿ ಬಿಟ್ಟಿದ್ದಾರೆ. Fiscal discipline ನಿಂದ deviation ಆಗಿಬಿಟ್ಟಿದ್ದಾರೆ. ದಾರಿ ತಪ್ಪಿದರೆ ರಾಜ್ಯದ ಜನ ಶಾಪ ಹಾಕುತ್ತಾರೆ. ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಯಡಿಯೂರಪ್ಪನವರ ಕಾಲದಲ್ಲಿ ಬಹಳ ಕೆಟ್ಟುಹೋಯಿತು, ಅಭಿವೃದ್ಧಿಗಳಿಗೆ ದುಡ್ಡು ಇಲ್ಲದ ಹಾಗೆ ಮಾಡಿದರು, ಸಾಲಕ್ಕೆ ಹೊರೆ ಹೆಚ್ಚು ಮಾಡಿದರು ಎನ್ನುವಂತಹ

ಪರಿಸ್ಥಿತಿ ಬಂದರೆ ರಾಜ್ಯದ ಜನ ಶಪಿಸುತ್ತಾರೆ. ನಾನು ಹಿಂದೆ ಹಣಕಾಸಿನ ಮಂತ್ರಿಯಾಗಿದ್ದರಿಂದ ಹೇಳುತ್ತಿದ್ದೇನೆ. ಈಗಾಗಲೇ ಇವರದು deviation ಪ್ರಾರಂಭವಾಗಿಬಿಟ್ಟಿದೆ. ಇವರ ಕಾಲದಲ್ಲಿ ತೆರಿಗೆ growth ಕಡಿಮೆಯಾಗುತ್ತಿದೆ. ಅಭಿವೃದ್ಧಿ ಕುಂಠಿತವಾಗುತ್ತಿದೆ. ಇವತ್ತು ನಾವೇನು revenue surplus ನಲ್ಲಿದ್ದೇವೆ, 4,000 ಚಿಲ್ಲರೆ ಕೋಟಿ ಇತ್ತು. 2005-06, 2006-07,2007-08 ರಲ್ಲಿ 3,000 ಚಿಲ್ಲರೆ ಕೋಟಿ ಇದ್ದು, ಇವತ್ತು 767 surplus ಬಂದಿದೆ. ಮುಂದಿನ ವರ್ಷ 1152 ಕೋಟಿ ರೂಪಾಯಿ surplus ಆಗುತ್ತದೆಂದು ಹೇಳಿದ್ದಾರೆ, ಅದು ಕೂಡ ತಮಗೆ ಸಾಧ್ಯವಾಗುವುದಿಲ್ಲ. ನನಗೆ ಭಯ ಏನೆಂದರೆ ಮತ್ತೆ revenue deficit ಗೆ ಇವರು ಎಲ್ಲಿ ಹೋಗುತ್ತಾರೆ ಎಂದು. Revenue deficit ಗೆ ಹೋದರೆ ಮತ್ತೆ ರಾಜ್ಯ ಸಾಲಕ ಸುಳಿಗೆ ಸಿಕ್ಕಿಹಾಕಿಕೊಳ್ಳುತ್ತದೆ. ಋಣಭಾರ ಜಾಸ್ತಿಯಾಗುತ್ತದೆ. ಅಭಿವೃದ್ಧಿ ಕೆಲಗಳೆಲ್ಲ ಸಂಪೂರ್ಣ ಕುಂಠಿತವಾಗುತ್ತದೆ. ಇವತ್ತು Medium Fiscal plan Budget ಜೊತೆಯಲ್ಲಿ ಕೊಟ್ಟಿದ್ದಾರೆ. ತೆರಿಗೆ growth ಗಳನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. 2003-04ರಲ್ಲಿ commercial taxes growth 22% ಇತ್ತು. 2004-05 ರಲ್ಲಿ compare to previous year growth 30.05%.2005-06 ರಲ್ಲಿ 14.1% 2006-07 ರಲ್ಲಿ 19.42%. 2007-08ಕ್ಕೆ ಕಳೆದ ವರ್ಷ 13.4% 2004-05 ರಲ್ಲಿ 30% ಇದ್ದಂತಹ revenue growth, it has come down to 13.4%. ಈ ವರ್ಷ 13.1%. 2009-10 ಕ್ಕೆ ಇವರೇ project ಮಾಡಿರುವ ಪ್ರಕಾರ 11%. 30% ಇದ್ದಂಥ ತೆರಿಗೆ growth ಇವತ್ತು 11% ಇದೆಯೆಂದರೆ ನಮ್ಮ ಹಣಕಾಸಿನ ಪರಿಸ್ಥಿತಿ ಯಾವ ಮಟ್ಟದಲ್ಲಿದೆಯೆಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ವಾಣಿಜ್ಯ ತೆರಿಗೆ ಮತ್ತು ಅಬಕಾರಿ ತೆರಿಗೆಯಲ್ಲೂ ಹಾಗೆ ಆಗಿದೆ. 2003-04 ರಲ್ಲಿ 11.45% , 2004-05ರಲ್ಲಿ 20.2%, 2005-06 ರಲ್ಲಿ 21.07%, 2006-07ರಲ್ಲಿ 32.34% 2007-08ರಲ್ಲಿ 6.03%, 2008-09 ರಲ್ಲಿ 16.94% ಎಂದು ಹೇಳುತ್ತೀರಿ. ಮುಂದಿನ ವರ್ಷಕ್ಕೆ ಎಷ್ಟು ಆಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಪ್ರತಿ ವರ್ಷವೂ ಕೂಡ 2003-04 ರಿಂದ ಕಡಿಮೆಯಾಗುತ್ತಾ ಹೋಗುತ್ತಿದೆ. ಅದೇ ರೀತಿಯಲ್ಲಿ motor vehicle tax ಕೂಡ ಆಗುತ್ತಿದೆ. 2003-04ರಲ್ಲಿ 18.4%, 2004-05ರಲ್ಲಿ 27.86% 2005-06 ರಲ್ಲಿ 12.46%, 2006-07 ರಲ್ಲಿ 24.34% 2007-08ರಲ್ಲಿ 20.54%, 2008-09 ಈವರ್ಷಕ್ಕೆ 6.7% ಇದೆ. ಇದೇ ಪರಿಸ್ಥಿತಿ stamp & registration ನಲ್ಲೂ ಕೂಡ ಇದೆ. ಅಲ್ಲೂ ಕೂಡ 2002-03ರಲ್ಲಿ 30%, next year 21%,29%,25%,44%, 2007-08ಕ್ಕೆ 6.33%, 2008-09ಕ್ಕೆ -8.7%, ಇದಕ್ಕೆ ಇವರು ಏನು ಹೇಳುತ್ತಾರೆಂದು, real estate ಎಲ್ಲಾ ಬಿದ್ದು ಹೋಗಿದೆ,

Economic Recession ನಿಂದ ಜಮೀನುಗಳು transfer ಆಗುತ್ತಿಲ್ಲ, registration ಗಳಾಗುತ್ತಿಲ್ಲ, ಎಲ್ಲಾ ಕಡಿಮೆಯಾಗಿದೆಯೆಂದು ಹೇಳುತ್ತಾರೆ. ಕಳೆದ ವರ್ಷವೇ ಈ ಚಿಹ್ನೆ ಇರುವಾಗ 2007-08 ರಲ್ಲಿ 6.3% ಇರುವಾಗ ಅವತ್ತಿನಿಂದ ಇವತ್ತಿನವರೆಗೆ ಇದರ ಬಗ್ಗೆ ಸರ್ಕಾರ ಏನಾದರೂ ಗಮನ ಹರಿಸಬೇಕಾಗಿತ್ತಲ್ಲಾ, ಹಣಕಾಸಿನ ಇಲಾಖೆ ಗಮನಹರಿಸಬೇಕಲ್ಲಾ.. ..

ಡಾ:ಬಿ.ಎಸ್.ಯಡಿಯೂರಪ್ಪ: ತಾವು ಇದಕ್ಕೆ ಏನು ಮಾಡಬಹುದಾಗಿತ್ತೆಂದು ಸಲಹೆ ಕೊಡಿ..

ಶ್ರೀ ಸಿದ್ದರಾಮಯ್ಯ: ತಾವು ಈ ವರ್ಷ ಏನು ಮಾಡಿದ್ದೀರಿ? ಕಳೆದ 7.5% ನಿಂದ 6% ಇಳಿದಿದೆಯಲ್ಲಾ ಅದನ್ನು ಏನು ಮಾಡಿದಿರಿ? ಈ ವರ್ಷ ಅದನ್ನು ಏಕೆ ಮಾಡಿದಿರಿ? ಅದನ್ನು last year ಮಾಡಬಹುದಾಗಿತ್ತಲ್ಲಾ. Stamp duty, registration ಎಲ್ಲಾ ತಡೆಯುವುದಕ್ಕೋಸ್ಕರ ನೀವು ಈಗ ಕಡಿಮೆ ಮಾಡಿದ್ದಿರಲ್ಲಾ ಮುಂದಿನ ವರ್ಷಕ್ಕೆ ಏಕೆ ಯೋಚನೆ ಮಾಡಲಿಲ್ಲ? ಮತ್ತೆ ಇವತ್ತು under value ಆಗುತ್ತಿವೆಯಲ್ಲಾ, stamp rate registration under valuation ಆಗುತ್ತಿವೆ. ಇದನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮವನ್ನು ತೆಗೆದುಕೊಂಡಿದ್ದೀರಿ. Lot of under valuation ಆಗುತ್ತಿವೆ. ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಬೇರೆ ಬೇರೆ ಪಟ್ಟಣಗಳಲ್ಲಿ ಮಾರ್ಕೆಟ್ ಬೆಲೆ ಇರುವುದೇ ಒಂದು, sub-registrar ರವರ ಬೆಲೆ ಇರುವುದೇ ಒಂದು. ಅದರಲ್ಲಿ ಎಷ್ಟು ಕಪ್ಪು ಹಣ ಹೋಗುತ್ತಿದೆ ಎಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕಲ್ಲಾ. ಇದು ಕಳೆದ ವರ್ಷವೇ ಕಡಿಮೆಯಾಗಿದೆ. ತಾವು ಕಳೆದ ವರ್ಷವೇ ಎಚ್ಚರಿಕೆ ವಹಿಸಬೇಕಾಗಿತ್ತು, ಕಳೆದ ವರ್ಷ recession ಇರಲಿಲ್ಲ. ಈ ವರ್ಷ ಆರ್ಥಿಕ ಬಿಕ್ಕಟ್ಟು ಇದೆ, ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಇದೆಲ್ಲವೂ ತೊಂದರೆಯಾಗಿದೆಯೆಂದರೆ all right. 2007-08ರಲ್ಲಿ ಏನು ಇತ್ತು? No crisis. ಮತ್ತೆ ಮುನ್ಸೂಚನೆ ಇದ್ದಾಗಲೂ ಕೂಡ ಇದನ್ನು ತಡೆಗಟ್ಟುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ನಾವು ಹಿಂದೆ ಎಲ್ಲ ಮಂತ್ರಿಗಳಾಗಿದ್ದಾಗ ನಾವು ಸರ್ಕಾರದಲ್ಲಿದ್ದು ನೋಡಿದ್ದೆವು. ಈಗ ಯಾರನ್ನಾದರೂ ನೋಡಿ, ಕೆಲಸವಿಲ್ಲದೇ ಇರುವವರಿಗೆಲ್ಲಾ cabinet rank. ನಮ್ಮ ಎಂ.ಎಲ್.ಎ ರಾಮದಾಸ್‌ರವರನ್ನು ನಿಮ್ಮ Political Secretaryಯನ್ನಾಗಿ ಮಾಡಿಕೊಂಡಿದ್ದೀರಿ. ಮಾಡಿಕೊಂಡಿದ್ದೀರಿ. ಅವರು ಮೈಸೂರಿನಲ್ಲೆ ಇರುತ್ತಾರೆ, ಅವರಿಗೆ cabinet rank ಕರಾವಳಿ ಪ್ರಾಧಿಕಾರ ಎಲ್ಲರಿಗೂ cabinet rank. ನಾನು ನೋಡುತ್ತೇನೆ, ಯಾರು Charirman ಗಳು ಆಗಿರುವವರಿಗೆಲ್ಲ, ಎಲ್ಲಾ pilot ಮತ್ತು ಹಿಂದಗಡೆ escort. ಇದು ಹಿಂದೆ ಯಾವ ಕಾಲದಲ್ಲೂ ಇರಲಿಲ್ಲ. ಮಾನ್ಯ ಯಡಿಯೂರಪ್ಪನವರು ಎಲ್ಲರಿಗೂ pilot, chairman ಗೂ ಎಲ್ಲರಿಗೂ cabinet rank

ಗಳಾಗಿ ಉದಾರವಾಗಿ ಕೊಟ್ಟು ಬಿಟ್ಟಿದ್ದಾರೆ. ಯಾವುದಾದರೂ ಕೂಡ ಇವತ್ತು non-plan expenditure ಅನ್ನು cut down ಮಾಡುವುದಕ್ಕೆ chairman ಗಳಿಗೆ ಏಕೆ ಬೇಕು. ಯಾರ ಕಾಲದಲ್ಲೂ chairman ಗಳಿಗೆ ಕೊಟ್ಟಿರಲಿಲ್ಲ. ಇವತ್ತು ಸಿಬ್ಬಂದಿ ಸಂಖ್ಯೆಯನ್ನು ಕಡಿಮೆ ಮಾಡುವಂಥಾದ್ದನ್ನು ಏನಾದರೂ ಮಾಡಿದ್ದಿರ? ಎಲ್ಲಾ ಕಡೆಗಳಲ್ಲೂ computerization ಆಗಿದೆ. ಅದರೆ ಅಷ್ಟೇ ಉಳಿದು ಕೊಂಡಿದೆ. ನೀವು computerization ಗೆ ಹಣವನ್ನು ಅಷ್ಟೇ ಖರ್ಚು ಮಾಡುತ್ತೀರಿ, Man-power ಅನ್ನು ಅಷ್ಟೆ ಇಟ್ಟುಕೊಂಡಿರುತ್ತೀರಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಉದ್ಯೋಗ ಸೃಷ್ಟಿ ಆಗಬೇಕಲ್ಲಾ..

ಶ್ರೀ ಸಿದ್ಧರಾಮಯ್ಯ: ಉದ್ಯೋಗವನ್ನು ಬೇರೆ ಕಡೆ ಸೃಷ್ಟಿ ಮಾಡಬೇಕು. ತಾವು ಆಗಿದ್ದೀರಿ. ತಾವು Small Scale Industry Minister ಆಗಿದ್ದೀರಿ. ಕುಳಿತುಕೊಳ್ಳಿ, ನಾನು ನಿಮ್ಮನ್ನು ಎದ್ದೇಳಿ ಎಂದು ಹೇಳಿದೆನೆ? ನೀವು ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಹೇಳೂವಂಥಾದ್ದು ಏನೆಂದರೆ ದಿನನಿತ್ಯ ಎಲ್ಲಾ ಎಂ.ಎಲ್.ಎಗಳು ಕೇಳುವಂಥದ್ದು, ನಾವು ಕುಡಿಯುವ ನೀರು ಕೋಡತ್ತೇವೆ, ಇಲ್ಲಿ ಇಂಜಿನಿಯರ್ಸ್ ಇಲ್ಲ, ಅಬಕಾರಿ ಇಲಾಖೆಯಲ್ಲಿ ತನಿಖೆ ಮಾಡುವುದಕ್ಕೆ Inspectors ಇಲ್ಲವೆಂದು ಎಲ್ಲರೂ ಹೇಳುತ್ತಿದ್ದಾರೆ. ಇವೆಲ್ಲಾ service sector ನಲ್ಲಿ ತೆಗೆದುಕೊಳ್ಳ ಬೇಡಿಯೆಂದು ಹೇಳುತ್ತೀರಾ? ಪೊಲೀಸ್ ಪೇದೆಗಳು ಇಲ್ಲ.

ಶ್ರೀ ಸಿದ್ಧರಾಮಯ್ಯ: ಅವೆಲ್ಲವನ್ನು ತೆಗೆದುಕೊಳ್ಳಿ, ಹಿಂದೆ ಕೆಲವರೆ Joint Directorಗಳನ್ನು ರದ್ದು ಮಾಡಬೇಕೆಂದು ಶಿಫಾರಸ್ಸು ಆಗಿತ್ತು. ಈಗ ಪುನಃ restore ಮಾಡಿಕೊಂಡಿದ್ದೀರಿ. ಅವರಿಗೆ ಏನು ಕೆಲಸವಿದೆ? ನಾನು ಹೇಳುವಂಥಾದ್ದು Forest Departmentನಲ್ಲಿ ಕಾಡು ಕಾಯುವವರನ್ನೆಲ್ಲಾ ತೆಗೆದು ಹಾಕಿಯೆಂದು ನಾನು ಹೇಳುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಅದನ್ನೇ ಹೇಳಿದ್ದು.

ಶ್ರೀ ಸಿದ್ಧರಾಮಯ್ಯ: ಇದರಲ್ಲಿ ಹಣವನ್ನು ವಸೂಲು ಮಾಡುವುದಕ್ಕೆ, ಹಣ ಸೋರಿಕೆ ಆಗುವುದನ್ನು ತಪ್ಪಿಸುವುದಕ್ಕೆ ಇದನ್ನು ತಪ್ಪಿಸಿ ಎಂದು ನಾನು ಹೇಳುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: Service sectorಗೆ ಎಲ್ಲೆಲ್ಲಿ essential service ಇದೆ ಅಲ್ಲಿ ಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ನಾನು ಅದನ್ನೇಲ್ಲಾ ಹೇಳಿಲ್ಲ. ನಾನು ಬೇರೆಯದನ್ನು ಹೇಳುತ್ತಿದ್ದೇನೆ. ಈಗ ನಿಮ್ಮ ಇಲಾಖೆಯಲ್ಲಿ ಖಾಲಿ ಇರುವುದನ್ನೆಲ್ಲಾ ಭರ್ತಿ ಮಾಡಿಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹೌದು, ಅಲ್ಲಿಗೆ ಬೇಕೆ ಬೇಕು.

ಶ್ರೀ ಸಿದ್ದರಾಮಯ್ಯ: ಅದನ್ನು ಜಾಸ್ತಿ ;ಮಾಡಿಕೊಳ್ಳಿ, ಕಳೆದ ವರ್ಷಕ್ಕಿಂತ ಈ excise duty ವರ್ಷ ಕಡಿಮೆ ಆಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇಲ್ಲ, 5,600 ಕೋಟಿ ರೂಪಾಯಿಗಳಾಗಿದೆ, ಒಂದು ರೂಪಾಯಿ ಕಡಿಮೆ ಅಗಲಿಲ್ಲ. ಮುಂದಿನ ವರ್ಷ ಇನ್ನೂ ಜಾಸ್ತಿಯಾಗುತ್ತದೆ. ನಾವು ಸೋರಿಕೆಯನ್ನು ತಡೆದಿದ್ದೇವೆ. ನಮ್ಮ ಗುರಿ ಏನು ಇತ್ತು, ಆ ಗುರಿಯನ್ನು ನಾವು ಸರಿಯಾಗಿ ಮುಟ್ಟಿದ್ದೇವೆ.

ಶ್ರೀ. ಸಿದ್ದರಾಮಯ್ಯ: ಸರಿಯಾಗಿ ಮುಟ್ಟಿದ್ದೀರಾ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹೌದು.

ಶ್ರೀ ಸಿದ್ದರಾಮಯ್ಯ: very good. ನೀವು ಇಲ್ಲಿ ಏನು ಹೇಲಿದ್ದೀರೆಂಬುದನ್ನು ನೋಡಿ, ಇದು ನಿಮ್ಮ ಸರ್ಕಾರ ಕೊಟ್ಟಿರುವ ಪುಸ್ತಕ 2008–09ಕ್ಕೆ 5,574 ಕೋಟಿ ಆಗಬಹುದೆಂದು ಹೇಳಿದ್ದೀರಿ. ಇದು 5,600 ಕೋಟಿ ರೂಪಾಯಿಗಳೀಗೆ ಕಡಿಮೆ ಅಯಿತೋ ಹೆಚ್ಚು ಅಯಿತೋ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹೆಚ್ಚಾಯಿತು.

ಶ್ರೀ ಸಿದ್ದರಾಮಯ್ಯ: 5,600 ಕೋಟಿ ರೂಪಾಯಿಗಳಿಗೆ ಹೆಚ್ಚು ಆಯಿತಾ? 5,574–5,600 ಕೋಟಿ ಎಂದರೆ ಎಷ್ಟಾಗುತ್ತದೆ? ಇವರ budgeted target 5,600 ಕೋಟಿ ಇದೆ, ಒಂದು ವರ್ಷಕ್ಕೆ 6,500 ಕೋಟಿ ಇದೆ. ಈ ವರ್ಷ ನೀವು collect ಮಾಡುತ್ತೇವೆಂದು ಹೇಳಿರುವಂಥಾದ್ದು ಇದು correct figure ಅಲ್ಲ. 5,500 ಕೋಟಿ ರೂಪಾಯಿಗಳನ್ನು ಮಾತ್ರ ಮಾಡುವುದಕ್ಕೆ ಆಗುತ್ತದೆ, ನೀವು ಕಡಿಮೆ ಆಗಿದೆಯೆಂದು ಹೇಳಿಕೊಂಡಿದ್ದೀರಿ. ಈ ಪುಸ್ತಕ Medium Term Fiscal plan ಇದನ್ನು ನಿಮಗೆ ಕಳುಹಿಸಿ ಕೊಡಲಾ, ನೀವು ಓದಿ ಕೊಳ್ಳುತ್ತಿರಾ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹೇಳಿ ಸಾರ್,

ಶ್ರೀ ಸಿದ್ದರಾಮಯ್ಯ: ನೀವು ಕಡಿಮೆಯಾಗುತ್ತದೆಂದು ಹೇಳಿಕೊಂಡಿದ್ದೀರಿ. ನೀವು ಜಾಸ್ತಿ ವಸೂಲು ಮಾಡಿ, ಏಕೆಂದರೆ ಸಾರಾಯಿ ನಿಲ್ಲಿಸಿದ ಮೇಲೆ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ, ಈಗ ಎಷ್ಟು ಒಂದು ತಿಂಗಳಿಗೆ case ಖರ್ಚಾಗುತ್ತಿದೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: 33 ಲಕ್ಷ ರೂಪಾಯಿಗಳು.

ಶ್ರೀ ಸಿದ್ದರಾಮಯ್ಯ: ಸಾರಾಯಿ ನಿಲ್ಲಿಸುವುದಕ್ಕೂ ಮುಂಚೆ ಎಷ್ಟು ಇತ್ತು? 10–11 ಲಕ್ಷ ಇತ್ತು. ಸಾರಾಯಿ ನಿಲ್ಲಿಸುವುದಕ್ಕೆ ಮುಂಚಿತವಾಗಿ IML ಖರ್ಚಾಗುತ್ತಿದ್ದದ್ದು 10 to 11 lakhs cases. ಒಂದು cases. ಎಂದರೆ 48 bottles ಈಗ ಒಂದು ತಿಂಗಳಿಗೆ 33 ಲಕ್ಷ caseಗಳಾಗುತ್ತಿವೆ. ಅಂದರೆ 22.23 ಲಕ್ಷ caseಗಳು ಜಾಸ್ತಿಯಾಯಿತು. ಆದುದರಿಂದ excise.ತೆರಿಗೆ ಕಡಿಮೆಯಾಗುವ ಪ್ರಶ್ನೆ ಇಲ್ಲ.

ಪ್ರತಿವರ್ಷವೂ IML .ಜಾಸ್ತಿಯಾಗುತ್ತಿದೆ. ಆದರೆ ಇನ್ನೂ ಸೋರಿಹೋಗುತ್ತಿದೆ. ಹಳ್ಳಿಗಳಲ್ಲಿ ಏನಾಗಿದೆ ಎಂದರೆ, ಬೀಡಿ ಅಂಗಡಿಗಳಲ್ಲಿ, ಟೀ ಅಂಗಡಿಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ, ನ್ಯಾಯ ಬೆಲೆ ಅಂಗಡಿಗಳಲ್ಲಿ, 38 ರೂಪಾಯಿಗಳಿಗೆ ಸಿಗಬೇಕಾದಂಥ ವಿಸ್ಕಿ ಕ್ವಾರ್ಟರ್ ಬಾಟಲ್‌ಅನ್ನು 45-46 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಬೇಡಿಕೆ ಜಾಸ್ತಿಯಾಗಿದೆ ಎನ್ನುವುದು M.L.A. ಗಳಿಗೆಲ್ಲಾ ಗೊತ್ತಿದೆ. It is a known fact. ನಾನು ಏಕೆ ಎದನ್ನೆಲ್ಲಾ ಹೇಳುತ್ತಿದ್ದೇನೆ ಎಂದರೆ, ಆದಾಯವನ್ನು ಹೆಚ್ಚು ಮಾಡಬೇಕಾದರೆ ಇದನ್ನೆಲ್ಲಾ ತಡೆಗಟ್ಟಬೇಕಲ್ಲವೇ? ಕಿರಾಣಿ ಅಂಗಡಿಯಲ್ಲಿ ಮಾರುವುದಕ್ಕೆ ಲೈಸೆನ್ಸ್ ಕೊಟ್ಟಿರುವಿರಾ? ಹರಾಜು ಹಾಕುವುದನ್ನು ಈ ಸಲ ಏಕೆ ನಿಲ್ಲಿಸಿ ಬಿಟ್ಟಿರಿ? ಬೇಡ ಅಂದುಬಿಟ್ಟರೆ? ಅವರು ನನ್ನ ಹತ್ತಿರವೂ ಬಂದಿದ್ದರು. ಅವರಿಗೆ ನಾನು ಹೇಳಿದೆ, auction .ಮಾಡುವುದು ಬೇಡ ಎಂದು ಹೋಗಿ ಹೇಳಿ ಎಂದು ಹೇಳಿದೆ. ಅವರು ಬಂದು ನಿಮಗೆ ಹಾಗೆಂದು ಹೇಳಿದರೇ? ನಾನು ಏಕೆ ಇದನ್ನೆಲ್ಲ ಹೇಳುತ್ತಿದ್ದೇನೆ ಎಂದರೆ, ನೋಡಿ revenue arrears ಸುಮಾರು 6,200 ಕೋಟಿ ರೂಆಯಿಗಳಿದೆ. ಹೀಗೆ ಕೋಟಿಗಟ್ಟಲೆ ಹಣ litigation ನಲ್ಲಿ ಸಿಕ್ಕಿಕೊಂಡಿದೆ. ಇಂಥ recession ಇರತಕ್ಕಂಥ period ನಲ್ಲಿ ಅವುಗಳನ್ನೆಲ್ಲ ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೋ, ಬೇಡವೋ? ನಿಮ್ಮ Excise ನಲ್ಲೇ 675 ಕೋಟಿ ರೂಪಾಯಿಗಳಿದೆ. Am I correct? I am absolutely correct. Excise ನಲ್ಲಿ 675 ಕೋಟಿ ರೂಪಾಯಿ ಇದೆ, K.E.B. ನಲ್ಲಿ 682 ಕೋಟಿ ರೂಪಾಯಿ ಇದೆ, Commercial tax ನಲ್ಲಿ 4,700 ಕೋಟಿ ರೂಪಾಯಿ ಇದೆ. ಎಲ್ಲವೂ ಕೋರ್ಟ್‌ನಲ್ಲಿ ಇವೆ. ಕೋರ್ಟ್‌ನಲ್ಲಿವಾದ ಮಾಡಲು ನೀವು ಲಾಯರ್ಗಳನ್ನು ಇಟ್ಟುಕೊಂಡಿಲ್ಲವೇ? ಅಷ್ಟೊಂದು ಲಾಯರ್‌ಗಳಿದ್ದಾರೆ, Government advocates ಇದ್ದಾರೆ. Legal cell ಎಂದು ಮಾಡಿಕೊಂಡಿರುತ್ತೇವೆ. ಅವರ ಕೋರ್ಟುಗಳಿಗೆ ಹೋಗುವುದಿಲ್ಲ, ಸರಿಯಾಗಿ appear ಆಗುವುದಿಲ್ಲ ವಸೂಲಿ ಮಾಡುವುದಿಲ್ಲ. ಯಾವ ಅಧಿಕಾರಿಗಳೂ ಕೂಡ ಅರಿಯರ್ಸ್ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅರಿಯರ್ಸ್ ಅಂತೂ ವಸೂಲೀ ಮಾಡುವುದಿಲ್ಲ. Arrears from various departments ಸುಮಾರು ಆರು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಬಾಕಿ ಇದೆ. ನಾವು ಇಂಥ recession ನಲ್ಲಿದ್ದೇವೆ, ಕಷ್ಟದಲ್ಲಿದ್ದೇವೆ, ತೆರಿಗೆ ಕಡಿಮೆಯಾಗುತ್ತಿದೆ, ಸಾಲ ತೆಗೆದು ಕೊಳ್ಳುವುದನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೇವೆ ಎನ್ನುವ ಕಡೆ ಗಮನ ಕೊಡಬೇಕಲ್ಲವೇ? ಈ ಕಡೆ ಒಂದು ಮೂರು ಕಾಸಿನ ಕೆಲಸ ಮಾಡಿ ಆದಾಯವನ್ನು ತೆಗೆದುಕೊಳ್ಳುತ್ತಿಲ್ಲ. ಮತ್ತೆ ಹೇಗೆ ನಿಮಗೆ ಆದಾಯ ಬರುತ್ತದೆ? ತೆರಿಗೆ growth ಬಿದ್ದು ಹೋಯಿತು. ಸಾಲ ತೆಗೆದುಕೊಳ್ಳುವುದನ್ನು ಹೆಚ್ಚು ಮಾಡಿಕೊಂಡಿದ್ದೀರಿ. ಈ ಬಜೆಟ್‌ನಲ್ಲಿ 47,214

ಕೋಟಿ ರೂಪಾಯಿ ಇತ್ತು. ಮುಂದಿನ ವರ್ಷಕ್ಕೆ ಎಷ್ಟು ದುಡ್ಡು ಃ
ಎಂದರೆ ಸುಮಾರು 48,000 ಕೋಟಿ ರೂಪಾಯಿಗಳ revei
ಬರುತ್ತದೆ ಎಂದು ಹೇಳಿದ್ದೀರಿ. What will be the growth? 2.43. ಖರ್ಚಿನಲ್ಲಿ growth rate ಎಷ್ಟೆಂದರೆ 3.33% Expenditure side ನಲ್ಲಿ growth 3.33% ಇದೆ. Revenue receipts side ನಲ್ಲಿ growth 2.43% ಇದೆ. What is the inflation? About 4%. Taking the inflation into consideration, what is the growth? The growth will be minus. ಇಪ್ಪತ್ತೊಂಬತ್ತೂವರೆ ಸಾವಿರ ಕೋಟಿ ರೂಪಾಯಿಗಳನ್ನು plan ನಲ್ಲಿ ಹೇಗೆ ಖರ್ಚು ಮಾಡುವಿರಿ? Taking 4% inflation into consideration, absolutely there is no growth at all.4% inflation ಇದೆ ಎಂದು ಲೆಕ್ಕ ಹಾಕಿಕೊಂಡರೆ ತೆರಿಗೆ ಬೆಳವಣಿಗೆ 2.43% ಖರ್ಚು 3.33% inflation 4%, so minus growth ಆಯಿತು. ಹೀಗಿರುವಾಗ ನಿಮಗೆ ಅಭಿವೃದ್ಧಿಗೆ, ನೀರಾವರಿಗೆ, ಕೃಷಿಗೆ, ಆರೋಗ್ಯಕ್ಕೆ ಶಿಕ್ಷಣಕ್ಕೆ ಹಣ ಸಿಗುತ್ತದೆಯೇ? ನಾವು education ನಲ್ಲಿ ಬಹಳ ಕ್ರಾಂತಿ ಮಾಡಿಬಿಟ್ಟಿದ್ದೇವೆ ಎಂದು ಹೇಳುತ್ತೀರಲ್ಲ, 2007–08ಕ್ಕೆ ಸುಮಾರು 8,600 ಕೋಟಿ ರೂಪಾಯಿಗಳನ್ನು education ಗಾಗಿ ಖರ್ಚು ಮಾಡಿದ್ದರೆ, ಈ ವರ್ಷ 8,888 ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಅದೂ ಸಹ targeted figures, expected figures. What is the growth in education? Absolutely negligible growth. ಹೀಗಿರುವಾಗ ಸಾಕ್ಷರತಾ ಪ್ರಮಾಣ ಹೆಚ್ಚಾಗಿಲ್ಲ ಎಂದರೆ ಹೇಗೆ? ಇನ್ನೂ
ನಾವು 67% ಸಾಕ್ಷರತೆಯಲ್ಲಿದ್ದೇವೆ. ಗುಲ್ಬರ್ಗ, ರಾಯಚೂರು ಮುಂತಾದ ಕಡೆಗಳಲ್ಲಿ literacy percentage ಇನ್ನೂ 48–49% ಇದೆ. ಇದನ್ನೆಲ್ಲಾ ಮೇಲಕ್ಕೆ ಎತ್ತುವುದು ಹೇಗೆ? ಶಿಕ್ಷಣಕ್ಕೂ ಕಡಿಮೆ ಮಾಡಿದಿರಿ. ಮಾನವ ಸಂಪನ್ಮೂಲವನ್ನು ವೃದ್ಧಿ ಮಾಡಬೇಕು. ಎಲ್ಲಿ ಮಾಡುತ್ತಿದ್ದೀರಿ? Regional imbalance ಗೋಸ್ಕರ ಡಾ: ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಅವರಿಂದ ಒಂದು report ತರಿಸಿಕೊಂಡು ಅಭಿವೃದ್ಧಿ ಮಾಡಲಾಗುತ್ತಿತ್ತು. ನಾವು ಅದಕ್ಕೆ ಭಾರೀ Special ಆಗಿ grants ಕೊಟ್ಟಿದ್ದೇವೆ ಎಂದು ಇವರು ಹೇಳಿದ್ದಾರೆ. ಬಜೆಟ್‌ನ ಜೊತೆಯಲ್ಲಿ Special Development ಎಂದು ಒಂದನ್ನು ಕೊಡುತ್ತಾರೆ. 2007–08 ಕ್ಕೆ, 1,552 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿದ್ದರು. ಅದನ್ನೇನು separate ಆಗಿ ಇಟ್ಟಿಲ್ಲ. plan size ನಲ್ಲೇ ಏನೇನು ಅಭಿವೃದ್ಧಿ ಕೆಲಸಗಳನ್ನು ಹೇಳೀದ್ದಾರೋ ಅದರಲ್ಲೇ ನಂಜುಂಡಪ್ಪನವರ ವರದಿ ಆಧಾರದ ಮೇಲೆ ಎಷ್ಟು ಹಣವನ್ನು ಖರ್ಚು ಮಾಡಬೇಕು, ಇಷ್ಟು ರಸ್ತೆ ಮಾಡಬೇಕು, ಕುಡಿಯುವುದಕ್ಕೆ ನೀರು ಕೊಡಬೇಕು, ನೀರಾವರಿಗೆ ಇಷ್ಟು ದುಡ್ಡು ಕೊಡುತ್ತೇವೆ ಎನ್ನುವುದನ್ನು ಹೇಳಿದ್ದಾರೆ.

2008-09ಕ್ಕೆ ಅಂದರೆ ಈ ವರ್ಷಕ್ಕೆ 2,542 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ, ಮುಂದಿನ ವರ್ಷಕ್ಕೆ 2,574 ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ಎಲ್ಲ M.L.A ಗಳಿಗೂ ಇರುವ ಅನುಮಾನ ಏನೆಂದರೆ, ಅನೇಕ ಕಡೆಗಳಲ್ಲಿ ನಂಜುಂಡಪ್ಪನವರ ವರದಿ ಆಧಾರದ ಮೇಲೆ ಕೊಟ್ಟಿರುವುದು ಎಂದು ಹೇಳಿ ಕೊಟ್ಟಂಥ ದುಡ್ಡನ್ನೂ ವಾಪಸ್ಸು ತೆಗೆದುಕೊಂಡು ಬಿಟ್ಟಿದ್ದಾರೆ. P.W.D ನಲ್ಲಿ ಬೇರೆಬೇರೆ ಇಲಾಖೆಗಳಲ್ಲಿ ಹೀಗೆ ಕೊಟ್ಟಿರುವಂಥಾದ್ದನ್ನು ವಾಪಸ್ಸು ತೆಗೆದು ಕೊಂಡಿದ್ದಾರೆ. ಅದಕ್ಕೆ ಸುಶಿಲ್ ನಮೋಶಿಯವರ ಅಧ್ಯಕ್ಷತೆಯಲ್ಲಿ ಅಧಿಕಾರಸ್ಥರ ಸಮಿತಿ ಇದೆ. ಅದಕ್ಕೆ cabinet rank ಕೊಟ್ಟಿದ್ದಾರೆ. ಅದಕ್ಕೆ ದುಡ್ಡೇ ಕೊಡದಿದ್ದರೆ ಅವರು ಏನು ಮಾಡುತ್ತಾರೆ? ಅದರ ಜೊತೆಗೆ, ನೀವು ಅನುದಾನಗಳನ್ನು ಕೂಡ ವಿವೇಚನೆ ಇಲ್ಲದೇ ಕೊಡತಕ್ಕಂಥಾದ್ದು ಆಗಿದೆ. ನಿಮಗೆ ಯಾರ್‍ಯಾರು ಬೇಕೋ ಅಲ್ಲಿಗೆ ಅನುದಾನವನ್ನು ಕೊಡುತ್ತಿದ್ದೀರಿ. ಇದೆ ರೀತಿ ಮುಂದುವರೆದರೆ, ಅವರಿಗೆ ಬೇಕಾದಂಥ ಶಾಸಕರುಗಳಿಗೇ ಅನುದಾನವನ್ನು ಕೊಟ್ಟುಕೊಂಡು ಹೋದರೆ, ಡಾ: ನಂಜುಂಡಪ್ಪನವರ ವರದಿಯಲ್ಲಿ ಗುರುತಿಸಿರುವ 114 ತಾಲ್ಲೂಕುಗಳಿಗೆ ವಿಶೇಷ ಗಮನ ಕೊಡದೇ, ನಂಜುಂಡಪ್ಪನವರ ವರದಿಯಲ್ಲಿ ಇಲ್ಲದೇ ಇರತಕ್ಕಂಥ ತಾಲ್ಲೂಕುಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿದರೆ ಇನ್ನೊಂದು ನಂಜುಂಡಪ್ಪನವರ ವರದಿಯನ್ನು ಸ್ಥಾಪನೆ ಮಾಡಬೇಕಾಗುತ್ತದೆ. The regional imbalance will be further widened. ಈ 114 ತಾಲ್ಲೂಕುಗಳಲ್ಲಿ 39 ತಾಲ್ಲೂಕುಗಳು ಅತೀ ಹಿಂದುಳಿದವು, 40 ತಾಲ್ಲೂಕುಗಳು ಹಿಂದುಳಿದವು, ಇನ್ನುಳಿದ 35 ತಾಲ್ಲೂಕುಗಳಲ್ಲಿ ಬರುತ್ತದೆಯೇ? ಹಾಗಿದ್ದರೆ, ಚಾಮರಾಜನಗರಕ್ಕೆ ನಿಮ್ಮ ತಾಲ್ಲೂಕಿಗೂ ಎಷ್ಟು ದುಡ್ಡು ವ್ಯತ್ಯಾಸವಿದೆ ಎಂದು ಹೇಳಿ, ಏಕೆಂದರೆ ಚಾಮರಾಜನಗರ ಮೊದಲ 39 ಬರುತ್ತದೆ. ಶಿಕಾರಿಪುರವಂತೂ ಆ 114 ತಾಲ್ಲೂಕುಗಳಲ್ಲಿ ಇಲ್ಲವೇ ಇಲ್ಲ. ವರದಿಯಲ್ಲಿ ಇಲ್ಲದೇ ಇರುವಂಥ ಕಡೆಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿ, ನಂಜುಂಡಪ್ಪನವರು most backward, more backward and backward ಎಂದು ಏನು ಹೇಳಿದ್ದಾರೆ, ಅವುಗಳಿಗೆ ದುಡ್ಡನ್ನೇ ಖರ್ಚು ಮಾಡದಿದ್ದರೆ what will be the fate of those most backward, more backward and backward Taluks? ದುಡ್ಡನ್ನೂ ಇಡುವುದಿಲ್ಲ, ಖರ್ಚೂ ಮಾಡುವುದಿಲ್ಲ. ಅವರು report ಕೊಟ್ಟಾಗ 31 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎಂದು ಹೇಳಿದರು. 31 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು, 15 ಸಾವಿರ ಕೋಟಿ normal plan ನಲ್ಲಿ ಬರುತ್ತದೆ, ಇನ್ನು 16 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿವರ್ಷ 2 ಸಾವಿರ ಕೋಟಿ ರೂಪಾಯಿಗಳಂತೆ 8 ವರ್ಷಗಳ ಕಾಲ ಖರ್ಚು ಮಾಡಬೇಕು ಎಂದು ಅವತ್ತು ಅವರು ಹೇಳಿದರು. ಇನ್ನು 16 ಸಾವಿರ ಕೋಟಿ ರೂಪಾಯಿಗಳಲ್ಲಿ 8 ವರ್ಷಗಳಲ್ಲಿ

ವರ್ಷಕ್ಕೆ 2-2 ಸಾವಿರ ಕೋಟಿ ರೂಪಾಯಿಗಳಂತೆ ಖರ್ಚು ಮಾಡಬೇಕೆಂದು ಆವತ್ತು ಹೇಳಿದರು. ಅವತ್ತಿಗೂ ಇವತ್ತಿಗೂ inflation rate ಲೆಕ್ಕಕ್ಕೆ ತೆಗೆದುಕೊಂಡರೆ ಈಗ ಆ 2 ಸಾವಿರ ಕೋಟಿ ಕನಿಷ್ಠ 4 ಸಾವಿರ ಕೋಟಿ ರೂಪಾಯಿಗಳಾಗುತ್ತದೆ. 4 ಸಾವಿರ ಕೋಟಿ ರೂಪಾಯಿ ಇಡಬೇಕು. ಇಲ್ಲದೇ ಹೋದರೆ regional imbalance ನಲ್ಲಿ ನಾವು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ನಾವು ಪ್ರತಿ ಬಜೆಟನಲ್ಲಿಯೂ inclusive growth ಎಂದು ಅಂದರೆ ಸಮಾನ ಬೆಳವಣಿಗೆ ಎಂದು ಹೇಳುತ್ತೇವೆ, ಸಾಮಾಜಿಕ ನ್ಯಾಯ ಎಂದು ಹೇಳುತ್ತೇವೆ. ಇದನ್ನೇ ಸಾಮಾಜಿಕ ನ್ಯಾಯ, ಸಮಾನ ಬೆಳವಣಿಗೆ ಎಂದು ಕರೆಯುವುದು? ಇದನ್ನೇ ಸಾಮಾಜಿಕ ನ್ಯಾಯ ಎಂದು ಕರೆಯುವುದೇ? ಹಾಗೆ ಮಾಡುವುದಕ್ಕಾಗುವುದಿಲ್ಲ. ಒಂದು ರಾಜ್ಯದ ಸರ್ವತೋಮುಖ ಅಭಿವೃದ್ಧಿಯಾಗಬೇಕೆನ್ನುವುದಾದರೆ prudent fiscal management ಇರಬೇಕಾಗುತ್ತದೆ. ಹಣ ಖರ್ಚು ಮಾಡುವುದರಲ್ಲಿಯೂ ಕೂಡ prudent ಆಗಿ ಖರ್ಚು ಮಾಡಬೇಕಾಗುತ್ತದೆ. Unrealistic ಆಗಿ plan ಗಳನ್ನು ಮಾಡಿದರೆ, ಆಗಿ ಗಳನ್ನು ಮಾಡಿದರೆ it is also an economic offence ನಿಮ್ಮ ಕೈಪಿಡಿಗಳಲ್ಲಿರುವ ಕೋಡ್‌ಗಳಲ್ಲಿ ಈ ಬಗ್ಗೆ ಹೇಳುತ್ತಾರೆ. Unrealistic ಆಗಿ ಮಾಡುವುದು, ದುಡ್ಡು ಬಿಡುಗಡೆ ಆಗದಿರುವುದು it is also an offence ಯಡಿಯೂರಪ್ಪನವರಿಗೆ ಒಂದು ಒಂದು ಅವಕಾಶ ಸಿಕ್ಕಿದೆ. ಅವರು ಹಣಕಾಸು ಮಂತ್ರಿಯಾದ ಕಾಲದಲ್ಲಿ ಬಹಳ ಉತ್ತಮ ಪರಿಸ್ಥಿತಿ ಇದ್ದಾಗ ಬಂದರು. ಇವರ ಕಾಲದಲ್ಲಿ 4 ಸಾವಿರ ಕೋಟಿ ರೂಪಾಯಿ surplus ಇದ್ದ ಕಾಲದಲ್ಲಿ ಇವರು ಬಂದರು. ಚೆಲ್ಲಾರೆ 4 ಸಾವಿರ ಕೋಟಿ ರೂಪಾಯಿಯಿಂದ ಹಿಡಿದು ಈಗ 2008-09ರ ಸಾಲಿಗೆ 757 ಕೋಟಿ ರೂಪಾಯಿಗಳ surplus ಗೆ ತಂದು ನಿಲ್ಲಿಸಿದ್ದೀರಿ. ಮುಂದಿನ ವರ್ಷಕ್ಕೆ ಅದು ಕೊರತೆಯಾದರೂ ಆಗಬಹುದು. ಒಳ್ಳೆಯದಾಗಲಿ ಎಂದೇ ಹೇಳುತ್ತಿದ್ದೇನೆ. ಒಳ್ಳೆಯದು ಮಾಡಿ ಎಂದು ನಿಮಗೆ ಹೇಳುತ್ತಿದ್ದೇನೆ. ನೀವು ಒಳ್ಳೆಯದು ಮಾಡುತ್ತಿಲ್ಲವೆಂದು ನಮಗೆ ನೋವಾಗಿದೆ. ಅಂಥ ಪರಿಸ್ಥಿತಿಯಲ್ಲಿ ನೀವು ಬಂದಾಗ ಯಡಿಯೂರಪ್ಪನವರೇ, ನಿಮಗೆ ಎಂಥ opportunity ಸಿಕ್ಕಿತ್ತು ಎಂದರೆ ಬಹಳ ಒಳ್ಳೆಯ opportunity ಸಿಕ್ಕಿತ್ತು. ನಾವಿದ್ದಾಗ ಆ opportunity ಇರಲಿಲ್ಲ. ಕಷ್ಟಕಾಲದಲ್ಲಿ ನಾನು ಅಧಿಕಾರ ತೆಗೆದುಕೊಂಡಿದ್ದೆ. ಹಣಕಾಸಿನ ಪರಿಸ್ಥಿತಿ ಹಾಗಿತ್ತು 4132 ಕೋಟಿ ರೂಪಾಯಿ revenue surplus ಇದ್ದಾಗ ಬಜೆಟ್ ಮಂಡಿಸುವ ಕಾಲಕ್ಕೆ ನೀವು ಬಂದಿರಿ. ನಾನು ಹಣಕಾಸು ಸಚಿವನಾಗಿದ್ದಾಗ 2004-05 ರಲ್ಲಿ 1668 ಕೋಟಿ ರೂ. revenue deficit ಇತ್ತು. ನಾನು ಹೇಳುವುದೇನೆಂದರೆ, ಹೀಗಾದರೆ ಅಭಿವೃದ್ಧಿಯಾಗುವುದಿಲ್ಲ ನೀರಾವರಿಯಾಗುವುದಿಲ್ಲ. Food production ಎಲ್ಲಿ ಹೆಚ್ಚಾಗುತ್ತದೆ? ನೀರಾವರಿ ಹೆಚ್ಚಾದರೆ ತಾನೆ ಇದು ಹೆಚ್ಚಾಗುವುದು ನಾನು ಇಲ್ಲಿ

ಸುಮ್ಮನೆ CAG report ಅನ್ನು observe ಮಾಡಿದೆ. CAG ಯವರು ತಮ್ಮ report ನಲ್ಲಿ ನಿಮ್ಮ ಜಿಲ್ಲೆಯ Upper Tunga project ಅನ್ನು analyzeಮಾಡಿದ್ದಾರೆ. ಅದು ಪ್ರಾರಂಭವಾಗಿದೆ. 17 ವರ್ಷವಾಗಿದೆ. 1052 ಕೋಟಿ ರೂಪಾಯಿಗಳಲ್ಲಿ ಮಾಡಬೇಕೆಂದಿದ್ದು, ಅದು 2005 ರಲ್ಲಿ ಮುಗಿಯಬೇಕಾಗಿತ್ತು. ಈಗ ನಾವು 2009ರ ಸಾಲಿನಲ್ಲಿದ್ದೇವೆ. ಇದಕ್ಕೆ 600 ಕೋಟಿ ಚಿಲ್ಲರೆ ರೂಪಾಯಿ ಖರ್ಚಾಗಿದೆಯಂತೆ. CAG ಯವರು ಎಲ್ಲಾ ಹಣ ನಿಷ್ಫಲವಾಯಿತು ಎಂದು ಹೇಳುತ್ತಾರೆ ಅದು ನೀರಾವರಿಯಾದರೆ 2 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಸಿಗುತ್ತಿತ್ತು. ಆ 2 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಿದ್ದರೆ ಆಹಾರೋತ್ಪಾದನೆ ಆಗುತ್ತಿತ್ತು. ಆ ಯೋಜನೆ ಇನ್ನೂ ಕೂಡ ಯಾವಾಗ ಮುಗಿಯುತ್ತದೋ ಗೊತ್ತಿಲ್ಲ. ಅಂದಿನ ದರಗಳಲ್ಲಿ 1052 ಕೋಟಿ ರೂ. ಅಂದರೆ ಈಗ ಅದು ಎಷ್ಟು ದರ ಆಗುತ್ತದೋ ಗೊತ್ತಿಲ್ಲ. ಈಗ 630 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆಯಂತೆ. ಇನ್ನು ಕೂಡ ಅದಕ್ಕಿಂತ ಜಾಸ್ತಿ ಹಣ ಖರ್ಚು ಮಾಡಬೇಕಾದಂಥ ಪರಿಸ್ಥಿತಿ ಇದೆ. ಇನ್ನೂ ಅನೇಕ ಪ್ರಾಜೆಕ್ಟ್‌ಗಳು ಅದೇ ರೀತಿ ಇವೆ. ಅದಕ್ಕೋಸ್ಕರ, ನೀರಾವರಿ ಇಲಾಖೆಯಲ್ಲಿ ಹಣ ತೊಡಗಿಸುವುದನ್ನು ಒಂದು ಕಡೆ ನೀವು ಕಡಿಮೆ ಮಾಡುತ್ತಿದ್ದೀರಿ, time bound ನಲ್ಲಿ ಹಣ ಖರ್ಚು ಮಾಡದೇ ಹೋದರೆ ಆ ಯೋಜನೆ ಫಲಪ್ರದವಾಗುವುದಿಲ್ಲ ನಿಮಗೆ plan ನಲ್ಲಿಯೇ ಹೇಳಿದ್ದಾರೆ. 11th Five year plan ನಲ್ಲಿ planning commission ನವರು ಬಹಳ ಸ್ಪಷ್ಟವಾಗಿ, ನೀರಾವರಿಗೆ ಗರಿಷ್ಠ 29% ರಷ್ಟು ಖರ್ಚು ಮಾಡಬೇಕೆಂದು ಹೇಳಿದ್ದಾರೆ. For the 11th five year plan total plan size 1 ಲಕ್ಷದ 1 ಸಾವಿರದ 642 ಕೋಟಿ ರೂಪಾಯಿ ಆಗಿದೆ. ಅದರಲ್ಲಿ 29% ಎಂದರೆ more than 30 thousand crores of rupees ಆಗುತ್ತದೆ. 11th Five year plan ನಲ್ಲಿ ಕನಿಷ್ಠ 30 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಂತೆ. ಎಲ್ಲಿ ಖರ್ಚು ಮಾಡುತ್ತಿದ್ದಾರೆ? ನಾವು ನೀರಾವರಿಗೆ ಆದ್ಯತೆ ಕೊಟ್ಟಿದ್ದೇವೆ, ಕೃಷಿಗೆ ಆದ್ಯತೆ ಕೊಟ್ಟಿದ್ದೇವೆ, ಗ್ರಾಮೀಣಾಭಿವೃದ್ಧಿಗಾಗಿ ಆದ್ಯತೆ ಕೊಟ್ಟಿದ್ದೇವೆಂದು ಈ ತರಹ ಹೇಳುವುದರಿಂದ ವಾಸ್ತವಿಕವಾಗಿ ಬೆಳವಣಿಗೆಯಾಗುವುದಕ್ಕೆ ಸಾಧ್ಯವಿಲ್ಲ, ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಮುಂದಿನ ವರ್ಷಕ್ಕೂ ಕೂಡ ಜಾಸ್ತಿಯಾಗುತ್ತದೆಂದು ನನಗೇನೂ ಅನಿಸುವುದಿಲ್ಲ. ಕೃಷಿಗೆ 2006-07 ರಲ್ಲಿ 29.74% 2007-08ರಲ್ಲಿ 44%, 2008-09 ರಲ್ಲಿ 19%, 2009-10ಕ್ಕೆ 11.8% allocation ಇದೆ. ಹೀಗಾದರೆ ಕೃಷಿ ಹೇಗೆ ಅಭಿವೃದ್ಧಿಯಾಗುತ್ತದೆ? ಕೃಷಿಗೆ ಬಹಳ allocation ಹೇಳುತ್ತಾರೆ. ಹೀಗಾದರೆ, food production ಹೇಗೆ ಜಾಸ್ತಿ ಆಗುತ್ತದೆ? ಸಾಧ್ಯವೇ ಇಲ್ಲ. ಹಾಗೆಯೇ, ಗ್ರಾಮೀಣಾಭಿವೃದ್ಧಿಗೆ 2005-06 ರಲ್ಲಿ 23.6%, 2006-07ರಲ್ಲಿ 23% 2007-08ರಲ್ಲಿ 26.4%, 2008-09ರಲ್ಲಿ 11% allocation ಇದೆ. 2009-10ಕ್ಕೆ minus growth ಇದೆ. ದುಡ್ಡು ಎಲ್ಲಿದೆ? ಗ್ರಾಮೀಣಾಭಿವೃದ್ಧಿ, ಗ್ರಾಮೀಣ ರಸ್ತೆಗಳು,

ಕುಡಿಯುವ ನೀರು ಇದಕ್ಕೆ ದುಡ್ಡು ಎಲ್ಲಿದೆ? ಇವುಗಳಿಗೆ ಹಣ ಕಡಿಮೆ ಆಗುತ್ತಾ ಹೋಗುತ್ತಿದೆ. ಮೊದಲಿನಿಂದಲೂ ಹಾಗೆಯೇ ಆಗುತ್ತಿದೆ. Health ನಲ್ಲೂ ಕೂಡ ಹಾಗೆಯೇ ಇದೆ. ಇದರಲ್ಲಿ 2007-08ಕ್ಕೆ 30%, 2008-09ರಲ್ಲಿ 24% ಇದೆ. It has come down. plan size is increasing every year according to their Budget speech. plan size ಜಾಸ್ತಿ ಆದಮೇಲೆ core subject ಗಳಲ್ಲಿ investment ಕೂಡ ಜಾಸ್ತಿ ಆಗಬೇಕು. ಆದರೆ, ಕಡಿಮೆಯಾಗುತ್ತಿದೆ, ಹಾಗಾದರೆ, ಆರೋಗ್ಯ ಸುಧಾರಣೆಯಾಗಬೇಕೆಂದರೆ ಹೇಗೆ ಆಗುತ್ತದೆ? ಸುಧಾರಣೆಯಾಗುವುದಕ್ಕೆ ಸಾಧ್ಯವೇ ಇಲ್ಲ. 2007-08ಕ್ಕೆ 30%, 2008-09ಕ್ಕೆ 24.4%, 2009-10ಕ್ಕೆ 3.59% ಆಗುತ್ತದೆ. Health ನಲ್ಲೂ ಕೂಡ ಹೀಗಾದರೆ ಅಭಿವೃದ್ಧಿ ಸಾಧ್ಯವೇ ಇಲ್ಲ. Social Sector ಗೆ ಬಹಳ ಹೊಡೆತ ಬಿದ್ದಿದೆ. ಹಣವೇ ಇಲ್ಲ. ಕರ್ನಾಟಕ ಅಭಿವೃದ್ಧಿ ಆಗಿಹೋಯಿತು ಎನ್ನುತ್ತೀರಿ. ಆದರೆ, ಎಲ್ಲಿ ಆಗುತ್ತದೆ? ನೀವು ಕೊಟ್ಟಿರುವ ಅಂಕಿಅಂಶಗಳನ್ನೇ ನಾನು ಹೇಳುತ್ತಿದ್ದೇನೆ. ನಾನು ಎಲ್ಲಿಂದಲೋ ತಂದು ಹೇಳುತ್ತಿಲ್ಲ. ಶಿಕ್ಷಣದ ಬಗ್ಗೆ ಆಗಲೇ ಹೇಳಿದ ಹಾಗೆ, 2007-08ಕ್ಕೆ 6859 ಕೋಟಿ ರೂಪಾಯಿಗಳನ್ನು ಅಂದರೆ 21%, 2008-09ಕ್ಕೆ 8666, 2009-10ಕ್ಕೆ 8800 ಕೋಟಿ ರೂಪಾಯಿಗಳು ಅಂದರೆ ಇಲ್ಲಿ 2.83% ಗೆ ಬಂದುಬಟ್ಟಿದೆ. 2008-09ಕ್ಕೆ 26%, 2009-10ಕ್ಕೆ 2.83% ಅಂದರೆ ಶಿಕ್ಷಣಕ್ಕೆ ಹಣ ಜಾಸ್ತಿ ಆಯಿತೆ ಅಥವಾ ಕಡಿಮೆ ಆಯಿತ? ಎಂಬುದನ್ನು ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಬೇಕು. ಇರುವ ದುಡ್ಡನ್ನು ತೆಗೆದುಕೊಂಡು ಹೋಗಿ ಬೇರೆ ಯಾವುದಕ್ಕೋ ಖರ್ಚು ಮಾಡುವುದಕ್ಕೆ ಹೊರಟಿದ್ದೀರಿ. ದುಡ್ಡೇ ಇಲ್ಲ. ಅದಕ್ಕೆ ಬೇರೆಯಾದಕ್ಕೆ ಏಕೆ ಖರ್ಚು ಮಾಡುವುದಕ್ಕೆ ಹೋಗುತ್ತೀರಿ? ಹೀಗಾದರೆ ಎಲ್ಲರಿಗೂ ಶಿಕ್ಷಣ ಕೊಡುವುದು ಹೇಗೆ? ನಿನ್ನೆ ಖರ್ಗೆಯವರು ಹೇಳಿದ್ದಾರೆ, ಅದನ್ನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. 2009-10ಕ್ಕೆ 25% ನಿಂದ 13% ಗೆ ಬಂದು ನಿಂತಿದ್ದೇವೆ. ಕಾರಜೋಳಗವರೇ, Minor Irrigation ಈ ವರ್ಷ ಹಣವೇ ಇಲ್ಲ. ಹಣವನ್ನು cut ಮಾಡಿದರು.

ಬಜೆಟ್‌ನಲ್ಲಿ 782 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ, ಏನೂ ಇಲ್ಲವೇ ಇಲ್ಲ. ಮುಂದಿನ ಸಲವೂ ಅದೇ ಆಗುತ್ತದೆ. ಕೇವಲ ಬಜೆಟ್ ಪುಸ್ತಕದಲ್ಲಿ ತೋರಿಸುವುದು ಮತ್ತೆ ತೆಗೆದುಕೊಳ್ಳುವುದು. Minor irrigation ಗೆ 782 ಕೋಟಿ ರೂಪಾಯಿ ಎಂದು ಹೇಳುವುದು, ಆದರೆ, ಬಿಡುಗಡೆ ಮಾಡುವುದು 300 ಕೋಟಿ ರೂಪಾಯಿಗಳಷ್ಟು ಮಾತ್ರ, pending Bills ಬಹಳ ಇವೆ. Irrigation PWD ಅಡಿಯಲ್ಲಿ ನನಗೆ ಗೊತ್ತಿರುವ ಹಾಗೆ, for irrigation since 6 months LOC has not been reduced, likewise for Rural Development. ಈ ತರಹ ಆದರೆ ಹೇಗೆ? Can you call it as a prudent fiscal management? Is it growth oriented budget? You can't, nobody can. ವಿದ್ಯುಚ್ಛಕ್ತಿಯಲ್ಲೂ

ಹಾಗೆಯೇ ಆಗಿದೆ. 2300 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ revised estimates ನಲ್ಲಿ 1880 ಕೋಟಿ ರೂಪಾಯಿಗಳಷ್ಟು ಮಾತ್ರ ಇಟ್ಟಿದ್ದಾರೆ. ನೀರಾವರಿಯಲ್ಲೂ ಎಷ್ಟು ಇತ್ತೋ ಅಷ್ಟೇ ಇದೆ. ನಾನು ಆಗಲೇ ಹೇಳಿದ ಹಾಗೆ T&D loss and other things 35% ನಿಂದ 27.06% ಗೆ ಬಂದಿದೆ. ಜಲವಿದ್ಯುತ್‌ನಲ್ಲಿ ಸಹ 3637 ಕೋಟಿ ರೂಪಾಯಿಗಳಷ್ಟಕ್ಕೆ ನಿಂತಿದೆ. ಅದಕ್ಕಿಂತ ಮೇಲೆ ಹೋಗಿಲ್ಲ. ಇನ್ನು ಕರ್ನಾಟಕದಲ್ಲಿ potential 7750 ಇದೆ. ನಾವಿನ್ನೂ not even 50% able to utilize. ಇನ್ನು Housing ನಲ್ಲಿ 2005-06,2006-07ರಲ್ಲಿ ಮನೆಗಳನ್ನು ಕಟ್ಟಲಿಲ್ಲ. ಈಗ 50 ಮನೆಗಳನ್ನು ಕೊಟ್ಟಿದ್ದಾರೆ. ಒಂದೊಂದು ಪಂಚಾಯಿತಿಗೆ 35 ಮನೆಗಳನ್ನು ಕೊಟ್ಟಿದ್ದಾರೆ. ಒಂದೊಂದು ಊರಿಗೆ ಐದೈದು, ಮೂರು ಮೂರು ಮನೆಗಳನ್ನು ಕೊಟ್ಟಿದ್ದಾರೆ. ಯಾರಿಗೆ ಕೊಡುವುದು ಎಂದು ಪಂಚಾಯತಿ ಮೆಂಬರುಗಳು ಒಬ್ಬರಿಗೊಬ್ಬರು ಹೊಡೆದಾಡಿಕೊಳ್ಳುತ್ತಿದ್ದಾರೆ. ಶನಿವಾರ ದಿವಸ ಜನಸ್ಪಂದನ ಕಾರ್ಯಕ್ರಮ ಏರ್ಪಾಡು ಮಾಡಿದ್ದಾರೆ. ಅಲ್ಲಿಗೆ ಹೋಗಿ ನೋಡಿದರೆ 100 ಅರ್ಜಿಗಳಲ್ಲಿ 90 ಅರ್ಜಿಗಳು ಮನೆ ಕೊಡಿ ಎಂದೇ ಬರುತ್ತವೆ. ಇವರು 6 ಲಕ್ಷ ಚಿಲ್ಲರೆ ಅರ್ಜಿ ಬಂದಿತ್ತು, ಅದರಲ್ಲಿ 5 ಲಕ್ಷ ಚಿಲ್ಲರೆ ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇವೆ, about 80% disposed off ಎಂದು ಹೇಳುತ್ತಾರೆ. 100 ಅರ್ಜಿಗಳಲ್ಲಿ 90 ಅರ್ಜಿಗಳು ಮನೆ ಕೊಡಿ ಎಂದು ಬರುತ್ತವೆ. ಆ 90 ಅರ್ಜಿಗಳಿಗೆ ಮನೆ ಕೊಡುವುದಿಲ್ಲ ಎಂದು ಬರೆದು ಕಳುಹಿಸುತ್ತಾರೆ. ಅದೇ disposed off 100 ಅರ್ಜಿಗಳಲ್ಲಿ 90 ಅರ್ಜಿಗಳು ಮನೆ ಕೊಡಿ ಎಂದು ಬಂದಿವೆ, ಆ 90 ಅರ್ಜಿಗಳಿಗೆ ಸಂಬಂಧಿಸಿದಂತೆ, ಮನೆ ಕೊಡುವುದಕ್ಕೆ ಮನೆ ಇಲ್ಲ, ಹಣ ಇಲ್ಲ, ಆದ್ದರಿಂದ ಮನೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ 90 ಅರ್ಜಿ disposed off ಎಂದು ಹೇಳುತ್ತಾರೆ. ಆ ಲೆಕ್ಕದ ಮೇಲೆ ಜನಸ್ಪಂದನದಲ್ಲಿ 6 ಲಕ್ಷ ಅರ್ಜಿ ಬಂದರೆ, ನಾನು ಒಂದು ಜನಸ್ಪಂದನ ಕಾರ್ಯಕ್ರಮಕ್ಕೆ ಹೋಗಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಇದ್ದು ಅರ್ಜಿಗಳನ್ನು ತಹಶೀಲ್ದಾರರಿಗೆ ಕೊಡದೆ ನನಗೇ ನೇರವಾಗಿ ತೆಗೆದುಕೊಂಡು ಬಂದು ಕೊಟ್ಟರು, ಆ ಅರ್ಜಿಗಳನ್ನು ನೋಡಿದರೆ ಎಲ್ಲವೂ ಮನೆ ಕೊಡಿಸಿ ಎಂದು ಬಂದಿದ್ದವು ಅದರಲ್ಲಿ ಕೆಲವು ಕಾರ್ಡ್ ಕೊಡಿಸಿ ಎಂದು ಬಂದಿದ್ದವು. ಆ ಕಾರ್ಡ್ ಕೊಡಿಸಿ ಎನ್ನುವ ಅರ್ಜಿಗಳ ಮೇಲೆ ನಿಮ್ಮದಿ ಕೇಂದ್ರಗಳಿಗೆ ಹೋಗಿ ಎಂದು ಬರೆದು ಕಳುಹಿಸುತ್ತಾರೆ. ಈ ತರಹ ಅರ್ಜಿಗಳನ್ನೆಲ್ಲ disposed off ಮಾಡುತ್ತಾರೆ. social welfare Deprtment ಬಗ್ಗೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದರು. ಹಣ ಇಡುತ್ತಾರೆ ಆದರೆ ಬಿಡುಗಡೆ ಮಾಡುವುದಿಲ್ಲ, ಖರ್ಚು ಮಾಡುವುದಿಲ್ಲ. ಏಕೆಂದರೆ social welfare ಗೆ Department comitted officers ಹೋಗುವುದಿಲ್ಲ. social justice ಬಗ್ಗೆ commitment ಇರುವವರು ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದ ವರ್ಗಗಳ ಬಗ್ಗೆ, minorities ಬಗ್ಗೆ commitment ಇರುವವರು

ಬಂದಾಗ ಮಾತ್ರ ಈ ಹಣ ಖರ್ಚಾಗುತ್ತದೆಯೇ ಹೊರತು ಇಲ್ಲದಿದ್ದರೆ ಖರ್ಚಾಗುವುದಿಲ್ಲ. ನಾನು ಕಳೆದ ಸಲವೂ ಹೇಳಿದೆ.

ಡಾ: ಹೆಚ್.ಸಿ. ಮಹದೇವಪ್ಪ: ಮಂತ್ರಿಗಳಿಗೂ ಕೂಡ ಅಂಥ ಬದ್ಧತೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಮಂತ್ರಿಗಳ ವಿಷಯ ಇರಲಿ, ಅಧಿಕಾರಿಗಳಿಗಾದರೂ ಬದ್ಧತೆ ಇರಬೇಕಲ್ಲವೇ? ಅಧಿಕಾರಿಗಳು Social welfare ಎಂದರೆ ಅದು punishment post ಎಂದು ತಿಳಿದುಕೊಳ್ಳುತ್ತಾರೆ. ಯಾರೂ ಕೆಲಸ ಮಾಡುವುದಿಲ್ಲ. ಹಿಂದುಳಿದವರಿಗೆ ಗಂಗಾಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿ ಕೊಡಿ ಎಂದು ಒಬ್ಬ ಎಂಎಲ್‌ಎ ಗೆ 10 ಕೊಟ್ಟಿದ್ದಾರೆ, ನಾವು ಯಾರಿಗೆ ಕೊಡುವುದು ಯಾರಿಗೆ ಬಿಡುವುದು? ಅದನ್ನು ನೀವೇ ಇಟ್ಟುಕೊಳ್ಳುವುದು ಒಳ್ಳೆಯದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಒಂದು ಕ್ಷೇತ್ರಕ್ಕೆ ಶ್ರಮಶಕ್ತಿ 43 ಎಂದು ಇದೆ. ಅದಕ್ಕೆ 13 ಸಾವಿರ ಅರ್ಜಿಗಳು ಬಂದಿವೆ.

ಶ್ರೀ ಸಿದ್ದರಾಮಯ್ಯ: ಒಬ್ಬ ಎಂಎಲ್‌ಎ 10 ಜನರಿಗೆ ಕೊಡುವುದಕ್ಕೆ ಅಧಿಕಾರವಿದೆಯೆಂದು ನನಗೆ ಬಂದು ಹೇಳಿದರು. ನೋಡಿದರೆ, 200–300 ಅರ್ಜಿಗಳು ಬಂದಿವೆ. ನಮ್ಮ ಊರಿನ ಅರ್ಜಿಗಳು 10–15 ಬಂದಿವೆ. ಅವರೆಲ್ಲರೂ ಬಂದು ನನಗೆ ಕೊಡಿ, ನನಗೆ ಕೊಡಿ ಎಂದು ಕೇಳಿದಾಗ, ನಾನು ಯಾರಿಗೂ ಕೊಡುವುದಿಲ್ಲ ಅಧಿಕಾರಿಗಳ ಹತ್ತಿರ ಹೋಗಿ ಎಂದು ಕಳುಹಿಸಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಹೇಗೆ ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಏನಾದರೂ ಮಾಡಬೇಕಾದರೆ ನಾವು resource mobilization ಅನ್ನು ಹೆಚ್ಚು ಹೆಚ್ಚು ಮಾಡಿ ಈ ಬಾಬ್ತುಗಳಿಗೆ ಹಣ ಖರ್ಚು ಮಾಡಬೇಕು. Un productivity ಗೆ ಹಣ ಖರ್ಚು ಮಾಡುವುದಲ್ಲ, ಎಲ್ಲಿ productivity ಇದೆ ಅಲ್ಲಿಗೆ ಕಳುಹಿಸಬೇಕು. ಎಲ್ಲಿ quality of life improve ಆಗಬೇಕಾಗಿದೆ, ಯಾರಿಗೆ economic empowerment ಆಗಬೇಕಾಗಿದೆ, ಅವರಿಗೆ ಮಾಡಬೇಕಾಗಿದೆ, ಕೆಲಸ. ನಾನು ಕಳೆದ ಸಲವೂ ಹೇಳಿದ್ದೆ, ಈ ಸಲವೂ ಹೇಳುತ್ತೇನೆ. ಪರಿಶಿಷ್ಟ ಜಾತಿ ವರ್ಗದವರು SC/ST Development corporation ಗಳಿಂದ ಸಾಲ ತೆಗೆದುಕೊಂಡಿದ್ದಾರೆ. ನಾವು ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದ್ದೇವೆ. ಪಾಪ, ಅವರಿಗೂ ಆ ರೀತಿ ಮನ್ನಾ ಮಾಡಬೇಕಲ್ಲವೇ? ಅವರಲ್ಲಿ ಅನೇಕ ಜನ agricultural labourers ಇದ್ದಾರೆ. ಅವರೂ ಸಾಲ ತೆಗೆದುಕೊಂಡಿದ್ದಾರೆ. ಅವರಿಗೂ ಕಷ್ಟವಾಗಿದೆ. ಅವರು ಸಾಲ ವಾಪಸ್ಸು ಕಟ್ಟುವುದಕ್ಕಾಗುವುದಿಲ್ಲ. 6% interest ಬೇರೆ ಇದೆ. ಅವರಿಗೂ ಮನ್ನಾ ಮಾಡೋಣ. ನಾನು ಕಳೆದ ಸಲ demand ಮಾಡಿದ್ದೆ. This year also I demand. ಪಾಪ. ಅವರಿಗೇಕೆ ಮಾಡಬಾರದು? Even now ಯಡಿಯೂರಪ್ಪನವರು ಎಲ್ಲಾ ಕಡೆಗೆ ಸಹಾಯ ಮಾಡುತ್ತಿದ್ದಾರೆ. ಎಲ್ಲಾ ದೇವಸ್ಥಾನಗಳಿಗೂ ಹಣ ಕೊಟ್ಟರು, ನಮ್ಮ ಊರಿನ ದೇವಸ್ಥಾನ ಬಿಟ್ಟಿದ್ದಾರೆ, ಅದು important ದೇವಸ್ಥಾನ, ಸ್ವಲ್ಪ

ಯಡಿಯೂರಪ್ಪನವರಿಗೆ ಹೇಳಿ ಎಂದು ನನಗೆ ಹೇಳಿದರು. ಯಡಿಯೂರಪ್ಪನವರೇ, ಅವರ ದೇವಸ್ಥಾನಕ್ಕೂ ಬೇಕಂತೆ, ಮಾಡಿಕೊಡಿ, ದೇವರುಗಳಲ್ಲಿ ಕೆಲವು important ದೇವರುಗಳು ಇರುತ್ತಾರೆ. ಗುರುತು ಮಾಡಿಕೊಂಡು ಅವರುಗಳಿಗಾದರೂ ಕೊಡಬೇಕಲ್ಲವೇ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ದೇವರೇ ಇಲ್ಲ ಎಂದು ಹೇಳುತ್ತೀರಿ. ಈಗ ದೇವರು ಎಂದು ಹೇಳುತ್ತೀರಲ್ಲ?

ಶ್ರೀ ಸಿದ್ದರಾಮಯ್ಯ: ದೇವರು ;ಇಲ್ಲವೆಂದು ಎಲ್ಲಿ ಹೇಳಿದ್ದೇನೆ? ಕುಳಿತುಕೊಳ್ಳಿ. ಬಸವಣ್ಣನವರು ದೇವರು ಇಲ್ಲವೆಂದು ಹೇಳಲಿಲ್ಲ. ದೇವಸ್ಥಾನಗಳಿಗೆ ಹೋಗಬೇಕಾದ ಅಗತ್ಯವಿಲ್ಲವೆಂದು ಹೇಳಿದರು. ನೀವು ಕೇಳಿಸಿಕೊಳ್ಳಲಿಲ್ಲ, ಈಗ ಬಂದಿದ್ದೀರಿ ಎಂದು ತೋರುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಸಂಸ್ಕಾರ ಪಡೆದ ಶಿಲೆ ಮೂರ್ತಿಯಾಗುತ್ತದೆ, ಸಂಸ್ಕಾರ ಪಡೆದ ಜಲ ತೀರ್ಥವಾಗುತ್ತದೆ, ಸಂಸ್ಕಾರ ಪಡೆದ ಮಾನವ ದೇವಮಾನವನಾಗುತ್ತಾನೆ. ಆ ದೇವಮಾನವ ರೂಪದಲ್ಲಿ ಕನಕದಾಸರು, ಬಸವಣ್ಣನವರು ಬಂದಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ಮುಜರಾಯಿ ಮಿನಿಸ್ಟರ್ ಆಗುವುದು ಒಳ್ಳೆಯದು. ಕೃಷ್ಣಯ್ಯ ಶೆಟ್ಟಿಯವರು ಗಂಗಾಜಲ ತೆಗೆದುಕೊಂಡು ಬರುತ್ತಾರೆ. ನೀವು ಯಾವ ಜಲ ತರುತ್ತೀರಿ?

ಶ್ರೀ ಹೆಚ್.ಎಸ್. ಶಂಕರಲಂಗೇಗೌಡ : ನೆಲವೇ ಜಲ, ಈ ನೆಲದಲ್ಲಿದೆಯಲ್ಲ.

ಶ್ರೀ ಸಿದ್ದರಾಮಯ್ಯ: ಶ್ರೀ ಹೆಚ್.ಎಸ್. ಶಂಕರಲಂಗೇಗೌಡರನ್ನು ಮಿನಿಸ್ಟರ್ ಮಾಡಿ ಎಂದು ನಾನು ಎಷ್ಟೋ ಸಲ ರೆಕಮಂಡ್ ಮಾಡಿದೆ. ನೀವು ಮಾಡಲೇ ಇಲ್ಲವಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಹಣೆಯಲ್ಲಿ ಬರೆದಿಲ್ಲವಲ್ಲ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ನೀವು ಇಷ್ಟೊಂದು ದೇವರ ಪೂಜೆ ಮಾಡುತ್ತೀರಿ. ಅವರು ನಿಮ್ಮ ಹಣೆಯಲ್ಲಿ ಬರೆದಿಲ್ಲವೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ನಮ್ಮ ಯಡಿಯೂರಪ್ಪನವರು ದೈವಾಂಶ ಸಂಭೂತರು. ನೀವು ಕೂಡ ಅವರ ಹಿಂದೆ ಬರುವವರು. ಕುಮಾರಸ್ವಾಮಿಯವರು ಕೂಡ ಹಿಂದುಳಿದ ವರ್ಗದ ಎಲ್ಲಾ ಜನರ ಹಿತ ಕಾಪಡುವುದಕ್ಕೆ ಹೋಗುವುದರಿಂದ ಜನರು ಅವರನ್ನು ದೇವರೆಂದು ಪೂಜಿಸುತ್ತಾರಲ್ಲ.

ಶ್ರೀ ಸಿದ್ದರಾಮಯ್ಯ: ನೀವು ನಿಮ್ಮ ಕ್ಷೇತ್ರದಲ್ಲಿ ಆಂಜನೇಯ ದೇವಸ್ಥಾನವನ್ನೇ ಕಟ್ಟಿಸಿದ್ದೀರಲ್ಲ? ಇವರು ಆಂಜನೇಯನ ಮಹಾಭಕ್ತರು.

ಡಾ: ಹೆಚ್.ಸಿ ಮಹದೇವಪ್ಪ: ಬಿಜೆಪಿಯಲ್ಲಿ ಶಂಕರಲಿಂಗೇಗೌಡರಿಗೆ ಅವರ ಹಣೆಬರಹಗೊತ್ತಾಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಆ ತರಹ ಏನೂ ಇಲ್ಲ. ಕಾಲಾಯ ತಸ್ಮೈ ನಮ:.

ಶ್ರೀ ಸಿ.ಟಿ.ರವಿ: ಡಾಕ್ಟರೆ, ನಿಮಗೆ ಜನತಾದಳದಲ್ಲಿ ಗೊತ್ತಾದ ಹಾಗೆ. ಶ್ರೀ **ಹೆಚ್.ಸಿ. ಬಾಲಕೃಷ್ಣ:** ಅವರಿಗೂ ಗೊತ್ತಾಗಿದೆ.

ಶ್ರೀ ಸಿದ್ದರಾಮಯ್ಯ:- ಆಂಜನೇಯ ಸ್ವಾಮಿಯ ಮಹಾ ಭಕ್ತರು. ಬಹಳ ದೊಡ್ಡದಾದ ಗುಡಿ ಕಟ್ಟಿಸಿದ್ದಾರೆ ನಮ್ಮನ್ನೆಲ್ಲಾ ಒಂದು ಸಾರಿ ಕರೆದುಕೊಂಡು ಹೋಗಿದ್ದರು. ಒಂದು ಸಭೆಯಲ್ಲಿ ನಾವು ಅವರು ಯಡಿಯೂರಪ್ಪನವರು ಒಟ್ಟಿಗೆ ಕುಳಿತಿದ್ದೆವು. ಆಗ ಇವರು ಸಿದ್ದರಾಮಯ್ಯನವರು ಮುಂದಿನ ಮುಖ್ಯಮಂತ್ರಿ ಎಂದು ಹೇಳಿಬಿಟ್ಟರು. ಹೀಗಾಗಿ ನಿಮಗೆ ತೊಂದರೆಯಾಯಿತು ನೋಡಿ. It is fact ಬೇಕಾದರೆ ಅವರನ್ನು ಕೇಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ನಾನು ಬಾಯಿ ತಪ್ಪಿ ಹೇಳಿದೆನೊ ಗೊತ್ತಿಲ್ಲ. ನೀವು ಮುಖ್ಯಮಂತ್ರಿಯಾಗಲಿಲ್ಲ ಆದರೆ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದರು. ಏನು ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ನನ್ನನ್ನು ಜೊತೆಗೆ ಕೂಡಿಸಿಕೊಂಡು ಯಡಿಯೂರಪ್ಪನವರ ಮುಂದೆ ಆ ರೀತಿ ಹೇಳಿದರೆ ಹೇಗೆ? ಅದಕ್ಕೆ ನಾನು ಏಕೆ ಈ ರೀತಿ ಹೇಳುತ್ತೀರಿ ನಾಳೆ ಅವರು ಮುಖ್ಯಮಂತ್ರಿಯಾದ ಮೇಲೆ ನಿನಗೆ ತೊಂದರೆಯಾಗಿ ಬಿಡುತ್ತದೆಂದು ಹೇಳಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಅದು ಆ ರೀತಿ ಅಲ್ಲ. ನೀವು ದೀನದಲಿತರಗೋಸ್ಕರ ಕೆಲಸ ಮಾಡುತ್ತೀರಿ ಎಂದು ನಾನು ಆ ಮಾತನ್ನು ಹೇಳಿದೆ ವಿನಾಃ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಬಾರದೆಂದು ನಾನು ಹೇಳಲಿಲ್ಲ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುತ್ತಾರೆಂದು ಅವರ ಅದೃಷ್ಟದಲ್ಲಿತ್ತು. ನನಗೆ ಮಂತ್ರಿ ಸ್ಥಾನ ಕೊಡಲಿಲ್ಲವೆಂದು ಬೇಜಾರಿಲ್ಲ. ಮುಂದೆ ನೋಡೋಣ. ನಮಗೆ ಒಳ್ಳೆಯ ಕಾಲ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪಾಪ ಬೇಜಾರಾಗಿ ಬೇಜಾರಾಗಿ ಸೊರಗಿ ಸಿಟ್ಟಿನಿಂದಲೇ ಅವರು ಮೈಸೂರಿಗೆ ಹೋಗಿದ್ದರು. ಈಗ ನೋಡಿದರೆ ಇಲ್ಲವೆಂದು ಹೇಳುತ್ತೀರಿ. ಅದು ಏನೆ ಇರಲಿ ಬಿಡಿ. ಈಗ ಮಾನ್ಯ ಸಿದ್ದರಾಮಯ್ಯನವರು ಬಹಳ ದೀರ್ಘವಾಗಿ ಭಾಷಣ ಮಾಡುತ್ತಿದ್ದಾರೆ. ಆದರೆ ಅಲ್ಲಿ ನೋಡಿದರೆ "ಕೈಯಾಗ ಕಾಸು ಇಲ್ಲ ಮೈಯಾಗ ಉಲ್ಲಾಸಿಲ್ಲ" ಹೀಗಿರುವಾಗ ನೀವು ಮಾತ್ರ ಇಲ್ಲಿ ಭಾಷಣ ಮಾಡುತ್ತಲೇ ಇದ್ದೀರಿ. ಕೇಳುವವರು ಯಾರು? ಮಾಡುವವರು ಯಾರು? ದುಡ್ಡು ಎಲ್ಲಿದೆ? ಹೀಗಾಗಿ "ಕೈಯಾಗ ಕಾಸು ಇಲ್ಲ ಮೈಯಾಗ ಉಲ್ಲಾಸಿಲ್ಲ" ಕೇಳುವವರಿಗೆ ಬಹಳ ನಿರಾಶೆಯಾಗಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಎಲ್ಲಾ ನಿಮ್ಮ ಕಾಲದಲ್ಲೂ ಆಗಿದೆ ಬಿಡಿ.

ಶ್ರೀ ಸಿದ್ದರಾಮಯ್ಯ: ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಿಂದ ಒಂದು ಶಿಫಾರಸ್ಸು ಮಾಡಿದ್ದಾರೆ. ಆ ಶಿಫಾರಸ್ಸು ಏನೆಂದರೆ, ಹಿಂದುಳಿದ ವರ್ಗದವರಿಗೆ ಕೆನೆಪದರ ಏನ ಇದೆ ಇದರ ಸಿಲಿಂಗ್ ಅನ್ನು ಒಂದೂವರೆ ಲಕ್ಷಕ್ಕೆ ಇದ್ದದ್ದನ್ನು ನಾಲ್ಕೂವರೆ ಲಕ್ಷಕ್ಕೆ ಏರಿಸಬೇಕೆಂದು ಒಂದು ಶಿಫಾರಸ್ಸು ಇದೆ. ಕೇಂದ್ರ ಸರ್ಕಾರದವರು ಈಗಾಗಲೇ ಅ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದಾರೆ. ಏಕೆಂದರೆ, ಇವತ್ತಿನ ಪರಿಸ್ಥಿತಿಯಲ್ಲಿ ಇವತ್ತಿನ ಇನ್ಫ್ಲೇಷನ್, ಆದಾಯ ಇವೆಲ್ಲವನ್ನು ಲೆಕ್ಕ ಹಾಕಿಕೊಂಡು ಕೇಂದ್ರ ಸರ್ಕಾರದವರು ಹಿಂದುಳಿದ ವರ್ಗದವರಿಗೆ ಇನ್‌ಕಂ ಸಿಲಿಂಗ್ 1.5 ಇದ್ದದ್ದನ್ನು 4.5 ವರೆಗೆ ಏರಿಸಿದ್ದಾರೆ. ಕರ್ನಾಟಕ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದವರು ಕೂಡ ಅದನ್ನೇ ಶಿಫಾರಸ್ಸು ಮಾಡಿದ್ದಾರೆ. ಕೂಡಲೇ ಅದನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ, ಅನೇಕ ಹಿಂದುಳಿದ ವರ್ಗಧವರಿಗೆ ಅದರಿಂದ ಸಹಾಯವಾಗುತ್ತದೆ. ಮೀಸಲಾತಿಯಲ್ಲಿ ಬರುವ ಹಿಂದುಳಿದ ವರ್ಗದವರಿಗೆ ಬಹಳಷ್ಟು ಅನುಕೂಲವಾಗುತ್ತದೆ, ಹೀಗಾಗಿ ನೀವು ಇದನ್ನು ಜಾರಿಗೆ ತರಬೇಕು. 2005-06 ರಲ್ಲಿ ಜಾತಿವಾರು ಜನಗಣತಿ ಮಾಡಬೇಕೆಂದು ದುಡ್ಡು ಇಟ್ಟಿದ್ದೆವು. ಕರ್ನಾಟಕ ಸರ್ಕಾರದಿಂದ ಎರಡು ಕೋಟಿ ಮತ್ತು ಕೇಂದ್ರ ಸರ್ಕಾರದಿಂದ ಇಪ್ಪತ್ತೊಂದು ಕೋಟಿ ರೂಪಾಯಿಗಳನ್ನು ಈ ಕಾರ್ಯಕ್ಕಾಗಿ ಕರ್ನಾಟಕ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಲ್ಲಿ ಪೂರ್ಣವಾಗಿ ಇಟ್ಟಿದ್ದೇವು. ಅದು ಇನ್ನು ಆ ಕೆಲಸ ಪ್ರಾರಂಭವಾಗಿಲ್ಲ. ನಾನು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನು ಏಕೆ ಜನಗಣತಿ ಕೆಲಸ ಶುರು ಮಾಡಿಲ್ಲವೆಂದು ಕೇಳಿದೆ. ಅದಕ್ಕೆ ಅವರು ಈಗಿರುವ ಇಪ್ಪತ್ಮೂರು ಕೋಟಿ ಸಾಲುವುದಿಲ್ಲ ಇನ್ನು ಹೆಚ್ಚಿಗೆ ದುಡ್ಡು ಬೇಕಾಗುತ್ತದೆ ಆ ದುಡ್ಡನ್ನು ರಾಜ್ಯ ಸರ್ಕಾರದವರು ಬಿಡುಗಡೆ ಮಾಡಿಲ್ಲ ನಾವು ಕೇಳಿದ್ದೇವೆ ಎಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತಿದ್ದೇನೆ, ಆದಕ್ಕೆ ಅಗತ್ಯವಾದ ಹಣವನ್ನು ಕೂಡಲೇ ಕೊಡಬೇಕು. ಈಗಾಗಲೇ ಮೂರು ವರ್ಷಗಳು ಲ್ಯಾಪ್ಸ್ ಆಗಿವೆ. ಇಷ್ಟೊತ್ತಿಗೆ ಜಾತಿವಾರು ಗಣತಿ ಆಗಿಬಿಡಬೇಕಾಗಿತ್ತು. ಏಕೆಂದರೆ, 1931 ರಲ್ಲಿ ಆಗಿರಬೇಕು ನಂತರ 1941 ರಲ್ಲಿ ಇಂಡಿಪೆಂಡೆಸ್ ಗಲಾಟೆ, ವರ್ಲ್ಡ್‌ವಾರ್‌ಗಳೆಲ್ಲಾ ಬಂದು ಅಲ್ಲಿಗೆ ನಿಂತು ಹೋಯಿತು. ನಂತರ ಸ್ವಾತಂತ್ರ್ಯ ಬಂದ ಮೇಲೆ ಜಾತಿವಾರು ಜನಗಣತಿ ಕಾರ್ಯ ಮಾಡಲೇ ಇಲ್ಲ. 1951 ನೇ ಇಸ್ವಿಯಿಂದ ಇವತ್ತಿನವರೆಗೆ ಜಾತಿವಾರು ಜನಗಣತಿ ಆಗಲಿಲ್ಲ. ಇದಾಗದೇ ಇರುವುದರಿಂದ ಎಲ್ಲರಿಗೂ ಸಮಪಾಲು ಸಮಬಾಳು ಕೊಡುವುದಕ್ಕೆ ಆಗುತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಯಾವಾಗಲೂ ಎಲ್ಲರಿಗೂ ಸಮಪಾಲು, ಸಮಬಾಳು ಎಂದು ಹೇಳುತ್ತಿರುತ್ತಾರೆ. ಅವರು ಅನೇಕ ಸಾರಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂದು ಹೇಳೀದ್ದೇ ಹೇಳುತ್ತಾರೆ. ಇವತ್ತು ಇದೆಲ್ಲಾ ಅಗಬೇಕಾದರೆ ಮೊದಲು ಈ ಕೆಲಸ ಆಗಲೇಬೇಕು. ಯಾರ್‍ಯಾರಿಗೆ

ಸ್ವಾತಂತ್ರ್ಯದ ಫಲ ಎಷ್ಟೆಷ್ಟು ಸಿಕ್ಕಿದೆ? ಯಾರಿಗೆ ಸಿಕ್ಕಿಲ್ಲ? ಯಾರಿಗೆ ಕೊಡಬೇಕು? ಎನ್ನುವುದಾದರೆ ಮೊದಲು ಈ ಕೆಲಸ ಆಗಲೇಬೇಕು. ಅದಕ್ಕಾಗಿ 2005-06 ನೇ ಸಾಲಿನಲ್ಲಿ ನಾವು ಕಾರ್ಯಕ್ರಮವನ್ನು ಬಜೆಟ್ ಭಾಷಣದಲ್ಲಿ ಹೇಳಿ ದುಡ್ಡು ಕೂಡ ಇಟ್ಟಿದ್ದೇವು. ಇದಕ್ಕೆ ಕೇಂದ್ರ ಸರ್ಕಾರದವರು ಕೂಡ ಇಪ್ಪತ್ತೊಂದು ಕೋಟಿ ಕೊಟ್ಟಿದ್ದಾರೆ. ಅದಕ್ಕೆ ಎಷ್ಟು ಬೇಕಾಗುತ್ತದೆ ಅಷ್ಟು ಹಣವನ್ನು ಕೂಡಲೇ ಬಿಡುಗಡೆ ಮಾಡಿ, ಜಾತಿವಾರು ಸಮೀಕ್ಷೆ ಮಾಡುವುದಕ್ಕೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ ಕೊಡಬೇಕು. ಜೊತೆಗೆ ಅವರಿಗೆ ಹಣ ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಈ ಕಡೆಗೆ ತಾವು ಸ್ವಲ್ಪ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನಂತರ ಎಸ್‌ಸಿ ಎಸ್‌ಟಿ ಕಾರ್ಪೋರೇಷನ್ ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಾಲ 6% ಗೆ ಕೊಡುತ್ತಾರೆ. ಅವರಲ್ಲಿ ಹೆಚ್ಚಿನವರು ಬಡವರು ಇದ್ದಾರೆ.

ಡಾ: ಹಚ್.ಸಿ.ಮಹಾದೇವಪ್ಪ: ಕಳೆದ ಸಾರಿ ಕೇಳಿಕೊಂಡಿದ್ದೆವು ಇನ್ನು ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಬೇರೆಯವರಿಗೆ ಸಾಲ 3% ಕೊಡುತ್ತಾರೆಂದು ಹೇಳಿದ್ದಾರೆ. ಹೀಗಾಗಿ ಕನಿಷ್ಟ ಅವರಿಗೆ ನಾಮಿನಲ್ ಆಗಿ 1% ಮಾಡುವುದು ಒಳ್ಳೆಯದು.

ಡಾ: ಬಿ.ಎಸ್.ಯಡಿಯೂರಪ್ಪ: ನೀವು ಎಲ್ಲಾ ಹಿಂದೆ ಅಧಿಕಾರದಲ್ಲಿದ್ದಾಗ ಎಸ್‌ಸಿ ಎಸ್‌ಟಿ ಯವರಿಗೆ ಸಬ್ಸಿಡಿ ಕೊಡಬೇಕು ಕಡಿಮೆ ಬಡ್ಡಿಯ ದರದಲ್ಲಿ ಸಾಲ ಕೊಡಬೇಕು, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಏಕೆ ಅನ್ನಿಸಲಿಲ್ಲ ಮಾನ್ಯ ಸಿದ್ದರಾಮಣ್ಣನವರೆ?

ಶ್ರೀ ಸಿದ್ದರಾಮಯ್ಯ: ನಾನು ಮುಖ್ಯಮಂತ್ರಿಯಾಗಲಿಲ್ಲವಲ್ಲ. ನೀವು ಆಗಿದ್ದೀರಿ ಮಾಡಿ.

ಡಾ: ಬಿ.ಎಸ್. ಯಡಿಯೂರಪ್ಪ: ತಾವು ಪವರ್ ಫುಲ್ ಹಣಕಾಸಿನ ಸಚಿವರಾಗಿ ಕೆಲಸ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ನೀವು ಹಣಕಾಸಿ ಪರಿಸ್ಥಿತಿ ಬಹಳ ಸಮೃದ್ಧಿ ಆಗಿದ್ದಾಗ ಬಂದು ಕುಳಿತುಕೊಂಡಿದ್ದೀರಿ. ಏಕೆ ಮಾಡಲಿಲ್ಲ ನೀವು ಮಾಡಿ. ಆಯಿತು ನಾವು ಮಾಡಲಿಲ್ಲ ಸೋತು ಬಿಟ್ಟಿದ್ದೇವೆ ಜನ ನಮ್ಮನ್ನು ಆಚೆಗೆ ಹಾಕಿ ಬಿಟ್ಟಿದ್ದಾರೆ ನೀವು ಆದರೂ ಮಾಡಿ.

ಡಾ: ಹೆಚ್.ಸಿ. ಮಹಾದೇವಪ್ಪ: ಅವರು ಇದ್ದಾಗ ಎಷ್ಟು ಮಾಡುವುದಕ್ಕೆ ಸಾಧ್ಯವಾಯಿತೋ ಅಷ್ಟು ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಾವೇನು ಮಾಡಲಿಲ್ಲವೆಂದು ಇಟ್ಟುಕೊಳ್ಳಿ.

ಡಾ: ಹೆಚ್.ಸಿ. ಮಹಾದೇವಪ್ಪ: ಕಳೆದ ಸಾರಿನೂ ನಾವು ಕೇಳಿದೆವು. ಮಾನ್ಯ ಮುಖ್ಯಮಂತ್ರಿಗಳೇ ದಯಮಾಡಿ ತಾವು ಅದನ್ನು ಮಾಡಿ

ಡಾ: ಬಿ.ಎಸ್. ಯಡಿಯೂರಪ್ಪ: ಈ ದೇಶದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೆಗೆದುಕೊಳ್ಳುವ ಸಾಲಕ್ಕೆ 3% ಬಡ್ಡಿಯನ್ನು ಇದುವರೆವಗೂ ಯಾರೂ ಕೊಡಲಿಲ್ಲ. ಈ ದೇಶದಲ್ಲಿ ಯಾರೂ ಮಾಡಲಿಲ್ಲ. ಕೋ-ಆಪರೇಟಿವ್‌ನಲ್ಲಿ 3%, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 3%, ಕೊಡಿಸಲಿಲ್ಲವೆ? ಎಲ್ಲವನ್ನೂ ಮಾಡಿದ್ದೇವೆಂದು ಹೇಳಲಿಲ್ಲ. ಆ ದಿಕ್ಕಿನಲ್ಲಿ ಪ್ರಮಾಣಿಕ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತೀದ್ದೇವೆ. ತಾವು ಅದನ್ನು ದಯಮಾಡಿ ಒಪ್ಪಿಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ: ನಾನು ಇದ್ದಾಗ 11% ನಿಂದ 6% ಗೆ ಮಾಡಿದ್ದು. ಆಗ ರಾಜ್ಯ ಸರ್ಕಾರದ ಮೇಲೆ ಸಬ್ಸಿಡಿ 5% ಕೇಂದ್ರ ಸರ್ಕಾರ 7% ಮಾಡಿದ ಮೇಲೆ ನೀವು 4%, 3%, ಮಾಡಿದಿರಿ, burden will be 3%. 5% ಜಾಸ್ತಿಯೇ? 3% ಜಾಸ್ತಿಯೇ?

ಶ್ರೀ ಸಿದ್ದು ಸವದಿ: ನೀವು ಎಸ್‌ಸಿ ಎಸ್‌ಟಿಯವರಿಗೆ ಏಕೆ ಮಾಡಲಿಲ್ಲ? ತಮಗೆ ಅವಕಾಶವಿದ್ದರೂ ಏಕೆ ಮಾಡಲಿಲ್ಲ?

ಡಾ: ಹೆಚ್.ಸಿ ಮಹಾದೇವಪ್ಪ: ನೀವು ಈಗ ಮಾಡಿ.

ಶ್ರೀ ಸಿದ್ದರಾಮಯ್ಯ: ನಾನು ಮಾಡಲಿಲ್ಲ ನಿಜ, ನಿಮ್ಮ ಕೈಯಲ್ಲಿ ಅಧಿಕಾರ ಇದೆಯಲ್ಲಾ ನೀವು ಮಾಡಿ. ನಿಮಗೆ ಖರ್ಚು ಮಾಡುವುದಕ್ಕೆ ಹಣ ಇದೆಯಲ್ಲವೆ ನೀವು ಮಾಡಿ.

ಶ್ರೀ ಚಂದ್ರಶೇಖರ ಚರಂತಿ ಮಠ: ಅವರು ಈಗ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಆಯಿತು ಬಿಡಿ ನಿಮಗೂ ದುಡ್ಡು ಕೊಡಲಿಲ್ಲ ನೀವು ಏಕೆ ಎದ್ದು ನಿಂತು ಮಾತನಾಡುತ್ತೀರಿ? ಬಾಗಲಕೋಟೆಗೆ ದುಡ್ಡು ಕೊಟ್ಟಿದ್ದಾರೆಯೆ?

ಶ್ರೀ ಚಂದ್ರಶೇಖರ ಚರಂತಿ ಮಠ: ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಕೊಟ್ಟಿಲ್ಲ ಬಿಡಿ... ಸುಮ್ಮನೆ ಕುಳಿತುಕೊಳ್ಳಿ. ಈ ಆಯವ್ಯಯ ಏನು ಇದೆ ಇದು ದೂರದೃಷ್ಟಿ ಇಲ್ಲದೇ ಇರುವಂಥ, ಬಡವರ ಪರವಾಗಿ ಇಲ್ಲದೇ ಇರುವಂಥ, ಬೆಳವಣಿಗೆಗೆ ಪೂರಕವಾಗಿಲ್ಲದೇ ಇರುವಂಥ, ಅವಾಸ್ತಿಕವಾಗಿ ಪ್ಲಾನ್ ಸೈಜ್ ನಿಗಧಿಗೊಳಿಸಿ ಪ್ಲಾನ್ ಸೈಜ್ ಕಟ್ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗದೆ ಇವತ್ತು ಆರ್ಥಿಕ ದುಸ್ಥಿತಿಯ ಕಡೆಗೆ ರಾಜ್ಯವನ್ನು ತೆಗೆದುಕೊಂಡು ಹೋಗುವಂಥ ದಾರಿ ಏನು ಇದೆ ಈ ದಾರಿಯನ್ನು ನೀವು ಸರಿಪಡಿಸಿಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ನಾನು ಇವತ್ತು ನೋಡುತ್ತಿದ್ದೇನೆ. Non tax revenue ಏನಾದರೂ ಒಂದು ರೂಪಾಯಿ ಜಾಸ್ತಿಯಾಗಿದೆಯೇ? ಪ್ರತಿ ವರ್ಷ ಕಡಿಮೆ ಇಟ್ಟುಕೊಂಡು ಹೋಗುತ್ತಿದ್ದೀರಿ. Non tax revenue ಬೆಳವಣಿಗೆ ಆಗುತ್ತಿದೆಯೆ? ಇದರ ಕಡೆಗೆ ಗಮನ ಕೊಡುವುದೇ ಇಲ್ಲ. ತೆರಿಗೆ ಬೆಳವಣಿಗೆಯೂ ಇಲ್ಲ, Non tax revenue ಇಲ್ಲ open market ನಲ್ಲಿ ಸಾಲ ಸಿಗುತ್ತದೆ ಎಂದು ಸಾಲ ಮಾಡಿಕೊಂಡು ಬಂದು

ಬಿಡುವುದೆ? ಇದು ಜನ ವಿರೋಧಿ ಬಜೆಟ್. ರಾಜ್ಯಕ್ಕೆ ಮತ್ತು ರಾಜ್ಯದ ಹಿತ ದೃಷ್ಟಿಯಿಂದ ರಾಜ್ಯದ ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಈ ಬಜೆಟ್ ಅಲ್ಲ. ಬರೀ ಕೃಷಿ ನೀರಾವರಿ ಇವೆಲ್ಲ ಅಭಿವೃದ್ಧಿ ಪಡಿಸುತ್ತಿದ್ದೇವೆ, ರಾಜ್ಯ ಅಭಿವೃದ್ಧಿ ಪಡಿಸುತ್ತಿದ್ದೇವೆ ಎಂದು ಹೇಳುವುದು ಬರೀ ಘೋಷಣೆಗಳಾಗುತ್ತವೆ. ಇದು ಬರೀ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಮಂಡಿಸಿರತಕ್ಕಂಥ ಬಜೆಟ್ ಹೊರತು ದೂರದೃಷ್ಟಿ ಇಲ್ಲವೇ ಇಲ್ಲ. ರಾಜ್ಯದ ಹಿತ ದೃಷ್ಟಿ ಇಲ್ಲ, ದೂರ ದೃಷ್ಟಿ ಇಲ್ಲ. ಆದುದರಿಂದ, ನಾನು ಈ ಆಯವ್ಯಯವನ್ನು ವಿರೋಧಿಸುತ್ತೇನೆ.

ಶ್ರೀ ಆರ್. ಅಶೋಕ್ : ಒಳ್ಳೆಯದನ್ನು ಸ್ವಾಗತಿಸುತ್ತೇನೆಂದು ಹೇಳಿ ನಂತರ ವಿರೋಧಿಸಿ

ಶ್ರೀ ಸಿದ್ದರಾಮಯ್ಯ: ನಿಮಗೂ ಸಬ್ಸಿಡಿ ಕಡಿಮೆ ಮಾಡಿದ್ದಾರೆ. 230 ಕೋಟಿ ಇರುವುದು 90 ಕೋಟಿಗೆ ಕಡಿಮೆ ಮಾಡಿದ್ದಾರೆ. ನೀವು ಅದನ್ನು ನೋಡಿದ್ದೀರಾ? ನೀವು ನಮ್ಮ ತರಹ ಆಗಿಬಿಟ್ಟಿದ್ದೀರಿ. ಬಜೆಟ್‌ನಲ್ಲಿ 230 ಕೋಟಿ ಇದ್ದದ್ದು 90 ಕೋಟಿಗೆ ರೆಡ್ಯೂಸ್ ಆಗಿದೆ. ಅವರಿಗೂ ಸಬ್ಸಿಡಿ ಕಡಿಮೆಯಾಗಿದೆ ಇದನ್ನು ನೋಡಿಕೊಂಡು ತಾನೇ ನಾವು ಮಾತನಾಡಬೇಕು? At least restore ಮಾಡಿ ಎಂದು ನೀವು ಗಲಾಟೆ ಮಾಡಬೇಕು. ಯಾವಾಗ ಕೊಟ್ಟಿದ್ದಾರೋ ಏನು ಕತೆಯೋ? ಈಶ್ವರಪ್ಪನವರು ಪಾಪ ಹಾಗೆ ಸುಮ್ಮನೆ ಕುಳಿತಿದ್ದಾರೆ. 1880 ಕೋಟಿ, ಹೋದ ವರ್ಷಕ್ಕಿಂತ ಕಡಿಮೆ. ನೀವು ಸುಮ್ಮನೆ ಅಷ್ಟು ಪವರ್ ಬಂತು ಇಷ್ಟು ಪವರ್ ಬಂತು ಎಂದು ಹೇಳುತ್ತೀರಿ, ದುಡ್ಡು ಕೊಡದೇ ಹೋದರೆ ಎಲ್ಲಿಂದ ಕೊಡುತ್ತೀರಿ? ಬಹಳ ಕಷ್ಟವಾಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಮುನಿಯಪ್ಪ(ಶಿಡ್ಲಘಟ್ಟ):- ಮಾನ್ಯ ಉಪಾಧ್ಯಕ್ಷರೆ, 2009-10ನೇ ಸಾಲಿನ ಆಯವ್ಯಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಮಂಡಿಸಿದ್ದಾರೆ. ಈ ಆಯವ್ಯಯದ ಮೇಲೆ ನಮ್ಮ ಹಿರಿಯ ನಾಯಕರಾಗಿರುವಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸಿದ್ದರಾಮಯ್ಯನವರು ಈಗಾಗಲೇ ಮಾತನಡಿದ್ದಾರೆ. ನಾನು ಎಲ್ಲಾ ಇಲಾಖೆಗಳ ಬಗ್ಗೆ ಮಾತನಡುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತಿನ ದಿವಸ ಇರತಕ್ಕಂಥ ಸಮಸ್ಯೆಗಳಿಗೆ ಅನುಗುಣವಾಗಿ ಮಾತನಾಡುತ್ತೇನೆ. ಇವತ್ತು ರಾಜ್ಯದಲ್ಲಿ ಸಾಮೂಹಿಕವಾಗಿ ಮತ್ತು ವ್ಯಾಪಕವಾಗಿ ವಿದ್ಯುತ್ ಸಮಸ್ಯೆ ಇದೆ. ಇದೊಂದು ಆಧ್ಯತಾ ಕ್ಷೇತ್ರವಾಗಿರುವುದರಿಂದ ಈ ಒಂದು ಆಧ್ಯತಾ ಕ್ಷೇತ್ರಕ್ಕೆ ಇವತ್ತಿನ ದಿವಸ ಯಾವರೀತಿಯಾಗಿ ಪ್ರಯಾರಿಟಿ ಕೊಟ್ಟಿದ್ದಾರೆಂಬುದರ ಬಗ್ಗೆ ಇವತ್ತಿನದಿವಸ ಚರ್ಚೆಯಾಗಬೇಕಾಗಿದೆ. ಇವತ್ತು ವಿದ್ಯುತ್ ಎನ್ನತಕ್ಕಂಥದ್ದು It is nothing but one of the essential commodity in human life. ಇವತ್ತಿನ ದಿವಸ ವಿದ್ಯುತ್ ಇಲ್ಲದಿದ್ದರೆ ಕುಡಿಯುವ ನೀರು ಸಿಗುವುದಿಲ್ಲ. ಅನೇಕ ಹಳ್ಳಿಗಳಲ್ಲಿ ಇವತ್ತು ಕುಡಿಯುವುದಕ್ಕೆ ನೀರು ಇಲ್ಲ. ಮತ್ತೆ

ಕಾನೂನುಸುವ್ಯಸ್ಥೆಯ ತೊಂದರೆಯೂ ಕೂಡ ಇದರಿಂದ ಆಗುತ್ತಿದೆ. ಈ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಜಲವಿದ್ಯುತ್ ಉತ್ಪಾದನೆಯಲ್ಲಿ ಸುಮಾರು 200 ದಶಲಕ್ಷ ಯುನಿಟ್‌ನಷ್ಟು ಕೊರತೆಯಾಗಿದೆ ಆದ್ದರಿಂದ, ಇದಕ್ಕೆ ಪರ್ಯಾಯವಾಗಿ ರಾಜ್ಯದಲ್ಲಿ ಉಷ್ಣ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡುತ್ತೇವೆಂದು ಹಾಗೂ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್‌ನ್ನು ಖರೀದಿ ಮಾಡಲಾಗುತ್ತಿದೆ ಎಂದು ಹೇಳೀದ್ದೀರಿ. ಆದರೆ, ಎಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಖರೀಧಿಯಾಗುತ್ತಿದೆ ಎಂದು ಮತ್ತು ಹೆಚ್ಚು ವಿದ್ಯುತ್‌ನ್ನು ಎಲ್ಲಿ ಉತ್ಪಾದನೆ ;ಮಾಡಲಾಗುತ್ತಿದೆ ಎಂಬುದು ನನಗೆ ಗೊತ್ತಿಲ್ಲ. ಮತ್ತೆ ಈಗಿರುವ ಕ್ಲಿಷ್ಟ ಪರಿಸ್ಥಿತಿಯನ್ನು ಯಾವರೀತಿಯಾಗಿ ಭೇದಿಸಲಗುತ್ತಿದೆ ಎಂಬುದ ಬಗ್ಗೆ ನಿಖರವಾದ ಉತ್ತರವನ್ನು ಸರ್ಕಾರ ಇವತ್ತು ಕೊಡಬೇಕು. ಬೆಂಗಳೂರಿನ ಸುತ್ತಾ ಮುತ್ತಾ ಹಾಗೂ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು. ಬೆಂಗಳೂರು ಮಹಾನಗರದಲ್ಲಿರುವ ಸುಮಾರು 1 ಕೋಟಿ ಜನರಿಗೆ 100ಕ್ಕೆ 75 ರಷ್ಟು ತರಕಾರಿಯನ್ನು ನಮ್ಮ ಜಿಲ್ಲೆಗಳಿಂದ ರೈತರು ಬಎಳೆದು ಇಲ್ಲಿಗೆ ಕಳುಹಿಸಿಕೊಡುತ್ತಾರೆ. ತರಕಾರಿ ಬೆಳಗಳನ್ನು ಜನವರಿ ತಿಂಗಳಲ್ಲಿ ಹಾಕಿರುತ್ತಾರೆ. ಜನವರಿ ಯಿಂದ, ಮೇ 15ನೇ ತಾರೀಖಿನವರೆಗೆ ಬಹಳ ಕ್ಲಿಷ್ಟಕರವಾದ ಅವಧಿಯಾಗಿರುತ್ತದೆ. ವರ್ಷದಲ್ಲಿ ಜನವರಿ ತಿಂಗಳಿಂದ ಏಪ್ರಿಲ್ ತಿಂಗಳ ಕೊನೆಯವರೆಗೆ ಮಾತ್ರ ವಿದ್ಯುತ್ ಬೇಡಿಕೆ ರೈತರಿಗೆ ಇರುತ್ತದೆ. ಆ ನಂತರ ಬರತಕ್ಕಂಥ ಮಳೆಗಾಲದಲ್ಲಿ ಅಲ್ಪಸ್ವಲ್ಪ ವಿದ್ಯುತ್ ಕೊಟ್ಟರೂ ಸಹ ಅ ಅವಧಿಯನ್ನು ಹೇಗೋ ಸರಿದೂಗಿಸುತ್ತಾರೆ. ಆದ್ದರಿಂದ ಈ ನಾಲ್ಕು ತಿಂಗಳು ಮಾತ್ರ ವಿದ್ಯುತ್‌ಗೆ ಹೆಚ್ಚಿನ ಒತ್ತಡ ಇರುತ್ತದೆ. ಈ ಒತ್ತಡದ ಕ್ಲಿಷ್ಟಕರವಾದ ಪರಿಸ್ಥಿತಿಯನ್ನ ನಿಮ್ಮ ವ್ಯವಸ್ಥೆಯಲ್ಲಿ ನೀವು ಯಾವರೀತಿ ರೈತರಿಗೆ ಆದ್ಯತೆ ಕೊಡಬೇಕೆಂಬುದರ ಬಗ್ಗೆ ಏನಾದರೂ ಗಮನ ಹಿರಿಸಿದ್ದೀರಾ ಎನ್ನತಕ್ಕಂಥದ್ದು ನನ್ನ ಪ್ರಶ್ನೆಯಾಗಿದೆ. ಇವತ್ತಿನ ದಿವಸ ವಿದ್ಯುತ್ ಸರಿಯಾಗಿ ಕೊಡದೆ ಇರುವುದರಿಂದ ರೈತರ ಗೋಳಾಡುತ್ತಿದ್ದಾರೆ. ಬೆಳಿಗ್ಗೆ 2 ಗಂಟೆ ಮತ್ತು ರಾತ್ರಿ 2 ಗಂಟೆ ಮಾತ್ರ ಕರೆಂಟ್ ಕೊಡುತ್ತಾರೆ. ಈ ಪರಿಸ್ಥಿತಿ ಇವತ್ತಿನ ದಿವಸ ನಮ್ಮಲ್ಲಿದೆ. ಚಿಂತಾಮಣಿ ಪವರ್ ಸ್ಟೇಷನ್ 150 ಮೆ.ವಾ.ವಿದ್ಯುತ್ ಸರಬರಾಜು ಮಾಡಬೇಕಾಗಿತ್ತು. ಆದರೆ ಅಲ್ಲಿಗೆ ಸುಮಾರು 45 ರಿಂದ 48 ಮೆ.ವಾ.ವಿದ್ಯುತ್ ಮಾತ್ರ ಬರುತ್ತಿದೆ. 8 ಗಂಟೆ ಅವಧಿಗೆ ಸರಿದೂಗಿಸಿ ಅಲ್ಲಿ 150 ಮೆ.ವಾ.ನಷ್ಟು ವಿದ್ಯುತ್ ಅನ್ನು ಕೊಡಬೇಕಾಗಿತ್ತು. ಆದರೆ, ದುರಾದೃಷ್ಟವಶಾತ್ ಅಲ್ಲಿಗೆ 45 ರಿಂದ 48 ಮೆ.ವಾ ವಿದ್ಯುತ್ ಸರಬರಾಜಾಗುತ್ತಿದೆ. ಈ ರೀತಿಯಾದರೆ ಅಲ್ಲಿ ಯಾವ ರೀತಿಯಾಗಿ ವಿದ್ಯುತ್ ಡಿಸ್ಟ್ರಿಬ್ಯುಟ್ ಮಾಡುತ್ತಾರೆ? Generation, Transmission and Distribution ಇವತ್ತು ವಿದ್ಯುತ್‌ನಲ್ಲಿ ಬಹಳ ಪ್ರಮುಖವಾದಂಥ ಅಂಶಗಳಾಗಿವೆ. ವಿದ್ಯುತ್ Generation ಎಷ್ಟು ಪ್ರಮುಖವಾಗಿದಯೇ ಅದೇ ರೀತಿಯಾಗಿ Transmission and Dstribution ವಿಷಯದಲ್ಲಿಯೂ ಕೂಡ ತಾವು ಹೆಚ್ಚಿನ ಆಸಕ್ತಿ ವಹಿಸಬೇಕಾಗುತ್ತದೆ. ವಿದ್ಯುತ್

ಕಳವು ಬಗ್ಗೆ ತಾವು ಎಷ್ಟು ಗಮನ ಕೊಟ್ಟಿದ್ದೀರೆಂದು ಮಾನ್ಯ ಸಿದ್ದರಾಮಯ್ಯನವರು ಈಗಾಗಲೇ ಹೇಳಿದ್ದಾರೆ. 1933 ರಲ್ಲಿ theft ಕೇವಲ 17% ನಷ್ಟು ಇತ್ತು. ಆದರೆ, ಇವತ್ತಿನ ದಿವಸ 33% ನಷ್ಟು theft ಆಗಿದೆ. 17 ಲಕ್ಷ ಐಪಿ ಸೆಟ್‌ಗಳಿವೆ ಎಂದು ತಾವು ಹೇಳುತ್ತಿದ್ದೀರಿ. ಆದರೆ, ಇವತ್ತಿನ ದಿವಸ ಸುಮಾರು ನಾಲ್ಕರಿಂದ 5 ಲಕ್ಷ ಐಪಿ ಸೆಟಗಳು ಡ್ರೈ ಆಗಿವೆ. ಈ ಎಲ್ಲಾ ಬೋರ್‌ವೆಲ್‌ಗಳು ಬತ್ತಿಹೋಗಿವೆ, ಇದ್ಯಾವುದು ಕೆಲಸ ಮಾಡುತ್ತಿಲ್ಲ. ಆದರೆ, ನಿಮ್ಮ ಲೆಕ್ಕದಲ್ಲಿ ರೈತರದ್ದು 17 ಲಕ್ಷ ಪಂಪ್‌ಸೆಟ್‌ಗಳಿವೆ, ಎಂದು ಇದೆಯಷ್ಟೆ. ಸುಮಾರು 4-5 ಲಕ್ಷ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕನೆಕ್ಷನ್ ಇದ್ದರು ಕೂಡ ಅವುಗಳು ಇವತ್ತಿನ ದಿವಸ ಕೆಲಸ ನಿರ್ವಹಿಸುತ್ತಿಲ್ಲ. ಬೇಕದರೆ ಇದರ ಬಗ್ಗೆ ನೀವು ತನಿಖೆ ಮಾಡಿಸಿ ಒಂದು ವರದಿ ತರಿಸಿಕೊಳ್ಳಿ. ಇದರ ಜೊತೆಯಲ್ಲಿ ಸುಮಾರು 30 ರಿಂದ 40 ಸಾವಿರ illegal connections ಇರಬಹುದು. ಆದರೆ, ನಮ್ಮಲ್ಲಿರತಕ್ಕಂಥ 17 ಲಕ್ಷ ಪಂಪ್‌ಸೆಟ್‌ಗಳಲ್ಲಿ ಎಲ್ಲವೂ ಕೂಡ ಕೆಲಸ ಮಾಡುತ್ತಿಲ್ಲ. ಇವತ್ತಿನ ದಿವಸ ಎಷ್ಟೋ ಕೊಳವೆ ಬಾವಿಯಲ್ಲಿ ನೀರಿಲ್ಲ. ನೀರು ಇತರಕ್ಕಂಥ ಕೊಳವೆ ಬಾವಿಗಳಿಗೆ ಕನಿಷ್ಟ 8 ಗಂಟೆ ವಿದ್ಯುತ್ ಕೊಡದಿದ್ದರೆ ರೈತರ ಗತಿ ಏನಾಗಬೇಕು? ಇವತ್ತಿನ ದಿವಸ ರೈತರು ಗೋಳಾಡುತ್ತಿದ್ದಾರೆ. ಅವರ ಗೋಳಿನ ನೋವು ನಿಮಗೆ ಇನ್ನು ತಟ್ಟಿಲ್ಲವೆಂದು ನಮಗೆ ಯೋಚನೆಯಾಗಿಬಿಟ್ಟಿದೆ. ಇವತ್ತಿನ ದಿವಸ ರೈತರು ಬೆಳೆದಿರುವ ತರಕಾರಿ ಬೆಳೆಗಳು ಸೊರಗಿ ಸೊಪ್ಪಾಗಿ ನೆಲಕ್ಕೆ ಬೀಳುತ್ತಿವೆ. ಈ ವಿಷಯದ ಬಗ್ಗೆ ನಿಮ್ಮ ವಿದ್ಯುತ್ ಇಲಾಖೆಯನ್ನು ಕೇಳಿದರೆ ಮೇಲಿರುವ ಅಧಿಕಾರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಮೇಲಕ್ಕೆ ಬೆಟ್ಟು ತೋರಿಸುತ್ತಾರೆ. Executive Engineer, Chief Engineer, Operation Director ಅಥವಾ ಇತರೇ ಯಾವುದೇ ಅಧಿಕಾರಿಗಳನ್ನು ಕೇಳಿದರೆ ಇದೇ ರೀತಿಯಾಗಿಯೇ ಹೇಳುತ್ತಾರೆ. ಕೆಪಿಟಿಸಿಎಲ್ ಛೇರ್ಮನ್‌ರವರು ಯಾರಿಗೂ ಕೂಡ ಸಿಗುವುದಿಲ್ಲ. ಈ ರೀತಿಯಾಗಿ ವಿದ್ಯತ್ ಸಮಸ್ಯೆಯಾಗಿದೆ. ರೈತರಿಗೆ ಉಚಿತವಗಿ ವಿದ್ಯುತ್ ಕೊಡುತ್ತೇವೆಂದು ಹೇಳಿ ಇವತ್ತಿನ ದಿವಸ ರೈತರಿಗೆ ಮಣ್ಣು ಮುಕ್ಕಿಸುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ನಮ್ಮಲ್ಲಿ ಪವರ್ ಇದೆ, ಪ್ರತಿದಿವಸ 10 ರಿಂದ12 ಗಂಟೆವರೆಗೆ ಕೊಡುತ್ತೇವೆಂದು ಸದಾ ಹೇಳಿಕೊಂಡು ಬರುತ್ತಿದ್ದೀರಿ. ಆದರೆ, ಕೇವಲ ಎರಡು ಗಂಟೆ ಅವಧಿ ವಿದ್ಯುತ್ ಕೊಟ್ಟರೆ ರೈತರ ಗತಿ ಏನಾಗಬಹುದೆಂದು ತಾವು ದಯವಿಟ್ಟು ಯೋಚನೆ ಮಾಡಿ. ಈ ಪರಿಸ್ಥಿತಿ ಬಗ್ಗೆ ತಾವೇನಾದರು ಚಿಂತನೆ ಮಾಡಿದ್ದೀರಾ? ಪವರ್ ಎಷ್ಟು ಬರುತ್ತಿದೆ ಎಂದು ಮತ್ತು Power consumption ಎಲ್ಲೆಲ್ಲಿ ಎಷ್ಟಿದೆ ಎಂಬುದರ ಬಗ್ಗೆ ಹಾಗು ಯಾವ ರೀತ ವಿತರಣೆ ಮಾಡಬೇಕೆಂಬುದರ ಬಗ್ಗೆ ನೀವು ಸರಿಯಾಗಿ ಚಿಂತನೆ ಮಾಡಿದ್ದೀರಾ? ಮತ್ತೆ ಎಲ್ಲೆಲ್ಲಿ ಹೆಚ್ಚು ಬೇಡಿಕೆ ಇದೆ ಎಂಬುದರ ಬಗ್ಗೆ ಮತ್ತು ಯಾವ ಕ್ಷೇತ್ರಕ್ಕೆ ಹೆಚ್ಚಿನ ಟಾಪ್ ಪ್ರಯಾರಿಟಿ ಕೊಡಬೇಕೆಂಬುದರ ಬಗ್ಗೆ ಚಿಂತೆ ಮಾಡಿದೀರಾ? ನಿಮಗೆ ದುಡ್ಡು ಬೇಕಾಗಿರುವುದರಿಂದ ಕೈಗಾರಿಕೆಗಳಿಗೆ ಸರಾಗವಾಗಿ ವಿದ್ಯುತ್ ಅನ್ನು ಕೊಡುತ್ತಿದ್ದೀರಿ.

ಈಗಾಗಲೇ ಸುಮಾರು 3-4 ತಿಂಗಳಿಂದ ಪವರ್ ಕಟ್ ಮಾಡುತ್ತಿದ್ದೀರಿ. ಈ ರೀತಿಯಾದರೆ ರೈತರ ಗತಿ ಏನು? ಮೊದಲು ಈ ರೀತಿಯಾದ ಕ್ರೈಸಸ್ ಬಂದಾಗ ಮಾತ್ರ ಪವರ್ ಕಟ್ ಮಾಡುತ್ತಿದ್ದರು. ಈ ಸಾರಿ ನೀವೇಕೆ ಪವರ್ ಕಟ್ ಅನ್ನು impose ಮಾಡುತ್ತಿಲ್ಲ. ಪವರ್ ಕಟ್ ಮಾಡದೆ ಇದ್ದರೆ ಬೇರೆ ಕಡೆಯಿಮದ ಪವರ್ ಅನ್ನು ತರಿಸಿ ಕೊಡಬೇಕಾಗಿತ್ತು. ಈಕೆಲಸವನ್ನು ತಾವು ಮಾಡುತ್ತಿಲ್ಲ. ಈ ರೀತಿಯಾದರೆ ರೈತರ ಗತಿ ಏನಾಗಬೇಕು? ಇವತ್ತಿನ ದಿವಸ ನೀವುಗಳು ಸುಮ್ಮನೆ ಕುಳಿತುಕೊಂಡಿದ್ದೀರಿ. ಇದರ ಬಗ್ಗೆ ಏನಾದರೂ ಚಿಂತನೆ ಮಾಡಿದ್ದೀರಾ? ಇವತ್ತಿನ ದಿವಸ 2 ಗಂಟೆ ಮಾತ್ರ ವಿದ್ಯುತ್ ಕೊಡುತ್ತಿದ್ದೀರಿ. ಈ ರೀತಿಯಾದರೆ ರೈತರ ಗತಿ ಏನಾಗಬಹುದು? ಬಹುಶಃ ಅತೀ ಶೀಘ್ರದಲ್ಲಿ ನಿಮ್ಮ ಮೇಲೆ ರೈತರು ದಂಗೆ ಹೇಳುವಂಥ ಪರಿಸ್ಥಿತಿ ಉದ್ಭವಿಸುತ್ತದೆ. ಇದನ್ನು ಎದುರಿಸುವ ಪರಿಸ್ಥಿತಿಗೆ ನೀವೆಲ್ಲಾ ತಯರಾಗಬೇಕಾಗುತ್ತದೆ ಎನ್ನುವ ಮಾತನ್ನು ಅನಿವಾರ್ಯವಾಗಿ ವಿಧಿ ಇಲ್ಲದೆ ರೈತರ ಪರವಾಗಿ ನಾನು ಹೇಳಬೇಕಾಗಿದೆ. ಇಂಥ ಒಂದು ಸ್ಥಿತಿಗೆ ಇವತ್ತಿನ ದಿವಸ ವಿದ್ಯುತ್ ಇಲಾಖೆ ಬಂದಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಉಚಿತ ವಿದ್ಯುತ್ ಅನ್ನು ಕೊಡುತ್ತೇವೆಂದು ಸರ್ಕಾರ ಆಶ್ವಾಸನೆ ಕೊಟ್ಟಿದೆ.

(ಈ ಹಂತದಲ್ಲಿ ಅಧ್ಯಕ್ಷ ಸ್ಥಾನವನ್ನು ಶ್ರೀ ಚಂದ್ರಕಾಂತ್ ಬೆಲ್ಲದ್‌ರವರು ಅಲಂಕರಿಸಿದರು)

ಆದ್ದರಿಂದ, ಮೇ ತಿಂತಳ 15ನೇ ತಾರೀಖಿನವರೆಗೂ 8 ರಿಂದ 10 ಗಂಟೆಯವರೆಗೆ ಉಚಿತ ವಿದ್ಯುತ್ ಅನ್ನು ಸರಾಗವಾಗಿ ಕೊಡುವುದಕ್ಕೆ ಪವರ್ ಮ್ಯಾನೇಜ್‌ಮೆಂಟ್‌ನ್ನು ನೀವು ತಕ್ಷಣ ಮಾಡಬೇಕೆಂಬ ಒತ್ತಾಯವನ್ನು ನಾನು ಸರ್ಕಾರಕ್ಕೆ ಮಾಡುತ್ತೇನೆ. ಮತ್ತೆ ಲೋಡ್ ಶೆಡ್ಡಿಂಗ್ ಮಾಡತಕ್ಕಂಥದರ ಬಗ್ಗೆ ಹೇಳುವುದಾದರೆ, ಇಷ್ಟು ಸಮಯದಿಂದ ಇಷ್ಟು ಸಮಯದವರೆಗೆ ಲೋಡ್‌ಶೆಡ್ಡಿಂಗ್ ಮಾಡಲಾಗುತ್ತದೆಂದು ಒಂದು ಷೆಡ್ಯುಲ್ ಇಟ್ಟುಕೊಂಡಿದ್ದೀರಾ? ನಿಮ್ಮಲ್ಲಿ ಸ್ಪೆಸಿಫಿಕ್ ಷೆಡ್ಯುಲ್ ಇಲ್ಲ. ಅಂದರೆ, ನಿರ್ದಿಷ್ಟವಾದ ಅವಧಿ ಎಂದು ನಿಗದಿ ಮಾಡಿಲ್ಲ. ವಿದ್ಯುತ್ ಸ್ವೇಚ್ಛಾನುಸಾರ ಬರಬಹುದು ಹೋಗಬಹುದು. ಇದರ ಬಗ್ಗೆ ಕೇಳುವುದಕ್ಕೆ ಹೋದರೆ, ಮೇಲ್ಗಡೆ ಕಟ್ ಮಾಡಿದ್ದಾರೆಂದು ಹೇಳುತ್ತಾರೆ. ಇಲ್ಲದಿದ್ದರೆ ಇದು 220 ಕೆವಿ ಸ್ಟೇಷನ್ ಅಥವಾ ಮೇನ್‌ನಲ್ಲಿಯೆ ಕಟ್ ಮಾಡಿದ್ದಾರೆಂದು ಹೇಳುತ್ತಾರೆ. ಈ ರೀತಿಯಾದ ಪರಿಸ್ಥಿತಿಯಾದರೆ ರೈತರ ಗತಿ ಏನೆಂಬುದರ ಬಗ್ಗೆ ತಾವು ಚಿಂತನೆ ಮಾಡಬೇಕು. ಇವತ್ತಿನ ದಿವಸ ನಿಮ್ಮ ಪವರ್ ಮ್ಯಾನೇಜ್‌ಮೆಂಟ್‌ನಲ್ಲಿ ಏನಾಗಿದೆ ಎಂದರೆ, It would have been a total faillure; failed to supply power exclusively for the formers. ಈ ಸರ್ಕಾರ ರೈತರಿಗೆ ಅನ್ಯಾಯ ಮಾಡಿದೆ. ಈ ರೀತಿಯಾಗಿ ಹೀನ ಸ್ಥಿತಿಗೆ ಬಂದಿರತಕ್ಕಂಥದ್ದನ್ನು ನಾನು ಎಂದು ನೋಡಿರಲಿಲ್ಲ. ಇವತ್ತಿನ ದಿವಸ ಇಂಥ ಒಂದು ಹೀನ ಸ್ಥಿತಿಗೆ ವಿದ್ಯುತ್ ವಿತರಣಾ ವ್ಯವಸ್ಥೆ ಬಂದಿದೆ. ಮಾನ್ಯ ಇಂಧನ ಸಚಿವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ದುರಾದೃಷ್ಟವಾಶಾತ್ ಅವರಿಗೆ

ಬೇಕಾಗಿರತಕ್ಕಂಥ ವ್ಯವಸ್ಥೆ ಇಲ್ಲ. ವಿದ್ಯುತ್‌ನ್ನು ಖರೀದಿ ಮಾಡಬೇಕೆಂದರೆ ಇವರ ಕೈ ಅನ್ನು ಕಟ್ಟಿ ಹಾಕಿದ್ದಾರೆ. ಈ ರೀತಿಯಾದ ಸ್ಥಿತಿಯಲ್ಲಿ ನಿಮ್ಮ ಕೈ ಕಟ್ಟಿ ಹಾಕಿದರೆ ರೈತರ ಗತಿ ಏನಾಗಬೇಕೆಂಬುದರ ಬಗ್ಗೆ ಒಂದು ಕ್ಷಣ ಯೋಚನೆ ಮಾಡಿ. ನಾವೆಲ್ಲಾ ತರಕಾರಿ ಬೆಳೆಯುತಕ್ಕಂಥ ರೈತರು. ಮೂರು ದಿವಸ ನೀರು ಬೆಳೆಗೆ ಹಾಯಿಸದಿದ್ದರೆ ಬೆಳೆದಿರತಕ್ಕಂಥ ಬೆಳೆಯಲ್ಲಾ ಹಾಳಾಗುತ್ತದೆ. ಆದ್ದರಿಂದ, ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ತಕ್ಷಣ ಸರಿಪಡಿಸದಿದ್ದರೆ ಖಂಡಿತ ಇದಕ್ಕೆ ನೀವು ಬೆಲೆ ತರಬೇಕಾಗುತ್ತದೆಂಬ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವರಿಕೆ ಮಾಡುತ್ತೇನೆ. Transmission, Distribution and theft ಸೇರಿ 33.5% ನಷ್ಟ ವಿದ್ಯುತ್ ಸೋರಿಕೆಯಾಗುತ್ತಿದೆ. Transmission and Distribution ಮಾಡುವಾಗ ಆಗತಕ್ಕಂಥ ಲೈನ್ ಲಾಸಸ್ ಅನ್ನು ಮಿನಿಮೈಸ್ ಮಾಡುವುದಕ್ಕೆ ಪ್ರತಿ ವರ್ಷ ಒಂದು ದೊಡ್ಡ ಕಾರ್ಯಕ್ರ ಇತ್ತು. ಆದರೆ, ಈ ಕಾರ್ಯಕ್ರಮ ಏನಾಗಿದೆ ಎಂದು ಮತ್ತು ಯಾರಾದರು ಕೇಳುತ್ತಿದ್ದಾರೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗಂತೂ ಗೊತ್ತಿಲ್ಲ. ಲೈನ್ ಲಾಸಸ್ ಮಿನಿಮೈಸ್ ಮಾಡುವುದಕ್ಕೆ ಒಂದು ಮೆ.ವಾ.ವಿದ್ಯುತ್‌ಗೆ 2 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಇತ್ತು. ಈಗ ಅದು ಜಾಸ್ತಿಯಾಗಿ ಸುಮಾರು 5 ಕೋಟಿ ರೂಪಾಯಿ ಆಗಿರಬಹುದು. ಈ ವಿಚಾರ ಬೇರೆ. ಆದರೆ, ಮಿನಿಮೈಸ್ ಮಾಡತಕ್ಕಂಥ ಕಾರ್ಯಕ್ರಮ ಏನಾಗಿದೆ? ಪವರ್ ಜನರೇಷನ್ ಬಗ್ಗೆ ಯಾವ ರೀತಿಯಾದ ಸುಧಾರಣೆಯನ್ನು ತರಲಾಗಿದೆ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಇವತ್ತಿನ ದಿವಸ ಇಷ್ಟೊಂದು ಕ್ರೈಸಸ್ ಇದ್ದರೂ ಕೂಡ ಇದನ್ನು ಬೇಧಿಸುವುದಕ್ಕೆ ಏನು ಮಾಡಿದ್ದೀರಿ? ಯಾವರೀತಿಯಾಗಿ ಪವರ್ ಕಟ್ ಮಾಡುತ್ತೇವೆಂದು ಮತ್ತು ರೈತರಿಗೆ ಪ್ರತ್ಯೇಕವಾಗಿ ವಿದ್ಯುತ್ ಸರಬರಾಜು ಮಾಡತಕ್ಕಂಥದ್ದರ ಬಗ್ಗೆ ಮತ್ತು ಇಷ್ಟು ವಿದ್ಯುತ್ ಅನ್ನು ನಿಮಗೆ ಪ್ರತಿ ದಿವಸ ಕೊಡುತ್ತೇವೆಂದು ನಿರ್ದಿಷ್ಟವಾಗಿ ಹೇಳಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ನೀವು ಸುಮ್ಮನೆ ಅಲ್ಲಿ ತೊಂದರೆಯಾಗಿದೆ ಇಲ್ಲಿ ತೊಂದರೆಯಾಗಿದೆ ಎಂದರೆ, ರೈತರ ಗತಿ ಏನಾಗುತ್ತದೆಂದು ನೀವು ಯೋಚನೆಯನ್ನು ಮಾಡಿದ್ದೀರಾ? ಇವತ್ತು ಒಂದು ಕೋಟಿ ರೈತ ಜನರಿಗೆ ದಿನನಿತ್ಯ ತರಕಾರಿಯನ್ನು ಕಳುಹಿಸತಕ್ಕಂಥ ಬೆಂಗಳೂರು ಸುತ್ತಮುತ್ತಲಿನ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ತಾಲ್ಲೂಕಿನಲ್ಲಿ ಇವತ್ತು ರೈತರು ಗೋಳಾಡುತ್ತಿದ್ದಾರೆ. ಬೆಳೆ ಇಟ್ಟುಬಿಟ್ಟಿದ್ದಾರೆ, ಆಲೂಗಡ್ಡೆ , ಈರುಳ್ಳಿ, ಮೆಣಸಿನಕಾಯಿ ಹೀಗೆ ಎಲ್ಲಾ ತರಕಾರಿಯನ್ನು ಹಾಕಿದ್ದಾರೆ. ಎಲ್ಲ ತರಕಾರಿ ಇವತ್ತು ಸೊರಗುತ್ತಿದೆ. ವಿಧಿಯಿಲ್ಲದೆ ಅವರು ಹೇಳುವಂತಿಲ್ಲ ಸುಮ್ಮನೆ ಇರುವಂತಿಲ್ಲ. ಆ ರೀತಿಯಾದ ಒಂದು ಕಷ್ಟಕರವಾದ ಪರಿಸ್ಥಿತಿಗೆ ಬಂದಿದ್ದಾರೆ. ಇವತ್ತು ಎರಡು-ಮೂರು ಗಂಟೆ ವಿದ್ಯುತ್‌ನ್ನು ಕೊಡುತ್ತಾರೆಂದರೆ, ಇದಕ್ಕಿಂತ ಶೋಚನೀಯವಾದ ಸರ್ಕಾರವನ್ನು ನಾನು

ಇಲ್ಲಿಯವರೆಗೆ ಖಂಡಿತವಾಗಿ ನೋಡಿಲ್ಲ. ಇಂತಹ ಪರಿಸ್ಥಿತಿಗೆ ಈ ಸರ್ಕಾರ ತಂದಿದೆ. ಇದು ರೈತರ ಸರ್ಕಾರ ಎಂದು ಹೇಳುತ್ತಾರೆ. ಈ ಪರಿಸ್ಥಿತಿ ಬಂದಿರಲೇ ಇಲ್ಲ. ಈ ಪರಿಸ್ಥಿತಿ ಈಗಲೇ ಬರುತ್ತಿರುವುದು. ಇಂತಹ ಕಷ್ಟ ಬಂದಾಗ ಕೂಡಲೇ ರಿಲೀಫ್ ಮಾಡುವಂಥದ್ದದ್ದು ಸರ್ಕಾರದ ಜವಾಬ್ದಾರಿ. ಏಕೆ ಪವರ್ ಕಟ್‌ನ್ನು ಇಂಡಸ್ಟ್ರಿ ನಡೆಸುವವರಿಗೆ ಫಿಕ್ಸ್ ಮಾಡಲಿಲ್ಲ. ವಿದ್ಯುತ್‌ನ್ನು ಮಳೆಗಾಲದಲ್ಲಿ 4 ಗಂಟೆ ಜಾಸ್ತಿ ಕೊಡಿ. ಅವರಿಗೆ ಈಗ 4 ಗಂಟೆ ಪವರ್ ಕಟ್ ಮಾಡಿ. ಅವರಿಗೆ ಏನು ಕಡಿಮೆಯಾಗಿರುವುದು. ರೈತರಿಗೆ ಈ ಎರಡು-ಮೂರು ತಿಂಗಳು ಸಹಾಯ ಮಾಡಿ ಎಂದು ನಾವು ಕೇಳುತ್ತಿರುವುದು. ನಾವು ಮೇ 15ರವರೆಗೆ ಒತ್ತಾಯವನ್ನು ಮಾಡುತ್ತೇವೆ. ಆಮೇಲೆ ಮಳೆ ಬಂದ ನಂತರ ರೈತರ ಬೆಳೆ ಇಡುವುದಕ್ಕೆ ಹೋಗುವುದು. ರೈತರಿಗೆ ಬೆಳೆ ಅವನ ಪ್ರಾಣಕ್ಕಿಂತ ಹೆಚ್ಚು, ಅವನಿಗೆ ಅದೇ ಜೀವನಾಧಾರ, ಅದು ಒಣಗಿ ಹೋದರೆ ಅವನ ಗತಿ ಏನಾಗಬಹುದು.

ಛೇರ್ಮನ್: ಅವರು ರೈತರ ಸಲುವಾಗಿಯೇ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಶ್ರೀ ವಿ.ಮುನಿಯಪ್ಪ: ಛೇರ್ಮನ್‌ರೆ, ನೀವು ರೈತರು, ಅಲ್ಲಿ ನೀವು ಕುಳಿತುಕೊಂಡು ಅವರು ಮಾಡುತ್ತಾರೆಂದರೆ ಹೇಗೆ. ರೈತರಿಗೆ ಏನು ಮಾಡುತ್ತಿದ್ದಾರೆನ್ನುವ result ಬೇಕು. ಮಾನ್ಯ ಮಂತ್ರಿಗಳಾದ ಈಶ್ವರಪ್ಪನವರು ಹೇಳಲಿ. ನೋಡಿ ಇವತ್ತು ವಿದ್ಯುತ್ ವಿತರಣಾ ವ್ಯವಸ್ಥೆಯ ಬಗ್ಗೆ, 17 ಲಕ್ಷ ಪಂಪಸೆಟ್‌ಗಳಿಗೆ 10 HP ಯವರೆಗೆ ಉಚಿತ ವಿದ್ಯುತ್ ಕೊಟ್ಟಿದ್ದೇವೆಂದು ಹೇಳಿದ್ದೀರಿ. ನಾನು ಒಂದು ಮಾತನ್ನು ಹೇಳುತ್ತೇನೆ. 1982 ನೇ ಇಸ್ವಿಯಲ್ಲಿ ದಿವಂಗತ ಗುಂಡೂರಾಯರು ರೈತರ ಮಕ್ಕಳು ಅಲ್ಲ. ಅವರು ಉಪಾಧ್ಯಾಯರ ಮಕ್ಕಳು. ಅವರು ಮೀಟರ್‌ಗಳನ್ನು ಕಿತ್ತಿ ಬೀಸಾಕಿದರು. ಇವತ್ತಿನವರೆಗೂ ಯಾವುದೋ ಸರ್ಕಾರಕ್ಕೂ ಮೀಟರ್ ಹಾಕುವುದಕ್ಕೆ ಶಕ್ತಿ ಬರಲಿಲ್ಲ. 1982 ರಲ್ಲಿ ತೆಗೆದುಕೊಂಡ ತೀರ್ಮಾನ ಇವತ್ತಿನವರೆಗೆ ಯಾವುದೇ ಸರ್ಕಾರಕ್ಕೆ ಧೈರ್ಯ ಬರುತ್ತಿಲ್ಲ. ಅವತ್ತೆ ಅವರು 10 HP ವರೆಗೆ announce ಮಾಡಿದ್ದಾರೆ. ಆ 10 HP ಗೆ ನೀವು ಇವತ್ತು ಫ್ರೀ ಕೊಡುತ್ತೇವೆಂದರೆ ಏನು ಅರ್ಥ? ಇವತ್ತು ನೀರಿನ ಆಳ 800 ರಿಂದ 1000 ಅಡಿಯವರೆಗೆ ಹೋಗಿದೆ. 1982 ರಲ್ಲಿ 150 ರಿಂದ 200 ಅಡಿಯವರೆಗೆ ನೀರು ಸಿಗುತ್ತಿತ್ತು. ನೀವು 20 HP ಯವರೆಗೆ ಉಚಿತ ವಿದ್ಯುತ್ ಕೊಟ್ಟರೆ ಆ ರೈತರಿಗೆ ಅನುಕೂಲವಾಗುತ್ತದೆ. ನಿಮ್ಮ ಕಾರ್ಯಕ್ರಮವೇ ನಿಷ್ಪ್ರ ಯೋಜಕ. ಉಚಿತ ಎಂದು ಹೇಳಿದವು ಆ ಪದಕ್ಕೆ ಅರ್ಥವೇ ಇಲ್ಲ. ಎಲ್ಲಾ ಕಡೆ 800 ರಿಂದ 1000 ಅಡಿರವೆಗೆ ನೀರಿನ ಆಳ ಹೋಗಿದೆ, ಕನಿಷ್ಟ ಅಂದರೆ 15 ರಿಂದ 20 HP ಬೇಕಾಗುತ್ತದೆ. ಅದರ ಕಡೆಗೆ ಗಮನವನ್ನು ಹರಿಸಬೇಕು. ಕನಿಷ್ಟ 15 ರಿಂದ 20 HP ಗೆ ಹೆಚ್ಚಿಸಬೇಕು 1982 ರಲ್ಲಿ ಘೋಷಣೆ ಮಾಡಿರುವುದನ್ನು ನೀವು ಇವತ್ತಿಗೂ parameters ಇಟ್ಟುಕೊಂಡು ಆ 10 HP ಗೆ ಅದನ್ನು ನಿಗಧಿ ಮಾಡುವುದಾದರೆ, ಅದರ ಪ್ರತಿಫಲ

ನಮ್ಮ ಯಾವ ರೈತರಿಗೆ ಸಿಗುವುದಿಲ್ಲ ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವರಿಗೆ ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ನೀವು ಇನ್ನು ಅನೇಕ ಸುಧಾರಣೆಗಳ ಬಗ್ಗೆ ಹೇಳಿದ್ದೀರಿ. 500 ಮೆಗಾವಾಟ್ ಸಾಮರ್ಥ್ಯ ಬಳ್ಳಾರಿಯಲ್ಲಿ ಮಾಡಬೇಕು ಎಂದು, ಅದು ಎಲ್ಲಾ ಹಿಂದಿನ ಸರ್ಕಾರದ ಶ್ರಮ, ನೀವು ಹೋಗಿ ಉದ್ಘಾಟನೆ ಮಾಡಿದ್ದೀರಿ ನಾನು ಒಪ್ಪಿಕೊಳ್ಳುತ್ತೇನೆ. ವಾರಾಹಿಯಲ್ಲಿ 230 ಮೆಗ್ಯಾವಾಟ್ ಜಲ ವಿದ್ಯುತ್‌ನ್ನು ಕಾರ್ಯಾರಂಭಗೊಳಿಸಿ ಇದು ಬಹಳ ಕಾಲದಿಂದ ಹೋರಾಟವನ್ನು ಮಾಡಿ ಈ ಜಲಸ್ಥಾವರ ವಿದ್ಯುತ್‌ನ್ನು ಉತ್ಪಾದನೆ ಮಾಡುವಂಥದ್ದನ್ನು ನೀವು ಉದ್ಘಾಟನೆ ಮಾಡಿದ್ದೀರಿ. ಸಂತೋಷ ಆದರೆ ನಿಮ್ಮ ಎಫರ್ಟ್ ಏನು? ಎಲ್ಲಾ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು ಎಂದು ಹೇಳುತ್ತಿದ್ದೀರಿ ಅದರೆ ಮುಂದೆ ಹೋಗಲೆ ಇಲ್ಲ. ಇದನ್ನು ನಾವು ಸುಧಾರಣೆ ಎಂದು ಹೇಗೆ ಒಪ್ಪಿಕೊಳ್ಳುವುದು. ಒಪ್ಪಂದ ಮಾಡಿಕೊಂಡ ತಕ್ಷಣ ಕೆಲಸ ಕಾರ್ಯಾರಂಭ ಮಾಡಿದ್ದೇವೆನ್ನುವಂಥ ಮಾತನ್ನು ನೀವು ಹೇಳಲೇ ಇಲ್ಲ. ಬರೀ ಒಪ್ಪಂದ ಎಂದರೆ ಅದನ್ನು reforms ಎಂದು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಇದು ಈ ರಾಜ್ಯದಲ್ಲಿ ಬಹಳ ಮಹತ್ತರವಾತಂಥ ಆದ್ಯತಾ ಕ್ಷೇತ್ರ. ಇವತ್ತು essential commodity ಮನುಷ್ಯನಿಗೆ ಎಷ್ಟು ಅವಶ್ಯಕತೆಯೋ ಅದೇ ತರಹ ಇದೊಂದು item. ವಿದ್ಯುತ್ ಇಲ್ಲವೆಂದರೆ ಇವತ್ತು ಕುಡಿಯುವ ನೀರು ಸಿಕ್ಕುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಹೆಚ್ಚಿನ ಆಧ್ಯತೆಯನ್ನು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡತ್ತೇನೆ. ದಯವಿಟ್ಟು ಈ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಆ ವಿತರಣಾ ವ್ಯವಸ್ಥೆಗೆ ಮತ್ತು transmission ಗೆ ಹೆಚ್ಚು ಆಧ್ಯತೆಯನ್ನು ಕೊಡಬೇಕು. ನೀವು portfolio ಕೊಟ್ಟುಬಿಟ್ಟು ಅದಕ್ಕೆ ಹಣವನ್ನು ಕೊಡದಿದ್ದರೆ ಏನು ಮಾಡುವುದಕ್ಕಾಗುವುದಿಲ್ಲ. ಈಗ ಬಹಳ ಕಷ್ಟ ಇದೆ. ಇದನ್ನು ಸುಧಾರಣೆ ಮಾಡಿಕೊಡಬೇಕು. ಇವತ್ತು ನಿಮ್ಮ power demands ಏನಿದೆ, ಅದಕ್ಕೆ immediate relief ಕೊಡುವುದಕ್ಕೆ ಅವಶ್ಯಕತೆ ಇದೆ. ಅದಕ್ಕೆ ಅನುಗುಣವಾಗಿ ನಿಮಗೆ ಅನುಧಾನವನ್ನು ಕೊಟ್ಟಿಲ್ಲ. ವಿಧಿಯಿಲ್ಲದೆ ನೀವು ಮಾತಿಗೋಸ್ಕರ ಅಥವಾ ಸರ್ಕಾರದ ಹಿತ ಕಾಪಾಡುವುದಕ್ಕೋಸ್ಕರ ನೀವು ಸಮರ್ಥನೆಯನ್ನು ಮಾಡಿಕೊಳ್ಳುವುದನ್ನು ಬಿಟ್ಟರೆ, ವಾಸ್ತವಿಕವಾಗಿ ಅಲ್ಲಿರತಕ್ಕಂಥ ಸಮಸ್ಯೆಗೆ ಅನುಗುಣವಾಗಿ ನೀವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆ ಒಂದು ವಾಸ್ತವಿಕವಾದ ಪರಿಸ್ಥಿತಿ ಇವತ್ತು ಬಿಕ್ಕಟ್ಟಾಗಿದೆ. ದಯವಿಟ್ಟು ಆಕಡೆ ಹೆಚ್ಚಿಗೆ ನೀವು ಗಮನವನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ನಿಮಗೆ ಇವತ್ತು 500 ಕೋಟಿ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ನಮ್ಮ ಕೇಂದ್ರಮಂತ್ರಿಗಳಾದ ಮಾನ್ಯ ಜೈರಾಮ್ ರಮೇಶ್‌ರವರು 460 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ನಮ್ಮ ಸರ್ಕಾರಕ್ಕೆ ಅವರು ಗ್ರಾಂಟ್‌ನ್ನು ಕೊಟ್ಟಿದ್ದಾರೆ. ತತ್‌ಕ್ಷಣ ಆ ಹಣ ತೆಗೆದುಕೊಂಡು ನೀವು ಆ ಕೆಲಸವನ್ನು

ಮಾಡಬೇಕು. ಅದನ್ನು ಆದ್ಯತಾ ಕ್ಷೇತ್ರಕ್ಕೆ ಉಪಯೋಗಿಸಿಕೊಂಡು, ನಿಜವಾಗಿ ರೈತರ ಮೇಲೆ ಏನಾದರೂ ಕಾಳಜಿ ಇದ್ದರೆ, ಅವರಿಗೆ ಕೊಡಬೇಕಾಗಿರುವುದು ಒಂದೆ ಸಹಾಯ. ನಮ್ಮ ಭಾಗದಲ್ಲಿ ವಿದ್ಯುತ್ ಕೊಡಬೇಕು. ಅವರು ವಿದ್ಯುತ್‌ನ್ನು ಬಿಟ್ಟು ನಿಮ್ಮನ್ನು ಕೊಳವೆಬಾವಿಗೆ ದುಡ್ಡು ಕೊಡಿ ಎಂದು ಕೇಳುವುದಿಲ್ಲ. ಅವರು ಸ್ವಂತ ಎರಡುವರೆಯಿಂದ ಮೂರು ಲಕ್ಷ ರೂ. ಗಳನ್ನು ಖರ್ಚು ಮಾಡಿ ಕೊಳವೆ ಬಾವಿಯನ್ನು ತೋಡಿಸುತ್ತಾರೆ. ಆದರೆ ಬೆಳೆಯನ್ನು ಎರಡು ಎಕರೆಗೆ ಮಾತ್ರ ಇಡುವುದಕ್ಕೆ ಸಾಧ್ಯವಾಗುತ್ತದೆ ನಮಗೆ 5000 ಗ್ಯಾಲನ್ ನೀರು ಇರುವುದಿಲ್ಲ ಬರೀ 2500 ಗ್ಯಾಲನ್ ನೀರು ಇರತಕ್ಕಂಥದ್ದು. ಅದಕ್ಕೂ ಕೂಡ ನಿಮ್ಮ ವಿದ್ಯುತ್ ಸಪ್ಲೈ ಇಲ್ಲವೆನ್ನುವುದಾದರೆ, ಬಹುಶಃ ಅವರ ಪಂಪ್‌ಸೆಟ್ ಏನಾಗುತ್ತದೆನ್ನುವುದು ನನಗಂತೂ ಗೊತ್ತಿಲ್ಲ. ಅದನ್ನೇ ನಂಬಿಕೊಂಡಿದ್ದು ಅವರಿಗೆ ಬೇರೆ ಯಾವ ಸೋರ್ಸ್ ಇಲ್ಲ. ಈ ತರಹ ಒಂದು ಪರಿಸ್ಥಿತಿಯನ್ನು ನೀವು ನಿವಾರಿಸುವಂಥ ಕೆಲಸವನ್ನು ತತ್‌ಕ್ಷಣ ಮಾಡಬೇಕು. ಇಲ್ಲದಿದ್ದರೆ ಈ ಬೇಸಿಗೆಯಲ್ಲಿ ರೈತರು ನಿಮಗೆ ಶಾಪ ಹಾಕದೇ ಖಂಡಿತವಾಗಿ ಬಿಡುವುದಿಲ್ಲ. ಅದಕ್ಕೆ ಯಾವ ರೀತಿಯಾಗಿ ತುರ್ತುಕ್ರಮ ತೆಗೆದುಕೊಳ್ಳುತ್ತೀರಿ ತಕ್ಷಣ ಕೈಗೊಳ್ಳಬೇಕು. ತಕ್ಷಣ ಅದಕ್ಕೆ relief ಕೊಟ್ಟು ಯಾವ ಕ್ಷೇತ್ರಕ್ಕೆ ವಿದ್ಯುತ್‌ನ್ನು ಕಟ್ ಮಾಡುತ್ತೀರಿ ಮಾಡಿ. ಹಿಂದೆ ಕೆಲವು ಕ್ಷೇತ್ರಕ್ಕೆ ತೊಂದರೆ ಬಂದಾಗ ಪವರ್ ಕಟ್ ಮಾಡುತ್ತಿದ್ದರು. ಆ ಪವರ್‌ನ್ನು ಕಟ್ ಮಾಡಿ ಇವತ್ತು ರೈತರಿಗೆ ಕೊಡಿ. ರೈತರು ಅಲ್ಲಿ ಸಾಯುತ್ತಿದ್ದರೆ, ಗೋಳಾಡುತ್ತಿದ್ದಾರೆ. ನೀವು ದುಡ್ಡು ಮಾಡುವ ಕಮರ್ಷಿಯಲ್ ಒಂದನ್ನು ಯೋಚನೆ ಮಾಡಬಾರದು. ಬೇರೆ ಕ್ಷೇತ್ರವನ್ನು ಯೋಚನೆ ಮಾಡಬೇಕು.

(ಗೊಂದಲ)

ಆ ರೈತರ ನೋವು ನೋಡಿದರೆ ನಿಮಗೆ ಗೊತ್ತಾಗುತ್ತದೆ. ನೀವು ನಿಧಾನವಾಗಿ ಮಾತನಾಡಿ ಎಂದು ಹೇಳುವುದು ಆಗ ಗೊತ್ತಾಗುತ್ತದೆ. ರೈತರಾದರೆ ನಿಮಗೆ ಆ ನೋವು ಗೊತ್ತಾಗುತ್ತದೆ. ವಿದ್ಯುತ್ ಕ್ಷೇತ್ರಕ್ಕೆ ಆದ್ಯತೆಯನ್ನು ಕೊಡಬೇಕೆಂದು ನಾನು ಕೇಳುತ್ತಾ ಮಾನ್ಯ ಇಂದನ ಮಂತ್ರಿಗಳಾದ ಮಾನ್ಯ ಈಶ್ವರಪ್ಪನವರು ತಕ್ಷಣ ಗಮನ ಕೊಡಬೇಕು. ನೀವು ಯಾವ ರೀತಿಯಾಗಿ emergency meeting ಕರೆಯುತ್ತೀರೋ ಈ ವಿದ್ಯುತ್ ಸಮಸ್ಯೆಯನ್ನು ಹೇಗೆ manage ಮಾಡುತ್ತೀರೋ ಗೊತ್ತಿಲ್ಲ. ನಿಮಗೆ ಯಾವ ರೈತರೂ ಕೂಡ 24 ಗಂಟೆ ಕೊಡಿ ಎಂದು ಕೇಳುತ್ತಿಲ್ಲ. ಅವರು ಕೇಳುವುದು ಕನಿಷ್ಟ 8 ರಿಂದ 10 ಗಂಟೆ ಮಾತ್ರ, ಅದಕ್ಕೆ ಅವರು ಸೀಮಿತವಾಗಿ ಬೆಳೆಯನ್ನು ಇಟ್ಟುಕೊಂಡಿದ್ದಾರೆ. ಅದಕ್ಕೂ ಕೂಡ ನೀವು ಸರಿಯಾಗಿ ವಿದ್ಯುತ್ ಕೊಡದಿದ್ದರೆ ಅವರ ಗತಿ ಏನಾಗಬೇಕು. ರಾಜ್ಯದಲ್ಲಿ ವಿದ್ಯುತ್ ಕೊರತೆಯಿರುವುದು ಎಲ್ಲರಿಗೂ ಗೊತ್ತಿದೆ. ಬರೀ ಎರಡು ಗಂಟೆ ಕೊಟ್ಟರೆ, ರೈತರ ಗತಿ ಏನಾಗಬೇಕು? ಇದನ್ನು ಸ್ವಲ್ಪ ತಾವು ಸೀರಿಯಸ್ಸಾಗಿ ತೆಗೆದುಕೊಳ್ಳದೆ ಹೋದರೆ ಆ ದೇವರೇ ಅಥವಾ ಯಾರೇ ಬಂದರೂ ನಿಮ್ಮನ್ನ ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ನೀವು ಬೆಲೆ ತೆರಲೇ

ಬೇಕಾಗುತ್ತದೆ ಎನ್ನುವ ಮಾತನ್ನು ನಾನು ಅನಿವಾರ್ಯವಾಗಿ ನಮ್ಮ ಅಧ್ಯಕ್ಷರ ಮುಖಾಂತರ ನಿಮಗೆ ಮನವರಿಕೆ ಮಾಡಿಕೊಡತ್ತಾ ಇದಕ್ಕೆ ತಕ್ಷಣ ಕ್ರಮಕೈಗೊಳ್ಳುಬೇಕು ಎನ್ನತಕ್ಕಂಥ ಮಾತು ಮತ್ತು ಸುಧಾರಣೆ ಕ್ರಮಗಳನ್ನು ಏನೇನು ಹೇಳಿದ್ದೀರಿ ನೀವು ಕೊಟ್ಟಿರತಕ್ಕಂಥ ಹಣ, ಅದರ ಬಗ್ಗೆ ಸರಿಯಾದಂಥ ರೀತಿಯಲ್ಲಿ ಸ್ವಲ್ಪಪ ತುರ್ತಾಗಿ ನಿಮ್ಮ Engineering Wing ನ್ನು ಮಾಡತಕ್ಕಂಥ ಕೆಲಸವನ್ನು ಖಂಡಿತ ಮಾಡಬೇಕು ಎಂದು ನಾನು ಹೇಳೂತ್ತೇನೇ, Alert ಮಾಡದೆ ಹೋದರೆ ಬಹಳ ತೊಂದರೆಯಾಗುತ್ತದೆ. 33% ಅಂದರೆ ಅವೆಲ್ಲಾ ಇಲ್ಲ. ಅದು ಬಹಳ ಜಾಸ್ತಿ ಅದನ್ನು ಹೇಗೆ minimize ಮಾಡಬೇಕು ಮತ್ತು ಅದಕ್ಕೆ reform ತರತಕ್ಕಂಥ ಕೆಲಸ ನೀವು ಮಾಡಲೇಬೇಕು. ಅಲ್ಲದೇ ಇದನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದು parallel ಆಗಿ ಆಗಬೇಕು. ಈ reforms ನಲ್ಲಿ ಒಂದು ಕಡೆ ಉತ್ಪಾದನೆ ಜಾಸ್ತಿ ಮಾಡಬೇಕು, transmission, distribution ನಲ್ಲಿ ಆಗತಕ್ಕಂಥ ನಷ್ಟವನ್ನು minimize ಮಾಡತಕ್ಕಂಥದ್ದು. parallel ಆಗಿ ಮಾಡಕೊಂಡು ಹೋದರೇನೇ ಅದು ಉಳಿಯೋದು. ಇಲ್ಲದಿದ್ದರೆ ಅದು ಖಂಡಿತಾ ಉಳಿಯುವುದಿಲ್ಲ. ಒಂದು ಕ್ಷೇತ್ರಕ್ಕೆ ನಾವು ಆದ್ಯತೆ ಕೊಟ್ಟರೆ ಇನ್ನೊಂದು ಕ್ಷೇತ್ರವನ್ನು negleet ಮಾಡಿದರೆ ಅದರ ಪರಿಣಾಮ ಅಲ್ಲೇ ತೊಂದರೆಯಾಗುತ್ತದೆ. ಅದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಅನ್ನತಕ್ಕಂಥ ಮಾತನ್ನು ಇವತ್ತು ವಿದ್ಯುತ್ ವಿಷಯದಲ್ಲಿ ಹೇಳಿ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಬೇರೆ ಬೇರೆ ವಿಚಾರಗಳನ್ನು ತೆಗೆದುಕೊಳ್ಳುತ್ತೇನೆ. ಇವತ್ತು ನೀರಾವರಿ. ರೈತರಿಗೆ ಇನ್ನೊಂದು ಪ್ರಮುಖವಾಗಿ ಬೇಕಾಗಿರುವಂಥದ್ದು ನೀರಾವರಿ.

ಛೇರ್ಮನ್: ಸಾಕು. ವಿದ್ಯುತ್ನಲ್ಲಿಯೇ ಬೇಕಾದಷ್ಟು ಹೇಳಿದ್ದೀರಿ.

ಶ್ರೀ ವಿ. ಮುನಿಯಪ್ಪ: ಇಲ್ಲಾ ಸ್ವಾಮಿ, ನೀರಾವರಿಯಲ್ಲಿ 1200 ಅಡಿಯಲ್ಲಿ ಇರುವುದು ನಾವು. ಇವತ್ತು Nitrate, fluoride ನಿಂದ ಕೂಡಿರುವಂಥ ನೀರನ್ನು ಕುಡಿಯುತ್ತಿದ್ದೇವೆ. ಆದುದರಿಂದ ನನಗೆ ಸ್ವಲ್ಪ ಸಮಯ ಕೊಡಿ.

ತಾವು ನೀರನ್ನು ಒದಗಿಸಿಕೊಟ್ಟರೆ ಅವನು ಜೀವನವನ್ನು ನಡೆಸಿಕೊಂಡು ಹೋಗುತ್ತಾನೆ. ಇವತ್ತು ನಾನು ಸಣ್ಣ ಮಾಹಿತಿಯನ್ನು ತಮಗೆ ಕೊಡುತ್ತೇನೆ. ಇವತ್ತು ಈ ರಾಜ್ಯದಲ್ಲಿ 2002-03 ರಲ್ಲಿ ಒಂದು ಸಮೀಕ್ಷೇಯನ್ನು ನೀರಾವರಿಯ ಬಗ್ಗೆ ಮಾಡಿದ್ದಾರೆ. ಈಗ ರಾಜ್ಯದಲ್ಲಿ ಕೃಷ್ಣ, ಕಾವೇರಿ, ತುಂಗಾ, ಭಾದ್ರಾ, ಪಶ್ಚಿಮದ ಕಡೆಗೆ ಹರಿಯುವಂತಹ ಎಲ್ಲಾ ನದಿಗಳ ಮೂಲದಿಂದ ನದಿಯಲ್ಲಿ ಜಲಸಂಪನ್ಮೂಲ ಎಷ್ಟು ಇದೆ ಎಂದರೆ 3500 ಟಿಎಂಸಿ ನೀರು ಇದೆ. ಆದರ ದುರಾದೃಷ್ಟವಾಶಾತ್ ನಾವು ಇಲ್ಲಿಯವರೆಗೆ ಪ್ರಯತ್ನವನ್ನು ಮಾಡಿರುವುದು ಕೇವಲ 1015 ಟಿಎಂಸಿಗೆ ನಾವು ಕಾರ್ಯಕ್ರಮವನ್ನು ಮಾಡಿದ್ದೇವೆ. ಅದರಲ್ಲಿ ನಾವು 900 ಟಿಎಂಸಿ ನೀರನ್ನು ಮಾತ್ರ ಬಳಸಿಕೊಳ್ಳುತ್ತಿದ್ದೇವೆ. ಈನ್ನು ನಾವು ಗುರಿಯನ್ನು ಇಟ್ಟುಕೊಂಡಿರುವುದು 60-70

ಟಿಎಂಸಿ ನೀರನ್ನು ಬಳಸಿಕೊಳ್ಳುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇನ್ನು 2500 ಟಿಎಂಸಿ ನೀರು ನಮ್ಮ ರಾಜ್ಯದಲ್ಲಿ ಲಭ್ಯವಿದೆ. ಇಂತಹ ನೀರನ್ನು ಉಪಯೋಗ ಮಾಡುವಂತಹ programmನ್ನು ನಾವು Top priorityಯಲ್ಲಿ ತೆಗೆದುಕೊಳ್ಳಬೇಕಾಗಿತ್ತು. ಒಂದು ಕಡೆ 7 ಜಿಲ್ಲೆಗಳಲ್ಲಿ ಕುಡಿಯುವ ನೀರು ಇಲ್ಲ. ಪ್ರತಿವರ್ಷ 50-100 ಅಡಿ declineಆಗುತ್ತಿದೆ. ಅದು depthಗೆ ಹೋಗುತ್ತಿದೆ. 100 ಅಡಿ ಆಳಕ್ಕೆ ಹೋಗುತ್ತಿದೆ, ನಾವು ಕೊಳವೆ ಬಾವಿಗಳನ್ನು ಹಾಕಿ ಫೇಲ್ ಆಗುತ್ತಿದ್ದೇವೆ. ಇವತ್ತು ಕುಡಿಯುವ ನೀರು ಇಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ಡಾ: ಪರಮಶಿವಯ್ಯನವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟರು. ಅವರು 10 ವರ್ಷಗಳ ಕಾಲ ಸತತವಾಗಿ ಪ್ರಯತ್ನವನ್ನು ಮಾಡಿದ್ದಾರೆ. ಅವರು ಕಾಲು ನಡಿಗೆಯಲ್ಲಿ ಅನೇಕ ಕಿಲೋಮೀಟರ್‌ಗಳಷ್ಟು ನಡೆದುಕೊಂಡು ಹೋಗಿದ್ದಾರೆ. ಅವರು ನಡೆದುಕೊಂಡು ಹೋಗಿ ಸಮೀಕ್ಷೆಯನ್ನು ಮಾಡಿ ಒಂದು Topo Sheetನ್ನು ರೆಡಿ ಮಾಡಿದ್ದಾರೆ. ಅದರಲ್ಲಿ ಗುರುತ್ವಾಕರ್ಷಣೆ ಆಧಾರದ ಮೇಲೆ ನೀರನ್ನು ಪಶ್ಚಿಮದಿಂದ ಪೂರ್ವಕ್ಕೆ ಹರಿಸತಕ್ಕಂತಹ technicalಆಗಿ ಅವಕಾಶವಿದೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಅವರು ಇನ್ನೊಂದು challengeನ್ನು ಸಹ ಮಾಡಿದ್ದಾರೆ. ಈ ರಾಜ್ಯದಲ್ಲಿ ಸುಮಾರು 19 ಜನ retiredಆಗಿರುವ Chief Engineers ಇದ್ದಾರೆ ಅವರೆಲ್ಲರೂ ಸಹ ಬದುಕಿದ್ದಾರೆ. ಅವರ ಒಂದು ಸಮಿತಿಯನ್ನು ಮಾಡಿ ಆ ಸಮಿತಿಯ ಮುಂದೆ ಆ ವರದಿಯನ್ನು ಇಟ್ಟು ಚರ್ಚೆ ಮಾಡೋಣ. ಆ ವರದಿಯ ಆಗುಹೋಗುಗಳ ಬಗ್ಗೆ Pros and Consಬಗ್ಗೆ discuss ಮಾಡೋಣ. Technical ಆಗಿ ಅಲ್ಲಿ ನೀರು ಬರುತ್ತದೆಯೋ ಇಲ್ಲವೋ ಎಂಬುದರ ಬಗ್ಗೆ ಚರ್ಚೆ ಮಾಡೋಣ. ದಯವಿಟ್ಟು 19 ಜನ ನಿವೃತ್ತ ಇಂಜಿನಿಯರುಗಳು ಯಾರು ಇದ್ದಾರೆ. ಅವರ ಒಂದು ಕಮಿಟಿಯನ್ನು ಮಾಡಿ ಎಂದು ಅವರು ಸವಾಲನ್ನು ಹಾಕಿದ್ದಾರೆ. ಅದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಒಂದು ದುರಾದೃಷ್ಟ ಕರ ಸಂಗತಿ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಈ ವರದಿಯ ಸಮೀಕ್ಷೆಯನ್ನು Topo sheetಮಾಡಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದನ್ನು ISROಸಂಸ್ಥೆಯವರು satelliteಸರ್ವೆ ಮಾಡಿ ವರದಿಯನ್ನು ಕೊಡಿ ಎಂದು ಕೇಳಿದ್ದಾರೆ. ಅವತ್ತು ಅವರು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಸನ್ಮಾನ್ಯ ಧರ್ಮಸಿಂಗ್‌ರವರು ಮಯಖ್ಯಮಂತ್ರಿಗಳಾಗಿದ್ದಾಗ ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 15 ಕೋಟಿ ರೂಪಾಯಿಗಳನ್ನು ಕೊಟ್ಟರೆ ವರದಿಯನ್ನು ಕೊಡುತ್ತೇವೆಂದು ISROಸಂಸ್ಥೆಯವರು ಸರಕಾರಕ್ಕೆ ಹೇಳಿದ್ದಾರೆ. ಇಲ್ಲಿ ಮಠಮಂದಿರಗಳಿಗೆ ಕೇಳಿದವರಿಗೆಲ್ಲಾ ದುಡ್ಡು ಕೊಡುತ್ತಿದ್ದೀರಿ. ISROಂಸಂಸ್ಥೆಯವರಿಗೆ 15 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಈ

ಸರ್ಕಾರಕ್ಕೆ ಬರ ಬಂದಿದೆಯೇ ಎಂದು ನಾನು ಸರ್ಕಾರವನ್ನು ಕೇಳಬೇಕಾಗುತ್ತದೆ. ಡಾ:ಪರಮಶಿವಯ್ಯನವರು 10 ವರ್ಷಗಳ ಕಾಲ ಸತತವಾಗಿ ಕಾಲುನಡಿಗೆಯಲ್ಲಿ ಅನೇಕ ಕಡೆ ಓಡಾಡಿ ಯಾವುದೇ ಸರ್ಕಾರಕ್ಕೆ ನೆರವು ಇಲ್ಲದೆ ವರದಿಯನ್ನು ಕೊಟ್ಟು topo sheetರಮಾಡಿ ಎಲ್ಲೆಲ್ಲಿ gravityಂಬರುತ್ತದೆ ಎಲ್ಲಿ Lift Irrigationಂನ್ನು ಮಾಡಬೇಕೆನ್ನುವಂತಹ ಎಲ್ಲಾ ಅಂಕಿಅಂಶಗಳನ್ನು ಕೊಟ್ಟು ಪ್ರಸ್ತಾಪ ಮಾಡಿದ್ದಾರೆ. ಆ ಪ್ರಸ್ತಾಪದ ಬಗ್ಗೆ ಇವತ್ತು advance technologyಂಇರತಕ್ಕಂತಹ ಸಂದರ್ಭದಲ್ಲಿ scientific ಆಗಿ ಒಂದು satellite surveyಂಮಾಡಿ ಅದನ್ನು ಉಪಯೋಗ ಮಾಡುವಂತಹದ್ದಕ್ಕೆ ಕೇವಲ 15 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದರೆ ಇವತ್ತಿನವರೆಗೂ ಕೂಡ ಸರ್ಕಾರದವರು ಆ ಕಡೆಗೆ ಗಮನವನ್ನು ಕೊಟ್ಟಿರುವುದಿಲ್ಲ. ಇದು ಎಂತಹ ದುರ್ಗತಿಯೆಂದು ಹೇಳೋಣ. ಕೇವಲ 15 ಕೋಟಿ ರೂಪಾಯಿಗಳನ್ನು ಕೊಟ್ಟು ಆ ವರದಿಯನ್ನು ತರಿಸಿಕೊಂಡು ಆ ವರದಿಯ ಆಧಾರದ ಮೇಲೆ ಯಾವ ರೀತಿಯಾಗಿ ಮಾಡಬಹುದು ಎಂದು ಇವತ್ತಲ್ಲ ಇನ್ನು 10 ವರ್ಷಗಳು ಆಗಲಿ. ಅದು ಮುಂದಿನ, ಪೀಳಿಗೆಗಾದರೂ ಬೇಕಾಗುತ್ತದೆ ಇವತ್ತು 7 ಜಿಲ್ಲೆಗಳಲ್ಲಿ ಕುಡಿಯುವ ನೀರಿಲ್ಲದೆ ಜನ ಕಷ್ಟ ಪಡುತ್ತಿದ್ದಾರೆ. ಇನ್ನೊಂದು 5 ವರ್ಷ ಇದೇ ರೀತಿಯಾಗಿ ಮಳೆಯು ಬಾರದೆ ಹೋದರೆ, ಪರಿಣಾಮ ಏನಾಗಬಹುದು ಎಂದು ಯೋಚಿಸಿ. ಚಿಕ್ಕಬಳ್ಳಾಪುರ, ಚಿತ್ರದುರ್ಗ ಜಿಲ್ಲೆಗಳಲ್ಲಿ 700 ಸೆಂ.ಮೀ.ಮಾತ್ರ ಮಳೆ ಬೀಳುತ್ತಿರುವುದು. ಕಳೆದ 15 ವರ್ಷಗಳಿಂದ 450–500 ಸೆಂ.ಮೀ.ಗೆ ಬಂದು ನಿಂತಿದೆ. ಇಲ್ಲಿ ನಮ್ಮ Minor Irrigationೣ ಸಚಿವರು ಇದ್ದಾರೆ. ಅವರಿಗೆ ಕೇಳಿ ಮಾತ್ರ ನಮ್ಮ ಜಿಲ್ಲೆಯಲ್ಲಿ 4620 ಕೆರೆಗಳು ಇವೆ. ಅವೇ ನಮ್ಮ ಜೀವನಾಧಾರಗಳಾಗಿವೆ. ಅದರೆ ದುರಾದೃಷ್ಟ 15 ವರ್ಷಗಳಿಂದ ಆ ಕೆರೆಗಳಿಗೆ ನೀರು ಬರಲಿಲ್ಲ. ಇವತ್ತು ಅದರ ದುಷ್ಪರಿಣಾಮ 1000 ಅಡಿಗೆ ನಾವು ಹೋಗಿದ್ದೇವೆ. ಅಲ್ಲಿ ಏನಾಗಿದೆ ಎಂದರೆ ಎಲ್ಲಾ ನೀರು fluoride ಮತ್ತು nitrateನಿಂದ ಕೂಡಿದೆ. ಈ ನೀರನ್ನು ನಾವು ಕುಡಿಯುತ್ತಿದ್ದೇವೆ. ಇದರಿಂದ ದಂತಕ್ಷಯ ರೋಗ ಬರುತ್ತಿದೆ. ಅಲ್ಲಿ ಎಲ್ಲರೂ ರೋಗರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಇವತ್ತು ಅಲ್ಲಿ ದನಕರುಗಳು ಸಹ ಆ ನೀರನ್ನು ಕುಡಿಯುವುದರಿಂದ ರೋಗಕ್ಕೆ ತುತ್ತಾಗುವಂತಹ ಪರಿಸ್ಥಿತಿಗೆ ಬಂದು ಮುಟ್ಟಿದೆ. ಈ ಪರಿಸ್ಥಿತಿಯಲ್ಲಿ ಇವತ್ತು ಏನು ಅಭಿವೃದ್ಧಿ, ಅಭಿವೃದ್ಧಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಅಭಿವೃದ್ಧಿ ಎಂದರೆ ಇದೆ ಏನು? ಇವತ್ತು ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಬ್ಬ ಮನುಷ್ಯ ಕಟ್ಟಕಡೆ ಹಳ್ಳಿಯಲ್ಲಿರುವಂತಹವನು ಸಹ ತೆರಿಗೆಯನ್ನು ಕೊಡುತ್ತಾನೆ. ಅವನು ಹಾಕುವ ಬಟ್ಟೆ ಮೇಲೆ ತೆರಿಗೆ ಹಾಕುತ್ತಾ ಬೀಡಿ ಮೇಲೆ ಅವನು ಮಾಡುವ ಊಟದ ಮೇಲೆ ಎಲ್ಲದರ ಮೇಲೆ ತೆರಿಗೆ ಇದೆ. ಜನಸಾಮಾನ್ಯರು ಕೊಡುವಂತಹ ತೆರಿಗೆಯನ್ನು ಎಲ್ಲೋ ಕೆಲವು ಕ್ಷೇತ್ರಗಳಿಗೆ ಉಪಯೋಗ ಮಾಡಿ ಇವತ್ತು 7 ಜಿಲ್ಲೆಗಳು ಬಯಲುಸೀಮೆ ಪ್ರದೇಶದಲ್ಲಿ ಬರುತ್ತವೆ. ಈ ಬಯಲು ಸೀಮೆ ಪ್ರದೇಶಗಳಿಗೆ ಈ ಸಾರಿಯ ಬಜೆಟಿನಲ್ಲಿ ಕನಿಷ್ಟ ಏನು

ಕಾರ್ಯಕ್ರಮವನ್ನು ಕೊಟ್ಟಿದ್ದೀರಿ ಅದರ ಬಗ್ಗೆ ತಾವು ಹೇಳಬೇಕು. ಇವತ್ತು ಮಳೆ ಬರತಕ್ಕಂತಹ Rain water harvesting programmeಗೆ ಏನಾದರೂ ಕಾರ್ಯಕ್ರಮವನ್ನು ಮಾಡಿದ್ದೀರಾ? "ಮಳೆ ನೀರು ಕೊಯ್ಲು" ಎಂದು ನೀವು ಸುಮ್ಮನೆ ಬಜೆಟ್‌ನಲ್ಲಿ ಹೇಳಿದ್ದೀರಿ. ಅದಕ್ಕೆ ಹಣವನ್ನು ಎಲ್ಲಿ ಕೊಟ್ಟಿದ್ದೀರಿ. ಬಯಲುಸೀಮೆ ಪ್ರದೇಶಗಳಿಗೆ ತಾವು ಏನು ಮಾಡಿದ್ದೀರಿ ಎಂಬ ಬಗ್ಗೆ ತಾವು ನಿರ್ದಿಷ್ಟವಾಗಿ ಸರ್ಕಾರ ಹೇಳಬೇಕು. ಪ್ರತಿ ವರ್ಷ ಅಲ್ಲಿ ಕುಡಿಯುವ ನೀರಿಗಾಗಿ ಜನರು ಸಾಯುತ್ತಿದ್ದಾರೆ. ಪ್ರತಿವರ್ಷವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಒಂದೊಂದು ಜಿಲ್ಲಾ ಪಂಚಾಯಿತಿಗೆ 50 ರಿಂದ 100 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರಲ್ಲಾ ಅದು ಪ್ರತಿವರ್ಷವು ಹೆಚ್ಚಾಗುತ್ತಿದೆ. ಒಂದೊಂದು ಊರಿನಲ್ಲಿ 10 ರಿಂದ 20 ಬೋರ್‌ವೆಲ್‌ಗಳನ್ನು ಹಾಕಿರುವಂತಹ ಉದಾಹರಣೆಗಳು ಇವೆ. permanent sourceಅಲ್ಲಾ, ಈ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇಂತಹ ದುಸ್ಥಿತಿಯಲ್ಲಿದ್ದರೂ ಕೂಡ ಸನ್ಮಾನ್ಯ ನೀರಾವರಿ ಮಂತ್ರಿಗಳು ಈಗ ಸದನಕ್ಕೆ ಬಂದಿದ್ದಾರೆ. ಇವತ್ತು ರಾಜ್ಯದಲ್ಲಿ 3500 ಟಿಎಂಸಿ ನೀರು ಲಭ್ಯವಿದೆ ಎಂದು ಹೇಳಿ 2002-03ನೇ ಸಾಲಿನಲ್ಲಿ ಸಮೀಕ್ಷೆಯನ್ನು ಮಾಡಿರುವಂತಹ ವಿಚಾರ ತಮಗೆ ಗೊತ್ತಿರುತ್ತದೆಂದು ನಾನು ಭಾವಿಸಿದ್ದೇನೆ. ಅದರಲ್ಲಿ 1071 ಟಿಎಂಸಿಗೆ ಮಾತ್ರ ಸರ್ಕಾರವು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇನ್ನು 2500 ಟಿಎಂಸಿ ನೀರು ಲಭ್ಯವಿದ್ದರೂ ಕೂಡ ಅದಕ್ಕೆ ಕಾರ್ಯಕ್ರಮಗಳೆ ಇಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಆ ನೀರೆಲ್ಲ ವ್ಯರ್ಥವಾಗಿ ಗೋವಾ ಹಾಗೂ ಮಂಗಳೂರು ಮುಖಾಂತರ ಬೇರೆ ಬೇರೆ ರೀತಿಯಲ್ಲಿ ಸಮುದ್ರಕ್ಕೆ ಸೇರುತ್ತಿರುವಂತಹ ಪರಿಸ್ಥಿತಿ ಬಂದಿದೆ. 7 ಜಿಲ್ಲೆಗಳಲ್ಲಿ ಕುಡಿಯುವ ನೀರಿಗಾಗಿ ನಾವು ಹೋರಾಡವನ್ನು ಮಾಡುತ್ತಿದ್ದೇವೆ. ಈ ಪರಿಸ್ಥಿತಿ ಇರುವಂಥಹ ಸಂದರ್ಭದಲ್ಲಿ ಇವತ್ತು ಸಮಗ್ರ ಕರ್ನಾಟಕದ ಅಭಿವೃದ್ಧಿಯೆಂದು ಹೇಳುವಂಥಹ ಸರ್ಕಾರವು ಇವತ್ತಿನದಿವಸ ತಾವು 7 ಜಿಲ್ಲೆಗಳಿಗೆ ಏನು ಕಾರ್ಯಕ್ರಮವನ್ನು ಕೊಟ್ಟಿದ್ದೀರಿ ಎಂದು ನಾವು ಅನಿವಾರ್ಯವಾಗಿ ಸರ್ಕಾರವನ್ನು ಪ್ರಶ್ನೆ ಮಾಡಬೇಕಾಗಿದೆ. ಇಲ್ಲಿ ಕುಡಿಯುವ ನೀರಿಗಾಗಿ ಒದ್ದಾಟ ಮಾಡುವಂತಹ ಸಂದರ್ಭದಲ್ಲಿ ಒಂದು ಶಾಶ್ವತವಾದಂತಹ ನೀರಾವರಿ ಕಾರ್ಯಕ್ರಮಗಳಿಗೆ ಯಾವ ರೀತಿಯಾಗಿ ಆದ್ಯತೆಯನ್ನು ಕೊಡಬೇಕೆಂಬುದರ ಬಗ್ಗೆ ಪಕ್ಕದ ರಾಜ್ಯಕ್ಕೆ ಹೋಗಿ ನೋಡಿಕೊಂಡು ಬನ್ನಿ. "ಜಲ ಯಜ್ಞ" ಎಂದು ಹೆಸರನ್ನಿಟ್ಟುಕೊಂಡು ಆಂಧ್ರ ಮುಖ್ಯಮಂತ್ರಿಯವರಾದ ಶ್ರೀ ವೈ.ಎಸ್.ರಾಜಸೇಖರರೆಡ್ಡಿಯವರು 1,15,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅದು ರಾಯಲ್ ಸೀಮಾ ಎಂದೊ ಚಿತ್ತೂರಿನಿಂದ ಹಿಡಿದು ಅನಂತಪುರ ಮತ್ತು ಕರ್ನೂಲ್‌ವರೆಗೆ ಕಂಪ್ಲೀಟಾಗಿ ಮಾಡಿದ್ದಾರೆ. ನೀರು ಇರಲಿ, ಇಲ್ಲದೆ ಹೋಗಲಿ, ಎಲ್ಲಾ ಕೆರೆಕಟ್ಟೆಗಳಿಗೆ ಸಂಪರ್ಕವನ್ನು ಕೊಡುತ್ತಿದ್ದಾರೆ. ಅವರು ಭಾಷಣವನ್ನು ಮಾಡುತ್ತಾ ಒಂದು ಮಾತನ್ನು ಹೇಳಿದರು. ಅಕಸ್ಮಿಕವಾಗಿ ಈ

ಕಾಲುವೆಗಳಲ್ಲಿ ನೀರು ಬರದೆ ಹೋಗಬಹುದು. ಕನಿಷ್ಟ 10 ವರ್ಷಕ್ಕಾದರೂ ಮಳೆ ಬಂದಾಗ ಕಾಲುವೆಯಲ್ಲಿ ನೀರು ತುಂಬಿಕೊಂಡರೆ ಸಾಕು ಆಗ ಅಂತರ ಜಲ ಜಾಸ್ತಿಯಾಗುತ್ತದೆ. ಅವತ್ತಾದರೂ ಕೂಡ ಇದರ ಉಪಯೋಗವಾಗುತ್ತದೆ ಎಂಬ ಮಾತನ್ನು ಅವರು ಆಡಿದ್ದಾರೆ. ಅವರು 1,17,000 "ಜಲಯಜ್ಞ" ಕಾರ್ಯಕ್ರಮವನ್ನು ತೆಗೆದುಕೊಂಡು ಅದನ್ನು 4 ವರ್ಷದಲ್ಲಿ ಕಂಪ್ಲೀಟ್ ಮಾಡತಕ್ಕಂತಹ ಪ್ರಯತ್ನವನ್ನು ಮಾಡುತ್ತಿದ್ದರೆ ನೀವು 3000 ಕೋಟಿಯನ್ನು ಇಟ್ಟು 1800 ಕೋಟಿ ರೂಗಳನ್ನು ಖರ್ಚು ಮಾಡುವುದಕ್ಕಾಗದೆ ಲ್ಯಾಪ್ಸ್ ಮಾಡುತ್ತಿದ್ದಿರೆಂದರೆ ನೀವು ನೀರಾವರಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೀರೆಂದು ನಾವು ಸರ್ಕಾರವನ್ನು ಪ್ರಶ್ನೆ ಮಾಡಬೇಕಾಗುತ್ತದೆ. ನಮ್ಮ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ 6000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವು. Upper Krishnaದಲ್ಲಿ ಬಚಾವತ್ ಅವಾರ್ಡ್ ಪ್ರಕಾರ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ಆ ಟೈಮ್ ಹೊರಟು ಹೋಗುತ್ತದೆಂದು ಹೇಳಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಿ ಮಾಡಿದ್ದೆವು.

ಶ್ರೀ ಎಸ್.ಆರ್.ವಿಶ್ವನಾಥ್ : ಅವರ ಕಾಲದಲ್ಲಿ ನೀರು ಅಷ್ಟೇ ಲಭ್ಯವಾಗಿದ್ದು, ಅಲ್ಲಿ ಅದಕ್ಕಾಗಿಯೇ floride ಜಾಸ್ತಿಯಾಗಿರುವುದು.

ಶ್ರೀ ವಿ.ಮುನಿಯಪ್ಪ : ನನ್ನ ಕಾಲದಲ್ಲಿ ಮರಳು ಲಾರಿಯವರು ಒಂದೂವರೆ ತಿಂಗಳುಗಳ ಕಾಲ ಧರಣಿಯನ್ನು ಮಾಡಿದ್ದರು. ನಮ್ಮ effigyಗಳನ್ನು ಇಲ್ಲಿಗೆ ತಂದು ಸುಟ್ಟರು. ಆದರೂ ಕೂಡ ನಾವು ಯೀಲ್ಡ್ ಆಗಲಿಲ್ಲ. ನಿಮಗೆ ಆ ವಿಷಯಗೊತ್ತಿಲ್ಲ. ಮರಳನ್ನು regulate ಮಾಡಿರುವುದೇ ನಮ್ಮ ಕಾಲದಲ್ಲಿ. ಮರಳನ್ನು ಅವರು ಇಷ್ಟಾನುಸಾರ ಹಾಗೂ ಸ್ವೇಚ್ಛಾಚಾರವಾಗಿ ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ನಮ್ಮ ಕಾಲದಲ್ಲಿಯೆ ರಾಯಲ್ಟಿಯನ್ನು ಫಿಕ್ಸ್ ಮಾಡಿರುವುದು. ಅದರಿಂದಾಗಿಯೇ 18 ಕೋಟಿ ರೂಪಾಯಿಗಳು ಜಾಸ್ತಿ ಬಂದಿದೆ ನಿಮಗೇನು ಗೊತ್ತಿದೆ. ಮೊದಲು ರಾಯಲ್ಟಿ 1 ರೂಪಾಯಿ ಬರುತ್ತಿರಲಿಲ್ಲ. ಅದನ್ನು regulate ಮಾಡಬೇಕು. Sand is also oneof the essential commodities. ಮರಳು ಇಲ್ಲದೇ ಹೋದರೆ ಈ ನಗರದಲ್ಲಿ ಮಾತ್ರವಲ್ಲ, ಪ್ರತಿ ಊರಿನಲ್ಲಿಯೂ ಅಭಿವೃದ್ಧಿ ಕಾರ್ಯಗಳು ನಿಂತುಹೋಗುತ್ತದೆ. ಮರಳನ್ನು ಬಂದ್ ಮಾಡುವುದಕ್ಕಾಗುವುದಿಲ್ಲ ಮರಳನ್ನು ಕೊಳ್ಳಲೇಬೇಕು.

ಶ್ರೀ ಎಸ್.ಆರ್.ವಿಶ್ವನಾಥ್ : ಅದನ್ನು ಹೆಚ್ಚಿಸಬೇಕೆಂದು ಏನು ಇಲ್ಲ.

ಶ್ರೀ ವಿ.ಮುನಿಯಪ್ಪ : ವೈಜ್ಞಾನಿಕವಾಗಿ ಗಣಿ ಇಲಾಖೆಯಿಂದ ಫಿಕ್ಸ್ ಮಾಡಿದ್ದೇವೆ. ಎಲ್ಲೆಲ್ಲಿ ಮರಳನ್ನು ಎತ್ತಬೇಕೆಂದು ನಿಗದಿ ಮಾಡಿದ್ದೇವು. ಅಲ್ಲಿ ಮಾತ್ರ ಮರಳನ್ನು ಎತ್ತುತ್ತಿದ್ದರು. ನೋಡಿ ತಾವು ಮಧ್ಯದಲ್ಲಿ disturb ಮಾಡಬೇಡಿ, ತಾವು ಆಮೇಲೆ ಮಾತನಾಡಿ. ಪುನಃ ಎರಡನೇ ಸಾರಿ ರಿಪೀಟ್ ಮಾಡುತ್ತೇನೆ. ಇವರು 2500 ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. 7 ಜಿಲ್ಲೆಗಳಲ್ಲಿ

ಕುಡಿಯುವ ನೀರಿಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಿದ್ದೀರಾ? ಇದು ಜ್ಞಾಪಕಕ್ಕೆ ಬಂತೇ? ಕೋಲಾರ, ಚಿಕ್ಕಬಳ್ಳಾಪುರದಿಂದ ಹಿಡಿದು ಚಿತ್ರದುರ್ಗ-ಚಿಕ್ಕಮಂಗಳೂರು ಹಿಡಿದು ಆಂಧ್ರ ಭಾಗಗಳಲ್ಲಿರುವಂತಹ ಗ್ರಾಮಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಇದಕ್ಕಾಗಿ ತಾವು ಶಾಶ್ವತವಾದಂತಹ ಕಾರ್ಯಕ್ರಮವನ್ನು ಕೊಡಬೇಕು. ಇವತ್ತು ನಾವು ಆ ಬಗ್ಗೆ ಬುನಾದಿಯನ್ನು ಹಾಕೋಣವೆನ್ನುವುದರ ಬಗ್ಗೆ ತಾವು ಯೋಚನೆ ಮಾಡಿದ್ದೀರಾ? ಡಾ:ಪರಮಶಿವಯ್ಯನವರು ಒಂದು ವರದಿಯನ್ನು ಕೊಟ್ಟರು. ಅವರು 10 ವರ್ಷಗಳ ಕಾಲ ಬಹಳ ಕಷ್ಟಪಟ್ಟು ಒಂದು ವರದಿಯನ್ನುಕೊಟ್ಟಿದ್ದಾರೆ. ಅದು ನಿಮಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪಾಪಾ ಅವರು ಕಾಲುನಡಿಗೆಯಲ್ಲಿ ಹೋಗಿದ್ದಾರೆಂದು ಒಂದು ಭಾಷಣದಲ್ಲೊ ಹೇಳಿದ್ದಾರೆ. ಅವರು ಒಂದು ಸವಾಲನ್ನು ಸಹ ಹಾಕಿದ್ದಾರೆ. 19 ಜನ ನಿವೃತ್ತ ಚೀಫ್ ಇಂಜಿನಿಯರ್ಸ್ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡಿರುವಂತಹವರು ಇದ್ದಾರೆ. ಸರ್ಕಾರ ಅವರದೊಂದು ಕಮಿಟಿ ಮಾಡಲಿ, ಅವರು ನಾವು ಎಲ್ಲಾ ಸೇರಿ pros and cons ಚರ್ಚೆ ಮಾಡೋಣ. ನಾವು ಮಾಡಿರುವಂಥ ಸಮೀಕ್ಷೆಯಲ್ಲಿ topo sheet ready ಮಾಡಿದ್ದೇವೆ. Topo sheet ನಲ್ಲಿ ಎಲ್ಲೆಲ್ಲಿ gravity ಇದೆ. ಎಲ್ಲೆಲ್ಲಿ ಲಿಫ್ಟ್ ಇರಿಗೇಶನ್ ಮಾಡಬೇಕೆನ್ನುವುದರಬಗ್ಗೆ ನಿಖರವಾಗಿ ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ಇಸ್ರೋಗೆ ದುಡ್ಡು ಕೊಡಿ ಎಂದು ಹೇಲಿ 5 ಕೋಟಿ ರೂಪಾಯಿಗಳನ್ನು ಶ್ರೀ.ಎಸ್.ಎಂ.ಕೃಷ್ಣ ಸರ್ಕಾರ ಕೊಟ್ಟಿದೆ. ನೀವು ಕೇವಲ ಇನ್ನು 15 ಕೋಟಿರೂ.ಗಳನ್ನು ಕೊಟ್ಟಿದೆ ಆ ವರದಿಯನ್ನು ತರಿಸಿ ಜನರ ಮುಂದಿರಿಸಿ. ಆ ವರದಿಯಲ್ಲಿರುವುದು ಇಷ್ಟಕ್ಕೆ ಸಾಧ್ಯವಾಗುತ್ತದೆಂದು ನೋಡುವುದನ್ನು ಬಿಟ್ಟು ಇದರಲ್ಲಿ ಇನ್ನೊಂದು ಒಳಸಂಚು ನಡೆದಿದೆ. ಯಾರೋ ಕೆ.ಸಿ.ರೆಡ್ಡಿಯವರ ಕಮಿಟಿಯನ್ನು ಮಾಡಿ ಅವರೊಂದು ವರದಿಯನ್ನು ಕೊಟ್ಟರು. ಅವರು ಕೋಲಾರ ಜಿಲ್ಲೆಯಲ್ಲಿ 4,224 ಕಐರೆಗಳಿದ್ದರೆ ಅದರಲ್ಲಿ 19 ಕೆರೆಗಳಿಗೆ ಭದ್ರಾ ನದಿಯಿಂದ Upper Bhadra ಆಥವಾ Lower Bhadra ಎನ್ನುವುದು ನನಗೆ ನಿಗಾ ಇಲ್ಲ. ಒಟ್ಟು ಭದ್ರಾ ನದಿಯಿಂದ 19 ಕೆರೆಗಳಿಗೆ ಮಾತ್ರ ನೀರು ಕೊಡುತ್ತೇವೆಂದು ವರದಿಯನ್ನು ಕೊಟ್ಟಿದ್ದಾರೆ, ಎಂಥಾ ಸಂಚು ನೋಡಿ, ಡಾ:ಪರಮಶಿವಯ್ಯನವರ ವರದಿಯ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲಿಕ್ಕೆ ಒಂದು ಸಂಚು ನಡೆಸಿದ್ದಾರೆ. ಇದರ ಮಧ್ಯೆ ಇಂಥ ಒಂದು ವ್ಯವಸ್ಥೆ ಕೂಡ ಜರುಗುತ್ತಿದೆ, ಅದೇನೇ ಇರಲಿ, ದಯಮಾಡಿ ನೀರಾವರಿ ಸಚಿವರಲ್ಲಿ ನಾನು ಪ್ರಾರ್ಥಿಸುತ್ತೇನೆ, ನೀವು ತಡ ಮಾಡಬೇಡಿ. ಮಠ ಮಾನ್ಯಗಳಿಗೆ 150 ಕೊಟಿ ರೂ.ಗಳನ್ನು ಕೊಡುತ್ತಾರೆ. ಅದು ಯೋಚನೆಯಲ್ಲಿಲ್ಲ, ಮತ್ತೊಂದರಲ್ಲಿಲ್ಲ. ಒಂದು ಕಡೆ ನಿಮ್ಮ ಆದಾಯ decline ಆಗುತ್ತಿದೆ, ನಿಮಗೆ ಬರುತ್ತಿರುವ sources 9-10 ಸಾವಿರ ಕೋಟಿ Revenue mobilization ಕಡಿಮೆಯಾಗುತ್ತಿದೆ. ಅದರಲ್ಲಿ ಅನುತ್ಪಾದನೆಯ ಕೆಲಸಗಳಿಗೆಲ್ಲಾ ಹಣ ಕೊಡುತ್ತಿದ್ದೀರಿ.

ಬಹುಶಃ ಇದು ಮುಂದಿನ ಪೀಳಿಗೆಗೆ ಣಿರು ಕೊಡುವುದಕ್ಕೆ ಒಂದು ವರದಿಯನ್ನು ಕೊಟ್ಟರೆ, ಆ ವರದಿಯ ಬಗ್ಗೆ ಸಮೀಕ್ಷೆ ತರಿಸಲಿಕ್ಕೆ 15.00 ಕೋಟಿ ರೂ.ಗಳನ್ನು ಸರ್ಕಾರದಿಂದ ಕೊಡಲಿಕ್ಕಾಗಲಿಲಗಲವೆಂದರೆ ಇದಕ್ಕಿಂಥ ಹೀನಾಯವಾದ ಕೆಲಸ ಇನ್ನೇನಿದೆ ಎಂದು ನನಗೆ ಅನ್ನಿಸುತ್ತಿದೆ. ಈ ಸರ್ಕಾರದ ಚಿಂತನೆ ಯಾವ ಕಡೆಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ದಯಮಾಡಿ ನಾನು ಈ ವಿಚಾರವಾಗಿ ಸರ್ಕಾರದಲ್ಲಿ ಮನವಿ ಮಾಡಲಿಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ನನಗೆ ಬಹಳ ಬೇಸರವಾಗಿಬಿಟ್ಟಿದೆ. ನಾನು ಒತ್ತಾಯ ಮಾಡುತ್ತೇನೆ, ಅವರಿಗೇನಾದರೂ ಮನಸ್ಸು ಇದ್ದರೆ ಏಳು ಜಿಲ್ಲೆಗಳಲ್ಲಿ ಇರುವಂಥ ಜನರ ಬಗ್ಗೆ ಕಾಳಜಿ ಇದ್ದರೆ ತಕ್ಷಣ ನಾಳೆಯೇ ಅವರು 15-20 ಕೋಟಿ ರೂಪಾಯಿಗಳನ್ನು ಕೊಡಬೇಕು. ಇಸ್ರೋ ಸಂಸ್ಥೆಯವರು ತಯಾರು ಮಾಡಿರುವ ವರದಿಯನ್ನು ತರಿಸಿ ಮುಂದಿನ ಅವದಿಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಬೇಕೆಂದು ನಾಣು ಈ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಛೇರ್ಮನ್: ಇದೊಂದು ಒಳ್ಳೆಯ ಸಲಹೆಯಾಗಿದೆ.

ಶ್ರೀ ವಿ.ಮುನಿಯಪ್ಪ : ಇನ್ನೊಂದು 2500 ಟಿ.ಎಂ.ಸಿ.ನೀರನ್ನು ಉಪಯೋಗಿಸಿಕೊಳ್ಳುವಂಥ ಒಂದು ದೊಡ್ಡ ಕಾರ್ಯಕ್ರಮವನ್ನು ಮುಂದೆ ಯೋಚನೆ ಮಾಢಿ ಸ್ವಾಮಿ. ಸ್ವಾತಂತ್ರ್ಯ ಬಂದ ಮೇಲೆ ನಾವು ಮಾಡಿರುವುದು ಕೇವಲ ಒಂದು ಸಾವಿರ ಟಿ.ಎಂ.ಸಿ.ನೀರಿಗೆ ಅಷ್ಟೇ. ಇನ್ನು ಎರಡೂವರೆ ಸಾವಿರ ಟಿ.ಎಂ.ಸಿ.ನೀರು ಇದ್ದು ಇಲ್ಲಿ ಕುಡಿಯಲಿಕ್ಕೆ ನೀರಿಲ್ಲವೆಂದು ನಾವು ಸಾಯುತ್ತಿದ್ದೇವೆಂದರೆ ಇದಕ್ಕಿಂತ ಶೋಚನೀಯವಾದಂಥ ವಿಚಾರ ಬೇರೊಂದಿಲ್ಲ. ದಯವಿಟ್ಟು ಇದಕ್ಕೆ ಕಾರ್ತಕ್ರಮವನ್ನು ರೂಪಿಸಬೇಕೆಂಬ ಮಾತನ್ನು ತಮ್ಮ ಮೂಲಕ ನೀರಾವರಿ ಮಂತ್ರಿಗಳಲ್ಲಿ ಒತ್ತಾಯ ಮಾಡಿ ಈ ವರದಿಯ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಲೇಬೇಕು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮುನಿಯಪ್ಪನವರು ವಿದ್ಯುಚ್ಛಕ್ತಿ ಮಂತ್ರಿಗಳಿಗೆ ಅನೇಕ ರೀತಿಯಾಗಿ ಚುಚ್ಚಿದ ಹಾಗೆ ಮಾತನಾಡಿದರೂ ಸಹ ಅವರು ಎದ್ದೇಳಲಿಲ್ಲ. ಅವರಿಗೆ ಶಾಕ್ ಹೊಡೆಯಲಿಲ್ಲ. ಅವರು ಹೇಳುತ್ತಿದ್ದಾರೆ ಸಾವಿರಾರು ಟಿ.ಎಂ.ಸಿ.ನೀರು ಸಮುದ್ರ ಪಾಲಾಗುತ್ತಿದ್ದು ನಮಗೆ ಕುಡಿಯಲಿಕ್ಕೆ ನೀರಿಲ್ಲವೆಂದು ಅವರು ಹೇಳುತ್ತಿದ್ದಾರೆ ಆದರೂ ನೀರಾಘರಿ ಸಚಿವರೂ ಕೂಡ ಸುಮ್ಮನೆ ಕುಳಿತಿದ್ದಾರೆ. ದಯಮಾಡಿ ಅವರು ಮಾತನಾಡಬೇಕು.

ಛೇರ್ಮನ್: ಅವರು ಅವರ ಸ್ಥಳಕ್ಕೆ ಹೋಗಿದ್ದಾರೆ. ಅವರು ಏನೋ ಉತ್ತರ ಹೇಳಲಿದ್ದಾರೆ.

ಶ್ರೀ ವಿ.ಮುನಿಯಪ್ಪ : ಊಟ ಇಲ್ಲದವರಿಗೆ ಊಟ ಕೊಡುತ್ತಿದ್ದೀರಿ. ಕಾಲುವೆ ಇದ್ದರೂ ಅಲ್ಲಿ ಇನ್ನೊಂದು ಕಾಲುವೆ ಕೇಳಿದರೆ ಕಾಲಿವೆಗಳ ಮೇಲೆ ಕಾಲುವೆಗಳನ್ನು ಮಾಡುತ್ತಿದ್ದೀರಿ. ನಿಮ್ಮ ನೀರಾವರಿ ಯೋಜನೆಯಲ್ಲಿ ಎಷ್ಟು ಕಾಲುವೆಗಳನ್ನು ಅನೌನ್ಸ್ ಮಾಡಿದ್ದೀರಿ. ಏಳು ಜಿಲ್ಲೆಗಳಲ್ಲಿರುವ ಜನಸಾಮಾನ್ಯರು ನಿಮಗೆ ಟ್ಯಾಕ್ಸ್

ಕೊಡುತ್ತಿಲ್ಲವೇ? ಹಾಗಾಗಿ ಅವರಿಗೆ ಸೂಕ್ತವಾಗಿ ಕೊಡಬೇಕಾದ ರಿಲೀಫ್ ಅನ್ನು ಕೊಡಬೇಕಲ್ಲವೇ?

ಛೇರ್ಮನ್: ಮುನಿಯಪ್ಪನವರೇ ನೀರಾವರಿ ಸಚಿವರು ಉತ್ತರ ಕೊಡಲಿಕ್ಕೆ ನಿಂತಿದ್ದಾರೆ.

ಶ್ರೀ ವಿ.ಮುನಿಯಪ್ಪ : ಆಯಿತು. ಉತ್ತರ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮುನಿಯಪ್ಪನವರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯ ಭಾಗ, ತುಮಕೂರಿನ ಕೆಲವು ಭಾಗ ಹಾಗೂ ಕೋಲಾರದ ಪೂರ್ಣ ಭಾಗ ಮತ್ತು ಬೆಂಗಳೂರು ಗ್ರಾಮೀಣ ಜಿಲ್ಲೆ. ಕೋಲಾರ ಅಂದರೆ ಚಿಕ್ಕಬಳ್ಳಾಪುರ ಪ್ರದೇಶವು ಸೇರಿದಂತೆ ಕುಡಿಯುವ ನೀರನ್ನು ಕೆರೆಗಳಿಗೆ ತುಂಬಿಸುವುದಕ್ಕೆ ಬಹಳ ದೊಡ್ಡ ಪ್ರಮಾಣದ ನದಿಯ ಪಾತ್ರ ಅಲ್ಲಿಲ್ಲ. ಸಣ್ಣಪುಟ್ಟ ಹಳ್ಳಗಳು ಅಲ್ಲಿರುವುದರಿಂದ ಅದಕ್ಕೆ ಒಂದು ಶಾಶ್ವತವಾದ ಪರಿಹಾರ ಕೊಡಬೇಕಾದರೆ ನಾವೊಂದು ಪ್ರಮುಖ ನಿರ್ಣಯ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಡಾ.ಪರಮಶಿವಯ್ಯನವರೇನು ಅಧ್ಯಯನ ಮಾಡಿದ್ದಾರೆ ಅದರ ಸಂಪೂರ್ಣವಾದ ವಿವರವನ್ನು ನಾನು ಪಡೆದುಕೊಂಡಿದ್ದೇನೆ. ಅವರ ಹತ್ತಿರ ಮೂರು ನಾಲ್ಕು ಬಾರಿ ಚರ್ಚೆ ಮಾಢಿದ್ದೇನೆ ಮತ್ತು ನಾವು ಏನು ಸೆಟಲೈಟ್ ಮೂಲಕ ಸಂಪೂರ್ಣವಾದಂಥ ಒಂದು ಪ್ರಾಜೆಕ್ಟ್ ರೆಪೋರ್ಟ್ ಅನ್ನು ತರಿಸಬೇಕೆಂದು ಹೇಳಿ ಏನು ತೀರ್ಮಾನಿಸಿದ್ದೇವೆ, ಅದಕ್ಕೆ ಬಾಕಿ ಇರುವಂಥ ಹಣವನ್ನು ಸಹ ಬಿಡುಗಡೆಗೊಳಿಸಲಿಕ್ಕೆ ಆದೇಶವನ್ನು ಮಾಡಿದ್ದೇನೆ. ಬಹಳ ಗಂಬೀರವಾಗಿ ಈ ವಿಚಾರವನ್ನು ನಾವು ಪರಿಗಣಿಸಿದ್ದೇವೆ. ಈ ಸರ್ಕಾರ ಬಂದ ಮೇಲೆ ನಮ್ಮ ಮುಖ್ಯ ಉದ್ದೇಶ, ವಿಶೇಷವಾಗಿ Central Karnataka ಎಂದು ನಾವೇನು ಕರೆಯುತ್ತೇವೆ ಈ ಭಾಗ ಕುಡಿಯುವ ನೀರಿನ ಕೊರತೆಯಿಂದ ಫ್ಲೋರೈಡ್ ಹೆಚ್ಚಳದಿಂದಾಗಿ ಇಲ್ಲಿನ ಜನರಿಗೆ ಆಗಿರುವ ನೋವನ್ನು ಶಬ್ಧಗಳಲ್ಲಿ ಹೇಳತೀರದು, ಅದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಆ ಹಿನ್ನೆಲೆಯಲ್ಲಿ ಇದು ಪ್ರಧಾನ ಮಂತ್ರಿಗಳ ಪ್ಯಾಕೇಜ್‌ನಲ್ಲಿಯೂ ಸಹ ಬಂದಿದೆ. Upper Bhadra ಗೆ ಕೂಡ ಇದಕ್ಕೆ ಕೆಲವು ಮಟ್ಟಿಗೆ ಚಿತ್ರದುರ್ಗದ ಜಿಲ್ಲೆಯಲ್ಲಿ ಪರಿಹಾರವನ್ನು ಒದಗಿಸಲಿಕೆಕ ಸಾಧ್ಯವಿದೆ, ಆದರೆ ತುಮಕೂರಿನ ಬಹುತ್ತೇಕ ಭಾಗ ಹಾಗು ಕೋಲಾರದ ಭಾಗಕ್ಕೆ ಆಗಬೇಕಾದರೆ ತಾವೇನು ಮೂರು ಸಾವಿರ ಟಿ.ಎಂ.ಸಿ.ನೀರಿನ ಬಗ್ಗೆ ಪ್ರಸ್ತಾಪಿಸಿದಿರಿ ಅದರಲ್ಲಿ ಎರಡು ಸಾವಿರ ಟಿ.ಎಂ.ಸಿ.ನೀರು Western Ghat ನಲ್ಲಿ ಬಂದು ಪಶ್ಚಿಮವಾಹಿನಿಯಲ್ಲಿ ಹರಿದು ಅಲ್ಲೇ ಸಮುದ್ರ ಸೇರುವಂತದ್ದು ಎರಡು ಸಾವಿರ ಟಿ.ಎಂ.ಸಿ.ನೀರಿದೆ. ಇದರಲ್ಲಿ ಪಶ್ಚಿಮ ಘಟ್ಟದ ಕೆಳಗಿರುವಂಥ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೂ ಏನೂ ಉಪಯೋಗವಾಗುತ್ತಿಲ್ಲ. ಅದಕ್ಕೊಂದು ಯೋಜನೆಯನ್ನು ರೂಪಿಸಿದ್ದೇವೆ. ಅದೇ ರೀತಿ ನಮ್ಮ ಬುಲು ಸೀಮೆಗೆ ತಂದು ಕನಿಷ್ಠ ಕುಡಿಯುವ ನೀರಿಗಾದರೂ

ಮಾಡಬೇಕೆನ್ನುವ ತಮ್ಮ ಕಳಕಳಿಯನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಇದನ್ನು ಹಿಂದಿನ ಸರ್ಕಾರದಲ್ಲೇ ಮಾಡಿದ್ದಾರೆ ಇಷ್ಟೊತ್ತಿಗೆ ಈ ಭಾಷಣ ಮಾಡುವಂಥ ಅವಶ್ಯಕತೆ ಇರುತ್ತಿರಲಿಲ್ಲ. ಮುನಿಯಪ್ಪನವರಿಗೆ ಇರುವ ಈ ಕಳಕಳಿ, ಈ ನೋವು ಏನಿದೆ. ನೀವು ಐದು ವರ್ಷ ಸುದೀರ್ಘವಾಗಿ ಸರ್ಕಾರದಲ್ಲಿದ್ದಿರಿ. ಆಗಲೇ ಡಾ.ಪರಮಶಿವಯ್ಯನವರ ವರದಿಯನ್ನು ಕೊಟ್ಟಿದರೆ, ಆಗ ನೀವು ಇದನ್ನು ಅನುಷ್ಠಾನಗೊಳಿಸಿದ್ದರೆ ಬಹುತೇಕವಾಗಿ ಈ ಭಾಷಣವನ್ನು ನೀವು ಮಾಡುವಂಥ ಪ್ರಸಂಗ ಈಗ ಬರುತ್ತಿರಲಿಲ್ಲ. ಒಂದು ನಿಮಿಷ, ಈಗ ನೀವು ಹೇಳುವುದನ್ನು ಹೇಳಿದ್ದೀರಿ, ಈಗ ನಾನು ಹೇಳಬೇಕಲ್ಲವೇ? ಅದೇನೇ ಇರಲಿ, ಅದು ಮುಖ್ಯವಲ್ಲ, ಈಗ ನಾವು ನೀವು ಸೇರಿ ಇದರಲ್ಲಿ ಪಕ್ಷಾತೀತವಾಗಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಸಾಮಾನ್ಯವಾಗಿ ನೀರಾವರಿ ಯೋಜನೆ ಹಾಗೂ ಕುಡಿಯುವ ನೀರಿನ ಯೋಜನೆ, ನೀರಿನ ವಿಷಯ ಬಂದಾಗ ರಾಜಕಾರಣ ಬೆರೆತರೆ ಅದು ಯುಗ ಯುಗಗಳು ಕಳೆದರೂ ಅದಕ್ಕೆ ಪರಿಹಾರ ಸಿಗುವುದಿಲ್ಲ. ರಾಕೀಯ ಸೋಂಕಿಲ್ಲದೇ ಕೆಲವು ಪಕ್ಷಾತೀತವಾದ ನಿಲುವುಗಳನ್ನು, ನಿರ್ಣಯಗಳನ್ನು ರಾಜ್ಯದ ಹಿತದೃಷ್ಟಿಯಿಂದ ವಿಶೇಷವಾಗಿ ಬರಪೀಡಿತ ಜನಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಆ ವರದಿ ಬಂದ ಮೇಲೆ ನಾನು ಅದನ್ನು ಅಸೆಂಬ್ಲಿಯಲ್ಲಿ ಇಡುತ್ತೇನೆ. ಸುದೀರ್ಘವಾಗಿ ಚರ್ಚೆಯಾಗಲಿ, ನನ್ನ ಉದ್ದೇಶವಿಷ್ಟೇ ಈ ವಿಷಯದಲ್ಲಿ, ಯಾವ ರೀತಿ ನಾವು ನಮ್ಮ ಗಡಿ ವಿಷಯದಲ್ಲಿ ಮತ್ತು ನಮ್ಮ ಕೃಷ್ಣಾ ಕಾವೇರಿ ವಿಷಯದಲ್ಲಿ ಒಂದಾಗಿ unanimous resolution ಮಾಡಿದೆವು. ಅದೇ ರೀತಿ ಈ ನಮ್ಮ ಆಂತರಿಕ ಕುಡಿಯುವ ನೀರಿನ ಮೂಲಭೂತ ಹಕ್ಕೇನಿದೆ ಅದನ್ನು ನಮ್ಮ ಜನರಿಗೆ ಕೊಡಲು ನಾವೆಲ್ಲ ಒಗ್ಗಟ್ಟಾಗಿದ್ದೇವೆಂಬ ಸಂದೇಶವನ್ನು ಈ ಸದನದ ಮೂಲಕ ಇಡೀ ರಾಜ್ಯಕ್ಕೆ ಕಳುಹಿಸುವಂಥ ದಿನ ಬರುತ್ತದೆ. ಅದಕ್ಕೆ ನಾನು ಎಲ್ಲಾ ಸಿದ್ಧತೆಯನ್ನು ಮಾಡಿ ನಿಮ್ಮ ಮುಂದಿಡುತ್ತೇನೆ, ಸುದೀರ್ಘವಾಗಿ ಇದರ ಸಾಧಕಬಾಧಕಗಳ ಬಗ್ಗೆ ಚರ್ಚೆ ಮಾಡೋಣ. ಒಗ್ಗಟ್ಟಾಗೆ ಎರಡು ಸದನದಲ್ಲಿ ನಿರ್ಣಯ ಮಾಡೋಣ ಅದನ್ನು ಅನುಷ್ಠಾನಗೊಳಿಸಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸಚಿವರ ಉತ್ತರದಿಂದ ನಮಗೆ ಸ್ವಲ್ಪ ಸಮಾದಾನವಾಗಿದೆ. ನಮ್ಮ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗಲೇ ಅದನ್ನು ISRO ಗೆ ರೆಫರ್ ಮಾಡಿದ್ದಯ. ರೆಫರ್ ಮಾಡಿ 5 ವರ್ಷಗಳಾದರೂ ಕೂಡ ಇದುವರೆಗೂ ಒಂದು ಪ್ರಾಥಮಿಕವಾದ ವರದಿ ಕೂಡ ಬರಲಿಲ್ಲ. ನನಗೆ ಗೊತ್ತಿರುವ ಪ್ರಕಾರ ಇದಕ್ಕೆ ನಾಲ್ಕೈದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. At least, topo sheet ಮೇಲೋ, ಅಥವಾ ಯಾವುದೋ ರೀತಿಯಲ್ಲಿ ಒಂದು preliminary report ಅನ್ನು ತರಿಸಿ ಆಮೇಲೆ ಡೆವಲಪ್ ಮಾಡುವಂಥ ಕೆಲಸವನ್ನು ಮಾಡಬಹುದಿತ್ತು. ದಯಮಾಡಿ ತಾವು ಈಗ ಹಣವನ್ನು ಬಿಡುಗಡೆಗೊಳಿಸಲಿಕ್ಕೆ ಆದೇಶವನ್ನು ಮಾಡಿದ್ದೀರಿ ಎಂದು ಹೇಳಿದಿರಿ, ಬಹಳ ಸಂತೋಷ. ಅದು ಎಷ್ಟು

ದಿವಸಗಳಲ್ಲಿ ಅದರ ಅಂತಿಮ ವರದಿಯನ್ನು ತರಿಸಲಿಕ್ಕೆ ಸಾಧ್ಯವಾಗುತ್ತದೆ? ಏಕೆಂದರೆ ಆ ವರದಿ ಇಲ್ಲದೆ ನಾವ್ಯಾರೂ ಏನನ್ನೂ ಮೂವ್ ಮಾಡಲಿಕ್ಕಾಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಛೇರ್‌ಮನ್‌ರವರೇ, ಈಗಾಗಲೇ ಸಂಬಂಧಪಟ್ಟವರಿಗೆ ಹೇಳಿದ್ದೇನೆ. interim report ಆದರೂ ನೀವು ಕೊಡಿ ಎಂದು ಅವರು ಅಂತಿಮ ವರದಿ ಕೊಡುತ್ತೇವೆ ಎಂದರೂ ನಾವು ಒಪ್ಪಿಲ್ಲ. interim report ಕೊಡಿ, ನಂತರ ಬಾಕಿ ಹಣವನ್ನು ನಾವು ಬಿಡುಗಡೆ ಮಾಡುವುದಕ್ಕೆ ಸಿದ್ಧರಿದ್ದೇವೆ ಎನ್ನುವುದನ್ನು ಹೇಳಿದ್ದೇನೆ. ಅವರು ಅದಷ್ಟು ಬೇಗನೆ ಕೊಡುತ್ತೇವೆ ಎಂದು ಹೇಳಿದ್ದಾರೆ. interim report ಬಂದ ತಕ್ಷಣವೇ ಅದನ್ನು ಎಲ್ಲರಿಗೂ circulate ಮಾಡುತ್ತೇವೆ. ಆದರೆ, ಅದಷ್ಟೇ ಅಲ್ಲದೆ ಅದನ್ನು ಮೀರಿ ಕೂಡ ಕೆಲವು ವಿಚಾರಗಳು ಇವೆ. ಅದಕ್ಕೆ ಸಮಗ್ರವಾದ ತಾಂತ್ರಿಕ ಸಲಹೆಯನ್ನು ಪಡೆದುಕೊಂಡು, ಒಟ್ಟಾರೆ ಡಾ.ಪರಮಶಿವಯ್ಯನವರ ವರದಿಯನ್ನು ಮೂಲಭೂತವಾಗಿ ಇಟ್ಟುಕೊಂಡು, ಆಧುನಿಕ ತಂತ್ರಜ್ಞಾನ ಮತ್ತು ಆ ವರದಿ ಇವೆಲ್ಲವನ್ನೂ ಸೇರಿ ನಾನು ತಮ್ಮ ಮುಂದೆ ವಿಚಾರವನ್ನು ಹಂಚಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಛೇರ್‌ಮನ್‌ರವರೇ, ಮಾನ್ಯ ಮುನಿಯಪ್ಪನವರು ಎಷ್ಟು ಕಷ್ಟಪಟ್ಟಿದ್ದಾರೆ ಎನ್ನುವುದು ನಿಮಗೂ ಗೊತ್ತಿದೆ. ಈಗ ತಾವು ಹೇಳಿರತಕ್ಕಂಥಾದ್ದು ನನಗೆ ಅರ್ಥವಾಗುತ್ತದೆ. ಈಗ NRSI ವರದಿ ಬರುವುದು ಒಂದು ಕಡೆಯಾಗುತ್ತದೆ. ಆಧುನಿಕವಾಗಿರುವಂಥ ತಂತ್ರಜ್ಞಾನವನ್ನು ಬಳಸಿಕೊಂಡು, ಪರ್ಯಾಯವಾಗಿ ಬೇರೆ ವಿಚಾರಗಳೂ ಕೂಡ ಇದೆ ಎನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ. ಅದರ ಬಗ್ಗೆ ಕೂಡ ಇವತ್ತು ಚರ್ಚೆ ಮಾಡುವುದಕ್ಕೆ ದಯಮಾಡಿ ಶಾಸಕರೆಲ್ಲರ ಸಭೆಯನ್ನು ಕರೆಯಿರಿ. ತುಮಕೂರು, ಕೋಲಾರ, ಚಿತ್ರದುರ್ಗ ಈ ಭಾಗಗಳಿಗೆ ಏನು ನೀರು ಪಶ್ಚಿಮ ಘಟ್ಟದಿಂದ ಬರಬೇಕು ಎಂದು ಕಾತುರರಾಗಿದ್ದಾರಲ್ಲಾ, ಎವರನ್ನು ಕೂಡ ಕರೆದು ಸಭೆ ಮಾಡಿ. ನೀವು ಅಮೇರಿಕನ್ ಕಂಪನಿಗಳ ಜೊತೆ ಚರ್ಚೆ ಮಾಡಿರುವುದು ನನಗೆ ಗೊತ್ತಿದೆ. ದಯಮಾಡಿ ಅವರನ್ನು ಕರೆಯಿರಿ. ಆದರೆ, ಮೂಲತಃ ನಾನು ಅರ್ಥ ಮಾಡಿಕೊಂಡಿರುವುದೇನೆಂದರೆ, ಮಾನ್ಯ ಟಾ.ಪರಮಶಿವಯ್ಯನವರು ಕೊಟ್ಟಿರುವಂಥ ವರದಿ ಮತ್ತು NRSI ಯಿಂದ ಬರುತ್ತಿರುವ ವರದಿಗೂ, ಇವರು ಕೊಡುತ್ತಿರುವ ವರದಿಗೂ ಭಿನ್ನವಾಗಿದೆ. ಇದರಲ್ಲಿ ಯಾವುದೇ ರೀತಿಯಲ್ಲಾ ಪರಿಸರಕ್ಕೆ ಹಾನಿಯಾಗದೇ ಇರುವ ರೀತಿಯಲ್ಲಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಒಂದು ಸಾರಿ ಅಲ್ಲ ನಾಲ್ಕು-ಐದು ಸಾರಿ ಈ ವರದಿ ಬಂತು.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಛೇರ್‌ಮನ್‌ರವರೇ, ವರದಿ ಇಲ್ಲದೇ ಚರ್ಚೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ಮಾನ್ಯ ಜುಚಂದ್ರರವರೇ, ತಮಗೆ ಗೊತ್ತಿದೆ. ನೀವು ಹಲವಾರು ತಜ್ಞರ ಜೊತೆಗೆ ಚರ್ಚೆ ಮಾಡಿದ್ದೀರಿ, ನಾವು ಚರ್ಚೆ ಮಾಡಿದ್ದೇವೆ. ಏನೇ ಮಾತನಾಡಿದರೂ ಕೂಡ ವರದಿಯನ್ನು ಇಟ್ಟುಕೊಂಡು,

specific ಆಗಿ recommendation ಅನ್ನು ಇಟ್ಟುಕೊಂಡು, ತಾಂತ್ರಿಕವಾದ recommendation ಇಟ್ಟುಕೊಂಡು, ನಾವು ಅದನ್ನು ಚರ್ಚೆ ಮಾಡಿದರೆ ಅರ್ಥಪೂರ್ಣವಾಗುತ್ತದೆ. hear and say ನಲ್ಲಿ ವರದಿಯನ್ನು ಚರ್ಚೆ ಮಾಡಿದರೆ, ಅದಕ್ಕೆ ಗಾಂಭೀರ್ಯತೆ ಬರುವುದಿಲ್ಲ. ಆ ಹಿನ್ನೆಲೆಯಲ್ಲಿ ಇವೆಲ್ಲವೂ ಬಂದ ಕೂಡಲೇ ನಿಮ್ಮೆಲ್ಲರ ಜೊತೆ ಹಂಚಿಕೊಳ್ಳುತ್ತೇನೆ. ಅದರಲ್ಲಿ ಎರಡನೇ ಮಾತಿಲ್ಲ. ಅದಷ್ಟು ಬೇಗನೆ ಆ ಕೆಲಸ ಮಾಡುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್ : ಮಾನ್ಯ ಛೇರ್ಮನ್‌ರವರೇ, ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಅದಕ್ಕೆ ಪೂರಕವಾಗಿ ನಾನು ಮಾತನಾಡುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸಚಿವರು ಕೂಡ ಪಶ್ಚಿಮವಾಹಿನಿ ಬಗ್ಗೆ ಯೋಚನೆ ಮಾಡಿದ್ದೀರಿ. 13 ನದಿಗಳು, ಕೃಷ್ಣೆಯಲ್ಲಿ ಹರಿದುಹೋಗುವಂಥ ನೀರು 1200 ಟಿ.ಎಂ.ಸಿ.ದಾಖಲೆಯಲ್ಲಿ ಹರಿದು ಹೋಗುವಂಥ ನೀರು, 800 ಟಿ.ಎಂ.ಸಿ. ಒಟ್ಟು 2000 ಟಿ.ಎಂ.ಸಿ. ನೀರಿನ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಪಶ್ಚಿಮ ಕರಾವಳಿ ಜಿಲ್ಲೆಯ 13 ನದಿಗಳಲ್ಲಿ, 2000 ಟಿ.ಎಂ.ಸಿ.ಯಷ್ಟು ನೀರು ಸಮುದ್ರಕ್ಕೆ ಸೇರುತ್ತಿದೆ. ಎರಡೂವರೆ ಪರ್ಸೆಂಟ್‌ನಷ್ಟು ನೀರನ್ನು ಉಪಯೋಗ ಮಾಡುತ್ತಿಲ್ಲ. ಈ ಬಗ್ಗೆ ಪಶ್ಚಿಮವಾಹಿನಿಗೆ ಸಂಬಂಧಿಸಿದಂತೆ, ಅಲ್ಲಲ್ಲಿ ಚೆಕ್ ಡ್ಯಾಮ್‌ಗಳನ್ನು ಹಾಕಿಕೊಂಡು ಬಂದಿದ್ದಾರೆ. ಸೌಭಾಗ್ಯ ಸಂಜೀವಿನಿ ಎಂದು ಹೇಳುವ ಇನ್ನೊಂದು ಯೋಜನೆಯನ್ನು ಯಾವ ರೀತಿ ಅನುಷ್ಠಾನಕ್ಕೆ ತರಬಹುದು ಎಂದು ಹೇಳುವುದಾದರೆ, ಸಮಗ್ರವಾದ ಮಾಹಿತಿಗಳನ್ನು ಸರ್ಕಾರದ ಗಮನಕ್ಕೆ ತಂದು, ನಮ್ಮ ಕಡೆಯಿಂದ ಡೀಸಲ್‌ಅನ್ನು, ಪೆಟ್ರೋಲಿಯಂ ಪ್ರಾಡಕ್ಟ್ಸ್‌ಅನ್ನು ಪೈಪ್‌ಲೈನ್‌ನಿಂದ ಕಳುಹಿಸುವುದಕ್ಕೆ ಸಾಧ್ಯವಾಗುತ್ತಿದೆ. ಈ ಕಡೆಯಿರುವಂಥ ಹೆಚ್ಚುವರಿ ನೀರನ್ನು ಕೊಡುವುದಕ್ಕೆ ಖಂಡಿತವಾಗಿ ಯಾವ ಸಮಸ್ಯೆಯಾಗುವುದಿಲ್ಲ. ಹೆಚ್ಚು ಖರ್ಚಿಲ್ಲದೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರಕ್ಕೆ ಇಚ್ಛಾಶಕ್ತಿ ಬೇಕು. ತಾವು ಅನುಮೋದನೆ ಕೊಟ್ಟರೆ ಖಂಡಿತವಾಗಿ ನಾವು ಸಾಕಷ್ಟು ವಿವರಗಳನ್ನು ಕೊಡುತ್ತೇವೆ. ಪಶ್ಚಿಮವಾಹಿನಿ ಮತ್ತು ಸೌಭಾಗ್ಯ ಸಂಜೀವಿನಿ ಮೂಲಕ, ಕೇವಲ ಕರಾವಳಿ ಪ್ರದೇಶಕ್ಕೆ ಮಾತ್ರವಲ್ಲ, ಅನೇಕ ಜಿಲ್ಲೆಗಳಿಗೆ ನೀರುಣಿಸುವಂತಹ ಶಕ್ತಿ ನಮ್ಮ 13 ನದಿಗಳಿಗಿದೆ. 2000 ಟಿ.ಎಂ.ಸಿ.ಯಲ್ಲಿ ಎರಡೂವರೆ ಪರ್ಸೆಂಟ್ ಇದ್ದದನ್ನು, ಕನಿಷ್ಠ 10 ಪರ್ಸೆಂಟನ್ನಾದರೂ utilize ಮಾಡುವುದಕ್ಕೆ ಸಾಧ್ಯವಾದರೆ ಅನೇಕ ಸಮಸ್ಯೆಗಳು ಬಗೆಹರಿಸಲ್ಪಡುತ್ತವೆ.

ಶ್ರೀ ಬಸವರಾಜ ಬೊಮ್ಮಾಯಿ : ನೇರವಾಗಿ ಹೇಳಬೇಕೆಂದರೆ, ಸೌಭಾಗ್ಯ ಸಂಜೀವಿನಿಗೆ ಈಗಾಗಲೇ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿ ಸರ್ವೆ ಕಾರ್ಯವನ್ನು ಮಾಡಿಸುವುದಕ್ಕೆ ಪ್ರಾರಂಭ ಮಾಡುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ,

ಉಡುಪಿ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ, ಇಲ್ಲಿ ಪಶ್ಚಿಮವಾಹಿನಿಗೆ ಹರಿಯುವಂಥಹ ನದಿಗಳಿಗೆ, ಆಂತರಿಕವಾಗಿ ನದಿಗಳನ್ನು ಜೋಡಣೆ ಮಾಡುವ ಮುಖಾಂತರ ಯಾವರೀತಿ utilization ಹೆಚ್ಚಿಗೆ ಮಾಡಿಕೊಳ್ಳಬಹುದು ಎನ್ನವುದರ ಬಗ್ಗೆ ಈಗಾಗಲೇ ಸರ್ಕಾರದ ಮುಂದೆ ಪ್ರಾಸಾವನೆ ಇದೆ. ಈಗಾಗಲೇ, ಎರಡು ಕೋಟಿ ರೂಪಾಯಿಗಳನ್ನು ಸರ್ವೆಗೆ ಇಟ್ಟುಕೊಂಡಿದ್ದೇವೆ. ಅದು ಬಂದ ತಕ್ಷಣ ಅದಕ್ಕೂ ಕೂಡ ಕಾರ್ಯಕ್ರಮವನ್ನು ರೂಪಿಸುತ್ತೇವೆ. ಮೊದಲು ಈ ಕೆಲಸವನ್ನು ಮಾಡುತ್ತೇವೆ.

ಶ್ರೀ ವಿ.ಮುನಿಯಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯೋಗೇಶ್ ಭಟ್‌ರವರು ಹೇಳಿದ ಹಾಗೆ, ಬಹಳ ಸಂತೋಷ: 2000 ಟಿ.ಎಂ.ಸಿ.ನೀರು ವ್ಯರ್ಥವಾಗಿ ಸಮುದ್ರ ಸೇರುತ್ತಿದೆ. ಇಡೀ ಏಳು ಜಿಲ್ಲೆ ಜನ ಕೇಳುತ್ತಿರುವುದು ಏನೇಂದರೆ ಕೇವಲ 150 ರಿಂದ 200 ಟಿ.ಎಂ.ಸಿ. ನೀರು ತಾವು ಏನು ಸಲಹೆ ಕೊಟ್ಟಿದ್ದೀರಿ, ಅಷ್ಟೇ ನಮಗೆ ಬೇಕಾಗಿರುವುದು, ಅದರ ಮೇಲೆ ನಮಗೆ ನೀರನ್ನು ಕೊಟ್ಟರೂ ಅದು ನಮಗೆ ಬೇಕಾಗಿಲ್ಲ. 2000 ಟಿ.ಎಂ.ಸಿ. ನೀರು ವ್ಯರ್ಥವಾಗಿ ಪಶ್ಚಿಮಘಟ್ಟಗಳ ಮುಖಾಂತರ ಸಮುದ್ರ ಸೇರುತ್ತಿದೆ. ಕೇವಲ 200 ಟಿ.ಎಂ.ಸಿ. ನೀರಿಗೆ ಮಾತ್ರ ನಾವು ಒತ್ತಾಯ ಮಾಡುತ್ತಿದ್ದೇವೆ. ಅದಕ್ಕೆ ಆದ್ಯತೆಯನ್ನು ಕೊಡುವಂತಹ ಕೆಲಸವಾಗಬೇಕು. ಇವತ್ತು ಏನು ಆಶ್ವಾಸನೆ ಕೊಟ್ಟಿದ್ದೀರಿ, ಡಾ.ಪರಮಶಿವಯ್ಯನವರ ವರದಿ ಪ್ರಕಾರ, ತಕ್ಷಣ ದುಡ್ಡನ್ನು ಕೊಡಿ ಸ್ವಾಮಿ, nterim report ಆ report ಇವೆಲ್ಲಾ ಬೇಡ. ನೀವು ತಕ್ಷಣ ಹಣವನ್ನು ಪಾವತಿಸಿ, report ತರಿಸಿಕೊಂಡು ನಂತರ ಚರ್ಚೆ ಮಾಡಿ. ಆ ಭಾಗದ ಶಾಸಕರನ್ನು ಕರೆಸಿ, ಚರ್ಚೆ ಮಾಡಿ, ಅದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಿರಿ. ಮುಂದಿನ ಪೀಳಿಗೆಗೆ ಇದು ಅನುಕೂಲವಾಗಬೇಕು. ಏಳು ಜಿಲ್ಲೆಯ ಮುಂದಿನ ಪೀಳಿಗೆಯ ಭವಿಷ್ಯ ಇದು. ತಾವು ದಯಮಾಡಿ ಇದಕ್ಕೆ ಆದ್ಯತೆ ನೀಡಬೇಕು. ನೀರಾವರಿ ಇಲಾಖೆಗೆ ನನ್ನ ಒತ್ತಾಯವಿರುವುದು ಏನೆಂದರೆ ....

ಉಪಾಧ್ಯಕ್ಷರು : ಮಾನ್ಯ ಮುನಿಯಪ್ಪನವರೇ, ಬೇಗ ಮುಗಿಸಿ, ಇನ್ನು ಬಹಳಷ್ಟು ಜನ ಮಾತನಾಡುವವರು ಇದ್ದಾರೆ.

ಶ್ರೀ ವಿ.ಮುನಿಯಪ್ಪ : ಸ್ವಾಮಿ ಇದು ಬಹಳ ಪ್ರಾಮುಖ್ಯವಾದಂಥ ವಿಚಾರ, ನೀರಾವರಿ ಇಲಾಖೆ ಬಗ್ಗೆ ನಾನು ಮಾತನಾಡುಲೇ ಬೇಕು. ಮಾತನಾಡುವವರು ಇದ್ದರೆ ನಾಳೆ ಮಾತನಾಡಲಿ, ಇಲ್ಲದಿದ್ದರೆ ಅಧಿವೇಶನವನ್ನು ಶನಿವಾರಕ್ಕೆ extend ಮಾಡಿ.

ಉಪಾಧ್ಯಕ್ಷರು : ಆ ಪ್ರಶ್ನೆ ಬರುವುದಿಲ್ಲ. ಬೇಗ ಮುಗಿಸಿ.

ಶ್ರೀ ವಿ.ಮುನಿಯಪ್ಪ : Extend ಮಾಡುವ ಹಾಗಿದ್ದರೆ ಮಾಡಿ. ಒಂದು ದಿವಸ extend ಮಾಡಿದರೆ ಏನು ಆಗುವುದಿಲ್ಲ. ನಾವೆಲ್ಲಾ ಇಲ್ಲೇ ಇದ್ದೇವೆ. ಒಂದು ವಿಚಾರವೇನೆಂದರೆ, ನಾನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಆಂಧ್ರದಲ್ಲಿ

ಒಂದು ಲಕ್ಷ ಹದಿನೈದು ಸಾವಿರ ಕೋಟಿ ರೂಪಾಯಿಳ ಜಲಯಜ್ಞ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ನೀವು ಕನಿಷ್ಠ 10 ಸಾವಿರ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಕೊಡುವಂಥಹ ಕೆಲಸವನ್ನು ಮುಂಧಿನ ಬಜೆಟ್ನಲ್ಲಿ ಮಾಡಿ.ಇವತ್ತು ಮೂರು ಸಾವಿರ ಕೋಟಿಗಳನ್ನು ಇಟ್ಟಿದ್ದೀರಿ, ಹತ್ತು ವರ್ಷಗಳಿಂದ ಒಂದೂವರೆ ಸಾವಿರ ಕೋಟಿಗೆ ಏನು ಕೆಲಸವಾಗುತ್ತಿತ್ತೋ, ಇವತ್ತು ಅಷ್ಟೂ ಆಗುವುದಿಲ್ಲ. 25 ರಿಂದ 30% ಮಾಡಿದರೆ ಮಾತ್ರ ಕೆಲಸವಾಗುತ್ತದೆ. ಎಲ್ಲಾ S.R. rates high pitchಗೆ ಹೋಗಿದೆ. ನೀವು ಆ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಕನಿಷ್ಠ ಹತ್ತು ಸಾವಿರ ಕೋಟಿ ಹಣವನ್ನು ಪ್ರತಿ ವರ್ಷ ನೀರಾವರಿಗೆ minimum ಆಗಿ ಇಡಬೇಕು. ಇಟ್ಟರೆ ಮಾತ್ರ ಶಾಶ್ವತವಾದ ನೀರಾವರಿ ಕಾರ್ಯಕ್ರಮಗಳನ್ನು ಮುಂದುವರೆಸುವುದಕ್ಕೆ ಸಾಧ್ಯವಾಗುತ್ತದೆ. 2000 ಟಿ.ಎಂ.ಸಿ. ನೀರಲ್ಲಿ ಕನಿಷ್ಠ ಇನ್ನೂ 500 ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ, ಆ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ. ಸಣ್ಣ ನೀರಾವರಿ ಬಗ್ಗೆ ಹೇಳಬೇಕಾದರೆ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಇದ್ದಾರೆ ಎಂದು ಕಾಣುತ್ತದೆ. ನಮ್ಮ ಭಾಗಕ್ಕೆ ಸಣ್ಣ ನೀರಾವರಿ ಸಧ್ಯಕ್ಕೆ ಬಹಳ ಪ್ರಮುಖವಾದಂಥಾದ್ದು. ನಾವು ಅದರ ಮೇಲೆ ಆಧಾರವಾಗಿದ್ದೇವೆ. ನಮಗೆ ಇವತ್ತಿನವರೆಗೂ ಯಾವುದೂ ನದಿ-ನಾಲೆ ಇಲ್ಲ. ಮಾನ್ಯ ಬೊಮ್ಮಾಯಿ ಸಾಹೇಬರು ನಮ್ಮ ಕಡೆ ನದಿ-ನಾಲೆ, ಕಾಲುವೆ ತೋಡಿಸಿದರೆ ಅನುಕೂಲವಾಗುತ್ತದೆ. ಬಹುಶ: ಡಾ: ಸರ್.ಎಂ.ವಿಶ್ವೇಶ್ವರಯ್ಯನವರನ್ನು ಮಂಡ್ಯ ಜಿಲ್ಲೆಯಲ್ಲಿ ಪೂಜೆ ಮಾಡುತ್ತಿದ್ದಾರೋ, ಅದೇ ರೀತಿ ನಮ್ಮ ಜನರು ನಿಮ್ಮನ್ನು ಜ್ಞಾಪಕ ಮಾಡಿಕೊಳ್ಳುತ್ತಾರೆ. ಅದಕ್ಕೆ ಏನದರೂ ಬುನಾದಿಯನ್ನು ಹಾಕಿ. ಪ್ರಯತ್ನ ಮಾಡಿ ನೋಡೋಣ. ನಿಮಗೆ ಅಲ್ಲಿಯವರೆಗೆ ನಾವು ಅವಕಾಶ ಮಾಡಿಕೊಡುತ್ತೇವೆ. ನಮಗೆ ನೀರು ಕೊಟ್ಟವನು ದೊಡ್ಡಪ್ಪ ಅಷ್ಟೆ, ದುಡ್ಡನ್ನು ಕೊಟ್ಟವನು ದೊಡ್ಡಪ್ಪ ಹೇಗೋ ಹಾಗೆ ನಮಗೆ ನೀರು ನಮಗೂ ನೀರು ಕೊಟ್ಟವನು ದೊಡ್ಡಪ್ಪ ಅಷ್ಟೆ ನಮಲ್ಲಿ ನೀರಿಗೆ ಅಷ್ಟು ಪ್ರಾಮುಖ್ಯತೆ ಇದೆ. ದುಡ್ಡು ಬೇಕಾದರೆ ಸಿಗುತ್ತದೆ, ಆದರೆ ನೀರು ಸಿಗುವುದಿಲ್ಲ, ಆ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದ್ದರಿಂದ, ನೀರಿನ ಮಹತ್ವವನ್ನು ಅರ್ಥ ಮಾಡಿಕೊಂಡು ಇದಕ್ಕೆ ಶಾಶ್ವತವಾದ ನೀರಾವರಿ ಕಾರ್ತಕ್ರಮಕ್ಕೆ ಒತ್ತು ಕೊಡಿ. ನಾವು ಒತ್ತಾಯ ಮಾಡುತ್ತಿರುವುದು ಕುಡಿಯುವ ನೀರಿಗೆ, ಬೇರೆ ಯಾವುದಕ್ಕೂ ಅಲ್ಲ. ಇದು ಇನ್ನೊಂದು ಕಡೆಗೆ ತಮ್ಮ ಗಮನದಲ್ಲಿರಲಿ. ಅದರ ಜೊತೆಗೆ, ಕೊಳವೆ ಬಾವಿಗಳು ಚಾರ್ಜ್ ಆಗುತ್ತದೆ, ಅಂತರ್ಜಲ ಜಾಸ್ತಿಯಾಗುತ್ತದೆ. ನಮ್ಮ ವ್ಯವಸಾಯವನ್ನು ನಮ್ಮ ಪಾಡಿಗೆ ನಾವು ಮಾಡಿಕೊಳ್ಳುತ್ತೇವೆ. ನಮ್ಮ ಕೆರೆಗಳಿಗೆ ಕುಡಿಯುವ ನೀರನ್ನು ವರ್ಷಕ್ಕೆ ಎರಡು ಸಾರಿ ತುಂಬಿಸಿಕೊಟ್ಟರೆ ಸಾಕು. ಅಷ್ಟನ್ನೇ ನಾವು ಒತ್ತಾಯ ಮಾಡುವುದು. ಕನಿಷ್ಠ 10 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ನೀವು ಬಜೆಟ್‌ನಲ್ಲಿ provision ಮಾಡುವ ಕೆಲಸವನ್ನು ಮಾಡಿದರೆ ಅನುಕೂಲ. ಎಲ್ಲಾ ಕೆಲಸಗಳನ್ನು ನಿಲ್ಲಿಸಿ, ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ, ಅಭಿವೃದ್ಧ

ಎನ್ನುವ ಪದಕ್ಕೆ ಅರ್ಥವಿರುವುದಿಲ್ಲ. ಅಭಿವೃದ್ಧಿ ಮಾಡುತ್ತಿದ್ದೇವೆ ಎಂದು ಬರೀ ಮಾತಿನಲ್ಲಿ ಹೇಳಿದರೆ ಏನು ಅರ್ಥ? ಅದಕ್ಕೆ ಅರ್ಥ ಬರಬೇಕಾದರೆ, ತಾವು ಕಾರ್ಯಕ್ರಮಗಳನ್ನು ಕೊಡಬೇಕು, ಅದರ ಪ್ರತಿಫಲವನ್ನೂ ನೋಡಬೇಕು. ಅಂತಹ ಕಾರ್ಯಕ್ರಮಗಳಿಗೆ ನೀವು ಹೆಚ್ಚಿನ ಒತ್ತು ಕೊಡಬೇಕು. ಕನಿಷ್ಠ 10 ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕೆ ಬಜೆಟ್‌ನಲ್ಲಿ ಇಡುವ ಕೆಲಸವಾಗಬೇಕು ಎಂದು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು : ಸಾಕಷ್ಟು ಜನ ಮಾತನಾಡುವವರು ಇದ್ದಾರೆ. ತಾವು ಒಂದು ಗಂಟೆಗಿಂತ ಹೆಚ್ಚಾಗಿ ಮಾತನಾಡಿದ್ದೀರಿ. ಬೇರೆಯವರಿಗೆ ಅವಕಾಶ ಕೊಡಬೇಕು.

ಶ್ರೀ ವಿ.ಮುನಿಯಪ್ಪ : ಮಾನ್ಯ ಉಪಾಧ್ಯಕ್ಷರೆ, ಸೂಕ್ಷ್ಮವಾಗಿ ಹೇಳುತ್ತೇನೆ. ಡಾ: ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕುಗಳಿಗೆ ಹಣ ಕೊಟ್ಟರು, ಬಂದ ಹಣದಲ್ಲಿ ಅನುಕೂಲ ಮಾಡಲು, ನಮ್ಮನ್ನು action plan ಕೊಡಿ ಎಂದು ಕೇಳಿದರು, action plan ಕೊಟ್ಟೆವು. ಎಲ್ಲಾ ready ಆಯಿತು. ನಾವು ಜನಗಳಿಗೆ ಹೇಳಿದೆವು, ಡಾ:ನಂಜುಂಡಪ್ಪ ವರದಿಯಲ್ಲಿ ಹಣ ಬಂದಿದೆ, ರಸ್ತೆ ಮಾಡಿಸುತ್ತೇವೆ ಎಂದು ಜನರಿಗೆ ಹೇಳಿದೆವು. ಅದನ್ನು ವಾಪಸ್ಸು ತೆಗೆದುಕೊಂಡಿದ್ದೀರಿ. ಆ ರಸ್ತೆಗೆ ಹೋದರೆ, ಜನರು ಸುಳ್ಳು ಹೇಳಿದಿರಿ ಶಾಸಕರೇ ಎಂದು ಕೇಳುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ : RDPRರವರು ಕೊಡಬೇಕು.

ಶ್ರೀ ವಿ.ಮುನಿಯಪ್ಪ : RDPRನವರು ಆದರೂ ಹಣವನ್ನು ಕೊಡಬೇಕಾಗಿತ್ತು. ಅವರು ಎಲ್ಲಿಗೆ ಕೊಟ್ಟರೋ ದೇವರಿಗೆ ಗೊತ್ತು. ಇದು ಬಹಳ ಅನ್ಯಾಯ. ಹಿಂದುಳಿದ ತಾಲ್ಲೂಕುಗಳು ಎಂದು ಗುರುತಿಸಿ, ಅದಕ್ಕೆ ಹಣ ಬಿಡುಗಡೆ ಮಾಡಿ, action plan ಮಾಡಿ, approve ಮಾಡಿ, ಮತ್ತೆ ಅದನ್ನು suspense ನಲ್ಲಿ ಇಡುವುದು ಎಂದರೆ, ಅದಕ್ಕಿಂತ ಶೋಚನೀಯ ಇನ್ನೊಂದಿಲ್ಲ. ಇದನ್ನೆಲ್ಲಾ ಏಕೆ ಮಾಡುತ್ತೀರಿ? ನಮಗೆ ಮಾದಲೇ ನೀವು ಹೇಳಲಿಲ್ಲವೆಂದರೆ, ನಾವು ಕಮಿಟ್ ಆಗುತ್ತಿರಲಿಲ್ಲ. ದಯವಿಟ್ಟು ಇದರ ಕಡೆಗೆ ಗಮನಕೊಟ್ಟು, ತಾವು ತಮ್ಮ ಇಲಾಖೆಯಿಂದ ಏನು action plan ಮಾಡಿಸಿದ್ದೀರಿ, ಅದನ್ನು ಅನುಷ್ಠಾನ ಮಾಡಿಸುವುದಕ್ಕೆ ತಾವು ದುವಿಟ್ಟು ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ರಸ್ತೆಗಳು ಬಹಳ ಕೆಟ್ಟುಹೋಗಿವೆ. ನಮಗೆ ಮಳೆ ಬರಲಿಲ್ಲ. ನಂತರ ಬಂದ ಮಳೆ 15 ದಿವಸದಲ್ಲಿ ಬಂದುಬಿಟ್ಟಿತು. 700 ಸೆಂಟಿ ಮೀಟರ್ ಬೀಳುವ ಮಳೆ, 500 ಸೆಂಟಿ ಮೀಟರ್ ಮಳೆ ಕೇವಲ 15 ದಿವಸಗಳಲ್ಲಿ ಬಂದಿತು, ಏಕಾಏಕಿ ಮಳೆ ಬಂದು, ಪೂರ್ತಿ ರಸ್ತೆಗಳು ಎಲ್ಲಾ ಶಿಥಿಲವಾಗಿಬಿಟ್ಟಿವೆ. ಇದಕ್ಕೆ ಏನಾದರೂ ಒಂದು special package ಮಾಡಿಕೊಡಿ. ಈ take over roads ಅನ್ನು ಕೇಳುವವರು ಇಲ್ಲದ ಹಾಗೆ ಆಗಿದೆ. ZP ಅವರು ಕೇಳುವುದಿಲ್ಲ, ನೀವು ಕೇಳುವುದನ್ನು ಬಿಟ್ಟಿದ್ದೀರಿ. ಆ ರಸ್ತೆಗಳ ಗತಿಯೇನು?

ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ಮೇಲೆ ತಕ್ಷಣ ಏನಾದರೂ ಕಾರ್ಯಕ್ರಮ ಮಾಡಬೇಕು. Take over roadsಗಾದರೂ ಒಂದು special package ಮಾಡಿ, ಸ್ವಾಮಿ. ಈಗ main roads, state highways, district roads ಆಗುತ್ತಿವೆ. ಆದರೆ, ZPಯಿಂದ ತೆಗೆದುಕೊಂಡಿರುವ take over roadsಗೆ ಯಾವುದೇ ಅನುದಾನವಿಲ್ಲ. ಬಹಳ ತೊಂಧರೆಯಾಗಿದೆ, ಕೇವಲ ನಮ್ಮ ಕಡೆಯೇ ಅಲ್ಲ. ಇಡೀ ರಾಜ್ಯದಲ್ಲಿರತಕ್ಕಂಥ ಈ ಸಮಸ್ಯೆಗೆ ಸರಿಯಾದ ಪರಿಹಾರವನ್ನು ದಯಮಾಡಿ ಕೊಡಬೇಕು.

5.00 PM

ಇನ್ನು ರೇಷ್ಮೆ ಇಲಾಖೆಯು ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ನಮಗೆ ಒಂದು ಕಡೆ ಹಾಲು, ಇನ್ನೊಂದು ಕಡೆ ರೇಷ್ಮೆ, ಕಾಮಧೇನು, ಕಲ್ಪವೃಕ್ಷ ಇದ್ದ ಹಾಗೆ, ಕಾಮಧೇನು ಹಾಲು ಕೊಡುತತದೆ. ಕಲ್ಪವೃಕ್ಷ ಎಂದರೆ ಹಿಪ್ಪುನೇರಳೆ, ನಮಗೆ ಹಿಪ್ಪುನೇರಳೆ ಬೆಳೆಯೇ ಕಲ್ಪವೃಕ್ಷ. ಅಂಥದ್ದಕ್ಕೆ ಇವತ್ತು ಕಷ್ಟ ಬಂದಿದೆ. ಇವತ್ತು ರೇಷ್ಮೆ ಇಲಾಖೆಯ ಮಂತ್ರಿಗಳು ಇಲ್ಲಿ ಇಲ್ಲ. ಅದರೂ ಪರವಾಗಿಲ್ಲ. ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ, ನಾನು ಸಹ ಮಾಜಿ ರೇಷ್ಮೆ ಮಂತ್ರಿಯಾಗಿ ಕೆಲಸ ನಿರ್ವಹಿಸಿದ್ದೇನೆ. ಬಿತ್ತನೆ ವಲಯ ಬಹಳ ಹದಗೆಟ್ಟಿದೆ. 100ಕ್ಕೆ 50% ಬೆಳೆಯಾಗುತ್ತಿಲ್ಲ. ಅದುದರಿಂದ, ನನ್ನ ಸಲಹೇ ಏನೆಂಧರೆ, ಬಿತ್ತನೆ ವಲಯದಲ್ಲಿ ಪ್ರತಿಯೊಬ್ಬರ ಮನೆಗೂ Central Silk Boardನಿಂದ Warehouses ಗೆ ಹಣ ಕೊಡುತ್ತಿದ್ದಾರೆ. ಅದನ್ನು ಉಚಿತವಾಗಿ 10 ಎಕರೆ ಇರಲಿ, 20 ಎಕರೆ ಇರಲಿ, ಪ್ರತಿಯೊಬ್ಬರಿಗೂ ಹುಳು ಸಾಕಾಣಿಕೆ ಮಾಡಲು, ಪ್ರತ್ಯೇಕವಾಗಿ living-cum-warehouse ಇರಬಾರದು. Independent warehouse ಇರಬೇಕು. ಅದನ್ನು ಸರ್ಕಾರವೇ ಕಟ್ಟಿಸಿಕೊಡಬೇಕು exclusive ಆಗಿ ಬಿತ್ತನೆ ವಲಯದಲ್ಲಿ, ಆ ಕೆಲಸವನ್ನು ಸರ್ಕಾರ ಮಾಡಬೇಕು. ರಾಸಾಯನಿಕ ಗೊಬ್ಬರವನ್ನು ಹಾಕುತ್ತಿದ್ದಾರೆ ಮಾದಲಿನಿಂದಲ್ಲೂ ರಾಸಾಯನಿಕ ಗೊಬ್ಬರಕ್ಕೆ ಬ್ಯಾನ್ ಇದೆ. ಅದನ್ನು ಪೂರ್ಣವಾಗಿ ತಡೆಗಟ್ಟಬೇಕು. ಅದಕ್ಕೆ ಕೊಟ್ಟಿಗೆ ಗೊಬ್ಬರ ಹಾಕಲು ಒತ್ತಾಯ ಮಾಡಬೇಕು. Mass Disease Control function, ಸಾಮೂಹಿಕ ರೋಗ ನಿಯಂತ್ರಣ ಕಾರ್ಯಕ್ರಮವನ್ನು ಮಾಡುತ್ತಿದ್ದೀರಿ. ಆ ಕಾರ್ಯಕ್ರಮವನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದರಿಂದ ರೋಗಗಳು ಹೆಚ್ಚಾಗುತ್ತಿವೆ. ಬಿತ್ತನೆ ವಲಯ ಎಷ್ಟು ಚೆನ್ನಾಗಿ ರೋಗ ಮುಕ್ತವಾಗಿರುತ್ತದೆಯೋ ಅಷ್ಟು ಗುಣಮಟ್ಟ ಬಿತ್ತನೆ ಬರಲು ಸಾಧ್ಯವಾಗುತ್ತದೆ. ಸುಮಾರು 5-10 ವರ್ಷಗಳಿಂದ ಮಣ್ಣಿನ ಪರೀಕ್ಷೆ ಮಾಡುತ್ತಿಲ್ಲ. ರೇಷ್ಮೆ ಇಲಾಖೆಯವರು ಮಣ್ಣಿನ ಪರದಕ್ಕೆ ಮಾಡುವ ಕೆಲಸವನ್ನು ಕನಿಷ್ಟಪಕ್ಷ ಬಿತ್ತನೆ ವಲಯದಲ್ಲಾದರೂ ಮಾಡಲಿ. ಇದಕ್ಕೋಸ್ಕರ ತಲಘಟ್ಟಪುರದಲ್ಲಿ ಸಂಶೋಧನಾ ಕೇಂದ್ರವಿದೆ. ಅದು total defunct ಆಗಿದೆ. ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶವೆಂದರೆ, ಉತ್ತಮವಾದ ತಳಿಗಳನ್ನು ಸಂಶೋಧನೆ

ಮಾಡಿ field ಗೆ ಬಿಡುವುದು. ಆದರೆ, ಕಳೆದ ಐದಾರು ವರ್ಷಗಳಿಂದ ಉಳಿವುದೇ ಹೊಸ ರೇಷ್ಮೆ ತಳಿ ಬರಲಿಲ್ಲ. ಸಂಶೋಧನಾ ಕೇಂದ್ರವನ್ನು ಬಲಪಡಿಸುವ ಮುಖಾಂತರ ಉತ್ತಮ ರೇಷ್ಮೆ ತಳಿಯನ್ನು ಬಿಡುಗಡೆ ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಇನ್ನು ಎಸ್.ಸಿ., ಎಸ್.ಟಿ ಕಾರ್ಪೋರೇಷನ್ ಅವರು ಕೊಳವೆ ಬಾವಿಗಳನ್ನು ಕೊಡುತ್ತಿದ್ದಾರೆ. 40-50 ಎಷ್ಟಾದರೂ ಕೊಡಿಲಿ. ಸುಮಾರು ಹತ್ತು ವರ್ಷದಿಂದಲೂ ಒಂಧು ಕೊಳವೆ ಬಾವಿಗೆ ಒಂದು ಲಕ್ಷ ರೂಪಾಯಿ ಎಂದು ನಿಗದಿ ಮಾಡಿದ್ದಾರೆ. ಒಂದು ಕೊಳವೆ ಬಾವಿ ತೋಡಿಸಿ, ಮೋಟರ್ ಪಂಪ್ ಹಾಕಿ, ವಿದ್ಯುತ್ ಸಂಪರ್ಕ ಮಾಡಬೇಕಾದರೆ, ಸುಮಾರು ಎರಡೂವರೆಯಿಂದ ಮೂರು ಲಕ್ಷ ರೂಪಾಯಿ ಬೇಕು. ಹತ್ತು ವರ್ಷದಿಂದ ಒಂದೇ ಲಕ್ಷ ಕೊಡುತ್ತಿದ್ದಾರೆ. ಇವತ್ತು cost ಕೊಟ್ಟರೆ ಏನಾಗುವುದಿಲ್ಲ. ಎಲ್ಲೆಲ್ಲಿ 500 ಅಡಿಗೂ ಮೀಲ್ಪಟ್ಟು ಕೊಳವೆ ಬಾವಿಗಳನ್ನು ತೋಡುತ್ತಾರೆ, ಅಲ್ಲಿಯಾದರೂ ಕನಿಷ್ಠ ಮೂರು ಲಕ್ಷ ರೂಪಾಯಿ ಕೊಡುವ ಹಾಗೆ ಮಾಡಬೇಕು. ಇಲ್ಲವಶದರೆ ಎಸ್.ಸೊ., ಎಸ್.ಟಿ.ಕಾರ್ಪೋರೇಷನ್ ವತಿಯಿಂದ ಕೊಡುತ್ತಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗುವುದಿಲ್ಲ. ಸುಮ್ಮನೆ ನಾಮಕಾವಸ್ಥೆಗೆ ಹಾಕಿ ಅರ್ಧಂಬರ್ಧಕ್ಕೆ ಕೈ ಬಿಟ್ಟು ಬಿಡುತ್ತಾರೆ. ಅದರ purpose ಸರಿಹೋಗುವುದಿಲ್ಲ. ದಯವಿಟ್ಟು, ಎಸ್.ಸಿ, ಎಸ್.ಟಿ ಕಾರ್ಪೋರೇಷನ್, ಸಮಾಜ ಕಲ್ಯಾಣ ಇಲಾಖೆಯವರು ತಕ್ಷಣ ಅದರ ಬೆಲೆಯನ್ನು ಕನಿಷ್ಠ ಎರಡು ಲಕ್ಷ ರೂಪಾಯಿಗಾದರೂ ಹೆಚ್ಚಿಸಬೇಕೆಂದು ತಮ್ಮ ಮುಖಾಂತರ ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು : ಒಂಧು ಗಂಟೆಯಾಯಿತು, ಸಾಕಷ್ಟು ಜನ ಮಾತನಾಡುವವರಿದ್ದಾರೆ, ದಯವಿಟ್ಟು ಬೇಗ ಮುಗಿಸಿ.

ಶ್ರೀ ವಿ.ಮುನಿಯಪ್ಪ : ಜನಸಾಮಾನ್ಯರ ತೆರಿಗೆ ವಿಚಾರದ ಬಗ್ಗೆ ನಾನು ಮಾತನಾಡಬೇಕಾಗಿತ್ತು, Value Added Taxನಲ್ಲಿ ಬಹಳ ಅನ್ಯಾಯವಾಗುತ್ತಿದೆ.

ಉಪಾಧ್ಯಕ್ಷರು : ತಾವು senior ಇದ್ದೀರಿ. ಸ್ವಲ್ಪ ಹೊಸ ಸದಸ್ಯರಿಗೆ ಅವಕಾಶ ಕೊಡೋಣ. ಅವರ ಸಲಹೆಗಳನ್ನೂ ಕೇಳೋಣ.

ಶ್ರೀ ವಿ.ಮುನಿಯಪ್ಪ : ಹೊಸ builders reimburse ಮಾಡುವುದರಲ್ಲಿ, VATನಲ್ಲಿ ಹೊಸ ಪದ್ಧತಿಯನ್ನು ಕಲಿತುಕೊಂಡಿದ್ದಾರೆ. ತೆರಿಗೆಯನ್ನು ಕಟ್ಟುವಲ್ಲಿ ಹೊಸ ಪದ್ಧತಿಯನ್ನು ಕಲಿತುಕೊಂಡಿರುವುದರಿಂದ ನಮ್ಮ ಖಜಾನೆಗೆ ಬರುವ ಹಣದಲ್ಲಿ ಮೋಸವಾಗುತ್ತಿದೆ. VAT ವ್ಯವಸ್ಥೆಯಲ್ಲಿ ಹಲವಾರು ದೋಷಗಳಿವೆ. ಅನೇಕ builders ಬೇರೆ ಬೇರೆ ಕಂಪನಿಗಳನ್ನು register ಮಾಡಿ, ಅದರಲ್ಲಿ ಯಾವ್ಯಾವ ಹಣ, ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಾರೆ, project complete ಆದ ಮೇಲೆ ಏನೇನು ಕಟ್ಟಬೇಕು. ಅದರಲ್ಲಿ ಉಳಿತಾಯವಾಗಿರುವುದರಲ್ಲಿ ಅವರು

reimburse ಮಾಡಿಕೊಳ್ಳಬೇಕು. ಅದರಲ್ಲಿ ಮೋಸ ಮಾಡುತ್ತಿದ್ದಾರೆ ಎನ್ನುವ ದೂರು ಇದೆ. ಅದನ್ನು ಸಿಪಡಿಸುವ ಕೆಲಸವನ್ನು ಮಾಡಬೇಕು. ಸರ್ಕಾರಕ್ಕೆ ಹಣ ಬಂದರೆ ತಾನೆ, demand ಅನ್ನು ಪೂರ್ತಿಗೊಳಿಸುವುದು. ನನಗೆ ಮಾತನಾಡಲು ಇನ್ನೂ 10–15 ನಿಮಿಷ ಬೇಕಾಗಿತ್ತು. ಆದರೆ, ತಾವು ಒತ್ತಾಯ ಮಾಡುತ್ತಿದ್ದೀರಿ. ಅದರೂ ಚಿಂತೆ ಇಲ್ಲ. ಸರ್ಕಾರವು ನಾನು ಕೊಟ್ಟಿರುವ ಸಲಹೆಗಳಲ್ಲಿ, ವಿದ್ಯುತ್ ಬಗ್ಗೆ, ನೀರಾವರಿ ಬಗ್ಗೆ, ನಮ್ಮ ರೇಷ್ಮೆ ಇಲಾಖೆ ಬಗ್ಗೆ ಮತ್ತು ಮಾನ್ಯ ಡಾ.ಪರಮಶಿವಯ್ಯನವರು ಕೊಟ್ಟಿರುವ ವರದಿ ಬಗ್ಗೆ ಆದ್ಯತೆ ಮೇರೆಗೆ ತೆಗೆದುಕೊಂಡು ಕೆಲಸ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸಿ.ಟಿ.ರವಿ ಅವರು ಮಾತನಾಡಬೇಕು.

ಶ್ರೀ ಸಿ.ಟಿ.ರವಿ : ಚಿಕ್ಕಮಂಗಳೂರು ಮಾನ್ಯ ಉಪಾಧ್ಯಕ್ಷರೆ, ಮುಂಗಡಪತ್ರದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ನಮ್ಮ ಕಡೆ ಒಂದು ಗಾದೆ ಇದೆ, ಆಗದವರಿಗೆ ತುಪ್ಪದಲ್ಲಿ ಕರೆದುಕೊಟ್ಟರೂ ಅವರಿಗೆ ರುಚಿ ಕಾಣುವುದಿಲ್ಲವಂತೆ. ಹಾಗೆ ಈ ಬಜೆಟ್ ಅನ್ನು ಎಷ್ಟೇ ಜನಪ್ರಿಯವಾಗಿ, ಜನಪರವಾಗಿ ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರು ಮಂಡಿಸಿದರೂ ಆ ಕಡೆಯವರೆಗೆ ತೃಪ್ತಿಯಾಗುವ ಹಾಗೆ ಇಲ್ಲ. ಏಕೆಂದರೆ, ಒಲ್ಲದ ಗಂಡ, ಹೇಗಿದ್ದರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮಾಡೇ ಮಾಡುತ್ತಾರೆ ಅವರು. ಆದರೆ, ಅವರಿಗೆ ಏನನ್ನಿಸುತ್ತದೆ ಎನ್ನುವುದನ್ನು ನಾವು ಗಣನಿಗೆ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಡಾ.ಹೆಚ್.ಸಿ.ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಕಡೆಯವರೆಗೆ ಏಕೆ ಸಮಾಧಾನ, ತೃಪ್ತಿಯಾಗುತ್ತಿಲ್ಲವೆಂದರೆ, ಮಾನ್ಯ ಯಡಿಯೂರಪ್ಪನವರು ಈ ಕಡೆ ಇದ್ದಾಗ ಏನೇನು ಹೇಳಿದ್ದರೋ ಅದು ಒಂದೂ ಇಲ್ಲ. ಅದಕ್ಕೋಸ್ಕರ ತೃಪ್ತಿಯಾಗುತ್ತಿಲ್ಲ.

ಶ್ರೀ ಸಿ.ಟಿ.ರವಿ : ನಾನು ಅನಂತರ ಆ ವಿಷಯಕ್ಕೆ ಬರುತ್ತೇನೆ. ಈಗ ಇವರು ಏನು ಹೇಳುತ್ತಾರೆ ಎನ್ನುವುದು ಮುಖ್ಯವಲ್ಲ. ಮಾನ್ನೆ ಕಾಂಗ್ರೆಸ್ ಪಕ್ಷದ ಕಾರ್ಯಧ್ಯಕ್ಷರಾದ ಸನ್ಮಾನ್ಯ ಡಿ.ಕೆ.ಶಿವಕುಮಾರ್ ಅವರು ಆಂಗ್ಲ ಪತ್ರಿಕೆಗಳನ್ನು ಹಿಡಿದುಕೊಂಡು ಈ ಸರ್ಕಾರದ ಬಗ್ಗೆ ಆಂಗ್ಲ ಪತ್ರಿಕೆಗಳು ಏನು ಬರೆಯುತ್ತವೆ ಎನ್ನುವುದನ್ನು ಇಲ್ಲಿ ವಿವರವಾಗಿ ಬಿಡಿಸಿ ಹೇಳುತ್ತಿದ್ದರು. ಈ ಪತ್ರಿಕೆಗಳು ಅಂದರೆ, ಜನಸಾಮಾನ್ಯರಿಗೆ ಗೊತ್ತಿರದ ಭಾಷೆಯಲ್ಲಿ ಬರೆಯುವಂಥ, ಬುದ್ಧಿಜೀವಿಗಳಿಗೆ ಮತ್ತು ಕೆಲವೇ ಜನರಿಗೆ ಸೀಮಿತವಾಗಿರುವ ಪತ್ರಿಕೆಗಳು, ವಾದಗಳು ಒಂದು ಕಡೆ ಇರಲಿ: ರಾಜ್ಯದ ಮಾತೃ ಭಾಷೆಯ ಪತ್ರಿಕೆಗಳು ಏನು ಬರೆದಿವೆ ಎನ್ನುವುದನ್ನು ನೋಡಿ. ಕನ್ನಡ ಪ್ರಭ ಪತ್ರಿಕೆಯ ಪುಣ್ಯಕೋಟಿ ಬಜೆಟ್ ಎಂದು ಶೀರ್ಷಿಕೆಯನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ : ನಾನು ಓದುತ್ತೇನೆ ಕೇಳಿ, ನೀವೆಲ್ಲಾ ಓದಿದ್ದೀರೆಂದು ನಾನು ಸುಮ್ಮನಿದ್ದೆ. ನೀವು ಓದಿಲ್ಲವೆಂದರೆ ನಾನು ಓದುತ್ತೇನೆ. ರೈತರು ಫುಲ್ ಖುಷ್, ವಾಣಿಜ್ಯ ಬ್ಯಾಂಕಿನಲ್ಲೂ ಶೇಕಡ ಮೂರರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ. ಇವರು ಚಪ್ಪಾಳೆ ತಟ್ಟುವರೇ? ಇವರು ಹೇಳುವುದಕ್ಕೆ ತಯಾರಿಲ್ಲ. ಏಕೆಂದರೆ......

(ಗೊಂದಲ)

ಶ್ರೀ ಸಿ.ಟಿ.ರವಿ : ನೀರಾವರಿಗೆ ಧಾರಾಳ ಹಣ, 3,096ಕೋಟಿ. ಕಳೆದ ಬಾರಿಗಿಂತ ಶೇಕಡ 20ರಷ್ಟು ಹೆಚ್ಚು.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವ ಪತ್ರಿಕೆ ಅದು? ನೀವೆ ಮನೆಯಿಂದ ಪ್ರಿಂಟ್ ಮಾಡಿಕೊಂಡು ಬಂದಿರಬಹುದು. ಕಳೆದ ಸಲಕ್ಕಿಂಥ 20% ಹೆಚ್ಚು, ನಮಗೆ ನಗು ಬರುತ್ತಿದೆ......

ಶ್ರೀ ಸಿ.ಟಿ.ರವಿ : ನಿಮಗೆ ಅರ್ಥವಾಗುವ ಭಾಷೆಯಲ್ಲಿಯೇ ಪ್ರಿಂಟ್ ಆಗಿರುವ ಪತಿಕೆ. ಮಾತೃ ಭಾಷೆಯೂ ಬರದೇ ಇದ್ದರೆ, ಅದಕ್ಕೆ ನಾನೇನು ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಸಾಯಂಕಾಲದ ಶಾಲೆಯನ್ನು ತೆರೆದು ಮಾತೃ ಭಾಷೆಯನ್ನು ಕಲಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಅಧ್ಯಕ್ಷರಿಗೆ ವಿನಂತಿ ಮಾಡುತ್ತೇನೆ. ಹಿಂದೆ ಒಂದು ಶಾಲೆ ಇತ್ತಲ್ಲ ವಿಜಯಕುಮಾರ್, ಅದಕ್ಕೆ ಏನು ಹೇಳುತ್ತಾರೆ? ವಯಸ್ಕರ ಶಿಕ್ಷಣ ಎಂದು. ಇವರಿಗೆ ವಯಸ್ಕರ ಎಂದು ಹೇಳಲು ಬರುವುದಿಲ್ಲ. ಇನ್ನೂ ಹುಡುಗರೇ ಇದ್ದಾರೆ. ಇಂಥವರಿಗೆ ಮಾತೃ ಭಾಷೆ ಶಿಕ್ಷಣ ಕಲಿಸಿಕೊಡಲು ಎಲ್ಲಾದರೂ ಒಂದು ಶಾಲೆಯನ್ನು ತೆರೆದು, ಆ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಏನು ಬೇಕೋ ಅದನ್ನು ಹೇಳಿ ಕೊಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಈ ಸಂಜೆ ಪತ್ರಿಕೆಯ ವೆಂಕಟೇಶ್‌ಅವರು ಏನು ಬರೆದಿದ್ದಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಸಿ.ಟಿ.ರವಿ : ಈ ಸಂಜೆ ಪತ್ರಿಕೆಯ ವೆಂಕಟೇಶ್‌ಅವರು ಏನು ಬರೆದಿದ್ದಾರೆ, ಅದನ್ನೂ ಹೇಳುತ್ತೇನೆ. ಬೆಂಗಳೂರಿಗೆ ಒಟ್ಟು 6 ಸಾವಿರ ಕೋಟಿ, ರಸ್ತೆ ಸರ್ವಾಂಗೀಣ ಅಭಿವೃದ್ಧಿಗೆ ಬಳಕೆ, ಇನ್ನೇನು ಮಾಡಬೇಕು? ಅದು ಯಾವ ಕಾಲದಲ್ಲಿ ಇತ್ತು ಇಡೀ ವಿಶ್ವದಲ್ಲೇ ಆರ್ಥಿಕ ಸಂಕಷ್ಟ ಇರುವ ಈ ಸಂದರ್ಭದಲ್ಲಿ ಇಷ್ಟು ಒಳ್ಳೆಯ ಬಜೆಟ್ ಕೊಟ್ಟ ಮೇಲೂ; ಟೀಕೆ ಮಾಡಬೇಕೆಂದು ಟೀಕೆ ಮಾಡುವುದೋ ಅಥವಾ ಏನು? ಅಲ್ಲಿ ಖಾಸಗಿಯಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಬಜೆಟ್ ಬಹಳ ಚೆನ್ನಾಗಿತ್ತು, first class ಎಂದು ಅಭಿನಂದಿಸುತ್ತಾರೆ. ಇದೆಲ್ಲಾ ನಿಮಗೆ ಹೇಗೆ ಹೊಳೆಯಿತು, ನಮ್ಮವರಿಗೆ ತಲೆಯೇ ಓಡಲಿಲ್ಲವಲ್ಲ ಸಾರ್ ಎಂದು ಅಲ್ಲಿ ಹೇಳುತ್ತಾರೆ. ಇಲ್ಲಿ ಬಂದು ಟೀಕೆ ಮಾಡುತ್ತಾರೆ. ಇದು ಯಾವ ನ್ಯಾಯ ? ದೇವರು ಮೆಚ್ಚುತ್ತಾನೆಯೇ? ಕೊನೆ ಪಕ್ಷ ದೇವರು ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳಬೇಕಲ್ಲವೇ?

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾರ್ಯಾರು ಆ ರೀತಿ ಅಭಿನಂಧಿಸಿದ್ದಾರೆಂದು ಹೇಳಲಿ. ನಿಮ್ಮ ನಾಯಕರು ನೀವು ಹಾಗೆ ಹೇಳಿದರೆ ನಿಮ್ಮನ್ನು ಮಂತ್ರಿಯಾಗಿಯೂ ಮಾಡುವುದಿಲ್ಲ. ಅಧ್ಯಕ್ಷರಾಗಿಯೂ ಮಾಡುವುದಿಲ್ಲ....

(ಗೊಂದಲ)

ಉಪಾಧ್ಯಕ್ಷರು : ಅವರು ಮಾತನಾಡಲಿ.

ಶ್ರೀ ಸಿ.ಟಿ.ರವಿ : ಯಾರ್ಯಾರು ಅಭಿನಂದಿಸಿದರು ಎನ್ನುವುದನ್ನು ನಾನು ಹೇಳಬಹುದು. ನನಗೇನು ಕಿರಿಕಿರಿ ಇಲ್ಲ. ಅವರಿಗೇ ಕಿರಿಕಿರಿ. ಅಲ್ಲೇ ಕಿರಿಕಿರಿ. ಹಾಗಾಗಿ ಹೇಳುವುದಿಲ್ಲ. ಹೇಳಲು ನನಗೇನು ಸಮಸ್ಯೆ ಇಲ್ಲ. ಹೇಳಬೇಕೆಂದರೆ ನಾನು ಹೇಲಿಬಿಡುತ್ತೇನೆ. ಆದರೆ, ಅವರಿಗೇ ಸಮಸ್ಯೆ. ಬೇಕಾದರೆ ಹೇಳುತ್ತೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ನೀವು ಅವರ ಹತ್ತಿರ ಹೇಳಿಸಬೇಕು.

ಶ್ರೀ ಸಿ.ಟಿ.ರವಿ : ನೀವು ಇದನ್ನೇ ಕಾಯುತ್ತಿದ್ದೀರಿ. ನೀವು ತಲೆ ಮೇಲೆ ಚಪ್ಪಡಿ ಎಳೆಯಬಹುದು ಎಂದು ಇದನ್ನೇ ಕಾಯುತ್ತಿದ್ದೀರಿ. ಹಾಗಾಗಿ ನಿಮ್ಮ ಪಕ್ಕದಲ್ಲಿರುವವರ ಹೆಸರನ್ನು ನಾನು ಹೇಳುವುದಿಲ್ಲ. ಚಪ್ಪಡಿ ಎಳೆಯಬಹುದೆಂದು ನೀವು ಕಾಯುತ್ತಿರುತ್ತೀರಿ.

ಶ್ರೀ ಟಿ.ಬಿ.ಜಯಚಂದ್ರ : ಬಜೆಟ್ ಮಂಡನೆಯಾದ ಬಳಿಕ ಪತ್ರಿಕೆಗಳಲ್ಲಿ ಏನು ವರದಿಯಾಗಿದೆ ಎಂಬುದನ್ನು ನೀವು ಓದುತ್ತಿದ್ದೀರಿ. ಅದನ್ನು ನಾವೆಲ್ಲರೂ ಕೂಡ ಓದಿದ್ದೇವೆ ಮತ್ತು ರಾಜ್ಯದ ಜನರೆಲ್ಲರೂ ಓದಿದ್ದಾರೆ. ಆದರೆ, ವಿಷಯ ಅದಲ್ಲ. ಬಜೆಟ್‌ನಲ್ಲಿರುವಂತೆ ಪತ್ರಿಕೆಗಳಲ್ಲಿ ಬರೆದಿರುವುದು ಮುಖ್ಯವಲ್ಲ. Editorialನಲ್ಲಿ ಬರೆದಿದ್ದಾರಲ್ಲ,ದಯಮಾಡಿ ಅದನ್ನು ಓದಿ. ಯಾವುದಾದರೂ ಒಂದು ಪತ್ರಿಕೆಯವರಾದರೂ appreciate ಮಾಡಿದ್ದರೆ, ನಾನು ಒಪ್ಪುತ್ತೇನೆ. ಬಜೆಟ್‌ನಲ್ಲಿರುವುದನ್ನೇ ಯಥಾವತ್ತಾಗಿ ಬರೆದಿದ್ದಾರೆ. ಆದರೆ, editorialನಲ್ಲಿ ಬರೆದಿದ್ದಾರೆ ಎಂಬುದನ್ನು ದಯಮಾಡಿ ಹೇಳಿ.

ಶ್ರೀ ಸಿ.ಟಿ.ರವಿ : Appreciate ಮಾಡುವವರು ಯಾರು ಗೊತ್ತೇ? ಈ ರಾಜ್ಯದ ಜನರು. ಮುಂದೆ ಚುನಾವಣೆ ಬರುತ್ತದಲ್ಲ, ಈಗ appreciate ಮಾಡುತ್ತಾರೆ. ನೀವು ಏನು ಹೇಳುತ್ತೀರೆಂಬುದು ಮುಖ್ಯವಲ್ಲ. ಸನ್ಮಾನ್ಯ ಜಯಚಂದ್ರರವರೆ, ಈಗ ಚರ್ಚೆಯಾಗುತ್ತಿರುವುದು ಈ ಮುಂಗಡ ಪತ್ರದ ಮೇಲೆ ತಾನೆ? ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಅದನ್ನು ಹೊರಗಡೆ ನಾವು ಮತ್ತು ನೀವು ಹೇಗೆ ಬೇಕೋ ಹಾಗೆ ಮಾತನಾಡಿಕೊಳ್ಳೋಣ. ಜನರು ತೀಮಾರ್ಥನ ಮಾಡುತ್ತಾರೆ. **"ವಿಜಯ ಕರ್ನಾಟಕ"** – ಮಹಾ ಚುನಾವಣೆಗೆ ಮುನ್ನ ಮಹಾಪ್ರಸಾದ. ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿ, ವಿದ್ಯುತ್, ಸಾರಿಗೆ, ನಗರಾಭಿವೃದ್ಧಿ, ಶಿಕ್ಷಣ ಕ್ಷೇತ್ರಗಳಿಗೆ ಬಜೆಟ್‌ನಲ್ಲಿ ಆದ್ಯತೆ. ರೈತರಿಗೆ ರಾಷ್ಟ್ರೀಕೃತ ಮತ್ತು ವಾಣಿಜ್ಯ

ಬ್ಯಾಂಕುಗಳಿಂದಲೂ ಶೇಕಡ 3ರ ಬಡ್ಡಿ ದರದಲ್ಲಿ ಕೃಷಿ ಸಾಲ ಸೌಲಭ್ಯ, ನೀರಾವರಿ ಯೋಜನೆಗಳಿಗೆ 4,700 ಕೋಟಿ ರೂ.. ಇನ್ನು ಅವರು **"ಪ್ರಜಾವಾಣಿ"** ದಿನಪತ್ರಿಕೆ ಬಗ್ಗೆ ಹೇಳುತ್ತಿದ್ದರು. ಅದನ್ನೂ ಹೇಳಿಬಿಡುತ್ತೇನೆ. ಸರ್ವರಿಗೂ ಸಂಪ್ರೀತಿ, ಕೃಷಿ ಸಾಲ ಅಗ್ಗ, ಶಿಕ್ಷಣಕ್ಕೆ ಎಂಟರ ನಂಟು, ಇನ್ನಷ್ಟು ತೆರಿಗೆ ವಿನಾಯಿತೆ.

ಅಧ್ಯಕ್ಷರೆ, ಇದು ಈ ರಾಜ್ಯದ ಪತ್ರಿಕೆಗಳು ಏನು ಹೇಳಿವೆ ಎಂಬುದನ್ನು ಹೇಳುತ್ತಿದ್ದೇನೆ. "ಸಂಯುಕ್ತ ಕರ್ನಾಟಕ" – ಯಡಿಯೂರಪ್ಪ ಅದ್ಭುತ ದೀಪ, ಹಿತಾನುಭವ ಸೂತ್ರ, ಚುನಾವಣಾ ಸ್ತೋತ್ರ......ನೀವ್ಯಾರೂ ಎಲೆಕ್ಷನ್ ಇಲ್ಲದೆ ಗೆದ್ದು ಬಂದಿರೇನು? ಎಲ್ಲರೂ ಚುನಾವಣೆ ಎದುರಿಸಿಯೇ ಗೆದ್ದು ಬಂದಿರುವುದು. ಜನಹಿತ ಯಾರು ಮಾಡುತ್ತಾರೊ ಅವರಿಗೆ ಚುನಾವಣೆಯಲ್ಲೂ ಹಿತಾನುಭವ ಆಗುತ್ತದೆ. ಜನಹಿತ ಇದ್ದವರಿಗೆ ಚುನಾವಣೆಯಲ್ಲೂ ಹಿತಾನುಭವ ಆಗಿಯೇ ಆಗುತ್ತದೆ. ಇದರ ನಡುವೆ ನನಗೆ ಒಂಧು ಯೋಜನೆ ಬಂದಿದ್ದು ಏನೆಂದರೆ, ಇಬ್ಬರು ತಾಯಂದಿರು ಇದ್ದರು. ಒಬ್ಬ ಭಿಕ್ಷುಕ ಅಕ್ಕಪಕ್ಕದಲ್ಲಿರುವ ಎರಡೂ ಮನೆಗಳಿಗೆ ಭಿಕ್ಷೆ ಕೇಳಲು ಯಾವಾಗಲೂ ಹೋಗುತ್ತಿದ್ದನಂತೆ. ಒಬ್ಬಳು ತಾಯಿ ಯಾವಾಗಲೂ ಭಿಕ್ಷೆ ಕೊಡುತ್ತಿರಲಿಲ್ಲ. ಇನ್ನೊಬ್ಬಳು ತಾಯಿ ಅವತ್ತು ಅನ್ನ ಮಾತ್ರ ಹಾಕಿದಳು. ಸಾರು ಇಲ್ಲ, ಮುಂದಿನ ಮನೆಗೆ ಹೋಗು ಎಂದು ಹೇಳಿದಳು. ಭಿಕ್ಷುಕ ಏನೆನ್ನಬೇಕು? ಆ ತಾಯಿ ಯಾವಾಗಲೂ ಕೊಡುವುದಿಲ್ಲ, ಆಕೆ ಇವತ್ತೂ ಕೊಡಲಿಲ್ಲ, ದೀನಾ ಕೊಡುವವಳಿಗೆ ಈಗೀಗ ಏನು ಬಂತೆಂದು ಒಂದು ಕೆಟ್ಟ ಶಬ್ದ ಸೇರಿಸಿ ದೀನಾ ಕೊಡುವವಳು ಬರೀ ಅನ್ನ ಮಾತ್ರ ಹಾಕಿದ್ದಾಳೆ ಎಂದು ಹೇಳಿದನಂತೆ. ಹಾಗಾಯಿತು ಈ ಪರಿಸ್ಥಿತಿ. ಅಧ್ಯಕ್ಷರೆ, ನಾನು ಮೊದಲ ಬಾರಿಗೆ ಶಾಸಕನಾದಾಗ.......

ಒಬ್ಬ ಮಾನ್ಯ ಸದಸ್ಯರು : ಅದನ್ನು ಬಿಡಿಸಿ ಹೇಳಿ.

ಶ್ರೀ ಸಿ.ಟಿ.ರವಿ : ನಾನು ಅದನ್ನು ಬಿಡಿಸಿ ಹೇಳುತ್ತೇನೆ. ಮೊದಲನೇ ಸಲ ಶಾಸಕನಾದಾಗ ಕಾಂಗ್ರೆಸ್ ಮತ್ತು ಜನತಾ ದಳ ಸರ್ಕಾರ 20 ತಿಂಗಳ ಸರ್ಕಾರ. ಅಧ್ಯಕ್ಷರೆ, ತಾವು ಮಾದಲನೇ ಬಾರಿಗೆ ಶಾಸಕರಾಗಿದ್ದಿರಿ. ಶಾಸಕರಿಗೆ ಅನುದಾನವೆಂದು ಈಗ ಒಂದೂವರೆ ಕೋಟಿ ರೂ.ಗಳನ್ನು ಕೊಟ್ಟಿದ್ದಾರಲ್ಲ, ನಮಗೆ ಒಂದು ರೂ.ಕೊಟ್ಟರೇ?

(ಗದ್ದಲ)

ಶ್ರೀ ಸಿ.ಟಿ.ರವಿ : ವಿಷಯ ಹೇಳುತ್ತಿದ್ದೇನೆ. ನೀವು ಈಗ ಹಂಚಿದ್ದೀರಲ್ರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ, ಅವರು ಬಜೆಟ್‌ನಲ್ಲಿ ಸುಳ್ಳು ಹೇಳುತ್ತಾರೆ ತಿಳಿಕೊಂಡಿದ್ದೆವು. ರವಿಯವರು ಇಲ್ಲಿಯೇ ಸುಳ್ಳು ಹೇಳಲು ಶುರು ಮಾಡಿದ್ದಾರೆ. ಬರೀ ಸುಳ್ಳು ಹೇಳಬೇಡಿ. ಸತ್ಯ ಹೇಳುವುದನ್ನು ಕಲಿತುಕೊಳ್ಳಿ. ಎಲ್ಲಿದೆ 150 ಕೋಟಿ?

ಶ್ರೀ ಸಿ.ಟಿ.ರವಿ : ಹೇಳುತ್ತೇನೆ. ನಾನು ಹೇಳುವುದನ್ನು ಕೇಳಿ. ಅಧ್ಯಕ್ಷರೆ, ಒಂದೂವರೆ ಕೋಟಿ ರೂ. ಕಾಮಗಾರಿಗಳನ್ನು ಕೊಡುವುದಕ್ಕೆ ಹೇಲಿ, ಒಂದು ಕೋಟಿ

ರೂ.ಗೆ ಅಪ್ರೂವಲ್ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಂದೂವರೆ ಕೋಟಿ ರೂ.ಗಳ ಕಾಮಗಾರಿಗಳಿಗೆ ಕೊಟ್ಟಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಯಾರು ಹೇಳಿದ್ದು? ಬಿಜೆಪಿ ಎಂ.ಎಲ್.ಎ.ಗಳಿಗೆ ಕೊಟ್ಟಿರಬಹುದು, ನಮಗೆ ಕೊಟ್ಟಿಲ್ಲ ಸ್ವಾಮಿ. ಬಿಜೆಪಿ ಎಂ.ಎಲ್.ಎ.ಗಳಿಗೆ 1 ಕೋಟಿ ಕೊಟ್ಟಿರಬಹುದು, ನಮಗೆ ಕೊಟ್ಟಿರುವುದು ಬರೀ 50 ಲಕ್ಷ ರೂ.ಗಳು ಮಾತ್ರ.

ಶ್ರೀ ಸಿ.ಟಿ.ರವಿ : ಕೇಳಿಸಿಕೊಳ್ಳುವ ತಾಳ್ಮೆಯೂ ಇಲ್ಲದಿದ್ದರೆ, ಹೇಗೆ? ಕೇಳಿಸಿಕೊಳ್ಳುವುದಕ್ಕೆ ಕನಿಷ್ಠ ತಾಳ್ಮೆಯಾದರೂ ಬರಬೇಕಲ್ಲವೇ? ಆ ತಾಳ್ಮೆಯೂ ಇಲ್ಲದಿದ್ದರೆ ಹೇಗೆ? ಈಗ ನಮ್ಮ ಕ್ಷೇತ್ರದಲ್ಲಿ ಒಂದು ಕೋಟಿ ರೂ.ಗೆ ಅಪ್ರೂವಲ್ ಕೊಟ್ಟಿದ್ದಾರೆ. ನೀವು ನಿಮ್ಮ ಕ್ಷೇತ್ರದಲ್ಲಿ ನಿಮ್ಮ ಜಿಲ್ಲಾಧಿಕಾರಿಗಳನ್ನು ಕೇಳಿ.

ಡಾ:ಹೆಚ್.ಸಿ.ಮಹದೇವಪ್ಪ : ಈಗ ರವಿಯವರು ಕರೆಕ್ಟಾಗಿ ಹೇಳಲಿ. ಒಂದೂವರೆ ಕೋಟಿ ರೂ.ಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಕಳೆದ ಸಲವೇ ಹೇಳಿದ್ದರು. ಆದರೆ, ನಿಜವಾಗಿಯೂ ಕೊಟ್ಟಿರುವುದು 50 ಲಕ್ಷ ಮಾತ್ರ. ಮತ್ತು ಉಳಿದ ಒಂದು ಕೋಟಿ ರೂ.ಗೆ ಪ್ರೋಗ್ರಾಂ ಕೊಡಿ ಎಂದು ಹೇಳಿದ್ದಾರೆ. 50 ಲಕ್ಷ ರೂ.ಗೆ ಮಂಜೂರಾತಿ ಕೊಟ್ಟಿದ್ದಾರೆ. ಒಂದು ಕೋಟಿ ರೂ.ಗೆ ಮಂಜೂರಾತಿ ಕೊಟ್ಟಿಲ್ಲ. ಅದುದರಿಂದ, ಮಾನ್ಯ ಶಾಸಕರು ಕರೆಕ್ಟಾಗಿ ಹೇಳಬೇಕು.

ಶ್ರೀ ಸಿ.ಟಿ.ರವಿ : ಆಗಿದೆ. ನಾವು ಮೊದಲನೇ ಬಾರಿಗೆ ಶಾಸಕರಾಗಿ ಬಂದಾಗ ಶಾಸಕರ ಅನುದಾನ ಎಷ್ಟು ಕೊಟ್ಟರು? ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲರೆ, ಎಷ್ಟು ಕೊಟ್ಟಿದ್ದರು?

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಮಣ್ಣು ತಿಂದಿದ್ದೀರಿ, ನಾವೂ ಮಣ್ಣು ತಿನ್ನುತ್ತೇವೆಂದು ಇವರು ಹೇಳುತ್ತಿದ್ದಾರೆ. ಹೋಗಲಿ, ನೀವಾದರೂ ಸರಿಯಾಗಿ ಅನ್ನ ತಿನ್ನಿ. ನಾವು ಮಣ್ಣು ತಿಂದೇ ಇಲ್ಲಿ ಕುಳಿತಿದ್ದೇವೆ. ನೀವು ಹಾಗೆ ಮಾಡಿದ್ದೀರಿ, ನಾವು ಹೀಗೆ ಮಾಡುತ್ತೇವೆಂದರೆ.....

ಶ್ರೀ ಸಿ.ಟಿ.ರವಿ : ಕೇಳಬೇಕಲ್ಲ. ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಬಂದ ನಂತರ ಎಷ್ಟು ಕೊಟ್ಟಿದ್ದರು? ಒಂದು ರೂಪಾಯಿ ಕೂಡ ಇಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿಗೂ ಹಣವಿಲ್ಲ, ಶಾಸಕರ ಅನುದಾವೂ ಇಲ್ಲ. ನಾವು ಅಂದುಕೊಂಡೆವು. 'ಶಾಸಕಗಿರಿ' ಎಂದರೆ, ನಾವು ಆ ತರಹದ ಕೆಲಸ ಮಾಡಬಹುದು, ಈ ತರಹದ ಕೆಲಸ ಮಾಡಬಹುದು ಅನ್ನುವವರಿಗೆ ಊರಿನಲ್ಲಿ, ಬೀದಿಯಲ್ಲಿ ಬೈಸಿಕೊಳುವುದಷ್ಟೇ ಆಗಿತ್ತು. ನಾವು ಏನೂ ಮಾಡುವುದಕ್ಕೆ ಆಗದಿರುವ ಸ್ಥಿತಿಯಲ್ಲಿದ್ದೆವು. ಅವರು ಹೇಳುತ್ತಾರೆಯೇ? ಎದನ್ನು ಇವತ್ತು ಟೀಕೆ ಮಾಡುತ್ತಾರಲ್ಲ ಅದನ್ನೇಕೆ ಹೇಳುವುದಿಲ್ಲ ಹಾಗಾದರೆ ಅದು ಜಾಣ ಜಾಣ ಮರವೇ ಕಿವುಡೇ? ನಿಮಗೆ ಕೊಟ್ಟಿದ್ದರ ಬಗ್ಗೆ ಹೇಳಿ.

ಅಧ್ಯಕ್ಷರೆ, ಇವರು ಯಾರು ಏನೇ ಟೀಕೆಗಳನ್ನು ಮಾಡಲಿ, ಯಡಿಯೂರಪ್ಪನವರು ಮಂಡಿಸಿರುವ ಬಜೆಟ್ ಹೇಗಿದೆ ಎಂದರೆ, ಆಡು ಮುಟ್ಟದ

ಸೊಪ್ಪಿಲ್ಲ, ಯಡಿಯೂರಪ್ಪನವರು ತಲುಪದಿರುವ ಜನವರ್ಗ ಇಲ್ಲ. ಯಾವ ವರ್ಗಕ್ಕೆ ಕೊಟ್ಟಿಲ್ಲ ಹೇಳಿ? ಯಡಿಯೂರಪ್ಪನವರ ಮುಂಗಡ ಪತ್ರ ತಲುಪದಿರುವ ಜನವರ್ಗ ಇಲ್ಲ. ಇದು ವರ್ಗಕ್ಕೆ ಇದು ತಲುಪಿಲ್ಲ ಹೇಳಿ? ಇವತ್ತು ಮಠ–ಮಂದಿರಗಳಿಗೆ ಹಣ ಕೊಟ್ಟಿರುವುದಕ್ಕೆ ಟೀಕೆ ಮಾಡುತ್ತಾರೆ. ವೋಟು ಬ್ಯಾಂಕ್ ದೃಷ್ಟಿಯಿಟ್ಟುಕೊಂಡು ಮಾಡಿದ್ದು ಎಂದು ಹೇಳುತ್ತಾರೆ. ನಾನು ಅವರಿಗೆ ಪ್ರಶ್ನೆ ಕೇಳಲು ಬುಸುತ್ತೇನೆ. ಹಜ್ ಯಾತ್ರೆಗೆ ಹಣಕೊಟ್ಟರಲ್ಲ, ಯಾವ ಬ್ಯಾಂಕ್‌ನ ದೃಷ್ಟಿಯಿಟ್ಟುಕೊಂಡು ಹಣ ಕೊಟ್ಟರು? ಅದರಲ್ಲಿ ಮೊದಲು ಮೂಲಭೂತ ಸೌಕರ್ಯದ ಅಭಿವೃದ್ಧಿಗೆ ಎಂದು ಹಣ ಕೊಟ್ಟರೇ? ಏಕೆ ಕೊಟ್ಟಿರಿ? ಅವತ್ತು ನೀವು ಟೀಕೆ ಮಾಡಿದಿರಾ? ನೀವು ವೋಟು ಬ್ಯಾಂಕ್ ತಂದಿಟ್ಟುಕೊಂಡೇ ಆ ಕೆಲಸ ಮಾಡಿದ್ದು. ನಿಮಗೆ ಬೇಕಾದಂತಹ ವೋಟು ಬ್ಯಾಂಕ್‌ನ್ನು ದೃಷ್ಟಿಯಲ್ಲಿಟ್ಟುಕೊಂಡು ನೀವು ಮಾಡಿದಿರಿ, ನಮಗೆ ಬೇಕಾದಂತಹ ವೋಟು ಬ್ಯಾಂಕನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಮಾಡಿದ್ದೇವೆ. ಹಾಗೆ ಮಾಡಿರುವುದರಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದೇವೆ.

ದಲಿತರ ದೈವ ಬಬ್ರುಸ್ವಾಮಿ. ದಕ್ಷಿಣ ಕನ್ನಡದ ಚಿಕ್ಕಮಗಳೂರಿನ ಮಲೆನಾಡು ಭಾಗದ ಮುಂದಾಳು ಸಮಾಜದ ದಲಿತರ ದೈವ ಬಬ್ರುಸ್ವಾಮಿ. ಆ ಬಬ್ರುಸ್ವಾಮಿ ದೈವಸ್ಥಾನಕ್ಕೆ ಅಗತ್ಯ ಸೌಲಭ್ಯವಿರಲಿಲ್ಲ, ತಾಕತ್ತೂ ಇರಲಿಲ್ಲ. ಆದರೆ, ಆ ದಲಿತರ ದೈವಸ್ಥಾನದ ಅಭಿವೃದ್ಧಿಗೆ ಒಂದು ಕೋಟಿ ರೂ. ಕೊಟ್ಟಿದ್ದು ಅಪರಾಧ ಎನ್ನುವುದಾದರೆ, ನಾವು ಆ ಅಪರಾಧವನ್ನು ಹೊತ್ತುಕೊಳ್ಳುವುದಕ್ಕೆ ತಯಾರಿದ್ದೇವೆ. ಇಲ್ಲಿ ನೋಡಬೇಕಾಗಿರುವುದೇನೆಂದರೆ, ಆ ವರ್ಗವನ್ನು ಗುರ್ತಿಸುವ ದೃಷ್ಟಿ ಇದುವರೆಗೂ ಆ ವೋಟು ಬ್ಯಾಂಕಿನ ಮೇಲೆ ಕಣ್ಣಿಟ್ಟು, ಮೂಗಿಗೆ, ಮೊಣಕೈಗೆ ತುಪ್ಪ ಸವರಿ ವೋಟು ತೆಗೆದುಕೊಳ್ಳುತ್ತಿದ್ದ ಅವರಿಗೆ ಬರಲಿಲ್ಲ. ನಮ್ಮ ಯಡಿಯೂರಪ್ಪನವರಿಗೆ ಬಂತು. ಆದಕಾರಣ, ನಾವು ಅವರನ್ನು ಅಭಿಂದಿಸುತ್ತೇವೆ. ಈ ದೃಷ್ಟಿ ಇರಬೇಕು.

ವಾಲ್ಮೀಕಿ ಹೆಸರಿನಲ್ಲಿ ಹಣ ಕೊಡುವುದು ತಪ್ಪೇ? ಹಿಂದುಳಿದ ವರ್ಗದ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡು, ಲಂಬಾಣಿ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡು ಅಭಿವೃದ್ಧಿಗೆ ಹಣ ಕೊಡುವುದು ತಪ್ಪೇ? ಹಿಂದುಳಿದ ವರ್ಗದವರ ಬಗ್ಗೆ ಬರೀ ಮಾತನಾಡಿದರೆ ಆಗುವುದಿಲ್ಲ. ಅವರ ಪರವಾಗಿ ಕುರುಬ, ನೇಕಾರ, ಸವಿತಾ, ಮಡಿವಾಳ ಸಮಾಜ ಇರಬಹುದು, ಸಮಾಜದ ಎಲ್ಲ ಕಟ್ಟಕಡೆಯ ವರ್ಗಕ್ಕೆ ಬರೀ ಮಾತನಾಡುತ್ತಾ, ಘೋಷಣೆ ಕೂಗುತ್ತಾ ಬಂದಿರಲ್ಲ. ನಮ್ಮ ಸರ್ಕಾರ ಘೋಷಣೆ ಹಾಕುವ ಕೆಲಸವನ್ನು ಮಾಡಲಿಲ್ಲ. ಬಜೆಟ್ನಲ್ಲಿ ಅನುದಾನ ಒದಗಿಸಿ ಅವರ ಅಭಿವೃದ್ಧಗೆ ಕಾಯಕಲ್ಪ ಕೊಡುವ ಕೆಲಸವನ್ನು ಮಾಡಿದ್ದಾರೆ. ಅದಕ್ಕೋಸ್ಕರ, ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಯಡಿಯೂರಪ್ಪನವರನ್ನು ಅಭಿನಂದಿಸಬಯಸುತ್ತೇನೆ.

ಶ್ರೀ ಆರ್.ಧ್ರುವನಾರಾಯಣ : ಅಧ್ಯಕ್ಷರೆ, ನಾನು ಅವರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮದಿಂದ ಸುಮಾರು 120 ಕೋಟಿ ರೂ.ಗಳಷ್ಟು ಏನು ಸಾಲ ತೆಗೆದುಕೊಂಡಿದ್ದಾರೆ, ಅದನ್ನು

ಮನ್ನಾ ಮಾಡಿಸುವುದಕ್ಕೆ ತಾವು ಹೇಳಬೇಕು. ಇದು ಒಂದು ವಿಷಯ. ಇನ್ನೊಂದು, ಶೇಕಡ 3ರ ಬಡ್ಡಿ ದರದಲ್ಲಿ ಸೊಸೈಟಿಗಳಲ್ಲಿ ಸಾಲ ಕೊಡುತ್ತಿದ್ದಾರಲ್ಲ, ಅದನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸಿ ಅಲ್ಲಿ ವಿಧಿಸುತ್ತಿರುವ ಶೇಕಡ 6ರ ಬದಲು ಶೇಕಡ 3ಕ್ಕೆ ಇಳಿಸುವಂತೆ ಕ್ರಮ ಕೈಗೊಳ್ಳಿ. ಒಂದು ಲಕ್ಷ ರೂಪಾಯಿಯನ್ನು ಯಾವುದೋ ದೇವಸ್ಥಾನಕ್ಕೆ ಕೊಟ್ಟರು, ದಲಿತ ದೈವದ ಅಭಿವೃದ್ಧಿಗೆ ಕೊಟ್ಟರು ಎಂದು ಬರೇ ಅವರ ಕಣ್ಣೊರೆಸುವ ಮಾತನಾಡಬಾರದು. ಒಂದು ಲಕ್ಷ ರೂಪಾಯಿಯನ್ನು ದೇವಸ್ಥಾನಕ್ಕೆ ಕೊಟ್ಟರೆ ಉದ್ಧಾರವಾಗುವುದಿಲ್ಲ. ನೀವು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ನೀಡುತ್ತಿರುವ ಸಾಲಕ್ಕೆ ಅದನ್ನು ವಿಸ್ತರಿಸಿ ಮಾಡಿಸಬೇಕು.

ಶ್ರೀ ಸಿ.ಟಿ.ರವಿ : ಈ ಮೊದಲು 18 ಪರ್ಸೆಂಟ್ ಮತ್ತು ಅದು ಇದು ಸೇರಿಸಿ 21 ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಿದ್ದರು. ಬಡ್ಡಿಯನ್ನು ಕಟ್ಟದಿದ್ದರೆ ಸೈಕಲು, ಕುರ್ಚಿ, ರೇಡಿಯೊ, ಹಗೆಯಮೇಲಿದ್ದ ರಾಗಿ ಮೂಟೆಯನ್ನು ಬಿಡದೆ ಎಲ್ಲವನ್ನು ಜಪ್ತಿ ಮಾಡಿಕೊಂಡು ಹೋಗುತ್ತಿದ್ದರು. ಆ ರೀತಿ ಮಾಡುವಾಗ ಅಧಿಕಾರದಲ್ಲಿ ನಾವು ಇದ್ದೆವಾ? ಆವತ್ತು ಮನೆ ಹಾಳು ಬಡ್ಡಿಯನ್ನು ಹಾಕುತ್ತಿದ್ದಿರಲ್ಲ ಆಗ ನಾವು ಇದ್ದೆವಾ? ಅದರ ಬಗ್ಗೆ ಯಾರಾದರು ಪ್ರಶ್ನೆ ಎತ್ತಿದ್ದಿರಾ? ರೈತರ ಜಮೀನನ್ನು ಹರಾಜು ಹಾಕಿದಿರಿ. ಆವತ್ತು ಜಪ್ತಿ ಮಾಡಿಸಿದಿರಿ. ಎತ್ತಿನ ಗಾಡಿಯನ್ನೂ ಬಿಡುತ್ತಿರಲಿಲ್ಲ. ಕೊಟ್ಟಿಗೆಯಲ್ಲಿದ್ದ ಎತ್ತನ್ನೂ ಬಿಡುತ್ತಿರಲಿಲ್ಲಾ. ಆ ರೀತಿ ಮನೆ ಹಾಳು ಬಡ್ಡಿ ಹಾಕುವ ಕೆಲಸವನ್ನು ನಮ್ಮ ಸರ್ಕಾರ ಮಾಡಲಿಲ್ಲ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ತಾವು ಏನು ಮಾತನಾಡುತ್ತಿದ್ದೀರಿ? Land Reforms Actನ್ನು ನೀವು ತಂದಿದ್ದೀರಾ? ಋಣ ಮುಕ್ತ ಕಾಯ್ದೆಯನ್ನು ನೀವು ತಂದಿದ್ದೀರಾ? ಸುಮ್ಮನೆ ಏನೇನೊ ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಎಲ್ಲರು ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ : ಆ ಎಲ್ಲಾ ಸುಧಾರಣೆ ತಂದು ಕೆಲಸ ಮಾಡಿದ್ದಕ್ಕೆಯೇ ಹಿರಿಯ ಶಾಸಕರಾದ ಮುನಿಯಪ್ಪನವರು ಆಕ್ರೋಶಭರಿತರಾಗಿ ಮಾತನಾಡುತ್ತಿದ್ದದ್ದು. ಅಂದರೆ, ಕಳೆದ 63 ವರ್ಷಗಳಿಂದ ಯಡಿಯೂರಪ್ಪನವರೇ ಮುಖ್ಯಮಂತ್ರಿಯಾಗಿದ್ದರಾ? ಬಿ.ಜೆ.ಪಿ.ಯೇ ಅಧಿಕಾರದಲ್ಲಿ ಇತ್ತಾ? ಏನೂ ಮಾಡಿಲ್ಲವೆಂದು ಈ ಸಭೆಯಲ್ಲಿ ಅವರು ಆಕ್ರೋಶಭರಿತರಾಗಿ ಮಾತನಾಡುತ್ತಿದ್ದರಲ್ಲಾ ಇವೆಲ್ಲಾ ತಂದಿದ್ದಕ್ಕೆಯೇ. ಅಧಿಕಾರದಲ್ಲಿದ್ದಾಗ ನೆಟ್ಟಗೆ ಕೆಲಸ ಮಾಡಿದ್ದರೆ ಈ ರೀತಿ ಆಕ್ರೋಶಭರಿತರಾಗಿ ಮಾತನಾಢುವ ದುಸ್ಥಿತಿ ಏಕೆ ಬರುತ್ತಿತ್ತು? ನೀವು ಏನೇನು ಮಾಡಿದ್ದೀರಿ ಎಂದು ಅವರೇ ಆಕ್ರೋಶಭರಿತರಾಗಿ ಹೇಳಿದರಲ್ಲಾ. ಈ ಪರಿಸ್ಥಿತಿ ಬರಬೇಕೇನು? ಅಜೀರ್ಣವಾಗುವಷ್ಟು ಬಹುಮತ ಕೊಟ್ಟಿದ್ದರಲ್ಲಾ ಏಕೆ ಮಾಡಲಿಲ್ಲ.

ಇವತ್ತು ನಮಗೆ ಪಾಠ ಹೇಳಿಕೊಡುತ್ತೀರಲ್ಲಾ, ನೀವು ಮಾಡಿದ್ದೇನು. ದಲಿತರ ಕಾಲೋನಿಗಳಿಗೆ ಬಜೆಟ್‌ನಲ್ಲಿ 10 ಕೋಟಿ ಹಣವನ್ನು ತೆಗೆದು ಇಟ್ಟಿದ್ದಾರೆ. ಹಿಂದಿನ 63 ವರ್ಷದಲ್ಲಿ ಯಾವುದಾದರು ಬಜೆಟ್‌ನಲ್ಲಿ ದಲಿತರ ಕಾಲೋನಿ ಅಭಿವೃದ್ಧಿಗೆ 10 ಕೋಟಿ ತೆಗೆದು ಇಟ್ಟಿರುವ ಉದಾಹರಣೆ ತೋರಿಸಿ? ಸಮಾಜ ಕಲ್ಯಾಣ ಇಲಾಖೆಯ ಮೂಲಕ ದಲಿತರಿಗಾಗಿಯೇ 114 ಹೊಸ ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದ್ದಾರಲ್ಲಾ ಆ ರೀತಿ ಒಂದೇ ಬಜೆಟ್‌ನಲ್ಲಿ ಮಾಡಿರುವ ಒಂದು ಉದಾಹರಣೆಯನ್ನು ತೋರಿಸಿ?

ಶ್ರೀ ಆರ್.ಧ್ರುವನಾರಾಯಣ : ಅವರು ಸುಳ್ಳು ಸುಳ್ಳನ್ನೆ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಅವಕಾಶ ಇದೆ. ಆಗ ಎಲ್ಲವನ್ನು ಹೇಳಿ. ದಯಮಾಡಿ ಈಗ ಮಧ್ಯದಲ್ಲಿ ಮಾತನಾಡುವುದು ಬೇಡ.

ಶ್ರೀ ಸಿ.ಟಿ.ರವಿ : 114 ಹೊಸ ಹಾಸ್ಟೆಲ್ ಮಂಜೂರು ಮಾಡಿರುವುದನ್ನು ಓದಬೇಕು ಎಂದರೆ ಓದುತ್ತೇನೆ. ಏನೂ ಮಾಡಿಲ್ಲವೆಂದು ಹೇಳಿದಿರಲ್ಲಾ, ಅವರವರ ಕ್ಷೇತ್ರದಲ್ಲಿ ಭಾಗ್ಯ ಲಕ್ಷ್ಮಿ ಬಂಡ್‌ನ ವಿತರಣೆಯನ್ನು ಈ ಶಾಸಕರ್‍ಯಾರೂ ವಿತರಣೆ ಮಾಡಿಲ್ಲವೇ? ಕುಮಾರಸ್ವಾಮಿಯವರ ಕಾಲದಲ್ಲಿ ಯಡಿಯೂರಪ್ಪನವರು ಹಣಕಾಸು ಸಚಿವರಾಗಿ ಬಂದು ಅದನ್ನು ಮಾಡಬೇಕಾಗಿತ್ತೇ? ಅದಕ್ಕಿಂತ ಮೊದಲು ಜನತಾದಳ ಸರ್ಕಾರ ಇರಲಿಲ್ಲವೇ? ನೀವು ಕಾಂಗ್ರೇಸ್‌ನವರು ಇದ್ದಿರಲ್ಲ ಏಕೆ ಮಾಡಲಿಲ್ಲ?

ಶ್ರೀ ಎನ್.ಸಂಪಂಗಿ : ಸೈಕಲ್ ಏನಾಯಿತು?

ಶ್ರೀ ಸಿ.ಟಿ.ರವಿ : ಸಂಪಂಗಿಯವರು ಅವರ ಕ್ಷೇತ್ರಕ್ಕೆ ಹೋಗುವುದನ್ನು ಮರೆತುಬಿಟ್ಟಿದ್ದಾರೆ. ಅವರ ಕ್ಷೇತ್ರದಲ್ಲಿ ಸೈಕಲ್ ವಿತರಣೆಯಾಗುತ್ತಿರುವುದು ಅವರಿಗೆ ಗೊತ್ತಿಲ್ಲ. ಅಷ್ಟರಮಟ್ಟಿಗೆ ಅವರು ಅವರ ಕ್ಷೇತ್ರದಿಂದ ದೂರವಿದ್ದಾರೆ. ಅವರ ಕ್ಷೇತ್ರದಲ್ಲಿ ಸೈಕಲ್ ವಿತರಣೆಯಾಗುತ್ತಿರುವ ಮಾಹಿತಿಯೂ ಅವರಲ್ಲಿ ಇಲ್ಲ.

ಶ್ರೀ ಎನ್.ಸಂಪಂಗಿ : ವಿರೋಧ ಪಕ್ಷದಲ್ಲಿರುವವರಿಗೆ ಸೈಕಲ್ ಕೊಟ್ಟಿಲ್ಲ. ಯಾವುದೇ ಕನಿಷ್ಠ ಕಾರ್ಯಕ್ರಮವನ್ನು ಕೊಟ್ಟಿಲ್ಲ.

ಶ್ರೀ ಸಿ.ಟಿ.ರವಿ : ಅವರು ಇಡೀ ಯೋಜನೆಯ ಬಗ್ಗೆ ತಪ್ಪು ತಿಳಿದುಕೊಂಡಿದ್ದಾರೆ. ವಿರೋಧ ಪಕ್ಷ ಆಡಳಿತ ಪಕ್ಷದ ಶಾಸಕರಿಗೆ ಸೈಕಲ್ ಕೊಡತಕ್ಕ ಯೋಜನೆ ಅಲ್ಲ. 8ನೇ ತರಗತಿಯಲ್ಲಿ ಓದತಕ್ಕ ಶಾಲೆಯ ಎಲ್ಲಾ ಮಕ್ಕಳಿಗೆ ಸೈಕಲ್ ಕೊಡತಕ್ಕ ಯೋಜನೆ ಅದು. ಶಾಸಕರಿಗೆ ಸೈಕಲ್ ಕೊಡುವ ಪದ್ಧತಿಯಲ್ಲ ಇದು.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ನಿಮಗೆ ಈಗ ಸೈಕಲ್ ಕೊಡಬೇಕಾಗುತ್ತದೆ. ನೀವು ಸೈಕಲ್ ಮೇಲೆ ಹೋಗಬೇಕಾತ್ತದೆ!

ಶ್ರೀ ಎನ್.ಸಂಪಂಗಿ : ಮಧ್ಯಾಹ್ನದ ಬಿಸಿ ಊಟದ ಯೋಜನೆಯನ್ನು ಮಾಡಿದವರು ಯಾರು? ಕಾಂಗ್ರೇಸ್‌ನವರು.

ಶ್ರೀ ಸಿ.ಟಿ.ರವಿ : ದೇವರಾಜ ಅರಸು ನಿಗಮದಿಂದ 5 ಸಾವಿರ ಸಬ್ಸಿಡಿ ಮತ್ತು 5 ಸಾವಿರ ರೂಪಾಯಿ ಸಾಲ ಒಟ್ಟು ಹತ್ತು ಸಾವಿರ ರೂಪಾಯಿಗಳನ್ನು ಹಿಂದುಳಿದ ವರ್ಗಳ ವೃತ್ತಿಪರ ಯೋಜನೆಗಳನ್ನು ಪ್ರೋತ್ಸಾಹ ಮಾಡಲು ನೀಡುತ್ತಿರುವುದು ಸಾಮಾಜಿಕ ನ್ಯಾಯವಲ್ಲವೇ? ಆ ವರ್ಗದ ಜನರನ್ನು ಮೇಲಕ್ಕೆ ಎತ್ತುವ ಕಾರ್ಯಕ್ರಮವಲ್ಲವೇ? 3096 ಕೋಟಿ ನೀರಾವರಿಗೆ ಇಟ್ಟ ನಂತರವೂ ಅವರು ಅದರ ಬಗ್ಗೆ ಟೀಕೆ ಮಾಡಿದರು. ಭದ್ರಾ ಮೇಲ್ದಂಡೆ ಯೋಜನೆ ಮಹುಶಃ ನಾನು ಹುಟ್ಟುವುದಕ್ಕಿಂತ ಮೊದಲಿನಿಂದಲು ಜನರ ಮೂಗಿಗೆ ತುಪ್ಪ ಸವರಿದ್ದೇ ಸವರಿದ್ದು. ಆ ಹೆಸರನ್ನು ಹೇಳಿಕೊಂಡೇ 4–5 ಚುನಾವಣೆಗಳನ್ನು ಗೆದ್ದುಬಿಟ್ಟಿದ್ದಾರೆ. ಈಗ ನೀರು ಕೊಡುತ್ತೇವೆ, ಈಗ ಯೋಜನೆಗೆ ಸರ್ವೇಯಾಗುತ್ತಿದೆ, ಈಗ ಡ್ಯಾಂ ಕಟ್ಟಲು ಪ್ರಾರಂಭ ಮಾಡಿಯಾಗಿದೆ ಎಂದು ಹೇಳಿಕೊಂಡೆ 4–5 ಚುನಾವಣೆಗಳನ್ನು ಗೆದ್ದಿದ್ದರು. ಅದರೆ, ಆ ಕೆಲಸವನ್ನು ಮಾಡಲಿಲ್ಲ.

ಶ್ರೀ ಆರ್.ಧ್ರುವನಾರಾಯಣ : ನೀವು ಕೇವಲ ಭಜನೆ ಮಾಡಿಕೊಂಡು ಕುಳಿತಿದ್ದೀರಿ.

ಶ್ರೀ ಸಿ.ಟಿ.ರವಿ : ಈಗ ಬಜೆಟ್‌ನಲ್ಲಿ 500 ಕೋಟಿ ಹಣವನ್ನು ಇದಕ್ಕಾಗಿ ಇಟ್ಟು ಶಂಕು ಸ್ಥಾಪನೆಯನ್ನು ಮಾಡಿದ್ದಾರೆ. ಅವರಂತೆ ಮೊಳಕೈಗೆ ತುಪ್ಪವನ್ನು ಸವರಿಲ್ಲ ನಾವು. ಮೂಗಿಗೆ ತುಪ್ಪ ಸವರಿದರಾದರು ಕೊನೆಯ ಪಕ್ಷ ಕಷ್ಟ ಪಟ್ಟರೆ ಯಾರೋ ಒಬ್ಬರಾದರೂ ಆ ತುಪ್ಪವನ್ನು ನೆಕ್ಕಬಹುದು. ಆದರೆ, ಮೊಣಕೈಗೆ ತುಪ್ಪವನ್ನು ಸವರಿದರೆ ಹೇಗೆ ನೆಕ್ಕುವುದು? ಆ ರೀತಿ ಇವರು ಚುನಾವಣೆಯ ಸಮಯದಲ್ಲೆಲ್ಲಾ ಮೊಣಕತಿಗೆ ತುಪ್ಪವನ್ನು ಸವರಿ ಕೊನೆಗೆ ಚುನಾವಣೆಯಾದಮೇಲೆ ಸವರಿದ್ದ ತುಪ್ಪವನ್ನು ನೆಕ್ಕಲು ಆಗುವುದಿಲ್ಲವೆಂದು ಅವರು ಕೇಳಿದರೆ ಮುಂದಿನ ಚುನಾವಣೆಯಲ್ಲಿ ಮತ್ತು ಒಳ್ಳೆಯ ತುಪ್ಪ ತಂದು ಹಾಕುತ್ತೇನೆಂದು ಇವರೇ ನೆಕ್ಕಿ ಬಂದುಬಿಡುವುದು. ಆ ಕೆಲಸವನ್ನೇನು ನಾವು ಮಾಡಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಜನರ ಮೊಣಕೈಗೆ ತುಪ್ಪವನ್ನು ಈಗ ಸವರಿರುವವರು ಇವರು. ಅದು ಯಾರಿಗೂ ಸಿಗುತ್ತಿಲ್ಲ.

ಶ್ರೀ ಎ.ಮಂಜು : ಹಾರಂಗಿ, ಹೇಮಾವತಿ ಡ್ಯಾಂನ್ನು ಮಾಡಿರುವವರು ಯಾರು ?

ಶ್ರೀ ಸಿ.ಟಿ.ರವಿ : ಮಾನ್ಯ ಉಪಾಧ್ಯಕ್ಷರೆ, ಎಷ್ಟು ಆತ್ಮವಿಶ್ವಾಸದ ಕೊರತೆಯಿಂದ ಮಾತನಾಡಿದ್ದಾರೆ ಎಂಬುದನ್ನು ತಾವು ನೋಡುತ್ತಿದ್ದೀರಿ. ಅದಕ್ಕೆ ಕಡಿಮೆ, ಇದಕ್ಕೆ ಕಡಿಮೆ ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದೀರಿ. ಅದರೆ, ಹೆಚ್ಚಿಗೆ ಯಾವುದಕ್ಕೆ ಕೊಟ್ಟಿದ್ದೀರಿ ಎಂದು ಹೇಳಲೇ ಇಲ್ಲವಲ್ಲಾ? ರೂಪಾಯಿಗೆ ರೂಪಾಯಿ ಖರ್ಚಾಗಿದೆ ತಾನೆ? ಯಾವುದಕ್ಕಾದರು ಕಡಿಮೆಯಾಗಿದ್ದರೆ ಇನ್ನು ಯಾವುದಕ್ಕಾದರು ಹೆಚ್ಚಾಗಿರಬೇಕಲ್ಲಾ? ಹೆಚ್ಚಾಗಿರುವುದನ್ನು ಹೇಳಲೇ ಇಲ್ಲ. ಗುಡಿಗುಂಡಾರಗಳಿಗೆ ಕೊಟ್ಟಿರುವುದನ್ನು ಜನರ ನಡುವೆ ವಿರೋಧ ಮಾಡಿದಿರಿ. ನಿಮ್ಮ ಹಣೆಯಬರಹ ಗೊತ್ತಾಗುತ್ತದೆ. ಜನರು

ಅಟ್ಟಾಡಿಸಿಕೊಂಡು ಹೊಡೆಯುತ್ತಾರೆ. ನೀವು ಜನರ ನಡುವೆ ಗುಡಿಗುಂಡಾರಗಳಿಗೆ ಹಣ ಕೊಟ್ಟಿರುವುದು ತಪ್ಪು ಎಂದು ವಿರೋಧ ಮಾಡಿ ನೋಡೋಣ? ಯಡಿಯೂರಪ್ಪನವರನ್ನು ಬಯ್ಯಿರಿ ನೋಡೋಣ? ಸನ್ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಆರ್.ಧ್ರುವನಾರಾಯಣ : ಅವರು ಬಜೆಟ್ ಬಗ್ಗೆ ಮಾತನಾಡುತ್ತಿಲ್ಲ.

ಉಪಾಧ್ಯಕ್ಷರು : ನೀವಿ ಏಕೆ ಮಧ್ಯೆ ಎದ್ದು ಮಾತನಾಡುತ್ತೀರಿ? ನೀವು ಮಾತನಾಡುವಾಗ ಹೇಳಿ. ಅವರಿಗೆ ಮಾತನಾಡಲು ಅವಕಾಶ ಕೊಡಿ. ಪ್ರತಿಸಲ ಏಕೆ ಎದ್ದೇಳುತ್ತೀರಿ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಅವರು ಮಾತನಾಡಬೇಕಾದರೆ ಸದನವನ್ನು ಕೆರಳಿಸುವ ರೀತಿಯಲ್ಲಿ ಮಾತನಾಡಬಾರದು. ಅದನ್ನು ತೆಗೆದುಕೊಂಡು, ಇದನ್ನು ತೆಗೆದುಕೊಂಡು ಹೊಡೆಯುತ್ತಾರೆಂದರೆ ಹೇಗೆ? ಅವರು ಬೇರೆ ಶಾಸಕರಿಗೆ ಕೆರಳಿಸುವ ರೀತಿಯಲ್ಲಿ ಮಾತನಾಡಬಾರದು.

ಉಪಾಧ್ಯಕ್ಷರು : ನೀವು ಮಾತನಾಡುವಾಗ ಹೇಳಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : I am on a point of order. ಅವರನ್ನು ಕುಳಿತುಕೊಳಗಳಲು ಹೇಳಿ. ಸನ್ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ. ಆ ರೀತಿ ಮಾತನಾಡದಂತೆ ಅವರಿಗೆ ನಿರ್ಬಂಧ ಹಾಕಿ. ಅವರು ನಿಯಮಾವಳಿ ಪ್ರಕಾರ ಮಾತನಾಡುತ್ತಿಲ್ಲ.

ಉಪಾಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ. ಏಕೆ ಮಧ್ಯೆ ಮಧ್ಯೆ ಮಾತನಾಡುತ್ತೀರಿ. ಅವರು ಮಾತನಾಡಲಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : I am on a point of order. ಅವರು ಸಂಯಮದಿಂದ ಮಾತನಾಡಬೇಕು.

ಉಪಾಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ : ನಮ್ಮಲ್ಲಿ ಗಡಿ ಮಾರಮ್ಮ ಎಂದು ಹೇಳುತ್ತಾರೆ. ಆ ರೀತಿ ಗಡಿ ಮಾರಮ್ಮನನ್ನು ಕಳಿಸಿದಂತೆ ಗಡಿ ದಾಟಿಸಿ ಕಳಿಸಿಬಿಡುತ್ತಾರೆ. ಸತ್ಯ ಹರಿಶ್ಚಂದ್ರ ನಾಡಕದಲ್ಲಿ ನಕ್ಷತ್ರಿಕ ಎಂಬ ಒಂದು ಪಾತ್ರ ಇದೆ. ಆ ನಕ್ಷತ್ರಿಕನ ಪಾತ್ರ ಏನೆಂದರೆ ಸತ್ಯಹರಿಶ್ಚಂದ್ರನನ್ನು ಕಾಡುವುದು. ಇಲ್ಲಿ ಇವರೆಲ್ಲ ಏಕೆ ಆ ಪಾತ್ರವನ್ನು ವಹಿಸಲಿ ಹೊರಟಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇವರಿಗೆ ಕಾಡುವುದೇ ಕೆಲಸ. ಆ ಪಾತ್ರವನ್ನು ನೀವೀರೋ ಈಗ ವಹಿಸುತ್ತಿದ್ದೀರಿ.

ಶ್ರೀ ಎನ್.ಸಂಪಂಗಿ : ನಿಮಗೆ ಮಂತ್ರಿ ಮಾಡಲಿಲ್ಲ. ಈ ರೀತಿ ಮಾತನಾಡಿದರೆ ಮಂತ್ರಿ ಮಾಡುತ್ತಾರೆಯೇ?

ಶ್ರೀ ಸಿ.ಟಿ.ರವಿ : ನನಗೆ ಮಂತ್ರಿಯಾಗುವ ಅವಕಾಶ ಇದೆ. ಆದರೆ, ಅಲ್ಲಿ ಇರುವವರೆಗೆ ಆಗುವ ಅವಕಾಶವೇ ಇಲ್ಲ. ಏನಾದರೂ ಈ ಕಡೆ ಬಂದರೆ ಒಂದು

ಅವಕಾಶ ಮಾಡಿಕೊಡೋಣ! ಇವರು ಇಲ್ಲಿ ತೋರಿಸುವ ಪೌರುಷವನ್ನು ಇವರ ಪಕ್ಷ ಅಧಿಕಾರದಲ್ಲಿರುವ ಕೇಂದ್ರದಲ್ಲಾದರೂ ತೋರಿಸಿ ಆ ರೈತರಿಗೆ 3 ಪರ್ಸೆಂಟ್ ಬಡ್ಡಿಯ ದರದಲ್ಲಾದರೂ ಸಾಲ ಕೊಡಿಸುವ ಕೆಲಸವನ್ನಾದರೂ ಮಾಡಿದರೆ ಕೊನೆಯ ಪಕ್ಷ ಅವರು ಮಾಡಿರು ಪಾಪವಾದರೂ ಕಡಿಮೆಯಾಗಿ ಅದರ ಹೊರೆಯನ್ನು ಸ್ವಲ್ಪಇಳಿಸಿಕೊಳ್ಳುವ ಕೆಲಸವಾದರೂ ಆಗುತ್ತದೆ. ಇಲ್ಲಿ ಅವರು ತೋರಿಸುವ ಪೌರುಷವನ್ನು ಅವರ leader ಮುಂದಾದರೂ ಹೋಗಿ ತೋರಿಸಿದರೆ ಒಳ್ಳೆಯದು ನಮಗೆ ಮುಖ ಎತ್ತಿಕೊಂಡು ತಿರುಗಲು ಆಗುತ್ತಿಲ್ಲ..

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಅದರ ಫಲಾನುಭವಿ ನೀವೂ ಆಗಿದ್ದೀರಿ. You are also beneficiary to that.

ಶ್ರೀ ಸಿ.ಟಿ.ರವಿ : ನಮಗೆ ಮುಖ ಎತ್ತಿಕೊಂಡು ತಿರುಗಲು ಆಗುತ್ತಿಲ್ಲ. ಇಲ್ಲಿ ಯಡಿಯೂರಪ್ಪನವರು 3 ಪರ್ಸೆಂಟ್ ಬಡ್ಡಿ ದರದಲ್ಲಿ ಕೊಟ್ಟು ಬಿಟ್ಟಿದ್ದಾರೆ. ನಮಗೇನಾದರೂ ಮಾನಮರ್ಯಾದೆ ಉಳಿಸಬೇಕೆಂದರೆ ನೀವೂ ಆ ರೀತಿ ಕೊಡಬೇಕೆಂದು ಅಲ್ಲಾದರೂ ಪೌರುಷ ತೋರಿಸಿದರೆ ಕನಿಷ್ಟ ಇವರು ಮಾಡಿದ ಪಾಪದ ಹೊರೆಯಾದರೂ ಕಡಿಮೆಯಾಗುತ್ತದೆ.

5.30 PM

[ಗೊಂದಲ]

ಶ್ರೀ ಕೆ.ಎಂ.ಶಿವಲಿಂಗೇಗೌಡ :– ... ಈಗ ನೀವು ಇದಕ್ಕಾಗಿ ಇಟ್ಟಿರುವ ದುಡ್ಡು ಎಷ್ಟು?

[ಗೊಂದಲ]

ಉಪಾಧ್ಯಕ್ಷರು :– ದಯವಿಟ್ಟು ಮಧ್ಯದಲ್ಲಿ ಯಾರೂ ಮಾತನಾಡಬೇಡಿ.

[ಗೊಂದಲ]

ಶ್ರೀ ಸಿ.ಟಿ.ರವಿ : ಮಾನ್ಯ ಉಪಾಧ್ಯಕ್ಷರೆ, ನಾವು ಏನೂ ಮಾಡಿಲ್ಲವೆಂದು ಹೇಳುತ್ತಾರೆ. ಕಳೆದ ಸಾರಿ ಹೇಳಿದಂತೆ, ಶೇಕಡ 3ರ ಬಡ್ಡಿ ದರದಲ್ಲಿ 2657 ಕೋಟಿ ರೂ.ಗಳ ಹಣವನ್ನು 10,40,717 ಜನ ರೈತರಿಗೆ ಕಳೆದ ಸಾರಿ ಸಂಘಗಳ ಮೂಲಕ ವಿತರಣೆ ಮಾಡಿಲ್ಲವೇ?

[ಗೊಂದಲ]

ಉಪಾಧ್ಯಕ್ಷರು :– ಮಾನ್ಯ ಶಿವಲಿಂಗೇಗೌಡರೇ, ದಯವಿಟ್ಟು ಕುಳಿತುಕೊಳ್ಳಿ

[ಗೊಂದಲ]

ಶ್ರೀ ಎಂ.ಟಿ.ಕೃಷ್ಣಪ್ಪ :– ಸ್ವಾಮಿ, ತಾವು ಯಾವ ವರ್ಷದ್ದು ಹೇಳುತ್ತಿದ್ದೀರಿ?

[ಗೊಂದಲ]

ಶ್ರೀ ಸಿ.ಟಿ.ರವಿ : 2007–08ನೇ ಸಾಲಿನ ಬಜೆಟ್‌ದ್ದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ :– 2007–08ನೇ ಸಾಲಿನದ್ದು ನೀವು ಹೇಳುತ್ತಿದ್ದೀರಿ. ಆಗ ಮಾನ್ಯ ಕುಮಾರಸ್ವಾಮಿಗಳು ಮುಖ್ಯಮಂತ್ರಿಗಳಾಗಿದ್ದರು.

[ಗೊಂದಲ]

ಶ್ರೀ ಸಿ.ಟಿ.ರವಿ : ಜಾಣ ಕುರುಡುತನಕ್ಕೆ ಯಾವುದೇ ಔಷಧಿ ಇಲ್ಲ. ನಿಜವಾಗಿ ಕುರುಡುತನ ಬಂದಿದ್ದರೆ, ಅದಕ್ಕೆ ಏನಾದರೂ ಮಾಡಿ ಔಷಧಿ ಕಂಡು ಹಿಡಿಯುವ ಕೆಲಸ ಮಾಡಬಹುದು. ಜಾಣ ಕುರುಡುತನಕ್ಕೆ ನಾನೆಲ್ಲಿ ಔಷಧಿ ಕೊಡಲಿ? ಇಡೀ ಜಗತ್ತಿನಲ್ಲೇ ಅದಕ್ಕೆ ಔಷಧಿ ಇಲ್ಲವೆಂದ ಮೇಲೆ, ಅದಕ್ಕೆ ನನ್ನ ಹತ್ತಿರ ಔಷಧಿ ಎಲ್ಲಿದೆ? ಜಾಣ ಕುರುಡುತನಕ್ಕೆ ಎಲ್ಲಿಯೂ ಔಷಧಿ ಇಲ್ಲ.

[ಗೊಂದಲ]

ಶ್ರೀ ಸಿ.ಟಿ.ರವಿ : ತಲಾ ಸಾವಿರ ರೂಪಾಯಿಗಳಂತೆ 22 ಲಕ್ಷ ಒಣ ಭೂಮಿ ಅವಲಂಬಿಸಿರತಕ್ಕಂಥ ರೈತರಿಗೆ 220 ಕೋಟಿ ರೂ.ಗಳನ್ನು ಚೆಕ್ ಮೂಲಕ ವಿತರಣೆ ಮಾಡಲಿಲ್ಲವೇ? ಮೊನ್ನೆ 3–5 ತಿಂಗಳ ಹಿಂದೆ ಅದನ್ನು ನಾವು ಮಾಡಿದ್ದೇವೆ. [ಗೊಂದಲ] ಬಜೆಟ್ ಜೂನ್–ಜುಲೈನಲ್ಲಿ ಪಾಸ್ ಆಗಿದೆ. ಅದಾದ ನಂತರವೇ 220 ಕೋಟಿ ರೂ.ಗಳನ್ನು ನಾವು ಕೊಟ್ಟಿದ್ದೇವೆ. ಆ ರೀತಿ ಕೊಟ್ಟಿದ್ದು ಇವರ್ಯಾರಿಗೂ ಕಣ್ಣಿಗೇ ಕಾಣಲಿಲ್ಲ ಎಂದರೆ, ನಾನು ಆಗಲೇ ಹೇಳಿದಂತೆ ಇದನ್ನು ಜಾಣ ಕುರುಡು ಎಂದೇ ಕರೆಯಬೇಕು. [ಗೊಂದಲ] ಇದಕ್ಕೇನೂ ಔಷಧಿ ಇಲ್ಲ. ಮಾನ್ಯ ಅಧ್ಯಕ್ಷರೆ, ನಂಜುಂಡಪ್ಪ ವರದಿ ಅನುಷ್ಠಾನಕ್ಕೆ 2007–08ನೇ ಸಾಲಿನಲ್ಲಿ 1572 ಕೋಟಿ ರೂ.ಗಳನ್ನು, 2008–09ನೇ ಸಾಲಿನಲ್ಲಿ 2547 ಕೋಟಿ ರೂ.ಗಳನ್ನು ಇಟ್ಟಿದ್ದರು. ಆದರೆ ಈ ಬಾರಿ ಅದಕ್ಕಾಗಿ 2574 ಕೋಟಿ ರೂ.ಗಳನ್ನು ಇಡಲಾಗಿದೆ. ಇದು ಹೆಚ್ಚುವರಿಯಲ್ಲವೇ? ಹಿಂದುಳಿದ ವರ್ಗದ ತಾಲ್ಲೂಕುಗಳ ಅಭಿವೃದ್ಧಿಯಾಗಬೇಕೆಂದು ಈ ಹಣ ಇಟ್ಟಿರುವುದು ನಿಮಗೆ ಗೊತ್ತಿಲ್ಲವೇ? ನನ್ನದೊಂದು dispute ಇದೆ.

[ಗೊಂದಲ]

ಶ್ರೀ ಕೆ.ಎಂ.ಶಿವಲಿಂಗೇಗೌಡ :– ... ಪ್ರತ್ಯೇಕವಾಗಿ ಆ ಹಣ ಇಟ್ಟಿಲ್ಲ, ...

[ಗೊಂದಲ]

ಉಪಾಧ್ಯಕ್ಷರು :– ದಯವಿಟ್ಟು ಮಧ್ಯದಲ್ಲಿ ಮಾತನಾಡಬೇಡಿ. ಈ ಚರ್ಚೆ ಮುಗಿಯಬೇಕು.

[ಗೊಂದಲ]

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, 114 ತಾಲ್ಲೂಕುಗಳು ಹಿಂದುಳಿದಿರತಕ್ಕ ತಾಲ್ಲೂಕುಗಳಾಗಿವೆ. ನಂಜುಂಡಪ್ಪ ವರದಿಯ ಆಧಾರದಲ್ಲಿ 2574 ಕೋಟಿ ರೂ.ಗಳನ್ನು ಅವುಗಳ ಅಭಿವೃದ್ಧಿಗೆ ನಾವು ತೆಗೆದಿಟ್ಟಿದ್ದೇವೆ. ನನಗೆ doubt ಏನೆಂದರೆ, ಈಗೆಲ್ಲಾ ಮಾತನಾಡುತ್ತಿರುವವರು ಅಭಿವೃದ್ಧಿ ಪರ ಇರುವವರು. ನಂಜುಂಡಪ್ಪನವರ ವರದಿ ಪ್ರಕಾರ ಹೊಳೆನರಸೀಪುರ ಹಿಂದುಳಿದಿರತಕ್ಕ ತಾಲ್ಲೂಕಾಗಿದೆ. ಇಷ್ಟು ವರ್ಷಗಳ ಕಾಲ ಆ ಕ್ಷೇತ್ರವನ್ನು ಪ್ರತಿನಿಧಿಸಿದ್ದವರು ಮಾಡಿದ್ದೇನು? ಅದು ನಿಜವಾಗಿಯೂ ಹಿಂದುಳಿದ ವರ್ಗದ ತಾಲ್ಲೂಕು ಆಗಿದ್ದರೆ, ಅದನ್ನು ಪ್ರತಿನಿಧಿಸಿದಂತಹ ಜನ ಉತ್ತರ ಕೊಡಬೇಕಲ್ಲವೇ? ಅದನ್ನು ಅವರು ಏಕೆ ಆ ಸ್ಥಿತಿಯಲ್ಲಿಟ್ಟರು? ಅವರು ಅಭಿವೃದ್ಧಿ

ಮಾಡಿದ್ದರೆ, ಆ ವರದಿಯಲ್ಲಿ ಏನೋ ದೋಷ ಇರಬೇಕು ಅಥವಾ ಆ ವರದಿಯಲ್ಲಿ ತಮ್ಮದನ್ನೂ ತುರುಕಿರಬೇಕು.

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನೀವು ನಂಜುಂಡಪ್ಪ ವರದಿಯನ್ನು ಓದಿದ್ದೀರಾ? ಹೊಳೆನರಸೀಪುರ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿದೆಯೇ?

ಶ್ರೀ ಸಿ.ಟಿ.ರವಿ : ನಂಜುಂಡಪ್ಪ ವರದಿಯಲ್ಲಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಕ್ಷೇತ್ರದ ಅಭಿವೃದ್ಧಿ ಯಾವ ರೀತಿ ಮಾಡಬೇಕೆಂಬುದನ್ನು ನಿನ್ನಂತಹವರ ಹತ್ತಿರ ಕಲಿಯಬೇಕಾಗಿಲ್ಲ. ಮಾತನಾಡಬೇಕಾದರೆ, ಇಲ್ಲಿ ಸಂತೆ ಭಾಷಣ ಮಾಡಬೇಡ. ನಿನ್ನ ಹತ್ತಿರ ವಿಷಯಗಳು ಇದ್ದರೆ ಸರಿಯಾದ ರೀತಿಯಲ್ಲಿ ಭಾಷಣ ಮಾಡು. ಇಲ್ಲಿ ಸಂತೆ ಭಾಷಣ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಜನತಾ ದಳದ ಬಗ್ಗೆ ಟೀಕೆ ಮಾಡಲಿಕ್ಕೆ ಇವರಿಗೆ ಯಾವ ನೈತಿಕ ಹಕ್ಕೂ ಇಲ್ಲ. ಈ ರಾಜ್ಯದಲ್ಲಿ ಜನತಾ ದಳ ಸರ್ಕಾರ ಬಂದ ಮೇಲೆಯೇ ರೈತರ ಸಾಲ ಮನ್ನಾ ಮಾಡತಕ್ಕಂಥ ಯೋಜನೆ, ರೈತರಿಗೆ ಬಡ್ಡಿ ಮನ್ನಾ ಮಾಡತಕ್ಕಂಥ ಯೋಜನೆ ಜಾರಿಗೆ ತಂದಿದ್ದು. ಈಗ ನಿಮ್ಮ ಯಡಿಯೂರಪ್ಪನವರು ಆ ಜಾಗಕ್ಕೆ ಬಂದಿದ್ದೇ ನಮ್ಮಿಂದ. ಹೆಚ್ಚಿಗೆ ಮಾತನಾಡಬೇಡ.

[ಗೊಂದಲ]

ಶ್ರೀ ಸಿ.ಟಿ.ರವಿ : ಈಗ ನನಗೆ ಗೊತ್ತಿರುವ ಮಾಹಿತಿ ಪ್ರಕಾರ, ಹಾಸನ ಜಿಲ್ಲೆಯ ಹೊಳೆನರಸೀಪುನ ತಾಲ್ಲೂಕು ನಂಜುಂಡಪ್ಪನವರ ವರದಿಯಲ್ಲಿದೆ. ಆ ವರದಿ ಹಿಂದುಳಿದ ವರ್ಗದ ತಾಲ್ಲೂಕುಗಳನ್ನು ಗುರುತಿಸಿ ಕೊಟ್ಟಿರತಕ್ಕಂಥವರದಿಯಾಗಿದೆ. ವರದಿಯಲ್ಲಿ ದೋಷ ಇದೆಯೋ? ಅಥವಾ ಕ್ಷೇತ್ರವೇ ನಿಜವಾಗಿಯೂ ಹಿಂದುಳಿದಿದೆಯೋ? ನನಗೆ ಗೊತ್ತಿಲ್ಲ. ಆ ತಾಲ್ಲೂಕು ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿರುವುದು ನಿಜ. ಅಭಿವೃದ್ಧಿ ಹೊಂದಿದ ತಾಲ್ಲೂಕನ್ನೂ ಹಿಂದುಳಿದ ವರ್ಗದ ತಾಲ್ಲೂಕುಗಳ ಪಟ್ಟಿಗೆ ಸೇರಿಸಿದ್ದಲ್ಲಿ, ಅಲ್ಲೂ ಏನಾದರೂ ಮೋಸ-ಮಸಲತ್ತು ನಡೆದಿರಬೇಕು ಅಥವಾ ನಿಜವಾಗಿಯೂ ಹಿಂದುಳಿದಿರಬೇಕು. ಯಾವುದಾದರೂ ಒಂದು ಆಗಿರಬೇಕು. ಎರಡೂ ಆಗಲಿಕ್ಕೆ ಸಾಧ್ಯವಿಲ್ಲ. ಒಂದು ಗಂಡು ಅಥವಾ ಹೆಣ್ಣು. ಎರಡೂ ಆಗುವುದಕ್ಕಾಗುವುದಿಲ್ಲ, ಎರಡೂ ಹೇಗೆ ಆಗಲಿಕ್ಕಾಗುತ್ತದೆ?

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅವರು ಹೇಳುತ್ತಿರುವುದು....

ಉಪಾಧ್ಯಕ್ಷರು : ಅವರು ಯೀಲ್ಡ್ ಆಗುತ್ತಿಲ್ಲ.

[ಗೊಂದಲ]

ಶ್ರೀ ಸಿ.ಟಿ.ರವಿ : ನೀವು ದೊಡ್ಡವರು. ನಿಮಗೆ ಬೇಕಾದಾಗ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾರೆ. ನನ್ನ ಮೇಲೆ ಏಕೆ ನಿಮ್ಮ ಸವಾಲು? ನೀವು ಸವಾಲು ಹಾಕುವವರ ಜೊತೆಗೆ ಹಾಕಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಈ ಸದನದಲ್ಲಿ ಮಾನ್ಯ ರೇವಣ್ಣನವರ ಬಗ್ಗೆ ಯಾವಾಗಲೂ ಚರ್ಚೆ ನಡೆಯುವುದು...

ಶ್ರೀ ಸಿ.ಟಿ.ರವಿ : ನಾನು ಮಾನ್ಯ ರೇವಣ್ಣನವರ ಬಗ್ಗೆ ಚರ್ಚೆ ಮಾಡಿಲ್ಲ. ನಾನು ಹಿಂದುಳಿದ ವರ್ಗದ..

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ರೇವಣ್ಣನವರು ಹೊಳೆನರಸೀಪುರಕ್ಕೆ ಜಾಸ್ತಿ ಹಣವನ್ನು ತೆಗೆದುಕೊಂಡು ಹೋಗಿದ್ದಾರೆಂದು ಪದೇ ಪದೇ ಈ ಸದನದಲ್ಲಿ ಚರ್ಚೆ ನಡೆಯುತ್ತಿರುತ್ತದೆ. ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕು ಎಂಬ ಉದ್ದೇಶದಿಂದ ಮಾನ್ಯ ರೇವಣ್ಣನವರು ಹಣವನ್ನು ಅಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ. ಅದರಲ್ಲಿ ಅವರು ತಪ್ಪೇನು ಮಾಡಿದ್ದಾರೆ? ನೀವ್ಯಾಕೆ ಅದರ ಬಗ್ಗೆ ಪದೇ ಪದೇ ಚರ್ಚೆ ಮಾಡುತ್ತೀರಿ?

ಶ್ರೀ ಸಿ.ಟಿ.ರವಿ : ನನ್ನ ಚರ್ಚೆ ವ್ಯಕ್ತಿ ಆಧಾರಿತವಾಗಿಲ್ಲ, ಪೂರ್ವಾಗ್ರಹ ಪೀಡಿತವಾಗಿಲ್ಲ. ನಂಜುಂಡಪ್ಪ ವರದಿಯನ್ನು ಆಧರಿಸಿ ನಾನು ಈ ಉಲ್ಲೇಖವನ್ನು ಮಾಡುತ್ತಿದ್ದೇನೆ.

[ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಎರಡರಲ್ಲಿ ಯಾವುದಾದರೂ ಒಂದು ಸತ್ಯ ಇರಬೇಕು. ಎರಡೂ ಸತ್ಯ ಆಗಿರಲಿಕ್ಕೆ ಸಾಧ್ಯವಿಲ್ಲ. ಆ ವರದಿಯಲ್ಲಿ ಇರುವುದು ಹಿಂದುಳಿದ ವರ್ಗದ ತಾಲ್ಲೂಕು ಎಂದು ಆಗಿದ್ದರೆ, ಅವರು ಹಿಂದುಳಿದ ವರ್ಗದ ತಾಲ್ಲೂಕನ್ನೇ ಗುರುತಿಸಿಬೇಕು. ಒಂದು ವೇಳೆ ಅಭಿವೃದ್ಧಿ ಹೊಂಧಿದ ತಾಲ್ಲೂಕನ್ನು ಗುರುತಿಸಿದ್ದಾರೆ ಎಂದರೆ, ವರದಿಯಲ್ಲಿ ದೋಷ ಇರಬೇಕು. ಯಾವುದಾದರೂ ಒಂದು ಆಗಲಿಕ್ಕೆ ಸಾಧ್ಯ. ಇದನ್ನೇ ಈ ಸಂದರ್ಭದಲ್ಲಿ ನಾನು ಎತ್ತಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನೊಂದು ವಿಚಾರವನ್ನು ಇವರೆಲ್ಲರೂ ಮಾತನಾಡುತ್ತಾ ಹೇಳಿದ್ದೇನೆಂದರೆ, ಬಡ ಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ. ಕರ್ನಾಟಕದಲ್ಲಿ ಯಶಸ್ವಿನಿ ನಂತರ ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯಿಸುವ ಯೋಜನೆ ಇದಾಗಿದೆ. ಯಶಸ್ವಿನಿ ಯೋಜನೆಯಲ್ಲಿ ಯಾರು ನೋಂದಾವಣೆ ಮಾಡಿಕೊಂಡಿರುತ್ತಾರೋ ಅವರಿಗೆ ಮಾತ್ರ ಸೀಮಿತವಾಗಿದ್ದರೆ, BPL Cards ಹೊಂದಿರತಕ್ಕಂಥ ಎಲ್ಲರಿಗೂ ಈಗ ಉಚಿತ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೆ ತಂದಿರುವುದು ಅತ್ಯಂತ ಸ್ವಾಗತಾರ್ಹ. ಕನಿಷ್ಠ ಈಗಲಾದರೂ ನಮ್ಮ ಹತ್ತಿರ ಬಂದು, ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡಿಸಿ ಎಂದು ನಮ್ಮ ಹತ್ತಿರ ದುಂಬಾಲು ಬಿದ್ದು, ನಾವು ಕೈ ಕಾಲು ಹಿಡಿದು, 10 ಸಾವಿರ-20 ಸಾವಿರ ಕೊಡಿಸಿದರೂ ಕೂಡ, ಬಡವರು ಅದರಿಂದ operation ಸಹ ಮಾಡಲಿಕ್ಕೆ ಸಾಧ್ಯವಾಗದೆ ಕೊರಗುತ್ತಿರತಕ್ಕಂಥ ಸ್ಥಿತಿ

ತಪ್ಪಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ಆರೋಗ್ಯ ಖಾತೆ ಸಚಿವರನ್ನು ಅಭಿನಂದಿಸಲಿಕ್ಕೆ ಬಯಸುತ್ತೇನೆ. ಕಳೆದ ಬಾರಿ ಬಿ.ಜೆ.ಪಿ. ಮತ್ತು ಜೆ.ಡಿ. [ಎಸ್.]ನ ಸಮ್ಮಿಶ್ರ ಸರ್ಕಾರವಿದ್ದಾಗ, ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಬಜೆಟ್‌ನಲ್ಲಿ ಜಿಲ್ಲಾ ಕೇಂದ್ರಗಳಲ್ಲಿನ ನಗರಸಭೆಗಳಿಗೆ 5 ಕೋಟಿ ರೂ.ಗಳನ್ನು ವಿಶೇಷ ಅನುದಾನವೆಂದು ಮಂಜೂರು ಮಾಡಿದರು. ಕನಿಷ್ಠ ಈಗಲಾದರೂ ನಮ್ಮ ನಗರಸಭೆಯ ವ್ಯಾಪ್ತಿಯ ನಗರದಲ್ಲಿ ಒಂದಷ್ಟು ಅಭಿವೃದ್ಧಿ ಕಾಣುತ್ತದೆಂದು ನಾವು ಸಂತೋಷದಲ್ಲಿದ್ದೆವು. ಆದರೆ ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವಂತಹ ರೀತಿಯಲ್ಲಿ ಹಂಚಿಕೆ ಮಾಡಬೇಕಾದರೆ, ಜಿಲ್ಲಾ ಕೇಂದ್ರಗಳನ್ನು ತೆಗೆದು, ನನಗೆ ಬರೀ ಒಂದೂ ಕಾಲು ಕೋಟಿ ರೂ.ಗಳನ್ನು ಕೊಟ್ಟರು. ಹೇಳಿದ್ದು 5 ಕೋಟಿ ರೂ.ಗಳು, ಅದನ್ನು ಇಡೀ ಜಿಲ್ಲೆಗೆ ಹಂಚಿದ್ದರು. ಅದರೆ ಈ ಬಾರಿ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಜಿಲ್ಲಾ ಕೇಂದ್ರಗಳಿಗೆ 15 ಕೋಟಿ ರೂ. ಮತ್ತು ತಾಲ್ಲೂಕು ಕೇಂದ್ರಗಳಿಗೆ 5 ಕೋಟಿ ರೂ.ಗಳನ್ನು ನಗರದ ಅಭಿವೃದ್ಧಿಗೆ ವಿಶೇಷವಾದ ಅನುದಾನವನ್ನು ನೀಡಿದ್ದಾರೆ. ಅವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಲಿಕ್ಕೆ ಬಯಸುತ್ತೇನೆ. ನಗರವನ್ನು ಪ್ರತಿನಿಧಿಸತಕ್ಕಂಥ ಶಾಸಕರಾದರೂ ಕನಿಷ್ಠ ಇದನ್ನಾದರೂ ಸ್ವಾಗತ ಮಾಡಲಿಲ್ಲ ಎನ್ನುವುದಾದರೆ, ದೇವರೂ ಅದನ್ನು ಮೆಚ್ಚುವುದಿಲ್ಲ. ನಿಮ್ಮ ಪೂರ್ವಾಗ್ರಹ ಪೀಡಿತ ವರ್ತನೆಯನ್ನು ಜನರೂ ಸಹ ಮೆಚ್ಚುವುದಿಲ್ಲ. ಕನಿಷ್ಠ ಒಳ್ಳೆಯದನ್ನು ಮಾಡಿದ್ದನ್ನಾದರೂ ಕೂಡ ಬೆನ್ನು ತಟ್ಟಿ, ನೀವು ಮಾಡಿದ್ದು ಒಳ್ಳೆಯದು ಎಂದು ಹೇಳಿ. ಇಲ್ಲದಿದ್ದರೆ, ನಿಮ್ಮನ್ನು ನೀವು ವಂಚನೆ ಮಾಡಿಕೊಂಡಂತಾಗುತ್ತದೆ. ಆ ರೀತಿ ಹೇಳತಕ್ಕಂಥ ಕೆಲಸವನ್ನಾದರೂ ಮಾಡಬೇಕೆಂದು ನಾನು ಹೇಳುತ್ತೇನೆ. [ಗೊಂದಲ] ಮೂಲ ಸೌಕರ್ಯ ಎಂದರೆ ಏನು? ರಸ್ತೆ, ವಿದ್ಯುಚ್ಛಕ್ತಿ, ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸತಕ್ಕಂಥದ್ದು ಮೂಲ ಸೌಕರ್ಯ ಎನ್ನುತ್ತೇವೆ. 22300 ಕಿ.ಮೀ. ರಸ್ತೆ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ಮೂಲ ಸೌಕರ್ಯವೆಂಬುದು ನಮ್ಮ ವಿಪಕ್ಷದ ಸ್ನೇಹಿತರಿಗೆ ಅರ್ಥವಾಗದಿದ್ದರೆ, ಅದನ್ನು ಅರ್ಥ ಮಾಡಿಸತಕ್ಕಂಥ ಭಾಷೆ ಯಾವುರಾದರೂ ಇದ್ದರೆ, ಅದನ್ನು ಹೇಳಿ ಕೊಟ್ಟರೆ, ಆ ಭಾಷೆಯಲ್ಲೇ ಹೇಳಬಹುದು.

[ಗೊಂದಲ]

ನೋಡಿ, ನಾವು ನುಡಿದಂತೆ ನಡೆದವರು ನಾವು, ಈ ದೇಶದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದಲ್ಲಿ ಸುವರ್ಣ ಚತುಷ್ಪಥ ರಸ್ತೆ ಹೆದ್ದಾರಿಯನ್ನು ನಿರ್ಮಾಣ ಮಾಡಿದ್ದು, ಇವತ್ತು continue ಮಾಡಲು ಯೋಗ್ಯತೆ ಇಲ್ಲದವರು ಮಾಥನಾಡುತ್ತಿದ್ದಾರೆ. ನಾವು ಏನು ಹೇಳುದ್ದೇವೆಯೋ ಅದನ್ನು ಮಾಡುತ್ತೇವೆ, ಹೇಳಿದ್ದನ್ನೇ ಮಾಡುವುದು, ಅದನ್ನು ಬಿಟ್ಟು ಮತ್ತೇನನ್ನು ಮಾಡುವುದಿಲ್ಲ, ನೀವು ಮಾಡಿಲ್ಲವೆಂದು 5 ವರ್ಷ ಬಿಟ್ಟು ಇವರು ಪ್ರಶ್ನೆ ಕೇಳಲಿ.

ಹೇಳಿದ್ದೇವೆಯೋ ಇಲ್ಲವೋ ಈಗ ಯೋಜನೆಯನ್ನು ಮಾಡಿದ್ದೇವೆಯೋ ಇಲ್ಲವೋ ನಮಗೆ ಈ ದೇಶದಲ್ಲಿ ಕನ್‌ಕ್ಟಿವಿಟಿಯನ್ನು ಬಲಪಡಿಸಿದಂಥ ಭಾರತೀಯ ಜನತಾ ಪಾರ್ಟಿ ಇವರಿಂದ ಹೇಳಿಸಿಕೊಳ್ಳುವಂಥ ಸ್ಥಿತಿಯಲ್ಲಿಲ್ಲ, ನಾವೇನು ಹೇಳಿದ್ದೇವೆಯೋ ಅದನ್ನು ಮಾಡಿದ್ದೇವೆ, ಮಾಡುತ್ತೇವೆ. ಇವತ್ತು ವಿದ್ಯುತ್ ಸಮಸ್ಯೆಯ ಬಗ್ಗೆ ಕಂಡ ಕಂಡಲ್ಲೆಲ್ಲಾ ಟೀಕೆ ಮಾಡುತ್ತಾರೆ, ವಿದ್ಯುತ್ ಅನ್ನು ಇವತ್ತು ದಿನಸಿ ಅಂಗಡಿಯಲ್ಲಿರುವ ವಸ್ತುವಿನ ರೀತಿಯಲ್ಲಿ ತೆಗೆದುಕೊಂಡು ಬರುವುದಕ್ಕಾಗುತ್ತದೆಯೇ? ಮಾನ್ಯ ಈಶ್ವರಪ್ಪನವರೆ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿರುವುದೆಂಬುದನ್ನು ಹೇಳಬೇಕು?

ಶ್ರೀ ಕೆ.ಎಸ್.ಈಶ್ವರಪ್ಪ :- ಈಗ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವುದು, 7000 ಮೆಗಾ ವ್ಯಾಟ್. ಕೇಂದ್ರ ಸರ್ಕಾರದಿಂದ ಬರಬೇಕಾಗಿರುವುದು 1532, ಒಟ್ಟು ಬೇಡಿಕೆ ಇರುವುದು 10,200, ಅಂಥರೆ, ಕೇಂದ್ರ ಸರ್ಕಾರದಿಂದ ಬರಬೇಕಾದ್ದು ಹೆಚ್ಚು ಕಡಿಮೆ 500–600 ಮೆಗಾ ವ್ಯಾಟ್ ಕಡಿಮೆಯೆ. ಸುಮಾರು 2000–2200 ಮೆಗಾ ವ್ಯಾಟ್ ವಿದ್ಯುತ್ ನಮಗೆ ಕೊರತೆ ಇದೆ.

ಶ್ರೀ ಸಿ.ಟಿ.ರವಿ : ಈಗ ವಿದ್ಯುತ್ ಉತ್ಪಾದನೆಗೆ ಯೋಜನೆ ಮಾಡಿರುವುದು 10,100 ಮೆಗಾ ವ್ಯಾಟ್ ಅಂಥರೆ ಘಟಾನುಗಟಿಗಳೆಲ್ಲಾ, ದೂರ ದೃಷ್ಟಿ ಇಲ್ಲದ ಬಜೆಟ್, ತಾತ್ಕಾಲಿಕವಾಗಿ ಖುಷಿಪಡಿಸುವ ಯೋಜನೆ, ತಪ್ಪುದಾರಿಯಲ್ಲಿ ಹೋಗುತ್ತಿದ್ದೀರಿ ಎಂದು ಟೀಕೆ ಮಾಡಿದ್ದನ್ನೆಲ್ಲಾ ಕೇಳಿದೆ. ಅಂದರೆ ಇದುವರೆವಿಗೂ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿತ್ತು, ಅದಕ್ಕಿಂತ ಜಾಸ್ತಿ ವಿದ್ಯುತ್ ಉತ್ಪಾದನೆ ಯೋಜನೆಗಳಿಗೆ ಪ್ಲಾನ್ ಮಾಡಿ ಅನುಷ್ಠಾನಗೊಳಿಸುವುದಕ್ಕೆ ಹೆಜ್ಜೆ ಹಾಕುತ್ತಿರುವುದು ದೂರದೃಷ್ಟಿ ಇಲ್ಲದ ಬಜೆಟಾ? ಮುಂದಿನ 20 ವರ್ಷಕ್ಕೆ ಪ್ಲಾನ್ ಮಾಡಿ ಹೆಜ್ಜೆ ಇಡುತ್ತಿದ್ದೇವೆ, ಈ ಕೆಲಸವನ್ನು 20 ವರ್ಷಗಳ ಹಿಂದೆ ಅಧಿಕಾರದಲ್ಲಿದ್ದವರು ಮಾಡಿದ್ದರೆ, ಇವತ್ತು ವಿದ್ಯುತ್‌ಗಾಗಿ ಪರಿತಪ್ಪಿಸುವಂಥ ದುಸ್ಥಿತಿ ಬರುತ್ತಿತ್ತೇ? ಶಿವಲಿಂಗೇ ಗೌಡರೆ, ಇವತ್ತು ಗುಜರಾತ್ ಗೆ ನನ್ನ ಖರ್ಚಿನಲ್ಲಿ ಕರೆದುಕೊಂಡು ಹೋಗುತ್ತೇನೆ ಬನ್ನಿ, 24 ಗಂಟೆ ಕರೆಂಟ್, ಅದೂ ದೂರದೃಷ್ಟಿ ವಿಷನ್ ಎಂದರೆ ಅದು. 4 ವರ್ಷ ಅಧಿಕಾರ ಪೂರ್ಣವಾಗುವ ಹಂತಕ್ಕೆ ದೇಶದ ಬೇರೆ ಬೇರೆ ಕಡೆಯಿಂದ ಅಭಿವೃದ್ಧಿ ಎಂದರೆ, ಗುಜರಾತ್ ನೋಡಲು ಹೋಗುತ್ತಾರೆಯೋ ಆ ರೀತಿ ಕರ್ನಾಟಕವನ್ನು ನೋಡುವುದಕ್ಕೆ ಬರಬೇಕು, ಆ ರೀತಿ ವಾತಾವರಣ ಬದಲಾಗುತ್ತದೆ, ಕಾಯಿರಿ ಸಮಾಧಾನದಿಂದಿರಿ, ಸಮಾಧಾನವೇ ಇಲ್ಲದಿದ್ದರೆ ಹೇಗೆ? ಸ್ವಲ್ಪವಾದರೂ ಸಮಾಧಾನವಿರಬೇಕು. ರಸ್ತೆಗೆ ಒತ್ತು ಕೊಟ್ಟಿರುವುದು, ನೀರಾವರಿ ಯೋಜನೆಗಳಿಗೆ ಒತ್ತು ಕೊಟ್ಟಿರುವುದು. ವಿದ್ಯುತ್ ಉತ್ಪಾದನೆಗೆ ಒತ್ತು ಕೊಟ್ಟಿರುವುದು, ಇದು ಮೂಲ ಸೌಕರ್ಯವಲ್ಲವೆನ್ನುವುದಾದರೆ, ದೂರದೃಷ್ಟಿ ಇಲ್ಲವೆನ್ನುವುದಾದರೆ, ಯಾವುದು ದೂರದೃಷ್ಟಿ ಎನ್ನುವುದಾದರು ಹೇಳಿ? ನಮ್ಮ ಬಿಜೆಪಿ ಸರ್ಕಾರ 8 ತಿಂಗಳ ಹಿಂದೆಯಷ್ಟೆ ಅಧಿಕಾರಕ್ಕೆ ಬಂದಿದೆ, ಅದಕ್ಕಿಂತ ಹಿಂದೆ 20 ತಿಂಗಳು ಆಡಳಿತದ

ಸಹವಾಸ ಮಾತ್ರವಾಗಿತ್ತಷ್ಟೆ, ಅದಕ್ಕಿಂತ ಹೆಚ್ಚು ಅನುಭವದ ಜ್ಞಾನ ನಮಗಿಲ್ಲ. ಈ 60 ವರ್ಷ ಆಳ್ವಿಕೆ ಮಾಡಿದವರು ಹೇಳಿಕೊಳ್ಳುವುದಕ್ಕಾದರೂ ಹೇಳಿಕೊಡಿ, ಅದನ್ನೂ ಹೇಳಿಕೊಡುವುದಿಲ್ಲವಲ್ಲ? ಸುಮ್ಮನೆ ಟೀಕೆ ಮಾಡಬೇಕೆಂದು ಟೀಕೆ ಮಾಡುವುದಕ್ಕೋಸ್ಕರ ಹೇಳದರೆ ಅರ್ಥಹೀನ ಟೀಕೆಯಾಗುತ್ತದೆ, ಅರ್ಥಹೀನ ಟೀಕೆಗಿಂತ ನೀವು ಸಲಹೆ ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ. ನನಗೊಂದು ಸಂತೋಷದ ವಿಚಾರ, ಇವರೆಲ್ಲರೂ ತೋಟದ ಕಾರ್ಮಿಕರ ಪರವಾಗಿ ಮಾತನಾಡುತ್ತಿದ್ದವರು, ಅವರ ಪರವಾಗಿ ಕೆಲಸ ಮಾಡುತ್ತಿದ್ದವರೆಲ್ಲ. ತೋಟದ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ನೀಡುವಂಥ ಐತಿಹಾಸಿಕ ತೀರ್ಮಾನವನ್ನು ನಮ್ಮ ಸರ್ಕಾರ ತೆಗೆದುಕೊಂಡು, ಅವರಿಗೆ ಬಿಪಿಎಲ್ ಕಾರ್ಡ್ ಕೊಟ್ಟಿದೆ. ಈ ರಾಜ್ಯದ ಎಲ್ಲಾ ತೋಟದ ಕಾರ್ಮಿಕರ ಪರವಾಗಿ ಈ ಸರ್ಕಾರವನ್ನು ಅಭಿನಂದಿಸುವುದಕ್ಕೆ ಬಯಸುತ್ತೇನೆ. ಇದುವರೆವಿಗೂ ಕೊಡಲಿಲ್ಲ, ಬರೀ ಮೂಗಿಗೆ ತುಪ್ಪವನ್ನು ಸವರುತ್ತಿದ್ದರು ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಿಪಿಎಲ್ ಕಾರ್ಡ್ ಕೊಟ್ಟಿದೆ. ಹಿರಿಯರಾದ ಹಾಗೂ ಹಣಕಾಸು ಖಾತೆಯನ್ನು ನಿರ್ವಹಿಸಿದಂಥ ಸಿದ್ದರಾಮಯ್ಯನವರು ಮಾತನಾಡುತ್ತಾ 65,000 ಕೋಟಿ ರೂಪಾಯಿಗಳ ಸಾಲವೆಂದು ಹೇಳಿದರು. ಇದುವರೆವಿಗಿನ ಸಾಲವನ್ನು ಏನು ಯಡಿಯೂರಪ್ಪನವರು ಮಾಡಿದ್ದಾರೆ? ಯಾರು ಮಾಡಿದ್ದು ಎಂದು ಕೇಳಬೇಕು ತಾನೆ? ಏಕೆ ಸಾಲ ಮಾಡಿದಿರಿ? ಈ ರಾಜ್ಯದಲ್ಲಿ ಸಂಪನ್ಮೂಲಕ್ಕೆ ಕೊರತೆ ಇತ್ತೇ? ಈ ರಾಜ್ಯದಲ್ಲಿ ನೆಲ,ಜಲ,ಭೌಗೋಳಿಕ ಸಂಪತ್ತಿಗೇನಾದರೂ ಕೊರತೆ ಇತ್ತಾ? ಸಾಲ ಮಾಡಿದವರು ತಾನೇ ಇದಕ್ಕೆ ಉತ್ತರವನ್ನು ಕೊಡಬೇಕು? ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದಂತೆ, ತಾವು ಮಾಡಿದ್ದನ್ನು ನಮ್ಮ ತಲೆಗೆ ಕಟ್ಟುವುದಕ್ಕೆ ಬಂದರೆ ಯಾರು ಮೆಚ್ಚುತ್ತಾರೆ ಸ್ವಾಮಿ? ಜನರು ಮೆಚ್ಚುವಂತಾದರೂ ಮಾತನಾಡಬೇಕಲ್ಲ? ಮಾಡಿದ್ದು ಯಾರೋ, ಆ ಪಾಪ ಹೊರೆಯನ್ನು ನಮ್ಮ ತಲೆಗೆ ಕಟ್ಟುವುದಕ್ಕೆ ಬಂದರೆ ಅದಕ್ಕೆ ನಾವು ಆ ಹೊಣೆಯನ್ನು ಹೊತ್ತಿಕೊಳ್ಳಬೇಕಾಗುತ್ತದೆಯೇ? ಖರ್ಚು ಮಾಡಲು ಹಣ ಎಲ್ಲಿಂದ ಬರುತ್ತದೆ? ನೋಟ್ ಪ್ರಿಂಟ್ ಮಾಡುವುದಕ್ಕೆ ಬರುತ್ತದೆಯೇ? ಶಿವಾನಂದ ಸರ್ಕಲ್‌ನಿಂದ ಚಾಲುಕ್ಯ ಸರ್ಕಲ್‌ಗೆ ಬರುವ ರಸ್ತೆಯನ್ನು ಅಗೆದು 30 ತಿಂಗಳು ಏನೂ ಮಾಡಿರಲಿಲ್ಲ, ಈಗ ರಸ್ತೆ ಅಭಿವೃದ್ಧಿಯಾಗಿದೆಯೋ ಇಲ್ಲವೋ ಒಂದು ಸ್ಯಾಂಪಲ್. [ಗೊಂದಲ]

ಶ್ರೀ ಎಂ.ಟಿ.ಕೃಷ್ಣಪ್ಪ :- ಯಾವಾಗ ಬಜೆಟ್ ಹಣವನ್ನು ಪ್ರೊವೈಡ್ ಮಾಡಿದರೆಂಬುದು ಮುಖ್ಯ, ಅದನ್ನು ರವಿಯವರು ಹೇಳಬೇಕಲ್ಲ? [ಗೊಂದಲ]

ಅಧ್ಯಕ್ಷರೆ :- ತಾವು ನೇರವಾಗಿ ನನಗೆ ಅಡ್ರೆಸ್ ಮಾಡಿ ಹೇಳಿ, ಆ ಕಡೆ ನೋಡಿ ಏತಕ್ಕೆ ಮಾತನಾಡುತ್ತೀರಿ?

ಶ್ರೀ ಸಿ.ಟಿ.ರವಿ : ಕಳೆದ ಸಾರಿ ಒಂದು ಮಾತನ್ನು ಹೇಳಿದ್ದೆ, ಪದೇ ಪದೇ ಎದ್ದೆದ್ದು ಕುಣಿಯುವವರಿಗೆ ನಮ್ಮಲ್ಲಿ ತುರಿಕೆ ಪುಡಿ ಹಾಕಿದಂತೆ ತುರಿಕೆ ಬಂದಿದೆಯಾ

ಎಂದು ಕೇಳುತ್ತಾರೆ, ನಾನು ಕೇಳುವುದಕ್ಕೆ ಹೋಗುವುದಿಲ್ಲ, ಮತ್ತೆ ನೆನಪು ಮಾಡುವುದಕ್ಕೆ ಹೋಗುವುದಿಲ್ಲ. ಈ ತುರಿಕೆ ಪುಡಿ ಮೈಮೇಲೆ ಬಿದ್ದಿದ್ದರೆ ಪದೇ ಪದೇ ಹೀಗೆ ಪರಚಿಕೊಳ್ಳುತ್ತಿರುತ್ತಾರೆ, ಏಕೆ ಪದೇ ಪದೇ ಆ ರೀತಿ ಪರಚಿಕೊಳ್ಳುತ್ತಾರೆಂದು ಅವರು ಯೋಚನೆ ಮಾಡಬೇಕು, ಇಲ್ಲದಿದ್ದರೆ, ಮಾಧ್ಯಮದ ತುರಿಕೆ ಪುಡಿ ಏನಾದರೂ ಬಿದ್ದಿದೆಯಾ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇವತ್ತು ಬೆಂಗಳೂರು ಮಹಾನಗರದ ಒಂದರಲ್ಲೇ ಯಾವುದೇ ಕ್ಷೇತ್ರದಲ್ಲಿ ಕನಿಷ್ಠ 400 ಕೋಟಿ ರೂಪಾಯಿಗಳವರೆಗೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಕೃಷ್ಣಬೈರೇಗೌಡರು ಇವತ್ತು ಸದನಕ್ಕೆ ಬಂದಿಲ್ಲ, ಬ್ಯಾಟರಾಯನಪುರ ಕ್ಷೇತ್ರ ಬಿಜೆಪಿ ಕ್ಷೇತ್ರವೇ?

ಶ್ರೀ ಎನ್.ಸಂಪಗಿ :- ಬೆಂಗಳೂರು ಬಿಟ್ಟು ಬೇರೆ ಕಡೆ ಅದೇ ರೀತಿ ಹಣ ಕೊಟ್ಟಿದ್ದಾರೆಯೇ?

[ಗೊಂದಲ]

ಅಧ್ಯಕ್ಷರು :- ಏನೇ ವಿಷಯವಿದ್ದರೂ ನನಗೆ ಅಡ್ರೆಸ್ ಮಾಡಿ ಹೇಳಿ, ಅಲ್ಲಿ ನೋಡಿ ಏಕೆ ಮಾತನಾಡುತ್ತೀರಿ?

ಶ್ರೀ ಸಿ.ಟಿ.ರವಿ : ಕಾರ್ಪೊರೇಷನ್ ಏರಿಯಾಗಳಲ್ಲು ಕೂಡ 50-100 ಕೋಟಿ ಅಭಿವೃದ್ಧಿ ಕೆಲಸ, ಮಾಡುತ್ತಿದ್ದಾರೆ. ಬೇರೆ ಬೇರೆ, ಮೈಸೂರು, ಬಳ್ಳಾರಿ, ಮಂಗಳೂರು, ಈ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾಗುತ್ತಿರುವುದನ್ನು ಜನರು ನೋಡಿ ಸಂತೋಷಪಡುತ್ತಿದ್ದಾರೆ. ನೋಟ್ ಪ್ರಿಂಟ್ ಮಾಡುತ್ತೀರಾ ಎಂದು ಹೇಳಿದರೆ, ನೋಟ್ ಅನ್ನು ನಾವು ಪ್ರಿಂಟ್ ಮಾಡುವುದಿಲ್ಲ, ಕೇಂದ್ರ ಸರ್ಕಾರವೇ ಪ್ರಿಂಟ್ ಮಾಡುವುದು, ರಿಸರ್ವ ಬ್ಯಾಂಕೇ ಪ್ರಿಂಟ್ ಮಾಡುವುದು.

ನಮ್ಮ ಪಾಲಿನ ಅನುದಾನವನ್ನು ಹೇಗೆ ಬಳಸಬೇಕು ಎನ್ನತಕ್ಕಂತಹ ವಿಷನ್ ಇಲ್ಲದೆ ಇರುವವರ ಕೈಯಲ್ಲಿ ಇಷ್ಟು ದಿನ ಅಧಿಕಾರ ಇತ್ತು. ಈಗ ವಿಷನ್ ಇರುವವರ ಕೈಯಲ್ಲಿ ಅಧಿಕಾರ ಇದೆ. ಐದು ವರ್ಷದ ನಚಿತರ ಏನು ಅಭಿವೃದ್ಧಿ ಆಗಿರುತ್ತದೆ ಎಬಿದು ಅವರು ನೋಡಲಿ. ಆ ರೀತಿ ಅಭಿವೃದ್ಧಿ ಕಾರ್ಯವನ್ನು ಮಾಡತಕ್ಕಂತಹ ಕೆಲಸವನ್ನು ನಾವು ಮಾಡುತ್ತೇವೆ. ಖೋತಾ ನಡುವೆ ಇಷ್ಟು ಒಳ್ಳೆಯ ಕೆಲಸ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ಇನ್ನೊಂದು ಮಾತನ್ನು ನಾನು ಹೇಳಬೇಕಾಗಿದೆ. ಮೊನ್ನೆ ಸಾವಯವ ಕೃಷಿ ಮಿಷನ್‌ನವರದು ಜನವರಿ 26ನೇ ತಾರೀಖು ರೈತರ ಸಭೆ ಸೇರಿತ್ತು. ಆ ಸಭೆಯಲ್ಲಿ ನಮ್ಮ ಹಿಂದಿನ ರಾಷ್ಟ್ರಪತಿಗಳಾಗಿದ್ದಂತಹ ಡಾ:ಎ.ಪಿ.ಜೆ.ಅಬ್ದುಲ್ ಕಲಾಂ ರವರು ಭಾಗವಹಿಸಿದ್ದರು. ಅಲ್ಲಿ ಅವರು ಒಂದು ಮಾತನ್ನು ಹೇಳಿದರು. "ಮನುಷ್ಯ ಸತ್ತರೆ ಮಣ್ಣಿ, ಮಣ್ಣೇ ಸತ್ತರೆ ಮತ್ತೆಲ್ಲಿಗೆ" ಎಂದು ಹೇಳಿದ್ದರು. ಇವತ್ತು ರೈತರ ಬಗ್ಗೆ ಏಕೆ ಈ ಮಾತನ್ನು ಹೇಳಬೇಕಾಗಿ ಬಂದಿತು ಎಂದರೆ, ತಪ್ಪು ಕೃಷಿ ನೀತಿಯ ಪರಿಣಾಮವಾಗಿ ರಾಜರ ಕಾಲದ Special Economic Zone ಏನಿತ್ತು? SEZ ಕೈಗಾರಿಕೆ, ಉದ್ದಿಮೆಗಳನ್ನು ಆರ್ಥಿಕತೆಯ ಬಲವಾದ ಕೇಂದ್ರಗಳು ಎಂದು ಏನು ಹೇಳುತ್ತೇವೆ, ಅವತ್ತು ರಾಜರ ಕಾಲದ

SEZಗಳು ಎಂದರೆ ಗೋಮಾಳಗಳು, ಅಮೃತಮಹಲ್ ಕಾವಲು. ಆ ಗೋಮಾಳ ಅಮೃತ ಮಹಲ್ ಕಾವಲನ್ನು ಸಂಪೂರ್ಣವಾಗಿ ಲೂಟಿ ಹೊಡೆಯುವುದಕ್ಕೆ ಅವಕಾಶ ಮಾಡಿ ಕೊಟ್ಟ ಪರಿಣಾಮ ಇವತ್ತು ರೈತ ಸಂಕಷ್ಟಕ್ಕೆ ಸಿಕ್ಕಿದ್ದಾನೆ. ಕೃಷಿ ವೆಚ್ಚ ಉತ್ಪಾದನೆಯ ಲಾಭಕ್ಕಿಂತ ಹೆಚ್ಚಾಗಿದೆ. ಇವತ್ತು ಕೃಷಿಕ ಸಂಕಷ್ಟದಲ್ಲಿದ್ದಾನೆ. ಕೃಷಿಕ ಸಂಕಷ್ಟದಲ್ಲಿದ್ದು ಕೃಷಿ ಮೇಲೆ ಅವಲಂಬಿತರಾದರೆ ನಮ್ಮ ಬದುಕು ಕಷ್ಟ ಎನ್ನುವಂತಹ ಸ್ಥಿತಿಯಲ್ಲಿ ಇವತ್ತು ಕೃಷಿಕ ಇದ್ದಾನೆ. ನಾನು ನೋವಿನಿಂದ ಒಂಧು ಸಂಗತಿಯನ್ನು ಹಂಚಿಕೆಕೊಳ್ಳುವುದಕ್ಕೆ ಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು NSS ಕ್ಯಾಂಪ್‌ನ ಉದ್ಘಾಟನೆಗೆ ಹೋಗಿದ್ದೆ. 75ವಿದ್ಯಾರ್ಥಿಗಳಿದ್ದರು. ಅದರಲ್ಲಿ 16 ಜನ ನಗರ ಪ್ರದೇಶದವರು. 59 ಜನ ಗ್ರಾಮಂತರ ಪ್ರದೇಶದವರು. ನಾನು ಅವರಿಗೆ ಒಂದು ಪ್ರಶ್ನೆಯನ್ನು ಕೇಳಿದೆ. ನೀವು ವಿದ್ಯಾಭ್ಯಾಸ ಮುಗಿಸಿದ ನಂತರ ಕೃಷಿಯನ್ನು ಆಧರಿಸಿ ಗ್ರಾಮೀಣ ಪ್ರದೇಶದಲ್ಲಿ ಬದುಕು ಕಟ್ಟಿಕೊಳ್ಳುವುದಕ್ಕೆ ಬಯಸುವವರು ಎಷ್ಟು ಜನ ಕೈ ಮೇಲೆ ಮಾಡಿ ಎಂದು ಹೇಳಿದೆ. 59 ಜನ ಕೃಷಿ ಆಧಾರಿತ ಕುಟುಂಬದಿಂದ ಬಂದವರಿದ್ದು 16 ಜನ ನಗರ ಪ್ರದೇಶದಿಂದ ಬಂದವರಿದ್ದರೂ ಕೂಡ ನಾನು ಕೃಷಿ ಅವಲಂಬಿಸಿ ಬದುಕುತ್ತೇನೆಂದು ಕೈ ಎತ್ತಿದವರು ಕೇವಲ ನಾಲ್ಕೇ ಜನ. ಆ ನಾಲ್ಕು ಜನರಿಗೆ ಮತ್ತೆ ಪ್ರಶ್ನೆ ಕೇಳಿದೆ. ಏಕೆ ನೀವು ಕೃಷಿ ಆರಿಸಿಕೊಳ್ಳುತ್ತೀರಿ ಎಂದು ಕೇಳಿದೆ. ಅವರಲ್ಲೂ ಕೂಡ ಗಟ್ಟಿಯಾದ ಆತ್ಮವಿಶ್ವಾಸದ ಉತ್ತರ ಇರಲಿಲ್ಲ. ಮಹಾತ್ಮ ಗಾಂಧಿ ಇನ್ನು ಯಾವ್ಯಾವುದೋ ವಿಷಯಗಳನ್ನು ಹೇಳಿದ. ಆದರೆ ಇವತ್ತು ಯುವ ಪೀಳಿಗೆ ಕೃಷಿಯನ್ನು ಅವಲಂಬಿಸಿ ಬದುಕುವುದಕ್ಕೆ ಇಷ್ಟ ಪಡುತ್ತಿಲ್ಲ. ಬದುಕು ಕಟ್ಟಿಕೊಳ್ಳುವುದು ಕಷ್ಟ ಎಂದು ಅನ್ನಿಸಿದೆ. ಆದರೆ ಒಂದು ಕಾಲದಲ್ಲಿ ವ್ಯವಸಾಯ ಎಂದರೆ ಉತ್ತಮ, ವ್ಯಾಪಾರ ಮಧ್ಯಮ, ನೌಕರಿ ಎಂದರೆ ಅಧಮ ಎಂದು ಹೇಳಿ ನೋಡುತ್ತಿದ್ದ ಕಾಲ ಇತ್ತು. ಇವತ್ತು ಒಂದು ಅಂಗನವಾಡಿ ಟೀಚರ್ ಕೆಲಸ ಅಥವಾ ಒಂದು ಕುಕ್ ಪೋಸ್ಟ್‌ಗೆ ಸೇರಿಕೊಳ್ಳುವುದಕ್ಕಾಗಿ ಅಣ್ಣ ಒಂದು ಕುಕ್ ಪೋಸ್ಟ್ ಕೊಡಿಸಿ ಎಂದು ಹೇಳುತ್ತಾರೆ. ಅಣ್ಣಾ ಎರಡು ಲಕ್ಷ ರೂಪಾಯಿ ಆದರೂ ಕೊಡುತ್ತೇನೆ ಒಂದು ಕುಕ್ಕರ್ ಪೋಸ್ಟ್ ಕೊಡಿಸಣ್ಣ ಎಂದು ಹೇಳುತ್ತಾರೆ. ಎರಡು ಲಕ್ಷ ರೂಪಾಯಿ ಎಲ್ಲಿಂದ ತರುತ್ತೀಯ ಎಂದರೆ ನನ್ನ ಪಾಲಿಗೆ ಮೂರು ಎಕರೆ ಜಮೀನು ಬರುತ್ತದೆ ಅದನ್ನು ಮಾರಿ ಕೊಡುತ್ತೇನೆಂದು ಹೇಳುತ್ತಾನೆ. ಅವನಿಗೆ ಕುಕ್ ಪೋಸ್ಟ್ ಎಂದು ಕೂಡ ಹೇಳುವುದಕ್ಕೆ ಬರುವುದಿಲ್ಲ. ಕುಕ್ ಪೋಸ್ಟ್ ಕೊಡಿಸಿ ಎಂದು ಹೇಳುತ್ತಾನೆ. ಆ ಸ್ಥಿತಿಗೆ ಇವತ್ತು ಬಂದಿದೆ. ಅದಕ್ಕೆ ಕಾಯಕಲ್ಪ ನೀಡಬೇಕು. ಅದಕ್ಕೆ ಕಾಯಕಲ್ಪ ನೀಡಬೇಕೆಂದರೆ ಕೃಷಿಯ ಉತ್ಪಾದನಾ ವೆಚ್ಚ ಕಡಿಮೆ ಆಗಬೇಕು. ಇವತ್ತಿನ ರಾಸಾಯನಿಕ ಗೊಬ್ಬರ, ಒಂದು ಸಾರಿ ಮಾತ್ರ ಬಳಸತಕ್ಕಂತಹ ಬೀಜಗಳು, ಹೈಬ್ರಿಡ್ ಹಾಗೂ ಹೈಟೆಕ್ ಬೀಜಗಳಿಂದ ಕೃಷಿ ಉತ್ಪಾದನಾ ವೆಚ್ಚ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಿದ್ದರೆ ಏನು ಮಾಡಬೇಕು? ಅದಕ್ಕೇ ದೂರದೃಷ್ಟಿ ಬೇಕೆಂದು ಹೇಳುವುದು. ನಮ್ಮ ಪರಂಪರೆಯ ಕೃಷಿ ಜ್ಞಾನವನ್ನು ನಾವು ಇನ್ಯಾವುದೋ

ಅನುಕರಣೆಯ ಪರಿಣಾಮವಾಗಿ ರೈತನನ್ನೂ ದಿಕ್ಕು ತಪ್ಪಿಸಿ ದೇಶವನ್ನೂ ದಿಕ್ಕು ತಪ್ಪಿಸತಕ್ಕಂತಹ ಕೆಲಸವನ್ನು ಮಾಡಿದ್ದೇವೆ. ಅವನು ಪರಂಪರಾಗತ ಕೃಷಿ ವ್ಯವಸ್ಥೆಗೆ ಹೋಗಬೇಕು. ಮತ್ತೆ ರೈತನ ಬದುಕು ಉತ್ತಮ ಎಂದು ಅನ್ನಿಸಬೇಕು. ರೈತನ ಬದುಕು ಉತ್ತಮವೆಂದು ಅನ್ನಿಸಬೇಕಾದರೆ ಮತ್ತೆ ಆ ಸಹಜ ಕೃಷಿಗೆ ಸಾವಯವ ಕೃಷಿಗೆಗೋ ಆಧಾರಿತ ಕೃಷಿಗೆ ಹೋಗಬೇಕಾದಂತಹ ಅನಿವಾರ್ಯತೆ ಇದೆ. ಗೋ ಆಧಾರಿತ ಕೃಷಿಗೆ ಹೋಗದೇ ಇದ್ದರೆ ರೈತ ಬದುಕುವುದಿಲ್ಲ. ರೈತ ಬದುಕಲಿಲ್ಲವೆಂದರೆ ಈ ದೇಶ ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ದೇಶದ ಬೆನ್ನೆಲುಬು ರೈತ. ನಾವೆಲ್ಲಾ ಗಂಟಾಘೋಷವಾಗಿ ಸಾವಿರಾರು ಬಾರಿ ನಮ್ಮ ಭಾಷಣಗಳಲ್ಲಿ ಹೇಳುತ್ತೇವೆ. ಈ ದೇಶದ ಬೆನ್ನೆಲುಬು ರೈತ. ರೈತನ ಬೆನ್ನೆಲುಬು ಗೋವು. ಆ ಗೋವನ್ನು ನಾಶ ಮಾಡಿ ರೈತ ಬದುವುದಕ್ಕೆ ಸಾಧ್ಯವಿಲ್ಲ. ಒಂದಕ್ಕೊಂದು ಪರಸ್ಪರ ಪೂರಕ. ಅದಕ್ಕಾಗಿ ಗೋ ಆದಾರಿತ ಕೃಷಿ ವ್ಯವಸ್ಥೆಗೆ ಮತ್ತೆ ಜೀವ ಕೊಡಲಿಕ್ಕೆ ಸಾವಯವ ಕೃಷಿ ಮಿಷನ್ ಸ್ಥಾಪನೆ ಮಾಡಿ ಅದಕ್ಕಾಗಿ ಬಜೆಟ್‌ನಲ್ಲಿ ಹಣ ಇಟ್ಟು, ಒಂದು ಐತಿಹಾಸಿಕ ಕ್ರಮವನ್ನು ಮಾನ್ಯ ಮುಖ್ಯ ಮಂತ್ರಿಗಳು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಬಿನಂದಿಸಲಿಕ್ಕೆ ಬಯಸುತ್ತೇನೆ. ಗೋವು ಪೂಜನೀಯ ಎಂದು ಅಗಿದ್ದು ಏಕೆಂದರೆ, ನಮ್ಮ ದೇಶದ ಪರಂಪರೆಯ ವ್ಯವಸ್ಥೆಯಲ್ಲಿ ಬರೀ ಸೃಷ್ಟಿಕರ್ತನನ್ನು ಮಾತ್ರ ಪೂಜಿಸಲಿಲ್ಲ. ಸೃಷ್ಟಿಯನ್ನು ಪೂಜಿಸಿದೆವು. ಯಾವ್ಯಾವುದು ಉಪಕಾರಿಯಾಯಿತು ಅವೆಲ್ಲವಕ್ಕೂ ದೈವತ್ವದ ಕಲ್ಪನೆ ಕೊಟ್ಟೆವು. ದೈವ ಎಂಧರೆ ಬರೀ ಸೃಷ್ಟಿಕರ್ತ ಮಾತ್ರವಲ್ಲ. ಯಾವ ಸೃಷಿ ಮನುಷ್ಯನಿಗೆ ಹಾಗೂ ಸಕಲ ಜೀವಿಗಳಿಗೆ ಅನುಕೂಲ ಇದೆ, ಅವೆಲ್ಲವಕ್ಕೂ ದೈವತ್ವವನ್ನು ಕೊಟ್ಟೆವು. ಅದಕ್ಕೆ ನಮ್ಮ ಪರಂಪರೆಯಲ್ಲಿ ದೇವರನ್ನು ಸೂರ್ಯ ಎಂದು ಆರಾಧಿಸುತ್ತೇವೆ. ನೀರನ್ನು ಗಂಗೆ ಎಂದು ಆರಾಧಿಸುತ್ತೇವೆ. ಅಗ್ನಿಯನ್ನು ದೇವರು ಎಂದು ಆರಾಧಿಸುತ್ತೇವೆ. ಗಾಳಿಯನ್ನು ದೇವರು ಎಂದು ಅರಾಧಿಸುತ್ತೇವೆ. ಹಾಗೆಯೇ ಗೋವನ್ನು ದೇವರು ದೇವರು ಎಂದು ಅರಾಧಿಸಿದ್ದು ತಾನು ಕಸ ತಿಂದು ಅಮೃತವನ್ನು ಕೊಡತಕ್ಕಂತಹ ಸಾಮರ್ಥ್ಯ ಅದಕ್ಕೆ ಇದ್ದಿದ್ದರಿಂದ. ತಾನು ಕಸವನ್ನು ತಿಂದು ಕೂಡ ಈ ಭೂಮಿಯನ್ನು ಹಸನು ಮಾಡತಕ್ಕಂಹ ಸಾಮರ್ಥ್ಯ ಇದ್ದಿದ್ದರಿಂದ ಗೋವಿಗೆ ದೈವತ್ವದ ಪಟ್ಟವನ್ನು ನಮ್ಮ ಹಿರಿಯರು ಕೊಟ್ಟರೇ ಹೊರತು ಕೇವಲ ಭಾವನಾತ್ಮಕ ವಿಚಾರದ ಆಧಾರದಲ್ಲಿ ಮಾತ್ರವಲ್ಲ. ಇಷ್ಟೊಂದು ಉಪಕಾರ ಮಾಡತಕ್ಕಂತಹ ಆ ಪ್ರಾಣಿಯ ಪ್ರಾಣಿ ವಧೆಯನ್ನು ತಪ್ಪಿಸಬೇಕು 'ಎನ್ನತಕ್ಕಂತಹ ಐತಿಹಾಸಿಕ ಕ್ರಮವನ್ನು ತೆಗೆದುಕೊಂಡಿರತಕ್ಕಂಥದ್ದು ಸ್ವಾಗತಾರ್ಹ. ಅದನ್ನು ಉಳಿಸಲಿಕ್ಕೆ ತೆಗೆದುಕೊಂಡಿರತಕ್ಕಂತಹ ಕ್ರಮಗಳನ್ನು ಸ್ವಾಗತಿಸುತ್ತಾ, ಗೋಶಾಲೆಯನ್ನು ಪ್ರತಿ ತಾಲ್ಲೂಕಿನಲ್ಲಿ ಸ್ಥಾಪನೆ ಮಾಡಲಿಕ್ಕೆ ಹಣ ಕೊಡುವುದಕ್ಕಾಗಿ ಕ್ರಮ ತೆಗೆದುಕೊಂಡಿರತಕ್ಕಂತಹ ಮಾನ್ಯ ಮುಖ್ಯ ಮಂತ್ರಿಗಳ ನಿರ್ಧಾರವನ್ನು ಸ್ವಾಗತಿಸುತ್ತೇನೆ.

ಅಧ್ಯಕ್ಷರು : ಮಾನ್ಯ ರವಿ ಅವರೇ ಮುಗಿಸಿ.

ಶ್ರೀ ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ.ಟಿ.ರವಿರವರು ಮೊನ್ನೆ ತಾನೆ ಎಂಟು ದಿವಸಗಳ ಹಿಂದೆ 100 ಕುರಿ ಹಾಗೂ 25 ಹಂದಿ ಹರಕೆಗಾಗಿ ಕೊಟ್ಟಿದ್ದಾರೆ. ಕಾರ್ಯಕರ್ತರಿಗೆಲ್ಲಾ ಊಟ ಹಾಕಿಸಿದ್ದಾರೆ. ಬೇಲೂರಿನ ಪುರದಮ್ಮನ ದೇವಸ್ಥಾನದಲ್ಲಿ 100 ಕುರಿ ಹಾಗೂ 25 ಹಂದಿಯನ್ನು ಬಲಿ ಕೊಟಿರುವ ಬಗ್ಗೆ ಪೇಪರ್‌ನಲ್ಲಿ ಹೆಡ್‌ಲೈನ್‌ನಲ್ಲಿ ಬಂದಿದೆ. ಬೇರೆಯವರ ವಿಚಾರ ಮಾತನಾಡುತ್ತಾರೆ ಅವರೇ ಹಿಂಸೆ ಮಾಡುತ್ತಿದ್ದಾರೆ.

: **ಗೊಂದಲ**:

ಶ್ರೀ ಸಿ.ಟಿ.ರವಿ : ಅವರು ನನ್ನನ್ನು ಏಕೆ ಕರೆಯಲಿಲ್ಲ ಎಂದು ಹೇಳಿದರು. ನಾನು ನಿಮಗೆ ಪ್ರತ್ಯೇಕವಾಗಿ ಕರೆಯುತ್ತೇನೆಂದು ಹೇಳಿದ್ದೇನೆ. ಅವರಿಗೆ ಕರೆದಿಲ್ಲವೆಂದು ಬೇಜಾರು ಮಾಡಿಕೊಂಡಿದ್ದಾರೆ. ಮುಂದಿನ ಸಾರಿ ಕರೆಯುತ್ತೇನೆ.

ಶ್ರೀ ರುದ್ರೇಶ್‌ಗೌಡ : ಬೇರೆ ಪಾಡಿಯವರ ಹಿಂಸೆ ಬಗ್ಗೆ ಮಾತನಾಡುತ್ತೀರಿ, ಇದು ಹಿಂಸೆ ಅಲ್ಲವಾ? 100 ಕುರಿ ಹಾಗೂ 25 ಹಂದಿ ಕೊಡುವುದು ಹಿಂಸೆ ಅಲ್ಲವಾ?

ಶ್ರೀ ಸಿ.ಟಿ.ರವಿ : ಮುಳ್ಳು ಮುಳ್ಳಿನಿಂದಲೇ ತೆಗೆಯಬೇಕು. ನನ್ನ ರಾಜಕೀಯ ವಿರೋಧಿ ಅಲ್ಲಿ ಹರಕ್ಕೆ ಕಟ್ಟಿಕೊಂಡಿದ್ದ. ಅವನು ಕಟ್ಟಿದ ಮೇಲೆ ನಾನೂ ಹರಕೆ ಕಟ್ಟಿಕೊಳ್ಳಬೇಕಾಯಿತು. ಸಂಪೂರ್ಣ ಪ್ರಾಣಿ ವಧೆ ಆಗಬೇಕೆಂದು ಬಯಸುವುದಾದರೆ, ನಾನು ಸಂಪೂರ್ಣವಾಗಿ ತಯಾರಾಗಿದ್ದೇನೆ, ಅದಕ್ಕೆ ನನ್ನ ಪೂರ್ಣ ಸಹಮತ ಇದೆ. ಆದರೆ ಗೂ ವಧೆ ಆಗುವುದಕ್ಕೆ ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಮಾನ್ಯ ರಮಾನಾಥರೈ ರವರೇ ನೀವು ಗೋವಧೆ ಪರ ಇರಬಹುದು. ನಾವಂತೂ ಯಾವುದೇ ಕಾರಣಕ್ಕೂ ಬಿಡುವುದಿಲ್ಲ.

ಶ್ರೀ ಬಿ.ರಮಾನಾಥರೈ : ಪ್ರಾಣಿವಧೆ ನಿಲ್ಲಿಸುವುದಕ್ಕೆ ನಮ್ಮ ಪೂರ್ಣ ಸಹಕಾರ ಇದೆ.

: **ಗೊಂದಲ** :

ಶ್ರೀ ಸಿ.ಟಿ.ರವಿ : ಮಾನ್ಯ ಮಾಜಿ ಶಾಸಕರಾದ ನಾಗರಾಜ ಶೆಟ್ಟರು ನನಗೆ ಒಂದು ಮಾತು ಹೇಳಿದ್ದರು. ಅವರ ದೈವಕ್ಕೆ ಹರಕೆ ಕಟ್ಟಿಕೊಂಡ ಮೇಲೆ ರಮಾನಾಥರೈಗೆ ಸೋಲಿಸಿದ್ದು ಎಂದು ನಾಗರಾಜ ಶೆಟ್ಟರವರು ಹೇಳಿದ್ದರು. ಈಗ ನೀವು ಅವರ ದೈವಕ್ಕೆ ಹರಕೆ ಕಟ್ಟಿಕೊಂಡಿರಬಹುದು.

ಶ್ರೀ ಬಿ.ರಮಾನಾಥರೈ : ಅವರು ಸೋತದ್ದು ಹೇಗೆ? ನಾವು ಅವರಿಗೆ ಮತ್ತೆ ಸೋಲಿಸುತ್ತೇವೆ ಗೊತ್ತಾ? ಸೋತ ಮೇಲೆ ಅವರಿಗೆ ಗೂಟದ ಕಾರು ಕೊಟ್ಟಿದ್ದಾರೆ. ಶಿಷ್ಟಾಚಾರ ಪ್ರಕರಣದಲ್ಲಿ ಎಲ್ಲರಿಗೂ ಜೋರು ಮಾಡಿ ಕಳುಹಿಸುತ್ತಿದ್ದಾರೆ. ಅವರು ಪ್ರೋಟೋಕಾಲ್ ಬಗ್ಗೆ ಹೇಳುತ್ತಾರೆ. ಕ್ಯಾಬಿನೆಟ್ ದರ್ಜೆ ಸ್ಥಾನಮಾನ ಕೊಟ್ಟಿದ್ದಾರೆ.

ಮಾನ್ಯ ಯೋಗೀಶ್ ಭಟ್‌ರವರು ಪ್ರೋಟೋಕಾಲ್ ಬಗ್ಗೆ ಹೇಳಬಹುದು. ಅವರು ಅದನ್ನು ಹೇಳುವುದಿಲ್ಲ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯವನ್ನು ಹಿರಿಯ ಸದಸ್ಯರಾದ ಮಾನ್ಯ ಶ್ರೀನಿವಾಸಪ್ರಸಾದ್‌ರವರು ಬಹಳ ಜನ ಚರ್ಚೆ ಮಾಡಿದ್ದು ಏನೆಂದರೆ. ಚರ್ಚ್ ಮೇಲಿನ ದಾಳಿ, ಪಬ್ ಮೇಲಿನ ದಾಳಿ, ಕಾನೂನು ಸುವ್ಯವಸ್ಥೆ, ವ್ಯಾಲೆಂಟನ್ ಡೇ, ಹೀಗೆ ಇತ್ಯಾದಿ ಎಲ್ಲ ಸಂಗತಿಗಳ ಬಗ್ಗೆ ಚರ್ಚೆ ಮಾಡಿದರು. ಹಿರಿಯ ಸದಸ್ಯರಾದ ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಬಜೆಟ್ ಮೇಲೆ ಮಾತನಾಡುವಾಗಲೇ ಈ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಚರ್ಚ್ ಮೇಲಿನ ದಾಳಿಯನ್ನು ಸರ್ಕಾರ ಸಮರ್ಥಿಸಲಿಲ್ಲ. ಚರ್ಚ್ ಮೇಲೆ ದಾಳಿ ಮಾಡಿದವರ ಮೇಲೆ ಕೇಸ್ ಹಾಕಿ, ಬಂದಿಸಿ ಅವರನ್ನು ಜೈಲಿಗೆ ಕಳುಹಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡಿತು. 2000ನೇ ಇಸವಿಯಲ್ಲಿ ಚರ್ಚ್‌ಗಳ ಮೇಲೆ ಬಾಂಬ್ ದಾಳಿ ನಡೆದಿತ್ತು.

(ಗೊಂದಲ)

ಮಾನ್ಯ ಸದಸ್ಯರು :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಭಯೋತ್ಪಾದನೆ ಮೇಲಿನ ಚರ್ಚೆ ನಡೆಯುವಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಅಧ್ಯಕ್ಷರು :- ಸಿ.ಟಿ.ರವಿಯವರೆ, ಬಜೆಟ್ ಮೇಲೆ ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಶ್ರೀನಿವಾಸಪ್ರಸಾದ್‌ರವರು ಬಜೆಟ್ ಮೇಲೆ ಭಾಷಣ ಮಾಡುವಾಗಲೇ ಈ ವಿಷಯವನ್ನು ಪ್ರಾಸ್ತಾಪ ಮಾಡಿದ್ದರು. ಅದಕ್ಕೋಸ್ಕರವೇ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು :- ಚರ್ಚ್ ವಿಷಯ ಬಿಟ್ಟು ಬಜೆಟ್ ಮೇಲೆ ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟಂತೆಯೇ ಹೇಳುತ್ತಿದ್ದೇನೆ. 2000ನೇ ಇಸಸಿಯಲ್ಲಿ ಚರ್ಚ್ ಮೇಲೆ ಬಾಂಬ್ ದಾಳಿ ನಡೆದಿತ್ತು.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುವಾಗ ನೀವೆಲ್ಲರೂ ಸುಮ್ಮನೆ ಇದ್ದಿರಿ. ನಾನು ಈಗ ಉತ್ತರ ಕೊಡುತ್ತಿಲ್ಲ. ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನೀವೂ ಕೂಡ ಮಾತನಾಡುವಾಗ ಮಾತನಾಡಿ. ನನಗೆ ಮಾತನಾಡಲು ಅಡ್ಡಿಪಡಿಸಬೇಡಿ. ಮಾನ್ಯ ಅಧ್ಯಕ್ಷರೆ, 2000ನೇ ಇಸವಿಯಲ್ಲಿ ಚರ್ಚ್ ಮೇಲೆ ಬಾಂಬ್ ದಾಳಿ ನಡೆದಿತ್ತು.

ಅಧ್ಯಕ್ಷರು :- ಸಿ.ಟಿ.ರವಿಯವರೆ, ಬಜೆಟ್‌ಗೆ ಸೀಮಿತವಾಗಿ ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಇವೊತ್ತು ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅವೊತ್ತು ಗೃಹ ಸಚಿವರಾಗಿದ್ದರು. ಬಾಂಬ್ ದಾಳಿಯ ತನಿಖೆ ನಡೆಸಲಿಲ್ಲ.

ಅಧ್ಯಕ್ಷರು :- ಸಿ.ಟಿ.ರವಿಯವರೆ, ನೀವು ಬಜೆಟ್‌ಗೆ ಮಾತ್ರ ಸೀಮಿತವಾಗಿ ಮಾತನಾಡಿ. ಅದನ್ನು ಬಿಟ್ಟು ಬೇರೆ ಮಾತನಾಡಿದರೆ ಅದು ಬೇರೆ ಎಲ್ಲೆಲ್ಲೋ ಚರ್ಚೆ ಡೈವರ್ಟ್ ಆಗಿ ಹೋಗುತ್ತದೆ. ಆದುದರಿಂದ ಬೇಗ ಮುಕ್ತಾಯ ಮಾಡಿ. ಏಕೆಂದರೆ ಇನ್ನೂ ಮಾತನಾಡುವವರು ಬಹಳ ಸದಸ್ಯರು ಇದ್ದಾರೆ. ಇನ್ನೂ 15 ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ನಾನು ಏಕೆ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆಂದರೆ, ಶ್ರೀನಿವಾಸಪ್ರಸಾದ್‌ರವರು ಈ ವಿಷಯವನ್ನು ಮಾತನಾಡಿದ್ದರು. ಅವರು ಬಜೆಟ್ ಮೇಲೆ ಮಾತನಾಡುವಾಗಲೇ ಈ ವಿಷಯವನ್ನು ಮಾತನಾಡಡಿದ್ದರು.

ಅಧ್ಯಕ್ಷರು :- ಈಗ ಆ ವಿಷಯ ಬಿಡಿ. ಬಜೆಟ್ ಮೇಲೆ ಮಾತನಾಡಿ. ಇನ್ನೂ 15 ಜನ ಮಾತನಾಡುವವರು ಇದ್ದಾರೆ. ಇವೊತ್ತು ಎಷ್ಟೊತ್ತಾದರೂ ಬಜೆಟ್ ಮೇಲಿನ ಚರ್ಚೆಯನ್ನು ಮುಗಿಸಬೇಕು.

ಶ್ರೀ ಸಿ.ಟಿ.ರವಿ : ನಾನು ಒಂದೇ ಪಾಯಿಂಟ್ ಹೇಳುವುದೇನೆಂದರೆ, ತನಿಖೆ ನಡೆಸಿ ಆರೋಪಿಗಳು ಪತ್ತೆಯಾಗುವುದಕ್ಕೆ ಮುಂಚೆಯೇ ಆರ್.ಎಸ್.ಎಸ್. ತಲೆ ಮೇಲೆ ಆ ಬಾಂಬ್ ದಾಳಿಯ ಪ್ರಕರಣವನ್ನು ಕಟ್ಟಿದರು. ಆಮೇಲೆ ಆ ಬಾಂಬ್ ದಾಳಿಯ ಆರೋಪಿಗಳು ಯಾರು ಎಂದು ಪತ್ತೆಯಾದರು. ಆಗ ಬಾಯಿ ಮುಚ್ಚಿಕೊಂಡರು. ನಿಜವಾದ ಆರೋಪಿಗಳು ಪತ್ತೆಯಾದಾಗ ಬಾಯಿ ಮುಚ್ಚಿಕೊಂಡರು. ಈಗಲೂ ಕೂಡ ಸಂಘ, ಪರಿವಾರ ಎನ್ನುವಂಥ ಆರೋಪವನ್ನು ಮಾಡುತ್ತಿದ್ದಾರೆ. ಇವರಿಗೆ ರಾಜಕೀಯ ಪರಿಜ್ಞಾನ ಇರಬೇಕು ತಾನೆ. ಶ್ರೀ ರಾಮಸೇನೆ ನನ್ನ ವಿರುದ್ಧ contest ಮಾಡಿತ್ತು. ಈ ರೀತಿಯಲ್ಲಿ ರಾಜ್ಯದಲ್ಲಿ ಒಟ್ಟು 86 ಕಡೆ ಶ್ರೀರಾಮ ಸೇನೆಯವರು contest ಮಾಡಿದ್ದರು. ಹೇಗೆ ಅವರು ನಮ್ಮ ಪರಿವಾರದವರಾಗುತ್ತಾರೆ? ಆ ಆರೋಪವನ್ನು ನಮ್ಮ ತಲೆಯ ಮೇಲೆ ಕಟ್ಟುತ್ತಾರೆ ನಮ್ಮ ವಿರುದ್ಧ ಸ್ಪರ್ದೆ ಮಾಡಿತ್ತು ಎಂದರೆ ಅವರನ್ನು ಎತ್ತಿಕಟ್ಟುವಂಥ ಕಾಣದ ಕೈಗಳು ಬೇರೆ ಇವೆ. ಸತ್ಯ ತನಿಖೆಯ ನಂತರ ಹೊರಗೆ ಬರುತ್ತದೆ. ಎತ್ತಿಕಟ್ಟಿ ಯಾರು ರಾಜಕಾರಣ ಮಾಡಿದರು? ಯಾರು ಯಾರು ಯಾರ್‍ಯಾರಿಗೆ ಪುಸಲಾವಣೆ ಮಾಡಿದರು? ಇದನ್ನು ಬಿ.ಜೆ.ಪಿ. ಸರ್ಕಾರದ ತಲೆಗೆ ತರತಕ್ಕಂಥ ಷಡ್ಯಂತ್ರವನ್ನು ಯಾರು ರೂಪಿಸಿದರು? ಅವೊತ್ತು ಮುಖ್ಯಮಂತ್ರಿಗಳಾಗಿದ್ದಂಥ ಕುಮಾರಸ್ವಾಮಿಯವರು ಒಂದು ಮಾತನ್ನು ಹೇಳಿದ್ದರು. ಡಾ:ರಾಜ್‌ಕುಮಾರ್ ಸಾವಿನ ಸಂದರ್ಭದಲ್ಲಿ ಗಲಭೆಯನ್ನು ಎಬ್ಬಿಸಿ ಯಾರು ನಮ್ಮ ಸರ್ಕಾರವನ್ನು ಬೀಳಿಸತಕ್ಕಂಥ ಷಡ್ಯಂತ್ರವನ್ನು ಮಾಡಿದ್ದಾರೆ ಅದು ಗೊತ್ತಿದೆಯೆಂದು ಹೇಳಿದ್ದರು. ಆದೇ ರೀತಿ ಷಡ್ಯಂತ್ರವನ್ನು ಮಾಡುವಚಿಥ ಜನ ಇವೊತ್ತು ರಾಮಸೇನೆಯಂಥ ಸಂಘಟನೆಗೆ ಕುಮ್ಮಕ್ಕು ಕೊಟ್ಟಿರತಕ್ಕಂಥ ಜನ ಯಾರಿದ್ದಾರೆ ಎನ್ನತಕ್ಕಂಥ ಸತ್ಯ ಕೆಲವೇ ದಿನಗಳಲ್ಲಿ ಹೊರಬರುತ್ತದೆ.

ಶ್ರೀ ಬಿ.ರಮಾನಾಥರೈ : ಹಾಗಾದರೆ ಶ್ರೀರಾಮಸೇನೆಯನ್ನು ಸರ್ಕಾರ ಬಂದ್ ಮಾಡಲಿ.

ಅಧ್ಯಕ್ಷರು :- ಸಿ.ಟಿ.ರವಿರವರೆ, ಬೇಗ conclude ಮಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಬಜೆಟ್ ಮೇಲೆ ಮಾತನಾಡಿಯೆಂದು ನೀವು ಅವರಿಗೆ ಹೇಳಿ, ಇಲ್ಲಾ conclude ಮಾಡಿ ಎಂದು ಹೇಳಿ.

ಶ್ರೀ ಸಿ.ಟಿ.ರವಿ : ನಾನು ಮಾತನಾಡುವಾಗ ನಿಮಗೆ ಗುಂಡುಪಿನ್ನು ಚುಚ್ಚಿದಂತಾಗುತ್ತಿತ್ತೆ? ನಾನು ಒಂದೊಂದು ಮಾತನ್ನು ಆಡಿದಾಗಲೂ ನೀವುಗಳು ಎಗರಿ ಎಗರಿ ಬೀಳುತ್ತಿದ್ದಿರಲ್ಲ. ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಗರ್ಭಸ್ಥ ಶಿಶುವಿನಿಂದ ಹಿಡಿದು ಜನರ ಬದುಕಿನ ಜೊತೆಗೆ ತದನಂತರದಲ್ಲಿ ಸಾವಿನ ತನಕವೂ ಕೂಡ ಜನರ ಜೊತೆ ಇರತಕ್ಕಂಥ ಸರ್ಕಾರ ನಮ್ಮದು. 3 ರಿಂದ 6 ನೇ ತಿಂಗಳ ಗರ್ಭಿಣಿ ತಾಯಿಗೆ 1 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. 6 ರಿಂದ 9 ನೇ ತಿಂಗಳಿಗೆ ಮತ್ತೊಂದು ಸಾವಿರ ರೂ.ಗಳನ್ನು ಕೊಡುತ್ತೇವೆ.

(ಗೊಂದಲ)

ಶ್ರೀ ರಮಾನಾಥರೈ : ರಾಷ್ಟ್ರೀಯ ಅಭಿಯಾನದಿಂದ ಕೋಟ್ಯಾಂತರ ರೂಪಾಯಿ ಬರುತ್ತಿದೆಯಲ್ಲಾ ಅದರಿಂದ ಕೊಡುವುದು.

ಅಧ್ಯಕ್ಷರು :- ರವಿಯವರೆ, ಇನ್ನೂ ಬಹಳಷ್ಟು ಜನರು ಮಾತನಾಡುವವರು ಇದ್ದಾರೆ, ಪ್ಲೀಸ್ ಕನ್‌ಕ್ಲೂಡ್ ಮಾಡಿ.

ಶ್ರೀ ಸಿ.ಟಿ.ರವಿ : ಮನೆಯಲ್ಲಿ ಹೆರಿಗೆಯಾದರೆ 500 ರೂಪಾಯಿ ಕೊಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ಒಂದು ಸಾವಿರ ರೂಪಾಯಿ. ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ಒಂದೂವರೆ ಸಾವಿರ ರೂಪಾಯಿ. ಮಡಿಲು ಕಿಟ್ ಕೂಡ ಕೊಡುತ್ತೇವೆ. ಅವರಿಗೆ ನಿಮ್ಮ ಸರ್ಕಾರ ಏನು ಮಾಡಿದೆಯೆಂದು ಇವರು ಕೇಳುತ್ತಾರಲ್ಲ ಅದಕ್ಕೇ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು :- ಈಗಾಗಲೇ ಒಂದು ತಾಸಾಗಿದೆ. ಬೇಗ ಮುಗಿಸಿ.

ಶ್ರೀ ಸಿ.ಟಿ.ರವಿ : ಇನ್ನು ಮೂರು ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ಆದರೇ ಅವರುಗಳು ಹೀಗೆ ಅಡ್ಡಿಪಡಿಸುತ್ತಿದ್ದರೆ ಮೂವತ್ತು ನಿಮಿಷ ತೆಗೆದುಕೊಳ್ಳತ್ತೇನೆ. ಅವರುಗಳು ಸುಮ್ಮನೇ ಇದ್ದರೆ ಮೂರು ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ಹೆಣ್ಣು ಮಗುವಾದರೆ 20 ಸಾವಿರ ರೂ.ಗಳನ್ನು ಇಟ್ಟು 1 ಲಕ್ಷ ರೂಪಾಯಿ ಬಾಂಡ್ ಕೊಡಲಾಗುತ್ತದೆ. ಒಂದನೇ ತರಗತಿಗೆ ನೂರು, ಎರಡನೆಯ ತರಗತಿಗೆ ಇನ್ನೂರು, ಮೂರನೇ ತರಗತಿಗೆ ಮುನ್ನೂರು, ಎಸ್.ಎಸ್.ಎ.ಸಿ.ಗೆ ಒಂದು ಸಾವಿರ, 8ನೇ ತರಗತಿಗೆ ಬರಬೇಕಾದರೆ ಸೈಕಲ್ ಕೊಡತ್ತೇವೆ. ಪಿ.ಯು.ಸಿ. ಗೆ ಬರಬೇಕಾದರೆ ಒಂದು ಸಾವಿರದ ಇನ್ನೂರು ರೂಪಾಯಿ. ಉನ್ನತ ವ್ಯಾಸಾಂಗಕ್ಕೆ ಸಾಲ. ಇಷ್ಟೆಲ್ಲಾ ಕೊಟ್ಟು ಆದರ್ಶ ವಿವಾಹಕ್ಕೂ ಹಣವನ್ನು ಕೊಡುತ್ತೇವೆ. ಸಾಮೂಹಿಕ ಮದುವೆಯಾದರೆ

ಕೊಡುತ್ತೇವೆ. ಮದುವೆಯಾದರೂ ಸರ್ಕಾರದಿಂದ ಹಣ ಉಂಟು. ಆಮೇಲೆ ವಿಧವಾ ವೇತನ ನಾನೂರು ರೂಪಾಯಿ, 65 ವರ್ಷ ವಯಸ್ಸಾಯಿತೆಂದರೆ ಅದಕ್ಕೆ ನಾನೂರು ರೂಪಾಯಿ, ಇಬ್ಬರಿದ್ದರೆ ಎಂಟುನೂರು ರೂಪಾಯಿ, ವರ್ಷಕ್ಕೆ 9600 ರೂಪಾಯಿ ಆಗುತ್ತದೆ. ಯಾವ ಮಗನೂ 5 ಸಾವಿರ ರೂಪಾಯಿ ತೆಗೆದುಕೋ ಅಪ್ಪ ಎಂದು ಕೊಡುವುದಿಲ್ಲ. ಆಮೇಲೆ ಮಧ್ಯಾಹ್ನದ ಬಿಸಿಯೂಟ, ಒಂದು ಲೀಟರ್ ಹಾಲು ಹಾಕುತ್ತಿದ್ದರೆ ಎರಡು ರೂಪಾಯಿ ಹೆಚ್ಚುವರಿ ಹಣ, ಹತ್ತು ಲೀಟರ್ ಹಾಲು ಹಾಕುತ್ತಿದ್ದರೆ ಒಂದು ದಿನಕ್ಕೆ ಇಪ್ಪತ್ತು ರೂಪಾಯಿ, ತಿಂಗಳಿಗೆ ಆರುನೂರು ರೂಪಾಯಿ, ಒಂದು ವರ್ಷಕ್ಕೆ ಏಳು ಸಾವಿರದ ಇನ್ನೂರು ರೂಪಾಯಿಗಳನ್ನು ನಮ್ಮ ಯಡಿಯೂರಪ್ಪನವರು ಕೊಡುತ್ತಿರುವುದು, ನಮ್ಮ ಸರ್ಕಾರ ಕೊಡುತ್ತಿರುವುದು.

ಅಧ್ಯಕ್ಷರು :- ಸಿ.ಟಿ.ರವಿಯವರೆ ಬೇಗ ಮುಗಿಸಿ. ನಾನು ನೆಕ್ಸ್ಟ್ ಮಾತನಾಡುವವರನ್ನು ಕರೆಯುತ್ತೇನೆ. ಪ್ಲೀಸ್ ಬೇಗ ಮುಗಿಸಿ.

ಶ್ರೀ ಸಿ.ಟಿ.ರವಿ : ಇನ್ನು ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ.

ಇಷ್ಟೆಲ್ಲ ಕೊಟ್ಟು, ಶೇಕಡ 3ರ ಬಡ್ಡಿ ದರದಲ್ಲಿ ಸಾಲವನ್ನು ಕೊಟ್ಟು, ಬಿಜಕ್ಕೂ ಹಣ ಕೊಟ್ಟು, ಅಂತ್ಯ ಸಂಸ್ಕಾರಕ್ಕೆ ಒಂದು ಸಾವಿರ ರೂಪಾಯಿ ಕೊಡುವಂತಹ ಸರ್ಕಾರ, ಜನರ ಹುಟ್ಟಿನಿಂದ, ಜನರ ಬದುಕಿನ ಜೊತೆಗೆ, ಜನರ ಸಾವಿನವರೆಗೆ ಇರುವಂತಹ ಸರ್ಕಾರ ನಮ್ಮದು. ಅಂತಹ ಒಳ್ಳೆಯ ಬಜೆಟ್ ಕೊಟ್ಟಿರುವಂತಹ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಸಂಪಗಿ :- ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ರವಿಯವರು ಯುವಕರು, ಇಷ್ಟೊತ್ತು ಎಲ್ಲಾ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದರು. ಅದರೆ ಇವತ್ತು ಯುವಕರಾಗಿರತಕ್ಕಂಥ ರವಿಯವರು, ಯುವಕರನ್ನೇ ಕಡೆಗಾಣಿಸುತ್ತಿದ್ದಾರೆ. ಒಂದು ಕಡೆ ರೈತರನ್ನು ಬೆನ್ನೆಲುಬು ಎಂದು ಹೇಳುತ್ತಾರೆ, ಇನ್ನೊಂದು ಯುವಕರನ್ನು ಬೆನ್ನೆಲುಬು ಎಂದು ಹೇಳುತ್ತಾರೆ, ಇನ್ನೊಂದು ಕಡೆ ಭಯೋತ್ಪಾದನೆ ವಿರುದ್ಧವಾಗಿ ಹಣವನ್ನು ಕೊಡಿಸುತ್ತಾರೆ. ಆದರೆ ಇವತ್ತು ಕರ್ನಾಟಕದಲ್ಲಿ ಕ್ರೀಡೆಗಳು, ಕ್ರೀಡಾಪಟುಗಳು ಸಾಯುವಂತಹ ಪರಿಸ್ಥಿತಿ ಬಂದಿದೆ.

ಶ್ರೀ ಬೆಚ್.ಸಿ. ಬಾಲಕೃಷ್ಣ :- ಅದಕ್ಕೂ ಕೂಡ ದುಡ್ಡು ಕೊಟ್ಟಿದ್ದಾರೆ. ಅದಕ್ಕೂ ದುಡ್ಡು ಕೊಟ್ಟಿದ್ದೇವೆಂದು ಹೇಳಪ್ಪ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೇ, ಇವರು ಬಜೆಟ್ ಪುಸ್ತಕ ಓದಿಲ್ಲ. ಇವರ ಕಾಲಗಲದಲಿ 6–8ಕೋಟಿ ರೂಪಾಯಿ, ಸಂಬಳಕ್ಕೆ ದುಡ್ಡು ಕೊಡುತ್ತಿರಲಿಲ್ಲ.

ಅಧ್ಯಕ್ಷರು :- ಸಂಪಂಗಿಯವರೇ ತಾವು ಮಾತನಾಡುವಾಗ ಹೇಳುವಿರಂತೆ ಬಿಡಿ.

(ಗೊಂದಲ)

ಅಧ್ಯಕ್ಷರು :- ಬಾಲಕೃಷ್ಣರವರೇ, ತಾವು ಮಾತನಾಡಿ. ಇನ್ನು 10 ರಿಂದ 12 ಜನ ಶಾಸಕರು ಮಾತನಾಡುವವರಿದ್ದಾರೆ. ನೀವು ಎಲ್ಲರೂ ಕೂಡ time limit ಮಾಡಿಕೊಂಡರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ಇಲ್ಲದಿದ್ದರೆ ಕೆಲವರಿಗೆ ಅವಕಾಶ ಸಿಗುವುದಿಲ್ಲ. ಅದು ನಿಮಗೆ ಬಿಟ್ಟಿದ್ದು.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಅಧ್ಯಕ್ಷರೇ, ನೀವು ಹೇಳಿದ ಸಮಯದಲ್ಲಿ ಮುಗಿಸುತ್ತೇನೆ. ತಾವು ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ಮಾನ್ಯ ರವಿಯವರನ್ನು ಭಾರತೀಯ ಜನತಾ ಪಕ್ಷದವರು ಏಕೆ ಇಟ್ಟುಕೊಂಡಿದ್ದಾರೆ ಎಂದರೆ ಸುಳ್ಳು ಹೇಳುವುದಕ್ಕೆ, defend ಮಾಡಿಕೊಳ್ಳುವುದಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಪಾಪ, ಅವರ ಕರ್ತವ್ಯ, defend ಮಾಡಿಕೊಳ್ಳಲೇಬೇಕು. ಇಲ್ಲದೇ ಇರುವ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಅನೇಕ ಚರ್ಚೆಗಳಲ್ಲಿ ಭಾಗವಹಿಸಿದಾಗ ಹೇಳಿದ್ದು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರಗಳನ್ನು ಕೂಡ ಕೊಟ್ಟಿದ್ದಾರೆ. ಅದರ ಬಗ್ಗೆ ಏನೇನು ಬಜೆಟ್ನಲ್ಲಿ ಬಂದಿದೆ ಎಂದು ಹೇಳುತ್ತೇವೆ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೇ, particular ಆಗಿ ಇಂತಾದ್ದೇ ಸುಳ್ಳು ಹೇಳಿದ್ದೇನೆಂಧರೆ ಅದನ್ನು ಕಡತದಿಂದ ತೆಗೆಯಿರಿ. ಅದರೆ ನಾನು privilege move ಮಾಡಬೇಕಾಗುತ್ತದೆ. ನೀವು ನನ್ನ ರಕ್ಷಣೆಗೆ ಬರಬೇಕು. ನಾನು ಮಾತನಾಡಿರುವುದು ಯಾವುದು ಸುಳ್ಳು ಎಂದು ಹೇಳಲಿ. ನಾನು ಮಾತನಾಡಿರುವುದು ಸುಳ್ಳು ಎಂದು ಹೇಳಿದ್ದಾರೆ, privilege move ಮಾಡಬೇಕಾಗುತ್ತದೆ. ಯಾವುದು ಸುಳ್ಳು ಎಂದು ಹೇಳಲಿ. ಕಡತದಿಂದ ತೆಗೆಯಿರಿ.

ಶ್ರೀ ಬೆಚ್.ಸಿ. ಬಾಲಕೃಷ್ಣ :- ನನಗೆ ಅವಕಾಶ ಕೊಟ್ಟರೆ ಹೇಳುತ್ತೇನೆ. ಕುಳಿತುಕೊಳ್ಳಿ

ಶ್ರೀ ಸಿ.ಟಿ.ರವಿ : ಹೇಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಯಾವುದು ಎಂದು ಹೇಳುತ್ತೇವೆ. ಕನ್ನಡ ಪ್ರಭ ದಿನಪತ್ರಿಕೆಯಲ್ಲಿ quote ಮಾಡಿದ್ದಾರೆ.

ಶ್ರೀ ಆರ್.ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೇ, ಮಾನ್ಯ ರವಿಯವರು ಎರಡನೇ ಬಾರಿ ಅಯ್ಕೆಯಾಗಿ ಬಂದಿದ್ದಾರೆ. ಸರ್ಕಾರದ ಒಳ್ಳೆಯ ಕಾರ್ಯಕ್ರಮಗಳನ್ನು ಅವರು ಹೊಗಳಲಿ, ಆದರೆ ಒಂದಾದರೂ ಸಲಹೆ ಅವರು ಕೊಡಬಹುದಿತ್ತು. ಆ ರೀತಿ ಸಲಹೆ ಕೊಡಲಿಲ್ಲ ಅವರು ಬಹಳಷ್ಟು ಒಳ್ಳೆಯ ಸಲಹೆಗಳನ್ನು ಕೊಡಬಹುದಿತ್ತು. ಆದರೆ ಒಂದು ಸಲಹೆಯನ್ನು ಸಹ ಅವರು ಕೊಡಲಿಲ್ಲ. ತಾವು ಹಿರಿಯ ಸದಸ್ಯರಿದ್ದೀರಿ.

ಶ್ರೀ ಸಿ.ಟಿ.ರವಿ : ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದೆ, ಆದರೆ ಅದನ್ನು ನಿಮಗೆ ಕೇಳಿಸಿಕೊಳ್ಳುವ ತಾಳ್ಮೆ ಇಲ್ಲವಲ್ಲ. ಎಷ್ಟು ಬಾರಿ ನೀವು ಸೀಟಿನಿಂದ ಎದ್ದು ನಿಂತುಕೊಂಡಿದ್ದೀರಿ ಎಂದು ನೋಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು :– ಸಿ.ಟಿ.ರವಿಯವರನ್ನು ಬಿಟ್ಟುಬಿಡಿ ಸಾಕು. ಅವರನ್ನು ಏಕೆ ಮತ್ತೆ ಮತ್ತೆ ಎಬ್ಬಿಸುತ್ತೀರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೇ, ಅವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಾನು ಇಲ್ಲಿ ಒಂದೆರಡು ಲೈನ್ ಹೇಳುತ್ತೇನೆ.

‘ಹಣದ ಮೂಲವ ಕೇಳಬೇಡಿ, ದೂರದೃಷ್ಟಿಯ ಹುಡುಕಬೇಡಿ,
ಯಾವ ವರ ಬೇಕೆಂದು ಕೇಳಿರಿ, ಕೊಡುವ ಕೆಲಸವು ನಮ್ಮದು.
ದಾನವಿದಕೋ, ಅನುದಾನವಿದಕೋ, ರೈತರಿಗೆ ಕೋಟಿ ಸಾಲವಿದಕೋ,
ಸರ್ವರಿಗೂ ಸಮಪಾಲು ತೆಗೆದುಕೋ, ಉಂಡು ಸಂತಸದಿಂದಿರಿ.
ಮೆಟ್ರೋ ರೈಲು, ನೀರು, ಸೂರು, ಬಸ್ಸು, ರಸ್ತೆ, ಒಳಚರಂಡಿ,
ಉದ್ಯಮಗಳು, ಮಾಧ್ಯಮಗಳು ಓದಿ ಸಂತಸದಿಂದಿರಿ.
ಒಮ್ಮೆ ಒಡ ಹುಟ್ಟಿದವರು ನೀವು, ನಿಮ್ಮ ಸೇವೆಯು ನಮ್ಮ ಗುರಿಯು,
ಯೋಜನೆಗಳ ಸಾಗರದಲಿ, ಮಿಂದು ನೆಮ್ಮದಿಯಿಂದಿರಿ.
ಭರವಸೆಗಳ ಸಾಗರದಲ್ಲಿ ಮಿಂದು ನೆಮ್ಮದಿಯಿಂದಿರಿ.
ಭರವಸೆಯ ಭರಪೂರವಿಹುದು, ನೆರವೇರುವ ನಂಬಿಕೆಯು ಇರದು

ಅದೇ ಕನ್ನಡಪ್ರಭ ಪತ್ರಿಕೆ ಸ್ವಾಮಿ ಇದು. ನೀವು quote ಮಾಡಿರುವಂತಹ ಕನ್ನಡಪ್ರಭ ಪತ್ರಿಕೆ ಇದು.

ಮರೆಯುವುದು ಮನುಕುಲದ ಗುಣವು,
ಸತ್ಯವಾಕ್ಯಕ್ಕೆ ತಪ್ಪಿ ನಡೆದರೆ, ಕ್ಷಮಿಸಿ ಹರಸಿರಿ ನಮ್ಮನ್ನು.
ಪಂಚಕೋಟಿಗೆ ಕೋಟಿ ಹಂಚುವ ಪುಣ್ಯಕೋಟಿಯ ಕಥೆಯಿದು.

ನಿಮ್ಮ ಬಜೆಟ್ ಇಷ್ಟೇ ಸ್ವಾಮಿ, ಇಲ್ಲಿಯವರೆಗೆ ನೀವು ಹೇಳಿದ್ದು ಸುಳ್ಳಲ್ಲವೇ? ಇಲ್ಲಿ ಸಂಯುಕ್ತ ಕರ್ನಾಟಕದಲ್ಲಿ ಹೇಳಿದ್ದಾರೆ. ಯಡಿಯೂರಪ್ಪನವರ ಅದ್ಭುತ ದೀಪ.

ಹಿತಾನುಭವದ ಸೂತ್ರ,
ಚುನಾವಣೆಯ ಸ್ತೋತ್ರ,

ಅದ್ಭುತ ದೀಪ ಎಂದರೆ ಏನು ಹೇಳುತ್ತಾರೆ. ಮಾಡುವುದಕ್ಕಾಗದೆ ಇರುವುದನ್ನು ಸೃಷ್ಟಿ ಮಾಡುವುದು. ಅಲ್ಲಾವುದ್ದೀನ್ ಅದ್ಭುತ ದೀಪ ಕೊನೆಗೆ ಏನಾಯಿತು? ವಿಜಯ ಕರ್ನಾಟಕದಲ್ಲಿ ಬಂದಿರುವುದು, ಜಾತಿ ಮತ ಹಿತಚಿಂತನೆ, ಮಹಾಚುನಮಾವಣೆಗೆ ಮುನ್ನ ಮಹಾಪ್ರಸಾದ. ಇವೆಲ್ಲ ಕನ್ನಡ ಮಾಧ್ಯಮ ದಿನಪತ್ರಿಕೆಗಳು, ಇಂಗ್ಲೀಷ್ ಪತ್ರಿಕೆಗಳಲ್ಲಿ ನಮಗೆ ಇಂಗ್ಲೀಷ್ ಗೊತ್ತಿಲ್ಲ. ಕನ್ನಡ ಒಂದೇ ಗೊತ್ತಿರುವುದು. ಇವೆಲ್ಲ ನೀವು ಹೇಳಿರತಕ್ಕಂಥಾದ್ದು. ಇಲ್ಲಿ ಒಂದು ಮಾತು ಹೇಳಿದ್ದಾರೆ, ನಮ್ಮ ಸರ್ಕಾರದ

ನೀತಿ ಮತ್ತು ಕಾರ್ಯಕ್ರಮಗಳನ್ನು ಜನತೆ ಒಪ್ಪಿಕೊಂಡಿದ್ದಾರೆ ಎನ್ನುವುದಕ್ಕೆ ಸ್ಥಿರ ಸರ್ಕಾರವನ್ನು ತಂದುಕೊಟ್ಟಿದ್ದಾರೆ, ಇದರಿಂದ ದೃಢಪಟ್ಟಿದ್ದೆ. ಸ್ಥಿರತೆ ಮತ್ತು ಅಭಿವೃದ್ಧಿಗಾಗಿ ಬೈ ಎಲೆಕ್ಷನ್‌ನಲ್ಲಿ ಜನಾದೇಶ ದೊರೆತಿದೆ. ಅಪರೇಷನ್ ಕಮಲ, 5 ಜನ ಗೆದ್ದಿದ್ದಾರೆ. ಯಾರು ಸ್ವಾಮಿ ಗೆದ್ದಿರುವುದು? ನಿಮ್ಮ ಪಕ್ಷದವರು ಗೆದ್ದಿದ್ದಾರೆ? ಗುರುತು ಯಾರದ್ದಿರಬಹುದು? ಮಾನ್ಯ ಉಮೇಶ್ ಕತ್ತಿಯವರು ಒಂದು ಮಾತನ್ನು ಹೇಳಿದ್ದಾರೆ.

ಶ್ರೀ ಸಿ.ಟಿ. ರವಿ: ಇವರೂ ನಮ್ಮ ಪಕ್ಷದಲ್ಲಿದ್ದರು. ಈಗ ನೀವು ಗೆದ್ದಿದ್ದು ಯಾವ ಪಕ್ಷದಲ್ಲಿ? ನೀವು ನಮ್ಮ ಪಕ್ಷದಲ್ಲಿದ್ದಿರಿ. ನೀವೇನು original ಜನತಾದಳ ಪಕ್ಷದವರೇ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಉಮೇಶ್ ಕತ್ತಿಯವರು ಒಂದು ಮಾತನ್ನು ಹೇಳಿದ್ದಾರೆ. ನನಗೆ ಗೆಲ್ಲುವುದಕ್ಕೆ ಯಾವ ಪಕ್ಷದ ಅವಶ್ಯಕತೆಯಿಲ್ಲ. ನಾನು ಒಂದೊಂದು ಚುನಾವಣೆಯಲ್ಲಿ, ಒಂದೊಂದು ಚಿಹ್ನೆಯಿಂದ ಗೆದ್ದಿದ್ದೇನೆ. ಹಾಗಿದ್ದಾಗ ಇಂತಹವರನ್ನು ಕರೆದುಕೊಂಡು ಹೋಗಿ ಯಾರು ಬೇಕಾದರೂ ಗೆಲ್ಲಿಸಬಹುದಲ್ಲವೇ? ಮಂತ್ರಿಯನ್ನು ಮಾಡಿ ಚುನಾವಣೆಗೆ ಬಿಟ್ಟರೆ ಯಾರು ಗೆಲ್ಲಿಸುವುದಿಲ್ಲ ಸ್ವಾಮಿ. ಇವರು ಪಕ್ಷದಲ್ಲಿ ಠೇವಣಿ ಕಳೆದುಕೊಂಡಂತಹ ಜನರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ್ದರೆ, ಆಗ ಇವರ ಆರು ತಿಂಗಳ ಸಾಧನೆ, ಇವರು ಬಡರೈತರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿರತಕ್ಕಂಥಾದ್ದು, ಎರಡು ರೂಪಾಯಿಗೆ ಕೆಜಿ ಅಕ್ಕಿಯನ್ನು ಕೊಟ್ಟಿರತಕ್ಕಂಥಾದ್ದು, ಈ ಸಾಧನೆಯನ್ನು ನೋಡಿ ಜನ ಓಟು ಹಾಕಿದ್ದಾರೆ ಎಂದು ತಿಳಿದುಕೊಳ್ಳುತ್ತಿದ್ದೆವು. ದಯವಿಟ್ಟು ಮಾನ್ಯ ರವಿಯವರು ಏಕೆ ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆಂದು ಅರ್ಥ ಮಾಡಿಕೊಳ್ಳಬೇಕು. ದೇಶದ ಮತ್ತು ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಆರ್ಥಿಕ ಸ್ಥಿತಿ ಯಾವಾಗ ಉತ್ತಮವಾಗುತ್ತದೆ. ಖಜಾನೆ ಕಾಯುವಂತಹ ವ್ಯಕ್ತಿಗಳು ಸರಿಯಾಗಿದ್ದರೆ, ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಖಜಾನೆ ಕಾಯುವವರೆ ಕಳ್ಳರಾದರೆ, ಏತಕ್ಕೋಸ್ಕರ ಈ ಪ್ರಶ್ನೆ ಹೇಳುತ್ತಿದ್ದೇನೆ ಎಂದರೆ transferಗಳಲ್ಲಿ, ಎಲ್ಲದರಲ್ಲೂ ಭ್ರಷ್ಟಾಚಾರ. ಎಲ್ಲಾ ಕಡೆ ದುಡ್ಡು ತೆಗೆದುಕೊಂಡು ಅಧಿಕಾರಿಗಳನ್ನು ಹಾಕತಕ್ಕಂಥಾದ್ದು. ನಾನು ಒಂದು ಉದಾಹರಣೆ ಕೊಡುತ್ತೇನೆ. RTO check postನಲ್ಲಿ ಮಾನ್ಯ ಮುಜರಾಯಿ ಮಂತ್ರಿಗಳು ಅವರ ಕ್ಷೇತ್ರಕ್ಕೆ tour ಹೋಗಿದ್ದರು ಅಲ್ಲಿ ಅವರಿಗೆ ಯಾರೋ ಒಬ್ಬರು ಇಲ್ಲಿ ಬಹಳಷ್ಟು ಲೂಟಿ ನಡೆಯುತ್ತಿದೆ, ವಾಹನಗಳನ್ನು ಸರಿಯಾಗಿ ಚೆಕ್ ಮಾಡುತ್ತಿಲ್ಲವೆಂದು ದೂರು ಹೇಳಿದರು. ಮಾನ್ಯ ಮುಜರಾಯಿ ಮಂತ್ರಿಗಳು ಆ ಚೆಕ್ ಪೋಸ್ಟ್ ಸ್ಥಳಕ್ಕೆ ಹೋದರು. ಇದನ್ನು ನಾನು ಮಾಧ್ಯಮದಲ್ಲಿ ಓದಿದ್ದು. ಅಲ್ಲಿ ಅಧಿಕಾರಿ ಇರುವುದಿಲ್ಲ. ಆ ಅಧಿಕಾರಿ ಅಲ್ಲಿಗೆ ಬಂದು ಮಾನ್ಯ ಮಂತ್ರಿಗಳನ್ನು ನೋಡಿದ ತಕ್ಷಣ ಓಡಿ ಹೋಗುತ್ತಾನೆ. ಅವರ ಹಿಂದೆ ಇವರು ಗಾಡಿ ಓಡಿಸಿಕೊಂಡು

ಓಡುತ್ತಾರೆ. ಅವನು ಇವರ ಕೈಗೆ ಸಿಗುವುದಿಲ್ಲ. ಇನ್ನೊಬ್ಬ ಅಧಿಕಾರಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕು. ಮಾನ್ಯಮಂತ್ರಿಗಳು ಅಲ್ಲಿಯೇ ಕುಳಿತಿದ್ದರೆ ಅಧಿಕಾರಿ ಕೂಡ ಬರುವುದಿಲ್ಲ. ಲಾರಿಗಳವರು ಬರುತ್ತಾರೆ. ಸ್ವಾಮಿ ಇದಕ್ಕೆ 500 ರೂಪಾಯಿ ತೆಗೆದುಕೊಳ್ಳಿ ಎಂದು ಕೊಡುತ್ತಾರೆ. ಅವನಿಗೆ ಮಂತ್ರಿಗಳು ಎಂದು ಗೊತ್ತಿಲ್ಲ, ಅವರನ್ನೇ ಅಧಿಕಾರಿ ಎಂದು ತಿಳಿದುಕೊಂಡು ಬಿಟ್ಟಿದ್ದಾನೆ. ಇದು ಮಾಧ್ಯಮಗಳ ಮುಖಪುಟದಲ್ಲಿ ಬಂತು. ಮಾರನೇ ದಿವಸ ಎಲ್ಲರೂ suspend ಆಗಿ ಬಿಡುತ್ತಾರೆ, ಅಧಿಕಾರಿಗಳನ್ನೆಲ್ಲ ಮನೆಗೆ ಕಳುಹಿಸಿಬಿಡುತ್ತಾರೆ, ಏನೋ ದೊಡ್ಡ ಅನಾಹುತ ಆಗುತ್ತದೆಂದು ನಾನು ತಿಳಿದುಕೊಂಡರೆ, ಮಾರನೇ ದಿವಸ ಮಾಧ್ಯಮದಲ್ಲಿ ಯಾವುದೇ ವರದಿ ಇಲ್ಲ. ನಾನು ಒಂದು ಸಾರಿ ಮಾನ್ಯ ಮಂತ್ರಿಗಳನ್ನು, ಏನು ಸ್ವಾಮಿ ನೀವು ಈ ರೀತಿ ಮಾಡಿದಿರಲ್ಲ, ಅಧಿಕಾರಿಗಳನ್ನು ಏನು ಮಾಡಿದಿರಿ ಎಂದು ಕೇಳಿದೆ. ಅದಕ್ಕೆ ಅದು ನಿಮ್ಮ ಇಲಾಖೆಯಲ್ಲ, ನೀನು ಏಕೆ ಹೋಗಿದ್ದೆ ಎಂದು ನನ್ನನ್ನೇ ಬೈಯ್ದರು ಎಂದು ಹೇಳಿದರು. ಸ್ವಾಮಿ ಎಲ್ಲಿ ತೆರಿಗೆ ಬರುತ್ತದೆ? ಸೋರಿ ಹೋಗುತ್ತಿರುವ ತೆರಿಗೆಯನ್ನು ಸರ್ಕಾರಕ್ಕೆ ಹಿಡಿದುಕೊಳ್ಳುವುದಕ್ಕೆ ಆಗದಿದ್ದರೆ ಭ್ರಷ್ಟಚಾರವಲ್ಲವೇ ಅದು? ತೆರಿಗೆ ಎಲ್ಲಿ ಬರುತ್ತದೆ? ಆರ್ಥಿಕ ಸ್ಥಿತಿ ಎಲ್ಲಿ ಉತ್ತಮವಾಗುತ್ತದೆ? ನೀವು ಯಾವ ರೀತಿ ಉತ್ತಮವಾದ ಬಜೆಟ್‌ನ್ನು ಕೊಡುತ್ತೀರಿ? ಯಾವ ರೀತಿ ನೀವು ಸಾಮಾಜಿಕ ನ್ಯಾಯ ಕೊಡುತ್ತೀರಿ?

ಶ್ರೀ ಸಿ.ಟಿ. ರವಿ: ಮಾಮೂಲಿ ಗೇಟ್‌ನಿಂದ ಕೊಡುವುದು ಯಾವಾಗಿನಿಂದ ಪ್ರಾರಂಭವಾಯಿತು ಎಂದು ಹೇಳಿ. ಅದನ್ನು ನಿಲ್ಲಿಸುವುದಕ್ಕೆ ಏನು ಮಾಡಬೇಕು ಎಂದು ಸಹ ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ಇಲ್ಲಿ ನಾವು ಕುಳಿತಿರುವವರೆಲ್ಲಾ ಸರಿ ಇಲ್ಲವೆಂದೇ ನಿಮ್ಮನ್ನು ಗೆಲ್ಲಿಸಿರುವಂಥಾದ್ದು. ನೀವು ಸರಿಮಾಡಬೇಕಲ್ಲಾ, ನೀವೂ ಅದೇ ಕೆಲಸವನ್ನು ಮಾಡಿದರೆ, ನಮಗೂ ನಿಮಗೂ ಏನು ವ್ಯತ್ಯಾಸವಿದೆ? ಮಾನ್ಯ ಅಧ್ಯಕ್ಷರೆ, ನಡೆದು ಬಂದ ದಾರಿ ಎಂದು ಈ ಸರ್ಕಾರದ ಬಗ್ಗೆ ಹೇಳಿದ್ದಾರೆ. ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ನಾವು ಸರ್ಕಾರಕ್ಕೆ ಧನ್ಯವಾದವನ್ನು ಹೇಳುತ್ತೇವೆ. ಈಗ 1,40,000 ರೂಪಾಯಿಗಳನ್ನು fixed ಇಟ್ಟು ಒಂದು ಲಕ್ಷ ರೂಪಾಯಿಗಳನ್ನು ಹೆಣ್ಣು ಮಕ್ಕಳಿಗೆ ಕೊಡುವಂಥಾದ್ದು. ಆದರೆ ಈ ಭಾಗ್ಯಲಕ್ಷ್ಮಿ ಯೋಜನೆ ಪ್ರಾರಂಭವಾಗಿದ್ದು ಯಾವಾಗ? ಅದು ಸಮ್ಮಿಶ್ರ ಸರ್ಕಾರದಲ್ಲಿ ಎಂಬುದನ್ನು ನೀವು ಹೇಳಬೇಕಲ್ಲಾ, ಅದರ ನೇತೃತ್ವವನ್ನು ಯಾರು ವಹಿಸಿದ್ದರು? ಅದನ್ನು ಹೇಳಬೇಕಲ್ಲಾ, ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ 400 ರೂಪಾಯಿಗಳನ್ನು ಕೊಡುವಂಥಾದ್ದು. ಇದರಲ್ಲಿ ಎಲ್ಲರಿಗೂ 65 ವರ್ಷವಾಗಿಯೆಂದು certificateಗಳನ್ನು ಕೊಟ್ಟಿದ್ದಾರೆ. ಒಬ್ಬರಿಗೂ ಇದುವರೆಗೂ ಹಣ ಬಿಡುಗಡೆಯಾಗಿಲ್ಲ, treasuryಯಲ್ಲಿ ದುಡ್ಡೇ ಇಲ್ಲ. ನಾವು ಏನಾದರೂ ಹಳ್ಳಿಗಳಿಗೆ ಹೋದರೆ ಎಲ್ಲರೂ certificate ಅನ್ನು ತೆಗೆದುಕೊಂಡು

ನಮ್ಮ ಹತ್ತಿರ ಬರುತ್ತಾರೆ. ಈ ಸಂಧ್ಯಾ ಸುರಕ್ಷಾ ಯೋಜನೆಗೆ ದುಡ್ಡು ಎಲ್ಲಿ? ಇನ್ನು ಜನ ಸ್ಪಂದನ ಕಾರ್ಯಕ್ರಮದ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಾಗ ಹೇಳಿದರು. ಜನ ಸ್ಪಂದನ ಕಾರ್ಯಕ್ರಮದಲ್ಲಿ ಬಂದಿರುವಂಥ ಅರ್ಜಿಗಳು ration cardಗೆ, ಮನೆಗಳಿಗೆ 90 ಭಾಗ ರೇಷನ್ ಕಾರ್ಡ್‌ಗಳನ್ನು ಕೊಟ್ಟಿದ್ದೀರಿ. ಅವರಿಗೆ permanent ration card ಅನ್ನು ನೀವು ಕೊಟ್ಟಿದ್ದೀರಾ? ಅವರ ಹತ್ತಿರ affidavit ತೆಗೆದುಕೊಂಡ ಮೇಲೆ ಅವರಿಗೆ permanent ration card ಅನ್ನು ಕೊಡಬೇಕಲ್ಲಾ, ಅವರಿಂದ affidavit ಅನ್ನು ತೆಗೆದುಕೊಂಡ ಮೇಲೆ ಅವರು ಕಳ್ಳರಲ್ಲವೆಂದು ತೀರ್ಮಾನವಾಯಿತಲ್ಲಾ, ಈ temporary card ಎಷ್ಟು ದಿವಸ? ಅದು ಎರಡು ತಿಂಗಳುಗಳ ಕಾಲ, ಅದನ್ನು ಚುನಾವಣೆಯಾದ ಮೇಲೆ ಮುಂದುವರೆಸುತ್ತೀರಾ, ಇದು ಬಡವರ ಪರವಾಗಿ ಇರುವಂಥ ಸರ್ಕಾರವಾ? ನೀವು ಇದನ್ನು ಮುಂದುವರೆಸುತ್ತೀರಾ? ನೀವು ಬರೀ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಬಡವರನ್ನು ಅಳತೆ ಮಾಡುವುದಾದರೆ ಸರ್ಕಾರ ಯಾವ ರೀತಿ ಅಭಿವೃದ್ಧಿ ಮಾಡುತ್ತದೆಂಬ ಬಗ್ಗೆ ಚಿಂತನೆ ಮಾಡಬೇಕು. ಬಡವರೇ ಅಗದೇ ಇದ್ದ ಮೇಲೆ affidavit ಏಕೆ ಕೇಳಿದಿರಿ? ಯಾರ್‍ಯಾರ ಅರ್ಜಿಗಳನ್ನು ಕೊಡುತ್ತಾರೆ ಅವೆಲ್ಲರಿಗೂ ಸಾರಸಗಟಾಗ ಕೊಡಬೇಕಾಗಿತ್ತು. ನೀವು affidavit ಅನ್ನು ಏಕೆ ತೆಗೆದುಕೊಂಡಿದ್ದೀರಿ?

ಶ್ರೀ ಎಂ.ಪಿ. ರೇಣುಕಾ ಚಾರ್ಯ: ಮಾನ್ಯ ಅಧ್ಯಕ್ಷರೆ, ಗ್ರಾಮ ವಾಸ್ತವ್ಯ ಮಾಡಿದಾಗ ಎಷ್ಟು ಸಾವಿರ ಅರ್ಜಿಗಳು ಬಂದವು? ಗ್ರಾಮ ವಾಸ್ತವ್ಯ ಮಾಡಿದ್ದು ಕೇವಲ ಪ್ರಚಾರಕ್ಕಾಗಿ.

ಶ್ರೀ ಹೆಚ್. ಸಿ. ಬಾಲಕೃಷ್ಣ: ನೀವು ಏನೂ ಕೆಲಸ ಮಾಡಿಲ್ಲವೆಂದು ಇಲ್ಲಿ ಕೂರಿಸಿದ್ದಾರೆ, ನಾವುಅದನ್ನು ಒಪ್ಪಿಕೊಳ್ಳುತ್ತಾ ಇದ್ದೇವೆ. ನೀವೆಲ್ಲಾ ಈ ರಾಜ್ಯವನ್ನು ಉದ್ಧಾರ ಮಾಡಲಿಯೆಂದು ನಿಮ್ಮನ್ನು ಅಲ್ಲಿ ಕೂರಿಸಿದ್ದಾರೆ. ನಾವು ಏನೂ ಮಾಡಿಲ್ಲ, ಅದಕ್ಕೆ ನಾವೆಲ್ಲಾ ಇಲ್ಲಿ ಕುಳಿತಿರುವುದು. ನೀವು ರಾಜ್ಯವನ್ನು ಉದ್ಧಾರ ಮಾಡುವುದಕ್ಕೆ ಬಂದಿದ್ದೀರಿ. ನೀವು ಏನು ಮಾಡುತ್ತಿದ್ದೀರೆಂಬುದನ್ನು ಹೇಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇಣುಕಾ ಚಾರ್ಯರವರು ಗ್ರಾಮ ವಾಸ್ತವ್ಯದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಇದನ್ನು ಚರ್ಚೆ ಮಾಡುವುದಕ್ಕೆ ಒಂದು ದಿವಸ ಪೂರ್ತಿ ಅವಕಾಶವನ್ನು ಕೊಟ್ಟುಬಿಡಿ, ಈ ವಿಷಯವನ್ನು ಚರ್ಚೆ ಮಾಡೋಣ. ನಾನು ಮುಖ್ಯಮಂತ್ರಿಯಾಗಿದ್ದಾಗ ಕಂತೆಗಟ್ಟಲೆ ಮುಖ್ಯಮಂತ್ರಿ ಪರಿಹಾರ ನಿಧಿಗೆ ಅರ್ಜಿಗಳನ್ನು ತರುತ್ತಿದ್ದರಲ್ಲಾ, ಇವತ್ತು ಈ ಸರ್ಕಾರದಲ್ಲಿ ಎಷ್ಟು ಹಣವನ್ನು ಇದಕ್ಕೆ ಕೊಡುತ್ತಿದ್ದೀರಿ. ಈಗ 6 ತಿಂಗಳುಗಳಾದರೂ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಹಣವನ್ನು ಕೊಡುತ್ತಿಲ್ಲ. ರೋಗಿಗಳು

ಸಾಯುತ್ತಿದ್ದಾರೆ, ತಾವು ನನ್ನ ಬಗ್ಗೆ ಚರ್ಚೆ ಮಾಡಬೇಡಿ, ದಯವಿಟ್ಟು ಕುಳಿತುಕೊಳ್ಳಿ, ನನಗೆ ಕೆಲಸ ಗೊತ್ತಿದೆ.

ಶ್ರೀ ಎಂ.ಪಿ.ರೇಣುಕಾಚಾರ್ಯ: ಜನ ಸ್ಪಂದನ ಕಾರ್ಯಕ್ರಮ ಅತ್ಯಂತ ಯಶಸ್ವಿ ಕಾರ್ಯಕ್ರಮವಾಗಿದ್ದು, ಅದನ್ನು ತಮಗೆ ಸಹಿಸುವುದಕ್ಕೆ ಆಗುತ್ತಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಶೇ. 3ರ ಬಡ್ಡಿದರದಲ್ಲಿ ಸಾಲ

ಶ್ರೀ ಸಿ.ಟಿ. ರವಿ: ಮಾನ್ಯ ಬಾಲಕೃಷ್ಣರವರೆ, ಒಂದು ನಿಮಿಷ ಇರಿ, ಮಾಗಡಿ ತಾಲ್ಲೂಕಿನ ಸಂಧ್ಯಾ ಸುರಕ್ಷಾ ಯೋಜನೆ ವಿವರವನ್ನು ತರಿಸಿಕೊಳ್ಳಬೇಕು. ಅವರು ಒಬ್ಬರಿಗೂ ಕೊಟ್ಟಿಲ್ಲವೆಂದು ಹೇಳಿದರು. ತಾವು ಎಷ್ಟು ಜನರಿಗೆ ಕೊಡುತ್ತಿದ್ದಾರೆಂಬ ಮಾಹಿತಿಯನ್ನು ದಯಮಾಡಿ ತರಿಸಿಕೊಳ್ಳಬೇಕು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾದರೆ ಹೇಳಲಿ. ಈ ಸಂಧ್ಯಾ ಸುರಕ್ಷಾ ಯೋಜನೆ ಪ್ರಾರಂಭವಾಗಿದ್ದು ಯಾರ ಕಾಲದಲ್ಲಿ ಎಂದು ಹೇಳಿ. ರೈತರಿಗೆ ಶೇ.3ರ ಬಡ್ಡದರದಲ್ಲಿ ಸಾಲ.. ..

ಅಧ್ಯಕ್ಷರು: ತಾವು ಸಭಾಧ್ಯಕ್ಷರ ಕಡೆ address ಮಾಡಿ ಮಾತನಾಡಿ, ಈ ರೀತಿ ಮಾತನಾಡಿದರೆ ಇದೇ ರೀತಿಯಲ್ಲಿ ವಾಗ್ವಾದ ಬೆಳೆದುಕೊಂಡು ಹೋಗುತ್ತದೆ, ಕೊನೆಗೆ ಏನೂ ಆಗುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ರೈತರಿಗೆ ಶೇ. 3ರ ಬಡ್ಡಿದರದಲ್ಲಿ ಸಾಲ, ನಾವು ಇದನ್ನು Nationalized Bankಗೆ ವಿಸ್ತರಣೆ ಮಾಡುವುದನ್ನು ಸ್ವಾಗತ ಮಾಡುತ್ತೇವೆ. ಅದರೆ ಇದರ ಬಡ್ಡಿಯನ್ನು ಮೊದಲು ಕಡಿಮೆ ಮಾಡಿರುವುದು ಯಾರ ಕಾಲದಲ್ಲಿ ಪ್ರಾರಂಭವಾಯಿತು? ಬಡ್ಡಿಯನ್ನು ಕಡಿಮೆ ಮಾಡುವುದು ಬೇಡ, ಸಾಲವನ್ನೇ ಮನ್ನಾ ಮಾಡಿಯೆಂದು ಅವತ್ತಿನ ಮುಖ್ಯಮಂತ್ರಿಯವರು ಹೇಳಿದರು, ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಗಲಾಟೆ ಮಾಡಿ 25,000 ರೂಪಾಯಿಗಳವರೆಗೂ ಸಾಲ ಮನ್ನಾ ಮಾಡಿಸಿದೆವು. ಇದು ಏನು ದೊಡ್ಡ ಸಾಧನೆಯೇ? ಹಿಂದೆ ನಾವು ಮಾಡಿರುವಂಥಾದ್ದನ್ನು ಮುಂದುವರೆಸುತ್ತಿದ್ದಾರೆ. ಸುವರ್ಣ ಗ್ರಾಮೋದಯ ಯೋಜನೆ, ಇದು ಯಾರ ಕನಸಿನ ಕೂಸು? ಇದನ್ನು ಮಾನ್ಯ ಕುಮಾರಸ್ವಾಮಿಯವರು ಪ್ರಾರಂಭ ಮಾಡಿದ್ದು. ನೀವು ಹೋದ ವರ್ಷ ಒಂದೇ ಒಂದು ಗ್ರಾಮವನ್ನು ಈ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಈಗ ಕೊಟ್ಟಿರುವಂಥ ಹಣವನ್ನು ಬಹುಶ: ಮುಂದೆ ನಾವು ಏನು ಪಟ್ಟಿಯನ್ನು ಕೊಟ್ಟಿದ್ದೇವೆ. ಅದನ್ನು ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುತ್ತಾರೆ. ಈ ಯೋಜನೆಗೆ ಹಿಂದಿನ ವರ್ಷ ಒಂದೇ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ತಾವು ದಯಮಾಡಿ ಅದನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ಹಳೆಯ ಕೆಲಸವಾಗಿರುವಂಥದ್ದಕ್ಕೆ ದುಡ್ಡು ಕೊಟ್ಟಿರುವಂಥದ್ದು.

ಶ್ರೀ ಸಿದ್ದುಸವದಿ: ಮಾನ್ಯ ಬಾಲಕೃಷ್ಣರವರೆ, ತಮ್ಮ ಸರ್ಕಾರ 20 ತಿಂಗಳು ಇತ್ತಲ್ಲಾ, ಆಗ ಏಕೆ ಹೊಸ ಯೋಜನೆ ಬಂದಿಲ್ಲ.

ಅಧ್ಯಕ್ಷರು: ಮಾನ್ಯ ಸಿದ್ದುಸವದಿಯವರೆ, ಕುಳಿತುಕೊಳ್ಳಿ, ಅವರು ಮಾತನಾಡಲಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ Independent ಸರ್ಕಾರ ಇದೆಯಲ್ಲಾ, ಹೊಸ ಯೋಜನೆಯನ್ನು ಪ್ರಕಟಿಸಿ. ನಾವು ಮಾಡಿರುವ ಯೋಜನೆಯನ್ನೇ ಇಟ್ಟುಕೊಂಡಿದ್ದೀರಲ್ಲಾ, ಈಗ ನೀವು independent ಆಗಿ ಹೊಸ ಯೋಜನೆಯನ್ನು ಹೇಳಿ. ಅದನ್ನು ಬಿಟ್ಟು ನಮ್ಮ ಕಾಲದಲ್ಲಿ ಆಗಿರುವುದನ್ನೇ ಹೇಳುತ್ತಿರಲ್ಲಾ, ನಿಮ್ಮದು ಹೊಸ ಯೋಜನೆ ಯಾವುದೆಂದು ಹೇಳಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಈಗ 1,200 ಗ್ರಾಮಗಳನ್ನು ಆಯ್ಕೆ ಮಾಡಿದ್ದಾರೆ. 1,200 ಗ್ರಾಮಗಳೆಂದರೆ ಒಂದು ಗ್ರಾಮಕ್ಕೆ ಒಂದು ಕೋಟಿ ರೂಪಾಯಿಗಳಂತೆ ಲೆಕ್ಕ. ಅಂದ ಮೇಲೆ 1,200 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದರೆ ಆಗ ಈ 1,200 ಗ್ರಾಮಗಳ ಗ್ರಾಮೋದಯವಾಗುತ್ತದೆ, ಸುವರ್ಣ ಗ್ರಾಮಗಳಾಗುತ್ತದೆಂದು ನಿರೀಕ್ಷೆ ಮಾಡಬಹುದಾಗಿತ್ತು. ತಾವು 300 ಕೋಟಿ ರೂಪಾಯಿಗಳನ್ನು budget ನಲ್ಲಿ provision ಮಾಡಿದ್ದೀರಿ. ನನಗೆ ತಿಳಿದ ಪ್ರಕಾರ ಕಳೆದ ವರ್ಷ ತೆಗೆದುಕೊಂಡಿರುವ 1,200 ಗ್ರಾಮಗಳನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ 400, 500 ಕೋಟಿ ರೂಪಾಯಿಗಳ ಕೊರತೆ ಇದೆ. ಅಂದ ಮೇಲೆ ಹೊಸ ಗ್ರಾಮಗಳಿಗೆ ಹಣವನ್ನು ಎಲ್ಲಿಂದ ನೀವು ಒದಗಿಸುತ್ತೀರೆಂಬುದನ್ನು ಶಾಸಕರು ಕೇಳುವುದು ತಪ್ಪಾ?

ಒಬ್ಬ ಮಾನ್ಯ ಸದಸ್ಯರು: ಹಣಕಾಸಿನ ಹೊಂದಾಣಿಕೆ ಮಾಡಿಕೊಂಡು ಅದನ್ನು ಮುಂದುವರೆಸುತ್ತಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ಅವರು ಹೊಳೆನರಸಿಪುರ ಅತ್ಯಂತ ಹಿಂದುಳಿದ ತಾಲ್ಲೂಕೆಂದು ಹೇಳಿದರು. ಹಿಂದುಳಿದ ತಾಲ್ಲೂಕುಗಳ listನಲ್ಲಿ ಶಿಕಾರಿಪುರವನ್ನು ಕೊಟ್ಟಿಲ್ಲವೇ? ಮಾನ್ಯ ರವಿಯವರು ಶಿಕಾರಿಪುರವನ್ನು ಹೇಳಲಿಲ್ಲವೇ? ಅದು ಹಿಂದುಳಿದ ತಾಲ್ಲೂಕು, ಅದರೂ ಕೆಲಸ ಮಾಡೇ ಇಲ್ಲವೆಂದು ನಾನು ಹೇಳುವುದಿಲ್ಲ. ಅಲ್ಲಿ ಕೆಲಸವಾಗಿದೆ, ಅದು ಅತ್ಯಂತ ಹಿಂದುಳಿದ ತಾಲ್ಲೂಕು ಅಲ್ಲ. ನಮ್ಮ ಮಾನ್ಯ ಉದಾಸಿಯವರ ಹಾನಗಲ್ಲು, ಬಚ್ಚೇಗೌಡರದು ಹೊಸಕೋಟೆ ಅಂದರೆ ಅವರು ಯಾರು ಕೆಲಸವನ್ನು ಮಾಡಿಲ್ಲವೆಂದು ಮಾನ್ಯ ರವಿಯವರು ಹೇಳುವುದು. ಯಾರು ಕೆಲಸ ಮಾಡೇ ಇಲ್ಲ, ನಾವೇ ಕೆಲಸ ಮಾಡುತ್ತಿದ್ದೇವೆ. ಕಳೆದ ಬಾರಿ ಡಾ: ನಂಜುಂಡಪ್ಪನವರ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಅದಕ್ಕೆ ಕೊಟ್ಟಿರುವಚಿಥ ಹಣವನ್ನು ಕಿತ್ತುಕೊಂಡಿದ್ದೀರಿ. ನಾವು P.W.D. ಕಾಮಗಾರಿಗಳಿಗೆ ಸೂಚನೆ ಮಾಡಿದ್ದರೆ, ಅದನ್ನು ಕಿತ್ತುಕೊಂಡು RDPRಗೆ ಹಾಕಿ ಎಲ್ಲರಿಗೂ ಕೊಟ್ಟಿದ್ದಾರೆ. ಡಾ: ನಚಿಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಒಂದು ರೂಪಾಯಿಯನ್ನು

ಕೊಟ್ಟಿಲ್ಲ. ಯಾವುದೇ ಇಲಾಖೆಗೂ ಕೊಟ್ಟಿಲ್ಲ, ಅಂದ ಮೇಲೆ ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ಉದ್ಧಾರ ಮಾಡುತ್ತಿರಾ? ಇವುಗಳನ್ನು ಸರಿಸಮನಾಗಿ ಅಭಿವೃದ್ಧಿ ಮಾಡುವಂಥ ಕೆಲಸವನ್ನು ನೀವು ಮಾಡುತ್ತೀರಾ? ಇವುಗಳಿಗೆ ಹಣವನ್ನು ಎಲ್ಲಿ ಕೊಟ್ಟಿದ್ದೀರಿ? ತಾವು ಸುಮ್ಮನೆ ಘೋಷಣೆ ಮಾಡಿದರೆ ಆಗುವುದಿಲ್ಲ, ಅದು ಕಾರ್ಯಗತವಾಗಬೇಕು. ಇನ್ನು ಕಳೆದ ಸಾರಿ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಕೃಷಿ ಮಿಷನ್ ಪ್ರಾರಂಭ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕೃಷಿ ವಿಜ್ಞಾನಿಗಳು, ಪ್ರಗತಿಪರ ರೈತರು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸಚಿವರ ನೇತೃತ್ವದಲ್ಲಿ ಎಂದು ಹೇಳಿದ್ದಾರೆ. ಈ ರಾಜ್ಯದ ರೈತರಿಗೆ ಮಾನ್ಯ ಯಡಿಯೂರಪ್ಪನವರು ಕೃಷಿ ಮಿಷನ್ ಸ್ಥಾಪನೆ ಮಾಡಿ ಏನೋ ಮಾಡಿ ಬಿಡುತ್ತಾರೆಂದು ಕೃಷಿಯಲ್ಲಿ ಬಾರಿ ಬದಲಾವಣೆಯಾಗುತ್ತದೆಂದು ನಾವು ಅಂದು ಕೊಂಡಿದ್ದೆವು. ಈ ಕೃಷಿ ಮಿಷನ್ ಎಲ್ಲಿ? ಕಳೆದ ಬಜೆಟ್‌ನಲ್ಲಿ ಇದನ್ನು ತೋರಿಸಿದ್ದೀರಿ. ತಾವು ಈ ಬಗ್ಗೆ ಮಾತನಾಡಿದ ಮೇಲೆ ಅನುಷ್ಠಾನ ಮಾಡಬೇಕಲ್ಲಾ, ಬರೀ ಜನರ ಹೊಗಳಿಕೆಗೆ, ಜನರ ಓಟಿನ ಆಸೆಗೋಸ್ಕರ ಇಂಥ ಸುಳ್ಳು ಭರವಸೆಗಳನ್ನು ಏಕೆ ಕೊಡುತ್ತೀರಾ? ಎಲ್ಲಿ ಈ ಕೃಷಿ ಮಿಷನ್? ಸಾವಯವ ಕೃಷಿಗೆ 3 ಕೋಟಿ ರೂ.ಗಳು, ಪ್ರತಿ ಕುಟುಂಬಕ್ಕೂ 2 ಸಾವಿರ ರೂಪಾಯಿಗಳ ಸಹಾಯಧನವೆಂದು ಹೇಳಿದ್ದೀರಿ. ಇದನ್ನು ಎಲ್ಲಿ ಕೊಟ್ಟಿದ್ದೀರಿ? ನಮ್ಮ ತಾಲ್ಲೂಕಿನಲ್ಲಿ ಕೊಟ್ಟಿಲ್ಲ, ಬೇರೆ ಎಲ್ಲಿ ಕೊಟ್ಟಿದ್ದಾರೋ ಗೊತ್ತಿಲ್ಲ. ಮಾನ್ಯ ರವಿಯವರಿಗೆ ಏನಾದರೂ ಕೊಟ್ಟಿರಬಹುದು.

ಶ್ರೀ ಎಂ.ಪಿ.ರೇಣುಕಾಚಾರ್ಯ: ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು: ಅವರು ಮಾತನಾಡಲಿ, ಅವರು ಕೇಳುವ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನೀವು ಏಕೆ ಪ್ರತಿಯೊಂದಕ್ಕೂ ಪದೇ ಪದೇ ಎದ್ದು ನಿಲ್ಲುತ್ತೀರಿ ಅವರು ಏನು ಹೇಳಬೇಕಾಗಿದೆಯೋ ಅದನ್ನು ಹೇಳಿ ಬಿಡಲಿ. ಅಮೇಲೆ ಉತ್ತರವನ್ನು ಹೇಳುವುದಕ್ಕೆ ಮಂತ್ರಿಗಳು ಇರುತ್ತಾರೆ. ಮಾನ್ಯ ಬಾಲಕೃಷ್ಣರವರೆ, ನೀವು ನನ್ನ ಕಡೆ ನೋಡಿಕೊಂಡು address ಮಾಡಿ. ನೀವು ಅಲ್ಲಿ ಅವರನ್ನು ಪ್ರಶ್ನೆ ಕೇಳಿದರೆ, ಅವರು ನಿಮಗೆ ಉತ್ತರವನ್ನು ಹೇಳುತ್ತಾರೆ. ಅದು ಬೇಡ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನಾನು ಅವರ ಬಳಿ ಮಾತನಾಡುತ್ತಿಲ್ಲ, ನಿಮ್ಮ ಬಳಿ ಮಾತನಾಡುತ್ತಿದ್ದೇನೆ. ಕೃಷಿ ಬಗ್ಗೆ ರೈತರೇ ಈ ದೇಶದ ಬೆನ್ನೆಲುಬು ನಾವು ಕೃಷಿಯ ಬಗ್ಗೆ ಬಹಳಷ್ಟು ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಈ ಬಾರಿ ಬಜೆಟ್‌ನಲ್ಲಿ 7.19% ಕೊಟ್ಟಿದ್ದಾರೆ. ಕಳೆದ ಬಾರಿ 9.6% ಇದು 9 ತಿಂಗಳಿಗೆ ಕೊಟ್ಟಿರುವಂಥಾದ್ದು. ಈ ರಾಜ್ಯದ ರೈತನಿಗೆ ಕೃಷಿಗೆ ಬಹಳಷ್ಟು ಕೊಟ್ಟಿದ್ದೇವೆ, ಅದರಿಂದ ಪ್ರಗತಿಯಾಗುತ್ತದೆ, ಆಹಾರ ಧಾನ್ಯವನ್ನು ಉತ್ಪತ್ತಿ ಮಾಡುತ್ತಾರೆಂದು ಹೇಳಿದ್ದಾರೆ. ತಾವು ಸತ್ಯವನ್ನು ಹೇಳುವುದನ್ನು ಕಲಿತುಕೊಳ್ಳಬೇಕೆಂದು ನಾನು ತಮ್ಮ

ಮುಖಾಂತರ ಮಾನ್ಯ ರವಿಯವರಿಗೆ ಹೇಳಲಿಚ್ಛಿಸುತ್ತೇನೆ. ಕಳೆದ ಬಾರಿ ಹನಿ ನೀರಾವರಿಗೆ 175 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಸಾರಿ ಹನಿ ನೀರಾವರಿಯ ಬಗ್ಗೆ ಪ್ರಸ್ತಾಪವೇ ಇಲ್ಲ. ಶೇ.75ರಷ್ಟು ಸಹಾಯಧನದಲ್ಲಿ 175 ಕೋಟಿ ರೂಪಾಯಿಗಳೆಂದು ಇದ್ದರೆ, ಒಂದು ರೂಪಾಯಿಯನ್ನು ಯಾರಿಗಾದರೂ ಕೊಟ್ಟಿದ್ದಾರೆ? ನನ್ನ ಕ್ಷೇತ್ರಕ್ಕಂತೂ ಕೊಟ್ಟಿಲ್ಲ, ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಈ ಸಾರಿ ಆ ಪ್ರಸ್ತಾಪವೇ ಇಲ್ಲ. ರವಿಯವರಿಗೇನಾದರೂ ಕೊಟ್ಟಿದ್ದಾರೇನೋ ಎಂದು ದಯಮಾಡಿ ಕೇಳಿ ಅಧ್ಯಕ್ಷರೆ. ಸುಳ್ಳು ಏಕೆ ಹೇಳಬೇಕು? ಇನ್ನೂಗೋದಾಮು ಮತ್ತು ಶೈತ್ಯಾಗರಗಳನ್ನು ಸ್ಥಾಪಿಸಲಿಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಉತ್ಪನ್ನ ಶೇಖರಣೆಗೆ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದೀರಿ. ಗೋದಾಮುಗಳನ್ನು ಎಲ್ಲಿ ಸ್ಥಾಪನೆ ಮಾಡಿದ್ದೀರಿ? ಎಲ್ಲಿ ಪ್ರಾರಂಭ ಮಾಡಿದ್ದೀರಿ? "ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಮತ್ತು ಬಾಗಲಕೋಟಿ ಜಿಲ್ಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಈಗಾಗಲೇ ಸುಗ್ರೀವಾಜ್ಞೆ ಹೊರಡಿಸಿದ್ದು,..." ಎಂದು ಹೇಳಿದ್ದೀರಿ. ಇದನ್ನು ಕಳೆದ ಬಜೆಟ್‌ನಲ್ಲಿಯೂ ತೋರಿಸಿದ್ದೀರಿ. ಕಳೆದ ಬಜೆಟ್‌ನಲ್ಲಿ ಇದು ಅನುಷ್ಠಾನವಾಗಲಿಲ್ಲ. ಇದನ್ನು ನಾವು ಮಾಡುತ್ತೇವೆ ಎಂದು ಕಳೆದ ಬಜೆಟ್‌ನಲ್ಲಿ ತೋರಿಸಿದ್ದಿರಿ. ಸುಳ್ಳು ಏಕೆ ಹೇಳಿದಿರಿ? ಬಜೆಟ್‌ನಲ್ಲಿ ಹೇಳಿರುವುದನ್ನು ನೀವು ಮಾಡಿ ತೋರಿಸಬೇಕಲ್ಲವೇ? ಇದಕ್ಕೆ 20 ಕೋಟಿ ರೂಪಾಯಿ ಹಣಕಾಸು ಸೌಲಭ್ಯವನ್ನು ಈ ಬಾರಿ ಒದಗಿಸಿದ್ದೇವೆ ಎಂದು ಹೇಳಿದ್ದೀರಿ.

ರೈತರ ವಿದ್ಯುತ್ ಸರಬರಾಜಿಗಾಗಿ 2,100 ಕೋಟಿ ಎಂದು ಹೇಳಿದ್ದೀರಿ, ಸಂತೋಷ. ಆದರೆ ರೈತರ ವಿದ್ಯುತ್ತಿನ ಸ್ಥಿತಿಯನ್ನು ಮುನಿಯಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ರೈತರ ಸ್ಥಿತಿ ಯಾವ ರೀತಿ ಆಗಿದೆ ಎಂದು ಸ್ವಲ್ಪ ಹೇಳಲು ಇಚ್ಛೆಪಡುತ್ತೇನೆ. 'ವಿದ್ಯುತ್ ಖರೀದಿಗೆ ಹಣ ಇಲ್ಲ' – ಇದು ದಿನಾಂಕ 04–08–2008ರ 'ಕನ್ನಡಪ್ರಭ' ದಿನಪತ್ರಿಕೆಯಲ್ಲಿ ಬಂದಿದ್ದು, ಇದು ಮಾನ್ಯ ಮಂತ್ರಿಗಳು ಹೇಳಿರತಕ್ಕಂಥಾದ್ದು. 'ಮೀಟರ್ ಅಳವಡಿಸಿದಿದ್ದರೆ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಪೂರೈಕೆ ಇಲ್ಲ '– ಇದು ಮುಖ್ಯಮಂತ್ರಿಗಳು ಹೇಳಿರತಕ್ಕಂಥಾದ್ದು. 'ಬೇಸಿಗೆಯಲ್ಲಿ ವಿದ್ಯುತ್ ಕಡಿತ ಇಲ್ಲ '–ಇದು ಈಶ್ವರಪ್ಪನವರ ಭರವಸೆ. 'ಮುನ್ಸೂಚನೆ ನೀಡದೇ ಲೋಡ್ ಷೆಡ್ಡಿಂಗ' – ಇದು ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು. ವಿದ್ಯುತ್ ನೀಡಲು ಏನು ಮಾಡಿದ್ದೀರಿ ಸ್ವಾಮಿ? ಕೃಷಿ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಅಸಾಧ್ಯ, 'ಕೇವಲ 10 ಹೆಚ್.ಪಿ.ಯವರೆಗೆ ಮಾತ್ರ ಉಚಿತ ವಿದ್ಯುತ್ತನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಹಾಗದರೆ ಕೋಲಾರದವರು ಮನುಷ್ಯರಲ್ಲವೇ? ಏಕೆಂದರೆ, ಅಲ್ಲಿರುವವರ್ಯಾರೂ 10 ಹೆಚ್.ಪಿ. ಪಂಪುಸೆಟ್ಟನ್ನು ಉಪಯೋಗಿಸಿ ನೀರನ್ನು ತೆಗೆಯಲು ಆಗುವುದಿಲ್ಲ. ಎಲ್ಲರೂ 15 ಹೆಚ್.ಪಿ., 20 ಹೆಚ್.ಪಿ. ಉಪಯೋಗಿಸುತ್ತಿದ್ದಾರೆ. ಹಾಗಾದರೆ, ಅಲ್ಲಿರುವವರ್ಯಾರೂ ರೈತರಲ್ಲವೇ ಅವರ ಬಗ್ಗೆ

ಸರ್ಕಾರಕ್ಕೆ ಕಾಳಜಿ ಇಲ್ಲವೇ? ಅದನ್ನು ಏಕೆ ವಿಸ್ತರಣೆ ಮಾಡಲಿಲ್ಲ? ದಯಮಾಡಿ ಸರ್ಕಾರ ಇದಕ್ಕೆ ಸ್ಪಷ್ಟೀಕರಣ ಕೊಡಬೇಕು. 'ವಿದ್ಯುತ್ ಖರೀದಿಗೆ ಸರ್ಕಾರದ ಬಳಿ ಹಣ ಎಲ್ಲ; '15 ದಿನಗಳಲ್ಲಿ ಲೋಡ್ ಷೆಡ್ಡಿಂಗ್ ಅಂತ್ '-ಇವುಗಳನ್ನೆಲ್ಲಾ ನೋಡಿದಾಗ, ಇವತ್ತು ವಿದ್ಯುತ್ತಿನ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಕನಿಷ್ಠ 2 ಗಂಟೆಯೂ ವಿದ್ಯುತ್ತನ್ನು ಸರಿಯಾಗಿ ಸರಬರಾಜು ಮಾಡದೇ ಇರತಕ್ಕಂಥ ಪರಿಸ್ಥಿತಿಗೆ ಇವತ್ತು ಸರ್ಕಾರ ತಲುಪಿದೆ. ಮುಂದಿನ ದಿನಗಳಲ್ಲಿ ಇದು ಕತ್ತಲ ರಾಜ್ಯ ಆದರೂ /ಕೂಡ ಆಶ್ಚರ್ಯಪಡಬೇಕಾಗಿಲ್ಲ. ಇವರ ಗುರಿ, ಇವರು ಹಾಕಿಕೊಂಡಿರತಕ್ಕಂಥ ಯೋಜನೆ 2013ನೇ ಇಸವಿಗೆ ಮುಟ್ಟುತ್ತದೆ. 2013ನೇ ಇಸವಿಯ ಹೊತ್ತಿಗೆ ಇಲ್ಲಿ ಯಾರೂ ಇರುತ್ತಾರೋ, ಯಾರೂ ಇರುವುದಿಲ್ಲವೋ, ಯಾರು ಮುಖ್ಯಮಂತ್ರಿಯಾಗಿರುತ್ತಾರೋ, ಯಾರಿಗೆ ಗೊತ್ತು? ಇವತ್ತು ಏನಾದರೂ ಮಾಡಬೇಕಲ್ಲವೇ? ಇವತ್ತು ಯಾವ ರೀತಿ ವಿದ್ಯುತ್ತನ್ನು ಖರೀದಿ ಮಾಡಬೇಕು, ರೈತರಿಗೆ ಯಾವ ರೀತಿ ವಿದ್ಯುತ್ತನ್ನು ಕೊಡಬೇಕು ಎನ್ನುವ ಬಗ್ಗೆ ಚಿಂತನೆ ಇಲ್ಲ. ವಿದ್ಯುತ್ತಿನ ಸ್ಥಿತಿ ಬಹಳಷ್ಟು ಚಿಂತಾಜನಕವಾಗಿದೆ.

ಇನ್ನೂ ಪಶುಸಂಗೋಪನೆ ಮತ್ತು ಹೈನುಗಾರಿಕೆ. ವಿಮಾ ಸೌಲಭ್ಯಕ್ಕೋಸ್ಕರ ಕುರಿ ಮೇಕೆ ಸಾಕಾಣಿಕೆಗೆ 5 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ, ಸಂತೋಷ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ 2 ರೂಪಾಯಿಗಳನ್ನು ಕೊಡುತ್ತೇವೆ ಎಂದು ಹಿಂದೆ ಸರ್ಕಾರ ಘೋಷಣೆ ಮಾಡಿತ್ತು, ಅದನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ. 2 ರೂಪಾಯಿ ಸಾಲುವುದಿಲ್ಲ, ಇನ್ನೂ 2 ರೂಪಾಯಿಗಳನ್ನುಸೇರಿಸಿ ರೈತರಿಗೆ ಕೊಡುತ್ತೇವೆ ಎಂದು ರೇವಣ್ಣನವರು ಹೇಳಿದರೆ, ರೇವಣ್ಣನವರಿಗೆ ಅದನ್ನು ಕೊಡಲಿಕ್ಕೆ ಬಿಡಲಿಲ್ಲ. ಓಟಿನಾಸೆಗೋಸ್ಕರ ಅದನ್ನು ಕೊಟ್ಟಿರತಕ್ಕಂಥಾದ್ದು. ಇವರಿಗೆಲ್ಲಿ ಓಟು ಜಾಸ್ತಿಯಾಗಿ ಬಿಡುತ್ತದೋ ಎನ್ನುವ ಉದ್ದೇಶದಿಂದ ಅವರು ಕೊಡತಕ್ಕಂಥದ್ದನ್ನು ತಡೆಹಿಡಿದರು. ರೇವಣ್ಣನವರು ಕೊಡುವುದು ಬೇಡ. ರೈತರಿಗೆ ಇವರೇ ಇನ್ನೂ 2 ರೂಪಾಯಿ ಕೊಡಲಿ. ಇವತ್ತು ರೈತ ಯಾವ ರೀತಿ ಕಷ್ಟದಲ್ಲಿ ಹಳ್ಳಿಗಳಲ್ಲಿ ಹೈನುಗಾರಿಕೆಯನ್ನು ಮಾಡುತ್ತಿದ್ದಾನೆ ಎನ್ನುವುದು ತಮಗೆಲ್ಲ ಗೊತ್ತಿದೆ. ಹೈನುಗಾರಿಕೆ ಎಷ್ಟು ಕಷ್ಟದಲ್ಲಿದೆ ಎಂದು ನಮ್ಮ ಮಿತ್ರರಾಗಿರತಕ್ಕಂಥ ರವಿಯವರಿಗೂ ಗೊತ್ತಿದೆ. ಒಂದು ಲೀಟರ್ ನೀರಿಗೆ ಎಷ್ಟು ಹಣವನ್ನು ಕೊಡುತ್ತಿದ್ದಾರೆ. ಒಂದು ಲೀಟರ್ ಹಾಲಿಗೆ ಎಷ್ಟು ಹಣ ಸಿಗುತ್ತಿದೆ ಎನ್ನುವುದನ್ನು ದಯಮಾಡಿ ರವಿಯವರು ನಮಗೆ ಹೇಳಬೇಕು. ನೀವೇ ರೈತರಿಗೆ ಇನ್ನೆರಡು ರೂಪಾಯಿಗಳನ್ನು ಕೊಡಿ. ಇಲ್ಲವೆಂದರೆ, ಅವರು ಮಾಡುವುದಕ್ಕಾದರೂ ಬಿಡಿ. ರೈತರ ಪರವಾಗಿರತಕ್ಕಂಥ ನಿಮ್ಮ ಸರ್ಕಾರ, ರೈತರಿಗೋಸ್ಕರ ಬಂದಿರತಕ್ಕಂಥ ಸರ್ಕಾರ, ರೈತರ ಹೆಸರಿನಲ್ಲಿ ಅಧಿಕಾರವನ್ನು ತೆಗೆದುಕೊಂಡಂತ ಸರ್ಕಾರದವರಾದ ನೀವೇ ಇನ್ನೂ ಎರಡು ರೂಪಾಯಿಗಳನ್ನು

ಕೊಡಿ. ಅದನ್ನು ಏಕೆ ತಡೆಹಿಡಿಯುತ್ತೀರಿ? ಅಂದರೆ, ನೀವು ಮಾಡತಕ್ಕಂಥದ್ದೆಲ್ಲ ಚುನಾವಣೆ ದೃಷ್ಟಿಯಿಂದಲೇ? ಓಟಿನಾಸೆಗೋಸ್ಕರ ನೀವು ಮಾಡುವಿರೇ?

ಹೋದ ಸಾರಿ ಬಜೆಟ್‌ನಲ್ಲಿ ಪ್ರತಿ ತಾಲ್ಲೂಕಿನ ಸಣ್ಣ ರೈತರಿಗೆ ಮತ್ತು ಯುವಕರಿಗೆ 50 ಕೋಳಿ ಫಾರಂ ಸ್ಥಾಪನೆಗೆ ಸಹಾಯಧನ ನೀಡಲಾಗುವುದು ಎಂದು ಹೇಳಿದ್ದರು. ಇದನ್ನು ರವಿಯವರಿಗೇನಾದರೂ ಕೊಟ್ಟಿದ್ದಾರೆಯೇ ಎನ್ನುವುದನ್ನು ಅವರು ದಯಮಾಡಿ ಹೇಳಬೇಕು.

ಅಧ್ಯಕ್ಷರು: ನಿಮಗೆ ರವಿಯವರು ಉತ್ತರ ಕೊಡಬೇಕೇನು?

ಶ್ರೀ ಹೆಚ್.ಸಿ.ಬಾಲಕೃಷ್ಣ: ಮುಖ್ಯಮಂತ್ರಿಗಳಿಗಿಂತ ಹೆಚ್ಚಾಗಿ defend ಮಾಡಿಕೊಳ್ಳುತ್ತಿದ್ದವರು ಅವರೇ ಅಲ್ಲವೇ?

ಅಧ್ಯಕ್ಷರು: ಹಾಗಿದ್ದರೆ ರವಿಯವರು ಎಲ್ಲದಕ್ಕೂ ಉತ್ತರ ಕೊಡಲು ಪ್ರಾರಂಭ ಮಾಡುತ್ತಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೇ, ನಿಮ್ಮ ಕ್ಷೇತ್ರದಲ್ಲಿ ಸ್ವಲ್ಪ ಹೆಚ್ಚಿಗೆ ನಗರ ಪ್ರದೇಶವಿದೆ. ಅವರದ್ದು ನಮ್ಮ ತರಹ ಹಳ್ಳಿಗಾಡಿನ ಪ್ರದೇಶ. ಅಲ್ಲಿಗೇನಾದರೂ ಕೊಟ್ಟಿದ್ದಾರೆಯೇ ಎಂದು ಕೇಳಬೇಕಾಗಿದೆ. ಪಶು ಸಂಗೋಪನೆಯಲ್ಲಿ ಕೊಡುತ್ತೇವೆ ಎಂದು ಹೇಳಿದ್ದರು. ಎಲ್ಲಿ ಅದನ್ನು ಕೊಟ್ಟಿದ್ದಾರೆ? ಬಜೆಟ್‌ನಲ್ಲಿ ಸುಳ್ಳು ಏಕೆ ಹೇಳಬೇಕು? ನುಡಿದಂತೆ ನಡೆಯಬೇಕಲ್ಲವೇ?

ಇನ್ನು, ಜಲ ಸಂಪನ್ಮೂಲ ಮತ್ತು ನೀರಾವರಿಗೆ ಬಹಳಷ್ಟು ದುಡ್ಡನ್ನು ಕೊಟ್ಟಿದ್ದಾರೆ. ಆದರೆ ಬಹಳ ವರ್ಷಗಳ ಹಿಂದೆ ಕೊಟ್ಟಿರುವಷ್ಟು ದುಡ್ಡನ್ನು ಕೊಟ್ಟಿಲ್ಲ. ಜಲ ಸಂಪನ್ಮೂಲ ಮತ್ತು ನೀರಾವರಿಯಲ್ಲಿ, ಕಳಸಾ ಬಂಡೂರಿ ನಾಲೆಗಳನ್ನು ನಿರ್ಮಿಸಿ ಹುಬ್ಬಳ್ಳಿ ಧಾರವಾಢ ಪ್ರದೇಶಗಳಿಗೆ ಕುಡಿಯುವ ನೀರು ಕೊಡಲಾಗುವುದು ಎಂದು ಹೋದ ಸಾರಿ ಹೇಳಿದ್ದಾರೆ. ಆ ಯೋಜನೆ ಏನಾಯಿತು ಸ್ವಾಮಿ? ಇದು ನಿಮ್ಮ ಬಜೆಟ್ ಬುಕ್‌ನಲ್ಲೇ ಕೊಟ್ಟಿರತಕ್ಕಂಥಾದ್ದು. ಆ ಯೋಜನೆಯನ್ನು ಬಿಟ್ಟಾಯಿತೇ? ಇದಕ್ಕೆ ಕೈ ಹಾಕಬೇಡಿ ಇದು ಆಗುವುದಿಲ್ಲ ಕೋರ್ಟ್‌ನಲ್ಲಿದೆ, ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕು ಎಂದು ಆವತ್ತಿನ ನಮ್ಮ ಮುಖ್ಯಮಂತ್ರಿಗಳು ಹೇಳಿದರು. ಆದರೂ ಸಹ ಭಾರಿ ವೀರಾವೇಶದಲ್ಲಿ ಹೋಗಿ ಪೂಜೆಯನ್ನೆಲ್ಲಾ ಮಾಡಿದರು. ಇದು ಏನಾಯಿತು ಸ್ವಾಮಿ? ನಮ್ಮ ಅಧ್ಯಕ್ಷರು ಪ್ರತಿನಿಧಿಸತಕ್ಕಂಥ ಕ್ಷೇತ್ರಕ್ಕೆ ನೀರು ಕೊಡತಕ್ಕಂಥ ಕೆಲಸವಿದು. ಇದು ಏನಾಯಿತು? ಕೋಲಾರ ಜಿಲ್ಲೆಗೆ ಎರಗೋಡು ನೀರಾವರಿ ಯೋಜನೆ ಮೂಲಕ ಕುಡಿಯುವ ನೀರು ಕೊಡಲು 50 ಕೋಟಿ ಮೀಸಲಿಟ್ಟಿದ್ದೇನೆ ಎಂದು ಹೇಳಿದ್ದರು. ಈ ಯೋಜನೆ ಏನಾಯಿತು? ಎಷ್ಟು ಕೋಟಿ ಕೋಲಾರಕ್ಕೆ ಖರ್ಚು ಮಾಡಿದ್ದಾರೆ? ಇನ್ನು ಎಷ್ಟು ಕೋಟಿ ಬಿಡುಗಡೆ ಮಾಡಬೇಕು? ಹೋದ ಸಾರಿ ಬಜೆಟ್‌ನಲ್ಲಿ ಹೇಳಿದ ಈ ಯೋಜನೆ ಏನಾಯಿತು ಸ್ವಾಮಿ? ರವಿಯವರು ಹೇಳುತ್ತಿದ್ದರು, ಕೊಟ್ಟಿದ್ದು ತಪ್ಪೇ? ನೀವು ಮಾಡಲಿಲ್ಲ, ನಾವು ಮಾಡಿದ್ದೇವೆ ಎಂದು ಹೇಳುತ್ತಿದ್ದರು. ನೀವು ಮಾಡಿರುವುದು ಇದನ್ನೇ. ಬಜೆಟ್‌ನಲ್ಲಿ

ತೋರಿಸತಕ್ಕಂಥಾದ್ದು ಮುಖ್ಯವಲ್ಲ, ಅದನ್ನು ಅನುಷ್ಠಾನ ಮಾಡಿ ತೋರಿಸಬೇಕು. ಬಜೆಟ್‌ನಲ್ಲಿ ಇಟ್ಟುಬಿಟ್ಟರೆ ಆಯಿತೇ? ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕಲ್ಲವೇ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಈ ರೀತಿ ಸರ್ಕಾರವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿಯೇ ಅವರನ್ನು ಕ್ಯಾಬಿನೆಟ್‌ನಿಂದ ಹೊರಗಿಟ್ಟು ಸದನದಲ್ಲಿ ಕೂರಿಸಿದ್ದಾರೆ.

ಶ್ರೀ ಎನ್.ವೈ.ರುದ್ರೇಶ್‌ಗೌಡ: ಇವತ್ತಿನ ಪೇಪರ್‌ನಲ್ಲಿ ಬಂದಿದೆ. ಎಲ್ಲ ರೈತರಿಗೆ ಹಸಿರು ಶಾಲು ಹಾಕಿದ್ದಾರೆ. ಆದರೆ ಜಮೀನು ಮಾತ್ರ ಹಸಿರಾಗಿಲ್ಲ ಎಂದು ಬಂದಿದೆ.

ಶ್ರೀ ಹೆಚ್.ಎಸ್.ಬಾಲಕೃಷ್ಣ: ಕರಾವಳಿ ಪ್ರದೇಶದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳ ನೀರಿನ ಅಧ್ಯಯನಕ್ಕೆ ಒಂದು ಕೋಟಿ ಮೀಸಲಿಡಲಾಗಿತ್ತು. ಅದು ಏನಾಯಿತು ಸ್ವಾಮಿ? ಕಳೆದ ಬಜೆಟ್‌ನಲ್ಲಿ ಕೊಟ್ಟಂಥದ್ದು ಇದು. ಇದಕ್ಕೆ ಒಂದು ಕೋಟಿ ಕೊಟ್ಟಿರುವಿರಾ? ಅಧ್ಯಯನ ಮಾಡಿದ್ದೀರಾ? ರಾಜ್ಯ ಸರ್ಕಾರಕ್ಕೆ ಅನುಕೂಲ ಆಯಿತೇ? ರವಿಯವರು ಇದನ್ನೆಲ್ಲಾ ಕೇಳಬೇಕು. ಏಕೆಂದರೆ ನೀವು ಭಾರಿ ವೀರಾವೇಶದಲ್ಲಿ ಮಾತನಾಡುತ್ತಿದ್ದೀರಿ. 'ನೀರು ಬಳಕೆದಾರರ ಸಂಘ ಸ್ಥಾಪಿಸಿ ಅದರ ನಿರ್ವಹಣೆ ಮತ್ತು ನಿರ್ವಹಣಾ ಜವಾಬ್ದಾರಿಯನ್ನು ಅವರಿಗೇ ವಹಿಸಲಾಗುವುದು' ಎಂದು ಹೇಳಿದ್ದಿರಿ. ಇದು ಎಲ್ಲಿ ಆಯಿತು ಸ್ವಾಮಿ? ಯಾವ ಸಂಘವನ್ನು ಸ್ಥಾಪನೆ ಮಾಡಿದ್ದಾರೆ, ಎಲ್ಲಿ ವಹಿಸಿದ್ದಾರೆ, ಯಾರಿಗೆ ವಹಿಸಿದ್ದಾರೆ ಎನ್ನುವುದನ್ನು ಹೇಳಬೇಕು. ಇದೆಲ್ಲಾ ಬಜೆಟ್‌ನಲ್ಲಿ ಹೇಳಿರತಕ್ಕಂಥದ್ದು. 'ಅಂತರ್ಜಲ ಬಳಕೆ ಕುರಿತಂತೆ ಕಾನೂನು ರೂಪಿಸಿ ನೀರು ಬಳಕೆ ಪ್ರಮಾಣವನ್ನು ಹೆಚ್ಚಿಸುವುದು ಎಂದು ತಿಳಿಸಿರುತ್ತಾರೆ. ಇದು ಎಲ್ಲಿ ಆಗಿದೆ? ಬಹಳ ಬಹಳ ಉದ್ದದ ಭಾಷಣಗಳನ್ನು ಮಾಡುತ್ತಾರೆ. ಪೊಳ್ಳು ಆಶ್ವಾಸನೆಗಳನ್ನು ಕೊಡತಕ್ಕಂಥದ್ದನ್ನು ಮಾಡುತ್ತಾರೆ. ಚುನಾವಣೆಯಲ್ಲಿ ಯಾವ ರೀತಿಯ ಆಶ್ವಾಸನೆಗಳನ್ನು ಕೊಟ್ಟಿದ್ದಾರೋ ಅದೇ ರೀತಿ ಕಳೆದ ಬಜೆಟ್‌ನಲ್ಲಿ ಕೂಡ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಅದೇ ಕ್ರಮವನ್ನು ಈ ಬಜೆಟ್‌ನಲ್ಲಿ ಕೂಡ ಮುಂದುವರೆಸಿದ್ದಾರೆ. 'ಭದ್ರಾ ಮೇಲ್ದಂಡ ಯೋಜನೆ ಚಾಲನೆ' – ಇದಕ್ಕಾಗಿ ನಿಮಗೆ ಧನ್ಯವಾದಗಳನ್ನು ಹೇಳುತ್ತೇವೆ. ಇದನ್ನು ದಯಮಾಡಿ ಕೈಬಿಡುವುದಕ್ಕೆ ಹೋಗಬೇಡಿ. ಇದನ್ನು ಮುಂದಿನ ವರ್ಷಕ್ಕಾದರೂ ಮುಂದುವರೆಸಿ, ಬರೀ ಬಜೆಟ್ ಪುಸ್ತಕದಲ್ಲೇ ಇಡಬೇಡಿ. ಕೆರೆಗಳ ಅಭಿವೃದ್ಧಿಗೆ ವ್ಯವಸ್ಥಿತ ಯೋಜನೆ ಎಂದು ಹೇಳಿದ್ದಾರೆ. ನಾವು ಬಯಲುಸೀಮೆ ಪ್ರದೇಶದಿಂದ ಬಂದಿರತಕ್ಕಂಥ ಜನ. ನಾವು ಕೆರೆಗಳನ್ನೇ ನಂಬಿಕೊಂಡು ಜೀವನ ಮಾಡತಕ್ಕಂಥದವರು. ಕೆರೆಗಳ ಅಭಿವೃದ್ಧಿಗೆ ಹಣವನ್ನು ಕೊಡುತ್ತೇವೆ ಎಂದು ಇಲ್ಲಿ ಹೇಳಿದ್ದೀರಿ. ದಯಮಾಡಿ ಆ ಕಾರ್ಯಕ್ರಮಕ್ಕೆ ಹೆಚ್ಚು ಒತ್ತನ್ನು ಕೊಡಬೇಕು. ಕೋಲಾರ ರಾಮನಗರ, ಬೆಂಗಳೂರು ಗ್ರಾಮಾಂತರ ಈ ಭಾಗಗಳಲ್ಲೆಲ್ಲ ಕುಡಿಯುವ ನೀರಿಗೋಸ್ಕರ ಹೆಚ್ಚು ನದಿಮೂಲಗಳಿಲ್ಲ. ಇಲ್ಲಿರುವವರು ಬೋರ್‌ವೆಲ್‌ಗಳನ್ನೇ ನಂಬಿ ಜೀವನ ಮಾಡತಕ್ಕಂಥವರು. ಹೆಚ್ಚಿನ ಅನುದಾನವನ್ನು

ಬಯಲುಸೀಮೆ ಅಭಿವೃದ್ಧಿಗೆ ಈ ದಿಕ್ಕಿನಲ್ಲಿ ಕೊಡಬೇಕು ಎನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಅದೇ ರೀತಿ, ಇನ್ನೊಂದು ಯೋಜನೆಯನ್ನು ಪ್ರಕಟಿಸಿದ್ದೀರಿ. 'ಕಾವೇರಿ ನದಿಯ ಉಪನದಿಯಾದ ಅರ್ಕಾವತಿ ಪುನಶ್ಚೇತನಕ್ಕಾಗಿ ವಿವರವಾದ ಯೋಜನೆಗೆ 2 ಕೋಟಿ ಒದಗಿಸಲಾಗುವುದ' ಎಂದು ಹೇಳಿದ್ದೀರಿ. ಇದಕ್ಕಾಗಿ ಸರ್ಕಾರಕ್ಕೆ ಧನ್ಯವಾದವನ್ನು ಹೇಳುತ್ತೇನೆ. ಇವತ್ತು ಆದರಿಂದ ಬೆಂಗಳೂರಿಗೆ ಪ್ರಯೋಜನವಾಗುತ್ತದೆ. ತಿಪ್ಪಗೊಂಡನಹಳ್ಳಿಗೆ ನೀರು ಬಂದರೆ ಬಹಳಷ್ಟು ಸಮಸ್ಯೆ ಬಗೆಹರಿಯುತ್ತದೆ. ಈ ಯೋಜನೆಯಿಂದ ಬೆಂಗಳೂರಿಗೆ ಅನುಕೂಲವಾಗುತ್ತದೆ. ಆದರೆ, ಬೇರೆ ಯೋಜನೆಗಳನ್ನು ಇಟ್ಟ ಹಾಗೆ ಇದನ್ನು ಕೇವಲ ಬಜೆಟ್ ಪುಸ್ತಕದಲ್ಲಿ ಮಾತ್ರ ಇರಬೇಡಿ, ಇದನ್ನು ದಯಮಾಡಿ ಅನುಷ್ಠಾನ ಮಾಡಿ ಯಲಹಂಕ ಶಾಸಕರಾದ ವಿಶ್ವನಾಥ್‌ರವರು ಭಾರಿ ಹೋರಾಟ ಮಾಡಿ ಇದನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಅದನ್ನು ಕೇವಲ ಬಜೆಟ್ ಪುಸ್ತಕದಲ್ಲಿ ತೋರಿಸದೆ ಅದು ಅನುಷ್ಠಾನಕ್ಕೆ ಬರುವ ರೀತಿಯಲ್ಲಿ ಸರ್ಕಾರ ದಯಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಈ ಮೂಲಕ ಒತ್ತಾಯಿಸುತ್ತೇನೆ.

ಇನ್ನು ಗ್ರಾಮೀಣಾಭಿವೃದ್ಧಿಯ ಬಗ್ಗೆ ಹೇಳುವುದಾದರೆ, ಕಳೆದ ಬಾರಿ ಇದಕ್ಕೆ 6.14% ಹಣವನ್ನು ಕೊಟ್ಟಿದ್ದಿರಿ. ಈ ಬಾರಿ 5.9% ಕೊಟ್ಟಿದ್ದೀರಿ. ರಸ್ತೆಗಳ ಅಭಿವೃದ್ಧಿಯಲ್ಲೂ ಕೂಡ ತಾರತಮ್ಯವಾಗಿದೆ. ಆದರೆ ಇದನ್ನು ಖಾಸಗಿ ಸಹಭಾಗಿತ್ವದ ಯೋಜನೆಯಲ್ಲಿ ನಾವು ಮಾಡುತ್ತೇವೆ ಎಂದೆಲ್ಲಾ ಹೇಳಿದ್ದಾರೆ. ಅದು ಎಷ್ಟರಮಟ್ಟಿಗೆ ಊರ್ಜಿತವಾಗುತ್ತದೆ ಎನ್ನುವುದು ನನಗಂತೂ ಗೊತ್ತಿಲ್ಲ. ರಸ್ತೆಗಳ ಅಭಿವೃದ್ಧಿಗೆ ಇವರು ಗುಜರಾತ್ ಮಾದರಿಯನ್ನು ಅನುಸರಿಸಲು ಹೊರಟಿದ್ದಾರೆ. ಗುಜರಾತ್‌ನಲ್ಲಿ ಏನು ಮಾಡಿದ್ದಾರೋ ಅದೇ ರೀತಿ ಇಲ್ಲೂ ಮಾಡಬೇಕೆಂದು ಹೊರಟಿದ್ದಾರೆ. ಅದರಲ್ಲಿ ಎಷ್ಟರ ಮಟ್ಟಿನ ಯಶಸ್ಸನ್ನು ಕಾಣುತ್ತಾರೆ ಎನ್ನುವುದು ನನಗಂತೂ ಗೊತ್ತಿಲ್ಲ. ಆದರೆ ಕಳೆದ ಬಾರಿಗಿಂತ ಈ ಬಾರಿ ಗ್ರಾಮೀಣಾಭಿವೃದ್ಧಿಗೆ, ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ – ಕಳೆದ ಸರ್ಕಾರದಲ್ಲಿ ಹೊಸದಾಗಿ High School ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭ ಮಾಡಿದರು. ಅದಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡತಕ್ಕ ಕೆಲಸವನ್ನು ಇದುವರೆಗೂ ಮಾಡಿಲ್ಲ. ನಾವು ಹೋಗಿ ಮಂತ್ರಿಗಳ ಹತ್ತಿರ ಕೇಳಿದರೆ ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಾರೆ.

[ಈ ಹಂತದಲ್ಲಿ ಉಪಾಧ್ಯಕರು ಅಧ್ಯಕ್ಷ ಪೀಠವನ್ನಲಂಕರಿಸಿದರು]

'ರಾಜ್ಯದಲ್ಲಿ ಜನರ ಸಾಕ್ಷರತಾ ಪ್ರಮಾಣವು ಈಗ ಶೇ.67ರಷ್ಟಿದ್ದು ಇದನ್ನು ತೀವ್ರಗತಿಯಲ್ಲಿ ಹೆಚ್ಚಿಸಲು ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸಬೇಕಾಗಿದೆ' ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಆದರೆ, ಹಿಂದೆ ಮಂಜೂರಾಗಿರತಕ್ಕಂಥ ಪದವಿ ಪೂರ್ವ

ಕಾಲೇಜುಗಳು ಮತ್ತು ಹೈಸ್ಕೂಲುಗಳಿಗೆ ಇವತ್ತಿನವರೆಗೆ building ಅನ್ನು ಒದಗಿಸತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿಲ್ಲ. ಬಹುಶ: ಹಿಂದೆ ಕೊಟ್ಟಿರತಕ್ಕಂಥ ಹಣವನ್ನು ಸಹ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳತಕ್ಕಂಥ ಕೆಲಸವಾಗಿಲ್ಲ. ದಯಮಾಡಿ ಇದಕ್ಕೆ ಹೆಚ್ಚು ಒತ್ತನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ನೀಡಲಿಕ್ಕೆ ಬಯಸುತ್ತೇನೆ. ನೀವು ಕೇವಲ ಶಾಲೆಗಳನ್ನು ಕಟ್ಟುವುದರಿಂದ, ಶಾಲೆಗಳನ್ನು ಪ್ರಾರಂಭ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಪ್ರತಿ ಗ್ರಾಮದಲ್ಲಿ ಸಹ ಶಿಕ್ಷಕರಿಗೆ ವಸತಿಗೃಹವನ್ನು ಕಟ್ಟಿಕೊಟ್ಟು ಅಲ್ಲಿ ವಾಸ ಮಾಡುವ ರೀತಿ ಮಾಡಿದರೆ ಬಹುಶ: ಈ ಶಿಕ್ಷಣದ ಮಟ್ಟವನ್ನು ಸ್ವಲ್ಪ ಹೆಚ್ಚಿಸಬಹುದು. ಶಿಕ್ಷಕರು ಯಾವ ರೀತಿ ಕೆಲಸ ಮಾಡುತ್ತಾರೆಂದರೆ ಅವರೆಲ್ಲರೂ ಕೂಡ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಂದ ಬರತಕ್ಕಂಥವರಾಗಿದ್ದಾರೆ ಅವರು 10–00 ಗಂಟೆಗೆ ಶಾಲೆಗೆ ಬರಬೇಕಾಗಿದ್ದರೆ ಅವರು 11–00 ಗಂಟೆಗೆ ಬರುತ್ತಾರೆ. ಸಂಜೆ 5–00 ಗಂಟೆಗೆ ಹೋಗಬೇಕಾಗಿದ್ದರೆ ಅವರು ಸಂಜೆ 4–00 ಗಂಟೆಗೆ ರೆಡಿಯಾಗಿರುತ್ತಾರೆ. ಏಕೆಂದರೆ, ಅವರ bus ಜಿಲ್ಲಾ ಕೇಂದ್ರಕ್ಕೆ, ತಾಲ್ಲೂಕು ಕೇಂದ್ರಕ್ಕೆ ಹೋಗಿಬಿಡುತ್ತದೆ. ಅವರು ಒತ್ತಡದ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ, ಇವರು ಯಾವ ಮಟ್ಟದ ಎಷ್ಟು ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಕೊಡಬಹುದೆಂಬುದನ್ನು ಸರ್ಕಾರ ಚಿಂತನೆ ಮಾಡಬೇಕು. ದಯಮಾಡಿ, ಅಲ್ಲಿಯೇ ವಸತಿ ನಿಲಯವನ್ನು ನಿರ್ಮಾಣ ಮಾಡಿ ಅವರು ಅಲ್ಲಿಯೇ ವಾಸ ಮಾಡುವುದಕ್ಕೆ ಸರ್ಕಾರ ಆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಉನ್ನತ ಶಿಕ್ಷಣ – ಈಗ ಉನ್ನತ ಶಿಕ್ಷಣ ಸಚಿವರು ಸದನದಲ್ಲಿ ಇಲ್ಲ. ಭಯೋತ್ಪಾದನೆ ವಿರೋಧ ಅಭಿಯಾನವನ್ನು ಮಾಡುತ್ತಿದ್ದಾರೆ. ಭಯೋತ್ಪಾದನೆ ಎಲ್ಲಿಂದ ಪ್ರಾರಂಭವಾಯಿತು ಎಂದರೆ, ಈ ದೇಶದಲಿ ಎಲ್ಲೋ border state ಗಳಾದ ಜಮ್ಮು ಕಾಶ್ಮೀರ, ಅಸ್ಸಾಂ ಇಂಥ ರಾಜ್ಯಗಳಲ್ಲಿ ಭಯೋತ್ಪಾದನೆ ಇತ್ತು. ಇದು ಇಡೀ ರಾಷ್ಟ್ರಕ್ಕೆ ವ್ಯಾಪಿಸ ಬೇಕಾದರೆ ಭಾರತೀಯ ಜನತಾ ಪಕ್ಷ ಕಾರಣ ಎಂದು ಈ ಸಂದರ್ಭದಲ್ಲಿ ನಾನು ಹೇಳಲೇಬೇಕಾಗುತ್ತದೆ. ಏಕೆಂದರೆ, ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದರು, ಅವರು ಮಂಡಲ ಪಂಚಾಯಿತಿಯನ್ನು ಜಾರಿ ತಂದರು. ಅದನ್ನು ವಿರೋದ ಮಾಡಿ ಇವರ ಪಕ್ಷ ತನ್ನ ಬೆಂಬಲವನ್ನು ವಾಪಸ್ಸು ತೆಗೆದುಕೊಂಡು ವಿ.ಪಿ.ಸಿಂಗ್‌ರವರ ಸರ್ಕಾರವನ್ನು ಬೀಳಿಸಿದರು. ಆವತ್ತು ಇಡೀ ದೇಶದಲ್ಲಿ ಜನ ದಂಗೆ ಎದ್ದರು. ಅದನ್ನು ಮರೆಮಾಚಲಿಕ್ಕೋಸ್ಕರ ಮಾನ್ಯ ಅದ್ವಾನಿಯವರ ಮುಂದಾಳತ್ವದಲ್ಲಿ ಬಿಜೆಪಿಯವರು ರಾಮಮಂದಿರವನ್ನು ಕಟ್ಟುತ್ತೇವೆಂದು ರಥಯಾತ್ರೆ ಪ್ರಾರಂಭ ಮಾಡಿದರು ಆಗ ರಾಮಮಂದಿರ ಕಟ್ಟುತ್ತೇವೆಂದು ಒಂದು ಟೆಂಪೋ ಮತ್ತು ಅದರ ಮೇಲೆ ಒಂದು ರಾಮನ ಫೋಟೋ ಇಟ್ಟುಕೊಂಡು ನಮ್ಮೂರಿಗೂ ಬಂದಿದ್ದರು. ಆಗ ನಾವೆಲ್ಲ 26–27–28

ವರ್ಷದ ಹುಡುಗರು. ನಾವು ಆಗ spirit ನಿಂದ ರಾಮಮಂದಿರ ಕಟ್ಟಿಕೊಡುತ್ತಾರಂತೆ, ಅಲ್ಲಿ ಏನೋ ಪಾಪ ಮುಸ್ಲಿಮರು, ಹಿಂದೂಗಳದ್ದು ಉರುಳಿಸಿಬಿಟ್ಟಿದ್ದಾರಂತೆ, ಇವರು ವಾಪಸ್ಸು ಕಟ್ಟುತ್ತಾರೆಂದು ನಾವು ಹತ್ತು ಹತ್ತು ಸಾವಿರ ರೂಪಾಯಿಗಳನ್ನು collect ಮಾಡಿಕೊಟ್ಟೆವು. ಜೊತೆಗೆ, 10-15 ಇಟ್ಟಿಗೆಗಳನ್ನು ಕೊಟ್ಟೆವು, ನಾವು ಅದಕ್ಕೆ ಪೂಜೆ ಮಾಡಿದೆವು, ಬಂದವರಿಗೆಲ್ಲ ಊಟ ಕೊಟ್ಟು ಕಳುಹಿಸಿದೆವು. ಅವರು ದುಡ್ಡು ತೆಗೆದುಕೊಂಡು ಹೋದರು. ಬೆಳಗ್ಗೆ ಹೋಗಿ ನೋಡುತ್ತೇವೆ, ಆ ಇಟ್ಟಿಗೆ ಊರಾಚೆ ಬಿದ್ದಿದೆ. ನಾವು ಕೊಟ್ಟ ಇಟ್ಟಿಗೆಗಳಲ್ಲೆಲ್ಲ ದೇವಸ್ಥಾನವನ್ನು ಕಟ್ಟಿಬಿಡುತ್ತಾರೆ, ರಾಮಮಂದಿರ ಬಹಳ ಸುಂದರವಾಗಿ ನಿರ್ಮಾಣವಾಗುತ್ತದೆ ಎಂದು ತಿಳಿದುಕೊಂಡಿದ್ದೆವು. ಅದಾದನಂತರ NDA ಸರ್ಕಾರ ಅಧಿಕಾರಕ್ಕೆ ಬಂತ. ಅವರು ಕುರ್ಚಿಯ ಆಸೆಗೋಸ್ಕರ ರಾಮಮಂದಿರದ ವಿಚಾರವನ್ನು ಬಿಟ್ಟೇ ಬಿಟ್ಟರು. ಈಗ ಹೊಸದಾಗಿ ಭಯೋತ್ಪಾದನಾ ವಿರೋಧಿ ಅಭಿಯಾನ ಎಂದು ಪ್ರಾರಂಭ ಮಾಡಿದ್ದಾರೆ. ಸನ್ಮಾನ್ಯ ಮಂತ್ರಿಗಳು – ನಾವು ಅಡ್ವಾನಿಯವರನ್ನು ಕರೆಸಿ ಬಹಿರಂಗ ಸಭೆ ಮಾಡಿ ಮಕ್ಕಳಲ್ಲಿ ಜಾಗೃತಿಯನ್ನು ಉಂಟುಮಾಡುತ್ತೇವೆ, ಅಡ್ವಾನಿಯವರನ್ನು ಕರೆಸತಕ್ಕಂಥದ್ದು ನಿಮಗೆಲ್ಲ ಹೊಟ್ಟೆಕಿಚ್ಚು ಎಂದು ಹೇಳುತ್ತಾರೆ. ನಾನು ಒಂದು ಮಾತು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಅದೇನೆಂದರೆ, ನೀವು ಹೋಗಿ ಮಾನ್ಯ ಮನಮೋಹನಸಿಂಗ್‌ರವರನ್ನು ಕರೆಯಬಹುದಾಗಿತ್ತಲ್ಲವೇ? ಅವರು ಬರುವುದಿಲ್ಲವೆಂದು ಹೇಳಿದ್ದಾರೆಯೇ? ಅವರನ್ನು ಕರೆದುಕೊಂಡು ಬಂದು ಕಾರ್ಯಕ್ರಮವನ್ನು ನೀವು ಮಾಡಬಹುದಾಗಿತ್ತಲ್ಲವೇ? ನೀವು ಮಾಡತಕ್ಕಂಥ ಉದ್ದೇಶವೇನು? ಅವತ್ತು ಅಧಿಕಾರಕ್ಕೆ ಬರುವುದಕ್ಕೆ ರಾಮ, ಇವತ್ತು ಅಧಿಕಾರಕ್ಕೆ ಬರುವುದಕ್ಕೆ ವಿವೇಕಾನಂದ ವಿಚಾರವನ್ನು ತೆಗೆದುಕೊಂಡಿದ್ದೀರಿ. ಈ ಭಯೋತ್ಪಾದನೆ ಎಲ್ಲಿಂದ ಪ್ರಾರಂಭವಾಯಿತು? ಅಲ್ಲಿಗೆ ಸೀದಾ ಹೋಗಿ ಮಸೀದಿಯನ್ನು ಒಡೆದುಹಾಕಿದರು. ಇಡೀ ದೇಶದಲ್ಲಿ ಓಟಿನ ಆಸೆಗೋಸ್ಕರ ಒಂದು secular, ಇನ್ನೊಂದು non secular , ಅವರ ಭಾವನೆಗಳು ಕೆರಳಿತು. ಇವತ್ತು ದೇಶಾದ್ಯಂತ ಭಯೋತ್ಪಾದನೆ ಆವರಿಸಿಕೊಂಡಿದೆ. ಅದನ್ನು ಇವರು ಎಲ್ಲಿಂದ ನಿಲ್ಲಿಸುತ್ತಾರೆ? ಇದರಿಂದ ನಿಲ್ಲುತ್ತದೆಯೇ? ಪ್ರೀತಿ-ವಿಶ್ವಾಸದಿಂದ ಜನರನ್ನು ಗೆಲ್ಲಬೇಕೇ ವಿನಃ ರಕ್ತ ಪಾತದಿಂದ ಏನೂ ಮಾಡಲಿಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಬಾಲಕೃಷ್ಣರವರೇ, ಅಯೋಧ್ಯಾ ಪ್ರಕರಣವಾಗಿದ್ದು ಯಾವ ಇಸವಿಯಲ್ಲಿ?

ಶ್ರೀ ಹೆಚ್.ಸಿ. ಬಾಲಕೃಷ್ಣ: 1992ರಲ್ಲಿ

ಶ್ರೀ ಎಸ್. ಸುರೇಶ್ ಕುಮಾರ್: ತಾವು 1994ರಲ್ಲಿ ಯಾವ ಪಕ್ಷದಿಂದ ಗೆದ್ದದ್ದು?

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿಮ್ಮ ಜೊತೆ ಅಂದರೆ ನಿಮ್ಮ ಪಕ್ಕದಲ್ಲಿದ್ದ ಎಂದು ನಾನು ಹೇಳಿದ್ದೆ. ಅದನ್ನು ನೀವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೆಂದು ತೋರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್: ಅದೆಲ್ಲ ಗೊತ್ತಿದ್ದೂ ಕೂಡ ಏಕೆ ಹೇಳಿದಿರಿ? ಸುಮ್ಮನೆ ಇವೆಲ್ಲ ಏಕೆ ಹೇಳುತ್ತೀರಿ? ಬಜೆಟ್ ಬಗ್ಗೆ ಮಾತನಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ರವಿಯವರು ಮಾತನಾಡುವಾಗ ನೀವು ಸುಮ್ಮನೆ ಕುಳಿತುಕೊಂಡಿರುವುದನ್ನು ಬಿಟ್ಟು ಏನು, ಏಕೆ ಮಾತನಾಡುತ್ತಿದ್ದೀರಿ ಎಂದು ಕೇಳಬೇಕಾಗಿತ್ತು ಅವರು ಹೇಳುತ್ತಿದ್ದರೆ ಬಹಳ ಚೆನ್ನಾಗಿ ನಗುತ್ತಿದ್ದಿರಿ. ಈಗ ಮಾತ್ರ ನಾನು ಹೇಳುವುದನ್ನು ಕೇಳುವುದಕ್ಕೆ ನಿಮಗೆ ಕಹಿ ಆಗುತ್ತಿದೆ, ಅಲ್ಲವೇ? ಬಜೆಟ್ ಮೇಲೆ ಭಾಷಣ ಮಾಡಪ್ಪ ಎಂದು ನೀವು ರವಿಯವರಿಗೆ ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಸಿ.ಟಿ. ರವಿ: ಆಗ ಇವರು ವೀರಾವೇಶದಿಂದ ಏನೇನು ಭಾಷಣ ಮಾಡಿದ್ದಾರೆ, ಅದನ್ನು ಬೇಕಾದರೆ ಹಾಕಿಸಬಹುದು. ಆಗ ರಾಮಮಂದಿರ ಪರವಾಗಿ ಏನೇನು ವೀರಾವೇಶದಿಂದ ಭಾಷಣ ಮಾಡಿದ್ದಾರೆ, ಏನೇನು ಮಾತನಾಡಿದ್ದಾರೆ, ಕತ್ತಿ ಏನು ಝಳಪಡಿಸಿದ್ದಾರೆ ಅದನ್ನು ಬೇಕಾದರೆ ಕೊಡೋಣ.

ಉಪಾಧ್ಯಕ್ಷರು: ಬಾಲಕೃಷ್ಣರವರೆ, ತಾವು ಬಜೆಟ್ ಮೇಲೆ ಮಾತು ಮುಂದುವರೆಸಿ ವಿಷಯಾಂತರ ಆಗುವುದು ಬೇಡ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಮಂತ್ರಿಗಳು ಕೇಳಿದ್ದಕ್ಕೆ ಹೇಳಿದೆ. ನಾನು ವಿಷಯಾಂತರ ಮಾಡುತ್ತಿಲ್ಲ. ಪರಮಪೂಜ್ಯ ಡಾ: ಶಿವಕುಮಾರ ಸ್ವಾಮೀಜಿಯವರ ಹೆಸರನ್ನು ವಿಶ್ವವಿದ್ಯಾನಿಲಯಕ್ಕೆ ಇಟ್ಟಿರುವುದಕ್ಕೆ ನಾನು ಸ್ವಾಗತಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಅವರ ಹುಟ್ಟೂರಾದ ವೀರಾಪುರ ಇದೆ. ವೀರಾಪುರವನ್ನು ದತ್ತು ತೆಗೆದುಕೊಳ್ಳುತ್ತೇವೆಂದು ಅಲ್ಲಿ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದಾರೆ, ಅದಕ್ಕಾಗಿ ಸ್ವಾಗತಬಯಸುತ್ತೇವೆ. ನಮ್ಮ ತಾಲ್ಲೂಕಿನ ಜನತೆಯ ಪರವಾಗಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. University ಗೆ ಹೆಸರಿಟ್ಟೀದ್ದೀರಿ ಹೊರತು ಬಜೆಟ್‌ನಲ್ಲಿ ಅದಕ್ಕೆ ಬೇಕಾದ ಹಣ ಇಟ್ಟಿಲ್ಲ. ನಿಮ್ಮಿಂದ ಆ ಊರಿಗೆ ಕೊಟ್ಟಿರುವ ಕೊಡುಗೆ ಏನು? ಅಲ್ಲಿ ಯಾರೋ ಕೇಳಿದರು ಎಂದು ಸುಮ್ಮನೆ ಹೋಗಿ ಭಾಷಣದಲ್ಲಿ ಹೇಳಿಬಿಟ್ಟಿರಿ. ಆದರೆ, ಬಜೆಟ್‌ನಲ್ಲಿ ಏನು ಕೊಡುಗೆ ಕೊಡುತ್ತೀರಿ ಎನ್ನುವುದನ್ನು ಹೇಳಬೇಕಲ್ಲವೇ? ಈ ರೀತಿ ಗ್ರಾಮವನ್ನು ಅಭಿವೃದ್ಧಿಪಡಿಸುತ್ತೇವೆ, ಪ್ರತಿನಿತ್ಯ ಚಟುವಟಿಕೆ ಇರುವುದಕ್ಕೋಸ್ಕರ ಅಲ್ಲೊಂದು diploma college ಅನ್ನು ಪ್ರಾರಂಭ ಮಾಡುತ್ತೇವೆಂದು ಏನಾದರೂ ಹೇಳಬೇಕಲ್ಲವೇ? ನಿನ್ನೆ ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡುತ್ತಾ ಗುಲಬರ್ಗಾ University ಗೆ ಅಂಬೇಡ್ಕರ್‌ರವರ ಹೆಸರನ್ನಿಡಬೇಕೆಂದು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಜೊತೆಗೆ ಹೊಸದಾಗಿ ಪ್ರಾರಂಭ ಮಾಡುತ್ತಿರುವ ದಾವಣಗೆರೆ

ಯೂನಿವರ್ಸಿಟಿಗೆ ಬಸವಣ್ಣನವರ ಹೆಸರನ್ನಿಡಬೇಕು. ಹಾಗೆಯೇ, ಇಷ್ಟೊಂದು ಪ್ರಸಿದ್ಧವಾದ ಬೆಂಗಳೂರಿನ ಸ್ಥಾಪನೆಗೆ ಕಾರಣ ಯಾರು? ಬೆಂಗಳೂರಿನ ಮೂಲ ಕರ್ತರು ಕೆಂಪೇಗೌಡರವರು. ಹಾಗಾಗಿ, ಬೆಂಗಳೂರು International Airportಗೆ ಕೆಂಪೇಗೌಡರ ಹೆಸರನ್ನಿಡಿ. ನೀವೇಕೆ ಆ ಹೆಸರನ್ನು ಇಡುತ್ತಿಲ್ಲ? ಆದ್ದರಿಂದ, ಬೆಂಗಳೂರು International Airport ಗೆ ಕೆಂಪೇಗೌಡರ ಹೆಸರನ್ನಿಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಅರೋಗ್ಯ ಕವಚ ಯೋಜನೆಯನ್ನು ಅನುಷ್ಠಾನಗೊಳಿಸಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ. ಇದರಿಂದ ಬಡವರಿಗೆ ಬಹಳಷ್ಟು ಅನುಕೂಲವಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಆರೋಗ್ಯ ಕವಚ ಯೋಜನೆ . . .

ಉಪಾಧ್ಯಕ್ಷರು: ಬಾಲಕೃಷ್ಣರವರು ಮಾತನಾಡಲಿ. ನೀವೇಕೆ ಪ್ರತಿಸಲ ಮಧ್ಯೆ ಎದ್ದು ನಿಂತು ಮಾತನಾಡುತ್ತೀರಿ? ಹೀಗಾದರೆ ಎಲ್ಲರಿಗೂ ಬಜೆಟ್ ಮೇಲೆ ಮಾತನಾಡಲಿಕ್ಕೆ ಅವಕಾಶ ಸಿಗುವುದಿಲ್ಲ. ಇನ್ನೂ ಸಹ 12 ಜನ ಮಾತನಾಡುವವರಿದ್ದಾರೆ. ಬಾಲಕೃಷ್ಣರವರೆ, ನೀವೇಕೆ yield ಆಗುತ್ತೀರಿ? ನೀವು ಮಾತು ಮುಂದುವರಿಸಿ. ಶಿವಲಿಂಗೇಗೌಡರು ನಿನ್ನೆ ಬೇಕಾದಷ್ಟು ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಒಂದ್ನಿಮಿಷ. ಆರೋಗ್ಯ ಕವಚ ಯೋಜನೆಯಲ್ಲಿ ರೈತರಿಗೆ ಫ್ರೀ ಕೊಟ್ಟಿದ್ದಾರೆ ನಿಜ. 1400 ರೂಪಾಯಿಗಳನ್ನು 20 ಕಿಲೋಮೀಟರ್ ದೂರ ಕರೆದುಕೊಂಡು ಹೋಗಿ ಕರೆದುಕೊಂಡು ಬರುವುದಕ್ಕೆ charge ಮಾಡುತ್ತಿದ್ದಾರೆ. Outsource ಗೆ ಕೊಟ್ಟಿದ್ದಾರೆ. ಇದರಲ್ಲಿ ಮೋಸ ನಡೆಯುತ್ತಿದೆ, ಅನ್ಯಾಯ ನಡೆಯುತ್ತಿದೆ. ಇದು ಈ ದೇಶದ, ಈ ರಾಜ್ಯದ ದುಡ್ಡು. ಅದನ್ನು ಮೊದಲು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ಆರೋಗ್ಯ ಕವಚ ಎಂದು ಹೆಸರು ಕೊಡುತ್ತಿದ್ದ ಹಾಗೆ ಅದರಲ್ಲಿ ಏನು ಅಡಗಿದೆ ಎಂಬುದನ್ನು ಕಂಡುಹಿಡಿಯಬೇಕು. ನಮ್ಮ ಅರಸೀಕೆರೆಯಲ್ಲಿ ಅವರು 20 ಕಿಲೋಮೀಟರ್‌ಗಿಂತ ದೂರ ಹೋಗುವುದಿಲ್ಲ. 20 ಕಿಲೋ ಮೀಟರ್ ಹೋಗಿ ಕರೆದುಕೊಂಡು ಬರುತ್ತಾರೆ. ಅವರೇನೂ free service ಮಾಡುತ್ತಿಲ್ಲ, ಅದಕ್ಕೆ 1400 ರೂಪಾಯಿಗಳನ್ನು service charge ಎಂದು ಮಾಡುತ್ತಾರೆ. 5% service ಎಂದರೆ 1400 ರೂಪಾಯಿಗಳನ್ನು charge ಮಾಡುತ್ತಾರೆ. ಆಂದರೆ, ಆ ಹಣ ಎಲ್ಲಿಗೆ ಹೋಗುತ್ತದೆ? ಆ ಹಣ ಯಾರದು? 24 hours ಇರುತ್ತಾರೆಂದು ಹೇಳುತ್ತಾರೆ, ಆದರೆ ಯಾರೂ ರಾತ್ರಿ ಹೊತ್ತು ಹೋಗುವುದಿಲ್ಲ, ಇರಲಿ. ಅಲ್ಲಿ 8 ಜನ, 9 ಜನ drivers,

attenders ಇವರನ್ನು ಇಟ್ಟುಕೊಂಡಿದ್ದಾರೆ. ಅವರಿಗೆ 3000 ರೂಪಾಯಿಗಳಂತೆ ಸಂಬಳ ಕೊಡುತ್ತಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಕಡೂರು ಮಂದಿಗೆ ರಕ್ಷಾ ಕವಚ ಕೊಟ್ಟಿದ್ದಾರೆ. ಅದು 30 ಕಿಲೋಮೀಟರ್ ಎಂದು ಹೇಳಿದರೆ, 30 ಕಿಲೋಮೀಟರ್ ಹೋಗಿ ನಿಂತುಬಿಟ್ಟರೆ ಮುಂದಕ್ಕೆ ಇನ್ನು 10 ಕಿಲೋಮೀಟರ್ ದೂರದಲ್ಲಿ ಚಿಕ್ಕಮಗಳೂರು ಇದೆ, 30 ಕಿಲೋಮೀಟರ್ ದೂರದಲ್ಲಿ ಶಿವಮೊಗ್ಗ ಇದೆ, 40 ಕಿಲೋಮೀಟರ್ ದೂರದಲ್ಲಿ ಹಾಸನ ಇದೆ. ಹೀಗಾದರೆ, ಆ patient ಗತಿ ಏನು? ಪ್ರತಿಯೊಬ್ಬರಿಗೂ charge ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ಆಮೇಲೆ charges ಎಷ್ಟು?

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ: ಆರೋಗ್ಯ ಕವಚ ಯೋಜನೆ ಇರುವುದು ತುರ್ತು ಚಿಕಿತ್ಸೆಗೋಸ್ಕರ. ಅದು 60 ಕಿಲೋಮೀಟರ್, 70 ಕಿಲೋಮೀಟರ್ ದೂರ ಹೋಗಲಿಕ್ಕೆ ಅಲ್ಲ.

(ಗೊಂದಲ)

ಉಪಾಧ್ಯಕ್ಷರು: ಬಾಲಕೃಷ್ಣರವರೆ, ನೀವು ಮಾತನಾಡಿ ಮುಗಿಸಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ನಮ್ಮ ಶಿವಲಿಂಗೇಗೌಡರು ಮತ್ತು ಕೃಷ್ಣಮೂರ್ತಿಯವರು ಹೇಳಿದ ಹಾಗೆ, ಇದನ್ನು ಸರ್ಕಾರ ಸರಿ ಮಾಡಬೇಕು. ಕಳೆದ ಬಜೆಟ್‌ನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು 87 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ಅಚಿದರೆ ಆಸ್ಪತ್ರೆಗಳನ್ನು upgrade ಮಾಡುವುದಕ್ಕೆ 87 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ಎಲ್ಲಿ ಮಾಡಿದ್ದಾರೆ ಸ್ವಾಮಿ? ಈ ಹಣವನ್ನು ಯಾವ ಆಸ್ಪತ್ರೆಗೆ ಎಲ್ಲಿ ಖರ್ಚು ಮಾಡಿದ್ದಾರೆ? ಇದು ಕಳೆದ ಬಜೆಟ್‌ನಲ್ಲಿ ಇಟ್ಟಿರುವಂಥ ಹಣವಾಗಿದೆ. ನಮ್ಮ ತಾಲ್ಲೂಕಿನಲ್ಲಂತೂ ಆಗಿಲ್ಲ. ಸಿ.ಟಿ. ರವಿಯವರು ಹೇಳಬೇಕು, ಅವರ ತಾಲ್ಲೂಕಿನಲ್ಲಿ ಎಲ್ಲಿಯಾದರೂ ಆಗಿರಬಹುದು. 'ಇಂದಿರಾನಗರದಲ್ಲಿ ವಿಶೇಷ ಸಾರ್ವಜನಿಕ ಆಸ್ಪತ್ರೆ ಸ್ಥಾಪನೆಗೆ 8 ಕೋಟಿ ರೂಪಾಯಿಗಳು' ಎಂದು ಹೇಳಿದ್ದೀರಿ, ಇಂದಿರಾನಗರದಲ್ಲಿ ಸರ್ಕಾರಿ ಆಸ್ಪತ್ರೆ ಎಲ್ಲಿದೆ ಸ್ವಾಮಿ? ಎಲ್ಲಿ ಪ್ರಾರಂಭವಾಗಿದೆ? ಈ ವರ್ಷ ಆ ಆಸ್ಪತ್ರೆಗೆ ಎಷ್ಟು ಹಣ ಕೊಡುತ್ತೀರಿ? ಅಲ್ಲಿ ಪ್ರಾರಂಭ ಮಾಡಿದ್ದೀರಾ? ಇದು ನೀವು ಕಳೆದ ಸಲ ಬಜೆಟ್‌ನಲ್ಲಿ ಹೇಳಿರುವಂಥದ್ದು. ಇದು ಕಳೆದ ಸಲ ಬಜೆಟ್‌ನಲ್ಲಿ ಇಟ್ಟಿರುವಂಥ ಹಣ, ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಿಗೆ ತುರ್ತು ಚಿಕಿತ್ಸಾ ಘಟಕ ನಿರ್ಮಾಣಕ್ಕೆ 25 ಕೋಟಿ ರೂಪಾಯಿ' ಎಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಹಣ ಖರ್ಚು

ಮಾಡಿದ್ದೀರಿ? ಅದಕ್ಕೆ ಈ ವರ್ಷ ಬಜೆಟ್‌ನಲ್ಲಿ ಎಷ್ಟು ಹಣ ಕೊಡುತ್ತೀರಿ? ಸ್ವಲ್ಪ ದೂರದೃಷ್ಟಿ ಇಟ್ಟುಕೊಂಡು ಮಾಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ(ಕಾರ್ಮಿಕ ಸಚಿವರು): ಆ ಭಾಗದಲ್ಲಿ ಯಾವ ಆಸ್ಪತ್ರೆಯೂ ಇಲ್ಲವೆಂದು 8 ಕೋಟಿ ರೂಪಾಯಿಗಳನ್ನು north ಭಾಗಕ್ಕೆ ಒದಗಿಸಿರುವಂಥದ್ದು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಆಯಿತು ಸಚಿವರೇ. ನಾನು ಅದನ್ನೇ ಕೇಳುತ್ತಿರುವುದು. 8 ಕೋಟಿ ರೂಪಾಯಿಗಳನ್ನು ಎಲ್ಲಿ investment ಮಾಡಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ? ಈ ಬಜೆಟ್‌ನಲ್ಲಿ ಎಷ್ಟು ಹಣ ಇದಕ್ಕಾಗಿ ಇಟ್ಟಿದ್ದೀರಿ? ಪ್ರಾರಂಭ ಮಾಡದೇ ಇದ್ದರೆ ಬಜೆಟ್‌ನಲ್ಲಿ ಏಕೆ ಹೇಳಬೇಕಾಗಿತ್ತು? ಮತ್ತು ಏಕೆ ಹಣ ಇಡಬೇಕಾಗಿತ್ತು? ಆಸ್ಪತ್ರೆ ಕೆಲಸ ಏನೋ ಆಗಿದೆ ಎಂದು ನಾವು ತಿಳಿದುಕೊಂಡಿದ್ದೆವು. ಅವರದ್ದು ಈ ಬಾರಿ ಈ ಬಜೆಟ್‌ನಲ್ಲಿ ಏನೂ ಚರ್ಚೆ ಇಲ್ಲ. ಈ ಬಜೆಟ್‌ನಲ್ಲಿ ನಾವು ಹಿಂದೆ ಎಷ್ಟು ಹಣ ಇಟ್ಟಿದ್ದೆವು, ಇಷ್ಟು ಹಣ ಖರ್ಚು ಮಾಡಿದ್ದೇವೆ, ಮುಂದಕ್ಕೆ ಮುಂದುವರಿಸುತ್ತೇವೆ, ಇದನ್ನು ಕಟ್ಟುತ್ತೇವೆಂದು ಹೇಳಬೇಕಾಗಿತ್ತಲ್ಲವೇ? ಇನ್ನೊಂದು ಬಜೆಟ್ ಅನ್ನು ಏಪ್ರಿಲ್‌ನಲ್ಲಿ ಮಂಡಿಸುತ್ತೀರಾ? ಇನ್ನು, ಬಡ ಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ– 'ಗುಲ್ಬರ್ಗಾ ವಿಭಾಗದ ಹಿಂದುಳಿದ ಜಿಲ್ಲೆಗಳಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಮೂಲಕ 16 ಲಕ್ಷ ಬಡ ಕುಟುಂಬಗಳಿಗೆ ತಲಾ ರೂ. 1.50 ಲಕ್ಷದವರೆಗೆ ವೈದ್ಯಕೀಯ ವೆಚ್ಚವನ್ನು ಉಚಿತವಾಗಿ ಒದಗಿಸಲಾಗುವುದು' ಎಂದು ಈ ಬಜೆಟ್‌ನಲ್ಲಿ ಹೇಳಿದ್ದೀರಿ. ಇದಕ್ಕೆ ನಾನು ಸ್ವಾಗತಬಯಸುತ್ತೇನೆ. ಇಷ್ಟೇ ಅಲ್ಲ, ಎಲ್ಲಾ BPL card holders ಗೆ ಈ ಯೋಜನೆಯನ್ನು ವಿಸ್ತರಣೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು. ಏಕೆಂದರೆ, ಬಡವರು ತುಂಬಾ ಕಷ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ಅವರೇನಾದರೂ ಒಂದು heart operation ಮಾಡಿಸಬೇಕೆಂದರೆ ಸರ್ಕಾರ ಕೊಡುವಂಥದ್ದು 5 ಸಾವಿರ, 10 ಸಾವಿರ ರೂಪಾಯಿಗಳು, ಆದರೆ ಅಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತದೆ. cancer ಮುಂತಾದ ಬೇರೆ ಬೇರೆ ಖಾಯಿಲೆಗಳಿಗೆ ಸಂಬಂಧಪಟ್ಟ operation ಮಾಡಿಸಬೇಕಾದರೆ ಅವರಿರತಕ್ಕಂಥ ಜಮೀನುಗಳನ್ನೋ, ಮನೆಗಳನ್ನೋ ಅಡ ಇಟ್ಟು ಹಣ ತಂದು ಆಸ್ಪತ್ರೆಗಳಿಗೆ ಖರ್ಚು ಮಾಡುತ್ತಿದ್ದಾರೆ. ದಯಮಾಡಿ, ಎಲ್ಲಾ BPL card holders ಗೆ ಕೂಡ ಈ ಯೋಜನೆಯನ್ನು ವಿಸ್ತರಣೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ಇನ್ನು, ವೈದ್ಯಕೀಯ ಶಿಕ್ಷಣ– ವೈದ್ಯಕೀಯ ಶಿಕ್ಷಣದ ಬಗ್ಗೆ ಈ ಬಜೆಟ್‌ನಲ್ಲಿ ಚಕಾರವಿಲ್ಲ. ಸಮ್ಮಿಶ್ರ ಸರ್ಕಾರವಿದ್ದಾಗ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಬಗ್ಗೆ ನಾವು ಇಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ, ಇದನ್ನು ಖರ್ಚು ಮಾಡುತ್ತೇವೆ ಎನ್ನುವ ಮಾತನ್ನು

ಹೇಳಿದ್ದರು. ಆದರೆ, ಇವತ್ತು ಅದರ ಬಗ್ಗೆ ಈ ಬಜೆಟ್‌ನಲ್ಲಿ ಪ್ರಸ್ತಾಪವೇ ಎಲ್ಲ. ನಾವು ಕಳೆದ ಅಧಿವೇಶನದಲ್ಲಿಯೂ ಕೂಡ ಕೇಳಿದ್ದೆವು. ಸದ್ಯದಲ್ಲಿಯೇ ಕಾಮಗಾರಿ ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಹಾಗಾದರೆ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮೇಲೇ ಏನಾದರೂ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆಯೇ? ರಾಮನಗರ ಜಿಲ್ಲೆಗೆ ಯಾವ ಯೋಜನೆ ಸಹ ಇಲ್ಲ. ನಿನ್ನೇ ಯಾರೋ ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ ರಾಮನಗರ ಜಿಲ್ಲೆಗೆ ಏನೂ ಕೊಟ್ಟಿಲ್ಲವೆಂದು ಹೇಳಿದರು. ರಾಮನಗರ ಜಿಲ್ಲೆಯಲ್ಲಿ ಜನಪದ ಲೋಕಕ್ಕೆ ಮಾತ್ರ 1 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಬಿಟ್ಟು ರಾಮನಗರ ಜಿಲ್ಲೆಗೆ ಒಂದು ಕಾಸೂ ಸಹ ಇಲ್ಲ. ಹೊಸ ಜಿಲ್ಲೆಗಳ ಅಭಿವೃದ್ಧಿಗೋಸ್ಕರ ಬೇರೆ ಬೇರೆ ಜಿಲ್ಲೆಗಳಿಗೆ ಹಣ ಕೊಟ್ಟಿದ್ದಾರೆ. ರಾಮನಗರ ಜಿಲ್ಲೆಗೆ ಒಂದು ರೂಪಾಯಿ ಸಹ ಬಿಡುಗಡೆಯಾಗಿಲ್ಲ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಈ ದ್ವೇಷದ ರಾಜಕಾರಣವನ್ನು ಬಿಡಬೇಕು. ರಾಮನಗರ ಜಿಲ್ಲೆ ಈ ರಾಜ್ಯದಲ್ಲಿ ಇದೆಯೋ ಅಥವಾ ಎಲ್ಲವೋ ದಯಮಾಡಿ ಈ ದ್ವೇಷದ ರಾಜಕಾರಣ ಬಿಟ್ಟು ಹಣವನ್ನು ಒದಗಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವೈ.ಎನ್. ರುದ್ರೇಶಗೌಡ: ಈ ವರ್ಷ ಆಯಿತು. ಮುಂದಿನ ವರ್ಷವಾದರೂ ಹಾಸನ ಮತ್ತು ರಾಮನಗರ ಈ ಎರಡು ಜಿಲ್ಲೆಗಳಿಗೆ ಸರಿಸಮಾನವಾಗಿಯಾದರೂ ಹಣ ಕೊಡುತ್ತೇವೆನ್ನುವ ಆಶ್ವಾಸನೆಯನ್ನು ಕೊಡಬೇಕು. ಹಾಸನ ಜಿಲ್ಲೆಯವರಾದ ನಾವು ಮಾಡಿರುವ ತಪ್ಪಾದರೂ ಏನು? ನಾವು ಹೊಸದಾಗಿ ಆರಿಸಿ ಬಂದ ಶಾಸಕರು. ನಾವು ಮಾಡಿದ ತಪ್ಪೇನಿದೆ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ,..

ಶ್ರೀ ಎಂ. ಚಂದ್ರಪ್ಪ: ಅದನ್ನೆಲ್ಲ ಸದಸ್ಯರು ಕೇಳಿಸಿಕೊಂಡಿದ್ದಾರೆ. ಅದನ್ನೇ ನೀವು ಓದುತ್ತೀದ್ದೀರಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ತಮ್ಮ ನೆರವಿಗೆ ಬರುತ್ತಿದ್ದೇನೆ. ತಾವು ಎಸ್.ಸಿ.ಎಸ್‌ಟಿ ನಿಗಮದ ಚೇರ್‌ಮನ್ ಆಗಿದ್ದೀರಿ. ನಿಮಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ. ಕಳೆದ ಬಾರಿ ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದರು ಮತ್ತು ಅದರಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ? ಎಂಬುದನ್ನು ನಿಗಮದ ಅಧ್ಯಕ್ಷರು ಈ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ ಎಂದು ಹೇಳಬೇಕು. ಹಣವನ್ನು ಏಕೆ ಖರ್ಚು ಮಾಡಿಲ್ಲವೆಂದು ನೀವು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದೀರಿ. ಸಮಾಜ ಕಲ್ಯಾಣ ಇಲಾಖೆಗೆ ಕೇವಲ ಹಣ ಇಟ್ಟರೆ ಸಾಲದು. ಕೆಲಸ ಮಾಡತಕ್ಕಂಥ ದಿಟ್ಟ ಮನಸ್ಸು ಬೇಕು. ಇವತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ 50% ಹಣ ಸಹ ಖರ್ಚು ಮಾಡಿಲ್ಲ. ಬೋರವೆಲ್ ಕೊರೆಯುವ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್ ಕೊರೆಯುವುದು ಒಂದು ವರ್ಷವಾದರೆ ಅದಕ್ಕೆ ಕರೆಂಟ್ ಕೊಡಿಸಲಿಕ್ಕೆ ಮೂರು ವರ್ಷ ಬೇಕು. ಇದಕ್ಕೆ ಒಂದು ಕಾಲಮಿತಿಯೊಳಗೆ ಕರೆಂಟ್ ಕೊಡಿಸುವ

ಕೆಲಸ ಸರ್ಕಾರ ಮಾಡಬೇಕು. ಇದಕ್ಕಾಗಿ ಹಣ ಬಿಡುಗಡೆ ಮಾಡಿದ್ದೀರಿ ಅದಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ವಸತಿ ಮತ್ತು ಮುಜರಾಯಿ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. 25 ಸಾವಿರ ದೇವಸ್ಥಾನದ ಅಭಿವೃದ್ಧಿಗೆ 400 ಕೋಟಿ ರೂಪಾಯಿಗಳು. ಇದನ್ನು ಬಜೆಟ್‌ನಲ್ಲಿ ಇಟ್ಟಿದ್ದಾರೆಯೇ? ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ದಯಮಾಡಿ ಹೇಳಬೇಕು. ಸಂಯುಕ್ತ ಕರ್ನಾಟಕದಲ್ಲಿ 25 ಸಾವಿರ ದೇವಸ್ಥಾನದ ಅಭಿವೃದ್ಧಿ ಬಗ್ಗೆ ಬಂದಿದೆ. ಅವರು ಅಕ್ಕಾ ಸಮ್ಮೇಳನಕ್ಕೆ ಹೋದರು. ಆಗ ನಮಗೆ ತಹಸೀಲ್ದಾರ್‌ರವರು, ನಿಮ್ಮಲ್ಲಿರುವ ದೇವಸ್ಥಾನಗಳ ಬಗ್ಗೆ ಪಟ್ಟಿ ಕೊಡಿ ಎಂದು ಕೇಳಿದರು. ಅಕ್ಕಾ ಸಮ್ಮೇಳನಕ್ಕೆ ಹೋಗಿ ಹೊರ ದೇಶದಲ್ಲಿರುವ ಕನ್ನಡಿಗರ ಹತ್ತಿರ ದುಡ್ಡು ತರುತ್ತೇವೆ ನೀವು ಪಟ್ಟಿ ಕೊಡಿ ಎಂದು ಕೇಳಿದರು. ನಾವು ಇರುವಂಥ ಎಲ್ಲಾ ದೇವಸ್ಥಾನಗಳ ಪಟ್ಟಿ ಕಳುಹಿಸಿ ಕೊಟ್ಟರೂ ಒಂದು ರೂಪಾಯಿ ಬರಲಿಲ್ಲ. ಅಕ್ಕಾ ಸಮ್ಮೇಳನದಿಂದ ವಾಪಸ್ಸು ಬಂದರು ಒಂದು ರೂಪಾಯಿ ಬರಲಿಲ್ಲ ಈಗ ಮೊನ್ನೆ ಕೂಡ ಒಂದು ಪಟ್ಟಿ ತೆಗೆದುಕೊಂಡಿದ್ದಾರೆ. ನಿಮ್ಮ ತಾಲ್ಲೂಕಿನಲ್ಲಿರುವ ಹತ್ತು ಮುಜರಾಯಿ ದೇವಸ್ಥಾನಗಳ ಪಟ್ಟಿ ಕೊಡಿ ಸಂಪೂರ್ಣವಾಗಿ ಅಭಿವೃದ್ಧಿ ಪಡಿಸುತ್ತೇವೆಂದು ಹೇಳಿದರು. ನಮ್ಮ ಹತ್ತಿರ ಹತ್ತು ದೇವಸ್ಥಾನಗಳ ಪಟ್ಟಿ ತೆಗೆದುಕೊಂಡರೂ ಅದರ ಬಗ್ಗೆ ಚಕಾರವೆತ್ತಿಲ್ಲ. ಈಗೇನು ಹೊಸದಾಗಿ ಮೊನ್ನೆ ಗಂಗಾಜಲ ವಿತರಣೆ ಮಾಡುವಂಥ ಸಂದರ್ಭದಲ್ಲಿ 25 ಸಾವಿರ ದೇವಸ್ಥಾನದ ಅಭಿವೃದ್ಧಿಗೆ 400 ಕೋಟಿ ರೂಪಾಯಿಗಳು ಕೊಡುವುದಾಗಿ ತಿಳಿಸಿದ್ದಾರೆ ಇದನ್ನು ಬಜೆಟ್‌ನಲ್ಲಿ ಇಟ್ಟಿದ್ದಾರೆಯೇ? ಎಲ್ಲಿ ದುಡ್ಡು ಕೊಡುತ್ತಾರೆ? ದಯಮಾಡಿ ಮುಖ್ಯಮಂತ್ರಿಗಳು ತಿಳಿಸಬೇಕು.

ಇನ್ನು ವಸತಿ ವಿಚಾರ ಹೇಳುವುದಾದರೆ, ಕಳೆದ ವರ್ಷ ಒಂದೇ ಮನೆ ಕಟ್ಟಲಿಕ್ಕೆ ಆಗಲಿಲ್ಲ. ಡಿಸೆಂಬರ್‌ನಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸುಮಾರು 25 ರಿಂದ 30 ಮನೆಗಳನ್ನು ಕೊಡಬೇಕೆಂದು ಒಂದು ಸುತ್ತೋಲೆ ಕಳುಹಿಸಿದ್ದಾರೆ. ಇದುವರೆವಿಗೂ ಆ ಪಟ್ಟಿ ವಾಪಸ್ಸು ತೆಗೆದುಕೊಳ್ಳುವಂಥ ಕೆಲಸ ಸರ್ಕಾರ ಮಾಡಿಲ್ಲ. ಅಂದರೆ, ಈ ವರ್ಷ ಮೀಸಲಿಟ್ಟಿರತಕ್ಕಂಥ ಹಣವನ್ನು ಬಹುಶ: ಈಗೇನು ಪಟ್ಟಿ ತೆಗೆದುಕೊಳ್ಳುತ್ತಿದ್ದಾರೆ ಅದಕ್ಕೆ ಬಿಡುಗಡೆಯಾಗಬಹುದು ವಿನಾ: ಮುಂದಿನ ವರ್ಷದ ಬಜೆಟ್‌ನಲ್ಲಿ ಒಂದೇ ಒಂದು ಹೊಸ ಮನೆ ತೆಗೆದುಕೊಳ್ಳತಕ್ಕಂಥ ಕೆಲಸ ವಸತಿ ಸಚಿವರಿಂದ ಆಗಿಲ್ಲ. ಈ ಮನೆ ಕಟ್ಟಲಿಕ್ಕೆ ಸರ್ಕಾರ 40 ಸಾವಿರಕ್ಕೆ ಏರಿಸಿದೆ. ಬಡವರು ಮನೆ ಕಟ್ಟಿಸಬೇಕಾದರೆ ಅವರ ಪರಿಸ್ಥಿತಿ ತುಂಬಾ ಶೋಚನಿಯವಾಗಿರುತ್ತದೆ. ಅತ್ಯಂತ ಹಿಂದುಳಿದವರು, ದಲಿತರು ಮನೆ ಕಟ್ಟಬೇಕಾದರೆ ಬಹಳ ಕಷ್ಟದಲ್ಲಿ ಮನೆಗಳನ್ನು ಕಟ್ಟುತ್ತಾರೆ. ಅವರು ಇಟ್ಟಿಗೆಯಲ್ಲಿ ಮನೆ ಕಟ್ಟಿ ಶೀಟ್ ಹೊದಿಸಿ ಬಿಟ್ಟರೆ ಆ ಗೋಡೆಗಳಿಗೆ ಪ್ಲಾಸ್ಟಿಂಗ್ ಇಲ್ಲ ನೆಲಕ್ಕೆ ಫ್ಲೋರಿಂಗ್ ಇಲ್ಲ. ಇಂಥ ಪರಿಸ್ಥಿತಿ ಇದೆ. ದಯಮಾಡಿ ಆ ಮನೆ ಕಟ್ಟುವ ವೆಚ್ಚವನ್ನು ಕನಿಷ್ಟ 40 ಸಾವಿರದಿಂದ 75 ಸಾವಿರ ರೂಪಾಯಿವರೆಗೆ

ಏರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದರ ಬಗ್ಗೆ ವಿಶೇಷವಾದ ಗಮನ ಕೊಡಬೇಕು.

ಶ್ರೀ ಸಿ.ಟಿ.ರವಿ: 40 ಸಾವಿರಕ್ಕೆ ಏರಿಸಿದ್ದೇವೆಲ್ಲ ಅದಕ್ಕಾದರೂ ಧನ್ಯವಾದ ಹೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಒಳ್ಳೆಯ ಕೆಲಸಕ್ಕೆ ನಾವು ಧನ್ಯವಾದ ಹೇಳಿದ್ದೇವೆ. ನೀವು ಹೇಳಿದ ಮೇಲೆ ಮನೆ ಕೊಡಬೇಕಲ್ಲವೇ ಹೋದ ವರ್ಷ ಒಂದು ಮನೆ ಕಟ್ಟಲಿಕ್ಕೆ ಆಗಲಿಲ್ಲ? ಬರೀ ಬಜೆಟ್‌ನಲ್ಲಿ ಹೇಳಿಬಿಟ್ಟರೆ ಆಯಿತಾ?

ಇನ್ನು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ಬಹಳಷ್ಟು ಹಣವನ್ನು ಬೆಂಗಳೂರು ಅಭಿವೃದ್ಧಿಗೆ ಕೊಟ್ಟಿದ್ದಾರೆ ಏಕೆಂದರೆ, ಅದೇನು ಕೇಂದ್ರ ಸರ್ಕಾರದ ಅನುದಾನವೋ? ಅಥವಾ ಹಿಂದೆ ಇರುವ ಅನುದಾನವೋ? ನನಗೆ ಗೊತ್ತಿಲ್ಲ. ಬೆಂಗಳೂರು ಅಭಿವೃದ್ಧಿಗೆ ಸಾಕಷ್ಟು ಹಣ ಕೊಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು " ನಗರಗಳಿಗೆ ಸಮಾನವಾಗಿ ಹಳ್ಳಿಗಳ ಅಭಿವೃದ್ಧಿ" ಎಂದು ಹೇಳಿದ್ದಾರೆ. ಗ್ರಾಮೀಣಾಭಿವೃದ್ಧಿಗೆ 5% ಕೊಟ್ಟಿದ್ದಾರೆ. ನಗರಗಳಿಗೆ ಜಾಸ್ತಿ ಹಣ ಕೊಟ್ಟಿದ್ದಾರೆ. ಏಕೆಂದರೆ, ನಗರದಲ್ಲಿ ವಾಸಿಸುವಂಥ ಜನ ಸ್ವಲ್ಪ ಬಿಜೆಪಿ ಪರ ಒಲವು ತೋರಿಸುತ್ತಾರೆಂದು ನಗರಗಳಿಗೆ ಜಾಸ್ತಿ ಹಣ ಕೊಡುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಇನ್ನೊಂದು ಮಾತನ್ನು ಕಳೆದ ಅಧಿವೇಶನದಲ್ಲಿ ಹೇಳಿದ್ದಾರೆ. ಮೈಸೂರು, ಮಂಗಳೂರು, ಉಡುಪಿ ನಗರಗಳಲ್ಲಿ ಮಾನೋ ರೈಲು ಪ್ರಾರಂಭಿಸಲು ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಇದು ಏನಾಯಿತು? ಈ ಬಾರಿ ಅದನ್ನು ಮುಂದುವರಿಸುತ್ತೀರಾ? ಹೋಗಲಿ ಅದನ್ನು ಮಾಡಿದ್ದೀರಾ? ಇಲ್ಲವೇ? ನನಗೆ ಗೊತ್ತಿಲ್ಲ ಆ ಭಾಗದವರು ಮಾನೋ ರೈಲು ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ ಎಂದು ಹೇಳಬೇಕು. ಈ ಬಾರಿ ಬಜೆಟ್‌ನಲ್ಲಿ ಇದರ ಬಗ್ಗೆ ಏನೂ ಪ್ರಸ್ತಾಪವಿಲ್ಲ. ಸಣ್ಣ ನಗರಗಳಿಗೆ 5 ಕೋಟಿ ಕೊಡುತ್ತೇವೆಂದು ಹೇಳಿದ್ದಾರೆ. ಕೇವಲ ಬಜೆಟ್‌ನಲ್ಲಿ ಹೇಳುವುದಕ್ಕಿಂತಲೂ ಕೆಲಸ ಮಾಡಿದರೆ ಆ ಭಾಗದ ಜನಗಳಿಗೆ ಅನುಕೂಲವಾಗುತ್ತದೆ.

ಇನ್ನು ಮೂಲ ಸೌಕರ್ಯ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ವಿಮಾ ನಿಲ್ದಾಣದ ಬಗ್ಗೆ ಹೇಳುವುದಾದರೆ, ಮಾನ್ಯ ಪ್ರವಾಸೋದ್ಯಮ ಸಚಿವರು "ವಿಮಾನ ನಿಲ್ದಾಣ ಉದ್ಘಾಟನೆ ನೋಡಲು ದೇವೇಗೌಡರು ಬದುಕಿರಲಿ" "ಪಾಪಿಗಳು ಯಾವಾಗಲು ಚಿರಾಯು" ಎಂದು ಹೇಳಿದ್ದಾರೆ. ನಾವೆಲ್ಲ ಇಲ್ಲಿ ಕುಳಿತಿರತಕ್ಕಂಥವರು ಪಾಪಿಗಳು, ನಾವೆಲ್ಲ ಚಿರಾಯು, ಅವರೆಲ್ಲ ಪುಣ್ಯಾತ್ಮರು, ಅವರೆಲ್ಲ ನಾಳೆ ಸತ್ತು ಹೋಗಬೇಕಲ್ಲವೇ? ನಾನು ಏಕೆ ಈ ಮಾತನ್ನು ಬಹಳ ನೋವಿನಿಂದ ಹೇಳುತ್ತೇನೆಂದರೆ, ವಾಜಪೇಯಿರವರು ಅಲ್ಲಿ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ, ಹಾಗಾದರೆ ಅವರು ಪಾಪಿಗಳೆ? ಅವರು ಚಿರಾಯುವೆ? ಅವರು ಇನ್ನು ಬದುಕಿದ್ದಾರೆ, ಅವರು ಪಾಪಿಗಳೆ? ಅಡ್ವಾಣಿಯವರಿಗೆ 70 ವರ್ಷವಾಗಿದೆ ಅವರು ಪಾಪಿಯೆ?

ಮಂತ್ರಿಗಳು ಮಾತನಾಡುವಾಗ ಎಚ್ಚರಿಕೆಯಿಂದ ಮಾತನಾಡಬೇಕಾಗುತ್ತದೆ. ನಾನು ಮಾಗಡಿಯಲ್ಲಿ ನಿಂತು ಕೊಂಡು ಯಡಿಯೂರಪ್ಪನವರ ಬಗ್ಗೆ ಬಾಯಿಗೆ ಬಂದ ಹಾಗೆ ಮಾತನಾಡಬಹುದು, ಆದರೆ ನನ್ನ ಘನತೆಗೆ ತಕ್ಕದ್ದು ಅಲ್ಲ, ಅನೇಕ ಮಂತ್ರಿಗಳು ಮಾತನಾಡುವುದನ್ನು ಮಾಧ್ಯಮದಲ್ಲಿ ನೋಡಿದ್ದೇವೆ. ಎಲ್ಲರ ಮೇಲೆ ಬಾಯಿಗೆ ಬಂದ ಹಾಗೆ ಬೈದು ಎಲ್ಲರೂ ತಿರುಗಿ ಬಿದ್ದಿರತಕ್ಕಂಥದ್ದುನ್ನು ನೋಡಿದ್ದೇವೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಕಡಿವಾಣ ಹಾಕಬೇಕೆಂದು ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಒಟ್ಟಾರೆಯಾಗಿ ಹೇಳುವುದಾದರೆ, ಮಠ ಮಾನ್ಯಗಳಿಗೆ ಹಣ ಕೊಟ್ಟಿರುವುದರ ಬಗ್ಗೆ ಮಾನ್ಯ ಸದಸ್ಯರೊಬ್ಬರು ನಾವು ಪೂಜೆ ಮಾಡುವುದಕ್ಕೆ ಇರುವುದು ಎಂದರು. ನಾವು ಬೀದಿಯಲ್ಲಿ ಹೇಳುತ್ತೇವೆ, ಮಠ ಮಾನ್ಯಗಳಿಗೆ ದುಡ್ಡು ಕೊಟ್ಟಿರುವುದು ತಪ್ಪು ಎಂದು ಹೇಳಲ್ಲ. ಸರ್ಕಾರದ ದುಡ್ಡ ಖರ್ಚು ಮಾಡುವಾಗ ಅದಕ್ಕೆ ಏನಾದರೊಂದು ರೂಪುರೇಷೆ ಬೇಕಲ್ಲವೇ ಸರ್ಕಾರದ ದುಡ್ಡು ಖರ್ಚು ಮಾಡಬೇಕಾದರೆ ನಾವು ಪತ್ರಕ್ಕಾಗಿ ಖರ್ಚು ಮಾಡುತ್ತೇವೆ, ಏತಕ್ಕಾಗಿ ಕೊಟ್ಟಿದೇವೆ ಎನ್ನುವ ಲೆಕ್ಕ ಬೇಕಲ್ಲವೇ? ನಮಗೆ ಶಾಸಕರ ನಿಧಿ ಎಂದು ಕೊಡುತ್ತಿರಲ್ಲ ಶಾಸಕರು ಮನಸ್ಸೋ ಇಚ್ಚೆ ಖರ್ಚು ಮಾಡುವುದಕ್ಕಾಗುತ್ತದೆಯೆ? ಇಂತಿಂಥ ಕಾರ್ಯಕ್ರಮಕ್ಕೆ ಖರ್ಚು ಮಾಡಬೇಕೆಂದು ನಮಗೊಂದು ಕಾರ್ಯಕ್ರಮ ಹಾಕಿ ಕೊಟ್ಟಿದ್ದೀರಿ. ಆ ರೀತಿಯ ಗೈಡ್‌ಲೈನ್ ಇಶ್ಯೂ ಮಾಡಿ. ಮಠ ಮಾನ್ಯಗಳಿಗೆ ಯಾವ ರೀತಿ ಖರ್ಚು ಮಾಡಬೇಕೆಂದು ಒಂದು ಗೈಡ್‌ಲೈನ್ ಕೊಡಿ. ಸುಮಾರು 100 ಕೋಟಿ ವೀರಶೈವ ಮಠಗಳಿಗೆ, 30 ಕೋಟಿ ಬೇರೆಯವರಿಗೆ. ಒಕ್ಕಲಿಗರ ಸಮುದಾಯಕ್ಕೆ ಏನು ಕೊಟ್ಟಿದ್ದಾರೆಂದು ರವಿಯವರು ಹೇಳಬೇಕಲ್ಲವೇ ನಿನ್ನೆ ಚುಂಚನಗಿರಿಗೆ ಹೋಗಿದ್ದೀರಲ್ಲ ಅವರಿಗೆ ಸ್ವಲ್ಪ ಕೊಡಬೇಕಲ್ಲವೆ ಪಟ್ಟನಾಯಕನಹಳ್ಳಿ ಸ್ವಾಮಿಗಳಿಗೆ ಕೊಡಬೇಕಲ್ಲವೇ ಕೇಳಬೇಕೆನ್ರೀ ನೀವು ಕೇಳಿದೇ ಕೊಟ್ಟಿದ್ದೀರಲ್ಲ? ಅವರು ಕಣ್ಣಿಗೆ ಕಾಣಲಿಲ್ಲವೇ?

ಶ್ರೀ ಕರಡಿ ಸಂಗಣ್ಣ: ಈಗ ಮಾನ್ಯ ಸದಸ್ಯರು ವೀರಶೈವ ಮಠಗಳಿಗೆ 100 ಕೋಟಿ ಕೊಟ್ಟಿದ್ದಾರೆಂದು ಹೇಳಿದರು. ಕೊಪ್ಪಳ್‌ದಲ್ಲಿ ಗವಿಮಠ ಎಂದು ಇದೆ. ಸಿದ್ದಗಂಗಾ ಮಠದ ರೀತಿಯಲ್ಲಿ ಮೂರು ಸಾವಿರ ಮಕ್ಕಳು ಅಲ್ಲಿ ಓದುತ್ತಾರೆ. ಮಾನ್ಯ ಜಿಲ್ಲಾ ಮಂತ್ರಿಗಳಾದ ಕಾರಜೋಳ್‌ರವರು ಇಲ್ಲಿಯೇ ಇದ್ದಾರೆ. ಅದಕ್ಕೆ ಕೊಡುವ ವ್ಯವಸ್ಥೆ ಮಾಡುತ್ತೀರಾ ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಠ ಗಳಿಗೆ ಕೊಡುವುದಾದರೆ ನೀವು ಎಲ್ಲಾ ಮಠಗಳಿಗೆ ಕೊಡಿ ನಮ್ಮದೇನೂ ತಕರಾರಿಲ್ಲ. ರವಿಯವರು ಹೇಳಿದ ಹಾಗೆ ನಾವು ಸ್ವಾಗತಿಸುತ್ತೇವೆ. ಆದರೆ, ಚುಂಚನಗಿರಿಗೆ ಏಕೆ ಕೊಡಲಿಲ್ಲವೆಂದು ರವಿಯವರು ಕೇಳಲಿಲ್ಲ? ಪಟ್ಟನಾಯಕನಹಳ್ಳಿ ಮಠಕ್ಕೆ ಏಕೆ ಕೊಡಲಿಲ್ಲವೆಂದು ರವಿಯವರು ಕೇಳಲಿಲ್ಲ?

ಶ್ರೀ ಸಿ.ಟಿ. ರವಿ: ಇದು ಆರಂಭ, ಎಲ್ಲಾ ಮಠಗಳಿಗೂ ಕೊಡೋಣ, ನೀವು ಕೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಮುಖ್ಯಮಂತ್ರಿಗಳು ಮಠಗಳಿಗೆ ಏಕೆ ದುಡ್ಡು ಕೊಡುತ್ತಿದ್ದಾರೆಂದರೆ, ಅವರು ಕೊಟ್ಟಿರುವ ಹೇಳಿಕೆಯನ್ನು ನಾನು ಓದಿದೆ. ನಾನು ಅಧಿಕಾರಕ್ಕೆ ಬಂದಿದ್ದೇ ಮಠಗಳಿಂದ, ನಿಮ್ಮ ಆರ್ಶೀವಾದದಿಂದ ಯಾರೂ ಬೇಸರ ಮಾಡಿಕೊಳ್ಳಬೇಡಿ ಹಣವನ್ನು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಕೊಡುವುದು ತಪ್ಪು ಎಂದು ನಾನು ಹೇಳುವುದಿಲ್ಲ.

ಶ್ರೀ ಸಿ.ಟಿ.ರವಿ: ಆದಿಚುಂಚನಗಿರಿ ಮಠಕ್ಕೂ ಕೊಡಬೇಕೆಂದು ಕೇಳಿ. ಉತ್ತರ ಕೊಡುವಾಗ ಕೊಡುವ ಹಾಗೆ ನಾವು ಒತ್ತಾಯ ಮಾಡೋಣ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಆದಿಚುಂಚನಗಿರಿ ಮಠ, ಪಟ್ಟನಾಯಕನಹಳ್ಳಿ ಮಠಗಳು ನಿಮ್ಮ ಕಣ್ಣಿಗೆ ಕಾಣುವುದಿಲ್ಲವೇ ಅದಕ್ಕೂ ಕೊಡಬೇಕಲ್ಲವೇ ಏಕೆ ಬಿಟ್ಟಿರಿ? ನೀವು ವಕಾಲತ್ತು ವಹಿಸಬೇಕಲ್ಲವೇ ನೀವು ಸ್ವಾಮಿಗಳ ಹತ್ತಿರ ಹೋಗಬೇಕಲ್ಲವೇ ನಮಗೆ ಕೊಡಿಸುವ ತಕಾತ್ತು ಎಲ್ಲ ಸ್ವಾಮಿ ಅವರಿಗೆ ಇರುವುದು. ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ನನ್ನ ಕುರ್ಚಿ ಅಲ್ಲಾಡುತ್ತಿದೆ ಎಂದು ಹೇಳಿದ್ದಾರೆ. ನಿನ್ನೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ವಿರೋಧ ಪಕ್ಷದವರ್ಯಾರು ಅವರ ಕುರ್ಚಿಯನ್ನು ಅಲ್ಲಾಡಿಸುತ್ತಿಲ್ಲ. ಅವರ ಪಕ್ಷದವರೇ ಅಲ್ಲಾಡಿಸುತ್ತಿರಬಹುದು. ಅವರ ಕುರ್ಚಿ ಏನಾದರೂ ಅಲ್ಲಾಡಿದರೆ ಮುಂದಿನ ದಿವಸ ಮಠಾಧೀಶರು ಅವರ ರಕ್ಷಣೆಗೆ ಬರಲಿ ಎಂದು ಮಠ ಮಾನ್ಯಗಳಿಗೆ ಹಣ ಕೊಡುತ್ತಿರುವುದು. ಅವರ ವಿಶ್ವಾಸವನ್ನು ಗಳಿಸಲಿಕ್ಕೆ ಕೊಡುತ್ತಿರುವುದು, ಎಲ್ಲರಿಗೂ ಕೊಡಿ ಸ್ವಾಮಿ ನಮ್ಮದೇನೂ ತಕರಾರಿಲ್ಲ. ಅವರ ಕೈಯಲ್ಲಿ ಸರ್ಕಾರ ನಡೆಸಲಿ ಇದಕ್ಕೆ ನಮ್ಮದೇನು ತಕರಾರಿಲ್ಲ. ಎಲ್ಲರಿಗೂ ಕೊಡಿ ಎಂದು ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ, ಈ ಸರ್ಕಾರ ಯಾವ ರೀತಿ ಇದೆ ಎಂದರೆ, "ಕೋತಿಯ ಕೈಗೆ ಮಾಣಿಕ್ಯ ಕೊಟ್ಟ ಹಾಗೆ" ಕೋತಿಗೆ ಮಾಣಿಕ್ಯ ಎಂದರೆ ಗೊತ್ತಾ ಸ್ವಾಮಿ? ಅದು ಹೇಗೆ ಬೇಕಾದರೂ ಆಡಿಸುತ್ತದೆ. ಹಾಗೆ ಮನಸ್ಸೋ ಇಚ್ಛೆ ಹಣ ಖರ್ಚು ಮಾಡತಕ್ಕಂಥದ್ದಲ್ಲ. ಇದರಿಂದ ರಾಜ್ಯಕ್ಕೆ ಒಳ್ಳೆಯದಾಗಬೇಕು, ರಾಜ್ಯದ ಜನತೆಗೆ ಒಳ್ಳೆಯದಾಗಬೇಕು, ಆ ದಿಕ್ಕಿನಲ್ಲಿ ಮುಖ್ಯಮಂತ್ರಿಗಳು ಹಣವನ್ನು ಖರ್ಚು ಮಾಡಬೇಕು. ಇದು ಮನಸ್ಸೋ ಇಚ್ಛೆ ಹಣವನ್ನು ಕೊಟ್ಟಿರುವ ಬಜೆಟ್ ಎಂದು ಹೇಳಿ ಇದನ್ನು ವಿರೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಆರ್.ಧ್ರುವನಾರಾಯಣ್(ಕೊಳ್ಳೇಗಾಲ):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ 2009-10ನೇ ಸಾಲಿನ ಬಜೆಟ್ ಬಹಳ ನೀರಸವಾದಂಥ ಬಜೆಟ್ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಬಜೆಟ್‌ನಲ್ಲಿ ವಿಶೇಷವಾದಂಥ ಒತ್ತನ್ನು ಯಾವ ಇಲಾಖೆಗೆ ಕೊಡಬೇಕಾಗಿತ್ತೋ ಅಷ್ಟು ಒತ್ತನ್ನು ಅವರು ಕೊಟ್ಟಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಶಿಕ್ಷಣ ಮತ್ತು ಸಮಾಜಕಲ್ಯಾಣ

ಇಲಾಖೆಗಳಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗಿತ್ತು. ಆದರೆ, ಈ ಎಲ್ಲಾ ಇಲಾಖೆಗಳಿಗೆ ಹೆಚ್ಚಿನ ಒತ್ತನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಿ.ಟಿ.ರವಿಯವರು ಇಲ್ಲಿ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ಪತ್ರಿಕೆಗಳನ್ನು ಬಹಳ ಚೆನ್ನಾಗಿ ಓದಿದರು. ಮಾನ್ಯ ಬಾಲಕೃಷ್ಣರವರೂ ಸಹ ಕೆಲವು ಪತ್ರಿಕೆಗಳನ್ನು ಇಲ್ಲಿ ಓದಿದರು. ಪ್ರಜಾವಾಣಿ ಪತ್ರಿಕೆಯಲ್ಲಿ ಈ ಬಜೆಟ್‌ಗೆ ಸಂಬಂಧಪಟ್ಟಂತೆ "ಬಜೆಟ್‌ನ ಎಫೆಕ್ಟ್" ಎಂದು ಒಂದು ಪದ್ಯ ಬಂದಿದೆ ಆ ಪದ್ಯವನ್ನು ಇಲ್ಲಿ ಓದುವುದಕ್ಕೆ ಇಚ್ಛೆಪಡುತ್ತೇನೆ.

"ಮಠಗಳನ್ನು ಮನದಲ್ಲಿಟ್ಟು, ಮಠಗಳಿಗೆ ಕೋಟಿ ಕೋಟಿ ಕೊಟ್ಟು,
ಗುಡಿಸಲುಗಳಿಗೆ ಕೊಳ್ಳಿ ಇಟ್ಟು, ದುಡಿಯುವ ರೈತನಿಗೆ ಗುಂಡಿಟ್ಟು,
ನಿರುದ್ಯೋಗಿಗಳಿಗೆ ಮೈ ಮೇಲೆ ಬರೆ ಇಟ್ಟು ಗಹ ಗಹಿಸಿ ನಗುತ್ತಿದೆ ರಾಜ್ಯ ಬಜೆಟ್"

ಈ ಪದ್ಯ ಬಹಳ ಅರ್ಥಪೂರ್ಣವಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಈ ಪದ್ಯವನ್ನು ನಾನು ಮಾನ್ಯ ಕುಮಾರ ಸ್ವಾಮಿಯವರಿಗೆ ಕೊಟ್ಟಿದ್ದೆ. ಆದರೆ, ನೀವು ಇದನ್ನು ಓದಿಬಿಟ್ಟಿರಿ.

ಶ್ರೀ ಆರ್.ಧ್ರುವನಾರಾಯಣ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಮೇಲೆ ನಮಗೆ ನಿಜವಾಗಿಯೂ ಕೂಡ ಅಭಿಮಾನ ಇತ್ತು. ಅಂದರೆ, ಇವರು ರೈತರ ಪರ ಹೋರಾಟಗಾರರು, ರೈತ ನಾಯಕರು ಮತ್ತು ರೈತರ ಪರವಾಗಿ ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಕೊಡುತ್ತಾರೆಂಬ ನಂಬಿಕೆ ನಮಗೂ ಕೂಡ ಇತ್ತು. ಏಕೆಂದರೆ, ಅವರು ವಿರೋಧಪಕ್ಷದ ನಾಯಕರಾಗಿ ಬಹಳಷ್ಟು ಚಳುವಳಿಗಳನ್ನು ಮಾಡಿ ರೈತಪರ ಸಂಘಟನೆಗಳನ್ನು ಮಾಡಿರತಕ್ಕಂಥದ್ದು ನಮ್ಮೆಲ್ಲರಿಗೂ ಸಹ ಗೊತ್ತಿದೆ. ಆದರೆ, ಈ ವರ್ಷ ಮಂಡಿಸಿರತಕ್ಕಂಥ ಬಜೆಟ್‌ನಲ್ಲಿ ಕೃಷಿಗೆ ಹೆಚ್ಚಿನ ಒತ್ತನ್ನು ಅವರು ಕೊಟ್ಟಿಲ್ಲ. ಕಳೆದ ಸಾರಿ ಕೃಷಿಗೆ ಸುಮಾರು 2491.63 ಕೋಟಿ ರೂಪಾಯಿ ಕೊಟ್ಟಿದ್ದರು. ಈ ಸಾರಿ ಸುಮಾರು 2122.13 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅಂದರೆ, 369 ಕೋಟಿ ರೂಪಾಯಿ ಹಣವನ್ನು ಕಡಿಮೆ ಮಾಡಿದ್ದಾರೆ. ಈ ಸಾರಿ ಯೋಜನಾ ಗಾತ್ರ 29,500 ಕೋಟಿ ಇದೆ. ಅಂದರೆ, ಯೋಜನಾ ಗಾತ್ರವನ್ನು ಹೆಚ್ಚು ಮಾಡಿದ್ದಾರೆ. ಆದ್ದರಿಂದ, ಇವರು ಕೃಷಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗಿತ್ತು. ಕೃಷಿಗೆ ಹೆಚ್ಚಿನ ಒತ್ತನ್ನು ಏಕೆ ಕೊಟ್ಟಿಲ್ಲವೆಂದು ಮಾನ್ಯ ಸಿ.ಟಿ.ರವಿಯವರು ಹೇಳಬೇಕು? ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡು ಮತ್ತು ಹಸಿರು ಶಾಲನ್ನು ಹೊದಿಸಿಕೊಂಡಂಥವರು ರೈತರಿಗೆ ಹೆಚ್ಚಿನ ಹಣವನ್ನು ವಿನಿಯೋಗ ಮಾಡಬೇಕಾಗಿತ್ತು. ಇವತ್ತಿನ ದಿವಸ ಬಹಳಷ್ಟು ಜನ ರೈತರ ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ಕಾರಣ ಏನೆಂದರೆ, ಅವರಿಗೆ ಕೃಷಿ ಉದ್ಯೋಗದ ಬಗ್ಗೆ ಹೆಚ್ಚಿನ ಆಸಕ್ತಿ ಇಲ್ಲ ಆದ್ದರಿಂದ, ರೈತರಿಗೆ ವಿಶೇಷವಾದಂತ ಪ್ಯಾಕೇಜ್ ಕೊಡವ ಬಗ್ಗೆ ಮತ್ತು ಕೃಷಿಗೆ ಹೆಚ್ಚಿನ ಒತ್ತನ್ನು ಕೊಡತಕ್ಕಂಥದ್ದರ ಬಗ್ಗೆ ನಿಮ್ಮ ಕಾರ್ಯಕ್ರಮಗಳಲ್ಲಿ ಏನು ಮಾಡಲಾಗಿದೆ ಎಂಬುದನ್ನು ತಾವು ಹೇಳಬೇಕು. ಖುಷ್ಕಿ

ಬೆಳೆ ಬೆಳೆಯತಕ್ಕಂಥ ಸಣ್ಣ ರೈತರಿಗೆ 1 ಸಾವಿರ ಕೊಡತಕ್ಕಂಥದ್ದಲ್ಲ. ಮಿಶ್ರಿ ಬೆಳೆ ಬೆಳೆಯತಕ್ಕಂಥದ್ದರ ಬಗ್ಗೆ ಪ್ರೋತ್ಸಾಹ ನೀಡತಕ್ಕಂಥ ನಿಟ್ಟಿನಲ್ಲಿ ತಾವು ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಸಬೇಕು. ಆದರೆ, ಇದಕ್ಕೆ ಹೆಚ್ಚಿನ ಒತ್ತನ್ನು ತಾವು ಕೊಟ್ಟಿಲ್ಲ. ಹಾಗೆಯೇ, ಕೃಷಿ ಸಂಶೋಧನೆಗೆ ಕೂಡ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಹಣವನ್ನು ಹಂಚಿಕೆ ಮಾತಕ್ಕಂಥ ಕೆಲಸವನ್ನು ತಾವು ಮಾಡುತ್ತಿದ್ದೀರಷ್ಟೆ. ಮಠ ಮಾನ್ಯಗಳ ಬಗ್ಗೆ ಈಗಾಗಲೇ ಅನೇಕ ಜನ ಸದಸ್ಯರು ಹೇಳಿದರು. ಮಠ ಮಾನ್ಯಗಳ ಬಗ್ಗೆ ನನಗೂ ಕೂಡ ಗೌರವ ಇದೆ. ಪಾಳೇಗಾರರ ಆಡಳಿತದಲ್ಲಿ ಮತ್ತು ರಾಜ ಮಹಾರಾಜರ ಆಡಳಿತದಲ್ಲಿ ಈ ರೀತಿಯಾದ ಹಂಚಿಕೆ ಪದ್ಧತಿ ಇತ್ತು. ರಾಜರ ಹತ್ತಿರ ಹೋಗಿ ಕೇಳಿಕೊಂಡರೆ ಅವರು ಹಂಚಿಕೆ ಮಾಡುತ್ತಿದ್ದರು. ಆದರೆ, ಇವತ್ತಿನ ದಿವಸ ಪ್ರಜಾಪ್ರಭುತ್ವ ಆಡಳಿತ ನಮ್ಮ ದೇಶದಲ್ಲಿದೆ ಮತ್ತು ಪ್ರಪಂಚದಲ್ಲಿ ಪ್ರಜಾಪ್ರಭುತ್ವ ಆಡಳಿತ ಇರತಕ್ಕಂಥ ಎರಡನೇ ಒಂದು ದೊಡ್ಡ ರಾಷ್ಟ್ರದಲ್ಲಿ ಪಾಳೇಗಾರರ ಮತ್ತು ರಾಜಮಹಾರಾಜರ ಆಡಳಿತವನ್ನು ಈ ಒಂದು ಬಿಜೆಪಿ ಸರ್ಕಾರದವರು ತರುತ್ತಿದ್ದಾರೆ. ನಿಜವಾಗಿಯೂ ಇದೊಂದು ಬಹಳ ದೊಡ್ಡ ದುರಂತ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವರು ಕೃಷಿಗೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಆದ್ದರಿಂದ, ಕೃಷಿಗೆ ಹೆಚ್ಚಿನ ಒತ್ತನ್ನು ಕೊಡುವ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಕಳೆದ ಸಾಲಿನಲ್ಲಿ ನಾವುಗಳು ಶಾಸಕರಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಅಬ್ದುಲ್ ಕಲಾಂರವರು ಇಲ್ಲಿಗೆ ಬಂದು ಸುಮಾರು ಒಂದು ಗಂಟೆಯವರೆಗೆ PURA program ಬಗ್ಗೆ ಹೇಳಿದರು. PURA program ನ ಹೆಸರನ್ನು ನೀವು ಹೇಳುತ್ತಿದ್ದೀರಷ್ಟೆ. ಆ PURA program ಅಡಿಯಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ಮಾಡಬೇಕಾಗಿತ್ತೋ ಆ ಕಾರ್ಯಕ್ರಮಗಳನ್ನು ನೀವು ಹಮ್ಮಿಕೊಂಡಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಇಲಾಖೆಯಲ್ಲಿ ರೈತ ಸಂಪರ್ಕ ಕೇಂದ್ರಗಳಿವೆ. ರೈತ ಸಂಪರ್ಕ ಕೇಂದ್ರಗಳು ಇರತಕ್ಕಂಥ ಉದ್ದೇಶ ಏನೆಂದರೆ, ಇಡೀ ಆ ಭಾಗದ ರೈತರಿಗೆ ಆಧುನಿಕ ಕೃಷಿ ಬಗ್ಗೆ ಮಾಹಿತಿ ಕೊಡತಕ್ಕಂಥ ಕೇಂದ್ರಗಳಾಗಬೇಕು. ಆದರೆ, ಇವತ್ತಿನ ದಿವಸ ರೈತ ಸಂಪರ್ಕ ಕೇಂದ್ರಗಳು ಕೇವಲ ಗೊಬ್ಬರ ಮತ್ತು ಔಷಧಿಗಳನ್ನು ಮಾರಾಟ ಮಾಡತಕ್ಕಂಥ ಕೇಂದ್ರಗಳಾಗಿರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿದೆ. ಕೃಷಿ ಇಲಾಖೆಯಲ್ಲಿ ಇವತ್ತಿನ ದಿವಸ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಒಂದೊಂದು ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿಗಳೆ ಇರುವುದಿಲ್ಲ. ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಕೂಡ ಕೃಷಿ ಅಧಿಕಾರಿಗಳ ಸಮಸ್ಯೆ ಇದೆ. ಆದ್ದರಿಂದ, ತತಕ್ಷಣ ಕೃಷಿ ಇಲಾಖೆಯಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಕೆಲಸ ಕೂಡ ಆಗಬೇಕಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಹೇಳುವುದಾದರೆ, ನಮ್ಮ ಚಾಮರಾಜನಗರ ಜಿಲ್ಲೆ ಕರ್ನಾಟಕ ರಾಜ್ಯದ ಕೊನೆಯ ಜಿಲ್ಲೆಯಾಗಿದೆ. ನಮ್ಮ

ಜಿಲ್ಲೆಯ ಪಕ್ಕದಲ್ಲಿ ತಮಿಳುನಾಡು ರಾಜ್ಯದ ಸತ್ಯಮಂಗಲ ಮತ್ತು ಕೊಯಮತ್ತೂರು ಜಿಲ್ಲೆಗಳು ಸಿಗುತ್ತದೆ. ಸತ್ಯಮಂಗಲ ಮತ್ತು ಕೊಯಮತ್ತೂರು ಬೆಂಗಳೂರಿಗಿಂಥ ನಮ್ಮ ಜಿಲ್ಲೆಯಿಂದ ಬಹಳ ಹತ್ತಿರದಲ್ಲಿವೆ. ಆ ಭಾಗಕ್ಕೆ ತಮಿಳುನಾಡು ಸರ್ಕಾರ ಮೊದಲಿನಿಂದಲೂ ಹೆಚ್ಚಿನ ಒಂದು ಒತ್ತನ್ನು ಕೊಡುತ್ತಾ ಬಂದಿದ್ದಾರೆ. ಅಂದರೆ, ಅವರ ಬಜೆಟ್‌ನಲ್ಲಿ ಹೆಚ್ಚಿನ ಒತ್ತನ್ನು ಗ್ರಾಮೀಣಾಭಿವೃದ್ಧಿಗೆ ಕೊಡುತ್ತಾ ಇದ್ದಾರೆ. ತಮಿಳುನಾಡಿನಲ್ಲಿರುವ ಪ್ರತಿಯೊಂದು ಗ್ರಾಮದಲ್ಲಿ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ವ್ಯವಸ್ಥೆ ಇದೆ. ಮತ್ತೆ ಪ್ರತಿಯೊಮದು ಗ್ರಾಮದಲ್ಲಿ ಕಣಗಳು ಇವೆ. ಮತ್ತೆ ಗ್ರಾಮೀಣ ರಸ್ತೆ, ತಾಲ್ಲೂಕು ರಸ್ತೆ, ರಾಜ್ಯ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿ ಇರಬಹುದು, ಎಲ್ಲಾ ಭಾಗದಲ್ಲಿ ಒಂದೇ ರೀತಿಯಾದ ರಸ್ತೆಗಳಿವೆ. ಗ್ರಾಮೀಣಾಭಿವೃದ್ಧಿಯಲ್ಲಿ ಅವರು ಪ್ರತಿಯೊಂದು ಗ್ರಾಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರತಕ್ಕಂಥದ್ದನ್ನು ನಾವು ಹೋಗಿ ನೋಡಿದ್ದೇವೆ. ನಮ್ಮಲ್ಲಿ ಸುವರ್ಣ ಗ್ರಾಮ ಎಂದು ಮಾಡಿಕೊಂಡು ಒಂದು ಕ್ಷೇತ್ರದಲ್ಲಿ ಕೇವಲ 5 ಅಥವಾ 10 ಗ್ರಾಮ ಅಭಿವೃದ್ಧಿ ಹೊಂದಿದರೆ ಸಾಲದು. ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ದಯವಿಟ್ಟು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆ, ಈ ಸಾರಿ ಅನುದಾನವನ್ನು ಕಡಿಮೆ ಮಾಡಿದ್ದಾರೆ. ಕಳೆದ ವರ್ಷ 1593 ಕೋಟಿ ರೂಪಾಯಿ ನಿಗದಿ ಪಡಿಸಲಾಗಿತ್ತು. ಈ ಸಾರಿ 1502 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅಂದರೆ, ಈ ಬಾರಿ 90 ಕೋಟಿ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಕಡಿಮೆ ಮಾಡಿದ್ದಾರೆ. ಕೃಷಿ ಬಗ್ಗೆ ಹೆಚ್ಚಿನ ಒತ್ತನ್ನು ತಾವು ಏಕೆ ಕೊಟ್ಟಿಲ್ಲವೆಂಬ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ವಿಷಯವಾಗಿ ಮಾನ್ಯ ಸಿ.ಟಿ.ರವಿಯವರು ಬೆಳಕು ಚೆಲ್ಲಬಹುದಾಗಿತ್ತು ಮತ್ತು ಸಲಹೆ ಕೊಡಬಹುದಾಗಿತ್ತು. ಆದರೆ, ಅವರು ಕೇವಲ ಹೊಗಳುಭಟ್ಟರ ತರಹ ಹೊಗಳಿದ್ದಾರಷ್ಟೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೆಚ್ಚಿನ ಒತ್ತನ್ನು ಕೊಟ್ಟು, ಪಕ್ಕದ ರಾಜ್ಯದಲ್ಲಿ ಯಾವ ರೀತಿಯಾಗಿ ಅಭಿವೃದ್ಧಿ ಹೊಂದುತ್ತಿದೆಯೋ ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿರುವ ಹಳ್ಳಿಗಳು ಕೂಡ ಬದಲಾವಣೆಯಾಗಬೇಕೆಂದ ಅಭಿಪ್ರಾಯ ನನ್ನದಾಗಿದೆ. ಮನ್ಯ ಶಿಕ್ಷಣ ಇಲಾಖೆಯ ಸಚಿವರು ಇಲ್ಲಿಯೇ ಇದ್ದಾರೆ. ಶಿಕ್ಷಣದ ಬಗ್ಗೆ ಹೇಳುವುದಾದರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಶಿಕ್ಷಣ ಸಚಿವರಾದ ಮೇಲೆ ನಾನು ಅವರನ್ನು ಹಲವಾರು ಬಾರಿ ಭೇಟಿ ಮಾಡಿದ್ದೇನೆ. ಅನುದಾನದ ಕೊರತೆ ಇದೆ ಎಂದು ಅವರೇ ನನಗೆ ಹೇಳಿದ್ದಾರೆ. ಈ ಸಾರಿ ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ಎಲ್ಲಿ ಬಿಡುಗಡೆ ಮಾಡಿದ್ದಾರೆ? ನಮ್ಮ ಕ್ಷೇತ್ರದಲ್ಲಿ ಶಾಲಾಕೊಠಡಿಗಳ ಸಮಸ್ಯೆಯಿರುವುದರಿಂ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳು ನೆಲದ ಮೇಲೆ ಕುಳಿತುಕೊಂಡು ಪಾಠ ಕೇಳತಕ್ಕಂಥ ಪರಿಸ್ಥಿತಿ ಇದೆ. ಕಳೆದ ಸಲ ಹೊಸ ಕಾಲೇಜು ಮಂಜೂರು ಮಾಡಿಕೊಟ್ಟಿದ್ದೀರಿ. ಆದರೆ, ಅದಕ್ಕೆ ಅನುದಾನು ಬಿಡುಗಡೆಯಾಗಿಲ್ಲ ಮತ್ತೆ ಈ ಕಟ್ಟಡ ಮತ್ತು ಡೆಸ್ಕ್ ಹಾಗೂ ಬೆಂಚ್‌ಗಳ ಸಮಸ್ಯೆ ಇದೆ. ನಿಮ್ಮ ಬಜೆಟ್‌ನಲ್ಲಿ ಈ ಸಾರಿ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದೀರಾ?

ಹೆಚ್ಚಿನ ಒತ್ತನ್ನು ಶಿಕ್ಷಣಕ್ಕೆ ಕೊಟ್ಟಿಲ್ಲ. ಈ ಸಾರಿ ಅನುದಾನ ಕೊಟ್ಟಿದ್ದಾರೆಯೇ ಎಂದು ಮತ್ತು ಈ ಸಾರಿ ನಮಗೆ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಿಕೊಡುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು. ನಿಮ್ಮ ಹತ್ತಿರ ಅನುದಾನ ಇದೆಯೇ? ಇಲ್ಲವೆಂದು ಹೇಳಿ? ಈ ಸಾರಿಯ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಮತ್ತು ಗ್ರಾಮೀಣಾಭಿವೃದ್ಧಿಗೆ ಹಾಗೂ ಕೃಷಿಗೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಈ ಎಲ್ಲಾ ಕ್ಷೇತ್ರಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲಿಯೇ ಇದ್ದಾರೆ. ಅವರು ಬಹಳ ಒಳ್ಳೆಯ ಮಂತ್ರಿಗಳು. ಅವರ ಬಗ್ಗೆ ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರ ಮೇಲೆ ನನಗೆ ಬಹಳ ಅಭಿಮಾನ ಇದೆ. ಒಂದು ಪತ್ರವನ್ನು ಅವರುಗಳಿಗೆ ಕೊಟ್ಟರೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಕ್ಷಣ ನನಗೊಂದು ಪತ್ರ ಬರೆಯುತ್ತಾರೆ. ನಿಜವಾಗಿಯೂ ಕೂಡ ನನಗೆ ಸಂತೋಷವಾಗುತ್ತದೆ. ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ಒದಗಿಸುವುದಕ್ಕೆ ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಬೇಕು. ನಂಜುಂಡಪ್ಪ ವರದಿ ಪ್ರಕಾರ ನಮ್ಮ ಜಿಲ್ಲೆಗಳು ಅತ್ಯಂತ ಹಿಂದುಳಿದ ಜಿಲ್ಲೆಗಳಾಗಿವೆ. ಕಳೆದ ಸಾರಿ ಹೊಸದಾಗಿ ಕಾಲೇಜು ಮತ್ತು ಹೈಸ್ಕೂಲ್‌ಗಳು ಮಂಜೂರಾಗಿವೆ. ಆದರೆ, ಅನುದಾನದ ಕೊರತೆಯಿಂದ ಕಟ್ಟಡಕ್ಕೆ ಅನುದಾನ ಲಭ್ಯವಿಲ್ಲ. ನಮ್ಮ ಭಾಗದ ಶಾಲೆಗಳಲ್ಲಿ ಮಕ್ಕಳು ನೆಲದ ಮೇಲೆ ಕುಳಿತು ಅಭ್ಯಾಸ ಮಾಡುತ್ತಿದ್ದಾರೆ. ಅನುದಾನವನ್ನು ತಾವು ಕೊಡಬೇಕು. ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಈ ಸಾರಿ ಪರಿಶಿಷ್ಟ ಜಾತಿ ಹೆಣ್ಣು ಮಕ್ಕಳಿಗೆ ಹೊಸದಾಗಿ ಶಾಲೆಗಳನ್ನು ಕೊಡುವ ಬಗ್ಗೆ ಮಾನ್ಯ ಸಿ.ಟಿ.ರವಿಯವರು ಹೇಳಿದರು. ಈ ಯೋಜನೆಯನ್ನು ನಾವು ಕೂಡ ಸ್ವಾಗತ ಮಾಡುತ್ತೇವೆ ಇದರಲ್ಲಿ ಎರಡು ಮಾತಿಲ್ಲ. ಆದರೆ, ಈ ಇಲಾಖೆಗೆ ಎಷ್ಟು ಚೆನ್ನಾಗಿ ಮೋಸ ಮಾಡುತ್ತಾರೆಂದರೆ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳಿಗೆ ನಿಗದಿ ಮಾಡಿರತಕ್ಕಂಥ ಅನುದಾನವನ್ನು ಕಡಿಮೆ ಮಾಡಿ ಈ ಶಾಲೆಗಳಿಗೆ ಅನುದಾನ ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿಯಾಗಿ residential schoolಗಳಿಗೆ ಕೊಡುವಂತಹ ಅನುದಾನವನ್ನು ಉಪಯೋಗಿಸಿಕೊಂಡು ಇದಕ್ಕೆ ಕೊಡುವಂತಹದ್ದು. ನೀವು ಹೊಸದಾಗಿ ಕಿತ್ತೂರುರಾಣಿ ಚೆನ್ನಮ್ಮ ಹೆಸರಿನಲ್ಲಿ ಶಾಲೆಯನ್ನು ಪ್ರಾರಂಭಿಸುವುದು, ಮೊರಾರ್ಜಿದೇಸಾಯಿ ವಸತಿ ಶಾಲೆಗಳಿಗೆ ಕೊಡುವಂತಹ ಅನುದಾನವನ್ನು ಕಟ್ ಮಾಡಿ ಇಲ್ಲಿ ಕೊಡುವುದು ಯಾವ ನ್ಯಾಯ?

ಉಪಾಧ್ಯಕ್ಷರು: ತಾವು ಬೇಗನೆ ಮುಗಿಸಿ.

ಶ್ರೀ ಆರ್.ಧ್ರುವನಾರಾಯಣ: ಅದು ಹೇಗೆ ಮುಗಿಸಿ ಎಂದು ಹೇಳುತ್ತೀರಿ.

ಉಪಾಧ್ಯಕ್ಷರು: ನೀವು ಮಾತನಾಡುತ್ತಾ ಇದ್ದರೆ ಬೇರೆಯವರಿಗೆ ಅವಕಾಶ ಸಿಗುವುದಿಲ್ಲ. ಶ್ರೀ ಆರ್. ಧ್ರುವನಾರಾಯಣ: ಕಳೆದ ಬೆಳಗಾಂ ಅಧಿವೇಶನದಲ್ಲಿಯೂ ಕೂಡ ನಾನು ಮಾನ್ಯ ಮುಖ್ಯಮಂತ್ರಿಯವರು ಗಮನ ಸೆಳೆಯುವ ಸೂಚನೆಯ ಬಗ್ಗೆ

ಒಂದು ಪ್ರಶ್ನೆಯನ್ನು ಇಟ್ಟಿದ್ದೆ, ಕಳೆದ ಸಾರಿ ಮಾನ್ಯ ಕುಮಾರಸ್ವಾಮಿಯವರು ಸಮಾಜಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಬಹಳ ಚೆನ್ನಾಗಿ ಮಾತನಾಡಿದರು. 3242 ಕೋಟಿ ರೂಪಾಯಿಗಳ ಪರಿಶಿಷ್ಟ ಜಾತಿಯವರಿಗೆ Special Component Programmeನಲ್ಲಿ ನಿಗಧಿಯಾಗಿದೆ. ಫೆಬ್ರವರಿಯವರೆಗೆ ಕೇವಲ 800 ಕೋಟಿ ರೂಪಾಯಿಗಳ ಅನುದಾನವನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇನ್ನು 2400 ಕೋಟಿ ರೂಪಾಯಿಗಳ ಅನುದಾನವು ಬಿಡುಗಡೆಯಾಗಿರುವುದಿಲ್ಲ. ಅದೇ ರೀತಿಯಾಗಿ Special Component programmeನಲ್ಲಿ 1800 ಕೋಟಿ ರೂಪಾಯಿಗಳು ಪರಿಶಿಷ್ಟ ಪಂಗಡದವರಿಗೆ ಮಾತ್ರ ನಿಗಧಿಯಾಗಿರುವುದು. ಅಲ್ಲಿ 600 ಕೋಟಿ ರೂಪಾಯಿಗಳು ಮಾತ್ರ ನಿಗಧಿಯಾಗಿದೆ. year endಗೆ ಮಾರ್ಚ್ ತಿಂಗಳು ಇನ್ನು ಒಂದು ತಿಂಗಳು ಮಾತ್ರ ಇದೆ. ನೀವು ಅನುದಾನವನ್ನು ಬಿಡುಗಡೆ ಮಾಡದೆ ಪರಿಶಿಷ್ಟಜಾತಿ ವರ್ಗದ ಅಭಿವೃದ್ಧಿ ಹೇಗೆ ಸಾಧ್ಯ? ನೀವು ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ಒಂದೇ ಒಂದು ಕಾಲೇಜನ್ನು ಕೊಟ್ಟಿ ಬೆನ್ನನ್ನು ತಟ್ಟಿಸಿಕೊಂಡರೆ ಸುಮಾರು 4000 ಕೋಟಿ ರೂಪಾಯಿಗಳ ಅನುದಾನವನ್ನು ಪರಿಶಿಷ್ಟ ಜಾತಿಯವರಿಗೆ ಬಿಡುಗಡೆ ಮಾಡಬೇಕಾಗಿದೆ. ಅದನ್ನು ಇದುವರೆಗೆ ಕೂಡ ಬಿಡುಗಡೆ ಮಾಡಿಲ್ಲ. ಬೆಳಗಾಂ ಅಧಿವೇಶನವಾದ ನಂತರ ಮಾನ್ಯ ಮುಖ್ಯಮಂತ್ರಿಗಳು ಎರಡು ಬಾರಿ ಮೀಟಿಂಗ್‌ನ್ನು ಕರೆದಿದ್ದಾರೆ. ಸದನದಲ್ಲಿ ಸಮಾಜ ಕಲ್ಯಾಣ ಸಚಿವರು ಇದ್ದಾರೆ, ಅವರ ಇಲಾಖೆಗೆ ಅನುದಾನವನ್ನು ಕಡಿಮೆ ಮಾಡಿದ್ದಾರೆ, ಅವರು ಒಪ್ಪಿಕೊಳ್ಳಲಿ ಕಳೆದ ಸಾರಿಗಿಂತ ಈ ಸಾರಿ ಹೆಚ್ಚಿಗೆ ಕೊಟ್ಟಿದ್ದಾರೆಂದು ಮಾನ್ಯ ಮಂತ್ರಿಗಳು ಇರುವುದರಿಂದ ಅವರನ್ನು ಪ್ರಶ್ನೆ ಕೇಳಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ವರ್ಗದವರಿಗೆ ನಾವು ಬಹಳಷ್ಟು ಸುಧಾರಣೆ ಮಾಡಿದ್ದೇವೆಂದು ಹೇಳುತ್ತೀರಲ್ಲಾ ಈ ವರ್ಷ ಅನುದಾನ ಕಡಿಮೆ ಆಗಿರುವುದರಿಂದ ಮಾನ್ಯ ಸಚಿವರು ಹೇಳಬೇಕು. ಅನುದಾನ ಕಡಿಮೆಯಾಗಿದೆ. ಮಾನ್ಯ ಸಚಿವರು ಸುಮ್ಮನೆ ಕುಳಿತಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಕೂಡ ಸುಮ್ಮನೆ ಕುಳಿತಿದ್ದಾರೆ. ನಾವು ಅವರನ್ನು ಕೇಳುತ್ತಿದ್ದೇವೆ. ಸರ್ಕಾರದ ಒಳ್ಳೆಯ ಬಜೆಟ್ ಎಂದು ಹೇಳಿ ಬೆಂಚ್ ತಟ್ಟಿಸಿಕೊಳ್ಳುವುದು ಯಾವುದಕ್ಕೆ? ಮಠ ಮಾನ್ಯಗಳಿಗೆ, ದೇವಸ್ಥಾನಗಳಿಗೆ ಹಣ ಕೊಟ್ಟರೆ ಬೆಂಚ್ ತಟ್ಟುವುದು ಎಲ್ಲಾ. ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ಶೋಷಿತ ವರ್ಗದವರು ಏಳಿಗೆಯಾದರೆ ಸಮಾಜ ಬದಲಾವಣೆಯಾಗುವುದು. ನೀವು ಇದರಲ್ಲಿ ನಿಮ್ಮ ಸಾಧನೆಯನ್ನು ತೋರಿಸಬೇಕು. ಮಠ ಮಾನ್ಯಗಳಿಗೆ ಹಣ ಕೊಟ್ಟರೆ ನಿಮ್ಮ ಸಾಧನೆಯಾಗುವುದಿಲ್ಲ. ಹಾಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಕೂಡ ಬಹಳಷ್ಟು ಅನುದಾನ ಕಡಿತವಾಗಿದೆ. ವಿಶೇಷವಾಗಿ ಪ್ರವಾಸೋದ್ಯಮ ಬಗ್ಗೆ ಹೇಳುವುದಾದರೆ ತಾವು ಕೂಡ ಕೂರ್ಗ್ ಜಿಲ್ಲೆಯಿಂದ ಬಂದವರು. ಕೂರ್ಗ್ ಜಿಲ್ಲೆ ಎಂದರೆ ಇಡೀ ಕರ್ನಾಟಕ ರಾಜ್ಯಕ್ಕೆ ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾದಂಥ ಜಾಗ. ಕೂರ್ಗ್‌ನ್ನು

ನಾವು ದಕ್ಷಿಣದ ಕಾಶಿ ಎಂದು ಇಟ್ಟುಕೊಂಡಿದ್ದೇವೆ. ನಿಮ್ಮ sysem, British culture ಇದೆಲ್ಲವನ್ನು ನೋಡಿದರೆ ಎಲ್ಲರಿಗೂ ಸಂತೋಷವಾಗುತ್ತದೆ. ಕೂರ್ಗ್ ಜಿಲ್ಲೆಯ ತರಹ ನಮ್ಮ ಚಾಮರಾಜನಗರ ಜಿಲ್ಲೆ. ಸುಮಾರು 100ಕ್ಕೆ 45 ರಷ್ಟು ಭಾಗ ಫಾರೆಸ್ಟ್ ಏರಿಯಾ ಇದೆ. ಬಂಡಿಪುರ ಟೈಗರ್ ಪ್ರಾಜೆಕ್ಟ್ ಇದೆ. ಅದೇ ರೀತಿ ಕೆ.ಗುಡಿ.ರೆಸಾರ್ಟ್ ಇದೆ. ಮಲೈಮಹದೇಶ್ವರ ಬೆಟ್ಟವಿದೆ ಬಿ.ಆರ್.ಹಿಲ್ಸ್ ಇದೆ. ಪ್ರವಾಸೋದ್ಯಮಕ್ಕೆ ನಮ್ಮ ರಾಜ್ಯದಲ್ಲಿ ನೀವೇನಾದರೂ ಹೆಚ್ಚಿನ ಒತ್ತನ್ನು ಕೊಟ್ಟರೆ ಬಹಳಷ್ಟು ಪ್ರಗತಿಯನ್ನು ಸಾದಿಸುವುದಕ್ಕೆ ಮತ್ತು ಹೆಚ್ಚಿನ ಹೊರದೇಶ ಮತ್ತು ಹೊರ ರಾಜ್ಯದಿಂದ ಪ್ರವಾಸಿಗರು ನಮ್ಮ ರಾಜ್ಯಕ್ಕೆ ಬರುತ್ತಾರೆ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. 2 ರಿಂದ 5 ಕೋಟಿ ರೂ. ಗಳವರೆಗೆ ಕೆಲವೊಂದಕ್ಕೆ ಘೋಷಣೆ ಮಾಡಿದ್ದಾರೆ. ತಮಗೆ ಗಗನಚುಕ್ಕಿ ಮತ್ತು ಭರಚುಕ್ಕಿಯ ಬಗ್ಗೆ ಗೊತ್ತಿರಬೇಕು. ಅದು ಬಹಳ ಪ್ರಸಿದ್ಧಿಯಾದಂತಹ ಜಾಗವಾಗಿರುತ್ತದೆ. ಗಗನ ಚುಕ್ಕಿ ಮತ್ತು ಭರಚುಕ್ಕಿಯ ಅಭಿವೃದ್ಧಿಪಡಿಸುವಂತಹ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಯಾವುದೇ ರೀತಿಯಾದಂತಹ ಘೋಷಣೆಯನ್ನು ಮಾಡಿರುವುದಿಲ್ಲ. ಕಳೆದಸಾರಿ ಅಲ್ಲಿ ಜಲಪಾತೋತ್ಸವ ಎಂಬ ಕಾರ್ಯಕ್ರಮವನ್ನು ಮಾಡಿದರು. ಆ ಕಾರ್ಯಕ್ರಮಕ್ಕೆ ಸುಮಾರು 40,000 ಜನರು ಬಂದಿದ್ದರು, ಹೆಚ್ಚಿನ ಸಂಖ್ಯೆಯಲ್ಲಿ ಬೆಂಗಳೂರಿನ ಜನರು ಆಕರ್ಷಿತರಾಗಿ ಅಲ್ಲಿಗೆ ಬಂದಿದ್ದರು. ಹೊರದೇಶಗಳಿಂದಲೂ ಸಹ ಬಂದಿದ್ದರು. ಬಹಳಷ್ಟು ಪ್ರವಾಸೋದ್ಯಮಕ್ಕೆ ನಮ್ಮ ರಾಜ್ಯದಲ್ಲಿ scope ಇದೆ. ಆ ಪ್ರವಾಸೋದ್ಯಮದ ಬಗ್ಗೆ ತಾವು ತಲೆಯನ್ನು ಕೆಡಿಸಿಕೊಳ್ಳುತ್ತಿಲ್ಲ. ತಾವು ಯಾರೂ ಕೂಡ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಿಲ್ಲ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆಯನ್ನು ಸರ್ಕಾರವು ಕೊಡಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ನಮ್ಮ ಜಿಲ್ಲೆಯ ನಾಲ್ವರು ಶಾಸಕರಲ್ಲಿ ನನಗೊಬ್ಬನಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಜಿಲ್ಲೆ ಬಗ್ಗೆಯೂ ಒಂದೆರಡು ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು. ನಮ್ಮ ಜಿಲ್ಲೆಯ ಬಗ್ಗೆ ನಾವು ಮನವಿಯನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮಾಡಿಕೊಂಡಿದ್ದರು. ಮಾನ್ಯ ಸಚಿವರಾದ ಹಾಲಪ್ಪನವರು ಇಲ್ಲಿ ಎಲ್ಲಾ. ನಿಮ್ಮ ಸರ್ಕಾರ ಬಂದು 9 ತಿಂಗಳು ಆಗಿದೆ. ಅಲ್ಲಿಗೆ ಇಬ್ಬರು ಮಂತ್ರಿಗಳು ಮಾತ್ರ ಬಂದಿದ್ದಾರೆ. ಅದರಲ್ಲಿ ಒಬ್ಬರು ಉಸ್ತುವಾರಿ ಸಚಿವರಾದಂಥ ಮಾನ್ಯ ಹಾಲಪ್ಪನವರು 9 ತಿಂಗಳಲ್ಲಿ ನಾಲ್ಕು ಸಾರಿ ಬಂದಿದ್ದಾರೆ. ಆಮೇಲೆ ಗೂಳಿಹಟ್ಟಿ ಶೇಖರ್‌ರವರು ಬಂದಿದ್ದಾರೆ. ನಾವು ಕರೆದಿಲ್ಲಾ ಎಂದು ಅಲ್ಲ, ಮಾನ್ಯ ಲೋಕೋಪಯೋಗಿ ಸಚಿವರು ತಾವು review ಮಾಡುವುದಕ್ಕೆ ಬರಬೇಕು. ಹಿಂದುಳಿದಿರುವಂತಹ ಗಡಿ ಜಿಲ್ಲೆ ನಮ್ಮದು, ಡಾ:ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದ ಜಿಲ್ಲೆ ತಾವು ಅಲ್ಲಿಗೆ ಬರುವುದಿಲ್ಲ. ನಾನು ಮಾನ್ಯ ಮಂತ್ರಿಯವರು ಹತ್ತಿರ ಬಹಳಷ್ಟು ಸಲ ಬೇಡಿಕೊಂಡಿದ್ದೇನೆ. ಲೋಕೋಪಯೋಗಿ ಇಲಾಖೆ ಸಚಿವರ ಹತ್ತಿರ ನಮ್ಮ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ಕೊಡಿ ಎಂದು ಕೇಳಿದ್ದೇನೆ. ತಾವು ಮನೆಯ ಯಜಮಾನರು

ಇದ್ದಹಾಗೆ, ಒಂದು ಮನೆಯಲ್ಲಿ ನಾಲ್ಕು ಜನ ಮಕ್ಕಳು ಇದ್ದರೆ ಎಲ್ಲಾ ಮಕ್ಕಳಿಗೂ ಒಂದೇ ರೀತಿಯಾಗಿ ಊಟವನ್ನು ಹಾಕಬೇಕು. ಅಥವಾ ಯಾರಿಗೋ ಪ್ರೀತಿ ಇದ್ದರೆ ಜಾಸ್ತಿ ಹಾಕಿ, ಅದರೆ ಒಬ್ಬ ಮಗನಿಗೆ ಊಟವನ್ನು ಕೊಡದೆ ಇರುವ ಹಾಗೆ ತಾವು ಮಾಡಬೇಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಆದರೂ ಕೂಡ ನಮಗೆ 5054 ಹೆಡ್‌ನಲ್ಲಿ 3054 ಹೆಡ್‌ನಲ್ಲಿ ನಮಗೆ ವಂಚನೆಯಾಗಿದೆ, ಆ ಬಗ್ಗೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಮನೆಯಲ್ಲಿ ಎಲ್ಲಾ ಮಕ್ಕಳು ನಗುನಗುತ್ತಾ ಇದ್ದರೆ ಮನೆಯ ಯಜಮಾನರಿಗೆ ಅಂದರೆ ತಂದೆಗೆ ಸಂತೋಷವಾಗುತ್ತದೆ. ಒಬ್ಬ ಮಗ ಅಳುತ್ತಿದ್ದರೆ ನಿಮ್ಮ ಮನಸ್ಸಿನಲ್ಲಿ ಏನಾಗುತ್ತದೆ ಆ ಭಾವನೆ ನಿಮ್ಮಲ್ಲಿ ಬರಬೇಕು. ಉದಾರವಾದ ಮನಸ್ಸು broad based. ಮಂತ್ರಿಯಾದವರು ಒಂದು ಮನೆಗಲ್ಲಾ, ಒಂದು ಕ್ಷೇತ್ರಕಲ್ಲಾ, ಒಂದು ಜಿಲ್ಲೆಗಲ್ಲ, ಇಡೀ ರಾಜ್ಯಕ್ಕೆ ತಾವು ಮಂತ್ರಿಯಾಗಿದ್ದೀರಿ. ನಿಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನವನ್ನು ಹಾಕಿಕೊಳ್ಳುವುದಲ್ಲಾ. ಮುಖ್ಯಮಂತ್ರಿಗಳ ಕ್ಷೇತ್ರಗಳಿಗೆ ಸುಮಾರು Appendix-C ನಲ್ಲಿ building ಕ್ಕೆ 257 ಕೋಟಿಯಲ್ಲಿ 200 ಕೋಟಿ ರೂಪಾಯಿಗಳು ಶಿವಮೊಗ್ಗ ಜಿಲ್ಲೆಗೆ ಆಗಿದ್ದರೆ, ಶಿವಮೊಗ್ಗ ಜಿಲ್ಲೆಗೆ ಅವರು ಮುಖ್ಯಮಂತ್ರಿಗಳಾ? ಅವರು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಗಳಾ ಈ ಬಗ್ಗೆ ತಾವು ಹೇಳಬೇಕು. ಹಾಗಾಗಿ ಮಂತ್ರಿಗಳಿಗೆ broad base ಮನಸ್ಸು ಇರಬೇಕು. ತಮಗೆ ಎಷ್ಟು ವಿಶಾಲವಾದಂತಹ ಹೃದಯ ಇರುತ್ತದೆ, ಅಷ್ಟೇ ನಿಮಗೆ long life ಇರುತ್ತದೆ. ನಿಮಗೆ ಸಂಕುಚಿತ ಮನೋಭಾವನೆ ಇದ್ದು ನಮ್ಮ ಕ್ಷೇತ್ರ ಅಷ್ಟಕ್ಕೆ ಸೀಮಿತ, ನಮ್ಮಲ್ಲಿ ಉದ್ಧಾರ ಆದರೆ ಸಾಕು ಎಂದರೆ ಅಷ್ಟಕ್ಕೆ ಮಾತ್ರ ತಾವು ಸೀಮಿತವಾಗಿರುತ್ತೀರೆಂಬ ಮಾತನ್ನು ಹೇಳಬೇಕಾಗುತ್ತದೆ. ತಾವು ದೊಡ್ಡವರಾಗಿದ್ದೀರಿ, ಆದರೂ ಕೂಡ ನಾನು ಮಾನ್ಯ ಅಧ್ಯಕ್ಷರ ಮುಖೇನ ಈ ಒಂದು ತಾರತಮ್ಯ ಏನಾಗಿದೆ ಮಾನ್ಯ ಉಪಾಧ್ಯಕ್ಷರೆ ಅದು ತಮ್ಮ ಕ್ಷೇತ್ರಕ್ಕೂ ಕೂಡ ಆಗಿದೆ. ಕಳೆದ ಸಾರಿ ಹಂಚಿಕೊಂಡಿದ್ದೀರಲ್ಲ ಅದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದರಲ್ಲಿ ಬಹಳ ತಾರತಮ್ಯವಾಗಿದೆ. ಇದು ಆಗಬಾರದು. ಉದಾರವದ ಮನಸ್ಸು ಆಗಬೇಕು. ಹಾಗಾಗಿ ನಮ್ಮ ಜಿಲ್ಲೆಗೆ ಅವರು ನಮ್ಮನ್ನು ಕರೆದಿಲ್ಲವೆಂದು ಹೇಳಿದರು. ದಯಮಾಡಿ ತಾವು ನಮ್ಮ ಜಿಲ್ಲೆಗೆ ಬರಬೇಕು. ನಮ್ಮ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳು ಇದುವರೆವಿಗೂ ಬಂದಿಲ್ಲ. ನಮ್ಮ ಜಿಲ್ಲೆಯಾದ ಚಾಮರಾಜನಗರವು ಜಿಲ್ಲಾ ಕೇಂದ್ರವಾಗಿದೆ. ಚಾಮರಾಜನಗರವೆಂದರೆ ಮೂಡನಂಬಿಕೆಗಳಿಗೆ ಹೆದರಿಕೊಳ್ಳುತ್ತಾರೆ. ಅಲ್ಲಿಗೆ ಬಂದರೆ ಅಧಿಕಾರವು ಹೊರಟು ಹೋಗುತ್ತದೆ. ಕಳೆದ ಸಾರಿ ತಾವು ಸಚಿವರಾಗಿ ಅಲ್ಲಿಗೆ ಬಂದಿದ್ದೀರಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ತಾವು ಅಧಿಕಾರಕ್ಕೆ ಬಂದು 9 ತಿಂಗಳುಗಳು ಆಗಿದೆ. ಇದುವರೆವಿಗು ಇಬ್ಬರು ಸಚಿವರುಗಳು ಮಾತ್ರ ಬಂದಿದ್ದಾರೆ. ಹೆಚ್ಚಿನ ಸಚಿವರು ನಮ್ಮ ಜಿಲ್ಲೆಗೆ ಬಂದಿಲ್ಲ.

ಉಪಾಧ್ಯಕ್ಷರು: ತಾವು ಬೇಗನೆ ಮುಗಿಸಿದರೆ ಮತ್ತೆ ಬೇರೆಯವರಿಗೆ ಅವಕಾಶವಾಗುತ್ತದೆ.

ಶ್ರೀ ಆರ್.ಧ್ರುವನಾರಾಯಣ: ನಾವು ಮನವಿಯನ್ನು ಮಾಡಿಕೊಂಡಿದ್ದೆವು. ಒಂದು ತೋಟಗಾರಿಕಾ ಕಾಲೇಜು, ಅಥವಾ ಒಂದು ಸೆರಿಕಲ್ಚರ್ ಕಾಲೇಜನ್ನು ನಮಗೆ ಕೊಡಿ ಎಂದು ನಮ್ಮಲ್ಲಿ ಈಗಾಗಲೇ ಕುದೇರು ಗ್ರಾಮದಲ್ಲಿ Sericulture Training Insitutute ಇದೆ. ಅಲ್ಲಿ ಸಾಕಷ್ಟು ಜಾಗ ಇದೆ, buildingಗಳು ಸಹ ಇವೆ. ಕೃಷಿ ವಿಶ್ವವಿದ್ಯಾನಿಲಯದಿಂದ ನಮ್ಮ ಜಿಲ್ಲೆಗೂ ಒಂದು ಕೃಷಿ ಕಾಲೇಜನ್ನು ಕೊಡಿ. ನಮ್ಮ ಜಿಲ್ಲೆಯಲ್ಲಿ ಯಾವುದೇ ತರಹವಾದ ಚಟುವಟಿಕೆಗಳು ಇಲ್ಲ. ಕೃಷಿ ವಿಶ್ವವಿದ್ಯಾಲಯ ಇರಬಹುದು, ತೋಟಗಾರಿಕೆ ಇರಬಹುದು, ವೆಟರ್ನರಿ ಇರಬಹುದು, ಅಲ್ಲಿ ಯಾವುದೇ ಚಟುವಟಿಕೆಗಳು ಇರುವುದಿಲ್ಲ. ಹಾಗಾಗಿ ನಮಗೂ ಸಹ ಒಂದು ಕಾಲೇಜನ್ನು ಕೊಡಿ ಎಂಬ ಮನವಿಯನ್ನು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಭಾಗಕ್ಕೆ ಕೆರೆಗಳೇ ಜೀವಾಳ. ಕಾವೇರಿ ನೀರಾವರಿ ನಿಗಮ ಇದೆ. ಈಗಾಗಲೆ ತಮಗೂ ಗೊತ್ತಿದೆ. ಕಾವೇರಿ ಟ್ರಿಬ್ಯುನಲ್ ಇರುವುದರಿಂದ ಹೆಚ್ಚಿನ ಅನುದಾನ ನಬಾರ್ಡ್‌ನಿಂದ ಬರುವುದಿಲ್ಲ. ರಾಜ್ಯ ಸರ್ಕಾರದಿಂದ, ಕಾವೇರಿ ನೀರಾವರಿ ನಿಗಮದಿಂದ ಹೆಚ್ಚಿನ ಅನುದಾನ ನಮ್ಮ ಕೆರೆಗಳಿಗೆ ಕೊಡಬೇಕು. 4 ಜನ ಕಾಂಗ್ರೆಸ್ ಶಾಸಕರು ಇದ್ದಾರೆಂದು ಆ ಜಿಲ್ಲೆಯನ್ನು ಕಡೆಗಣಿಸಬೇಡಿ. ನಮ್ಮ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ತಾವು ಬಿಡುಗಡೆ ಮಾಡಬೇಕು. ಈ ಒಂದು ಬಜೆಟ್‌ನಲ್ಲಿ 15 ಕೋಟಿ ರೂಪಾಯಿಗಳನ್ನು ಅರಶಿನ ಮಾರಾಟ ಕೇಂದ್ರಕ್ಕೆ ತಾವು ಕೊಟ್ಟಿದ್ದೀರಿ. ನಾನು welcome ಮಾಡುತ್ತೇನೆ. ಅದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಹ ತಿಳಿಸುತ್ತೇನೆ. ಅದೇ ರೀತಿಯಾಗಿ 5 ಕೋಟಿ ರೂಪಾಯಿಗಳನ್ನು ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ, ಬಿಳಿರಂಗನಬೆಟ್ಟ ಅಭಿವೃದ್ಧಿ ಎಂದು ಹಾಕಿದ್ದೀರಿ. ಆದರೆ ಅದು ಸಾಲುವುದಿಲ್ಲ. ಏಕೆಂದರೆ ಇಡೀ ರಾಜ್ಯದಲ್ಲಿ ಕುಕ್ಕೆ ಸುಬ್ರಮಣ್ಯ ಬಿಟ್ಟರೆ ಮಲೇಮಹದೇಶ್ವರ ದೇವಸ್ಥಾನದಿಂದಲೇ revenue ಜಾಸ್ತಿ ಬರುತ್ತದೆ. ಹಾಗಾಗಿ ತಾವು ಹೆಚ್ಚಿನ ಅನುದಾನವನ್ನು ನಮ್ಮ ಜಿಲ್ಲೆಗೆ ಕೊಡಬೇಕು. ತಾವು ಮನೆಯ ಯಜಮಾನರು ಇದ್ದ ಹಾಗೆ ಎಲ್ಲರನ್ನು ತಾವು ವಿಶಾಲ ಮನೋಭಾವನೆಯಿಂದ ನೋಡಬೇಕು. ನೊಂದವರನ್ನು ತಾವು ಮೇಲೆತ್ತುವಂತಹ ಕೆಲಸವನ್ನು ಮಾಡಬೇಕು. ತಾವೆಲ್ಲಾ ಬಸವಣ್ಣನವರ ಅನುಯಾಯಿ ಎಂದು ಹೇಳುತ್ತೀರಿ. ಮಾನ್ಯ ಯಡಿಯೂರಪ್ಪನವರು ಕೂಡ ಬಜೆಟ್ ಪುಸ್ತಕದಲ್ಲಿ ತಿಳಿಸಿದ್ದಾರೆ. ನಾನು ಬಸವಣ್ಣನವರ ಅನುಯಾಯಿ ಎಂದು ಹೇಳಿದ್ದಾರೆ. ಬಸವಣ್ಣನವರು ಏನು ಹೇಳಿದ್ದಾರೆ.

ಉಪಾಧ್ಯಕ್ಷರು: Please ತಾವು ಮುಗಿಸಿ.

ಶ್ರೀ ಆರ್.ಧ್ರುವನಾರಾಯಣ್: ಬಸವಣ್ಣನವರು ಏನು ಹೇಳಿದ್ದಾರೆ "ಇವನಾರವ, ಇವನಾರವ ಅನ್ನುವರಯ್ಯ, ಎಲ್ಲರೂ ಇವ ನಮ್ಮವ, ನಮ್ಮವ ಅನ್ನಿರಯ್ಯಾ" ಎಂದು ಹೇಳುತ್ತಾರೆ. ನೀವು ಅದನ್ನು ಮರೆತಿದ್ದೀರಿ. ನೀವು ನಿಜವಾದ ಬಸವಣ್ಣನವರ ಅನುಯಾಯಿಗಳಾಗಿದ್ದರೆ "ಸರ್ವರಿಗೂ ಸಮಪಾಲು" ಎಂದು ಹೇಳುತ್ತಾರೆ. ಅದನ್ನು ತಾವು ಕಾರ್ಯರೂಪದಲ್ಲಿ ತರಬೇಕೆಂಬ ಒತ್ತಾಯವನ್ನು ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳು.

ಉಪಾಧ್ಯಕ್ಷರು: ತಾವು 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಆಯಿತು, ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಬಹಳ ಸುದೀರ್ಘವಾಗಿ ನಮ್ಮ ವಿರೋದಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀ ಸಿದ್ದರಾಮಯ್ಯಜೀಯವರು ಬಹಳ ಸುದೀರ್ಘವಾಗಿ ಈ ಬಜೆಟ್‌ನ ಮೇಲೆ ಮಾತನಾಡಿರುವುದನ್ನು ಕೇಳಿದ ಮೇಲೆ ಮತ್ತೆ ಅದನ್ನೆ ರಿಪೀಟ್ ಮಾಡುವುದರಲ್ಲಿ ಏನಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಕೆಲವು ಸಲಹೆಗಳನ್ನು ನಾನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಚೆಪಡುತ್ತೇನೆ. ನಾನು ಈಗ ತಾನೇ ಈ ಬಜೆಟ್ directionless ಇದರಲ್ಲಿ ಹೋದಸಾರಿ ಇಟ್ಟಿರುವಂತಹ ಹಣ 30% ಖರ್ಚಾಗಿಲ್ಲ. ಏಕೆಂದರೆ ನಾನು ಸಹ ಒಂದು ಪ್ರಶ್ನೆಯನ್ನು ಹಾಕಿದ್ದೇ. ನಿಮಗೆ ಅದು ಗೊತ್ತಾಗಿದೆ. ಅದು ಅಲ್ಲದೆಯೇ ಇವತ್ತು recession ಇದ್ದರೂ ಕೂಡ ನಮ್ಮ plan outsize reduce ಮಾಡದೆಯೇ ಮತ್ತೆ ಜಾಸ್ತಿ ಮಾಡಿರುವುದು these are all not good practices ಎಂದು ತಮಗೆ ಗೊತ್ತಿದೆ. ಈಗ ನಮ್ಮ fiscal Responsibility Act and Management Actನ್ನು ಯಾವ ರೀತಿಯಾಗಿ ತಿರುಚಿದ್ದಾರೆ, ಅದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸಿದ್ದರಾಮಯ್ಯನವರು ಹೇಳಿದ್ದಾರೆ. ಅದರ ವಿವರಣೆಗೆ ಹೋಗುವುದಿಲ್ಲ. ಒಂಧೇ ಒಂದು ಪ್ರಮುಖವಾದಂತಹ ವಿಷಯವನ್ನು ಹೈಲೈಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊಟ್ಟಮೊದಲನೆಯದಾಗಿ ಡಾ:ನಂಜುಂಡಪ್ಪನವರ ವರದಿ. ಇದರಲ್ಲಿ 2,570 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ, ಈ ಸಾರಿ ಅದಕ್ಕೆ ಎಷ್ಟು ಬಿಡುಗಡೆಯಾಗಿದೆ ಎಂದು ನೀವೇ ತರಿಸಿ ನೋಡಿಬಿಡಿ. ನೀವು 2,500 ಕೋಟಿ ರೂಪಾಯಿಗಳನ್ನು ಏತಕ್ಕಾಗಿ ಕೊಡತ್ತೇವೆಂದು ಹೇಳಿದ್ದೀರಿ this should be an additional investment. ಅಂದರೆ ಅಗತ್ಯಕ್ಕಂತಹ ಬಜೆಟ್‌ಗಿಂತ additional ಕೊಡಬೇಕೆಂದು ಇದೆ. ಆದರೆ ನೀವು ಆ ಬಗ್ಗೆ ತರಿಸಿನೋಡಬೇಕು. ಏಕೆಂದರೆ, ಯಾವ ರೀತಿಯಾಗಿ ಸರ್ಕಾರ

ನಡೆದಿದೆ ಎಂದು ನನಗೆ ಬಹಳ ವ್ಯಥೆಯಾಗುತ್ತದೆ. ಈಗ ಏನಾಗುತ್ತಿದೆ ಎಂದರೆ, ನೀವು ರೂಲಿಂಗ್ ಪಾರ್ಟಿ ಎಂದು, ನೀವು, opposition party ಎಂದು ನಾವು ಒಬ್ಬರಿಗೊಬ್ಬರು ಕಚ್ಚಾಡುವುದರಿಂದ ಇದರ ಲಾಭ ಯಾರಿಗೆ ಎಂದರೆ ಅದನ್ನು ಅಧಿಕಾರಿಗಳು ಪಡೆದುಕೊಳ್ಳುತ್ತಿದ್ದಾರೆ. ಇವತ್ತು ಏನಾಗುತ್ತಿದೆ ಎಂದರೆ, ರೂಲಿಂಗ್ ಪಾರ್ಟಿಯವರು ತಾವು implement ಮಾಡತಕ್ಕಂತಹ ಕಾರ್ಯಕ್ರಮಗಳನ್ನು proper ಆಗಿ monitor ಮಾಡುತ್ತಿಲ್ಲ. ನಾವು oppositionನವರು point out ಮಾಡಿದರೆ ಟೀಕೆ ಮಾಡುತ್ತಿದ್ದಾರೆಂದು ತಿಳಿದುಕೊಂದು ಬೇಕೆಂದಲೇ ignore ಮಾಡುತ್ತಿದ್ದಾರೆ. ಇದರ ಲಾಭ ಯಾರಿಗೆ ಆಗುತ್ತಿದೆ ಎಂದರೆ ಅಧಿಕಾರಿಗಳಿಗೆ ಆಗುತ್ತಿದೆ. ಇದರ ಲಾಸ್ ಯಾರಿಗೆ ಆಗುತ್ತಿದೆ ಎಂದರೆ ಈ ರಾಜ್ಯದ ಜನರಿಗೆ ಆಗುತ್ತಿದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಬೇರೆ ಬೇರೆ ಇಲಾಖೆಗಳಲ್ಲಿ Special Development Plan ಎಂದು 2500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ಹಂಚಿಕೆ ಮಾಡಿದಾಗ ಆಯಾ ಇಲಾಖೆಯವರು ಸಂಬಂಧಪಟ್ಟ ಸಚಿವರುಗಳು ಸಂಬಂಧಟ್ಟಂತಹ ಕಾರ್ಯದರ್ಶಿಗಳು ಏನಾದರೂ action plan ಮಾಡ್ಡಿದ್ದಾರೆಂದು ಸ್ವಲ್ಪ ತೆಗಿಸಿ ನೋಡಿದ್ದೀರಾ? ಅವರು action plan ಮಾಡಿಲ್ಲ. Action Planನ್ನು ಕೊಡಿ ಎಂದು ನಾನು ಕೇಳಿದ್ದೆನೆ. ಈ Head of Accountನಲ್ಲಿ ನಿಮಗೆ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ, ಏನು action plan ಮಾಡಿದ್ದಾರೆಂದರೆ, ಯಾರು action plan ಮಾಡ್ಡಿರುವುದಿಲ್ಲ. ಏನು ongoing works ಇದೆ ಅದಕ್ಕೆ ಹಣವನ್ನು ಕೊಡುತ್ತಿದ್ದಾರೆ. KNNLಗೆ 175 ಕೋಟಿ ರೂಪಾಯಿಯನ್ನು ಕೊಟ್ಟಿದ್ದೀರಿ. ಅವರು ongoing worksಗೆ ಕೊಟ್ಟಿದ್ದಾರೆ. ಹೋದ ಸಾರಿ ಆಶ್ರಯ ಯೋಜನೆಯಲ್ಲಿ 300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದು routine ಆಗಿ ಎಲ್ಲಕ್ಕೂ ಹಂಚಿದ್ದಾರೆ. ಹೀಗಾಗಿ ಈ ರಾಜ್ಯದ ಜನತೆ ನಾವು ನಂಜುಂಡಪ್ಪನವರ ವರದಿಯಲ್ಲಿ 2500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ನಾವು ರಾಜ್ಯದ ಜನರಿಗೆ ಮೋಸ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಈ ಬಗ್ಗೆ ಜನರಿಗೆ ಗೊತ್ತಾಗುತ್ತದೆ. ನಮ್ಮ ಭಾಗದ ಜನರಿಗಂತೂ ಗೊತ್ತಾಗಿದೆ. ಅದಕ್ಕಾಗಿ ಇದನ್ನು ತಾವು ಸರಿಪಡಿಸಬೇಕು. ಮಾನ್ಯ ಸಚಿವರು ಟೈಮ್ ಕಡೆಗೆ ತೋರಿಸುತ್ತಿದ್ದಾರೆ. ನಾನು ಅಮೇಲೆ ಏನೇನು point out ಮಾಡುತ್ತೇನೆ. ಏನೇನು ಮಾಡಬಹುದು ಇಲ್ಲಿ ತಪ್ಪಾಗಿದೆ HKDBಗೆ, ಮಲೆನಾಡು ಏರಿಯಾಗೆ, ಬಾರ್ಡರ್ ಏರಿಯಾಗೆ ನೀವು ಹಣವನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದೀರಿ. ಹಣವನ್ನು ಕಡಿಮೆ ಕೊಟ್ಟಿದ್ದೀರಿ. ಇವತ್ತು ಅದಕ್ಕೆ ಹಣವನ್ನು ಜಾಸ್ತಿ ಕೊಡಬೇಕು. ಇವತ್ತು ಆರೋಗ್ಯ ಕ್ಷೇತ್ರದಲ್ಲಿ ನಾನು 2–3 ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದೇನು ಸುವರ್ಣ ಆರೋಗ್ಯ ಸುರಕ್ಷಾ

ಯೋಜನೆ ಎಂದು ಸರ್ಕಾರ ಮಾಡಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. It is a very good scheme. ಆದರೆ ಅದನ್ನು proper ಆಗಿ implement ಮಾಡುವಂತಹ ಪ್ರಯತ್ನವನ್ನು ಸರ್ಕಾರವು ಮಾಡಬಹುದು. ಇವತ್ತು ಬಿಪಿಎಲ್ ಕೆಳಗೆ ಇರುವಂತಹ ಎಲ್ಲಾ ಜನರಿಗೆ 1,50,000 ತನಕ ಏನು insurance ಮಾಡಿದ್ದೀರಿ, ಅದನ್ನು ಸರ್ಕಾರ ಕೊಡುತ್ತದೆ ಎಂದು ಹೇಳಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ತಾವು proper ಆಗಿ implement ಮಾಡುವಂತಹ ಪ್ರಯತ್ನವನ್ನು ಮಾಡಬೇಕು. ಆದರೆ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಡಾಕ್ಟರ್ಸ್ ಮತ್ತು specialistsಗಳು ಇಲ್ಲವೆಂದು ನಾನು ಬೆಳಿಗ್ಗೆ ಸದನದ ಗಮನಕ್ಕೆ ತಂದಿದ್ದೇನೆ. ಮಾನ್ಯ ಸಚಿವರಿಗೂ ಇದರ ಬಗ್ಗೆ ಯಾವ ರೀತಿಯಾಗಿ ನಾವು ಪರಿಹಾರ ಮಾಡಬೇಕೆಂದು ಸಲಹೆಯನ್ನು ಸಹ ಮಾಡಿದ್ದೇನೆ. ಇಲ್ಲಿ ಬಹಳ ಮುಖ್ಯವಾಗಿರುವಂತಹದ್ದು ಆರೋಗ್ಯ ಇಲಾಖೆಯಲ್ಲಿ ಔಷಧಿಯನ್ನು ಖರೀದಿ ಮಾಡುವಂತಹ ಪ್ರಕ್ರಿಯೇ ಏನು ಇದೆ, ಇದನ್ನು Drug Logistics Societyಮುಖಾಂತರ ಈ ರಾಜ್ಯದಲ್ಲಿ ಪ್ರತಿವರ್ಷ 70–80 ಕೋಟಿ ರೂಪಾಯಿಗಳು ಇವತ್ತು drugs purchase ಅಗುತ್ತದೆ ಅದರ ಬಹಳ ದೊಡ್ಡ ಅಪಾಯಕಾರಿಗಳು ಬಹಳ ಹಿಂದೆ ಆಗಿತ್ತು. ಈ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕೆಂದು ಹೇಳಿ ಕಾಗೋಡು ತಿಮ್ಮಪ್ಪನವರು ಆರೋಗ್ಯ ಸಚಿವರಾಗಿದ್ದಾಗ ಈ Drug Logistics Society ಮಾಡಿ ಇವತ್ತು ಎಲ್ಲಾ ಕೇಂದ್ರಗಳಿಂದಲೂ ಕೂಡ ಮಾಡಿದ್ದಾರೆ, ಇದೊಂದು ಒಳ್ಳೆಯ system ಆಗಿದೆ. ನಾನು ಈ systemಗೆ support ಮಾಡುತ್ತೇನೆ. ಆದರೆ ಇದರಲ್ಲಿ ಪಾರದರ್ಶಕತೆ ಇರಬೇಕು. ಇದರಲ್ಲಿ ಏನಾಗಿದೆ ಎಂದರೆ ಟೆಂಡರ್ ಕರೆದು 4–4 ತಿಂಗಳುಗಳವರೆವಿಗೂ ನೀವು finalize ಮಾಡುವುದಿಲ್ಲ. ಮೊನ್ನೆ ತಾನೇ ಯಾರೋ ಒಬ್ಬ ಸದಸ್ಯರು ಹೇಳುತ್ತಿದ್ದರು. ಈಗ Rabipur. ಈ Rabipur ಎನ್ನುವಂತಹದ್ದು ಏನು ಹುಚ್ಚುನಾಯಿ ಕಡೆಯುವುದಕ್ಕೆ ಚುಚ್ಚುಮದ್ದನ್ನು ಕೊಡುತ್ತೇವೆಲ್ಲಾ vaccine ಅದನ್ನು higher rateಗೆ purchase ಮಾಡುತ್ತಿದ್ದಾರೆಂದು ಇದೆ. ಅದಕ್ಕಾಗಿ ನಾನು ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಚೆಪಡುತ್ತೇನೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ತಾವು ಮಾಡಬೇಕು. ಇಲ್ಲಿ ಅರೋಗ್ಯ ಸಚಿವರು ಇಲ್ಲಾ. ಇದನ್ನು ಯಾರು ನೋಟ್ ಮಾಡಿಕೊಳ್ಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಇಲಾಖೆಯವರು ಯಾರು ಇಲ್ಲ. ಆದರೆ ನಾವು ಹೇಳಬೇಕು ಅವೆಲ್ಲವೂ recordಗೆ ಹೋಗಲಿ ಎಂದು ಹೇಳಬೇಕಾಗಿದೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ತಾವು ಮಾಡಬೇಕು. ಡಾ:ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದಿರುವಂತಹ ತಾಲ್ಲೂಕಿಗೆ up-gradation of PHC

to CHC ಮಾಡಬೇಕು. ಹೊಸದಾಗಿರುವಂತಹ PHCಗಳನ್ನು ಮಂಜೂರು ಮಾಡುವಂತಹದ್ದನ್ನು ತಾವು ಮಾಡಬೇಕು. ಇವತ್ತು RDPRನಲ್ಲಿ ನಾನು ಪೇಪರ್ ನೋಡಿ ಒಂದು ತರಹ ಖುಷಿಯೂ ಕೂಡ ಆಯಿತು, ಒಂದು ಸಲ ದುಃಖವು ಸಹ ಆಯಿತು. ಇವತ್ತು ಬೆಳಗಿನ ಪೇಪರ್‌ನಲ್ಲಿ ಏನಿದೆ ಎಂದರೆ ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ರೋಡ್‌ಗೋಸ್ಕರ 1500 ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆ. 1500 crores ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೀವು ರೋಡ್ ಮಾಡುತ್ತೀರಿ. ಆದರೆ ಕರ್ನಾಟಕ ರಾಜ್ಯಕ್ಕೆ ಇವತ್ತು ರೋಡ್‌ಗೋಸ್ಕರ RDPRಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಸರ್ಕಾರವು ನೋಡಬೇಕು. ಬೆಂಗಳೂರು ಮಹಾನಗರ ಪಾಲಿಕೆಗೆ 1500 ಕೋಟಿ ರೂಪಾಯಿಗಳನ್ನು ಕೊಟ್ಟರೆ ನಮಗೆ 1000 ಕೋಟಿ ರೂಪಾಯಿಗಳು RDPRನಲ್ಲಿ ನಮ್ಮ ರಸ್ತೆಗಿಲ್ಲ. ಆಂದರೆ ಈ ರಾಜ್ಯ ಇವತ್ತು ಗ್ರಾಮೀಣ ಪ್ರದೇಶದಲ್ಲಿರುವಂತಹ ಜನರಿಗೆ ಮಾಡತಕ್ಕಂತಹ ನ್ಯಾಯವೇ? ನೀವು RDPRಗೆ rural roadsಗಳಿಗೆ ಜಾಸ್ತಿ ಹಣವನ್ನು ಕೊಡದೆ ಹೋದರೆ ಮತ್ತೆ ಯಾವ ರೀತಿಯಾಗಿ ಸುಧಾರಣೆಯನ್ನು ಮಾಡುವುದಕ್ಕಾಗುತ್ತದೆ? ಈ ಸರ್ಕಾರ ಅಂದಮೇಲೆ ಒಂದು ತರ್ಕಬದ್ಧವಾಗಿರುವಂತಹ ಅಭಿವೃದ್ಧಿಯನ್ನು ಮಾಡಬೇಕಾದರೆ ಈ ಬಗ್ಗೆ ಮಾನ್ಯ ಸಚಿವರು ಹೇಳಿದರು. 1,50,000 ಇವತ್ತು ಗ್ರಾಮೀಣ ರಸ್ತೆಗಳು ಇವೆ, ನೀವು ಅದಕ್ಕೆ improve ಮಾಡತಕ್ಕಂತಹ ಕ್ರಮಬದ್ಧವಾಗಿರುವಂತಹ time bound programmeನ್ನು ಹಾಕಿಕೊಂಡಿದ್ದೀರಾ? ಈ ವರ್ಷ 500 ಕಿ.ಮಿ. ಮಾಡುತ್ತೇವೆ. ಈ ವರ್ಷ 5000 ಕಿ.ಮಿ.ಮಾಡುತ್ತೇವೆ. 10,000 ಕಿ.ಮಿ.ರಸ್ತೆಯನ್ನು ಮಾಡುತ್ತೇವೆ ಏನು ಇಲ್ಲ. ಸರ್ಕಾರವನ್ನು ಕೇಳಿದರೆ ಹಣವೇ ಇಲ್ಲವೆಂದು ಹೇಳುತ್ತೀರಿ. ಇಲ್ಲಿ ಸರ್ಕಾರದ್ದು ಏನು ಆದ್ಯತೆ ಇದೆ. ಇವತ್ತು ಸದಸ್ಯರು ಹೇಳಿದರು ಎಲ್ಲದರಲ್ಲಿಯೂ ಕಡಿಮೆ ಮಾಡಿದ್ದೇವೆಂದು ಹೇಳಿದ್ದೀರಿ. ಯಾವುದನ್ನು ಜಾಸ್ತಿ ಮಾಡಿದ್ದೀರಿ? ನೀವು ಯಾವುದಕ್ಕೆ ಜಾಸ್ತಿ ಮಾಡಿದ್ದೀರೆಂದು ನಾನು ಹೇಳುತ್ತೇನೆ. ನೀವು ಜಾಸ್ತಿ ಮಾಡಿರುವುದು urban developmentಗೆ. ಏಕೆಂದರೆ ನಿಮಗೆ vote bank urban areaದಲ್ಲಿದೆ ಎಂದು ಹೇಳಿ ನೀವು ಅಲ್ಲಿಗೆ ಹಣವನ್ನು ಜಾಸ್ತಿ ಕೊಟ್ಟಿದ್ದೀರಿ. Urban areaದಲ್ಲಿರುವ slumsಗೆ ನೀವು ಕೊಟ್ಟಿರುವುದಿಲ್ಲ. ನೀವು ದೊಡ್ಡದೊಡ್ಡ ವ್ಯಾಪಾರಿಗಳ ಮನೆಯ ಹತ್ತಿರ ರೋಡ್ ಮಾಡಿದ್ದೀರಿ. ಶ್ರೀಮಂತರ ಮನೆಗಳಿಗೆ ರಸ್ತೆಗಳನ್ನು ಮಾಡತಕ್ಕಂತಹ ಕೆಲಸವನ್ನು ಈ ಸರ್ಕಾರದ ಆದ್ಯತೆ ಎಂದು ಮಾಡಿದ್ದೀರಿ. ಇಲ್ಲವೆಂದು ನಾನು ಹೇಳುವುದಿಲ್ಲ. ಈ ರಾಜ್ಯದಲ್ಲಿರುವಂತಹ ಶ್ರೀಮಂತ ವರ್ಗಕ್ಕೆ ಒಲೈಸುವಂತಹ ಕೆಲಸವನ್ನು ಈ ಸರ್ಕಾರವು ಮಾಡಿದೆ. Urban development ಹೆಚ್ಚಿಗೆ ಹಣವನ್ನು ಕೊಡುವಂತಹ ಕೆಲಸವನ್ನು ಸರ್ಕಾರವು ಮಾಡಿದೆ. ಆದರೆ urbanನಲ್ಲಿರುವಂತಹ poorಗಳಿಗೆ

ನೀವು ಮಾಡಿಲ್ಲ. slumನಲ್ಲಿರುವಂತಹವರಿಗೆ ನೀವು ಜಾಸ್ತಿ ಹಣವನ್ನು ಕೊಟ್ಟಿಲ್ಲ. ಯಾವುದೋ ಒಂದು ಸಮುದಾಯಕ್ಕೆ 50 ಲಕ್ಷ ಮತ್ತು 1 ಕೋಟಿ ರೂಪಾಯಿಗಳನ್ನು ಕೊಡುವುದರಿಂದ ಸಮುದಾಯವು ಉದ್ಧಾರವಾಗುವುದಿಲ್ಲ. ಆ ಒಂದು ಸಮಾಜವನ್ನು ಎತ್ತಿ ಹಿಡಿಯುವಂತಹ ಕೆಲಸ ಮತ್ತು ಅಭಿವೃದ್ಧಿ ಮಾಡುವಂತಹ ಕೆಲಸಕ್ಕೆ ಆದ್ಯತೆಯನ್ನು ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಈ ಸರ್ಕಾರಕ್ಕೆ ಹೇಗೆ ಪ್ಲಾನ್ ಮಾಡಬೇಕು. ಇವತ್ತು ನಾವು road developmentನ್ನು ತೆಗೆದುಕೊಳ್ಳಬೇಕಾದರೆ ನಾವು ಎಲ್ಲಾ schemesನಲ್ಲಿರುವಂತಹ ಹಣವನ್ನು convergence ಮಾಡಿ ನೀವು time bound programme ಹಾಕಿಕೊಂಡು ಮಾಡತಕ್ಕಂತಹದ್ದು ಸರ್ಕಾರದವರು ಮಾಡಿಲ್ಲ. ಅದಕ್ಕೂ ಬಹಳ ವ್ಯಥೆಯನ್ನು ಪಡಬೇಕಾಗುತ್ತದೆ. ಇವತ್ತು National Rural Employment Gurantee Schmeನಲ್ಲಿ ಈ ಸರ್ಕಾರ ನಮ್ಮ ರಾಜ್ಯದಲ್ಲಿ ಹಣವನ್ನು ಉಪಯೋಗ ಮಾಡಲಿಲ್ಲ. ನೀವು ಅದೇ ಗುಜರಾತ್‌ಗೆ ಹೋಗಿ ಅವರು 3000 ಕೋಟಿ ರೂಪಾಯಿಗಳನ್ನು ಉಪಯೋಗ ಮಾಡಿದ್ದಾರೆ. ಆಂಧ್ರಕ್ಕೆ ಹೋಗಿ 2000 ಕೋಟಿ ರೂಪಾಯಿಗಳನ್ನು ಇದರಲ್ಲಿ ಉಪಯೋಗ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಏತಕ್ಕಾಗಿ ಉಪಯೋಗ ಮಾಡುವುದಕ್ಕಾಗಲಿಲ್ಲವೆಂದರೆ ಇವತ್ತು ಸರ್ಕಾರಕ್ಕೆ ಹಣವನ್ನು ಉಪಯೋಗೆ ಮಾಡಬೇಕೆನ್ನುವಂತಹ ಇಚ್ಚಾಶಕ್ತಿ ಇಲ್ಲ, ಮತ್ತು decentralisation ನಲ್ಲಿ ಈ ಸರ್ಕಾರಕ್ಕೆ ಯಾವುದೇ ಬದ್ಧತೆ ಇಲ್ಲ. ನೀವು decentralize ಮಾಡದೆ ಹೋದರೆ, ನೀವು ಅಧಿಕಾರವನ್ನು ಜನರ ಕೈಗೆ ಕೊಡದೇ ಹೋದರೇ ಈ ರಾಜ್ಯ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಇನ್ನೊಂದು ಮಾತನ್ನು ಹೇಳುವುದಕ್ಕೆ ನಾನು ಇಚ್ಚೆಪಡುತ್ತೇನೆ. ಏನೆಂದರೆ administrative reforms, ಲೋಕಾಯುಕ್ತರು ಬಹಿರಂಗವಾಗಿ ಹೇಳುತ್ತಿದ್ದಾರೆ. ನಮಗೆ ಅಧಿಕಾರಿ ಕೊಡಿ ಎಂದು. ಈ ಸರ್ಕಾರ ನಮಗೆ ಅಧಿಕಾರವನ್ನು ಕೊಡುತ್ತಿಲ್ಲ. ಸರ್ಕಾರ ಪರೋಕ್ಷವಾಗಿ corruptionಗೆ support ಮಾಡುತ್ತಿದೆ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಲೋಕಾಯುಕ್ತರಿಗೆ ಸಂಪೂರ್ಣವಾದಂತಹ ಅಧಿಕಾರವನ್ನು ಕೊಡಬೇಕು. ಏನು ತಪ್ಪು ಇದೆ, ನಾವೆಲ್ಲರೂ ಸಿದ್ಧವಾಗಿದ್ದೇವೆ ಲೋಕಾಯುಕ್ತರಿಗೆ ಅಧಿಕಾರ ಕೊಡುವುದಕ್ಕೆ. ನೀವು ಶಾಸಕರನ್ನು ಒಳಪಡಿಸಬೇಕು, ಮಂತ್ರಿಗಳನ್ನು ಒಳಪಡಿಸಬೇಕು, ಮತ್ತು ಮುಖ್ಯಮಂತ್ರಿಯೂ ಕೂಡ ಲೋಕಾಯುಕ್ತ perviewನಲ್ಲಿ ಬರುವಂತಹ ಕಾಯಿದೆಯನ್ನು ತನ್ನಿ ನಾವು ಅದಕ್ಕೆ support ಮಾಡುತ್ತೇವೆ. ನಾವು ರಾಜ್ಯದ ಜನರಿಗೆ ತೋರಿಸಬೇಕಾಗುತ್ತದೆ, ನಾವು ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಮಾಡುತ್ತೇವೆ, ಭ್ರಷ್ಟಚಾರಕ್ಕೆ ನಮ್ಮ ರಾಜ್ಯದಲ್ಲಿ ಅವಕಾಶವಿಲ್ಲ. ಈ ಸದನದಲ್ಲಿ ಸತ್ಯದ ಪರ ಮತ್ತು ನ್ಯಾಯದ ಪರ ಮಾತನಾಡುವಂತಹ ಜನರು

ಇದ್ದಾರೆಂದು ನಾವು ಈ ರಾಜ್ಯದ ಜನರಿಗೆ ತೋರಿಸಬೇಕಾಗುತ್ತದೆ. ನಮ್ಮಲ್ಲಿ ವಿಶ್ವಾಸವನ್ನು ಇಟ್ಟು ಜನರು ಕಳುಹಿಸಿದ್ದಾರೆ. ನಾವು ಯಾವತ್ತು ಸತ್ಯದ ಮಾರ್ಗದಲ್ಲಿ ನಡೆಯುತ್ತೇವೆ, ನಾವು ಪ್ರಮಾಣಿಕತೆಯಿಂದ ನಡೆಯುತ್ತೇವೆಂದು ತೋರಿಸಬೇಕಲ್ಲವೇ? ಸಂಪೂರ್ಣವಾಗಿರುವಂತಹ ಅಧಿಕಾರವನ್ನು ತಾವು ಲೋಕಾಯುಕ್ತರಿಗೆ ಕೊಡಬೇಕು. ಇಲ್ಲದೆ ಇದ್ದರೆ ಈ ರಾಜ್ಯಕ್ಕೆ ಭವಿಷ್ಯವಿಲ್ಲವೆಂಬ ಮಾತನ್ನು ಹೇಳುತ್ತೇನೆ. ಏಕೆಂದರೆ, ಪ್ರಜಾಪ್ರತಿನಿಧಿಗಳ ಮೇಲೆ, ಸರ್ಕಾರಿ ಅಧಿಕಾರಿಗಳ ಮೇಲೆ ವಿಶ್ವಾಸವನ್ನು ಕಳೆದುಕೊಂಡಿರುವಂತಹ....

ಉಪಾಧ್ಯಕ್ಷರು: ಇನ್ನು ಬಹಳಷ್ಟು ಶಾಸಕರು ಮಾತನಾಡುವವರು ಇದ್ದಾರೆ ಬೇಗನೆ ತಾವು ಮುಗಿಸಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಾನು ಬಹಳಷ್ಟು ಮಾತನಾಡಬೇಕಾಗಿತ್ತು. ಆದರೆ ತಾವು ಸಮಯ ಇಲ್ಲವೆಂದು ಹೇಳುತ್ತಿದ್ದೀರಿ. ಬೇರೆ ಸದಸ್ಯರಿಗೂ ಕೂಡ ನಾವು ಹೆಚ್ಚಿನ ಅವಕಾಶ ಕೊಡಬೇಕೆಂದು ಹೇಳಿ ನಾನು cutf short ಮಾಡಿ ಮಾತನಾಡುತ್ತಿದ್ದೇನೆ. ನಾನು ಎರಡು-ಮೂರು ನಿಮಿಷದಲಿ ಮುಗಿಸುತ್ತೇನೆ. ಈಗ Industries ಬಗ್ಗೆ ನಿಮ್ಮ ಸರ್ಕಾರದ ಆದ್ಯತೆ ಏನು ಇದೆ? ನಿಮ್ಮ ಸರ್ಕಾರದಲ್ಲಿ Rural developmentಗೆ ಆದ್ಯತೆ ಇಲ್ಲ, ನಿಮ್ಮ ಸರ್ಕಾರ Agricultureಗೆ ಆದ್ಯತೆಯನ್ನು ಕೊಡುತ್ತಿಲ್ಲ, Irrigationಗೆ ಆದ್ಯತೆಯನ್ನು ಕೊಡುತ್ತಿಲ್ಲ, powerಗೆ ಆದ್ಯತೆಯನ್ನು ಕೊಡುತ್ತಿಲ್ಲ, Educationಗೂ ಆದ್ಯತೆಯನ್ನು ಕೊಡುತ್ತಿಲ್ಲ, ಮತ್ತೆ ಯಾವುದಕ್ಕೆ ಕೊಡುತ್ತಿದ್ದೀರಿ? Industryಗೆ ಆದ್ಯತೆಯನ್ನು ಕೊಡುತ್ತಿಲ್ಲ. ಏನಿದೆ ನಿಮ್ಮ ಕೈಗಾರಿಕೆಯ ನೀತಿ? ಹೊಸ ಕೈಗಾರಿಕೆ ನೀತಿಯನ್ನು ಏನು ನೀವು ತಂದಿದ್ದೀರಿ ಅದರ draftನ್ನು ನೋಡಿದ್ದೇನೆ. ಅದರಲ್ಲಿ ನೀವು ಏನು incentives ಕೊಟ್ಟಿದ್ದೀರಿ. ಇವತ್ತು global recession ಇದೆ. ಇವತ್ತು countryಯಲ್ಲಿ recession ಇದ್ದರೂ ಕೂಡ ನೀವು ಒಳ್ಳೆಯ ರೀತಿಯಿಂದ ನಮ್ಮ ರಾಜ್ಯದಲ್ಲಿ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡುವಂತಹ ಕೆಲಸವನ್ನು ನೀವು ಮಾಡಬಹುದಾಗಿತ್ತು. ಡಾ.ನಂಜುಂಡಪ್ಪನವರ ವರದಿಯ ಪ್ರಕಾರ ಇವತ್ತು ನಂಜುಂಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದಿರುವಂಥ ತಾಲ್ಲೂಕು ಅಭಿವೃದ್ಧಿ ಆಗಬಾರದೇ? Industrialise ಆಗಬಾರದೇ? ಏನು Incentives ಕೊಟ್ಟಿದ್ದೀರಿ? ಮಂತ್ರಿಗಳೇ ಈ ಡ್ರಾಫ್ಟ್ ಇಲ್ಲೇ ಇದೆ, ಇದನ್ನು request ಮಾಡಿಕೊಂಡು ತೆಗೆದುಕೊಂಡು ನೋಡಿದ್ದೇನೆ. ಈ ಡ್ರಾಫ್ಟ್‌ನಲ್ಲಿ ಏನಿದೆ ಗೊತ್ತೇ? ಕೇವಲ ನೀವು tax, registration fees ಗೆ sale tax ಗೆ exemption ಕೊಡಿ. ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದಿರುವಂಥ ತಾಲ್ಲೂಕಿನಲ್ಲಿ ಯಾರಾದರೂ ಇಂಡಸ್ಟ್ರಿ ಹಾಕಲಿಕ್ಕೆ ಮುಂದೆ ಬಂದರೆ ಅವರಿಗೆ 5 ವರ್ಷ sale tax

exemption ಕೊಡಿ. ಅಗ ನಮ್ಮ ರಾಜ್ಯದಲ್ಲಿ ಇಂಡಸ್ಟ್ರಿ ಬರಲಿಕ್ಕೆ ಸಾಧ್ಯವಿದೆ ಅದೂ ಕೂಡ ನಮ್ಮ ಸರ್ಕಾರ ಮಾಡಿಲ್ಲ. ಇದನ್ನು ಮಾಡಬೇಕೆಂದು ನನ್ನ ಸಲಹೆ ಇದೆ. ಇವತ್ತು ವಿಶೇಷವಾಗಿ ನಮ್ಮ ಮತಕ್ಷೇತ್ರದಲ್ಲಿ ಒಂದೇ ಒಂದು ಸಬ್ ಜೈಲು ಇದೆ, ಆ ಸಬ್ ಜೈಲಿಗೆ ಎಲ್ಲಾ ಮೂಲಭೂತ ಸೌಕರ್ಯಗಳಿವೆ. ಎಲ್ಲಾ ರೆಡಿಯಾಗಿ ಮೂರು ವರ್ಷಗಳಿಂದ ನಿಂತಿದೆ. ಮೂರು ವರ್ಷಗಳಿಂದ ಸತತವಾಗಿ ನಾನು ಗೃಹ ಇಲಾಖೆಗೆ ಸಂಬಂಧಪಟ್ಟ ಸಚಿವರಿಗೆಲ್ಲರಿಗೂ ಪತ್ರವನ್ನು ಬರೆದಿದ್ದೇನೆ. ನಮ್ಮ ಸೇಡಂ, ಚಿಂಚೋಳಿ, ಚಿತ್ತಾಪುರ ಇಲ್ಲೇನಾದರೂ ಆದರೆ ಗುಲ್ಬರ್ಗ ಜೈಲಿಗೆ ಎಲ್ಲರನ್ನೂ ಕಳುಹಿಸಬೇಕು. ಈ ಸರ್ಕಾರಕ್ಕೆ ಮೂರು ವರ್ಷಗಳಿಂದ ನಮ್ಮ ಸಬ್ ಜೈಲಿಗೆ ಸಿಬ್ಬಂದಿಯನ್ನು ಕೊಡಲಿಕ್ಕಾಗುತ್ತಿಲ್ಲವೆಂದರೆ ನಾವೇನು ಹೇಳಬೇಕು? ಇವತ್ತು ಖೈದಿಗಳು ಸಣ್ಣಪುಟ್ಟ ಜಗಳಗಳಾದರೆ ಗುಲ್ಬರ್ಗಕ್ಕೆ ಹಾಕಬೇಕು. ಇಲ್ಲಿ ಎಲ್ಲಾ ಸೌಲಭ್ಯಗಳಿವೆ, ತೊಂದರೆಯೇನಾಗಿದೆಯೆಂದರೆ ನಮ್ಮಲ್ಲಿ ಸಿಬ್ಬಂದಿ ಇಲ್ಲ. ನೇಮಕಾತಿ ಮಾಡಲಿಕ್ಕಾಗುತ್ತಿಲ್ಲ ಎನ್ನುವಂಥ ಅಸಹಾಯಕತೆಯನ್ನು ಸರ್ಕಾರ ತೋರಿಸಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಕೊನೆಯದಾಗಿ ಬಂದಿಖಾನೆ ಸಚಿವರು ಇಲ್ಲಿದ್ದಾರೆ, ಇದನ್ನು ಗಮನಿಸಬೇಕು, ಕಂದಾಯ ಇಲಾಖೆಯ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದೆ. ಏನೆಂದರೆ Land Reform Actಗೆ ನಾವು amendment ತರುತ್ತೇವೆಂದು ಹೇಳಿ ಮನ್ಯ ಸಚಿವರು ಹಾಗೂ ಕೆಲವು ಅಧಿಕಾರಿಗಳು ಇವತ್ತು ಹೇಳುತ್ತಿದ್ದಾರೆ. 79(a)(b)ಗೆ ನಾವು amendment ತರುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದರಿಂದ ಈ ರಾಜ್ಯದ ರೈತರಿಗೆ ದೊಡ್ಡ ಮೋಸವಾಗುತ್ತದೆ. 79(a)(b) ಎಂದರೆ ಯಾರು Industrialists ಮತ್ತೆ ಬೇರೆ ದೊಡ್ಡ ದೊಡ್ಡ ಶ್ರೀಮಂತರು Agriculture land ಅನ್ನು ಖರೀದಿಸಬಾರದೆಂದು Land Reform Act ನಲ್ಲಿ ನೀವು 79(a)(b) amendment ತಂದುಬಿಟ್ಟರೆ ಇಡೀ ರಾಜ್ಯದ ಯಾವುದೇ ಬಡ ರೈತರಿಗೆ ಜಮೀನಿರುವುದಿಲ್ಲ. Real estaters and Industriests ಎಲ್ಲಾ ಜಮೀನುಗಳನ್ನು ಖರೀದಿಸಿಬಿಡುತ್ತಾರೆ. ಅದಕ್ಕೆ ಯಾವುದೇ ಕಾರಣಕ್ಕೂ Land Reform Act ನಲ್ಲಿ ನೀವು 79(a)(b) amendment ತರಬಾರದು, ತಂದರೆ ನಾವು ರಾಜ್ಯದಲ್ಲಿ ಉಗ್ರ ಹೋರಾಟವನ್ನು ಮಾಡುತ್ತೇವೆ. ಅದಕ್ಕಾಗಿ ಸರ್ಕಾರಕ್ಕೆ ನಾನು ತಾಕೀತು ಮಾಡುತ್ತೇನೆ, ನೀವು ಯಾವುದೇ ಕಾರಣಕ್ಕೂ 79(a)(b)ಗೆ amendment ತಂದರೆ ನಾವು ಸಹಿಸುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ, ಕೊನೆಯದಾಗಿ ನಾನು ಹೇಳುವುದಿಷ್ಟೆ, ಲೋಕೋಪಯೋಗಿ ಸಚಿವರು ಇಲ್ಲಿದ್ದಾರೆ. ಅವರು ಕೆಲವು ಗ್ರಾಮೀಣ ರಸ್ತೆಗಳನ್ನು ಎಂ.ಡಿ.ಆರ್. ಆಗಿ ಮೇಲ್ದರ್ಜೆಗೇರಿಸಿದ್ದಾರೆ. ಅದಕ್ಕೆ ಹಣವೇ ಇಲ್ಲ, ಹೋದ ಸಾರಿ ಕೊಟ್ಟಿರುವುದಕ್ಕಿಂತ ಈ ಸಾರಿ ಕಡಿಮೆ ಹಣವನ್ನು ಕೊಟ್ಟಿದ್ದಾರೆ. RDPR

ಸಚಿವರಿಗಿಂತ ಲೋಕೋಪಯೋಗಿ ಸಚಿವರು ಬಹಳ powerful ಇದ್ದೀರಿ ನೀವು ಆದರೆ ನಿಮಗಿಂತ ಹೆಚ್ಚು ಹಣ RDPR ಗೆ ಹೋಗಿದೆ. ಆದಕಾರಣ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣ ಕೊಡಬೇಕು. ನೀವು ಮನೆಯ ಯಜಮಾನರಿದ್ದೀರಿ, ನೀವು ಯಾವ ರೀತಿ ಮಾಡುತ್ತೀರಿ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಧ್ರುವನಾರಾಯಣರವರು ಹೇಳಿದಂತೆ ನೀವು ತಾರತಮ್ಯ ಮಾಡದೇ ಅಭಿವೃದ್ಧಿ ಮಾಡಿದರೆ ನಿಮ್ಮ ಪರವಿರುತ್ತೇವೆ. ಇನ್ನು ಕೊನೆಯದಾಗಿ ನೀವು ಇವತ್ತು ಆಡಳಿತ ಪಕ್ಷದಲ್ಲಿರಬಹುದು, ನಾವು ವಿರೋಧಪಕ್ಷದಲ್ಲಿರಬಹುದು. ನಾವು ನೀವು ಒಬ್ಬರಿಗೊಬ್ಬರು ಕಚ್ಚಾಡಿ ಅಧಿಕಾರಿಗಳಿಗೆ ಲಾಭ ಮಾಡಿಕೊಡಬಾರದು. ರಾಜ್ಯದ ಜನರ ಹಿತದೃಷ್ಟಿಯಿಂದ ಇದು ಕೆಟ್ಟ ಬಜೆಟ್ ಇರಬಹುದು, ಆದರೆ ನೀವು ತಂದಿರತಕ್ಕಂಥ ಯೋಜನೆಗಳನ್ನು ಅನುಷ್ಠಾನಗೊಳಿಸಲಿಕ್ಕೆ ನಾವು ಸಹಕರಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೆ, ಶರಣ ಪ್ರಕಾಶರವರು ಲೋಕೋಪಯೋಗಿ ಇಲಾಖಾ ಸಚಿವರು ಬಹಳ powerful ಇದ್ದಾರೆಂದು ಹೇಳಿದರು. ಅದಕ್ಕಾಗಿ ಆ powerful PWD minister ಏನಾದರೂ ಮಾಡುತ್ತಾರೆಂದು ಹೇಳಿ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಅವರಿಗೆ ಕೊಟ್ಟರೆ ಅವರೂ ಸುಧಾರಣೆ ಮಾಡುತ್ತಿಲ್ಲವೆಂದು ಹೇಳಿದರು. ಅದು ಒಂದು ಕಡೆ ಉಳಿಯಿತು, ಲೋಕೋಪಯೋಗಿ ಸಚಿವರು ರಸ್ತೆಗಳನ್ನು ಚೆನ್ನಾಗಿ ಮಾಡಬೇಕು. ಈ ರಸ್ತೆಗಳಿಗಾಗಲಿ, ಬೇರೆ ಕೆಲಸಗಳಿಗಾಗಲೀ ತೆಗೆದುಕೊಂಡು ಕೆಲಸಗಳನ್ನು suggest ಮಾಡಬೇಕೆಂದು ನಂಜುಂಡಪ್ಪ ವರದಿಯಲ್ಲಿ ನಮಗೆ ಏನು ಹಣವನ್ನು ನಿಗದಿಪಡಿಸಿದ್ದರು, ಅದರಂತೆ ನಾವೆಲ್ಲಾ ಲೋಕೋಪಯೋಗಿ ಇಲಾಖೆಯ ಕೆಲಸಕ್ಕೆ ಕೊಟ್ಟಿದ್ದೇವೆ. ಆದರೆ ನಮ್ಮ ಲೋಕೋಪಯೋಗಿ ಸಚಿವರು ಇದು ನಮಗೆ ಬೇಡವೆಂದು ಹೇಳಿ ಅದನ್ನೆಲ್ಲಾ ಒಯ್ದು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಕೊಟ್ಟುಬಿಟ್ಟಿದ್ದಾರೆ. ಈಗ ನಮ್ಮ ಗತಿ ಏನು? powerful minister ಈ ರೀತಿಯಾಗಿ ಗ್ರಾಮೀಣಾಭಿವೃದ್ಧಿಯ ಸಚಿವರಿಗೆ surrender ಆದರೆ ರಸ್ತೆಗಳು ಹೇಗೆ ಉಳಿಯಬೇಕೆಂದು ನೀವೇ ಹೇಳಿ.

ಶ್ರೀ ಸಿ.ಎಂ.ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಮತೆ ಹಿಂದಿನ ಸಲ ನಾವು ನಂಜುಂಡಪ್ಪ ವರದಿಯಲ್ಲಿ ತೋರಿಸಿದ ಯೋಜನೆಯ ಹಣ ಪಂಚಾಯತ್ ರಾಜ್ ಇಲಾಖೆಗೆ ಬದಲಾವಣೆಯಾದುದರಿಂದ ಪಂಚಾಯತ್ ರಾಜ್ ಇಲಾಖೆಗೆ ಅಭಿವೃದ್ಧಿ ಹಣವನ್ನು ಬಿಡುಗಡೆ ಮಾಡಿದ್ದೆವು. ಅಲ್ಲಿ ಇವರು ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸವಾಗಿಲ್ಲ ಎಂಬ ಕಳವಲ ಇರಬಹುದು. ಆದರೆ ಈ ಸಲ ಅದಕ್ಕೆ exclusive ಆಗಿ ಹಣ ಬಿಡುಗಡೆಯಾಗಿದ್ದನ್ನು ಈಗ ಮಾತನಾಡುತ್ತಿರುವ ಶ್ರೀ ಶರಣ ಪ್ರಕಾಶ್

ರುದ್ರಪ್ಪ ಪಾಟೀಲ್‌ರವರಿಗೂ ಸಹ ನಮ್ಮ ಗಮನದಲ್ಲಿದೆ ಎಂಬುದನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ಬಾರಿ ಆ ರೀತಿ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಹಿಂದೆ ಈ ರೀತಿ ಆಗುವಾಗ ಎಷ್ಟೋ ಸಮಸ್ಯೆಗಳು ಆಗಿವೆ. ಇನ್ನು ಮುಂದೆ ಆ ರೀತಿ ಆಗದ ಹಾಗೆ ನೋಡಿಕೊಳ್ಳುವಂಥ ಕೆಲಸವನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ. ನಾನು ಉತ್ತರ ಭಾಗದಲ್ಲಿ ಗ್ರಾಮೀಣ ಭಾಗದ ರಸ್ತೆಗಳು ಕಡಿಮೆ ಇದ್ದುದರಿಂದ ಅದನ್ನು ಮೇಲ್ದರ್ಜೆಗೇರಿಸಬೇಕಾದುದು ಅವಶ್ಯಕತೆಯಿತ್ತು. ಅದನ್ನು ಗಮನದಲ್ಲಿಟ್ಟುಕೊಂಡು ನಾನು ಮಾಡಿದ್ದೇನೆಯೇ ಹೊರತು ಅದಿಲ್ಲದೇ ಹೋದರೆ ಅದಕ್ಕೆ ಪೂರಕವಾಗಿ ಹಣ ಬಿಡುಗಡೆ ಮಾಡಿಸುವಂಥ ವ್ಯವಸ್ಥೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿ ಎನ್ನುವ ತಮ್ಮ ಬೇಡಿಕೆ ಸ್ವಾಭಾವಿಕವಾದುದು ಎಂದು ನಾನಂದುಕೊಂಡಿದ್ದೇನೆ. ಆ ಪ್ರಕಾರ ಅದಕ್ಕೆ ಹೆಚ್ಚಿನ ಹಣವನ್ನು ಈ ಸಲ ತೆಗೆದುಕೊಂಡು ಈಗೇನು 30–35 ಕೋಟಿ ರೂ.ಗಳಲ್ಲಿ ರಸ್ತೆಗಳನ್ನು ರಿಪೇರಿ ಮಾಡುವಂಥದ್ದಿದೆ, ಅದನ್ನು ಬದಲಾಯಿಸುವಂಥ ಕೆಲಸವನ್ನು ನಾನು ಮಾಡುತ್ತೇನೆ. ಏಕೆಂದರೆ ನಿಮಗೆಲ್ಲ 2008 ಮೇ ತಿಂಗಳ ಮೊದಲು ಇದ್ದ ಜಿಲ್ಲಾ ಮುಖ್ಯ ರಸ್ತೆಗಳ ಉದ್ದ ಎಷ್ಟು ಕಿ.ಮೀ ಇತ್ತು ಎಂದರೆ ಉತ್ತರ ಕರ್ನಾಟಕ ಹಾಗು ದಕ್ಷಿಣ ಕರ್ನಾಟಕದಲ್ಲಿರುವ ವ್ಯತ್ಯಾಸಗಳನ್ನು ನಾನು ಇಲ್ಲಿ ತಮಗೆ ಹೇಳಬಯಸುತ್ತೇನೆ. ಉತ್ತರ ಕರ್ನಾಟಕದಲ್ಲಿ 11436 ಕಿ.ಮೀ. ಇದ್ದರೆ ದಕ್ಷಿಣ ಕರ್ನಾಟಕದಲ್ಲಿ 26507 ಕಿ.ಮೀ. ಇತ್ತು. ಒಟ್ಟು 37943 ಕಿ.ಮೀ. ಅದನ್ನು 2008 ಮೇ ತಿಂಗಳ ನಂತರ 9215 ಕಿ.ಮೀ ಉತ್ತರ ಕರ್ನಾಟಕದಲ್ಲಿ ಮೇಲ್ದರ್ಜೆಗೇರಿಸುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಇದಕ್ಕೆ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕೆಂಬ ಬೇಡಿಕೆಯನ್ನು ನಾನು ಇಟ್ಟಿದ್ದೇನೆ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅದನ್ನು ತೆಗೆದುಕೊಂಡು ಈ ರಸ್ತೆಗಳನ್ನು ಅಭಿವೃದ್ಧಿ ಮಾಡಿಸುತ್ತೇವೆ. ಏಕೆಂದರೆ ಈಗ ಉತ್ತರ ಕರ್ನಾಟಕಕ್ಕೆ 20000 ಕಿ.ಮೀ. ಆಗುತ್ತದೆ. ದಕ್ಷಿಣ ಕರ್ನಾಟಕಕ್ಕೆ 27112 ಕಿ.ಮೀ ಈಗಲೂ ಆಗುತ್ತದೆ. ಇದನ್ನು ಸಮಾನಾಂತರವಾಗಿ ಅಭಿವೃದ್ಧಿಗೊಳಿಸಬೇಕೆಂಬ ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡಲಿಕ್ಕೆ ಪ್ರಯತ್ನ ನಡೆದಿದೆ. ಇದಕ್ಕೆ ಹಣಕಾಸು ದೊರಕಿಸಿಕೊಂಡು ಅಭಿವೃದ್ಧಿ ಮಾಡುವಂಥ ಕೆಲಸ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅದನ್ನು upgrade ಮಾಡಿದಿರಿ ಒಳ್ಳೆಯದು. ಅದಕ್ಕೆ ತಕ್ಕಂತೆ maintenance grant ಅನ್ನು ತೆಗೆದುಕೊಳ್ಳಬೇಕು. ಅನೇಕ ಸಾರಿ ಏನಾಗುತ್ತದೆ, ಇಲ್ಲಿ LOC release ಆಗುವಾಗ ಬೆಂಗಳೂರಿನಲ್ಲಿರುವಂಥ ಅನೇಕ ಜನ ಪ್ರಭಾವವನ್ನು ಬೀರಿ ಇರತಕ್ಕಂಥ LOC ಅನ್ನು ಮೊದಲು ತೆಗೆದುಕೊಂಡುಬಿಡುತ್ತಾರೆ. ಏಕೆಂದರೆ ಇಲ್ಲಿ building works ಜಾಸ್ತಿ. ವಿಶೇಷವಾಗಿ ಈ ಬೆಂಗಳೂರು ನಗರದಲ್ಲೇ ಹೆಚ್ಚಿನ ಹಣ ಹೋಗುತ್ತದೆ ಆಮೇಲೆ ಈ ಧಾರವಾಡ

ವಿಭಾಗದಲ್ಲಿರುವಂಥ ಉತ್ತರ ಕರ್ನಾಟಕದ ರಸ್ತೆಗೆ LOC ಬರುವುದಿಲ್ಲ. ಅಲ್ಲಿಗೂ LOC ಬಂದರೆ ಎಲ್ಲಿಗೆ ಹೋಗುತ್ತದೆಂದರೆ ಮೊದಲು ಧಾರವಾಡ, ಹಾವೇರಿಗೆ ಹೋಗಿ ಉಳಿದದ್ದು ಬೇರೆ ಕಡೆಗೆ ಹೋಗುತ್ತದೆ. ನಿಜ, ಖಂಡಿತವಾಗಿ ನಾನು ಏಕೆ ಹೇಳುತ್ತೇನೆಂದರೆ ಈ ತಾರತಮ್ಯ ಒಂದೇ ಜಾಗದಲ್ಲಿಲ್ಲ. ತಾರತಮ್ಯ ಇಲ್ಲಿ ಮೊದಲಾಗುತ್ತದೆ. ಇಲ್ಲಿ ಉಳಿದದ್ದು ಏನಾದರೂ ಅಲ್ಲಿಗೆ ಬಂದರೆ ಅಲ್ಲಿಯೂ ತಾರತಮ್ಯವಾಗುತ್ತದೆ. ಅದಕ್ಕೆ ದಯವಿಟ್ಟು ಮಾಡುವಾಗ ಎಲ್ಲಾಕಡೆ ನೋಡಿ ಅದು ಒಳ್ಳೆಯದು. ಉತ್ತರ ಕರ್ನಾಟಕದಲ್ಲಿ Geographical area ಹೆಚ್ಚಿಗಿದೆ. ನೀವು ತಾಲ್ಲೂಕು ನೋಡಿದಾಗ ಏನಾಗುತ್ತದೆ, ನಮ್ಮಲ್ಲಿ ಅನೇಕ ಹಳ್ಳಿಗಳು ಒಂದು ಹಳ್ಳಿಗೂ ಇನ್ನೊಂದು ಹಳ್ಳಿಗೂ ಆರರಿಂದ ಏಳು ಕಿ.ಮೀ. ದೂರವಿರುತ್ತದೆ. ಅದಕ್ಕೆ ಏನು ಮಾಡುತ್ತೀರಿ, ತಾಲ್ಲೂಕು ಸರಿಸಮವಾಗಿ ಹಂಚುವುದು ಎಂದು ಮಾತನಾಡುತ್ತೀರಿ. ಕೆಲವು ಕಡೆ ಸಣ್ಣ ಸಣ್ಣ ತಾಲ್ಲೂಕು ಇವೆ. ಕೆಲವು ಕಡೆ 80, 90 ಕಿ.ಮೀ. ಉದ್ದ ಇದೆ. ಈಗ ನಮ್ಮ ಸುರಪುರ ತಾಲ್ಲೂಕಿನ ಉದ್ದ ಹಾಗೂ ಅಗಲವನ್ನು ಲೆಕ್ಕ ಹಾಕಿದರೆ 80 ಕಿ.ಮೀ. ಉದ್ದವಿದೆ, ಸುಮಾರು 120 ಕಿ.ಮೀ. ಅಗಲವಿದೆ. ನಾರಾಯಣಪುರ ಡ್ಯಾಮ್‌ನಿಂದ ಶಹಾಪುರದವರೆಗೂ ಇದೆ. ಅದಕ್ಕೆ ದಯವಿಟ್ಟು ಇದನ್ನು ಸ್ವಲ್ಪ ವೈಜ್ಞಾನಿಕವಾಗಿ ಸರಿಯಾದ ರೀತಿಯಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ based on length of the road of the each constituency, or division wise or taluk wise ಎಂದು ಅದನ್ನು consideration ಮಾಡಿ ಆ carriage width wise ಸಹ consideration ಆಗುತ್ತದೆ. ಕೆಲವು ಕಡೆ 3.75 ಇರುತ್ತದೆ, ಕೆಲವು ಕಡೆ 7 ಮೀಟರ್ಸ್ ಸಹ ಇರುತ್ತದೆ. ಅಲ್ಲಿ ಹಣಕಾಸನ್ನು ಒದಗಿಸುವಾಗ based on scientific ಆಗಿ ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ನಿಜವಾಗಿಯೂ ಇದರ ಬಗ್ಗೆ ಇಲಾಖಾಧಿಕಾರಿಗಳೊಂದಿಗೆ ಚರ್ಚೆ ಮಾಡಿ ಕಾರ್ಯಗತಗೊಳಿಸುವುದನ್ನು ಮಾಡುತ್ತೇನೆ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಈ ಸರ್ಕಾರ ಏನೇ ಯೋಜನೆ ಮಾಡಲಿ, ಕೆಟ್ಟದ್ದು, ಒಳ್ಳೆಯದು ಎಂಬುದನ್ನು ಜನ ತೀರ್ಮಾನಿಸುತ್ತಾರೆ. ಆ ಯೋಜನೆಗಳನ್ನು implement ಮಾಡಬೇಕು. Implement ಮಾಡುವಾಗ ದಕ್ಷತೆಯಿಂದ ಮಂತ್ರಿಗಳು ಇಲಾಖಾವಾರು review ಮಾಡಬೇಕು. ನೀವು ಮಾಡುವ ಒಳ್ಳೆಯ ಕೆಲಸಗಳಿಗೆ ನನ್ನ ಸಪೋರ್ಟ್ ಇದೆ. public of interestನಲ್ಲಿ ನೀವು ಯಾವುದೇ ಒಳ್ಳೆಯ ಕೆಲಸವನ್ನು ಮಾಡಿದರೂ ಅದಕ್ಕೆ ನಾವು 100% support ಮಾಡುತ್ತೇವೆ. ಆದರೆ ನೀವು ನಿಮ್ಮ ಇಲಾಖೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳದೆ ಯಾವುದೇ ಭ್ರಷ್ಟಾಚಾರ ಮಾಡಲಿಕ್ಕೆ ಆಸ್ಪದ ಕೊಟ್ಟರೆ ನಾವು ಅದನ್ನು ಸಹಿಸುವುದಕ್ಕೆ

ಸಾಧ್ಯವಿಲ್ಲ. ಆದರೆ ಯಾವುದೇ ಆಸಕ್ತಿಯನ್ನು ತೋರಿಸದೇ ಇದ್ದರೂ ಅದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಈ ಸಲ ಬಜೆಟ್‌ನಲ್ಲಿ ಯಾವುದು ಖೋತಾ ಆಗಿದೆ, ಬಜೆಟ್‌ನಲ್ಲಿ 9,000–10,000 ಕೋಟಿ ರೂಪಾಯಿಗಳು ಈ ಬಾರಿ implement ಮಾಡುವುದಕ್ಕೆ ಆಗಿಲ್ಲ. ಅದನ್ನು ಯಾವ ರೀತಿ ಸರಿ ತೂಗಿಸುತ್ತೀರಿ? ಮತ್ತೆ ನಿಮ್ಮ ಪ್ಲಾನ್ ಸೈಜ್ 29,500 ಕೋಟಿ ರೂಪಾಯಿಗಳು ಅದನ್ನು ಮಾಡುವುದಕ್ಕೆ ಸಾದ್ಯವೇ ಇಲ್ಲ. ಅದನ್ನು ನೀವು cut down ಮಾಡಿ. Realistic ಆಗಿ ಯಾವ ರೀತಿ, ಯಾವ ಇಲಾಖೆಯಲ್ಲಿ ಮಾಡುತ್ತೀರಿ ಎಂದು ಹೇಳಿ ಮಾಡಿ, ನಾವು ಬೇಡವೆನ್ನುವುದಿಲ್ಲ, ಅದಕ್ಕೆ ನಾವು support ಮಾಡುತ್ತೇವೆ. ನೀವು ಒಳ್ಳೆಯ ದಕ್ಷ ಆಡಳಿತ ನಡೆಸಿದರೆ ಜನಪರವಾಗಿ ನಡೆಸಿದರೆ ನಮ್ಮ support ಇದೆ. ಆದರೆ ಅದಕ್ಕಾಗಿ ನೀವು ಪ್ರಾಮಾಣಿಕ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಕ್ಕೆ ತನ್ನಿ. ಎಲ್ಲಾ ಭ್ರಷ್ಟ ಅಧಿಕಾರಿಗಳನ್ನು ನೀವು ಆಯಕಟ್ಟಿನ ಸ್ಥಳಕ್ಕೆ ತಂದರೆ ಒಳ್ಳೆಯ ರೀತಿಯಲ್ಲಿ ಸರ್ಕಾರ ನಡೆಸಲು ಸಾದ್ಯವಿಲ್ಲ. ಒಳ್ಳೆಯ ಪ್ರಾಮಾಣಿಕ ಅಧಿಕಾರಿಗಳನ್ನು ನೀವು ಒಳ್ಳೆಯ ಸ್ಥಳಕ್ಕೆ ತನ್ನಿ. ಸರ್ಕಾರ ತಾನಾಗಿಯೇ ಸರಿಯಾಗಿ ನಡೆಯುತ್ತದೆ. ನೀವು ಭ್ರಷ್ಟಾಚಾರ ಮಾಡುವವರನ್ನು ಆಯಕಟ್ಟಿನ ಸ್ಥಳಗಳಿಗೆ ತಂದು ಸರ್ಕಾರ ಒಳ್ಳೆಯ ರೀತಿಯಲ್ಲಿ ನಡೆಯುತ್ತದೆ ಎಂದರೆ ಸಾದ್ಯವಿಲ್ಲ. ಈ ಸರ್ಕಾರ ಭ್ರಷ್ಟಾಚಾರ ರಹಿತ ಆಡಳಿತ ಕೊಟ್ಟರೆ ನಾವು ನಿಮ್ಮ ಪರ ಇದ್ದೇವೆ. ಇಲ್ಲದಿದ್ದರೆ ನಾವು ನಿಮ್ಮನ್ನು ವಿರೋದ ಮಾಡುತ್ತೇವೆ ಮತ್ತು ಜನರ ಮುಂದೆ ನಿಮ್ಮ ಬಣ್ಣ ಬಯಲು ಮಾಡುತ್ತೇವೆ.

ಶ್ರೀ ಸೈಯದ್ ಯಾಸೀನ್(ರಾಯಚೂರು): ಮಾನ್ಯ ಸಭಾದ್ಯಕ್ಷರೇ, ತಾವು ನನಗೆ 2009–10ರ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಬಹಳ ಸಂತೋಷ. ಈ ನಮ್ಮ ಮುಖ್ಯ ಮಂತ್ರಿಯವರು ಈ ಬಜೆಟ್ ನಲ್ಲಿ ಸುಮಾರು 287 chapters ಕೊಟ್ಟಿದ್ದಾರೆ. ಆ ಎಲ್ಲಾ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಟೈಂ ಇಲ್ಲ, ತಮ್ಮಲ್ಲಿ ವಿನಂತಿ ಮಾಡುತ್ತೇನೆ, ನನಗೆ ಸ್ವಲ್ಪ ಜಾಸ್ತಿ ಅವಕಾಶ ಕೊಡಬೇಕು, ಏಕೆಂದರೆ. . .

ಉಪಾದ್ಯಕ್ಷರು: 5 ನಿಮಿಷದಲ್ಲಿ ಮುಗಿಸಿ.

ಶ್ರೀ ಸೈಯದ್ ಯಾಸೀನ್: 5 ನಿಮಿಷದಲ್ಲಿ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. Even in Belgaum Session also you have not given me time to speak, then what for we are here? I am the MLA representing my constituency, I am attend to talk, ಕೇವಲ ಐದೇ ನಿಮಿಷದಲ್ಲಿ ಏನು ವಿಷಯ ಮಾತನಾಡಬೇಕು?. ನಮಗೆ ಅವಕಾಶ ಕೊಡಬೇಕು ಸಾರ್. Otherwise I will go out. ಏನು ಮಾಡುವುದಕ್ಕಾಗುವುದಿಲ್ಲ. ಸಾರ್, ಈ ಬಜೆಟ್ ಬಗ್ಗೆ ನಮ್ಮ ಮುಖ್ಯಮಂತ್ರಿ ಡಾ: ಬಿ.ಎಸ್.ಯಡಿಯೂರಪ್ಪ ರವರಿಗೆ ನಮ್ಮ

ರಾಜ್ಯದಲ್ಲಿ economic growth, ಹಾಗೂ ಅವರ financial management ಸಲುವಾಗಿ ಬಹಳಷ್ಟು confidence ಇದೆ. ಒಂದು ಕಡೆ ನಮ್ಮ bureaucrats, bureaucratic ಭಾಷೆಯಲ್ಲಿ they have used 10 ರಿಂದ 12 ಕಡೆ they have blamed. Failure of monsoon, the shortage of fertilizers, the shortage of electricity, ವಿದ್ಯುತ್ ಉತ್ಪಾದನೆಯಲ್ಲಿ ತೀವ್ರ ಕೊರತೆ ಉಂಟಾಗಿದೆ. Recessionary trend, global recession, failure of mansoon, ಅದು ಎಲ್ಲಾ ಕಡೆ ಬಜೆಟ್‌ನಲ್ಲಿ ಸುಮಾರು 20 places ನಲ್ಲಿ ಅವರು ಬ್ಲೇಮ್ ಮಾಡಿದ್ದಾರೆ. In the serial no. 11 dated 16-2-2009 ರಂದು the vote on account of Central Government has greatly disappointed us ಅಂಥ ಅವರು ಆರೋಪ ಮಾಡಿದ್ದಾರೆ. They have given all blames, they have blamed the natural calamity, failure of mansoon, shortage of fertilizers and blaming of Central Government, National Economic failure, blaming global recession. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್‌ನಿಂದ he correctly said, ಸುಖಸ್ಯ ಮೂಲಂ ಧರ್ಮ, ಧರ್ಮಸ್ಯ ಮೂಲಂ ಅರ್ಥ ಹಾಗೂ ಅರ್ಥಸ್ಯ ಮೂಲಂ ರಾಜ್ಯ, the order is the basis of prosperity, economy is the basis of order and the state is the basis of economy. So it shows that our CM is confident to manage the financial and fiscal management. the development activities are dependent upon the administrative policies ಎಂದು ಅವರು ಹೇಳಿದ್ದಾರೆ. I am happy that he is very confident. This is a type of recession; it is a part of human kindness, since inception and creation of mankind. We have our own economy, indigenous economy,so we should not get offered by the global recession, or national recession or any recession. Our State is a strong state, we have our own indigenous economy, we have got our own experts, IAS officers, Principal Secretaries, Economists to manage the financial administration and at the same time I request our Government, that in the name of recession, global and national, it should not affect the poverty alleviation, rural development, health and education in our state. There are certain indicators you have passed the fiscal Responsibility Act, which gives the

direction, this is the methodology to control, but our Bureaucrats, our government should make up their mind. Once they make up their minds, everything is possible, we will be able to manage. Certain fiscal indicators have to be taken care of, certain major fiscal indicators like State Sales Tax, Tax Revenue, share of Central Tax, Grant-in-Aid, Budget estimation, primary deficit, fiscal public accounts, ಇದೆಲ್ಲವನ್ನು ಮ್ಯಾನೇಜ್ ಮಾಡಬೇಕು. Capital Receipts, Recoveries of Loan and advances, non plan expenditures, revenue accounts, capital accounts, capital expenditure, revenue surplus, these are all important indicators which have to be taken care. We have got our Bureaucrats, and our CM is also confident to manage and I am sure our Opposition leaders like Siddaramaiah ji and Mallikarjun Khargeji have got extensive and enormous knowledge and we are ready to co-operate with the Government and we are not attacking the government simply, because we want to give a correct direction to the Government. So, I request our Hon'ble Chief Minister not to ignore the words and suggestions of our Hon'ble Leader of Opposition, Because, he is giving directions and he is attacking the Government to expose the running mistakes to correct to give a new methodology in the large interest of the development. ಸಭಾಧ್ಯಕ್ಷರೇ, ನಮ್ಮ ಮುಖ್ಯಮಂತ್ರಿ ಅವರ ಪ್ರಕಾರ main development priorities are Agricultural and allied activities, Rural development, Irrigation, power, Roads, Urban Development, Education and Health. So these are the important priorities has given. Sir, I would like to tell you, the second phase of Green Revolution has been launched in the country on a national level for that, you have to operate and at the same time, regarding NRBC you have taken up lot of works, ನಮ್ಮ ಕಡೆ ರಾಯಚೂರಿನಲ್ಲಿ ಕುಡಿಯುವ ನೀರು ಇಲ್ಲ, crores of rupees they have to spend. For Raichur, for NRBC ಲಿಂಕ್ ಮಾಡುವುದಕ್ಕೆ only 200 yards/200 meters ಇದೆ, from NRBC to Ganekal Reservoir, Governmentಗೆ ಅವಶ್ಯಕತೆ ಇಲ್ಲವೇ? not crores of rupees, it requires

only 50 lakhs to 1.00 cores but they have not given. Really I feel very sorry to be MLA and representing Raichur District. I **Cant't** understand crores of rupees they have given, for the drinking water purpose, but this is the priority, this is the essential work and they have not given money in the Budget Session, we have given so mAny letters to Government. I am very sorry to say, this and at the same time, our **Hon'ble** Minister is there, Sir, regarding Power, I would like to take up this issue very seriously. You are telling", we are in power shortage, we are buying," and of course, you are buying.

ಉಪಾಧ್ಯಕ್ಷರು: Please ಮುಗಿಸಿ.

ಶ್ರೀ ಸೈಯದ್ ಯಾಸೀನ್: Sir, please give me just another 10 minutes. There is transmission loss of 20% in the whole Karnataka which amounts to 250 M.W. and nearly about 120 Hydro Projects have been given to capitalists and business community but only two are running. This is for your information. We are losing about 300 Mega watts. 300 + the Leakages, it totally amounts to 550 Mega watts which we can recover, even now it is in our hand. Without any investment we can recover this loss with able administration and at the same time I would like to bring to your notice., you have announced 500 M.W. in Bellary, Chattisgarah and Bijapur, of course due to compulsion it is there. We have not tapped the high head natural sources Mahadayi, where we can generate about 1600 M.W. Gondia, near Hassan, Bedthi North Canara, Sirsi 500 M.W. we would be able to get, Dandeli we would be able to get 200 M.W. but why you have not taken up the works? Even Nyveli Lignite is an open mines and the cost will be less, we can enter into agreement like Chattisgarah. We can generate more than 5000 M.W. there itself. So this is my suggestion to the Government.

Hon'ble Dy. Speaker: Please conclude.

Sri Syed YAsin: Sir I take only two minutes. This is the last chance, nobody has discussed about this issue. So far as minority is concerned Hon'ble Chief Minister has given lot of opportunity to the Hon'ble Minister for Minority welfare.

Sri Mallikarjun Kharge: Minority Minister has also disappeared. All Ministers are disappearing one by one. Sir you are forcing us to sit here and we are giving you quorum and also to the Ruling Party. ಅದಕ್ಕೆ ಮಾನ್ಯ ಅಧ್ಯಕ್ಷರೆ ನನ್ನ ಮನವಿ ಏನಂದರೆ, ಇವರೊಬ್ಬರು ಮಾತನಾಡಲಿ, ಇವರಾದ ಮೇಳೆ ತಾವು Adjourn ಮಾಡಿ. ನಾಳೆ ಮೂರ್ನಾಲ್ಕು ಜನ ಇದ್ದರೆ strictly you do not give more than 10 minutes. 10 ನಿಮಿಷ ಆದರೆ ಗಂಟೆ ಬಾರಿಸಿ ಕೊಡಿಸಿ ಬಿಡಿ, ಆನಂತರ ಕುಮಾರ ಸ್ವಾಮಿ ಮಾತನಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಆಮೇಲೆ ತಿರುಪತಿ ಯಿಂದ ಪ್ರಸಾದ ತಂದು ಎಲ್ಲರಿಗೂ ಹಂಚುತ್ತಾರೆ ಮಾನ್ಯ ಮುಖ್ಯಮಂತ್ರಿಗಳು. ಆ ಪ್ರಸಾದ ತೆಗೆದುಕೊಂದು ಅಮೇಲೆ conclude ಮಾಡೋಣ.

Hon'ble Dy. Speaker: Please conclude.

Sri Syed Yasin: Sir, our Chief Minister has given a very good opportunity to Minority Minister and he has to do a lot of works and he has to utilize the Sarva Sikshana Abhiyana, Idga Problem, Urdu Schools and boundaries for the Khabarasthan and Waqf Issues. There is proposed for survey of all Waqf land which is pending since long time, it has to be taken up. Karnataka Minority Development Corporationಗೆ finance enhance ಮಾಡಬೇಕು. and in National Minority Development and Finance Corporation there are so many Economic programmes. our Hon'ble Chief Minister has taken up there programmes in this budget. We can utilize maximum for the Socio economic and Educational development of the Minorities. Sir, fifteen point programme is nothing but the product of a Saachar Committee and our Hon'ble Prime Minister Dr. Manmohan Singh has given to us. our Hon'ble Minority Minister should take is up. So far as Minority is concerned there are lot of issues. To this 15. Points programme the Deputy Commissioner and Z.P. CEOs should review every three months and concerned MLA and M.P.s are the permanent members to review the 15. point programme in every district and at the same time the educational development programmes should be reviewed and Survey of walt properties should be taken up and there are so many issues, he can take up

which he has not taken up and at the same time the loans for Minorities, SC/ST Development Corporation, Backward Class Development Corporation and Minority Development Corporation should be taken up. Poor minorities, are not getting the loans. There is a RBI direction, there is a fixed target in every Bank. It has to be given to Minority, SC/ST and Backward Communities. So, the direction of RBI should be taken up seriously. There is a lot of work in this area, the State Minority Commission's recommendations are there. Sri Rahman Khan has given a very good report and also there is Sachar Committee Report and Stastics are there, as to how many schools are there, how many dropouts are there, So, our Hon'ble Minister can take up these issues very seriously. Consider the Raichur, which is between the two rivers, so lot of fishermen are there. So many good housing schemes are there, it should go on the bank of Krishna and Tungabhadra river and this is the border are and also backward area, for your information we are giving huge revenue to the Government. Hutti Gold Mines is giving profit to you and our Thermal Plant is giving about 1470 M.W to you. We are contributing a lot. Being a small place Raichur is contributing high revenue to the State and we have got all rights to ask all the facilities. The B-Scheme of NRBC has not been taken up. We have not represented, Government has not represented properly in the Bachavat Tribunal. I am very very sorry for this and the for Ganakal reservoir, as already mentioned, they have not given money in the budget, so there are so may problems.

Hon'ble Dy. Speaker: Please Conclude.

Sri Syed Yaseen: Sir I will conclude. ಎಲ್ಲಾ ಕಡೆ Districtಗಳಿಗೆ Mini Vidhana Sabha ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ಈಗ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ. . . .

Sri Syed Yaseen: Sir, our Hon'ble Chief Minister must take up 7,000 acres of land of Jawalgera for Agricultural University. This 7000 Acres of land lying idle belongs to Central Government and we can represent to our Chief Minister

and Hon'ble Leader of Opposition Sri Mallikarjun Kharge ji to go to Delhi to get this land for joint venture. The 7000 Acres of land at Jawalagera is lying idle, We can use it for the Agriculture University for the research purpose.

ಉಪಾಧ್ಯಕ್ಷರು: ಮುಗಿಸಿ ದಾಖಲೆಗೆ ಹೋಗುವುದಿಲ್ಲ.

Sri Syed Yaseen: I am very sorry, I will conclude. We are representing people in the Assembly, there are so many points in our minds, we have got so many things in our mind, why are you not allowing me to express. I have elected for the second time. 8 ತಿಂಗಳುಗಳಾಗಿದೆ you have not allowed me first opportunity to speak. We have not represented our constituency. Can you simply beat our constituency?. Our Chief Minister has given a Geriatric Centre for our senior citizen.

ಶ್ರೀ ಎಂ.ಟಿ.ಕೃಷ್ಣಪ್ಪ: ಅವಕಾಶ ಕೊಡದೇ ಇದ್ದರೆ ನಾವು ಏನು ಟಿ.ಎ, ಡಿ.ಎ ಗೋಸ್ಕರ ಇಲ್ಲಿ ಬಂದು ಕುಳಿತುಕೊಳ್ಳಬೇಕೆ? ಏನಿದು? ನನಗೆ ಅರ್ಥವಾಗುತ್ತಿಲ್ಲ. ನಾವು ಚುನಾವಣೆಯಲ್ಲಿ ಇಲ್ಲಿಗೆ ಗೆದ್ದು ಬರುವ ಉದ್ದೇಶವೇನೆಂದರೆ, (ಗೊಂದಲ) ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ನೀವು ಕೊಡುವ 500 ರೂಪಾಯಿ ಟಿ.ಎ. ಡಿ.ಎ ಗೋಸ್ಕರ ನಾವು ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಈಗಾಗಲೇ 8 ಗಂಟೆಯಾಗಿದೆ. ನಾವು ಮಾತನಾಡುವುದನ್ನು ಕೇಳುವವರು ಯಾರಿದ್ದಾರೆ? ನೀವು ಅವಕಾಶ ಕೊಟ್ಟರೂ ಮಾತನಾಡುವಂತಿಲ್ಲ.

Sri Syed Yasin: Sir, A medical college has been given to Raichur. ಆದರೆ ಹಾಸ್ಪಿಟಲ್ ಕಟ್ಟಿಲ್ಲ. Thanks to Medical Council of India. If they come tomorrow, I think they are going to cancel our Medical college which is worth about three hundred crores. So you have to give funds, you have to send the taskforce to go for fast work, because we have to match with the MCI. regarding health,

ಉಪಾಧ್ಯಕ್ಷರು: ತಾವು ಬೇಗ ಮುಗಿಸದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ.

Sri Syed Yasin: (ಗೊಂದಲ) Geriatric Centre Neo Natal Should be accommodated in every district and taluka in the larger interest of the poor people. ಬಹಳ ಸಂತೋಷ. Anyway I am not happy Sir. Next time you have to give more time to speak , otherwise you can extend the time, because there are so many

issues. In one shot of small time I cannot speak which is in my hand.

ಉಪಾಧ್ಯಕ್ಷರು: ಕರಡಿ ಸಂಗಣ್ಣ ಅವರು. ....

Sri Syed Yaseen: No Sir, there are so many issues. Tommorrow you give me chance to speak. Thank you very much.

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಉಪಾಧ್ಯಕ್ಷರೆ, 2009–10ನೇ ಸಾಲಿನ ಬಜೆಟ್ ಮೇಲೇ ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ತಮಗೆ ವಂದನೆಗಳನ್ನು ಹೇಳಬಯಸುತ್ತೇನೆ. ಹಾಗೆಯೇ, 2009–10ನೇ ಸಾಲಿಗೆ ಸಂಬಂಧಿಸಿದಂತೆ ಬಹಳಷ್ಟು ಯೋಜನಾ ವೆಚ್ಚದ ಗಾತ್ರ ಮಾಡಿಲ್ಲವೆಂದು ಹೇಳಬಯಸುತ್ತೇನೆ. 29,500 ಕೋಟಿ ರೂ.ಗಳ ಯೋಜನಾ ಗಾತ್ರ ಇಟ್ಟುಕೊಂಡಿದ್ದಾರೆ. ಆದರೆ ಕಳೆದ ಬಾರಿ.....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಈಗ ನನಗೆ ಏನೆಂದು ಅರ್ಥವಾಗಲಿಲ್ಲ. ನೀವು ಈಗ ವೋಟಿಂಗ್‌ಗೆ ಹಾಕಿದರೆ ಅದು ಬಿದ್ದು ಹೋಗುತ್ತದೆ. ರೂಲಿಂಗ್ ಪಾರ್ಟಿಯಲ್ಲಿ ಎಷ್ಟು ಮಂದಿ ಇದ್ದಾರೆಂಬುದನ್ನು ಎಣಿಸಿ ನೋಡಿ. ನಾವು ಈಗಲೇ insist ಮಾಡುತ್ತೇವೆ. ನೀವು ಹಾಕಿಬಿಡಿ ನಾವು ಪಾಸ್ ಮಾಡಿಕೊಂಡು ಹೋಗುತ್ತೇವೆಂದರೆ....ನಾಳೆ ಬಂದು ಮಾತನಾಡುತ್ತಾರೆ. ನಾಳೆ ಒಂದು ಗಂಟೆ ಮುಂಚಿತವಾಗಿ ಸೇರೋಣ. ಇಲ್ಲವೇ, reply ಅನ್ನು ಒಂದು ಗಂಟೆ ತಡವಾಗಿ ಕೊಡಲಿ. ಅಂತಹ ತೊಂದರೆ ಏನೂ ಆಗುವುದಿಲ್ಲವಲ್ಲ.

ಉಪಾಧ್ಯಕ್ಷರು: ಆಗಬಹುದು.

4. <u>ಗಮನ ಸೆಳೆಯುವ ಸೂಚನೆ</u>

ಅ)ವಿಷಯ: ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ 5 ಲಕ್ಷ ಕುಟುಂಬಗಳ ಪುನರ್ವಸತಿ ಕುರಿತು.

. . . .

ಶ್ರೀ ಎ.ಎಸ್.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ 5 ಲಕ್ಷ ಕುಟುಂಬಗಳ ಪುನರ್ವಸತಿಗೆ ಸಂಬಂಧಿಸಿದಂತೆ ನಾನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಈ ವಿಷಯ ಬಹಳ ಮುಖ್ಯವಾಗಿದೆ. 5 ಲಕ್ಷ ಜನರ ಸಮಸ್ಯೆ ಇದಾಗಿದೆ. ಇದು ಉತ್ತರ ಕರ್ನಾಟಕ ಬಹು ಮುಖ್ಯವಾಗಿರುವ ಸಮಸ್ಯೆಯಾಗಿದೆ. ಸುಮಾರು 5 ಲಕ್ಷದಷ್ಟು ಜನರು ಬೀದಿ ಪಾಲಾಗಿದ್ದಾರೆ. ಅವರುಗಳ ಸಮಸ್ಯೆಗಳನ್ನು ಆಲಿಸುವುದಕ್ಕೆ ಸರ್ಕಾರದ ಕಡೆಯಿಂದ

ಒಬ್ಬ ಮಂತ್ರಿಯೂ ಇಲ್ಲವೆಂದರೆ, ಈ ಸರ್ಕಾರ ಇದೆಯೇ? ಇಲ್ಲವೇ ಎಂಬುದನ್ನು ಈಗ ಕೇಳಬೇಕಾಗುತ್ತದೆ. ಈ ಸರ್ಕಾರ ಬದುಕಿದೆಯೇ ಸತ್ತಿದೆಯೇ ಎಂದು ಜನರು ನಮ್ಮನ್ನು ಕೇಳುತ್ತಾರೆ. ಕರ್ನಾಟಕದಲ್ಲಿ ಇವತ್ತು ನಿಜವಾಗಿಯೂ ಸರ್ಕಾರ ಸತ್ತು ಹೋಗಿದೆ ಎಂದು ಅರ್ಥವಾಗುತ್ತಿದೆ.

ಶ್ರೀ ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ ಸಚಿವರು):- (ಕಂದಾಯ ಸಚಿವರ ಪರವಾಗಿ) ಕೃಷ್ಣ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದಿಂದ 136 ಗ್ರಾಮಗಳು ಮತ್ತು ನಾರಾಯಣಪೂರ ಜಲಾಶಯದ ವ್ಯಾಪ್ತಿಯಲ್ಲಿ 40 ಗ್ರಾಮಗಲು ಅಂದರೆ ಒಟ್ಟು 176 ಗ್ರಾಮಗಳು ಮುಳುಗಡೆ ಆಗಿದ್ದು, ಅವುಗಳನ್ನು ಸ್ಥಳಾಂತರಿಸಲು 136 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಸುಮಾರು 109 ಪುನರ್ವಸತಿ ಕೇಂದ್ರಗಳಿಗೆ ಸಂತ್ರಸ್ಥರು ಈಗಾಗಲೇ ತಮ್ಮ ಮೂಲ ಗ್ರಾಮಗಳಿಂದ ಸ್ಥಳಾಂತರಗೊಂಡಿರುತ್ತಾರೆ. ಉಳಿದ 27 ಪುನರ್ವಸತಿ ಕೇಂದ್ರಗಳಿಗೆ ಸಂತ್ರಸ್ಥರು ಇನ್ನು ಸ್ಥಳಾಂತರಗೊಂಡಿರುವುದಿಲ್ಲ.

ಯೋಜನೆಯಡಿ ನಿರ್ಮಿಸಿದ 136 ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತ ನಾಗರೀಕ ಸೌಲಭ್ಯಗಳಾದ ರಸ್ತೆ, ನೀರು ಸರಬರಾಜು, ವಿದ್ಯುತ್, ಬೀದಿ ದೀಪ, ಶಾಲಾ ಕಟ್ಟಡ, ಅಂಗನವಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿಕ್ಷಕರ ವಸತಿ ಗೃಹ, ಅಗಸಿ ಬಾಗಿಲು, ಎ.ಎನ್.ಎಮ್. ಕಟ್ಟಡ, ಸ್ಮಶಾನ, ದೇವಸ್ಥಾನ ಹಾಗೂ ಇತರ ಎಲ್ಲ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಜಲಾಶಯದಲ್ಲಿ ನೀರನ್ನು ಸಂಗ್ರಹಿಸಿದಾಗ ಕೆಲವು ಸಂತ್ರಸ್ಥರಿಗೆ ತಾತ್ಕಾಲಿಕವಾಗಿ ಶೆಡ್ಡುಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು ನಂತರ ಅವರೆಲ್ಲರನ್ನು ಪುನರ್ವಸತಿ ಕೇಂದ್ರಗಲಿಗೆ ಸ್ಥಳಾಂತರಿಸಲಾಗಿರುತ್ತದೆ. ಆದರೆ ಕೆಲವು ಗ್ರಾಮಗಳಲ್ಲಿ ಉದಾಹರಣೆಗೆ ಬಾಗಲಕೋಟೆ ತಾಲೂಕಿನ ಸಿಗಿಕೇರಿ, ಛಬ್ಬಿ, ಯಂಕಂಚಿ, ಬಿಜಾಪೂರ ತಾಲೂಕಿನ ಗಣಿ, ಬಸವನ ಬಾಗೇವಾಡಿ ತಾಲೂಕಿನ ಕೋಲ್ಹಾರ, ಲಿಂಗಸುಗೂರ ತಾಲ್ಲೂಕಿನ ಹಲಕಾವಟಗಿ ಹಾಗೂ ಹುನಗುಂದ ತಾಲೂಕ ದಾಸಬಾಳ ಗಳಲ್ಲಿ ನಿರ್ಮಿಸಲಾಗಿದ್ದ ಶೇಡ್ಡುಗಳಲ್ಲಿ ಸಂತ್ರಸ್ಥರು ವಾಸವಾಗಿರದೇ ಕೂಲಿಗಾಗಿ ಬಂದ ಗ್ರಾಮಸ್ಥರು ವಾಸವಾಗಿದ್ದಾರೆ. ಹೀಗಾಗಿ ಇವರು ಸಂತ್ರಸ್ಥರಲ್ಲದೇ ಇರುವುದರಿಂದ ಪುನರವಸತಿ ಸೌಲಭ್ಯ ನೀಡಲು ಅವಕಾಶ ಇಲ್ಲ.

ಯೋಜನೆಯಿಂದ ಭಾದಿತರಾದ ಸಂತ್ರಸ್ಥರಿಗೆ ಪೂರ್ಣ ಪ್ರಮಾಣದ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಪ್ಯಾಕೇಜನ್ನು ಈಗಾಗಲೇ ಮಂಜೂರು ಮಾಡಲಾಗಿರುತ್ತದೆ. ಇದರನ್ವಯ ಆಲಮಟ್ಟಿ ಜಲಾಶಯ ವ್ಯಾಪ್ತಿಯಲ್ಲಿ 82236 ಕುಟುಂಬಗಳು ಮತ್ತು ನಾರಾಯಣಪುರ ಜಲಾಶಯ ವ್ಯಾಪ್ತಿಯಲ್ಲಿ 11745 ಕುಟುಂಬಗಳು ಅಂದರೆ ಒಟ್ಟು 93981 ಅರ್ಹ ಸಂತ್ರಸ್ಥ ಕುಟುಂಬಗಳು ಇರುತ್ತವೆ. ಈ ಪೈಕಿ 82662 ಕುಟುಂಬಗಳಿಗೆ ಹಕ್ಕುಪತ್ರ ಸಹಿತ ಇತರೆ ಪುನರ್ವಸತಿ ಸೌಲಭ್ಯಗಳನ್ನು ಮಂಜೂರು ಮಾಡಲಾಗಿರುತ್ತದೆ. ಉಳಿದ 11319 ಕುಟುಂಬಗಳು

ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರವಾಗದೆ ಇರುವುದರಿಂದ ಹಕ್ಕುಪತ್ರ ನೀಡಿರುವುದಿಲ್ಲ.

ಪುನರ್ವಸತಿ ಪ್ಯಾಕೇಜಿನ ಅಡಿಯಲ್ಲಿ ಸಂತ್ರಸ್ಥರಿಗೆ ಮನೆ ಕಟ್ಟಡ ಅನುಕಂಪ ಪರಿಹಾರ ಧನ ರೂ.22,000/- ಮತ್ತು ನಿರ್ವಹಣಾ ಭತ್ಯೆ ರೂ.2800/-ಗಳನ್ನು ನೀಡಲಾಗುತ್ತಿದೆ. ಮತ್ತು ಪೂರ್ಣ ಜಮೀನುಗಳನ್ನು ಯೋಜನೆಯಡಿ ಕಳೆದುಕೊಂಡವರು ಜಮೀನು ಖರೀದಿಸಿದಲ್ಲಿ ರೂ. 60,000/-ಗಳನ್ನು ಭೂಮಿ ಖರೀದಿ ಅನುಕಂಪ ಪರಿಹಾರಧನ ನೀಡಲಾಗುತ್ತಿದೆ. ಇದಲ್ಲದೇ ಯೋಜನೆಯಡಿಯಲ್ಲಿ ಜಮೀನು ಹೊಂದಿಲ್ಲದ ಹಾಗೂ ಜಮೀನು ಕಳೆದುಕೊಳ್ಳದೆಯಿರುವ ಆದರೆ ತಮ್ಮ ವೃತ್ತಿ ವ್ಯಾಪಾರ ಹಾಗೂ ಕಸಬುಗಳಿಗೆ ತೊಂದರೆಯಾಗಿರುವ ಸಂತ್ರಸ್ಥರ ಆರ್ಥಿಕ ಸಬಲೀಕರಣಕ್ಕಾಗಿ ಸಂತ್ರಸ್ತರು ಇಚ್ಛಿಸಿದ ಉದ್ಯೋಗ ಮಾಡಲು ಸಣ್ಣ ಕೈಗಾರಿಕೆ ತರಬೇತಿ ನೀಡಿ ನಂತರ ಉದ್ಯೋಗ ಪ್ರಾರಂಭಿಸಲು ಉತ್ಪನ್ನ ಹೆಚ್ಚುವರಿ ಯೋಜನೆಯಡಿ ರೂ. 20,000/-ಗಳ ಅನುಕಂಪ ಧನ ನೀಡಲಾಗುತ್ತಿದೆ. ಈವರಗೆ ಇಂತಹ 16.170 ಅರ್ಹ ಸಂತ್ರಸ್ಥರನ್ನು ಗುರುತಿಸಿದ್ದು ಅವರ ಪೈಕಿ 3,336 ಸಂತ್ರಸ್ಥರಿಗೆ ಈ ಸೌಲಭ್ಯ ನೀಡಲಾಗಿದೆ ಮತ್ತು ಈ ಯೋಜನೆಯು ಚಾಲ್ತಿಯಲ್ಲಿರುತ್ತದೆ.

ಶ್ರೀ ಎ.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಚಿವರು ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ಸಮಸ್ಯೆಗಳಿಗೆ ಚಿರಪರಿಚಿತರಾಗಿರುವವರು. ಅವರಿಗೆ ಈ ಪ್ರಶ್ನೆ ಕೇಳುವ ಅವಶ್ಯಕತೆ ಇಲ್ಲ, ನಾನು ಈ ಪ್ರಶ್ನೆಯನ್ನು ಕಂದಾಯ ಸಚಿವರಿಗೆ ಏಕೆ ಕೇಳಿದ್ದೇನೆಂದರೆ......

ಉಪಾಧ್ಯಕ್ಷರು: ಪಾಟೀಲರೆ, ತಾವು ದಯವಿಟ್ಟು ಸ್ಪಷ್ಟೀಕರಣ ಕೇಳಿ.

ಶ್ರೀ ಎ.ಎಸ್.ಪಾಟೀಲ್: ನಾನು ಸ್ಪಷ್ಟೀಕರಣವನ್ನೇ ಕೇಳುತ್ತಿದ್ದೇನೆ. ನಾನು ಭಾಷಣ ಮಾಡುವಂತಿಲ್ಲ. ಈಗ 8.30 ಗಂಟೆಯಾಗಿರುವಾಗ ನನಗೂ ಭಾಷಣ ಮಾಡಲು ಇಷ್ಟವಿಲ್ಲ. ಈಗ ಸನ್ಮಾನ್ಯ ಸಚಿವರಾದ ಶ್ರೀ ಗೋವಿಂದ ಕಾರಜೋಳ್‌ರವರು ಕೇಳುತ್ತೀದ್ದೀರೆಂದು ನಾನು ಅಂದುಕೊಂಡಿದ್ದೇನೆ. ತಾವು ಏನು ಉತ್ತರ ಕೊಟ್ಟದ್ದೀರಿ, ಇದರಲ್ಲಿ ನನಗೆ ಬಹಳ ಮುಖ್ಯವಾಗಿ ಬೇಕಾಗಿರುವುದೇನೆಂದರೆ, ಬಹುಶ: ತಮಗೂ ಕೂಡ ಗೊತ್ತಿದೆ. ಇಡೀ ದೇಶದಲ್ಲಿ ಅತಿ ಹೆಚ್ಚು ಪುನರ್ವಸತಿ ಹೊಂದಿರುವ ಜನರು ಎಲ್ಲಿದ್ದಾರೆಂದರೆ ಅದು ಆಲಮಟ್ಟಿ ಮತ್ತು ನಾರಾಯಣಪುರದಲ್ಲಿ ಮಾತ್ರ, ಸುಮಾರು 5 ಲಕ್ಷ ಜನರು ಪುನರ್ವಸತಿಗೊಳಗಾಗಿದ್ದಾರೆ. ಅವರುಗಳನ್ನು ಅಲ್ಲಿಂದ ಹೊರಗಡೆ ಹಾಕಿದರು. ಅವರು ತಮ್ಮ ಭೂಮಿ ಕಳೆದುಕೊಂಡಿದ್ದಾರೆ. ಎಂತಹ ಭೂಮಿ ಕಳೆದುಕೊಂಡಿದ್ದಾರೆಂಬುದು ತಮಗೆ ಗೊತ್ತಿದೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಆದರೆ, ಬಹಳಷ್ಟು ಕುಟುಂಬಗಳು ತಮ್ಮ ಭೂಮಿ ಕಳೆದುಕೊಂಡ ನಂತರ ಅವರಿಗೆ ಏನು ಕೊಟ್ಟಿದ್ದೇವೆ? ಕೇವಲ ಒಂದೊಂದು ಮನೆ

ಕಟ್ಟಿಕೊಟ್ಟು, ಆ ಮನೆಯಲ್ಲಿ ಇರಬೇಕೆಂದು ಹೇಳಿದ್ದೇವೆ. ಆದರೆ, ಊರು ಎಲ್ಲಿದೆ? ಎಷ್ಟು ದೂರದಲ್ಲಿದೆ. ಅವರ ಭೂಮಿ ಎಲ್ಲಿದೆ? ಅವರು ಎಲ್ಲಿ ಉದ್ಯೋಗ ಮಾಡಬೇಕು?

ಇವತ್ತು ಅವರ ಪರಿಸ್ಥಿತಿ ಏನಾಗಿದೆ ಎಂದರೆ, ಅವರಿಗೆ ಉದ್ಯೋಗವಿಲ್ಲ.. 20,000 ರೂ. ಕೊಡುವುದಾಗಿ ತಾವು ಹೇಳಿದ್ದೀರಿ. 20,000 ರೂ.ಗಳನ್ನು ಯಾರಿಗೆ ಕೊಡುತ್ತಿದ್ದೀರಿ? ಒಂದು ಸಂಘ ಮಾಡಿದ್ದೀರಿ. ಸ್ವಸಹಾಯ ಸಂಘ ಮಾಡಿ ಅಲ್ಲಿ ಯಾರು ಭೂಮಿ ಕಳೆದುಕೊಂಡಿದ್ದಾರೋ, ಅಂತಹವರ ಒಂದು ಪುನರ್ವಸತಿ ಸಂಘ ಮಾಡಿ ಅಲ್ಲಿಗೆ 28,000 ರೂ.ಗಳನ್ನು ಕೊಟ್ಟಿದ್ದೀರಿ. ಒಬ್ಬ ವ್ಯಕ್ತಿ ಉದ್ಯೋಗ ಮಾಡುತ್ತೇವೆಂದರೆ, 20,000 ರೂ. ಕೊಟ್ಟಿದ್ದೀರಿ. ಆದರೆ, ಭೂಮಿ ಕಳೆದುಕೊಂಡವರಿಗೆ ಸರ್ಕಾರಿ ಉದ್ಯೋಗ ಕೊಡಬೇಕೆಂದಿದೆ. ಎಷ್ಟು ಜನರಿಗೆ ಸರ್ಕಾರಿ ಉದ್ಯೋಗ ಕೊಟ್ಟಿದ್ದೀರಿ? ಉತ್ತರದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಒಂದು ಮಾತು ಹೇಳಬೇಕೆಂದರೆ, 1979–80ರಲ್ಲಿ ಭೂಮಿ ಕಳೆದುಕೊಂಡಿದ್ದಾರೆ. ಆಗ ನಾನು ಹತ್ತು ವರ್ಷದವನಾಗಿದ್ದೆ. ತಮಗೂ ಗೊತ್ತಿದೆ. ನನಗೆ ಆ ಬಗ್ಗೆ ಹೆಚ್ಚು ಗೊತ್ತಿಲ್ಲ. 500, 2,000, 3,000 ರೂ. ಕೊಟ್ಟು ಭೂಮಿ ಕಸಿದುಕೊಂಡು ಅವರನ್ನು ಹೊರಗಡೆ ಹಾಕಿದ್ದೀರಿ. ಇವತ್ತು ಆ ಕುಟುಂಬಗಳು ಬೀದಿಪಾಲಾಗಿವೆ. ಅವರಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಕೊಡಬೇಕೆಂದು ಕೇಳಿದಾಗ 2001ನೇ ಇಸವಿಯಲ್ಲಿ ಒಂದು ಅದೇಶ ಹೊರಡಿಸಿದ್ದೀರಿ. ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿಗೆ ಪರಿಗಣಿಸಬೇಕೆಂದು ಕೇಳಿದಾಗ, ಯಾರು ಭೂಮಿ ಕಳೆದುಕೊಂಡಿದ್ದಾರೋ, ಅವರ ಮಕ್ಕಳಿಗೆ ಕೊಡಬೇಕೆಂದು ಆದೇಶ ಹೊರಡಿಸಿದ್ದೀರಿ. ಅಂದರೆ, 2001ರಲ್ಲಿ ಆದೇಶ ಹೊರಡಿಸುವರಷ್ಟರಲ್ಲಿ ಅವರ ಮಕ್ಕಳಿಗೆ 40, 50 ವರ್ಷವಾಗಿತ್ತು. ಇದೇನು ಸ್ವಾಮಿ?

ಉಪಾಧ್ಯಕ್ಷರು: ಇದು ಗಮನ ಸೆಳೆಯುವ ಸೂಚನೆಯಾಗಿರುವುದರಿಂದ ತಾವು ಸ್ಪಷ್ಟೀಕರಣ ಕೇಳಬೇಕು. ವಿವರಗಳನ್ನು ಕೇಳುವುದಕ್ಕೆ ಇದರಲ್ಲಿ ಅವಕಾಶವಿಲ್ಲ. ತಮಗೆ ನೀಡಿರುವ ಉತ್ತರದಲ್ಲಿ ಸ್ಪಷ್ಟೀಕರಣ ಕೇಳಿ. ತಾವು ಮತ್ತೆ ಭಾಷಣ ಶುರು ಮಾಡಿದಿರಲ್ಲ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ): ಮತ್ತೆ ಏನು ಮಾಡಬೇಕೆಂದು ಹೇಳುತ್ತೀರಿ? ತಾವು ಈ ರೀತಿ ಹೇಳಿದರೆ ನಾನು ಸಭಾತ್ಯಾಗ ಮಾಡುತ್ತೇನೆ. ಅದು ನನ್ನ ಹಕ್ಕು. ನಾನು 5 ಲಕ್ಷ ಜನರಿಗೆ ಸಂಬಂಪಟ್ಟಂತೆ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ): ನೀವು ಈ ರೀತಿ ತಡೆಯಲು ನೋಡಿದರೆ ಹೇಗೆ? ನನಗೆ ಹಕ್ಕಿದೆ. I have a right to fight for my people.

ಉಪಾಧ್ಯಕ್ಷರು: ಇದು ತಡೆಯುವ ಪ್ರಶ್ನೆ ಅಲ್ಲ. you have got every right as per the procedure laid out, not as per your will and wish, ನೀವು ಹಾಗೆ ಮಾಡಲು ಬರುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಪಾಟೀಲರೆ, ಇದು ಗಮನ ಸೆಳೆಯುವ ಸೂಚನೆ, ದಯಮಾಡಿ ಕ್ಲಾರಿಫಿಕೇಷನ್ ಕೇಳಿ, ಕೂಲ್ ಆಗಿ ಮಾತನಾಡಿ.

ಶ್ರೀ ಎ.ಎಸ್.ಪಾಟಿಲ್ (ನಡಹಳ್ಳಿ): ನಾನು ಕೂಲ್ ಆಗಿಯೇ ಮಾತನಾಡುತ್ತಿದ್ದೇನೆ. ಎಲ್ಲದಕ್ಕೂ ಈ ರೀತಿಯಾದರೆ ನಾವೇನು ಮೊದಲ ಬಾರಿಗೆ ಶಾಸಕರಾಗಿದ್ದೇವೆಂದೇ? ಅಮೇರಿಕಾದಲ್ಲಿ 43 ವರ್ಷ ವಯಸ್ಸಿನ ವ್ಯಕ್ತಿ ಇವತ್ತು ಅಧ್ಯಕ್ಷರಾಗಿದ್ದಾರೆ. ನಮಗೆ ಮಾತನಾಡಲು ಆಗುವುದಿಲ್ಲವೆಂದರೆ ಹೇಗೆ? ನಾವು ಬೆಳಿಗ್ಗೆಯಿಂದ ಇಲ್ಲಿ ಕಾದು ಕುಳಿತಿದ್ದೇವೆ. ಹೀಗಿರುವಾಗ ನಮಗೆ ಹತ್ತು ನಿಮಿಷ ಕೊಡಲು ತಯಾರಿಲ್ಲವೆಂದರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಪಾಟೀಲರೆ, ತಾವು ಮೊದಲನೆ ಸಲ ಈ ಸಭೆಗೆ ಆಯ್ಕೆಯಾಗಿ ಬಂದಿದ್ದೀರಿ. ಸಭಾಧ್ಯಕ್ಷರ ಜೊತೆ ಮಾತನಾಡುವ ಸಂದರ್ಭದಲ್ಲಿ ಭಾಷೆಯ ಮೇಲೆ ಹಿಡಿತ ಇರಬೇಕಾಗುತ್ತದೆ. ಆದರೆ, ಅವರಿಗೆ threaten ಮಾಡುವ ರೀತಿ ನಾನು ಸಭಾತ್ಯಾಗ ಮಾಡುತ್ತೇನೆಂದು ಹೇಳತಕ್ಕದ್ದಲ್ಲ. ತಾವು ಏನು ಕ್ಲಾರಿಫಿಕೇಷನ್ ಕೇಳಬೇಕೊ ಕೇಳಿ. ನಾನು ಕೂಡ ಅದೇ ಪ್ರದೇಶದಿಂದ ಬಂದಂಥವನು. ನಾನು ಕೃಷ್ಣ ನದಿ ದಂಡೆಯ ಮೇಲೆ ಹುಟ್ಟಿದಂಥವನು. ಸಂತ್ರಸ್ಥರ ಕುಟುಂಬಕ್ಕೆ ನಾನು ಸಂಬಂಧಪಟ್ಟವನಿದ್ದೇನೆ. ನೀವು ಯೋಗ್ಯವಾಗಿರುವುದನ್ನು ಕೇಳುತ್ತಿದ್ದೀರಿ. ಆದರೆ, ನೇರವಾಗಿ ಏನು ಕೇಳಬೇಕಾಗಿದೆ, ಜನರಿಗೆ ಏನು ಸಂದೇಶ ಕಳುಹಿಸಬೇಕಾಗಿದೆ ಅದನ್ನು ದಯವಿಟ್ಟು ಮಾಡಿ.

ಶ್ರೀ ಎಂ.ಟಿ.ಕೃಷ್ಣಪ್ಪ: ನಾವು ಬೆಳಿಗ್ಗೆಯಿಂದ ಕಾದು ಕುಳಿತಿದ್ದೇವೆ. ಒಂದು ಗಮನ ಸೆಳೆಯುವ ಸೂಚನೆಗೆ 7 ದಿವಸಗಳಿಂದ ಕಾಯುತ್ತಿದ್ದೇವೆ. ಬೇಕಾದರೆ ಇನ್ನೊಂದು ವಾರ ಅಧಿವೇಶನವನ್ನು ಮುಂದೂಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಅಧಿವೇಶನ ಎಷ್ಟು ದಿವಸ ನಡೆಸಬೇಕು ಎಂಬ ಬಗ್ಗೆ Business Advisory Committee ಯಲ್ಲಿ ಈಗಾಗಲೇ ತೀರ್ಮಾನವಾಗಿರತಕ್ಕದ್ದು. ಏನು ಮಾಡಬೇಕಾಗಿದೆ ಅದನ್ನು ನಿಯಮಾವಳಿಯ ಪ್ರಕಾರ ಮಾಡುತ್ತಾರೆ. ಅದನ್ನು ಸಭಾಧ್ಯಕ್ಷರಿಗೆ ನೀವು ಕೇಳಬಹುದು.

ಶ್ರೀ ಕೆ.ಎಂ.ಶಿಲಿಂಗೇಗೌಡ: ಈ ಮೊದಲು ನೂರು ದಿವಸ ಅಧಿವೇಶನ ನಡೆಯುತ್ತಿತ್ತು, ಈಗ 60 ದಿನಕ್ಕೆ ಬಂದಿದೆ.

ಶ್ರೀ ಗೋವಿಂದ ಎಂ. ಕಾರಜೋಳ: ಎಷ್ಟು ದಿವಸ ಅಧಿವೇಶನ ನಡೆಯುತ್ತದೆ ಎಂಬುದು ಮುಖ್ಯವಲ್ಲ. ಈ ಸಭೆಯಲ್ಲಿ ಎಷ್ಟು ಮಂದಿ ಇದ್ದಾರೆ ಎಂಬುದು ಬಹಳ ಮುಖ್ಯ. ಈ ಪ್ರೊಸೀಡಿಂಗ್ಸ್‌ನಲ್ಲಿ ಎಷ್ಟು ಮಂದಿ ಭಾಗವಹಿಸಿದ್ದಾರೆ ಎಂಬುದು ಬಹಳ

ಮುಖ್ಯ. ಅದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಿ. ಅರ್ಥ ಇಲ್ಲದಿರುವುದನ್ನೆಲ್ಲ ಕೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ನಾನು ತಮ್ಮ ವಿರುದ್ಧವಾಗಿ ಮಾತನಾಡಿಲ್ಲ. ವೈಯಕ್ತಿಕವಾಗಿ ಮಾತನಾಡುತ್ತಾ ಹೇಳಿದ್ದೇನೆ. ಮಾನ್ಯ ಸಚಿವರು ಆ ಮಾತನ್ನು ಹೇಳಬೇಕಾದ್ದರಿಂದ ಇದನ್ನು ಹೇಳಬೇಕಾಯಿತು. ನಾನು ಏಕೆ ಆ ರೀತಿ ಮಾತನಾಡಿದೆಯೆಂದರೆ ನಾನು ಪ್ರಶ್ನೆ ಕೇಳುತ್ತಿರುವುದು ಒಂದು ಕ್ಷೇತ್ರ, ರಸ್ತೆಗೆ ಸಂಬಂಧಪಟ್ಟಿದ್ದಲ್ಲ. ಐದು ಲಕ್ಷ ಜನರಿಗೆ ತಾವು ಉದ್ಯೋಗದಲ್ಲಿ ಮೀಸಲಾತಿಯನ್ನು ಕೊಟ್ಟಿದ್ದೀರಿ. ಆ ರೀತಿ ಉದ್ಯೋಗದಲ್ಲಿ ಮೀಸಲಾತಿ ಕೊಟ್ಟಿದ್ದು ಯಾರಿಗೆ? ತಾವು ಹೇಳುತ್ತಿದ್ದೀರಿ, 2001 ರಲ್ಲಿ ತಾವು ಎರಡು ಸಲ ಸಚಿವರಾಗಿದ್ದೀರಿ, ತಾವು ಆ ಕ್ಷೇತ್ರದಿಂದ ಬಂದಿದ್ದೀರಿ, ತಮಗೆ ಆ ಪುನರ್ವಸತಿ ಬಗ್ಗೆ ಅನುಭವವಿದೆ. ಹಾಗಿದ್ದರೆ ಇಲ್ಲಿ ಇವರುಗಳಿಗೇನು ಉದ್ಯೋಗದಲ್ಲಿ ಮೀಸಲಾತಿ ಕೊಡಬೇಕಾಗಿತ್ತು ಆ ವಿಚಾರವನ್ನು ಕ್ಯಾಬಿನೇಟ್‌ನಲ್ಲಿ ಮೊಟ್ಟಮೊದಲನೆಯದಾಗಿ ಮಾಡಿದ್ದರೆ ಈ ಪ್ರಶ್ನೆ ಕೇಳುವಂಥ ಪ್ರಸಂಗ ನನಗೆ ಬರುತ್ತಿರಲಿಲ್ಲ. ದಯಮಾಡಿ ಇದರ ಬಗ್ಗೆ ತಾವು ಏನು ಕ್ರಮ ತೆಗದುಕೊಳ್ಳುತ್ತೀರಿ ಎಂಬುದನ್ನು ಮೊದಲನೆಯದಾಗಿ ಹೇಳಬೇಕು. ಎರಡನೆಯದಾಗಿ, ಅವರಿಗೆ ವೃತ್ತಿಪರ ಕೋರ್ಸ್‌ಗಳ ಬಗ್ಗೆ ತರಬೇತಿ ಕೊಟ್ಟು ಆ ಆಧಾರದ ಮೇಲೆ ಅವರಿಗೆ ಉದ್ಯೋಗ ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದರೆ, ವಾಸ್ತವಿಕ ಸತ್ಯವೇನೆಂದರೆ ಒಂದು ವರ್ಷದ ಹಿಂದೆಯೇ ಅಲ್ಲಿ ಏನು ಸಂತ್ರಸ್ತ ಕುಟುಂಬಗಳಿಗೆ ಉಚಿತವಾಗಿ special courseಗಳಲ್ಲಿ ತರಬೇತಿ ಕೊಡುತ್ತಿದ್ದರೋ ಉಚಿತವಾಗಿ ಶಿಕ್ಷಣವನ್ನೇನು ಕೊಡುತ್ತಿದ್ದರೋ ಅದನ್ನು ಈ ಸರ್ಕಾರ ಬಂದ ಮೇಲೆ ವಾಪಸ್ ತೆಗೆದುಕೊಂಡಿದ್ದಾರೆ. ಈ ಒಂದು ಪ್ರಶ್ನೆಯನ್ನಿಟ್ಟುಕೊಂಡು ನಾನು ತಮಗೆ ಕೇಳಿದ್ದೇನೆ. ತಾವು ಅತ್ಯಂತ ಅನುಭವವಿರುವ ಸಚಿವರಾಗಿದ್ದೀರಿ ಮತ್ತು ನಮ್ಮ ಭಾಗದವರಾಗಿದ್ದೀರಿ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು ಈ ಎರಡು ಕೆಲಸ ಮಾಡಿಕೊಡಬೇಕು. ಬಹಳ ಮುಖ್ಯವಾದ್ದದ್ದು ಪುನರ್ವಸತಿ ಅಭಿವೃದ್ಧಿ ಮಂಡಳಿಯನ್ನು ಏಕೆ ಸ್ಥಾಪನೆ ಮಾಡಬಾರದು? ತಾವು ಅಲ್ಲಿಯವರು ತಾನೆ? ಐದು ಲಕ್ಷ ಜನರು ಬೀದಿ ಪಾಲಾಗಿದ್ದಾರೆ ತಾನೆ? ಯವ್ವಾವುದೋ ಮಂಡಳಿಗಳನ್ನು ಮಾಡಿದ್ದೀರಿ. ಅದೇ ರೀತಿ ಇಲ್ಲಿ ಪುನರ್ವಸತಿ ಮಂಡಳಿಯನ್ನು ಮಾಡಿ. ಅದಕ್ಕೆ 2-3 ಕೋಟಿ ಹಣವನ್ನು ತೆಗೆದಿಟ್ಟು ಸಂಪೂರ್ಣ 5 ಲಕ್ಷ ಜನರಿಗೆ ಪುನರ್ವಸತಿ ಕೊಡಬೇಕಾಗಿದೆ. ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವವರೆಗೆ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡಲು ಸಹಕಾರ ಕೊಡಬೇಕು. ತಾವು ಈ ವಿಚಾರವನ್ನು ಕ್ಯಾಬಿನೇಟ್‌ನಲ್ಲಿ ಸರ್ಕಾರದಿಂದ ಅಪ್ರೂವ್ ಮಾಡಿಸಿಕೊಡುವ ಕೆಲಸವನ್ನು ಮಾಡುತ್ತೀರೆಂಬ ವಿಶ್ವಾಸದಿಂದ ಈ ಸದನದಲ್ಲಿ ತಾವು ಅದಕ್ಕೆ ಉತ್ತರಿಸುತ್ತೀರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದೊಡ್ಡನಗೌಡ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎ.ಎಸ್. ಪಾಟೀಲ್ ನಡಹಳ್ಳಿಯವರು ತಂದಿರುವ ಗಮನಸೆಳೆಯುವ ಸೂಚನೆಯ ವಿಚಾರದಲ್ಲಿ ಭಾಗವಹಿಸುತ್ತ ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ನಾರಾಯಣಪುರ ಡ್ಯಾಂ ನಿರ್ಮಾಣ ಮಾಡತಕ್ಕ ಸಂದರ್ಭದಲ್ಲಿ ಅಂದು ಮಾಡಿರುವ ಸರ್ವೆ ಕಾರ್ಯದ ತಪ್ಪಿನಿಂದಾಗಿ ಇವತ್ತು ನನ್ನ ತಾಲ್ಲೂಕಿನ ಸುಮಾರು 16ಕ್ಕೂ ಹೆಚ್ಚು ಗ್ರಾಮಗಳು, ನಾರಾಯನಪುರ ಡ್ಯಾಂ ನ ಹಿನ್ನೀರಿನಿಂದ 14 ಮತ್ತು ಮಲಪ್ರಭ ನದಿಯ ಪ್ರವಾಹ ತೀರದಲ್ಲಿ 6 ಗ್ರಾಮಗಳು ಒಟ್ಟು 20 ಗ್ರಾಮಗಳು ನನ್ನ ತಾಲ್ಲೂಕಿನಲ್ಲಿ ಸ್ಥಳಾಂತರಗೊಳ್ಳಬೇಕಾಗಿದೆ. ನಾರಾಯಣಪುರ ಡ್ಯಾಂನ ಹಿನ್ನೀರಿನಿಂದ ಮುಳುಗಡೆಯಾದ ಭೂಮಿ ಸರ್ಕಾರ ವಶಪಡಿಸಿಕೊಂಡಿರುವುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇವತ್ತು ನೀರು ನಿಲ್ಲುವುದರಿಂದ ಹೆಚ್ಚುವರಿ ಭೂಮಿ ಮುಳುಗಡೆಯಾಗುವುದರ ಜೊತೆಗೆ ಈ ಎಲ್ಲಾ ಗ್ರಾಮಗಳು ಜಲಾವೃತವಾಗಿದೆ. ನನ್ನ ಕ್ಷೇತ್ರದಲ್ಲಿ ಬರತಕ್ಕದ್ದು, ಬಿಸನಾಳ್, ಕೊಪ್ಪ, ಇತ್ತಲಗಿ, ಕಮದತ್, ಅಡಿಯಾಳ, ಎಮ್ಮಟ್ಟಿ, ಅನಪಕಟ್ಟಿ, ಹೆಸರುಪಂಟಿ, ಹುವಿನೂಳ್, ವರಗೋಡುದಿಣ್ಣೆ, ಕೆಂಗಲ್ ಮತ್ತು ಕಜ್ಗಲ್, ಅದರ ಜೊತೆಗೆ ಈಗಾಗಲೇ ತುರುಡಗಿ ಮತ್ತು ಕಟುಗೂಗ್ ಗ್ರಾಮಗಳನ್ನು ಸ್ಥಳಾಂತರ ಮಾಡುವುದಕ್ಕೆ ಸರ್ಕಾರ ಆದೇಶ ಹೊರಡಿಸಿದೆ. ಈ ಗ್ರಾಮಗಳನ್ನು ಸಂಪೂರ್ಣವಾಗಿ ಸ್ಥಳಾಂತರಗೊಳಿಸಿ ಪುನರ್ವಸತಿ ಕೇಂದ್ರವನ್ನು ಸ್ಥಾಪನೆ ಮಾಡಿಕೊಡಬೇಕು. ಅದರ ಜೊತೆಗೆ ಸರ್ಕಾರದಿಂದ ಪರಿಹಾರ ಕೊಡುವ ವ್ಯವಸ್ಥೆಯಾಗಬೇಕು. ರೈತರ ಹೆಚ್ಚುವರಿ ಭೂಮಿಯೇನು ನೀರಿನಲ್ಲಿ ಮುಳುಗಡೆಯಾಗಿದೆ ಆ ಭೂಮಿಗೂ ಸಹ ಸರ್ಕಾರದಿಂದ ಪರಿಹಾರ ಕೊಡಬೇಕು.

ಉಪಾಧ್ಯಕ್ಷರು: ತಾವು ಕ್ಲಾರಿಫಿಕೆಷನ್ ಕೇಳಿ.

ಶ್ರೀ ದೊಡ್ಡನಗೌಡ ಪಾಟೀಲ್: ಇದು ಜ್ವಲಂತ ಸಮಸ್ಯೆ. ನಾನು ಜಾಸ್ತಿ ಮಾತನಾಡುವುದಿಲ್ಲ. ಸಚಿವರಿಗೆ ಎಲ್ಲಾ ಗೊತ್ತಿದೆ.

ಉಪಾಧ್ಯಕ್ಷರು: ತಾವು ಕ್ಲಾರಿಫಿಕೇಷನ್ ಮಾತ್ರ ಕೇಳಿ. ಇಲ್ಲದಿದ್ದರೆ ಬೇರೆ ರೂಪದಲ್ಲಿ ತನ್ನಿ. ಅವಕಾಶ ಕೊಡುತ್ತೇನೆ. ಇದಕ್ಕೆ ನೀವು ಸಹಿಯನ್ನೇ ಮಾಡಿಲ್ಲ. ಆದರು ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ದೊಡ್ಡನಗೌಡ ಪಾಟೀಲ್: ಅದು ನಿಯಮ. ಒಂದೇ ಪ್ರಶ್ನೆಯಾಗಿದೆ.

ಉಪಾಧ್ಯಕ್ಷರು: ಒಂದೇ ಪ್ರಶ್ನೆಯಾಗಿದ್ದರೂ ಸಹ ನಿಯಮದಲ್ಲಿ ಅವಕಾಶ ಇಲ್ಲ. ನೀವು ಬೇರೆ ರೂಪದಲ್ಲಿ ತನ್ನಿ.

ಶ್ರೀ ದೊಡ್ಡನಗೌಡ ಪಾಟೀಲ್: ಇದು ಜ್ವಲಂತ ಸಮಸ್ಯೆ ಇದೆ.

ಉಪಾಧ್ಯಕ್ಷರು: ಸಚಿವರು ಸಮಸ್ಯೆಗೆ ಉತ್ತರವನ್ನು ಹೇಳುತ್ತಾರೆ.

ಶ್ರೀ ದೊಡ್ಡನಗೌಡ ಪಾಟೀಲ್: ಆದ್ದರಿಂದ, ಮಲಪ್ರಭ ನದಿಯ ಪ್ರವಾಹದಲ್ಲಿ ಬರತಕ್ಕ ಗಂಜಿಯಾಳು, ಚಕ್ಕಮಳಗಾವಿ, ಹಿರೆಮಳಗಾವಿ ಈ ಗ್ರಾಮಗಳನ್ನು ಸಹ

ಶಾಶ್ವತವಾಗಿ ಸ್ಥಳಾಂತರ್ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹ ಮಾಡುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಪಾಟೀಲ್ ನಡಹಳ್ಳಿ, ಶಾಸಕರು, ಕೃಷ್ಣ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯ ಮತ್ತು ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿರತಕ್ಕ 176 ಗ್ರಾಮದ 93.980 ಕುಟುಂಬಗಳೇನಿದೆ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಜಮೀನಿಗೆ 4–5 ಸಾವಿರ ಭೂ ಪರಿಹಾರವನ್ನು ಕೊಟ್ಟು ರೈತರನ್ನು ಹೊರಕ್ಕೆ ಹಾಕಿದರು ಎನ್ನತಕ್ಕ ಮಾತನ್ನು ಹೇಳಿದರು. ಕೃಷ್ಣ ಮೇಲ್ದಂಡೆ ಯೋಜನೆ ಪ್ರಾರಂಭವಾಗಿದ್ದು 1964ರಲ್ಲಿ. ಅಲ್ಲಿಂದ ಇದುವರೆಗೆ ಆ ಯೋಜನೆ ಪೂರ್ಣವಾಗಿಲ್ಲ. ಆಲ್ಲಿ ಹಿನ್ನೀರಿನಲ್ಲಿ ಬರತಕ್ಕ ಭೂಮಿಯ ಸ್ವಾಧೀನಪಡಿಸುವ ಕೆಲವಾಗಿದ್ದು ಬಹಳ ವರ್ಷಗಳ ಹಿಂದೆ. ಆಗ ಭೂಮಿ ಬೆಲೆ ಅಷ್ಟೇ ಇತ್ತು. ಆ ಕಾರಣಕ್ಕಾಗಿ 4–8 ಸಾವಿರ ರೂ.ಗಳವರೆಗೆ ಮಾತ್ರ ಪರಿಹಾರ ಸಿಕ್ಕಿರಬಹುದು. ಈ ರಾಜ್ಯದಲ್ಲಿ 1994ರಲ್ಲಿ ಚುನಾವಣೆಯಾದ ಮೇಲೆ, ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾದ ಮೇಲೆ, ಇದೇ ಸದನದಲ್ಲಿ ನಾನು ಆಡಳಿತ ಪಕ್ಷದ ಸದಸ್ಯನಾಗಿದ್ದೆ. ಆಗ ನಾವು 'ಕೃಷ್ಣಾ ಮೇಲ್ದಂಡೆ ಯೋಜನೆ ಸಂತ್ರಸ್ತರ ಸಮಸ್ಯೆ ಬಹಳಷ್ಟಿವೆ, ಅಲ್ಲಿಗೆ ವಿಶೇಷವಾದಂತಹ ಹುದ್ದೆಯನ್ನು ಮಂಜೂರು ಮಾಡಿ ಒಬ್ಬ ದಕ್ಷ ಅಧಿಕಾರಿಯನ್ನು ನೇಮಿಸಬೇಕು' ಎಂದು ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದೆವು. ಆಗ ಸರ್ಕಾರಕ್ಕೆ ಇರತಕ್ಕಂಥ ಎಲ್ಲಾ ಅಧಿಕಾರವನ್ನು ಕೊಟ್ಟು, Commissioner [R & R] ಅಂದರೆ Revenue Secretary equivalent post ಅನ್ನು ಮಂಜೂರು ಮಾಡಿ ಅಧಿಕಾರಿಯನ್ನು ನೇಮಿಸಲಾಯಿತು. ಆಗ ಬಾಗಲಕೋಟೆಯಲ್ಲಿ ಮತ್ತು ಆಲಮಟ್ಟಿಯಲ್ಲಿ ಸಂತ್ರಸ್ತರ ಸಮಸ್ಯೆ ಮತ್ತು ಪುನರ್ವಸತಿ ಪುನರ್ ನಿರ್ಮಾಣದ ಕಾರ್ಯ ಪ್ರಾರಂಭವಾಯಿತು. ಆಗ ನಾವು ಮತ್ತೊಂದು ವಿನಂತಿಯನ್ನು ಮಾನ್ಯ ಪಟೇಲ್‌ರ ಮುಂದೆ ಇಟ್ಟೆವು. 'ಕಂದಾಯ ಇಲಾಖೆಯ ಅಧಿಕಾರಿಗಳು ಭೂ ಪರಿಹಾರ ಮೊತ್ತವನ್ನು ಸರಿಯಾಗಿ ಕೊಡುತ್ತಿಲ್ಲ, ಭೂಮಿ ಬೆಲೆ ಸರಿಯಾಗಿ ನಿಗದಿ ಮಾಡುತ್ತಿಲ್ಲ, ಕಟ್ಟಡಗಳ ಬೆಲೆ ಸರಿಯಾಗಿ ನಿಗದಿ ಮಾಡುತ್ತಿಲ್ಲ, ಅದಕ್ಕಾಗಿ ಭೂಮಿಯನ್ನು ಕಳೆದುಕೊಂಡಂತಹ ರೈತರಿಗೆ ಪರಿಹಾರವನ್ನು ಕೊಡಲಿಕ್ಕೆ ಒಂದು ಸಮಿತಿಯನ್ನು ಮಾಡಬೆಕು, ಆ ಸಮಿತಿಯಲ್ಲಿ ಮುಳುಗಡೆಯಾದ ಪ್ರದೇಶದಲ್ಲಿ ಬರತಕ್ಕಂಥ ಎಲ್ಲಾ ಶಾಸಕರು ಆ ಸಮಿತಿಯ ಸದಸ್ಯರಾಗಿರಬೇಕು' ಎಂದು ವಿನಂತಿ ಮಾಡಿದೆವು. ಆಗ ಅಂದಿನ ಮುಖ್ಯಮಂತ್ರಿಗಳಾಗಿದ್ದಾಗ ಸನ್ಮಾನ್ಯ ಪಟೇಲ್‌ರವರು ಆ ರೀತಿಯ ಕಮಿಟಿಯೊಂದನ್ನು ಮಾಡಿ ಕೊಟ್ಟರು. ರೈತರಿಗೆ 85 ಸಾವಿರದಿಂದ 1 ಲಕ್ಷ 14 ಸಾವಿರ ರೂ.ಗಳವರೆಗು ಪರಿಹಾರವನ್ನು ಕೊಡತಕ್ಕ ಕೆಲಸವನ್ನು ನಾವು ಮಡಿದೆವು ಅದಲ್ಲದೆ ಕೆಲವು ಷರತ್ತುಗಳನ್ನು ಹಾಕಿ ಪ್ರತಿ ವರ್ಷ ಎಷ್ಟೆಷ್ಟು ಪರಿಹಾರ ಮೊತ್ತವನ್ನು ಹೆಚ್ಚು ಮಾಡಬೇಕು ಎಂದು ಮಾಡಿದೆವು. ಇವತ್ತು ಅಲ್ಲಿ ಯೋಗ್ಯವಾದಂತಹ ಪರಿಹಾರ ಸಿಗುತ್ತಿದೆ. ಆದರೆ ಮಾನ್ಯ ಪಾಟಿಲರು 'ನೀವೆಲ್ಲಾ

ಅವರನ್ನು ಹಾಗೆಯೇ ಹೊರಗೆ ಹಾಕಿದಿರಿ' ಎಂದು ಹೇಳಿದರು. ಅದು ಸರಿಯಲ್ಲ. ಅವರನ್ನೆಲ್ಲಾ ಹಾಗೆಯೇ ಹೊರಗೆ ಹಾಕಿಲ್ಲ. ಕಟ್ಟಡಗಲಿಗೆ ಪರಿಹಾರವನ್ನು ಕೊಟ್ಟಿದ್ದೇವೆ, ಭೂಮಿಗೆ ಪರಿಹಾರವನ್ನು ಕೊಟ್ಟಿದ್ದೇವೆ, ಮುಳುಗಡೆ ಆಗಿರತಕ್ಕಂಥ ಎಲ್ಲಾ ಆಸ್ತಿ ಪಾಸ್ತಿಗಳಿಗೆ ಎಲ್ಲಾ ಪರಿಹಾರವನ್ನೂ ಕೂಡ ಕೊಟ್ಟಿದ್ದೇವೆ. Ex-gratia amount ಬಗ್ಗೆ ಹೇಳಿದರು. 'Ex-gratia amount ಬರೇ 20 ಸಾವಿರ ರೂ.ಗಳನ್ನು ಕೊಟ್ಟು ಹೊರಗೆ ಹಾಕಿದರು' ಎಂದು ಅವರು ಹೇಳಿದರು. ಬರೇ 20 ಸಾವಿರ ರೂ.ಗಳನ್ನು ಮಾತ್ರ ಕೊಟ್ಟು ಹೊರಗೆ ಹಾಕಿಲ್ಲ. ಅವರ ಭೂಮಿ ಬೆಲೆ, ಕಟ್ಟಡದ ಬೆಲೆ, ಪರಿಹಾರ ಎಲ್ಲವನ್ನೂ ಕೊಡುವುದರ ಜೊತೆಯಲ್ಲಿ ಅನುಕಂಪದ 20 ಸಾವಿರ ex-gratia amount ಅನ್ನೂ ಕೂಡ ನಾವು ಕೊಟ್ಟಿದ್ದೇವೆ. ಉದ್ಯೋಗದ ತರಬೇತಿ ಕೊಡತಕ್ಕಂಥದ್ದು, ಅದು ನಡೆಯುತಕ್ಕಂಥದ್ದು. ಅವರಿಗೆ ಕೆಲಸ ಕಾರ್ಯಗಳನ್ನು ವಹಿಸಿ ಕೊಟ್ಟಿದ್ದೇವೆ. ತರಬೇತಿ ಕೊಟ್ಟು ಅವರು ಸ್ವತಂತ್ರವಾಗಿ ಬದುಕಲಿಕ್ಕೆ ಎಲ್ಲೆಲ್ಲಿ ಸಾಧ್ಯವಿದೆಯೋ, ಅಂತಹವರಿಗೆಲ್ಲಾ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಯಾವುದೇ ಒಂದು ಯೋಜನೆಯಲ್ಲಿ ಮುಳುಗಡೆಯಾದ ತಕ್ಷಣ, ಶಾಶ್ವತವಾದಂತಹ ಪರಿಹಾರಗಳನ್ನು ಕೊಡಲಿಕ್ಕಾಗುವುದಿಲ್ಲ. ಅಂದರೆ ಶಾಶ್ವತವಾದಂತಹ ಉದ್ಯೋಗ ಮಾಡುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಭೂಮಿ ಬೆಲೆ ಕೊಟ್ಟಿರುತ್ತೇವೆ, ಕಟ್ಟಡದ ಬೆಲೆ ಕೊಟ್ಟಿರುತ್ತೇವೆ, ಅವರಿಗೆ ಅನುಕೂಲವಾಗತಕ್ಕ ಉದ್ಯೋಗಗಳನ್ನು ಮಾಡಲೆಂದು ಹೇಳಿ, ಅವರಿಗೆ ಪರಿಹಾರವನ್ನು ಕೊಟ್ಟಿರುತ್ತೇವೆ. 'ನಿಮ್ಮ ಸರ್ಕಾರ ಬಂದ ಮೇಲೆ, ವಾಪಸ್ ತೆಗೆದುಕೊಂಡಿರಿ' ಎಂದು ಹೇಳಿದರು. ಮಾನ್ಯ ಪಾಟೀಲ್‌ರೆ, ನಮ್ಮ ಸರ್ಕಾರ ಬಂದ ಮೇಲೆ ವಾಪಸ್ ತೆಗೆದುಕೊಂಡಿಲ್ಲ. ನಿಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 3–5 ಸಾವಿರ ರೂ.ಗಳವರೆಗೆ ಪರಿಹಾರ ಕೊಟ್ಟು ಹೊರಗೆ ಹಾಕಿದ್ದಾರೆ. ನಮ್ಮ ಸರ್ಕಾರ ಬಂದಂತಹ ಸಂದರ್ಭದಲ್ಲಿ ಲಕ್ಷಕ್ಕಿಂತಲೂ ಹೆಚ್ಚು ಪರಿಹಾರವನ್ನು ಕೊಟ್ಟು ಹೊರಗೆ ಹಾಕಿದ್ದೇವೆ. ಇದು ತಮಗೆ ನೆನಪಿನಲ್ಲಿರಲಿ. ನೀವು 'ನಮ್ಮ ಸರ್ಕಾರ' ಎಂದು ಹೇಳಿದ್ದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. Job oriented courseಗಳನ್ನು ಇವತ್ತೂ ಕೂಡ ಅಲ್ಲಿ ಯಾರಿಗೆ ಅವಕಾಶ ಇದೆಯೋ, ಅವರಿಗೆ ಮಾಡಿಕೊಡತಕ್ಕಂಥದ್ದು ಮಾಡಿದ್ದೇವೆ. 'ಆ ಮಂಡಳಿ ಮಾಡಿದಿರಿ, ಈ ಮಂಡಳಿ, ಅದೇ ರೀತಿ R & R ಮಂಡಳಿ' ಮಾಡಬೇಕೆಂದು ಕೇಳಿದ್ದಾರೆ. ಸನ್ಮಾನ್ಯ ಸಭಾಧ್ಯಕ್ಷರೆ, Commissioner post ಅನ್ನು ಅಲ್ಲಿ create ಮಾಡಿ, ಸರ್ಕಾರಕ್ಕೆ ಇರುವಂತಹ ಎಲ್ಲಾ ಅಧಿಕಾರವನ್ನೂ ಕೊಟ್ಟು, ಸ್ಥಳದಲ್ಲೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವ ಉನ್ನತ ಅಧಿಕಾರ ಇರತಕ್ಕ ಹುದ್ದೆಯಾಗಿ ನೇಮಿಸಲಾಗಿದೆ. ಆ R & R ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವರು Chairman ಆಗಿದ್ದಾರೆ. ಇದಕ್ಕಿಂತಲೂ ಹೆಚ್ಚಿನದು ಇನ್ನೇನು ಮಾಡಲಿಕ್ಕೆ ಸಾಧ್ಯವಿದೆ? ಮಂಡಳಿ ಮಾಡುವುದರಿಂದ ಯಾವುದೇ ಪರಿಹಾರ ಸಿಗುವುದಿಲ್ಲ. ಆದರೆ ಸರ್ಕಾರ

ಉನ್ನತವಾದಂತಹ ಹುದ್ದೆಯನ್ನು ಅಲ್ಲಿ ಮಂಜೂರು ಮಾಡಿ, ಅವರಿಗೆ ಪರಿಹಾರ ಕೊಡತಕ್ಕಂಥ ಕೆಲಸ ಮಾಡ್ಡಿದೆ. ಹುನಗುಂದದ ಶಾಸಕರಾದ ಮಾನ್ಯ ಡಿ.ಜಿ.ಪಾಟೀಲ್‌ರವರು ಅವರಲ್ಲಿ 20 ಹಳ್ಳಿಗಳಲ್ಲಿ ಸಮಸ್ಯೆ ಇದೆ ಎಂದು ಹೇಳಿದರು. 'ಹೌದು', ಕೃಷ್ಣಾ ನದಿಯಲ್ಲಿ ಪ್ರವಾಹ ಹೆಚ್ಚಾದಾಗ, ಹಿನ್ನೀರಿನಲ್ಲಿ 20 ಗ್ರಾಮಗಳಲ್ಲಿ ಸಮಸ್ಯೆ ಉಂಟಾಗುತ್ತದೆ. 14 ಗ್ರಾಮಗಳಿಗೆ ಕೃಷ್ಣಾ ನದಿಯಿಂದ ಮತ್ತು ಮಲಪ್ರಭಾ ನದಿಯಿಂದ 6 ಹಳ್ಳಿಗಳಿಗೆ ಸಮಸ್ಯೆಯಾಗುತ್ತದೆ. ಅದನ್ನು ಸರ್ವೆ ಮಾಡಿಸಿ, ಯೋಗ್ಯವಾದಂತಹ ವ್ಯವಸ್ಥೆಯೊಂದನ್ನು ಮಾಡಲಿಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

[ಗೊಂದಲ]

ಉಪಾಧ್ಯಕ್ಷರು:- ಗಮನ ಸೆಳೆಯುವ ಸೂಚನೆ ಅಡಿಯಲ್ಲಿ ನಿಯಮಾನುಸಾರ ಚರ್ಚೆಗೆ ಅವಕಾಶವಿಲ್ಲ. ಇದರ ಚರ್ಚೆಯನ್ನು ಮುಕ್ತಾಯಗೊಳಿಸಲಾಗಿದೆ. ಮಾನ್ಯ ಸುನಿಲ್ ವಿ.ಹೆಗಡೆಯವರು ಮುಂದಿನ ವಿಷಯ ಪ್ರಸ್ತಾಪಿಸಿ.

[ಗೊಂದಲ]

ಶ್ರೀ ಎ.ಎಸ್.ಪಾಟೀಲ್[**ನಡಹಳ್ಳಿ**]**:-** ನಾವು ಕೇಳಿದ್ದ ಎಲ್ಲದಕ್ಕೂ ಮಾನ್ಯ ಮಂತ್ರಿಗಳಿಂದ ಉತ್ತರ ಬರಲಿಲ್ಲ.

[ಗೊಂದಲ]

ಶ್ರೀ ಡಿ.ಜಿ.ಪಾಟೀಲ್:- ಮಾನ್ಯ ಮಂತ್ರಿಗಳೇ, ಅದು ಸರ್ವೆಯಾಗಿ ಸರ್ಕಾರಕ್ಕೆ ಬಂದಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ.

[ಗೊಂದಲ]

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, 24 ಹಳ್ಳಿಗಳ ಬಗ್ಗೆ ಮಾಹಿತಿ ಕೇಳಿದ್ದಾರೆ. ನನ್ನ ಹತ್ತಿರ ನಿಖರವಾದಂತಹ ಮಾಹಿತಿ ಇಲ್ಲ. ಸರ್ವೆ ಮುಗಿದಿದ್ದರೆ, ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರ ಮಾಡುತ್ತದೆ. ಅವರನ್ನು ಸ್ಥಳಾಂತರ ಮಾಡಬೇಕೋ, ಪರಿಹಾರ ಕೊಡಬೇಕೋ ಅಥವಾ ಬದಲಿ ವ್ಯವಸ್ಥೆ ಮಾಡಬೇಕೋ, ಆ ಎಲ್ಲಾ ವ್ಯವಸ್ಥೆಗಳನ್ನು ಸರ್ಕಾರ ಮಾಡಿಕೊಡುತ್ತದೆ. ಮೀಸಲಾತಿ ವಿಚಾರದಲ್ಲಿ, ಯಾರು ಯೋಜನಾ ನಿರಾಶ್ರಿತರು ಇರುತ್ತಾರೋ, ಅಂತಹವರಿಗೆ ಸರ್ಕಾರಿ ಹುದ್ದೆಗಳಲ್ಲಿ ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಮೀಸಲಾತಿಯನ್ನು ಕೊಡಲಾಗುತ್ತಿದೆ. ಮಾನ್ಯ ಸದಸ್ಯರಿಗೆ ಬೇಕಾದರೆ ಆ ಆದೇಶವನ್ನು ಕಳುಹಿಸಿಕೊಡುತ್ತೇನೆ.

[ಗೊಂದಲ]

ಉಪಾಧ್ಯಕ್ಷರು:- please, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸುನಿಲ್ ಹೆಗಡೆಯವರು ತಮ್ಮ ಗಮನ ಸೆಳೆಯುವ ಸೂಚನೆ ಪ್ರಸ್ತಾಪಿಸಿ.

ಆ)ವಿಷಯ: ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವಾಗ

ಜನ ಸಂಖ್ಯೆಯ ಆಧಾರವನ್ನು ಸಡಿಲಗೊಳಿಸಿ ಜೋಯಿಡಾ ತಾಲ್ಲೂಕಿಗೆ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಬಗ್ಗೆ

- - -

ಶ್ರೀ ಸುನಿಲ್ ವಿ.ಹೆಗಡೆ [ಹಳಿಯಾಳ]:- ಮಾನ್ಯ ಉಪಾಧ್ಯಕ್ಷರೆ, ಅಂಗನವಾಡಿ ಕೇಂದ್ರಗಳನ್ನುಮಂಜೂರು ಮಾಡುವಾಗ ಜನಸಂಖ್ಯೆಯ ಆಧಾರವನ್ನು ಸಡಿಲಗೊಳಿಸಿ ಜೋಯಿಡಾ ತಾಲ್ಲೂಕಿಗೆ ಅಂಗನವಾಡಿ ಕೆಂದ್ರಗಳನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ [ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು]:- ಮಾನ್ಯ ಉಪಾಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಜನಸಂಖ್ಯೆ 2001ರ ಜನಗಣತಿಯ ಪ್ರಕಾರ 48914 ಇರುತ್ತದೆ. ಐಸಿಡಿಎಸ್ ಕಾರ್ಯಕ್ರಮದಡಿ ಜನಸಂಖ್ಯೆಯ ಹಿಂದಿನ ಮಾನದಂಡಗಳ ಪ್ರಕಾರ, ಪ್ರತಿ 1000 ಜನಸಂಖ್ಯೆಗೆ 1 ಅಂಗನವಾಡಿ ಕೇಂದ್ರವನ್ನು ಮಂಜೂರು ಮಾಡಬೇಕಾಗಿರುತ್ತದೆ. ಇದರಂತೆ ಈಗಾಗಲೇ ಜೋಯಿಡ ತಾಲ್ಲೂಕಿಗೆ ಭಾರತ ಸರ್ಕಾರದಿಂದ 153 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದ್ದು, ಈ ಎಲ್ಲಾ ಕೇಂದ್ರಗಳು ಕಾರ್ಯನಿರತವಾಗಿರುತ್ತದೆ.

ಮುಂದುವರೆದಂತೆ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಐಸಿಡಿಎಸ್ ವಿಸ್ತರಣೆಯ ಮಾರ್ಗಸೂಚಿಯ ಪ್ರಕಾರ ಎಲ್ಲಾ ನಗರ ಕೊಳಚೆ ಪ್ರದೇಶಗಳಲ್ಲಿ ಹಾಗೂ ಪ.ಜಾ/ಪ.ಪಂ/ಅಲ್ಪಸಂಖ್ಯಾತರು ಹೆಚ್ಚಿಗೆ ಇರುವಂತಹ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರವನ್ನು ಮಂಜೂರು ಮಾಡಬೇಕಾಗಿರುತ್ತದೆ. ಇದರಂತೆ ಇತ್ತೀಚೆಗೆ ಕೇಂದ್ರ ಸರ್ಕಾರವು ಪತ್ರ ಸಂಖ್ಯೆ:14-1/2008-ಸಿಡಿ-1, ದಿನಾಂಕ: 18.12.2008 ರಲ್ಲಿ ಜನಸಂಖ್ಯಾ ಮಾನದಂಡಗಳನ್ನು ಇನ್ನಷ್ಟು ಸಡಿಲಿಸಿ, ನಗರ/ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಟ 400 ಜನಸಂಖ್ಯೆಗೆ 1 ಅಂಗನವಾಡಿ ಕೇಂದ್ರ ಹಾಗೂ ಕನಿಷ್ಟ 150 ಜನಸಂಖ್ಯೆಗೆ 1 ಮಿನಿ ಅಂಗನವಾಡಿ ಕೇಂದ್ರವನ್ನು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಕನಿಷ್ಠಾ 300 ಜನಸಂಖ್ಯೆಗೆ 1 ಅಂಗನವಾಡಿ ಕೇಂದ್ರ ಹಾಗೂ ಕನಿಷ್ಟ 150 ಜನಸಂಖ್ಯೆಗೆ 1 ಮಿನಿ ಅಂಗನವಾಡಿ ಕೇಂದ್ರವನ್ನು ಮಂಜೂರು ಮಾಡಬೇಕೆಂದು ತಿಳಿಸಿರುತ್ತಾರೆ. ಇದರಂತೆ ಮತ್ತೊಮ್ಮೆ ಜೊಯಿಡಾ ತಾಲ್ಲೂಕಿಗೆ 3ನೇ ಹಂತದ ಐಸಿಡಿಎಸ್ ವಿಸ್ತರಣೆಯಲ್ಲಿ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 14-2/2008-ಸಿಡಿ-1, ದಿನಾಂಕ: 11.12.2008 ರ ಪತ್ರದಲ್ಲಿ ಇನ್ನೂ ಹೆಚ್ಚುವರಿ 153 ಅಂಗನವಾಡಿ ಕೇಂದ್ರಗಳು ಹಾಗೂ 28 ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವ ಕುರಿತು ಪರಿಶೀಲಿಸಿ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಈ ಹಿಂದೆ 153 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಸನ್ಮಾನ್ಯ ಗೌರವಾನ್ವಿತ ಸದಸ್ಯರ ಬೇಡಿಕೆಯಂತೆ, ಈಗ

ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : 14-2/2008 ದಿನಾಂಕ 11.12.2008ರ ಪತ್ರದಲ್ಲಿ ಇನ್ನೂ ಹೆಚ್ಚುವರಿ 153 ಅಂಗನವಾಡಿ ಕೇಂದ್ರಗಳು ಹಾಗೂ 28 ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿರುತ್ತದೆ. ಇದನ್ನು 1.4.2009ರಿಂದ ಪ್ರಾರಂಭಿಸಲಾಗುತ್ತದೆ ಎಂದು ನಾನು ಅವರಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸುನಿಲ್ ವಿ.ಹೆಗಡೆ:- ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರಿಗೆ ಕೇಳಬಯಸುವುದೇನೆಂದರೆ, ಜೋಯಿಡಾ ತಾಲ್ಲೂಕು ಗುಡ್ಡಗಾಡು ಪ್ರದೇಶವಾಗಿದ್ದು, ಇವರೇನು ಒಂದು ಅಂಗನವಾಡಿಗೆ 300 ಜನಸಂಖ್ಯೆ, ಮಿನಿ ಅಂಗನವಾಡಿಗೆ 150 ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡಿದ್ದಾರೆ, ಈ ಆಧಾರದ ಮೇಲೆ ಆ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸದಾಗಲೂ ಸಮಸ್ಯೆ ಉಂಟಾಗುತ್ತಿದ್ದ ಕಾರಣ, ಈ ಬಗ್ಗೆ ಸೂಕ್ತವಾದಂತಹ ಕ್ರಮ ಕೈಗೊಂಡು, ಈಗಾಗಲೇ ಮಂಜೂರಾದಂತಹ 153 ಅಂಗನವಾಡಿ ಕೇಂದ್ರಗಳು ಮತ್ತು 29 ಮಿನಿ ಅಂಗನವಾಡಿ ಕೇಂದ್ರಗಳನ್ನು ಆದಷ್ಟು ಶೀಘ್ರದಲ್ಲಿ ಶುರು ಮಾಡಬೇಕು. ಏಕೆಂದರೆ, ಈಗಾಗಲೇ ಅಲ್ಲಿ ಬಹಳಷ್ಟು ಜನರಿಗೆ ಸಮಸ್ಯೆಯಾಗಿ, ಪ್ರೈವೇಟ್ ಅಂಗನವಾಡಿ ನಡೆಸಲಾಗುತ್ತಿದೆ. ಸ್ವತಃ ನಾನು ಕೈಯಿಂದ 7-8 ಅಂಗನವಾಡಿಗಳಿಗೆ ಸಂಬಳ ಕೊಟ್ಟು, ಶುರು ಮಾಡಿಸಿದ್ದೇನೆ. ಆದಕಾರಣ, ದಯವಿಟ್ಟು ತಮ್ಮ ಜನಸಂಖ್ಯೆ ಆಧಾರದ ಕ್ರಮವನ್ನು ಸಡಿಲಗೊಳಿಸಿ, ಆದಷ್ಟು ಬೇಗ ಸಾಧ್ಯವಾದಷ್ಟು ಹೆಚ್ಚಿಗೆ ಅಂಗನವಾಡಿಗಳನ್ನು ಅಲ್ಲಿ ತೆರೆಯಲಿಕ್ಕೆ ಪ್ರಯತ್ನಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರಿಗೆ ಮತ್ತು ಕೊಳಚೆ ಪ್ರದೇಶದವರಿಗೆ, ಗುಡ್ಡಗಾಡು ಪ್ರದೇಶದವರಿಗೆ 40ಕ್ಕಿಂತ ಹೆಚ್ಚು ಸಂಖ್ಯೆ ಇರತಕ್ಕಂಥ, ವಯಸ್ಸು 6 ವರ್ಷದ ಒಳಗಿನ ಮಕ್ಕಳು ಇರತಕ್ಕಂಥ ಪ್ರದೇಶದಲ್ಲಿ ಅಂಗನವಾಡಿಗೆ ಅವಕಾಶ ನೀಡಲು ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದೆ. ಅದರಂತೆ ಕ್ರಮ ವಹಿಸಲಾಗುತ್ತದೆ. ಮಾನ್ಯ ಸದಸ್ಯರ ಹೆಚ್ಚಿನ ಅಂಗನವಾಡಿ ಕೇಂದ್ರಗಳ ಬೇಡಿಕೆಯನ್ನು ನಾವೂ ಪೂರೈಸುತ್ತೇವೆ.

ಇ)ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಸಕಾರವು ಸರಬರಾಜು ಮಾಡುತ್ತಿರುವ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಬೆಳೆಗಳು ಹಾಳಾಗುತ್ತಿದ್ದು, ದಿನಕ್ಕೆ 12 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

– – –

ಶ್ರೀ ಸುನಿಲ್ ವಿ.ಹೆಗಡೆ [ಹಳಿಯಾಳ] [ಶ್ರೀ ಕೆ.ಪಿ.ಬಚ್ಚೇಗೌಡರ ಪರವಾಗಿ]:- ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಸರ್ಕಾರವು

ಸರಬರಾಜು ಮಾಡುತ್ತಿರುವ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಬೆಳೆಗಳು ಹಾಳಾಗುತ್ತಿದ್ದು, ದಿನಕ್ಕೆ 12 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ವಿದ್ಯುತ್ ಸಚಿವರು ಸದನದಲ್ಲಿಲ್ಲ. ಅವರ ಪರವಾಗಿ ಸರ್ಕಾರದಿಂದ ಯಾರು ಉತ್ತರ ಕೊಡುತ್ತೀರಿ?

ಶ್ರೀ ಹೆಚ್.ಸಿ.ಬಾಲಕೃಷ್ಣ:- ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಇದೊಂದು ಪ್ರಮುಖವಾದಂತಹ ಪ್ರಶ್ನೆಯಾಗಿದೆ.

ಶ್ರೀ ಎಂ.ಟಿ.ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಹಳ್ಳಿಗಳಲ್ಲಿ ನಾಟಕವಾಡುವಾಗ, ಮಾತು ಮರೆತು ಹೋದಾಗ, ಪಕ್ಕದಲ್ಲೇ ನಿಂತು ಎಳೆದಾಡುತ್ತಿರುತ್ತಾರೆ. ನಮ್ಮ ಸರ್ಕಾರ reply ಮಾಡುವುದು ಆ ರೀತಿಯಾಗಿದೆ.

ಶ್ರೀ ಕೆ.ಸುರೇಶ್‌ಕುಮಾರ್ [ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] [ಮಾನ್ಯ ಇಂಧನ ಸಚಿವರ ಪರವಾಗಿ]:- ಮಾನ್ಯ ಉಪಾಧ್ಯಕ್ಷರೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಬಚ್ಚೇಗೌಡ ಕೆ.ಪಿ. ರವರು ನಿಯಮ 73 ರಡಿಯಲ್ಲಿ ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಅತೀ ಹಿಂದುಳಿದ ಜಿಲ್ಲೆಯಾಗಿದ್ದು, ಇಲ್ಲಿನ ರೈತರು ಕೃಷಿಗೆ ಅಂತರ್ ಜಲವನ್ನೇ ನಂಬಿ ವ್ಯವಸಾಯ ಮಾಡುತ್ತಿದ್ದಾರೆ. ಈಗ ಸರ್ಕಾರವು ಪೂರೈಸುತ್ತಿರುವ ಅಸಮರ್ಪಕ ವಿದ್ಯುತ್ ಸರಬರಾಜಿನಿಂದ ರೈತರ ಪಂಪುಸೆಟ್ಟುಗಳು ಸರಿಯಾಗಿ ಕೆಲಸ ಮಾಡದೆ ರೈತರು ಬೆಳೆದ ಬೆಳೆಗಳೆಲ್ಲ ಒಣಗಿ ಹೋಗುತ್ತಿದ್ದು, ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ, ಚಿಕ್ಕಬಳ್ಳಾಪುರ್ ಜಿಲ್ಲೆಗೆ ದಿನಕ್ಕೆ ಕನಿಷ್ಟ 12 ಗಂಟೆಗಳ ಕಾಲ 3 ಫೇಸ್ ವಿದ್ಯುತ್ತನ್ನು ಸರಬರಾಜು ಮಾಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ರಾಜ್ಯದಲ್ಲಿ ತೀವ್ರ ವಿದ್ಯುತ್ ಅಭಾವವಿದ್ದು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಲಭ್ಯವಾಗುತ್ತಿರುವ ವಿದ್ಯುತ್ ಪ್ರಮಾಣ ಬೇಡಿಕೆ ಪ್ರಮಾಣಕ್ಕಿಂತ ಕಡಿಮೆ ಇರುತ್ತದೆ. ಆದಕಾರಣ, ಸರ್ಕಾರದ ಆದೇಶದನ್ವಯ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಚಿಕ್ಕಬಳ್ಳಾಪುರ ಜಿಲ್ಲೆಯು ಸೇರಿದಂತೆ ತನ್ನ ವ್ಯಾಪ್ತಿಯಲ್ಲಿನ ಗ್ರಾಮಾಂತರ ಪ್ರದೇಶಗಳಿಗೆ ಪ್ರತಿ ದಿಸ 6 ಗಂಟೆಗಳ ಕಾಲಾ 3 ಫೇಸ್ ವಿದ್ಯುತ್ತನ್ನು ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ತನ್ನು ನಿಗದಿತ ಅವಧಿಯಲ್ಲಿ ಸರಬರಾಜು ಮಾಡಲಾಗುತ್ತಿದೆ. ರಾಜ್ಯದಲ್ಲಿನ ವಿದ್ಯುತ್ ಪರಿಸ್ಥಿತಿಯಲ್ಲಿ ಸುಧಾರಣೆ ಆಗುವವರೆಗೂ ವಿದ್ಯುತ್ ಸರಬರಾಜಿನ ಕಾಲಾವಧಿಯನ್ನು ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ವಿದ್ಯುತ್ ಪರಿಸ್ಥಿತಿಯು ಸುಧಾರಿಸಿದ ನಂತರ, ಚಿಕ್ಕಬಳ್ಳಾಪುರ ಜಿಲ್ಲೆಯೂ ಸೇರಿದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಮೀಣ ಪ್ರದೇಶಗಳಿಗೂ ಸಮರ್ಪಕ ವಿದ್ಯುತ್ ಸರಬರಾಜು ಮಾಡಲಾಗುವುದು.

ಶ್ರೀ ಸುನೀಲ್ ವಿ.ಹೆಗಡೆ[ಶ್ರೀ ಕೆ.ಪಿ. ಬಚ್ಚೇಗೌಡ ಅವರ ಪರವಾಗಿ]: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬೋರ್ ವೆಲ್‌ಗಳಲ್ಲಿ ನೀರು ನೂರಾರು ಫೂಟ್ ಕೆಳಗೆ ಹೋಗಿದ್ದು, ಒಂದು ಬೋರ್ ನಿಂದ 800 ರಿಂದ 1500 ಗ್ಯಾಲನ್ ಮಾತ್ರ ನೀರು ಸಿಗುತ್ತಿದೆ. ಹೀಗಿರುವಾಗ ಹನಿ ನೀರಾವರಿಯಿಂದ ಬೆಳೆಯುವ ಬೆಳೆಗಳಿಗೆ ವಿದ್ಯುತ್ ಕೊಡಬೇಕಾದರೆ, ಅವರ ಸ್ಲ್ಯಾಬ್ ಮಾಡಬೇಕಾಗುತ್ತದೆ. ಕೆಲವೊಂದು ಏರಿಯಾಗೆ 1–2 ಗಂಟೆ ಬಿಟ್ಟು ಮತ್ತೆ ಕೆಲವೊಂದು ಏರಿಯಾಗೆ 2 ಗಂಟೆ ಬಿಡಬೇಕಾಗುತ್ತದೆ. ಇಂಥ ಒಂದು ಸಂದರ್ಭದಲ್ಲಿ ಅಲ್ಲಿ ಅತಿ ಹಿಂದುಳಿದ ಕ್ಷೇತ್ರವೆಂದು ಸಚಿವರೆ ಹೇಳುತ್ತಿದ್ದಾರೆ. ಆ ಕಾರಣದಿಂದ ಅಲ್ಲಿ 6 ಗಂಟೆ ವಿದ್ಯುತ್ ಪೂರೈಕೆ ಮಾಡಿದರೆ ಸಾಧ್ಯವಾಗುವುದಿಲ್ಲ. ಕಾರ್ಖಾನೆಗಳಿಗೆ ವಿದ್ಯುತ್ ಅನ್ನು ಕಡಿತಗೊಳಿಸಿ ರೈತರಿಗೆ ಈ ಮೇ 15ರವೆಗೆ 12 ಗಂಟೆಗಳು ವಿದ್ಯುತ್ ಕೊಡುವ ವ್ಯವಸ್ಥೆಯಾಗಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್[ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು]: ಈಗಾಗಲೇ ಪರಿಸ್ಥಿತಿಯನ್ನು ವಿವರಿಸಲಾಗಿದೆ. ಸುಧಾರಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ವಿಷಯ: ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯಹೆದ್ದಾರಿ 3ರಲ್ಲಿ ಹಾಗೂ 94ರಲ್ಲಿ ರಸ್ತೆಗಳು ಹಾಳಾಗಿದ್ದು ಈ ರಸ್ತೆಗಳ ದುರಸ್ತಿ ಕಾರ್ಯ ಕೈಗೊಳ್ಳುವ ಬಗ್ಗೆ.

– – –

ಶ್ರೀ ಹೆಚ್.ಸಿ.ಬಾಲಕೃಷ್ಣ(ಮಾಗಡಿ):– ಸನ್ಮಾನ್ಯ ಅಧ್ಯಕ್ಷರೇ, ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ 3 ರಲ್ಲಿ ಮಾಗಡಿಯಿಂದ ಗುಡೇಮಾರನಹಳ್ಳಿ ಕೈಮಾರ್ಗದವರೆಗೆ ಹಾಗೂ ರಾಜ್ಯ ಹೆದ್ದಾರಿ –94 ರಲ್ಲಿ ಕಲ್ಯಾ–ಶ್ರೀಪತಿಹಳ್ಳಿ ಸಾತನೂರುವರೆಗೆ ವಾಹನಗಳು ಚಲಿಸಲು ಸಾಧ್ಯವಿಲ್ಲದಷ್ಟು ರಸ್ತೆಗಳು ಹದಗೆಟ್ಟಿದ್ದು ಹಾಗೂ ಇದಕ್ಕೆ ಸಂಬಂಧಪಟ್ಟ ಸಚಿವರು ಖುದ್ದಾಗಿ ಈ ರಸ್ತೆಗಲ ದುಸ್ಥಿತಿಯನ್ನು ಅವಗಾನಿಸಿ ದುರಸ್ಥಿಪಡಿಸುವ ಭರವಸೆ ನೀಡಿದ್ದರೂ ಸಹ, ಈ ರಸ್ತೆಗಳ ದುರಸ್ತಿಗೆ ಯಾವುದೇ ಕ್ರಮಗಳನ್ನು ಜರುಗಿಸಿರುವುದಿಲ್ಲದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):– 1. ಹುಣಸನಹಳ್ಳಿ–ಚಿಕ್ಕಹಳ್ಳಿ ರಸ್ತೆ (ತಮಿಳುನಾಡು ಗಡಿಯಿಂದ ಆಂಧ್ರಗಡಿ ಸೇರುವ ರಸ್ತೆ) ರಾಜ್ಯಹೆದ್ದಾರಿ 3: ಸದರಿ ರಸ್ತೆಯು ಮಾಗಡಿ ತಾಲ್ಲೂಕಿನಲ್ಲಿ ಸರಪಳಿ 82.67 ರಿಂದ 120.50 ರವರೆಗೆ ಹಾದು ಹೋಗುತ್ತಿದ್ದು ಒಟ್ಟು 37.83 ಕಿಮೀ ಉದ್ದವಿರುತ್ತದೆ. ಸದರಿ ರಸ್ತೆಯ ಮಾಗಡಿಯಿಂದ ಗುಡೇಮಾರನಹಳ್ಳಿ ಭಾಗವು (ಸರಪಳಿ 93.50 ರಿಂದ 107.50) 14 ಕಿಮೀ ಉದ್ದವಿದ್ದು ಸದರಿ ಭಾಗದಲ್ಲಿ ಅಧಿಕ ವಾಹನ ಸಂಚಾರದಿಂದ **(PCU**

12576) ರಸ್ತೆಯು ಹಾಳಾಗಿದ್ದು ದುರಸ್ತಿಪಡಿಸಲು ಕೆಳಗಿನಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಸದರಿ ರಸ್ತೆಯ ಪೂರ್ತಿ ಉದ್ದವನ್ನು 2005-08ರ 3 ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ ಅಡಿಯಲ್ಲಿ ನಿರ್ವಹಣೆಗಾಗಿ ಕೆ.ಆರ್.ಡಿ.ಸಿ.ಎಲ್ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ರೂ.102.00 ಲಕ್ಷಗಳ ಮೊತ್ತದಡಿ ಕೇವಲ ನಿರ್ವಹಣೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ನಿರ್ವಹಣೆ ಪ್ಯಾಕೇಜ್ ಅವಧಿಯು 2008 ನವೆಂಬರ್ ಅಂತ್ಯಕ್ಕೆ ಮುಕ್ತಾಯವಾಗಿರುತ್ತದೆ. ಸದರಿ ಪ್ಯಾಕೇಜ್‌ನಲ್ಲಿ ಯಾವುದೇ ಮರು ನಿರ್ಮಾಣ, ಮರು ಡಾಂಬರೀಕರಣ ಕಾಮಗಾರಿಗೆ ಅಂದಾಜಿನಲ್ಲಿ ಅನುವು ಮಾಡಿರುವುದಿಲ್ಲ. ಸರಪಳಿ 95.5 ರಿಂದ 109.50 ಕಿಮೀ. ವರೆಗಿನ 14 ಕಿಮೀ. ರಸ್ತೆ ಉದ್ದದಲ್ಲಿ ಕೇವಲ 8 ಕಿಮೀ. ರಸ್ತೆ ಮಾತ್ರ ಗುಂಡಿ ಮುಚ್ಚಲು ಯೋಗ್ಯವಾಗಿದ್ದು 2008-09ನೇ ಸಾಲಿನಲ್ಲಿ ಸದರಿ 8 ಕಿಮೀ. ಉದ್ದದ ರಸ್ತೆಯನ್ನು ಗುಂಡಿಗಳನ್ನು ಮುಚ್ಚಲು ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ ರೂ.700 ಲಕ್ಷಗಳ ಮೊತ್ತದಲ್ಲಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳನ್ನು ಫೆಬ್ರವರಿ 2009 ರೊಳಗೆ ಪೂರ್ಣಗೊಳಿಸಲಾಗುವುದು. ಉಳಿದ 6 ಕಿಮೀ. ಉದ್ದದ ರಸ್ತೆಗೆ ಕಳೆದ 10 ವರ್ಷಗಳಿಂದಲೂ ಯಾವುದೇ ಮರುಡಾಂಬರೀಕರಣ ಮಾಡದೇ ಇರುವುದರಿಂದ ರಸ್ತೆಯ ಈ ಭಾಗವನ್ನು ಮರುನಿರ್ಮಾಣ ಮಾಡುವುದುದು ಅವಶ್ಯಕವಾಗಿದ್ದ, ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿ ಕೈಗೊಳ್ಳಲಾಗುವುದು.

ಸದರಿ ರಸ್ತೆಯ ಪೂರ್ತಿ ಉದ್ದವನ್ನು 2 ಪಥದ ರಸ್ತೆಯನ್ನಾಗಿ ಉನ್ನತ ಮಟ್ಟಕ್ಕೆ ಮರು ನಿರ್ಮಾಣ ಮಾಡಲು ಖಾಸಗಿ ಸಾರ್ವಜನಿಕ ಸಹಭಾಗಿತ್ವ (PPP) ಅಡಿ ಯೋಜನೆ ರೂಪಿಸಲಾಗಿದೆ.

II. ಬಾಗೇಪಲ್ಲಿ-ಹಲಗೂರು ರಾಜ್ಯ ಹೆದ್ದಾರಿ – 94

ಬಾಗೇಪಲ್ಲಿ-ಹಲಗೂರು ರಾಜ್ಯ ಹೆದ್ದಾರಿ – 94 ಮಾಗಡಿ ತಾಲ್ಲೂಕಿನಲ್ಲಿ ಸರಪಳಿ 141.32 ರಿಂದ 187.76 ಕಿಮೀವರೆಗೆ ಹಾದು ಹೋಗುತ್ತಿದ್ದು ಒಟ್ಟು 44.70 ಕಿಮೀ ಉದ್ದವಿರುತ್ತದೆ. (1.74 ಕಿಮೀ SH-85 ರ overlap ಆಗಿರುತ್ತದೆ) ಸದರಿ ರಸ್ತೆಯ ಕಲ್ಯಾ – ಶ್ರೀಪತಿಹಳ್ಳಿ, ಸಾತನೂರು ಭಾಗವು 165.62 ರಿಂದ 173.62 ರವರೆಗೆ ಒಟ್ಟು 8.00 ಕಿಮೀ ಉದ್ದವಿರುತ್ತದೆ. ಈ ಭಾಗವು ಸಹ ಅಧಿಕ ವಾಹನ ಸಂಚಾರದಿಂದಾಗಿ (8500 PCU) ರಸ್ತೆ ಹಾಳಾಗಿದ್ದು ಕೆಳಗಿನಂತೆ ದುರಸ್ಥಿ ಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಸದರಿ ರಸ್ತೆಯ ಪೂರ್ತಿ ಉದ್ದವನ್ನು 2005-08 ರ 3 ವರ್ಷಗಳ ಅವಧಿಯ ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ ಅಡಿಯಲ್ಲಿ ಕೆಆರ್‌ಡಿಸಿಎಲ್ ಅನುದಾನದಲ್ಲಿ ನಿರ್ವಹಣೆ ಮಾಡಲು ಕೈಗೆತ್ತಿಕೊಂಡಿದ್ದು, 2005ನೇ ಸಾಲಿನಲ್ಲಿ ರೂ.

355.00 ಲಕ್ಷಗಳ ವೆಚ್ಚದಲ್ಲಿ ನಿರ್ವಹಣೆ ಕಾಮಗಾರಿ ಹಾಗೂ ಸರಪಳಿ 141.32 ರಿಂದ 152.08 ರವರೆಗೆ 10.7 ಕಿಮೀ ಉದ್ದಕ್ಕೆ ರಸ್ತೆ ಪುನರ್ ನಿರ್ಮಾಣ (2 ಪದರ ಜಲ್ಲಿ, BM, SDBC) ಕಾಮಗಾರಿ ಪೂರ್ಣಗೊಳಿಸಲಾಗಿದೆ. ಪ್ಯಾಕೇಜ್‌ನ 2 ಮತ್ತು 3ನೇ ವರ್ಷಗಳಲ್ಲಿ ರಸ್ತೆ ನಿರ್ವಹಣೆ ಕಾಮಗಾರಿಗಳನ್ನು ಮಾತ್ರ ಕೈಗೊಂಡಿದ್ದು, 2008 ನವೆಂಬರ್ ಅಂತ್ಯಕ್ಕೆ ಪ್ಯಾಕೇಜ್ ಅವಧಿ ಮುಕ್ತಾಯಗೊಂಡಿರುತ್ತದೆ.

2008-09ನೇ ಸಾಲಿನಲ್ಲಿ ಸದರಿ ರಸ್ತೆಯ ಮೇಲೆ ಗುಂಡಿಗಳನ್ನು ಮುಚ್ಚಲು ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ ರೂ.4.00 ಲಕ್ಷಗಳನ್ನು ಮೀಸಲಿರಿಸಿದ್ದು ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

ಸದರಿ ರಸ್ತೆಯು ಮಿಶ್ರ ಪಥವನ್ನು ಹೊಂದಿದ್ದು ವಿವರ ಈ ಕೆಳಕಂಡಂತಿದೆ.

ಸರಪಳಿ ಇಂದ ವರೆಗೆ		ಒಟ್ಟು ಉದ್ದ ಕಿಮೀ	ಅಗಲ ಮೀಟರ್‌ಗಳಲ್ಲಿ
141.32	152.08	10.76	5.50
152.08	165.62	13.54	7.00
165.62	173.62	8.00	3.75
173.62	175.36	1.74	7.00 (Overlap length)
175.36	187.76	12.40	5.50

ಈ ರಸ್ತೆಯನ್ನು ಅನುದಾನ ಲಭ್ಯತೆಗನುಗುಣವಾಗಿ ಮುಂದಿನ ವರ್ಷಗಳಲ್ಲಿ ಅಭಿವೃದ್ಧಿಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

ಶ್ರೀ ಸಿ.ಎಂ.ಉದಾಸಿ: ಆದರೆ, ಸದರಿ ರಸ್ತೆಯ ಪೂರ್ತಿ ಉದ್ದವನ್ನು ಎರಡು ಪಥದ ರಸ್ತೆಯನ್ನಾಗಿ ಮಾಡಬೇಕೆಂದು ಉನ್ನತಮಟ್ಟದಲ್ಲಿ ಮಾಡಬೇಕೆನ್ನುವ ಗುರಿ ಇದೆ. ಅದಕ್ಕೆ 10,000 ಕಿ.ಮೀ. ರಾಜ್ಯ. ಜಿಲ್ಲಾ ಹೆದ್ದಾರಿಗಳನ್ನು ಮಾಡುವಂಥ ಯೋಜನೆಯಲ್ಲಿ ಈ ಯೋಜನೆಯನ್ನು ಸೇರಿಸಿಕೊಂಡಿದ್ದನ್ನು ಈಗಾಗಲೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ತಮ್ಮ ಗಮನಕ್ಕೆ ತಂದಿರುವ ವ್ಯವಸ್ಥೆಯಲ್ಲಿ, ನಾಳೆ 28ನೇ ತಾರೀಖಿನಂದು ಒಂದು ಸಭೆ ಇದೆ, ಆ ಸಭೆಯ ನಂತರ ಇನ್ನು 3-4 ತಿಂಗಳಿನಲ್ಲಿ ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡುತ್ತೇವೆನ್ನುವ ಭರವಸೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ತಮ್ಮ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ತಮಿಳುನಾಡು-ಕೋಡಿಹಳ್ಳಿ, ಕನಕಪುರ, ರಾಮನಗರ, ಮಾಗಡಿ, ಸೋಲೂರು, ದಾಬಸ್‌ಪೇಟ್ ಮಾಗಡಿ SH-3, ಈಗ 37.83 ಕಿ.ಮೀ.ಗಳನ್ನು ಹಾಗೂ ತಮ್ಮ ಮಾಗಡಿ ವ್ಯಾಪ್ತಿಯಲ್ಲಿ ಬರುವಂಥ ಬೆಂಗಳೂರು, ಮಾಗಡಿ ತಾ: ಬಾರ್ಡ್‌ರ್, ವಯಾ ತಾವರೆಕೆರೆಯವರೆಗೆ 24.8 ಕಿ.ಮೀ., ಮಾಗಡಿ ತಾ: ಬಾರ್ಡರ್ ಕುಣಿಗಲ್ ಬಾರ್ಡರ್ ತಾ: ವಯಾ ಮಾಗಡಿಯವರೆಗೆ 31.69 ಕಿ.ಮೀ. ಹಾಗೂ ಮಾಗಡಿಯಲ್ಲಿ SH-85 near

Gonukuppe to Ramanagar Taluk 11.89 k.m., ಮಾಗಡಿಯಲ್ಲಿ MDR from Magadi to joining NH-48 near Solur 13.8 k.m. ಈ ರಸ್ತೆಗಳನ್ನು PPP ಮಾದರಿಯಲ್ಲಿ ತೆಗೆದುಕೊಳ್ಳುತ್ತಿರುವುದರಿಂದ ಬಹುತೇಕ ಜನರು ಆಸಕ್ತಿಯನ್ನು ಹೊಂದಿದ್ದಾರೆ, ಅತಿ ಶೀಘ್ರದಲ್ಲಿ ಇದನ್ನು ದುರಸ್ತಿ ಮಾಡಿಸುವಂಥ ಕೆಲಸವನ್ನು ಮಾಡುಸುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯ ಹೆದ್ದಾರಿ 94ರಲ್ಲಿ ಕಲ್ಯಾ-ಶ್ರೀಪತಿಹಳ್ಳಿ-ಸಾತನೂರುವರೆಗೆ ರಸ್ತೆ ಹಾಳಾಗಿದ್ದು, ಈ ರಸ್ತೆಗಳ ದುರಸ್ತಿ ಕಾರ್ಯ ಎಂದು ಉತ್ತರದಲ್ಲಿ ತಪ್ಪಾಗಿ ಮುದ್ರಣ ಮಾಡಿದ್ದಾರೆ, ರಸ್ತೆಗಳ ದುರಸ್ತಿ ಕಾರ್ಯವಲ್ಲ, ಹೊಸದಾಗಿ ಆ ರಸ್ತೆ ಅಭಿವೃದ್ಧಿಪಡಿಸುವುದಾಗಿರುತ್ತದೆ. ಮಾನ್ಯ ಸಚಿವರು ಅದರ ಕೆಳಗಡೆ ಇನ್ನೊಂದಿದೆ ಅದನ್ನು ಓದಲಿಲ್ಲ. ಕಳೆದ ಅಧಿವೇಶನದಲ್ಲೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೇನೆ. ವಾಹನಗಳ ಸಂಚಾರಕ್ಕೆ ರಸ್ತೆ ಯೋಗ್ಯವಾಗಿಲ್ಲವೆಂದು ಅವರೇ ಇಲ್ಲಿ ಹೇಳುತ್ತಾರೆ PPP ನಲ್ಲಿ ಮಾಡುವುದರಲ್ಲಿ ನಮ್ಮದೇನು ತಕರಾರು ಇಲ್ಲ, ಅದನ್ನು ಎಷ್ಟು ದಿವಸದಲ್ಲಿ ಅಂದರೆ ಸದ್ಯದಲ್ಲಿ 2-3 ತಿಂಗಳಿನಲ್ಲಿ ಕೆಲಸ ಪ್ರಾರಂಭ ಮಾಡುತ್ತರೆಯೆ ಎಂಬುದನ್ನು ತಿಳಿಸಬೇಕು. ಮುಂದಿನ ಪ್ಯಾರವನ್ನು ತಾವು ಓದಲಿಲ್ಲ. ಶ್ರೀಪತಿಹಳ್ಳಿ ರಸ್ತೆಯನ್ನು ಕೂಡ KRDCLನಲ್ಲಿ ತೆಗೆದುಕೊಂಡಿದ್ದೆವೆಂದು ಹೇಳಿದಿರಿ ಅಲ್ಲೇನು ಕೆಲಸವಾಗಿಲ್ಲ, ರಸ್ತೆ ಬಹಳಷ್ಟು ಹದಗೆಟ್ಟಿದೆ, ಅದಕ್ಕೆ ಯಾವ ಅನುದಾನವನ್ನು ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡುತ್ತೀರಿ?

ಶ್ರೀ ಸಿ.ಎಂ.ಉದಾಸಿ: ತಾವು ಬಾಗೇಪಲ್ಲಿ-ಹಲಗೂರು ರಸ್ತೆಯನ್ನು ಕೇಳುತ್ತಿದ್ದೀರಿ, ಇಲ್ಲಿ ಅಧಿಕ ವಾಹನಗಳ ಸಂಚಾರವಿರುವುದರಿಂದ, ಎಂಟುವರೆ ಸಾವಿರ PC ಪ್ಯಾಕೇಜ್ ಇರುವುದರಿಂದ ಅದನ್ನು ಎರಡನೆ ಹಂತದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ, ಇದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಎರಡನೆ ಹಂತದಲ್ಲಿ ತೆಗೆದುಕೊಳ್ಳಲಾಗುವುದೆಂದು ಹೇಳಿದಿರಿ, ಸದ್ಯಕ್ಕೆ ಅಲ್ಲಿ ಓಡಾಡುವುದಕ್ಕೇ ಆಗುತ್ತಿಲ್ಲ, ಗುಡೇಮಾರನಹಳ್ಳಿ ರಸ್ತೆಯನ್ನು ಗುಂಡಿ ಮುಚ್ಚುವುದಕ್ಕೆ ಯೋಗ್ಯವಿಲ್ಲವೆಂದು ಹೇಳಿದಿರಿ, ಈಗ ರಸ್ತೆಯಲ್ಲಿ ಗುಂಡಿ ಇಲ್ಲ, ಗುಂಡಿಯಲ್ಲಿ ರಸ್ತೆ ಇದೆ, ಅದು ನಮಗೆ ಸಮಸ್ಯೆಯಾಗಿರುವುದು, ಇದನ್ನು ಯಾವ ಅನುದಾನದಲ್ಲಿ ಮಾಡಿಕೊಡುತ್ತಿರಿ?

ಶ್ರೀ ಸಿ.ಎಂ.ಉದಾಸಿ: ಅದಕ್ಕೆ ಈಗ ನಾಲ್ಕು ಲಕ್ಷ ರೂಪಾಯಿಗಳನ್ನು ಮೀಸಲಿರಿಸಲಾಗಿದೆ, ಕಾಮಗಾರಿ ಪ್ರಾರಂಭ ಮಾಡಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ರಸ್ತೆ ಪೂರ್ತಿ ಗುಂಡಿಗಳಿರುವುದರಿಂದ ಗುಂಡಿ ಮುಚ್ಚುವುದಕ್ಕಾಗುವುದಿಲ್ಲ.

ಶ್ರೀ.ಸಿ.ಎಂ.ಉದಾಸಿ: ನಾನು ಇಲಾಖಾ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಅತಿ ಶೀಘ್ರದಲ್ಲೇ ಮಾಡಿಸಿಕೊಡುತ್ತೇನೆ.

ಉ) ವಿಷಯ: ಚಿತ್ರದುರ್ಗ ಜಿಲ್ಲೆ ಹಿರಿಯೂರು ವಾಣಿ ವಿಲಾಸ ಸಹಕಾರ ಸಕ್ಕರೆ ಕಾರ್ಖಾನೆಯ ಡಿಸ್ಟಿಲರಿ ಘಟಕವನ್ನು ಮ.ಬಿ.ಟಿ. ಅಂಟ್ ಎಫ್.ಸಿ. ಕಂಪನಿಗೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಬಗ್ಗೆ.

– – –

ಶ್ರೀ ಟಿ.ಬಿ. ಜಯಚಂದ್ರ (ಶಿರಸಿ): ಸನ್ಮಾನ್ಯ ಅಧ್ಯಕ್ಷರೇ ನಾನು ಚಿತ್ರದುರ್ಗ ಜಿಲ್ಲೆ ಹಿರಿಯೂರು, ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಡಿಸ್ಟಿಲರಿ ಘಟಕವನ್ನು ಮೆ: ಬಿ.ಟಿ. ಅಂಡ್ ಎಫ್.ಸಿ. ಕಂಪನಿ ರವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಬಗ್ಗೆ ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯು ಪ್ರತಿ ದಿನ 18,000 ಲೀಟರ್ ರೆಕ್ಟಿಫೈಡ್ ಸ್ಪೀರಿಟ್ ಉತ್ಪಾದಿಸುವ ಡಿಸ್ಟಿಲರಿ ಘಟಕವನ್ನು 1979 ರಲ್ಲಿ ಪ್ರಾರಂಭಿಸಿದ್ದು, ಸದರಿ ಘಟಕವನ್ನು ಕಾರ್ಖಾನೆಯ ಆಡಳಿತ ಮಂಡಳಿಯ ತೀರ್ಮಾನದಂತೆ ದಿನಾಂಕ 03–11–1981 ರಿಂದ 02–11–1991 ರವರೆಗೆ 10 ವರ್ಷಗಳ ಅವಧಿಗೆ ಮೆ: ಬಿ.ಟಿ. ಅಂಡ್ ಎಫ್.ಸಿ. ಕಂಪನಿಗೆ ವಾರ್ಷಿಕ ಬಾಡಿಗೆ ರೂ.8.00 ಲಕ್ಷದಂತೆ ಗುತ್ತಿಗೆಗೆ ನೀಡಿ ದಿನಾಂಕ 12–2–1981ರಲ್ಲಿ ಗುತ್ತಿಗೆ ನೀಡಲು ಸರ್ಕಾರದ ಪತ್ರ ಸಂಖ್ಯೆ: R.D.C 140-COF90 ದಿನಾಂಕ 02–02–1981ರಲ್ಲಿ ಕರಾರು ಪತ್ರ ಮಾಡಿಕೊಳ್ಳಲಾಗಿದೆ. ಈ ರೀತಿ ಡಿಸ್ಟಿಲರಿ ಘಟಕವನ್ನು ಗುತ್ತಿಗೆಗೆ ಅನುಮತಿ ನೀಡಲಾಗಿದೆ. ತದನಂತರ ದಿನಾಂಕ 15–02–1988 ರಂದು ನಡೆದ ಆಡಳಿತ ಮಂಡಳಿಯ ಸಭೆಯ ತೀರ್ಮಾನದಂತೆ ಪುನ: ಇದೇ ಬಿ.ಟಿ. ಅಂಡ್ ಎಫ್.ಸಿ. ಕಂಪನಿಗೆ ದಿನಾಂಕ 03–11–1991 ರಿಂದ 02–11–2001 ರವರೆಗೆ ಪುನ: 10 ವರ್ಷಗಳ ಅವಧಿಗೆ ವಾರ್ಷಿಕ ಬಾಡಿಗೆ ರೂ. 16.00 ಲಕ್ಷದಂತೆ ಗುತ್ತಿಗೆ ಅವಧಿಯನ್ನು ನವೀಕರಿಸಿ ದಿನಾಂಕ 24–03–1988ರಲ್ಲಿ ಕರಾರು ಪತ್ರ ಮಾಡಿಕೊಳ್ಳಲಾಗಿದೆ. ಕಾರ್ಖಾನೆಯು ದಿನಾಂಕ 30–10–2001 ರಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಗುತ್ತಿಗೆ ಅವಧಿಯನ್ನು 15 ವರ್ಷಗಳ ಅವಧಿಗೆ ವಿಸ್ತರಿಸಲು ಕೋರಿ ಪ್ರಸ್ತಾವನೆಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಆಯುಕ್ತರು ದಿನಾಂಕ 29–11–2001ರ ಪತ್ರದನ್ವಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಸರ್ಕಾರದ ಪತ್ರ ಸಂ. ಸಮಾತು/5/ಸಸಕಾ/2000 (ಭಾಗ), ದಿನಾಂಕ 02–01–2002 ರಲ್ಲಿ ಡಿಸ್ಟಿಲರಿ ಘಟಕವನ್ನು 2001–2016 ರವರೆಗೆ ಅಂದರೆ 15 ವರ್ಷಗಳ ಅವಧಿಗೆ ಬಿ.ಟಿ. ಅಂಡ್ ಎಫ್.ಸಿ.ಯವರಿಗೆ ಈ ಕೆಳಕಂಡ ವಾರ್ಷಿಕ ಗುತ್ತಿಗೆ ಬಾಡಿಗೆ ಮೇಲೆ ನೀಡಲು ಅನುಮತಿ ನೀಡಿರುತ್ತದೆ.

1) 2001–2006 ರವರೆಗೆ ವಾರ್ಷಿಕ ಬಾಡಿಗೆ ರೂ.22.00 ಲಕ್ಷಗಳು
2) 2006–2011 ರವರೆಗೆ ವಾರ್ಷಿಕ ಬಾಡಿಗೆ ರೂ.26.00 ಲಕ್ಷಗಳು
3) 2011–2016 ರವರೆಗೆ ವಾರ್ಷಿಕ ಬಾಡಿಗೆ ರೂ.3200 ಲಕ್ಷಗಳು

2) ಕಾರ್ಖಾನೆಯು ದಿನಾಂಕ 16–09–2002 ರಂದು ಗುತ್ತಿಗೆದಾರರೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡಿರುತ್ತದೆ.

3) ಮೆ. ಬಿ.ಟಿ. ಅಂಡ್ ಎಫ್.ಸಿ.ಯವರು ಕಾರ್ಖಾನೆಗೆ ಗುತ್ತಿಗೆ ಹಣ, ಕಾಕಂಬಿ ಖರೀದಿ, ಮನೆ ಬಾಡಿಗೆ ಮತ್ತು ಇತರೆ ಮೊತ್ತಗಳನ್ನು ಪಾವತಿಸಲು ವಿಫಲಾರಾಗಿದ್ದು, ದಿನಾಂಕ 02–11–2006ಕ್ಕೆ ರೂ.151.26 ಲಕ್ಷ ಬಾಕಿ ಇರುತ್ತದೆ.

4) ಬಿ.ಟಿ. ಅಂಡ್ ಎಫ್.ಸಿ. ಅವರು ಕರಾರಿನಂತೆ ಬಾಕಿ ಹಣವನ್ನು ಪಾವತಿಸಲು ವಿಫಲರಾದ ಕಾರಣ ಕರ್ನಾಟಕ ಸರ್ಕಾರ ತನ್ನ ಪತ್ರ ಸಂ. ಸೆ/2001/ಸಸಕಾ/2006 ದಿನಾಂಕ ನಿಡಿರುವುದನ್ನು ರದ್ದುಗೊಳಿಸಿ ಅವರಿಂದ ಬರಬೇಕಾದ ಬಾಕಿ ಹಣವನ್ನು ಕಾನೂನು ಪ್ರಕಾರ ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿತು.

5) ಸಮಾಪನಾಧಿಕಾರಿಗಳು ತಮ್ಮ ದಿನಾಂಕ 30–10–2006ರ ಆದೇಶದನ್ವಯ ಕರಾರನ್ನು ರದ್ದುಗೊಳಿಸಿ ಬಿ.ಟಿ. ಅಂಡ್ ಎಫ್.ಸಿ ಅವರು ಕಾರ್ಖಾನೆಯ ಚರ ಮತ್ತು ಸ್ಥಿರ ಆಸ್ತಿಗಳನ್ನು ಸಮಾಪನಾಧಿಕಾರಿಗಳ ವಶಕ್ಕೆ ನೀಡಲು ಅದೇಶಿಸಲಾಗಿದೆ.

6) ಬಿ.ಟಿ ಅಂಡ್ ಎಫ್.ಸಿ ರವರು ಚಿತ್ರದುರ್ಗ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಪ್ರಕರಣ ಎಎ14/06 ದಾಖಲಿಸಿ ಡಿಸ್ಟಿಲರಿ ಗುತ್ತಿಗೆ ಕರಾರು ರದ್ದುಪಡಿಸಿರುವುದರ ವಿರುದ್ಧ ಅರ್ಜಿ ದಾಖಲಿಸಿದ್ದು, ಗೌರವ ಜಿಲ್ಲಾ ಸತ್ರ ನ್ಯಾಯಾಲಯವು ದಿನಾಂಕ 21–04–2007 ರಂದು ಆದೇಶ ನೀಡಿ ಕಕ್ಷಿದಾರರಾದ ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಇವರು ಪಂಪ್ ಹೌಸ್ ವಿದ್ಯುತ್ ಸಂಪರ್ಕವನ್ನು ನೀಡುವುದು ಹಾಗೂ ಕಕ್ಷಿದಾರರು ಡಿಸ್ಟಿಲರಿ ಬಗ್ಗೆ ತಲೆ ಹಾಕಬಾರದೆಂದು ಸೂಚಿಸಿ ಆದೇಶಿಸಿ, ಗುತ್ತಿಗೆದಾರರು 2006–2007ನೇ ಸಾಲಿನ ಗುತ್ತಿಗೆ ಹಣ ರೂ.26.00 ಲಕ್ಷವನ್ನು ಒಂದು ತಿಂಗಳೊಳಗಾಗಿ ಪಾವತಿಸುವುದು ಹಾಗೂ ಮುಂದಿನ ಗುತ್ತಿಗೆ ಕಂತುಗಳನ್ನು ತಪ್ಪದೆ ಪಾವತಿಸುವುದು ಎಂದು ಆದೇಶಿಸಿರುತ್ತದೆ.

7) ನ್ಯಾಯಾಲಯದ ಆದೇಶದನ್ವಯ ದಿನಾಂಕ 15–05–2007 ರಂದು ಜಾಕ್‌ವೆಲ್ ಪಂಪ್ ಹೌಸ್ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲಾಗಿದೆ.

8) ಗುತ್ತಿಗೆದಾರರಾದ ಬಿ.ಟಿ. ಅಂಡ್ ಎಫ್.ಸಿ. ರವರು ನ್ಯಾಯಾಲಯದ ಆದೇಶದನ್ವಯ ರೂ.26.00 ಲಕ್ಷ ಹಾಗೂ ದಿನಾಂಕ 03–11–2007 ರಂದು ಪಾವತಿಸಬೇಕಾದ ಕಂತು ರೂ.26.00 ಲಕ್ಷ ಒಟ್ಟು ರೂ.52.00 ಲಕ್ಷಗಳ ಹಣವನ್ನು

ಪಾವತಿಸಲು ವಿಫಲರಾಗಿರುತ್ತಾರೆ. ಗುತ್ತಿಗೆದಾರರು ದಿನಾಂಕ 13-02-2008 ರಂದು ಚಿತ್ರದುರ್ಗ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಎ.ಎ.ಅರ್ಜಿ ಸಲ್ಲಿಸಿ ಗುತ್ತಿಗೆ ಹಣವನ್ನು ಪಾವತಿಸುವ ಬಗ್ಗೆ ಕಾಲಾವಕಾಶ ಕೇಳಿಕೊಂಡಿರುತ್ತಾರೆ. ದಿನಾಂಕ 04-03-2008 ರಂದು ವಿಚಾರಣೆ ನಡೆದು ದಿನಾಂಕ 11-03-2008 ರಂದು ನ್ಯಾಯಾಲಯವು ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದಲ್ಲಿ ಈ ಹಿಂದೆ ಪ್ರಕರಣ ಎಎ14/06 ರಲ್ಲಿ 2006-2007ನೇ ಸಾಲಿನ ಗುತ್ತಿಗೆ ಹಣ ಪಾವತಿಗೆ ನಿಗದಿಪಡಿಸಿದ್ದ ದಿನಾಂಕ 01-06-2007 ವಿಸ್ತರಿಸಿ ದಿನಾಂಕ 15-03-2008 ರೊಳಗಾಗಿ ಪಾವತಿಸಲು ಆದೇಶಿಸಿರುತ್ತದೆ. ಎರಡನೆಯದಾಗಿ 2007-2008ನೇ ಸಾಲಿನ ಗುತ್ತಿಗೆ ಹಣ (03-11-2007 ರಿಂದ 02-11-2008 ಅವಧಿಗೆ) ವನ್ನು ಎರಡು ಕಂತುಗಳಲ್ಲಿ ಪಾವತಿಸಲು ಆದೇಶಿಸಿದ್ದು, ಮೊದಲನೇ ಕಂತಿನ ಹಣವನ್ನು ದಿನಾಂಕ 15-04-2008 ಒಳಗಾಗಿಯೂ ಪಾವತಿಸಲು ಆದೇಶಿಸಿರುತ್ತದೆ. ಸದರಿ ಆದೇಶದ ರೀತ್ಯ ಡಿಸ್ಟಿಲರಿ ಗುತ್ತಿಗೆದಾರರ ಬಿ.ಟಿ. ಅಂಡ್ ಎಫ್.ಸಿ ಯವರು 2006-2007ನೇ ಸಾಲಿನ ಗುತ್ತಿಗೆ ಹಣ ರೂ.26.00 ಲಕ್ಷಗಳನ್ನು ದಿನಾಂಕ 14-3-2008 ರಂದು ಕಾರ್ಖಾನೆಗೆ ಡಿ.ಡಿ. ಮುಖೇನ ಪಾವತಿಸಿರುತ್ತಾರೆ. ಉಳಿಕೆ 2007-2008ನೇ ಸಾಲಿನ ಗುತ್ತಿಗೆ ಹಣ ರೂ. 26.00 ಲಕ್ಷ ನ್ಯಾಯಾಲಯದ ಆದೇಶದನ್ವಯ ಪಾವತಿಸಿರುವುದಿಲ್ಲ. ಚಿತ್ರದುರ್ಗ ಜಿಲ್ಲಾ ಸತ್ರ ನ್ಯಾಯಾಲಯದ ಆದೇಶ ದಿನಾಂಕ 11-03-2008 ರಲ್ಲಿ 2007-2008ನೇ ಸಾಲಿನ ಗುತ್ತಿಗೆ ಹಣ ಪಾವತಿಸುವ ಬಗ್ಗೆ ಬಿ.ಟಿ. ಅಂಡ್ ಎಫ್.ಸಿ. ಅವರು ಗೌರವ ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ. 4925/2008 ದಾಖಲಿಸಿರುತ್ತಾರೆ. ಈ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

9) ಬಿ.ಟಿ. ಅಂಡ್ ಎಫ್.ಸಿ. ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಿ.ಎಂ.ಪಿ. ನಂ.75/06 ನ್ನು ಸಲ್ಲಿಸಿ ತಾವು ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕೊಡಬೇಕಾದ ಗುತ್ತಿಗೆ ಬಾಕಿ ತಕರಾರಿನಲ್ಲಿರುವುದರಿಂದ ಗುತ್ತಿಗೆ ಕರಾರಿನನ್ವಯ ಅರ್ಬ್ರಿಟ್ರೇಟರ್‌ರವರನ್ನು ನೇಮಿಸಿಕೊಳ್ಳುವಂತೆ ಕೋರಿ ಅರ್ಜಿ ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಮಕ 02-02-2007 ರಂದು ಗುತ್ತಿಗೆದಾರರ ಪರವಾಗಿ ಶ್ರೀ ಸುಬ್ಬರಾವ್ ಮತ್ತು ಕಾರ್ಖಾನೆಯ ಪರವಾಗಿ ಶ್ರೀ ಮೋಹನ್‌ರಾಂ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ನೇಮಕ ಮಾಡಿರುತ್ತದೆ. ಶ್ರೀ ಸುಬ್ಬರಾವ್ ಅರ್ಬ್ರಿಟ್ರೇಟರ್‌ರವರು ಅವರ ಪತ್ರ ದಿನಾಂಕ 09-07-2008ರಲ್ಲಿ ಅವರಿಗೆ ಅನ್ಯ ಕೆಲಸ ಬರುವ್ಯದರಿಂದ ಆಬ್ರಿಟೇಷನ್ ನಡವಡಿಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವೆಂದು ಶ್ರೀ ಮೋಹನ್‌ರಾಂ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅವರಿಗೆ ತಿಳಿಸಿದ್ದು, ಅದರಂತೆ ಕಾರ್ಖಾನೆಯ ಗೌರವ ಉಚ್ಚ ನ್ಯಾಯಾಲಯದಲ್ಲಿ ಸಿ.ಎಂ.ಪಿ. 113/2008ರಂತೆ ಅರ್ಜಿಯನ್ನು ದಾಖಲಿಸಿ ಶ್ರೀ ಸುಬ್ಬರಾವ್‌ರವರ ಸ್ಥಳದಲ್ಲಿ ಬೇರೊಬ್ಬ ಅರ್ಬ್ರಿಟ್ರೇಟರ್‌ನ್ನು ನೇಮಿಸಲು ಕೋರಿ ದಿನಾಂಕ 17-09-2008 ರಲ್ಲಿ

ಅರ್ಜಿ ದಾಖಲಿಸಲಾಗಿದೆ. ಪ್ರಕರಣವು ಗೌರವ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥಕ್ಕೆ ಬಾಕಿ ಇರುತ್ತದೆ

10) ದಿನಾಂಕ 31-01-2009ಕ್ಕೆ ಬಿ.ಟಿ. ಅಂಡ್ ಎಫ್.ಸಿ. ಕಂಪನಿಯವರಿಗೆ ಬರಬೇಕಿರುವ ಬಾಕಿ ರೂ.2,07,89,294/- ಇರುತ್ತದೆ. ವಿವರ ಕೆಳಕಂಡಂತಿದೆ:-

1. ಡಿಸ್ಟಿಲರಿ ಗುತ್ತಿಗೆ ಬಾಡಿಗೆ ಬಾಬ್ತು 03-11-2001 ರಿಂದ 02-11-2009 (2006-07ನೇ ಸಾಲು ಹೊರತುಪಡಿಸಿ)	ರೂ.	1.51.92,000/-
2. ಕಾಕಂಬಿ ಬಾಬ್ತು	ರೂ.	48.95,264/-
3. ಠೇವಣಿ ಬಾಬ್ತು	ರೂ.	5,00,000/-
4. ಮನೆ ಬಾಡಿಗೆ ಮತ್ತು ವಿದ್ಯುತ್ ಬಾಕಿ ಬಾಬ್ತು	ರೂ	1,91,000/-
5. ನೀರಿಐನ ತೆರಿಗೆ ಬಾಬ್ತು		11,000/-
ಒಟ್ಟು	ರೂ.	2,07,89,294/-

ಶ್ರೀ ಟಿ.ಬಿ.ಜಯಚಂದ: ಮಾನ್ಯ ಅಧ್ಯಕ್ಷರೆ, ಈ ವಿಚಾರ ಗೊತ್ತಿರುವುದರಿಂದ ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ, ಈ ಬಿ.ಟಿ ಅಂಡ್ ಎಫ್.ಸಿ. ಕಂಪನಿ ಎಂಬುದು, ಬಹುಶ: ಒಂದು ಕೆಟ್ಟ ಶಬ್ಧದಲ್ಲಿ ಹೇಳಬೇಕೆಂದರೆ, ಒಂದು ಕಳ್ಳ ಕಂಪನಿ. ಈ ಕಂಪನಿಗೆ ಸಹಾಯ ಮಾಡುವುದಕ್ಕೋಸ್ಕರ ನಮ್ಮ ಸರ್ಕಾರದ ಅಧಿಕಾರಿಗಳು, ಯಾರು ಲಿಕ್ವಿಡೇಟರ್ ಆಗಿರುವ Joint Registrar, ಇವರು ಸಂಪೂರ್ಣವಾಗಿ ಶಾಮೀಲಾಗಿದ್ದಾರೆ. ಇವತ್ತು ಸುಮಾರು 2 ಕೋಟಿ ರೂ.ಗೂ ಹೆಚ್ಚು ಹಣವನ್ನು ಕೊಡಬೇಕಾದ ವ್ಯಕ್ತಿ, ಕೊಡುವುದಕ್ಕಾಗುವುದಿಲ್ಲವೆನ್ನುವ ಕಾರಣಕ್ಕೆ ಯಾವುದೊ ಒಂದು ಪಿಟಿಷನ್ ಅನ್ನು ಚಿತ್ರದುರ್ಗ ಕೋರ್ಟಿನಲ್ಲಿ ಹಾಕುತ್ತಾನೆ, ಅಲ್ಲಿ ಯಾರು ಕೂಡ ಹೋಗಿ ಕಂಟೆಂಡ್ ಮಾಡುವುದಕ್ಕೆ ಹೋಗುವುದಿಲ್ಲ, ಅದರ ವಿರುದ್ಧವಾಗಿ ಒಂದು ಅರ್ಜಿಯನ್ನು ಕೂಡ ಹಾಕುವುದಕ್ಕೆ ಹೋಗುವುದಿಲ್ಲ. ಈ ರೀತಿ ಮ್ಯಾನೇಜ್ ಮಾಡಿಕೊಂಡು 2 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಕೊಡಬೇಕಾಗಿದ್ದು, ಇನ್ನು ಅವನ್ನು ನಡೆಸುವುದಕ್ಕೆ ಬಿಟ್ಟುಕೊಂಡಿದ್ದೀರಿ. ನಾನು ನಿಮಗೆ ವೈಯಕ್ತಿಕವಾಗಿ ಹೇಳುತ್ತೇನೆಂದಲ್ಲ, ಇವತ್ತು ಸರ್ಕಾರದಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಏನಾದರು ಸ್ವಲ್ಪ ಘನತೆ ಗೌರವವೆನ್ನುವುದು ಇದೆಯಾ? ಸಂಪೂರ್ಣವಾಗಿ ಶಾಮೀಲಾಗಿದ್ದಾರೆ. ಕೋರ್ಟ್ ರೆಕಾರ್ಡ್ಸ್ ತರಿಸಿ ನೋಡಿ, ಇವತ್ತು ಲಿಕ್ವಿಡೆಟರ್ ಇದರ ವಿರುದ್ಧವಾಗಿ ಏನಾದರೂ ಒಂದು ಅರ್ಜಿ ಅಥವಾ ವಕಾಲತ್ ಹಾಕುವುದು ಬೇಡವೇ? ಏನೂ ಮಾಡುವುದಕ್ಕೆ ಹೋಗದೆ ಇದ್ದರೆ ಹೇಗೆ? ಇವತ್ತು ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕಾದ್ದು ಇದ್ದರೂ ಕೂಡ ಕೋರ್ಟಿಗೆ ಹೋಗುತ್ತಾರೆ, ಅಲ್ಲಿ ಒಂದು ಆದೇಶವಾಗುತ್ತದೆ. ಕೋರ್ಟಿನ ಆದೇಶದ ವಿರುದ್ಧವಾಗಿ ಇವತ್ತು ಅದನ್ನು ಇನ್ನೂ ನಡೆಸಿಕೊಂಡು ಹೋಗುತ್ತಿದ್ದಾರೆಂದರೆ ಏನರ್ಥ? ಅದಕ್ಕೆ ನಾನು ಸಲಹೆ ಕೊಡುವುದು ಇಷ್ಟೆ, ಯಾರನ್ನೋ ಆರ್ಬ್ರಿಟ್ರೇಟರ್ ಅನ್ನು ನೇಮಕ ಮಾಡಿದ್ದೇವೆಂದು ಹೇಳಿದಿರಿ. ಯಾರೋ Arbitratorನ್ನು appoint

ಮಾಡಿದ್ದಾರೆಂದು ಹೇಳಿದಿರಿ. Arbitrator ಅವನೇ ರಾಜೀನಾಮೆ ಕೊಡಿಸುತ್ತಾನೆ. ಇನ್ನೊಬ್ಬ arbitratorಗೆ ಸಮಯ ಕೊಡುತ್ತಾರೆ. ಈ ರೀತಿ time kill ಮಾಡತಕ್ಕ ಕೆಲಸ ಮಾಡುತ್ತಿದ್ದಾರೆ. ದಯಮಾಡಿ ಅವನ ಕೈತಪ್ಪಿಸಿ ಬೇರೆಯವರಿಗೆ ಕೊಡುವುದಾದರೆ ಇದಕ್ಕಿಂತ ಹತ್ತರಷ್ಟು ಲಾಭ ಬರುತ್ತದೆ. ಈಗ factory close ಆಗಿದೆ. ವರ್ಷಗಟ್ಟಲೆ ನೌಕರರ ಸಂಬಳ ವಾಚ್‌ಮನ್‌ಗಳ ಸಂಬಳ ಕೊಡಲು ಆಗಿಲ್ಲ. ಇಂಥ ಪರಿಸ್ಥಿತಿ ಇರಬೇಕಾದರೆ ಒಬ್ಬ ಕಳ್ಳನ ಕೈಯಲ್ಲಿ ಕೊಟ್ಟು ಕುಳಿತಿದ್ದೀರಲ್ಲಾ ಇದಕ್ಕೇನು ಹೇಳಬೇಕು? ನೀವು ಹೋಗುತ್ತೀರೋ ಅಥವಾ ನಿಮ್ಮ ಉನ್ನತ ಅಧಿಕಾರಿಗಳನ್ನು ಕಳುಹಿಸುತ್ತೀರೋ, ನಿಮ್ಮ ಕಾರ್ಯದರ್ಶಿಯವರನ್ನೇ ಕಳುಹಿಸಿ ಇದಕ್ಕೆ ಬಂದೋಬಸ್ತ್ ಅದ ಕೆಲಸವನ್ನು ಮಾಡಿ ಆ ಲೀಸ್‌ನ್ನು ಬೇರೆಯವರಿಗೆ ಕೊಡತಕ್ಕ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿ. 2001 ರಿಂದ ಇಲ್ಲಿಯವರೆಗೆ he is a chronic defaulter ಆಗಿದ್ದಾನೆ. ದುಡ್ಡೇ ಕಟ್ಟಿಲ್ಲ. 2 ಕೋಟಿ ಪೆಂಡಿಂಗ್ ಇರಬೇಕಾದರೆ ನೀವು ಯಾರಾದರೂ ಹೈಕೋರ್ಟ್‌ಗೆ ಹೋಗಿ ಈ ರೀತಿ ಆಗಿದೆಯೆಂದು ಹೇಳಿದ್ದೀರಾ? ಹೈಕೋರ್ಟ್‌ಗೂ ಹೋಗಲಿಲ್ಲ, ಹೇಳಲೂ ಇಲ್ಲ ಅವನ ಜೊತೆ adjust ಆಗಿ ಹೋಗಿದ್ದಾರೆಂದರೆ ಈ ಸರ್ಕಾರವೇನಾದರು ಇದೆಯೇ? ಕಣ್ಣುಬಿಟ್ಟು ನೋಡುತ್ತಿದೆಯೇ? ಅಲ್ಲಿ watchmanಗಳಿಗೆ ಸಂಬಳ ಕೊಡಲಾಗದಿರುವ ಪರಿಸ್ಥಿತಿ ಇದೆ. ಇದು ನನಗೆ ಅರ್ಥವಾಗುವುದಿಲ್ಲ. ದಯಮಾಡಿ ನಿಮ್ಮಿಂದ ಬಯಸುವುದೇನೆಂದರೆ, ಇದಕ್ಕೆ ಉನ್ನತ ಮಟ್ಟದ ವಿಚಾರಣೆಯನ್ನು ಮಾಡಿಸಿ, ಸರ್ಕಾರಕ್ಕೆ ಬರಬೇಕಾಗಿರುವ ದುಡ್ಡನ್ನು ಯಾವುದೇ ರೀತಿಯಿಂದಲಾದರೂ ಪಡೆಯಬೇಕು. ಅದು ಲಾಭ ಬರತಕ್ಕ ರೀತಿಯಲ್ಲಿ ಪರ್ಯಾಯವಾದ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಕೃಷಿ ಮಾರುಕಟ್ಟೆ, ಸಕ್ಕರೆ ಸಚಿವರು): ಈಗಾಗಲೇ ಬೇರೆ Arbitratorನ್ನು ನೇಮಿಸಬೇಕೆಂದು ಸರ್ಕಾರದಲ್ಲಿ ತೀರ್ಮಾನವಾಗಿ ಬೇರೆ Arbitratorನ್ನು ನೇಮಿಸುತ್ತಿದ್ದೇವೆ. ಅವರೇನು 2 ಕೋಟಿ ರೂಪಾಯಿ ತುಂಬಬೇಕಾಗಿತ್ತು, ಅದಕ್ಕೆ stay ತೆಗೆದುಕೊಂಡಿದ್ದರು. ಈಗ ಇರುವ Arbitrator ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಮಾನ್ಯ ಹಿರಿಯ ಸದಸ್ಯರು ಹೇಳಿದರು. ಇವೆಲ್ಲವನ್ನು ನೋಡಿಕೊಂಡು ಈಗ ಬೇರೆ Arbitratorನ್ನು ನೇಮಿಸಲು ನಿರ್ಧಾರ ಮಾಡಿದ್ದೇವೆ. ಈ ಪ್ರಕರಣ ವಿಶೇಷವಾಗಿ ನ್ಯಾಯಾಲಯದಲ್ಲಿ ಇರುವುದರಿಂದ Arbitratorರವರನ್ನೆ ಸರಿಮಾಡುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: Arbitratorನ್ನು ನೇಮಕ ಮಾಡಲು ತಾವು ಕ್ರಮ ಕೈಗೊಂಡಿದ್ದೀರಿ. ದಯಮಾಡಿ ಹೈಕೋರ್ಟ್‌ಗೆ ನಿಮ್ಮ ಕಾರ್ಯದರ್ಶಿಯವರನ್ನು

ಕಳುಹಿಸಿ ಬೇಗ ಅದನ್ನು ವೆಕೇಟ್ ಮಾಡಿಸಿ ತೀರ್ಮಾನ ಮಾಡತಕ್ಕ ಕೆಲಸ ಮಾಡಿ. ಇಂಥ chronic defaulterನ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಂಡು ಬೇರೆ ಏನಾದರು ವ್ಯವಸ್ಥೆ ಮಾಡುತ್ತೀರೋ ಹೇಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ: ಈ ಪ್ರಕರಣ ಈಗ ನ್ಯಾಯಾಲಯದಲ್ಲಿ ಇರುವುದರಿಂದ ಬೇರೆ Arbitratorನ್ನು ನೇಮಿಸಿದ ಮೇಲೆಯೇ ಅದು ಕಾರ್ಯರೂಪಕ್ಕೆ ಬರುತ್ತದೆ. ಆದ್ದರಿಂದ ಒಳ್ಳೆಯ ಬೇರೆ Arbitratorನ್ನು ಆದಷ್ಟು ಬೇಗ ನೇಮಿಸಿ ಕ್ರಮ ಕೈಗೊಳ್ಳುತ್ತೇನೆ.

ಊ) ಜ್ಞಾನಯೋಗಿ ಶ್ರೀ ಶಿವಕುಮಾರ ಸ್ವಾಮಿಜಿ ಶುಗರ್ಸ್(ಲಿ) ಹಿರೇಬೆವನೂರು ಕಾರ್ಖಾನೆಯವರು 2007-2008ನೇ ಸಾಲಿನಲ್ಲಿ ರೈತರು ಪೂರೈಸಿದ ಕಬ್ಬಿಗೆ ಹಣ ಪಾವತಿ ಮಾಡದಿರುವ ಬಗ್ಗೆ

– – –

ಡಾ.ಬಗಲಿ ಸಾರ್ವಭೌಮ ಸರಗೌಡ(ಇಂಡಿ):- ಮಾನ್ಯ ಉಪಾಧ್ಯಕ್ಷರೇ, ನಾನು ಜ್ಞಾನಯೋಗಿ ಶ್ರೀ. ಶಿವಕುಮಾರ ಸ್ವಾಮೀಜಿ ಶುಗರ್ಸ್ (ಲಿ) ಹಿರೇಖೆವನೂರು ಕಾರ್ಖಾನೆಯವರು 2007-2008ನೇ ಸಾಲಿನಲ್ಲಿ ರೈತರು ಪೂರೈಸಿದ ಕಬ್ಬಿಗೆ ಹಣ ಪಾವತಿ ಮಾಡದಿರುವ ಬಗ್ಗೆ ಮಾನ್ಯ ಕೃಷಿ ಮಾರುಕಟ್ಟೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು): ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಹಿರೇಬೇವನೂರಿನಲ್ಲಿರುವ ಖಾಸಗಿ ವಲಯದ ಜ್ಞಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಸಕ್ಕರೆ ಕಾರ್ಖಾನೆಯು 2002-03ರಿಂದ ಕಾರ್ಯಾರಂಭಗೊಂಡಿರುತ್ತದೆ. ಈ ಕಾರ್ಖಾನೆಯು 2007-08ನೇ ಸಾಲಿನ ಕಬ್ಬು ನುರಿಸುವ ಕಾರ್ಯವನ್ನು ದಿನಾಂಕ 29.11.2007ರಂದು ಪ್ರಾರಂಭಿಸಿರುತ್ತದೆ. ಸದರಿ ಹಂಗಾಮಿನಲ್ಲಿ ಒಟ್ಟು 1,89,032 ಟನ್ ಕಬ್ಬನ್ನು ಅರೆದು ದಿನಾಂಕ 29-05-2008ರಂದು ಹಂಗಾಮವನ್ನು ಮುಕ್ತಾಯಗೊಳಿಸಿದೆ. ಕೇಂದ್ರ ಸರ್ಕಾರವು 2007-08ನೇ ಸಾಲಿಗೆ ಈ ಈ ಕಾರ್ಖಾನೆಗೆ ಪ್ರತಿ ಟನ್ ಕಬ್ಬಿಗೆ ರು. 937.80ರಂತೆ ಶಾಸನಬದ್ಧ ಕನಿಷ್ಠ ಬೆಲೆ ನಿಗದಿಪಡಿಸಿದೆ. ಅದರಂತೆ ಈ ಕಾರ್ಖಾನೆಯು ನುರಿಸಿದ 1,89,032 ಟನ್ ಕಬ್ಬಿಗೆ ಒಟ್ಟು ರೂ. 17.73 ಕೋಟಿಗಳನ್ನು ರೈತರಿಗೆ ಪಾವತಿಸಬೇಕಾಗಿತ್ತು. ಆದರೆ ಕಾರ್ಖಾನೆಯು ರೂ.10.75 ಕೋಟಿಗಳನ್ನು ಮಾತ್ರ ರೈತರಿಗೆ ಪಾವತಿಸಿ ಬಾಕಿ ರೂ. 6.98 ಕೋಟಿಗಳನ್ನು ಉಳಿಸಿಕೊಂಡಿರುತ್ತದೆ. ಈ ಬಾಕಿ ಹಣವನ್ನು ಪಾವತಿಸುವಂತೆ ಕಾರ್ಖಾನೆಗೆ ದಿನಾಂಕ 7.08.2008ರಂದು ಹಾಗೂ 08.09.2008ರಂದು ನೋಟೀಸ್ ನೀಡಿ ಕೂಡಲೇ ಕಬ್ಬು ಬೆಲೆ ಬಾಕಿ ಪಾವತಿಸಲು ಸೂಚಿಸಿ ತಪ್ಪಿದಲ್ಲಿ ಕಬ್ಬು (ನಿಯಂತ್ರಣ) ಕಾಯ್ದೆ 1966ರನ್ವಯ ಕ್ರಮ ವಹಿಸಲಾಗುವುದೆಂದು ತಿಳಿಸಲಾಗಿತ್ತು.

ಈ ಮಧ್ಯೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರು ಕಬ್ಬು ಬೆಲೆ ಬಾಕಿ ಪಾವತಿಸದೆ ಇರುವ ಕಾರಣ ಕೂಡಲೇ ಬಾಕಿ ಪಾವತಿಸುವಂತೆ ಒತ್ತಾಯಿಸಿ ಇಂಡಿ ತಾಲ್ಲೂಕು ತಹಸೀಲ್ದಾರ್ ಕಚೇರಿ ಮುಂದೆ ಧರಣಿ ನಡೆಸಿರುತ್ತಾರೆ. ಧರಣಿ ನಡೆಸಿದ ರೈತರೊಂದಿಗೆ ಮಾತು ಕತೆ ನಡೆಸಿ ಹಣ ಪಾವತಿಸಲು ಕೂಡಲೆ ಕ್ರಮ ವಹಿಸಲಾಗುವೆಂದು ತಿಳಿಸಿ ಧರಣಿ – ಸತ್ಯಾಗ್ರಹ ಕೈ ಬಿಡುವಂತೆ ಅವರ ಮನವೊಲಿಸಲಾಗಿದೆ.

ತದನಂತರ ದಿನಾಂಕ 19.02.2009ರಂದು ಕಬ್ಬು (ನಿಯಂತ್ರಣ) ಕಾಯ್ದೆ 1966ರ ಕಲಂ 3(8)ರ ಪ್ರಕಾರ ಕಬ್ಬು ಬೆಲೆ ಬಾಕಿಯನ್ನು ಶೇ. 15ರ ಬಡ್ಡಿಯೊಂದಿಗೆ ರೈತರಿಗೆ ಪಾವತಿಸಲು ಭೂ ಕಂದಾಯ ಬಾಕಿಯೆಂದು ಪರಿಗಣಿಸಿ ವಸೂಲಿ ಮಾಡಿ ರೈತರಿಗೆ ಪಾವತಿಸಲು ಜಿಲ್ಲಾಧಿಕಾರಿ, ಬಿಜಾಪುರ ರವರಿಗೆ ವಸೂಲಾತಿ ಪ್ರಮಾಣಪತ್ರ (Recovery Certificate) ನೀಡಲಾಗಿದೆ. ಜಿಲ್ಲಾಧಿಕಾರಿಗಳು ವಸೂಲಾತಿ ಪ್ರಮಾಣಪತ್ರದಂತೆ ರೈತರ ಬಾಕಿ ಪಾವತಿಗೆ ಕ್ರಮ ವಹಿಸಲಿದ್ದಾರೆ.

ಈ ಕಾರ್ಖಾನೆಯಲ್ಲಿ ಪ್ರಸ್ತುತ 22,770 ಕ್ವಿಂಟಾಲ್ ಸಕ್ಕರೆ ದಾಸ್ತಾನಿದ್ದು ಇದರ ಇಂದಿನ ಮಾರುಕಟ್ಟೆ ಬೆಲೆ ಸುಮಾರು ರೂ.4.55 ಕೋಟಿ ಆಗುತ್ತದೆ. ಕಾರ್ಖಾನೆಯು ಕಬ್ಬು ನುರಿಸುವ ಕಾರ್ಯವನ್ನು ನಡೆಸುತ್ತಿದ್ದು ಸಕ್ಕರೆ ಉತ್ಪಾದನೆಯಾಗುತ್ತಿದೆ. ಉತ್ಪಾದನೆಯಾಗುವ ಸಕ್ಕರೆ/ಕಾಕಂಬಿ ಇತ್ಯಾದಿಗಳ ಮಾರಾಟದಿಂದ ಬರುವ ಹಣದಿಂದ ರೈತರ ಕಬ್ಬು ಬೆಲೆ ಬಾಕಿ ಪಾವತಿಗೆ ಜಿಲ್ಲಾಧಿಕಾರಿಯವರು ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ.

ಡಾ: ಬಗಲಿ ಸಾರ್ವಭೌಮ ಸತಗೌಡ (ಇಂಡಿ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಸೂಕ್ತವಾದ ಕ್ರಮವನ್ನು ಜರುಗಿಸಿದ್ದಾರೆ. ದೃಡ ನಿರ್ಧಾರವನ್ನು ಕೈಗೊಂಡಿದ್ದಾರೆ. ಅವರಿಗೆ ನಾನು ನನ್ನ ತಾಲ್ಲೂಕಿನ ರೈತರ ವತಿಯಿಂದ ಧನ್ಯವಾದವನ್ನು ಅರ್ಪಿಸುತ್ತೇನೆ.

ಶ್ರೀ ವಿಠಲ ಕಟಕದೋಂಡ: ಮಾನ್ಯ ಉಪಾಧ್ಯಕ್ಷರೆ, ನಾನೂ ಆ ಸಕ್ಕರೆ ಕಾರ್ಖಾನೆಗೆ ನಿರ್ದೇಶಕನಾಗಿದ್ದೇನೆ. ನನಗೆ 5 ನಿಮಿಷ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ತಾವು ಇದಕ್ಕೆ ಸಹಿ ಮಾಡಿಲ್ಲ. ಆದ್ದರಿಂದ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಿಠಲ ಕಟಕದೋಂಡ: ನಾನು ಆ ಕಾರ್ಖಾನೆಯ ನಿರ್ದೇಶಕನಾಗಿದ್ದೇನೆ. 5 ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು: ಕೇಳಿ.

ಶ್ರೀ ವಿಠಲ ಕಟಕದೋಂಡ: ಮಾನ್ಯ ಉಪಾಧ್ಯಕ್ಷರೆ, ಜ್ಞಾನಯೋಗಿ ಶಿವಕುಮಾರ ಸಕ್ಕರೆ ಕಾರ್ಖಾನೆ 2002ನೇ ಇಸವಿಯಲ್ಲಿ 208 ಪ್ರವರ್ತಕರನ್ನು ಒಳಗೊಂಡು ಕಬ್ಬನ್ನು ನುರಿಸುವ ಕೆಲಸವನ್ನು ಪ್ರಾರಂಭ ಮಾಡಿತು. 2002 ರಿಂದ

2007ರವರೆಗೆ ಬೇರೆ Management committee ಇತ್ತು. 2007ರ ಸಮಯದಲ್ಲಿ ವಿಧಾನ ಸಭೆಯಲ್ಲಿ ಅಂದು ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದಲ್ಲಿ ಆಗಿನ ರೈತರಿಗೆ ಆದ ಅನ್ಯಾಯವನ್ನು ಪರಿಹಾರ ಮಾಡುವುದಕ್ಕೋಸ್ಕರ ಸಭೆಯನ್ನು ಕರೆದಿದ್ದರು. ಅಲ್ಲಿ ಈ ಸಮಸ್ಯೆ ಬಗೆಹರಿಯಲಿಲ್ಲ. 2007 ಮತ್ತು 2008 ರಲ್ಲಿ ಏನು ಕಬ್ಬನ್ನು ನುರಿಸಿದ್ದಾರೆ ಅದಕ್ಕೆ ಒಂದು ಟನ್‌ಗೆ ಕೇವಲ 500 ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ಯಾವುದೇ ಸಕ್ಕರೆ ಕಾರ್ಖಾನೆ ಟನ್‌ಗೆ 850 ರೂಪಾಯಿಗಳಿಗಿಂತ ಕಡಿಮೆ ಹಣವನ್ನು ಕೊಟ್ಟಿಲ್ಲ. ಈ ಕಾರ್ಖಾನೆಯಲ್ಲಿ ಟನ್‌ಗೆ 500 ರೂಪಾಯಿ ಕೊಟ್ಟರೂ ಸಹ 18 master bill ಗಳಲ್ಲಿ 5 master bill ಗಳನ್ನು ಮಾತ್ರ ಕೊಟ್ಟು ಇನ್ನೂ 7 master billಗಳನ್ನು ತಡೆಹಿಡಿದಿದ್ದರು. ಆದರೆ, ಖಾಸಗಿ ವಲಯದಲ್ಲಿರುವ ಆ ಪ್ರವರ್ತಕರು ರೊಚ್ಚಿಗೆದ್ದು ಆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ಕಿತ್ತೊಗೆದು ಕಳೆದ ನವೆಂಬರ್ 29 ರಂದು ಹೊಸ ಆಡಳಿತ ಮಂಡಳಿ ನಿರ್ಮಾಣವಾಯಿತು. ಅದರಲ್ಲಿ ನಾನು ಒಬ್ಬ ನಿರ್ದೇಶಕ, ಆದರ, ಇವತ್ತು ಅಲ್ಲಿ ಏನಾಗಿದೆಯೆಂದರೆ..

ಉಪಾಧ್ಯಕ್ಷರು: ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ ಅದು ಈ ಗಮನ ಸೆಳೆಯುವ ಸೂಚನೆಯಲ್ಲಿ ಇಲ್ಲ.

ಶ್ರೀ ವಿಠಲ ಕಟಕದೋಂಡ: ನಾವು ಪ್ರವರ್ತಕರಾದಮೇಲೆ ಕಬ್ಬನ್ನು ನುರಿಸುವ ಕೆಲಸ ಪ್ರಾರಂಭ ಮಾಡಿದ ಮೇಲೆ ರೈತರಿಗೆ 1200 ರೂಪಾಯಿ ದರವನ್ನು ಒಂದು ಟನ್ ಕಬ್ಬಿಗೆ ಕೊಟ್ಟು ನುರಿಸುತ್ತಿದ್ದೇವೆ. ಆದರೆ, recovery certificate ಕೊಡದೆಯೇ ಹಿಂದಿನ ಆಡಳಿತ ಮಂಡಳಿ ಮಾಡಿದ ತಪ್ಪನ್ನು ಇವತ್ತು ನಮ್ಮ ಮೇಲೆ ಹೊರಿಸಿ recovery certificateನ್ನು ಕೊಟ್ಟಿದ್ದಾರೆ. ಆ ಕಾರ್ಖಾನೆಯಲ್ಲಿ ಸಕ್ಕರೆ ಹೊರಗೆ ಬಿದ್ದಿದೆ. ಅಲ್ಲಿ ಗೋಡೌನ್ ಇಲ್ಲ. ಅಕಸ್ಮಾತ್ ಅಕಾಲಿಕ ಮಳೆಯಾದರೆ ಸುಮಾರು 25 ಸಾವಿರ ಕ್ವಿಂಟಾಲ್ ಸಕ್ಕರೆ ಹಾಳಾಗುತ್ತದೆ. ಆದ್ದರಿಂದ ತಕ್ಷಣವೇ recovery certificateನ್ನು ತೆಗೆಸಿ ..

ಶ್ರೀ ಸಿ.ಎಸ್.ನಾಡಗೌಡ: ಒಂದೇ ನಿಮಿಷ ಈಲ್ಡ್ ಆಗಿ. ನಾನು ನಿಮ್ಮ ವಿಚಾರದ ಬಗ್ಗೆಯೇ ಮಾತನಾಡುತ್ತೇನೆ. ಆ ಸಕ್ಕರೆ ಕಾರ್ಖಾನೆಯ ಮೆನೇಜ್‌ಮೆಂಟ್ ಬದಲಾಗಿದೆ. ಮನೆ ಒಂದು ಟನ್ ಕಬ್ಬಿಗೆ 1200 ರಿಂದ 1300 ರೂಪಾಯಿ ಕೊಡುತ್ತಿದ್ದಾರೆ. ಹೀಗಾಗಿ ಆ ಸಕ್ಕರೆ ಕಾರ್ಖಾನೆಗೆ revenue recovery ಎಂದು ಹೇಳಿ ಈಗ ಇದ್ದಂಥ ಆಸ್ತಿ ಪಾಸ್ತಿಯನ್ನು ಮಾರಾಟ ಮಾಡಿ ಅದನ್ನು ರೈತರಿಗೆ ಕೊಡಲು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಸರ್ಕಾರವೇನು ಆದೇಶ ಮಾಡಿದ್ದಾರೆ ಅದು ಸರಿಯಲ್ಲ ಎಂಬ ಅರ್ಥದಲ್ಲಿ ಅವರು ಮಾತನಾಡುತ್ತಿದ್ದಾರೆ. ಆ ಭಾಗದಿಂದ ಅವರು ಬರುತ್ತಿದ್ದಾರೆ. ಅದು ನಿಜ, ಈಗ management ಬದಲಾಗಿದೆ. ಹೊಸದಾಗಿ ಬಂದಿರುವವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಈ ಗೊಂದಲದಲ್ಲಿ

ಏನು ಮಾಡುತ್ತಿದ್ದೀರಿ ಎಂದರೆ, ಬಿಜಾಪುರ ಜಿಲ್ಲೆಯಲ್ಲಿ ಇರತಕ್ಕಂಥ ಒಂದು ಶುಗರ್ ಫ್ಯಾಕ್ಟರಿಯನ್ನೂ ಸಹ ತೆಗೆದು ಹಾಕುತ್ತೀರಿ. ನೀವು ಮತ್ತೇನೂ ಮಾಡುವುದಿಲ್ಲ. ಕಟ್ಟಿದಂತಹ ಶುಗರ್ ಫ್ಯಾಕ್ಟರಿಯನ್ನು ಮುಚ್ಚಿ ಕೀಲಿ ಹಾಕತಕ್ಕಂಥ ಪರಿಸ್ಥಿತಿಗೆ ತರುತ್ತೀರಿ. ಅದಕ್ಕೆ ಸ್ವಲ್ಪ ರಿಯಾಯಿತಿ ಕೊಡುವಂತಾದ್ದು ಆಗಬೇಕು. ನೀವು ಅದರ ಬಗ್ಗೆ ಸ್ವಲ್ಪ magnanimous ಆಗಬೇಕು. ಯಾವ ಕಾರಣಕ್ಕೋಸ್ಕರ ಸಕ್ಕರೆ ಕಾರ್ಖಾನೆಗಳು ಹೋದ ವರ್ಷ, ಎರಡು ವರ್ಷದಿಂದ ಸರಿಯಾಗಿ ನಡೆದಿಲ್ಲ? ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳಬೇಕು. ರೈತರ ಹಿತದೃಷ್ಟಿ ಕೂಡ ಮುಖ್ಯ. ಇಲ್ಲವೆಂದು ನಾನು ಹೇಳುವುದಿಲ್ಲ. ಆ ರೈತರ ಹಿತದೃಷ್ಟಿ ಮುಖ್ಯವೆಂದು ಹೇಳಿ, ಇವತ್ತಿನವರೆಗೂ ಕೂಡ ಏನು ನಮ್ಮ Cane Directorರವರ officeನಿಂದ ನಮಗೆ ಹಣದ release order ಬರಬೇಕಾಗಿತ್ತೋ, ಅದು ಕೆಲವೊಂದು casesನಲ್ಲಿ ಇವತ್ತಿನವರೆಗೂ ಬಂದಿಲ್ಲ. ಸರ್ಕಾರವೇ ಈ ರೀತಿ ಮಾಡುವಾಗ, ಶುಗರ್ ಫ್ಯಾಕ್ಟರಿ ತನ್ನದೇ ಆದಂತಹ ಕೆಲವೊಂದು ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ, ಆರ್ಥಿಕ ಮುಗ್ಗಟ್ಟಿಗೆ ಒಳಗಾದಾಗ, ಸ್ವಲ್ಪ ತೊಂದರೆ ಆಗಿರಬಹುದು. ಈಗ ಹೊಸ management take over ಮಾಡಿದೆ. ಅದನ್ನು ಪೂರ್ತಿ ಮಾಡಲಿಕ್ಕೆ ಡಿ.ಸಿ.ಸಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದಾರೆ. ಮರುಪಾವತಿ ಕೂಡ ಈಗಾಗಲೇ ಶೇಕಡ 50ರಷ್ಟು ಮಾಡಿದ್ದಾರೆ. ಅದಕ್ಕಾಗಿ ಸ್ವಲ್ಪ ನೀವು ವಿಶಾಲ ದೃಷ್ಟಿಯಿಂದ ನೋಡಬೇಕು ಎನ್ನುವುದು ಅವರ ಕಳಕಳಿಯ ಉದ್ದೇಶವಾಗಿದೆ. ಅದನ್ನು ಬಿಟ್ಟರೆ ಮತ್ತೇನೂ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ಅಲ್ಲಿ ರೈತರ ಪರವಾಗಿ ನೀವು ದುಡ್ಡು ಕೊಡಿಸಬೇಕು ಎಂಬ ಕಾರಣಕ್ಕೋಸ್ಕರ Deputy Commissionerಗೆ ಜವಾಬ್ದಾರಿಕೆ ವಹಿಸಿದ್ದರ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಆದರೆ, ಮಾನ್ಯ ನಾಡಗೌಡರು ಹೇಳಿದ ರೀತಿಯಲ್ಲಿ management change ಆದಮೇಲೆ, ನಷ್ಟದಲ್ಲಿ ಇರತಕ್ಕಂಥ, ಮುಚ್ಚಿ ಹೋಗತಕ್ಕಂಥ ಫ್ಯಾಕ್ಟರಿಯನ್ನು ಡಿಸಿ.ಸಿ. ಬ್ಯಾಂಕ್ ಸಹಾಯದಿಂದ ಇವತ್ತು revive ಮಾಡಿ, ಈಗೇನು ಚಾಲ್ತಿ ಕಬ್ಬನ್ನು ಅರೆಯುತ್ತಿದ್ದಾರೋ, ಅವರಿಗೆಲ್ಲಾ payment ಕೊಡತಕ್ಕಂಥ ಮಟ್ಟಕ್ಕೆ ಹೋಗಿದ್ದಾರೆ. ಬಹುಶ: ಈಗ ನೀವು ಅಲ್ಲಿರತಕ್ಕಂಥ ಎಲ್ಲಾ ಸಕ್ಕರೆಯನ್ನು ಮಾರಿದರೂ ಕೂಡ ರೈತರಿಗೆ ಹಣ ಕೊಡಲಿಕ್ಕಾಗುವುದಿಲ್ಲ. ಇನ್ನೂ 2-3 ಕೋಟಿ ರೂ.ಗಳು ನೀವೇ ಕೊಡಬೇಕಾಗುತ್ತದೆ. ಆದರೆ ಇಲ್ಲಿ ಫ್ಯಾಕ್ಟರಿ ಮುಚ್ಚಿದರೆ ನಿಮಗೆ ಲಾಭವಾಗಲಿಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಈಗಾಗಲೇ ಡಿ.ಸಿ.ಸಿ. ಬ್ಯಾಂಕ್ ಮಧ್ಯದಲ್ಲಿ ಪ್ರವೇಶ ಮಾಡಿ, ಪುನಶ್ಚೇತನ ಕಾರ್ಯಕ್ರಮಕ್ಕೆ ಕೈ ಹಾಕಿರುವಂತಹ ಸಂದರ್ಭದಲ್ಲಿ ನೀವು ಸ್ವಲ್ಪ ಮುಂದಿನ ಹಂಗಾಮಿನವರೆಗೂ ಕೂಡ staggered payment ಅಥವಾ ಬೇರೆ ಯಾವ ರೀತಿಯಲ್ಲಾದರೂ ವ್ಯವಸ್ಥೆ ಮಾಡಿ, ಸರ್ಕಾರ ಮಧ್ಯೆ ಪ್ರವೇಶ ಮಾಡಿ ಮಧ್ಯಸ್ಥಿಕೆ

ವಹಿಸಿದರೆ, ಇವತ್ತು ರೈತರಿಗೂ ದುಡ್ಡು ಕೊಡಬಹುದು, ಫ್ಯಾಕ್ಟರಿಯನ್ನೂ ಸಹ ಉಳಿಸಬಹುದು. ಇದು ನಷ್ಟವಾಗಿರತಕ್ಕದ್ದು ಯಾರ periodನಲ್ಲಿ? Earlier ಇರತಕ್ಕಂಥ managementನಲ್ಲಿ ಒಂದೇ ವರ್ಷದಲ್ಲಿ ಸುಮಾರು 20 ಕೋಟಿ ರೂ.ಗಳಷ್ಟು ನಷ್ಟವಾಗಿದೆ. ಎಲ್ಲದನ್ನೂ ಮಾರಿದರೂ ಕೂಡ, 8–10 ಕೋಟಿ ರೂ.ಗಳ ನಷ್ಟವಾಗಿದೆ. ಆ management-management ಮಧ್ಯೆದಲ್ಲಿ ಇರತಕ್ಕಂಥ ಕಿತ್ತಾಟದಿಂದಾಗಿ ಫ್ಯಾಕ್ಟರಿ ಮುಚ್ಚಬಾರದು, ರೈತರಿಗೆ ಅನ್ಯಾಯವಾಗಬಾರದು. ರೈತರಿಗೆ ಇದೊಂದು ಆ ಭಾಗದಲ್ಲಿ ಕಾಮಧೇನುವಾಗಿರುತ್ತದೆ ಮತ್ತು ಸರ್ಕಾರ ಫ್ಯಾಕ್ಟರಿ ಉಳಿಸತಕ್ಕಂಥ ಕೆಲಸವನ್ನು ಇವತ್ತು ಮಾಡಬೇಕು. ಒಂದೇ ಸಲ ಮುಚ್ಚಿ ಬೀಗ ಹಾಕಿದರೆ ಖಂಡಿತವಾಗಿ ಅದನ್ನು ತೆಗೆಯಲಿಕ್ಕೆ ಕಷ್ಟವಾಗುತ್ತದೆ. ದಯಮಾಡಿ ಆ ದೃಷ್ಟಿಯಿಂದ ನೀವು ಮಧ್ಯೆಪ್ರವೇಶ ಮಾಡಿ, staggered paymentಗೆ ಮುಂದಿನ ಹಂಗಾಮಿನಲ್ಲಾದರೂ ಕೂಡ ರೈತರಿಗೆ ದುಡ್ಡು ಕೊಡಿಸತಕ್ಕಂಥ ರೀತಿಯಲ್ಲಿ, ಫ್ಯಾಕ್ಟರಿಯೂ ಉಳಿಯಬೇಕು, ರೈತರೂ ಉಳಿಯಬೇಕು, ಆ ರೀತಿಯಲ್ಲಿ ಒಂದು ತೀರ್ಮಾನವನ್ನು ದಯಮಾಡಿ ತೆಗೆದುಕೊಳ್ಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ:– ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರು ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ರೈತರ ಬಗ್ಗೆ ಕಾಳಜಿಯನ್ನು ವಹಿಸಿ, ಕನಿಷ್ಟ 7 ಕೋಟಿ ರೂ.ಗಳನ್ನು ಕೊಡಬೇಕಾಗಿದ್ದರಿಂದ, ಅಲ್ಲಿ ರೈತರು ಬಹಳಷ್ಟು ದೊಡ್ಡ ಪ್ರಮಾಣದಲ್ಲಿ strike ಅನ್ನು ಮಾಡುತ್ತಿರುವುದರಿಂದ, ನಾವು ಈಗಾಗಲೇ 3 ಸಾರಿ ಆ ಸಕ್ಕರೆ ಕಾರ್ಖಾನೆಯವರಿಗೆ ನೋಟೀಸ್ ಅನ್ನು ಕೊಟ್ಟಿದ್ದೆವು. ಅವರು ಅದಕ್ಕೆ ಸರಿಯಾಗಿ ಸ್ಪಂದಿಸಲಿಲ್ಲವಾದ್ದರಿಂದ ನಾವು ಈ ನಿರ್ಧಾರವನ್ನು ತೆಗೆದುಕೊಂಡೆವು. ಆದರೂ ಇನ್ನೊಮ್ಮೆ ಅವರನ್ನೆಲ್ಲಾ ಕರೆಸಿ, ಪರಿಶೀಲನೆ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

ಋ) ವಿಷಯ: ಕೊಬ್ಬರಿ ಬೆಲೆ ಕುಸಿತದಿಂದ ರೈತರು ಬಹಳ ಸಂಕಷ್ಟದಲ್ಲಿರುವುದರಿಂದ ನ್ಯಾಫೆಡ್ ತೆರೆದು ಬೆಂಬಲ ಬೆಲೆ ನಿಗದಿಪಡಿಸಿ ರೈತರಿಗೆ ನೆರವಾಗುವ ಬಗ್ಗೆ.

– – –

ಶ್ರೀ ಎಂ.ಟಿ.ಕೃಷ್ಣಪ್ಪ [ತುರುವೇಕೆರೆ] :– ಮಾನ್ಯ ಉಪಾಧ್ಯಕ್ಷರೆ, ಕೊಬ್ಬರಿ ಬೆಲೆ ಕುಸಿತದಿಂದ ರೈತರು ಬಹಳ ಸಂಕಷ್ಟದಲ್ಲಿರುವುದರಿಂದ ನ್ಯಾಫೆಡ್ ತೆರೆದು ಬೆಂಬಲ ಬೆಲೆ ನಿಗದಿಪಡಿಸಿ ರೈತರಿಗೆ ನೆರವಾಗುವ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಶಿವರಾಜ್ ಎಸ್.ತಂಗಡಗಿ [ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು] [ಸಹಕಾರ ಸಚಿವರ ಪರವಾಗಿ]:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಂ.ಟಿ.ಕೃಷ್ಣಪ್ಪನವರು ಹೇಳಿದಂತಹ ಗಮನ ಸೆಳೆಯುವ ಸೂಚನೆಯಲ್ಲಿ ರಾಜ್ಯದಲ್ಲಿ ಕೊಬ್ಬರಿ ಬೆಲೆಯು

3.700/- ರೂ.ಗಳಿಗೆ ಕುಸಿದಿದ್ದು, ಇದರಿಂದ ರೈತರು ಬಹಳ ಸಂಕಷ್ಟದಲ್ಲಿರುವುದರಿಂದ ನ್ಯಾಫೆಡ್ ತೆರೆದು ಬೆಂಬಲ ಬೆಲೆ ನಿಗದಿ ಪಡಿಸಿ ರೈತರ ಸಂಕಷ್ಟಗಳಿಗೆ ನೆರವಾಗಲು ಮಾನ್ಯ ಸದಸ್ಯರು ಪ್ರಸ್ತಾಪಿಸಿರುತ್ತಾರೆ. ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಕೊಬ್ಬರಿಯನ್ನು ಬೆಳೆಯಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 0.65 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಉತ್ಪಾದನೆಯಾಗುವ ಅಂದಾಜಿದೆ. ರೈತರು ಬೆಳೆದ ಕೊಬ್ಬರಿಗೆ 2007–08ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು FAQ ಗುಣಮಟ್ಟದ ಉಂಡೆ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ 3.910/- ರೂ. ಹಾಗೂ ಎಣ್ಣೆ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ 3.660/- ರೂ. ನಿಗದಿಪಡಿಸಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಉಂಡೆ ಕೊಬ್ಬರಿ ಮತ್ತು ಎಣ್ಣೆ ಕೊಬ್ಬರಿಯನ್ನು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಬೆಂಬಲ ಬೆಲೆಯಡಿಯಲ್ಲಿ ಖರೀದಿಸುವಂತೆ ರಾಷ್ಟ್ರೀಯ ಕೃಷಿ ಸಹಕಾರ ಮಾರಾಟ ಮಹಾಮಂಡಳಿಗೆ [NAFED] ಪತ್ರವನ್ನು ಬರೆಯಲಾಗಿದೆ. ಅದರ ಜೊತೆಗೆ ಈಗಾಗಲೇ ಪ್ರಸ್ತುತ ಕೊಬ್ಬರಿ ಬೆಳೆಗಾರರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಮತ್ತೊಂದು ಬೆಂಬಲ ಬೆಲೆಯನ್ನು FAQ ಗುಣಮಟ್ಟದ ಉಂಡೆ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ 4,700/- ರೂ. ಹಾಗೂ ಎಣ್ಣೆ ಕೊಬ್ಬರಿಗೆ, milling, ಪ್ರತಿ ಕ್ವಿಂಟಾಲ್‌ಗೆ 4,450/- ರೂ. ಬೆಂಬಲ ಬೆಲೆಯನ್ನು ನಿಗದಿಪಡಿಸಿರುವುದಾಗಿ ತಿಳಿದು ಬಂದಿರುತ್ತದೆ. ಅದರಂತೆ ಕ್ರಮ ಜರುಗಿಸಲು ಕೂಡ ನ್ಯಾಫೆಡ್ ಸಂಸ್ಥೆಗೆ ಬರೆದು ಪತ್ರದಲ್ಲಿ ಈಗಾಗಲೇ ಪ್ರಸ್ತಾಪಿಸಲಾಗಿದೆ. ಈಗಾಗಲೇ ಅದು ಪೇಪರ್ ಮುಖಾಂತರ ನಮ್ಮ ಗಮನಕ್ಕೆ ಬಂದಿದೆ. ಆದರೆ ಅಧಿಕೃತವಾಗಿ notification ಬಂದಿಲ್ಲದಿರುವುದರಿಂದ ಈ ರೇಟ್ ಅನ್ನು ನಾವು ನೀಡಿಲ್ಲ. ಅದು ಬಂದ ಮೇಲೆ, immediate ಆಗಿ ಇದೇ ರೇಟ್‌ನಲ್ಲಿ ಖರೀದಿ ಮಾಡಲಿಕ್ಕೆ ನಾವು ನ್ಯಾಫೆಡ್ ಸಂಸ್ಥೆಗೆ ಪ್ರಸ್ತಾಪಿಸಲಿಕ್ಕೆ ಈಗಾಗಲೇ ನಾವು ಪತ್ರವನ್ನು ಬರೆದಿದ್ದೇವೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರ ಈಗಾಗಲೇ 4,700/- ರೂ.ಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಿದೆ ಎಂಬುದನ್ನು ನಾನು ಸಹ ಮೊನ್ನೆ ಪೇಪರ್‌ನಲ್ಲಿ ಓದಿದ್ದೇನೆ. ಅದು ಇನ್ನೂ ಸರ್ಕಾರಿ ಆದೇಶದ ಮೂಲಕ ಕಾರ್ಯಗತವಾಗಿದೆಯೋ, ಇಲ್ಲವೋ ಎಂಬುದರ ಬಗ್ಗೆ ನನಗೆ ಅರಿವಿಲ್ಲ. ಕೇಂದ್ರ ಸರ್ಕಾರ 4,700/- ರೂ.ಗಳ ಬೆಂಬಲ ಬೆಲೆ ನಿಗದಿಪಡಿಸಿರುವುದು ಸ್ವಾಗತಾರ್ಹ. ಕಾರಣ, ಇವತ್ತು ಈ ರೈತರು ಕಷ್ಟಪಟ್ಟು ಬೆಳೆದಂತಹ ಬೆಳೆಯನ್ನು ಮಾರುಕಟ್ಟೆಯಲ್ಲಿನ ವ್ಯಾಪಾರಸ್ಥರು ಒಳ್ಳೆಯ ಬೆಲೆಗೆ ತೆಗೆದುಕೊಳ್ಳುತ್ತಿಲ್ಲ. ರೇಟ್ ಅನ್ನು ಫಿಕ್ಸ್ ಮಾಡಬೇಕಾದರೆ, ಅವರಿಗೆ ಬೇಕಾದರೆ 3,000/- ರೂ.ಗಳಿಗೆ ಬರುತ್ತಾರೆ, ಬೇಡವಾದಾಗ 5,000/- ರೂ.ಗಳಿಗೆ ಮಾಡಿಕೊಳ್ಳುತ್ತಾರೆ. ಹಾಗಾಗಿ, ನ್ಯಾಫೆಡ್‌ನಿಂದ ಮಾಡುವುದು ಸೂಕ್ತ. ಜೊತೆಗೆ ರಾಜ್ಯ ಸರ್ಕಾರದಿಂದ ತಾವು ಎಷ್ಟು ಬೆಂಬಲ ಬೆಲೆಯನ್ನು ಕೊಡುತ್ತೀರಿ? ಎಂಬುದೂ ಸಹ ಮುಖ್ಯ. ಕಳೆದ ಬಾರಿ ನಮ್ಮ

ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಸುಮಾರು 600 ರೂ.ಗಳ ಬೆಂಬಲ ಬೆಲೆಯನ್ನು ಕೊಟ್ಟು, 4,500/- ರೂ.ಗಳಿಂದ 5,000/-ರೂ.ಗಳವರೆಗೆ ನಾವು ಫಿಕ್ಸ್ ಮಾಡಿಸಿದ್ದೆವು. ನಮ್ಮ ಜಿಲ್ಲಾ ಸಚಿವರು ಅತಿ ಹೆಚ್ಚಿನ ಕಾಳಜಿಯನ್ನು ಇದರ ಬಗ್ಗೆ ವಹಿಸಬೇಕಾಗುತ್ತದೆ. ಕಾರಣ, ನಮ್ಮ ಭಾಗದಲ್ಲಿ, ಹಾಸನ, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ, part of Bangalore, ಈ ಭಾಗದಲ್ಲಿ ಹೆಚ್ಚು ಕೊಬ್ಬರಿಯನ್ನು ಬೆಳೆಯುತ್ತಾರೆ. ಶೇಕಡ 70-75ರಷ್ಟು ರೈತರು ಅದನ್ನು ನಂಬಿಕೊಂಡು ಜೀವನ ಮಾಡುತ್ತಿದ್ದಾರೆ. ಹಾಗಾಗಿ ಇವತ್ತು ಇದರ ಕಡೆ ಗಮನಹರಿಸಬೇಕು. ಸುಮಾರು 3-4 ತಿಂಗಳಿನಿಂದ ಸರ್ಕಾರ ಇದರ ಕಡೆಗೆ ಗಮನ ಹರಿಸಲಿಲ್ಲ. ಹಾಗಾಗಿ ಸರ್ಕಾರವನ್ನು ಮಾನ್ಯ ಅಧ್ಯಕ್ಷರ ಮುಖಾಂತರ ನಾನು ವಿನಂತಿಸಿಕೊಳ್ಳುವುದಿಷ್ಟೇ. ಕೇಂದ್ರ ಸರ್ಕಾರದವರೇನು 4,700/-ರೂ.ಗಳನ್ನು ಕೊಡುತ್ತಿದ್ದಾರೋ, ಅದರ ಜೊತೆಗೆ ರಾಜ್ಯ ಸರ್ಕಾರ ಕೂಡ ಬೆಂಬಲ ಬೆಲೆ ಘೋಷಿಸಬೇಕು. ಏಕೆಂದರೆ, ರಾಜ್ಯ ಸರ್ಕಾರ ನಾವು ರೈತರ ಪರವೆಂದು ಬೆಳಿಗ್ಗೆಯಿಂದ ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ. ಪ್ರತಿ ದಿವಸ ಶಾಲು ಹಾಕಿಕೊಂಡು ಅಥವಾ ಪ್ರಮಾಣ ವಚನ ಸ್ವೀಕಾರ ಮಾಡಿದ್ದನ್ನೂ ಸಹ ನಾವು ನೋಡಿದ್ದೇವೆ. ಆದರೆ ರೈತರು ಬಗ್ಗೆ ಎಷ್ಟು ಕಾಳಜಿ ಎಂಬುದನ್ನು ಈ ಬಗ್ಗೆ ನಾವು ಕಾಣಬೇಕಾಗುತ್ತದೆ. ಎಷ್ಟು ಬೆಂಬಲ ಬೆಲೆಯನ್ನು ಕೊಡುತ್ತೀರಿ ಎಂಬುದನ್ನು ದಯಮಾಡಿ ಮಾನ್ಯ ಸಚಿವರು ಹೇಳಿದರೆ ಬಹಳ ಸಂತೋಷವಾಗುತ್ತದೆ.

ಶ್ರೀ ಬಿ.ಸಿ.ನಾಗೇಶ್[ತಿಪಟೂರು]:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷ್ಣಪ್ಪನವರು ತುಂಬಾ ಗಂಭೀರವಾದಂತಹ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೆ. ಬರೀ ಬೆಲೆಯೊಂದೇ ಅಲ್ಲ. ದೇಶದಲ್ಲಿ ಕೇರಳ ಬಿಟ್ಟರೆ, ಹೆಕ್ಟೇರ್‌ವೈಸ್ ನೋಡಿದರೆ, ಕೇರಳದವರು 800 ಹೆಕ್ಟೇರ್ ಬೆಳೆದರೆ, ಕರ್ನಾಟಕದಲ್ಲಿ 400 ಹೆಕ್ಟೇರ್‌ನಲ್ಲಿ ಬೆಳೆಯುತ್ತಿದ್ದೇವೆ. ಅಂದರೆ ದೇಶದಲ್ಲಿ ಎರಡನೇ ದೊಡ್ಡ ಪ್ರಾಂತ್ಯ. ತೆಂಗಿನ ಬೆಳೆ ಆಧಾರದ ಮೇಲೆ ತೆಂಗನ್ನು ನಂಬಿ ಬೆಳೆಯುತ್ತಿರುವಂತಹ ನಮ್ಮ ರೈತರು ದೇಶದಲ್ಲೇ ಎರಡನೆಯ ಸ್ಥಾನದಲ್ಲಿದ್ದಾರೆ. ದೇಶದ ಶೇಕಡ 46ರಷ್ಟು ತೆಂಗನ್ನು ಕೇರಳ, ಕರ್ನಾಟಕ, ತಮಿಳುನಾಡು, ಈ ಮೂರು ರಾಜ್ಯಗಳಲ್ಲಿ ಬೆಳೆಯುತ್ತಿದ್ದೇವೆ. ದುರ್ದೈವದಿಂದ ಕಳೆದ 4-5 ವರ್ಷಗಳಿಂದ ಬರಿ ಬೆಲೆ ಕುಸಿತವೊಂದೇ ಅಲ್ಲ, ರೋಗ ಮತ್ತು ಬೇರೆ ಬೇರೆ ಪ್ರಕೃತಿ ವಿಕೋಪಕ್ಕೂ ಕೂಡ ತೆಂಗಿನ ರೈತ ತುತ್ತಾಗಿದ್ದಾನೆ. stastics ನೋಡಿದರೆ, ತಮಿಳುನಾಡಿನಲ್ಲಿ ರೈತ ಒಂದು ಹೆಕ್ಟೇರ್‌ಗೆ 12000 ಕಾಯಿ ಬೆಳೆಯುತ್ತಿದ್ದಾನೆ, ಕೇರಳದಲ್ಲಿ ಹೆಕ್ಟೇರ್‌ಗೆ 8000 ಕಾಯಿ ಬೆಳೆಯುತ್ತಿದ್ದಾನೆ, ಆದರೆ ಕರ್ನಾಟಕದಲ್ಲಿ ಹೆಕ್ಟೇರ್‌ಗೆ 3.900 ಕಾಯಿ ಬೆಳೆಯುತ್ತಿದ್ದಾನೆ. ಅದಕ್ಕೋಸ್ಕರ ಮಾನ್ಯ ಕೃಷ್ಣಪ್ಪನವರು ಹೇಳಿದಂತೆ...

ಉಪಾಧ್ಯಕ್ಷರು:- ದಯವಿಟ್ಟು clarification ಕೇಳಿ. ಮಾನ್ಯ ಸಚಿವರು ಈಗಾಗಲೇ ಉತ್ತರ ಹೇಳಿದ್ದಾರೆ. ಅದರಲ್ಲಿ ಏನಾದರು clarification

ಕೇಳುವುದಿದ್ದರೆ ಕೇಳಿ. ಇದು ಗಮನ ಸೆಳೆಯುವ ಸೂಚನೆಯಾಗಿದೆ. ದಯವಿಟ್ಟು ನೀವು ಭಾಷಣ ಮಾಡಬೇಡಿ.

ಶ್ರೀ ಬಿ.ಸಿ.ನಾಗೇಶ್:- ಮಾನ್ಯ ಉಪಾಧ್ಯಕ್ಷರೆ, ದೇಶದ ಎಲ್ಲಾ ಕಡೆಗೆ ಅನ್ವಯಿಸುವ ರೀತಿಯಲ್ಲಿ ಈ ನ್ಯಾಫೆಡ್ ಬೆಲೆ ಫಿಕ್ಸ್ ಮಾಡಲಾಗಿದೆ. ತಮಿಳುನಾಡು ಮತ್ತು ಕೇರಳದಲ್ಲಿ ರೈತ per hectare ಕಾಯಿ ಜಾಸ್ತಿ ಬೆಳೆಯುತ್ತಿದ್ದಾನೆ. ಕರ್ನಾಟಕದ ರೈತ ತುಂಬಾ ಕಡಿಮೆ ಬೆಳೆಯುತ್ತಿದ್ದಾನೆ. ಅದಕ್ಕೆ ನಮ್ಮ ರಾಜ್ಯದಲ್ಲಿ ಹಿಂದೆ ಇದ್ದಂತಹ ಸರ್ಕಾರದಲ್ಲಿ ಆರ್ಥಿಕ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಯಡಿಯೂರಪ್ಪನವರನ್ನು ಬಂದು ರೈತರೆಲ್ಲ ಕೇಳಿ ಕೊಂಡಾಗ ಅವರು ಕೊಟ್ಟಿದ್ದರು, ಆದುದರಿಂದ 4,700 ರೂಪಾಯಿ ಜೊತೆಗೆ 300 ರೂಪಾಯಿ ಕೊಟ್ಟು ಒಟ್ಟು ಬೆಲೆ 5,000 ರೂಪಾಯಿ ಮಾಡಿ, ಅದಕ್ಕೆ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಉಪಾಧ್ಯಕ್ಷರು: ಜಯಚಂದ್ರರವರೇ, ದಯವಿಟ್ಟು ತಾವು ಸಹಿ ಮಾಡಿಲ್ಲ. ಅವರು ಬಹಳ clear ಆಗಿ ಹೇಳಿದರು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೇ, ಇಬ್ಬರೂ ಸದಸ್ಯರು ಕೇಳಿರುವುದನ್ನು ಸೇರಿಸಿ ನಾನು ಒಂದೇ clarification ಕೇಳುತ್ತೇನೆ. 4,700 ಬೆಲೆಯನ್ನು ಕೇಂದ್ರ ಸರ್ಕಾರ fix ಮಾಡಿದೆ ಎನ್ನುವುದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ, ಕೆಲವೇ ದಿವಸದಲ್ಲಿ ನಫೆಡ್‌ನವರು ಕಾರ್ಯಕ್ರಮ ಮಾಡುತ್ತಾರೆ ಎನ್ನುವ ಮಾತಿದೆ. ದಯಮಾಡಿ ನಾನು clarification ಕೇಳುತ್ತಿರುವುದೇನೆಂದರೆ, 4,700 fix ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆಯೇ? ಅದು ತೀರ್ಮಾನವಾಗಿದ್ದರೆ ತಮಗೆ ಗೊತ್ತಾಗಿರುತ್ತದೆ. ಎರಡನೆಯದಾಗಿ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದಾಗಲೇ ಒಂದು ಕ್ವಿಂಟಾಲ್‌ಗೆ 600 ರೂಪಾಯಿ ಕೊಡುವಂತಹ ಕೆಲಸವನ್ನು ಮಾಡಿದ್ದರು. ಈಗ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಕೊನೇಪಕ್ಷ ಅದಕ್ಕೆ ಒಂದು ಸಾವಿರ ರೂಪಾಯಿ addition ಮಾಡಿಕೊಟ್ಟರೆ, ಕೇಂದ್ರ ಸರ್ಕಾರ ಈಗಾಗಲೇ 4,700 ರೂಪಾಯಿ ಮಾಡಿರುವುದರ ಜೊತೆಗೆ ನೀವು ಒಂದು ಸಾವಿರ ರೂಪಾಯಿ ಸೇರಿಸಿ ಕೊಟ್ಟರೆ 5,700 ರೂಪಾಯಿ ಆಗುತ್ತದೆ. ಆಗ ನಿಜವಾಗಲೂ ಕೂಡ ರೈತರಿಗೆ ಸಹಾಯವಾಗುತ್ತದೆ: ಅವರು ಮುಖ್ಯಮಂತ್ರಿಯಾಗಿದ್ದಕ್ಕೂ ಸಾರ್ಥಕವಾಗುತ್ತದೆ. ಅವರ ಹೆಸರು ಶಾಶ್ವತವಾಗಿ ಉಳಿಯಬೇಕಾದರೆ ಅವರು ಉಪಮುಖ್ಯಮಂತ್ರಿಗಳಾಗಿದ್ದಾಗ ಕೊಟ್ಟಿರುವುದಕ್ಕಿಂತಲೂ ಜಾಸ್ತಿ ಕೊಡಬೇಕು. ನೀವು ಕೊಡುತ್ತೀರಾ ಎಂದು ದಯಮಾಡಿ ಹೇಳಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ: ಮಾನ್ಯ ಉಪಾಧ್ಯಕ್ಷರೇ, ಕೇಂದ್ರ ಸರ್ಕಾರ ಈಗಾಗಲೇ ಹೆಚ್ಚಿನ ಬೆಲೆ ನಿಗದಿ ಮಾಡಿದ್ದು, ಅದಕ್ಕೆ ಇನ್ನು ಹೆಚ್ಚಿನ ಬೆಲೆ ನೀಡುವ ಬಗ್ಗೆ ಪರಿಶೀಲಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.30ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ರಾತ್ರಿ 9.12ಕ್ಕೆ ಮುಕ್ತಾಯಗೊಂಡು, ಮತ್ತೆ ದಿನಾಂಕ:27.02.09ರಂದು ಬೆಳಿಗ್ಗೆ 11.35ಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

<u>**ಕರ್ನಾಟಕ ವಿಧಾನ ಸಭೆ**</u>

53 ಶ್ರೀ ರೋಷನ್ ಬೇಗ್.ಆರ್

ವೈದ್ಯಕೀಯ ಶಿಕ್ಷಣ ಸಚಿವರು

ಅ) ಬೌರಿಂಗ್ ಆಸ್ಪತ್ರೆಯಲ್ಲಿ ಸುಟ್ಟಗಾಯಗಳ ವಾರ್ಡ್ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಇಲ್ಲ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಉದ್ಭವಿಸುವುದಿಲ್ಲ.

<u>**ಕರ್ನಾಟಕ ವಿಧಾನಸಭೆ**</u>

54 ಶ್ರೀ ಪಾಟೀಲ್ ಎ.ಎಸ್. (ನದಹಳ್ಳಿ) (ದೇವರ ಹಿಪ್ಪರಗಿ)

ಶ್ರೀ ಡಿ. ಸುಧಾಕರ, (ಸಮಾಜ ಕಲ್ಯಾಣ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ:ವರ್ಗ ಇಲಾಖೆಯ ಮೆಟ್ರಿಕ್ ಪೂರ್ವ:ನಂತರದ ಪ್ರತಿ ವಸತಿ ನಿಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನವೆಷ್ಟು (ತಾಲ್ಲೂಕುವಾರು, ವಸತಿ ನಿಲಯವಾರು ವಿವರ ನೀಡುವುದು);

<u>ಸಮಾಜ ಕಲ್ಯಾಣ ಇಲಾಖೆ.</u>

ಬಿಜಾಪುರ ಜಿಲ್ಲೆಯ ಪರಿಶಿಷ್ಟ ಜಾತಿಯ ಇಲಾಕೆಯ ಮೆಟ್ರಿಕ್-ಪೂರ್ವ, ನಂತರದ ಪ್ರತಿ ವಿದ್ಯಾರ್ಥಿ ನಿಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿದೆ.

ವರ್ಷ	ಬಿಡುಗಡೆ ಮಾಡಲಾದ ಅನುದಾನ
2005-06	ರೂ.155.875 ಲಕ್ಷ

2006–07 ರೂ.155.875 ಲಕ್ಷ

2007–08 ರೂ.221.565 ಲಕ್ಷ

(ತಾಲ್ಲೂಕುವಾರು, ವಸತಿ ನಿಲಯವಾರು ವಿವರ ಅನುಬಂಧ–1 ರಲ್ಲಿ ನೀಡಿದೆ)

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಬಿಜಾಪುರ ಜಿಲ್ಲೆ, ಬಿಜಾಪುರ ನಗರದಲ್ಲಿ ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ:

2006–07 ರೂ.4.01,000/–

2007–08 ರೂ.3,51,000/–

2008–09 ರೂ.2,08,000/–

ಜನವರಿ ವರೆಗೆ

ಅ) ಈ ವಸತಿ ನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಪೂರೈಸುತ್ತಿರುವ ಆಹಾರ ಪದಾರ್ಥಗಳ ಪ್ರಮಾಣ ಎಷ್ಟು; ಪ್ರತಿ ಆಹಾರ ಪದಾರ್ಥದ ವಿವರ ನೀಡುವುದು;

ಸಮಾಜ ಕಲ್ಯಾಣ ಇಲಾಖೆ

ಈ ವಸತಿ ನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ಪೂರೈಸುತ್ತಿರುವ ಆಹಾರ ಪದಾರ್ಥ ಹಾಗೂ ಇನ್ನಿತರೆ ನೀಡುತ್ತಿರುವ ಸೌಲಭ್ಯಗಳ ವಿವರಗಳನ್ನು ಕೆಳಕಂಡಂತೆ ನೀಡಿದೆ.

ಕ್ರ. ಸಂ.	ಆಹಾರ ಸಾಮಾಗ್ರಿಗಳ ವಿವರ	ಪ್ರಮಾಣ (ಗ್ರಾಂ.ಗಳಲ್ಲಿ)
1.	ಬಿಳಿ ಜೋಳ/ಗೋದಿ	250
2.	ಅಕ್ಕಿ	250
3.	ಪ್ರತಿ ದಿನ ಕಾಳುಪಲ್ಲೆ	20
4.	ಉದ್ದಿನ ಬೇಳೆ	20
5.	ರವಾ (ಕೇಸರಿ)	50
6.	ಅವಲಕ್ಕಿ ಮಧ್ಯಮ	50
7.	ಶೇಂಗಾ ಕಾಳು	20
8.	ಪುಠಾಣಿ	20
9.	ಶೇಂಗಾ ಎಣ್ಣೆ	20
10.	ತತ್ತಿ/ಬಾಳೆಹಣ್ಣು ವಾರಕ್ಕೊಮ್ಮೆ	1
11.	ತರಕಾರಿ ಪ್ರತಿದಿನ	100

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ವಸತಿನಿಲಯದಲ್ಲಿ ವಾಸವಾಗಿರುವ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು 600 ರೂಪಾಯಿ ಗಳನ್ನು ವಿನಿಯೋಗಿಸಿ ಈ ಕೆಳಗಿನ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಪೂರೈಸಲಾಗುತ್ತಿದೆ.

1	ಅಕ್ಕಿ	250 ಗ್ರಾಂ
2	ಜೋಳ	50 ಗ್ರಾಂ
3	ಗೋಧಿ	200 ಗ್ರಾಂ
4	ಎಣ್ಣೆ	20 ಗ್ರಾಂ
5	ಬೇಳೆ	40 ಗ್ರಾಂ
6	ಅವಲಕ್ಕಿ/ರವೆ	80 ಗ್ರಾಂ
7	ತರಕಾರಿ	2 ರೂಪಾಯಿ
8	ಮಸಾಲೆ ಸಾಮಾಗ್ರಿ	26 ಗ್ರಾಂ
9	ಹಾಲು	200 ಮಿಲಿ ಲೀಟರ್
10	ತತ್ತಿ	ಸೋಮ, ಬುಧ ಹಾಗೂ ಶುಕ್ರವಾರ ತಲಾ 1 ರಂತೆ
11	ಬಾಳೆಹಣ್ಣು	ಮಂಗಳ, ಗುರು ಹಾಗೂ ಶುಕ್ರವಾರ ತಲಾ 1 ರಂತೆ
12	ಸಿಹಿ ತಿಂಡಿಗಳು	ಪ್ರತಿ ರವಿವಾರ

ಇ) ಈ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಯಾವ ಸೌಲಭ್ಯವನ್ನು ನೀಡಲಾಗುವುದು (ವಿವರ ನೀಡುವುದು);

ಸಮಾಜ ಕಲ್ಯಾಣ ಇಲಾಖೆ.

ಈ ವಸತಿ ನಿಲಯಗಲಲ್ಲಿನ ವಿದ್ಯಾರ್ಥಿಗಳಿಗೆ ಆಹಾರ, ಕೊಬ್ಬರಿ ಎಣ್ಣೆ, ಮೈಸೋಪು, ಬಟ್ಟೆಸೋಪು, ಪಠ್ಯಪುಸ್ತಕ, ಸಮವಸ್ತ್ರ, ಬಾಲಕರಿಗೆ ಹೇರ್ ಕಟಿಂಗ್ ವೆಚ್ಚ, ಮಾಗಜೈನ್, ಮೂರು ವರ್ಷಕ್ಕೆ ಒಂದು ಬಾರಿ ಹಾಸಿಗೆ, ಹೊದಿಕೆ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.

ಊಟ ಹಾಗೂ ಉಪಹಾರದ ಜೊತೆಗೆ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಸ್ಟೇಷನರಿ, ಸೋಮ, ಕೊಬ್ರಿ ಎಣ್ಣೆ, ಹಾಸಿಗೆ ಹೊದಿಕೆ ಹಾಗೂ ಇತರೆ ಸೌಕರ್ಯಗಳನ್ನು ನೀಡಲಾಗುತ್ತಿದೆ.

ಈ) ವಸತಿ ನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಪೂರೈಸುತ್ತಿರುವ ಆಹಾರದ ಪ್ರಮಾಣ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ವಿವರ ನೀಡುವುದು:

ಸಮಾಜ ಕಲ್ಯಾಣ ಇಲಾಖೆ

ಹೌದು, 2008-09ನೇ ಸಾಲಿನಲ್ಲಿ ಆಹಾರ ವೆಚ್ಚವನ್ನು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ರೂ.450 ರಿಂದ ರೂ.600 ಹಾಗೂ ಮೆಟ್ರಿಕ್ ನಚಿತರದ ವಿದ್ಯಾರ್ಥಿ ನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹನೆಗೆ ರೂ.500 ರಿಂದ, ರೂ.650/-ಕ್ಕೆ ಭೋಜನಾ ವೆಚ್ಚವನ್ನು ಹೆಚ್ಚಿಸಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳ ಭೋಜನಾ ವೆಚ್ಚದ ದರವನ್ನು ಪ್ರತಿ ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.450 ರಿಂದ ರೂ.600 ಕ್ಕೆ ಹೆಚ್ಚಿಸಿ ಆಹಾರ ಪ್ರಮಾಣದಲ್ಲಿ ಸಮತೋಲನವನ್ನು ಕಂಡುಕೊಳ್ಳಲಾಗಿದೆ.
ಸಂಖ್ಯೆ:ಸಕಇ 34 ಸ್ಪೀಮರ 2009

ಸಹಿ/-
(ಸುಧಾಕರ)
ಸಮಾಜ ಕಲ್ಯಾಣ ಸಚಿವರು

(ಎಂ.ಎಂ. ಬಾಟಿ)
ಸರ್ಕಾರದ ಅಧೀನಕಾರ್ಯದರ್ಶಿ-8,
ಸಮಾಜ ಕಲ್ಯಾಣ ಇಲಾಖೆ.

ವಿಧಾನ ಸಭಾ ಸದಸ್ಯರಾದ ಶ್ರೀ ಪಾಟೀಲ್ ಎ. ಎಸ್ (ನದಹಳ್ಳಿ) (ದೇವರ ಹಿಪ್ಪರಗಿ) ಇವರ ಪ್ರಶ್ನೆ 54ಕ್ಕೆ ಅನುಬಂಧ-1

ವಿಜಾಪುರ ಜಿಲ್ಲೆ

ಕ್ರ ಸಂ	ವಿದ್ಯಾರ್ಥಿನಿಲಯಗಳ ಹೆಸರು	ಸ್ಥಳ	ತಾಲ್ಲೂಕು	2005-06	2006-07	2007-08
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ವಿಜಾಪೂರ	ವಿಜಾಪೂರ	4.50	4.50	5.94
2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಬಾಬಾನಗರ	ವಿಜಾಪೂರ	2.25	2.25	3.24
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಬಿಜ್ಜರಗಿ	ವಿಜಾಪೂರ	2.25	2.25	3.24
4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕಾಖಂಡಕಿ	ವಿಜಾಪೂರ	2.25	2.25	3.24
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಬಬಲೇಶ್ವರ	ವಿಜಾಪೂರ	3.375	3.375	4.59
6	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕಗ್ಗೋಡ	ವಿಜಾಪೂರ	2.25	2.25	3.24
7	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಶಿವಣಗಿ	ವಿಜಾಪೂರ	2.25	2.25	3.24
8	ಮೆಟ್ರಿಕ್ ಪೂರ್ವ	ವಿಜಾಪೂರ	ವಿಜಾಪೂರ	2.25	2.25	4.59

	ಬಾಲಕೀಯರ ವಿದ್ಯಾರ್ಥಿ ನಿಲಯ					
9	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ	ಹೊನ್ನುಟಗಿ	ವಿಜಾಪೂರ	2.25	2.25	3.24
10	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ವಿಜಾಪುರ	ವಿಜಾಪುರ	5.00	5.00	6.485
11	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ವಿಜಾಪುರ	ವಿಜಾಪುರ	2.50	2.50	3.535
	ಒಟ್ಟು			**31.125**	**31.125**	**44.58**
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಬಸವನಬಾಗೇವಾಡಿ	ಬಿ.ಬಾಗೇವಾಡಿ	2.25	2.25	4.62
2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಹೆಬ್ಬಾಳ	ಬಿ.ಬಾಗೇವಾಡಿ	2.25	2.25	3.24
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ತೆಲಗಿ	ಬಿ.ಬಾಗೇವಾಡಿ	2.25	2.25	3.24
4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ವಡವಡಗಿ	ಬಿ.ಬಾಗೇವಾಡಿ	2.25	2.25	3.24
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಜಾಯವಡಗಿ	ಬಿ.ಬಾಗೇವಾಡಿ	2.25	2.25	3.24
6	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕೆ.ಸಾಲವಾಡಗಿ	ಬಿ.ಬಾಗೇವಾಡಿ	2.25	2.25	3.24
7	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ನರಸಲಗಿ	ಬಿ.ಬಾಗೇವಾಡಿ	2.25	2.25	3.24
8	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ನಿಡಗುಂದಿ	ಬಿ.ಬಾಗೇವಾಡಿ	2.25	2.25	1.67
9	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ	ಸಿದ್ದನಾಥ	ಬಿ.ಬಾಗೇವಾಡಿ	2.25	2.25	3.24

	ನಿಲಯ					
10	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ	ಬಸವನಬಾಗೇವಾಡಿ	ಬಿ.ಬಾಗೇವಾಡಿ	2.25	2.25	3.24
	ಒಟ್ಟು			**22.50**	**22.50**	**32.21**
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಮುದ್ದೇಬಿಹಾಳ	ಮುದ್ದೇಬಿಹಾಳ	3.375	3.375	4.59
2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ತಾಳಿಕೋಟೆ	ಮುದ್ದೇಬಿಹಾಳ	2.25	2.25	3.24
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಡವಳಗಿ	ಮುದ್ದೇಬಿಹಾಳ	2.25	2.25	3.24
4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕೊಡಗಾನೂರು	ಮುದ್ದೇಬಿಹಾಳ	2.25	2.25	3.24
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕೊಣ್ಣೂರು	ಮುದ್ದೇಬಿಹಾಳ	1.125	1.125	3.24
6	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ರಕ್ಕಸಗಿ	ಮುದ್ದೇಬಿಹಾಳ	2.25	2.25	3.24
7	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕೊಳೂರು	ಮುದ್ದೇಬಿಹಾಳ	2.25	2.25	3.24
8	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ	ತಾಳಿಕೋಟೆ	ಮುದ್ದೇಬಿಹಾಳ	2.25	2.25	3.24
9	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಮುದ್ದೇಬಿಹಾಳ	ಮುದ್ದೇಬಿಹಾಳ	3.375	3.375	4.59
	ಒಟ್ಟು			**21.375**	**21.375**	**31.86**
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಸಾರೋಟಗಿ	ಇಂಡಿ	2.25	2.25	3.24
2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ನಿಂಬಾಳ ಎಲ್ ಟಿ	ಇಂಡಿ	2.25	2.25	3.24

3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಚಡಚಣ	ಇಂಡಿ	2.25	2.25	3.24
4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ತಡವಲಗಾ	ಇಂಡಿ	2.25	2.25	3.24
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ನಿವರಗಿ	ಇಂಡಿ	2.25	2.25	3.24
6	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಹೋರ್ತಿ	ಇಂಡಿ	3.375	3.375	4.59
7	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಹಲಸಂಗಿ	ಇಂಡಿ	2.25	2.25	3.24
8	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ದೇವರನಿಂಬರಗಿ	ಇಂಡಿ	2.25	2.25	3.24
9	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಇಚಡಿ	ಇಂಡಿ	3.375	3.375	4.59
10	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಧೂಳಖೇಡ	ಇಂಡಿ	2.25	2.25	3.24
11	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಲಚ್ಯಾಣ	ಇಂಡಿ	3.375	3.375	4.59
12	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಹಿರೇಬೇವನೂರು	ಇಂಡಿ	2.25	2.25	3.24
13	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಹಳಗುಣಕಿ	ಇಂಡಿ	2.25	2.25	3.24
14	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಲೋಳಿ. ಬಿ.ಕೆ.	ಇಂಡಿ	2.25	2.25	3.24
15	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ	ಇಚಡಿ	ಇಂಡಿ	2.25	2.25	3.24

16	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ	ಹೋರ್ತಿ	ಇಂಡಿ	2.25	2.25	3.24
	ಒಟ್ಟು			**39.375**	**39.375**	**55.89**
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಬಳಗಾನೂರು	ಸಿಂಧಗಿ	2.25	2.25	3.24
2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಹಿಟ್ನಳ್ಳಿ ಎಲ್‌ಟಿ	ಸಿಂಧಗಿ	2.25	2.25	3.24
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಸಿಂಧಗಿ	ಸಿಂಧಗಿ	3.375	3.375	4.59
4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಅಲಮೇಲ	ಸಿಂಧಗಿ	3.375	3.375	3.24
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಮಲಘಾಣ	ಸಿಂಧಗಿ	2.25	2.25	3.24
6	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಬಿಟಿಇಂಗಳಗಿ	ಸಿಂಧಗಿ	2.25	2.25	3.24
7	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಅಸ್ಕಿ	ಸಿಂಧಗಿ	2.25	2.25	3.24
8	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕಲಕೇರಿ	ಸಿಂಧಗಿ	2.25	2.25	3.24
9	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ದೇವರಹಿಪ್ಪರಗಿ	ಸಿಂಧಗಿ	2.25	2.25	3.24
10	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಮುಳಸಾವಳಗಿ	ಸಿಂಧಗಿ	2.25	2.25	3.24
11	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ	ಸಿಂಧಗಿ	ಸಿಂಧಗಿ	2.25	2.25	3.24
12	ಮೆಟ್ರಿಕ್ ಪೂರ್ವ ಬಾಲಕೀಯರ	ಹಿಟ್ನಳ್ಳಿ ಎಲ್‌ಟಿ	ಸಿಂಧಗಿ	2.25	2.25	3.24

	ವಿದ್ಯಾರ್ಥಿ ನಿಲಯ					
13	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ	ಜಾಲವಾಡ	ಸಿಂಧಗಿ	2.25	2.25	3.24
14	ಬಾಲಕರ ಕಾಲೇಜು ವಿದ್ಯಾರ್ಥಿ ನಿಲಯ	ಸಿಂಧಗಿ	ಸಿಂಧಗಿ	5.00	50.00	6.485
15	ಬಾಲಕರ ಕಾಲೇಜು ವಿದ್ಯಾರ್ಥಿ ನಿಲಯ	ಸಿಂಧಗಿ	ಸಿಂಧಗಿ	5.00	50.00	6,485
16	ಬಾಲಕೀಯರ ಕಾಲೇಜು ವಿದ್ಯಾರ್ಥಿ ನಿಲಯ	ಸಿಂಧಗಿ	ಸಿಂಧಗಿ	2.50	2.50	3.535
	ಒಟ್ಟು			155.875	155.875	221.565

ಎಂ.ಎಂ.ಬಾಟೆ
ಸರ್ಕರ ಅಧೀನ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ

<u>ಕರ್ನಾಟಕ ವಿಧಾನ ಸಭೆ</u>

56 ಶ್ರೀ ಪಾಟೀಲ್ ಎ.ಎಸ್(ನಡಹಳ್ಳಿ)(ದೇವರ ಹಿಪ್ಪರಗಿ)
ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯುಲ್ಲಿ ವಸತಿನಿಲಯಗಳು
ಶ್ರೀ ಡಿ. ಸುಧಾಕರ ಸಮಾಜ ಕಲ್ಯಾಣ ಸಚಿವರು

ಉ) ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯುಲ್ಲಿ ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿ:ವರ್ಗಗಳ ಹೊಸ ವಿದ್ಯಾರ್ಥಿನಿಲಯಗಳಿಗೆ ಬಂದಿರುವ ಪ್ರಸ್ತಾವನೆಗಳೆಷ್ಟು; ಯಾವ ಯಾವ ಗ್ರಾಮಗಳಿಗಾಗಿ ಬಂದಿರುತ್ತವೆ(ವಿವರ ನೀಡುವುದು);

<u>ಸಮಾಜ ಕಲ್ಯಾಣ ಇಲಾಖೆ:</u>

ದೇವರ ಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯುಡಿ ಬರುವ ಈ ಕೆಳಕಂಡ ಗ್ರಾಮಗಳಲ್ಲಿ ಹೊಸದಾಗಿ ವಸತಿ ನಿಲಯಗಳನ್ನು ಮಂಜೂರು ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆ. ವಿವರ ಕೆಳಗಿನಚಿತಿದೆ.

1. ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಕೊರವಾರ
2. ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಹೂ-ಹಿಪ್ಪರಗಿ
3. ಮೆಟ್ರಿಕ್ ಪೂರ್ವ ಬಾಲಕರ ವಸತಿ ಬಿ-ಸಾಲವಾಡಗಿ
4. ಮೆಟ್ರಿಕ್ ಪೂರ್ವ ಬಾಲಕರ ವಸತಿ ಭಂಟನೂರು
5. ಮೆಟ್ರಿಕ್ ಪೂರ್ವ ಬಾಲಕಿಯುರ ವಸತಿ ಭಂಟನೂರು

6. ಮೆಟ್ರಿಕ್ ಪೂರ್ವ ಬಾಲಕರ ವಸತಿ ಮೋರಟಗಿ

7. ಮೆಟ್ರಿಕ್ ನಚಿತರದ ಬಾ೦ಕರ ಕೋರವಾರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಚುಲ್ಲಿ ಸಿಂಧಗಿ ತಾಲ್ಲೂಕು ಚಿಕ್ಕರೂಗಿ ಗ್ಹಾಮದಲ್ಲಿ ಹಿಂ(ದುಳಿದ ವರ್ಗಗಳ ಒಚಿದು ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಮತ್ತು ದೇವರ ಹಿಪ್ಪರಗಿ ಗ್ಹಾಮದಲ್ಲಿ ಒಚಿದು ಮೆಟ್ರಿಕ್-ನಚಿತರದ ಬಾಲಕರ ವಿದ್ಯಾರ್ಥಿನಿಲಯ ಪ್ರಾರಂಭಿಸುವಚಿತೆ ಕೋರಿ ಪ್ರಸ್ತಾವನೆ ಬಂದಿರುತ್ತವೆ.

ಪರಿಶಿಷ್ಟ ಕಲ್ಯಾಣ ಇಲಾಖೆ:

ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಚುಲ್ಲಿ ಪರಿಶಿಷ್ಟ ವರ್ಗದ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಚಿತೆ ಯಾವುದೇ ಪ್ರಸ್ತಾವನೆ ಬ೦ದಿರುವುದಿಲ್ಲ. ಪ್ರಸ್ತಾವನೆ ಬಂದಲ್ಲಿ ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿ ಕುರಿತು ಪರಿಶೀಲಿಸಲಾಗುವುದು.

ಆ) ಈ ಪ್ರಸ್ತಾವನೆಗಳಿಗೆ ಯಾವಾಗ ಮಂಜೂರಾತಿ ನೀಡಲಾಗುವುದು;

ಸಮಾಜ ಕಲ್ಯಾಣ ಇಲಾಖೆ:

ಈ ಪ್ರಸ್ತಾವನೆಗಳಿಗೆ ಆಚಿುವ್ಯಯದಲ್ಲಿ ಒದಗಿಸಿದ ಅನುದಾನವನ್ನು ಅನುಸರಿಸಿ 2008-09ನೇ ಸಾಲಿನಲ್ಲಿ ರಾಜ್ಯಾದ್ಯಂತ ಅವಶ್ಯಕತೆಯನ್ನುಸರಿಸಿ 104 ಹೊಸ ವಿದ್ಯಾರ್ಥಿನಿಲಯಗಳನ್ನು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಲಾಗಿದೆ. 2008-09ನೇ ಸಾಲಿನಲ್ಲಿ ಬಹುತೇಕ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮೆಟ್ರಿಕ್ ನಚಿತರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಆದ್ಯತೆ ನೀಡಿರುವ್ಯದರಿಂದ ಈ ಪ್ರಸ್ತಾವನೆಗಳನ್ನು ಪರಿಗಣಿಸಲಾಗಿರುವುದಿಲ್ಲ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಆಚಿುವ್ಯಯದ ಲಭ್ಯತೆಯನುಸಾರ ರಾಜ್ಯದಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಾಗ ರಾಜ್ಯದ ಒಟ್ಟಾರೆ ಬೇಡಿಕೆಯ ಜೊತೆಗೆ ದೇವರ ಹಿಪ್ಪರಗಿ ಕ್ಷೇತ್ರದ ಬೇಡಿಕೆಯನ್ನು ಸಹ ಗಮನಕ್ಕೆ ತೆಗೆದುಕೊಂಡು ಪರಿಶೀಲಿಸಿಲಾಗುವುದು.

ಇ) ಪ್ರಸಕ್ತ ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಚುಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶವೇನಾದರೂ ಇದೆಯೇ(ವಿವರ ನೀಡುವುದು)?

ಸಮಾಜ ಕಲ್ಯಾಣ ಇಲಾಖೆ:

2006-07ನೇ ಸಾಲಿನಲ್ಲಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ 10 ರಿಂದ 15 ಸಂಖ್ಯೆ ಮ್ಮಿರದಂತೆ ಮಂಜೂರಾತಿ ಸಂಖ್ಯೆಯನ್ನು ಸರ್ಕಾರವು ಹೆಚ್ಚಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಚುಲ್ಲಿರುವ ಪ್ರತಿ ವಸತಿ ನಿಲಯಕ್ಕೆ 15 ಸ೦ಖ್ಯಾಬಲವನ್ನು ಈಗಾಗಲೇ ಹೆಚ್ಚಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

2008-09ನೇ ಸಾಲಿಗೆ ದೇವರ ಹಿಪ್ಪರಗಿ ಕ್ಷೇತ್ರದ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಿಸುವ ಉದ್ದೇಶ ಇರುವುದಿಲ್ಲ.

ಸಂಖ್ಯೆ:ಸಕಇ 30 ಸ್ವೀಮಠ 2009

(ಡಿ.ಸುಧಾಕರ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

78 ಶ್ರೀ ಸಂಪಂಗಿ ಎನ್.

ಶ್ರೀ ಡಿ. ಸುಧಾಕರ, ಸಮಾಜ ಕಲ್ಯಾಣ ಸಚಿವರು

ಊ) ಬಾಗೇಪಲ್ಲಿ-ಗುಡಿಬಂಡೆ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವ್ಯಾವು;

ಸಮಾಜ ಕಲ್ಯಾಣ ಇಲಾಖೆ:

ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.
2. ಪರಿಶಿಷ್ಟ ಜಾತಿಯ ಕುಟುಂಬದ ವಾರ್ಷಿಕ ವರಮಾನ ರೂ1.00 ಲಕ್ಷದೊಳಗಿನ ಅರ್ಹ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪಿ.ಯು.ಸಿ.ಯಿಂದ ಸ್ನಾತಕೋತ್ತರ ವ್ಯಾಸಂಗದವರೆಗೆ ಭಾರತ ಸರ್ಕಾರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತಿದೆ.
3. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.
4. ಮೆಟ್ರಿಕ್ ನಚಿತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.
5. ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಚಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು 5 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ
2. ಮೆಟ್ರಿಕ್-ನಚಿತರದ ವಿದ್ಯಾರ್ಥಿನಿಲಯಗಳು-ಪಿ.ಯು.ಸಿ. ಇಚಿದ ಸ್ನಾತಕೋತ್ತರ ಪದವಿಯವರಿಗಿನ ವಿದ್ಯಾರ್ಥಿಗಳಿಗೆ

3. ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ-5ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ
4. ಮೆಟ್ರಿಕ್-ನಚಿತರ ವಿದ್ಯಾರ್ಥಿವೇತನ-ಪಿ.ಯು.ಸಿ. ಇಚಿದ ಸ್ನಾತಕೋತ್ತರ ಪದವಿಯವರಿಗಿನ ವಿದ್ಯಾರ್ಥಿಗಳಿಗೆ
5. ಶುಲ್ಕ ಮರುಪಾವತಿ-ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮತ್ತು ಪಿ.ಯು.ಸಿ. ಇಚಿದ ಸ್ನಾತಕೋತ್ತರ ಪದವಿಯವರೆಗಿನ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಮರುಪಾವತಿ.

<u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:</u>

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಚಿದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ವಿದ್ಯಾರ್ಥಿವೇತನಗಳು:

1) 1 ರಿಂದ 7ನೇ ತರಗತಿ (ಬಾಲಕ/ಬಾಲಕಿಚುರಿಗೆ) ವಾರ್ಷಿಕ ರೂ.75/-ಗಳು
2) 8 ರಿಂದ 10ನೇ ತರಗತಿ (ಬಾಲಕ/ಬಾಲಕಿಚುರಿಗೆ) ವಾರ್ಷಿಕ ರೂ.100/-ಗಳು
3) 6 ರಿಂದ 7ನೇ ತರಗತಿ ಹೆಣ್ಣು ಮಕ್ಕಳಿಗೆ ರೂ.250/- ರಂತೆ ವಿಶೇಷ ಪ್ರೋತ್ಸಾಹಧನ ವಾರ್ಷಿಕ
4) 8 ರಿಂದ 10ನೇ ತರಗತಿ ಹೆಣ್ಣು ಮಕ್ಕಳಿಗೆ ರೂ.500/- ರಂತೆ ವಿಶೇಷ ಪ್ರೋತ್ಸಾಹಧನ ವಾರ್ಷಿಕ
5) 1ನೇ ಮತ್ತು 2ನೇ ಪಿಯುಸಿ ವಿದ್ಯಾರ್ಥಿಗಳಿಗೆ ರೂ.140/- ನಿರ್ವಹಣಾ ವೆಚ್ಚ ಪ್ರತಿ ಮಾಹೆಗೆ ಮತ್ತು ಸರ್ಕಾರಿ ನಿಗದಿತ ಶುಲ್ಕಗಳು
6) 1, 2 ನೇ ಮತ್ತು 3ನೇ ಪದವಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ರೂ.185/- ನಿರ್ವಹಣಾ ವೆಚ್ಚ ಪ್ರತಿ ಮಾಹೆಗೆ ಮತ್ತು ಸರ್ಕಾರಿ ನಿಗಧಿತ ಶುಲ್ಕಗಳು
7) ಡಿ.ಎಡ್. ವಿದ್ಯಾರ್ಥಿಗಳಿಗೆ ನಿರ್ವಹಣಾ ವೆಚ್ಚ ರೂ.330/- ಪ್ರತಿ ಮಾಹೆಗೆ ಮತ್ತು ಸರ್ಕಾರಿ ನಿಗಧಿತ ಶುಲ್ಕಗಳು
8) ಬಿ.ಇಡಿ. ವಿದ್ಯಾರ್ಥಿಗಳಿಗೆ ನಿರ್ವಹಣಾ ವೆಚ್ಚ ರೂ.330/- ಪ್ರತಿ ಮಾಹೆಗೆ ಮತ್ತು ಸರ್ಕಾರಿ ನಿಗಧಿತ ಶುಲ್ಕಗಳು
9) ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ನಿರ್ವಹಣಾ ವೆಚ್ಚ ರೂ.330/- ಪ್ರತಿ ಮಾಹೆಗೆ ಮತ್ತು ಸರ್ಕಾರಿ ನಿಗಧಿತ ಶುಲ್ಕಗಳು
10) ಶೈಕ್ಷಣಿಕ ಪ್ರವಾಸ ವೆಚ್ಚ (ಡಿ.ಎಸ್.ಮತ್ತು ಬಿ.ಇಡಿ. ವಿದ್ಯಾರ್ಥಿಗಳಿಗೆ ಮಾತ್ರ) ರೂ1000/- ಒಚಿದು ಸಲ ಮಾತ್ರ.

ವಿದ್ಯಾರ್ಥಿನಿಲಯಗಳಲ್ಲಿ ಈ ಕೆಳಕಂಡಂತೆ ಸರ್ಕಾರದಿಂದ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು:

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ವಾಸಿಸಿತ್ತಿರುವ ಪ್ರತಿ ವಿದ್ಯಾರ್ಥಿಗೆ ನೀಡುತ್ತಿರುವ ಸೌಲಭ್ಯಗಳು ಈ ಕೆಳಕಂಡಂತಿವೆ:

1) ಆಹಾರ ವೆಚ್ಚ ರೂ.600/-ರಂತೆ ಪ್ರತಿ ಮಾಹೆಗೆ
2) ಸಂಕೀರ್ಣ ವಸ್ತುಗಳು ರೂ.40/-ರಂತೆ ಪ್ರತಿ ಮಾಹೆಗೆ
3) ಲೇಖನ ಸಾಮಗ್ರಿಗಳು ರೂ.250/-ರಂತೆ ಪ್ರತಿ ವರ್ಷಕ್ಕೆ
4) ಸಮವಸ್ತ್ರ ರೂ.500/-ರಂತೆ ಪ್ರತಿ ವರ್ಷಕ್ಕೆ
5) ತಲೆ ಕ್ಷೌರ (ಬಾಲಕರು) ರೂ.60/-ರಂತೆ ಪ್ರತಿ ವರ್ಷಕ್ಕೆ
6) ಹಾಸಿಗೆ ಹೊದಿಕೆ ರೂ.400/-ರಂತೆ ವಿದ್ಯಾರ್ಥಿಗಳಿಗೆ (ಮೂರು ವರ್ಷಕ್ಕೊಮ್ಮೆ)

ಮೆಟ್ರಿಕ್ ನಚಿತರದ ವಿದ್ಯಾರ್ಥಿನಿಲಯಗಳು:

1) ಆಹಾರ ವೆಚ್ಚ ರೂ.650/-ರಂತೆ ಪ್ರತಿ ಮಾಹೆಗೆ ಆಶ್ರಮ ಶಾಲೆ
2) ಆಹಾರ ವೆಚ್ಚ ರೂ.500/-ರಂತೆ ಪ್ರತಿ ಮಾಹೆಗೆ (ಸರ್ಕಾರದ ಆದೇಶ ದಿನಾಂಕ: 2/2/2009ರಂತೆ)
3) ಸಂಕೀರ್ಣ ವಸ್ತುಗಳು ರೂ.15/-ರಂತೆ ಪ್ರತಿ ಮಾಹೆಗೆ
4) ಲೇಖನ ಸಾಮಗ್ರಿಗಳು ರೂ.40/-ರಂತೆ ಪ್ರತಿ ವರ್ಷಕ್ಕೆ
5) ಸಮವಸ್ತ್ರ, ರೂ.200/-ರಂತೆ ಪ್ರತಿ ವರ್ಷಕ್ಕೆ
6) ತಲೆಕ್ಷೌರ (ಬಾಲಕರು) ರೂ.12/-ರಂತೆ ಪ್ರತಿ ವರ್ಷಕ್ಕೆ
7) ಹಾಸಿಗೆ ಹೊದಿಕೆ ರೂ.300/- ರಂತೆ ವಿದ್ಯಾರ್ಥಿಗಳಿಗೆ (ಮೂರು ವರ್ಷಕ್ಕೊಮ್ಮೆ)

ಖ) ಈ ತಾಲ್ಲೂಕಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ಸ್ವಂತ ವಿದ್ಯಾರ್ಥಿನಿಲಯವಿಲ್ಲದೆ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

<u>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:</u>

ಹೌದು. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ 10 ವಿದ್ಯಾರ್ಥಿನಿಲಯಗಳಿದ್ದು, ಇವುಗಳಲ್ಲಿ 7 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ 3 ವಿದ್ಯಾರ್ಥಿನಿಲಯಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತವೆ.

ಗುಡಿಬಂಡೆ ತಾಲ್ಲೂಕಿನಲ್ಲಿ 4 ವಿದ್ಯಾರ್ಥಿನಿಲಯಗಳಿದ್ದು, 2 ಸ್ವಂತ ಕಟ್ಟಡಗಳಲ್ಲಿ, 2 ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಸ್ವಂತ ಕಟ್ಟಡಗಳಿಲ್ಲದ ವಿದ್ಯಾರ್ಥಿನಿಲಯಗಳಲ್ಲಿ ಸೂಕ್ತ ಸ್ಥಳಾವಕಾಶ ಹಾಗೂ ಇತರೆ ಸೌಕರ್ಯಗಳಿಲ್ಲದ ಪ್ರಯುಕ್ತ, ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿರುತ್ತದೆ.

<u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:</u>

ಹೌದು.

ಎ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮವೇನು (ವಿವರ ಒದಗಿಸುವುದು);

ಸಮಾಜ ಕಲ್ಯಾಣ ಇಲಾಖೆ:

ಬಾಗೇವಲ್ಲಿ ಹಾಗೂ ಗುಡಿಬಂಡೆ ತಾಲ್ಲೂಕುಗಳಲ್ಲಿ ಈ ಕೆಳಕಂಡಂತೆ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ತಾಲ್ಲೂಕು	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಚಿತರ
ಬಾಗೇವಲ್ಲಿ	9	3
ಗುಡಿಬಂಡೆ	4	1
ಒಟ್ಟು	13	4

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಬಾಗೇಪಲ್ಲಿ ತಾಲ್ಲೂಕಿನ ಬೆಳ್ಳೂರು ಗ್ರಾಮದಲ್ಲಿರುವ ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯಕ್ಕೆ ನಿವೇಶನ ಪಡೆಯಲಾಗಿದೆ. ಬಾಡಿಗೆ ಕಟ್ಟಡಗಳಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ನಿವೇಶನಗಳನ್ನು ಪಡೆದು, ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಪವಯೋ 2008 ದಿ: 4/9/2008ರಲ್ಲಿ 2008-09ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು, ಬಾಗೇಪಲ್ಲಿ ಟೌನ್‌ಗೆ 50 ಸಂಖ್ಯಾಬಲದ ಮೆಟ್ರಿಕ್ ನಚಿತರದ ಬಾಲಕರ ವಿದ್ಯಾರ್ಥಿನಿಲಯವನ್ನು ಪ್ರಾಂಭಿಸಲು ಮಂಜೂರಾತಿ ನೀಡಲಾಗಿದೆ. ಸದರಿ ವಿದ್ಯಾರ್ಥಿನಿಲಯವನ್ನು ಬಾಡಿಗೆ ಕಟ್ಟಡದಲ್ಲಿ ಪ್ರಾಂಭಿಸಲಾಗಿದೆ. ಸದರಿ ವಿದ್ಯಾರ್ಥಿನಿಲಯಕ್ಕೆ ಸೂಕ್ತವಾದ ನಿವೇಶನವನ್ನು ಪಡೆದು ಅನುದಾನ ಲಭ್ಯತೆ ಆಧರಿಸಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು.

ಗುಡಿಬಂಡೆ ತಾಲ್ಲೂಕು, ಗುಡಿಬಂಡೆ ಟೌನ್‌ನಲ್ಲಿ 1 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವಿದ್ದು; ಈ ನಿಲಯವು ಸಹ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ಸರ್ಕಾರಿ ನಿವೇಶನ ಜನವರಿಯಲ್ಲಿ ಸಮಾಜಕಲ್ಯಾಣ ಇಲಾಖೆಗೆ ಹಸ್ತಾಂತರವಾಗಿದೆ. ಈ ವಿದ್ಯಾರ್ಥಿನಿಲಯಕ್ಕೆ ಮೂಲಭೂತ ಸೌಕರ್ಯಗಳುಳ್ಳ ಸ್ವಂತ ಕಟ್ಟಡ ನಿರ್ಮಿಸಲು ಅನುದಾನ ಲಭ್ಯತೆ ಆಧರಿಸಿ ಕ್ರಮಕೈಗೊಳ್ಳಲಾಗುವುದು.

ಏ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಯಾವ ಯಾವ ವರ್ಗದ ವಿದ್ಯಾರ್ಥಿಗಳಿಗೆ ಯಾವ ಯಾವ ರೀತಿಯ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ: 2007-08ನೇ ಸಾಲಿನಲ್ಲಿ ವ್ಯವಸ್ಥೆ ಮಾಡಿದಂತಹ ವ್ಯವಸ್ಥೆಯ ವಿವರವನ್ನು ಒದಗಿಸುವುದು; ಈ ಬಗ್ಗೆ ಸರ್ಕಾರವು ಹಾಕಿಕೊಂಡಿರುವ ಯೋಜನೆಗಳೇನು?

ಸಮಾಜ ಕಲ್ಯಾಣ ಇಲಾಖೆ:

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ರೂ.450 ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ರೂ.500 ರಂತೆ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ಮೆನೂ ಚಾರ್ಟ್ ಹಾಕಿಕೊಂಡು ಊಟದ ವ್ಯವಸ್ಥೆಯನ್ನು 2007-08ನೇ ಸಾಲಿನಲ್ಲಿ ಒದಗಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

2007-08ನೇ ಸಾಲಿನಲ್ಲಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.400/-ರಲ್ಲಿ ಅಂದರೆ, ದಿನವೊಂದಕ್ಕೆ ರೂ.15/- ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.500/-ರಲ್ಲಿ ಅಂದರೆ, ದಿನವೊಂದಕ್ಕೆ ರೂ.16.66/-ಗಳಲ್ಲಿ ಒಂದು ತಿಂಡಿ, ಎರಡು ಊಟ, ಜೊತೆಗೆ ವಾರಕ್ಕೆ ಎರಡು ದಿನ ಬಾಳೆಹಣ್ಣು, ಎರಡು ದಿನ ಕೋಳಿಮೊಟ್ಟೆ ಮತ್ತು ತಿಂಗಳಿಗೊಮ್ಮೆ ಸಿಹಿ ಊಟ ನೀಡಲಾಗಿದೆ.

2008-09ನೇ ಸಾಲಿನಲ್ಲಿ ಸೆಪ್ಟೆಂಬರ್ ಮಾಹೆಯಿಂದ ಊಟದವೆಚ್ಚವನ್ನು ಕ್ರಮವಾಗಿ ರೂ.450/-ರಿಂದ 600/- ಮತ್ತು ರೂ.500/- ರಿಂದ ರೂ.650/- ಕ್ಕೆ ಹೆಚ್ಚಿಸಿದ್ದು, ಹೆಚ್ಚಿಸಲಾದ ಆಹಾರದ ದರದಲ್ಲಿ ಪ್ರತಿದಿನ ಹಾಲು ಹಾಗೂ ಲಘು ಉಪಹಾರ ನೀಡಲಾಗುತ್ತಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಬಾಗೇಪಲ್ಲಿ ವಿದಾನಸಭಾ ಕ್ಷೇತ್ರದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಒಂದೇ ತರಹದ ಮೆನು ಚಾಟ್ ಪ್ರಕಾರ ಆಹಾರ ಒದಗಿಸಲಾಗುತ್ತಿದೆ. ಅದೇ ರೀತಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಅಪೇಕ್ಷೆಯಂತೆ ಊಟ, ತಿಂಡಿ, ವ್ಯವಸ್ಥೆ ಮಾಡಲಾಗಿರುತ್ತದೆ.

2007-08ನೇ ಸಾಲಿಗೆ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಿಗೆ ಊಟದ ವೆಚ್ಚ ರೂ.450/-ಗಳಿದ್ದು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ ರೂ.500/-ಗಳಿದ್ದು, ಈ ದರಗಳಂತೆ ಆಹಾರಗಳನ್ನು ಒದಗಿಸಲಾಗಿದೆ. 2007-08ನೇ ಸಾಲಿಗೆ ಕೋಲಾರ ಜಿಲ್ಲಾ ಸಮಾಜ ಕಲ್ಯಾಣಧಿಕಾರಿಗಳ ಕಚೇರಿಯಿಂದ ತಯಾರಿಸಲಾದ ಮೆನು ಚಾರ್ಟ್ ಪ್ರಕಾರ ಆಹಾರ ನೀಡಲಾಗಿದ್ದು, 2008-09ನೇ ಸಾಲಿಗೆ ಕಛೇರಿಯಿಂದ ತಯಾರಿಸಲಾದ ಮೆನು ಚಾರ್ಟ್ ಪ್ರಕಾರ ವಿದ್ಯಾರ್ಥಿನಿಲಯಗಳಿಗೆ ಆಹಾರ ಒದಗಿಸಲಾಗಿರುತ್ತದೆ. ವಿವರ ಅನುಬಂಧದಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಸಕಇ 29 ಸ್ಪೀಮರ 2009

ಸಹಿ/-
(ಸುಧಾಕರ)
ಸಮಾಜ ಕಲ್ಯಾಣ ಸಚಿವರು

(ಎಂ.ಎಂ. ಬಾಟ್)
ಸರ್ಕಾರದ ಅಧೀನಕಾರ್ಯದರ್ಶಿ-3,

ಸಮಾಜ ಕಲ್ಯಾಣ ಇಲಾಖೆ.

<u>ಅನುಬಂಧ</u>

<u>2008-09ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಮೆನು ಚಾರ್ಟ್</u>

ವಾರಗಳು	ಬೆಳಿಗ್ಗೆ 6.30 ರಿಂದ 7.00	ಬೆಳಗಿನ ಊಟ 8.30 ರಿಂದ 9.00	ಮಧ್ಯಾಹ್ನ 1.30 ರಿಂದ 2.30	ಸಾಯಂಕಾಲ 4.30 ರಿಂದ 5.30	ರಾತ್ರಿ ಊಟ 8.00 ರಿಂದ 9.00
ಸೋಮವಾರ	ಪ್ರತಿ ವಿದ್ಯಾರ್ಥಿಗೆ 200 ಮಿಲಿ ಲೀಟರ್ ಶುದ್ಧೀಕರಿಸಿದ ಹಾಲು	ಮುದ್ದೆ, ಅನ್ನ ಸಾಂಬರು	ಶಾಲೆಚುಲ್ಲಿ ಬಿಸಿಯೂಟ	ಅವಲಕ್ಕಿ	ಮುದ್ದೆ, ಅನ್ನ ಸಾಂಬರು, ಮಜ್ಜಿಗೆ, ಬಾಳೆಹಣ್ಣು
ಮಂಗಳವಾರ	ಪ್ರತಿ ವಿದ್ಯಾರ್ಥಿಗೆ 200 ಮಿಲಿ ಲೀಟರ್ ಶುದ್ಧೀಕರಿಸಿದ ಹಾಲು	ಮುದ್ದೆ, ಅನ್ನ ಸಾಂಬರು	ಶಾಲೆಚುಲ್ಲಿ ಬಿಸಿಯೂಟ	ಉಪ್ಪಿಟ್ಟು	ಮುದ್ದೆ, ಅನ್ನ ಸಾಂಬರು, ಮಜ್ಜಿಗೆ, ಕೋಳಿಮೊಟ್ಟೆ
ಬುಧವಾರ	ಪ್ರತಿ ವಿದ್ಯಾರ್ಥಿಗೆ 200 ಮಿಲಿ ಲೀಟರ್ ಶುದ್ಧೀಕರಿಸಿದ ಹಾಲು	ಮುದ್ದೆ, ಅನ್ನ ಸಾಂಬರು	ಶಾಲೆಚುಲ್ಲಿ ಬಿಸಿಯೂಟ	ಶಾವಿಗೆ ಬಾತ್	ಚಪಾತಿ, ಚಟ್ನಿ, ಅನ್ನ ಸಾಂಬರು, ಮಜ್ಜಿಗೆ, ಬಾಳೆಹಣ್ಣು
ಗುರುವಾರ	ಪ್ರತಿ ವಿದ್ಯಾರ್ಥಿಗೆ 200 ಮಿಲಿ ಲೀಟರ್ ಶುದ್ಧೀಕರಿಸಿದ ಹಾಲು	ಮುದ್ದೆ, ಅನ್ನ ಸಾಂಬರು	ಶಾಲೆಚುಲ್ಲಿ ಬಿಸಿಯೂಟ	ಪುಳಿಯೋಗರೆ	ಮುದ್ದೆ, ಅನ್ನ ಸಾಂಬರು, ಮಜ್ಜಿಗೆ, ಕೋಳಿಮೊಟ್ಟೆ

ಶುಕ್ರವಾರ	ಪ್ರತಿ ವಿದ್ಯಾರ್ಥಿಗೆ 200 ಮಿಲಿ ಲೀಟರ್ ಶುದ್ದೀಕರಿಸಿದ ಹಾಲು	ಮುದ್ದೆ, ಅನ್ನ ಸಾಂಬರು	ಶಾಲೆಚುಲ್ಲಿ ಬಿಸಿಯೂಟ	ಕೇಸರಿಬಾತ್	ಮುದ್ದೆ, ಅನ್ನ ಸಾಂಬರು, ಮಜ್ಜಿಗೆ, ಬಾಳೆಹಣ್ಣು
ಶನಿವಾರ	ಪ್ರತಿ ವಿದ್ಯಾರ್ಥಿಗೆ 200 ಮಿಲಿ ಲೀಟರ್ ಶುದ್ದೀಕರಿಸಿದ ಹಾಲು	ಮುದ್ದೆ, ಅನ್ನ ಸಾಂಬರು	ಶಾಲೆಚುಲ್ಲಿ ಬಿಸಿಯೂಟ	ಬಿಸಿಬೇಳೆ ಬಾತ್	ಮುದ್ದೆ, ಅನ್ನ ಸಾಂಬರು, ಮಜ್ಜಿಗೆ, ಬಾಳೆಹಣ್ಣು
ಭಾನುವಾರ	ಪ್ರತಿ ವಿದ್ಯಾರ್ಥಿಗೆ 200 ಮಿಲಿ ಲೀಟರ್ ಶುದ್ದೀಕರಿಸಿದ ಹಾಲು	1ನೇ ಭಾನುವಾರ ಚಪಾತಿ, ಚಟ್ನಿ 2ನೇ ಭಾನುವಾರ ಇಡ್ಲಿ. ಚಟ್ನಿ 3ನೇ ಭಾನುವಾರ ಚೌಚೌ ಬಾತ್ 4ನೇ ಭಾನುವಾರ ದೋಸೆ, ಚಟ್ನಿ	ಮುದ್ದೆ, ಅನ್ನ ಸಾಂಬರು	ಬ್ರೆಡ್/ಬಿಸ್ಕತ್ ಟೀ/ಕಾಫಿ	ವಿದ್ಯಾರ್ಥಿಗಳ ಅಪೇಕ್ಷೆಯಂತೆ ವಿಶೇಷ ಊಟ

ಎಂ.ಎಂ.ಬಾಟೆ
ಸರ್ಕಾರ ಆಧೀನ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನಸಭೆ.

79 ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ)
ಮಾನ್ಯ ಕಾರ್ಮಿಕ ಸಚಿವರು.

ಅ) ಬಾಗೇಪಲ್ಲಿ ಹಾಗೂ ಗುಡಿಬಂಡೆ ತಾಲ್ಲೂಕುಗಳು ಅತೀ ಹಿಂದುಳಿದ ತಾಲ್ಲೂಕಿನ ಪ್ರದೇಶವೆಂದು ಗುರುತಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

Yes

ಆ) ಐ.ಟಿ.ಐ. ಕಾಲೇಜನ್ನು ಈ ತಾಲ್ಲೂಕುಗಳಲ್ಲಿ ಪ್ರಾಂಭಿಸಲಾಗಿದೆಯೇ? ಪ್ರಾಂಭಿಸಿದ್ದಲ್ಲಿ ವಿವರ ಒದಗಿಸುವುದು. ಇದಕ್ಕಾಗಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಜಮೀನುಗಳ ಸ್ವಾಧೀನಕ್ಕೆ ಮಾಡಲ್ಪಟ್ಟ ವೆಚ್ಚವೆಷ್ಟು?

ಬಾಗೇಪಲ್ಲಿಯಲ್ಲಿ 1998ನೇ ಸಾಲಿನಲ್ಲಿ ಹಾಗೂ ಗುಡಿಬಂಡೆಯಲ್ಲಿ 2008ನೇ ಸಾಲಿನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಂಭಿಸಲಾಗಿದೆ. ಬಾಗೇಪಲ್ಲಿಯಲ್ಲಿ 7 ಎಕರೆ 20 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಇದು ಸರ್ಕಾರಿ ಭೂಮಿಯಾಗಿದ್ದು ಯಾವುದೇ ವೆಚ್ಚವಾಗಿರುವುದಿಲ್ಲ. ಗುಡಿಬಂಡೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾಂಭಿಸಲಾಗಿರುತ್ತದೆ.

ITI s were established during 1998 at Bagepalli and Gudibande. 7 acre and 20 guntas of land has been acquired for Bagepalli institute. Being Govt. land no expenditure was incurred. Action has been initiated to acquire land at Gudibande.

ಇ) ಗುಡಿಬಂಡೆ ತಾಲ್ಲೂಕಿನಲ್ಲಿ ಐ.ಟಿ.ಐ. ಕಾಲೇಜು ಸ್ಥಾಪನೆಗೆ ಸರ್ಕಾರವು ಕ್ರಮ ಕೈಗೊಂಡಿದೆಯೇ (ವಿವರ ಒದಗಿಸುವುದು)

ಗುಡಿಬಂಡೆಯ ಕೈಗಾರಿಕಾ ತರಬೇತಿ ಸಂಸ್ಥೆಯನ್ನು 2008–09ನೇ ಸಾಲಿನಲ್ಲಿ ಒಂಭತ್ತು ವೃತ್ತಿಗಳೊಂದಿಗೆ ಪ್ರಾಂಭಿಸಲಾಗಿದೆ.

ITI was opened during 2008-09 at Gudibande with nine trades.

ಸಂಖ್ಯೆ: ಕಾಇ 05 ಇಟಿಎ 2009

(ಬಿ.ಎನ್. ಬಚ್ಚೇಗೌಡ)
ಮಾನ್ಯ ಕಾರ್ಮಿಕ ಸಚಿವರು.

ಕರ್ನಾಟಕ ವಿಧಾನ ಸಭೆ

80 ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)
ಪ್ರೊ।ಡಾ: ಮುಮ್ತಾಜ್ ಅಲಿ ಖಾನ್ ಹಜ್, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಕ್ಫ್ ಮಂಡಳಿ ವತಿಯಿಂದ ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವುವು: ಈವರೆವಿಗೂ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ತಾಲ್ಲೂಕುವಾರು ವಿವರ ಒದಗಿಸುವುದು ಮತ್ತು ಇದಕ್ಕೆ ಒದಗಿಸಲಾಗಿರುವ ಅನುದಾನವೆಷ್ಟು?

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಕ್ಫ್ ಅನುದಾನ ಸಂಹಿತೆಯಡಿಯಲ್ಲಿ ತೆಗೆದು ಕೊಳ್ಳಲಾಗಿರುವ ಕಾಮಗಾರಿಗಳ ಮಾಹಿತಿ ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ. ಹಾಗೂ ಕೇಂದ್ರ ವಕ್ಫ್ ಪರಿಷತ್ತ್ ನೀಡಿರುವ ಹಣಕಾಸಿನ ಸಹಾಯದಿಂದ ಈ ಕೆಳಕಂಡ ವಕ್ಫ್ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

1. ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರಿನಲ್ಲಿ, ಶಾಹ್ ಇನಾಯತ್ ಜಾಮಿಯಾ ಮಸ್ಜಿದ್ ಶಾಪಿಂಗ್ ಕಾಂಪ್ಲೆಕ್ಸ್,
2. ಚಿಕ್ಕಬಳ್ಳಾಪುರ ಟೌನ್‌ನಲ್ಲಿ ಮದೀನಾ ಶಾದಿಮಹಲ್ (ಜಮಾತೆ ಅಹಲೆ ಇಸ್ಲಾಂ)

ಆ) ವಕ್ಫ್ ಮಂಡಳಿಗೆ ಸೇರಿರುವ ಆಸ್ತಿಗಳೇಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ವಿವರ ಅನುಬಂಧ-2ರಲ್ಲಿ ನೀಡಲಾಗಿದೆ.

ಇ) ವಕ್ಫ್ ಮಂಡಳಿಯ ಮಸೀದಿಗಳ ಹಾಗೂ ಅಲ್ಪಸಂಖ್ಯಾತರ ಸ್ಮಶಾನಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ?

ಹೌದು

ಈ) ಕಾಮಗಾರಿ ಕೈಗೊಂಡಿದ್ದಲ್ಲಿ, ತಾಲ್ಲೂಕುವಾರು ವಿವರವನ್ನು ಒದಗಿಸುವುದು?

ವಿವರ ಅನುಬಂಧ-3ರಲ್ಲಿ ನೀಡಲಾಗಿದೆ.

ಸಂಖ್ಯೆ: ಎಂಡಬ್ಲ್ಯೂಡಿ 94 ಡಬ್ಲ್ಯೂಇಎಸ್ 2009

(ಪ್ರೊ।ಡಾ: ಮುಮ್ತಾಜ್ ಅಲಿ ಖಾನ್)
ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಸಚಿವರು.

ANNEXURE-I

STATEMENT SHOWING SANCTION OF GRANT-IN-AID TO WAKF INSTITUTIONS IN CHICKBALLAPUR DISTRICT.

CHIKKABALLAPUR DISTRICT

Sl.No.	Institution	Purpose	Amount
1	Jumma masjid (Sunni) Doddakurugodu, Gouribidanooru Taluk	Construction of Masjid Minar	1,00,000/-
2	Thamire Masjid Committee, Halaganahalli, Gouribidanooru Taluk	Construction of compound wall to Khabrasthan	1,00,000/-
3	Jamla Masjid, Hadigere, Chikkaballapur	Renovation of Masjid	1,00,000/-
4	Jamla Masjid, Hadigere, Chikkaballapur	Construction of compound wall to Khabrasthan	1,00,000/-
5	Masjid Billal, Khanchihalli grama Chinthamani Taluk	Renovation of Masjid	1,00,000/-
		Total	5,00,000/-

ANNEXURE-II

TOTAL NO. OF WAKF INSTITUTIONS TALUKWISE, (BOTH NOTIFIED AND REGISTERED) PERTANING TO CHICKBALLAPUR DISTRICT.

	No.of Mosque	No.of Dargahs	No.of Khabarsthan	No.of Idgahs	No.of Ashurkhana	No.of Madrasa	No.of Taleem Khanas	No.of Khankhas
	GT. REG NO. NO	GT. REG NO.NO	GT.REG NO. NO	GT. REG NO. NO	GT. REG NO. NO	GT. NO. REG NO.	GT. REG NO. NO	GT.REG NO. NO
	23 11	15 00	38 02	18 00	35 00	Chinthamani Taluk 10 02	02 00	Nill
	07 00	05 00	21 01	10 00	15 00	Sidlaghatta Taluk Nill	Nill	Nill
	12 05	06 00	21 01	02 00	17 00	Chikkaballapur Taluk 00 03	Nill	Nill
	04 05	01 00	09 00	02 01	15 00	Gudibande Taluk 01 00	Nill	Nill
	10 10	02 01	31 01	11 01	26 00	Bagepalli Taluk 01 00	Nill	Nill
	16 20	04 00	42 03	18 00	87 00	Gowribidanur Tluk 05 03	Nill	Nill
TOTAL	**72 51**	**33 01**	**162 08**	**61 02**	**195 00**	**17 -**	**02 00**	**-**

	Name of the Institution	Measurement
	Chickballapur Taluk	
1.	Jamia Masjid, Mylappanahalli, chickballapur Taluk.	Site No.62, E-W = 16' N-S = 36'
2.	Alhaj Abdul Khuddus Saheb Foundation, P.T. Street, Chickballapur.	K.No.148 700' X 120' Sy.No.171/2A
3.	Khabrastan, Devishetthally Village, Chickballapur Taluk.	Sy.No.69 0A-06G
4.	Masjid-e-Quba, Kandawara, Chickballapur Taluk.	Site No.07 E-W = 30' N-S = 30'
5.	Masjid and Arabic Madrasa Khadriya, Varahalli Village, Kere Sandra Post, Chickballapur Taluk.	Sy.No.252 Out of total measuring 2A – 12G
6.	Jamia Masjid, Devishettihalli Village, Doddanmarati Post, Chickballapur Taluk.	K.No.160 Measuring 40' X 50'
7.	Macca Masjid, Shantinagar(Addl Property i.e., Jamth-e-Ahle Islam, Chickballapur.	1) Muncipal Khata No.1483/44 Measuring 40' X 30' 2) Municipal Khata No.277 Measuring 40' X 50'
	Bagepalli Taluk	
8.	Madeena Masjid (Sunni), Nellacheraun Village, Puthparthi Post, Bagepalli Taluk.	K.No.94 Measuring 30' X 40'
9.	Jamia Masjid (Sunni),Mittemari Village, Bagepalli Taluk.	K.No.627
10.	Asian Health and Education	

	Training Trust (R), Bagepalli Town.	Measuring 30' X 40'
11.	Masjid-e-Quba, Chemannagaripalli Village, Somnathpur Bagepalli Taluk. Post.,	K.No.127 E-W = 66' N-S = 130'
12.	Mecca Masjid, Mecca Mohalla, (Kumper pet), Bagepalli Town.	K.No.111 E-W = 30' N-S = 40'
13.	Tooba Education Trust, -Gulur Road, Bagepalli Kasba & Town.	Sy.No3 Extent 0-05 Guntas
14.	**Chintamani Taluk**	K.No.131 140' X 80'
15.	Anjuman-Hazarath Bilal, Chintamani.	
16.	Arabic Madrasa, Mylandahalli Village, Chintamani Taluk.	K.No.6107,442,443 Area = E-W = 15' N-S = 30'
17.	Khabrasthan (Sunni), Upparpet, Chintamani Tq.	K.No.56
18.	Masjid-e-Himnamath, N.Kottur Village, Chintamani.	Sy.No.12/1 = 1A-27G Sy.No.12/2 = 0A-35G Sy.No.12/3 = 0A-32 Tay Demand Reg.No = 161 E-W = 60' N-S = 40'
19.	Addl Property of Masjid, Arabic Madrasa, Idgah and Khabrasthan, Kaiwara Village, Chintamani Taluk.	Makan Inmti, Kaiwara Village.
20.	**Sidlagatta Taluk**	

	Addl Property i.e., Tippu Welfare Trust, Nisarpalya, Sidlaghatta Town.	K.No.454/1 Measuring 18' X 75'
21.	Basisu Rural Development and Education Trust, Near 2nd T.M.C. Layout, Sidlaghatta Town.	1) Site No.19 measuring 25'X30' 2) Site No. 20 measuring 25'X40' 3) Site No. 23 measuring 50'X100'
22.	Hazrath Bashu Baba and Khabrasthan, Kanadenakunte Village, Sidlaghatta Taluk.	Sy.No.3/1 measuring 01A-01G
23.	Jamia Masjid (Sunni), Dibburhalli Village and Post, Sidlaghatta Taluk.	K.No.277 measuring 40' X 50'
24.	**Gowribidanur Taluk**	
25.	Masjid-e-Muqadas (Sunni), Halehalli Village, Manchenahalli Post, Gowribidanur Taluk.	K.No.49
26.		Assessment No.38 of Halehalli Village, Area 50' X 50'
	Jamia Masjid, Manchenahalli Grama, Gowribidanur Taluk.	Sy.No.316 Extent 01A-10G
27.	Darul Zainab Charitable Trust, Alipur, Gowribidanur Taluk.	Revenue Land No.37/1 Area: 1.5 Acres
28.	Syed Umar Masjid, Hussainpura Village, Gowribidanur Taluk.	Deman Registration No.151 Measuring 44' X 50'
29.	Additional Property at Islamia Baithu Mal and Madrasa-e-Arabia Anwarul Bakhiyath, Tippu Nagar, Gowribidanur.	Sy.No.199 Hirebidnur Village, Measuring 0A – 35 Guntas
30.	Darus Zehra Social Welfare Trust, Alipur,	K.No.323 E-W = 33.8 mtrs

31.	Gowribidanur Taluk.	N-S = 24.6 mtrs
32.	Mosque (Sunni), Katamahalla Village, Gowribidnur Taluk.	Measuring 35' X 40'
33.	Masjid and Khabrasthan, Kondapur Village, Hosur Post, Gowribidanur Taluk.	Sy.No.1/1 and Mutation 7/04-05 (0.26) Guntas
	Jamia Masjid (Sunni), Kotaldinne, Hosur Post, Gowribidnur Taluk.	Khata No.1407 Measuring 229' X 231'
	Masjid-e-Ikhi, Near Sugar Factory, Gowribidnur Tluk.	Sy.No.74, E-W = 40' N-S = 108'
	Masjid-e-Nimra, Gandhi Nagar Ext'n, Halaganahalli P & V, Gowribidanur Taluk.	K.No.566, Site No.9 & 10, Measuring : E-W = 220' N-S = 40'

ANNEXURE-III

1	Taluk	wakf s 2004 -05		Wakf s 2005 -06		Wakf s 2006 -07		Wakf s 2007 -08		Wakf s 2008 -09	
	CHICKBALLAPUR DT.										
1	Chickballapur Tq.	9	180000								
2	Gowribidnur Tq.	13	260000			2	300000	16	1075000	5	250000
3	Chintamani Tq.	4	80000	7	140000	7	140000	21	1100000	3	300000
4	Bagepalli Tq.	8	160000			1	20000	1	50000		
5	Gudibande Tq.	1	20000								
6	Sidlgatta Tq.							6	450000		
	TOTAL	**35**	**700000**	**7**	**140000**	**10**	**460000**	**44**	**2675000**	**8**	**550000**

<u>ಕರ್ನಾಟಕ ವಿಧಾನ ಸಭೆ</u>

81 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.
ಪರಿಶಿಷ್ಟ ಪಂಗಡ ಮೊರಾರ್ಜಿ ವಸತಿ ಶಾಲೆ ಕಟ್ಟಡ ನಿರ್ಮಾಣ
ಸಮಾಜ ಕಲ್ಯಾಣ ಸಚಿವರು

ಅ) ಗುಂಡ್ಲುಪೇಟೆ ತಾಲ್ಲೂಕು, ಹಂಗಳ ಗ್ರಾಮದಲ್ಲಿ ಪರಿಶಿಷ್ಟ ಪಂಗಡ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಈ ಕಟ್ಟಡದ ನಿರ್ಮಾಣದ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಉದ್ದೇಶಿತ ಕಟ್ಟಡಕ್ಕೆ ನಿವೇಶನ ಮಂಜೂರಾಗಿದ್ದು 2009–10ನೇ ಸಾಲಿನಲ್ಲಿ ಲಭ್ಯವಾಗುವ ಅನುದಾನದ ಮೇರೆಗೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ:ಸಕಇ 28 ಮೊದೇಶಾ 2009

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

82 ಶ್ರೀ. ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲು ಪೇಟೆ)
ಶ್ರೀ.ಡಿ.ಸುಧಾಕರ, ಮಾನ್ಯ ಸಮಾಜ ಕಲ್ಯಾಣ ಸಚಿವರು.

ಅ) ಚಾಮರಾಜನಗರ ಜಿಲ್ಲೆಯ ತೆರೆಕಣಾಂಬಿ,ಸಾಗಡೆ ಕೆಂಗಾಕಿ ಗ್ರಾಮಗಳಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಬೇಡಿಕೆ ಬಂದಿದೆಯೆ;

2008–09ನೇ ಸಾಲಿನಲ್ಲಿ ತೆರೆಕಣಾಂಬಿ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ರೂ.5.00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ.

ಆ) 2008–09ನೇ ಸಾಲಿನಲ್ಲಿ ವಾಲ್ಮೀಕಿಸಮುಧಾಯ ಭವನ ನಿರ್ಮಾಣಕ್ಕಾಗಿ ಒದಗಿಸಲಾದ ಅನುದಾನ ಎಷ್ಟು;

2008–09ನೇ ಸಾಲಿಗೆ ರಾಜ್ಯದಲ್ಲಿ ತಲಾ ರೂ.1.00ಕೋಟಿ ವೆಚ್ಚದಲ್ಲಿ 6 ವಾಲ್ಮೀಕಿ ಭವನಗಳನ್ನು ನಿರ್ಮಿಸಲು ರೂ.225.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ

ವಾಲ್ಮೀಕಿ ಭವನಗಳನ್ನು ನಿರ್ಮಾಣ ಮಾಡಲು ಈ ಕೆಳಗಿನಂತೆ ಮರು ಬಿಡುಗಡೆ ಮಾಡಲಾಗಿದೆ.

ಇ) ವಾಲ್ಮೀಕಿ ಭವನ ನಿರ್ಮಿಸಲು ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು (ಸ್ಥಳಗಳ ವಿವರ ನೀಡುವುದು);

ಜಿಲ್ಲೆ ಹಾಗೂ ಸ್ಥಳ ವಿವರ	ನಿಗಧಿತ ಅನುದಾನ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
1.ಶಿವಮೊಗ್ಗ ಜಿಲ್ಲೆ, ಶಿಕಾರಿಪುರ	100.00	100.00
2.ಬಳ್ಳಾರಿ ಜಿಲ್ಲೆ, ಬಳ್ಳಾರಿ	100.00	25.00
3.ಚಾಮರಾಜನಗರ ಜಿಲ್ಲೆ, ಚಾಮರಾಜನಗರ	100.00	25.00
4.ರಾಯಚೂರು ಜಿಲ್ಲೆ, ದೇವದುರ್ಗ	100.00	25.00
5.ಚಿತ್ರದುರ್ಗ ಜಿಲ್ಲೆ, ಹಿರಿಯೂರು	100.00	25.00
6.ದಾವಣಗೆರೆ ಜಿಲ್ಲೆ, ದಾವಣಗೆರೆ	100.00	25.00
ಒಟ್ಟು		**225.00**

ಈ) ಹಾಗಿಲ್ಲದಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ವಾಲ್ಮೀಕಿ ಭವನವನ್ನು ನಿರ್ಮಾಣ ಮಾಡಲು ರೂ.100.00ಲಕ್ಷಗಳನ್ನು ಸಂಪೂರ್ಣವಾಗಿ ಶಿವಮೊಗ್ಗ ಜಿಲ್ಲಾಧಿಕಾರಿ ಶಿವಮೊಗ್ಗರವರಿಗೆ ಬಿಡುಗಡೆ ಮಾಡಿದೆ. ಇನ್ನುಳಿದ ಜಿಲ್ಲೆಗಳಿಗೆ ಪ್ರಥಮ ಹಂತದಲ್ಲಿ ರೂ.25.00 ಲಕ್ಷಗಳನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಸಂಖ್ಯೆ:ಸಕಇ 33 ಪವಯೋ 2009.

(ಡಿ.ಸುಧಾಕರ)
ಸಮಾಜ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

89 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.

ಸಮಾಜ ಕಲ್ಯಾಣ ಸಚಿವರು

ಅ) ಚಾಮರಾಜನಗರ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದ್ದು, ಈ ತಾಲ್ಲೂಕಿನ ಹರವೆ ಗ್ರಾಮಕ್ಕೆ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಮಂಜೂರಾತಿಗಾಗಿ ಬೇಡಿಕೆ ಬಂದಿದೆಯೇ;

ಇಲ್ಲ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಸಂಖ್ಯೆ:ಸಕಇ 29 ಮೊದೇಶಾ 2009

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ.

90 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ)
ಮಾನ್ಯ ಕಾರ್ಮಿಕ ಸಚಿವರು

ಅ) ಚಾಮರಾಜನಗರ ತಾಲ್ಲೂಕು ಹರವೆ ಗ್ರಾಮದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪಿಸಲು ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ;

ಹೌದು.

Yes.

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಹರವೆ ಗ್ರಾಮದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯ ಅಗತ್ಯತೆ ಹಾಗೂ ಅನುದಾನದ ಲಭ್ಯತೆ ಆಧರಿಸಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಕಾಇ 06 ಇಟಿಎ 2009

(ಬಿ.ಎನ್.ಬಚ್ಚೇಗೌಡ)
ಮಾನ್ಯ ಕಾರ್ಮಿಕ ಸಚಿವರು.

ಕರ್ನಾಟಕ ವಿಧಾನ ಸಭೆ

111 ಶ್ರೀ. ಸುನೀಲ್ ವಿ. ಹೆಗಡೆ (ಹಲಿಯಾಳ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ಹಳಿಯಾಳ ಹಾಗೂ ಜೋಯಿಡಾ ತಾಲ್ಲೂಕುಗಳಲ್ಲಿರುವ ಆಸ್ಪತ್ರೆಗಳಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಆ) ಹಾಗಿದ್ದಲ್ಲಿ, ಅವಶ್ಯಕ ಸಿಬ್ಬಂದಿಯ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?(ವಿವರಗಳನಗನ್ನು ನೀಡುವುದು);

ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ: 7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಇ) ಹಳಿಯಾಳ ಹಾಗೂ ಜೋಯಿಡಾ ತಾಲ್ಲೂಕುಗಳಲ್ಲಿರುವ ಸಾರ್ವಜನಿಕ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈಗಾಗಲೇ ರಾಜ್ಯದಲ್ಲಿನ ಅನೇಕ ಆಸ್ಪತ್ರೆ / ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೇಗೇರಿಸಲಾಗಿದ್ದು, ಸದರಿ ಮೇಲ್ದರ್ಜೇಗೇರಿಸಲಾದ ಆಸ್ಪತ್ರೆ / ಆರೋಗ್ಯ ಕೇಂದ್ರಗಳಿಗೆ ಒದಗಿಸಬೇಕಾಗಿರುವ ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿಯನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲು ಸಾಧ್ಯವಾಗಿರುವುದಿಲ್ಲ. ಈಗಾಗಲೇ ಮೇಲ್ದರ್ಜೇಗೇರಿಸಿರುವ ಅಂತಹ ಕೇಂದ್ರಗಳಿಗೆ ಸೌಲಭ್ಯ ಒದಗಿಸಿ ಬಲಪಡಿಸಬೇಕಾಗಿದೆ. ಆದುದರಿಂದ ಸಧ್ಯದಲ್ಲಿ ಆಸ್ಪತ್ರೆ / ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೇಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಹಾಗಿದ್ದಲ್ಲಿ, ಮೇಲ್ದರ್ಜೇಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ನೀಡುವುದು):

ಉದ್ಭವಿಸುವುದಿಲ್ಲ.

ಉ) ಹಳಿಯಾಳ ಹಾಗೂ ಜೋಯಿಡಾ ತಾಲ್ಲೂಕುಗಳ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಆಂಬ್ಯುಲೆನ್ಸ್ ಹಾಗೂ ತಾಂತ್ರಿಕ ಸಲಕರಣೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕಿನ ಆಸ್ಪತ್ರೆಗೆ ಒಂದೊಂದು ಸುಸ್ಥಿತಿಯಲ್ಲಿಯಿರುವ ಆಂಬ್ಯುಲನ್ಸ್ ಹಾಗೂ ತಾಂತ್ರಿಕ ಸಲಕರಣೆಗಳನ್ನು ನೀಡಲಾಗಿದೆ.

ಊ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ನೀಡುವುದು):

ಉದ್ಭವಿಸುವುದಿಲ್ಲ.

ಋ) ಜೋಯಿಡಾ ತಾಲ್ಲೂಕಿಗೆ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಪ್ರಾಥಮಿಕ ಕೇಂದ್ರ ಅಥವಾ ಆರೋಗ್ಯ ಕವಚದಂತಹ ಸಂಚಾರಿ ಆಸ್ಪತ್ರೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಜೋಯಿಡಾ ತಾಲ್ಲೂಕಿಗೆ ಈಗಾಗಲೇ ಸಂಚಾರಿ ಘಟಕವನ್ನು ಮಂಜೂರು ಮಾಡಿ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಹಾಗೂ ವಾಹನ ಒದಗಿಸಲಾಗಿದೆ.

ಎ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು? (ವಿವರಗಳನ್ನು ನೀಡುವುದು):

ಉದ್ಭವಿಸುವುದಿಲ್ಲ.

ಸಂಖ್ಯೆ: ಆಕುಕ 57 ಹಚ್‌ಎಸ್‌ಎಂ 2009

(ಬಿ. ಶ್ರೀರಾಮುಲು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

112 ಶ್ರೀ. ಸುನೀಲ್ ವಿ ಹೆಗಡೆ (ಹಳಿಯಾಳ)

ಶ್ರೀ.ಡಿ.ಸುದಾಕರ, ಮಾನ್ಯ ಸಮಾಜ ಕಲ್ಯಾಣ ಸಚಿವರು.

ಅ) ಹಳಿಯಾಳ ತಾಲ್ಲೂಹಿನಲ್ಲಿ ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗದವರಿಗೆ (ಕೃತ್ರಿಯ, ಮರಾಠ ಜದಸಂಖ್ಯೆ ಹೆಚ್ಚಿಗೆ ಇದ್ದು) ವಿದ್ಯಾರ್ಥಿನಿಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಹಳಿಯಾಳ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ 6 ವಿದ್ಯಾರ್ಥಿನಿಲಯಗಳಲ್ಲಿ ಒಂದು ಉಚಿತ ಸೇರಿ 4 ಸ್ವಂತ ಕಟ್ಟಡಗಳಲ್ಲಿನ ಹಾಗೂ 2 ಬಾಡಿಗೆ ಕಟ್ಟಡದಲ್ಲಿವೆ. ಬಾಡಿಗೆ ಕಟ್ಟಡದಲ್ಲಿರುವ ನಿಲಯಗಳಲ್ಲಿ ಕೊಠಡಿಗಳ ಕೊರತೆ ಇರುತ್ತದೆ.

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಬಾಡಿಗೆ ಕಟ್ಟಡದಲ್ಲಿರುವ ಹಳಿಯಾಳದ ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಹಾಗೂ ಮೆಟ್ರಿಕ್-ಪೂರ್ವ ಬಾಲಕಿಯರ ನಿಲಯಗಳಿಗೆ ನಿವೇಶನ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಆಯವ್ಯಯದ ಲಭ್ಯತೆ ಆಧಾರದ ಮೇಲೆ ನಿವೇಶನ ಪಡೆದ ನಂತರ ಕಟ್ಟಡ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು.

ಇ) ಪದವಿ ಓದುತ್ತಿರುವ ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ನಿವೇಶನ ದೊರೆತ ನಂತರ ಕಟ್ಟಡ ನಿರ್ಮಿಸಲಾಗುವುದು.

ಈ) ಹಾಗಿದ್ದಲ್ಲಿ ವಿದ್ಯಾರ್ಥಿನಿಲಯವನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಹಳಿಯಾಳದಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಕಟ್ಟಡವನ್ನು ನಿರ್ಮಿಸಲು ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಈ ವಸತಿ ಶಾಲೆಯು 2004-05ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಮಂಜೂರಾಗಿದ್ದು, ಶಾಲಾ ಸಂಕೀರ್ಣ ನಿರ್ಮಾಣ ಮಾಡಲು ಜಮೀನು ಮಂಜೂರಾಗಿರುವುದಿಲ್ಲ. ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಜಮೀನು ಮಂಜೂರು ಮಾಡಲು ಪತ್ರ ಬರೆಯಲಾಗಿದೆ.

ಊ) ಹಾಗಿದ್ದಲ್ಲಿ, ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು (ವಿವರಗಳನ್ನು ನೀಡುವುದು)

ಜಮೀನು ಮಂಜೂರಾದ ನಂತರ 2009-10ನೇ ಸಾಲಿನ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನವನ್ನು ಪರಿಗಣಿಸಿ ಶಾಲಾ ಸಂಕೀರ್ಣವನ್ನು ನಿರ್ಮಿಸಲು ಪರಿಶೀಲಿಸಲಾಗುವುದು.

ಋ) ಜೋಯಿಡಾ ತಾಲ್ಲೂಕಿನಲ್ಲಿ ಪದವಿಪೂರ್ವ ಮತ್ತು ಪದವಿ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ನಿರ್ಮಿಸಲಾಗುವುದು;(ವಿವರಗಳನ್ನು ನೀಡುವುದು)?

ಜೋಯಿಡಾ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ 8 ವಿದ್ಯಾರ್ಥಿನಿಲಯಗಳಲ್ಲಿ 3ಕ್ಕೆ ಸ್ವಂತ ಕಟ್ಟಡವಿದ್ದು, ಒಂದು ನಿಲಯ ಉಚಿತ ಕಟ್ಟಡದಲ್ಲಿರುತ್ತದೆ. ಉಳವಿಯಲ್ಲಿನ ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ಕಟ್ಟಡ ಪ್ರಗತಿಯಲ್ಲಿರುತ್ತದೆ.

1) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜಗಲಬೇಟ
2) ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಜಗಲಬೇಟ
3) ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಜೋಯಿಡಾ

ಈ 3 ವಿದ್ಯಾರ್ಥಿನಿಲಯಗಳಿಗೆ ನಿವೇಶನ ಪಡೆದ ನಂತರ ಕಟ್ಟಡ ನಿರ್ಮಿಸಲಾಗುವುದು. ನಿವೇಶನಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ.

ಸಂಖ್ಯೆ:ಸಕಇ 82 ಬಿಎಂಎಸ್ 2009.

(ಡಿ.ಸುಧಾಕರ)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ.

113 ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ)
ಮಾನ್ಯ ಕಾರ್ಮಿಕ ಸಚಿವರು.

ಅ) ಜೋಯಿಡಾ ತಾಲ್ಲೂಕಿಗೆ ಹಿಂದಿನ ಸರ್ಕಾರವು ಐ.ಟಿ.ಐ ಕಾಲೇಜು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಜೋಯಿಡಾ ತಾಲ್ಲೂಕಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸಲು 2007–08ನೇ ಸಾಲಿನಲ್ಲಿ ಪ್ರಸ್ತಾವನೆ ಸ್ವೀಕರಿಸಲಾಗಿತ್ತು ಹಿಂದಿನ ಸರ್ಕಾರವು ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸಲು ಮಂಜೂರು ಮಾಡಿರುವುದಿಲ್ಲ. ಜೋಯಿಡಾ ತಾಲ್ಲೂಕಿನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

Proposal had been received to start Government ITI at Joida Taluk during 2007-08. But sanction has not been accorded by the previous Government. Opening of Government ITI at Joida Taluk is under consideration of the Government.

ಆ) ಹಾಗಿದ್ದಲ್ಲಿ, ಕಾಲೇಜು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

ಸರ್ಕಾರವು ಜನಪ್ರತಿನಿಧಿಗಳ ಬೇಡಿಕೆಗಳಿಗೆ ಅನುಗುಣವಾಗಿ ಅನುದಾನದ ಲಭ್ಯತೆ ಆಧರಿಸಿ ಹಂತ ಹಂತವಾಗಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುತ್ತಿದ್ದು, ಜೋಯಿಡಾ ಗ್ರಾಮದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸುವ ಬಗ್ಗೆ ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

Govrnment will start ITI's in phased manner depending upon the availability of funds and as per the request of public representatives. Hence, action will be taken to open Government ITI at Joida Taluk after examining the matter based on the availability of funds.

ಇ) ಹಳಿಯಾಳ ತಾಲ್ಲೂಕಿನ ಐ.ಟಿ.ಐ ಕಾಲೇಜಿನಲ್ಲಿ ಬೋಧನಾ ವಿಷಯಗಳು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಗೆ ಇದ್ದು, ಸ್ಥಳಾವಕಾಶ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸ್ಥಳಾವಕಾಶದ ಕೊರತೆ ಇರುವುದಿಲ್ಲ.

No shortage of space

ಈ) ಹಾಗಿದ್ದಲ್ಲಿ, ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇಲ್ಲ

No

ಉ) ಹಾಗಿದ್ದಲ್ಲಿ, ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ನೀಡುವುದು)

ಅನ್ವಯಿಸುವುದಿಲ್ಲ.

Not applicable

ಊ) ಜೋಯಿಡಾ ಮತ್ತು ಹಳಿಯಾಳ ತಾಲ್ಲೂಕುಗಳು ಅರಣ್ಯ ಪ್ರದೇಶದಿಂದ ಕೂಡಿದ್ದು, ಇಲ್ಲಿ ಓದುವ ಐ.ಟಿ.ಐ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇದುವರಿವಿಗೂ ವಿದ್ಯಾರ್ಥಿ ನಿಲಯ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯು ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಬಂದಿರುವುದಿಲ್ಲ.

So far no proposal has been received from Govrnment Industrial Training Institute to start hostel.

ಋ) ಹಾಗಿದ್ದಲ್ಲಿ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ನೀಡುವುದು).

ವಿದ್ಯಾರ್ಥಿ ನಿಲಯ ನಿರ್ಮಿಸಲು ಬೇಡಿಕೆ ಬಂದಲ್ಲಿ ಮುಂದೆ ಪರಿಶೀಲಿಸಲಾಗುವುದು.

If proposal is received to establish hostel, it will be examined.

ಸಂಖ್ಯೆ: ಕಾಇ 08 ಇಟಿಎ 2009

(ಬಿ.ಎನ್. ಬಚ್ಚೇಗೌಡ)
ಮಾನ್ಯ ಕಾರ್ಮಿಕ ಸಚಿವರು.

ವಿಧಾನ ಸಭೆ

114 ಶ್ರೀ.ಸುನೀಲ್.ವಿ.ಹೆಗಡೆ

ಕುಣಬಿ ಹಾಗೂ ಗೌಳಿ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು.

ಸಮಾಜ ಕಲ್ಯಾಣ ಸಚಿವರು.

ಅ) ಹಿಂದುಳಿದ ಬುಡಕಟ್ಟು ಜನಾಂಗಗಳಾದ ಕುಣಬಿ ಹಾಗೂ ಗೌಳಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ಈ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಯಾವಾಗ ಸೇರಿಸಲಾಗುವುದು;

ಇ) ಈ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು; (ವಿವರ ನೀಡುವುದು);

ಭಾರತ ಸಂವಿಧಾನ ಅನುಚ್ಛೇದ 342ರ ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಯಾವುದೇ ಜಾತಿ/ಜನಾಂಗವನ್ನು ಸೇರಿಸುವ ಅಥವಾ ತೆಗೆದು ಹಾಕುವ ಅಧಿಕಾರ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಯಾವುದೇ ಜನಾಂಗವನ್ನು ಪರಿಶಿಷ್ಟ ಪಟ್ಟಿಗೆ ಸೇರಿಸುವ ಮುನ್ನ ಆ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಬೇಕಾಗುತ್ತದೆ ಕುಲ ಶಾಸ್ತ್ರಿಯ ಅಧ್ಯಯನ ವರದಿ ಆಧಾರದ ಮೇಲ್ ಆ ಜನಾಂಗ ಪರಿಶಿಷ್ಟ ಪಂಗಡಗಳ ಗುಣಲಕ್ಷಣಗಳನ್ನು ಹೊಂದಿರುವುದಾಗಿ

ಕಂಡು ಬಂದಲ್ಲಿ ರಾಜ್ಯದ ಸಚಿವ ಸಂಪುಟದ ಅನುಮೋದನೆಯೊಂದಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ.

ಕುಣಬಿ ಜನಾಂಗದವರ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳುವುದರ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಗೋವಾ ರಾಜ್ಯದಲ್ಲಿ ಈ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಈ ಮೇಲೆ (ಆ) ಮತ್ತು (ಇ)ನಲ್ಲಿ ವಿವರಿಸಲಾಗಿದೆ.

(ಸಕಇ 27 ಎಸ್‌ಎಡಿ 2009)

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

ವಿಧಾನ ಸಭೆ

116 ಶ್ರೀ.ಅಮರೇಶ್
ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯುವುದು.
ಸಮಾಜ ಕಲ್ಯಾಣ ಸಚಿವರು

ಅ) ಮುಳಬಾಗಿಲು ತಾಲ್ಲೂಕಿಗೆ 2007-08 ಹಾಗೂ 2008-09ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಲ್ಲಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಗಂಗಾ ಕಲ್ಯಾಣ ಯೋಜನೆಯಡಿ ಮುಳಬಾಗಿಲು ತಾಲ್ಲೂಕಿಗೆ ಮಂಜೂರಾದ ಕೊಳವೆ ಬಾವಿಗಳ ವಿವರ:-

ಕ್ರ ಸಂ	ನಿಗಮದ ಹೆಸರು	ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ	
		2007-08	2008-09
1	ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ	56	65
2	ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	20	12
3	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ	14	12

	ಅಭಿವೃದ್ಧಿ ನಿಗಮ	

ಆ) ಮಂಜೂರಾಗಿರುವ ಕೊಳವೆ ಬಾವಿಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರಿಯಿಸಿ ಕೊಡಲಾಗಿದೆ (ಜಾತಿವಾರು ವಿವರ ನೀಡುವುದು); ಹಾಗೂ ಬಾಕಿ ಉಳಿದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ 2007–08ನೇ ಸಾಲಿಗೆ ಮಂಜೂರಾದ 56 ಕೊಳವೆ ಬಾವಿಗಳ ಪೈಕಿ 06 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇವುಗಳಲ್ಲಿ ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಉಪಜಾತಿಯವರೆಗೆ 03 ಮತ್ತು ಭೋವಿ ಜನಾಂಗದವರಿಗೆ 03 ಕೊಳವೆಬಾವಿಗಳನ್ನು ನೀಡಲಾಗಿದೆ. ಬಾಕಿ ಕೊಳವೆ ಬಾವಿಗಳ ಸಂಖ್ಯೆ 50 ಆಗಿರುತ್ತದೆ. ಅದೇ ರೀತಿ ಉಲ್ಲೇಖಿತ ನಿಗಮದ ವತಿಯಿಂದ 2008–09ನೇ ಸಾಲಿಗೆ 65 ಕೊಳವೆಬಾವಿಗಳನ್ನು ಕೊರೆಯಿಸಲು ಕಾರ್ಯದೇಶ ನೀಡಲಾಗಿದ್ದು ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಯಾವುದೇ ಕೊಳವೆಬಾವಿಗಳನ್ನು ಕೊರೆಯಿಸಲಾಗಲಿಲ್ಲ. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ 2007–08ನೇ ಸಾಲಿಗೆ ಮಂಜೂರಾದ 10 ವೈಯಕ್ತಿಕ ಕೊಳವೆ ಬಾವಿಗಳ ಪೈಕಿ 05 ಕೊಳವೆ ಬಾವಿಗಳನ್ನು ಕೊರೆದಿದ್ದು, ಇನ್ನೂ 05 ಕೊಳವೆ ಬಾವಿಗಳು ಬಾಕಿ ಉಳಿದಿರುತ್ತವೆ. ಅದೇ ರೀತಿ 2008–09ನೇ ಸಾಲಿಗೆ ಮಂಜೂರಾದ 02 ಸಾಮೂಹಿಕ ಘಟಕಗಳ ಪೈಕಿ 01 ಘಟಕದಲ್ಲಿ 02 ಕೊಳವೆ ಬಾವಿಗಳನ್ನು ಕೊರೆದಿದ್ದು, ಬಾಕಿ ಇರುವ 01 ಘಟಕದಲ್ಲಿ 02 ಕೊಳವೆ ಬಾವಿಗಳನ್ನು ಕೊರೆಯಲು ಬಾಕಿ ಇರುತ್ತದೆ. ಈಗಾಗಲೇ ಕೊರೆದಿರುವ ಕೊಳವೆ ಬಾವಿಗಳ ಫಲಾನುಭವಿಗಳ ಜಾತಿವಾರು ವಿವರ ಈ ಕೆಳಕಂಡಂತಿದೆ.

<u>ವೈಯಕ್ತಿಕ ಕೊಳವೆ ಬಾವಿಗಳು:</u> ಗೊಲ್ಲ–01, ಕುರುಬ–02, ವಿಶ್ವಕರ್ಮ–01, ಭಜಂತ್ರಿ–01.

<u>ಸಾಮೂಹಿಕ ಕೊಳವೆ ಬಾವಿಗಳು:</u> ಒಕ್ಕಲಿಗ–02 (ಘಟಕದ ಫಲಾನುಭವಿಗಳ ಸಂಖ್ಯೆ–03)

ಇ) ರಾಜ್ಯದಲ್ಲಿ 2008–09ನೇ ಸಾಲಿನಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮಕೈಗೊಳ್ಳಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು)

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಯಾವುದೇ ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಂಡಿರುವುದಿಲ್ಲ. ಆದರೆ ಇತರೆ ನಿಗಮಗಳ ವತಿಯಿಂದ 2008–09ನೇ ಸಾಲಿನಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮ ಕೈಗೊಂಡಿರುವುದರ ವಿವರ ಈ ಕೆಳಗಿನಂತಿದೆ:

ಕ್ರ ಸಂ	ನಿಗಮದ ಹೆಸರು	ವಿಧಾನ ಸಭಾ ಕ್ಷೇತ್ರದ ಹೆಸರು			
		ಶಿಕಾರಿ	ಹಿರಿ	ಚಿತ್ತಾ	ವರು

		ಪುರ	ಯೂರು	ಪುರ	ಣಾ
1	ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	50	60	–	–
2	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	120	121	25	18

(ಸಕಇ 36 ಎಸ್‌ಡಿಸಿ 2009)

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು

<u>ಕರ್ನಾಟಕ ವಿಧಾನ ಸಭೆ.</u>

129 ಶ್ರೀ.ಪ್ರತಾಪ್‌ಗೌಡ ಪಾಟೀಲ್(ಮಸ್ಕಿ)
ಶ್ರೀ.ಡಿ.ಸುಧಾಕರ, ಮಾನ್ಯ ಸಮಾಜ ಕಲ್ಯಾಣ ಸಚಿವರು

ಅ) ಪರಿಶಿಷ್ಟ ಜಾತಿಯ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವಂತಹ 10,000-00 ರೂ.ಗಳ ಸಹಾಯಧನವನ್ನು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಸ್ತ್ರೀ ಶಕ್ತಿ ಸಂಘಗಳಿಗೂ ಕೊಡುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಂದಿನಿಂದ ನೀಡಲಾಗುವುದು?

<u>ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ</u>

ಪರಿಶಿಷ್ಟ ಜಾತಿಯ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವಂತಹ 10,000/- ರೂ.ಗಳ ಸಹಾಯಧನವನ್ನು ಹಿಂದುಳಿದ ವರ್ಗಗಳ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವ ವಿಚಾರವಿರುವುದಿಲ್ಲ.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರು ರಚಿಸಿಕೊಂಡಿರುವ ಸ್ತ್ರೀ ಶಕ್ತಿ ಸಂಘಗಳಿಗೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ನ್ಯೂ ಸ್ವರ್ಣಿಮಾ ಯೋಜನೆಯಲ್ಲಿ ಸ್ತ್ರೀ ಶಕ್ತಿ ಗುಂಪುಗಳಲ್ಲಿನ ಹಿಂದುಳಿದ ವರ್ಗಗಳ ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಶೇ.4ರ ಬಡ್ಡಿದರದಲ್ಲಿ ಒಂದು ಸ್ತ್ರೀ ಶಕ್ತಿ ಸಂಘಕ್ಕೆ ರೂ.1.00ಲಕ್ಷದಿಂದ ರೂ.1.50ಲಕ್ಷಗಳವರೆಗೆ ಸಾಲವನ್ನು ಕೊಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

<u>ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ:</u>

ಪರಿಶಿಷ್ಟ ಜಾತಿಯ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವಂತಹ 10,000/- ರೂ.ಗಳ ಸಹಾಯಧನವನ್ನು ಪರಿಶಿಷ್ಟ ಪಂಗಡಗಳ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವ ವಿಚಾರ ಪರಿಶೀಲನೆಯಲ್ಲಿದೆ.

ಸಂಖ್ಯೆ:ಸಕಇ 35 ಪವಯೋ 2009

(ಡಿ.ಸುಧಾಕರ)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

131 ಶ್ರೀ. ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ಕೊಪ್ಪಳ ನಗರದ ಜಿಲ್ಲಾ ಆಸ್ಪತ್ರೆ ಕಟ್ಟಡದ ಕಾಮಗಾರಿಯು ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಜಿಲ್ಲಾ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಕೊಪ್ಪಳ ಜಿಲ್ಲಾಡಳಿತವು ಸ್ವಾಧೀನ ಪಡಿಸಿಕೊಂಡಿರುವ ಜಮೀನು (ಸ.ನಂ.205/2,266 ಮತ್ತು 267/1 ಒಟ್ಟು 9.30 ಎಕರೆ) ವಿವಾಧ ಉಚ್ಚನ್ಯಾಯಾಲಯದಲ್ಲಿ ಇರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ಕಟ್ಟಡ ಕಾಮಗಾರಿಗಾಗಿ ಸರ್ಕಾರ ಈವರೆಗೂ ಖರ್ಚು ಮಾಡಿರುವ ಮೊತ್ತ ಎಷ್ಟು?

ಈವರೆಗೂ ಹಣ ಖರ್ಚು ಮಾಡಿರುವುದಿಲ್ಲ.

ಇ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಈಗ ನೀಡಿರುವ ಅನುದಾನ ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉದ್ಭವಿಸುವುದಿಲ್ಲ.

ಈ) ಹಾಗಿದ್ದಲ್ಲಿ, ಬಿಡುಗಡೆ ಮಾಡಲಾಗುವ ಅನುದಾನದ ಪ್ರಮಾಣ ಎಷ್ಟು ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು?

ಉದ್ಭವಿಸುವುದಿಲ್ಲ.

ಉ) ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಜಿಲ್ಲಾ ಆಸ್ಪತ್ರೆ ಕೊಪ್ಪಳ ಜಿಲ್ಲೆ, ಇಲ್ಲಿ ಮಂಜೂರಾದ 10 ತಜ್ಞ ವೈದ್ಯರ ಹುದ್ದೆಗಳ ಪೈಕಿ 7 ತಜ್ಞ ವೈದ್ಯರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ಆಸ್ಪತ್ರೆಯಲ್ಲಿ ಇಟ್ಟು 63 ಅರೆ ವೈದ್ಯಕೀಯ ಸಿಬ್ಬಂದಿ ಹುದ್ದೆ ಮಂಜೂರಾಗಿದ್ದು, 27 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. 36 ಹುದ್ದೆಗಳು ಖಾಲಿ ಇವೆ.

ಊ) ಹಾಗಿದ್ದಲ್ಲಿ, ವೈದ್ಯರ ಹಾಗೂ ಇತರೆ ಸಿಂಬ್ಬದಿಗಳ ಕೊರತೆ ನೀಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ. ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ: 7–2–2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಋ) ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯ ಹಾಗೂ ವೈದ್ಯಕೀಯ ಉಪಕರಣಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಕೊಪ್ಪಳ ಜಿಲ್ಲಾ ಆಸ್ಪತ್ರೆಯು ಪ್ರಸ್ತುತ 66 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿದ್ದು, ಅದಕ್ಕನುಗುಣವಾಗಿ ಮೂಲಸೌಕರ್ಯ ಹಾಗೂ ಉಪಕರಣಗಳನ್ನು ಹೊಂದಿರುತ್ತದೆ. ಹಾಲಿ ಹೊರರೋಗಿ, ಒಳರೋಗಿ, ಹೆರಿಗೆ ಸೇವಾ ಸೌಲಭ್ಯ,
ಕ್ಷ–ಕಿರಣ ಸೌಲಭ್ಯ, ಪ್ರಯೋಗಾಲಯ ಸೇವೆಗಳು, ಏಡ್ಸ್ ರೋಗದ ಬಗ್ಗೆ ತಿಳುವಳಿಕೆ, ಆಂಬ್ಯುಲನ್ಸ್ ಸೇವೆ, ಉಚಿತ ಔಷಧಿ ಪೂರೈಕೆ, ತುರ್ತು ಚಿಕಿತ್ಸೆ ಸೇವೆಯು ಲಭ್ಯವಿರುತ್ತದೆ.

ಎ) ಹಾಗಿದ್ದಲ್ಲಿ, ಮೂಲಭೂತ ಸೌಲಭ್ಯ ಹಾಗೂ ವೈದ್ಯಕೀಯ ಉಪಕರಣಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉದ್ಭವಿಸುವುದಿಲ್ಲ.

ಸಂಖ್ಯೆ: ಆಕುಕ 135 ಸಿಜಿಎಂ 2009

(ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

273 ಶ್ರೀ.ಲಾಲಾಜಿ ಆರ್. ಮೆಂಡನ್ (ಕಾಪು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ರಾಷ್ಟ್ರೀಯ ಹೆದ್ದಾರಿ 17 ಚತುಷ್ಪಥವಾಗುತ್ತಿರುವುದರಿಂದ ಕಾಪು ವ್ಯಾಪ್ತಿಯ ಹೆದ್ದಾರಿ ಪಕ್ಕದ ಕಾಪು ಮತ್ತು ಪಡುಬಿದ್ರಿ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆಯಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಕಾಪು ಮತ್ತು ಪಡುಬಿದ್ರಿ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆಯಿರುವುದಿಲ್ಲ. ಈ ಕೇಂದ್ರಕ್ಕೆ ಆರ್.ಸಿ.ಹೆಚ್. ಕಾರ್ಯಕ್ರಮದ ವತಿಯಿಂದ ಪ್ರಸೂತಿ ಗೃಹ, ಶಸ್ತ್ರಚಿಕಿತ್ಸಕರ ಕೊಠಡಿಗಳನ್ನು ಹಾಗೂ ಆಂಬ್ಯುಲೆನ್ಸ್ ವಾಹನವನ್ನು ಈಗಾಗಲೇ ಒದಗಿಸಿದೆ ಹಾಗೂ 24 X 7 ರಂತೆ ಸೇವೆ ಒದಗಿಸಲಾಗಿದೆ.

ಆ) ಹಾಗಿದ್ದಲ್ಲಿ, 2009-10ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಉದ್ಭವಿಸುವುದಿಲ್ಲ.

ಸಂಖ್ಯೆ: ಆಕುಕ 134 ಸಿಜಿಎಂ 2009

(ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

277 ಶ್ರೀ ಸುನೀಲ್ ವಿ.ಹೆಗಡೆ
ಮಾನ್ಯ ಕಾರ್ಮಿಕ ಸಚಿವರು.

ಅ) ದಾಂಡೇಲಿಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಹೌದು

Yes

ಆ) ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ ಕೆಳಗಿನ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

1) ಕಾರಾವಿ ನಿಗಮವು ಹೊರರೋಗಿ ವಿಭಾಗ ಮತ್ತು ಆಡಳಿತ ವಿಭಾಗದ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.

2) ಈ ಆಸ್ಪತ್ರೆಗೆ ಅಗತ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕ್ರಮವಹಿಸಲಾಗುವುದು.

ಇ) ದಾಂಡೇಲಿಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ ಆಸ್ಪತ್ರೆಗೆ ಮಂಜೂರಾದ 14 ವೈದ್ಯರ ಹುದ್ದೆಗಳ ಪೈಕಿ 9 ಹುದ್ದೆಗಳು ಮತ್ತು 50 ಸಿಬ್ಬಂದಿ ವರ್ಗದ ಹುದ್ದೆಗಳ ಪೈಕಿ 21 ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಹಾಗಿದ್ದಲ್ಲಿ, ವೈದ್ಯರ ಹಾಗೂ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು)

ವೈದ್ಯರ ಕೊರತೆ ನಿವಾರಿಸಲು ವೈದ್ಯಕೀಯ ವಿಭಾಗ, ಸ್ತ್ರೀ ಮತ್ತು ಪ್ರಸೂತಿ ವಿಭಾಗ, ಅರವಳಿಕೆ ವಿಭಾಗ ಮತ್ತು ದಂತ ಚಿಕಿತ್ಸೆ ವಿಭಾಗಗಳಲ್ಲಿ ಅಂಶಕಾಲಿಕ ತಜ್ಞ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಕರ್ನಾಟಕ ಲೋಕ ಸೇವಾ ಆಯೋಗವು ಇಲಾಖೆಯಲ್ಲಿ ಖಾಲಿ ಇರುವ 76 ಫಾರ್ಮಾಸಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆ ಪಟ್ಟಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಿದ್ದು, ಕಾರಾವಿ ಆಸ್ಪತ್ರೆ, ದಾಂಡೇಲಿಯಲ್ಲಿ ಖಾಲಿ ಇರುವ ಫಾರ್ಮಾಸಿಸ್ಟ್ ಹುದ್ದೆಯನ್ನು ಶೀಘ್ರವಾಗಿ ಭರ್ತಿ ಮಾಡಲಾಗುವುದು.

ಸಂಖ್ಯೆ: ಕಾಇ 86 ಎಲ್‌ಎಸ್‌ಐ 2009

(ಬಿ.ಎನ್.ಬಚ್ಚೇಗೌಡ)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

270 ಶ್ರೀ. ಗೋಪಾಲ ಭಂಡಾರಿ ಹೆಚ್ (ಕಾರ್ಕಳ)
ಶ್ರೀ.ಡಿ.ಸುಧಾಕರ, ಮಾನ್ಯ ಸಮಾಜ ಕಲ್ಯಾಣ ಸಚಿವರು.

ಅ) ಉಡುಪಿ ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು; ಅವುಗಳು ಎಲ್ಲೆಲ್ಲಿ ಕಾರ್ಯ ನಿರ್ವಹಿಸುತ್ತಿವೆ;

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಉಡುಪಿ ಜಿಲ್ಲೆಯಲ್ಲಿ 21 ಮೆಟ್ರಿಕ್-ಪೂರ್ವ ಮತ್ತು 11 ಮೆಟ್ರಿಕ್-ನಂತರದ ಹೀಗೆ ಒಟ್ಟು 32 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ವಿವರ ಕೆಳಕಂಡಂತಿವೆ.

ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು

	ವಿವರ	ಬಾಲಕ/ ಬಾಲಕಿ	ವಿದ್ಯಾರ್ಥಿಗಳ ಸಂಖ್ಯೆ	ಸ್ವಂತ/ಬಾಡಿಗೆ
	ಉಡುಪಿ ತಾ:			

1	ಶಿರ್ವಾ	ಬಾಲಕ	50	ಸ್ವಂತ
2	ಬನ್ನಂಜೆ	ಬಾಲಕ	50	ಸ್ವಂತ
3	ಪಡುಬಿದ್ರಿ	ಬಾಲಕ	50	ಸ್ವಂತ
4	ಬೆಳ್ಳಂಪಳ್ಳಿ	ಬಾಲಕ	50	ಸ್ವಂತ
5	ಬ್ರಹ್ಮಾವರ	ಬಾಲಕಿ	50	ಸ್ವಂತ
6	ಗೋಳಿ ಅಂಗಡಿ	ಬಾಲಕ	50	ಬಾಡಿಗೆ
7	ಪಟ್ಲ	ಬಾಲಕಿ	60	ಸ್ವಂತ
8	ಕುಡಿಬೆಟ್ಟು ಕುಡಿಗ್ರಾಮ	ಬಾಲಕ	50	ಬಾಡಿಗೆ
	ಕುಂದಾಪುರ ತಾ:			
9	ಕುಂದಾಪುರ	ಬಾಲಕ	50	ಸ್ವಂತ
10	ಕುಂದಾಪುರ	ಬಾಲಕಿ	50	ಬಾಡಿಗೆ
11	ಬೈಂದೂರು	ಬಾಲಕ	50	ಸ್ವಂತ
12	ಕೇದೂರು	ಬಾಲಕ	50	ಸ್ವಂತ
13	ದಾವುಂದ	ಬಾಲಕ	50	ಸ್ವಂತ
14	ಬಸರೂರು	ಬಾಲಕ	50	ಸ್ವಂತ
15	ಕೇದೂರು	ಬಾಲಕಿ	60	ಸ್ವಂತ
16	ಅಮಾಸಬೈಲು	ಬಾಲಕಿ	50	ಬಾಡಿಗೆ
	ಕಾರ್ಕಳ ತಾ:			
17	ಕಾರ್ಕಳ	ಬಾಲಕ	50	ಸ್ವಂತ
18	ಬೈಲೂರು	ಬಾಲಕ	50	ಸ್ವಂತ
19	ಪಳ್ಳಿ	ಬಾಲಕ	50	ಸ್ವಂತ
20	ಮುನಿಯಾಲು	ಬಾಲಕ	50	ಬಾಡಿಗೆ
21	ಕಾರ್ಕಳ	ಬಾಲಕಿ	60	ಸ್ವಂತ
	ಒಟ್ಟು		**1080**	

ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು

	ಉಡುಪಿ ತಾ:			
1	ಉಡುಪಿ ಟೌನ್ (ಬನ್ನಂಜೆ)	ಬಾಲಕ	60	ಬಾಡಿಗೆ
2	ಉಡುಪಿ ಟೌನ್ (ವೃತ್ತಿಪರ)	ಬಾಲಕಿ	100	ಬಾಡಿಗೆ
3	ಉಡುಪಿ (ಕುಂಜಿಬೆಟ್ಟು)	ಬಾಲಕಿ	110	ಸ್ವಂತ
4	ಹಿರಿಯಾಡ್ಕ	ಬಾಲಕ	50	ಸ್ವಂತ
5	ಕಾಪು	ಬಾಲಕ	50	ಸ್ವಂತ
	ಕಾರ್ಕಳ ತಾ:			

6	ಹಬ್ರಿ	ಬಾಲಕ	60	ಸ್ವಂತ
7	ಕಾರ್ಕಳ	ಬಾಲಕ	85	ಸ್ವಂತ
8	ಕಾರ್ಕಳ	ಬಾಲಕಿ	100	ಸ್ವಂತ
	ಕುಂದಾಪುರ ತಾ:			
9	ಕುಂದಾಪುರ ಟೌನ್	ಬಾಲಕ	75	ಸ್ವಂತ
10	ಕುಂದಾಪುರ	ಬಾಲಕಿ	75	ಬಾಡಿಗೆ
11	ಶಂಕರ ನಾರಾಯಣ	ಬಾಲಕಿ	75	ಬಾಡಿಗೆ
	ಒಟ್ಟು		**840**	

ಆ) ಉಡುಪಿ ಜಿಲ್ಲೆಯಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

21 ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 1080 ಮತ್ತು 11 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ 840 ಹೀಗೆ ಒಟ್ಟು 1920 ವಿದ್ಯಾರ್ಥಿಗಳ ಸಂಖ್ಯೆ ಇರುತ್ತದೆ. 2008-09ನೇ ಸಾಲಿನಲ್ಲಿ ಮಂಜೂರಾಗಿರುವ ಒಂದು ಮೆಟ್ರಿಕ್-ನಂತರದ ಹಾಗೂ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳಿಗೆ ಹುದ್ದೆಗಳು ಮಂಜೂರಾತಿ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ಇವುಗಳನ್ನು ಹೊರತುಪಡಿಸಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಹುದ್ದೆಗಳ ಪದನಾಮ	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ
1	ವಾರ್ಡನ್	10	08
2	ಮೇಲ್ವಿಚಾರಕರು	20	11
3	ಅಡುಗೆಯವರು	58	43
4	ಅಡುಗೆ ಸಹಾಯಕರು	31	26
5	ರಾತ್ರಿ ಕಾವಲುಗಾರರು	08	06
	ಒಟ್ಟು	**127**	**94**

ಇ) ಆದರಲ್ಲಿ ಸ್ವಂತ ಕಟ್ಟಡಗಳಿಲ್ಲದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿನಿಲಯಗಳ ಸಂಖ್ಯೆ ಎಷ್ಟು;

5 ಮೆಟ್ರಿಕ್-ಪೂರ್ವ ಮತ್ತು 4 ಮಟ್ರಿಕ್-ನಂತರದ ಹೀಗೆ ಒಟ್ಟು 9 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಪ್ರಸ್ತುತ ಕೆಳಕಂಡ 3 ವಿದ್ಯಾರ್ಥಿನಿಲಯಗಳ ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತದೆ.

1) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮುನಿಯಾಲ
2) ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗೋಳಿ ಅಂಗಡಿ
3) ಮೆಟ್ರಿಕ್-ನಂತರದ ಬಾಲಕರ ವಿದ್ಯಾರ್ಥಿನಿಲಯ, ಬನ್ನಂಜೆ

ಈ) ಸ್ವಂತ ಕಟ್ಟಡವಿಲ್ಲದ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಪ್ರತಿ ವರ್ಷ ಆಯವ್ಯಯ ಲಭ್ಯತೆ ಆಧರಿಸಿ, ರಾಜ್ಯದ ಒಟ್ಟಾರೆ ನಿರ್ಮಿಸಬೇಕಾಗಿರುವ ವಿದ್ಯಾರ್ಥಿನಿಲಯಗಳ ಕಟ್ಟಡಗಳ ಸಂಖ್ಯೆ, ಲಭ್ಯವಿರುವ ನಿವೇಶನಗಳ ಸಂಖ್ಯೆಗಳನ್ನು ಆಧರಿಸಿ, ಹಂತ ಹಂತವಾಗಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು.

ನಿವೇಶನಗಳನ್ನು ಒದಗಿಸಲು ಜಿಲ್ಲಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಲಾಗಿದೆ.

ಸಂಖ್ಯೆ:ಸಕಇ 83 ಬಿಎಂಎಸ್ 2009

(ಡಿ.ಸುಧಾಕರ)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

271 ಶ್ರೀ. ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ಚಿಕ್ಕನಾಯಕನಹಳ್ಳಿ ಕ್ಷೇತ್ರ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕು ಮಟ್ಟದ ಆಸ್ಪತ್ರೆಯಲ್ಲಿ, ತಜ್ಞ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿ, ಗ್ರೂಪ್ 'ಡಿ' ನೌಕರರ ಕೊರತೆಯಿರುವುದು ಸರ್ಕಾರದ ಮನಕ್ಕೆ ಬಂದಿದೆಯೇ?

ಬಂದಿದೆ.

ಆ) ಹಾಗಿದ್ದಲ್ಲಿ, ಸಿಬ್ಬಂದಿ ಕೊರತೆಯನ್ನು ಹೋಗಲಾಡಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ) ಯಾವ ಕಾಲಮಿತಿಯೊಳಗೆ ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು?

ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ

ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ:7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಸಂಖ್ಯೆ: ಆಕುಕ 13 ಹೆಚ್‌ಎಸ್‌ಡಿ 09

(ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

272 ಶ್ರೀ.ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಕೇಂದ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈಗಾಗಲೇ ರಾಜ್ಯದಲ್ಲಿನ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಅರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೇಗೇರಿಸಲಾಗಿದ್ದು, ಸದರಿ ಮೇಲ್ದರ್ಜೇಗೇರಿಸಲಾದ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒದಗಿಸಬೇಕಾಗಿರುವ ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿಯನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲು ಸಾಧ್ಯವಾಗಿರುವುದಿಲ್ಲ. ಈಗಾಗಲೇ ಮೇಲ್ದರ್ಜೇಗೇರಿಸಿರುವ ಅಂತಹ ಕೇಂದ್ರಗಳಿಗೆ ಸೌಲಭ್ಯ ಒದಗಿಸಿ ಬಲಪಡಿಸಬೇಕಾಗಿದೆ. ಆದುದರಿಂದ ಸಧ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೇಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಉದ್ಭವಿಸುವುದಿಲ್ಲ.

ಸಂಖ್ಯೆ: ಆಕುಕ 136 ಸಿಜಿಎಂ 2009

(ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಕರ್ನಾಟಕ ವಿಧಾ ಸಭೆ

344

ಶ್ರೀ ವಿಶ್ವನಾಥ ಎಸ್.ಆರ್. (ಯಲಹಂಕ)

ಮಾನ್ಯ ಕಾರ್ಮಿಕ ಸಚಿವರು.

ಅ) ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಐ.ಟಿ.ಐ. ತರಬೇತಿ ಶಾಲೆಗಳನ್ನು ಮಂಜೂರು ಮಾಡುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ ಕ್ಷೇತ್ರದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸಲು ಬೇಡಿಕೆ ಬಂದಿದೆ.

Representation has been received requesting to start Industrial Training Institute at Yalahanka.

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು? (ಸ್ಥಳಗಳ ವಿವರ ನೀಡುವುದು)

ಅನುದಾನದ ಲಭ್ಯತೆ ಆಧರಿಸಿ ಸರ್ಕಾರವು ಹಂತಹಂತವಾಗಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುತ್ತದೆ. ಯಲಹಂಕದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸುವ ಪ್ರಸ್ತಾವನೆಯನ್ನು ಸಹ ಅನುದಾನ ಲಭ್ಯತೆಯನ್ನು ಆಧರಿಸಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

Industrial Training Institutes are opened in phased manner depending upon availability of budget. Hence, Opening of an Industrial Training Institute at Yalahanka will also be considered depending upon availability of the budget.

ಸಂಖ್ಯೆ:ಕಾಇ 07 ಇಟಿಎ 2009

(ಬಿ.ಎನ್.ಬಚ್ಚೇಗೌಡ)
ಮಾನ್ಯ ಕಾರ್ಮಿಕ ಸಚಿವರು.

ಕರ್ನಾಟಕ ವಿಧಾನ ಸಭೆ

353 ಶ್ರೀ. ಧ್ರುವನಾರಾಯಣ್.ಆರ್.

ಶ್ರೀ ಡಿ.ಸುಧಾಕರ ಸಮಾಜ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ ಜಾತಿವಾರು ಜನಗಣತಿ ಮಾಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆಯೇ;

ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಇಂತಹ ಪ್ರಸ್ತಾಪವಿರುವುದಿಲ್ಲ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಜಾತಿವಾರು ಜನಗಣತಿ ಮಾಡುವ ನಿರ್ಧಾರ ಕೈಗೊಂಡಿರುತ್ತದೆ.

ಆ) ರಾಜ್ಯದಲ್ಲಿ ಈ ಹಿಂದೆ ಯಾವ ವರ್ಷದಲ್ಲಿ ಜಾತಿವಾರು ಜನಗಣತಿ ಮಾಡಲಾಗಿದ್ದಿತು;

2001ರಲ್ಲಿ ಪರಿಶಿಷ್ಟ ಪಂಗಡಗಳ ಜಾತಿವಾರು ಜನಗಣತಿ ಮಾಡಲಾಗಿರುತ್ತದೆ. 2ನೇ ಹಿಂದುಳಿದ ವರ್ಗಗಳ ಆಯೋಗದಿಂದ 1984ರಲ್ಲಿ ರಾಜ್ಯದಲ್ಲಿ ಜಾತಿವಾರು ಜನಗಣತಿ ಮಾಡಲಾಗಿತ್ತು.

ಇ) ಈಗ ಕೈಗೊಳ್ಳಲಾಗುವ ಜಾತಿವಾರು ಜನಗಣತಿಗೆ ತಗಲುವ ಅಂದಾಜು ವೆಚ್ಚ ಎಷ್ಟು;

ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಕೈಗೊಳ್ಳಲಾಗುತ್ತಿರುವ ಜಾತಿವಾರು ಜನಗಣತಿಗೆ ಸುಮಾರು 43.50 ಕೋಟಿ ರೂಪಾಯಿಗಳು ವೆಚ್ಚವಾಗುವುದೆಂದು ಅಂದಾಜಿಸಲಾಗಿದೆ.

ಈ) ಈ ಜನಗಣತಿಯ ಕಾರ್ಯವನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲು ಸರ್ಕಾರ ನಿರ್ಧರಿಸಿದೆಯೇ;

ಇಲ್ಲ.

ಸಂಖ್ಯೆ:ಸಕಇ 60 ಬಿಸಿಎ 2009

(ಡಿ.ಸುಧಾಕರ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

354 ಶ್ರೀ ಧ್ರುವನಾರಾಯಣ್.ಆರ್ (ಕೊಳ್ಳೇಗಾಲ)

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲಭ್ಯಗಳು.

ಶ್ರೀ ಡಿ.ಸುಧಾಕರ ಸಮಾಜ ಕಲ್ಯಾಣ ಸಚಿವರು.

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ಇರುವ ಆದಾಯ ಮಿತಿ ಎಷ್ಟು;

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ, ಪಂಗಡ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ವಾರ್ಷಿಕ ರೂ1.00 ಲಕ್ಷಗಳ ಆದಾಯ ಮಿತಿಯನ್ನು ನಿಗಧಿಪಡಿಸಿದೆ.

ಆ) ಈ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇಂಜಿನೀಯರಿಂಗ್ ಶಿಕ್ಷಣಕ್ಕೆ ಪ್ರವೇಶ ಪಡೆದುಕೊಂಡಲ್ಲಿ ಅವರಿಗೆ ಶುಲ್ಕ ಭರಿಸಲು ಸರ್ಕಾರ ನಿಗದಿಗೊಳಿಸಿರುವ ಆದಾಯ ಮಿತಿ ಎಷ್ಟು;

ಈ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇಂಜಿನೀಯರಿಂಗ್ ಶಿಕ್ಷಣಕ್ಕೆ ಪ್ರವೇಶ ಪಡೆದುಕೊಂಡಲ್ಲಿ ಅವರಿಗೆ ಶುಲ್ಕ ಭರಿಸಲು ಕೇಂದ್ರ ಸರ್ಕಾರವು ರೂ.1.00 ಲಕ್ಷಗಳ ವಾರ್ಷಿಕ ಆದಾಯ ಮಿತಿಯನ್ನು ನಿಗದಿಪಡಿಸಿದೆ.

ಇ) ಆದಾಯ ಹೆಚ್ಚಿಗೆ ಇರುವ ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಶುಲ್ಕ ಸೌಲಭ್ಯ ಸಿಗದಿದ್ದಲ್ಲಿ, ಇವರಿಗೆ ಸಿಗಲಿರುವ ಬೇರೆ ಸೌಲಭ್ಯಗಳು ಯಾವುವು;

ಆದಾಯ ಹೆಚ್ಚಿಗೆ ಇರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಶುಲ್ಕ ಸೌಲಭ್ಯಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಮಂಜೂರು ಮಾಡಲಾಗುತ್ತಿದೆ.

ಈ) ಹಿಂದುಳಿದ ಪ್ರವರ್ಗ-1 ಗುಂಪಿಗೆ ಸೇರಿದ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿಯಿಲ್ಲದೆ ವಿದ್ಯಾರ್ಥಿವೇತನ ನೀಡುತ್ತಿರುವುದು ನಿಜವೇ;

ಹೌದು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನ ಮಂಜೂರಾತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಆದರೆ ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನ ಕಾರ್ಯಕ್ರಮಕ್ಕೆ ರೂ.44,500.00ರ ವಾರ್ಷಿಕ ಆದಾಯ ಮಿತಿಯನ್ನು ಎಲ್ಲಾ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದೆ.

ಉ) ಹಾಗಿದ್ದಲ್ಲಿ, ಅಂತಹ ಸೌಲಭ್ಯವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೂ ನೀಡಿ, ಅವರ ಶೈಕ್ಷಣಿಕ ಶ್ರೇಯೋಭಿವೃದ್ಧಿಗೆ ನೆರವಾಗುವಲ್ಲಿ ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಭಾರತ ಸರ್ಕಾರವು ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ನಿಗದಿಪಡಿಸಿರುವ ನಿಯಮವನ್ನು ಜಾರಿಗೊಳಿಸಲಾಗುತ್ತಿದೆ.

ಸಂಖ್ಯೆ:ಸಕಇ 32 ಸ್ವೀಮರ 2009

ಸಹಿ.

(ಡಿ.ಸುಧಾಕರ)

ಸಮಾಜ ಕಲ್ಯಾಣ ಸಚಿವರು.

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

<u>ಕರ್ನಾಟಕ ವಿಧಾನ ಸಭೆ</u>

355 ಶ್ರೀ.ಆರ್.ಧ್ರುವನಾರಾಯಣ್
ಸಮಾಜ ಕಲ್ಯಾಣ ಸಚಿವರು.

ಅ) ಸಹಕಾರ ಸಂಸ್ಥೆಗಳಲ್ಲಿ ನೀಡಲಾಗುವ ಸಾಲದ ಬಡ್ಡಿದರ ಕೇವಲ ಶೇ.3 ರಷ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ನೀಡಲಾಗುವ ಸಾಲದ ಬಡ್ಡಿ ದರ ಶೇ.6 ರಷ್ಟು ಇರುವುದು ನಿಜವೇ;

ನೇರಸಾಲ ಯೋಜನೆಯಡಿ ಅವಧಿಸಾಲ, ಭೂ ಒಡೆತನ ಯೋಜನೆಯಡಿ ಅವಧಿಸಾಲ, ಹಾಗೂ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಅಭೀವೃದ್ಧಿ ನಿಗಮದಿಂದ ಪಡೆದ ಅವಧಿಸಾಲ ಇವುಗಳಿಗೆ ಶೇ.6 ರಷ್ಟು ಬಡ್ಡಿ ವಿಧಿಸಲಾಗುತ್ತಿದೆ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯುದಯ ದೃಷ್ಟಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ನೀಡಲಾಗುವ ಸಾಲದ ಬಡ್ಡಿ ದರವನ್ನು ಸಹಕಾರ ಸಂಸ್ಥೆಗಳಲ್ಲಿರುವಂತೆ ಶೇ.3ಕ್ಕೆ ನಿಗದಿಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

(ಸಕಇ 35 ಎಸ್‌ಡಿಸಿ 2009)

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

356 ಶ್ರೀ.ಆರ್.ಧ್ರುವನಾರಾಯಣ್
ಸಮಾಜ ಕಲ್ಯಾಣ ಸಚಿವರು.

ಅ) ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಾಲ ಪಡೆದ ಫಲಾನುಭವಿಗಳಿಂದ ಬರಬೇಕಾದ ಬಾಕಿ ಎಷ್ಟು;

ಡಾ.ಬಿ.ಆರ್.ಅಂಬೇಡ್ಕರ್ ರೂ.28215.67 ಲಕ್ಷ ಅಭಿವೃದ್ಧಿ ನಿಗಮ ನಿಯಮಿತ. ಕರ್ನಾಟಕ ಪರಿಶಿಷ್ಟ ವರ್ಗಗಳ ರೂ.59.79 ಲಕ್ಷ ಅಭಿವೃದ್ಧಿ ನಿಗಮ ನಿಯಮಿತ

ಆ) ಉತ್ತರ ಪ್ರದೇಶ ಸರ್ಕಾರ ಡಿಸೆಂಬರ್, 2008ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಎಸ್.ಪಿ/ಎಸ್.ಟಿ.ಅಭಿವೃದ್ಧಿ ನಿಗಮದಿಂದ ಪಡೆದ ಸಾಲವನ್ನು ಮನ್ನಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಇ) ಹಾಗಿದ್ದಲ್ಲಿ, ಉತ್ತರ ಪ್ರದೇಶ ಸರ್ಕಾರದ ಮಾದರಿಯಲ್ಲೇ ರಾಜ್ಯ ಸರ್ಕಾರವೂ ಸಹ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡಲು ಕ್ರಮ ಕೈಗೊಳ್ಳುವುದೇ?

ಪ್ರಶ್ನೆ ಉದ್ಭವಿಸುವುದಿಲ್ಲ.

(ಸಕಇ 34 ಎಸ್‌ಡಿಸಿ 2009)

ಸಹಿ/-
(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

(ಕೆ.ಸುಬ್ಬಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

357 ಶ್ರೀ. ಧ್ರುವನಾರಾಯಣ.ಆರ್
ವೈದ್ಯಕೀಯ ಶಿಕ್ಷಣ ಸಚಿವರು.

ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು;
10

ಆ) ಈ ಎಲ್ಲಾ ಕಾಲೇಜುಗಳಲ್ಲಿ ಲಭ್ಯವಿರುವ ಒಟ್ಟು ವೈದ್ಯಕೀಯ ಸೀಟುಗಳ ಸಂಖ್ಯೆ ಎಷ್ಟು;
1050

ಇ) ಚಾಮರಾಜನಗರ ಜಿಲ್ಲೆಯು ಅತ್ಯಂತ ಹಿಂದುಳಿದಿರುವುದರಿಂದ ಹಾಗೂ ಗಡಿ ಜಿಲ್ಲೆಯಾಗಿರುವುದರಿಂದ ಜಿಲ್ಲೆಯ ಅಭಿವದ್ಧಿ ದೃಷ್ಟಿಯಿಂದ ಸರ್ಕಾರವು ವೈದ್ಯಕೀಯ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳುವುದೇ?

ಇಲ್ಲ.

ಸಂಖ್ಯೆ: ಆಕುಕ 34 ಎಂಪಿಎಸ್ 2009

ವೈದ್ಯಕೀಯ ಶಿಕ್ಷಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

359 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಪ್ರೊ.ಡಾ:ಮುಮ್ತಾಜ್ ಅಲಿ ಖಾನ್ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿರುವ ಒಟ್ಟು ವಕ್ಫ್ ಆಸ್ತಿಗಳು ಎಷ್ಟು: ಅವುಗಳ ಸರ್ವೇ ಕಾರ್ಯವನ್ನು ಸರ್ಕಾರ ಕೈಗೊಂಡಿದೆಯೇ: ಹಾಗಿದ್ದಲ್ಲಿ, ಸರ್ವೇ ಕಾರ್ಯ ಯಾವಾಗ ಪೂರ್ಣಗೊಳ್ಳುವುದು.

ರಾಜ್ಯದಲ್ಲಿ ಒಟ್ಟು ವಕ್ಫ್ ಆಸ್ತಿಗಳು 32,224 ಇವುಗಳ ಸರ್ವೆ ಕಾರ್ಯವನ್ನು 2003ನೇ ಸಾಲಿನಲ್ಲಿ ಪ್ರಾರಂಭಿಸಿದೆ. ಇದುವರೆವಿಗೂ 20,065 ಆಸ್ತಿಗಳ ಸರ್ವೆ ಮಾಡಿದೆ. ಇನ್ನುಳಿದ 12,065 ಸರ್ವೆ ಕಾರ್ಯಕ್ಕಾಗಿ ಸರ್ಕಾರಿ ಭೂ ಮಾಪಕರೊಂದಿಗೆ ಖಾಸಗಿ ಪರ್ವಾನಗಿ ಹೊಂದಿರುವ ಭೂ ಮಾಪಕರ ಸೇವೆಯನ್ನು ಪಡೆದು ತ್ವರಿತ ಮುಕ್ತಾಯಗೊಳಿಸಲು ಕ್ರಮ ವಹಿಸಲಾಗಿದೆ. ಸ್ಪಷ್ಟವಾದ ಅವಧಿ ಹೇಳಲಾಗದು. ಆದರೆ ಬಹುಶಃ 3 ವರ್ಷಗಳಾಗಬಹುದು.

ಆ) ವಕ್ಫ್ ಆಸ್ತಿಗಳ ಅತಿಕ್ರಮೇಣಗಳನ್ನು ತೆರವುಗೊಳಿಸಲು ಸರ್ಕಾರ ವಿಶೇಷ ಕಾರ್ಯಪಡೆಯನ್ನು ರಚಿಸಿದೆಯೇ: ಹಾಗಿದ್ದಲ್ಲಿ, ಕಾರ್ಯಪಡೆಗೆ ನೀಡಲಾಗಿರುವ ಹಕ್ಕು ಬಾದ್ಯತೆಗಳ ವ್ಯಾಪ್ತಿಯ ವಿವರವನ್ನು ಒದಗಿಸುವುದು.

ಇಲ್ಲ.

ಇ) ಹಾಗಿದ್ದಲ್ಲಿ, ವಕ್ಫ್ ಆಸ್ತಿಯ ಸಂರಕ್ಷಣೆ ಮತ್ತು ಸದ್ಬಳಕೆಗಾಗಿ ಕಟ್ಟುನಿಟ್ಟಿನ ನೀತಿ ನಿಯಮಗಳನ್ನು ರೂಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಸಂಖ್ಯೆ: ಎಂಡಬ್ಲ್ಯೂಡಿ 93 ಡಬ್ಲ್ಯೂಇಎಸ್ 2009

(ಪ್ರೊ.ಡಾ: ಮುಮ್ತಾಜ್ ಅಲಿ ಖಾನ್)
ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

360

ಶ್ರೀ. ಹ್ಯಾರಿಸ್ ಎನ್.ಎ (ಶಾಂತಿನಗರ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯಡಿಯಲ್ಲಿ ಅನುಷ್ಠಾನಗೊಂಡ ಸೌಲಭ್ಯಗಳು ಮತ್ತು ಅದರಿಂದ ತುರ್ತು ಆರೋಗ್ಯ ಸೇವೆಯನ್ನು ಬಳಸಿಕೊಳ್ಳುತ್ತಿರುವ ಜಿಲ್ಲೆಗಳು ಯಾವುವು? ಯೋಜನೆಯ ಫಲಿತಾಂಶ ಮತ್ತು ಉಳಿದ ಜಿಲ್ಲೆಗಳಿಗೆ ಸೌಲಭ್ಯ ವಿಸ್ತರಣೆಗೆ ಸರ್ಕಾರದ ಕ್ರಮಗಳೇನು?

ರಾಜ್ಯದ್ಯಂತ ಇದುವರೆವಿಗೆ ಒಟ್ಟು 150 ಆಂಬ್ಯುಲೆನ್ಸ್ ಸೇವೆಗಳನ್ನು ಆರೋಗ್ಯ ಕವಚ ಯೋಜನೆಯಡಿ ಒದಗಿಸಲಾಗಿದೆ. ಮಾರ್ಚ್ 2010 ವೇಳೆಗೆ ಇನ್ನೂ ಒಟ್ಟು 367 ಆಂಬ್ಯುಲೆನ್ಸ್ ಸೇವೆಗಳನ್ನು ರಾಜ್ಯದ್ಯಂತ ಒಸಗಿಸಲಾಗುವುದು. ಆರೋಗ್ಯ ಕವಚ ಯೋಜನೆಯಡಿ ಈವರೆವಿಗೆ ಒಟ್ಟು 11,22,645 ಕರೆಗಳನ್ನು ಸ್ವೀಕರಿಸಿದ್ದು, ಒಟ್ಟು 13334 ಜೀವಗಳನ್ನು ಉಳಿಸಲಾಗಿದೆ. ಹಾಗೂ 1784 ಪೋಲಿಸ್ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಕರೆಗಳನ್ನು ನಿರ್ವಹಿಸಲಾಗಿದೆ.

ಆ) ಈ ಯೋಜನೆಯು ಅನುಷ್ಠಾನಕ್ಕಾಗಿ ಪ್ರಸ್ತುತ ತುರ್ತು ಸೇವೆಯಲ್ಲಿ ತೊಡಗಿಸಿರುವ ಆಂಬ್ಯುಲೆನ್ಸ್‌ಗಳ ಸಂಖ್ಯೆ ಎಷ್ಟು? ಸಿಬ್ಬಂದಿ ವರ್ಗದವರನ್ನು ಸಮರ್ಪಕವಾಗಿ ಒದಗಿಸಿಕೊಡಲಾಗಿದೆಯೇ?

ಈ ಯೋಜನೆಯು ಅನುಷ್ಠಾನಕ್ಕಾಗಿ ಪ್ರಸ್ತುತ ತುರ್ತು ಸೇವೆಯಲ್ಲಿ ತೊಡಗಿಸಿರುವ ಆಂಬ್ಯುಲೆನ್ಸ್‌ಗಳ ಸಂಖ್ಯೆ 150. ಈ ಸೇವೆಗೆ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಿ ಸಮರ್ಪಕವಾಗಿ ಒದಗಿಸಲಾಗಿದೆ.

ಇ) ಈ ಯೋಜನೆಗೆ ನಿಗದಿಪಡಿಸಿರುವ ಅನುದಾನ ಎಷ್ಟು ಮತ್ತು ಈ ಸೌಲಭ್ಯ ನಿರ್ವಹಣೆಯ ಕುರಿತಾದ ಸಾರ್ವಜನಿಕರ ಪ್ರತಿಕ್ರಿಯೆಯ ವಿವರವನ್ನು ಒದಗಿಸುವುದು?

ಒಟ್ಟು 517 ಆಂಬ್ಯುಲೆನ್ಸ್‌ಗಳನ್ನು ಒದಗಿಸುವ ಈ ಯೋಜನೆಗೆ ಒಟ್ಟು ರೂ.221.25 ಕೋಟಿ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ. ಆರೋಗ್ಯ ಕವಚ ಯೋಜನೆ ಕುರಿತು ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಂಖ್ಯೆ: ಆಕುಕ 12 ಎಸ್‌ಟಿಕ್ಯೂ 2009

(ಬಿ. ಶ್ರೀರಾಮುಲು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

361 ಶ್ರೀಮತಿ ಹ್ಯಾರೀಸ್.ಎನ್.ಎ.

ಶ್ರೀ ಡಿ.ಸುಧಾಕರ ಸಮಾಜ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ ಸಮಗ್ರ ಹಿಂದುಳಿದ ವರ್ಗಗಳ ಜನಗಣತಿಯ ಕಾರ್ಯಕ್ರಮದ ಪ್ರಗತಿಯ ವಿವರಗಳೇನು;

ಆ) ಈ ಜನಗಣತಿ ಕಾರ್ಯಕ್ಕೆ ನಿಗದಿಪಡಿಸಿರುವ ಕಾಲಮಿತಿ ಮತ್ತು ಬಳಸಿಕೊಳ್ಳಲಾಗುತ್ತಿರುವ ಸಿಬ್ಬಂದಿಗಳ ವಿವರವನ್ನು ನೀಡುವುದು;

1. ಸಮೀಕ್ಷೆಯಲ್ಲಿ ಬಳಸಲಾಗುವ ಪ್ರಶ್ನಾವಳಿಯ ಕರಡನ್ನು ಈಗಾಗಲೇ ಸಿದ್ಧಪಡಿಸಿದ್ದು, ಇದನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿ ನಡೆದ ಕಮ್ಮಟದಲ್ಲಿ ಮೂಡಿ ಬಂದ ಸಲಹೆಗಳನ್ನಾಧರಿಸಿ ನೀಡಲಾದ ವರದಿಯಂತೆ ಕೆಲವು ಸೇರ್ಪಡೆ ಮತ್ತು ಮಾರ್ಪಾಡುಗಳನ್ನು ಸಮೀಕ್ಷೆ ನಮೂನೆಯಲ್ಲಿ ಮಾಡಿಕೊಳ್ಳಲಾಗುತ್ತಿದೆ.

2. ಸಮೀಕ್ಷಾ ಕಾರ್ಯಚರಣೆಗೆ ರಾಜ್ಯದ್ಯಂತ ವಿವಿಧ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಗುರುತಿಸಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ.

3. ಆಯೋಗ ಕೈಗೊಳ್ಳುವ ಸಮೀಕ್ಷೆಯ ವಿಶ್ವಾಸರ್ಹತೆಯನ್ನು ಹೆಚ್ಚಿಸುವ ಸಲುವಾಗಿ ಭಾರತ ಜನಗಣತಿ ಇಲಾಖೆ ಕೈಗೊಳ್ಳುವ ಜನಗಣತಿಯ ಪ್ರಾರಂಭಿಕ ಚಟುವಟಿಕೆಗಳಾದ ಬ್ಲಾಕ್ ರಚನೆ ಹಾಗೂ ಮನೆ ಪಟ್ಟಿ ತಯಾರಿಕೆ ಮುಂತಾದವುಗಳೊಂದಿಗೆ ಜಂಟಿಯಾಗಿ ಕೈಗೊಂಡು ಜನಗಣತಿ ಇಲಾಖೆಯಲ್ಲಿ ಲಭ್ಯವಿರುವ ಸೌಲಭ್ಯವಾದ ಐ.ಸಿ.ಆರ್. ತಂತ್ರಜ್ಞಾನವನ್ನು ಆಯೋಗ ಬಳಸಿಕೊಳ್ಳುವ ಕುರಿತ ಸಾಧಕ ಭಾದಕ ಕುರಿತು ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಸಂಪರ್ಕಿಸಲಾಗುತ್ತಿದೆ.

ಈ ಜನಗಣತಿ ಸಮೀಕ್ಷೆಗೆ ಕಾಲಮಿತಿ ಇರುವುದಿಲ್ಲ. ಸಿಬ್ಬಂದಿ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನ ಆಗಿರುವುದಿಲ್ಲ.

ಇ) ಈ ಕಾರ್ಯಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡಿದ ಅನುದಾನದ ಮೊತ್ತ ಎಷ್ಟು;

ಭಾರತ ಸರ್ಕಾರದಿಂದ ರೂ.21.05 ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ.4.50 ಕೋಟಿಗಳನ್ನು ಒದಗಿಸಿದ್ದು, ಆಯೋಗಕ್ಕೆ ಈವರೆವಿಗೆ ಒಟ್ಟಾರೆ ರೂ.8.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಹಾಗಿದ್ದಲ್ಲಿ, ಜನಗಣತಿ ಕೆಲಸ ಕಾರ್ಯಗಳನ್ನು ಮಾದರಿ ರೂಪದಲ್ಲಿ ಅನುಷ್ಠಾನಗೊಳಿಸಲು ಮತ್ತು ಅಂಗೀಕಾರಕ್ಕಾಗಿ ಬಾಕಿ ಇರುವ ಆಯೋಗದ ವರದಿಯ ಜಾರಿಗಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

1. ಅಗತ್ಯವಾದ ಅನುದಾನ, ಅಧಿಕಾರಿ ಮತ್ತು ಸಿಬ್ಬಂಧಿಗಳ ನೆರವನ್ನು ಹಾಗೂ ಉತ್ತಮ ತಂತ್ರಜ್ಞಾನವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ನೀಡುವ ಮೂಲಕ ಸಮೀಕ್ಷೆಯನ್ನು ಮಾದರಿ ರೂಪದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗುವುದು.

2. ಹಿಂದಿನ ಮತ್ತು ಈಗಿನ ಆಯೋಗವು ನೀಡಿದ ವರದಿ/ಬಾಕಿ ಸಲಹೆಗಳ ಜಾರಿ ಕುರಿತಂತೆ ಇರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದು.

ಸಂಖ್ಯೆ:ಸಕಇ 61 ಬಿಸಿಎ 2009

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರ
ಕರ್ನಾಟಕ ವಿಧಾನ ಸಭೆ

362 ಶ್ರೀ. ಹಾರೀಸ್ ಎನ್.ಎ (ಶಾಂತಿನಗರ)
ಮಾನ್ಯ ಕಾರ್ಮಿಕ ಸಚಿವರು

ಅ) ಬಾಲ ಕಾರ್ಮಿಕರುಗಳ ವಯೋ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಜಾರಿಗೆ ತರಲಾಗುವುದು;

ಹೌದು

ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಇದು ಕೇಂದ್ರಸರ್ಕಾರದ ಕಾಯ್ದೆ ಯಾಗಿದ್ದು, ಈ ಬಗ್ಗೆ ಹಾಲಿ ಇರುವ 14 ವರ್ಷ ವಯೋಮಿತಿಯನ್ನು ಹೆಚ್ಚಿಸಬೇಕಾದರೆ ಕೇಂದ್ರ ಸರ್ಕಾರ ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ.

ಆ) ಬಾಲ ಕಾರ್ಮಿಕ ಪದ್ಧತಿ ನಿಷೇಧ ಹಾಗೂ ಜೀತ ಪದ್ಧತಿ ನಿರ್ಮೂಲನೆಗಾಗಿ ಸರ್ಕಾರದ ಯೋಜನೆಗಳು ಯಾವುವು;

1) ಬಾಲ ಕಾರ್ಮಿಕರಿಗೆ ಸೇತುಬಂಧ ಶಿಕ್ಷಣ ನೀಡುವ ಬಗ್ಗೆ ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಜಾರಿಯಲ್ಲಿದ್ದು, ಈ ಸಂಬಂಧ 58 ಬಾಲ ಕಾರ್ಮಿಕ ವಿಶೇಷ ವಸತಿ ಶಾಲೆಗಳು ಮಂಜೂರಾಗಿರುತ್ತದೆ. ಹಾಗೂ ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ 305 ಬಾಲ ಕಾರ್ಮಿಕ ವಸತಿ ಶಾಲೆಗಳು ನಡೆಯುತ್ತಿರುತ್ತದೆ. ಒಂದು ವರ್ಷದಿಂದ 2 ವರ್ಷದವರೆಗೆ ಸೇತುಬಂಧ ಶಿಕ್ಷಣ ನೀಡಿ, ನಂತರ ಈ ಮಕ್ಕಳನ್ನು ಮುಖ್ಯವಾಹಿನಿ ಶಾಲೆಗೆ ಸೇರಿಸಲಾಗುತ್ತದೆ.

2) ಬಾಲ ಕಾರ್ಮಿಕ ಕಾಯ್ದೆಗಳನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರ ವಿವಿಧ ಇಲಾಖೆಗಳ 2050 ಅಧಿಕಾರಿಗಳನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ. ಆಗಿಂದಾಗ್ಗೆ ಬಾಲ ಕಾರ್ಮಿಕರ ತಪಾಸಣೆಗಾಗಿ ತಂಡಗಳನ್ನು ರಚಿಸಿಕೊಂಡು ಬಾಲ ಕಾರ್ಮಿಕರನ್ನು ಪತ್ತೆಮಾಡಿ, ಅವರನ್ನು ಬಿಡುಗಡೆಗೊಳಿಸಿ, ಪುನರ್ವಸತಿ ಕಲ್ಪಿಸುವ ಕಾರ್ಯ ನಡೆಯುತ್ತಿದೆ. ತಪ್ಪಿತಸ್ಥ ಮಾಲೀಕರ ವಿರುದ್ಧ ಬಾಲ ಕಾರ್ಮಿಕ (ನಿಷೇಧ

ಮತ್ತು ನಿಯಂತ್ರಣ) ಕಾಯ್ದೆ, 1986 ಅಥವಾ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961 ರನ್ವಯ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ.

3) ಗುರುತಿಸಿದ ಎಲ್ಲಾ ಮಕ್ಕಳನ್ನು ವಿಶೇಷ ಪುನರ್ವಸತಿ ಕೇಂದ್ರಗಳಲ್ಲಿ ಅಥವಾ ಮುಖ್ಯವಾಹಿನಿ ಶಾಲೆಗಳಲ್ಲಿ ದಾಖಲು ಮಾಡಲಾಗುತ್ತಿದೆ.

4) ಬಾಲ ಕಾರ್ಮಿಕ ಪದ್ಧತಿಯ ವಿರುದ್ಧ ಅನೇಕ ಪ್ರಚಾರ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದ್ದು, ಬಿತ್ತಿ ಪತ್ರಗಳು, ಕರಪತ್ರಗಳು, ಪೋಸ್ಟರ್‌ಗಳು, ಸ್ಟಿಕ್ಕರ್‌ಗಳು ಮುಂತಾದವುಗಳನ್ನು ಹಂಚಲಾಗುತ್ತಿದೆ. ಜೊತೆಗೆ ತರಬೇತಿ ಕಾರ್ಯಕ್ರಮಗಳು, ಕಾರ್ಯಗಾರಗಳು, ವಿಚಾರ ಸಂಕೀರ್ಣಗಳು, ಸಮ್ಮೇಳನಗಳು, ಜಾಥಾಗಳು, ಬೀದಿ ನಾಟಕಗಳು, ಸಾಕ್ಷ್ಯ ಚಿತ್ರ ನಿರ್ಮಾಣ ಮತ್ತು ಚಲನಚಿತ್ರ ಮಂದಿರಗಳಲ್ಲಿ ಸ್ಲೈಡ್‌ಗಳ ಪ್ರದರ್ಶನವನ್ನು ಸಹ ಮಾಡಲಾಗಿರುತ್ತದೆ.

ಜೀತ ಪದ್ಧತಿ ನಿರ್ಮೂಲನೆ ಸಂಬಂಧ ಹಾಲಿ ಚಾಲ್ತಿಯಲ್ಲಿರುವ ಯೋಜನೆಗಳು ಇಂತಿವೆ.

1) ಕೇಂದ್ರ ಪುರಸ್ಕೃತ ಜೀತದಾಳುಗಳ ಪುನರ್ವಸತಿ ಕಾರ್ಯಯೋಜನೆ (ಪರಿಷ್ಕೃತ ಮೇ 2000)– ಇದರಡಿ

(1) ಜೀತದಾಳುಗಳ ಸಮೀಕ್ಷಾ ಕಾರ್ಯ

(2) ಜಾಗೃತಿ ಮೂಡಿಸುವ ಚಟುವಟಿಕೆಗಳು

(3) ಮೌಲ್ಯಮಾಪನ ಅಧ್ಯಯನ

(4) ಪ್ರತಿ ಜೀತವಿಮುಕ್ತನಿಗೆ 20,000/–ರೂ.ಗಳ ಪುನರ್ವಸತಿ ಅನುದಾನ.

2) ರಾಜ್ಯ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆ ಇದರಡಿ ದಿನಾಂಕ: 21.01.2006ರ ತರುವಾಯ ಜೀತ ಪದ್ಧತಿಯಿಂದ ಬಿಡುಗಡೆಗೊಂಡ ದಿನದಿಂದ ಮೊದಲ 2 ವರ್ಷಗಳ ಅಂದರೆ 24 ತಿಂಗಳುಗಳ ಅವಧಿಗೆ ಮಾತ್ರ ಮಾಹೆಯನ ರೂ.300/– ರಂತೆ ಸಹಾಯಧನ.

ಇ) ಬಾಲ ಕಾರ್ಮಿಕರಿಗೆ ಶಿಕ್ಷಣ ಮತ್ತು ಉದ್ಯೋಗ ನೀಡುವ ಕುರಿತು ಸರ್ಕಾರ ಕ್ರಿಯಾ ಯೋಜನೆಗಳನ್ನು ರೂಪಿಸಿದೆಯೇ (ವಿವರ ನೀಡುವುದು)?

ಹೌದು

ಮೇಲೆ ತಿಳಿಸಿದಂತೆ ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ 58 ವಿಶೇಷ ವಸತಿ ಶಾಲೆಗಳು ಹಾಗೂ ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ 305 ದಿನದ ಶಾಲೆಗಳು ನಡೆಯುತ್ತಿರುತ್ತದೆ. ಬಾಲ ಕಾರ್ಮಿಕರಿಗೆ ವೃತ್ತಿ ಶಿಕ್ಷಣ ನೀಡಿ, ಸುಲಭವಾಗಿ ಉದ್ಯೋಗ ಸಿಗುವಂತೆ ಮಾಡಲು ಅಥವಾ ಸ್ವಂತ ಉದ್ಯೋಗ ಮಾಡಲು "ಬಾಯ್ಸ್‌ಟೌನ್" ಹೈದ್ರಾಬಾದ್ ಮಾದರಿಯಲ್ಲಿ ಪುನರ್ವಸತಿ ಕೇಂದ್ರವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಕಾಇ 19 ಸಿಎಲ್‌ಸಿ 2009

(ಬಿ.ಎನ್.ಬಚ್ಚೇಗೌಡ)
ಕಾರ್ಮಿಕ ಸಚಿವರು.

ಕರ್ನಾಟಕ ವಿಧಾನ ಸಭೆ

363 ಶ್ರೀ ಯು.ಟಿ.ಖಾದರ್.

ಶ್ರೀ.ಡಿ.ಸುಧಾಕರ್, ಸಮಾಜ ಕಲ್ಯಾಣ ಸಚಿವರು.

ಅ) ಮಂಗಳೂರು ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅನಕ್ಷರಸ್ತ ಪುರುಷ ಮತ್ತು ಮಹಿಳೆಯರಿಗೆ ವಿವಿಧ ಭೋಧಕ ವಿಷಯಗಳು ವೃತ್ತಿ ತರಬೇತಿಯನ್ನು ನೀಡಲು ಸರ್ಕಾರವು ಯೋಜನೆಯನ್ನು ರೂಪಿಸಿದೆಯೇ;

ಸಮಾಜ ಕಲ್ಯಾಣ ಇಲಾಖೆ.

ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನಕ್ಷರಸ್ಥ ಪರಿಶಿಷ್ಟ ಜಾತಿಯ ನಿರುದ್ಯೋಗಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ತರಬೇತಿಯನ್ನು 2007-08ನೇ ಸಾಲಿನ ತನಕ ಹಮ್ಮಿಕೊಂಡಿರುವುದಿಲ್ಲ.

ಆದರೆ, ಅಪ್ಯಾರೆಲ್ ಟೆಕ್ಸ್‌ಟೈಲ್ ಡಿಸೈನ್, ಬೆಂಗಳೂರು ರವರ ಮೂಲಕ ಸ್ಯುಯಿಂಗ್ ಮೆಷಿನ್ ಅಪರೇಟರ್ ಹಾಗೂ ಕೌಶಲ್ಯ ಶಾಲೆಯ ಮೂಲಕ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಪ್ಲಂಬಿಂಗ್, ಎಲೆಕ್ಟ್ರೀಷಿಯನ್, ಗಾರೆ ಮುಂತಾದ ವಿಷಯಗಳಲ್ಲಿ ಅನಕ್ಷರಸ್ಥ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ತರಬೇತಿ ನೀಡಲು 2008-09ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ವರ್ಗದ ಅನಕ್ಷರಸ್ಥ ಪುರುಷ ಮತ್ತು ಮಹಿಳೆಯರಿಗೆ ವಿವಿಧ ಬೋಧಕ ವಿಷಯಗಳಲ್ಲಿ ವೃತ್ತಿ ತರಬೇತಿಯನ್ನು ನೀಡುವ ಕಾರ್ಯಕ್ರಮ ಜಾರಿಯಲ್ಲಿರುವುದಿಲ್ಲ.

ಆ) ಹಾಗಿದ್ದಲ್ಲಿ, ತರಬೇತಿ ಪಡೆದವರಿಗೆ ಉದ್ಯೋಗವನ್ನು ಒದಗಿಸಿಕೊಡಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ತರಬೇತಿಯನ್ನು ಪಡೆದ ಅಭ್ಯರ್ಥಿಗಳಿಗೆ ಉದ್ಯೋಗ ಕೊಡಿಸುವ ಷರತ್ತಿಗೊಳಪಟ್ಟು ತರಬೇತಿಗೆ ಆದೇಶ ನೀಡಲಾಗುತ್ತಿದ್ದು, ತರಬೇತಿ ಸಂಸ್ಥೆಯು ಉದ್ಯೋಗ ಕೊಟ್ಟ ಬಗ್ಗೆ ಖಾತರಿ ಪಡಿಸಿಕೊಂಡು ಅಂತಿಮ ಕಂತಿನ ಹಣವನ್ನು ಪಾವತಿಸಲಾಗುತ್ತಿದೆ.

ಸಂಖ್ಯೆ: ಸಕಇ 33 ಸ್ವೀಮರ 2009

(ಡಿ.ಸುಧಾಕರ)

ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

365 ಶ್ರೀ ಖಾದರ್ ಯು.ಟಿ.

ಮಾನ್ಯ ಕಾರ್ಮಿಕ ಸಚಿವರು.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು; ಆ ಪೈಕಿ ವಸತಿ ರಹಿತ ಮತ್ತು ನಿವೇಶನ ರಹಿತ ಕಾರ್ಮಿಕರ ಸಂಖ್ಯೆ ಎಷ್ಟು [ತಾಲ್ಲೂಕುವಾರು ವಿವರಗಳನ್ನು ನೀಡುವುದು];

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನೊಂದಾಯಿತ ಬೀಡಿ ಕಾರ್ಮಿಕರ ಒಟ್ಟು ಸಂಖ್ಯೆ: 1,70,624. ಈ ಪೈಕಿ ವಸತಿ ರಹಿತ ಮತ್ತು ನಿವೇಶನ ರಹಿತ ಕಾರ್ಮಿಕರ ಕುರಿತಾದ ಮಾಹಿತಿಯು ಕಾರ್ಮಿಕ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

The number of registered Beedi workers in Dakshina Kannada District is 1,70,624. The information regarding houseless and site less workers is not available in Labour Department.

ಆ) ಈ ಕಾರ್ಮಿಕರಿಗೆ ಸರ್ಕಾರ್ರದ ವತಿಯಿಂದ ಮನೆಗಳನ್ನು ನಿರ್ಮಿಸಿ ಕೊಡಲು ಹಣವನ್ನು ಮೀಸಲಿರಿಸಲಾಗಿದೆಯೇ;

ಕೇಂದ್ರ ಕಾರ್ಮಿಕ ಕಲ್ಯಾಣ ಆಯುಕ್ತರು, ಕಾರ್ಮಿಕ ಮಂತ್ರಾಲಯ, ಭಾರತ ಸರ್ಕಾರ ರವರು ಇಂಟಿಗ್ರೇಟೆಡ್ ಹೌಸಿಂಗ್ ಸ್ಕೀಂ ಎನ್ನುವ ಯೋಜನೆ ಅಡಿ ಬೀಡಿ ಕಾರ್ಮಿಕರ ವಸತಿಗಾಗಿ ಆರ್ಥಿಕ ಸಹಾಯ ನೀಡುತ್ತಿರುವುದರಿಂದ ಬೀಡಿ ಕಾರ್ಮಿಕರಿಗೆ ಸ್ವಂತ ಮನೆ ಕಟ್ಟಲು ಕಾರ್ಮಿಕ ಇಲಾಖೆಯಲ್ಲಿ ಹಣವನ್ನು ಮೀಸಲಾಗಿರಿಸಿಲ್ಲ.

Since the subsidy for Housing is being given for Beedi workers by Central Labour Welfare Commissioner, Ministry of Labour, Government of India, under the Integrated Housing Scheme, no fund allocation is made by Labour Department.

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಅನ್ವಯಿಸುವುದಿಲ್ಲ.

Not applicable.

ಕಾಇ 32 ಎಲ್‌ಡಬ್ಲ್ಯೂಎ 2009

[ಬಿ.ಎನ್.ಬಚ್ಚೇಗೌಡ]

ಮಾನ್ಯ ಕಾರ್ಮಿಕ ಸಚಿವರು.

ಕರ್ನಾಟಕ ವಿಧಾನ ಸಭೆ

366 ಶ್ರೀ ಸಿದ್ದು ಸವದಿ (ತೆರದಾಳ್)
ಪ್ರೊಡಾ: ಮುಮ್ತಾಜ್ ಅಲಿ ಖಾನ್ ಹಜ್ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ ಅಭಿವೃದ್ಧಿ ಪಡಿಸದ ಮಸೀದಿಗಳು, ಜೈನ್ ಮಂದಿರಗಳು ಮತ್ತು ಶಾದಿಮಹಲ್‌ಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು)

ರಾಜ್ಯದಲ್ಲಿ ಮಸೀದಿಗಳು, ಜೈನ್ ಮಂದಿರಗಳು ಹಾಗೂ ಶಾದಿಮಹಲ್‌ಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಆದರೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅನುದಾನ ಸಂಹಿತೆಯಡಿಯಲ್ಲಿ ರಾಜ್ಯದ ವಕ್ಫ್ ಸಂಸ್ಥೆಗಳಿಗೆ ಮಸೀದಿ, ಈದ್ಗಾ, ದರ್ಗಾ, ಖಬ್ರಸ್ಥಾನ್ ಹಾಗೂ ಆಶೂರ್‌ಖಾಸ್ ಮುಂತಾದವುಗಳ ಜೀರ್ಣೋದ್ಧಾರ, ದುರಸ್ಥಿ ಹಾಗೂ ನಿರ್ಮಾಣಕ್ಕಾಗಿ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

ರಾಜ್ಯದ ಜೈನ್ ಸಮೂದಾಯ ಒಳಗೊಂಡಂತೆ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಶಾದಿಮಹಲ್ ಹಾಗೂ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಅನುದಾನ ನೀಡಲಾಗುತ್ತದೆ.

ಆ) ಈ ಕಾಮಗಾರಿಗಳನ್ನು ಮಂಜೂರು ಮಾಡಲು ಇರುವ ನಿಯಾಮಾವಳಿಗಳೇನು?

1. ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅನುದಾನ ಸಂಹಿತೆಯಡಿಯಲ್ಲಿನ ನಿಯಮಗಳಂತೆ ವಕ್ಫ್ ಸಂಸ್ಥೆಗಳಿಗೆ ಅನುದಾನ ನೀಡಲಾಗುವುದು.

2. ರಾಜ್ಯದ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ: 245 ಬಿಎಂಎಸ್ 200 ದಿನಾಂಕ: 05.10.2000ರಲ್ಲಿ ನೀಡಿರುವ ಮಾರ್ಗಸೂಚಿಯಂತೆ ಶಾದಿಮಹಲ್/ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅನುದಾನ ನೀಡಲಾಗುವುದು.

ಇ) ತೇರದಾಳ ಮತಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದು, ಅನೇಕ ಮಸೀದಿಗಳು ಮತ್ತು ಜೈನ್ ಮಂದಿರಗಳು ಶಿಥಿಲಗೊಂಡಿದ್ದು, ಅವುಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಸೂಕ್ತ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾದಲ್ಲಿ ಪರಿಶೀಲಿಸಲಾಗುವುದು.

ಈ) ಶಾದಿಮಹಲ್‌ಗಳ ಮಂಜೂರಾತಿಯಲ್ಲಿ ತಾರತಮ್ಯವಾಗಿರುವುದು ನಿಜವೇ?

ಇಲ್ಲ.

ಉ) ಹಾಗಿದ್ದಲ್ಲಿ, ಅದನ್ನು ಸರಿ ಪಡಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಉದ್ಭವಿಸುವುದಿಲ್ಲ.

ಸಂಖ್ಯೆ: ಎಂಡಬ್ಲ್ಯೂಡಿ 95 ಡಬ್ಲ್ಯೂಇಎಸ್ 2009

(ಪ್ರೊ.ಡಾ: ಮುಮ್ತಾಜ್ ಅಲಿ ಖಾನ್)
ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.

<u>ವಿಧಾನ ಸಭೆ</u>

367 ಶ್ರೀ ಸಿದ್ದು ಸವದಿ
ಸಮಾಜ ಕಲ್ಯಾಣ ಸಚಿವರು

ಅ) ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ಶಾಲೆಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ಮಾಹಿತಿ ಒದಗಿಸುವುದು.);

385

ಆ ಸಂಬಂಧದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಶಾಲೆಗಳನ್ನು ಬಡವರು ಮತ್ತು ದಲಿತ ಜನಾಂಗ ಹೆಚ್ಚಿರುವ ಕ್ಷೇತ್ರಗಳಲ್ಲಿ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯತೆ ಆಧಾರದ ಮೇಲೆ ಅಂತಹ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದ್ದು ಈ ಶಾಲೆಗಳಲ್ಲಿ ಬಡವರು ಮತ್ತು ದಲಿತ ಜನಾಂಗದ ಮಕ್ಕಳೂ ಸಹ ಓದಲು ಅವಕಾಶವಿರುತ್ತದೆ.

ಇ) ಹಾಗಿದ್ದಲ್ಲಿ, ತೇರದಾಳ ಮತ ಕ್ಷೇತ್ರದ ಚಿಮ್ಮಡ ಮತ್ತು ತೇರದಾಳದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಬೇಡಿಕೆ ಬಂದಿದೆಯೇ;

ಬೇಡಿಕೆ ಬಂದಿದೆ. ಸರ್ಕಾರದ ಪರಿಶೀಲಿನೆಯಲ್ಲಿದೆ.

ಈ) ಹಾಗಿದ್ದಲ್ಲಿ, ಆ ಸ್ಥಳಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

2009-10ನೇ ಸಾಲಿನ ಆಯವ್ಯಯದ ಲಭ್ಯತೆ ಮೇರೆಗೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಸಕಇ 31 ಮೊದೇಶಾ 2009

(ಡಿ.ಸುಧಾಕರ್)

ಸಮಾಜ ಕಲ್ಯಾಣ ಸಚಿವರು.

ವಿದಾನ ಸಭಾ ಪ್ರಶ್ನೆ ಸಂಖ್ಯೆ:367 ಕ್ಕೆ ಅನುಬಂಧ

ಕ್ರ ಸಂ	ಜಿಲ್ಲೆಗಳು	ಕ್ರ ಸಂ.	ವಿಧಾನಸಭಾ ಕ್ಷೇತ್ರಗಳು	ವಸತಿ ಶಾಲೆಗಳ ಸಂಖ್ಯೆ
1	ಬೆಂಗಳೂರು (ನ)	1	ಯಲಹಂಕ	2
		2	ರಾಜಾಜಿನಗರ	0
		3	ಮಲ್ಲೇಶ್ವರ	0
		4	ಕೆ.ಆರ್.ಪುರ	0
		5	ಯಶವಂತಪುರ	0
		6	ದಾಸರಹಳ್ಳಿ	0
		7	ಶಿವಾಜಿನಗರ	0
		8	ಗಾಂಧೀನಗರ	0
		9	ಚಿಕ್ಕಪೇಟೆ	0
		10	ಮಹಾಲಕ್ಷ್ಮೀ ಬಡಾವಣೆ	0
		11	ಹೆಬ್ಬಾಳ	0
		12	ಪುಲಿಕೇಶಿನಗರ	0
		13	ಗೋವಿಂದರಾಜನಗರ	0
		14	ಸರ್ವಜ್ಞ ನಗರ	0
		15	ಚಾಮರಾಜಪೇಟೆ	1
		16	ಬ್ಯಾಟರಾಯನಪುರ	0
		17	ಬಸವನಗುಡಿ	0
		18	ಜಯನಗರ	0
		19	ಶಾಂತಿನಗರ	0
		20	ರಾಜರಾಜೇಶ್ವರಿನಗರ	0
		21	ವಿಜಯನಗರ	0
		22	ಬೆಂಗಳೂರು ದಕ್ಷಿಣ	0
		23	ಬಿ.ಟಿ.ಎಂ.ಬಡಾವಣೆ	0
		24	ಪದ್ಮನಾಭನಗರ	0
		25	ಬೊಮ್ಮನಹಳ್ಳಿ	0

		26	ಮಹದೇವಪುರ	0
		27	ಆನೇಕಲ್	1
		28	ಸಿ.ವಿ.ರಾಮನ್ ನಗರ	0
2	ಬೆಂಗಳೂರು (ಗ್ರಾ)	29	ಹೊಸಕೋಟೆ	1
		30	ನೆಲಮಂಗಲ	0
		31	ದೇವನಹಳ್ಳಿ	1
		32	ದೊಡ್ಡಬಳ್ಳಾಪುರ	1
3	ರಾಮನಗರ	33	ಮಾಗಡಿ	2
		34	ರಾಮನಗರ	6
		35	ಚೆನ್ನಪಟ್ಟಣ	3
		36	ಕನಕಪುರ	5
4	ಚಿತ್ರದುರ್ಗ	37	ಚಳ್ಳಕೆರೆ	1
		38	ಹಿರಿಯೂರು	5
		39	ಚಿತ್ರದುರ್ಗ	4
		40	ಹೊಸದುರ್ಗ	1
		41	ಹೊಳಲ್ಕೆರೆ	2
		42	ಮೊಳಕಾಲ್ಮೂರು	1
5	ಕೋಲಾರ	43	ಶ್ರೀನಿವಾಸಪುರ	1
		44	ಕೋಲಾರ	3
		45	ಮಾಲೂರು	1
		46	ಮುಳಬಾಗಿಲು	4
		47	ಕೆ.ಜಿ.ಎಫ್.	1
		48	ಬಂಗಾರಪೇಟೆ	1
6	ಚಿಕ್ಕಬಳ್ಳಾಪುರ	49	ಶಿಡ್ಲಘಟ್ಟ	1
		50	ಚಿಂತಾಮಣಿ	1
		51	ಬಾಗೇಪಲ್ಲಿ	1
		52	ಗೌರಿ ಬಿದನೂರು	1
		53	ಚಿಕ್ಕಬಳ್ಳಾಪುರ	3
7	ಶಿವಮೊಗ್ಗ	54	ಶಿಕಾರಿಪುರ	6
		55	ಶಿವಮೊಗ್ಗ	2
		56	ಶಿವಮೊಗ್ಗ (ಗ್ರಾ)	1

		57	ಭದ್ರಾವತಿ	3
		58	ಸಾಗರ	1
		59	ಸೊರಬ	1
		60	ತೀರ್ಥಹಳ್ಳಿ	2
8	ತುಮಕೂರು	61	ಮಧುಗಿರಿ	1
		62	ಕೊರಟಗೆರೆ	2
		63	ತುಮಕೂರು ನಗರ	0
		64	ತುಮಕೂರು ಗ್ರಾ	1
		65	ಪಾವಗಡ	3
		66	ಶಿರಾ	5
		67	ಚಿಕ್ಕನಾಯಕನಹಳ್ಳಿ	1
		68	ಗುಬ್ಬಿ	1
		69	ಕುಣಿಗಲ್	3
		70	ತಿಪಟೂರು	1
		71	ತುರುವೇಕೆರೆ	1
9	ದಾವಣಗೆರೆ	72	ಚೆನ್ನಗಿರಿ	1
		73	ಹರಪ್ಪನಹಳ್ಳಿ	3
		74	ಹರಿಹರ	3
		75	ದಾವಣಗೆರೆ ದಕ್ಷಿಣ	1
		76	ದಾವಣಗೆರೆ ಉತ್ತರ	3
		77	ಮಾಯಕೊಂಡ	1
		78	ಜಗಳೂರು	1
		79	ಹೊನ್ನಾಳಿ	1
10	ಮೈಸೂರು	80	ನಂಜನಗೂಡು	4
		81	ಟಿ. ನರಸೀಪುರ	1
		82	ಕೃಷ್ಣರಾಜ	0
		83	ಚಾಮರಾಜ	0
		84	ನರಸಿಂಹರಾಜ	0
		85	ಚಾಮುಂಡೇಶ್ವರಿ	2
		86	ವರುಣ	2
		87	ಹುಣಸೂರು	2
		88	ಪಿರಿಯಪಟ್ಟಣ	2

		89	ಹೆಗ್ಗಡದೇವನಕೋಟೆ	2
		90	ಕೃಷ್ಣರಾಜನಗರ	2
11	ಚಿಕ್ಕಮಗಳೂರು	91	ಕಡೂರು	9
		92	ಚಿಕ್ಕಮಗಳೂರು	2
		93	ಮೂಡಿಗೆರೆ	2
		94	ಶೃಂಗೇರಿ	2
		95	ತರೀಕೆರೆ	1
12	ದಕ್ಷಿಣಕನ್ನಡ	96	ಮಂಗಳೂರು	1
		97	ಮಂಗಳೂರು ನಗರ ದಕ್ಷಿಣ	1
		98	ಮಂಗಳೂರು ನಗರ ಉತ್ತರ	1
		99	ಮೂಡಬಿದ್ರೆ	2
		100	ಬೆಳ್ತಂಗಡಿ	2
		101	ಬಂಟ್ವಾಳ	1
		102	ಸುಳ್ಯ	1
		103	ಪುತ್ತೂರು	1
13	ಹಾಸನ	104	ಬೇಲೂರು	2
		105	ಶ್ರವಣಬೆಳಗೋಳ	3
		106	ಸಕಲೇಶಪುರ	3
		107	ಅರಸೀಕೆರೆ	1
		108	ಹಾಸನ	4
		109	ಹೊಳೆನರಸೀಪುರ	5
		110	ಅರಕಲಗೂಡು	3
14	ಮಂಡ್ಯ	111	ಮಳ್ಳವಳ್ಳಿ	3
		112	ಮಂಡ್ಯ	2
		113	ಮದ್ದೂರು	2
		114	ಮೇಲುಕೋಟೆ	3
		115	ಶ್ರೀರಂಗಪಟ್ಟಣ	3
		116	ನಾಗಮಂಗಲ	4
		117	ಕೆ.ಆರ್.ಪೇಟೆ	2
15	ಚಾಮರಾಜನಗರ	118	ಕೊಳ್ಳೆಗಾಲ	2
		119	ಹನೂರು	2
		120	ಗುಂಡ್ಲುಪೇಟೆ	4

		121	ಚಾಮರಾಜನಗರ	2
16	ಉಡುಪಿ	122	ಉಡುಪಿ	2
		123	ಕಾಪು	1
		124	ಕಾರ್ಕಳ	1
		125	ಕುಂದಾಪುರ	1
		126	ಬೈಂದೂರು	1
17	ಕೊಡಗು	127	ಮಡಿಕೇರಿ	4
		128	ವೀರಾಜಪೇಟೆ	1
18	ಬೆಳಗಾಂ	129	ಅಥಣಿ	1
		130	ಕುಡಚಿ	1
		131	ಕಾಗವಾಡ	1
		132	ಸೌದತ್ತಿ	1
		133	ಖಾನಪುರ	1
		134	ಗೋಕಾಕ್	4
		135	ಅರಬಾವಿ	2
		136	ರಾಯಬಾಗ್	1
		137	ಹುಕ್ಕೇರಿ	4
		138	ಯಮಕನಮರಡಿ	1
		139	ಬೈಲಹೊಂಗಲ	3
		140	ಬೆಳಗಾಂ ಉತ್ತರ	1
		141	ಬೆಳಗಾಂ ದಕ್ಷಿಣ	0
		142	ಬೆಳಗಾವಿ ಗ್ರಾಮಾಂತರ	1
		143	ಕಿತ್ತೂರು	1
		144	ಚಿಕ್ಕೋಡಿ ಸದಲಗಾ	3
		145	ನಿಪ್ಪಾಣಿ	1
		146	ರಾಮದುರ್ಗ	1
19	ಬಿಜಾಪುರ	147	ಇಂಡಿ	5
		148	ಬಿಜಾಪುರ ನಗರ	3
		149	ನಾಗಠಾಣ	0
		150	ಮುದ್ದೇಬಿಹಾಳ	1
		151	ಬಸವನಬಾಗೇವಾಡಿ	1
		152	ಬಬಲೇಶ್ವರ	0

		153	ಸಿಂದಗಿ	1
		154	ದೇವರಹಿಪ್ಪರಗಿ	1
20	ಧಾರವಾಡ	155	ಹುಬ್ಬಳ್ಳಿ–ಧಾರವಾಡ ಪೂರ್ವ	2
		156	ಹುಬ್ಬಳ್ಳಿ–ಧಾರವಾಡ ಮಧ್ಯ	0
		157	ಹುಬ್ಬಳ್ಳಿ–ಧಾರವಾಡ ಪಶ್ಚಿಮ	0
		158	ಧಾರವಾಡ	2
		159	ಕಲಘಟ್ಟಗಿ	1
		160	ಕುಂದಗೋಳ	2
		161	ನವಲಗುಂದ	1
21	ಉತ್ತರ ಕನ್ನಡ	162	ಯಲ್ಲಾಪುರ	2
		163	ಕುಮಟ	1
		164	ಭಟ್ಕಳ	1
		165	ಹಳಿಯಾಳ	3
		166	ಸಿರ್ಸಿ	1
		167	ಕಾರವಾರ	0
22	ಬಾಗಲಕೋಟೆ	168	ಬಾಗಲಕೋಟೆ	4
		169	ತೇರದಾಳ	0
		170	ಜಮಖಂಡಿ	1
		171	ಮುಧೋಳ್	5
		172	ಬಾದಾಮಿ	1
		173	ಬಿಳಗಿ	2
		174	ಹುನಗುಂದ	1
23	ಗದಗ	175	ರೋಣ	1
		176	ಶಿರಹಟ್ಟಿ	1
		177	ಗದಗ	4
		178	ನರಗುಂದ	1
24	ಹಾವೇರಿ	179	ಹಾನಗಲ್	3
		180	ಹಾವೇರಿ	4
		181	ರಾಣಿಬೆನ್ನೂರು	1
		182	ಶಿಗ್ಗಾಂವ್	2
		183	ಹಿರೇಕೆರೂರು	2

		184	ಬ್ಯಾಡಗಿ	1
25	ಗುಲ್ಬರ್ಗ	185	ಅಫ್‌ಜಲ್‌ಪುರ	3
		186	ಯಾದಗಿರಿ	3
		187	ಗುರುಮಿತಕಲ್	2
		188	ಸೇಡಂ	1
		189	ಸುರಪುರ	3
		190	ಚಿತ್ತಾಪುರ	5
		191	ಶಹಾಪುರ	2
		192	ಜೇವರ್ಗಿ	3
		193	ಅಳಂದ	1
		194	ಚಿಂಚೋಳಿ	1
		195	ಗುಲ್ಬರ್ಗ ಗ್ರಾಮಾಂತರ	4
		196	ಗುಲ್ಬರ್ಗ ಉತ್ತರ	0
		197	ಗುಲ್ಬರ್ಗ ದಕ್ಷಿಣ	0
26	ಬಳ್ಳಾರಿ	198	ಹಗರಿಬೊಮ್ಮನಹಳ್ಳಿ	1
		199	ಹೂವಿನಹಡಗಲಿ	4
		200	ಕೂಡ್ಲಗಿ	4
		201	ಸಂಡೂರು	4
		202	ವಿಜಯನಗರ	1
		203	ಕಂಪ್ಲಿ	1
		204	ಬಳ್ಳಾರಿ ನಗರ	1
		205	ಬಳ್ಳಾರಿ	2
		206	ಸಿರಗುಪ್ಪ	1
27	ಬೀದರ್	207	ಔರಾದ್	1
		208	ಬೀದರ್	4
		209	ಬೀದರ್ ದಕ್ಷಿಣ	0
		210	ಬಸವಕಲ್ಯಾಣ	4
		211	ಹುಮನಬಾದ್	1
		212	ಭಾಲ್ಕಿ	1
28	ರಾಯಚೂರು	213	ಲಿಂಗಸಗೂರು	2
		214	ರಾಯಚೂರು	2
		215	ರಾಯಚೂರು ಗ್ರಾ	3

		216	ದೇವದುರ್ಗ	5
		217	ಮಾನ್ವಿ	2
		218	ಸಿಂಧನೂರು	1
		219	ಮಸ್ಕಿ	2
29	ಕೊಪ್ಪಳ	220	ಗಂಗಾವತಿ	2
		221	ಕನಕಗಿರಿ	1
		222	ಕುಷ್ಟಗಿ	2
		223	ಯಲಬುರ್ಗಾ	5
		224	ಕೊಪ್ಪಳ	2
-			ಒಟ್ಟು	**385**

ಕರ್ನಾಟಕ ವಿಧಾನ ಸಭೆ

368 ಶ್ರೀ.ಸಿದ್ದು ಸವದಿ (ತೆರದಾಳ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ಪಿ.ಹೆಚ್.ಸಿ. ಮತ್ತು ಸಿ.ಹೆಚ್.ಸಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಇರುವ ನಿಯಾಮವಳಿಗಳೇನು?

ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಬಯಲು ಪ್ರದೇಶಗಳಲ್ಲಿ 30 ಸಾವಿರ ಜನಸಂಖ್ಯೆಗೆ ಒಂದರಂತೆ ಹಾಗೂ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 20 ಸಾವಿರ ಜನಸಂಖ್ಯೆಗೆ ಒಂದರಂತೆ ಸ್ಥಾಪಿಸಲು ಅವಕಾಶವಿದೆ. ಹಾಗೆಯೇ ಬಯಲು ಪ್ರದೇಶಗಳಲ್ಲಿ 1.20.000 ಜನಸಂಖ್ಯೆಗೆ ಒಂದರಂತೆ ಹಾಗೂ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 80 ಸಾವಿರ ಜನಸಂಖ್ಯೆಗೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಅವಕಾಶವಿದೆ.

ಆ) 2006-07ರಿಂದ ಇಲ್ಲಿಯವರೆಗೆ ಮೇಲ್ದರ್ಜೆಗೇರಿಸಲಾದ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ಮಾಹಿತಿ ಒದಗಿಸುವುದು)?

2006-07 ರಲ್ಲಿ 65 ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 2007-08 ರಲ್ಲಿ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಮತ್ತು 26 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಇ) ತೇರದಾಳ ಮತ ಕ್ಷೇತ್ರದ ತೇರದಾಳ ಪಿ.ಹೆಚ್.ಸಿ. ಮಹಾಲಿಂಗಪೂರ ಮತ್ತು ಬನಹಟ್ಟಿಯಲ್ಲಿರುವ ಸಿ.ಹೆಚ್.ಸಿ.ಗಳನ್ನು ಮೇಲ್ದರ್ಜೆಗೇರಿಸಲು ಕೈಗೊಂಡಿರುವ ಕ್ರಮವೇನು?

ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಈ ಕ್ಷೇತ್ರದ ದೊಡ್ಡ ಗ್ರಾಮಗಳಲ್ಲಿ ಪಿ.ಹೆಚ್.ಸಿ ಗಳನ್ನು ಪ್ರಾರಂಭಿಸುವ ಬೇಡಿಕೆ ಇದ್ದು, ಈ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು?

ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿ ಈಗಾಗಲೇ ನಿಗಧಿತ ಸಂಖ್ಯೆಗಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ:ಆಕುಕ 133 ಸಿಜಿಎಂ 2009

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ವಿಧಾನ ಸಭೆ

370 ಶ್ರೀ ಹೆಚ್.ಡಿ. ರೇವಣ್ಣ
ಸಮಾಜ ಕಲ್ಯಾಣ ಸಚಿವರು.

ಅ) ಹಾಸನ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ಶಾಲೆಗಳೆಷ್ಟು? ಈ ಶಾಲೆಗಳಲ್ಲಿರುವ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳ ಸಂಖ್ಯೆ ಎಷ್ಟು;

ಹಾಸನ ಜಿಲ್ಲೆಯಲ್ಲಿ ಒಟ್ಟು 21 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿದ್ದು ಅವುಗಳಲ್ಲಿನ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

2008-09ನೇ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿ ವಿವರ.							
ವಸತಿ ಶಾಲೆಯ ವರ್ಗ	ವಸತಿ ಶಾಲೆಗಳ ಸಂಖ್ಯೆ	ಪ. ಜಾತಿ	ಪ. ವರ್ಗ	ಹಿಂ. ವರ್ಗ	ಅಲ್ಪ ಸಂ.	ಸಾಮಾನ್ಯ	ಒಟ್ಟು
ಪ.ಜಾತಿ	5	363	7	-	-	260	630
ಶಿಕ್ಷಣ	1	145	2	-	-	51	198

9-104

ಇಲಾಖೆ ಯಿಂದ ವರ್ಗಾವಣೆ							
ಹಿ.ವರ್ಗ	12	329	44	1277	–	–	1650
ಅಲ್ಪ ಸಂಖ್ಯಾತರ	3	27	25	51	29 7	–	400
ಒಟ್ಟು	**21**	**864**	**78**	**1328**	**29 7**	**311**	**2878**

ಆ) ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು ಹಾಗೂ ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು; ಪ್ರತಿ ತಿಂಗಳು ಖಾಸಗಿ ಕಟ್ಟಡಗಳಿಗೆ ಕಟ್ಟುತ್ತಿರುವ ಬಾಡಿಗೆ ಎಷ್ಟು (ಮಾಹಿತಿ ನೀಡುವುದು);

ಆ ಸಂಬಂಧದ ವಿವರ ಈ ಕೆಳಗಿನಂತಿದೆ:–

ವಸತಿ ಶಾಲೆಯ ವರ್ಗ	ವಸತಿ ಶಾಲೆಗಳ ಸಂಖ್ಯೆ	ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆಗಳ ಸಂಖ್ಯೆ	ಬಾಡಿಗೆ ರಹಿತ ವಸತಿ ಶಾಲೆಗಳ ಸಂಖ್ಯೆ	ಬಾಡಿಗೆ ಕಟ್ಟಡದಲ್ಲಿರುವ ವಸತಿ ಶಾಲೆಗಳ ಸಂಖ್ಯೆ:	ಬಾಡಿಗೆ ವಿವರ
ಪ.ಜಾತಿ	5	1	1	3	ಒಂದು ವಸತಿ ಶಾಲೆಗೆ ಮಾಸಿಕ ಬಾಡಿಗೆ ರೂ.18,000–00 ನಿಗಧಿಪಡಿಸಲಾಗಿದ್ದು ಎರಡು ಕಟ್ಟಡಗಳಿಗೆ ಬಾಡಿಗೆ ನಿಗಧಿ ಪಡಿಸಲಾಗುತ್ತಿದೆ.
ಶಿಕ್ಷಣ ಇಲಾಖೆಯಿಂದ ವರ್ಗಾವಣೆ	1	1	0	0	–
ಹಿಂ.ವರ್ಗ	12	2	3	7	ನಾಲ್ಕು ವಸತಿ ಶಾಲೆಗಳ ಬಾಡಿಗೆ ಕಟ್ಟಡಗಳಿಗೆ ಮಾಸಿಕ ಬಾಡಿಗೆ ರೂ.61,020–00 ಪಾವತಿಸಲಾಗುತ್ತಿದ್ದು ಉಳಿದ ಮೂರು ವಸತಿ ಶಾಲೆಗಳ ಬಾಡಿಗೆ ಕಟ್ಟಡಗಳಿಗೆ ಬಾಡಿಗೆ ನಿಗಧಿಪಡಿಸಲಾಗುತ್ತಿದೆ.
ಅಲ್ಪಸಂಖ್ಯಾತರ	3	–	1	2	ಎರಡು ಬಾಡಿಗೆ ಕಟ್ಟಡಗಳಿಗೆ ಮಾಸಿಕ ರೂ.28,516–00 ಪಾವತಿಸಲಾಗುತ್ತಿದೆ.
ಒಟ್ಟು	**21**	**4**	**5**	**12**	

ಇ) ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಂಗಾಮಿ ಮುಖ್ಯೋಪಾಧ್ಯಾಯರ ಮತ್ತು ಶಿಕ್ಷಕರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ಕ್ರಮಕೈಗೊಂಡಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ:ಸಕಇ 32 ಎಂಡಿಎಸ್ 2009

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

371 ಶ್ರೀ. ರೇವಣ್ಣ ಹೆಚ್.ಡಿ (ಹೊಳೇನರಸೀಪುರ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ) ಹಾಸನ ಜಿಲ್ಲೆಯಲ್ಲಿರುವ ಸರ್ಕಾರಿ ಸಮುದಾಯ ಆಸ್ಪತ್ರೆಗಳೆಷ್ಟು ಹಾಗೂ ಈ ಆಸ್ಪತ್ರೆಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?

ಹಾಸನ ಜಿಲ್ಲೆಯಲ್ಲಿ ಒಟ್ಟು 15 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಅವುಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳಾದ ಕೊಣನೂರು, ಗಂಡಸಿ, ಹಿರಿಸಾವೆ, ಶ್ರವಣಬೆಳಗೋಳ, ದುದ್ದ, ಎಂ.ಹೊಸಹಳ್ಳಿ, ಪಡುವಲತೆಪ್ಪೆ ಮತ್ತು ಹಳ್ಳಿಮೈಸೂರುಗಳ ಕಟ್ಟಡ ಪೂರ್ಣಗೊಂಡು ಉಪಯೋಗವಾಗುತ್ತದೆ. 8 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಎಲ್ಲಾ ಆರೋಗ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಉಳಿದ 4 ಸಮುದಾಯ ಆರೋಗ್ಯ ಕೇಂದ್ರಗಳ ಕಟ್ಟಡ ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತದೆ. ಕಟ್ಟಡ ಕಾಮಗಾರಿ ಶೇ 60% ಭಾಗ ಆದ ನಂತರ ಸಿಬ್ಬಂದಿ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲಾಗುವುದು.

3ಸಮುದಾಯ ಆರೋಗ್ಯ ಕೇಂದ್ರಗಳಾದ ನುಗ್ಗೆಹಳ್ಳಿ, ಹೊನ್ನಕುಡುಕೆ ಮತ್ತು ಹಿರೇಹಳ್ಳಿಗಳಲ್ಲಿ ಕಟ್ಟಡ ಇರುವುದಿಲ್ಲ.

ಆ) ಸರ್ಕಾರಿ ಸಮುದಾಯ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರು ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)?

ಸರ್ಕಾರಿ ಸಮುದಾಯ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರು ಸಂಖ್ಯೆ: 32 ಹಾಗೂ ಸಿಬ್ಬಂದಿಗಳ ಸಂಖ್ಯೆ 190 (ತಾಲ್ಲೂಕುವಾರು ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ).

ಇ) ಹಾಗಿದ್ದಲ್ಲಿ, ಖಾಲಿ ಇರುವ ವೈದ್ಯರು ಹಾಗೂ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

